ರಾಜನ ಸಭೆಯಲ್ಲಿ ದೇವರ ದಾಸಿಮಯ್ಯನಿಗೂ ಜೈನರಿಗೂ ಆದ ವಾಗ್ವಾದದ ವರ್ಣನೆ ಇರುವದು. (೨) ಈತನ ಒಂದು ಸಂಪೂರ್ಣ ಗ್ರಂಥವು ಧಾಮಿನಿ ಷಟ್ಪದಿಯಲ್ಲಿ ಬರೆದದ್ದು ಉಪಲಬ್ಧವಿರುವದು. ಅದು ಸಂಸ್ಕೃತದ ಭಾಷಾಂತರವೆಂದು ಅದರಲ್ಲಿಯೇ ಹೇಳಿದೆ. (೩) ಮನುಪುರಾಣದಲ್ಲಿ ದೇವರ ದಾಸಿಮಯ್ಯನ ಅವತಾರ ವರ್ಣನೆ ಹೇಳಿದೆ. (೪) ರಾಘವನೆಂಬುವನಿಂದ ಬರೆಯಲ್ಪಟ್ಟ ದೇವರದಾಸಿಮಯ್ಯನ ಪುರಾಣವೆಂದು ಇನ್ನೊಂದು ಗ್ರಂಥವುಂಟು (೫) ಶ್ರೀ ಬಸವೇಶ್ವರಾದಿ ಪ್ರಮಥರ ವಚನಗಳಲ್ಲಿಯೂ ಈತನ ವರ್ಣನೆ ಇರುವದು. ಅಲ್ಲದೆ ಕರ್ನಾಟಕ ಕವಿಚಕ್ರವರ್ತಿಯಾದ ಹರಿಹರಾಚಾರ್ಯನು ಕೂಡ ತನ್ನ ಪಂಪಾ ಶತಕದಲ್ಲಿ ಪುರಾತನರ ಹೆಸರುಗಳ ಜೊತೆಗೆ ದಾಸಿಮಾರ್ಯನನ್ನು ಸೇರಿಸಿ ಬರೆದಿದ್ದಾನೆ.

(೫) ಡಾಕ್ಟರ ಫ್ಲೀಟ ಸಾಹೇಬರು ಇಂಡಿಯನ್ ಆಂಟಿಕ್ವೆರಿ ವ್ಹಾಲ್ಯೂಮ್ ೯ ಪುಟ ೧೬೨ನೇದರಲ್ಲಿ ಈ ದೇವರದಾಸಿಮಾರ್ಯನು ಜಯಸಿಂಹನ ಕಾಲಕ್ಕಿರಬಹುದೆಂದು ಊಹಿಸಿ ಬಸವ ಪುರಾಣದಲ್ಲಿರುವ ದೇವರ ದಾಸಿಮನ ಕಥೆಯನ್ನ ಪ್ರಸ್ತಾಪಿಸಿ ಆ ಕಥೆಯು ಜಯಸಿಂಹನಿಗೆ ಸಂಬಂಧಪಟ್ಟುದೆಂದೂ, ದೇಸಿಂಗನೆಂಬುದು ಜಯಸಿಂಹನೆಂಬುದರ ರೂಪಾಂತರವೆಂದೂ ಹೇಳಿದ್ದಾರೆ. ಚಾಲುಕ್ಯ ರಾಜನಾದ ಜಯಸಿಂಹನು ಕ್ರಿಸ್ತ ಶಕ ೧೦೦೮ ರಿಂದ ೧೦೫೦ ರ ವರೆಗೆ ಆಳಿದನು. ಅವನ ರಾಜಧಾನಿ ಹೊಟಲಕೇರಿಯಾಗಿತ್ತ. ಕರ್ನಾಟಕ ಕವಿಚರಿತೆಕಾರರು ತಮ್ಮ ಕವಿಚರಿತೆಯ ಪ್ರಥಮ ಸಂಪುಟದ ೨೦೧ನೆಯ ಪುಟದಲ್ಲಿ 'ಬ್ರಹ್ಮಶಿವನು (ಸುಮಾರು ಕ್ರಿಸ್ತಶಕ ೧೧೬೫) ಈ ಕವಿಯು ಜೇಡರ ದಾಸಿಮಯ್ಯನ ಹೆಸರನ್ನು ಹೇಳುವದರಿಂದ ಇವನು ಅವನ ಕಾಲಕ್ಕೆ ಹಿಂದೆ ಇದ್ದಿರಬೇಕು. ಆದುದರಿಂದ ಈ ರಾಜನು ೧೦೧೫ ರಿಂದ ೧೦೪೨ರ ವರೆಗೆ ಆಳಿದ ಚಾಳುಕ್ಯರಾಜನಾದ ೧ನೇ ಜಯಸಿಂಹನಾಗಿರಬೇಕು' ಎಂದು ಹೇಳಿ ಈತನ ಕಾಲವನ್ನು ಸುಮಾರು ಕ್ರಿ. ಶ. ೧೦೪೦ ಎಂದು ನಿರ್ಧರಿಸಿರುವರು. ರಾವಸಾಹೇಬ ಪಿ. ಜಿ. ಹಳಕಟ್ಟಿಯವರು ಜಯಸಿಂಹನ ಹೆಂಡತಿಯಾದ ಸುಗ್ಗಳೆಯು ದೇವರದಾಸಿಮಯ್ಯನ ಶಿಷ್ಯಳಾಗಿದ್ದುಕೊಂಡು ಅತ್ಯಂತ ಶಿವಭಕ್ತಿಯಿಂದ ಆಚರಿಸುತ್ತಿದ್ದಳು. ಈ ಸುಗ್ಗಳೆಯಾದರೂ ಆ ಕಾಲಕ್ಕೆ ಅತ್ಯಂತ ಪ್ರಸಿದ್ಧಳಾಗಿದ್ದಳು. ಈ ಸುಗ್ಗಳೆಯು ಜಯಸಿಂಹನಲ್ಲಿದ್ದ ಜೈನ

ಧರ್ಮದ ಮೋಹವನ್ನು ಬಿಡಿಸಬೇಕೆಂದು ಬಯಸಿ ದೇವರದಾಸಿಮಯ್ಯನನ್ನು ರಾಜಧಾನಿಗೆ ಬರಮಾಡಿಕೊಂಡಳು. ಮೊದಲಾದವುಗಳನ್ನು ಹೇಳಿ ಈಕೆಯ ಉಲ್ಲೇಖವು ಹಾಸನ ಜಿಲ್ಲೆಯ ಬೇಲೂರ ಗ್ರಾಮದ ೧೫ನೆಯ ಶಿಲಾಶಾಸನದಲ್ಲಿರುವದು; ಮತ್ತು ಶ್ರೀ ಬಸವೇಶ್ವರನ್ನು ದರೂ ತನ್ನ ವಚನಗಳಲ್ಲಿ ದೇವರದಾಸಿಮಯ್ಯನನ್ನು ಕುರಿತು ಮೇಲಿಂದ ಮೇಲೆ ಉಲ್ಲೇಖಿಸಿರುವದರಿಂದ ದೇವರದಾಸಿಮಾರ್ಯನು ಶ್ರೀ ಬಸವೇಶ್ವರನಿಕಿಂತಲೂ ಹಿಂದಿನವನೆಂಬುದು ಸ್ಪಷ್ಟವಾಗುತ್ತದೆಂದು ಬರೆದಿರುವರು.

(೬) ಮಿ. ಎಸ್. ಆರ್. ಶ್ರೀನಿವಾಸಮೂರ್ತಿ ಇವರು ರಾವಸಾಹೇಬ ಹಳಕಟ್ಟಿಯವರು ಹೇಳಿರುವಂತೆ ಹಾಸನ ಡಿಸ್ಟ್ರಿಕ್ಟಿನ ಬೇಲೂರ ಗ್ರಾಮದ ೧೫ನೆಯ ಶಾಸನದಲ್ಲಿ ಸುಗ್ಗಲದೇವಿಯ ಉಲ್ಲೇಖವಿರುವದು ನಿಜ; ಆದರೆ ದೇವರದಾಸಿಮಯ್ಯನಿಗೂ ಈ ಸುಗ್ಗಲದೇವಿಗೂ ಅದರಿಂದ ಯಾವದೊಂದು ಗುರುಶಿಷ್ಯ ಸಂಬಂಧವನ್ನು ಸ್ಥಾಪಿಸುವ ಹಾಗಿಲ್ಲವೆಂದೂ, ಹಾಸನ ಡಿಸ್ಟ್ರಿಕ್ಟಿನ ಆರಸಿಕೇರಿ ಶಾಸನದಲ್ಲಿ ಒಬ್ಬ ಜೇಡರ ದಾಸಿಯ ಮಗನ ಹೆಸರನ್ನು ಉಲ್ಲೇಖಿಸಿದೆ ಆ ಜೇಡರ ದಾಸಿಯ ಮಗನಾದ ಕಾಟಗೌಡನು ಒಂದು ಕೆರೆಯನ್ನು ಕಟ್ಟಿಸಿದ್ದಕ್ಕಾಗಿ ಬರಮದೇವ ಮುಂತಾದವರು ಉಂಬಳಿಯನ್ನು ಕೊಟ್ಟಂತೆ ಆ ಶಾಸನದಲ್ಲಿ ಇದೆಯೆಂದೂ ಹಾಗು ಬಸವಣ್ಣನವರು ಒಂದು ವಚನದಲ್ಲಿ 'ದಾಸಯ್ಯ ಶಿವದಾನವನೆರೆಯ ನೋಡಯ್ಯ' ಎಂದು ಬರೆದಿರುವದನ್ನು ನೋಡಿದರೆ 'ಎರೆಯ' ಎಂಬ ಪದವು ಸಮಕಾಲೀನರ ವರ್ತನೆಯನ್ನು ಸೂಚಿಸುವರೆಂದು ಹೇಳಬೇಕು ಎಂದೂ ಮತ್ತು ಕ್ರಿ ಶ. ೧೧೦೦ ರಲ್ಲಿ ಕಾಟಗೌಡನು ಬದುಕಿರಬೇಕಾದರೆ ಅವನ ತಂದೆಯಾದ ದೇವರ ದಾಸಿಯು ಬಸವಣ್ಣನವರ ಸಮಕಾಲೀನನೆಂದೂ ಮೊದಲಾದವುಗಳನ್ನು ಹೇಳಿ ದೇವರದಾಸಿಮಯ್ಯನು ಬಸವಣ್ಣನವರ ಜೀವಿತ ಕಾಲದಲ್ಲಿ ಬದುಕಿದ್ದಿರಬಹುದೆಂದು ನಾವು ಅಭಿಪ್ರಾಯ ಪಡುತ್ತೇವೆಂದು ಅಂದಿರುವರು. ಅಂದರೆ ದೇವರ ದಾಸಿಮಯ್ಯನ ಕಾಲವು ಸುಮಾರು ಕ್ರಿ. ಶ. ೧೧೬೦ ಇತ್ತೆಂದು ನಿರ್ಧರಿಸಿರುವರು.

(೭) ಮಿ. ಶ್ರೀನಿವಾಸ ಮೂರ್ತಿಯವರ ಅಂಬೋಣ ಪ್ರಕಾರ ಹಾಸನ ಡಿಸ್ಟ್ರಿಕ್ಟ ಬೇಲೂರ ಗ್ರಾಮದ ೧೫ನೆಯ ಶಿಲಾಶಾಸನದಲ್ಲಿ ಉಕ್ತವಾಗಿರುವ ಸುಗ್ಗಲದೇವಿಗೂ ಈ ದೇವರದಾಸಿಮಯ್ಯನಿಗೂ ಗುರು ಶಿಷ್ಯ ಸಂಬಂಧ ಹೇಳದಿದ್ದರೂ ಸ್ತ್ರೀಯಳ ಹೆಸರು ಶಿಲಾಶಾಸನದಲ್ಲಿ

ಉಲ್ಲೇಖಿಸಲ್ಪಡಬೇಕಾದರೆ ಆ ಮಹಿಳೆಯು ಅಷ್ಟು ಸುಪ್ರಸಿದ್ಧಳೂ ರಾಜಮನೆತನದವಳೂ ಇರಬಹುದೆಂಬ ಭಾಸವಾಗುತ್ತದೆ. ಚಾಲುಕ್ಯ ಚಕ್ರವರ್ತಿಯಾದ ೧ನೆಯ ಜಯಸಿಂಹನ ಹೆಂಡತಿಯ ಹೆಸರು ಸುಗ್ಗಲದೇವಿ ಎಂದು ಇರುವದು. ಇವಳೇ ಆ ಶಾಸನದಲ್ಲಿಯ ಸುಗ್ಗಲದೇವಿ ಆದ ಪಕ್ಷದಲ್ಲಿ ಇವಳಿಗೂ ದೇವರದಾಸಿಮಯ್ಯನಿಗೂ ಆ ಶಾಸನದಲ್ಲಿ ಗುರುಶಿಷ್ಯ ಸಂಬಂಧ ಹೇಳದಿದ್ದರೂ ಬೇರೆ ಕಡೆಗೆ ಅನೇಕ ಸುಪ್ರಸಿದ್ಧ ಗ್ರಂಥಗಳಲ್ಲಿ ಹೇಳಿದ್ದು ವಾಚಕರು ಮನಗಾಣಬಹುದು. ಈ ಶಾಸನದಲ್ಲಿ ಗುರುಶಿಷ್ಯ ಸಂಬಂಧ ಹೇಳದಿದ್ದರೂ ಸುಗ್ಗಲದೇವಿಯು ದೇವರದಾಸಿಮಯ್ಯನ ಶಿಷ್ಯಳೂ ಜಯಸಿಂಹನ ಹೆಂಡತಿಯೂ ಇದ್ದದ್ದು ಸುಳ್ಳಲ್ಲ. ಇದಕ್ಕೆ ಶಿಲಾಶಾಸನವೇ ಬೇಕೆಂಬದು ನಿರ್ಬಂಧವಿಲ್ಲ. ಹಾಸನದ ಡಿಸ್ಟ್ರಿಕ್ಟ ಆರಸಿಕೇರಿ ಶಾಸನದಲ್ಲಿ ಒಬ್ಬ ಜೇಡರ ದಾಸಿಮಯ್ಯನ ಮಗನಾದ ಕಾಟಗೌಡನ ಹೆಸರಿನ ಉಲ್ಲೇಖವಿದ್ದು ಅವನು ಒಂದು ಕೆರೆ ಕಟ್ಟಿಸಿದ್ದಕ್ಕಾಗಿ ಅವನಿಗೆ ಬರ್ಮದೇವ ಮುಂತಾದವರು ಉಂಬಳಿಕೊಟ್ಟಿದ್ದರ ಉಲ್ಲೇಖವಿರುವದು ನಿಜ. ಆದರೆ ಆ ಶಾಸನದಲ್ಲಿ 'ಜೇಡರ ದಾಸಿಮಯ್ಯನ ಮಗ ಕಾಟಗೌಡನು ಗೀಜೆಯಹಳ್ಳಿಯ ಮರುಹಿಂಡಿಯ ಹೊಲವೇರಿಯ ಸೀಮೆಯಲ್ಲಿ ಕಟ್ಟಿಸಿದ ಕೆರೆಗೆ ಬಿಟ್ಟು ಗದ್ದೆ ಉಂಬಳಿ' ಎಂದು ಹೇಳಿರುವದರಿಂದ ಈ ಜೇಡರ ದಾಸಿಮಯ್ಯನು ಬೇರೊಬ್ಬನೆಂದು ಸಹಜ ಗೊತ್ತಾಗುತ್ತದೆ. ಯಾಕಂದರೆ ಇದರಲ್ಲಿ ಗೀಜಹಳ್ಳಿ ಎಂಬ ಗ್ರಾಮದಲ್ಲಿ ಗದ್ದೆ ಉಂಬಳಿ ಬಿಟ್ಟದ್ದು ಹೇಳಬೇಕಾದರೆ ಅದು ಮಲೆನಾಡವಿರಬೇಕು; ಮತ್ತು ಗೀಜ ಹಳ್ಳಿಯು ಜೇಡರ ದಾಸಿಮಯ್ಯನ ವಾಸಸ್ಥಾನವಾಗಿ ಅದಾದರು ಮಲ ಸೀಮೆಯಲ್ಲಿ ಇರಬೇಕಾಗಿತ್ತು. ಅದು ಹಾಗಿರದೆ ದೇವರದಾಸಿಮಯ್ಯನ ಊರು ಮುದನೂರು. ಇದು ವಿಜಾಪುರ ಜಿಲ್ಲಾ, ತಾಲೂಕ ಸಿಂದಗಿ ಗ್ರಾಮದಿಂದ ೩೦ ಮೈಲುಗಳ ಮೇಲೆ ಇದೆ. ಇದು ಈಗ ನಿಜಾಮ ಇಲಾಖಾ ಸುರಪುರ ತಾಲೂಕಿನಲ್ಲಿ ಸೇರಿದೆ. ಈಗಲೂ ಈ ಗ್ರಾಮವು ಅನೇಕ ಶಿವಾಲಯಗಳಿಂದಲೂ ತೀರ್ಥಗಳಿಂದಲೂ ತುಂಬಿಕೊಂಡಿದ್ದು ಬಹು ಪವಿತ್ರ ಕ್ಷೇತ್ರಸ್ಥಾನವೆಂದು ತಿಳಿಯುತ್ತದೆ. ಇಲ್ಲಿಯ ಶಿವಾಲಯಗಳಲ್ಲಿ ರಾಮನಾಥನ ಶಿವಾಲಯವೇ ಮಹತ್ವವಾದದ್ದು. ಈ ರಾಮನಾಥನೇ ದೇವರ ದಾಸಿಮಯ್ಯನ ಇಷ್ಟ ದೇವತೆಯಾಗಿರುತ್ತಾನೆ. ಅತನ ಮುದ್ರಿಕೆಯಾದರೂ 'ರಾಮನಾಥಾ' ಎಂದು ಇರುವದು. ಈ

ಗ್ರಾಮದಲ್ಲಿ ಅನೇಕ ಶಿಲಾಶಾಸನಗಳು ಇನ್ನೂ ಉಪಲಬ್ಧ ಇವೆ. ಇಂಥ ವೆಲ್ಲ ಅನೇಕ ಐತಿಹಾಸಿಕ ಪ್ರಾಮುಖ್ಯದ ಕುರುಹುಗಳು ಮುದನೂರಿನಲ್ಲಿ ಇರುತ್ತಿರಲೂ ಇವನಿಗೂ ಅರಸಿಕೆರೆ ಶಾಸನದಲ್ಲಿ ಹೇಳಿರುವ ಜೇಡರ ದಾಸಿಮಯ್ಯನಿಗೂ ಏನು ಸಂಬಂಧವಿಲ್ಲೆಂಬುದು ಸ್ಪಷ್ಟ ಗೊತ್ತಾಗುವದು. 'ದಾಸಯ್ಯ ಶಿವದಾನವನೆರೆಯ ನೋಡಯ್ಯ' ಎಂಬ ವಚನದೊಳಗಿನ 'ಎರೆಯ' ಎಂಬು ಪದವು ಸಮಕಾಲೀನರ ವರ್ತನೆಯನ್ನು ತೋರಿಸುತ್ತದೆ ಎಂದು ಬರೆದಿರುವರು. ಆದರೆ ಅದು ಹಾಗಿರವೆ ಶ್ರೀ ಬಸವಣ್ಣನವರು ತಮ್ಮ ಭಕ್ತನ ಭಕ್ತಸ್ಥಲದ ವಚನ ೯೨ ರಲ್ಲಿ ತನ್ನ ಇಷ್ಟ ದೈವತವಾದ ಶ್ರೀ ಸಂಗಮದೇವನಿಗೆ 'ದಾಸಯ್ಯ ಶಿವದಾನವನೆರೆಯ' ಮುಂತಾದ ವಾಕ್ಯಗಳಿಂದ ದೂರು ಹೇಳಿದಂತೆ ಆರ್ತಸ್ವರವಿಂದ ಒರಲಿಕೊಂಡಿರುವನು. ಇದರಿಂದ ಬೇಡಿಕೊಂಬುವವರಿಗೆ ಬೇಡಿಸಿಕೊಳ್ಳುವವರು ಸಮಕಾಲೀನರಿರಬೇಕೆಂಬುದೇನು ಸರ್ವಸಾಮಾನ್ಯವಾದ ನಿರ್ಬಂಧವಲ್ಲವು. ಹಾಗಿದ್ದ ಪಕ್ಷದಲ್ಲಿ ಅನಾದಿಕಾಲದ ಶ್ರೀ ಸಂಗಮನಾಥನೂ ಕೂಡ ಶ್ರೀ ಬಸವಣ್ಣನವರ ಸಮಕಾಲೀನನಿರಬೇಕಾದೀತು. ಅದು ಸಾಧ್ಯವಲ್ಲವು. ಆದುದರಿಂದ ಬಸವಣ್ಣನವರು ದೇವರ ದಾಸಿಮಯ್ಯನ ಸಮಕಾಲೀನರಲ್ಲವೆಂಬುವದು ಸಹಜ ಗೊತ್ತಾಗುವದು.

(೮) ಇದು ಅಲ್ಲದೆ ಇವರಿಬ್ಬರು ಸಮಕಾಲೀನರಾಗಿದ್ದ ಪಕ್ಷಕ್ಕೆ ಇನ್ನಿತರ ಶಿವಶರಣರಂತೆ ಎಲ್ಲಾದರೂ ಒಬ್ಬನ್ನೊಬ್ಬರು ಕೊಂಡಾಡಿದ್ದು ಸಿಗುತ್ತಿತ್ತು. ಆದು ಹಾಗಿರದೆ ಬಸವಣ್ಣನವರು ಮಾತ್ರ ತಮ್ಮ ವಚನಗಳಲ್ಲಿ ದೇವರ ದಾಸಿಮಯ್ಯನನ್ನು ಹಲವು ಕಡೆಗೆ ಕೊಂಡಾಡಿರುವಂತೆ ದೊರೆಯುವದಲ್ಲದೆ, ದಾಸಿಮಯ್ಯನು ಮಾತ್ರ ತನ್ನ ವಚನಗಳಲ್ಲಿ ಬಸವಣ್ಣನವರನ್ನು ಎಲ್ಲಿಯೂ ಕೊಂಡಾಡಿರುವಂತೆ ತೋರುವದಿಲ್ಲ. ಆದುದರಿಂದ ದೇವರ ದಾಸಿಮಯ್ಯನು ಮತ್ತು ಬಸವಣ್ಣನವರು ಸಮಕಾಲೀನರಲ್ಲವೆಂದೂ ವಿ. ಶ್ರೀನಿವಾಸ ಮೂರ್ತಿಯವರ ಅಭಿಪ್ರಾಯದಂತೆ ದೇವರ ದಾಸಿಮಯ್ಯನು ೧೨ ನೇ ಶತಮಾನದಲ್ಲಿರದೆ ಡಾಕ್ಟರ ಫ್ಲೀಟ, ಮಹಾಮಹೋಪಾಧ್ಯಾಯ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವಬಹಾದ್ದೂರ ಆರ್. ನರಸಿಂಹಾಚಾರ್ಯ ಮತ್ತು ರಾವಸಾಹೇಬ ಪಿ. ಜಿ. ಹಳಕಟ್ಟಿಯವರ ಅಭಿಪ್ರಾಯದಂತೆ ದೇವರ ದಾಸಿಮಯ್ಯನು ಕ್ರಿ. ಶ. ೧೦೪೦ ರ ಸುಮಾರಕ್ಕೆ ಇದ್ದಾನೆಂದೂ ನಾವಾದರೂ ಅಭಿಪ್ರಾಯಪಡಬೇಕಾಗಿದೆ.

(೯) ಕರ್ನಾಟಕ ಕವಿತಿಲಕನಾದ ಹರಿಹರಾಚಾರ್ಯನು ಶಂಕರ ದಾಸಿಮಯ್ಯನ ರಗಳೆಯನ್ನು ಬರೆದಿದ್ದಾನೆ. ಆ ಕಥೆಯಲ್ಲಿ ಶಂಕರ ದಾಸಿಮಯ್ಯನಿಗೂ ದೇವರ ದಾಸಿಮಯ್ಯನಿಗೂ ಭೆಟ್ಟಿಯಾದಂತೆ ಹೇಳಿ ಅದರಲ್ಲಿ 'ಮುದನೂರೊಳು ಜೇಡರ ದಾಸಿಮಯ್ಯಂ ರಾಮನಾಥ ಪ್ರಸಾದ ಗರ್ಭ್ಯಹೃದಯಂ' ಇರುತ್ತಾನೆಂದೂ, 'ಶಿವನಂತೆ ಕೊಡುವರ್ ಎನ್ನಂತೆ ಪಡಿದಂ ಇಲ್ಲೆಂಬ ಗರ್ವಂ ತನ್ನ ಮನದೊಳಗೆ' ಎಂದೂ, ಆ ಗರ್ವ ಪರಿಹಾರಕ್ಕಾಗಿ ಶಂಕರ ದಾಸಿಮಯ್ಯನು ದೇವರ ದಾಸಿಮಯ್ಯನಿಂದ ಬುದ್ಧಿಯನ್ನು ಕಲಿಸಿಕೊಂಡು ಜೇಡರ ದಾಸಿಮಯ್ಯನು ಮನೆಗೆ ಬರುತ್ತಿರಲು 'ಕಂದಿದ ರವಿಯಂತೆ, ಕೊರಗಿದ ಲತೆಯಂತೆ, ಕಳೆಯೊಡೆದ ಚಂದ್ರಮನಂತೆ, ಮರುಳಂತೆ ಮರೆದು ಶೂನ್ಯ ಹೃದಯನಾಗಿ, ನಿಂದಿರಲಮ್ಮದೆ ಮೆಲ್ಲ ಮೆಲ್ಲನೆ ನಿಜನಿಳಯದತ್ತ ಬರುತ್ತಿದ್ದಾ ದಾಸನಂ ದುಗ್ಗಳೆ ಕಂಡು' ಎಂದಿರುವದರಿಂದಲೂ, 'ದಾಸ ದುಗ್ಗಳೆಗಳಿಗೆ ತವನಧಿ ಇಮ್ಮಡಿಸಿ, ಭಕ್ತಿ ನಂಬುಗೆ ನೂರ್ಮಡಿಸಿ' ಎಂದಿರುವದರಿಂದಲೂ, 'ರಾಮನಾಥ ಪ್ರಸಾದ ಗರ್ಭ್ಯಹೃದಯಂ' ಎಂದು ಹೇಳಿರುವದರಿಂದ ರಾಮನಾಥವೆಂಬುದು ಜೇಡರ ದಾಸಿಮಯ್ಯನ ಅಂಕಿತವೆಂದೂ ಮತ್ತು ಅದು ಆತನ ಇಷ್ಟ ದೈವತದ ಹೆಸರಿರುವದರಿಂದಲೂ ಈ ಜೇಡರ ದಾಸಿಮಯ್ಯನು ಮತ್ತು ಶಂಕರ ದಾಸಿಮಯ್ಯನು ಸಮಕಾಲೀನರೆಂದೂ ಸ್ಪಷ್ಟವಾಗಿ ಕಂಡು ಬರುತ್ತದೆ.

(೧೦) ಈ ಕಥೆಯ ಅನುಕರಣವನ್ನೇ ಸಿದ್ಧಕವಿಯು ತನ್ನ 'ಮರಿ ಬಸವ ಪುರಾಣಮು' ಎಂಬ ಆಂಧ್ರ ಗ್ರಂಥದಲ್ಲಿಯೂ ಮಾಡಿರುವನು. ಇದು ಅಲ್ಲದೆ ಭೀನು ಕವಿಯು ಬಸವಪುರಾಣದಲ್ಲಿ ಜೇಡರ ದಾಸಿ-ಶಂಕರ ದಾಸಿಯರ ಕಥೆಗಳನ್ನು ಹೇಳಿ ಅದರಲ್ಲಿ ಇಪ್ಪತ್ತುವೂರನೆಯ ಸಂಧಿಯ ಆಳಾ ನೇಯ ಪದ್ಯಭಾಗದಲ್ಲಿ 'ಆ ಸಮಯದೊಳ್ ಪಾರಿ ಶಂಕರ। ದಾಸಿಭಕ್ತರು ಹೊಗಳೆ ಜೇಡರ। ದಾಸಿಯ ದುಗ್ಗಳೆಯನೆತ್ತಿ ದಯಾಮೃತದ ಸೊನೆ॥ ಸೂಸುತಿರೆ ನೋಡಿ ..' ಎಂದು ಹೇಳಿರುವನು; ಮತ್ತು 'ತಡಪನೊಂದಂ ನೆಯಿದು ಕೊಟ್ಟಾ। ದದುಮೃಡನ ಕೈಯಿಂದಲಿನ್ನಂ। ಪಡೆವುದೆಂದವಸವನು ಖಂಡುಗ ಹತ್ತು ಕೊಳಗವನು ॥೩೭॥ ಹಾಗು, ಹರನ ಕೈಯಲಿ ಮುನ್ನದಾಸನು ಪಡೆದ ತವನಿಧಿಯ ॥ ಶರಣ ಶಂಕರ ದಾಸ ತೆಗೆಯಲು। ಪರಿಭವಾದ್ಭುತ ಶೋಕ ಮಾನಸ।

ಪರವಶಪೊಳಹ ಪತಿಗೆ ದುಗ್ಗಳ ದೇವಿ ಹೇಳಿದಳು ॥೧೦॥' ಎಂದು ಭೀಮಕವಿಯು ಹೇಳಿರುವದರಿಂದಲೂ, ದಾಸನ ವಸ್ತ್ರ ಬೇಡಿದ ವಿಚಾರವನ್ನು ಬಸವಣ್ಣನವರು ಹೇಳುವದರಿಂದಲೂ ದೇವರ ದಾಸಿಮಯ್ಯನು ಮತ್ತು ಜೇಡರ ದಾಸಿಮಯ್ಯನು ಒಬ್ಬನೇ ಎಂದೂ ಹಾಗು ಜೇಡರ ದಾಸಿಮಯ್ಯ ಶಂಕರ ದಾಸಿಮಯ್ಯ ಈ ಉಭಯತರು ಸಮಕಾಲೀನರೆಂದೂ ಎಂದರೆ ಸುಮಾರು ಕ್ರಿ. ಶ ೧೧೪೦ ರಲ್ಲಿ ಇದ್ದವರೆಂಬದು ಬಲಪಡುತ್ತದೆ.

ಮಲತ್ರಯ.

(ಲೇಖಕ:—ರಾ॥ ರಾ॥ ಬಸವಪ್ಪ ಚೆನ್ನಪ್ಪ ಹಟ್ಟೀದ. ವಂಟಮೂರಿ)

ಮನುಷ್ಯನು ಜನ್ಮಕ್ಕೆ ಬಂದು, ಸ್ವಾರ್ಥಲಂಪಟನಾಗಿ, ಕಡೆತನಕ ಅನೇಕ ದೋಷಗಳನ್ನು ಮಾಡುತ್ತಾನೆ. ಆ ದೋಷಗಳಲ್ಲಿ ನಮ್ಮ ವೀರ ಶೈವರು ಮೂರು ಭಾಗಗಳನ್ನು ಮಾಡಿ, ಅವಕ್ಕೆ ತ್ರಿಮಲಗಳು ಎಂಬ ಹೆಸರಿಟ್ಟಿದ್ದಾರೆ. ನಮಗೆ ಸ್ಥೂಲ-ಸೂಕ್ಷ್ಮ ಕಾರಣಗಳೆಂದು ಮೂರು ದೇಹಗಳು ಇರುವವಷ್ಟೇ. ಆ ದೇಹಗಳಲ್ಲಿ ಈ ಮಲಗಳು ಒಂದೊಂದಾಗಿ ವಾಸಿಸುತ್ತವೆ. ಸ್ಥೂಲ ತನುವಿನಲ್ಲಿ ಕಾರ್ಮಿಕಮಲವೂ ಸೂಕ್ಷ್ಮ ತನುವಿನಲ್ಲಿ ಮಾಯಾ ಮಲವೂ ಕಾರಣ ತನುವಿನಲ್ಲಿ ಆಣವ ಮಲವೂ ನೆಲಿಸಿರುತ್ತವೆ. ಈ ಮಲಗಳೇ ನಮ್ಮ ಪರಿಪರಿಯ ದುಃಖಕ್ಕೆ ಕಾರಣವಾಗಿವೆ. ನಮ್ಮನ್ನು ಭವ ಚಕ್ರದಲ್ಲಿ ಸೇರಿಸಿ ಗರಗರನೆ ತಿರಪಿಲ್ಲದೆ ತಿರುವುತ್ತವೆ. ಎಳ ಲಕ್ಷ ಯೋನಿಗಳಲ್ಲಿ, ಪ್ರತಿಯೊಂದರೊಳಗೆ ಅಸಂಖ್ಯಾತ ಜನ್ಮಿಸಿರುತ್ತೇವೆಂದು ನಮ್ಮ ಧರ್ಮಶಾಸ್ತ್ರವು ಹೇಳುತ್ತದೆ. ಎಲ್ಲ ಯೋನಿಗಳಲ್ಲಿ ಮನುಷ್ಯಯೋನಿಯೇ ಶ್ರೇಷ್ಠವಾದುದು. ಯಾಕಂದರೆ, ಈ ಪ್ರಾಣಿಗೆ ದೇವರು ಜ್ಞಾನವನ್ನು ದಯಪಾಲಿಸಿದ್ದಾನೆ. ಆ ಜ್ಞಾನದ ಯೋಗದಿಂದ ಮಲತ್ರಯದ ಬಾಧೆಯೊಳಗಿಂದ ಪಾರಾಗಲು, ಮನುಷ್ಯಗೆನಿ ಶಕ್ಯವದೆ. ಅದನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು, ಪ್ರತಿಯೊಬ್ಬ

ಮನುಷ್ಯನು ಎಚ್ಚರದಿಂದ ನಡೆಯುವದು ಅವಶ್ಯವುಂಟು. ಈ ಧ್ಯೇಯವನ್ನು ಸಾಧಿಸಿ ದುಃಖದಿಂದ ಮುಕ್ತನಾಗಲೆಂದೇ ದಯಾಳುವಾದ ದೇವರು ನಮಗೆ ಈ ನರ ಜನ್ಮವನ್ನು ಕೊಟ್ಟಿದ್ದಾನೆ. ಆದರೂ ಅಜ್ಞಾನ ವಶದಿಂದ ಮರೆವೆಗೊಳಗಾಗಿ, ಈ ಮಾಯಾ ಪ್ರಪಂಚಕ್ಕೆ ಮೋಹಿಸಿ, ವಿಷಯ ಭೋಗಕ್ಕೆಳಸಿ, ನಾವು ಆ ಮುಖ್ಯ ಧ್ಯೇಯದಿಂದ ಚ್ಯುತರಾಗಿರುತ್ತೇವೆ. ಇದು ಅತ್ಯಂತ ಶೋಚನೀಯವಾದ ಮಾತು! ಈ ಸಂಗತಿಯನ್ನು ಬುಧ್ಯಾ ಜನತೆಯ ಅವಗಾಹನೆಗೆ ತರುವ ಉದ್ದೇಶದಿಂದಲೇ ಈ ಲೇಖನವನ್ನು ಬರೆಯಲಾಗಿದೆ.

ಪುರಾಣಾಂತರ ವರ್ಣನೆ.

ಈ ಮಲಗಳೇನೂ ಸಾಧಾರಣವಾದುವಲ್ಲ. ಇವಕ್ಕೆ ನಮ್ಮ ಪುರಾಣದಲ್ಲಿ ಮೂವರು ಅಜಿಂಕ್ಯರಾಕ್ಷಸರಂತಲೂ ಇವರ ನಾಶವು ಅತ್ಯಂತ ಘೋರವಾದುದೆಂತಲೂ ವರ್ಣಿಸಿರುವರು. ಆ ಕಥೆಗೆ "ತ್ರಿಪುರದಹನ" ವೆಂಬ ಹೆಸರು ಕೊಟ್ಟಿದ್ದಾರೆ. ಅದರ ಸಾರಾಂಶವನ್ನು ಇಲ್ಲಿ ಕೊಡುವದು ಅಪ್ರಸ್ತುತವಾಗದೆಂದು ನೆನಿಸಿ ಕೆಳಗೆ ಬರೆದಿರುವೆನು:— ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬ ಮೂವರು ರಾಕ್ಷಸರು ಉಗ್ರ ತಪಸ್ಸು ಮಾಡಿ ಬ್ರಹ್ಮ ದೇವನಿಂದ, ಮೂಲೋಕದವರಿಂದಲೂ— ದೇವ ಮಾನವದಾನವರಿಂದಲೂ— ತಮಗೆ ಮರಣ ಸಂಭವಿಸದಂತೆ ಭದ್ರತೆಯನ್ನು ಹೊಂದಿ, ಆಕಾಶದೊಳಗೆ ಮೂರು ಪುರಗಳನ್ನು ಕಟ್ಟಿಕೊಂಡು, ಅವಕ್ಕೆ ಒಬ್ಬೊಬ್ಬರು ಒಡೆಯರಾಗಿರುತ್ತ, ತ್ರಿಲೋಕ ಕಂಟಕರಾದರು. ಅವರ ಪಟ್ಟಣಗಳಾದರೋ ಏಕ ಪ್ರಕಾರವಾಗಿ ಒತ್ತರದಿಂದ ಗರಗರನೆ ತಿರುಗುತ್ತಿರುವವು. ದೇವಮಾನ ಸಹಸ್ರವರ್ಷ (ಮನುಜಮಾನ ೩೬೦೦೦ ಮೂವತ್ತಾರು ದಶಸಹಸ್ರವರ್ಷ) ಗಳಿಗೊಮ್ಮೆ ಒಂದು ನಿಮಿಷ ಕಾಲ ನಿಲ್ಲುವವು. ಆಗ ಮಾತ್ರ ಅಷ್ಟರಲ್ಲಿಯೇ ಒಂದೇ ಬಾಣದಿಂದ ಮೂರೂ ನಗರಗಳನ್ನು ಸಂಹರಿಸಿದರೆ ಆ ರಾಕ್ಷಸರಿಗೆ ಮರಣವು! ಇಂತಹವರನ್ನು ಸಾಕ್ಷಾತ್ ತ್ರಿಗುಣಾತೀತ ಶಿವನೇ ದಂಡ ಯಾತ್ರೆ ಮಾಡಿ ಸಂಹರಿಸಿದನು. ಅದನ್ನು ಮಹಿಮ್ನಸ್ತೋತ್ರಕಾರನಾದ ಪುಷ್ಪದಂತನು ಹೀಗೆ ಬಣ್ಣಿಸಿದ್ದಾನೆ:—

ರಥಃ ಕ್ಷೋಣೀಯಂತಾ ಶತಧೃತಿರಗೇಂದ್ರೋಧನುರಥೋ ।
ರಥಾಂಗೇಚಂದ್ರಾರ್ಕೌರಥ ಚರಣ ಪಾಣಿಃ ಶರ ಇತಿ ॥
ದಿಧಕ್ಷೋಸ್ತೇ ಕೋಯಂತ್ರಿಪುರತೃಣಮಾಡಂಬರವಿಧಿರ್ ।
ವಿಧೇಯೈಃ ಕ್ರೀಡಂತ್ಯೋನಖಲು ಪರತಂತ್ರಾಃಪ್ರಭುಧಿಯಃ ॥

ಇದರ ಸಾಮಾನ್ಯಾರ್ಥವೇನಂದರೆ— ಭೂಮಿಯು ರಥ, ಬ್ರಹ್ಮನು ಸಾರಥಿ, ಮೇರುಗಿರಿಯು ಧನು, ರವಿಶಶಿಗಳು ರಥದ ಗಾಲಿಗಳು, ವಿಷ್ಣುವು ಬಾಣವು, ಹೀಗೆ ಸಿದ್ಧತೆಯನ್ನು ಮಾಡಿಕೊಂಡು ಶಿವನು ತ್ರಿಪುರಗಳ ಮೇಲೆ ಸಾಗಿದನು. ಇದೆಲ್ಲ ಆಡಂಬರವು ಅವನಿಗೆ ತೃಣಪ್ರಾಯವಾದ ತ್ರಿಪುರ ದಹನಕ್ಕೆ ಏನು ಕಾರಣವಿದ್ದಿತು? ಆದರೆ ಇದೆಲ್ಲ ಲೀಲಾ ವಿನೋದಾರ್ಥವೆಂದೂ ಇಲ್ಲವೆ ಪ್ರಭುಗಳು ಪರಿವಾರಾಧೀನರೆಂದೂ ಭಾವಿಸುವದೇ ಸಹಜ! ಇದೂ ಅಲ್ಲದೆ ಬೇರೆ ಕಡೆ, ಪಾಶುಪತವು ಶರಾಗ್ರವು ವೇದಗಳು ಕುದುರೆಗಳು, ಶಾಸ್ತ್ರಗಳು ರಥದ ಕೀಲುಗಳು, ಆದಿಶೇಷನು ಹಿಂಜಿನಿ, ಇತ್ಯಾದಿ ವರ್ಣನೆಯೂ ಉಂಟು. ಒಟ್ಟು ತಾತ್ಪರ್ಯವೇನಂದರೆ ಪೃಥ್ವಿ (ಮನುಷ್ಯಪ್ರಾಣಿ) ಯೆಂಬ ರಥವು, ಸೂರ್ಯ ಚಂದ್ರರೆಂಬ ಮನುಷ್ಯನ ಆಯುಷ್ಯವನ್ನೆಣಿಸಲಿಕ್ಕೆ ಎಕ್ಕಂ ಪ್ರಮಾಣವಾದ ದಿನ ರಾತ್ರಿಗಳೆಂಬ) ಗಾಲಿಗಳು, ಶಾಸ್ತ್ರಗಳೆಂಬ ಕೀಲ (ಮನುಷ್ಯನ ಆಯುಷ್ಯಕ್ರಮಕ್ಕೆ ಆಧಾರವಾದ ಗ್ರಂಥಗಳು), ವೇದಗಳೆಂಬ ಅಶ್ವಗಳು (ಪ್ರಗತಿಪಡಿಸುತ್ತ ಮನುಷ್ಯನನ್ನು ಧ್ಯೇಯದಕಡೆ ಒಯ್ಯುವ ಸಾಧನಗಳು), ಬ್ರಹ್ಮನು (ಜೀವನು) ಎಂಬ ಸಾರಥಿಯು, ಮೇರುಗಿರಿಯೆಂಬ (ಅಚಲ ನಿಶ್ಚಯವೆಂಬ) ಧನುಸ್ಸು, ಮಹಾಶೇಷ (ಕುಂಡಲಿಸರ್ಪವೆನಿಸುವ ಸುಷುಮ್ನಾ ನಾಡಿ) ಎಂಬ ಹೆದೆ, ವಿಷ್ಣುವೆಂಬ (ಸುಷುಮ್ನಾನಾಡಿಯನ್ನಲಂಕರಿಸಿದ ಷಟ್‌ಚಕ್ರಗತ ಲಿಂಗಶಕ್ತಿಯೆಂಬ) ಬಾಣವು, ಪಾಶುಪತವೆಂಬ (ಪಶು, ಪಾಶ, ಪತಿಗಳ ಸಂಬಂಧೀಯ ಮಹಾಜ್ಞಾನವೆಂಬ) ಶರಾಗ್ರವು, ಇವೆಲ್ಲ ಸಾಧನಗಳಿಂದ ಶಿವನು (ಕೂಟಸ್ಥನು) ಸಜ್ಜಾಗಿ, ತ್ರಿಪುರಗಳಲ್ಲಿ (ದೇಹತ್ರಯದಲ್ಲಿ) ವಾಸವಾಗಿರುವ ಮೂವರು ರಾಕ್ಷಸರನ್ನು (ಅಣವಾದಿ ಮಲಗಳನ್ನು) ಒಂದೇ ಬಾಣದಿಂದ (ಸಮರಸೈಕ್ಯ ಜ್ಞಾನದಿಂದ) ಆ ಪುರ ಸಹಿತ ಸುಟ್ಟು ಬಿಟ್ಟನು; ಅಂದರೆ ಪುನರ್ಜನ್ಮವಿಲ್ಲದಂತೆ ಮಾಡಿದನು. ಇದೇ ಆ ಕಥೆ ಹಾಗೂ ಅದರ ಗುಟ್ಟು. ಇನ್ನು ಆ ಮಲಗಳನ್ನು ಕುರಿತು ಆಲೋಚಿಸುವಾ.

ಮಲತ್ರಯದ ಸ್ವರೂಪ.

೧ಅಣವಮಲ (ಅಣು+ಅ) – ಅಂದರೆ ಅಣು ಸ್ವರೂಪದವನೆಂಬ ದೋಷ— ಸಮುದ್ರದಲ್ಲಿ ತೆರೆಯು ಎಂತೋ ಅಂತು, ಜೀವನು (ಮಾನವನು) ಪರಿಪೂರ್ಣ ಅಖಂಡ ಪರವಸ್ತುವಿನಲ್ಲಿ ಅದರ ಸ್ಫುರಣದಿಂದ ಉದ್ಭವಿಸಿ ತೋರಿದ್ದರೂ, ತನ್ನ ಅಸ್ತಿತ್ವವು ಸ್ವತಂತ್ರವಾದುದೆಂದು ಅಜ್ಞಾನದಿಂದ ಒಗೆದು, ತನ್ನನ್ನು ಆ ಅಖಂಡ ವಸ್ತುವಿನಿಂದ ವಿಂಗಡಿಸಿಕೊಂಡು, ಅದರೊಡನೆ ಹೋಲಿಸಿ ನೋಡಿ, "ತಾನು ಆ ಅಪ್ರಮಾಣ ಅಖಂಡ ವಸ್ತುವಿಗಿಂತ ಅತ್ಯಂತ ಅಲ್ಪನಿರುವೆ" ನೆಂದು ಭಾವಿಸಿದನು. ಈ ವಿಪರ್ಯಾಕಲ್ಪನೆಯನ್ನು ಮಾಡಿಕೊಂಡ ದೋಷವೇ ಅಣವ ಮಲವು. ಜೀವನು ನಿಜವಾಗಿ ಆ ಮಹದ್ವಸ್ತುವೇ ಆಗಿದ್ದು, ಸುಮ್ಮ ಸುಮ್ಮನೆ ಈ ಅಣುತ್ವ ದೋಷವನ್ನು ಆಂಟಿಸಿಕೊಂಡುದರಿಂದ, ಆಕಾರವಷ್ಟೇ ಅಲ್ಲದೆ ಅದರೊಡನೆಯೇ ಜ್ಞಾನದಿಂದಲೂ ಕರ್ತೃತ್ವದಿಂದಲೂ ತೀರ ಕೇಳಾದವನೆಂದು ಊಹಿಸಿದನು.

ಮಾಯಾಮಲ-ಜೀವನು ಹೀಗೆ ಬೇರೆಯಾದ ತನ್ನನ್ನು 'ನಾನು' ಎಂದು ಅಹಂಕರಿಸಿದನು ಇದೇ ಮೇರೆಗೆ ಆ ಪರವಸ್ತುವಿನಲ್ಲಿ (ಸಮುದ್ರದ ನೊರೆತೊರೆಗಳಂತೆ) ತೋರುವ ಬೇರೆ ಪದಾರ್ಥಗಳನ್ನು ಅಂದರೆ ಚರಾಚರ ಜಗತ್ತನ್ನು ಅಜ್ಞಾನ ವಶದಿಂದ "ನೀನು; ಅವನು, ಇವನು; ಅವಳು, ಇವಳು; ಅದು, ಇದು," ಎಂದು ಪ್ರತ್ಯೇಕಿಸಿಯೇ ಕರೆಯಹತ್ತಿದನು. ಈ ಭೇದ ಬುದ್ಧಿಯೇ ಮಾಯಾಮಲವೆನಿಸಿತು. ಪರಮಾತ್ಮನ ಸ್ಫುರಣ ಮಾತ್ರದಿಂದ ಅವನಲ್ಲಿ ತೋರಿದ ಈ ಹೊಸ ಸೃಷ್ಟಿಯು, ಮಾಯೆಯ ಯೋಗದಿಂದ ಬಹು ರೂಪಿಯಾಗಿ, ಮನೋಹರವೆನಿಸಿ, ಜೀವವನ್ನು ಹೆಚ್ಚಾಗಿ ಮರುಳ್ಗೊಳಿಸಿತು. ವಿಧವಿಧದ ಬಣ್ಣ, ಆಕಾರ, ಗುಣಧರ್ಮಗಳು, ಶಬ್ದ ಇತ್ಯಾದಿಗಳನ್ನು ಕಂಡು ಬೆರಗಾಗಿ, ಅದರ ಉಪಭೋಗಕ್ಕೆ ಮುನಸೋತನು.

---

೧ 'ಅ' ಪ್ರತ್ಯಯ ಬರುವದರಿಂದ ಆದಿ ಸ್ವರಕ್ಕೆ ವೃದ್ಧಿ, ಅಂತ್ಯ ಸ್ವರಕ್ಕೆ ಗುಣವಾಗುವದು. ಅಣು+ಅ= ಅಣೋ+ಅ = ಅಣವ್+ಅ =ಅಣವ– ಬೇರೆ ಉದಾಹರಣೆಗಳು – ಮಾಧವ, ಪಾಂಡವ, ಕೌರವ, ಗೌರವ, ಸೈಂಧವ, ಮಾರ್ದವ ಮುಂತಾದವು.

೧ಕಾರ್ಮಿಕಮಲ (ಕರ್ಮ+ಇಕ)– ಒಮ್ಮೆ ವಿಷಯಗಳತ್ತ ಮುಖವಾದ ಮೇಲೆ ಜೀವನಿಗೆ ಅವುಗಳ ಸುಖದ ವ್ಯಾಮೋಹವು ಬೆಳೆದು, ಅದು ಬರುಬರುತ್ತ ಅನಿವಾರ್ಯವಾಗುವದರಿಂದ, ಅವನು ತನ್ನನ್ನು ಅದರೋಳಗೇ ಹೂಳಕೊಂಡು ಬಿಡುವುದು ಸ್ವಾಭಾವಿಕ! ಹೀಗೆ ಸ್ವಾರ್ಥಕ್ಕೆ ಬಲಿಯಾಗಿ ನೀತಿ, ನ್ಯಾಯ, ಧರ್ಮವಾವುದನ್ನೂ ನೋಡದೆ, ನಿರ್ದಯನಾಗಿ ಅನ್ಯರನ್ನು ನೋಯಿಸಿ ಘಾತಿಸಿ ಸಹ, ತನಗೋಸ್ಕರ ವಿಷಯಗಳನ್ನು (ಸಂಪತ್ತನ್ನು) ದೊರಕಿಸಹತ್ತಿದನು. ಆಗ ತಾನು ಮಾಡುವ ಕರ್ಮಗಳಲ್ಲಿ ಲೇಸು ಕೆಡಕುಗಳನ್ನು ಕಂಡು ಪುಣ್ಯಪಾಪಂಗಳ ಬಂಧನಕ್ಕೊಳಗಾದನು. ತಾನು ಮಾಡುವ ಕರ್ಮಗಳ ಹೊಣೆಗಾರಿಕೆಯನ್ನು ತಾನು ಹೊತ್ತು – ಅಹಂಕರ್ತಾ ಅಹಂಭೋಕ್ತಾ ಎಂದು -- ಭವಚಕ್ರದಲ್ಲಿ ಸಿಗಬಿದ್ದನು ಇದೇ ಕರ್ಮ ಬಂಧನವು ಅಥವಾ ಕಾರ್ಮಿಕಮಲವು- ಹೀಗಾಗಿ ತನ್ನ ನಿಜ ಸ್ವರೂಪವನ್ನು ಸಂಪೂರ್ಣವಾಗಿ ಮರೆತು ದೇಹವೇ ತಾನೆಂದು ನೆನಿಸಿ, ಕಾಲಕರ್ಮಂಗಳಿಗೆ ಒಳಗಾಗಿ, ತೊಳಲಾಡಹತ್ತಿದನು. ಈ ಪ್ರಕಾರ ಆಣವ ಮಲದಿಂದ ಮಾಯಾ ಮಲವೂ, ಮಾಯಾ ಮಲದಿಂದ ಕಾರ್ಮಿಕಮಲವೂ, ಒಂದರಿಂದೊಂದು ಹುಟ್ಟಿ ಜೀವವನ್ನು ಬಿಗಿದು ಬಿಟ್ಟವು.

ಈ ಮಲಗಳನ್ನು ಕುರಿತು ಶ್ರೀಮಗ್ಗೆಯಮಾಯಿದೇವರ ಶತಕತ್ರಯದ ೧೩ನೆಯ ಪುಟದಲ್ಲಿ ಅದರ ಟೀಕಾಕಾರರಾದ ಶ್ರೀತೋಂಟದಸಿದ್ಧಲಿಂಗೇಶ್ವರ ದೇಶಿಕರು, ೧೬ನೆಯ ಪದ್ಯದ ಟೀಕೆಯಲ್ಲಿ ಈ ರೀತಿ ಉಲ್ಲೇಖಿಸಿರುವರು. "ಆಣವವೆಂದರೆ ಗರ್ಭಸಂಬಂಧವಾದ ಅಣುರೂಪ ಮಲವು, ಮಾಯವೆಂದರೆ ಜಾತಿಸಂಬಂಧವಾದ ಮೋಹವೆಂಬ ಮಲವು. ಕಾರ್ಮಿಕವೆಂದರೆ ದ್ರವ್ಯಸಂಬಂಧವಾದ ಈಷಣತ್ರಯದೊಡನೆ ಕೂಡಿಕೊಂಡ ಮಲವು." ಇದರರ್ಥವೂ ಮೇಲಿನ ನಿರೂಪಣೆಯ ಅರ್ಥವೂ ಒಂದೇ. ಹೇಗಂದರೆ—(ಅ) ಗರ್ಭಸಂಬಂಧದ (ಉತ್ಪತ್ತಿಗೆ ಸಂಬಂಧಿಸಿದ) ಮಲವೇ ಆಣವಮಲವು. ನಾನು ತಾಯ್ತಂದೆಗಳ ರಕ್ತವೀರ್ಯಗಳಿಂದ ಅವರ ಹೊಟ್ಟೆಯಲ್ಲಿ ಹುಟ್ಟಿದ್ದೇನೆ. ನಾನೂ ಅದರಂತೆಯೇ ನರನು. ಕಾಲ-ಕರ್ಮ ಸುಖ-ದುಃಖಗಳಿಗೆ ಒಳಗಾಗಿ, ಭವಚಕ್ರಕ್ಕೆ ಸಿಕ್ಕುವನು. ನಾನು ಪರಿ

೧ ಇಲ್ಲಿ ಅದಿ ಸ್ವರಕ್ಕೆ ವೃದ್ಧಿ ಅಂತ್ಯ ಸ್ವರಕ್ಕೆ ಲೋಪವಾಗಿದೆ. ಬೇರೆ ಉದಾ: ಜಾತುರ್ಧಿಕ, ಸಾತ್ವಿಕ, ನೈತಿಕ, ಔದ್ಯೋಗಿಕ ಇತ್ಯಾದಿ.

ಪೂರ್ಣ ಅಖಂಡಪರಮಾತ್ಮನಲ್ಲಿ ಉದಯಿಸಿಲ್ಲ. ಅತನ ಲಕ್ಷಣಗಳಾವವೂ ನನ್ನಲ್ಲಿಲ್ಲ. ನಾನು ಅತ್ಯಂತ ಅಲ್ಪನು (ಅಣುಮಾತ್ರವು). ಈ ತೋರುವ ಜಗತ್ತೇನೂ ನನ್ನ ಸ್ವರೂಪವಲ್ಲ. ಅದು ಬೇರೆ ನಾನು ಬೇರೆ. ಆದರ ಸುಖವನ್ನು ಸಿಕ್ಕಷ್ಟು ಹೊಂದುವದೇ ನನ್ನ ಕರ್ತವ್ಯ. ರಕ್ತಸಂಬಂಧಿಗಳು (ತಾಯ್ತಂದೆ, ಅಪ್ತೇಷ್ಟ ಮುಂತಾದವರು) ಮಾತ್ರ ನನ್ನವರು. ಇತರರಾರೂ ನನ್ನವರಲ್ಲ. ಎಂಬಿವೇ ಮೊದಲಾದ ಕಲ್ಪನಾಚರಿತನಾದನು. (ಬ) ಜಾತಿಸಂಬಂಧವಾದ ಮೋಹವೆಂಬ ಮಲವೇ ಮಾಯಾಮಲವು. ಜಾತಿಯೆಂದರೆ-- ಗುಂಪು. ತಾನೇ ಮೊದಲಾದ ಮನುಷ್ಯಕುಲ, ಚರಕೋಟಿ (ನಾನಾಪ್ರಕಾರದ ಪ್ರಾಣಿಗಳ ವರ್ಗಗಳು) ಅಚರಗಣ (ಉದ್ಭಿಜ ಖನಿಜ ವಾಯುಗಳ ವಿವಿಧ ಸಮುದಾಯಗಳು) ಹೀಗೆ ಭೇದಭಾವನೆಯ ಕಡೆಗೆ ಹರಿಯುವದೇ ಮೋಹ. ಎಲ್ಲವೂ ಒಂದೇ ಒಂದಾದ ಅವ್ಯಕ್ತದಿಂದ ಹುಟ್ಟಿದುದನ್ನು ಅಜ್ಞಾನಯೋಗದಿಂದ ಮರೆತು, ಭಿನ್ನತ್ವವನ್ನು ತಳೆಯುವದೇ ಮಾಯಾಮಲವು. (ಕ) ಧನಸಂಬಂಧವಾದ ಈಷಣತ್ರಯದಿಂದ ಕೂಡಿದ ಮಲವೇ ಕಾರ್ಮಿಕ ಮಲವು. ಈಷಣತ್ರಯವೆಂದರೆ ಹೆಂಡರು, ಮಕ್ಕಳು, ಮನೆಮಾರು ಮೊದಲಾದ ಸಂಪತ್ತು. ಇವರಿಗಾಗಿಯೂ ತನಗಾಗಿಯೂ ಧನ (ವಿಷಯ ರೂಪ ಪದಾರ್ಥಗಳನ್ನು) ಸಂಗ್ರಹಿಸುವದಕ್ಕಾಗಿ, ಅನ್ಯಾಯಾತಿರೇಕಗಳಿಗೆ ಲಕ್ಷಗೊಡದೆ, ಅನೇಕ ಅಕಾರ್ಯಗಳನ್ನೂ ಸುಕಾರ್ಯಗಳನ್ನೂ ಮಾಡಿ, ಪಾಪಪುಣ್ಯಗಳಿಗೆ ಗುರಿಯಾಗಿ, ತಿರುತಿರುಗಿ ಭವಕ್ಕೆ ಬರುವ ದೋಷವೇ ಕಾರ್ಮಿಕ ಮಲವು.

ಮಲತ್ರಯ ನಿವಾರಣೋಪಾಯ.

ಈ ಪುಸ್ತಕದ ೧೪ನೆಯ ಪುಟದೊಳಗೆ ಇದೇ ಪದ್ಯದ ಟಿಪ್ಪಣಿಯಲ್ಲಿ "ಶ್ರೀಗುರುನಾಥನು ಮಾಡಿದ, ಮುಕ್ತಿಗೆ ಸಾಧನವಾದ, ವೇಧಾ-ಮನು-ಕ್ರಿಯಾ ಎಂಬ ದೀಕ್ಷಾತ್ರಯದಿಂದ, ಆಣವ-ಮಾಯಾ-ಕಾರ್ಮಿಕ ಮಲತ್ರಯವು ಅಳಿದು ಹೋಗುವದು" ಎಂದು ಬರೆದಿರುವರು. ಈ ಮಾತಾದರೂ ಬಿಚ್ಚಿ ಹೇಳದೆ ತಿಳಿಯುವಂತಿಲ್ಲ. ಆದುದರಿಂದ ಅದನ್ನಾದರೂ ವಿವರಿಸುವೆನು.

ವೇಧಾದೀಕ್ಷೆ— ಅಂದರೆ ಚುಚ್ಚಿ ಛಿದ್ರಗೊಳಿಸುವ ಸಂಸಾರ ಅಥವಾ ಗುರಿಹೊಡೆಯುವ ಸಂಸ್ಕಾರ. ಇಲ್ಲಿ ಚುಚ್ಚಿಕೊಳ್ಳುವದು ಇಲ್ಲವೆ ಗುರಿ

ಯಾಗಿರುವದು ಕಾರಣ ಶರೀರವಾದ ಅವಿದ್ಯೆ (ಹೃದಯ ಗ್ರಂಥಿ). ಈ ದೀಕ್ಷೆಯಿಂದ ಶಿಷ್ಯನ ಅಜ್ಞಾನವು ನಾಶವಾಗಿ, ತಾನು ಕ್ಷುಲ್ಲಕ ಮನು ಜನಲ್ಲ, ಪರಿಪೂರ್ಣವಾದ ಅಖಂಡರೂಪ ಶಿವನು, ಎಂಬ ಅರಿವು ತಲೆದೋರುವದು. ಯಾಕಂದರೆ— ಶ್ರೀಗುರುವು ಕೃಪಾಪೂರಿತಕಟಾಕ್ಷದಿಂದ ನೋಡಿ; ಶಿಷ್ಯನ ಮಸ್ತಕದ ಮೇಲೆ ತನ್ನ ಅಮೃತ ಹಸ್ತವನ್ನಿಟ್ಟೊಡನೆಯೆ, ಅವನಲ್ಲಿ ಒಂದು ವಿಧದ ಧನ್ಯತೆಯು ತಲೆದೋರುವದು. ಅದರಿಂದ ಅವನ ನರತ್ವವು ಅಳಿದುಹೋಗಿ, ಹರತ್ವವು ಪ್ರಾಪ್ತವಾಗುವದು. "ಗುರುಃ ಸ್ಪೃಶತಿ ಹಸ್ತೇನ । ಯಂ ಯಂ ಪಶ್ಯತಿ ಚಕ್ಷುಸಾ ॥ ಶಿವಂಭವತಿ ತತ್ಸರ್ವಂ । ಗುರೋರೇವ ಪ್ರಸಾದತಃ ॥" ಎಂದು ಅಚಿಂತ್ಯವಿಶ್ವ ಸಾದಾಖ್ಯ ವಚನವಿರುವದು. ಇದರಿಂದ ಆಣವ ಮಲವು ನಾಶವಾಗುವದು

ಮನುದೀಕ್ಷೆ:— ಮನುವೆಂದರೆ ಮಂತ್ರ. ಶಿವಪಂಚಾಕ್ಷರಿ ಮಂತ್ರವು ಇವರಲ್ಲಿ ಶಿಷ್ಯನಿಗೆ ಬೋಧಿಸಲ್ಪಡುವದು. ಇದು ಲಿಂಗಾಂಗ ಸಾಮರಸ್ಯ ಪ್ರತಿಪಾದಕವಾಗಿರುವದು. ಅದರಿಂದ ಅವನ ಮಾಂಸಮಯ ಪಿಂಡವು ಅಳಿದು ಮಂತ್ರಮಯವಾಗುವದು. ಅರ್ಥಾತ್ ಶಿವರೂಪನಾಗುವನು. ಈ ದೀಕ್ಷೆಯಿಂದ ಅವನ ಮೊದಲಿನ ಭೇದಭಾವವು ಅಡಗುವದು. ಗುರುಪುತ್ರರೆಲ್ಲರೂ ತನ್ನ ಬಂಧುಗಳೆಂದೂ ಸ್ವಸ್ವರೂಪವೆಂದೂ ಭಾವಿಸುವನು ಸಕಲ ಪ್ರಪಂಚವನ್ನೂ ಶಿವರೂಪವಾಗಿಯೇ ಅರಿಯುವನು. ಆ ಕಾರಣ ಮಾಯಾಮಲವು ಬಯಲಾಗುವದು.

ಕ್ರಿಯಾದೀಕ್ಷೆ:— ಕ್ರಿಯೆಯೆಂದರೆ ಕಾರ್ಯ. ಕನ್ನಡದಲ್ಲಿ ಕ್ರಿಯೆಗೆ ಮಾಟ (ಮಾಡು+ಅ) ವೆನ್ನುವರು. ಈ ದೀಕ್ಷೆಯಲ್ಲಿ ಸದಾಚಾರ ಸತ್ಕ್ರಿಯೆಗಳೇ ಉಪದೇಶಿಸಲ್ಪಡುತ್ತವೆ. ತನಗೆ ಬಂಧನಕಾರಕವಾಗದಂತೆ, ಈ ಲೋಕದಲ್ಲಿ ಯುಕ್ತಿಯಿಂದ ಅದು ಹೇಗೆ ಕರ್ಮ (ಮಾಟ)ಗಳನ್ನು ಮಾಡಬೇಕೆಂಬುದರ ಮರ್ಮವು ಸರಿಯಾಗಿ ಹೊಳೆಯುವದು. ಮೊದಲಿದ್ದ ಉಪಾಧಿ (ಸಕಾಮ) ಮಾಟವು, ಮುಂದೆ ನಿರುಪಾಧಿಕ (ನಿಷ್ಕಾಮ) ವಾಗಿಯೂ, ಕೊನೆಗೆ ಸಹಜವಾಗಿ (ತ್ರಿಪುಟಿಯೊಂದಾಗಿ-ಸಕಲವೂ ಶಿವರೂಪವಾಗಿ) ಯೂ, ರೂಪಾಂತರ ಹೊಂದಬೇಕು. ತ್ರಿಪುಟಿಯೆಂದರೆ ಮಾಡುವವ, ಮಾಡಿಸಿಕೊಳ್ಳುವ ಕಾರ್ಯ, ಮಾಡುವ ಸಾಧನ ಈ ಮೂರೂ ಒಂದೇ ಒಂದು ಶಿವರೂಪವಾಗಿ ಬಿಡುವದು. ಹೀಗಾದಾಗಲೇ ಪುಣ್ಯಪಾಪರೂಪ ಕರ್ಮಬಂಧನದಿಂದ ಮುಕ್ತನಾಗುವನು. ಇದರಿಂದ ಕಾರ್ಮಿಕ ಮಲವು ಲಯವಾಗುವದು.

ಸಾಂಪ್ರತದ ಶೋಚನೀಯ ಸ್ಥಿತಿ.

ಈ ಪ್ರಕಾರ ವೇಧಾಮನು ಕ್ರಿಯೆಗಳಿಂದ ಕೂಡಿದ ಶಿವದೀಕ್ಷೆಯು ಅದೆಷ್ಟು ಮಹತ್ವವಾದುದೆಂಬುದು ವಾಚಕರಿಗೆ ಕಂಡುಬರದೆ ಇರಲಾರದು. ಮನುಷ್ಯನಿಗಾಗುವ ಎಲ್ಲ ಸಂಸ್ಕಾರಗಳಲ್ಲಿ ಇದರಷ್ಟು ಅಮೌಲ್ಯವಾದುದು ಇನ್ನೊಂದಿಲ್ಲ. ಇಂತಹ ಅತ್ಯಾವಶ್ಯಕವಾದ ಶಿವದೀಕ್ಷೆಯನ್ನು ಈಗ ವೀರಶೈವರಿನಿಸಿಕೊಳ್ಳುವ ಶಿವಭಕ್ತರೆಲ್ಲರು ಹೊಂದುತ್ತಿರುವರೇ? ಸಾಂಪ್ರದಾಯವೆಂದು ಮಾತ್ರ ಹೊಂದುತ್ತಿರುವ ಸರ್ವ ಅಯ್ಯನವರಿಗಾದರೂ, ಈ ದೀಕ್ಷೆಯ ನಿಜವಾದ ಪ್ರಯೋಜನವು ಲಭಿಸುವದೇ? ಬರೇ ಉದರಂಭರಣ ಸೌಕರ್ಯಕ್ಕೆಂದೇ ಈ ದೀಕ್ಷೆಯನ್ನು ಬಹು ಜನರು ಕೋರುವರಲ್ಲದೆ, ಅದರ ತಳಬುಡವೇನೂ ಅವರಿಗೆ ಸ್ವಪ್ನದಲ್ಲಿಯೂ ಗೊತ್ತಿರುವದಿಲ್ಲೆಂದು, ಕಷ್ಟದಿಂದ ಒಪ್ಪಬೇಕಾಗುತ್ತದೆ. ಇರಲಿ, ಇನ್ನು ಮೇಲೆ ಎಲ್ಲ ಲಿಂಗಾಂಗಿಗಳು (ಅಯ್ಯನವರೇ ಇರಲಿ, ಅಲ್ಲವರೇ ಇರಲಿ). ಯೋಗ್ಯ ಗುರುವಿನಿಂದ ತಪ್ಪದೆ ಶಿವದೀಕ್ಷಾ ಅನುಗ್ರಹವನ್ನು ಪಡೆಯಲೇಬೇಕು. ಈ ಬಗ್ಗೆ ನಾನು ಒಂದು ಲೇಖವನ್ನು ವಾರಪತ್ರಿಕೆಗಳಲ್ಲಿ ಪ್ರಸಿದ್ಧಿಸಿರುವೆನು. ಅದನ್ನು ನೋಡಿ, ಮನನಿಸಿ, ಆ ಪ್ರಕಾರ ಎಲ್ಲ ನನ್ನ ಬಾಂಧವರು ಬಿಡದೆ ಅನುಸರಿಸುವರೆಂದು ನಂಬಿರುವೆನು.

ತಪ್ಪುತಿಳಿವಳಿಕೆ.

ಎಷ್ಟೋ ಜನರು—ಅದೇಕೆ ಬಹುತರ ಎಲ್ಲರೂ—ಶಿವದೀಕ್ಷೆಕೊಂಡುವದೆಂದರೆ, "ಇಲ್ಲದ್ದೊಂದು ಸೀಡೆಯನ್ನು ಸುಮ್ಮ ಸುಮ್ಮನೆ ಬೆನ್ನು ಹಚ್ಚಿಕೊಂಡಂತೆಯೇ ಸರಿ! ಅದರಿಂದ ಈಗಿನ ಪರಿಸ್ಥಿತಿಯಲ್ಲಿ ನಮಗೆ ಹೆಜ್ಜೆಜ್ಜಿಗೆ ತೊಂದರೆಯಾಗುವದು. ಅದು ಸ್ವಾಮಿಗಳಿಗೇ ಸಲ್ಲುವದು. ನಮ್ಮಂಥ ಉದ್ಯೋಗಕ್ಕಾಗಿ ಬಡಕೊಳ್ಳುವವರಿಗೆ ಅದು ತರವಲ್ಲ. ನಮಗೆ ಸಾಗುವದೇ ಕಷ್ಟ. ಹಿಡಿದು ಗೋಳಾಡುವದಕ್ಕಿಂತ ಅದರಿಂದ ದೂರುವದೇ ಒಳಿತು" ಇತ್ಯಾದಿ ಭ್ರಾಂತಿಗೊಳಗಾಗಿರುವರು. ಇದು ತೀರ ತಪ್ಪು. ಈಗ ಸಾಮಾನ್ಯ ಜನ ಸಮುದಾಯವು ನಡೆಯುತ್ತಿರುವದಕ್ಕಿಂತ, ಅದ

(೧) ಕರುನಾಕರ್ನಾಟಕ (ಹುಬ್ಬಳ್ಳಿ) ಅಂಕ ತಾ॥ ೧೦—೬—೪೦ ಶರಣ ಸಂದೇಶ (ಆಲಮಟ್ಟಿ) ಅಂಕ ತಾ॥ ೧೦—೬—೪೦ ನವಕರ್ನಾಟಕ (ವಿಜಾಪುರ) ಅಂಕ ತಾ॥ ೨೦—೬—೪೦.

ರಲ್ಲಿ ಹೆಚ್ಚಿನ ಅದಾವ ಜೊಂಜಾಟದ ಒಣಕ್ರಿಯೆಗಳೂ ಇರುವದಿಲ್ಲ. ದೀಕ್ಷೆಯಿಂದ ಆಗಬೇಕಾದ ಸುಧಾರಣೆಯು, ನಿಜವಾದ ಜ್ಞಾನಮೂಲಕವಾಗಿ. ಅಂತರಂಗದೊಳಗೆ (ಬಹಿರಂಗದಲ್ಲಿ ಅಲ್ಲ!) ಮನ ಭಾವಗಳಲ್ಲಿ ಕ್ರಾಂತಿಯಾಗಿ, ಸತ್ಯ ಶಿವಭಕ್ತಿಯನ್ನು ಹಿಡಿಯುವದದೆ. ಅದನ್ನು ಮರೆತು ಗುಣಹೀನರಾದ ಕೆಲವರು "ನಾವು ಕ್ರಿಯಾ ತಕ್ಕೊಂಡಿದ್ದೇವೆ ಎಂದು ಹೇಳುತ್ತ, ಇಲ್ಲದಡಂಭಾಚಾರವನ್ನು ಮಡಿ-ಮೈಲಿಗೆಯ ಸ್ತೋಮವನ್ನೂ ಬೆಳಿಸಿ, ಜನರಲ್ಲಿ ತಮ್ಮ ದೊಡ್ಡಸ್ತಿಕೆಯ ಜೊಳ್ಳು ವರ್ಚಸ್ಸನ್ನು ಸ್ಥಾಪಿಸುವ ಸಲುವಾಗಿ, ಇಲ್ಲದ ಬಡಿವಾರವನ್ನು ಮೆರಿಸುತ್ತಾರೆ. ಇದಕ್ಕೆ ಬೇಕಾದರೆ ಅವರ ಅಜ್ಞಾನವೆನ್ನಿರಿ, ಇಲ್ಲವೆ ಸ್ವಾರ್ಥಮೂಲಕ ಬುಧ್ಯಾ ಪ್ರದರ್ಶಿಸುವ ಸೋಗು ಎನ್ನಿರಿ. ಇವರ ರೀತಿಯನ್ನು ನೋಡಿ, ಸಹಸಾ ಬೆದರಬೇಡಿರಿ. ನಮ್ಮಲ್ಲಿ ಒಣ ಮಡಿಮೈಲಿಗೆಗೆ ಎಳ್ಳಷ್ಟು ಮಹತ್ವ ವಿಲ್ಲ. "ಮಡಿತಾಂ ನಿರ್ಮಲ ಚಿತ್ತ ಮೈ" ಎಂಬ ಸತ್ಯವಾದ ಮಡಿಯನ್ನೇ ಹೇಳಿ ಬಿಟ್ಟಿದ್ದಾರೆ. ಆದುದರಿಂದ ಬಹಿರಂಗದ ಮಡಿಮೈಲಿಗೆ (ಸೂತಕ) ಯಲ್ಲಿ ಕೊಂಚಕೊರತೆಯಾದರೂ ಅಡ್ಡಿ ಇಲ್ಲ. ಮನಸ್ಸು ಸ್ವಚ್ಛವಿಟ್ಟು ಸತ್ಯ, ಪ್ರಾಮಾಣಿಕ ವರ್ತನ, ನ್ಯಾಯ, ದಯೆ, ಧರ್ಮ, ಪರೋಪಕಾರ ಮೊದಲಾದವುಗಳನ್ನು ಅವಲಂಬಿಸಿ, ಜ್ಞಾನಮಾರ್ಗಕ್ಕೆ ಕೊರತೆ ಬರದಂತೆ ವರ್ತಿಸುವದೇ ಮುಖ್ಯವಾಗಿದೆ. ಇಷ್ಟಲಿಂಗದ ಪೂಜೆಯಲ್ಲಿ ಕಾಲವನ್ನು ಹೆಚ್ಚಾಗಿ ಕಳೆಯುದೇಕೆಂಬುದೇನೂ ಇಲ್ಲ. "ಸದ್ಗುಣ ಸದಾಚಾರಗಳಿಂದ ನಡೆಯುವದೇ ನಿಜವಾದ ಇಷ್ಟಲಿಂಗದ ಪೂಜೆ" ಎಂಬದನ್ನು ನೆನೆಸಿರಿ. ಅದಕ್ಕೆ ಹೂ ಪತ್ರೆಗಳಿಲ್ಲದಿದ್ದರೂ ನಡೆಯುವದು. ಪ್ರಸಂಗವಶಾತ್ ಬರೀ ಭಸ್ಮ ಸ್ನಾನವಾದರೂ ಸಾಗುವದು. ಸಂಗಡ ವಿಭೂತಿ ಗಟ್ಟಿಯನ್ನು ಕಟ್ಟಿ ಕೊಂಡೇ ತಿರುಗಾಡುವ ಮರುಳತನವೂ ಬೇಡ. ಮಾತ್ರ ಎಚ್ಚರದಿಂದ ಸದಾಚಾರ ಸಂಪನ್ನನಾಗಿ ನಡೆಯಬೇಕು. ಇಲ್ಲದಿದ್ದರೆ ಜನ್ಮವೇ ವ್ಯರ್ಥ!

ಬಂಧುಗಳೇ, ಮೂಲತ್ರಯದ ವೃತ್ತಾಂತವು ಹೀಗೆ ಬಹು ಭೀಕರವಾದುದದೆ. ಅದನ್ನು ಸರಿಯಾಗಿ ಮನನಿಸಿ, ಎಚ್ಚರದಿಂದ ನಡೆದು, ವೀರಶೈವತ್ವವನ್ನು ಸಾರ್ಥಕಗೊಳಿಸುವರೆಂದು ನಂಬಿ, ವಿಶ್ರಾಂತಿ ಗೊಳ್ಳುವೆನು.

ಶಿವಾನುಭವ ಮಂಟಪದಲ್ಲಿ ಯಾರು ಇದ್ದರು?

(ಲೇಖಕ— ರಾ. ಸಾ. ಪಿ. ಜಿ. ಹಳಕಟ್ಟಿ)

ಬಸವಣ್ಣನವರ ಕಾಲದಲ್ಲಿ ಕಲ್ಯಾಣಪಟ್ಟಣದಲ್ಲಿ ಶಿವಶರಣರು ಶಿವಾನುಭವ ಮಂಟಪವನ್ನು ಸ್ಥಾಪಿಸಿ ಅಲ್ಲಿ ಧರ್ಮ ತತ್ವಗಳನ್ನು ಚರ್ಚಿಸಿ ವಚನರೂಪವಾಗಿ ಅವುಗಳನ್ನು ಎಲ್ಲ ಕಡೆಗೂ ಪ್ರಸಾರಪಡಿಸಿದರೆಂಬ ಐತಿಹ್ಯವಿದ್ದು, ಅದರಲ್ಲಿ ಸತ್ಯತೆಯೂ ಇರುತ್ತದೆ. ಆದರೆ ಈ ಮಂಟಪದಲ್ಲಿ ಈ ಕಾಲದಲ್ಲಿ ಯಾರು ಸಮಾವೇಶರಾಗಿದ್ದರು, ಅವರಲ್ಲಿ ಯಾರು ಯಾವ ಯಾವ ಮಹತ್ವದ ಭಾಗಗಳನ್ನು ವಹಿಸಿದರು, ಎಂಬುದನ್ನು ಗೊತ್ತುಪಡಿಸುವದು ಅತ್ಯಂತ ಮಹತ್ವದ ವಿಷಯವಾಗಿದೆ. ಇದನ್ನು ಕುರಿತು ನಾವು ನಮಗೆ ತೋರಿಸಿದ ಕೆಲವು ಸಂಗತಿಗಳನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಇಡುತ್ತೇವೆ. ಅವುಗಳನ್ನು ಅವರು ಪರ್ಯಾಲೋಚಿಸಿ ತಮಗೆ ತೋರಿದ ವಿಚಾರಗಳನ್ನು ಅವಶ್ಯವಾಗಿ ಪ್ರಕಟಿಸಬೇಕೆಂದು ನಮ್ಮ ಸವಿನಯ ವಿಜ್ಞಾಪನೆ ಇದೆ.

ಬೌದ್ಧ ಕ್ರಿಶ್ಚನ್ ಮುಸಲ್ಮಾನ ಈ ಮೊದಲಾದ ಕೆಲವು ಧರ್ಮಗಳಿಗೆ ಸಂಸ್ಥಾಪಕರಿದ್ದಾರೆ. ಅವರು ತಾವು ಉದ್ಭವಿಸಿದ ಪ್ರಾಂತಗಳಲ್ಲಿ ವಿಚಾರಕ್ರಾಂತಿಯನ್ನು ಮಾಡಿದರು. ಆದರೆ ಹಿಂದುಸ್ತಾನದಲ್ಲಿ ಪ್ರಾದುರ್ಭವಿಸಿದ ಧರ್ಮಗಳಲ್ಲಿ ಈ ಬಗೆಯಾಗಿ ಒಬ್ಬಾನೊಬ್ಬ ಧರ್ಮಸ್ಥಾಪಕನಿದ್ದನೆಂದು ಒಪ್ಪಿಕೊಳ್ಳುವ ಸಾಂಪ್ರದಾಯವಿಲ್ಲ. ಇಲ್ಲಿ ಉತ್ಪನ್ನರಾದ ಧಾರ್ಮಿಕ ಪುರುಷರು ತಮ್ಮ ಹಿಂದಿನಿಂದ ನಡೆದುಕೊಂಡು ಬಂದ ಒಂದಾನೊಂದು ಮಾರ್ಗದಲ್ಲಿ ಕಾಲಕ್ಕೆ ಸರಿಯಾಗಿ ಆವಶ್ಯಕ ತಾತ್ವಿಕ ಅಥವಾ ವ್ಯಾವಹಾರಿಕ ಬದಲಾವಣೆಗಳನ್ನು ಮಾಡುವದಕ್ಕೋಸ್ಕರ ಕೆಲವೊಂದು ಸಿದ್ಧಾಂತವನ್ನು ಮಾಡಿ ಅದು ಹಿಂದಿನದಕ್ಕೆ ವಿರುದ್ಧವಲ್ಲೆಂದು ಹೇಳಿ ಪ್ರಚಾರಪಡಿಸಿದ್ದು ತೋರಿಬರುತ್ತಿದೆ ಹೀಗೆ ಒಂದುತರದ ಉತ್ಕ್ರಾಂತಿ ಮಾರ್ಗದಿಂದ ಹಿಂದೂ ಧರ್ಮದಲ್ಲಿ ಪ್ರಗತಿಯುಂಟಾಗಿ ಅದರಲ್ಲಿ ಅನೇಕ ಶಾಖೋಪಶಾಖೆಗಳು ದೇಶದಲ್ಲಿ ಹರಡಿರುತ್ತವೆ. ಈ ಶಾಖೋಪಶಾಖೆಗಳಲ್ಲಿ ವೈದಿಕ ಧರ್ಮ ಮತ್ತು ಶೈವ ಧರ್ಮ ಎಂದು ಎರಡು ಮುಖ್ಯ

ವಿಭಾಗಗಳನ್ನು ನಾವು ಮಾಡಬಹುದು. ವೈವ ಧರ್ಮಕ್ಕೆ ಸಂಬಂಧಿಸಿದ ಧರ್ಮಗಳು ಹೊಟ್ಟೆಹೊದಲು ಶೈವಾಗಮ ಗ್ರಂಥಗಳನ್ನು ತಮ್ಮ ತಳ ಹದಿಯನ್ನಾಗಿ ಮಾಡಿಕೊಂಡು ದೇಶದಲ್ಲಿ ತಮ್ಮ ತಮ್ಮ ಮತಗಳನ್ನು ಪ್ರಸಾರಪಡಿಸಿದವು. ಇಂಥವುಗಳಲ್ಲಿ ನಾವು ವೀರಶೈವ ಧರ್ಮವನ್ನು ಎಣಿಸಬಹುದಾಗಿದೆ.

ಆದ್ದರಿಂದ ಈ ಸಾಂಪ್ರದಾಯಕ್ಕನುಸಾರವಾಗಿ ವೀರಶೈವ ಧರ್ಮದಲ್ಲಿ ಯಾವನೊಬ್ಬನೂ ಕೂಡ ಸಂಸ್ಥಾಪಕ ಸ್ಥಾನವನ್ನು ಹೊಂದಿರುವುದಿಲ್ಲ. ಹಿಂದೂ ಧರ್ಮದಲ್ಲಿ ಅನೇಕ ಪೀಠಾಧಿಕಾರಿಗಳಿದ್ದಾರೆ. ಅವರ ಒಕ್ಕಣೆಕೆಗಳನ್ನು ನೋಡಿದಲ್ಲಿ ಅವುಗಳಲ್ಲಿ ಇಂಥ ಇಂಥ ಧರ್ಮದ ಪ್ರತಿಷ್ಠಾಪಕ ಅಥವಾ ಸಂಸ್ಥಾಪಕ ಎಂಬ ಹೆಸರು ಬರುವದುಂಟು. ಆದರೆ ಈ ತರದ ಶಬ್ದಗಳನ್ನು ಉಪಯೋಗಿಸುವಲ್ಲಿ ಆ ಪೀಠದ ಮಹತ್ವವನ್ನು ಹೊಗಳುವ ಉದ್ದೇಶವು ಮಾತ್ರ ಜನರಲ್ಲಿ ಇರುತ್ತದೆಯೇ ಹೊರ್ತು ಆ ಯಾವ ಧರ್ಮವಾದರೂ ಕೂಡ ವೇದಾಗಮೋಪನಿಷತ್ತುಗಳಿಗೆ ಮಾನ್ಯವಾಗಿದ್ದು ಕೊಂಡೇ ಪ್ರವರ್ತನೆ ಹೊಂದಿದ್ದೆಂಬ ಭಾವನೆಯಿಂದ ಆಯಾ ಪೀಠಾಧಿಕಾರಿಗಳು ಸಂಸ್ಥಾಪಕ ಅಥವಾ ಪ್ರವರ್ತಕ ಎಂಬ ಈ ಎರಡು ಶಬ್ದಗಳಲ್ಲಿ ಯಾವ ಭಿನ್ನತೆಯನ್ನು ಕಲ್ಪಿಸದೆ ಅವುಗಳನ್ನು ಉಪಯೋಗಿಸಿದ್ದು ತೋರಿಬರುತ್ತದೆ. ಇದೇ ಸ್ಥಿತಿಯು ವೀರಶೈವರಲ್ಲಿಯೂ ಇರುತ್ತದೆ.

ಮೇಲ್ನೋಟಕ್ಕೆ ದೃಷ್ಟಿಯಿಂದ ಬಸವೇಶ್ವರನು ಧರ್ಮಸ್ಥಾಪಕನಿರುವದಿಲ್ಲೆಂದು ನಾವು ತಿಳಿಯಬೇಕಾಗುತ್ತದೆ. ಅವನು ಧರ್ಮಪ್ರವರ್ತಕನು ಮಾತ್ರ ಇರುತ್ತಾನೆ. ಐತಿಹಾಸಿಕ ದೃಷ್ಟಿಯಿಂದ ವಿವೇಚಿಸಿದರೂ ಕೂಡ ಇದೇ ಸಂಗತಿಯು ದೃಢಪಡುತ್ತದೆ. ಸ್ವತಃ ಬಸವೇಶ್ವರನು ತಾನು ಧರ್ಮಸ್ಥಾಪಕನೆಂದು ತನ್ನ ವಚನಗಳಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಅವನು ಯಾವಾಗಲೂ ತಾನೊಬ್ಬ ಕೇವಲ ಭಕ್ತನು ಎಂಬ ಭಾವವನ್ನು ಪ್ರಕಟಿಸುತ್ತಾನೆಯೇ ಹೊರ್ತು ಕ್ರೈಸ್ತ ಮತ್ತು ಮಹಮ್ಮದ ಇವರಂತೆ ಜಗತ್ತನ್ನು ಉದ್ಧಾರ ಮಾಡಲಿಕ್ಕೆ ತಾನು ಅವತರಿಸಿದ್ದೇನೆಂಬ ಅಭಿಪ್ರಾಯವು ಅವನಲ್ಲಿ ಹೊರಡುವದಿಲ್ಲ. ಅವನ ಕಾಲದಲ್ಲಿಯೂ ಶೈವ ಧರ್ಮದಲ್ಲಿ ಅನೇಕ ಭಿನ್ನತೆಗಳುಂಟಾಗಿದ್ದು ವೈದಿಕ ಧರ್ಮದಲ್ಲಿ ಕೂಡ ಅನೇಕ ಪಂಗಡಗಳುಂಟಾಗಿದ್ದವು. ಅವುಗಳೆಲ್ಲವನ್ನು ಒತ್ತಟ್ಟಿಗೆ ಸೇರಿಸಿ ಅವುಗಳ ಸಾರವನ್ನು ಹೊರಪಡಿಸಿ ಒಂದು ವಿಶೇಷತರದ ಮಾರ್ಗವನ್ನು ಪ್ರಸಾರಗೊಳಿಸಲು ಬಸವೇಶ್ವರನ ಸಮ್ಮುಖದಲ್ಲಿ ಅನೇಕ ಶಿವಶರಣರನ್ನೊಡಗೊಂಡ ಅನುಭವ ಮಂಟಪದ ಸ್ಥಾಪನೆಯಾಯಿತು. ಈ ಮಂಟಪದಲ್ಲಿ ಯಾರು ಯಾರು ಇದ್ದರು ಎಂಬದನ್ನು ಕಂಡುಹಿಡಿಯುವದು ಈ ಲೇಖದ ಉದ್ದೇಶವಿದೆ. ಆದರೆ ಇದರಲ್ಲಿ ಬಸವೇಶ್ವರನ ವಚನಗಳಲ್ಲಿಯೇ ಯಾವ ಉಲ್ಲೇಖಗಳು ದೊರೆಯುತ್ತವೆಂಬುದನ್ನು ನಾವು ಮೊದಲು ವಿವೇಚಿಸುವದು ಮಹತ್ವದ್ದಿದೆ.

ಬಸವೇಶ್ವರನು ತನ್ನ ವಚನಗಳಲ್ಲಿ ಅನೇಕ ಶಿವಶರಣರ ಹೆಸರುಗಳನ್ನು ತೆಗೆದುಕೊಂಡಿದ್ದಾನೆ. ಅವರಲ್ಲಿ ಕೆಲವರು ಅವನಕಿಂತಲೂ ಮೊದಲಿನವರು ಮತ್ತು ಬೇರೆ ಕೆಲವರು ಅವನ ಸಮಕಾಲೀನರು ಇದ್ದುದಾಗಿ ಅವರವರ ಚರಿತ್ರೆಗಳನ್ನು ನಿರೀಕ್ಷಿಸಿದರೆ ಕಂಡುಬರುತ್ತದೆ.

ಬಸವೇಶ್ವರನು ತನ್ನ ವಚನಗಳಲ್ಲಿ ಒಟ್ಟು ೧೫೫ ಜನ ಶಿವಶರಣರ ಉಲ್ಲೇಖವನ್ನು ಮಾಡಿದ್ದಾನೆ. ಅವರಲ್ಲಿ ಕೆಲವರು ಆದ್ಯರೆಂತಲೂ ಪುರಾತ ಅಥವಾ ಪುರಾತನರೆಂತಲೂ ಬೇರೆ ಕೆಲವರು ಈಚಿನವರೆಂತಲೂ ಎರಡು ಭೇದಗಳನ್ನು ಅವನು ಕಲ್ಪಿಸಿದ ಹಾಗೆ ನಮಗೆ ತೋರುತ್ತದೆ. ಈ ಎರಡನೆಯ ವಿಭಾಗದಲ್ಲಿ ಬರುವವರೇ ಶಿವಾನುಭವಮಂಟಪದಲ್ಲಿ ರಬೇಕು. ಈ ಬಗ್ಗೆ ನಾವು ಅವನ ವಚನಗಳಲ್ಲಿಯ ಕೆಲವು ಅವತರಣಗಳನ್ನು ಇಲ್ಲಿ ಕೊಡುತ್ತೇವೆ.

ಬಸವೇಶ್ವರನ ವಚನಗ್ರಂಥ ಪುಟ ೨೬ ವಚನ ೫೮ ಇದರಲ್ಲಿ "ಆದ್ಯರ ವಚನ ಪರುಷಕಂಡಯ್ಯಾ" ಎಂದು ಬಂದಿದೆ. ಪುಟ ೪೪ ವಚನ ೪೧ ಇದರಲ್ಲಿ "ತವರಾಜದ ನೊರೆತೆರೆಯಂತೆ ಆದ್ಯರ ವಚನ ವಿದಲು" ಎಂದು ಇದೆ. ಪುಟ ೪೭ ವಚನ ೬೩ ಇದರಲ್ಲಿ "ಆದ್ಯರ ವಚನ ಪರುಷವೆಂದೆಂಬೆನು" ಎಂದು ಇದೆ. ಪುಟ ೯೨ ವಚನ ೨೫ ಇದರಲ್ಲಿ "ಆದ್ಯರಿಗಲ್ಲದೆ ವೇದ್ಯವಾಗದು" ಎಂದು ಇದೆ. ಪುಟ ೯೮ ವಚನ ೧೦೭ ಇದರಲ್ಲಿ "ಮುಂದಿನ ಆದ್ಯರ ಪಥಂಗಳು ಇನ್ನಾರಿಗೆಯೂ ತಿಳಿಯವಡದು ನೋಡಾ" ಎಂದು ಇದೆ. ಪುಟ ೧೦೨ ವಚನ ೧೩೩ ಇದರಲ್ಲಿ "ಆದಿಯಿಂದ ಬಂದ ವಚನವೆಂದು ಶರಣರ ಕೂಡ ಸರಸವಾಡಿದರೆ" ಎಂದು ಇದೆ. ಪುಟ ೧೩೦ ವಚನ ೧೦ ಇದರಲ್ಲಿ "ಆದ್ಯರ ವಚನ ಆದ್ಯರಿಗಾಯಿತ್ತು. ವೇದ್ಯರಿಗಲ್ಲದೆ ಸಾಧ್ಯವಾಗದು" ಎಂದು ಹೇಳಿದ್ದಾನೆ. ಈ ಎಲ್ಲ ಉಲ್ಲೇಖಗಳ ಮೇಲಿಂದ ಬಸವಣ್ಣನ ಕಾಲ

ಕ್ಕಿಂತಲೂ ಮೊದಲು ಸಹ ಶಿವಶರಣರಿದ್ದು ಅವರೂ ಕೂಡ ಉಕ್ತಿಗಳನ್ನು ರಚಿಸಿದ್ದು ಕಂಡುಬರುತ್ತದೆ. ಮತ್ತು ಅವರಿಗೆ ಭಕ್ತಿಭಾವವನ್ನು ತಾಳೆ ಮೇಲ್ಕಂಡ ವಚನಗಳನ್ನು ಬಸವೇಶ್ವರನು ರಚಿಸಿದ್ದಾರೆ. ಇವರು ಅವನಕಿಂತಲೂ ಹಿಂದಿನವರಾದ್ದರಿಂದ ಅವರು ಅವನ ಅನುಭವ ಮಂಟಪದಲ್ಲಿರುವದು ಶಕ್ಯವಲ್ಲವೆಂಬುದು ಸ್ಪಷ್ಟವು.

ನಾವು ಮೇಲೆ ಬಸವೇಶ್ವರನು ೧೫ ಜನ ಶಿವಶರಣರನ್ನು ಉಲ್ಲೇಖಿಸಿದ್ದಾನೆಂದು ಹೇಳಿರುವೆವಷ್ಟೆ. ಅವರಲ್ಲಿ ಮೂದರ ಚನ್ನಯ್ಯ, ದೇವರ ದಾಸಿಮಯ್ಯ, ಸಾಮವೇದಿ, ಶ್ವಪಚಯ್ಯ, ಸಿಂಧು ಬಲ್ಲಾಳ, ನಿಂಬಿಯಣ್ಣೆ, ತೆಲುಗು ಜೊಮ್ಮಯ್ಯ, ಕೆಂಭಾವಿ ಭೋಗಣ್ಣ, ಈ ಎಂಟುಜನರು ಬಸವೇಶ್ವರನಕಿಂತಲೂ ಮೊದಲಿನವರೆಂದು ಅವರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಅವರು ಬಸವೇಶ್ವರನಿಗೆ ಏನೂ ಸಂಬಂಧಪಡುವದಿಲ್ಲ. ಅವರು ಅವನ ಕಾಲದಲ್ಲಿ ಕಲ್ಯಾಣದಲ್ಲಿ ಇದ್ದರೆಂತಲೂ ಎಲ್ಲಿಯೂ ಉಲ್ಲೇಖಗಳಿರುವದಿಲ್ಲ. ಒಂದು ವೇಳೆ ಅವರು ಬಸವಣ್ಣನವರಕಿಂತ ಈಚಿನವರೆಂದೂ ಭಾವಿಸಿದ್ದಾದರೆ ಅವರನ್ನು ಬಸವೇಶ್ವರನು ಹೊಗಳಿರುವದರಿಂದ ಹೀಗೆ ತಿಳಿಯಲು ಶಕ್ಯವಿಲ್ಲ. ಆದ್ದರಿಂದ ಅವರು ಬಸವಣ್ಣನಕಿಂತಲೂ ಮೊದಲಿಗರಾಗಿದ್ದರೆಂದು ನಾವು ತಿಳಿಯಬೇಕಾಗುತ್ತದೆ. ಆದ್ದರಿಂದ ಅವರು ಶಿವಾನುಭವ ಮಂಟಪದಲ್ಲಿರುವರುವದು ಶಕ್ಯವಲ್ಲ.

ಬಸವೇಶ್ವರನ ವಚನಗಳಲ್ಲಿ ಪುರಾತನರು ಅಥವಾ ಪುರಾತರು ಎಂಬ ಶಬ್ದಗಳು ಸಹ ಅನೇಕ ಸಾರಿ ಬಂದಿರುತ್ತವೆ. ಆದರೆ ಈ ಶಬ್ದಗಳು ತಮಿಳು ದೇಶದಲ್ಲಿ ಆಗಿಹೋದ ೬೪ ಪುರಾತನರನ್ನು ನಿರ್ದೇಶಿಸುತ್ತವೆಂದು ಹೇಳಲಕ್ಕೆ ಬರುವದಿಲ್ಲ. ಈ ವಿಷಯದಲ್ಲಿ ವಾಚಕರು ಕೆಳಗೆ ಕಾಣಿಸಿರುವ ವಚನಗಳನ್ನು ಲಕ್ಷಿಸಬೇಕೆಂದು ನಾವು ಸೂಚಿಸುತ್ತೇವೆ. ಪದ್ಯ ೩೩ ವಚನಗಂಳ ಇದರಲ್ಲಿ ಬಂದ 'ಪುರಾತರಿಗೆ ಇಲ್ಲೆಂಬ' ಎಂದು ಹೇಳಲ್ಪಟ್ಟಿದೆ. ಪುಟ ೫೧ ವಚನ ೯೮ ಇದರಲ್ಲಿ ' ಹರನು ಮೂಲಿಗನಾಗಿ ಪುರಾತರೊಳಗಾಗಿ ಬಳಿ ಬಳಿಯಲು ಬಂದ ' ಎಂದು ಇದೆ. ಪುಟ ೫೫ ವಚನ ೧೦೧ ಇದರಲ್ಲಿ ' ಬಂದಿಹರಯ್ಯಾ ಪುರಾತರಿನ್ನ ಮನೆಗೆ ' ಎಂದು ಇದೆ. ಪುಟ ೧೦೫ ವಚನ ೧೬೨ ಇದರಲ್ಲಿ 'ಮುಂದಿನ ಪುರಾತನರು ಪುರುಷ ಬ್ರತಿಯರು ಒಲಿಸಿದ ಆಯತವ' ಎಂತಲೂ 'ಮುಂದಿನ ಪುರಾತರೆಲ್ಲರೂ ತನು ಮನ ಧನವನಿತ್ತು' ಎಂತಲೂ 'ಪುರಾತನರು ಬರಿಯ ಮಾತನಾಡಿ' ಎಂತಲೂ 'ಪುರಾತವಳ' ಎಂತಲೂ

ಉಲ್ಲೇಖಗಳು ಬಂದಿರುತ್ತವೆ. ಪುಟ ೧೦೮ ವಚನ ೭ ಇದರಲ್ಲಿ 'ಪುರಾತರಾಸೆ ಎಂದು ಹೇಳಿದೆ. ಈ ಶಬ್ದಗಳನ್ನು ನಾವು ನೋಡಿದಲ್ಲಿ ಕೆಲವು ವಚನಗಳಲ್ಲಿ ಪುರಾತನರೆಂದರೆ ತನ್ನಕಿಂತ ಹಿಂದಿನವರೆಂತಲೂ ಬೇರೆ ಕೆಲವು ವಚನಗಳಲ್ಲಿ ತನ್ನೊಡನೆ ಇದ್ದವರೆಂತಲೂ ಅಭಿಪ್ರಾಯದಿಂದ ಈ ಶಬ್ದವನ್ನು ಉಪಯೋಗಿಸಿದಂತೆ ಕಂಡು ಬರುತ್ತಿದೆ. ಆದರೆ 'ಆದ್ಯ' ಶಬ್ದವನ್ನು ತಗೆದುಕೊಳ್ಳಲಿ,ಅಥವಾ 'ಪುರಾತನ' ಈ ಶಬ್ದವನ್ನು ತಗೆದುಕೊಳ್ಳಲಿ, ಹೀಗೆ ಸಂಬೋಧಿಸಲ್ಪಟ್ಟವರಲ್ಲಿ ಕೆಲವರಾದರೂ ತನ್ನ ಹಿಂದಿನವರು ಎಂಬ ಭಾವವನ್ನು ಬಸವನು ತನ್ನ ವಚನಗಳಲ್ಲಿ ತೋರ್ಪಡಿಸಿರುತ್ತಾನೆಂಬದು ಮಾತ್ರ ಸ್ಪಷ್ಟವು. ಈ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟವರಲ್ಲಿ ಮೇಲೆ ಕಾಣಿಸಿದ ೮ ಜನರು ಹಿಂದಿನವರೆಂದು ಅವರವರ ಚರಿತ್ರೆಗಳಿಂದ ತಿಳಿದುಬರುತ್ತಿದೆ. ಆದರೆ ಕೆಳಗೆ ಕಾಣಿಸಿದ ಶಿವಶರಣರು ಮಾತ್ರ ಬಸವನ ಕಾಲದವರೆಂದು ಅವರ ಚರಿತ್ರೆಗಳಿಂದ ತೋರಿಬರುತ್ತದೆ. ಅವರು ಯಾರೆಂದರೆ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಮೋಳಿಗೆಯ ಮಾರಯ್ಯ, ಚಿಕ್ಕಯ್ಯ, ಕಿನ್ನರೀ ಬ್ರಹ್ಮಯ್ಯ, ಚನ್ನಬಸವ ಮತ್ತು ತಂಗಟೂರ ಮಾರಯ್ಯ ಈ ಪ್ರಕಾರ ೭ ಜನರನ್ನು ಕುರಿತು ಅವನು ಬಹು ಆದರ ಭಾವದಿಂದ ತನ್ನ ವಚನಗಳಲ್ಲಿ ಉಲ್ಲೇಖಿಸಿದ್ದಾನೆ. ಆದ್ದರಿಂದ ಇವರೆಲ್ಲರೂ ಶಿವಾನುಭವ ಮಂಟಪದಲ್ಲಿ ಇದ್ದುಕೊಂಡು ಬಸವೇಶ್ವರನ ಕಾರ್ಯಗಳಲ್ಲಿ ಸಹಾಯಕರಾಗಿ ಕಾರ್ಯ ಮಾಡಿರಬೇಕೆಂದು ನಾವು ಊಹಿಸುತ್ತೇವೆ.

ಬಸವೇಶ್ವರನು ತನ್ನ ಕಾಲದಲ್ಲಿದ್ದ ಅನೇಕ ಶಿವಶರಣರನ್ನು ತನ್ನ ವಚನಗಳಲ್ಲಿ ಉಲ್ಲೇಖಿಸಿರುವದಿಲ್ಲ. ಆದರೂ ಅವರು ಅವನ ಕಾಲದಲ್ಲಿದ್ದುಕೊಂಡು ಅವನಿಗೆ ಅತ್ಯಂತ ಸಹಾಯಕರವಾಗಿ ಕಾರ್ಯಮಾಡಿದವರಿದ್ದಾರೆ. ಅವರಾದರೂ ಶಿವಾನುಭವ ಮಂಟಪದಲ್ಲಿರಲಿಕ್ಕೆ ಬೇಕು. ಅವರಲ್ಲಿ ಯಾರು ವಚನಕಾರರಾಗಿ ಷಟ್‌ಸ್ಥಲ ಸಿದ್ಧಾಂತವನ್ನು ವಿಶದಪಡಿಸಲು ಯತ್ನಿಸಿರುತ್ತಾರೋ ಅವರು ನಿಶ್ಚಯವಾಗಿ ಶಿವಾನುಭವ ಮಂಟಪದಲ್ಲಿದ್ದವರೆಂದು ಊಹಿಸಿದರೆ ತಪ್ಪಾಗಲಾರದು. ಈ ದೃಷ್ಟಿಯನ್ನಿಟ್ಟುಕೊಂಡು ಈ ಶಿವಶರಣರ ಚರಿತ್ರೆಗಳನ್ನು ನಾವು ಪರೀಕ್ಷಿಸಬೇಕು. ಅಂದರೆ ಅವರಲ್ಲಿ ಯಾರು ಅನುಭವ ಮಂಟಪದಲ್ಲಿದ್ದವರೆಂಬುದನ್ನು ತಿಳಿಯಬಹುದಾಗಿದೆ.

ಗುಬ್ಬಿ ಮಲ್ಲಿಹಣನಿಗೆ ೧೯ ಜನ ವಚನಕಾರರ ಹೆಸರುಗಳು ಮಾತ್ರ ಗೊತ್ತಿದ್ದವೆಂದು ಅವನ ಗಣಭಾಷ್ಯರತ್ನಮಾಲೆ ಈ ಗ್ರಂಥದಿಂದ ಗೊತ್ತಾಗುತ್ತದೆ. ಮುಂದೆ ಕವಿಚರಿತೆಯ ಮೊದಲನೇ ಭಾಗದಲ್ಲಿ ೫೦-೬೦ ವಚನಕಾರರ ಹೆಸರುಗಳು ಹೊರಬಿದ್ದವು. ೧೯೫೩ ರಲ್ಲಿ ನಾವು ಪ್ರಸಿದ್ಧಮಾಡಿದ ವಚನಶಾಸ್ತ್ರಸಾರ ಗ್ರಂಥವಲ್ಲಿ ೨೧೩ ಜನರ ಹೆಸರುಗಳು ಪ್ರಕಟವಾದವು. ಮುಂದೆ ಅದೇ ಗ್ರಂಥದ ೧೯೫೧ ನೆಯ ಆವೃತ್ತಿಯಲ್ಲಿ ೨೩೭ ಜನ ವಚನಕಾರರ ಹೆಸರುಗಳು ಮುಂದೆ ಬಂದವು. ಇವರಲ್ಲಿ ಯಾರು ಬಸವಣ್ಣನ ಕಾಲದಲ್ಲಿದ್ದರೆಂಬದನ್ನು ಅವರ ಚರಿತ್ರೆಗಳಿಂದ ಗೊತ್ತಾಗುವಂತೆ ಇದೆ. ಇಂಥವರೆಲ್ಲರೂ ಶಿವಾನುಭವ ಮಂಟಪದಲ್ಲಿದ್ದರೆಂದು ಊಹಿಸಿದಲ್ಲಿ ತಪ್ಪಾಗಲಾರದು.

ಈ ದೃಷ್ಟಿಯಿಂದ ವಿಚಾರಮಾಡಿದಲ್ಲಿ ನಮಗೆ ದೊರೆದ ೨೩೭ ವಚನಕಾರರಲ್ಲಿ ಕೆಳಗೆ ಕಾಣಿಸಿದ ೩೩ ಜನರು ಶಿವಾನುಭವ ಮಂಟಪದಲ್ಲಿದ್ದಿರಬೇಕೆಂದು ನಮಗೆ ತೋರುತ್ತದೆ. ಅವರು ಯಾರೆಂದರೆ- ಶಿವಲೆಂಕ ಮಂಚಣ್ಣ, ಸಿದ್ಧರಾಮ, ಪ್ರಭುದೇವ, ನುಲಿಯ ಚಂದಯ್ಯ, ಗಟ್ಟಿವಾಳಯ್ಯ, ರಾಯಸದ ಮಂಚಣ್ಣ, ಮೋಳಿಗೆಯ ಮಾರಯ್ಯ, ಹಡಪದ ಲೇಚಣ್ಣ, ಹಡಪದಪ್ಪಣ್ಣ, ಆಯ್ದಕ್ಕಿ ಮಾರಯ್ಯ, ಅಮುಗಿದೇವ, ಪಡಿಹಾರಿ ಉತ್ತಣ್ಣ, ಜೆನ್ನಬಸವ, ಫಕ್ಕೆಯ ಬೊಮ್ಮಣ್ಣ, ಮರುಳು ಶಂಕರದೇವ, ಮಧುವರಸ, ಸೂಡ್ಡಳ ಬಾಚರಸ, ಇವರ ಹೆಸರುಗಳು ಕಂಡುಬರುತ್ತವೆ. ಇದಲ್ಲದೆ ಕೆಲವು ಸ್ತ್ರೀಯರೂ ಶಿವಾನುಭವಮಂಟಪದ ವಿಚಾರ ವಿನಿಮಯಗಳಲ್ಲಿ ಅಗ್ರಸ್ಥಾನವನ್ನು ಪಡೆದವರಾಗಿದ್ದರು. ಅವರು ಯಾರೆಂದರೆ, ಮಹಾದೇವಿಯಕ್ಕ, ಮೋಳಿಗೆಯ ಮಾರಯ್ಯನ ಹೆಂಡತಿಯಾದ ಮಹಾದೇವಿ, ಬಸವೇಶ್ವರನ ಅಕ್ಕನಾದ ಅಕ್ಕನಾಗಾಯಿ, ಅವನ ಹೆಂಡತಿಯಾದ ನೀಲಾಂಬಿಕೆ, ಹಡಪದಪ್ಪಣ್ಣನ ಹೆಂಡತಿಯಾದ ಲಿಂಗಮ್ಮ, ಕೊಂಡೇ ಮಂಚಣ್ಣಗಳ ಹೆಂಡತಿಯಾದ ಲಕ್ಷ್ಮಮ್ಮ, ಹೀಗೆ ಒಟ್ಟು ೨೩ ಜನರು ಶಿವಾನುಭವ ಮಂಟಪದಲ್ಲಿ ಸ್ಥಾನವಿದ್ದಿತು. ಇದಲ್ಲದೆ ಬಸವನು ತನ್ನ ವಚನಗಳಲ್ಲಿ ಹೇಳಿದ ೭ ಜನರು ಬೇರೆ. ಅಂತು ೩೦ ಜನರು ಶಿವಾನುಭವ ಮಂಟಪದಲ್ಲಿದ್ದುಕೊಂಡು ವಿಚಾರ ವಿನಿಮಯ ನಡಿಸುತ್ತಿದರೆಂದು ನಾವು ಊಹಿಸಬೇಕಾಗುತ್ತಿದೆ.

ಬಸವೇಶ್ವರನ ಕಾಲದಲ್ಲಿ ಮುಕ್ತಾಯಿ, ಸತ್ಯಕ್ಕ, ಅಜಗಣ್ಣ, ಹಾವಿನ ಹಾಳಕಲ್ಲಯ್ಯ, ರುದ್ರಮುನಿ, ಇವರೂ ಕೂಡ ಅಸ್ತಿತ್ವದಲ್ಲಿದ್ದರು. ಆದರೆ ಅವರು ಅನುಭವ ಮಂಟಪದಲ್ಲಿ ಸೇರ್ಪಡೆಯಾದದ್ದು ಅವರ ಚರಿತ್ರೆಗಳಿಂದ ತಿಳಿಯುವದಿಲ್ಲ. ಅಂಥವರು ಬಸವೇಶ್ವರನ ಜಳವಳಿಯ ಕಾಲದಲ್ಲಿ ಇದ್ದರೂ ಕೂಡ ಅವರು ಕಲ್ಯಾಣಕ್ಕೆ ಬಂದು ಅವನೊಡನೆ ಕಾರ್ಯಮಾಡಿದರೆಂದು ಹೇಳಲ್ಪಟ್ಟಿಲ್ಲ. ಆದರೆ ಅವರಾದರೂ ವಚನಕಾರರಿದ್ದಾರೆ. ಆದ್ದರಿಂದ ಬಸವೇಶ್ವರನಕ್ಕಿಂತಲೂ ಮೊದಲು ಹಬ್ಬಿದಂಥ ವೀರಶೈವ ಧಾರ್ಮಿಕ ಜಳವಳಿಯ ಅರಿವು ಅವರಿಗಿದ್ದುದರಿಂದ ಅವರು ತಾನಿದ್ದ ನಾಡುಗಳಲ್ಲಿಯೇ ಇದ್ದುಕೊಂಡು ಬಸವೇಶ್ವರನ ಸಂಬಂಧವಿಲ್ಲದೆ ಸ್ವತಂತ್ರರೀತಿಯಿಂದ ಧರ್ಮೋದ್ಧಾರ ಕಾರ್ಯಗಳನ್ನು ಮಾಡುತ್ತಿರಲಿಕ್ಕೆ ಬೇಕು. ಆದರೆ ಅವರು ಬಸವೇಶ್ವರನೊಡನೆ ಶಿವಾನುಭವ ಮಂಟಪದಲ್ಲಿರಲಿಲ್ಲ.

ಇದಲ್ಲದೆ ಕೇಶಿರಾಜ, ಬಾಹೂರ ಬೊಮ್ಮಣ್ಣ, ತೆಲಗು ಬೊಮ್ಮಯ್ಯ, ಇಳಿಹಾಳ ಬೊಮ್ಮಯ್ಯ ಇವರ ವಚನಗಳೂ ಉಪಲಬ್ಧವಿವೆ. ಆದರೆ ಇವರೆಲ್ಲರೂ ಬಿಜ್ಜಳನ ತಂದೆಯಾದ ಪೆರ್ಮಾಡಿ ರಾಯನ ಕಾಲದಲ್ಲಿದ್ದವರೆಂದು ಅವರವರ ಚರಿತ್ರೆಗಳು ಹೇಳುತ್ತವೆ. ಇವರು ತಮ್ಮಮುಪ್ಪಿನ ಕಾಲದಲ್ಲಿ ಬಸವೇಶ್ವರನಿಗೆ ಸನುಕಾಲೀನರಾಗಿರಬಹುದು. ಆದರೆ ಇವರು ಬಸವೇಶ್ವರನ ಸನ್ನಿಧಾನಕ್ಕೆ ಕಲ್ಯಾಣಕ್ಕೆ ಬಂದಂತೆ ಕಂಡುಬರುವದಿಲ್ಲ. ಆದ್ದರಿಂದ ಇವರೂ ಕೂಡ ಅನುಭವ ಮಂಟಪದಲ್ಲಿದ್ದರೆಂದು ತೋರುವದಿಲ್ಲ.

ಅದೇ ಮೇರೆಗೆ ಶಂಕರ ದಾಸಿಮಯ್ಯ, ದೇವರ ದಾಸಿಮಯ್ಯಗಳು ಹೊಟ್ಟಲ ಕೆರೆಯಲ್ಲಿ ಜಯಸಿಂಹ ರಾಜನಲ್ಲಿ ಇದ್ದದ್ದನ್ನು ಅವರ ಕಥೆಗಳು ಹೇಳುತ್ತವೆ. ಆದ್ದರಿಂದ ಇವರೂ ಕೂಡ ಅನುಭವ ಮಂಟಪದಲ್ಲಿದ್ದುಕೊಂಡು ಬಸವೇಶ್ವರ ಕಾಲಕ್ಕೆ ಉಂಟಾದ ಕ್ರಾಂತಿಯ ಕಾರ್ಯಗಳಲ್ಲಿ ಭಾಗವಹಿಸಿಲ್ಲೆಂದು ನಾವು ಹೇಳಬೇಕಾಗುತ್ತದೆ.

ಶೂನ್ಯಸಂಪಾದನೆಯ ಗ್ರಂಥದಲ್ಲಿಯೂ ಸಿದ್ಧರಾಮೇಶ್ವರನ ವಾದ ವಚನಗಳಲ್ಲಿಯೂ ಅನುಭವ ಮಂಟಪದಲ್ಲಿ ಚರ್ಚೆ ವಹಿಸಿದವರ ಅನೇಕರ ಹೆಸರುಗಳು ಬಂದಿರುತ್ತವೆ. ಆದರೆ ಈ ಗ್ರಂಥಗಳು ಬಸವೇಶ್ವರನ ತರು

ಪಾಯ ಕೆಲವು ಶತಮಾನಗಳ ಮೇಲೆ ಉಂಟಾಗಿದ್ದರಿಂದ ಅವುಗಳಲ್ಲಿ ಯಾವ ವಚನಕಾರರ ಹೆಸರುಗಳು ಹೇಳಲ್ಪಡುತ್ತವೆಯೋ ಅವರೆಲ್ಲರೂ ಅನುಭವ ಮಂಟಪದಲ್ಲಿದ್ದರೆಂದು ಹೇಳಲಿಕ್ಕೆ ಬರಲಾರದು. ಕೆಲವೊಂದು ವಿಷಯವನ್ನು ಪ್ರತಿಪಾದಿಸುವ ಉದ್ದೇಶದಿಂದ ಶೂನ್ಯಸಂಪಾದನೆಯ ಗ್ರಂಥಕಾರನು ವಿಷಯಸಂದರ್ಭಕ್ಕನುಸರಿಸಿ ತನಗೆ ಯಾವ ವಚನಗಳು ಬೇಕಾಗಿದ್ದವೋ ಅವುಗಳನ್ನು ಅವನು ಆರಿಸಿ ಅವುಗಳನ್ನು ರಚಿಸಿದವರೆಲ್ಲರೂ ಬಿಜ್ಜಳ ಅಥವಾ ಬಸವಣ್ಣನಿಗೆ ಸಂಬಂಧಿಸಿ ಅನುಭವಮಂಟಪದ ವಾಗ್ವಾದಗಳಲ್ಲಿ ಸೇರ್ಪಡೆ ಮಾಡುತ್ತಾನೆ. 'ಸಿದ್ಧರಾಮನ ವಾದವಚನ' ಇದರ ಗ್ರಂಥಕಾರನೂ ಇವನ ಅನುಕರಣವನ್ನೇ ಮಾಡಿದ್ದಾನೆ. ಉದಾಹರಣಾರ್ಥವಾಗಿ ಈ ಗ್ರಂಥಗಳ ಕೆಲವೆಡೆಗಳಲ್ಲಿ ದೇವರದಾಸಿಮಯ್ಯನು ಸಹ ಬಸವೇಶ್ವರನ ಶಿವಾನುಭವ ಮಂಟಪಕ್ಕೆ ಸಂಬಂಧಿಸಿದವನೆಂದು ಹೇಳಲ್ಪಟ್ಟಿದೆ. ಈ ಉಭಯತರು ಕೆಲವೊಂದು ವಿಷಯ ವಿವೇಚನೆಗೋಸ್ಕರ ಅವನ ವಚನಗಳನ್ನು ಅವರಿಗೆ ಬೇಕಾದ್ದರಿಂದ ಅವನ ಹೆಸರನ್ನು ಇಲ್ಲಿ ಅವರು ತೆಗೆದುಕೊಂಡಿದ್ದಾರೆಯೇ ಹೊರ್ತು ಈ ಉಲ್ಲೇಖಗಳ ಮೇಲಿಂದ ದೇವರದಾಸಿಮಯ್ಯನು ಬಸವಣ್ಣನ ಕಾಲದಲ್ಲಿದ್ದನೆಂದು ಅನುಮಾನ ಮಾಡಿದರೆ ತಪ್ಪಾಗುವದು. ಈ ಸಂಗತಿಯನ್ನು ನಾವು ಲಕ್ಷಿಸುವದು ಬಹಳ ಅವಶ್ಯವಿದೆ.

ಆದ್ದರಿಂದ ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿದ್ದವರು ನಾನು ಮೇಲೆ ವಿವರಿಸಿದ ೩೦ ಜನರು ಮಾತ್ರ ಇದ್ದು ಹಾಗೆ ನಮಗೆ ತೋರುತ್ತದೆ. ಇವರೆಲ್ಲರೂ ಪ್ರಸಿದ್ಧ ವಚನಕಾರರು. ಇವರೇ ವೀರಶೈವ ಮತದಲ್ಲಿ ಬಸವೇಶ್ವರನೊಡನೆ ಕ್ರಾಂತಿಯನ್ನುಂಟು ಮಾಡಿದವರು. ಈ ಸಮೂಹದಲ್ಲಿದ್ದವರಿಂದಲೇ ಷಟ್‌ಸ್ಥಲ ಸಿದ್ಧಾಂತವು ಅವನ ಕಾಲದಲ್ಲಿ ದೇಶದಲ್ಲೆಲ್ಲ ಪ್ರಚಾರಕ್ಕೆ ಬಂದಿರಬೇಕೆಂದು ತೋರುತ್ತದೆ.

ಶಿವಾನುಭವ ಮಂಟಪದಲ್ಲಿ ನೂರಾರು ಜನರು ಇದ್ದರೆಂದು ಅನೇಕರು ಭಾವಿಸಿದ್ದಾರೆ. ಬಸವೇಶ್ವರನು ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಾಧೀಶರನ್ನು ಪೋಷಿಸಿದನೆಂತಲೂ ಕಥಾಂತರಗಳಲ್ಲಿ ಹೇಳಲ್ಪಟ್ಟಿರುತ್ತದೆ. ಆದರೆ ಈ ವರ್ಣನೆಗಳೆಲ್ಲವೂ ಅತಿಶಯೋಕ್ತಿಗಳಾಗಿವೆ. ಅವು ನಂಬಲು ಅರ್ಹವಲ್ಲ. ಬಸವೇಶ್ವರನ ಮಹತ್ವವನ್ನು ಹೆಚ್ಚಿಸಲಿಕ್ಕೆ ಹಿಂದುಗಡೆ ಕಲ್ಪಿಸಿದ ಕಥೆಗಳು ಇವು ಇರುತ್ತವೆ. ಅವನ ಕಾಲದಲ್ಲಿ ಎರಡು ಲಕ್ಷ ಜಂಗಮರು ಕಲ್ಯಾಣ ಪಟ್ಟಣದಲ್ಲಿ ಇದ್ದರೆಂದು ಹೇಳುವದರಲ್ಲಿ ನಿಜತ್ವವಿದೆಂದು ನಮಗೆ ತೋರುವದಿಲ್ಲ. ೧೯೧೧ನೇ ಜನಗಣತೆಯಲ್ಲಿ ಮುಂಬಯಿ ಇಲಾಖೆಯ ೧೫ ಲಕ್ಷ ವೀರಶೈವರಲ್ಲಿ ಜಂಗಮರ ಸಂಖ್ಯೆಯು ಒಂದುವರೆ ಲಕ್ಷ ಮಾತ್ರವಿದ್ದದ್ದು ತಿಳಿದುಬರುತ್ತದೆ. ಇಡೀ ೩೦ ಲಕ್ಷ ವೀರಶೈವ ಸಮಾಜದಲ್ಲಿ ಜಂಗಮರ ಸಂಖ್ಯೆಯು ಇದರ ಇಮ್ಮಡಿ ಅಂದರೆ ೩ ಲಕ್ಷ ಮಾತ್ರ ಇರಬಹುದು. ಆದ್ದರಿಂದ ಒಂದು ಸಾವಿರ ವರ್ಷಗಳ ಹಿಂದೆ ಒಂದೇ ಒಂದು ಕಲ್ಯಾಣ ಪಟ್ಟಣದಲ್ಲಿ ೨ ಲಕ್ಷ ಜನ ಜಂಗಮರು ಇದ್ದದ್ದನ್ನು ಒಪ್ಪಿಕೊಳ್ಳುವದು ಪುಸ್ತರವಿರುತ್ತದೆ. ಆದ್ದರಿಂದ ಈ ಸಂಖ್ಯೆಯು ಕಾಲ್ಪನಿಕವಿರುತ್ತದೆಂದು ನಮಗೆ ತೋರುತ್ತದೆ.

ನಾವು ಮೇಲೆ ಅನುಭವಮಂಟಪದಲ್ಲಿ ಇದ್ದವರ ಸಂಖ್ಯೆಯು ೩೦ ಎಂದು ಹೇಳಿದ್ದು ಆಶ್ಚರಮಟ್ಟಿಗೆ ನಿಶ್ಚಯಾತ್ಮಕವೆಂದು ಯಾರೂ ತಿಳಿಯಬಾರದು. ಸಂಖ್ಯೆಯಲ್ಲಿ ಅದಕ್ಕೂ ಸ್ವಲ್ಪ ಹೆಚ್ಚುಕಡಿಮೆ ಶಿವಶರಣರು ಇದರಲ್ಲಿ ಇದ್ದಿರಬಹುದು.

ಈಗ ನಮಗೆ ದೊರೆದ ನೂರಾರು ಜನ ಶಿವಶರಣರಲ್ಲಿ ಕೆಲವರು ಅಂದರೆ ೮—೧೦ ಜನರು ಮಾತ್ರ ಬಸವೇಶ್ವರನಕಿಂತ ಮೊದಲು ಇದ್ದು ಅವರಲ್ಲಿ ಬಹಳ ಜನರು ಬಸವೇಶ್ವರನ ತರುವಾಯ ೧೨ನೇ ಶತಮಾನದಲ್ಲಷ್ಟೇ ಅಲ್ಲ, ೧೩ನೇ ಶತಮಾನದಲ್ಲಿಯೂ ಆಗಿಹೋಗಿರುವರೆಂದು ನಮಗೆ ತೋರುತ್ತದೆ. ಈ ವಿಷಯವನ್ನು ಕುರಿತು ಹೆಚ್ಚಿಗೆ ಈ ಲೇಖದಲ್ಲಿ ಪ್ರಸ್ತಾಪಿಸುವದು ಅಪ್ರಸ್ತುತವಾದ್ದರಿಂದ ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿದ್ದವರ ಬಗ್ಗೆ ಮಾತ್ರ ನಾವು ಇಲ್ಲಿ ಕೆಲವು ಸಂಗತಿಗಳನ್ನು ಇಲ್ಲಿ ಉಲ್ಲೇಖಿಸುತ್ತೇವೆ.

ಈ ಶಿವಶರಣರ ಉಕ್ತಿಗಳನ್ನು ನೋಡಿದಲ್ಲಿ ಅವರಲ್ಲಿ ಕೆಲವರು ಅತ್ಯಂತ ವಿದ್ವಾಂಸರಾಗಿ ಬಹು ತೀಕ್ಷ್ಣ ತರಗತಿಯವರಾಗಿದ್ದರೆಂದು ತಿಳಿದು ಬರುತ್ತದೆ. ಶಿವಲೆಂಕ ಮಂಚಣ್ಣ, ಅಲ್ಲಮಪ್ರಭು, ಮೋಳಿಗೆಯ ಮಾರಯ್ಯ ಮತ್ತು ಗಬ್ಬಿಯಾರಯ್ಯ ಈ ನಾಲ್ವರು ಉಚ್ಚ ಅನುಭಾವಿಗಳಿದ್ದ ಹಾಗೆ ಕಂಡುಬರುತ್ತದೆ. ಶಿವಲೆಂಕ ಮಂಚಣ್ಣನು ಮೊದಲು ವಾರಣಾಸಿಯಲ್ಲಿ ಇದ್ದು ಅಲ್ಲಿಂದ ಕಲ್ಯಾಣಕ್ಕೆ ಬಂದು ವೀರಶೈವರಲ್ಲಿ

ಟೀಪು:- (೧) ಈಚಿನ ಜನಗಣತಿಯಲ್ಲಿ ಈ ಸಂಖ್ಯೆಯು ದೊರೆಯುವದಿಲ್ಲ.

ಶ್ರೇಷ್ಠ ಸ್ಥಾನವನ್ನು ಹೊಂದಿದ ಪಂಡಿತತ್ರಯರಲ್ಲಿ ಒಬ್ಬನೆಂದು ಗಣಿಸಲ್ಪಟ್ಟಿದ್ದಾನೆ. ಅಲ್ಲಮ ಪ್ರಭುವಿನ ವಚನಗಳು ಅತ್ಯಂತ ಉದಾತ್ತ ಭಾವ ಪುಳ್ಳವು ಇದ್ದು ಅವನ ಈಗ ಪ್ರಸಿದ್ಧವಾದ ವಚನ ಗ್ರಂಥವು ಕುಮಾರ ಬಂಕನಾಥನಿಂದ ಸಂಗ್ರಹಿಸಲ್ಪಟ್ಟಿದೆ. ಅವು ಇನ್ನೂ ಬಹಳ ಅಪೂರ್ಣವಾಗಿವೆ. ಯಾಕಂದರೆ ನಮ್ಮ ಹತ್ತರ ಪ್ರಭುವೇನರ ಇನ್ನೂ ನೂರಾರು ವಚನಗಳಿದ್ದು ಅವು ನಮ್ಮಿಂದ ಇನ್ನೂ ಪ್ರಕಾಶಿಸಲ್ಪಟ್ಟಿಲ್ಲ. ಮೋಳಿಗೆಯ ಮಾರಯ್ಯನ ವಚನಗಳು ಸುಮಾರು ೬೦ ನಮಗೆ ಉಪಲಬ್ಧವಿದ್ದು ಅವುಗಳಲ್ಲಿ ಕೆಲವುಗಳನ್ನು ಮಾತ್ರ ಶಿವಾನುಭವದ ಹಿಂದಿನ ಸಂಚಿಕೆಗಳಲ್ಲಿ ಅಚ್ಚು ಹಾಕಿದ್ದೇವೆ. ಆದರೆ ಬೇರೆ ಹಸ್ತಲಿಖಿತ ಗ್ರಂಥಗಳ ಸಹಾಯವು ನಮಗೆ ದೊರೆಯದ್ದರಿಂದ ಶುದ್ಧ ಪ್ರತಿಯನ್ನು ಸಿದ್ಧಪಡಿಸಲಿಕ್ಕೆ ನಮಗೆ ಬಹಳ ದುಸ್ತರವಾದ್ದರಿಂದ ಅವುಗಳನ್ನು ಪ್ರಸಿದ್ಧಿಸುವ ಕಾರ್ಯವನ್ನು ನಾವು ಅಲ್ಲಿಗೇ ನಿಲ್ಲಿಸಿದ್ದೇವೆ. ಗಟ್ಟಿವಾಳಯ್ಯನ ವಚನಗಳು ಸೂತ್ರ ರೂಪವಾಗಿದ್ದು ಅವು ಅವನ ವಿದ್ವತ್ತೆಯನ್ನು ಚನ್ನಾಗಿ ಪ್ರಚುರಪಡಿಸುತ್ತವೆ. ಈ ನಾಲ್ಕು ಜನ ವಚನಕಾರರು ಶಿವಾನುಭವ ಮಂಟಪದಲ್ಲಿ ತಾತ್ವಿಕ ವಿಷಯಗಳನ್ನು ವಿವೇಚಿಸುತ್ತಿರಬಹುದೆಂದು ಅವರ ವಚನಗಳ ಮೂಲಕ ನಾವು ಊಹಿಸುತ್ತೇವೆ. ಚನ್ನಬಸವ ಮತ್ತು ಸಿದ್ಧರಾಮ ಇವರು ಅನುಕ್ರಮವಾಗಿ ವೀರಶೈವ ಕ್ರಿಯೆ ಮತ್ತು ಶಿವಯೋಗ ಇವುಗಳಲ್ಲಿ ಅತ್ಯಂತ ಬಲ್ಲಿದರಾಗಿದ್ದರು. ಚನ್ನಬಸವೇಶ್ವರನ ಅಸಂಖ್ಯ ವಚನಗಳು ಈಗಿನ ಅವನ ವಚನ ಗ್ರಂಥವಲ್ಲಿ ಇನ್ನೂ ಸಂಗ್ರಹಿಸಲ್ಪಟ್ಟಿಲ್ಲ. ಆದರೆ ಅಚ್ಚಾದ ಸಿದ್ಧರಾಮನ ವಚನಗ್ರಂಥವು ಹೆಚ್ಚಿಗೆ ಪೂರ್ಣವಿರುತ್ತದೆ. ಈ ಯಾವತ್ತರೂ ಉಚ್ಚ ತರಗತಿಯ ವಚನಕಾರರು. ಬಸವೇಶ್ವರ, ಮಡಿವಾಳ ಮಾಚಿದೇವ, ಇವರಿಬ್ಬರು ಮನುಷ್ಯನು ಜಗತ್ತಿನಲ್ಲಿ ಹೇಗೆ ಆಚರಿಸಬೇಕೆಂಬುದನ್ನು ಕುರಿತು ಅನುಕ್ರಮವಾಗಿ ಭಕ್ತ ಮತ್ತು ಮಾಹೇಶ್ವರ ಸ್ಥಲಗಳನ್ನು ತಮ್ಮ ವಚನಗಳಲ್ಲಿ ವಿವರಿಸುತ್ತ ಉದಾತ್ತ ವಿಚಾರಗಳನ್ನು ಹೊರಗೆಡವಿದ್ದಾರೆ. ಮಹಾದೇವಿಯಕ್ಕನು ಸ್ತ್ರೀಯಳಿಗೆ ಅನುರೂಪವಾದ ವಿಚಾರಗಳನ್ನು ಹೊರಗೆಡಹುತ್ತ ಅತ್ಯಂತ ಉತ್ಕೃಷ್ಟ ಭಾವನೆಗಳುಳ್ಳವಳಾಗಿ ತನ್ನ ತತ್ವಗಳನ್ನು ವಿವೇಚಿಸುತ್ತಾಳೆ. ನೀಲಾಂಬಿಕೆಯು ಆತ್ಮ ಸಾಕ್ಷಾತ್ಕಾರದ ವಿಚಾರಗಳಲ್ಲಿ ಬಹು ಬಲ್ಲಿದಳು ಇದ್ದಾಳೆ. ಇದೇ ಮೇರೆಗೆ ಕಿನ್ನರಿ ಬ್ರಹ್ಮಯ್ಯ, ಅಮುಗಿದೇವ, ಕಕ್ಕಯ್ಯ, ಮರುಳು ಶಂಕರದೇವ, ಮೋಳಿಗೆಯ ಮಾರಯ್ಯನ ಹೆಂಡತಿಯಾದ ಮಹಾದೇವಿ, ಮಧುವರಸ, ಸೊಡ್ಡಳ ಬಾಚರಸ ಇವರೆಲ್ಲರ ವಚನಗಳು ಹೆಚ್ಚಿನ ತರಗತಿಯವಿ

ರುತ್ತವೆ. ಆದರೆ ಇವರ ವಚನಗಳಲ್ಲಿ ನಮಗೆ ದೊರೆತವುಗಳು ಬಹಳ ಸ್ವಲ್ಪ. ಈ ಯಾವತ್ತರೂ ಕೂಡಿಕೊಂಡು ಕಲ್ಯಾಣದಲ್ಲಿ ಶಿವಾನುಭವ ಮಾರ್ಗ ಅಥವಾ ಷಟ್‌ಸ್ಥಲ ಮಾರ್ಗವನ್ನು ಕುರಿತು ವಿಧವಿಧದ ಆಶ್ಚರ್ಯಕರವಾದ ವಿಚಾರಗಳನ್ನು ಬೋಧಿಸಿದ್ದಾರೆ. ಇವರೆಲ್ಲರು ಬಸವೇಶ್ವರನಿಗೆ ಸಹಾಯಕರಾಗಿ ಕಾರ್ಯ ಮಾಡಿದವರು. ಈ ಪ್ರಕಾರ ಹೆಚ್ಚು ಕಡಿಮೆ ೩೦ ಜನ ಶಿವಶರಣರು ಬಸವೇಶ್ವರನ ಶಿವಾನುಭವ ಮಂಟಪದಲ್ಲಿದ್ದರೆಂದು ನಮ್ಮ ಊಹೆ ಇದೆ. ಇನ್ನೂ ಅನೇಕರು ಅದರಲ್ಲಿ ಇದ್ದಿರಬಹುದು. ಆದರೆ ಅವರ ವಚನಗಳಿಲ್ಲದ್ದರಿಂದ ಅವರು ಅದರಲ್ಲಿ ಪ್ರೇಕ್ಷಕರಾಗಿ ಬರುತ್ತಿರಬಹುದು. ಅಂದರೆ ಅವರು ಅದರಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಗಳನ್ನು ವಮಂದುವರಿಸಿದವರಲ್ಲೆಂದು ನಾವು ಹೇಳಬೇಕಾಗುತ್ತದೆ.

ಮೇಲ್ಕಂಡ ವಚನಕಾರರ ಉಕ್ತಿಗಳನ್ನು ನಾವು ತೀವ್ರವಾಗಿ ಸಂಗ್ರಹಿಸಿ ಪ್ರಸಿದ್ಧಿಸುವದು ಬಹು ಅವಶ್ಯವು. ಅವುಗಳನ್ನು ಸಂಶೋಧಿಸಿದಲ್ಲಿ ನಮಗೆ ಇನ್ನೂ ಅವು ಹೆಚ್ಚಾಗಿ ದೊರೆಯಬಹುದು. ಆದರೆ ಇನ್ನ ಮುಂದೆ ಕೆಲವು ಕಾಲ ಗತಿಸಿದರೆ, ಅವು ಸಹ ನಮ್ಮ ಕೈಗೆ ಹತ್ತುವ ಸಂಭವವಿಲ್ಲ. ಉದಾಹರಣಾರ್ಥವಾಗಿ ಮಹಾದೇವಿಯಕ್ಕನ ವಚನಗಳ ಒಂದು ಗ್ರಂಥವು ಬಾಗಲಕೋಟೆಯಲ್ಲಿ ಇದ್ದು ಅದನ್ನು ತಾವು ಕಣ್ಣಾರೆ ನೋಡಿದ್ದನ್ನು ಅಲ್ಲಿಯ ಕೈ. ವಾ. ಕೆಣಗಿ ಬಸವಲಿಂಗಪ್ಪನವರೆಂಬ ಸುಪ್ರಸಿದ್ಧ ಶಿವಾನುಭವಿಗಳು ನಮಗೆ ಹೇಳಿದ್ದು ನಮ್ಮ ಸ್ಮರಣೆಯಲ್ಲಿದೆ. ಈಗ ಅದನ್ನು ಅಲ್ಲಿ ನಾವು ಸಂಶೋಧಿಸಿದರೂ ಕೂಡ ನಮಗೆ ಆ ಗ್ರಂಥವು ದೊರೆಯದಂತಾಗಿದೆ. ನಮ್ಮ ವೀರಶೈವ ಸಮಾಜದವರು ತಮ್ಮ ಉನ್ನತವಾದ ವಾಙ್ಮಯಕ್ಕೋಸ್ಕರ ಈಗಲೂ ಕೂಡ ಎಷ್ಟು ಉದಾಸೀನರಾಗಿರುತಾರೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಇದು ಅತ್ಯಂತ ಖೇದಕರನಾದದ್ದು. ಇದೇ ಸ್ಥಿತಿಯು ಬೇರೆ ವಚನಗಳ ಬಗ್ಗೆಯೂ ಇರುತ್ತದೆ. ಷಟ್‌ಸ್ಥಲ ಸಿದ್ಧಾಂತವು ಹಿಂದುಸ್ತಾನದಲ್ಲಿರುವ ಅನೇಕ ಮಾರ್ಗಗಳಲ್ಲಿ ಒಂದು ವಿಶಿಷ್ಟತರದ್ದಿರುತ್ತದೆ. ಅವನ್ನು ಹೊರಗೆಡವಬೇಕೆಂದರೆ ನಮಗೆ ಬೇಕಾದ ಸಹಾಯ ಸೌಕರ್ಯಗಳೂ, ಪ್ರೋತ್ಸಾಹಗಳೂ ವೀರಶೈವ ಸಮಾಜದಲ್ಲಿ ಏನೂ ದೊರೆಯುವದಿಲ್ಲ. ಈ ಸ್ಥಿತಿಯು ಇನ್ನಾದರೂ ನೂರಾಗಲೆಂದು ನಾವು ಬಯಸುತ್ತೇವೆ.

ಡಾ॥ ಚಿಲುಕೂರು ನಾರಾಯಣರಾಯರ ವಿಧಾನಗಳು.

(ರಾ. ಸಾ. ಫ. ಗು. ಹಳಕಟ್ಟಿ)

ವಚನಗಳ ಕಾಲ.

ಡಾ. ಚಿಲಕೂರ ನಾರಾಯಣರಾವ ಇವರು ಅನಂತಪುರ ಕಾಲೇಜಿನ ವಿದ್ಯಾರ್ಥಿಗಳಿಮಿಗೆ ಮಾಡಿದ ಭಾಷಣವನ್ನು ಶಿವಾನುಭವ ಸಂಪುಟ ೧೪ ಸಂಚಿಕೆ ೨, ೮, ೯ ಇವುಗಳಲ್ಲಿ ನಾವು ಕೊಟ್ಟಿದ್ದೇವೆ. ಅವುಗಳಲ್ಲಿ ಅವರು ಮಾಡಿದ ವಿಧಾನಗಳಲ್ಲಿ ವೀರಶೈವ ವಾಙ್ಮಯವು ಬಸವನ ಕಾಲದಲ್ಲಿರಲಿಲ್ಲ, ಅದು ಪಾಲಕುರಿಕೆ ಸೋಮರಾಧ್ಯರ ತರುವಾಯ ಪ್ರಾರಂಭವಾಯಿತು, ವಚನ ಗ್ರಂಥಗಳನ್ನು ವಚನಕಾರರೇ ರಚಿಸಿರದೆ ಅವುಗಳನ್ನು ಯಾರೋ ಕೆಲವರು ಹಿಂದಿನಿಂದ ಅವರ ಹೆಸರಿನಿಂದ ರಚಿಸಿದ್ದಾರೆ, ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶವಿದೆ ಎಂಬದನ್ನು ಈ ಲೇಖದಲ್ಲಿ ನಾವು ವಿವೇಚಿಸಲೆಣಿಸಿದ್ದೇವೆ.

ಮೇಲ್ಕಂಡ ಉಪನ್ಯಾಸಕರು ಈ ವಚನಗಳು ನಿಜವಾಗಿ ಯಾವಾಗ್ಗೆ ಮತ್ತು ಯಾರಿಂದ ರಚಿಸಲ್ಪಟ್ಟವಿರುತ್ತವೆಂಬದನ್ನು ಮಾತ್ರ ವಿಶದಪಡಿಸಿಲ್ಲ. ಅವು ಈಚೀಚಿಗೆ ಅಂದರೆ ಹತ್ತಿಪ್ಪತ್ತು ವರ್ಷಗಳೊಳಗೆಯೇ ಸಹ ಹುಟ್ಟಿರಬಹುದೆಂದು ಸಹ ಅವರ ಬರವಣಿಗೆಯಲ್ಲಿ ಅರ್ಥವಾಗುವಂತಿದೆ. ಅದ್ದರಿಂದ ಅವರ ಈ ವಿಧಾನಗಳನ್ನು ಪರೀಕ್ಷಿಸುವದು ಅತ್ಯವಶ್ಯವಾಗಿರುತ್ತದೆ.

ಗುಬ್ಬಿಯ ಮಲ್ಲಣಾರ್ಯನು ಕನ್ನಡ ವಾಙ್ಮಯದಲ್ಲಿ ಬಹು ಪ್ರಬದ್ಧ ಗ್ರಂಥಕಾರನಾಗಿದ್ದಾನೆ. ಇವನು ಗಣಭಾಷ್ಯ ರತ್ನಮಾಲೆ, ವಾತುಲ ತಂತ್ರಟೀಕೆ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಇವನು ರಚಿಸಿದ ಗಣಭಾಷ್ಯ ರತ್ನಮಾಲೆ ಇದರಲ್ಲಿ ಶಿವಶರಣರ ಉಕ್ತಿಗಳು ಹೇರಳವಾಗಿ ಉದಹರಿಸಲ್ಪಟ್ಟಿವೆ. ಅವನು ಅದರಲ್ಲಿ ಉದಹರಿಸಿದ ವಚನಕಾರರ ಸಂಖ್ಯೆಯು ೧೯ ಇರುತ್ತದೆ. ಇದರಿಂದ ಇವನಿಗೆ ಇಷ್ಟು ಜನ ವಚನಕಾರರ

ಹೆಸರುಗಳು ಗೊತ್ತಿದ್ದು ಅವರ ಉಕ್ತಿಗಳು ಅವನಿಗೆ ಪರಿಚಿತವಾಗಿದ್ದವೆಂದು ಹೇಳಲು ಯಾವ ಪ್ರತ್ಯವಾಯವು ಇರುವದಿಲ್ಲ. ಈ ಗುಬ್ಬಿ ಮಲ್ಲಣನ ಕಾಲವು ೧೪೭೫ ಇರುತ್ತದೆಂದು ಕವಿ ಚರಿತೆಯಲ್ಲಿ ಹೇಳಲ್ಪಟ್ಟಿರುತ್ತದೆ. ಆದ್ದರಿಂದ ವಚನಗ್ರಂಥಗಳು ಇದಕ್ಕೂ ಪೂರ್ವದಲ್ಲಿ ಇದ್ದವೆಂಬುದು ಸ್ಪಷ್ಟವಾಗುತ್ತಿದೆ.

ತೋಂಟದ ಸಿದ್ಧೇಶ್ವರನೂ ಇವನ ಶಿಷ್ಯರಾದ ಬೋಳಬಸವ, ಘನಲಿಂಗ ಈ ಮೊದಲಾದವರೂ ವಚನಗಳನ್ನು ಬರೆದಿದ್ದಾರೆ. ಇವರ ಕಾಲವು ೧೪೭೦. ಇದಲ್ಲದೆ ಇವರಕಿಂತಲೂ ಪೂರ್ವದಲ್ಲಿ ವಿಜಯನಗರದ ದೊರೆಯಾದ ದೇವರಾಯನ ಕಾಲದಲ್ಲಿ ಪುರಾತನ ವಚನಕಾರರ ಉಕ್ತಿಗಳನ್ನೊಳಕೊಂಡ ಅನೇಕ ವಚನಗ್ರಂಥಗಳು ಉಪಲಬ್ಧವಾಗಿವೆ. ಕುಮಾರ ಬಂಕನಾಥನು ಸಂಗ್ರಹಿಸಿದ ಪ್ರಭುದೇವರ ವಚನಗಳ ಮೇಲಿನ ಟೀಕೆ, ಜಕ್ಕಣಾಚಾರ್ಯನ ನೂರೊಂದು ಸ್ಥಲ, ಚಾಮರಸನ ಪ್ರಭುಲಿಂಗಲೀಲೆ ಕಲ್ಲಮಠದ ಪ್ರಭುದೇವನ ಲಿಂಗಲೀಲಾವಿಲಾಸ ಈ ಗ್ರಂಥಗಳಲ್ಲಿ ವಚನಕಾರರ ಉಕ್ತಿಗಳು ಹೇರಳವಾಗಿ ಉದಹರಿಸಲ್ಪಟ್ಟಿವೆ. ಇವರೆಲ್ಲರೂ ೧೪೯೯ರಿಂದ ೧೫೪೬ರ ವರೆಗೆ ಆಳಿದ ವಿಜಯನಗರದ ರಾಜನಾದ ದೇವರಾಯನ ಆಳಿಕೆಯಲ್ಲಿ ಇದ್ದರು. ಇದೇ ಕಾಲಕ್ಕೆ ಪ್ರಸಿದ್ಧಿಗೆ ಬಂದ ಲಕ್ಕಣ್ಣ ದಂಡೇಶನು ಪುರಾತನರ ವಚನಗಳನ್ನು ಕುರಿತು ತನ್ನ ಶಿವತತ್ವ ಚಿಂತಾಮಣಿಯಲ್ಲಿ ವಿವರಿಸಿದ್ದಾನೆ. ಈ ಸಂಗತಿಯು ಅವನ ಕೆಳಗಿನ ಈ ಶ್ಲೋಕದಲ್ಲಿ ವ್ಯಕ್ತವಾಗುತ್ತದೆ.

ಗುರುವಚನದವ್ಯತಮಂ ಶ್ರುತಿಪುರಾಣಾಗಮದ
ಪರಮಾರ್ಥದವ್ಯತಮಂ **ವರಪುರಾತನ ವಚನ**
ಪರಿಯಾಯದವ್ಯತಮಂ ಶಿವತಾಂತ್ರಿಕರು ಪೇಳ್ದ ಸಿದ್ಧಾಂತವೆನಿಪ
ವ್ಯತಮಂ ॥

ಪರಮಾನುಭಾವದನುಸಮ ಗೋಷ್ಠಿಯವ್ಯತದೊಳು
ಬೆರಸಿ ಮಥನಿಸಿ ಪಡೆದ ಲಕ್ಕಣ್ಣ ದಂಡೇಶ
ಧರಿಸಿರ್ದ ತತ್ವ ಚಿಂತಾಮಣಿಯನರಿವವರ ಚರಣಾಂಬುಜಕ್ಕೆ
ಶರಣು ॥

ಇಲ್ಲಿ ಲಕ್ಕಣ್ಣ ದಂಡೇಶನು ವಚನಗಳನ್ನು ಕುರಿತು ಭಕ್ತಿಭಾವದಿಂದ ಹೇಳಿದ್ದಾನೆ. ಈ ಸಂಗತಿಗಳ ಮೇಲಿಂದ ವಚನಗಳ ಆಸ್ತಿ

ತ್ವವು ೧೫ನೇ ಶತಮಾನದ ಆದಿ ಭಾಗದಕಿಂತಲೂ ಪೂರ್ವದಲ್ಲಿ ಇದ್ದದ್ದು ಸ್ಪಷ್ಟವಾಗುತ್ತದೆ.

ಮಹಾಕವಿಯಾದ ಹರಿಹರನ ಕಾಲದಲ್ಲಿ ವಚನ ಗ್ರಂಥಗಳು ಇದ್ದದ್ದು ಸ್ಪಷ್ಟವಿದೆ. ಅವನು ತನ್ನ ಬಸವರಾಜದೇವರಗಳೆಯಲ್ಲಿ ಬಸವೇಶ್ವರನ ವಚನಗಳಲ್ಲಿಯ ಕೆಲವು ವಚನಗಳನ್ನು ಉದಹರಿಸಿದ್ದಾನೆ. ಇದು ಆತನ ಗ್ರಂಥದ ೧೨ನೇ ಸ್ಥಲದಲ್ಲಿ ಕಾಣಬಹುದು. ಈ ವಚನಗಳು ಯಾವವೆಂದರೆ—

(೧) ಬೇಡಿ ಬೇಡಿದ ಶರಣಂಗೆ ನೀಡದಿರ್ದಡೆ ತಲೆದಂಡ ಕೂಡಲಸಂಗ ಅವಧಾರು ಎಂಬ ಎಂಬ ಗೀತಮುಂ ಪಾಡೆ.

(೨) ಕಟ್ಟದೆನೊರೆಯ ಬಿಟ್ಟಿ ಜನ್ನಿಗೆಯಂ ಓಡದಿರೋಡದಿರು ಶರಣರ ಮನೆಯ ಬಿರುದಿನಂತಕ್ಕೆ ಹಮ್ಮೆಟ್ಟದಿರೆಲೆ ದೇವ, ಎಲೆ ತಂದೆ ಎಲೆಲೆ ಹಂದೆ ಕೂಡಲಸಂಗ ಸ್ವಯವಾಗು ಸ್ವಯವಾಗು.

(೩) ಎಲೆ ಬಸವ ಬೇಡಿದುದ ಶರಣರ್ಗಿಲ್ಲೆನ್ನಬಹುದೀವೆನೆಂಬ ಗೀತದೊಳಗಣ ಬಿಂಕದ ಬಿರುದಂ ಕೇಳ್ದು

(೪) ಎಲೆಲೆ ಕಾಡಿ ಕಾಡಲಮ್ಮದ ತಂದೆ ನೀಂ ಕೇಳು ಬೇಡಿ ಬೇಡಲಮ್ಮದ ಹಂದೆ, ನೀಂ ಕೇಳು ಕೂಡಿ ಕೂಡಲಮ್ಮದ ಜಾತಿಯೆ ನೀಂ ಕೇಳು ಎಂದು ಗೀತಮುಂ ಪಾಡಿ

ಮೇಲಿನ ಯಾವತ್ತು ಉಕ್ತಿಗಳು ಬಸವಣ್ಣನವರ 'ಮಹೇಶ್ವರ ಸ್ಥಲದಲ್ಲಿ ಇರುತ್ತವೆ. ಇವುಗಳನ್ನು 'ಗೀತೆ' ಎಂದು ಹರಿಹರ ಕವಿಯು ವರ್ಣಿಸಿದ್ದಾನೆ. ಹರಿಹರ ಕವಿಯ ಕಾಲವು ೧೨ ನೇ ಶತಮಾನದ ಮಧ್ಯ ಭಾಗದಲ್ಲಿ ಇರುವದಾಗಿ ಈಗ ಸಿದ್ಧವಾಗಿರುತ್ತದೆ. ಅಂದರೆ ಆತನು ಪಾಲ್ಕುರಿಕೆ ಸೋಮನಾಥನಕಿಂತಲೂ ಮೊದಲಿಗನು. ಯಾಕಂದರೆ ಸೋಮನಾಥ ಕವಿಯು ಈ ಶತಮಾನದ ಅಂತ್ಯ ಭಾಗದಲ್ಲಿ ಇದ್ದನೆಂದು ತಿಳಿದುಬರುತ್ತದೆ. ಅವನು ೧೫ನೇ ಶತಮಾನದಲ್ಲಿ ಇದ್ದನೆಂದು ಕವಿ ಚರಿತೆಕಾರರು ಹೇಳುತ್ತಾರೆ. ಇದರ ಮೇಲಿಂದ ಸೋಮನಾಥ ಕವಿಯಕಿಂತಲೂ ಪೂರ್ವದಲ್ಲಿ ವಚನಗಳು ಇದ್ದುದು ಸಿದ್ಧವಾಗುತ್ತದೆ.

ವಚನ ಗ್ರಂಥಗಳಲ್ಲಿ ಕಂಡು ಬರುವ ವಿಶಾಲ ತತ್ವಗಳು ಕೆಲವು ಶಿಲಾಶಾಸನಗಳಲ್ಲಿಯೂ ಇರುವದು ತೋರಿ ಬಂದಿರುತ್ತದೆ. ನಾವು ಶಿವಾ

ನುಭವ ಸಂಪುಟ ೧೩ ಸಂಚಿಕೆ ೧೦ ಪುಟ ೩೫೭ ಇದರಲ್ಲಿ "ಶಿಲಾ ಲೇಖಗಳಲ್ಲಿ ವೀರಶೈವ ಧರ್ಮದ ವಿವರಣೆ" ಎಂಬ ಶಿರೋಲೇಖದ ಕೆಳಗೆ ಒಂದು ಲೇಖವನ್ನು ಬರೆದಿದ್ದೇವೆ. ಅದರಲ್ಲಿ ನಾವು ಧಾರವಾಡ ಜಿಲ್ಲೆಯಲ್ಲಿರುವ ಚೌಡದಾನಪುರ ಎಂಬ ಗ್ರಾಮದಲ್ಲಿರುವ ಕೆಲವು ಶಿಲಾ ಶಾಸನಗಳಲ್ಲಿ ವೀರಶೈವ ಮತತತ್ವಗಳ ನಿರೂಪಣೆ ಇರುವದನ್ನು ಸವಿಸ್ತಾರವಾಗಿ ನಿರೂಪಿಸಿದ್ದೇವೆ. ಅವುಗಳಲ್ಲಿ ಅನೇಕ ಅಭಿಪ್ರಾಯಗಳು ವಚನಗಳಿಂದ ಉದಹರಿಸಿದವುಗಳೆಂಬುದನ್ನು ನಾವು ಅಲ್ಲಿ ವಿವರಿಸಿದ್ದೇವೆ. ಅಲ್ಲದೆ ಆ ಲೇಖದಲ್ಲಿ ನಾವು ಈ ಬಗ್ಗೆ ಅನೇಕ ಅವತರಣಗಳನ್ನು ಕೊಟ್ಟಿರುತ್ತೇವೆ. ಈ ಶಿಲಾ ಶಾಸನಗಳು ೧೨೫೬ನೇ ಇಸ್ವಿಯವು ಇರುತ್ತವೆ. ಆದ್ದರಿಂದ ಈ ಕಾಲದಲ್ಲಿ ಶಿವಶರಣರ ವಚನಗ್ರಂಥಗಳು ಪ್ರಚುರವಾಗಿದ್ದವೆಂಬುದು ತಿಳಿದುಬರುತ್ತದೆ.

ಅಮುಗಿದೇವನು ಶಿವಾನುಭವಮಂಟಪದಲ್ಲಿದ್ದ ಬಸವೇಶ್ವರನ ಕಾಲದ ಒಬ್ಬ ಶಿವಶರಣನು. ಅವನ ವಚನಗಳನ್ನು ನಾವು ಶಿವಾನುಭವ ಸಂಪುಟ ೯ ಸಂಚಿಕೆ ೬ ಪುಟ ೪೧೭ ಇದರಲ್ಲಿ ಪ್ರಸಿದ್ಧಿಸಿದ್ದೇವೆ. ಇದರಿಂದ ಈತನು ಪಾಲ್ಕುರಿಕೆ ಸೋಮನಾಥನಕಿಂತಲೂ ಮೊದಲಿನವನೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ವಚನಗಳು ಈ ಸೋಮನಾಥನಕಿಂತಲೂ ಮೊದಲು ಇದ್ದವೆಂಬುದು ಗೊತ್ತಾಗುತ್ತದೆ. ಈ ಅಮುಗಿದೇವನು ಕಾಲ್ಪನಿಕ ಪುರುಷನಾಗಿದ್ದಿಲ್ಲವೆಂಬುದು ಸೊಲ್ಲಾಪೂರ ತಾಲೂಕಿನಲ್ಲಿರುವ ಪುಳುಜ ಎಂಬ ಗ್ರಾಮದಲ್ಲಿರುವ ಆತನ ಶಿಲಾಶಾಸನದಿಂದ ಗೊತ್ತಾಗುತ್ತದೆ. ಈ ಶಿಲಾ ಶಾಸನದ ವಿವರಣೆಯು ಮೇಲ್ಕಂಡ ಶಿವಾನುಭವ ಸಂಪುಟದಲ್ಲಿಯೇ ಬಂದಿದೆ. ಈ ಶಾಸನವು ದೇವಗಿರಿ ಯಾದವ ರಾಜನಾದ ಸಿಂಘಣನ ಕಾಲಿನದು ಇರುತ್ತದೆ. ಸಿಂಘಣನ ಸೇನಾಪತಿಯೊಬ್ಬನು ಅಮುಗಿದೇವನ ಭಕ್ತನಾಗಿದ್ದಾನೆಂದು ಇದರಲ್ಲಿ ಹೇಳಲ್ಪಟ್ಟಿದೆ. ಈ ಎಲ್ಲ ಸಂಗತಿಗಳ ಮೇಲಿಂದ ವಚನಗಳು ಪುರಾತನವೆಂಬದು ಗೊತ್ತಾಗುತ್ತದೆ. ಅವು ಶರಣರ ತರುವಾಯ ಯಾರೋ ಒಬ್ಬರು ಅವರ ಹೆಸರಿನಿಂದ ಕಲ್ಪಿಸಿದವೆಂದು ಹೇಳಲಿಕ್ಕೆ ಬರಲಾರದು.

ಪುರಾತನ ಶಿವಶರಣರಲ್ಲಿ ಏಕಾಂತದ ರಾಮಯ್ಯನೂ ಬಹಳ ಮಹತ್ವಿಕನಾಗಿರುತ್ತಾನೆ. ಈತನ ಶಿಲಾಶಾಸನವೊಂದು ಅಬ್ಬಲೂರು ಗ್ರಾಮದಲ್ಲಿದ್ದು ಅದರಲ್ಲಿ ಈ ಶಿವಶರಣನು ಬಿಜ್ಜಳನ ಕಾಲದಲ್ಲಿ ಮಾಡಿದ ಮಹ

ತ್ವಗಳು ವರ್ಣಿಸಲ್ಪಟ್ಟಿವೆ. ಇವನು ಬಿಜ್ಜಳನಿಂದ ಮಾತ್ರವಲ್ಲದೆ ಈ ಕಾಲದಲ್ಲಿ ಪ್ರಖ್ಯಾತಿಹೊಂದಿದ ಸೇನಾಪತಿಯಾದ ಬೊಮ್ಮ ಚಾಲುಕ್ಯ ರಾಜನಾದ ಸೋಮೇಶ್ವರ ಅವನ ತರುವಾಯ ಈ ಭಾಗದಲ್ಲಿ ಮಹಾಮಂಡಲೇಶ್ವರರಾಗಿ ಆಳಿದ ಕಾಮದೇವ ಮತ್ತು ಕದಂಬ ವಂಶದ ರಾಜನಾದ ಮಲ್ಲದೇವ ಇವರಿಂದಲೂ ಸನ್ಮಾನಿತನಾಗಿದ್ದುದು ಕಂಡುಬರುತ್ತದೆ. ಇದರಲ್ಲಿ ಬಸವೇಶ್ವರನ ಕಾಲದಲ್ಲಿ ಆಗಿ ಹೋದ ಶಿವಶರಣರ ಒಂದು ಉಲ್ಲೇಖವಿದೆ. ಈ ಶಿಲಾಶಾಸನದ ಟ್ಟರಿಂದ ಒಗನೇ ಓಳಗಳಲ್ಲಿ ಹೇಳಿದ್ದೇನಂದರೆ "ತ್ರಿಭುವನ ಮಲ್ಲಸೋಮೇಶ್ವರದೇವಂ ಸಕಳ ಚಮೂನಾಥ ಶಿರೋಮಣಿಯುಂ ಚಾಲುಕ್ಯ ರಾಜ್ಯ ಪ್ರತಿಷ್ಠಾಪಕನಪ್ಪ ಕುಮಾರ ಬೊಮ್ಮಯ್ಯನುಂ ತಾನುಂ ಸಲೆಯಾಹಳ್ಳಿಯ ಕೊಪ್ಪದೊಳು ಸುಖಸಂಕಥಾ ವಿನೋದನಿರ್ದೊಂದು ದಿವಸಂ ಧರ್ಮಗೋಷ್ಠಿಯೊಳಿರ್ದ್ದ **ಪುರಾತನ ನೂತನರಪ್ಪ ಶಿವಭಕ್ತರ** ಗುಣಸ್ತವನಂ ಮಾಡುತ್ತಮಿರ್ದ ಏಕಾಂತರಾಮಯ್ಯಂಗಳ್ ಅಬ್ಬಲೂರಲಿದ್ದಲ್ಲಿ ಜೈನರೆಲ್ಲಂ ನೆರೆದು ಬಂದು ಮಹಾ ವಿವಾದಂ ಮಾಡಿ" (ಶಿವಾನುಭವ ಸಂಪುಟ ೩ ಸಂಚಿಕೆ ೧೨ ಪುಟ ೨೯ ನೋಡಿರಿ) ಎಂದು ಇದ್ದು ಇದರಲ್ಲಿ ಏಕಾಂತದ ರಾಮಯ್ಯನು ಶಿವಾನುಭವ ಮಾಡುತ್ತಿರುವಲ್ಲಿ ತನ್ನ ಕಾಲಕ್ಕಿನ ಮತ್ತು ತನ್ನಕಿಂತ ಮೊದಲು ಆಗಿ ಹೋದ ಶಿವಶರಣರ ವಿಷಯಗಳನ್ನು ಹೇಳುತ್ತಿದ್ದುದು ಇಲ್ಲಿ ವಿವರಿಸಲ್ಪಟ್ಟಿರುತ್ತದೆ. ಚಾಲುಕ್ಯರ ಸೋಮೇಶ್ವರನು ೧೧೮೯ರಿಂದ ೧೧೯೯ರ ವರೆಗೆ ಅಂದರೆ ಪಾಲಕುರಕೆ ಸೋಮರಾಧ್ಯನಕಿಂತಲೂ ಪೂರ್ವದಲ್ಲಿ ಇದ್ದುದರಿಂದ ಇವನಕಿಂತಲೂ ಮೊದಲು ಶಿವಶರಣರು ಅಸ್ತಿತ್ವದಲ್ಲಿದ್ದುದೂ, ಅವರು ಅನೇಕ ಧರ್ಮಗೋಷ್ಠಿಗಳನ್ನು ಮಾಡುತ್ತಿದ್ದುದೂ, ಇದರಿಂದ ಅವರಿಗೆ ಇತರ ಸಮಾಜದವರೊಡನೆ ಸೆಣಿಸುವ ಪ್ರಸಂಗಗಳು ಉಂಟಾದುದೂ ಈ ಶಿಲಾಶಾಸನದಿಂದ ತಿಳಿದುಬರುತ್ತವೆ. ಇಲ್ಲಿ "ಧರ್ಮಗೋಷ್ಠಿ"ಯೆಂದರೆ ಶಿವಾನುಭವಶಾಸ್ತ್ರ ಅಥವಾ ವಚನಶಾಸ್ತ್ರ ಇದೇ ಇರಬೇಕೆಂದು ನಮ್ಮ ಊಹೆ.

ಇದೇ ಮೇರೆಗೆ ಬಸವೇಶ್ವರನ ಜೋಡಿಗನಾದ ಸಿದ್ಧರಾಮನ ಉಲ್ಲೇಖಗಳೂ ಕೆಲವು ಶಿಲಾಶಾಸನಗಳಲ್ಲಿ ದೊರಕುತ್ತವೆ. ಅವುಗಳಲ್ಲಿ ಸಂಗೂರು ಶಿಲಾಶಾಸನವು ಮಹತ್ವದ್ದಿದ್ದು ಅದು ಶಿವಾನುಭವ ಸಂಪುಟ ೧೩ ಸಂಚಿಕೆ ೨ ಪುಟ ೬೦ ಇದರಲ್ಲಿ ಪ್ರಸಿದ್ಧಿಸಲ್ಪಟ್ಟಿದೆ. ಅದರಲ್ಲಿ "ಗುರು ಸಿದ್ಧರಾಮನಾಥದೇವರ ವಚನ" ಎಂದು ಅವನ ಒಂದು ವಚನವು

ಉದರಲ್ಲಿ ಕೊಡಲ್ಪಟ್ಟಿವೆ. ಸಿದ್ಧರಾಮೇಶ್ವರನು ಒಬ್ಬ ಪ್ರಸಿದ್ಧ ವಚನಕಾರನಾಗಿದ್ದು ಅವನ ವಚನಗಳು ಅಚ್ಚಾಗಿರುತ್ತವೆ. ಇವನು ಬಸವೇಶ್ವರನ ಸಮಕಾಲೀನನಾಗಿದ್ದರಿಂದ ಅವನು ಪಾಲ್ಕುರಿಕೆ ಸೋಮಾರಾಧ್ಯನಕಿಂತಲೂ ಮೊದಲಿನವನು.

ಈ ಶಿಲಾಶಾಸನದಿಂದ ಅವನು ವಚನಕಾರನಾಗಿದ್ದನೆಂದು ತಿಳಿದು ಬರುತ್ತದೆ. ಇಷ್ಟೇ ಅಲ್ಲ, ಶಿವಶರಣರು ತಮ್ಮ ಧಾರ್ಮಿಕ ತತ್ವಗಳನ್ನು ತಮ್ಮ ಉಕ್ತಿಗಳಿಂದಲೇ ಹೇಳುತ್ತಿದ್ದು ಅವರ ಹೆಸರಿನಿಂದ ಯಾರೋ ಒಬ್ಬರು ಹಿಂದಿನಿಂದ ಅವುಗಳನ್ನು ರಚಿಸಿದರೆಂದು ಹೇಳಲಿಕ್ಕೆ ಬರಲಾರದು.

ಕೇಶಿರಾಜನು ವೀರಶೈವ ಗ್ರಂಥಕಾರರಲ್ಲಿ ಪ್ರಸಿದ್ಧನಾಗಿದ್ದಾನೆ. ಈತನನ್ನು ಅನೇಕ ವೀರಶೈವ ಕವಿಗಳು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ. ಇಂಥವರಲ್ಲಿ ಹರಿಹರ ರಾಘವಾಂಕರೂ ಇದ್ದಾರೆ. ಹರಿಹರ ಕವಿಯು ಕೇಶಿರಾಜನ ಬಗ್ಗೆ ಒಂದು ರಗಳೆಯನ್ನು ಸಹ ರಚಿಸಿದ್ದಾನೆ. ಇದು ಅಚ್ಚಾಗಿದೆ. ಆದ್ದರಿಂದ ಕೇಶಿರಾಜನು ಸೋಮಾರಾಧ್ಯನಕಿಂತಲೂ ಪೂರ್ವಿಕನೆಂಬದು ಸ್ಪಷ್ಟವಾಗುತ್ತಿದೆ. ಕೇಶಿರಾಜನು ಬಸವಣ್ಣನಕಿಂತಲೂ ಪೂರ್ವದವನೆನ್ನಲಿಕ್ಕೆ ಕೆಲವು ಕಾರಣಗಳೂ ಇವೆ. ಅವನು ಪೆರ್ಮಾಡಿರಾಯನಲ್ಲಿ ಮಂತ್ರಿಯಾಗಿದ್ದನೆಂದು ತಿಳಿದು ಬರುತ್ತದೆ. ಚಾಲುಕ್ಯ ವಿಕ್ರಮಾರ್ಜುನನಿಗೆ ಪೆರ್ಮಾಡಿರಾಯನೆಂಬ ಹೆಸರು ಇದೆ. ಬಿಜ್ಜಳನ ತಂದೆಯ ಹೆಸರಾದರೂ ಪೆರ್ಮಾಡಿ ರಾಯ. ಶಿವಾನುಭವ ಸಂಪುಟ ೧೩ ಸಂಚಿಕೆ ೩ ಪುಟ ೧೨೬ ರಲ್ಲಿ ೧೧೩೮ ರಿಂದ ೧೧೫೬ ರ ವರೆಗೆ ತರ್ದವಾಡಿ ನಾಡನ್ನಾಳಿದ ಬಿಜ್ಜಳನ ತಂದೆಯಾದ ಪೇರ್ಮಾಡಿರಾಯನಲ್ಲಿ ಕೇಶಿರಾಜನು ಇರಬಹುದೆಂದು ನಾವು ಊಹಿಸಿ ಒಂದು ಲೇಖನವನ್ನು ಬರೆದಿದ್ದೇವೆ. ಇವನು ಯಾರಲ್ಲಿ ಮಂತ್ರಿಯಾಗಿದ್ದನೆಂಬುದು ಅನಿಶ್ಚಯಾತ್ಮಕವಿದ್ದರೂ ಬಸವನಕಿಂತಲೂ ಪೂರ್ವದಲ್ಲಿ ವೀರಶೈವ ವಾಙ್ಮಯವು ಇತ್ತೆಂಬುದು ಮಾತ್ರ ಇದರಿಂದ ಸಿದ್ಧವಾಗುತ್ತಿದೆ.

ಪುರಾತನ ಕಾಲದ ವಚನಕಾರರ ವಚನಗಳಲ್ಲಿ 'ಆದ್ಯರ ವಚನ' ಎಂಬ ಹೆಸರು ಮೇಲಿಂದ ಮೇಲೆ ಬರುತ್ತದೆ. 'ಆದ್ಯ' ಎಂಬ ಶಬ್ದವು ಬಸವ, ಚನ್ನಬಸವ ಇವರೇ ಮೊದಲಾದ ಅನೇಕರ ವಚನಗಳಲ್ಲಿ ಅನೇಕ ಸಾರೆ ಬಂದಿರುತ್ತದೆ. ಇದರ ಮೇಲಿಂದ ನಾವು ಬಸವಣ್ಣನ

ಕಿಂತಲೂ ಮೊದಲು ಸಹ ವೀರಶೈವ ವಾಙ್ಮಯವಿತ್ತೆಂದು ತಿಳಿಯಬೇಕಾಗುತ್ತದೆ. ನಾವು ಶಿವಾನುಭವದ ಹೋದ ಸಂಚಿಕೆಯಲ್ಲಿ ಶಂಕರದಾಸಿಮಯ್ಯನ ಒಂದು ವಚನವನ್ನು ಉದಹರಿಸಿದ್ದೇವೆ. ಈ ಶಂಕರದಾಸಿಮಯ್ಯನು ದೇವರದಾಸಿಮಯ್ಯನ ಸಮಕಾಲೀನನು. ಅಂದರೆ ಬಸವೇಶ್ವರನಕಿಂತಲೂ ಮೊದಲು ೧೫೦ ವರ್ಷಗಳ ಹಿಂದೆ ಪ್ರಸಿದ್ಧಿಗೆ ಬಂದವನು. ಈ ಉಭಯತರೂ ವಚನಕಾರರು. ಆದ್ದರಿಂದ ವಚನ ವಾಙ್ಮಯವು ಪಾಲ್ಕುರಕೆ ಸೋಮನಾಥನ ತರುವಾಯ ಹುಟ್ಟಿದುದಲ್ಲವೆಂಬುದು ಸ್ಪಷ್ಟವಾಗುತ್ತದೆ.

ಪ್ರತಿಯೊಂದು ವಚನಕ್ಕೆ ಒಂದು ವಿಶಿಷ್ಟತೆ ಇದೆ. ಸ್ಫೂರ್ತಿ ಇದೆ. ಈ ಗುಣಗಳು ಕೃತ್ರಿಮ ಗ್ರಂಥಗಳಲ್ಲಿ ತಲೆದೋರಲಾರವು. ವಚನಗಳ ಈ ಸ್ಥಿತಿಯನ್ನು ಕುರಿತು ಕರ್ನಾಟಕದ ಅನೇಕ ವಿದ್ವಾಂಸರು ಅಸಂಖ್ಯ ಲೇಖಗಳನ್ನು ಬರೆದು ಇವುಗಳಿಗೆ ಒಂದು ಸ್ವತಂತ್ರ ವಾಙ್ಮಯದ ಸ್ಥಾನವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಇದನ್ನು ಡಾ. ಚಿಲ್ಕೂರ ನಾರಾಯಣರಾವ ಇವರು ತಮ್ಮ ಉಪನ್ಯಾಸದಲ್ಲಿ ಅಲ್ಲಗಳೆಯಲಿಕ್ಕೆ ಪ್ರಯತ್ನಿಸಿದ್ದಾರೆ. ಇದರಲ್ಲಿ ತಥ್ಯಾಂಶವಿಲ್ಲೆಂಬುದು ಹಿಂದಿನ ಕಾರಣಗಳಿಂದ ವಾಚಕರಿಗೆ ಮನವರಿಕೆಯಾಗದೆ ಇರಲಾರದೆಂದು ನಾವು ಭಾವಿಸುತ್ತೇವೆ.

ಸಂಗೀತವಚನಗಳು.

(ಶ್ರೀ. ಪಿ. ವ್ಹಿ. ಪಾಟೀಲ ಸಂಗೀತ ಶಿಕ್ಷಕ ವಿಜಾಪುರ.)

೭೨

ರಾಗಃ— ಬಸಂತ ತಾಲಃ— ಏಕತಾಲ

(ಪಶುಪತೇ ಗಿರಿಜಾಪತೇ...ಎಂಬಂತೆ)

ಮನೆ ನೋಡಾ ಬಡವರು। ಮನ ನೋಡಾ ಸಂಪನ್ನರು ॥ಪ॥
ಧನ ನೋಡಾ ಬಡವರು। ಘನ ಮನ ಸಂಪನ್ನರು ॥ಅ. ಪ॥
ಕೂಡಲಸಂಗನ ಶರಣರು। ಕರುಳಿಲ್ಲದ ಕಲಿಗಳು।
ಆರಿಗೂ ಉಪಮಿಸಬಾರದು. ॥೧॥

(ಬಸವಣ್ಣ)

೭೩

(ಶೋಭನ ಪದದಂತೆ)

ಚಿಲಿ ಪಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ, ನೀವು ಕಾಣಿರೇ।
ಕೊಳನ ತಡಿಯಲಾಡುವ ಹಂಸೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ।
ಸರವೆತ್ತಿ ಪಾಡುವ ಕೋಕಿಲೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ ॥ಪ॥

ಗಿರಿಗಂಹರಗಳೊಳಾಡುವ ನವಿಲುಗಳಿರಾ, ನೀವು ಕಾಣಿರೇ, ನೀವು ಕಾಣಿರೇ।
ಚನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂಬುದ ಬಲ್ಲಿರೆ, ನೀವು ಹೇಳಿರೇ ॥೧॥

(ಅಕ್ಕಮಹಾದೇವಿ)

೭೪

ರಾಗಃ— ಭೈರವಿ ತಾಲಃ— ತ್ರಿತಾಲ

(ಜಗಿ ಆಭಾಸಹಾದಾವಿಲಾ ...ಎಂಬಂತೆ)

ಕರಿಯಂಜುವದು ಅಂಕುಶಕಯ್ಯಾ।
ಗಿರಿಯಂಜುವದು ಕುಲಿಶಕ್ಕಯ್ಯಾ ॥ಪ॥

ಪಮಂಥ ಅಂಜುವದು ಜ್ಯೋತಿಗಯ್ಯಾ।
ಪಂಚ ಮಹಾಪಾತಕವಂಜುವದು।
ಕೂಡಲ ಸಂಗನ ನಾಮಕ್ಕಯ್ಯಾ ॥೧॥

(ಬಸವಣ್ಣ)

ವರದಾನಿ ಗುಡ್ಡವ್ಮೆ!

ವಾ. ಷ. ವರದಾನಿ ಗುಡ್ಡವ್ಮೆ, ಭಕ್ತವತ್ಸಲೆ, ನಿನ್ನ
ಚರಣದರುಶನದಾಸೆಯಿಂದೆ ನಾ ಹಗಲಿರುಳು
"ಬರಬೇಕು ಬರಬೇಕು" ಎಂದು ಹಂಬಲಿಸುತ್ತೆ ಕಡೆಗಿಂದು ಬಂದು
ನಿನ್ನ ।

ಪರಮಪಾವನ ಮೂರ್ತಿಯನ್ನು ಕಣ್ದಣಿ ನೋಡಿ
ಹರುಷದಿಂದೊಡಗೂಡಿ ಭಕ್ತಿಗಿಂಬನು ಮಾಡಿ,
ಹೊರಳುತ್ತಲಿರುತಿಹೆನು ನಿನ್ನಯಡಿಹುಡಿಯಲ್ಲಿ
ಬೆರಗಾಗಿ ತವ ಲೀಲೆಗೆ ॥ ೧ ॥

ಇಲ್ಲಿ ಸುಳಿಯುವ ಗಾಳಿ ಕಲ್ಪತರುವಿನ ಗಾಳಿ,
ಇಲ್ಲಿರುವ ನುಣುಪಾದ ಹಾಸುಗಲ್ಲುಗಳೆಲ್ಲ
ಜಲ್ಲವಾಗಿಹ ಹಂಸದುಪ್ಪಳದ ಹಾಸಿಗೆಗಳಲ್ಲಿರುವ ಗುಡ್ಡದೊಳಗೆ ।
ಕಲ್ಲು ಕೊರಕಲಿನಲ್ಲಿ ಕಂಡು ಬರುತಿಹ ನೀರು
ಅಲ್ಲಿ ಸಗ್ಗದೊಳಿರುವ ಸೊದೆಯನಣಕಿಸುತಿಹವು !
ಇಲ್ಲಿರುವ ಅನ್ನವದು ರುಚಿಯಾದ ಪ್ರಸಾದವದು ! ತಾಯೆ, ಅದ
ರಿಂದೆ ಜನರು ॥ ೨ ॥

ಚಿತ್ತವಿಲ್ಲಿಯೆ ಸುಳಿವುದತ್ತ ನಾ ಪೋದರೂ !
ಸುತ್ತಲೂ ನಿನ್ನಯ ಸುಮೂರ್ತಿಗಳೇ ಕಾಣುವವು !
ಎತ್ತಲೂ ನಿನ್ನ ಸ್ತುತಿಗಾನಗಳೆ ಕೇಳುವವು ! ನಿನ್ನ ಧವಲಿತ
ಕೀರ್ತಿಯು ।
ಹತ್ತು ದಿಕ್ಕುಗಳಲ್ಲಿ ಹರಡಿ ಹೊರಚಲ್ಲುವದು !
ಎತ್ತ ನಾನಿರುತಿರುವೆ ! ನೀನೆತ್ತ ನೆಲಸಿರುವೆ !
ಮತ್ತೆ ಮತ್ತರಸುವೆನು, ತಿಳಿಯೆ ನಿನ್ನಿರವನ್ನು
ಕರುಣೆಯೊಂದಿರಲಿ ಜನನೀ ॥ ೩ ॥

ಮುಂತಾದ ಭೇದಂಗಳೆಲ್ಲವು ಬೀಜದಲ್ಲಿ ಅಡಗಿಪ್ಪಂತೆ. ಚಿತ್ತುವಿನ ಸುಚಿತ್ತದಲ್ಲಿ ಅಡಗಿಪ್ಪ ಏಕ ವಸ್ತು ಹಲವು ತೆರದಲ್ಲಿ ಹೊಲಬಿಗನಾಗಿ ಕಂಡಿಹೆನೆಂದಡೆ, ಒಂದೇ ಹೊಲಬಿನ ವಿಶ್ವಾಸದಿಂದಲ್ಲದೆ ಆಗದು. ಅದು ಹಲವು ಕುಂಭದಲ್ಲಿ ತೋರುವ ಅರುಣನ ಕಿರಣದಂತೆ, ವಿಶ್ವಾಸ ಮುಖದಿಂದ ಕಂಡಿಹೆನೆಂದಡೆ ವಿಶ್ವಾಸದಿಂದಲ್ಲದೆ ಆಗದು. ಆ ವಿಶ್ವಾಸ ಉಭಯ ಪಳದಲ್ಲಿ ಷಟ್‌ಸ್ಥಲ ಭರಿತ, ಸರ್ವ ಸ್ಥಲ ಸಂಪೂರ್ಣ. ಸಂಗನಬಸವಣ್ಣಾ ಪ್ರಿಯ ಬ್ರಹ್ಮೇಶ್ವರ ಲಿಂಗವನರಿತವರಿಗಲ್ಲದೆ ಸಾಧ್ಯವಲ್ಲ ನೋಡಾ !

೯. ಆವ ಸ್ಥಲವ ಸಾಧಿಸಿ ಬಂದು ನಿಂತಡೂ ಭಾವ ಶುದ್ಧಾತ್ಮನಾಗಿ ವೇಧಿಸುವದೊಂದೇ ವಸ್ತು. ಅದು ಭಕ್ತಿಯ ಬೇರು. ಅದು ಶ್ರದ್ಧೆಯ ಶಾಖೆ. ವಿಶ್ವಾಸದ ಫಲ. ನಿಜತತ್ವದ ರಸ. ಸ್ವಯದ ಸ್ವಾದು. ಅದು ಸಂಗನಬಸವಣ್ಣನಿಂದ ಬಂದ ಬೆಳೆ. ಬ್ರಹ್ಮೇಶ್ವರ ಲಿಂಗದಲ್ಲಿ ಐಕ್ಯವಾಯಿತ್ತು.

೧೦. ವಿಶ್ವಾಸದಿಂದ ಭಕ್ತ, ವಿಶ್ವಾಸದಿಂದ ಮಹೇಶ್ವರ, ವಿಶ್ವಾಸದಿಂದ ಪ್ರಸಾದಿ, ವಿಶ್ವಾಸದಿಂದ ಪ್ರಾಣಲಿಂಗಿ, ವಿಶ್ವಾಸದಿಂದ ಐಕ್ಯ. ಇಂತೀ ವಿಶ್ವಾಸವಿಲ್ಲದವಂಗೆ ವಿರಕ್ತಿಯೆಂಬ ಗೊತ್ತಿನ ಠಾವು ತೋರದು. ಪ್ರಭುವಿನ ಕೈಯಲ್ಲಿ, ನಿಜಗುಣನ ನೆನಹಿನಲ್ಲಿ, ಅಜಗಣ್ಣನ ಐಕ್ಯದಲ್ಲಿ, ಕುರುಹಿಲ್ಲದೆ ವಸ್ತುವ ಬೆರೆದ ಠಾವಾವುದಯ್ಯಾ ! ಎತ್ತ ಸುತ್ತಿ ಬಂದಡೂ ಅಸ್ತಮಯಕ್ಕೆ ಒಂದು ಗೊತ್ತಿನಲಿ ನಿಲ್ಲಬೇಕು. ಇಂತೀ ವಿಶ್ವಾಸದಿಂ ವಸ್ತುವ ಕೂಡುವದಕ್ಕೆ ನಿಶ್ಚಯವಿಲ್ಲ. ಈ ಗುಣ ಸಂಗನಬಸವಣ್ಣ ಕೊಟ್ಟ ತೊಡಿಗೆ, ಬ್ರಹ್ಮೇಶ್ವರ ಲಿಂಗವ ಮುಟ್ಟುವ ಭೇದ.

೧೧. ತ್ಯಾಗಾಂಗನಾಗಿ ಕೊಡುತ್ತಿದ್ದಲ್ಲಿ ಭೋಗಾಂಗನಾಗಿ ಸುಖಿಸುತ್ತಿದ್ದಲ್ಲಿ ಯೋಗಾಂಗನಾಗಿ ವಾಯು ದ್ವಾರ ಭೇದಂಗಳನರಿತು ಧ್ಯಾನ ಧಾರಣ ಸಮಾಧಿಗಳಲ್ಲಿದ್ದಡೂ ಒಂದು ಕುರಿತು ಲಕ್ಷಿಸಿ, ವಸ್ತು ಇಹನೆಂದು ವಿಶ್ವಾಸದಿಂದಲ್ಲದಾಗದು. ಹಿಂದಕ್ಕಾದ ದೇವ ಪದವಂತರು ಮುಂದಕ್ಕೆ ಅರಿದು ಕೂಡುವರು. ಹಿರಿಯ ಶರಣ ಪತಿಗಳೆಲ್ಲರೂ ವಿಶ್ವಾಸದಿಂದಲ್ಲದೆ ದೃಷ್ಟವ ಕಾಣರು. ಇದು ಕಾರಣ, ಬಾಹ್ಯ ಕರ್ಮ ಅಂತರಂಗ ಶುದ್ಧಿ. ನಿರವಯವೆಂಬುದೊಂದು ಕುರುಹಿನ ನೆಮ್ಮುಗೆ ಉಂಟೆಂಬುವನ್ನಕ್ಕ ವಿಶ್ವಾಸ ಬೇಕು. ಇದು ಸಂಗನ ಬಸವಣ್ಣ ಕಂಡು ಬಂದ ಲಿಂಗದ ಬಟ್ಟೆ. ಬ್ರಹ್ಮೇಶ್ವರನೆಂಬ ವಸ್ತುವ ಕೂಡುವ ದೃಷ್ಟ.

ಭಕ್ತ ಮಹೇಶ್ವರ ಸ್ಥಲಗಳು.

ವಿವರಣೆ:— ಭಕ್ತ ಮಹೇಶ್ವರ ಸ್ಥಲಗಳಲ್ಲಿ ಕ್ರಿಯೆಯೇ ಅತ್ಯಂತ ಮಹತ್ವದ್ದು. ಕ್ರಿಯೆ ಎಂದರೆ, ಸದಾಚಾರ, ಉತ್ತಮತೆರದ ನಡೆನುಡಿ, ಪರಮಾತ್ಮನಲ್ಲಿ ಭಕ್ತಿ ಭಾವ. ಅವರೆ ಇವುಗಳನ್ನು ಮಾಡುವಲ್ಲೆಲ್ಲ ಭಕ್ತಿ ವಿಶ್ವಾಸಗಳು ಬೇಕು. ಇವುಗಳಿಂದ ಮಹತ್ವದ ಪರಿಣಾಮಗಳಾಗುವವು. ಈ ಬಗೆಯ ಮನಃ ಸ್ಥಿತಿಯಿಂದ ಕೊರಡು ಚಿಗಿಯುವದು. ಬರಡಾಕಳು ಹಯನವನ್ನೀಯುವದು. ಚಿತ್ರದ ಬೊಂಬೆ ಸಹ ರೂಪು ಗೊಳ್ಳುವದು. ಹೀಗಾಗುವದು ಆ ವಸ್ತುಗಳ ಸ್ವಭಾವವಲ್ಲ. ಆದರೆ ಅವುಗಳ ವಿಷಯವಾಗಿ ಭಕ್ತನು ತಾಳಿದ ವಿಶ್ವಾಸದಿಂದ. ಇದು ಸತ್ಯವು. (೧೨) ಅನೇಕರು ಮನಸ್ಸಿನಲ್ಲಿ ದುಷ್ಟ ವಿಚಾರಗಳಿಂದಿದ್ದು ಬಾಹ್ಯದಲ್ಲಿ ಡಾಂಭಿಕರಾಗಿ ವರ್ತಿಸುತ್ತಾರೆ. ಇಂಥವರು ಹಾವಿನಂತಿರುತ್ತಾರೆ. ಹಾವು ತನ್ನ ವಿಷವನ್ನು ಬಿಡದು. ಕುಕ್ಕುಟನು ಹಾಗೆಯೇ ಯಾವ ಗೂಡಿನಲ್ಲಿದ್ದರೂ ಕೂಗುವದನ್ನು ಬಿಡದು. ಅದ್ದರಿಂದ ಭಕ್ತಿ ಹೀನರೂ ಬರೀ ವಾಚಾಳರೂ ಅದವರು ಎಂಥ ವೇಷ ಧರಿಸಿದರೂ ಕೂಡ ಅವರು ಭಕ್ತರೆನಿಸಿಕೊಳ್ಳರು (೧೩) ಪರಮಾತ್ಮನು ಸಿಲೆ, ಮರ, ಬೆಂಕಿ, ನೀರುಗಳಲ್ಲಿಯೂ ವ್ಯಾಪಿಸಿರುತ್ತಾನೆ. ಆದರೆ ನಿಜ ವಸ್ತುವು ಅವುಗಳಲ್ಲಿರುವದೆಂಬ ಭಾವವಿರಬೇಕು. ಅಂದರೆ ಅಲ್ಲಿ ಪರಮಾತ್ಮನಿರುತ್ತಾನೆ. (೧೪) ಕ್ರಿಯೆಯಿಂದ ಭಕ್ತನು ಪರಮ ಪದವನ್ನು ಹೊಂದುವನು. ಒಕ್ಕಲಿಗನು ದುಡಿದಲ್ಲಿ ದುಡಿದ ಫಲವನುಣ್ಣುವನು. ಆದ್ದರಿಂದ ಧರ್ಮ ಮರ್ಮಗಳನ್ನರಿತು ಆಚರಿಸಿದಲ್ಲಿ ಲೌಕಿಕ ಬಂಧಗಳು ಸಡಿಲುವವು. ಆದರೆ ಇದರಲ್ಲೆಲ್ಲ ಮಾಡುವವನ ವಿಶ್ವಾಸಭಕ್ತಿಗಳು ತುಂಬಿರಬೇಕು. (೧೫) ಭಕ್ತಿರಹಿತನಾಗಿ ಎಷ್ಟು ನುಡಿದರೂ ಎಷ್ಟು ಸ್ತೋತ್ರ ಮಾಡಿದರೂ ವ್ಯರ್ಥವಾದುದು ಅಲ್ಲಿ ಪರಮಾತ್ಮನ ಇರವು ಇರದು. (೧೬) ಭಕ್ತನಾದವನು ಭಕ್ತರೊಡನೆ ಭಕ್ತಿಯುತನಾಗಿರಬೇಕು. ವಿರಕ್ತನು ಬಾಹ್ಯದಲ್ಲಿ ವೇಷದೊಡನೆ ಇದ್ದು ಅಂತರಂಗದಲ್ಲಿ ಸುಗುಣಗಳಿರದಿದ್ದಲ್ಲಿ ಅಂಥ ವೇಷದ ಪ್ರಯೋಜನವೇನು? ಇಂಥವರು ವರ್ತನೆಗೆ ದೂರರು. (೧೭) ಭಕ್ತಿ ಎಂದರೆ ಸಮರಸಾಚಾರವು. ಭಕ್ತಿಯಲ್ಲಿ ಪೂಜ್ಯ ಪೂಜಕ ಭಾವವಳಿಯಬೇಕು. ವಸ್ತುವೂ ಇಲ್ಲ, ತಾನೂ ಇಲ್ಲ ಈ ಸ್ಥಿತಿಯುಂಟಾಗಬೇಕು. (೧೮) ಮಾಡುವಲ್ಲಿ ಹಿಂದಿನ ಮುಂದಿನ ಸುಖ ದುಃಖಗಳ ನೆನಹು ಇರಕೂಡದು.

ಇದ್ದಿದ್ದಾದರೆ ಕರ್ಮಫಲ ಬಿಡದು. ಕರ್ಮಗಳ ಫಲದ ಬಗ್ಗೆ ಅವ ಸಂದೇಹವೂ ಇಲ್ಲದೆ ಆಚರಿಸಬೇಕು. (೧೯) ಮಾತಿಗೆ ನಡೆ ಶುದ್ಧವಾಗಿರಬೇಕು. ನಡೆಗೆ ಕ್ರಿಯೆ ಶುದ್ಧವಾಗಿರಬೇಕು. ಕ್ರಿಯೆಗೆ ವ್ರತಭಂಗವಿರಕೂಡದು. ಹೀಗೆ ಭಕ್ತನ ಆಚರಣೆ ಇರಬೇಕು. (೨೦) ಭಕ್ತನ ಕ್ರಿಯೆಯಲ್ಲಿ ಉಪಾಧಿ ನಿರುಪಾಧಿ ಎಂಬುದು ಇರಕೂಡದು. ಅವನು ಕ್ರಿಯೆಗೆ ವಿರೂಢವನು. ಇಷ್ಟೇ ಅಲ್ಲ ಭಕ್ತಿಗೂ ಕೂಡ ವಿರೂಢವನು. ಅವನ ಕ್ರಿಯೆಗಳು ಸ್ವಾಭಾವಿಕವಾಗಿ ಅವನ ಅಂತರಂಗದೊಳಗಿಂದ ಪ್ರವಹಿಸುತ್ತವೆ. ಇದೇ ಪೂರ್ಣತೆ ಎನಿಸಿಕೊಳ್ಳುತ್ತಿದೆ. (೨೧) ಕ್ರಿಯೆಯು ಕಡೆತನಕ ಇರುತ್ತಿದೆ. ಅರಿವು ಇರುವಲ್ಲಿಯೂ ಕ್ರಿಯೆಯು ಇರುತ್ತಿದೆ. ಇವುಗಳ ಹೊಳಹು ದ್ವಂದ್ವಭಾವ. ಈ ದ್ವೈತವು ವಿಶ್ವಾಸದಿಂದಲ್ಲದೆ ನಾಶವಾಗದು. (೨೨) ಬೇರು ಇದ್ದಲ್ಲಿ ಗಿಡದ ಪರ್ಣ ಶಾಖೆ ಮೊದಲಾದವುಗಳು ತರದೋರುತ್ತವೆ. ಜ್ಞಾನವೇ ಬೇರಿನಂತಿದೆ. ಆದರೆ ಅದಕ್ಕೆ ಪುಷ್ಟಿಯಾಗಿ ಭಾವ ಶುದ್ಧವಿರಬೇಕು. ಈ ಶುದ್ಧತೆಯು ಗುರುವಾಜ್ಞೆಗೆ ಅನುಸರಿಸುತ್ತದೆ. ಶಿವಲಿಂಗ ಪೂಜೆಯಲ್ಲಿ ದೃಢಪಡುತ್ತಿದೆ. ಜಂಗಮ ಸೇವೆಯಲ್ಲಿ ಸನ್ನದ್ಧವಾಗುತ್ತಿದೆ. (೨೩) ಆದರೆ ಭಕ್ತನು ತಾನು ಹಿಡಿದ ಕೆಲಸವನ್ನು ಬಿಡಕೂಡದು. ನಿತ್ಯ ನೇಮಕ್ಕೆ ಭ್ರಷ್ಟನಾಗಬಾರದು. (೨೪) ಆಚಾರಕ್ಕೆ ತಪ್ಪಿದಲ್ಲಿ ಅದು ಬಾಹ್ಯ ಚಿನ್ಹವಾದರೆ ಅದನ್ನು ಸವರಿಸಿಕೊಳ್ಳಬೇಕು. ಭಕ್ತಿ ಇದ್ದವರಿಗೆ ಚಿನ್ಹವಿಲ್ಲದಿಲ್ಲ (೨೫)

೧೨. ಕೊಂಡು ಕೊನರಿದಲ್ಲಿ, ಬರಡು ಹಯನಾದಲ್ಲಿ, ಚಿತ್ರದ ಬೊಂಬೆ ನಿಜ ಕರ್ತೃ ರೂಪಾಗಿ ಬಂದಲ್ಲಿ ಆ ತ್ರಿವಿಧದ ದೃಷ್ಟವೋ, ವಿಶ್ವಾಸಿಯ ಚಿತ್ತವೋ? ಇದು ಭಕ್ತಿಯ ಹೊಲಬಿಗೆ ಮುಖ. ಸಂಗನಬಸವಣ್ಣನ ಸತ್ಯ, ಬ್ರಹ್ಮೇಶ್ವರ ಲಿಂಗವ ಕೂಡುವ ಕೃತ್ಯ.

೧೩. ಹಾಲನಿಟ್ಟು ಹಾವ ಸಲಹಿದಲ್ಲಿ ಅದು ತನ್ನಯ ಉಚಿತಕ್ಕೆ ಹಾಕಾಹಳವ ಬಿಟ್ಟೀತ್ತೆ? ಕುಕ್ಕುಟನ ಪಾಳಿಗೆಯಲ್ಲಿ ಕೂಡಿ ಪ್ರತಿ ಗೂಡಿನಲ್ಲಿ ಕೂಡ್ಯಲಿಕ್ಕೆ ತನ್ನ ತತ್ಕಾಲಕ್ಕೆ ಕೂಗುವದ ಬಿಟ್ಟೀತ್ತೆ? ಇಂತೀ ವರ್ತನದಂತೆ ಭಕ್ತಿ ಧಾರಕರ, ಧರಿಸಿನ (?) ಜೋರಕರ, ವಾಚಾ ರಚನೆಗರ ಬರಿ ಮಾತಿನ ಪೂಸರ, ಈಶ್ವರ ಭಕ್ತ-ಪರಮೇಶ್ವರನ ರೂಪು ಎನಲಾರೆ. ಮತ್ತೆ ನೀತಿಯ ವಿಶ್ವಾಸವ ಬಿಡಲಾರೆ. ಈ ಭಕ್ತಿಯೆಂಬ ಪಾಶ ಹರಿವುದಕ್ಕೆ ನಿಮಿತವ ತೋರಯ್ಯ ಸಂಗನಬಸವಣ್ಣ! ಬ್ರಹ್ಮೇಶ್ವರ ಲಿಂಗವ ನೆರವುದಕ್ಕೆ ಕುರುಹು ಹೇಳಣ್ಣ!!

೧೪. ಕಲ್ಲ ರೂಪು ಕಬ್ಬು ಮೆಲುವಾಗ ಎತ್ತಿದ ಈ ಮಾನದ ಲಿಪ್ತ ಸದ್ಗುರು ಬರುವಾಗ, ಹುಳಿದ ವೃಷಭ ಕೆಲೆವಾಗ ಇಂತೀ ಪ್ರಥಾ ದದ ಬಲ್ಮೆ ಸತ್ಯ ಚಿತ್ತ, ಚಿತ್ತದ ಹೆಚ್ಚುಗೆ, ಇಂತೀ ಗುಣ ಸಂಗನ ಬಸವಣ್ಣ ಉತ್ಸಾಹ ಬ್ರಹ್ಮೇಶ್ವರ ಲಿಂಗವನನಂವುದಕ್ಕೆ ನಿಶ್ಚಯದ ವಿಶ್ವಾಸ.

೧೦. ಹಿಂದಣ ಸುಖ, ಮುಂದಣ ದುಃಖಗಳು, ಮುಂದಣ ಸುಖ ಹಿಂದಣ ದುಃಖಗಳು, ಇವ ತಾ ಸಂದಿಸಿ ಅನುಭಾವಿಸಿದಲ್ಲಿ ಸಂಚಿತ, ಪ್ರಾರಬ್ಧ ಆಗಾಮಿಗಳೆಂದು ಅಲ್ಲಲ್ಲಿ ಸಂಕಲ್ಪಿಸಿ ಕೇಳಲೇತಕ್ಕೆ? ಹಿಂದೆ ಅಳಿದವರ ಮುಂದೆ ಸಾವವರ ಕಂಡು ಅಂದಂದಿಗೆ ನೂರು ತುಂಬಿತ್ತೆಂದು ಸಂದೇಹವ ನಿವೃತ್ತಿಯಾಗಿರಬೇಕು, ಸಂಗನ ಬಸವಣ್ಣ ಸಾಕ್ಷಿಯಾಗಿ ಬಸ ವೇಶ್ವರ ಲಿಂಗವನಂವುದಕ್ಕೆ.

೧೧. ಆವುದೊಂದು ಕರ್ಮಂಗಳ ವ್ಯಾಪಾರಿಸಿ ಮಾಡುವಲ್ಲಿ ಸತ್ಯಕ್ಕೆ ತಕ್ಕ ಸಾಮರ್ಥ್ಯವನಂತು ಅ ವ್ರತ ಕ್ರಿಯಾ ವರ್ತನಂಗಳ ಹಿಡಿದಲ್ಲಿ ಹಿಂದಣ ನಗೆಗೆಡೆ ಮುಂದಣ ಹಾಸ್ಯ. ಆ ಹಾಸ್ಯಕ್ಕೊಳಗಲ್ಲದೆ ನುಡಿದ ಮಾತಿಂಗೆ ನಡೆ ಶುದ್ಧವಾಗಿ ಆ ನಡೆವ ನಡೆಗೆ ಕ್ರಿಯೆ ಶುದ್ಧವಾಗಿ ಆ ಕ್ರಿಯಲ್ಲಿ ವ್ರತಭಂಗವಿಲ್ಲದಿಪ್ಪುದು ಸದ್ಭಕ್ತನ ಸಂಬಂಧ. ಈ ಗುಣ ಸಂಗನ ಬಸವಣ್ಣನ ಪ್ರಥ್ಧೆ. ಬಹ್ಮೇಶ್ವರ ಲಿಂಗವನನಂವುದಕ್ಕೆ ಕ್ರಿಯಾ ಮಾರ್ಗ.

೧೨. ಉಪಾಧಿಕಂಗೆ ಆವ ವ್ರತ? ತ್ರಿವಿಧ ಭಕ್ತಿಯನು ಒಲ್ಲ, ನಿರುವಾಧಿಕಂಗೆ ಆವಾವ ವ್ರತ? ತ್ರಿವಿಧ ಭಕ್ತಿಯುಂಟು. ಸ್ವಯಾನು ಭಾವಿಗೆ ಇದಿರ ದಯಾ ದಾಕ್ಷಿಣ್ಯ ತನ್ನಯ ಅರಿವಿನ ವಿಲಾಸಿತದ ಲಕ್ಷಣ. ಸರ್ವ ಗುಣದಲ್ಲಿ ಸನ್ನದ್ಧನಾಗಿಪ್ಪುದು. ಸ್ವಯಾನುಭಾವದ ಸಂಬಂಧ. ಇಂತೀ ಖಂಡಿತ ಅಖಂಡಿತ ಪರಿಪೂರ್ಣತ್ವ ಭೇದವಿಲ್ಲದೆ ಪೂರ್ಣತ್ವ ವಾಗಿಪ್ಪುದೇ ಸಂಗನಬಸವಣ್ಣನ ಸಕ್ರಿಯಾ ಮಾರ್ಗ. ಬ್ರಹ್ಮೇಶ್ವರ ಲಿಂಗವನರಿದಹನೆಂದು ಉಪಾಧಿಕೆ ನಿರುಪಾಧಿಕೆ ಎಂಬುದನರಿದು ಸ್ವಯವ ಕೂಡಿಹೆನೆಂಪ.

೧೩. ಬಯಲು ಬೆಳಗುಳ್ಳನ್ನಕ್ಕ ಮುಂಮೊಂದು ಕುರುಹಿನ ಕುಲ ಬಿಡದು. ಕುರುಹುಳ್ಳನ್ನಕ್ಕ ಅರಿದಿಹೆನೆಂಬ ಭಾವ. ಆ ಅರಿಕೆಯೆಂಬುದು ವಿಶ್ವಾಸದಿಂದಲ್ಲದೆ ಕಾಣಬಾರದು. ಇದು ಸಂಗನಬಸವಣ್ಣನು ಸಂಧಿ ಸಿದ ಸಂಬಂಧ. ಬ್ರಹ್ಮೇಶ್ವರ ಲಿಂಗವ ವಿಶ್ವಾಸದಿಂದಲ್ಲದೆ ಸಂಬಂಧಿಸ ಬಾರದು.

೧೪. ಶಿಲೆ, ಮರ, ಮಣ್ಣು, ಬೆಂಕಿ, ನೀರು, ಮಳಲುಗಳಲ್ಲಿ ಇಂದು ಸೂರ್ಯ ಇಂತೀ ಒಳಗಾದವರ ಮರೆಯಲ್ಲಿ ತಮ್ಮ ವಿಶ್ವಾಸ ಎಂತಿದ್ದಿತು, ಅಂತೆ ವಸ್ತುವಪ್ಪುದನಂತು ಇದು ಸಂಗನಬಸವಣ್ಣ ಸರ್ವಾಧಾರವಾಗಿ, ಬಂದ ಸಂಬಂಧ ಬ್ರಹ್ಮೇಶ್ವರ ಲಿಂಗವು ವಿಶ್ವಾಸದಲ್ಲಿ ತಪ್ಪದಿಪ್ಪನು.

೧೫. ಕೃಷಿಯಿಂದ ಮುಂದಣ ಫಲವ ಕಾಂಬಂತೆ, ಅಸಿ ಕಲಿ ಯಿಂದ ಮುಂದಣ ಅರಿಬಲದ ಗೆಲವಂತೆ, ಸಂಸ್ಕೃತಿಯ ಮಾರ್ಗ ಮರ್ಮ ಧರ್ಮಂಗಳನರಿದು ಮುಂದಣ ಅಸುರ ಕರ್ಮಂಗಳ ತವೋ ಬಂಧಗಳ ವೀಸ ಗೆಲುವದಕ್ಕೆ ಇಷ್ಟಲ್ಲದಿಲ್ಲ. ಇದು ವಸ್ತು ಪೂಜಕರ ವಿಶ್ವಾಸ. ಸಂಗನ ಬಸವಣ್ಣನ ಸಂಬಂಧ ಬ್ರಹ್ಮೇಶ್ವರ ಲಿಂಗವನಂವು ದಕ್ಕೆ ವಿಶ್ವಾಸದ ಭಿತ್ತಿ.

೧೬. ಸದ್ಭಕ್ತಿಯಿಲ್ಲದ ವಿಶ್ವಾಸ ಹೀನನು, ವಾಚಾರಚನೆಗಳಿಂದ ಮಾತಿನ ಮಾಲೆಯು ಎಷ್ಟು ನುಡಿದಡೇನು? ಹೇ (?) ದಂಡದಂತೆ, ಮೃತ್ತಿಕೆಯ ಘಟದಂತೆ, ಸಿಡಿಲ ಫಳದಂತೆ, ಅದಾರಿಗೆ ಯೋಗ್ಯ? ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರ ಲಿಂಗವು ಅವರಲ್ಲಿ ನಿಲ್ಲನಾಗಿ.

೧೭. ಭಕ್ತಂಗೆ ವಂದಿಸಿ ನಿಂದಿಸಿದಲ್ಲಿಯೇ ವಿಶ್ವಾಸ ಜಾರಿತ್ತು. ವಿರಕ್ತಂಗೆ ಸುಗುಣ-ದುರ್ಗುಣವ ಸಂಪಾದಿಸಿದಲ್ಲಿಯೇ ವಿವೇಕ ಹೋಯಿ ತ್ತಯ್ಯ! ಕಣ್ಣಿನಲ್ಲಿ ಮುಳ್ಳು ಮುರಿದಂತೆ ಮುಚ್ಚಿ ತೆರೆಯಬಾರದು; ವೇದನೆ ಬಿಡದು; ವರ್ತನೆಗೆ ಭಂಗ; ಸತ್ಯಕ್ಕೆ ದೂರ; ಈ ಸಮಯದ ಸಂಗ ಎನ್ನ ಈ ಗುಣದ ಕಟ್ಟನಳಿವುದಕ್ಕೆ ಸಂಗನ ಬಸವಣ್ಣನಿಂದೆ ಬ್ರಹ್ಮೇ ಶ್ವರ ಲಿಂಗವನರಿದವಂಗಲ್ಲದಾಗದು.

೧೮. ಗುರುಭಕ್ತನಾದಲ್ಲಿ ಗುರುವಳಿದು ತಾನುಳಿದರೆ ಗುರುಭಕ್ತ ನಲ್ಲ. ಲಿಂಗ ಭಕ್ತನಾದಡೆ ಜಾಗ್ರ ಜಿಹ್ವೆಗಳಲ್ಲಿ ತಮ್ಮಂಗವ ಬಿಟ್ಟು ಲಿಂಗ ಹಿಂಗಿದಲ್ಲಿಯೇ ಆತ್ಮ ಒಡಗೂಡದಿದ್ದಲ್ಲಿಯೇ ಲಿಂಗ ಭಕ್ತನಲ್ಲ. ಜಂಗಮ ಭಕ್ತನಾದಡೆ ಕಳಹು, ಹಾದರ, ದುರ್ಗುಣದಿಂದ ಕಾಡಿಸಿ ಕೊಂಬಲ್ಲಿ ಬಿಡಿ ಸದೆ ತಾನಡಗಿ ಅರಿಯದಂತಿದ್ದಾಗಲೇ ಜಂಗಮ ಭಕ್ತನಲ್ಲ. ಇಂತೀ ತ್ರಿವಿಧ ಭಾವಂಗಳಲ್ಲಿ ಘಟದಲ್ಲಿ ಸಂದನಳಿದವಂಗಲ್ಲದೆ ತ್ರಿವಿಧ ಭಕ್ತಿ ಇಲ್ಲ. ಈ ಗುಣ ಸಂಗನ ಬಸವಣ್ಣಂಗಲ್ಲದೆ ಸಾಧ್ಯವಲ್ಲ. ಬ್ರಹ್ಮೇಶ್ವರ ಲಿಂಗವನರಿದವರಿಗೂ ಅಸಾಧ್ಯ ನೋಡಾ!

೨೪. ಕಾಯಿ ತೊಟ್ಟಿನಲ್ಲಿ ನೀರ ಬಿಟ್ಟಡೆ ಕಾಯಿ ನಿಂದುದುಂಟೆ? ಬೇರೊಣಗಿದ ಮೇಲೆ ಇಂತೀ ಮೂಲ ಬೇರಿನಿಂದ ಶಾಖೆಪರ್ಣಫಲ ವಲ್ಲದೆ ಮೊದಲಿನ ನಷ್ಟ ಲಾಭಕ್ಕೆ ದಿನವುಂಟೆ? ಜ್ಞಾನ ಹೀನನು ಆನ ಸ್ಥಲವ ನೆಮ್ಮಿ ಮಾತನಾಡಿದರೂ ಷಟ್‌ಸ್ಥಲದಲ್ಲಿ ಭಾವ ಶುದ್ಧವಾಗಿಪ್ಪನೆ? ಇದು ಕಾರಣ ಗುರುವಾಜ್ಞೆಯ ಮೀರದೆ, ಶಿವಲಿಂಗಪೂಜೆಯ ಮರೆಯದೆ, ಜಂಗಮ ಸೇವೆಯಲ್ಲಿ ಸನ್ನದ್ಧನಾಗಿ ಆವುದೊಂದು ವ್ರತವೆಂದು ಹಿಡಿದು ಅದ್ವೈತವನರಿತೆನೆಂದು ಬಿಡದೆ ನಿಂದ ಸ್ಥಲಕ್ಕೆ ನಿಬದ್ಧನಾಗಿ ನಿಂದಲ್ಲಿಯೇ ಲಿಂಗ ಸಂಗ. ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರ ಲಿಂಗವ ನರಿದುದು.

೨೫. ಅಪರಾಧವ ಮಾಡಿದ ಬಂಟ ಅರಸಿಂಗೆ ಸಜ್ಜನನಪ್ಪನೆ? ವ್ರತ ಭ್ರಷ್ಟ ನೇಮಕ್ಕೆ ಹಾನಿಯಾದವ. ನಿತ್ಯ ಕೃತ್ಯವೆಂದು ಹಿಡಿದು ಬಿಟ್ಟವ, ತ್ರಿವಿಧ ಮಲವನೊಲ್ಲೆನೆಂದು ತೊಟ್ಟವ, ಇಂತೀ ಕಾಷ್ಠ ಗುಣ ದಲ್ಲಿ ನಡೆವ ವೃಥಗಳ್ಳರ ನೋಡ! ಇದು ಬಾಯೊಳಗಣ ಹಣ್ಣ ಹೇವರಿ ಸಿದ(?) ಮತ್ತೆ ಇನ್ನಾವ ಠಾವಿನಲ್ಲಿ ನುಂಗುವ. ಈ ಹೇಯವ ಬಿಡಿಸಯ್ಯ ಎನಗೆ ಸಂಗನಬಸವಣ್ಣ! ಬ್ರಹ್ಮೇಶ್ವರ ಲಿಂಗವಿಪ್ಪ ಠಾವ ತೋರಾ!

೨೬. ಗುರುವಳದಲ್ಲಿ ಗುರು ಪಟ್ಟವೆಂದು ಕಟ್ಟಿ ಪರಮ ಗುರು ವೆಂದು ಶರಣೆಂಬಲ್ಲಿ ಲಿಂಗ ಬಾಹ್ಯವಾಗಿ ಅಂಗವ ಹಂದು ಹೋದಲ್ಲಿ ಮತ್ತೊಂದು ಲಿಂಗವುಂಟೆಂದು ಕೊಳ್ಳುವುದೇತಕ್ಕೆ? ಗುರು ಪೂರ್ವ ಲಿಂಗ ಉತ್ತರವೇ? ಗುರು ಆದಿ ಲಿಂಗ ಅನಾದಿಯೇ? ಇದು ಕಾರಣದಲ್ಲಿ ಗುರುಭಕ್ತಿ ಅರಿ ಬಿರಿದು ಲಿಂಗ ಭಕ್ತಿಯತ್ತಲಾನು ಒಪ್ಪಿ, ಜಂಗಮ ಭಕ್ತಿಗೆ ಸಂಗನಬಸವಣ್ಣನಲ್ಲದಿಲ್ಲ. ಬ್ರಹ್ಮೇಶ್ವರ ಲಿಂಗವು ಸಾಕ್ಷಿಯಾಗಿ.

ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು.

೨೭. ನಿಂದ ನೆಲೆಯ ನೀರಿನಂತೆ, ಮರ ತಿಲೆಗಳಲ್ಲಿ ಸಂದಿಸಿ ನಿಂದ ಪಾವಕನಂತೆ, ಕರಂಡದಲ್ಲಿ ಬಂಧಿಸಿ ನಿಂದ ಸುವಾಸನೆಯಂತೆ, ಈ ಅಂಗದಲ್ಲಿ ನಿಂದ ನಿಜಲಿಂಗಾಂಗ ಸಂಬಂಧ. ಈ ಗುಣ ಸಂಗನ ಬಸವಣ್ಣಂಗೆ ಸಂಬಂಧವಾಯಿತ್ತು. ಬ್ರಹ್ಮೇಶ್ವರ ಲಿಂಗವು ಅವರಿಗೆ ಒಳಗಾದ.

೨೮. ಸಂಚಿತವನರಿವುದು ಕರ್ಮಯೋಗ. ಆಗಾಮಿಯನರಿವುದು ಆತ್ಮಯೋಗ. ಪ್ರಾರಬ್ಧವನರಿವುದು ಕರ್ಮಯೋಗ. ಇಂತೀ ತ್ರಿವಿಧ ಯೋಗಂಗಳಲ್ಲಿ ತಿಳಿದು, ಈ ಯೋಗವೆಂಬುದ ಕಂಡು, ತನ್ನಯ ಆತ್ಮನ ಸ್ವಸ್ಥ ಗಾಢಂಗಳ ಘಟದಲ್ಲಿಪ್ಪ ಸ್ವಸ್ಥಾನದಲ್ಲಿಪ್ಪುದು. ಇರದೆಂಬುದು ಲಕ್ಷಿಸಿಕೊಂಡು ಸರ್ವ ವ್ಯವಧಾನಂಗಳಲ್ಲಿ ಸಾವಧಾನಂಗಳನರಿವುದು ಪ್ರಾಣಲಿಂಗಿಯ ಕೂಟ. ಈ ಗುಣ ಸಂಗನ ಬಸವಣ್ಣನ ಸಂಯೋಗ, ಬ್ರಹ್ಮೇಶ್ವರ ಲಿಂಗದ ಕೂಟ.

೨೯. ಅಗ್ನಿಯ ಅಡಕವ, ನೀರಿನ ಸಾರವ, ನಿರವಯದ ಹೊರೆಯ ಭೇದಿಸಿ ಕಾಂಬಂತೆ. ಅಗ್ನಿಗೆ ಮಥನದಿಂದ ನೀರಿನ ಸಾರಕ್ಕೆ ಮಧುರ ದಿಂದ ನಿರವಯದ ಹೋರಿಗೆ ತನ್ನರಿವಿನ ಭೇದದಿಂದ ಕಾಣಿಸಿಕೊಂಬುದು ತ್ರಿವಿಧ ಲಿಂಗ ಭೇದ, ಪ್ರಾಣಲಿಂಗಿಯ ಸಂಗ. ಬ್ರಹ್ಮೇಶ್ವರ ಲಿಂಗವ ಕೂಡುವ ಕುರುಹಿನ ನಿರಂಗ.

೩೦. ಬಾಗಿಲು ಕವಾಡವ ಬಳಸಿ ಬಂದಲ್ಲಿಕ್ಕಿದಡು ಮರೆಯ ಭೇದ ವಲ್ಲದೆ ನಿಳಯಕ್ಕೆ ಹೋಹುದು ತಪ್ಪದು. ತತ್ವಂಗಳ ವಿಚಾರಿಸಿ, ಸ್ಥಲಂಗಳ ವಿಸ್ತರಿಸಿ, ಕರಿಪೂರ್ಣ ಪೂರ್ಣಂಗಳೆಂಬಲ್ಲಿ ವಿಶ್ರಮಿಸಿ ಅರಿವು ಒಂದೋ ಅರಿವಿಸಿ ಕಾಂಬುದು ಒಂದೋ? ಉಭಯವನೆ ಧಿಕರಿಸಿ ನಿಂದಾತನೇ ಪರಮ ಸುಖಿ. ಇದು ಸಂಗನ ಬಸವಣ್ಣನಿಕ್ಕಿದ ಭಿತ್ತಿ. ಬ್ರಹ್ಮೇಶ್ವರ ಲಿಂಗವಲ್ಲಿಯೆಯ್ದುವ ಮಹಪಥದ ಪಥ.

---

೩೧. ಚಂದ್ರಕಾಂತ ಶಿಲೆಯಲ್ಲಿ ಬಿಂದುವಿದ್ದಡೆ ಹಿಂಡಿ ಹಿಳಿದಿಹೆನೆಂದರೆ ಬಂದುದುಂಟೇ? ಆ ಬಿಂದು ಅರುಣ ಶಿಲೆಯಲ್ಲಿ ಉರಿಹಿ ನೋಡಲಿಕ್ಕೆ ಉರಿದುದುಂಟೆ? ನೀರು ಅನಲುಗಳು ತಮ್ಮ ವಲವರದ ಸಾಧ್ಯಕ್ಕಲ್ಲದೆ ಫಲಿಸುವದಿಲ್ಲ. ಇಂತೀ ತೆರದಂತೆ ಕ್ರಿಯಾ ಜ್ಞಾನವೆಲ್ಲವ ಬಲ್ಲೆವೆಂದು ಅಷ್ಟವಾಯ್ದು ಅಲ್ಲಲ್ಲಿ ನುಡಿದಡೆ ನಿಜವಸ್ತು ಸಲ್ಲೀಲೆಯಲ್ಲಿಪ್ಪನೆ? ಶ್ರದ್ಧೆ ಸನ್ಮಾರ್ಗಿಗಳಲ್ಲದೆ ಗೆಲ್ಲಗೂಳಿಗರಲ್ಲಿ ಇಲ್ಲ. ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರ ಲಿಂಗವು ಅವರಲ್ಲಿ ಇಲ್ಲವಾಗಿ.

೩೨. ಗುರುಭಕ್ತಿಯುಂಟು, ಲಿಂಗಭಕ್ತಿಯುಂಟು, ಜಂಗಮಭಕ್ತಿ ಮತ್ತೆ ತಾನುಂಟು. ತನ್ನರಿದು ಇದಿರ ಕಾಂಬ ಜ್ಞಾನ ಭಕ್ತಿ ಚನಬಸವಣ್ಣಂಗೆ ಸಾಧ್ಯವಾಯಿತ್ತು ನೋಡಾ! ಅದು ಅರಿದ ಅರಿವಿಗೆ ಮುನ್ನವೆ ಕುರುಹಿಟ್ಟುದು ನಿಜ. ಆ ಗುಣ ಸಂಗನ ಬಸವಣ್ಣ ಬಂದ ಹಾದಿ ಬ್ರಹ್ಮೇಶ್ವರ ಲಿಂಗವಲ್ಲಿಗಾಗಿ.

೩೩. ಎಲೆಗಳೆದ ವೃಕ್ಷಕ್ಕೆ ತಳಿರು ಕೊನರಲ್ಲದೆ, ಸಾರಗೆಟ್ಟು ನಷ್ಟವಾದ ತರುವಿಗೆ ಮತ್ತೆ ಅಂಕುರವುಂಟೇ? ತ್ರಿವಿಧ ಮಲಕ್ಕೆ ದೂರಸ್ಥನಾಗಿ ಅಲ್ಪವೆಂದು ಬಿಟ್ಟು, ಮತ್ತರಿದು ಹಿಡಿದಿಹೆನೆಂದಡೆ ಪ್ರಿಯವಪ್ಪುದೆ? ತಳನ ನಗದು ಮೇಲನರಿಯದೆ ಬಳಸಿ ಕೊಂಬವನಂತೆ ತನ್ನ ಮಣಿಯ ತಾನರಿಯದೆ, ಮೂಕೊರತಿಯ ಮೂಕುತಿಯ ಮಣಿಯ ತನಗೆಂದು ವಿಚಾರಿಸುವಂತೆ ಇಂತೀ ನಿರ್ವಾಣ ಬರುದೋರೆ (?) ಹೋಯಿತ್ತಲ್ಲ. ಸಂಗನಬಸವಣ್ಣ ಇವರು ಅವನರಿಯದಂತೆ ಬ್ರಹ್ಮೇಶಲಿಂಗಕ್ಕೆ ಉರಿಯದೆ ಹೋದರಲ್ಲ.

೩೪. ಕಾದ ಲೋಹದ ಮೇಲೆ ನೀರ ನೆರೆದಡೆ ಆ ನೀರ ಕುಡಿದುದು ಕಾವೋ ಕಬ್ಬಿಣವೋ ಎಂಬುದನರಿತಲ್ಲಿ, ಅಂಗಲಿಂಗ ಸಂಬಂಧಿ. ಕ್ಷೀರವುಕ್ಕುವಲ್ಲಿ ಆರೈದು ನೀರನೆರೆದೆಡೆ ಆ ನೀರ ಕುಡಿದುದು ಪಾಲೋಯಿಂಬೋ ಎಂಬುದ ಕಡೆಗಾಣಿಸಿದಲ್ಲಿ ಕ್ರಿಯಾ ಜ್ಞಾನ ಆತ್ಮಲಿಂಗ ಸಂಬಂಧ. ಇಂತೀ ಉಭಯದ ಒಳಗನರಿತಲ್ಲಿ ಕ್ರಿಯೆಗೆ ವರ್ತನೆ, ಅರಿವಿಂಗೆ ಕೂಟ, ಈ ಗುಣ ಸಂಗನಬಸವಣ್ಣನ ಆಟ; ಬ್ರಹ್ಮೇಶ್ವರ ಲಿಂಗವ ಒಳಗನರಿದವರ ಮಾಟ.

೩೫. ಹುರಿಯ ಮೆಟ್ಟುವ ವಿಹಂಗ ಜಾತಿ ಜೀವಂಗಳೆಲ್ಲವು ಮುಂಚಿ, ಅವ ಬಲ್ಲಡೆ ಪಂಚವ ಮೆಟ್ಟಿ ತಾವು ಬಿಕ್ಕುವರೆ, ಆ ತಲಂಗನ ಕಂಡು ತ್ರಿವಿಧದ ಹುರಿಯಲ್ಲಿ ಅಡಿಯನಿಕ್ಕಿ ಅಡಿಗೊಡ್ಡಿದಂತೆ ಬಿದ್ದಿರುತ ಮತ್ತೆ ರೀತಿಯ ನೂತ ನುಡಿದಡೆ ಅದು ಬಲು ಕಠಿಣವೆಂಬರು. ನೆರೆ ಅರಿದು ಹರಿದ ಶರಣರು ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರ ಲಿಂಗವ ಹೊರ ಹೊರೆಯಲ್ಲಿಯುದಿಸಬೇಕು.

೩೬. ರಸ ಜಿಹ್ವೆಯಲ್ಲಿ, ಗಂಧ ನಾಸಿಕದಲ್ಲಿ ರೂಪು ದೃಕ್ಕಿನಲ್ಲಿ, ಶಬ್ದ ಬ್ರಹ್ಮರಂಧ್ರದಲ್ಲಿ, ಸ್ಪರ್ಶನ ಪಾಣಿ ಪಾದ ಗುಹ್ಯಂಗಳಲ್ಲಿ ಇಂತೀ ಪಂಚೇಂದ್ರಿಯಂಗಳಲ್ಲಿ ಅಷ್ಟ ಗುಣದ ಸಂಚಾರ, ಸಪ್ತ ಭೇದ, ಷಡ್ಗುಣ, ಭಾವ ಚತುಷ್ಟಯ ಮುಟ್ಟಿ ಷೋಡಶ ಯುಕ್ತಿ, ತ್ರಿ ಸಂಧ್ಯಾತ್ಮಕ ಚಿತ್ತ ಮೂಲ. ಪಂಚ ವಿಂಶತಿ ಭೇದ ಇಂತಿವರೊಳಗಾದ ಸಂಚಾರದ ಸಂಚವನರಿದು ತಿಳಿವುಳಿವ ಪ್ರಮಾಣಿಸಿ ನಿಂದುದು ನಿಜಾತ್ಮಯೋಗವಿದು. ಜ್ಞಾನ ಪಿಂಡೋದಯ ಬಸವಣ್ಣ ಪ್ರಿಯ ಕೂಡಲಚನ್ನಸಂಗಮದೇವರಲ್ಲಿ.

೩೭. ನಿಜಾತ್ಮನು, ನಿಶ್ಚಯಾತ್ಮನು, ಜೀವಾತ್ಮನು, ಪರಮಾತ್ಮನು ಎಂಬ ಭೇದವಹಲ್ಲಿ ಅವು ಹುಸಿಯೋ ದಿಟವೋ? ಇಂತೀ ಅಂತರಾತ್ಮನಲ್ಲಿ ಕುರುಹುಗೊಂಡು ತಿರುಗುವುದು ನಾಲ್ವೋ? ಮತ್ತೆ ಸರ್ವಾತ್ಮ ಭೇದವೋ? ಜನನದಲ್ಲಿ ಉತ್ಸಾಹ, ಮರಣದಲ್ಲಿ ಭಯ, ಇಂತೀ ಉಭಯವನರಿವುದು ಆತ್ಮ ಹಲವೋ ಉಭಯವೋ ಏಕವೋ ಎಂಬುದ ತಿಳಿದು. ದಿವದಲ್ಲಿ ಚಲನೆ, ರಾತ್ರಿಯಲ್ಲಿ ಜಿಹ್ವೆಯೊಳಗಪ್ಪುದು. ಜೀವನೋ ಪರಮನೋ ಎಂಬುದ ವಿಚಾರಿಸಿ, ಇಂದ್ರಿಯಂಗಳ ಸಕಲ ದುಃಖಂಗಳಲ್ಲಿ ಸಂಗವಾಗಲಿ, ಲೋಲ ಪತಿಯಿಂದ ಪರಮನೋ (?) ಸಕಲ ರುಜೆ, ಭವ ದುಃಖಂಗಳನನುಭವಿಸುವದು. ನೋವುದು, ಬೇವುದು, ಜೀವನೇ ಇಂತೀ ಜೀವ ಪರಮನೆಂದು ಆತ್ಮಂಗೆ ಕಲ್ಪಿಸುವಲ್ಲಿ ಅದಾವ ಪಿಂಡ ಜ್ಞಾನ ಭೇದವೆಂಬುದ ವಿಚಾರಿಸಬೇಕು. ಇದು ಪಿಂಡ ಜ್ಞಾನ ಸಂಬಂಧ, ಜ್ಞಾನ ಪಿಂಡೋದಯ ಬಸವಣ್ಣ ಪ್ರಿಯ ಕೂಡಲ ಚನ್ನಸಂಗಮದೇವರಲ್ಲಿ.

೩೮. ಬೀಜ ಮುಟ್ಟುವ ಶಕ್ತಿಸ್ಥಲವೆಂದಡೆ ಹೊಯಿದಿದ್ದ ಹೋಯಿಗಿಲದಲ್ಲಿಯೇ ಬೇರು ಬಿಟ್ಟು, ಸಸಿ ಜೆಳೆದು, ಎಲೆ ನಿಂದು, ಫಲ ಬೆಳೆದು

ದುಂಟೆ? ಸಕಲವನರಿತು ಬ್ರಹ್ಮನೇ ನಾನೆಂದಡೆ ಅರ್ಚನೆ ಮರೆತು, ಪೂಜೆ ನಿಂದು, ಸಶ್ಯ ಕೆಟ್ಟು, ಭಕ್ತಿ ಹರಿದಲ್ಲಿ ಅತ ನಿಜ ತತ್ವ ಜ್ಞಾನಿಯಪ್ಪನೇ? ಇದು ವಿಶ್ವಾಸವ ಭಿತ್ತಿ. ವಿರಕ್ತಿಯ ನಿಳಯ. ಸಂಗನಬಸವಣ್ಣನ ಭಕ್ತಿ ವಿರಕ್ತಿಗಿಕ್ಕಿದ ಕಟ್ಟು. ಬ್ರಹ್ಮೇಶ್ವರ ಲಿಂಗವ ಮುಟ್ಟುವ ಮುಟ್ಟು.

೩೯. ಗುರುವಿನಲ್ಲಿ ಅನುವನರಿದವಂಗೆ ಮತ್ತೆ ಗುರು ನಿರೂಪವೆಂಬುದಿಲ್ಲ. ಪ್ರಾಣವೇ ಲಿಂಗವಾದವಂಗೆ ನೆನಹಿಂಗೆ ಎಡೆದೆರಹಿಲ್ಲ. ಸರ್ವಾದ್ವಯ ಸಂಪೂರ್ಣನಾದವಂಗೆ ಇಕ್ಕಿಹೆ, ಅರಿದಿಹೆನೆಂಬ ತೊಟ್ಟಿಹ ತೊಡಕಿಲ್ಲ. ಇಂತಿವನೊಳಗರಿದು ವೇಧಿಸುವನ್ನಕ್ಕ ಗುರುವಿನಾಜ್ಞೆ, ಲಿಂಗದ ಪೂಜೆ, ಮಾಟ ಕೂಟ ಬೇಟವ ಬಿಡಲಿಲ್ಲ. ಇದು ಸಂಗನಬಸವಣ್ಣನಾಟ, ಬ್ರಹ್ಮೇಶ್ವರ ಲಿಂಗದ ಕೂಟ.

೪೦. ಮರ್ಕಟ ಜ್ಞಾನದಿಂದ ಲಕ್ಷಿಸುವುದು. ವಿಹಂಗ ಜ್ಞಾನದಿಂದ ಸಂಚರಿಸುವುದು. ಪಿಪೀಲಿಕ ಜ್ಞಾನದಿಂದ ಧ್ಯಾನಿಸುವುದು. ಒಂದೋ ಮೂರೋ ಎಂಬುದ ತಿಳಿದು, ಕಾರ, ಮಧುರ, ಕಹಿ ಇವರೊಳಗೆ ಬೆರೆದ ಸಾರ ಒಂದೋ ಮೂರೋ ಎಂಬುದ ತಿಳಿದು, ದರ್ಪಣದ ಇದಿರಿನಲ್ಲಿ ನಿಂದ ಗಜ, ಅಜ, ಪಶು ನರ ಮುಂತಾಗಿ ತೋರುತ್ತಿಹ ಬಿಂಬ ಮುಕುರ ಪೊಂದರಲ್ಲಿ ಸಂದಣಿಸುವಂತೆ, ನಿಜಾತ್ಮನ ಪಿಂಡಜ್ಞಾನ ಭೇದ ಬಸವಣ್ಣ ಪ್ರಿಯ ಕೂಡಲಸಂಗಮದೇವರಲ್ಲಿ ಜ್ಞಾನ ಪಿಂಡೋದಯ.

೪೧. ಅತ್ಮಂಗೆ ಭೂತದಿಂದ ಕಾಂಬುದು ಯಂತ್ರ ಗುಣ. ಭವಿಷ್ಯತ್ತಿನಿಂದ ಕಾಂಬುದು ತಂತ್ರಗುಣ. ವರ್ತಮಾನದಿಂದ ಕಾಂಬುದು ಮಂತ್ರಗುಣ. ಇಂತೀ ಭೂತ ಭವಿಷ್ಯದ್ವರ್ತಮಾನಂಗಳಲ್ಲಿ ಸಂಚಿತದ ಸುಖ, ಪ್ರಾರಬ್ಧದ ಪ್ರಾಪ್ತಿ, ಆಗಾಮಿಯ ಕಾಂಬ ಒದಗು, ಇಂತೀ ತ್ರಿವಿಧವಾತ್ಮಂಗೆ ಫಲಭೋಗ ಪ್ರಾಪ್ತಿಯ ಕಟ್ಟುವಲ್ಲಿ ಪಿಂಡಕ್ಕೋ, ಅಂಡಕ್ಕೋ, ಉಭಯ ಗರ್ಭೀ ಕರಿಸಿಕೊಂಡಿಪ್ಪ ಅತ್ಮಂಗೋ, ಎಂಬ ಸಂದೇಹವ ತಿಳಿದು, ತಿಲದೊಳಗಣ ತೈಲ ಬೆಳೆವಲ್ಲಿ ಅಡಗಿಪ್ಪ ಭೇದವನರಿತು ಇಲ್ಲಯೆಂದಡೆ ಅಲ್ಲಿ ಮುಂದಣ ರೂಪಿನೊಳಗಿದ್ದುದ ಕಂಡು, ಉಂಟೆಂದು ನಿಷಿದ್ಧಿಸಿದಲ್ಲಿ ಫಲ ನಷ್ಟವಾಗಲಿಕ್ಕೆ ತಿಲ ನಷ್ಟವಾಯಿತ್ತು. ಇಂತೀ ಫಲ ಫಲಿಸುವನ್ನಕ್ಕ ತ್ರಿವಿಧ ಜ್ಞಾನವೆಂಬುದುಂಟು. ಇದು

ಅಂಡ ಪಿಂಡ ಜ್ಞಾನ, ತ್ರಿವಿಧದ ಭೇದ, ಇದು ಜ್ಞಾನ ಪಿಂಡೋದಯ ಬಸವಣ್ಣಪ್ರಿಯ ಕೂಡಲಸಂಗಮದೇವರಲ್ಲಿ.

೪೨. ನಾನಾ ಭೇದಂಗಳಲ್ಲಿ ಷಡ್ ದರ್ಶನವ ಹೊಕ್ಕು ತಿಳಿದಡೂ ಶ್ರುತಿ ವೇದ ಶಾಸ್ತ್ರ ಪುರಾಣಾಗಮುಂಗಳಂ ಕಲಿತಡೂ, ಮೂರು ಮಲದ ಭೇದವನರಿತು, ಬಿಡು ಮುಡಿಯಲ್ಲಿ ಕಳೆದುಳಿಯಬೇಕು. ಇದು ಪ್ರಸಿದ್ಧವಪ್ಪ ತೆರ. ಇದು ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರ ಲಿಂಗವ ಕೂಡಬೇಕು.

೪೩. ಅಹಂಕಾರಿಗೆ ಗುರುಭಕ್ತಿಯಿಲ್ಲ. ಪರುಷವುಳ್ಳವರಿಗೆ ಲಿಂಗ ಪೂಜೆಯಿಲ್ಲ. ಋಣಾನುಸಂಬಂಧಿಗೆ ಮಾಟದ ಮರ್ಮವಿಲ್ಲ. ಇಂತೀ ತ್ರಿವಿಧ ಭೇದದ ಕೂಟವನರಿತು, ಸಂಗನ ಬಸವಣ್ಣನ ಆಟದಂತೆ ಬ್ರಹ್ಮೇಶ್ವರ ಲಿಂಗದಲ್ಲಿ ಕೂಟಸ್ಥನಾಗಬೇಕು.

೪೪. ಅರಿದೆ ಮರಿದೆನೆಂಬನ್ನಕ್ಕ ಭಕ್ತಿವಿಶ್ವಾಸಭಾವಿಯಲ್ಲ. ಇನ್ನರಿಯಲಿಲ್ಲ. ಮುಂದೆ ಒಂದು ಕುರುಹಿಲ್ಲ ಎಂಬನ್ನಕ್ಕ ಪರವಸ್ತು ಭಾನಿಯಲ್ಲ. ನಾನೆಂಬನ್ನಕ್ಕೆ ತಾನಿದ್ದ ಮುಂದೆ ಏನೂ ಇಲ್ಲವೆಂಬುದು ನಿಜವೆ? ತಾನೆಂಬುದಳಿದು ಮುಂದೆ ಏನೂ ಇಲ್ಲವೆಂಬುದು ನಿಜವಾಗಿ ಳಿದು ನಿರ್ಭಾವವಾದುದು, ಸಂಗನಬಸವಣ್ಣನ ಐಕ್ಯ. ಬ್ರಹ್ಮೇಶ್ವರ ಲಿಂಗದ ಕುರುಹು ನಾವು ನಷ್ಟ.

———

ಕಯ್ಯಲ್ಲಿಂದು ಅಮೃತಫಲವದೆ ನೋಡಾ ಎಂಬುದಕ್ಕರ್ಥ. ಭಕ್ತಿ ಕಾರಣದಿಂದ ಆ ಮಹಾಲಿಂಗವೇ ಇಷ್ಟಲಿಂಗವಾಗಿ ಶಿವಶರಣನ ಶರೀರಾದಿಂದ್ರಿಯಂಗಳನೆಲ್ಲವ ತಾನೇ ಭೋಗಿಸಲಾಗಿ ಆ ಶರೀರಾದಿಂದ್ರಿಯಂಗಳೆಲ್ಲವೂ ನಿತ್ಯ ಪದವಿಯ ಪಡೆದು ಮಹಾಲಿಂಗದ ಸೇವಕರುಗಳಾಗಿ ಇದ್ದುದೇ ಶಿವಶರಣನು ತನ್ನ ಜ್ಞಾನ ದೃಷ್ಟಿಯಲ್ಲಿ ಕಂಡು ಜೋಡ್ಯಂ ಬಡುತ್ತಿದ್ದನೆಂಬುದೀಗ, ಆ ಫಲವ ಮೆದ್ದವರೆಲ್ಲರೂ ಅಮರರಾದುದ ಕಂಡು ನಾನು ಬೆರಗಾದೆನು ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ ಎಂಬುದಕ್ಕರ್ಥ.

''ಭಾವ ಪ್ರಸಾದಂ ಕುರುತೆ ಪದಾರ್ಥಂ ಭೂಯಃ ಪ್ರಸಾದಂ ವಿನಿಯೋಗಕಾಲೆ। ಆದ್ಯಂತಯೋಗಪ್ರಮಿತ ಪ್ರಸಾದಂ ಮಧ್ಯಪದಾರ್ಥಂ ಕ್ಷಣಮಾತನೋತಿ ॥ ಎಂದು ಈ ಗ್ರಂಥದರ್ಥವನೆ ಪ್ರಕಟಿಸುತ್ತಿರ್ದಪಂ.

(೧೯) ಪ್ರಸಾದವನ್ನೂ ಪ್ರಸಾದಿಯನ್ನೂ ಪದಾರ್ಥದ ಭೇದವನ್ನೂ ಅರಿವುದರಿದು ನೋಡಾ. ಮುನ್ನಾದಿಯ ಪ್ರಸಾದವು ಅರ್ಪಣಕ್ಕೆ ಬಂದಲ್ಲಿ ಉಪಚಾರದಿಂದ ಪದಾರ್ಥವೆನಿಸಿತ್ತು. ಅರ್ಪಣದ ಮೇಲೆ ಪ್ರಸಾದವೆನಿಸಿತ್ತು. ಈ ಪ್ರಸಾದದಾದಿಕುಳಿವ ಬಲ್ಲಡೆ ಅತ ಪ್ರಸಾದಿ. ಆ ಪ್ರಸಾದವ ಬಿಟ್ಟು ಪ್ರಸಾದಿಯಿಲ್ಲ. ಈ ಪ್ರಸಾದಿಯೂ ಪ್ರಸಾದವೂ ಕೂಡಿ ಸೋಂಕದ ಪದಾರ್ಥವಿಲ್ಲ. ಇದು ಕಾರಣ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಪ್ರಸಾದಿಯ ಪ್ರಸಾದದಿಂದ ಮೂರು ಲೋಕವೆಲ್ಲ ಜೀವಿಸಿತ್ತಾಗಿ ಆ ಪ್ರಸಾದಿಗೆ ನಮೋ ನಮೋ ಎನುತಿರ್ದೆನು.

ಟೀಕು—ಪ್ರಸಾದವೆಂದೊಡೆ ಪರಬ್ರಹ್ಮವು. ಪ್ರಸಾದಿಯೆಂದಡೆ ಆ ಪರಬ್ರಹ್ಮವ ಧರಿಸಿದಂಥ ಚಿಚ್ಛಕ್ತಿಯೆನಿಪ ಶರಣನು. ಪದಾರ್ಥವೆಂದಡೆ ಆ ಚಿಚ್ಛಕ್ತಿಯ ಲೀಲಾಮಾತ್ರವಾದ ಪಂಚವಿಂಶತಿ ತತ್ವವೇ ರೂಪಾದಾತ್ಮನು. ಆ ತ್ರಿವಿಧ ಭೇದವನು ತನ್ನೊಳಗೆ ತಿಳಿದು ಮಾಡುವದು ದುರ್ಲಭವಾಗಿಪ್ಪುದೆಂಬುದೀಗ ಪ್ರಸಾದವನೂ ಪ್ರಸಾದಿಯನೂ ಪದಾರ್ಥದ ಭೇದವನೂ ಅರಿವುದರಿದು ನೋಡಾ ಎಂಬುದಕ್ಕರ್ಥ. ಇಂತಪ್ಪ ಭೇದವ ನರಿಯದೆ ಶಿವಶರಣನ ಚೈತನ್ಯವೇ ಆದಿ ಪ್ರಸಾದವಾದ ಕಾರಣ, ಆ ಪ್ರಸಾದವು ಬಾಹ್ಯಾಭ್ಯಂತರದೊಳಹೊರಗೆ ಬೆಳಗುತ್ತಿದ್ದರೂ ತನ್ನ

ಮುಖವ ನೋಡಿಹೆನೆಂಬ ಆಸ್ತಿಕ್ಯ ಬುದ್ಧಿಯುಳ್ಳವನಿಗೆ ಕನ್ನಡಿಯ ನೋಡಿದಲ್ಲದೆ ಕಾಣಬಾರದು ಎಂಬುದು ಹೇಗೋ ಹಾಗೆ ಆ ಶಿವಶರಣನು ಆದಿ ಪ್ರಸಾದವ ಮುಂದಿಟ್ಟುಕ್ಕೊಂಡು ಕಾಯದ ಕೈಮುಟ್ಟಿ ಕ್ರಿಯಾರ್ಪಣವ ಮಾಡುವೆನೆಂಬ ಕಾಲದಲ್ಲಿ ಆ ಪ್ರಸಾದವು ಪದಾರ್ಥವೆನಿಸಿತ್ತು. ಅದೆಂತೆಂದೊಡೆ— ಆ ಪದಾರ್ಥದೊಳಗೆ ಪ್ರಸಾದವು ಗೋಪ್ಯವಾಗಿದ್ದ ಕಾರಣ " ಚಿತ್ತಾವಲೋಕನೇ ಭುಕ್ತಃ ಪ್ರಸಾದಶ್ಚಿನಸಂಗಮಃ । ನಚಿತ್ತಾಲೋಕನೇಭುಕ್ತಃ ಕ್ರಿಮಿಕೀಟ ಸಮೋಭವೇತ್ " ಎಂದು ಜ್ಞಾನಾವಲೋಕನದಿಂದೆ ಆ ಪದಾರ್ಥದಲ್ಲಿಯ ಪ್ರಸಾದವು ಪ್ರಕಟವಾಗಿ ಮುಂಳಿ ಅರ್ಪಣದ ಮೇಲೆ ಪ್ರಸಾದವೆನಿಸಿತೆಂಬುದೀಗ, ಮುನ್ನಾದಿಯ ಪ್ರಸಾದವು ಅರ್ಪಣಕ್ಕೆ ಬಂದಲ್ಲಿ ಉಪಚಾರದಿಂದ ಪದಾರ್ಥವೆನಿಸಿತ್ತು. ಅರ್ಪಣದ ಮೇಲೆ ಪ್ರಸಾದವೆನಿಸಿತ್ತು ಎಂಬುದಕ್ಕರ್ಥ. ಆ ಆದಿ ಪ್ರಸಾದವನ್ನೂ ಜ್ಞಾನ ಕ್ರಿಯೆಗಳಿಂದಾಚರಿಸಿ ಜ್ಞಾನದೃಷ್ಟಿಯ ಮುಂದೆ ಸರ್ವತೋಮುಖವಾಗಿ ಪ್ರಕಾಶಿಸುವ ಪ್ರಸಾದವು ತಾನೇಯೆಂದು ತಿಳಿದ ಶಿವಶರಣನೇ ಆದಿ ಪ್ರಸಾದವಾಗಿ ಒಪ್ಪುತ್ತಿದ್ದ ಕಾರಣ, ಪ್ರಸಾದ ಪ್ರಸಾದಿಗಳು ಸೋಂಕದ ಪದಾರ್ಥವೇ ತದ್ರೂಪವಾಗಿ ಕಾಣುತ್ತಿರಲು ಅಂತಪ್ಪ ಆದಿ ಪ್ರಸಾದವನೇ ಸ್ವರ್ಗ ಮರ್ತ್ಯ ಪಾತಾಳದ ಜನರೆಲ್ಲರೂ ಸ್ವೀಕರಿಸಿ ಬದುಕುತ್ತಿರಲು, ಆ ಪ್ರಸಾದದ ಮಹಿಮೆಯನೆ ಕಂಡು ಶರಣನು ತನಗೆ ತಾನೇ ಶರಣೆನುತ್ತಿರ್ದನೆಂಬುದೀಗ ಈ ಪ್ರಸಾದದಾದಿಕುಳವಬಲ್ಲಡೆ ಆತ ಪ್ರಸಾದಿ. ಆ ಪ್ರಸಾದಿಯ ಬಿಟ್ಟು ಪ್ರಸಾದವಿಲ್ಲ. ಪ್ರಸಾದವೂ ಪ್ರಸಾದಿಯೂ ಕೂಡಿ ಸೋಂಕದ ಪದಾರ್ಥವಿಲ್ಲ. ಇದು ಕಾರಣ ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಪ್ರಸಾದಿಯ ಪ್ರಸಾದದಿಂದೆ ಮೂರು ಲೋಕವೆಲ್ಲ ಜೀವಿಸಿತ್ತಾಗಿ ಇಂತಪ್ಪ ಪ್ರಸಾದಿಗೆ ನಮೋ ನಮೋ ಎನುತಿರ್ದೆನು ಎಂಬುದಕ್ಕರ್ಥ.

ಆ ಪ್ರಸಾದಿಯ ಅನುಭಾವವು ಹೇಗೆ ಇದ್ದೀತೆಂದೊಡೆ ಹೇಳುತ್ತಿರ್ದಪಂ.

(೨೦) ಅನುಭಾವ ನೆಲೆಗೊಂಡಲ್ಲದೆ ಅಂಗಲಿಂಗದ ಹೊಲಬನರಿಯಬಾರದು. ಅನುಭಾವ ನೆಲೆಗೊಂಡಲ್ಲದೆ ಭಕ್ತಿವಿರಕ್ತಿ ನೆಲೆಗೊಳ್ಳದು. ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು.

ಅನುಭಾವ ನೆಲೆಗೊಂಡಲ್ಲದೆ ತಾನಿದಿರೆಂಬುದ ತಿಳಿದು ತಾನು ತಾನಾಗಬಾರದು, ಇದು ಕಾರಣ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮನು ಭಾವದಲ್ಲಿಪ್ಪವರ ನೀವೆಂದೆ ಕಾಂಬೆನು.

ಟೀಕು॥ ಉಭಯ ಕರ್ಮಂಗಳು ಸಮವಾಗಿ ಉಭಯ ಕರ್ಮಂಗಳು ಪಾಕವಿಲ್ಲದೆ ಇದ್ದರೆ ಪರಮೇಶ್ವರ ಜ್ಞಾನ ಶಕ್ತಿ ವಿರುದ್ಧಮಾಗಿ, ತಿರೋಧಾನ ಶಕ್ತಿಯೆನಿಸಿ ಭೋಗವನು ಕೊಡುವದು. ಅಂಥ ಭೋಗಂಗಳಿಂದೆ ಪ್ರತಿಕಲ್ಪಂಗಳಲ್ಲಿಯೂ ಆತ್ಮನು ತೊಳತೊಳಲಿ ಬರುತ್ತಿರಲು, ಒಂದಾನೊಂದು ಕಾಲದಲ್ಲಿ ಭೋಗ್ಯವಾದ ಸಮಸ್ತ ಕರ್ಮವು ಪರಿಪಕ್ವವಾಗಿ ಅವರೊಳು ಉಭಯ ಕರ್ಮ ಸಾಮ್ಯವಾದೊಡೆ ಆತ್ಮಂಗೆ ಜಗದ್ಬಂಧುವಾದ ಶಿವನು ತನ್ನ ಜ್ಞಾನ ಶಕ್ತಿಯನ್ನು ಪರಾಭಿಮುಖವಾಗಿ ಪ್ರಸಾದವನು ಕರ್ಮ ಸಾಮ್ಯವೇ ಭಕ್ತಿ ಪಾತಕ್ಕೆ ಕಾರಣವಲ್ಲ. ಅದೇಕೆಂದೊಡೆ "ಬುದ್ಧಿಃ ಕರ್ಮಾನುಸಾರಿಣೀ" ಎಂದು ಆ ಕರ್ಮವು ಬುದ್ಧಿಯಲ್ಲಿರುವುದು. ಆ ಬುದ್ಧಿ ಮಾಯಾಧೀನವಾಗಿರಲು, ಆ ಮಾಯೆಯಲ್ಲಿ ಮಲತ್ರಯಂಗಳಿರುವವು. ಆ ಮಲತ್ರಯಂಗಳ ಪರಿಪಾಕವು ಶಕ್ತಿಪಾತಕ್ಕೆ ಕಾರಣಮಪ್ಪುದು. ಅಂತದರಿಂ ವಿಮಲಶಕ್ತಿಯ ಅಧಿಕಾರ ನಿವೃತ್ತಿಯಿಂದ ಆ ಮಲಶಕ್ತಿ ತೊಲಗುವಲ್ಲಿ ಜಗದ್ಬಂಧುವಾದ ಶಿವನು ಆತ್ಮಂಗೆ ಜ್ಞಾನ ಕ್ರಿಯಾ ಶಕ್ತಿಗಳ ಅನಂತತೆಯನು ಪ್ರಕಟವ ಮಾಡುತ್ತಿಹನು. ಇಂತು ಶಕ್ತಿಪಾತೋದಯವಾದಾತಂಗೆ ಆ ಜ್ಞಾನಪಾತದತ್ತಣಿಂದ ಆತ್ಮಾನಾತ್ಮ ವಿವೇಕವು ಆಕಸ್ಮಿಕವಾಗಿ ಪುಟ್ಟುವುದು. ಪಿಂಡ ಜ್ಞಾನಿಗಳಾದ ಕೆಲ ಆತ್ಮರುಗಳಿಗೆ ಪುನರಾವೃತ್ತಿ ಇಲ್ಲದಿರಲೋಸ್ಕರವಾಗಿ ಶಿವಭಕ್ತಿ ಪಾತವಾಯಿತು. ಆವರುಗಳಿಗೆ ಮುಕ್ತಿಯೆಲ್ಲಿಯದು? ಲವಲವಿಕೆಯಾದ ಸಂಸಾರದಲ್ಲಿಯ ಹೇಯವೂ ಶಿವಭಕ್ತರಲ್ಲಿಯ ಶಿವನಲ್ಲಿಯ ಶಿವಾಗಮಂಗಳಲ್ಲಿಯ ಭಕ್ತಿ ವಿಶ್ವಾಸವೂ ಪುಟ್ಟುವವು. ಈ ಗುಣಂಗಳಾದಿಯಾಗಿ ಜ್ಞಾನಕ್ರಿಯಾ ಭೇದವಾದ ಅನಂತ ವಿಚಾರವು ಅವನಾನೊಬ್ಬನ ಹೃದಯದೊಳಗೆ ಶಿವಭಕ್ತಿ ಪಾಶವಿನ್ನುವು ಆ ಪೇಳಿಗೆ ಹೊಳೆವುದು. ಆ ಹೊಳಹಿನಾಕ್ಷಣದಲ್ಲಿಯೇ ಆತನ ಮನವು ಆ ಹೊಳಹಿನೊಳಗಳಿದು ಆವ ಲಕ್ಷಣದೊಳಗೆ ನಿಲುವುದು ಆ ಲಕ್ಷಣವೇ ಅಂಗವೆನಿಸುವುದು. ಆ ಅಂಗದಲ್ಲಿ ಕನಕಕಾಂತಿಯಂತೆ ಲಿಂಗವು ಪೆರೆಹಿಂಗದೆ ಇದ್ದೀತೆಂಬುದೀಗ ಅನುಭಾವ ನೆಲೆಗೊಂಡಲ್ಲದೆ ಅಂಗ ಲಿಂಗದ ಹೊಲಬನರಿಯಬಾರದು ಎಂಬುದಕ್ಕರ್ಥ.

ಆ ವಿವೇಕವೇ ಪಂಚೇಂದ್ರಿಯಂಗಳ ಪ್ರಪಂಚವನಳಿದು ಪಂಚಾಚಾರದಲ್ಲಿ ಪರಿಪೂರ್ಣವಾಗಿ ಅಷ್ಟಾವರಣದಲ್ಲಿ ದೃಷ್ಟಿಯಾಗಿಪ್ಪುದೀಗ ಭಕ್ತಿ ಮಾಯಾಜನಿತದ ಸಮಸ್ತ ಪದಾರ್ಥದ ಮೇಲಣ ಹೇಯೋಪಾದೇಯಗಳಲ್ಲದೆ ಉದಾಸೀನವಾಗಿಪ್ಪುದೀಗ "ವಿರಕ್ತಿರ್ವ್ಯಾಲುಂಪೆದ್ವ್ಯಂಜನೆದ್ವೆ" ಎಂದುದಾಗಿ ಜ್ಞಾತೃಜ್ಞೇಯ ರೂಪಂಗಳಾದ ಸಕಾರ ಹಕಾರವೆಂಬ ವ್ಯಂಜನಾಕ್ಷರಂಗಳ ಲೋಪದಿಂದುಳಿದ ಸರ್ವಚೈತನ್ಯಾಂತರ್ಯಾಮಿಯಾದ ಪ್ರಣವ ಬೀಜದಲ್ಲಿ ಗುರು ಕಾರುಣ್ಯದ ದೃಷ್ಟಿ ಯಾವುದುಂಟು ಅದೀಗ ಜ್ಞಾನ. ಅಂಥ ಗುರು ಕಾರುಣ್ಯದ ದೃಷ್ಟಿಯಲ್ಲಿ ಮನೋಲಯವಹುದು ಅದೀಗ ಸುಜ್ಞಾನ. ದೃಗ್ದೃಶ್ಯದಿಂದಿದಿರಿಟ್ಟು ಆ ದೃಗ್ದೃಶ್ಯಂಗಳನು ತಿಳಿದು ಚಿದಾಕಾಶ ಮಧ್ಯದಲ್ಲಿ ತಾನು ತಾಗಿರುವುದು ಪೂರ್ವೋಕ್ತ ವಿವೇಕ ಜಿತವಾದಲ್ಲದಾಗದಾಗಿ ಅದೀಗ ಅನುಭಾವ ನೆಲೆಗೊಂಡಲ್ಲದೆ ಭಕ್ತಿ ವಿರಕ್ತಿ ನೆಲೆಗೊಳ್ಳದು. ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು. ಅನುಭಾವ ನೆಲೆಗೊಂಡಲ್ಲದೆ ತಾನು ತಾನಾಗಬಾರದು ಎಂಬುದಕ್ಕರ್ಥ. ಹಿಂದೆ ಹೇಳಿದ ರಮಣೀಯ ಗುಣಂಗಳು ಊರ್ಧ್ವ ಹೃದಯವೆಂಬ ಬಿಂದು ದ್ವಾರದಲ್ಲಿ ಹುಟ್ಟ ಕಾಯಗುಣ ಕಮಲಗಳಿಗೆ ಮತ್ತ ಕುಂಜರವೆನಿಸಿ ಆ ದ್ವಾರದಲ್ಲಿಯೇ ನಿವೃತ್ತಿ ಜ್ಞಾನವಳಿದು ಸರ್ವತೋಮುಖ ತಾನೆಯಾಗಿ ನಿಂದ ಶಿವಯೋಗಿ ಶಿವನೆಂಬುದೀಗ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮನುಭಾವದಲ್ಲಿಪ್ಪವರನು ನೀವೆಂದು ಕಾಂಬೆನು ಎಂಬುದಕ್ಕರ್ಥ.

"ಅಕಾರೊ ಲಿಂಗಮೇವೋಕ್ತಂ ನುಕಾರೊ ಜೀವ ಉಚ್ಯತೆ। ಭಾವ ಸ್ಯಂಯೋಗ ಏವೋಕ್ತೊ ಅನುಭಾವೊ ನಿಗದ್ಯತೆ" ಎಂದು ಈ ಗ್ರಂಥಾರ್ಥವನೆ ಮುಂದೆ ಪೇಳುತ್ತಿದ್ದಾನು.

(೨೧) ಅನುಭಾವವನುಡಿವ ಅಣ್ಣಗಳಿರಾ ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ. ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂದು ತಾನಿದಿರೆಂಬುದ ತೋರದು. ಅನುಭಾವವೆಂಬುದು ನಿಜ ನಿವಾಸದಲ್ಲಿರಿಸುವುದು. ಇಂತಪ್ಪ ಅನುಭಾವದನುವನರಿಯದೆ ಶಾಸ್ತ್ರ ಜಾಲದ ಪಸರವ ನಿಕ್ಕಿ ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ ನೀವೆತ್ತ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣಾ.

ಟೀಕು—ವಿವೇಕದಿಂದ ಪರಬ್ರಹ್ಮದ ಮಾತನುಡಿವವರಿಗೆ ಆ ಪರಬ್ರಹ್ಮವು ಸಾಕ್ಷಿಯಾಗಿಪ್ಪುದಲ್ಲದೆ ಅವರೊಳಗೆ ಬೆರೆದು ನಿಜಮೋಕ್ಷವ

ಕೊಡಲರಿಯದು. ಅದೆಂತೆಂದೊಡೆ:—ಅವರು ಪ್ರಾರಬ್ಧ ಕರ್ಮದ ಎಂಜಲ ಮಾತನೆ ಕಲಿತು ಅಂಜದೆ ಮಾತಿನ ಬಣಬೆಯ ಮುಂದಿಟ್ಟುಕೊಂಡು ನೀತಿಶಾಸ್ತ್ರದ ಒಂದೊಂದು ಗ್ರಂಥಂಗಳನೆ ನುಡಿದು ಇಲ್ಲದರಿವನುಂಟು ಮಾಡಿಕೊಂಡು ನುಡಿವವರಲ್ಲದೆ ತಮ್ಮ ನಿಜನ ತಿಳಿದು ಪರಿಣಾಮಿಸಲರಿಯದ ಕಾರಣ ಅವರಿಗೆ ಪರಬ್ರಹ್ಮವು ಬೇರಾಗಿದ್ದೀತೆಂಬುದೀಗ ಅನುಭಾವವ ನುಡಿವ ಅಣ್ಣಗಳಿರಾ, ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ ಎಂಬುದಕ್ಕರ್ಥ. ವಿವೇಕವೆಂಬುದು ಆತ್ಮಜ್ಞಾನ. ಅದು ಹೇಗೆಂದೊಡೆ: "ಅಶರೀರಂ ಯಥಾತ್ಮಾನಂ ಪಶ್ಯಂತಿ ಜ್ಞಾನಚಕ್ಷುಷಾ। ತಥಾಭವತಿಶಾಂತಾತ್ಮಾ ಸರ್ವತೋಭಿಗತಃ ಸ್ಮೃತಃ" ಎಂದು ಆವುದಾನೊಂದು ವೇಳೆಯಲ್ಲಿ ಜ್ಞಾನಚಕ್ಷುವಿನಿಂದ ತನ್ನನು ಶರೀರವಿಲ್ಲದಾತನಾಗಿ ಕಾಣುತ್ತಿಹನು, ಆ ವೇಳೆಯಲ್ಲಿ ಪ್ರಸನ್ನಾತ್ಮನಾದಂಥಾತನು ಎಲ್ಲಾ ಕಡೆಯಲ್ಲಿಯೂ ಸೋಗಲ್ಪಟ್ಟ ಆಸೆಗಳನುಳ್ಳಂಥಾತನಾಗುತ್ತಿಹನೆಂಬುದೀಗ ಅನುಭಾವವೆಂಬುದು ಆತ್ಮ ವಿದ್ಯೆ ಎಂಬುದಕ್ಕರ್ಥ. ಅಂತಪ್ಪ ಜ್ಞಾನಚಕ್ಷು ಆವಾತಂಗುಂಟು ಅಂಥಾತಂಗೆ ಶರೀರವಿದಿರಿಟ್ಟು ಇಹುದೆಂಬುದೀಗ ಅನುಭಾವವೆಂಬುದು ತಾನಿದಿರೆಂಬುದ ತೋರದು ಎಂಬುದಕ್ಕರ್ಥ. ಅಂಥ ಸೋಹಂ ಎಂಬ ಜ್ಞಾನ ಚಕ್ಷುವಿನ ಮುಂದಿದಿರಿಟ್ಟು ಆ ಶರೀರವನು ಆ ಜ್ಞಾನಚಕ್ಷುವಿನಲ್ಲಿ ಲೀನವಾಡಿ ತಾನು ಅತೀಂದ್ರಿಯದಲ್ಲಿ ಲಯವಾಗಲು ಎಂಬುದೀಗ ಅನುಭಾವವೆಂಬುದು ನಿಜ ನಿವಾಸದಲ್ಲಿರಿಸುವುದು ಎಂಬುದಕ್ಕರ್ಥ. ಅಂಥ ಅತೀಂದ್ರಿಯದ ಪ್ರತ್ಯಕ್ಷವನರಿಯದೆ ಸಂಸ್ಕೃತಪ್ರಾಕೃತ ತತ್ವ ಶಾಸ್ತ್ರಂಗಳ ಮಾತನೆ ಕಲಿತು ಪಠಿಸಿ ಅರಿಯದವರ ಗೆಲಬೇಕೆಂದು ಇವರು ವಾದವನೆ ಮಾಡಿ ಹೊತ್ತಿನ ಹೊರಟೆಯಂತೆ ವೃಥಾ ಅದರೆಂಬುದೀಗ ಇಂತಪ್ಪ ಅನುಭಾವದನುವನರಿಯದೆ ಶಾಸ್ತ್ರಜಾಲದ ಪಸರವನಿಕ್ಕಿಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ ನೀವೆತ್ತ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣಾ ಎಂಬುದಕ್ಕರ್ಥ.

ಜಯಯಿಂ ಶ್ರೀಗುರುಸಿದ್ಧಲಿಂಗಯತಿವರ್ಯಂಸಾಧಕರ್ಗೈದೆ ಸಂ।
ಶಯವೆಲ್ಲಂ ಪರಿವಂತಿರೊಲ್ದೊರೆದ ವಾಕ್ಯಾನೀಕದೋಳ್ನಿರ್ಮಲಾ॥
ಶಯರಾನಂದಿಸಲಾಯ್ತು ಟೀಕಿಸುತದಂ ಮುಕ್ತ್ಯಂಗನಾಕಂಠವಾ।
ಲಯದೆಂಬಾ ಪೆಸರಂ—ತೋರ್ಪಡಿಸಿದಂ ಶ್ರೀಜಿನ್ನದೇವಾಹ್ವಯಂ॥

ಜ್ಯೋತಿರ್ಮಯಶಾಂಭವೀಜ್ಞಾನ ದೀಕ್ಷಾಬೋಧೆ.

(೧) ವೀರಶೈವವೆಂಬುದು ಒಂದು ಅರಣ್ಯ ಮಧ್ಯದಲ್ಲಿ ಒಬ್ಬ ಪರ್ಣ ಭಕ್ಷಕನು ಹೇಳಿದುದು ಅಲ್ಲ; ಒಬ್ಬ ಮಾಂಸ ಭಕ್ಷಕನು ಕೇಳಿದುದು ಅಲ್ಲ. ವೀರಶೈವವೆಂಬುದು ಒಂದು ವನದಲ್ಲಿರ್ದ ವಾಯು ಭಕ್ಷಕನು ಹೇಳಿದುದೂ ಅಲ್ಲ; ಒಬ್ಬ ಸುರಾಪಾನ ಮಾಡುವವನು ಕೇಳಿದುದೂ ಅಲ್ಲ. ವೀರಶೈವವೆಂಬುದು ಒಂದು ಪರ್ವತದಲ್ಲಿ ಒಬ್ಬ ದೇಹಿ ಹೇಳುದುದು ಅಲ್ಲ; ಒಬ್ಬ ದೇಹಧಾರಕನು ಕೇಳಿದುದೂ ಅಲ್ಲ. ವೀರಶೈವವೆಂಬುದು ಅನಂತಕೋಟಿ ವೇದ ಶಾಸ್ತ್ರ ಪುರಾಣಾಗಮ ಮಂತ್ರಾರ್ಥ ಸಾರಸುಧಾರಸವು. ಪರಮಶಿವ ಪರಮಾರ್ಥ ಪರತತ್ವ ಪರಮಾತ್ಮ ಪರಬ್ರಹ್ಮ ಪರಮಲಿಂಗ ಪರಾಪರ ವಸ್ತುವಾದ ಪರಮೇಶ್ವರನು. ಈ ವೇದಾರ್ಥಸಾರಸುಧಾರಸವನು ಸೂಕ್ಷ್ಮವಾಗಿ ಸಂಗ್ರಹಿಸಿ, ಹನ್ನೆರಡು ಕೋಟಿ ಹನ್ನೆರಡು ಲಕ್ಷ ಹನ್ನೆರಡು ಸಾವಿರ ಪರಮ ರಹಸ್ಯವ ಮಾಡಿ, ಶಂಭು ಮೂರ್ತಿ ಶಾಂಭವಿಗೆ ಉಪದೇಶವಿತ್ತ ತಾವು ಎಲ್ಲಿ ಎಂದರೆ ಪರಮಚಿದಬ್ಧಿ ಎಂಬ ಸಮುದ್ರ ಮಧ್ಯದಲ್ಲಿ ಜ್ಯೋತಿರ್ಮಯವಡಬಾನಲ ಮಂಟಪದಲ್ಲಿ ಒಂದು ನಿರುಪಮ ದಿವ್ಯ ಮಾಡಿಕ್ಯಸಿಂಹಾಸನ, ಆ ಸಿಂಹಾಸನ ಮಧ್ಯದಲ್ಲಿ ಅನಂತ ಕೋಟಿ ವೇದಂಗಳಿಗೆ ತಾಯಿಯಾದ ಗಾಯತ್ರೀ ಮಂತ್ರವ ಹಾಸಿಗೆಯ ಮಾಡಿ, ಚಿತ್ಪ್ರಣವವ ಪಾದದ ಕಡೆಗೆ ಶುದ್ಧ ಪ್ರಣವವ ಮಸ್ತಕದ ಕಡೆ ಮಾಡಿ, ಆ ಮಧ್ಯದಲಿ ಪರಶಿವನು ಶಂಭುವಿಗೆ ನಿರಂಜನಪ್ರಣವ ಯುಕ್ತವಾಗಿ ಉಪದೇಶಿಸಿದ ಪರಮರಹಸ್ಯ. ಈ ರಹಸ್ಯವನು ಪರಮಪರಾಪರ ಪರಮಾರ್ಥ ಪರಮಾತ್ಮ ಪರಬ್ರಹ್ಮ ಪರಶಿವ ಮೂರ್ತಿಯಾದ ಅಲ್ಲಮಪ್ರಭುದೇವರು ಕಲ್ಯಾಣ ಪಟ್ಟಣದಲ್ಲಿ ಬಸವಾದಿ ಪ್ರಮಥ ಗಣಂಗಳಿಗೆ ಎರಡೆಂಬತ್ತು ಕೋಟಿ ಪೆಡಗಿನ ವಚನಂಗಳಿಂದೆ ಉಪದೇಶವ ಮಾಡಿದರು. ಆ ಪರಮ ರಹಸ್ಯಾರ್ಥವನು ಪಾಲ್ಕುರಿಕೆ ಸೋಮೇಶ್ವರನು ಸಂಗಯ್ಯನೆಂಬ ಶರಣನಿಗೆ ನೂರರುವತ್ತು ವಚನವ ಉಪದೇಶಿಸಿದನು ಗುಹೇಶ್ವರಾ.

ಸರ್ವಶೂನ್ಯನಿರಾಲಂಬ ಸ್ಥಲ

(೨) ಆದಿಮಧ್ಯಾಂತವಿಲ್ಲದ, ನಾದಬಿಂದು ಕಳೆಗಳಿಲ್ಲದ, ಸಾವಯವ ನಿರವಯವವಿಲ್ಲದ, ರೂಪು ನಿರೂಪವಿಲ್ಲದ, ನಾಮ ನಿರ್ನಾಮವಿಲ್ಲದ, ಸೀಮೆ ನಿಸ್ಸೀಮೆಯಿಲ್ಲದ, ಕಾಣುವದಕ್ಕೆ ಕೇಳುವದಕ್ಕೆ ಇಲ್ಲದ, ನಿನ್ನ ನೀನರಿಯದೆ ನೀನೇ ನೀನಾಗಿರ್ದಲ್ಲಿ ನಿನ್ನ ಕೋಟ್ಯಂಶದಲ್ಲಿ ನಿರಂಜನ ಕಳೆ ಹುಟ್ಟಿತು. ಆ ನಿರಂಜನ ಕಳೆಗೆ ನಾದಬಿಂದು ಕಳೆಗಳಿಲ್ಲದೆ ಆದಿ ಮಧ್ಯಾಂತವಾದ ಅಂಗವಿಲ್ಲದ ಕಳೆ, ಆ ಕಳೆಯೇ ನಾನು, ಆ ವಸ್ತುವೇ ನೀನು, ಆ ನಿರಂಜನ ಕಳೆಯೇ ಅಂಗವಾಗಿ ಆ ವಸ್ತುವೇ ಲಿಂಗವಾಗಿ ಕೂಡಲಿಕ್ಕೆ ಕಾಷ್ಠದಲ್ಲಿ ಅಗ್ನಿ ಇದ್ದ ಹಾಗೆ ನಿರಂಜನ ಪ್ರಣವ ಒಂದು ಮಹಾಶೂನ್ಯಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ.

(೩) ನೀವು ನಿಮ್ಮ ಸ್ವಲೀಲೆಯಿಂದ ನಿರಂಜನಪ್ರಣವದ ಕೋಟ್ಯಂಶದಲ್ಲಿ ಶೂನ್ಯಲಿಂಗವಾದಲ್ಲಿ ಆದಿಮಧ್ಯಾಂತಂಗಳಿಲ್ಲದ. ನಾದಬಿಂದು ಕಳೆಗಳಿಲ್ಲವ, ಸಾವಯವ ನಿರವಯವ ನಾಮ ನಿರ್ನಾಮಂಗಳಿಲ್ಲದ, ರೂಪು ನಿರೂಪು ಸೀಮೆ ನಿಸ್ಸೀಮೆಗಳಿಲ್ಲದ, ಕಾಣುವದಕ್ಕೆ ಕೇಳುವದಕ್ಕೆ ಇಲ್ಲದ ನಿನ್ನ ನೀನರಿಯದೆ, ನೀನೇ ನೀನಾಗಿರ್ದ ಕೋಟ್ಯಂಶದಲ್ಲಿ ಪರಮ ಚಿತ್ಕಳೆ ಹುಟ್ಟಿತು. ಆ ಪರಮ ಚಿತ್ಕಳೆಗೆ ನಾದಬಿಂದು ಕಳೆಗಳಿಲ್ಲದ ಆದಿ ಮಧ್ಯ ಅಂತ್ಯವಾದ ಅಂಗವಿಲ್ಲದ ಕಳೆ. ಆ ಕಳೆಯೇ ನಾನು, ಆ ವಸ್ತುವೇ ನೀನು. ಆ ಪರಮ ಚಿತ್ಕಳೆಯೆ ಅಂಗವಾಗಿ ಆ ಶೂನ್ಯ ವಸ್ತುವೇ ಲಿಂಗವಾಗಿ ಕೂಡಲಿಕ್ಕೆ ರನ್ನವು ರನ್ನದ ಕಾಂತಿ ಇದ್ದ ಹಾಂಗೆ ಪ್ರಣಮವೆಂದು ಸ್ವಯಂಭುಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ.

(೪) ನೀವು ನಿಮ್ಮ ಸ್ವಲೀಲೆಯಿಂದ. ಶುದ್ಧಪ್ರಣವದಕೋಟ್ಯಂಶದಲ್ಲಿ ನಿಷ್ಕಳ ಲಿಂಗವಾದಲ್ಲಿ ಆದಿಮಧ್ಯಾಂತಂಗಳಿಲ್ಲವ, ನಾದಬಿಂದುಕಳೆಗಳಿಲ್ಲವ, ಸಾವಯವ, ನಿರವಯವ, ಭಾವ, ಪದ್ಧಾವ, ನಿರ್ಭಾವವಿಲ್ಲದ, ರೂಪು ನೀರೂಪು ನಿಷ್ಕಾಮ ನಿರ್ನಾಮ ನಿರ್ನಾಯವಿಲ್ಲದ ಕಾರಣ ಅರಿವು ಮರವೆಯಿಲ್ಲವ, ಮನೋಜ್ಞಾನಾವಮದಗಳಿಲ್ಲದ ಜ್ಞಾತೃಜ್ಞಾನ ಜ್ಞೇಯ ಅಜ್ಞಾನ ಸುಜ್ಞಾನಂಗಳಿಲ್ಲದ, ದ್ವೈತಾದ್ವೈತವಿಲ್ಲದ, ನಿನ್ನ ನೀನರಿಯದೆ ನೀನೇ ನೀನಾಗಿರ್ದ ಕೋಟ್ಯಂಶದಲ್ಲಿ ಸಚ್ಚಿದಾನಂದಕಳೆ ಹುಟ್ಟಿತು. ಆ

ಸಚ್ಚಿದಾನಂದಕಳೆಗೆ ನಾದಬಿಂದುಕಳೆಗಳಲ್ಲದ ಆದಿಮಧ್ಯ ಅಂತ್ಯವಾದ ಅಂಗವಿಲ್ಲದ ಕಳೆ. ಆ ಕಳೆಯೇ ನಾನು ಆ ವಸ್ತುವೇ ನೀನು. ಆ ಕಳೆಯೇ ಅಂಗವಾಗಿ ಆ ವಸ್ತುವೇ ಲಿಂಗವಾಗಿ ಕೂಡಲು, ಮುಂಜಿನ ಶೈತ್ಯದ ಹಾಗೆ ಚಿತ್ಪ್ರಣವವೆಂದು ಆದಿಮಹಾಲಿಂಗನೆಂದು ಹೇಳಲ್ಪಟ್ಟಿತು ಗುಹೇಶ್ವರಾ.

(೫) ನೀವು ನಿಮ್ಮ ಸ್ವಲೀಲೆಯಿಂದ ಚಿತ್ಪ್ರಣವದ ಕೋಟ್ಯಂಶದಲ್ಲಿ ನಿಷ್ಕಳಶಿವನಾದಲ್ಲಿ ಘೃತಕಾರಿಣ್ಯನ್ಯಾಯದ ಹಾಗ ಸಮಸ್ತ ಮೂರ್ತಿಗಳ ಸಮಸ್ತ ಶಕ್ತಿಗಳ, ಸಮಸ್ತ ಬಹ್ಮಾಂಡಗಳ ಉತ್ಪತ್ತಿ ಸ್ಥಿತಿಲಯಗಳು ನಂಗಳ ತನ್ನಲ್ಲಿಯೇ ಮಾಡಿ ತಾನೇ ಆಶ್ರಯವಾಗಿ ತಾನೇ ನೋಡಿ ಸಂತೋಷಿಸಿ, ತನ್ನ ಹೊರಗೆ ಕಾಣಿಸದೆ ಅನಂತಕೋಟಿ ಸೂರ್ಯ ಚಂದ್ರಾಗ್ನಿ ಕಳೆಗಳಂ ಮೀರಿ ಅನುಪಮ ಚಿದ್ರೂಪ ಸ್ವರೂಪವಾದ ನಿಷ್ಕಳ ಶಿವನ ಕೋಟ್ಯಂಶದಲ್ಲಿ ಪರಮಕಳೆ ಹುಟ್ಟಿತ್ತು. ಆ ಪರಮ ಕಳೆ ನಾದಬಿಂದುಕಳಾಸ್ವರೂಪವಾಗಿ ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾರವಾಗಿ ಸಮಸ್ತ ಮೂರ್ತಿಗಳೊಡನೆ ಸಮಸ್ತ ಶಕ್ತಿಗಳೊಡನೆ ಸಮಸ್ತ ತತ್ವಂಗಳೊಡನೆ ಸಮಸ್ತ ಬ್ರಹ್ಮಾಂಡಗಳೊಡನೆ ಹುಟ್ಟಿದ ಆ ಪರಮಕಳೆಯೇ ನಾನು, ಆ ವಸ್ತುವೇ ನೀನು, ಆ ಪರಮಕಳೆಯೇ ಅಂಗವಾಗಿ ಆ ವಸ್ತುವೇ ಲಿಂಗವಾಗಿ ಕೂಡಲು, ಕ್ಷೀರದೊಳಗಣ ಘೃತದ ಹಾಗೆ ಸಮಸ್ತಭಕ್ತಹಿತಾರ್ಥವಾಗಿ ಸಾಕಾರವೆನಿಸಿ, ಓಂಕಾರಪ್ರಣವ ವೆಂದು ಮಹಾಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ. ಇದು ಸರ್ವ ಶೂನ್ಯನಿರಾಲಂಬಸೃಷ್ಟಿ.

(೬) ಆ ಅಖಂಡಪರಿಪೂರ್ಣ ತೇಜೋಮಯಗೋಳಕಾಕಾರ ಮಹಾಲಿಂಗದಲ್ಲಿ ವಾಚ್ಯಸೃಷ್ಟಿ, ಅವಾಚ್ಯಸೃಷ್ಟಿಯೆಂದು ಎರಡು ಪ್ರಕಾರವಾಯಿತು. ಆ ಎರಡರಲ್ಲಿ ವಾಚ್ಯಸೃಷ್ಟಿ ಹೇಗೆಂದೊಡೆ;— ಆ ಮಹಾಲಿಂಗದಲ್ಲಿ ಈಶ್ವರ, ಮಹೇಶ್ವರ, ಸದಾಶಿವರೆಂದು ತ್ರಿಮೂರ್ತಿಗಳು ಹುಟ್ಟಿ ಸಕಲ, ನಿಷ್ಕಲ, ಕೇವಲನಿಷ್ಕಲರೆನಿಸಿ, ಸಕಲ ಮೂರ್ತಿಗಳ ಸಕಲ ಶಕ್ತಿಗಳ ಸಕಲ ತತ್ವಂಗಳ ಸಕಲ ಚಿದ್ಬ್ರಹ್ಮಾಂಡಂಗಳ ಹುಟ್ಟಿಸಿ, ತಮ್ಮಲ್ಲಿಯೇ ವಿನೋದಿಸುವರು ಗುಹೇಶ್ವರಾ. ಇದು ಶೂನ್ಯ ನಿರಾಲಂಬ ಸೃಷ್ಟಿ.

(೭) ಅಖಂಡಪರಿಪೂರ್ಣ ತೇಜೋಮಯ ಗೋಳಕಾಕಾರಮೂರ್ತಿಯಾದ ಮಹಾಲಿಂಗವು ವಿಶ್ವತೋಮುಖ, ವಿಶ್ವತೋ ನೇತ್ರ, ವಿಶ್ವತೋ ಬಾಹು, ವಿಶ್ವತಃ ಪಾದ ಸರ್ವಪರಿಪೂರ್ಣಸರ್ವಜ್ಞ ಮೂರ್ತಿಯಾಗಿರುವುದು. ವಟಬೀಜನ್ಯಾಯದಂತಿರ್ದ ಆ ಮಹಾಲಿಂಗದ ಸಹಸ್ರಾಂಶದಲ್ಲಿ ಚಿಚ್ಛಕ್ತಿ ಹುಟ್ಟಿತು. ಆ ಚಿಚ್ಛಕ್ತಿಯ ಸಹಸ್ರಾಂಶದಲ್ಲಿ ಪರಮೇಶ್ವರ ಹುಟ್ಟಿದನು. ಆ ಪರಮೇಶ್ವರನಿಗೆ ಏಕಮುಖ, ತ್ರಿನೇತ್ರ, ದ್ವಿಹಸ್ತ, ದ್ವಿಪಾದ, ತನುವೇಕವು. ಆನಂದಮಯನಾಗಿ ಕಳೆಗಳನ್ನೆಲ್ಲಾ ಮೀರಿ ಜ್ಞಾನಗಮ್ಯನಾಗಿರ್ದ ಆ ಪರಮೇಶ್ವರನ ಸಹಸ್ರಾಂಶದಲ್ಲಿ ಪರಾಶಕ್ತಿ ಹುಟ್ಟಿತು. ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಸದಾಶಿವಮೂರ್ತಿ ಹುಟ್ಟಿದನು. ಆ ಸದಾಶಿವನಿಗೆ, ದ್ವಿಮುಖ, ಷಣ್ನೇತ್ರ, ನಾಲ್ಕುಹಸ್ತ, ದ್ವಿಪಾದ, ಸುವರ್ಣವರ್ಣದೇಹವು ಮನೋಗಮ್ಯಮೂರ್ತಿಯಾಗಿರ್ದ ಆ ಸದಾಶಿವನ ಸಹಸ್ರಾಂಶದಲ್ಲಿ ಆದಿಶಕ್ತಿಹುಟ್ಟಿತು. ಆ ಆದಿಶಕ್ತಿಯ ಸಹಸ್ರಾಂಶದಲ್ಲಿ ಈಶ್ವರನು ಹುಟ್ಟಿದನು. ಆ ಈಶ್ವರನಿಗೆ, ತ್ರಿಮುಖ, ನವನೇತ್ರ, ಷಟ್‌ಹಸ್ತ, ದ್ವಿವಾದ, ಧವಳವರ್ಣ ಶರೀರವು. ಅಹಂಕಾರಗಮ್ಯಮೂರ್ತಿಯಾಗಿರ್ದ ಆ ಈಶ್ವರನ ಸಹಸ್ರಾಂಶದಲ್ಲಿ ಇಚ್ಛಾಶಕ್ತಿ ಹುಟ್ಟಿತು. ಆ ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಮಹೇಶ್ವರ ಹುಟ್ಟಿದನು. ಆ ಮಹೇಶ್ವರನಿಗೆ, ಚತುರ್ಮುಖ, ದ್ವಾದಶನೇತ್ರ, ಎಂಟು ಹಸ್ತ, ದ್ವಿಪಾದ, ಸ್ಫಟಿಕವರ್ಣ ಶರೀರವು. ಬುದ್ಧಿಗಮ್ಯನಾಗಿರ್ದ ಆ ಮಹೇಶ್ವರನ ಸಹಸ್ರಾಂಶದಲ್ಲಿ ಜ್ಞಾನಶಕ್ತಿ ಹುಟ್ಟಿತು. ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಶ್ರೀರುದ್ರಮೂರ್ತಿ ಹುಟ್ಟಿದನು. ಆ ಶ್ರೀರುದ್ರಮೂರ್ತಿಗೆ, ಪಂಚಮುಖ, ದಶಭುಜ, ಪಂಚನಶನೇತ್ರ, ದ್ವಿಪಾದ, ಕುಂಕುಮ ವರ್ಣದ ಶರೀರವು. ಚಿತ್ತಗಮ್ಯಮೂರ್ತಿಯಾಗಿರ್ದ ಆ ಶ್ರೀರುದ್ರಮೂರ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿ ಹುಟ್ಟಿತು. ಆ ಕ್ರಿಯಾಶಕ್ತಿಯ ಸಹಸ್ರಾಂಶದಲ್ಲಿ ನಾನಾವರ್ಣರೂಪವಾದ ಈಶಾನಮೂರ್ತಿ ಹುಟ್ಟಿದನು. ಆ ಈಶಾನಮೂರ್ತಿಯು ಸಮಸ್ತವರ್ಣಂಗಳೊಡನೆ ಸಮಸ್ತನಾದಂಗಳೊಡನೆ ಸಮಸ್ತರೂಪಂಗಳೊಡನೆ ಸಮಸ್ತವೂ ತಾನೆಯಾದ ಹಾಂಗೆ ಸಗುಣವಾಗಿ ಸಗುಣನಿರ್ಗುಣವಾಗಿ, ಕೇವಲ ನಿರ್ಗುಣನಾಗಿ ವರ್ತಿಸುವನು. ನಾನಯವನಾಗಿ, ನಿರವಯವನಾಗಿ, ಷಟ್‌ವಕ್ತ್ರ, ದ್ವಾದಶಹಸ್ತ, ಅಷ್ಟಾದಶನೇತ್ರ, ದ್ವಿಪಾದ, ತನುವೇಕವಾಗಿರ್ದಿಯಲ್ಲಾ ಗುಹೇಶ್ವರಾ. ಇದೀಗ ನಿರಾಳಸೃಷ್ಟಿ.

(೮) ಆ ಈಶಾನಮೂರ್ತಿಯ ಆರು ಮುಖವ ವೇದಶಾಸ್ತ್ರ ಪುರಾಣಾಗಮತಂತ್ರಂಗಳು ನಿರ್ಣಯಿಸಲಾರವು.ಮನು, ಮಾಂಧಾತರಿಗೆ ವಾಙ್ಮನಕ್ಕಗೋಚರ. ಅಂತಿರ್ದ ನಿಜಚಿನ್ಮಯಮಹಾತತ್ವದ ಗೋಪ್ಯಮುಖದಲ್ಲಿ ನಂದೀಶ್ವರ, ಭೃಂಗೀಶ್ವರ, ದಾರುಕ, ರೇಣುಕ, ಸೌಂದರ, ಸುಮುಖ, ಸುನಾದ, ಭದ್ರ, ವೀರಭದ್ರ ಮೊದಲಾದ ಪ್ರಮಥಗಣಂಗಳು ಮೃಣ್ಮಯರುದ್ರ, ಕಾಲಾಗ್ನಿರುದ್ರ, ಶರಭರುದ್ರ, ಸದಾಶಿವರುದ್ರ, ಮೊದಲಾದ ರುದ್ರ ಗಣಂಗಳುದ್ಭವಿಸಿ, ಅವರು ಲಿಂಗಾಂಗ, ಲಿಂಗೇಂದ್ರಿಯ ಲಿಂಗ ಪ್ರಾಣ, ಲಿಂಗಮನೋಗತರಾಗಿರ್ದರು ಗುಹೇಶ್ವರಾ. ಇದು ಈಶಾನ ಮೂರ್ತಿಯ ನಿರ್ಮಲ ಸೃಷ್ಟಿ.

(೯) ಆ ನಿರಾಲಂಬಮೂರ್ತಿಯಾದ ಈಶಾನ್ಯ ಮೂರ್ತಿಯ ಸಹಸ್ರಾಂಶದಲ್ಲಿ ಸದಾಶಿವ ಮೂರ್ತಿ ಹುಟ್ಟಿದನು. ಆ ಸದಾಶಿವ ಮೂರ್ತಿಗೆ ಪಂಚವಕ್ತ್ರ, ದಶಭುಜ, ದಶಪಂಚನೇತ್ರ, ದ್ವಿಪಾದ, ತನುವೇಕ, ಶುದ್ಧ ಸ್ಫಟಿಕ ಪ್ರದ್ಯೋತ ಸಕಲಾಭರಣಭೂಷಿತನಾದ ಸದಾಶಿವ ಮೂರ್ತಿಯ ಸಹಸ್ರಾಂಶದಲ್ಲಿ ಸುವರ್ಣಚ್ಛಾಯೆಯಯುಳ್ಳ ಚಿಚ್ಛಕ್ತಿ ಹುಟ್ಟಿತು. ಆ ಚಿಚ್ಛಕ್ತಿಯ ಸಹಸ್ರಾಂಶದಲ್ಲಿ ಶಿವನು ಹುಟ್ಟಿದನು. ಆ ಶಿವಮೂರ್ತಿಗೆ ತ್ರಿಮುಖ ನವನೇತ್ರ, ಷಡುಹಸ್ತ, ದ್ವಿಪಾದ, ತನುವೇಕ, ಧವಳವರ್ಣವುಳ್ಳ ಶಿವ ಮೂರ್ತಿಯ ಸಹಸ್ರಾಂಶದಲ್ಲ ಧವಳವರ್ಣದ ಜ್ಞಾನಶಕ್ತಿ ಹುಟ್ಟಿತು. ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಒಬ್ಬ ಶ್ರೀಕಂಠರುದ್ರ ಮೂರ್ತಿ ಹುಟ್ಟಿದನು. ಆ ಶ್ರೀಕಂಠರುದ್ರಮೂರ್ತಿಗೆ ಏಕವಕ್ತ್ರ, ದ್ವಿಪಾದ, ದ್ವಿಹಸ್ತ, ಕೆಂದಾವರೆಯ ವರ್ಣದ ಶರೀರದ ಶ್ರೀಕಂಠಮೂರ್ತಿಯ ಸಹಸ್ರಾಂಶದಲ್ಲಿ ಹರಿತವರ್ಣದ ಕ್ರಿಯಾಶಕ್ತಿ ಹುಟ್ಟಿತು. ಆ ಕ್ರಿಯಾಶಕ್ತಿಯ ಸಹಸ್ರಾಂಶದಲ್ಲಿ ವಿಷ್ಣು ಹುಟ್ಟಿದನು. ಆ ವಿಷ್ಣುವಿನ ಸಹಸ್ರಾಂಶದಲ್ಲಿ ಲಕ್ಷ್ಮಿ ಹುಟ್ಟಿದಳು ಆ ಲಕ್ಷ್ಮಿಯ ಸಹಸ್ರಾಂಶದಲ್ಲಿ ಬ್ರಹ್ಮ ಹುಟ್ಟಿದನು. ಆ ಬ್ರಹ್ಮನ ಸಹಸ್ರಾಂಶದಲ್ಲಿ ಸರಸ್ವತಿ ಹುಟ್ಟಿದಳು. ಆ ಸರಸ್ವತಿಯ ಸಹಸ್ರಾಂಶದಲ್ಲಿ ಸಕಲ ಜರಾಡರಂಗಳು ಹುಟ್ಟಿದವು. ಇವೆಲ್ಲವು ಸರ್ವಶೂನ್ಯನಿರಾಲಂಬ ಮೂರ್ತಿ ಆದಿಸಿದರೆ ಆಡುವವು, ಬೇಡವೆಂದರೆ ಮಾಣುವವು ಗುಹೇಶ್ವರಾ. ಇದು ಸೃಷ್ಟಿ.

(೧೦) ಈ ಸೃಷ್ಟಿಯಲ್ಲಿ ರುದ್ರ, ಮಹೇಶ್ವರ ಸದಾಶಿವಮೂರ್ತಿಗಳು ಶುದ್ಧ ತತ್ವ ಸ್ವರೂಪು. ಲಿಂಗಧ್ಯಾನದಿಂದ ದೇವತ್ವವುಂಟಾಗಿ, ಕಾಮುಕಾ

ಲಾದಿಗಳಂ ಜಯಿಸಿದ ಕಾರಣ ಪರಮಾತ್ಮರಾದರು. ಹರಿಬ್ರಹ್ಮಾದಿಗಳು ಶುದ್ಧಾಶುದ್ಧ ತತ್ವ ಸ್ವರೂಪಮೂರ್ತಿಗಳಾಗಿ ಆತ್ಮಧ್ಯಾನದಿಂದೆ ದೇವತ್ವವುಂಟಾಗಿ ಕಾಮುಕಾಲಾದಿಗಳಿಗೆ ವಶಂಗತರಾದ ಕಾರಣ ಅಂತರಾತ್ಮರಾದರು. ಸರಸುರಾಸುರರು ಅಶುದ್ಧತತ್ವ ಸ್ವರೂಪ ಶರೀರಧ್ಯಾನದಿಂದೆ ಜೀವರುಗಳಾಗಿ, ಕಾಮುಕಾಲಾದಿಗಳ್ಗೆ ಒಳಗಾದ ಕಾರಣ ಜೀವಾತ್ಮರಾದರು. ಇದು ವೇದಂಗಳಲ್ಲಿ ವಿವರಿಸಿ ನೋಡಿದರೆ ಇಲ್ಲ. ಲಿಂಗಲೀಲೆಯಿಂದಾದುದು ಗುಹೇಶ್ವರಾ.

(೧೧) ಈ ಶರೀರದ ಧ್ಯಾನದಿಂದೆ ಸರ್ವ ಜಗತ್ತು ಮುವ್ವತ್ತು ಮೂರುಕೋಟಿ ಇಂದ್ರಿಯಂಗಳಿಗೆ ಅರುವತ್ತಾರುಕೋಟಿ ಕರಣಂಗಳಿಗೆ ಅನುಕೂಲರಾಗಿ ಸ್ತುತಿಗೆ ಹಿಗ್ಗುತ್ತ, ನಿಂದೆಗೆ ತಗ್ಗುತ್ತ ದುಃಖಕ್ಕೆ ಕುಗ್ಗುತ್ತ ಸುಖಕ್ಕೆ ಹಿಗ್ಗುತ್ತ ಸತ್ಯ, ಶೌಚ, ಶಾಂತಿ, ದಾಂತಿ, ಸಮತೆ, ಸೈರಣೆ, ದಯೆ, ದಾಕ್ಷಿಣ್ಯ, ದಾನಧರ್ಮಂಗಳು ಇಲ್ಲದೆ, ದುರಾಚಾರ, ದುರ್ಮಾರ್ಗ ದುಶ್ಚಿಂತೆ, ದುರ್ಮೋಹ, ದುರ್ವಾಕ್ಯಗಳಿಂದ ಮಹಾಪಾತಕ ಸ್ವರೂಪರಾಗಿ ಭವಾಂಬುಧಿಯಲ್ಲಿ ಮುಳುಗುತ್ತೇಳುತ್ತ ತಡಿಯ ಸೇರಲಾರದಿರ್ದ ಕಾರಣ ಗುಹೇಶ್ವರನು ಅವರಿಗೆ ಸಾಕ್ಷಿಯಾಗಿರ್ಪನು.

(೧೨) ಈ ರೀತಿಯಲ್ಲಿ ಜೀವಕೋಟಿಗಳಿರುತ್ತಿರಲಾಗಿ ಒಬ್ಬ ಪುಣ್ಯಾತ್ಮನುದಯಿಸಿ, ಸತ್ಯ, ಶೌಚ, ಶಾಂತಿಯುಳ್ಳವನಾಗಿ, ಅನೇಕ ಜಪತಪನೇಮನಿಷ್ಠೆ ದಾನಧರ್ಮಂಗಳ ಮಾಡಲಾಗಿ ಮನಸ್ಸಿನ ಮಾಲಿನ್ಯವು ಹೋಗಿ ಈ ದೇಹವು ಮಹಾಪಾತಕಂಗಳಿಗೆ ಆಶ್ರಯವೆಂದು ತಿಳಿದು ಎಲೆ ಪರಮೇಶ್ವರ ಈ ದೇಹರೂಪವಂ ನೋಡಲು ಇದು ಚರ್ಮ ರೋಮ, ನರ, ಮಜ್ಜೆ, ಮಾಂಸ, ಅಸ್ತಿ, ರಕ್ತ, ಕ್ರೋಣಿತ, ಮಲ, ಮೂತ್ರಂಗಳಿಂದಾದುದು. ಈ ದೇಹ ಲಕ್ಷಣವ ನೋಡಿದರೆ ಮಾತೃಗರ್ಭದಲ್ಲಿ ಅಮೇಧ್ಯ ಮಲ ಮೂತ್ರ ಮದ್ಯದಿ ನೆನೆದು ಅದರ ಮೇಲೆ ಮೂತ್ರದ್ವಾರದಲ್ಲಿ ರಕ್ತಮಯವಾಗಿ ಹುಳುನಿನಂದದಿ ಬಿದ್ದುದು. ಮತ್ತಂ ಶಿಶುವಾಗಿ ಕೆಲವು ದಿನ ಅಮಂಗಲವಾಗಿಪ್ಪುದು. ಅದರ ಮೇಲೆ ಬಾಲ್ಯ, ಯೌವನ, ಕೌಮಾರ ಸುಪ್ಪಳಿದ್ದು. ಮತ್ತಂ ಗುಣಂಗಳ ನೋಡಲು, ಕಾಮ, ಕ್ರೋಧ, ಲೋಭ ಮೋಹ, ಮದ, ಮತ್ಸರಂಗಳುಳ್ಳದ್ದು. ಸುಖವ ನೋಡಲು.- ಘಣಿ, ರಾಜರು, ಪಕ್ಷಿ, ಮೃಗ, ಜಲ, ವಾಯು, ಸಿಡಿಲು, ಶೀತ, ಉಷ್ಣ, ಕ್ಷುಧೆ, ತೃಷ್ಣೆ, ಮಹಾರೋಗಾದಿಗಳುಳ್ಳದ್ದು. ಮತ್ತಂ ಆಯುಷ್ಯವಂ ನೋಡಲು

ಗಳಿಗೆಯೋ, ಎರಡು ಗಳಿಗೆಯೋ, ಜಾವವೋ, ದಿನವೋ, ಮಾಸವೋ, ವರ್ಷವೋ, ತಿಳಿಯಬಾರದು. ಈ ದೇಹವನಾದರೂ ನಂಬಿದ್ದೇನೆಂದೊಡೆ ಐಶ್ವರ್ಯವು ಮರೀಚಿಕಾಜಲದಂತೆ, ಮನದಾಸೆ ಬೆಟ್ಟದಂತೆ, ಯೌವನವು ಮಿಂಚಿನಂತೆ, ಧೈರ್ಯವು ಬಿಸಿಲಿನಂತೆ, ಸಂಸಾರವು ಇಂದ್ರಜಾಲದಂತೆ, ಭೋಗವು ದರ್ಪಣದ ಪ್ರತಿಬಿಂಬದಂತೆ, ಶರೀರವು ನೀರಗುಳ್ಳೆಯಂತೆ, ಪ್ರಾಣವು ಬಯಲಿನಂತೆ, ಬಾಧೆಗಳು ಸಮುದ್ರದ ತೆರೆಗಳಂತೆ, ಈ ದೇಹಭಾರವನು ಅವ ಉಪಾಯದಿಂದ ಇಳುಹಬೇಕೆಂದೊಡೆ ರೂಪವುಳ್ಳುದಾದ ವಸ್ತುವಿನಿಂದ ಇಳುಹುವೆನೆಂದೊಡೆ ರೂಪವೆಲ್ಲ ನಷ್ಟ ಅರೂಪವಾದ ವಸ್ತುವಿನಿಂದ ಇಳುಹುವೆನೆಂದೊಡೆ ಅರೂಪು ಕಾಣಬಾರದು. ಈ ದೇಹಭಾರವು ಆರಿಂದ ಇಳಿವುದೋ ಗುಹೇಶ್ವರಾ.

(೧೩) ಈ ರೋತೆಯ ದುರ್ಗಂಧ ಶರೀರೋಪಾಯ ನೀಗುವತೆರನೆಂತೊ? ಕರ್ಮದಿಂದ ಬಿಡಿಸುವೆನೆಂದೊಡೆ, ಕರ್ಮವ ಮಾಡಿದಲ್ಲಿ ದೇಹವನೆತ್ತಬೇಕು. ದೇಹವನೆತ್ತಿದಲ್ಲಿ ಕರ್ಮವ ಮಾಡಬೇಕು. ಕರ್ಮಕ್ಕೂ ದೇಹಕ್ಕೂ ಬೀಜವೃಕ್ಷನ್ಯಾಯವು. ಆದೆಂತೆಂದೊಡೆ ಕರ್ಮವು ಜಡವು. ಕರ್ಮಕರ್ತೃ ಬೇರುಂಟು. ಕರ್ಮದಿಂದ ದೇಹಭಾರವು ತೀರದು. ಕಾಣಲ್ಪಟ್ಟ ಕ್ರಿಯೆಗಳೆಲ್ಲಾ ಅಬದ್ಧ. ಜ್ಞಾನದಿಂದ ದೇಹಭಾರವನಿಳುಹುವೆನೆಂದೊಡೆ, ಜ್ಞಾನವು ಹೇಗೋ ತಿಳಿಯದು. ಶಾಸ್ತ್ರಜನ್ಯಜ್ಞಾನದಿಂದೆ ದೇಹಭಾರವನಿಳುಹುವೆನೆಂದೊಡೆ— ಶಾಸ್ತ್ರಜನ್ಯಜ್ಞಾನದಿಂದ ತೀರದು. ಸಹಜಜ್ಞಾನ ಹೇಗೆಂದೊಡೆ— ಗಾಳಿಯಿಲ್ಲದ ದೀಪದಂತೆ, ಚಂದ್ರಸೂರ್ಯನಕ್ಷತ್ರ ಮೇಘಂಗಳಿಲ್ಲದ ನಿರ್ಮಲಾಕಾಶದಂತೆ, ರೆಕ್ಕೆಗಳಿಲ್ಲದ ಪಕ್ಷಿಯಂತೆ ಎಲೆಗಳಿಲ್ಲದ ವೃಕ್ಷದಂತೆ, ತ್ರೈಲೋಕ್ಯದಲ್ಲಿ ಇದು ದುರ್ಲಭ. ಇದರಿಂದ ದೇಹಭಾರವು ತೀರುವದು. ಇಂತಪ್ಪ ಜ್ಞಾನವೆಂದಿಗೆ ಸಾಧ್ಯವಹುದು ಗುಹೇಶ್ವರಾ.

(೧೪) ಪೌತೆಯ ಹಣ್ಣಿಗೆ ವಜ್ರದಕಟ್ಟುಹಾಕಿದಂತೆ, ಬಾಳೆಯಹಣ್ಣು ಕಬ್ಬಿಣದುಗುರಿನಲ್ಲಿ ಸುಲಿವಂತೆ ಜಾಜಿಯ ಹೂವನ್ನು ಹುರಿದಂತೆ, ಶಿಶುವಿನ ಶಿರದಲ್ಲಿ ಪರ್ವತವಂ ಮಡಗಿದಂತೆ, ಈ ದೇಹಭಾರವ ಹೊರಲಾರೆನಯ್ಯ. ಅದೆಂತೆಂದೊಡೆ— ತಾಯ ಗರ್ಭದಲ್ಲಿ ಪಿಂಡವಿರುವದು. ಮೊಟ್ಟೆಯ ಕಟ್ಟ ನೀರಿನಲ್ಲಿ ಹಾಕಿ, ಮೇಲೆ ಪರ್ವತವನಿರಿಸಿದಂತೆ, ಅಮೇಧ್ಯಮೂತ್ರ

ವಚನಶಾಸ್ತ್ರಸಾರ ಗ್ರಂಥಗಳು.

(ರಾ। ಸಾ। ಪಿ. ಜಿ. ಹಳಕಟ್ಟಿ ಇವರಿಂದ ವಿರಚಿತವಾದವುಗಳ

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ

(೨) ,, ,, ಉತ್ತರಾರ್ಧ

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ತಿಳಿಯಬಹುದು.

(೩) ವಚನಶಾಸ್ತ್ರಸಾರ ಭಾಗ ೨

ಇದರಲ್ಲಿ ಪಟ್ಟಸ್ಥಲ ಸಿದ್ಧಾಂತದ ನಿರೂಪಣೆ ಇದೆ.

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಆಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರು, ಲಿಂಗ, ಜಂಗಮ ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೮೬ ಇದ್ದು ಇವುಗಳ ಬೆ ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊ ಅವುಗಳ ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮—೪—೦ ರೂಪಾಯ ದೊರೆಯುವವು ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ—

ಹಿತಚಿಂತಕ ಪ್ರಿಂಟಿಂಗ ಪ್ರೆ

ವಿಜಾಪುರ

ಇದನ್ನು ವಿಜಾಪುರದಲ್ಲಿ ರಾ। ಸಾ। ಪ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಬು ಬೂರುದ ಓಣಿಯಲ್ಲಿರುವ ತಮ್ಮ ೧೬೩ (ಅ) ಮನೆಯಲ್ಲಿ ಪ್ರಸಿದ್ಧಿಪಡಿಸಿದರು.

R. N. B. 2554

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಸಪ್ಟೆಂಬರ ೧೯೪೦. [ಸಂಚಿಕೆ ೨

ವಿಷಯಾನುಕ್ರಮಣಿಕೆ.

ವಿಷಯಗಳು.	ಲೇಖಕರು	ಪುಟ.
೧ ಶಿವಾನುಭಾವಿ ಬಸವಣ್ಣ	ವೇ. ಬುದ್ಧಯ್ಯ ಪುರಾಣಿಕ	೩೭
೨ ದತ್ತಾತ್ರೇಯ	ಶ್ರೀ. ಬ. ಪ. ಪಟ್ಟೇದ.	೪೨
೩ ಇಷ್ಟನೇ ಶತಮಾನದಲ್ಲಿ ವೀರಶೈವ ಪಾಂಚ್ಯವಿದ್ದಿಲ್ಲವೇ ಹೇಗೆ?	ರಾ। ಸಾ। ಪಿ. ಜಿ. ಹಳಕಟ್ಟಿ	೪೯
೪ ವೀರಶೈವ ಧಾರ್ಮಿಕ ಅವನತಿ	ಶ್ರೀ. ಕಲ್ಯಾಣಪ್ಪ ಬ್ಯಾಳಿ	೫೦
೫ ಶಿವಾನುಭವಸಂಘಗಳ ಸ್ಥಾಪನೆ	ಸಂಪಾದಕ	೫೬
೬ ಪರಿಷತ್ತಿನ ವರದಿಗಳು ಭಾಗ ೮	—	೧—೪
೭ ಸುಕೀರ್ತಿ ಪದ್ಯಮಾಲೆ ಭಾಗ-೩	—	೧—೮
೮ ಮುಖ್ಯಾಂಗನಾಶುದ್ಧಿಪತ್ರಿಕೆ	—	೩೭—೪೮

ಶಿವಾನುಭವ.

ವರ್ಷ ೦೩	ನವ್ಹೆಂಬರ ೧೯೪೦.	ಸಂಚಿಕೆ ೨

ಶಿವಾನುಭಾವಿ ಬಸವಣ್ಣ.

ಲೇಖಕಃ— ಬುದ್ಧಯ್ಯಾ ಸ್ವಾಮಿ ಪುರಾಣಿಕ ಧಾರವಾಡ.

ಶ್ರೀ ಬಸವಣ್ಣನನ್ನು ಪೂರ್ವದಿಂದಲೂ ಮಹಾನ್ ಮಹಾನ್ ಮಹಿಮಾಶಾಲಿಗಳು ಹೃತ್ಪೂರ್ವಕವಾಗಿ ಕೊಂಡಾಡುತ್ತ ಬಂದಿರುವರು. ಅಂಥ ವಿಭೂತಿಗಳಲ್ಲಿ ಶ್ರೀಮದನಾದಿ ಅಲ್ಲಮಪ್ರಭುದೇವ, ಚನ್ನಬಸವ ಸಿದ್ಧರಾಮ, ಮಡಿವಾಳ ಮಾಚಿದೇವ, ಅಕ್ಕಮಹಾದೇವಿ, ಮರುಳಶಂಕರ ದೇವ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣ ಮೊದಲಾದ ಶಿವಶರಣರೇ ಅಗ್ರಗಣ್ಯರಿರುವರಲ್ಲದೆ ಪ್ರಾಚೀನ ವೀರಶೈವಕವಿಗಳಲ್ಲಿ ಹಂಪೆಯ ಹರಿಹರ, ಪಾಲ್ಕುರಿಕೆ ಸೋಮೇಶ್ವರ, ಮಗ್ಗೆಯ ಮಾಯಿದೇವ, ಭೀಮ, ಸುರಂಗ, ಸಪ್ತಕಾವ್ಯದ ಗುರು ಬಸವ, ಹಾಗೂ ತೋಂಟದ ಸಿದ್ಧಲಿಂಗಯತಿ ಮೊದಲಾದವರು ಸ್ತುತಿಸಿ ಧನ್ಯರಾಗಿರುವರು. ಇಂಥವರ ಸ್ತುತಿಗೆ ಪಾತ್ರನಾದ ಬಸವಣ್ಣನನ್ನು ಅರಿಯಬೇಕಾದರೆ ಅದು ರಂಗ ಸಂತತಿಯವರಿಗೇನೇ ಸಾಧ್ಯವಲ್ಲದೆ ಮಿಕ್ಕಾದವರಿಗೆ ಅಸಾಧ್ಯವು.

ಒಂದೊಂದು ಗುಣದಲ್ಲಿ ವೈಶಿಷ್ಟ್ಯವನ್ನು ಪಡೆದವರ ಹಲವು ಉದಾಹರಣೆಗಳನ್ನು ಪುರಾಣೇತಿಹಾಸಗಳಲ್ಲಿ ಸಾವು ಆಗಾಗ್ಗೆ ಕಾಣಬಹುದು. ಅದು ಹೇಗಂದರೆ – ಹರಿಶ್ಚಂದ್ರನು ಸತ್ಯದ ಸಲುವಾಗಿ ತನ್ನ ರಾಜ್ಯವನ್ನು ತೊರೆದು ಹೆಂಡರುಮಕ್ಕಳನ್ನು ಕಳೆದುಕೊಂಡು ಕಡೆಗೆ ಹೊಲೆಯನಿಗಾಳಾಗಿ

ತನ್ನ ಸರ್ವ ಸುಖಕ್ಕೇನೇ ನೀರು ನೀಡಿದನು. ಇದರ ವಿರುದ್ಧವಾಗಿ ವಿಭೀಷಣನು ಕೆಲವು ಕಾಲದ ವರೆಗೆ ಸುಖವನ್ನು ಕೊಡುವ ಹಾಗೂ ರಾಜ್ಯಾಂತೇ ನರಕವೆಂದು ಘಂಟಾಘೋಷವಾಗಿ ಸಾರುವ ರಾಜ್ಯದ ಸಲುವಾಗಿ ಒಡಹುಟ್ಟಿದ ಅಣ್ಣನನ್ನು ಬಿಟ್ಟನು. ಅಣ್ಣನ ಸಲುವಾಗಿ ಭರತನು ರಾಜ್ಯವನ್ನು ಮತ್ತು ಹೆತ್ತವ್ವನನ್ನು ಬಿಟ್ಟನು. ಇದರಂತೆ ಭಕ್ತಿಯ ಸಲುವಾಗಿ ಪ್ರಲ್ಹಾದನು ತನ್ನ ತಂದೆಯನ್ನು ಕಳೆದುಕೊಂಡನು. ಒಟ್ಟಿನಲ್ಲಿ ನೋಡಲಾಗಿ ಒಂದೇ ಒಂದು ಗುಣದ ಸಲುವಾಗಿ ಮೇಲಿನವರೆಲ್ಲರಲ್ಲಿ ಇಷ್ಟು ಸಾಮರ್ಥ್ಯವು ಬರಬೇಕಾದರೆ ಹಾಗೂ ಅವರು ಇಷ್ಟು ಜಗತ್ಪೂಜ್ಯರಾಗಬೇಕಾದರೆ, ಎಲ್ಲ ಸದ್ಗುಣಗಳ ಒಬ್ಬಳಿಯಾದ ಪರಿಪೂರ್ಣ ವಸ್ತುವಿನಲ್ಲಿ ಎಷ್ಟು ಸಾಮರ್ಥ್ಯವು ಹಾಗು ಪೂಜ್ಯತ್ವವು ಇದ್ದಿರಬೇಕೆಂಬುದನ್ನು ಓದುಗರೇ ತರ್ಕಿಸತಕ್ಕದ್ದು. ಇಂಥವರಲ್ಲಿ ಬಸವಣ್ಣನು ಅಗ್ರೇಸರನು. ಇದರ ಸತ್ಯತೆಯನ್ನು ವಚನಶಾಸ್ತ್ರ ಹಾಗು ಶಿವಶರಣರ ಪುರಾಣಗಳಲ್ಲಿ ಕಾಣಬಹುದು.

ಪರಿಪೂರ್ಣತ್ವವನ್ನು ಪಡೆದವರ ಯೋಗ್ಯತೆಯನ್ನು ಅನೇಕಾನೇಕ ಸಾಧನಗಳಿಂದ ಒರೆ ಹಚ್ಚಿ ಮನಗಾಣಬಹುದು. ಅಂಥ ಸಾಧನಗಳಲ್ಲಿ ಪರಾ, ಪಶ್ಯಂತಿ, ಮಧ್ಯಮಾ ಎಂಬ ಮೂರು ಮೆಟ್ಟಲುಗಳನ್ನು ದಾಟಿ ಬಂದ ವೈಖರಿಯು ಒಂದಾಗಿರುವದು. ಈ ವೈಖರಿಯಿಂದ ತಮ್ಮ ಶಿವಾನುಭವವನ್ನು ಮುಮುಕ್ಷುಗಳಿಗೆ ನಿರ್ಭಯದಿಂದ ಲೋಕ ಶಿಕ್ಷಣಾರ್ಥವಾಗಿ ಹೃದಯಂಬಿಚ್ಚಿ ಹೇಳಿದ್ದೇ ಹೆಗ್ಗುರುತಾಗಿರುವದು. ಸರಳ ಹೃದಯದಿಂದ ಬಸವಣ್ಣನವರಂತೆ ತಮ್ಮ ಶಿವಾನುಭವವನ್ನು ಬಿಚ್ಚಿ ಹೇಳಿದವರನ್ನು ಈ ಭೂಲೋಕದಲ್ಲಿ ಈ ವರೆಗೂ ಇನ್ನಾರನೂ ನಾವು ಕಾಣುವದಿಲ್ಲ.

ಪಂಡಿತರಿಗಷ್ಟೇ ಸಾಧ್ಯವಾದ ಸಂಸ್ಕೃತ ಭಾಷೆಯಲ್ಲಿದ್ದಂಥ ಜ್ಞಾನವನ್ನು ಪಾಮರರಿಗೂ ತಿಳಿಯುವಂತೆ ಕನ್ನಡ ಭಾಷೆಯಲ್ಲಿ ಮಾಡಿಕೊಟ್ಟು ಮೋಕ್ಷ ಮಾರ್ಗವನ್ನು ಮುಕ್ತದ್ವಾರವನ್ನಾಗಿ ಮಾಡಿದ್ದರಿಂದ ಬಸವಣ್ಣನಿಗೆ ಭಾರತ ವರ್ಷವು ಚಿರಕಾಲ ಋಣಿಯಾಗಿದೆ. ಮುಂದೆ ಇವನ ಅನುಕರಣವನ್ನೇ ೧೩ ನೆಯ ಶತಮಾನದಿಂದ ಮಹಾರಾಷ್ಟ್ರದಲ್ಲಿ ನಾಮದೇವ ಜ್ಞಾನದೇವ, ಏಕನಾಥ, ತುಕಾರಾಮಾದಿ ಸಂತರೂ ೧೫ನೆಯ ಶತಮಾನದಿಂದ ಉತ್ತರ ಹಿಂದುಸ್ತಾನದಲ್ಲಿ ಕಬೀರ, ತುಳಸೀದಾಸ ಮೊದಲಾದ ಸಂತರೂ ಹಾಗು ಕರ್ನಾಟಕದಲ್ಲಿ ಮಾಧ್ವಸಾಂಪ್ರದಾಯದ ದಾಸರೂ ಮಾಡಿದರು.

ಈ ರೀತಿಯಾಗಿ ಕನ್ನಡ ನಾಡುನುಡಿಗಳಲ್ಲಿ ಹೆಚ್ಚಿನ ಕ್ರಾಂತಿಯನ್ನು ಮಾಡಿ, ಇವರನ್ನು ತಿದ್ದಿತೀಡಿ, ತಾನೂ ತತ್ವಜೀವಿಯಾಗಿ ಬಸವಣ್ಣನು ನಡೆನು ನುಡಿದ ವಚನಗಳೇ ''ಬಸವಗೀತೆ'' ಗಳೆಂದು ಹೆಸರಾಗಿವೆ. ಭಾವೋದ್ರೇಕದಿಂದ ಜೀವನದ ಹೋರಾಟದಲ್ಲಿ ಪ್ರಾಸಾದಿಕವಾಗಿ ಹೊರ ಹೊಮ್ಮುವ ನುಡಿಗಳೇ ಮಧುರವಾದ ಗೀತೆಗಳು. ಬಸವಣ್ಣನವರ ವಚನಗಳನ್ನು ವೀರಶೈವ ಪ್ರಾಚೀನ ಕವಿಗಳಾದ ಹಂಪೆಯ ಹರಿಹರ, ಪದ್ಮಣಾಂಕ ಮೊದಲಾದವರು ಇದೇ ತೆರನಾಗಿ ಭಾವಿಸಿರುವರು. ಆದುದರಿಂದ ಅವು ಇಂದು ನಿಗಮಾಗಮೋಪನಿಷದಗಳಿಗಿಂತಲೂ ಅನುಭವದಲ್ಲಿ ಹೆಚ್ಚಿನ ವಾನ್ಯತೆಯನ್ನು ಪಡೆದಿವೆ ಎಂದು ಹೇಳಿದರೆ ಅಪ್ರಾಸಂಗಿಕ ಮತ್ತು ಅತಿಶಯೋಕ್ತಿಯಾಗಲಾರದು.

ಇತ್ತಕಡೆಗೆ ಭಗವದ್ಗೀತೆಯಲ್ಲಿರುವ ತತ್ವಗಳು ತ್ರಿಕಾಲಾಬಾಧಿತಗಳಾಗಿರುವವೆಂದು ಬಹಳ ಜನರ ಹೆಚ್ಚಿನ ತಿಳುವಳಿಕೆಯಾಗಿರುವದರಿಂದ ಜಗತ್ತಿನಲ್ಲಿರುವ ಬಹುತರ ಎಲ್ಲ ಭಾಷೆಗಳಲ್ಲಿ ಅದು ಪರಿವರ್ತನೆಯನ್ನು ಹೊಂದಿರುವದು. ಅದನ್ನು ಅರಿಯದವರು ತೀರ ಅಪರೂಪ. ಭಗವದ್ಗೀತೆಗೆ ಶಿವಾಗಮಗಳೇ ಆಧಾರವಾಗಿದ್ದರೂ ಭಗವದ್ಗೀತೆ ಹಾಗೂ ಬಸವಗೀತೆ ಇವೆರಡರ ಅನುಭವಗಳನ್ನು ಅನುಭಾವಿಗಳು ಪರಿಹಚ್ಚಿ ನೋಡಿದರೆ ಅವೆರಡರಲ್ಲಿ ಭೂವ್ಯಾಕಾಶದಷ್ಟು ಅಂತರ ತೋರದೆ ಇರದು. ಅದು ಹೇಗಂದರೆ—

ತ್ಮಮೇವ ಶರಣಂ ಗಚ್ಛ ಸರ್ವ ಭಾವೇನ ಭಾರತ ।
ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿಶಾಶ್ವತಂ॥ ೬೨-೧೮

ಸರ್ವ ಧರ್ಮಾನ್‌ಪರಿತ್ಯಜ್ಯ ನಾಮೇಕಂ ಶರಣಂ ವ್ರಜ ।
ಅಹಂ ತ್ವಾ॥ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ॥೬೬-೧೮

(೧) ಮೊದಲನೇ ಶ್ಲೋಕದಲ್ಲಿ ''ನೀನು ಸರ್ವಭಾವದಿಂದ ಆ ಪರಮಾತ್ಮನನ್ನೇ ಶರಣು ಹೋಗು ಎಂದು ತನಗನ್ಯವಾದ ಮತ್ತೊಬ್ಬ ದೇವರನ್ನು ಹೊರಗಿಟ್ಟಿದ್ದಾನೆ. ಎರಡನೆಯದರಲ್ಲಿ ತಾನೇ ಪರಮಾತ್ಮನಾಗಿ ''ಎಲ್ಲ ಧರ್ಮಗಳನ್ನು ಬಿಟ್ಟು ನನ್ನನ್ನೇ ಶರಣು ಹೋಗು. ನಾನು

ನಿನ್ನನ್ನು ಎಲ್ಲ ಪಾಪಗಳಿಂದ ಬಿಡುಗಡೆ ಮಾಡಿಸುವೆ" ಎಂದು ಜೋಡಿಸಿದ್ದಾನೆ. ಇದೊಂದು ಭಗವದ್ಗೀತೆಯ ಸುಸಂಬದ್ಧತೆಗೂ, ಏಕನಿಷ್ಠತೆಗೂ ಹಾಗೂ ಅನುಭವಕ್ಕೂ ದೊಡ್ಡ ಕೊರತೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ಈ ತರದ ಕುಂದು ಕೊರತೆಗಳು ಬಸವಗೀತೆಯಲ್ಲಿ ಕಂಡುಬರುವದಿಲ್ಲ. (೨) ಕೃಷ್ಣನು ಹೇಳುವದು ನೊಂದು ನಿಂತ ಇನ್ನೊಂದು ಜೀವನಿಗೆ, ಬಸವನು ಹೇಳುವದು ನೊಂದ ತನ ಆತ್ಮನಿಗೆ. (೩) ಕೃಷ್ಣನು ಪ್ರಭುವಾಗಿ ಉಪದೇಶಿಸುವನು, ಬಸವಣ್ಣನು ಕಿಂಕರರ ಕಿಂಕರನಾಗಿ ವಿನ್ನವಿಸುವನು. (೪) ಕ್ಷತ್ರಿಯನಾದ ಕೃಷ್ಣನು ಕ್ಷತ್ರಿಯ ಹಾಗೂ ಅಸ್ತ್ರನಾದ ಅರ್ಜುನನಿಗೆ ಬ್ರಹ್ಮಜ್ಞಾನವನ್ನು ಹೇಳಿದರೆ, ಬಸವಣ್ಣನು ಭಕ್ತನಾಗಿ ಸಕಲರನ್ನು ಅಂಗಲಾಚಿ ಬೇಡಿಕೊಳ್ಳುವನು. (೫) ಕೃಷ್ಣಗೀತೆಯಲ್ಲಿ ಕೃಷ್ಣನು ಕೆಲವು ಕಾಲದ ವರೆಗೆ ಗುರುವಾಗಿ ವರ್ಣಾಶ್ರಮ ಧರ್ಮದ ಕಟ್ಟನ್ನೇ ಸಡಲಿಸಿದಂತೆ ಕಂಡುಬಂದರೆ, ಬಸವಗೀತೆಯಲ್ಲಿ ಬಸವನು ಕಡೆಯವರೆಗೆ ಭಕ್ತನಾಗಿಯೇ ಉಳಿದದ್ದು ಕಾಣಬಹುದು. (೬) ಬ್ರಾಹ್ಮಣನಾಗಲು ವಿಶ್ವಾಮಿತ್ರನಿಗೆ ಬಹಳ ದಿನಗಳು ಬೇಕಾಗಿದ್ದರೆ ಕ್ಷಣದಲ್ಲಿಯೇ ಕೃಷ್ಣನು ಬ್ರಾಹ್ಮಣನಾದದ್ದು ಕೃಷ್ಣಗೀತೆಯಲ್ಲಿ ಕಂಡುಬಂದರೆ, ಇಂಥ ವ್ಯತ್ಯಾಸಗಳನ್ನು ಬಸವಗೀತೆಯಲ್ಲಿ ಕಾಣಲಾರೆವು. (೭) ಕೃಷ್ಣಗೀತೆಯು ಲೋಕಕ್ಕೆ ಸಿಕ್ಕುವದು ವ್ಯಾಸರ ಮುಖದಿಂದ, ಬಸವಗೀತೆಯು ನಮಗೆ ಸಿಕ್ಕುವದು ಬಸವನ ಮುಖದಿಂದ. (೮) "ದುಷ್ಟರ ಸಂಹಾರ ಶಿಷ್ಟರ ಪರಿಪಾಲನೆ" ಎಂಬ ನ್ಯಾಯದಂತೆ ಪಾಂಡವರು ಸಜ್ಜನರು ಮತ್ತು ಕೌರವರು ದುರ್ಜನರು ಎಂಬುವ ತಮ್ಮ ಮಾತಿನ ಹೊಣೆಗಾರಿಕೆಯನ್ನು ವ್ಯಾಸರು ಕೃಷ್ಣನ ಮೇಲೆ ಹಾಕಿದ್ದು ಕೃಷ್ಣಗೀತೆಯಲ್ಲಿ ಕಂಡುಬಂದರೆ, ಬಸವ ಗೀತೆಯಲ್ಲಿ ಇಂಥ ಹೊಣೆಗಾರಿಕೆಯ ಮಾತಿನ ಕಾರಣವೇ ಕಂಡುಬರುವದಿಲ್ಲ. ಏಕಂದರೆ— "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿ ವಾಕ್ಯದಂತೆ ಎಲ್ಲವನ್ನು ಶಿವನೆಂದು ಕಾಣುವನಿಗೆ ಶಿಷ್ಟರೂ ಅಷ್ಟೇ ಹಾಗೂ ದುಷ್ಟರೂ ಅಷ್ಟೇ. ಅದುದರಿಂದರಿಂದಲೇ ಕತ್ತಲಲ್ಲಿ ತನ್ನ ಮಡದಿಯ ಕೈಕಂಕಣವನ್ನು ಕದಿಯಬಂದ ಕಳ್ಳನೂ ಕೂಡ ಬಸವನಿಗೆ ಕೂಡಲ ಸಂಗಮನಾಥನೆಂದೇ ಕಂಡನು. (೯) ಕೃಷ್ಣನ ಗೀತೆಯ ಮಾತುಗಳು ಒಂದೇ ಸಮಯದಲ್ಲಿ ಬಂದವು. ಬಸವನ ಗೀತೆಯ ಮಾತುಗಳು ಅವನ ಇಡೀ ಜೀವನದಲ್ಲಿ ಬಂದವು. (೧೦) ಕೃಷ್ಣನ ಗೀತೆಯ ಮಾತುಗಳು ಕಾಳಗದ ಪ್ರಸಂಗದಲ್ಲಿ ಬಂದವು. ಬಸವನ ಗೀತೆಯ ಮಾತುಗಳು ಅವನ ಅವಸ್ಥಿನೇರಕ್ಕೆ ತಕ್ಕಂತೆ ಬಂದವು. (೧೧) ಕೃಷ್ಣನ ಗೀತೆಯು ಭಂಡಸ್ಸಿನ ಕಟ್ಟನಲ್ಲಿ ಹೊರಬಿದ್ದಿದೆ. ಆದರೆ ಬಸವನ ಗೀತೆಯು ಸ್ವಚ್ಛಂದದ ಅನುಭವದ ಭಾಷೆಯಲ್ಲಿ ಹೊರಬಿದ್ದಿದೆ. (೧೨) ಕೃಷ್ಣನ ಗೀತೆಯು ಬರೀ ಭಾವದಿಂದ ತುಂಬಿದ್ದರೆ, ಬಸವನ ಗೀತೆಯು ಭಾವ ಭಾವೆಗಳಿರೆರಿಂದಲೂ ತುಂಬಿ ಹರಿಯುವ ಹಿರೇಹೊಳೆಯು (೧೩) ಕೃಷ್ಣನ ಗೀತೆಯು ಸರ್ವಜ್ಞ ಮೂರ್ತಿಯ ಅಭಿಪ್ರಾಯದಂತೆ ಸೋದರರ ವಧೆಯಂತಹ ಹಿಂಸಾತ್ಮಕವಾದ ಬೋಧೆಯನ್ನು ಹೇಳುತ್ತಿದ್ದರೆ, ಬಸವನ ಗೀತೆಯು ಅಹಿಂಸಾತ್ಮಕವಾಗಿರುವದು. (೧೪) ಕ್ಷತ್ರಿಯ ಧರ್ಮದಂತೆ ಕಾಳಗ ಮಾಡುವದು ಪುಣ್ಯಕರವು ಹೇಗೆ? ಮತ್ತು ಮಾನವ ಹಾಗೂ ಬಾಂಧವ ಧರ್ಮದಂತೆ ಕೊಲೆ ಮಾಡುವದು ಪಾಪಕರವು ಹೇಗಲ್ಲ? ಇದನ್ನು ಕೃಷ್ಣಗೀತೆಯಲ್ಲಿ ಬಿಡಿಸಲಿಕ್ಕೆ ಬಂದಿಲ್ಲ. ಆದರೆ ಬಸವನ ಗೀತೆಯಲ್ಲಿ ಇಂಥ ತೊಡಕಿನ ಉದಾಹರಣೆಗಳು ಸಿಗಲಾರವು. (೧೫) ಕೃಷ್ಣ ಗೀತೆಯು ಕ್ಷತ್ರಿಯರಿಗೆ ಹೆಚ್ಚು ಪ್ರೇಮಾಸ್ಪದವೂ ಹಾಗೂ ಚೈತನ್ಯದಾಯಕವೂ ಆಗಿದ್ದರೆ, ಬಸವನ ಗೀತೆಯು ಸಕಲಜೀವಾತ್ಮರ ಹಿತವನ್ನು ಉದ್ದೇಶಿಸಿದೆ.

ಇವೆಲ್ಲ ದೃಷ್ಟಿಯಿಂದ ನೋಡಿದರೆ ಬಸವಗೀತೆಯು ಕೃಷ್ಣಗೀತೆಗಿಂತಲೂ ಅನುಭವದಲ್ಲಿ ಮಿಗಿಲಾದದ್ದೆಂದು ನಿಷ್ಪಕ್ಷಪಾತಿಗಳಿಗೆ ತೋರದೆ ಇರಲಾರದು. ಅದುದರಿಂದ ಯಾವ ವಚನಕಾರರಾದರೂ ತಮ್ಮ ಅನುಭವದ ಕಾಲಕ್ಕೆ ಈ ಕೃಷ್ಣಗೀತೆಯನ್ನು ಒಂದು ಪ್ರಬಲವಾದ ಪ್ರಮಾಣ ಗ್ರಂಥವೆಂದು ಮನ್ನಿಸಿಕೊಂಡು ಅದರೊಳಗಿನ ಆಧಾರಗಳನ್ನು ತಕ್ಕೊಂಡಂತೆ ಕಂಡುಬರುವದಿಲ್ಲ. ಇದನ್ನು ಶೂನ್ಯಸಂಪಾದನೆ ಮೊದಲಾದ ಇಗ್ಗ್ರಂಥಗಳಿಂದ ಓದುಗರು ಮನಗಾಣಬಹುದು.

ದತ್ತಾತ್ರೇಯ

(ಲೇಖಕರು— ಬಸವಪ್ಪ ಚೆನ್ನಪ್ಪ ಪಟ್ಟೇದ ಮಂಟಮುರಿ.)

•—*—•

ನನ್ನ ಈ ಶಿವಾನುಭವ ಲೇಖನವನ್ನೋದಿದೊಡನೆಯೇ, ಶಿವಾನುಭವದ ಅಗಸ್ಟ (೧೯೪೦) ಸಂಚಿಕೆಯಲ್ಲಿ, ವೌಂಡಕರಾದ ಶ್ರೀ ಬುಧ್ಯಯ್ಯ ಸ್ವಾಮಿಗಳು ಬರೆದ ಲೇಖಕ್ಕೆ ಪ್ರತಿಯಾಗಿ ಇಲ್ಲವೆ ಪೂರಕವಾಗಿ, ಇದೇನೋ ಒಂದು ಬರವಣಿಗೆ ಇರಬಹುದೆಂದು, ಊಹೆಯಾಗುವ ಸಂಭವವೇ ಹೆಚ್ಚು. ಆದರೆ ಇದರಲ್ಲಿ ಅಂತಹದೇನೂ ಇಲ್ಲ. ಮಾತ್ರ ಅವರ ಲೇಖನವನ್ನು ನೋಡಿ, ಆ ದತ್ತಾತ್ರೇಯನ ಸಂಬಂಧವಾಗಿ ನನ್ನ ಮನದಲ್ಲಿ ಅನೇಕ ದಿವಸಗಳಿಂದ ಓಡಾಡುತ್ತಿರುವ ವಿಚಾರವು ನೆನಪಿಗೆ ಬಂದಿತು. ಅದನ್ನು ಈಗ ತಮ್ಮ ಸುಜ್ಞ ವಾಚಕರ ಮುಂದಿಡುವದು ಅಪ್ರಾಸಂಗಿಕವಾಗಲಾರದೆಂದು ಬಗೆದು, ಈ ಅಲ್ಪ ಲೇಖನವನ್ನು ಕಳಿಸಿರುವೆನು.

ಜಗತ್ತಿಲ್ಲ ಒಬ್ಬನೇ ಒಬ್ಬ ದೇವರೆಂಬುದು ನಿಜವಿದ್ದರೂ ಹಿಂದುಗಳು, ಸೃಷ್ಟಿಯ ಉತ್ಪತ್ತಿ ಸ್ಥಿತಿ ಲಯಗಳೆಂಬ ಮೂರು ಕಾರ್ಯಗಳ ಕಡೆಗೆ ಲಕ್ಷ್ಯಗೊಟ್ಟು, ಆಯಾ ಕಾರ್ಯಗಳ ಸಂಬಂಧವಾಗಿ ಅವನಿಗೆ ಬೇರೆಬೇರೆ ಬ್ರಹ್ಮ ವಿಷ್ಣು ರುದ್ರ (ಶಿವ) ಎಂಬ ಮೂರು ರೂಪುಗಳನ್ನು ಎಣಿಸುವರು. ಸಾಮಾನ್ಯ ಲೌಕಿಕರು ಈ ತ್ರಿಮೂರ್ತಿಗಳಲ್ಲಿ ತಮ್ಮ ತಮ್ಮ ಇಷ್ಟಾನುಸಾರವಾಗಿ ಯಾವದೊಂದು ರೂಪವನ್ನು ಆರಾಧಿಸತೊಡಗಿದರು. ಹಾಗು ತಾವು ಆರಾಧಿಸುವ ಸ್ವರೂಪವೇ "ಸರ್ವೋತ್ತಮ" ವೆಂದು ಪ್ರತಿಪಾದಿಸಹತ್ತಿದರು. ಈ ಮೂರ್ತಿಗಳಲ್ಲಿ ಶಿವ ವಿಷ್ಣು ಗಳೆಂಬೆರಡೇ ಮೂರ್ತಿಗಳನ್ನು ಭಜಿಸುವವರ ಸಂಖ್ಯೆಯೇ ಹೆಚ್ಚು. ಆದ ಕಾರಣ ಹಿಂದುಗಳಲ್ಲಿ ಶೈವ ವೈಷ್ಣವವೆಂಬೆರಡು ಪಂಥಗಳು ದೊಡ್ಡವಾಗಿ ಒಡೆದು ತೋರಹತ್ತಿದವು. ಅವರು ತಮ್ಮ ತಮ್ಮ ಮೂರ್ತಿಯನ್ನೇ ಹೆಚ್ಚಾಗಿ ಏರಿಸಿ ಕೊಂಡಾಡಿದ್ದಲ್ಲದೆ, ಇತರ ಮೂರ್ತಿಯನ್ನು ಇಳಿಸಿ ಜರೆದು ದ್ವೇಷಾಸೂಯ ಭಾವದಿಂದ ಕಾಣಹತ್ತಿದರು. ಇದರ ಪರಿಣಾಮವಾಗಿ ವಿಷ್ಣು ಪುರಾಣಗಳೂ ಶಿವಪುರಾಣಗಳೂ ಮನಸೋಕ್ತವಾಗಿ ರಚಿಸಲ್ಪಟ್ಟು, ಉರಿಯಲ್ಲಿ ಎಣ್ಣೆ ಸುರುವಿದಂತೆ ಮತ್ತಷ್ಟು ಜಗಳವನ್ನು ಹಬ್ಬಿಸಿ ಒಡಕನ್ನುಂಟು ಮಾಡಿದವು. ಇದೆಲ್ಲ ಕೇವಲ ನಿರರ್ಥಕವೂ ಅಜ್ಞಾನಮೂಲಕವೂ ಎಂಬುದು ನಿಸ್ಸಂದಿಗ್ಧವು. ಜನತೆಯ ತಲೆಯೊಳಗೆ ಒಮ್ಮೆ ಇಂಥಿಂಥ ಕಲ್ಪನೆಯು ದೃಢವಾಗುತ್ತಲೇ ನಡೆಯಿತು. ಈ ಭಾವನೆಯು ಅತಿರೇಕವಾಗಿ ಇದರ ಅಸಹ್ಯಕರವಾದ ಘಾತಕ ಪರಿಣಾಮವು ಒಡೆದು ತೋರಹತ್ತಿದ್ದರಿಂದ, ಅನೇಕ ಬುದ್ಧಿವಂತರಾದ ಮಹಾತ್ಮರು ಈ ವಿಷಮತೆಯನ್ನು ನೀಗಲಿಕ್ಕೆ ಆಗಾಗ್ಗೆ ಪ್ರಯತ್ನ ಪಡುತ್ತಲೇ ಬಂದಿರುವರು. ಅಂತಹವುಗಳೊಳಗೇ ಇದೊಂದು ದತ್ತಾತ್ರೇಯ ಅವತಾರದ ವಿಷಯವು.

ಈ ಸಂಬಂಧ ನನ್ನ ವಿಚಾರಗಳನ್ನು ಹೇಳುವದಕ್ಕಿಂತ ಮೊದಲು, ಕೀರ್ತನಕಾರರು ಹೇಳುವ ದತ್ತ ಜನ್ಮಕತೆಯನ್ನು ಸಂಕ್ಷೇಪವಾಗಿ ಬರೆಯುವದು ಯುಕ್ತವು. ಆದರಿಂದ ನನ್ನ ಹೇಳಿಕೆಯು ಒಳಿತಾಗಿ ಒಡಮೂಡಲಿಕ್ಕೆ ಸಹಾಯವಾಗುವದು. ಅದು ಸಾಧಾರಣವಾಗಿ ಶ್ರೀಬುಧ್ಯಯ್ಯನವರು ಶಿ. ಭ. ವರ್ಷ೨, ಸಂಚಿ ೬ನೆಯ ಪುಟಗಳಲ್ಲಿ ಕೊಟ್ಟ ಕಥೆಯೇ ಇರಿ. ಆದರೂ ಅದರಲ್ಲಿ ಇನ್ನೊಂದು ಹೆಚ್ಚಿನ ಮಾತು ಅಂತರ್ಭೂತವಾಗಿರುವದು. ಆ ಕಥೆಯ ಸಾರಾಂಶವೇನೆಂದರೆ:— ತ್ರಿಮೂರ್ತಿಗಳ ಹೆಂಡಂದಿರಾದ ಸರಸ್ವತಿ ಲಕ್ಷ್ಮಿ ಪಾರ್ವತಿಯರಿಗೆ, ತಮ್ಮ ಪಾತಿವ್ರತ್ಯದ ಬಗ್ಗೆ ಅತ್ಯಂತ ಅಭಿಮಾನ (ಗರ್ವ) ವುಂಟಾಗಿದ್ದಿತು. ಅದು ನಾರದ ಮುನಿಗಳಿಗೆ ತಿಳಿಯಲು; ಆ ಗರ್ವನಿರಸನಕ್ಕಾಗಿ ಅವರು ಒಂದು ಉಪಾಯ ಯೋಜನೆಯನ್ನು ಮಾಡಿದರು. ಕೆಲವು ಉಕ್ಕಿನ ಕಡಲೆಯ ಕಾಳುಗಳನ್ನು ತಮ್ಮ ಸಂಗಡ ಒಯ್ದು, "ಇವನ್ನು ಕುದಿಸಿ ಮೃದು ಮಾಡಿ ಗುಗ್ಗರಿಯಂತೆ ತಿನ್ನಲಿಕ್ಕೆ ಆಹಾರವನ್ನು ಸಿದ್ಧಮಾಡಿ ಕೊಡಿರಿ. ಪತಿವ್ರತೆಯರಿಗೆ ಮಾತ್ರ ಇದು ಸಾಧ್ಯ. ಅಂತೇ ನಿಮ್ಮ ಬಳಿಗೆ ಬಂದಿದ್ದೇನೆ" ಎಂದು ಆ ಮೂವರ ಬಳಿಯಲ್ಲಿಯೂ ಹೋಗಿ ಪ್ರಾರ್ಥಿಸಿದರು. ಆದಾಗ್ಯೂ ಅವರು ಇದು ಅಸಂಭವವೆಂದು ನೆನೆದು, ತಮ್ಮಿಂದಾಗದಿದ್ದರೆ ಏನಾಕಾರಣ ಅಪಹಾಸ್ಯಕ್ಕೆ ಗುರಿಯಾದೇನೆಂದು ಯೋಚಿಸಿ, ಸಿದ್ಧರಾಗಿರಿಸಿದರು. ಕೂಡಲೆ ಮುನಿಯು ಹೋಗಿ ಅತ್ರಿ ಪತ್ನಿಯಾದ ಅನಸೂಯೆಗೆ ಬೇಡಿಕೊಳ್ಳಲು ಆಕೆ ಜಪವನ್ನು ಕುದಿಸಿ ಮೃದುವಾದ ಗುಗ್ಗರಿ ಮಾಡಿಕೊಟ್ಟಳು. ನಾರದನು ಸಂತುಷ್ಟನಾಗಿ, ಅವಳ ಪಾತಿವ್ರತ್ಯವನ್ನು ತ್ರಿಲೋಕದಲ್ಲಿ ವಿಸ್ತರಿಸಿದನು. ಈ ಸುದ್ದಿ ತಿಳಿದು, ಶಕ್ತಿತ್ರಯರು ಒಟ್ಟಿಕರಾಗಿ, ದುರ್ಭಿಮಾನವನ್ನು ತಾಳಿ, ಆ ಅನಸೂಯೆಯ ಸತ್ವ (ಪಾತಿವ್ರತ್ಯ) ಹರಣವಾಗಬೇಕೆಂದು ಆಲೋಚಿಸಿ, ತಮ್ಮ ತಮ್ಮ

ಪತಿರಾಜರನ್ನು ಬೋಧಿಸಿ ಹುರಿದುಂಬಿಸಿ ಆ ಕಾರ್ಯಕ್ಕೆ ಅಣಿಗೊಳಿಸಿದರು. ಅವರು ಅತಿಥಿಗಳಾಗಿ ಅತ್ರಿಯ ಆಶ್ರಮವನ್ನು ಸೇರಿ, ಅವನಿಲ್ಲದಾಗ ಅನಸೂಯೆಯಿಂದ ವಚನ ತಕ್ಕೊಂಡು, ಇಚ್ಛಾ ಭೋಜನವನ್ನು ದಿಗಂಬರೆಯಾಗಿ ನೀಡಿ, ತೃಪ್ತಿಪಡಿಬೇಕೆಂದು ಯಾಚಿಸಿದರು. ಅವಳು ಇಂಗಿತವನರಿದು ಒಪ್ಪಿ, ಪತಿಯು ಒಳಗಿರುವ ಪಾದೋದಕವನ್ನು ತಂದು ಅವರಿಗೆ ಸೇಚನೆಗೆಯ್ಯಲು, ಕೂಡಲೆ ಮೂವರೂ ಕೂಸುಗಳಾದರು. ಬಳಿಕ ತಾನು ದಿಗ್ವಸ್ತ್ರಳಾಗಿ ಮೂವರಿಗೂ ಯಥೇಚ್ಛ ಸ್ತನ್ಯಪಾನ ಮಾಡಿಸಿ, ಒಂದೇ ತೊಟ್ಟಿಲಲ್ಲಿ ಮಲಗಿಸಿ ತೂಗಿ ಜೋಗುಳವಾಡಿ ಮಲಗಿಸಿದಳು. ಮುಂದೆ ಅತ್ರಿಯು ಬಂದು ನೋಡಿ ಕೇಳಿ ಸಂತುಷ್ಟನಾದನು, ಮಲಗಿದಲ್ಲೇ ಆ ಕೂಸುಗಳ ಧಡಗಳೆಲ್ಲ ಕೂಡಿ ಒಂದಾದವು. ಮುಖಗಳು ಮಾತ್ರ ಭಿನ್ನವಾಗಿಯೇ ಉಳಿದವು. ನಡುವಿನ ಮೊಗನೇ ಶಿವನದು. ಎಡಬಲದವು ಬ್ರಹ್ಮ ವಿಷ್ಣುಗಳವು ಇರುವುದುಂಟು. ಈ ಮೂರ್ತಿಯೇ ದತ್ತಾತ್ರಯ.

ಕ್ರಮೇಣ ಈ ಸುದ್ದಿಯು ಶಕ್ತಿತ್ರಯರಿಗೆ ತಿಳಿದು ಕೃತಕಾರ್ಯಕ್ಕೆ ಪಾಶ್ಚಾತ್ತಾಪ ಪಟ್ಟು ನಾಚಿ ಅನಸೂಯೆಯ ಕಡೆಗೆ ಹೋಗಿ, ನಮಸ್ಕರಿಸಿ ಪ್ರಾರ್ಥಿಸಿ ತಮ್ಮ ಅಪರಾಧ ಕ್ಷಮಿಸಬೇಕೆಂದು ಬೇಡಿಕೊಂಡು, ತಿರುಗಿ ತಮ್ಮ ತಮ್ಮ ಪತಿಗಳನ್ನು ಪಡೆದುಕೊಂಡು ಸ್ವಸ್ಥಾನಗಳನ್ನು ಹೊಂದಿದರು.

ಇನ್ನು ನನ್ನ ವಿಚಾರವನ್ನು ಮುಂದಿಸುವೆನು. ಈ ಕಥೆಯಲ್ಲಿ ಆಲೋಚಿತವ್ಯ ಮುಖ್ಯ ಅಂಶಗಳೆಂದರೆ— ತ್ರಿಮೂರ್ತಿಗಳು, ಅವರ ಶಕ್ತಿತ್ರಯ, ನಾರದನ ಉಕ್ಕಿನ ಕಡಲೆ, ಪಾತಿವ್ರತ್ಯ, ಅನಸೂಯೆ, ಅತ್ರಿ, ದತ್ತಾತ್ರಯ, ಎಂಬವುಗಳೇ ಇವನ್ನು ಅನುಕ್ರಮದಿಂದ ಕೆಳಗೆ ವಿವೇಚಿಸುವೆನು.

೧. ತ್ರಿಮೂರ್ತಿಗಳು,— ಬ್ರಹ್ಮ ವಿಷ್ಣು ರುದ್ರರೆಂಬ ಇವರೇನು ಸ್ವತಂತ್ರ ವ್ಯಕ್ತಿಗಳಲ್ಲ. ಸೃಷ್ಟಿಸುವದು (ಹೂಡುವದು), ರಕ್ಷಿಸುವದು (ಆಡುವದು), ವಿಸರ್ಜಿಸುವದು (ದೂಡುವದು) ಎಂಬ ಕಾರ್ಯಾಂತರಗಳ ಮೂಲಕ, ಒಬ್ಬನೇ ದೇವನಿಗೆ ಬಿದ್ದಿರುವ ಹೆಸರುಗಳಿಂದ ಉಂಟಾದವರು. ಆದುದರಿಂದ ಕೇವಲ ಕಾಲ್ಪನಿಕರೇ ಹೊರತು ನಿಜವಾದವರಲ್ಲ. ಇಂತಹ ಸಂಗತಿಯನ್ನು ನಾವು ವ್ಯವಹಾರದಲ್ಲಿ ನಿತ್ಯಶಃ ನೋಡುತ್ತೇವೆ. ಒಬ್ಬನೇ ಮನುಷ್ಯನು ಹಳ್ಳಿಯಲ್ಲಿ ಕಿರಾಣಿ ಅಂಗಡಿಯನ್ನಿಟ್ಟು ಅಂಗಡಿ

ಕಾರನೆಂದೂ, ಪೋಸ್ಟಿನ ಕೆಲಸಸಾಗಿಸಿ ಪೋಸ್ಟ ಮಾಸ್ತರನೆಂದೂ, ಔಷಧದ ಕೊಟ್ಟು ವೈದ್ಯನೆಂದೂ ಕಂಸಿಕೊಳ್ಳುವದು ಎಲ್ಲರಿಗೂ ಗೊತ್ತು.

೨. ತ್ರಿಮೂರ್ತಿಗಳ ಶಕ್ತಿತ್ರಯ— ಬ್ರಹ್ಮನು ಚಿತ್ರವಿಚಿತ್ರವಾದ ಸೃಷ್ಟಿಯನ್ನು ನಿರ್ಮಿಸತಕ್ಕವನಾದುದರಿಂದ ಅವನಿಗೆ ವಿಶಾಲವಾದ ಬುದ್ಧಿ ಶಕ್ತಿಯೇ ಬೇಕು ಆದುದರಿಂದ ವಿದ್ಯಾದೇವಿಯೆನಿಸಿದ ಸರಸ್ವತಿಯು ಆತನ ಹೆಂಡತಿಯಾದಳು. ವಿಷ್ಣುವು, ಸೃಷ್ಟಿಯಲ್ಲಿ ನಿರ್ಮಿತವಾದ ಸಕಲ ಪ್ರಾಣ್ಯಾದಿಗಳನ್ನು ಸಂರಕ್ಷಿಸಬೇಕಾದುದರಿಂದ ಅವನಿಗೆ ಧನಸಂಪತ್ತು ಅವಶ್ಯವಾಗಿಬೇಕು. ಆ ಕಾರಣ ಲಕ್ಷ್ಮೀದೇವತೆಯು ಆತನ ಶಕ್ತಿಯೆನಿಸಿದಳು. ರುದ್ರನು ಸಂಹಾರಕರ್ತನಾದುದರಿಂದ ಸೃಷ್ಟಿಯನ್ನೆಲ್ಲ ನಾಶಪಡಿಸಿ, ಪೂರ್ವಸ್ಥಿತಿಗೆ ಒಯ್ಯುವನು. ಜಗತ್ತಿನಲ್ಲಿರುವ ಸಕಲ ವಸ್ತುಗಳು ಜಗತ್ತಿನಿಂದಲೇ ಹುಟ್ಟಿ, ಅದರಲ್ಲೇ ಕೆಲ ಕಾಲವಿದ್ದು, ಕಡೆಗೆ ಪುನಃ ಅದರಲ್ಲೇ ಬೆರೆದು ಬಿಡುವದನ್ನು ನಾವು ನೋಡುತ್ತೇವೆ. ಆದುದರಿಂದ ಈ ಜಗವೇ (ಧರಣಿ ಸ್ವರೂಪವಾದ ಪಾರ್ವತಿ ದೇವಿಯೇ) ರುದ್ರನ ಪತ್ನಿಯಾದಳು. ಈ ವಿಚಾರಸರಣಿಯಿಂದ ಪೌರಾಣಿಕರು ಅವರಿಗೆ ಹೆಂಡಂದಿರನ್ನು ಕಲ್ಪಿಸಿರುವರು. ಆದರೆ ಇಲ್ಲಿ ಆ ಹೆಂಡಂದಿರ ಸ್ವರೂಪವು ಭಿನ್ನವಾಗಿರುವದು. ಬೇರೆ ಬೇರೆ ದೇವತೆಗಳನ್ನು ತಮ್ಮ ಇಷ್ಟ ದೈವವೆಂದು ಬಗೆದು, ಭಕ್ತಿಭಾವದಿಂದ ಪ್ರೇರಿತರಾಗಿ ಆರಾಧಿಸುವ ಭಕ್ತ ಸಮುದಾಯವೇ, ಆಯಾ ಮೂರ್ತಿಗಳ ಶಕ್ತಿಸ್ವರೂಪರೆಂದು ಅರಿಯಬೇಕು. ಪತಿಪತಿಭಾವದಿಂದ ಭಕ್ತನು ಇಷ್ಟದೇವರಲ್ಲಿ ಬೆರೆಯುವದು ಸರ್ವಸಾಮಾನ್ಯವಾದ ಸಾಂಪ್ರದಾಯವಲ್ಲವೇ? "ಶರಣಸತಿ ಲಿಂಗಪತಿ" ಎಂದು ವೀರಶೈವರ ದೃಢವಾದ ನಂಬಿಗೆಯುಂಟು. ಆದುದರಿಂದ ಭಕ್ತರು ಸಹ ದೇವರಿಗೆ ಪತಿವ್ರತಾ ಪತ್ನೀಸ್ವರೂಪವೇ ಸರಿ.

×

೩. ನಾರದ = ಅಂದರೆ ಹಲ್ಲಿಲ್ಲದವನ, ಅರ್ಥಾತ್ ಮುದುಕ. ಈತನು ಹೆಚ್ಚು ಕಾಲ ಪ್ರಪಂಚದ ಅನುಭವ ಪಡೆದುದರಿಂದ ಸಾರಾ

× ನಾರದ = ನ+ಅ+ರದ- ಇದರಂತೆ ಸಹಾರಾನು, ಕೋಟ್ಯಾಧೀಶ, ವಿಶ್ವಾಮಿತ್ರ, ಶಿವಾಪುರ ಮುಂತಾದವುಗಳಾದರೂ ನಡುವೆ 'ಅ'ಕಾರಾಗಮವಾಗುವದು. ಇಲ್ಲವ 'ಅ' ಉಪಸರ್ಗ ಬರುವದು. ಇಂತಹ ಉದಾಹರಣೆಗಳು ಇನ್ನೂ ಅನೇಕವಾಗಿವೆ.

ಸಾರವಿಚಾರವುಳ್ಳವನೂ, ತರತರದ ಜನರ ಗುಣ ಸ್ವಭಾವಾದಿಗಳ ಪರೀಕ್ಷೆಯುಳ್ಳವನೂ, ಒಳಿತು ಕೆಡಕುಗಳನ್ನೂ ಹಿತಾಹಿತಗಳನ್ನೂ ತಪ್ಪದೆ ನಿರ್ಣಯಿಸುವ ಬುದ್ಧಿಯುಳ್ಳವನೂ, ದೇವರತ್ತ ಒಲೆದ ಮನಸ್ಸುಳ್ಳವನೂ ಆಗಿರುವನೆಂಬದು ಸ್ಪಷ್ಟವೇ. ಅವಕಾರಣ ಇಂತಹ ಹಿರಿಯರು ಸಕಲರಿಗೂ ವಂದ್ಯರು. ಇವರಿಗೆ ಎಲ್ಲೆಡೆಯಲ್ಲಿಯೂ ಮನ್ನಣೆಯುಂಟು. ಅವರ ಮಾತಿಗೆ ಮಹತ್ವವುಂಟಾಗುವದು. ಅವರ ಸದ್ಬೋಧೆಯನ್ನೂ ಸಲಹೆಯನ್ನೂ ಎಲ್ಲರೂ ಬಯಸುವರು. ನಾರದನು ತ್ರಿಲೋಕಸಂಚಾರಿ ಎಂದು ಖ್ಯಾತಿಯುಂಟು. ಸಾತ್ವಿಕ (ಉತ್ತಮ) ರಾಜಸ (ಮಧ್ಯಮ), ತಾಮಸ (ನೀಚ) ಗುಣಗಳುಳ್ಳವರೇ ಕ್ರಮವಾಗಿ ದೇವತೆಗಳು, ಮನುಜರು, ರಾಕ್ಷಸರು ಎಂದೆನ್ನಿಸಿಕೊಳ್ಳುವರು. ಅವರು ವಾಸಿಸುವ ಸ್ಥಾನಗಳೇ ಸ್ವರ್ಗ (ಪ್ರಕಾಶಮಾನವಾದ ಊರ್ಧ್ವಲೋಕ) ಮರ್ತ್ಯ, ಪಾತಾಳ (ಅಧೋಲೋಕ) ಗಳೆಂಬ ಲೋಕತ್ರಯವು. ಈ ತ್ರಿಲೋಕಗಳು ಭೂಲೋಕದಲ್ಲಿಯೇ ಉಂಟೆಂಬುವದಕ್ಕೆ ಶ್ರೀ ಬಸವಣ್ಣನವರ ಮುಂದಿನ ವಚನವನ್ನು ನೋಡಿರಿ. "ದೇವಲೋಕ ಮರ್ತ್ಯಲೋಕವೆಂಬವು ಬೇರಿಲ್ಲ ಕಾಣಿರೋ. ಈ ಲೋಕದೊಳಗೆ ಮತ್ತನಂತ ಲೋಕ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣ ಕೂಡಲಸಂಗಮದೇವಾ" ಎಂದು ಹೇಳಿದ್ದಾರೆ. ಆದುದರಿಂದ ಈ ಪಿತಾಮಹಸ್ವರೂಪದ ಅರ್ಜುನ (ಅಜ್ಜನು), ಶ್ರೇಷ್ಠ ಸಾಮಾನ್ಯ ಕನಿಷ್ಠರೆಂದೆನಿಸುವ ಎಲ್ಲರ ಕಡೆಗೂ ಹೋಗುವ ಅಧಿಕಾರವುಳ್ಳವನಾದುದರಿಂದ ಇವನು ತ್ರಿಲೋಕ ಸಂಚಾರಿಯು. ಆ ಕಾರಣ ಹಲ್ಲಿಲ್ಲದ ವೃದ್ಧನೇ ನಾರದನೆಂಬುವ ಮಾತು.

೪. ಉಕ್ಕಿನ ಕಡಲೆ— ತ್ರಿಮೂರ್ತಿಗಳ ಭಿನ್ನ ಭಿನ್ನ ಸರ್ವೋತ್ಕೃಷ್ಟತ್ವವು ಸಮಾಜದಲ್ಲಿ ವಾದಕ್ಕೆ ಕಾರಣವಾಗಿ, ಅತಿಮಾತ್ರವಾಗಿ ಸೊಕ್ಕಿ, ಹಠಾತ್ತಾದ ದುರಭಿಮಾನ ಸ್ವರೂಪಕ್ಕಿಳಿದುದೇ, ಬಿರುಸಾದ ಉಕ್ಕಿನ ಕಡಲೆಗಳು. ಇವನ್ನು ಕುದಿಸಿ ಸೇವಿಸುವಂತೆ ಮಾಡುವದೆಂದರೆ, ಆ ದೃಢ ಮೂಲವಾದ ಕಠಿಣತರ ದುರಭಿಮಾನವನ್ನು ಬಿಟ್ಟು, ಜನರೆಲ್ಲರೂ "ತ್ರಿಮೂರ್ತಿಗಳು ಸುಳ್ಳು. ಅವರು ನಿಜವಾದ ಒಬ್ಬನೇ ದೇವನ ಕಾಲ್ಪನಿಕ ಸ್ವರೂಪ ಭೇದವೆಂದಿಸುವದು ಮೂಢತನವೂ ಅಜ್ಞಾನವೂ"

ಎಂದು ಬಗೆದು, ಐಕ್ಯದ ತಳಹದಿಗೆ ಇಳಿಯುವದೇ ಸೈ! ಇದು ಆ ಶಕ್ತಿ ದೇವಿಯರಿಗೆ ವ್ಯಕ್ತಿಶಃ ಅಸಾಧ್ಯವಾದುದು. ಆದುದರಿಂದ ಅವರು ಒಪ್ಪಲಿಲ್ಲ.

೫. ಪಾತಿವ್ರತ್ಯ— ಇದು ಭಕ್ತರಲ್ಲಿರುವ ದೇವನಿಷ್ಠೆಯು, (ಅಥವಾ ಪತ್ನಿಯಲ್ಲಿರುವ ಪತಿ ನಿಷ್ಠೆಯು). ಅಖಂಡ ಪರಮಾತ್ಮನೆನಿಸುವ ದೇವನೊಬ್ಬನೇ ಇರುವನೆಂದು ತಿಳಿದು, ಆತನ ಸೇವೆಯಲ್ಲಿ ಅಸಕ್ತವಾಗಿರುವದೇ ಮೇಲ್ತರದ ಪಾತಿವ್ರತ್ಯ. ಇದಕ್ಕೆ ಬದಲಾಗಿ ಆ ದೇವನಲ್ಲಿ ಅನೇಕ ಭೇದ ಮೂರ್ತಿಗಳನ್ನು ಕಲ್ಪಿಸಿ, ಅಪ್ಪರ ಮಟ್ಟಗೇನೇ ನಿಷ್ಠೆಯನ್ನು ಧರಿಸುವದು ಖಂಡ ಪಾತಿವ್ರತ್ಯವು. ಇದು ಕೇಳು ಎಂದು ಬೇರೆ ಹೇಳುವ ಅವಶ್ಯಕತೆಯೇ ಇಲ್ಲ.

೬. ಅನಸೂಯೆ—(ನ+ಅಸೂಯೆ=ಅನ್+ಅಸೂಯೆ=ಅನಸೂಯೆ) ಅಂದರೆ ಮಾತ್ಸರ್ಯರಹಿತಳು. ಜನರಲ್ಲಿರುವ ಪ್ರತ್ಯೇಕವಾದ ತ್ರಿಮೂರ್ತಿಗಳ ದುರಭಿಮಾನವು ಅಳಿದಾಗಲೇ ಅವರು ನಿರ್ಮತ್ಸರರಾಗುವರು. ಆಗಲೇ ಅನಸೂಯೆ ಜನ್ಮವಾಗುವದು. ಈ ಅನಸೂಯಾ ಶಬ್ದವು ಸಂಸ್ಕೃತದಲ್ಲಿ ಸ್ತ್ರೀಲಿಂಗವೆಂದು ಎಣಿಸಲ್ಪಡುವದರಿಂದ, ಅನಸೂಯೆಯು ಅತ್ರಿಯ ಪತ್ನಿಯೆಂದು ತಿಳಿಯಲಾಗಿದೆ.

೭. ಅತ್ರಿ— (ನ+ತ್ರಿ=ಅ+ತ್ರಿ=ಅತ್ರಿ) ಅಂದರೆ ಮೂರು ಅಲ್ಲದವ, ತ್ರಿಮೂರ್ತಿಗಳಿಗೆ ಅತೀತನಾದವ, ಅರ್ಥಾತ್ ಒಬ್ಬನೇ ಆದ ಮೂಲ ದೇವನು. ತ್ರಿಮೂರ್ತಿಗಳಲ್ಲಿ ಪ್ರತ್ಯೇಕವಾದ "ತಮ್ಮ ಇಷ್ಟ ದೈವತವೇ ಶ್ರೇಷ್ಠ" ವೆಂಬ ಒಡಮೂಡಿದ ದುರಾಗ್ರಹವನ್ನು ನಾಶಪಡಿಸಿ "ಒಬ್ಬನನ್ನೇ ಒಬ್ಬ ದೇವರು— ಏಕೋದೇವ ನ ದ್ವಿತೀಯ— (ಪರಮಾತ್ಮನು) ಇರುವನು. ಆವನನ್ನೇ ನಾವೆಲ್ಲರು ಭಜಿಸುತ್ತೀವೆ" ಎಂಬ ಧಾವನೆ ನೆಲೆಗೊಂಡಾಗಲೇ ಅತ್ರಿಯು ಜನಿಸುವನು. ಈ ನಿಜವಾದ ಪತಿ ಪರಾಯಣತೆಯಾದುದರಿಂದಲೇ ಅನಸೂಯೆ ಅಪ್ರತಿಮ ಪತಿವ್ರತೆಯಾದಳು.

೮. ದತ್ತಾತ್ರಯ— (ದತ್ತ+ಅತ್ರಯ)

(ಅ) ದತ್ತ ಅಂದರೆ (ಅತ್ರಿಯಿಂದ ಸಮಾಜಕ್ಕೆ ಆರಾಧನೆಗೋಸುಗ ಕೊಡಲ್ಪಟ್ಟವ.)

(ಬ) ಆತ್ರೆಯ(ಅತ್ರಿ-ಅ = ಅತ್ರಯ) ಅಂದರೆ ಅತ್ರಿಯ ಮಗನು.

ಈ ವಿವರಣೆಯಿಂದ ಸಮಾಜದಲ್ಲಿ ದತ್ತಾತ್ರೆಯನ ಅವತಾರವು ಹೇಗೆಯಾಕೆ ಅದಾವ ಸ್ಥಿತಿಯಲ್ಲಿ ಆಯಿತೆಂಬ ವಿಷಯಗಳು, ಓದುಗರ ಮನಸ್ಸಿನಲ್ಲಿ ನಿರಾತಂಕವಾಗಿ ಬಿಂಬಿಸುವವೆಂದು ನಂಬಿರುವೆನು. ಈ ಸಂಗತಿಯನ್ನು ಒಂದು ಉತ್ಪ್ರೇಕ್ಷೆಯಿಂದ ರೂಪಿಸಿ, ಪುರಾಣಾಂತರಗಳಲ್ಲಿ ಸೇರಿಸಿರುವರೆಂದು ತೋರುತ್ತದೆ. ಬಲ್ಲವರು ಇತ್ತ ಗಮನಿಸಿ, ತಮ್ಮ ತಮ್ಮ ವಿಚಾರಗಳನ್ನು ಪ್ರಕಟಿಸಬೇಕೆಂದು ಅಪೇಕ್ಷಿಸುವೆನು.

೧೩ನೇ ಶತಮಾನದಲ್ಲಿ ವೀರಶೈವ ವಾಙ್ಮಯವಿದ್ದಿಲ್ಲವೇ ಹೇಗೆ?

(ಲೇಖಕ:— ರಾ॰ ಸಾ॰ ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ವಿಜಾಪುರ)

ವೀರಶೈವ ವಾಙ್ಮಯದ ವಿಷಯವಾಗಿ ಜನರಲ್ಲಿ ಅನೇಕ ತಪ್ಪು ತಿಳುವಳಿಕೆಗಳಿರುತ್ತವೆ. ಅವುಗಳಲ್ಲಿ ೧೩ನೇ ಶತಮಾನದಲ್ಲಿ ಅಂದರೆ ಬಸವೇಶ್ವರನ ಕಾಲದ ನಂತರ ವೀರಶೈವರಲ್ಲಿ ಯಾವ ಗ್ರಂಥಕಾರರೂ ಉದ್ಭವಿಸಲಿಲ್ಲ, ಅರ್ಥಾತ್ ಆಗ ಅವರ ವಾಙ್ಮಯವೇ ಇರಲಿಲ್ಲವೆಂದು ಬಹು ಜನರು, ಅವರಲ್ಲಿ ವಿದ್ವಾಂಸರು ಸಹ ಭಾವಿಸಿರುತ್ತಾರೆ. ಇಷ್ಟೇ ಅಲ್ಲ, ಆ ರೀತಿಯಾಗಿ ಅನೇಕ ಬರವಣಿಗೆಗಳನ್ನು ಸಹ ಅವರು ಬರೆಯುತ್ತಲಿದ್ದಾರೆ. ವ್ಯಾಖ್ಯಾನಗಳಲ್ಲಿ ಪ್ರತಿಪಾದಿಸುತ್ತಲೂ ಇದ್ದಾರೆ. ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಸಹ ಈ ಧೋರಣದಿಂದ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಹಾಕುವದೂ ಉಂಟು. ಇಂಥ ಪ್ರಶ್ನಕಾಗದಗಳ ಮೇಲಿಂದ

---

೧ ಆದಿ ಸ್ವರಕ್ಕೆ ವೃದ್ಧಿ ಅಂತ್ಯ ಸ್ವರಕ್ಕೆ ಗುಣ. ಅತ್ರಿ+ಅ=ಅತ್ರಯು+ಅ=ಅತ್ರಯ.

ಮೇಲಿನ ಮತ್ತು ಕೆಳಗಿನ ಶೈಕ್ಷಣಿಕವರ್ಗಗಳಲ್ಲಿ ಪ್ರೊಫೆಸರರೂ ಶಿಕ್ಷಕರೂ ಆ ರೀತಿ ವಿಧಾನಗಳನ್ನು ಮಾಡುತ್ತಿರಬಹುದೆಂದು ನಮಗೆ ತೋರುತ್ತದೆ. ಆದರೆ ಇವರ ಪಂಡಾಮವು ಇಷ್ಟಕ್ಕೆಯೇ ನಿಂತಿಲ್ಲ. ಬಸವೇಶ್ವರನ ತರುವಾಯ ಹೀಗೆ ಒಂದು ಶತಮಾನಕಾಲ ವೀರಶೈವ ವಾಙ್ಮಯವಿಲ್ಲವೆಂದು ತಿಳಿದದ್ದರಿಂದ ಯಾವ ವಚನವಾಙ್ಮಯವು ಬಸವೇಶ್ವರನ ಕಾಲದಲ್ಲಿ ಉದಯವಾಯಿತೆಂದು ಭಾವಿಸಲ್ಪಟ್ಟಿದೆಯೋ ಅದೂ ಕೂಡ ಬಸವೇಶ್ವರನ ಕಾಲದಲ್ಲುದಯವಾಗಲಿಲ್ಲ, ಆದರೆ ಅವನು ಗತಿಸಿ ಒಂದು ಶತಮಾನಕಾಲ ಸಂದಿ ಹೋದ ಬಳಿಕ ಯಾರೋ ಕೆಲವರು ಈ ವಾಙ್ಮಯವನ್ನು ಅವನ ಅಥವಾ ಶಿವಶರಣರ ಹೆಸರಿನಿಂದ ರಚಿಸಿದ್ದಾರೆಂದು ಸಹ ವಿಧಾನಗಳು ಮಾಡಲ್ಪಟ್ಟಿರುತ್ತವೆ. ಇದಕ್ಕೆ ಉದಾಹರಣೆ ಎಂದರೆ ಪ್ರಬುದ್ಧಕರ್ನಾಟಕದ ೨೧ನೇ ಸಂಪುಟ ೪ನೇ ಸಂಚಿಕೆಯೇ ಇರುತ್ತದೆ.

ಈಗ ಬಹು ಜನರು ಅವರಲ್ಲಿ ವಿದ್ವಾಂಸರೂ ಕೂಡ ವೀರಶೈವ ವಾಙ್ಮಯವು ಉತ್ಪನ್ನವಾದ್ದರಿಂದಲೇ ಜೈನ ವಾಙ್ಮಯವು ನಿಂತಿತೆಂದು ಇನ್ನೊಂದು ವಿಧಾನವನ್ನು ಮಾಡುವದುಂಟು. ಅಂದರೆ ವೀರಶೈವರು ಜೈನರ ಮೇಲೆ ಏನೋ ಒಂದು ಬಲಾತ್ಕಾರ ಮಾಡಿರಬಹುದೆಂಬ ತಿಳುವಳಿಕೆಯು ಇವೆ. ಇದಾದರೂ ನಿಜವಾದುದಲ್ಲ. ಯಾಕೆಂದರೆ ಬಸವೇಶ್ವರನು ಉದಯವಾದದ್ದು ೧೩ನೇ ಶತಮಾನದ ಮಧ್ಯಭಾಗದಲ್ಲಿ. ಆದರೆ ೧೩ನೇ ಶತಮಾನದಲ್ಲಿಲ್ಲ ಜೈನವಾಙ್ಮಯದಲ್ಲಿ ಅತಿ ಪ್ರಸಿದ್ಧಿಹೊಂದಿದ ಗ್ರಂಥಕಾರರು ಉದ್ಭವಿಸಿರುತ್ತಾರೆ. ಉದಾಃ— ವಿಜಾಪುರ ಪಟ್ಟಣದಲ್ಲಿದ್ದ ನೇಮಿಚಂದ್ರನು ೧೨೭೦ ರಲ್ಲಿದ್ದನು. ಬಾಗೇವಾಡಿಗೆ ಸಮೀಪವಾಗಿರುವ ಇಂಗುಳೇಶ್ವರದಲ್ಲಿ ಚಂದ್ರಪ್ರಭ ಪ.ರಾಣವನ್ನು ಬರೆದ ಅರ್ಗಳನು ೧೧೯೯ ರಲ್ಲಿದ್ದನು. ಅಂದರೆ ಬಸವೇಶ್ವರನು ಉದಯವಾಗಿ ಯಾವ ತರ್ದವಾಡಿ (ವಿಜಾಪುರ) ನಾಡಿನಲ್ಲಿ ಮಹತ್ತರವಾದ ಕ್ರಾಂತಿಯನ್ನೆಸಗಿದನೋ ಆ ನಾಡಿನಲ್ಲಿಯೇ ಇಂಥ ಪ್ರಸಿದ್ಧ ಜೈನಗ್ರಂಥಕಾರರು ಅವನ ತರುವಾಯ ಸ್ವಲ್ಪ ವರ್ಷಗಳಲ್ಲಿಯೇ ಆಗಿಹೋಗಿದ್ದಾರೆ. ಕವಿಚಕ್ರವರ್ತಿಯಾದ ಜನ್ನನ ಕಾಲವು ೧೨೦೯ ಇದೆ. ಇವನು ಮೊದಲು ಉತ್ತರ ದೇಶದವನು. ಮುಂದೆ ಹೊಯಿಸಳರಲ್ಲಿಗೆ ಹೋಗಿ ನಿಂತನು. ಕಮಲಭವನು ೧೨೧೫ ರಲ್ಲಿ, ಅಂಡಯ್ಯನು ೧೨೩೫ ರಲ್ಲಿ, ಜೈನ ವ್ಯಾಕರಣಕಾರವಾದ ಕೇಶಿರಾಜನು ೧೨೬೦ ರಲ್ಲಿ ಆಗಿ

ಹೋಗಿದ್ದಾರೆ. ಇಂಥ ಉದ್ಗ್ರಂಥಗಳನ್ನು ಬರೆದ ಜೈನರು ಬಸವೇಶ್ವರನ ತರುವಾಯ ಕರ್ನಾಟಕದಲ್ಲಿ, ಅವರಲ್ಲಿ ಅನೇಕರು ಬಸವೇಶ್ವರನ ಜನ್ಮ ಸ್ಥಳಕ್ಕೆ ಸಮೀಪವಾಗಿರುವ ಗ್ರಾಮಗಳಲ್ಲಿ, ಉದಯಿಸಿದ್ದಾರೆ. ಈ ಎಲ್ಲ ಸಂಗತಿಗಳ ನಿಜಸ್ಥಿತಿಯನ್ನು ತೀಯಲು ಯತ್ನಿಸದೆ ಅವರಕಿಂತಲೂ ಪೂರ್ವದಲ್ಲಿ ವೀರಶೈವ ವಾಙ್ಮಯವೇ ಇದ್ದಿಲ್ಲವೆಂತಲೂ ವೀರಶೈವರು ಜೈನರ ಮೇಲೆ ಬಲಾತ್ಕಾರ ಮಾಡಿರಬಹುದೆಂತಲೂ ವಿದ್ವಾಂಸರು ಹೇಳುವ ಸಾಹಸವನ್ನು ಮಾಡುತ್ತಾರೆ. ವಚನ ವಾಙ್ಮಯವು ಹಿಂದುಗಡೆ ನಿರ್ಮಿಸಲ್ಪಟ್ಟಿದೆಂದು ತಿಳಿಯುವದಂತೂ ಎಷ್ಟು ತಪ್ಪಾದದ್ದೆಂಬದನ್ನು ಕುರಿತು ನಾವು ಹೋದ ತಿಂಗಳಿನ ಶಿವಾನುಭವ ಪತ್ರಿಕೆಯ ಸಂಚಿಕೆಯಲ್ಲಿ (ಸಂಪುಟ ೧೫ ಸಂಚಿಕೆ ೧) ಒಂದುವಿಸ್ತೃತ ಲೇಖವನ್ನು ಬರೆದಿದ್ದೇವೆ. ಅದರಲ್ಲಿ ನಾವು ವೀರಶೈವ ವಾಙ್ಮಯವು ಬಸವೇಶ್ವರನಕಿಂತ ಮೊದಲು ಅಸ್ತಿತ್ವದಲ್ಲಿತ್ತಿಂತಲೂ ಆ ಕಾಲಕ್ಕೆ ಕೆಲವು ಶಿವಶರಣರು ಉದಯವಾದರೆಂತಲೂ ಮುಂದೆ ಬಸವೇಶ್ವರನ ಕಾಲದಲ್ಲಿ ಅವನ ಶಿವಾನುಭವ ಮಂಟಪದಲ್ಲಿ ಅನೇಕ ಶಿವಶರಣರು ಇದ್ದು ಅವರು ಸ್ವತಃ ಅನೇಕ ವಚನ ಗ್ರಂಥಗಳನ್ನು ರಚಿಸಿದ್ದರೆಂತಲೂ ನಿರೂಪಿಸಿದ್ದೇವೆ. ಆದರೆ ಬಸವೇಶ್ವರನ ಕಾಲದಲ್ಲಿ ಶುರುವಾದ ವಾಙ್ಮಯ ಪ್ರಯತ್ನಗಳು ಒಂದು ಶತಮಾನದ ವರೆಗೆ ನಿಂತುಕೊಂಡು ಬಿಟ್ಟವೋ ಹೇಗೆ, ಹೀಗ್ಯಾಗುವದು ಶಕ್ಯವೇ ಹೇಗೆ, ೧೩ನೇ ಶತಮಾನದಲ್ಲಿ ವೀರಶೈವ ಗ್ರಂಥಕಾರರು ಇರಲಿಲ್ಲವೇ ಹೇಗೆ ಎಂಬುದನ್ನು ಕುರಿತು ನಾವು ಇಲ್ಲಿ ವಿವೇಚಿಸಲೆಹಸಿದ್ದೇವೆ.

೧೩ನೇ ಶತಮಾನದಲ್ಲಿ ವೀರಶೈವ ವಾಙ್ಮಯವೇ ಉಂಟಾಗಲಿಲ್ಲವೆನ್ನುವವರು ಕೆಲವು ಸಂಗತಿಗಳ ಬಗ್ಗೆ ತಪ್ಪು ಕಲ್ಪನೆಗಳನ್ನು ಮಾಡಿಕೊಂಡಿರುವದರಿಂದ ಅವರಿಂದ ಈ ಪ್ರಮಾದಗಳುಂಟಾಗಿವೆಯೆಂದು ನಮಗೆ ತೋರುತ್ತದೆ. ಅವು ಯಾವವೆಂದರೆ—

೧. ವೀರಶೈವರ ಕನ್ನಡ ವಾಙ್ಮಯವೆಂದರೆ ಬರೇ ಕಾವ್ಯಗಳಿರಬಹುದೆಂದು ಭಾವಿಸಿ, ಕಾವ್ಯಗಳ ಉತ್ಪತ್ತಿಯ ಕಡೆಗೆಯೇ ಹೆಚ್ಚಾಗಿ ಲಕ್ಷ ಕೊಟ್ಟು ಧಾರ್ಮಿಕ ಮತ್ತು ಅಧ್ಯಾತ್ಮಿಕ ವಾಙ್ಮಯವನ್ನು ಇವರು ದುರ್ಲಕ್ಷಿಸಿದ್ದಾರೆ.

೨. ಈ ಪ್ರಕಾರ ವಿಧಾನ ಮಾಡುವವರು ವಚನಗಳ ಕಾಲವನ್ನು ನಿರ್ಧರಿಸಲು ಏನೂ ಪ್ರಯತ್ನಿಸಿಲ್ಲ.

೩. ಇವರು ವೀರಶೈವ ಧರ್ಮದ ಬೆಳವಣಿಗೆಯ ನಿಜೇತಿಹಾಸವನ್ನು ಕಂಡುಹಿಡಿದಿಲ್ಲ.

ಈ ಮೂರು ಕಾರಣಗಳಿಗೋಸ್ಕರ ೧೩ನೇ ಶತಮಾನದಲ್ಲಿ ವೀರಶೈವ ವಾಙ್ಮಯವೇ ಉತ್ಪನ್ನವಾಗಲಿಲ್ಲವೆಂದು ಇವರು ಭಾವಿಸಿದಂತೆ ತೋರುತ್ತಿದೆ.

ವೀರಶೈವರಲ್ಲಿ ಕಾವ್ಯಗಳು ದೊಡ್ಡ ಪ್ರಮಾಣದಿಂದ ಉಂಟಾಗಹತ್ತಿದ್ದು ೧೫೯೯ ರಲ್ಲಿ ಆಗಿಹೋದ ಭೀಮ ಕವಿಯ ಕಾಲದ ನಂತರ ಎಂಬ ತಿಳುವಳಿಕೆ ಇದೆ. ಇದರಲ್ಲಿ ಕೆಲಮಟ್ಟಿಗೆ ನಿಜಾಂಶವು ಇರಬಹುದು. ಯಾಕಾದರೆ, ಇದರ ಮುಂದಿನ ಶತಮಾನದಲ್ಲಿ ವಿಜಯನಗರದ ರಾಜರಾದ ದೇವರಾಯ, ವಿರೂಪಾಕ್ಷರಾಯ ಮೊದಲಾದವರ ಕಾಲದಲ್ಲಿ ಅನೇಕ ಮಹತ್ವದ ಗ್ರಂಥಗಳಾಗಿವೆ. ಈ ಸಮಯವು ವೀರಶೈವ ವಾಙ್ಮಯದಲ್ಲಿ ಒಂದು ಕ್ರಾಂತಿಕಾಲವೆಂದು ಭಾವಿಸಲ್ಪಟ್ಟಿರುತ್ತವೆ. ಇವರ 'ತರುವಾಯ ಪ್ರತಿಯೊಂದು ಶತಮಾನದಲ್ಲಿಯೂ ಅಸಂಖ್ಯ ವೀರಶೈವ ಗ್ರಂಥಕಾರರು ಆಗಿಹೋಗಿರುವದು ಕಂಡುಬರುತ್ತದೆ. ಆದರೆ ಭೀಮ ಕವಿಯ ಪೂರ್ವದಲ್ಲಿ ವೀರಶೈವ ಕವಿಗಳು ಕೆಲವರು ಮಾತ್ರ ಆಗಿರುವದು ಕಂಡುಬರುತ್ತದೆ. ಅವರ ಸಂಖ್ಯೆಯು ಈಚೀಚಿನ ಕಾಲದಲ್ಲಿ ಆಗಿಹೋದಷ್ಟು ದೊಡ್ಡದು ಇರಲಿಕ್ಕಿಲ್ಲ. ಹರಿಹರ, ರಾಘವಾಂಕ, ಸೋಮರಾಜ, ಪಾಲ್ಕುರಿಕೆ ಸೋಮ, ಕೆರೆಯ ಪದ್ಮರಸ, ಹೀಗೆ ಕೆಲವರ ಹೆಸರುಗಳು ಮಾತ್ರ ನಮಗೆ ಸದ್ಯಕ್ಕೆ ಉಪಲಬ್ಧವಿವೆ. ಆದರೆ ಕೇವಲ ಇದೊಂದೇ ಸಂಗತಿಯ ಮೇಲಿಂದ ವೀರಶೈವ ವಾಙ್ಮಯದ ವಿಸ್ತಾರವು ೧೩ನೇ ಶತಮಾನದಲ್ಲಿ ಆಗಲಿಲ್ಲೆಂಬ ಅನುಮಾನವನ್ನು ಅನೇಕ ಜನ ಲೇಖಕರು ಮಾಡುವದುಂಟು. ಆದರೆ ಅವರ ಈ ಅಭಿಪ್ರಾಯವು ತೀರ ತಪ್ಪು ಇರುತ್ತದೆ. ಅನ್ಯರು ವೀರಶೈವ ವಾಙ್ಮಯವೆಂದರೆ ಬರೇ ಪುರಾಣಗಳು, ಕಾವ್ಯಗಳು, ಎಂದು ಭಾವಿಸಿದ ಹಾಗೆ ನಮಗೆ ತೋರುತ್ತದೆ. ಕನ್ನಡದಲ್ಲಿ ಬ್ರಾಹ್ಮಣ ವಾಙ್ಮಯದ ಪರಿಸ್ಥಿತಿಯು ಹೀಗೆ ಒಂದು ವೇಳೆ ಇರಬಹುದು. ಅದರಲ್ಲಿ ಕೇವಲ ಪುರಾಣ ಗ್ರಂಥಗಳ ಸಂಖ್ಯೆಯೇ ಬಹಳ ಹೆಚ್ಚಾಗಿರುತ್ತದೆ. ಕೆಲವು ಮಾತ್ರ ಆಧ್ಯಾ

ತ್ಮಿಕ ಗ್ರಂಥಗಳು ಇರುತ್ತವೆ. ಇದು ಸ್ವಾಭಾವಿಕವಾಗಿದೆ. ಯಾಕಂದರೆ ಇಂಥ ಉಚ್ಚ ವೇದಾಂತ ವಿಷಯಗಳ ಸಲುವಾಗಿ ಬ್ರಾಹ್ಮಣರಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆದ ಶ್ರೇಷ್ಠ ಗ್ರಂಥಗಳಿರುತ್ತವೆ. ಅದ್ದರಿಂದ ಇವುಗಳನ್ನೇ ಅವರು ಅಭ್ಯಾಸ ಮಾಡುತ್ತ ಬಂದಿರುತ್ತಾರೆ. ಜೈನರಲ್ಲಾದರೂ ಇದೇ ಸ್ಥಿತಿಯು ಇರುತ್ತದೆ. ಅವರು ತಮ್ಮ ಅಧ್ಯಾತ್ಮಿಕ ಗ್ರಂಥಗಳನ್ನು ಹೆಚ್ಚಾಗಿ ಕನ್ನಡದಲ್ಲಿ ಬರೆದಂತೆ ತೋರುವದಿಲ್ಲ. ಯಾಕಂದರೆ ಅವರು ಅದರ ಹೆಚ್ಚಿನ ಅಭ್ಯಾಸಕ್ಕೊಸ್ಕರ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳನ್ನು ಹೆಚ್ಚಾಗಿ ಉಪಯೋಗಿಸಿದ್ದು ಕಂಡುಬರುತ್ತದೆ. ಆದರೆ ಬಹು ಜನ ಸಮಾಜಕ್ಕೋಸ್ಕರ ಅವರು ಕನ್ನಡ ಭಾಷೆಯಲ್ಲಿ ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ಈ ಕಾವ್ಯಗಳೆಲ್ಲ ಬಹುತರವಾಗಿ ತೀರ್ಥಂಕರರ ಚರಿತ್ರೆಗಳಾಗಿರುತ್ತವೆ ಅದ್ದರಿಂದ ಬ್ರಾಹ್ಮಣ ಮತ್ತು ಜೈನ, ವಾಙ್ಮಯಗಳಿಗೋಸ್ಕರ ಮಾತ್ರ ಅವರವರ ಪುರಾಣಗಳ ಮೇಲಿಂದ ಅವರ ವಾಙ್ಮಯದ ನಿಜ ಸ್ಥಿತಿಯನ್ನು ನಿರ್ಧರಿಸುವದರಲ್ಲಿ ತಪ್ಪಾಗಲಾರದು. ಆದರೆ ವೀರಶೈವ ವಾಙ್ಮಯದ ಪರಿಸ್ಥಿತಿಯು ಹೀಗೆ ಇರುವದಿಲ್ಲ. ಅದರಲ್ಲಿ ಪುರಾಣಗಳು ರಚಿಸಲ್ಪಟ್ಟಂತೆಯೇ ಅಧ್ಯಾತ್ಮಿಕ ಗ್ರಂಥಗಳೂ ಹೇರಳವಾಗಿ ರಚಿಸಲ್ಪಟ್ಟಿರುತ್ತವೆ. ಯಾರು ೧೩ನೇ ಶತಮಾನದಲ್ಲಿ ವೀರಶೈವ ವಾಙ್ಮಯವಿಲ್ಲೆಂದು ಅಭಿಪ್ರಾಯಪಡುತ್ತಾರೋ, ಅವರು ಇಂಥ ಗ್ರಂಥಗಳು ಯಾವ ಯಾವವು ಉಂಟಾದವು ಮತ್ತು ಅವುಗಳ ಕಾಲವು ಅವುದು ಎಂಬುದನ್ನು ವಿವೇಚಿಸುವದು ಬಹಳ ಅವಶ್ಯವಿದೆ. ಈ ವಿಷಯದ ಬಗ್ಗೆ ಕನ್ನಡ ವಾಙ್ಮಯದಲ್ಲಿ ಇನ್ನೂ ಇವರು ಯಾವ ಪ್ರಯತ್ನವನ್ನೂ ಮಾಡುವದಿಲ್ಲ. ಆದ್ದರಿಂದ ಈಗಿನ ಕಾಲದಲ್ಲಿ ವೀರಶೈವ ವಾಙ್ಮಯದಲ್ಲಿ ಪುರಾಣ ಗ್ರಂಥಗಳೇ ಮಹತ್ವದವುಗಳೆಂದು ಭಾವಿಸಿ ಅವುಗಳ ಕಾಲದ ಮೇಲಿಂದ ಬಹು ಜನ ಲೇಖಕರು ಅನೇಕ ಬಗೆಯ ತಪ್ಪು ವಿಧಾನಗಳನ್ನು ಮಾಡಹತ್ತಿರುತ್ತಾರೆ. ಇವುಗಳಲ್ಲಿ ವೀರಶೈವ ವಾಙ್ಮಯವು ೧೩ನೇ ಶತಮಾನದಲ್ಲಿ ಇದ್ದಿಲ್ಲವೆಂಬುದು ಮುಖ್ಯವಾಗಿರುತ್ತದೆ. ಇದು ತೀರ ತಪ್ಪು ತಿಳುವಳಿಕೆಯಾಗಿದೆ.

ಈ ತರದ ತಪ್ಪು ತಿಳುವಳಿಕೆಯಾಗಲಿಕ್ಕೆ ನಾವು ಹಿಂದೆ ಹೇಳಿದಂತೆ ೩ನೆಯ ಮಹತ್ವದ ಕಾರಣವಿರುತ್ತದೆ. ೧೧ ರಿಂದ ೧೩ ಶತಮಾನದವರೆಗೂ ತಮಿಳು ತೆಲಗು ಕನ್ನಡ ದೇಶಗಳಲ್ಲಿ ಶೈವ ಧರ್ಮಗಳ ಒಂದು

ಮಹತ್ತರವಾದ ಜಾಗ್ರತಿಯುಂಟಾಗಿರುತ್ತದೆ. ಈ ಕಾಲದಲ್ಲಿ ಸಂಸ್ಕೃತ, ಆಂಧ್ರ, ಕರ್ನಾಟಕ ಮತ್ತು ತಮಿಳು ಭಾಷೆಗಳಲ್ಲಿ ಅನೇಕ ತರದ ವೀರಶೈವರ ಅಧ್ಯಾತ್ಮಿಕ ಗ್ರಂಥಗಳು ಉದ್ಭವಿಸಿರುತ್ತವೆ. ಅದರೆ ಬಸವೇಶ್ವರನ ಕಾಲದಲ್ಲಿ ಈ ಚಳವಳಿಯು ಅತ್ಯುಚ್ಚ ಶಿಖರವನ್ನು ಹೊಂದಿತು. ಆಗ ಬಹುಜನ ಸಮಾಜದಲ್ಲಿ ಧರ್ಮತತ್ವಗಳನ್ನು ಪ್ರಸಾರ ಮಾಡುವ ಪ್ರಯತ್ನಗಳು ಹೆಚ್ಚಾಗಿ ಉಂಟಾದವು. ಇವುಗಳ ಮೂಲಕ ವಚನ ವಾಙ್ಮಯವು ಕರ್ನಾಟಕದಲ್ಲಿ ಪ್ರಾದುರ್ಭವಿಸಿರುತ್ತದೆ. ಈ ವಾಙ್ಮಯವು ಯಾವಾಗ್ಗೆ ಉಂಟಾಯಿತು ಮತ್ತು ಅದು ಮುಂದೆ ಹ್ಯಾಗೆ ಅಭಿವೃದ್ಧಿ ಹೊಂದಿತು ಎಂಬುದರ ಬಗ್ಗೆ ತಪ್ಪು ತಿಳುವಳಿಕೆಗಳು ಇನ್ನೂ ಜನರಲ್ಲಿ ಇರುತ್ತವೆ. ಈ ಗ್ರಂಥಗಳೆಲ್ಲವು ಬಸವೇಶ್ವರನು ಪ್ರಧಾನಿಯಾಗಿದ್ದಾಗಲೇ ಬರೆಯಲ್ಪಟ್ಟಿರುತ್ತವೆಂಬ ತಿಳುವಳಿಕೆಯು ಈಗ ಇರುತ್ತದೆ. ಆದರೆ ಇದು ತಪ್ಪೆಂದು ನಮಗೆ ತೋರುತ್ತದೆ. ಈ ವಿಷಯದ ಸಂಬಂಧವಾಗಿ ನಾವು ಶಿವಾನುಭವ ಪತ್ರಿಕೆಯ ಹೋದ ಸಂಚಿಕೆಯಲ್ಲಿ ಒಂದು ವಿಸ್ತಾರವಾದ ಲೇಖವನ್ನು ಬರೆದಿದ್ದೇವೆ. ಅದರಲ್ಲಿ ಕೆಲವು ವಚನಕಾರರ ಕಾಲವನ್ನು ಕುರಿತು ವಿವೇಚನೆ ಮಾಡಿದ್ದೇವೆ. ಅದರ ಮೇಲಿಂದ ಈಗ ನಮಗೆ ಗೊತ್ತಿದ್ದ ೫೭೭ ಜನ ವಚನಕಾರರಲ್ಲಿ ಕೆಲವರು ಅಂದರೆ ಏಳೆಂಟು ಜನರು ಮಾತ್ರ ಬಸವೇಶ್ವರನಕ್ಕಿಂತಲೂ ಮೊದಲು ಆಗಿ ಹೋಗಿದ್ದರೆಂದು ಕಂಡುಬರುವದು. ಅವರು ಹಾವಿನಹಾಳಕಲ್ಲಯ್ಯ, ಬಾಹೂರ ಬೊಮ್ಮಯ್ಯ, ದೇವರದಾಸಿಮಯ್ಯ, ಇವರೇ ಮೊದಲಾದವರು ಇದ್ದಾರೆ. ಇವರ ತರುವಾಯ ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪವು ಸ್ಥಾಪಿಸಲ್ಪಟ್ಟಿತು. ಅದರಲ್ಲಿ ವಚನಗಳನ್ನು ಬರೆದಂಥ ಶಿವಶರಣರು ೩೦-೪೦ ಜನರು ಮಾತ್ರ ಹೊರಡುತ್ತಾರೆ. ಉಳಿದ ೨೦೦ ಜನ ವಚನಕಾರರು ಬಸವೇಶ್ವರನ ತರುವಾಯ ಉದ್ಭವಿಸಿದವರು ಇರುತ್ತಾರೆ. ಯಾಕಂದರೆ ಅವರ ವಚನಗಳಲ್ಲೆಲ್ಲ ಬಸವೇಶ್ವರನ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ಆದರೆ ಮೊದಲಿನ ೭—೮ ಜನ ವಚನಕಾರರ ವಚನಗಳಲ್ಲಿ ಈ ತರದ ಉಲ್ಲೇಖಗಳು ದೊರೆಯುವದಿಲ್ಲ. ಇದಲ್ಲದೆ ಈ ವಚನಕಾರರ ಅನೇಕ ಚರಿತ್ರೆಗಳು ಉಪಲಬ್ಧವಿರುತ್ತವೆ. ಅವುಗಳಲ್ಲಿ ಅವರು ಬಸವೇಶ್ವರನ ಸಮಕಾಲೀನರೆಂಬ ಉಲ್ಲೇಖಗಳು ಇರುವದಿಲ್ಲ. ಈ ಕಾರಣಗಳ ಮೂಲಕ ಈ ೨೦೦ ಜನ ವಚನಕಾರರು ಬಸವೇಶ್ವರನ ಕಾಲದಲ್ಲಿರದೆ ಅವನ ತರುವಾಯ ಅಂದರೆ ೧೨ನೇ ಶತಮಾನದಿಂದೀಚೆಗೆ

ಆಗಿಹೋದರೆಂದು ನಾವು ಭಾವಿಸಬೇಕಾಗುತ್ತದೆ ಇವರಲ್ಲಿ ಬಹು ಜನರು ೧೩ನೇ ಶತಮಾನದಲ್ಲಿಯೇ ಆಗಿಹೋಗಿರಬೇಕು.

ವೀರಶೈವರಲ್ಲಿ ೧೦೦೮ ಜನ ಗಣಾಧೀಶ್ವರರು ಅಲ್ಲಲ್ಲಿ ಉದ್ಭವಿಸಿ ಪ್ರಸಿದ್ಧಿಗೆ ಬಂದಿದ್ದಾರೆಂಬ ಪ್ರತೀತಿ ಇದೆ. 'ಗಣಸಹಸ್ರನಾಮ' ಎಂಬ ಹೆಸರಿನ ಕವಿತೆಯು ವೀರಶೈವರಲ್ಲಿ ಇರುತ್ತದೆ. ಲಿಂಗಪೂಜಾ ಕಾಲದಲ್ಲಿ ಇದು ಪಠಿಸಲ್ಪಡುವದೆಂದು ಇದರಲ್ಲಿ ಹೇಳಿದ ಇವರೆ ಲ್ಲರೂ ಬಸವೇಶ್ವರನ ಕಾಲದವರೆಂದು ಹೇಳಲಿಕ್ಕೆ ಸಾಕಷ್ಟು ಆಧಾರ ಗಳಿಲ್ಲ. ಅವರಲ್ಲಿ ಅನೇಕರು ಬಸವೇಶ್ವರನಿಗೆ ಸಂಬಂಧಪಡುವದಿಲ್ಲ. ಅಲ್ಲದೆ ಬಸವೇಶ್ವರನು ಪ್ರಧಾನಿಪಟ್ಟದಲ್ಲಿದ್ದದ್ದು ೫ ವರ್ಷ ಮಾತ್ರ. ಇಷ್ಟು ಸ್ವಲ್ಪ ಅವಧಿಯಲ್ಲಿ ಇಷ್ಟು ಜನ ಶಿವಶರಣರು ಏಕಕಾಲಕ್ಕೆ ಇಡೀ ದಕ್ಷಿಣ ಹಿಂದುಸ್ತಾನದಲ್ಲೆಲ್ಲಿ ಹುಟ್ಟಾಗಿರಲಿಕ್ಕಿಲ್ಲ. ಇವರಲ್ಲಿ ಬಹುಜನರು ಬಸವೇಶ್ವ ರನ ತರುವಾಯ ಅಂದರೆ ೧೧೭೦ ರಿಂದ ೧೩೦೦ ರ ವರೆಗೂ ಕಾಲಕಾಲಕ್ಕೆ ಉದ್ಭವಿಸಿರಲಿಕ್ಕೆಬೇಕು. ಇವರ ಪ್ರಯತ್ನಗಳಿಂದಲೇ ಕರ್ನಾಟಕ ದೇಶದ ಲ್ಲಿ ವೀರಶೈವ ಧರ್ಮವು ಕ್ರಮೇಣ ಬೆಳದಿರಬಹುದೆಂದು ತೋರುತ್ತದೆ. ಆದ್ದರಿಂದ ೧೩ನೇ ಶತಮಾನದಲ್ಲಿ ವೀರಶೈವ ಧಾರ್ಮಿಕ ಚಳುವಳಿಯು ಒಂದೇಸವನೆ ನಡದೇ ಇದ್ದದರಿಂದ ಹೀಗೆ ನೂರಾರು ಜನ ಶಿವಶರ ಣರು ಈ ಕಾಲದಲ್ಲಿ ಆಗಿಹೋಗಿದ್ದಾರೆ. ಮತ್ತು ಅವರಿಂದ ಒಂದು ಮಹತ್ವದ ವಾಙ್ಮಯವು ಉಂಟಾಗಿರುತ್ತದೆ.

ಆದರೆ ವೀರಶೈವ ವಾಙ್ಮಯವು ೧೩ನೇ ಶತಮಾನದಲ್ಲಿ ಉಂಟಾ ಗಲಿಲ್ಲೆಂಬ ತಿಳವಳಿಕೆಗೆ ಮುಖ್ಯ ಕಾರಣವು ಗತಿಸಿದ ಆರ್. ನರಸಿಂಹಾ ಚಾರ್ಯರು ಬರೆದಿರುವ ಕವಿಚರಿತೆಯ ಗ್ರಂಥಗಳೇ ಇರುತ್ತವೆ. ಅವರು ವಚನಕಾರರ ಕಾಲವನ್ನು ನಿಶ್ಚಯಿಸುವಲ್ಲಿ ತಪ್ಪು ಮಾಡಿದ್ದಾರೆಂದು ನಮಗೆ ತೋರುತ್ತದೆ. ಈ ಗ್ರಂಥಗಳ ಮೊದಲನೇ ಭಾಗದಲ್ಲಿ ಅವರು ೫೦-೬೦ ವಚನಕಾರರನ್ನು ಉಲ್ಲೇಖಿಸಿದ್ದಾರೆ. ಅವರೆಲ್ಲರ ಕಾಲವು ೧೧೫೦ರಿಂದ ೧೨೮೦ ರ ವರೆಗೆ ಇರಬೇಕೆಂದು ಅವರು ಇದರಲ್ಲಿ ಕಾಣಿ ಸಿದ್ದಾರೆ. ಆದರೆ ಅವರಲ್ಲಿ ಅನೇಕರು ಬಸವನ ಸಮಕಾಲೀನರಿರುವ ದಿಲ್ಲ. ಈ ವಚನಕಾರರ ಚರಿತ್ರೆಗಳನ್ನು ಆರ್. ನರಸಿಂಹಾಚಾರ್ಯರು ಚನ್ನಾಗಿ ನಿರೀಕ್ಷಿಸಿರುವದಿಲ್ಲಾದ್ದರಿಂದ ಅವರಿಂದ ಈ ತಪ್ಪು ಆಗಿರುತ್ತದೆ. ಕವಿಚರಿತೆಯ ಈ ಮೊದಲನೇ ಭಾಗವು ಪ್ರಸಿದ್ಧವಾದ ಕಾಲದಲ್ಲಿ ನಾವು

ನಮ್ಮ ವಚನಶಾಸ್ತ್ರಸಾರ ಮೊದಲನೇ ಭಾಗವನ್ನು ಪ್ರಸಿದ್ಧಿಪಡಿಸಿದ್ದಿಲ್ಲ. ಅದು ಪ್ರಸಿದ್ಧವಾದ ಬಳಿಕ ಸುಮಾರು ೩೭೭ ವಚನಕಾರರ ಹೆಸರುಗಳು ಹೊರ ಬಿದ್ದವು. ಆಗ ಆರ್. ನರಸಿಂಹಾಚಾರ್ಯರು ತಮ್ಮ ಕವಿಚಂತೆಯ ೩ನೇ ಭಾಗದಲ್ಲಿ ಹೊಸದಾಗಿ ದೊರೆದ ಈ ವಚನಕಾರರ ಹೆಸರುಗ ಳನ್ನೆಲ್ಲ ಪರಿಶಿಷ್ಟಗಳಲ್ಲಿ ಇವರಲ್ಲಿ ಸೇರಿಸಿರುತ್ತಾರೆ. ಹೀಗೆ ಸೇರಿಸಿ ಅವರು ಅದರಲ್ಲಿ ನಮ್ಮ ಹೆಸರನ್ನು ಉಲ್ಲೇಖಿಸಿ ಪುಟ ೩೪೪ರಿಂದ ೩೭೧ರ ವರೆಗೆ ಈ ಎಲ್ಲ ವಚನಕಾರರ ಹೆಸರುಗಳನ್ನು ಬರೆದಿರುತ್ತಾರೆ ಹೀಗೆ ಬರೆ ಯುವಲ್ಲಿ ಅವರು ಆಯಾ ವಚನಕಾರರ ಕಾಲಗಳ ಬಗ್ಗೆ ತಪ್ಪು ತಿಳುವಳಿಕೆ ಗಳನ್ನು ಮಾಡಿಕೊಂಡಿದ್ದಾರೆಂದು ನಮಗೆ ತೋರುತ್ತದೆ. ಯಾಕಂದರೆ ಅವ ರೆಲ್ಲರೂ ಬಸವನ ಕಾಲದವರೆಂದು ಭಾವಿಸಿ ೧೧೭೦ ಈ ವರ್ಷಕ್ಕೆ ಸಮೀ ಪದಲ್ಲಿದ್ದರೆಂದು ಈ ಗ್ರಂಥವಲ್ಲಿ ಕಾಣಿಸಿದ್ದಾರೆ. ಆದರೆ ಹೀಗೆ ತಿಳಿಯ ಲಿಕ್ಕೆ ಕಾರಣವಿಲ್ಲ. ಅವರಲ್ಲಿ ಬಹು ಜನರು ೧೩೦೦ ಇಸ್ವಿಯವರೆಗೂ ಕಾಲ ಕಾಲಕ್ಕೆ ಆಗಿಹೋದವರಿರಬೇಕೆಂದು ಅವರ ಚರಿತ್ರೆಗಳು ಹೇಳುತ್ತವೆ. ಆರ್. ನರಸಿಂಹಾಚಾರ್ಯರು ಈ ತಪ್ಪು ಮಾಡಿದ್ದರಿಂದ ನಾವು ಈ ಲೇಖದ ಆರಂಭದಲ್ಲಿ ವಿವರಿಸಿದ ಅನೇಕ ಬಗೆಯ ವಿಧಾನಗಳು ಬೇರೆ ಬೇರೆ ಪಂಡಿ ತರಿಂದ ಮಾಡಲ್ಪಡಹತ್ತಿವೆ.

೧೩ನೇ ಶತಮಾನದಲ್ಲಿ ವಚನಗಳಿದ್ದವೆಂಬದರ ಬಗ್ಗೆ ಶಿಲಾಶಾಸ ನಗಳ ಆಧಾರವೂ ನಮಗೆ ದೊರೆಯುತ್ತದೆ. ಜೌಡದಾನಪುರದಲ್ಲಿರುವ ಶಿಲಾಶಾಸನಗಳಲ್ಲಿ ವಚನಕಾರರ ತತ್ವಗಳು ಸವಿಸ್ತಾರವಾಗಿ ನಿರೂಪಿಸ ಲ್ಪಟ್ಟಿರುತ್ತವೆ. ಅವುಗಳ ಬಗ್ಗೆ ನಾವು ಅನೇಕ ಲೇಖಗಳನ್ನು ಬರೆದಿ ದ್ದೇವೆ. ಸಂಗೂರ ಶಿಲಾಶಾಸನದಲ್ಲಿ ಸಿದ್ಧರಾಮೇಶ್ವರನ ವಚನದ ಉಲ್ಲೇ ಖವಿದೆ. ಈ ಎರಡೂ ಗ್ರಾಮಗಳಲ್ಲಿಯ ಶಿಲಾಶಾಸನಗಳು ೧೩ನೇ ಶತ ಮಾನದವು ಇರುತ್ತವೆ. ಆದ್ದರಿಂದ ೧೩ನೇ ಶತಮಾನದಲ್ಲಿ ವೀರಶೈವ ವಾಙ್ಮಯವೇ ಇದ್ದಿಲ್ಲೆಂಬುದು ತೀರ ತಪ್ಪು ತಿಳುವಳಿಕೆ ಇರುತ್ತದೆ.

ವೀರಶೈವ ಧರ್ಮದ ಪ್ರಸಾರದ ಇತಿಹಾಸವು ಇನ್ನೂ ಜನರಿಗೆ ಪೂರ್ಣ ಗೊತ್ತಿರುವದಿಲ್ಲ. ಇದರಿಂದ ಬಸವೇಶ್ವರನ ತರುವಾಯ ೧೩ನೇ ಮತ್ತು ೧೩ನೇ ಶತಮಾನಗಳಲ್ಲಿ ಯಾವ ಗ್ರಂಥಕಾರರೂ ವೀರಶೈವರಲ್ಲಿ ಉಂಟಾಗಿಲ್ಲವೆಂಬ ತಿಳುವಳಿಕೆಯುಂಟಾಗಿರುತ್ತದೆ. ವೀರಶೈವರ ಧಾರ್ಮಿಕ ಚಳುವಳಿಯು ಬಸವೇಶ್ವರನ ಕಾಲದಲ್ಲಿ ಆದಂತೆಯೇ ಮುಂದಾದರೂ

ಆಗಿಂದಾಗ್ಗೆ ಉಂಟಾಗುತ್ತಲೇ ಬಂದಿರುತ್ತದೆ. ಇಂಥ ಕಾಲಗಳಲ್ಲಿ ವೀರಶೈವ ಗ್ರಂಥಕಾರರೂ ಸಾಧುಸತ್ಪುರುಷರೂ ಉತ್ಪನ್ನವಾಗುತ್ತಲೇ ಬಂದಿದ್ದಾರೆ.

ಬಸವೇಶ್ವರನ ಕಾಲದಲ್ಲಿ ಈ ಚಳವಳಿಯು ಮೊದಲು ಆರಂಭವಾಯಿತು. ಆದರೆ ಅದು ದೇಶದಲ್ಲಿ ಪ್ರಸಾರವಾಗುತ್ತಾ ಇದ್ದ ಕಾಲದಲ್ಲಿಯೇ ಅದಕ್ಕೆ ಒಂದು ದೊಡ್ಡ ಆತಂಕವು ಉತ್ಪನ್ನವಾಯಿತು. ಬಸವೇಶ್ವರನಿಗೂ ಬಿಜ್ಜಳನಿಗೂ ಮತಭೇದಗಳುಂಟಾದದ್ದೇ ಈ ಆತಂಕವಾಗಿದೆ. ಆಗ ಬಸವೇಶ್ವರರು ಕಲ್ಯಾಣ ಪಟ್ಟಣವನ್ನು ಬಿಟ್ಟುಕೊಟ್ಟು ಕಪ್ಪಡಿ ಸಂಗಮನಲ್ಲಿಗೆ ಹೊರಟು ಹೋದರು. ರಾಜಧಾನಿಯಲ್ಲಿ ಆಗ ಒಂದು ಕ್ರಾಂತಿಯುಂಟಾಯಿತು. ಕಡೆಗೆ ಚನ್ನಬಸವ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯ. ಇವರು ವೀರಶೈವ ಸಮಾಜದ ಪ್ರಮುಖತ್ವವನ್ನು ವಹಿಸಿ, ಆತ್ಮಸಂರಕ್ಷಣೆಗಾಗಿ ಉಳವಿಯ ಘೋರಾರಣ್ಯದಲ್ಲಿ ಹೋಗಿ ಆಶ್ರಯವನ್ನು ಪಡೆಯಬೇಕಾಯಿತು ಮತ್ತು ಅಲ್ಲಿಯೇ ಅವರು ಲಯವಾದರು.

ಆದರೆ ಈ ಅನಾಹುತದಿಂದ ವೀರಶೈವ ಧರ್ಮವು ಮುಗ್ಗಲಿಲ್ಲ. ಇದರ ಪರಿಣಾಮವಾಗಿ ದೇಶದಲ್ಲೆಲ್ಲ ಅನೇಕ ಸತ್ಪುರುಷರು ಉದಯವಾಗಿ ವೀರಶೈವ ಧರ್ಮವನ್ನು ಹೆಚ್ಚಾಗಿ ಪ್ರಸಾರಮಾಡಿದರು. ಅಲ್ಲಮಪ್ರಭು, ಮಹಾದೇವಿಯಕ್ಕ ಮೊದಲಾದವರು ಶ್ರೀಪರ್ವತ ಕ್ಷೇತ್ರವನ್ನು ಆಶ್ರಯಿಸಿದರು. ಅವರ ತರುವಾಯ ಅಲ್ಲಿಯೇ ರುದ್ರಮುನಿ, ಮುಕ್ತಿಮುನಿ, ಇವರು ಆಗಮಿಸಲು ಅವರ ಪ್ರಮುಖತ್ವದಲ್ಲಿ ಅಲ್ಲಿ ಕೂಡಿದ ಶಿವಶರಣರು ಸುತ್ತಲೂ ವೀರಶೈವ ಧರ್ಮವನ್ನು ಪ್ರಸಾರಗೊಳಿಸಿದರು. ಅದೇ ರೀತಿಯಾಗಿ ಕರ್ನಾಟಕದ ಪಶ್ಚಿಮ ಭಾಗದಲ್ಲಿಯೂ ಪ್ರಯತ್ನಗಳು ನಡೆದವು. ಇವುಗಳಿಗೆ ಕೇಂದ್ರಸ್ಥಾನವು ಬಾಳೇಹಳ್ಳಿಯಾಯಿತೆಂದು ನಮಗೆ ತೋರುತ್ತದೆ. ಇವುಗಳ ಪ್ರಭಾವದಿಂದ ಗ್ರಾಮಾಂತರಗಳಲ್ಲಿ ಮಠಗಳು ಸ್ಥಾಪಿಸಲ್ಪಡಹತ್ತಿದವು. ಇವುಗಳ ಮೂಲಕ ಬಸವೇಶ್ವರನು ರೂಢಿಗೊಳಿಸಿದ್ದ ಶಿವಾನುಭವದ ತತ್ವಗಳು ಎಲ್ಲ ಕಡೆಗೂ ಪ್ರಸಾರವಾದವು.

ಈ ಪ್ರಸಾರ ಕಾರ್ಯವು ವಚನ ಗ್ರಂಥಗಳ ಮೂಲಕವಾಗಿಯೇ ಸಾಗಿರುತ್ತದೆ. ಆಗ ಅನೇಕರು ವಚನಗಳನ್ನು ರಚಿಸಿ ದೇಶದಲ್ಲೆಲ್ಲ ಶಿವ

ಶರಣರ ತತ್ವಗಳನ್ನು ಬೀರಿದರು. ಇದರಿಂದ ಅನೇಕ ಮಹತ್ವದ ದೊಡ್ಡ ದೊಡ್ಡ ಸಮಾಜಗಳು ವೀರಶೈವ ಧರ್ಮವನ್ನು ಸ್ವೀಕರಿಸಿದವು. ಇಂಥ ಮಹತ್ಕಾರ್ಯವನ್ನು ಮಾಡಿದ ಮತಾಧಿಕಾರಿಗಳೂ, ವಚನಕಾರರೂ ಬಸವೇಶ್ವರನನ್ನೇ ಸ್ತುತಿಸಿದ್ದಾರೆ. ಮತ್ತು ಅವನ ತತ್ವಗಳನ್ನೇ ಸಾರಿದ್ದಾರೆ. ಆದ್ದರಿಂದ ವಚನ ಗ್ರಂಥಗಳು ಬಸವೇಶ್ವರನ ತರುವಾಯ ಅಸಂಖ್ಯಾತವಾಗಿ ದೇಶದಲ್ಲೆಲ್ಲ ಹುಟ್ಟಿರುತ್ತವೆ. ಈ ಕಾರ್ಯವು ಬಸವೇಶ್ವರನ ತರುವಾಯ ಅನೇಕ ವರ್ಷಗಳ ವರೆಗೆ ನಡೆದಿರಬೇಕು. ಜೈನಧರ್ಮದ ಗ್ರಂಥಗಳು ೧೩ನೇ ಶತಮಾನದಲ್ಲಿ ಅನೇಕವಾಗಿ ದೊರೆಯುತ್ತ ಇದ್ದರೂ ೧೪ನೇ ಶತಮಾನದಲ್ಲಿ ಅವು ಅತ್ಯಲ್ಪವಾಗಿರುತ್ತವೆ. ಇವುಗಳ ಬದಲು ವೀರಶೈವ ಗ್ರಂಥಗಳು ಹೆಚ್ಚಾಗಿರುತ್ತವೆ. ಈ ಸ್ಥಿತಿಯನ್ನು ನೋಡಿದರೆ ಬಸವನ ತರುವಾಯ ವೀರಶೈವ ಧರ್ಮ ಪ್ರಸಾರ ಕಾರ್ಯವು ಕನಿಷ್ಠ ನೂರು ವರ್ಷಗಳ ವರೆಗಾದರೂ ನಡೆದಿರಲಿಕ್ಕೆಬೇಕೆಂದು ನಮಗೆ ತೋರುತ್ತದೆ.

ಈ ಪ್ರಸಾರ ಕಾರ್ಯವನ್ನು ಜರುಗಿಸುವಲ್ಲಿ ವಚನ ಗ್ರಂಥಗಳು ಬಹಳ ಸಹಾಯಕಾರಿಯಾಗಿರಲಿಕ್ಕೆಬೇಕು. ಇವುಗಳಿಂದ ಬಹುಜನ ಸಮಾಜದಲ್ಲಿ ಧಾರ್ಮಿಕ ತಿಳುವಳಿಕೆಯುಂಟಾಗಿ ವೀರಶೈವ ಧರ್ಮವನ್ನು ಅಸಂಖ್ಯ ಜನರು ಸ್ವೀಕರಿಸಿದರು. ಈ ಕಾರ್ಯವು ವಾಙ್ಮಯವಿಲ್ಲದೆ ಶಕ್ಯವಲ್ಲ. ಆದ್ದರಿಂದ ಬಸವೇಶ್ವರನ ಕಾಲಕ್ಕಿಂತಲೂ ಹೆಚ್ಚಾಗಿ ವಚನಕಾರರೂ ಗ್ರಂಥಕಾರರೂ ಈ ೧೩ನೇ ಶತಮಾನದಲ್ಲಿಯೇ ಉಂಟಾಗಿರಲಿಕ್ಕೆಬೇಕು. ವೀರಶೈವ ಧರ್ಮದ ಧಾರ್ಮಿಕ ಗ್ರಂಥಗಳ ಸಂಶೋಧನೆಯು ಈ ವರೆಗೆ ಆದದ್ದು ಅತ್ಯಲ್ಪವು. ಒಂದು ವೇಳೆ ಹೆಚ್ಚಾಗಿ ಶೋಧ ಮಾಡಿದ್ದಾದರೆ ಈ ಕಾಲಕ್ಕೆ ಉಂಟಾದ ವಿಸ್ತಾರವಾದ ವಾಙ್ಮಯವು ಪ್ರಕಾಶಕ್ಕೆ ಬರುವದೆಂದು ನಮಗೆ ತೋರುತ್ತದೆ.

ಈ ಧರ್ಮ ಪ್ರಸಾರದ ಚಳವಳಿಯ ಮೂಲಕ ವೀರಶೈವರ ಜನಸಂಖ್ಯೆಯು ದೇಶದಲ್ಲೆಲ್ಲ ನಿಬಿಡವಾಗಿ ಬೆಳೆಯಹತ್ತಿತು. ಇದರಿಂದ ಅವರ ಮಹತ್ವವು ಹೆಚ್ಚಾಗಹತ್ತಿತು. ಆಗಿನ ರಾಜರೂ ಮಾಂಡಲಿಕರೂ ವೀರಶೈವ ಧರ್ಮದಲ್ಲಿ ಆಗಿಹೋದ ಸತ್ಪುರುಷರನ್ನು ಬಹಳ ಮನ್ನಿಸಿದ್ದು ಕಂಡುಬರುತ್ತದೆ. ಇದು ಶಿಲಾಶಾಸನಗಳಿಂದ ಚನ್ನಾಗಿ ಗೊತ್ತಾಗುತ್ತದೆ. ಅಬ್ಬಲೂರ ಶಿಲಾಶಾಸನವು ಸುಮಾರು ೧೨೦೦ ಇಸ್ವಿಯಲ್ಲಿಯದಿದೆ. ಅದ

ರಲ್ಲಿ ಚಾಲುಕ್ಯರ ಮಾಂಡಲಿಕರಾದ ಕೇಶಿರಾಜ ಮೊದಲಾದವರೂ ಆ
ರಾಜನೂ ಕೂಡ ಅವನನ್ನು ಬಹಳವಾಗಿ ಮನ್ನಿಸಿದ್ದೂ ಅವನಿಗೆ ಉಂಬ
ಹಾಕಿಕೊಟ್ಟದ್ದೂ ಉಲ್ಲೇಖವಾಗಿದೆ. ಈ ಕಾಲಕ್ಕೆ ದೇಶದಲ್ಲಿ ದೇವಗಿ
ಯಾದವರಾಜರ ಪ್ರಭುತ್ವವಿತ್ತು. ಅವರ ಮಾಂಡಲಿಕರು ಲಕ್ಷ್ಮೇಶ್ವರ, ತೊ
ಗಲ್ಲ ಮತ್ತು ಮುದಗಲ್ಲು ಇಲ್ಲಿ ಇದ್ದು ಅವರು ಶಿವಶರಣರನ್ನು ಬಹ
ಮನ್ನಿಸುತ್ತಿದ್ದದ್ದು ಕಂಡುಬರುತ್ತದೆ. ಇದು ಕೆಳಗಿನ ಸಂಗತಿಗಳಿಂದ ಸ್ಪಷ್ಟ
ವಾಗುತ್ತದೆ. ಭೀಮಾನದಿಯ ತೀರದಲ್ಲಿರುವ ಪುಳುಜ ಎಂಬ ಗ್ರಾಮದ
ಅಮುಗಿದೇವಯ್ಯನೆಂಬ ಪ್ರಸಿದ್ಧ ಶಿವಶರಣನಿದ್ದನು. ಯಾದವ ಅರಸ
ಸೇನಾಪತಿಗಳು ಅವನನ್ನು ಅಲ್ಲಿ ಕಂಡು ಅಲ್ಲಿಯ ಸಿದ್ಧಸೋಮನಾಥ
ದೇವಾಲಯಕ್ಕೆ ಉಂಬಳಿ ಹಾಕಿಕೊಟ್ಟದ್ದು ಅಲ್ಲಿಯ ಶಾಸನದಿಂ
ತಿಳಿಯುತ್ತಿದೆ. ಸಂಗೂರ ಎಂಬ ಗ್ರಾಮದಲ್ಲಿಯ ಶಿಲಾಶಾಸನದ
ಸಿದ್ಧರಾಮೇಶ್ವರನ ಇಷ್ಟದೇವತೆಯಾದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವ
ಸ್ಥಾನಕ್ಕೆ ಒಬ್ಬ ಮಂಡಳೇಶ್ವರನು ದಾನ ಕೊಟ್ಟದ್ದು ಉಲ್ಲೇಖವಾಗಿರುತ್ತದೆ
ಅರ್ಜುನವಾಡ ಶಿಲಾಶಾಸನದಲ್ಲಿ ಬಸವೇಶ್ವರನ ವಂಶಿಕನಾದ ಹಾಲಬಸ
ದೇವನಿಗೆ ಆಗ ಪುಲಗೆರಿಯಲ್ಲಿ ಆಳುತ್ತಿದ್ದ ಯಾದವರಾಜರ ಮಾಂ
ಲಿಕನೊಬ್ಬನು ಕೆಲವು ಹಕ್ಕು ಬಾಬುಗಳನ್ನು ಉಂಬಳಿ ಹಾಕಿಕೊಟ್ಟದ್ದು
ಉಲ್ಲೇಖಿಸಲ್ಪಟ್ಟಿದೆ. ಈ ಪ್ರಕಾರ ಈ ೧೩ನೇ ಶತಮಾನದಲ್ಲಿ ವೀ
ಶೈವರ ಧರ್ಮದ ತೇಜಸ್ಸು ಎಳ್ಳಷ್ಟು ಕಡಿಮೆಯಾಗಿದ್ದಿಲ್ಲೆಂಬದು ಸ್ಪಷ್ಟವ
ಈ ಕಾಲದಲ್ಲಿ ಅನೇಕ ವಚನಕಾರರೂ ಸಾಧುಸತ್ಪುರುಷರೂ ಉಂಟಾ
ದ್ದರಿಂದಲೇ ಈ ಸ್ಥಿತಿಯು ಉಂಟಾಗಿರಲಿಕ್ಕೆ ಬೇಕು. ಆದ್ದರಿಂದ ಈ
ಶತಮಾನದಲ್ಲಿ ವೀರಶೈವರು ಸೋವಸಾರತನದಿಂದ ಕಾಲವನ್ನು ಕಳೆ
ಯದೆ ಧರ್ಮಪ್ರಸಾರ ಕಾರ್ಯದಲ್ಲಿ ಬಹಳ ಸಾಹಸವನ್ನು ಮಾಡಿದ್ದಾರೆ.
ಇದರಿಂದ ಆಗ ಬಹು ಪ್ರಬಲ್ಯವನ್ನು ಹೊಂದಿದ ಜೈನ ಸಮಾಜವು
ಕಡಿಮೆಕಡಿಮೆಯಾಗುತ್ತ ಬಂದಿತು. ಅದರಂತೆಯೇ ಅವರ ಗ್ರಂಥಕಾ
ರರ ಸಂಖ್ಯೆಯೂ ಕಡಿಮೆಯಾಗುತ್ತ ಬಂದಿತು. ಆದರೆ ಹೀಗಾದದ್ದು
ವೀರಶೈವರ ಬಲಾತ್ಕಾರದಿಂದಲ್ಲ. ಅವರ ಕೇವಲ ಪ್ರಚಾರ ಕಾರ್ಯಗ
ಳಮೂಲಕ. ಹೀಗೆ ವೀರಶೈವರ ಇತಿಹಾಸವಿದ್ದು ಇದು ಇನ್ನೂ ಜನರಿಗೆ
ಅಪರಿಚಿತವಾಗಿರುವದರಿಂದ ಈ ೧೩ನೇ ಶತಮಾನದಲ್ಲಿ ವೀರಶೈವ ಗ್ರಂಥ
ಗಳೇ ಇರಲಿಲ್ಲೆಂಬ ತಿಳುವಳಿಕೆಯು ಉಂಟಾಗಿರುತ್ತದೆ.

ಆದರೆ ಮುಂದೆ ೧೩೦೩ರಿಂದ ಮುಸಲ್ಮಾನರ ದಾಳಿಗಳು ದಕ್ಷಿಣ
ದೇಶದಲ್ಲಿ ಪ್ರಾರಂಭವಾದವು. ಆಗ ಮಲಿಕಕಾಫರನು ದೇವಗಿರಿ ಯಾದವ
ಮತ್ತು ಹೊಯ್ಸಳ ಇವರ ರಾಜ್ಯವನ್ನು ಹಾಳು ಮಾಡಿದನು. ಇದ
ರಿಂದ ದೇಶದಲ್ಲೆಲ್ಲ ಅರಾಜಕತೆಯುಂಟಾಯಿತು. ಆಗ ಮಾತ್ರ ವೀರಶೈವ
ಧರ್ಮದ ಪ್ರಸಾರವು ನಿಂತಿರಲಿಕ್ಕೆ ಬೇಕು. ಆದರೆ ಈ ಸ್ಥಿತಿಯು ಬಹಳ
ದಿವಸ ಉಳಿಯಲಿಲ್ಲ. ಯಾಕಂದರೆ ಮುಂದೆ ಆನೇಗುಂದಿಯಲ್ಲಿ ಕರ್ನಾ
ಟಕದ ರಾಜ್ಯವು ಉಗಮಹೊಂದಿ ವಿಜಯನಗರದಲ್ಲಿ ಅದು ಸ್ಥಿರಗೊಂ
ಡಿತು. ಇದರಿಂದ ಮುಂದೆ ಪರಧರ್ಮೀಯರ ಉಪಟಳವು ನಿಂತಿತು.

ವಿಜಯನಗರದ ರಾಜ್ಯವು ಮೊದಲು ಸ್ಥಾಪಿತವಾದ ಪ್ರದೇಶಗ
ಳಲ್ಲಿ ಅಂದರೆ ಬಳ್ಳಾರಿ, ವಿಜಾಪುರ, ರಾಯಚೂರ ಜಿಲ್ಲೆಗಳಲ್ಲಿ ವೀರ
ಶೈವ ಸಮಾಜದ ಜನಸಂಖ್ಯೆಯು ಬಹಳ ದಟ್ಟವಾಗಿರುತ್ತದೆ. ಆದ್ದ
ರಿಂದ ಈ ರಾಜರ ದಂಡಾಳುಗಳಲ್ಲಿ ವೀರಶೈವರೇ ಹೆಚ್ಚಾಗಿ ಸೇರಿರ
ಬೇಕೆಂಬ ಅನುಮಾನವು ಉಂಟಾಗುತ್ತದೆ. ಇವರೇ ಮುಸಲ್ಮಾನರ
ದಾಳಿಗಳನ್ನು ಮೊದಲು ಹಿಮ್ಮೆಟ್ಟಿಸಿರಲಿಕ್ಕೆ ಬೇಕು. ಆಗ ಅವರಲ್ಲಿ
ಧರ್ಮದ ಬಗ್ಗೆ ತೇಜಃಪುಂಜವಾದ ಜಾಗ್ರತೆಯು ಇರಲಿಕ್ಕೆಬೇಕು. ಅಲ್ಲದೆ
ಅವರ ಮಠಗಳು ಪ್ರತಿಯೊಂದು ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿದ್ದವು. ಇವು
ಗಳಿಲ್ಲದ ಒಂದು ಚಿಕ್ಕ ಹಳ್ಳಿಯಾದರೂ ಈ ಪ್ರಾಂತದಲ್ಲಿ ಈಗಲೂ
ದೊರೆಯುವದಿಲ್ಲ. ಇದರಿಂದ ಮುಸಲ್ಮಾನ ಧರ್ಮದ ಪ್ರಸಾರವು ಕರ್ನಾ
ಟಕದಲ್ಲಿ ಹೆಚ್ಚಾಗಿ ಆಗಲಿಕ್ಕೆ ಅನುಕೂಲತೆಗಳು ಉಳಿಯಲಿಲ್ಲ.

ಇದೆಲ್ಲದರ ಪ್ರಭಾವವು ಯಾತರದೆಂಬದನ್ನು ವಾಚಕರು ಚನ್ನಾಗಿ
ವಿಚಾರ ಮಾಡಬೇಕು. ಈ ಮಹತ್ವದ ಕಾಲದಲ್ಲಿ ಬಸವಾದಿ ಪ್ರಮ
ಥರ ತತ್ವಗಳನ್ನು ಎಲ್ಲ ಕಡೆಗೆ ಹಬ್ಬಿಸಲಿಕ್ಕೆ ಅಸಂಖ್ಯ ಜನರು ೧೦೦-೧೫೦
ವರ್ಷಗಳ ವರೆಗೆ ಪ್ರಯತ್ನಿಸಿದರು. ಇವರ ಪ್ರಯತ್ನಗಳ ಫಲವೇ ವಚನ
ವಾಙ್ಮಯವಾಗಿರುತ್ತದೆ. ಈ ಪ್ರಕಾರ ವೀರಶೈವ ಸಮಾಜದ ಧಾರ್ಮಿಕ
ಇತಿಹಾಸವಿರುವದರಿಂದ ೧೩ನೇ ಶತಮಾನದಲ್ಲಿ ವೀರಶೈವ ಗ್ರಂಥಕಾ
ರರು ಆಗಿಲ್ಲೆಂದು ತಿಳಿಯುವದು ತಪ್ಪೆಂದು ನಮಗೆ ತೋರುತ್ತದೆ.

ವೀರಶೈವರಲ್ಲಿ ಧಾರ್ಮಿಕ ಅವನತಿ.

ಲೇಖಕರು:— ಕಲ್ಯಾಣಪ್ಪ ಬ್ಯಾಳಿ ಬಿ. ಎ. ಬಿ ಟಿ. ವಿಜಾಪೂರ

ಐಹಿಕ ಅಮುಷ್ಮಿಕ ಮತ್ತು ಪಾರಮಾರ್ಥಿಕ ಸುಖವನ್ನು ಒದಗಿಸಿ ಕೊಡುವದೇ ಧರ್ಮವು. ಐಹಿಕ ಸುಖವನ್ನು ಪಡೆಯಲಿಕ್ಕೆ ಕೃಷಿ, ವಾಣಿಜ್ಯ, ಕಲಾ ಕೌಶಲ್ಯ ಮೊದಲಾದ ಉದ್ಯೋಗಗಳನ್ನು ಮನುಷ್ಯನು ಮಾಡಬೇಕಾಗುತ್ತದೆ. ಮನುಷ್ಯನು ತನ್ನ ಆಹಾರ, ಬಟ್ಟೆ, ವಸತಿ ಸಂಪತ್ತುಗಳನ್ನು ಗಳಿಸಿ ಸುಖದಿಂದ ಜೀವಿಸಲು ಒಂದಿಲ್ಲೊಂದು ಕಾಯಕವು ಅತ್ಯಾವಶ್ಯಕವು. ಒಬ್ಬರ ಹಂಗಿನ ಅನ್ನವನ್ನು ಉಣ್ಣುವದಾಗಲಿ, ಭಿಕ್ಷೆಯಿಂದ ಜೀವಿಸುವುದಾಗಲಿ, ಸ್ವಾಭಿಮಾನಿಯಾದ ಮನುಷ್ಯನಿಗೆ ಲಾಂಛನಾಸ್ಪದವು. ಅಂತೆಯೇ ನಮ್ಮ ಶರಣರು ಕಾಯಕಕ್ಕೆ ಅಂತ್ಯಂತ ಮಹತ್ವಕೊಟ್ಟು "ಕಾಯಕವೇ ಕೈಲಾಸ"ವೆಂದು ಹೇಳಿದರು. ಹೊಟ್ಟೆಯ ಉದ್ಯೋಗ ಮಾಡುವದರಲ್ಲಿ ವೀರಶೈವರು ಅಷ್ಟೇನೂ ಹಿಂದುಳಿದಿಲ್ಲ. ಆದರೆ ಈಗಿನ ಯಾಂತ್ರಿಕ ಯುಗವಲ್ಲಿ ಹಿಂದಿನ ಎಷ್ಟೋ ಕಾಯಕ ಕಸಬುಗಳು ಲೋಪವಾಗಿ ನಮ್ಮವರಲ್ಲಿ ಅನೇಕರಿಗೆ ಹೊಟ್ಟೆಯ ಪ್ರಶ್ನೆಯು ಬಹು ಬಿಕ್ಕಟ್ಟಿನದಾಗಿದೆ. ನಮ್ಮವರ ವ್ಯಾಪಾರವು ಹೆರವರ ಕೈಸೇರಿದೆ. ಎಲ್ಲಿಯ ವರೆಗೆ ನಮ್ಮ ಸಮಾಜವು ಸರ್ವ ಕಲಾ ಕೌಶಲ್ಯಗಳಿಂದ ಸಂಪತ್ತುಗಳಿಸಿ ಸುಖದಿಂದ ಬಾಳುವದಿಲ್ಲವೋ ಅಲ್ಲಿಯ ವರೆಗೂ ನಮ್ಮ ಧರ್ಮಕ್ಕೆ ಅವನತಿಯು ತಪ್ಪಿದ್ದಲ್ಲ.

ಮನುಷ್ಯನು ಸಂಪತ್ತುಗಳಿಸಿ ತನ್ನ ಮತ್ತು ತನ್ನ ಕುಟುಂಬದ ಸುಖವನ್ನಷ್ಟೇ ನೋಡಿಕೊಂಡರೆ ತೀರದು. ಅದಕ್ಕಾಗಿ ಅತನು ದಾನ ಧರ್ಮ, ಪರೋಪಕಾರ, ಸಮಾಜಸೇವೆ, ದೇಶ ಹಿತ, ಸಾಹಿತ್ಯಸೇವೆ, ಮೊದಲಾದ ಕಾರ್ಯಗಳಿಗೆ ತನುಮನಧನದಿಂದ ಸಹಾಯ ಮಾಡಬೇಕಾಗುವದು.

ಅದರಿಂದ ಈ ಲೋಕದಲ್ಲಿ ಅವನಿಗೆ ಕೀರ್ತಿಯು ದೊರೆಯುವದು. ಆ ಕೀರ್ತಿಯೇ ಅಮುಷ್ಮಿಕ ಸುಖವು. ಈ ಸುಖವು ಪರಲೋಕದಲ್ಲಿ ಬಿಗುತ್ತದೆಂಬ ಮಾತು ಪುಸಿಯು. ಅದು ಇಲ್ಲಿಯೇ ದೊರೆಯುತ್ತದೆ. ತಾನು ಸತ್ತರೂ ಕೆಲಕಾಲ ಆ ಕೀರ್ತಿಯು ಇಲ್ಲಿ ಉಳಿಯುತ್ತದೆ. ಪರೋಪ

ಕಾರ, ದಾನ-ಧರ್ಮ ಮಾಡುವಲ್ಲಿ ವೀರಶೈವರು ಎಂದೂ ಹಿಂದುಳಿದಿರುವದಿಲ್ಲ. ಎಷ್ಟೋ ಅನ್ಯ ಸಮಾಜದವರು ಕೂಡ ಇವರಿಂದ ಉಪಕಾರ ಹೊಂದಿರುವರು. ಆದರೆ ನಮ್ಮ ಸಮಾಜದ ಎಷ್ಟೋ ಹಣವು ಅಜ್ಞಾನ, ಮೂಢ ಭಾವನೆ, ನ್ಯಾಯ ಮೊದಲಾದವುಗಳ ದೆಶೆಯಿಂದ ಅನಾವ್ರಯವಾಗಿ ಹಾಳಾಗುತ್ತಿರುವದು ಬಹು ವಿಷಾದದ ಸಂಗತಿಯು. ಎಲ್ಲಿಯ ವರೆಗೆ ವೀರಶೈವರಿಗೆ ವ್ಯರ್ಥವಾಗಿ ಹಾಳುಮಾಡಬಾರದೆಂಬ ಬುದ್ಧಿಯು ಬರುವದಿಲ್ಲವೋ ಅಲ್ಲಿಯ ವರೆಗೂ ಧಾರ್ಮಿಕ ಅವನತಿಯು ನಮ್ಮ ಬೆನ್ನ ಬಿಡದು.

ದೇವರು ಮನುಷ್ಯನಿಗೆ ಯಾವ ಯಾವ ತರಹದ ಶಕ್ತಿಗಳನ್ನು ದಯಪಾಲಿಸಿರುವನೋ ಅವುಗಳ ಉಪಾಸನೆಯನ್ನು ನಿಸ್ವಾರ್ಥ ಬುದ್ಧಿಯಿಂದ ಲೋಕ ಹಿತಾರ್ಥವಾಗಿ ಮಾಡುವದು ಮನುಷ್ಯನ ಧರ್ಮವು.

ಸ್ವಾರ್ಥ ಪರಾರ್ಥ ಕಾರ್ಯಗಳಿಗಿಂತಲೂ ಅಧಿಕವಾದ ಇನ್ನೊಂದು ಶಕ್ತಿಯಿರುವದು. ಅದೇ ಅಧ್ಯಾತ್ಮಿಕ ಶಕ್ತಿಯು. ಹಿಂದಕ್ಕೆ ವೀರಶೈವರಲ್ಲಿ ಅಧ್ಯಾತ್ಮಿಕ ಜ್ಯೋತಿಯು ಎಷ್ಟು ಜಾಜ್ವಲಮಾನವಾಗಿತ್ತೆಂಬುದನ್ನು ತೋರಿಸಲಿಕ್ಕೆ ಹಳ್ಳಿಪಳ್ಳಿಗಳಲ್ಲಿ ಸಹ ಸ್ಥಾಪಿಸಲ್ಪಟ್ಟಿರುವ ಮಠಗಳೇ ಸಾಕ್ಷಿ. ಆದರೆ ಈಗಿನ ಕಾಲದಲ್ಲಿ ಆ ಜ್ಯೋತಿಯು ಬಹಳ ಮಂಕಾಗಿರುವದು. ನಮ್ಮವರಲ್ಲಿ ಅಧ್ಯಾತ್ಮಿಕ ಜ್ಯೋತಿಯು ಮಸಕಾದ್ದರಿಂದಲೇ ನಮ್ಮ ನಮ್ಮೊಳಗೆ ಒಕ್ಕಟ್ಟಿಲ್ಲದೆ ಹೆಚ್ಚುಕಡಿಮೆಗಳು ಅಳತೆಗೆಟ್ಟು ಬೆಳೆದು ಹೋಗಿವೆ. ಪರಮಾನುಭವದ ಸವಿಯುಂಡು ತಾವು ನಿತ್ಯಸುಖದೊಳೋಲಾಡಿ ಆ ಅನುಭವವನ್ನು ಭಕ್ತಾದಿಗಳಿಗುಣಿಸಿ ಸುಖಸಾಗರದಲ್ಲಿ ತೇಲಾಡಿಸುವ ಮಹಾಸ್ವಾಮಿಗಳು ಈಗಿನ ಕಾಲದಲ್ಲಿ ಅತ್ಯಂತ ವಿರಳವಾಗಿರುವದರಿಂದ ನಮ್ಮವರಲ್ಲನೇಕರು ಪರಮತೀಯರನ್ನು ಗುರುಗಳನ್ನಾಗಿ ಮಾಡಿಕೊಳ್ಳುವ ದುರ್ಧರ ಪ್ರಸಂಗ ಬಂದೊದಗಿರುವದು. ಎಷ್ಟೋ ಅಜ್ಞಾನಿಗಳಾದ ನಮ್ಮ ಸಮಾಜಬಾಂಧವರು ಕ್ರೈಸ್ತ ಮುಸಲ್ಮಾನ ಧರ್ಮಗಳಲ್ಲಿ ಸೇರ ಹತ್ತಿದ್ದಾರೆ. ಅಧ್ಯಾತ್ಮಿಕ ತೇಜಸ್ಸಿನ ಅಭಾವವು ಧಾರ್ಮಿಕ ಅವನತಿಯ ಲಕ್ಷಣವು. ಎಲ್ಲಿಯ ವರೆಗೆ ನಮ್ಮ ಸ್ವಾಮಿಗಳು ನಿಜವಾದ ಷಟ್‌ಸ್ಥಲ ಧರ್ಮತತ್ವಗಳನ್ನರಿತು ಆಚರಿಸಿ ಆ ಲಿಂಗಾಂಗ ಸಾಮರಸ್ಯದ ಒಳಸುಳಿಸನ್ನು ಭಕ್ತಾದಿಗಳಿಗೆ ನೀಡುವದಿಲ್ಲವೋ ಅಲ್ಲಿಯ ವರೆಗೂ ಧಾರ್ಮಿಕ ಅವನತಿಯು ಕಟ್ಟಿಟ್ಟದ್ದೇ.

ಧರ್ಮದ ಏಳ್ಗೆಗೆ ವಿಶಾಲದೃಷ್ಟಿ, ಸ್ವಧರ್ಮಾಭಿಮಾನ, ಸುವಿಚಾರಯುಕ್ತವಾದ ಆಚಾರಗಳು ಅವಶ್ಯವಾದವುಗಳು. ಈ ಜಗತ್ತಿನಲ್ಲಿ ಯಾವ ಧರ್ಮವೂ ಕೆಡಕಲ್ಲ. ಎಲ್ಲ ಧರ್ಮಗಳು ಭೂತದಯೆ, ಸದಾಚಾರ, ಸದ್ಭಕ್ತಿ ಮೊದಲಾದ ಮಾನವನ ನಿಜಸುಖದ ಮಾರ್ಗಗಳನ್ನೇ ಪ್ರತಿಪಾದಿಸುತ್ತವೆ. ಎಲ್ಲ ಧರ್ಮಗಳಲ್ಲಿಯೂ ಆತ್ಮೋನ್ನತಿಯ ಸಾಧನಗಳು ಉಂಟೇ ಉಂಟು. ಸಂಕುಚಿತ ದೃಷ್ಟಿಯುಳ್ಳ ಜನರು ಉಳಿದ ಧರ್ಮಗಳ ತತ್ವಗಳನ್ನು ತಿಳಿದುಕೊಳ್ಳಲೆತ್ನಿಸದೆ ತಮ್ಮ ಧರ್ಮವೇ ಶ್ರೇಷ್ಠವೆಂದೂ ಇತರ ಧರ್ಮಗಳು ಕಡಿಮೆಯೆಂದೂ ತಿಳಿಯುತ್ತಾರೆ. ಆದರೆ ವಿಶ್ವವ್ಯಾಪಕ ದೃಷ್ಟಿಯುಳ್ಳವರು ಎಲ್ಲ ಧರ್ಮಗಳ ರಹಸ್ಯವನ್ನರಿತು ಅವುಗಳ ಬಗ್ಗೆ ಸಹಾನುಭೂತಿಯುಳ್ಳವರಾಗುತ್ತಾರೆ. ತಮ್ಮ ಧರ್ಮವೇ ಹೆಚ್ಚು ಅನ್ಯ ಧರ್ಮವು ಕನಿಷ್ಠವೆಂದು ಜಂಭಕೊಚ್ಚುವವರಿಗೆ ಧರ್ಮಲಂಡರೆನ್ನುತ್ತಾರೆ. ಧರ್ಮಲಂಡತನವು ಧರ್ಮದ ಅವನತಿಯ ಲಕ್ಷಣವೆಂದೇ ಹೇಳಬಹುದು. ತನ್ನ ಧರ್ಮದ ಬಗ್ಗೆ ಒಳ್ಳೆ ಅಭಿಮಾನವಿರುವದೇನೂ ಕೆಡಕಲ್ಲ. ಅದರೆ ತನ್ನ ಧರ್ಮವು ಶ್ರೇಷ್ಠವೆಂದು ಸಾಧಿಸಲಿಕ್ಕೆ ಹೋಗಿ ಅನ್ಯಮತಗಳನ್ನು ತೆಗಳುವದು ನಮಗೆ ಬೇಡ. ವೀರಶೈವರು ವಿಶ್ವವ್ಯಾಪಕ ದೃಷ್ಟಿಯುಳ್ಳವರಾಗಬೇಕು.

ಕೆಲವು ಪಂಡಿತರು ಈಗಿನ ಯಾಂತ್ರಿಕ ಯುಗದಲ್ಲಿ ಧರ್ಮ-ಧರ್ಮವೆಂದು ಬಡಬಡಿಸುವದು ಮೂರ್ಖತನವೆಂತಲೂ, ಮನುಷ್ಯನಿಗೆ ಬೇಕಾದ ಧರ್ಮದಲ್ಲಿ ಸೇರಲಿಕ್ಕೆ ಸ್ವಾತಂತ್ರ್ಯವಿರಬೇಕೆಂತಲೂ ಐಹಿಕ ಸುಖಕ್ಕೆ ಬೇಕಾಗುವ ಸ್ವಾತಂತ್ರ್ಯ, ಸಂಪತ್ತು, ಶಕ್ತಿಗಳನ್ನು ಬೆಳಸಿ ದೇಶಕಾರ್ಯವನ್ನು ಮಾಡಿದರೆ ತೀರಿತೆಂತಲೂ ಪ್ರತಿಪಾದಿಸುವರು. ಆದರೆ ಮನುಷ್ಯನು ತನ್ನ ದೇಶದ ಸುಖಸಂಪತ್ತು, ಕಲಾಕೌಶಲ್ಯ, ಸ್ವಾತಂತ್ರ್ಯ ಸ್ವದೇಶಾಭಿಮಾನಗಳನ್ನು ಹೆಚ್ಚಿಸಿಕೊಳ್ಳುವದಾದರೂ ಧರ್ಮವೇ ಆಗಿದೆ. ಆದಾಗ್ಯೂ ಮನುಷ್ಯನು ಸಮಾಜ ಪ್ರಾಣಿಯಾದ್ದರಿಂದ ಅವನು ಒಂದಿಲ್ಲಿಂದು ಸಮಾಜಕ್ಕೆ ಇಲ್ಲವೆ ಮತಕ್ಕೆ ಸಂಬಂಧಪಡಲೇಬೇಕಾಗುತ್ತದೆ. ಒಂದು ಸಮಾಜಪ್ರಾಣಿಯಾಗಿ ಬೇಕಾದ ಹಾಗೆ ರಾಷ್ಟ್ರಕಾರ್ಯಗಳನ್ನು ಮಾಡಬಹುದು. ತಮ್ಮ ಧರ್ಮವೇ ತಮಗೆ ಬೇಡವೆಂದು ಅದನ್ನು ಅಲ್ಲಗಳೆಯುವವರಿಗೆ ಧರ್ಮಭ್ರಷ್ಟರೆಂದೆನ್ನುವರು. ಭಗವದ್ಗೀತೆಯಲ್ಲಿ "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ"

ಎಂದು ಹೇಳಿದ ಪ್ರಕಾರ ಮನುಷ್ಯನು ಎಂಥ ಪ್ರಸಂಗಬಂದರೂ ತನ್ನ ಧರ್ಮಕ್ಕೆ ಅಂಟಿಕೊಳ್ಳುವದೇ ಶ್ರೇಯಸ್ಕರವು. ತನ್ನ ಧರ್ಮವು ಕೆಟ್ಟಿದ್ದರಿ ಅದನ್ನು ಸುಧಾರಿಸಲಿಕ್ಕೆ ಯತ್ನಿಸಬೇಕಲ್ಲದೆ ಅದನ್ನು ಹೀಯಾಳಿಸಿ ಅನ್ಯ ಧರ್ಮವನ್ನಂಗೀಕರಿಸುವದು ಹೇಯಾಸ್ಪದವು. ಆದುದರಿಂದ ತಾವು ಹುಟ್ಟಿ ಬೆಳೆದ ಧರ್ಮವನ್ನು ಉದ್ಧಾರ ಮಾಡದೆ ನಿಂದಿಸುವ ಧರ್ಮಭ್ರಷ್ಟರು ನಮಗೆ ಬೇಡ. ಅದನ್ನು ತ್ಯಜಿಸಿ ಹೋಗುವ ಧರ್ಮದ್ರೋಹಿಗಳೂ ನಮಗೆ ಬೇಡ. ಅದರ ಕುಂದುಕೊರತೆಗಳನ್ನು ನೀಗಿ ಕಳಕಳಿಯಿಂದ ಸೇವೆ ಮಾಡುವ ಸ್ವಧರ್ಮಾಭಿಮಾನಿಗಳು ನಮಗೆ ಬೇಕು. ಸ್ವಧರ್ಮಾಭಿಶೂನ್ಯತೆಯು ಧರ್ಮದ ಅವನತಿಯ ಲಕ್ಷಣವು.

ಕೆಲವರು ಧರ್ಮದ ತಿರುಳನ್ನರಿದು ಆಚರಿಸದೆ ಏನೋ ರೂಢಿವಶದಿಂದ ಬಂದ ಕ್ರಿಯಾದಿಗಳನ್ನು ಮೂಢ ಭಾವನೆಯಿಂದ ಯಂತ್ರಗಳಂತೆ ನಡೆಯಿಸುತ್ತಿರುವರು. ಕೆಲವರು ಅನ್ಯರನ್ನು ವಂಚಿಸಲಿಕ್ಕೆ ಪೂಜೆಯ ಆಡಂಬರವನ್ನು ಬೆಳಿಸುವರು. ಧರ್ಮದ್ರೋಹಿಗಳಿಗಿಂತಲೂ ಈ ಮೂಢ ನಂಬಿಗೆಯ ಜನಗಳು ಎಷ್ಟೋ ಪಟ್ಟು ಮೇಲು. ಯಾಕಂದರೆ ಅವಂಗೆ ಒಂದು ವೇಳೆ ಧರ್ಮತತ್ವಗಳು ತಿಳಿಯದಿದ್ದರೂ ಅವರು ಸರ್ವಥಾ ಧರ್ಮತ್ಯಾಗವನ್ನು ಮಾಡುವದಿಲ್ಲ. ಆದರೆ ಧರ್ಮದ ಮರ್ಮವನ್ನರಿಯದೆ ಮೂಕ ಕುರಿಗಳಂತೆ "ಗತಾನುಗತಿಕೋ ಲೋಕಃ" ಎಂದು ಸಾಗುವದಾದರೂ ಧರ್ಮದ ಅವನತಿಯ ಲಕ್ಷಣವೆಂದೇ ತಿಳಿಯಬೇಕು. ಶಿವಪೂಜಾದಿ ಕ್ರಿಯೆಗಳನ್ನು ಯಥೇಷ್ಟವಾಗಿ ಮಾಡಲೊಲ್ಲರೇಕೆ? ಅದಕ್ಕೆ ಯಾರ ಆಕ್ಷೇಪವೂ ಇಲ್ಲ. ಆದರೆ ದೇಶಕಾಲ ಪರಿಸ್ಥಿತಿಗನುಸರಿಸಿ ನಿಜವಾದ ಲಿಂಗಪೂಜೆ ಯಾವದೆಂಬದನ್ನು ವಿಚಾರಿಸಿ ನಡೆದುಕೊಳ್ಳುವದೇ ಧರ್ಮವು. ಧರ್ಮದ ನಿಜವಾದ ರಹಸ್ಯವನ್ನರಿಯದೆ, ಮನಃಪೂರ್ವಕವಾದ ಭಕ್ತಿಯು ಹೊರಸೂಸದೆ ಯಾಂತ್ರಿಕ ರೀತಿಯಿಂದ ವಿಧಾನಗಳನ್ನು ನಡೆಯಿಸುವ ಮೂಢ ಭಾವನೆಯಾಗಲಿ ಬಾಹ್ಯಾಡಂಬರವಾಗಲಿ ನಮಗೆ ಬೇಡ. ಮೂಢಭಾವನೆ ಬಾಹ್ಯಾಡಂಬರಗಳು ಧರ್ಮದ ಅವನತಿಯ ಹೆಗ್ಗುರುತುಗಳು.

ಪರಧರ್ಮಸಹಿಷ್ಣುತೆಯೇ ಧರ್ಮದ ಜೀವಾಳವಾದಂತೆ ಸ್ವಧರ್ಮರಕ್ಷಣೆಯೂ ಧರ್ಮದ ಮುಖ್ಯ ಲಕ್ಷಣವು. ಆದರೆ ಹಿಂದಕ್ಕೆ ಕರ್ನಾಟಕದಲ್ಲಿ ಒಂದು ಧರ್ಮದ ಪ್ರತಿಷ್ಠೆಯನ್ನು ಇನ್ನೊಂದು ಧರ್ಮದ ಮೇಲೆ

ಸ್ಥಾಪಿಸುವುದಕ್ಕಾಗಿ ಅರಸರ ಮುಂದೆ ಎಷ್ಟೋ ವಾಗ್ವಾದಗಳು ನಡೆದಿವೆ. ಯುದ್ಧ ರಕ್ತಪಾತಗಳೂ ಸಂಭವಿಸಿವೆ. ಜೈನ-ಶೈವ-ವೈಷ್ಣವ ಪಂಡಿತರಲ್ಲಿ ವಾಕ್ಚಲಹಗಳೂ, ದಿಗ್ವಿಜಯ ಜಯಪತ್ರಗಳೂ ನಡೆದು ಶಿವಾಲಯಗಳಲ್ಲಿ ವಿಷ್ಣು ಮೂರ್ತಿಗಳೂ, ವಿಷ್ಣು ಮಂದಿರಗಳಲ್ಲಿ ಸ್ಥಾವರಲಿಂಗಗಳೂ, ಜಿನಮಂದಿರಗಳಲ್ಲಿ ಈಶ್ವರ ವಿಗ್ರಹಗಳೂ ಸ್ಥಾಪಿಸಲ್ಪಟ್ಟಿವೆ. ಇಂಗ್ಲಂಡ ದೊಳಗೆ ಪ್ರೊಟೆಸ್ಟಂಟ್—ರೋಮನ್‌ಕ್ಯಾಥೋಲಿಕ್‌ರ ನಡುವೆ ಕಲಹವೆದ್ದು ಎಷ್ಟೋ ಧರ್ಮವೀರರು ಆಹುತಿಯಾಗಿದ್ದಾರೆ. ಮುಸಲ್ಮಾನರು ಒಂದು ಕೈಯಲ್ಲಿ ಖಡ್ಗವನ್ನೂ ಇನ್ನೊಂದು ಕೈಯಲ್ಲಿ ಕುರಾನವನ್ನೂ ಹಿಡಿದು ಇಸ್ಲಾಂ ಧರ್ಮವೇ ಶ್ರೇಷ್ಠವೆಂದು ಪ್ರಸ್ಥಾಪಿಸಲಿಕ್ಕೆ ಎಷ್ಟೋ ಅತ್ಯಾಚಾರಗಳನ್ನು ಮಾಡಿದ್ದು ಇತಿಹಾಸದಿಂದ ಕಂಡು ಬರುತ್ತದೆ. ಆದರೆ ಇತ್ತೀಚೆಗೆ ಆಗಿ ಹೋದ ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ರಾಮಕೃಷ್ಣ ಪರಮಹಂಸ, ಮ. ಗಾಂಧಿ ಮೊದಲಾದ ವಿಭೂತಿಗಳು ಯಾವ ಧರ್ಮವನ್ನೂ ಅಲ್ಲಗಳೆಯದೆ ಎಲ್ಲ ಧರ್ಮಗಳಲ್ಲಿಯೂ ಸತ್ಯವುಂಟೆಂದು ಹೇಳಿ ಅವುಗಳ ಬಗ್ಗೆ ಸಹಾನುಭೂತಿಯನ್ನು ತೋರಿಸುವ ಪಾಠವನ್ನು ಜಗತ್ತಿಗೆ ಕಲಿಸಿಕೊಟ್ಟಿದ್ದಾರೆ. ವೀರಶೈವರಾದರೂ ಸ್ವಧರ್ಮದಲ್ಲಿ ಶ್ರದ್ಧೆಯಿಡುವಂತೆ ಪರಧರ್ಮಗಳಲ್ಲಿ ಸಹಾನುಭೂತಿಯುಳ್ಳವರಾಗಿರುವದು ವಿಹಿತವು. ಆದರೆ ಪರಧರ್ಮೀಯರು ನಮ್ಮ ಮತದ ಮೇಲೆ ಆಕ್ರಮಣ ಮಾಡಿದರೆ ನಾವು ಒಕ್ಕಟ್ಟಿನಿಂದ ಅವರನ್ನು ಎದುರಿಸುವದೂ ಧರ್ಮವೇ. ಯಾವ ಕಾಲಕ್ಕೆ ನಮ್ಮ ಧರ್ಮದ ಮೇಲೆ ಎಂಥ ಆಘಾತಗಳು ಬಂದಾವೆಂಬುದರ ನಿಯಮವಿಲ್ಲ. ಆದುದರಿಂದ ನಾವು ಸುಸಂಘಟಿತರಾಗಿ ಸ್ವಧರ್ಮ ರಕ್ಷಣೆಯನ್ನು ಮಾಡಿಕೊಳ್ಳುವದು ನಮ್ಮ ಕರ್ತವ್ಯವು. ವೀರಶೈವರಲ್ಲಿ ಅಂಥ ಸಂಘಟನೆಯಿಲ್ಲದ್ದರಿಂದ ಅದೊಂದು ಧರ್ಮದ ಅವನತಿಯ ಲಕ್ಷಣವೆಂದೇ ಹೇಳಬೇಕು.

ವಿರಶೈವರಲ್ಲಿ ತಾರತಮ್ಯಗಳ ಒಳಪಂಗಡಗಳು ಮಿತಿಮೀರಿ ಬೆಳೆದದ್ದು ಅವನತಿಯ ದೊಡ್ಡ ಕುರುಹಾಗಿರುವದು. ಬಸವಾದಿ ಪ್ರಮಥರು ಶ್ರುತ್ಯಾಗಮಗಳನ್ನೊಳಕೊಂಡ ವೀರಶೈವ ಮತವನ್ನು ವಿಶ್ವವ್ಯಾಪಕ ದೃಷ್ಟಿಯಿಂದ ಪ್ರಸಾರ ಮಾಡಿದರು. ರೂಢಿಗತವಾದ ವರ್ಣಾಶ್ರಮಧರ್ಮದ ವಿರುದ್ಧ ಕ್ರಾಂತಿಯನ್ನು ಮಾಡಿದರು. ಜಗನ್ಮಾನ್ಯವಾದ ತತ್ವಗಳನ್ನು ಹರಡಿ ಬೇಕಾದ ಮುಮುಕ್ಷುಗಳಿಗೆ ಇದನ್ನು ಮುಕ್ತದ್ವಾರವನ್ನಾಗಿ ಮಾಡಿದರು. ಆದರೆ ಬರಬರುತ್ತ ವರ್ಣಾಶ್ರಮಗಳ ಸಂಸರ್ಗದಿಂದ ನಮ್ಮವರು ನಮ್ಮ ತತ್ವಗಳನ್ನು ಮರೆತು ಶರಣರ ಮಾರ್ಗಕ್ಕೆ ಕಲಂಕ ಹಚ್ಚುತ್ತಿರುವರು, ಗುರುಲಿಂಗ ಜಂಗಮವು ಒಂದೆಂಬ ಮತದಲ್ಲಿ ಗುರುಗಳು ಹೆಚ್ಚೋ ಜಂಗಮರು ಹೆಚ್ಚೋ ಎಂಬ ವಿಷಯವಾಗಿ ದೊಡ್ಡ ಕೋಲಾಹಲವೆದ್ದು ವಾತಾವರಣವನ್ನೆಲ್ಲಾ ಕಲುಷಿತ ಮಾಡಿ ಬಿಟ್ಟಿದೆ. ಭಕ್ತ ಮಾಹೇಶ್ವರರಲ್ಲಿ ಕುಲಭೇದವಿಲ್ಲೆಂಬ ತತ್ವವನ್ನು ಮರೆತು ಭಕ್ತರ ಮೇಲೆ ಮಹೇಶ್ವರ ವರ್ಗವು ತನ್ನ ವರ್ಚಸ್ಸನ್ನು ಬಹು ದಿನಗಳಿಂದ ನಡೆಯಿಸುತ್ತ ಬಂದಿದೆ. ಭಕ್ತಭಕ್ತರಲ್ಲಿ ತಾರತಮ್ಯಗಳನ್ನೆಣಿಸುವದು ಮಹಾಪಾಪವೆಂದು ವೀರಶೈವ ಮತವು ಹೇಳುತ್ತಿದ್ದರೂ ಒಳಪಂಗಡಗಳು ಹೆಚ್ಚಾಗಿ ಪರಸ್ಪರರಲ್ಲಿ ಅನ್ನಪಾನ, ಶರೀರ ಸಂಬಂಧಗಳು ಲೋಪವಾಗಿವೆ. ನಮ್ಮ ಧರ್ಮವು ಜಗತ್ತಿನಲ್ಲಿ ಎಲ್ಲಕ್ಕೂ ಶ್ರೇಷ್ಠವೆಂದು ಹೆಮ್ಮೆಪಡುವ ನಾವು ಹೆರವರಿಂದ ಶೂದ್ರರೆನಿಸಿಕೊಂಡು ನಮ್ಮೊಳಗೆ ಒಬ್ಬನು ಇನ್ನೊಬ್ಬನಿಗಿಂತ ಅಧಿಕನೆಂದು ಹೇಳಿಕೊಳ್ಳುವ ಕೀಳ್ದಿಸೆಗೆ ಇಳಿದು ಬಿಟ್ಟಿದ್ದೇವೆ. ಆದುದರಿಂದ ಕ್ಷುದ್ರವಾದ ತಾರತಮ್ಯಗಳೂ ಒಳಪಂಗಡಗಳೂ ಎಲ್ಲಿಯವರೆಗೆ ಅಳಿದು ಹೋಗುವದಿಲ್ಲವೋ ಅಲ್ಲಿಯವರೆಗೂ ಅವನತಿಯು ನಮ್ಮಿಂದ ತೊಲಗಲಾರದು.

ಒಟ್ಟಿನ ಮೇಲೆ ನಮ್ಮ ಧರ್ಮಕ್ಕೆ ಎಡೆಗೊಂಡ ಅವನತಿಯಳಿದು ಉನ್ನತಿಯು ಬೆಳಗಬೇಕಾದರೆ ನಮ್ಮಲ್ಲಿ ಎಲ್ಲತರದ ಕಾಯಕಗಳ ಪ್ರಸಾರ ಸಮಾಜದಲ್ಲಿ ಸಂಪತ್ತಿನ ಸದ್ವಿನಿಯೋಗ, ಭಕ್ತರಲ್ಲಿಯೂ ಸ್ವಾಮಿಗಳಲ್ಲಿಯೂ ಶಿವಾನುಭವಜ್ಞಾನ, ವಿಶಾಲದೃಷ್ಟಿ, ಸ್ವಧರ್ಮಾಭಿಮಾನ, ಸುವಿಚಾರ ಯುಕ್ತವಾದ ಆಚಾರ, ಸಂಘಟನೆ, ಒಳಪಂಗಡಗಳ ದೂರೀಕರಣ ಇವೆಲ್ಲ ವಿಷಯಗಳನ್ನು ಪ್ರತಿಯೊಬ್ಬ ವೀರಶೈವನು ಅವಶ್ಯವಾಗಿ ಗಮನಿಸಬೇಕು.

ಶಿವಾನುಭವ ಸಂಘಗಳ ಸ್ಥಾಪನೆ.

(ಸಂಪಾದಕ)

ಈ ವರೆಗೆ ಶಿವಾನುಭವದ ಪತ್ರಿಕೆಯ ದ್ವಾರಾ ಶಿವಶರಣರ ಅನೇಕ ವಚನಗ್ರಂಥಗಳು ಪ್ರಕಟವಾಗಿರುತ್ತವೆ. ಇವುಗಳ ಸಂಖ್ಯೆಯು ಈಗ ೬೦ ರ ವರೆಗೆ ಬಂದಿರುತ್ತದೆ. ನಾವು ವಚನಶಾಸ್ತ್ರಸಾರ ಭಾಗ ೧, ಭಾಗ ೨ ಮತ್ತು ಭಾಗ ೩ ಇವುಗಳನ್ನು ಸ್ವತಂತ್ರವಾಗಿ ಮುದ್ರಿಸಿದ್ದು ಅವುಗಳಲ್ಲಿ ಶಿವಶರಣರ ವಿಚಾರಗಳು ಒತ್ತಟ್ಟಿಗೆ ಕ್ರೋಡೀಕರಿಸಲ್ಪಟ್ಟಿವೆ. ಇವುಗಳಲ್ಲಿ ಶಿವಶರಣರ ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ಸಾಮಾನ್ಯ ತತ್ವಗಳಲ್ಲದೆ, ವೀರಶೈವ ಸಿದ್ಧಾಂತವೂ ಕೂಡ ಶಿವಶರಣರ ಉಕ್ತಿಗಳ ಮೂಲಕವಾಗಿಯೇ ವಿವೇಚಿಸಲ್ಪಟ್ಟಿರುತ್ತವೆ. ಈ ಪ್ರಕಾರ ನಾವು ಕೇವಲ ಗ್ರಂಥ ಪ್ರಕಟನಾ ಕಾರ್ಯದಲ್ಲಿ ತೊಡಗಿದ್ದರಿಂದ ಅವುಗಳನ್ನು ಗ್ರಾಮಾಂತರಗಳಲ್ಲಿ ಪ್ರಸಾರಪಡಿಸುವ ಮಹತ್ವದ ಕಾರ್ಯವು ಈ ವರೆಗೂ ನಮ್ಮಿಂದ ಏನೂ ಆಗಿರುವದಿಲ್ಲ. ಇಷ್ಟೇ ಅಲ್ಲ, ವಿಜಾಪುರ ಪಟ್ಟಣವನ್ನು ಬಿಟ್ಟು ಹೊರಗೆ ಹೋಗಲು ಸಹ ನಮಗೆ ಅವಕಾಶವು ಸಿಕ್ಕಿರುವದಿಲ್ಲ. ಅನೇಕ ಮಹನೀಯರು ನಮ್ಮನ್ನು ಉಪನ್ಯಾಸಗಳಿಗೋಸ್ಕರ ಆಗಿಂದಾಗ್ಗೆ ಕರೆಯುವದುಂಟು. ಆದರೆ ಹೀಗೆ ನಾಲ್ಕಾರು ದಿವಸ ನಾವು ಹೋದದ್ದಾದರೆ ನಮ್ಮ ಆಫೀಸಿನಲ್ಲಿ ನಡೆದಿರುವ ಕಾರ್ಯಗಳಿಗೆ ತಡೆಯುಂಟಾಗಿ ನಮಗೆ ಆರ್ಥಿಕ ಹಾನಿಯುಂಟಾಗುತ್ತದೆ. ಇದಲ್ಲದೆ ಪ್ರವಾಸ ಮಾಡುವಂತೆ ನಮ್ಮ ದೇಹಸ್ಥಿತಿಯೂ ಇರುವದಿಲ್ಲ. ಆದ್ದರಿಂದ ಈ ಅಪರಿಹಾರ್ಯ ಕಾರಣಗಳಿಗೋಸ್ಕರ ನಾವು ಅನೇಕರ ಆಮಂತ್ರಣವನ್ನು ನಿರಾಕರಿಸಬೇಕಾಯಿತು. ಇದಕ್ಕೋಸ್ಕರ ನಾವು ಅವರ ಕ್ಷಮಾಪಣೆಯನ್ನು ಬೇಡಿಕೊಳ್ಳುತ್ತೇವೆ.

ಶಿವಶರಣರ ವಾಙ್ಮಯವನ್ನು ಗ್ರಾಮಾಂತರಗಳಲ್ಲಿ ಪ್ರಸಾರ ಮಾಡುವ ಕಾರ್ಯವನ್ನು ನಾವು ಪ್ರತ್ಯಕ್ಷವಾಗಿ ಕೈಕೊಳ್ಳುವದು ಕೆಲವು ವಿಶೇಷ ಕಾರಣಗಳಿಗೋಸ್ಕರ ಅವಶ್ಯವೆಂದು ನಮಗೆ ತೋರಿದ್ದರಿಂದ ಈ ವರ್ಷದಲ್ಲಿ ಈ ಕಾರ್ಯದಲ್ಲಿ ತೊಡಿಗಿ ಏಳೆಂಟು ತಿಂಗಳುಗಳಾದವು. ಇದರಲ್ಲಿ ಬಂದ ಅನುಭವವನ್ನು ನಾವು ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ನಿವೇದಿಸುತ್ತೇವೆ.

ಈ ಕಾರ್ಯವನ್ನು ಪ್ರಾರಂಭಿಸುವಲ್ಲಿ ಬಸವಾದಿ ಪ್ರಮುಖರು ಪೂರ್ವಕಾಲದಲ್ಲಿ ಯಾವ ಮಾರ್ಗವನ್ನು ಕೈಕೊಂಡಿದ್ದರೋ ಅವರ ಅನುಕರಣವನ್ನು ಮಾಡುವದು ಉಚಿತವಾಗಿರುತ್ತದೆ. ಅವರು ಶಿವಾನುಭವ ಮಂಟಪಗಳನ್ನು ಸ್ಥಾಪಿಸಿ ಶಿವಾನುಭವದ ಕಾರ್ಯಗಳನ್ನು ಜರುಗಿಸಿದರು. ಅದೇ ರೀತಿಯಾಗಿ ವೀರಶೈವ ಸಮಾಜದವರು ಎಲ್ಲೆಲ್ಲಿಯೂ ಶಿವಾನುಭವದ ಮಂಟಪಗಳನ್ನು ಸ್ಥಾಪಿಸತಕ್ಕದ್ದು ಮತ್ತು ಶಿವಶರಣರು ಹೇಗೆ ಇವುಗಳಲ್ಲಿ ಶಿವಾನುಭವದ ವಿಷಯಗಳನ್ನು ಚರ್ಚಿಸುತ್ತಿದ್ದರೋ ಹಾಗೆಯೇ ಚರ್ಚಿಸತಕ್ಕದ್ದು ಮತ್ತು ಅವುಗಳಂತೆ ನಡೆಯಲೂ ಶಕ್ಯವಿದ್ದಷ್ಟರಮಟ್ಟಿಗೆ ಪ್ರವರ್ತಿಸಿಗತಕ್ಕದ್ದು. ಈ ರೀತಿಯನ್ನು ಕೈಕೊಂಡರೆ ಕಾರ್ಯಗಳು ತೀವ್ರ ಜರಂಗಲಾರವೆಂದು ಅನೇಕರು ಆಕ್ಷೇಪಿಸಬಹುದು. ಇದು ನಿಜವೂ ಇರಬಹುದು. ಆದರೆ ಪ್ರಕೃತ ಸ್ಥಿತಿಯಲ್ಲಿ ಈ ರೀತಿಯನ್ನು ಅನುಸರಿಸುವದರಿಂದಲೇ ಗ್ರಾಮಗಳಲ್ಲಿ ಸ್ಥಾಯಿಕ ಪರಿಣಾಮಗಳಾಗುವವೆಂದು ವಾಚಕರು ಸ್ವಲ್ಪ ವಿಚಾರಮಾಡಿದ್ದಾದರೆ ಅವರಿಗೂ ತೋರದಿರದೆಂದು ನಾವು ಭಾವಿಸಿದ್ದೇವೆ.

ಶಿವಾನುಭವ ಸಂಘಗಳಲ್ಲಿ ಕಾರ್ಯ ಮಾಡುವವರಲ್ಲಿ ಮೊದಲು ಶಿವಶರಣರ ವಿಚಾರಗಳ ಬಗ್ಗೆ ದೃಢವಾದ ವಿಶ್ವಾಸವು ಬೇಕು, ಇಂಥವರು ನಿಯಮಿತ ಕಾಲದಲ್ಲಿ ತಮ್ಮ ಗ್ರಾಮದಲ್ಲಿ ಕೂಡುತ್ತಿರಬೇಕು, ವಚನ ಶಾಸ್ತ್ರದಲ್ಲಿಯ ತತ್ವಗಳನ್ನು ವಿವೇಚಿಸಬೇಕು ಮತ್ತು ಅವುಗಳಂತೆ ನಡೆಯಲೂ ಪ್ರಯತ್ನಿಸಬೇಕು. ಈ ಕಾರ್ಯ ಮಾಡಲಪೇಕ್ಷಿಸುವವರ ಹೆಸರುಗಳನ್ನು ಸಂಪಾದಿಸುವದಕ್ಕೋಸ್ಕರ ಶಿವಾನುಭವ ಪತ್ರಿಕೆಯ ದ್ವಾರಾ ಎಲ್ಲ ಕಡೆಗೂ ಪತ್ರಿಕೆಗಳನ್ನು ಕಳುಹಿಸಿದೆವು. ಹಾಗೆಯೇ ನಮ್ಮ ವಾರಪತ್ರಿಕೆಯಾದ ನವಕರ್ನಾಟಕ ಪತ್ರಿಕೆಯಲ್ಲಿಯೂ ಈ ವಿಷಯವನ್ನು ಕುರಿತು ಮೇಲಿಂದ ಮೇಲೆ ಪ್ರಸ್ತಾಪಿಸುತ್ತಾ ಬಂದೆವು. ಈ ಪ್ರಯತ್ನಗಳ ಮೂಲಕವಾಗಿ ಅನೇಕ ಗ್ರಾಮಗಳಲ್ಲಿಯವರು ತಮ್ಮಲ್ಲಿ ಶಿವಾನುಭವ ಸಂಘಗಳನ್ನು ಸ್ಥಾಪಿಸಲಿಕ್ಕೆ ಮುಂದಾದರು. ಅವರು ಶಿವಶರಣರ ತತ್ವಗಳು ಮಾನ್ಯವಿದ್ದಂಥವರ ಹೆಸರಗಳನ್ನು ನಮ್ಮ ಕಡೆಗೆ ಕಳುಹಿಸುತ್ತಾ ಬಂದರು. ಹೀಗೆ ಅವರು ಕಳಿಸಿದ ಕೂಡಲೆ ವಾರದಲ್ಲಿ ಒಂದು ದಿವಸ ಅವರು ಕೂಡಿಕೊಂಡು ಧರ್ಮತತ್ವಗಳನ್ನು ಚರ್ಚಿಸುತ್ತ ಇರಲು ಸೂಚಿಸಿದೆವು. ಆದರೆ ಈ ಕಾರ್ಯಕ್ಕೆ ಗ್ರಂಥಗಳ ಸಹಾಯವು ಬಹಳ ಅವಶ್ಯವಾ

ದುದು. ಆದ್ದರಿಂದ ನಾವು ಶಿವಾನುಭವ ಗ್ರಂಥಮಾಲೆಯಲ್ಲಿರುವ
'ನೈತಿಕ ಮತ್ತು ಭಕ್ತಿಯ ವಚನಗಳು' ಮತ್ತು 'ಲಿಂಗ ಮತ್ತು ಪ
ಮಾತ್ಮ' ಈ ಎರಡು ಗ್ರಂಥಗಳನ್ನು ಉಚಿತವಾಗಿ ಅವರಿಗೆ ಕಳುಹಿಸು
ಬಂದೆವು. ಇದರಿಂದ ಅನೇಕ ಗ್ರಾಮದವರು ಬಹುಶಃ ಸೋಮವಾ
ದಿವಸ ನೆರೆದು ಶಿವಶರಣರ ಉಕ್ತಿಗಳನ್ನು ಓದುತ್ತಲಿದ್ದಾರೆ. ಅನೇ
ಗ್ರಾಮಗಳಲ್ಲಿಯವರು ತಮ್ಮ ಸಂಘಗಳ ವರದಿಗಳನ್ನು ನಮ್ಮ ಕಡೆಗೆ ಕಳ
ಹಿಸುತ್ತಾ ಇದ್ದಾರೆ. ಅವುಗಳ ವಿವರಗಳನ್ನು ನಾವು ನವಕರ್ನಾಟ
ಪತ್ರಿಕೆಯಲ್ಲಿ ಆಗಿಂದಾಗ್ಗೆ ಪ್ರಸಿದ್ಧಿಸುತ್ತಾ ಬಂದಿದ್ದೇವೆ.

ಈ ಕಾರ್ಯವನ್ನು ಅನೇಕ ಮಹಾಸ್ವಾಮಿಗಳವರೂ ಶರಣ ವಾತ್ಸ
ಯಪ್ರೇಮಿಗಳಾದ ಅನೇಕ ಸದ್ಗೃಹಸ್ಥರೂ ಮಾಡುತ್ತ ಬಂದಿದ್ದಾರೆ.
ಅವರು ಈ ಕಾರ್ಯವನ್ನು ಯಾವ ತರದ ಫಲಾಪೇಕ್ಷೆಯನ್ನು ಮಾಡದೆ
ಕೇವಲ ನಿಃಸ್ವಾರ್ಥ ಬುದ್ಧಿಯಿಂದ ಮಾಡುತ್ತಲಿದ್ದಾರೆ. ಅವರು ವೃತ್ತ
ಪತ್ರಿಕೆಗಳ ಮೂಲಕ ತಮ್ಮ ಹೆಸರು ಜನರಲ್ಲಿ ಪ್ರಸಿದ್ಧವಾಗಲೆಂದು ಎಂದೂ
ಅಪೇಕ್ಷಿಸಿರುವದಿಲ್ಲ. ಇದಕ್ಕೊಸ್ಕರ ಸಮಾಜವೆಲ್ಲವೂ ಅವರಿಗೆ ಋಣ
ಯಾಗಿರುತ್ತದೆ.

ಶಿವಾನುಭವ ಸಂಘಗಳು ವಿಜಾಪುರ ಜಿಲ್ಲೆ ಮತ್ತು ಬೆಳಗಾವ ಜಿಲ್ಲೆ
ಇಲ್ಲಿಯ ಗ್ರಾಮಗಳಲ್ಲಿ ಹೆಚ್ಚಾಗಿ ಸ್ಥಾಪಿಸಲ್ಪಟ್ಟಿರುತ್ತವೆ. ಇಲ್ಲಿಯ ಅನೇಕ
ಸಂಘಗಳು ಜೆನ್ನಾಗಿ ಕೆಲಸ ಮಾಡಹತ್ತಿರುತ್ತವೆ. ಧಾರವಾಡ ಜಿಲ್ಲೆಯಲ್ಲಿ
ಕಲಘಟಗಿ, ರೋಣ, ಹುಬ್ಬಳ್ಳಿ, ಮತ್ತು ರಾಣೇಬೆನ್ನೂರ ಈ ತಾಲೂ
ಕುಗಳಲ್ಲಿ ಮಾತ್ರ ಇವು ಉಂಟಾಗಿರುತ್ತವೆ. ಅವುಗಳಲ್ಲಿ ಹುಬ್ಬಳ್ಳಿ ಮತ್ತು
ಕಲಘಟಗಿ ಈ ತಾಲೂಕಗಳಲ್ಲಿಯವು ಹೆಚ್ಚಿಗೆ ಚಟುವಟಿಕೆಯನ್ನು
ತೋರಿಸುತ್ತಲಿವೆ. ಮೈಸೂರ ಪ್ರಾಂತದಲ್ಲಿ ಶಿವಮೊಗ್ಗಾ, ಹಾಸನ,
ಬೆಂಗಳೂರ, ಮತ್ತು ತುಮಕೂರ ಈ ಜಿಲ್ಲೆಗಳಲ್ಲಿಯ ಕೆಲವು ಗ್ರಾಮ
ಗಳಿಂದ ನಮಗೆ ಹೆಸರುಗಳು ಬಂದಿರುತ್ತವೆ. ಆದರೆ ಅವುಗಳಲ್ಲಿ
ಯಾವವೂ ಕಾರ್ಯ ತತ್ಪರತೆಯನ್ನು ತೋರಿಸಿರುವದಿಲ್ಲ. ಆದರೆ ಕೊಡಗು
ಪ್ರಾಂತದಲ್ಲಿ ಕೆಲವು ಸ್ವಾಮಿಗಳ ವಿಶೇಷ ಪ್ರಯತ್ನಗಳ ಮೂಲಕ ವಿಶೇಷ
ಉತ್ಸಾಹವು ಕಂಡು ಬರುತ್ತಿದೆ. ಇದು ಬಹು ಸಮಾಧಾನಕರವು.
ಬಳ್ಳಾರಿ ಜಿಲ್ಲೆಯಲ್ಲಿ ಸಂಘವನ್ನು ನಡಿಸುವ ಪ್ರಯತ್ನವು ನಡೆದಿದ್ದು
ಒಂದೇ ಒಂದು ಗ್ರಾಮದಲ್ಲಿ. ಈ ಜಿಲ್ಲೆಯ ಪರಿಸ್ಥಿತಿಯು ಏನೋ ಒಂದು

ಕಾರಣದಿಂದ ತೃಪ್ತಿಕರವಾಗಿ ತೋರುವದಿಲ್ಲ. ನಿಜಾಂ ಇಲಾಖೆಯಲ್ಲಿ
ಶಿವಾನುಭವ ಮಂಟಪಗಳನ್ನು ಸ್ಥಾಪಿಸುವ ಬಗ್ಗೆ ಅನೇಕರು ಪ್ರಯತ್ನ
ಗಳನ್ನು ಮಾಡುತ್ತ ಇದ್ದಾರೆ. ಆದರೆ ಅದು ಅತ್ಯಂತ ಹಿಂದುಳಿದ
ದೇಶವು. ಆದ್ದರಿಂದ ಅಲ್ಲಿ ಪ್ರಗತಿಯು ಸಾವಕಾಶವಾಗಿರುತ್ತದೆ. ಮಹಾ
ರಾಷ್ಟ್ರ ಮತ್ತು ಆಂಧ್ರ ದೇಶಗಳಲ್ಲಿಯ ಗ್ರಾಮಗಳಲ್ಲಿ ಕನ್ನಡ ಭಾಷೆಯಲ್ಲಿ
ಓದಬಲ್ಲವರ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ. ಆದ್ದರಿಂದ ಅಲ್ಲಿ ಶಿವಾ
ನುಭವ ಮಂಟಪಗಳು ಸ್ಥಾಪಿತವಾಗುವದೂ, ಅವುಗಳು ನಡೆಯುವದೂ
ದುಸ್ತರವು. ಅಲ್ಲದೆ ಅಲ್ಲಿ ವೀರಶೈವರ ಸಂಖ್ಯೆಯು ಗ್ರಾಮಗಳಲ್ಲಿ ಅತ್ಯ
ಲ್ಪವಾಗಿರುತ್ತದೆ. ಮತ್ತು ಅವರಾದರೂ ಶಿಕ್ಷಣದಲ್ಲಿ ಬಹಳ ಹಿಂದುಳಿ
ದವರು. ಅದರಿಂದ ಇಲ್ಲಿ ವೀರಶೈವ ಧರ್ಮದ ಚಟುವಟಿಕೆಗಳಾಗಲಿಕ್ಕೆ
ಆತಂಕಗಳು ಉತ್ಪನ್ನವಾಗುತ್ತಲಿವೆ.

ಈ ಮೇರೆಗೆ ಶಿವಾನುಭವ ಸಂಘಗಳು ಸ್ಥಾಪಿತವಾಗಿರುವ ಗ್ರಾಮಗಳ
ಹೆಸರುಗಳನ್ನು ನಾವು ಇಲ್ಲಿ ಕೊಡುತ್ತೇವೆ.

ವಿಜಾಪುರ ಜಿಲ್ಲೆಃ— (೧) ಬಂಥನಾಳ ತಾ. ಇಂಡಿ, (೨) ಶಿರ
ಶ್ಯಾಡ ತಾ. ಇಂಡಿ, (೩) ಗುಡೂರ ತಾ. ಹುನಗುಂದ, (೪) ನಾಗಠಾಣ
ತಾ. ವಿಜಾಪುರ, (೫) ಚಡಚಣ ತಾ. ಇಂಡಿ, (೬) ಲೋಣಿ ಸಂ.
ಸಾಂಗಲಿ (೭) ನಿವರಗಿ ತಾ. ಇಂಡಿ, (೮) ಉಮದಿ ಸಂ. ಜತ್ತಿ, (೯)
ತಡ್ಡೇವಾಡಿ ತಾ. ಇಂಡಿ, (೧೦) ಜೊಳಚಗೋಡ ತಾ. ಬದಾಮಿ,
(೧೧) ಢವಳಗಿ ತಾ. ಮುದ್ದೇಬಿಹಾಳ, (೧೨) ಬೇಲೂರ ತಾ. ಬದಾಮಿ,
(೧೩) ಲಚ್ಯಾಣ ತಾ. ಇಂಡಿ, (೧೪) ಢಾಣಕಶಿರೂರ ತಾ. ಬದಾಮಿ,
(೧೫) ಬಬಲೇಶ್ವರ ತಾ. ವಿಜಾಪುರ, (೧೬) ಸಿಂದಗಿ ತಾ. ಸಿಂದಗಿ,
(೧೭) ಇಳಕಲ್ಲ ತಾ. ಹುನಗುಂದ (೧೮) ವಿಜಾಪುರ ತಾ. ವಿಜಾಪುರ,
(೧೯) ಜತ್ತಿ ಸಂ. ಜತ್ತಿ, (೨೦) ಕನಮಡಿ ತಾ. ವಿಜಾಪುರ, (೨೧)
ಟಾಕಳಿ ತಾ. ಇಂಡಿ, (೨೨) ದಾಶ್ಯಾಳ ತಾ. ವಿಜಾಪುರ, (೨೩)
ಬೂದೀಹಾಳ ತಾ. ಬದಾಮಿ.

ಬೆಳಗಾವ ಜಿಲ್ಲೆಃ— (೨೪) ತೆಲಸಂಗ ತಾ. ಅಥಣಿ, (೨೫)
ಹಾಲಳ್ಳಿ ತಾ. ಅಥಣಿ, (೨೬) ಸವದಿ ತಾ. ಅಥಣಿ, (೨೭) ಹಿಪ್ಪರಿಗಿ
ತಾ. ಅಥಣಿ, (೨೮) ಜನವಾಡ ತಾ. ಅಥಣಿ, (೨೯) ಯಮಕನಮರ್ಡಿ
ತಾ. ಹುಕ್ಕೇರಿ, (೩೦) ವಂಟಮುರಿ ತಾ. ಹುಕ್ಕೇರಿ, (೩೧) ನೇಸರಗಿ

ತಾ. ಬೈಲಹೊಂಗಲ, (೩೨) ಗೋಕಾವಿ (ಅಕ್ಕನಬಳಗ) ತಾ. ಗೋಕಾಕ, (೩೩) ಹೂನೂರ ಸಂ. ಜಮಖಂಡಿ.

ಧಾರವಾಡ ಜಿಲ್ಲೆಃ— (೩೪) ಅಮರಗೋಳ ತಾ. ನವಲಗುಂದ, (೩೫) ಬ್ಯಾಹಟ್ಟಿ ತಾ. ಹುಬ್ಬಳ್ಳಿ, (೩೬) ಗಜೇಂದ್ರಗಡ ತಾ. ರೋಣ, (೩೭) ರಾಣೇಬೆನ್ನೂರ ತಾ. ರಾಣೇಬೆನ್ನೂರ, (೩೮) ಕುಸುಗಲ್ಲ ತಾ. ಹುಬ್ಬಳ್ಳಿ (೩೯) ದಾಸ್ತಿಕೊಪ್ಪ ತಾ. ಕಲಘಟಗಿ, (೪೦) ಹಿರೇಹೊನ್ನಿಹಳ್ಳಿ, ತಾ. ಕಲಘಟಗಿ, (೪೧) ಹಾನಗಲ್ಲ, (೪೨) ಕಾಮಧೇನು ತಾ. ಕಲಘಟಗಿ, (೪೩) ಭೋಗೇರನಾಗರಕೊಪ್ಪ ತಾ. ಕಲಘಟಗಿ, (೪೪) ಜೋಯಿಸರ ಹರಳಹಳ್ಳಿ ತಾ. ಕಲಘಟಗಿ, (೪೫) ಹಲಗೇರಿ ತಾ. ರಾಣೇಬಿನ್ನೂರ, (೪೬) ಧಾರವಾಡ ಟ್ರೇನಿಂಗ ಕಾಲೇಜ ತಾ. ಧಾರವಾಡ, (೪೭) ಗದಗ ತಾ. ಗದಗ, (೪೮) ಹೊಳೆಹಡಗಲಿ ತಾ. ರೋಣ, (೪೯) ಬೆಳವಟಿಗಿ ತಾ. ನವಲಗುಂದ.

ಕಾರವಾರ ಜಿಲ್ಲೆಃ— (೫೦) ಸಿದ್ದಾಪೂರ ತಾ. ಸಿದ್ದಾಪೂರ.

ಮೈಸೂರ ಸಂಸ್ಥಾನಃ— (೫೧) ಬೆಂಗಳೂರ (೫೨) ಶಿಕಾರಿಪೂರ ಜಿ. ಶಿವಮೊಗ್ಗಾ, (೫೩) ತುಮಕೂರ, (೫೪) ಅತ್ತಿಬೆಲೆ ತಾ. ಆನೇಕಲ್ಲ, (೫೫) ರಾಜಾಪೂರ ತಾ. ಆನೇಕಲ್ಲ, (೫೬) ಮಾಸ್ತೇನಹಳ್ಳಿ ತಾ. ಆನೇಕಲ್ಲ, (೫೭) ಗುಂಜೂರು ಜಿ. ಬೆಂಗಳೂರ, (೫೮) ಹೊಸಕೋಟಿ ಜಿ. ಹಾಸನ, (೫೯) ಹೆನ್ನಾಗರ ಜಿ. ಬೆಂಗಳೂರ, (೬೦) ಅರೇಹಳ್ಳಿ ಜಿ. ಹಾಸನ.

ಕೊಡಗುಃ— (೬೧) ಕೊಡ್ಲಿಪೇಟೆ—ನಾರ್ಥಕೂರ್ಗ, (೬೨) ಸೋಮವಾರಪೇಟೆ—ನಾರ್ಥಕೂರ್ಗ.

ನಿಜಾಮ ಇಲಾಖಾಃ— (೬೩) ಕಲಬುರ್ಗಿ, (೬೪) ಹಂಚಿನಾಳ ಜಿ. ರಾಯಚೂರ, (೬೫) ಸದಾಶಿವಪೇಟ ಜಿ. ಮೆದಕ್ಕ.

ಮದ್ರಾಸ ಇಲಾಖಾಃ— (೬೬) ಮದುವನಹಳ್ಳಿ ಜಿ. ಕೊಯಿಮತ್ತೂರ, (೬೭) ಬಾಗವಾಡಿ ಜಿ. ಬಳ್ಳಾರಿ.

ಈ ಪ್ರಕಾರ ೬೭ ಗ್ರಾಮಗಳಲ್ಲಿ ಶಿವಾನುಭವ ಸಂಸ್ಥೆಯನ್ನು ನಡಿಸಲು ಇಚ್ಛಿಸುವ ಜನರು ಇದ್ದದ್ದು ಕಂಡುಬರುತ್ತದೆ. ಇದರಲ್ಲಿ ಅನೇಕ ಮಹನೀಯರು ವಿಶೇಷ ಪರಿಶ್ರಮಪಟ್ಟಿದ್ದಾರೆ. ವಿಸ್ತಾರಭಯ

ಕ್ಕಾಗಿ ಅವರ ಹೆಸರುಗಳನ್ನೆಲ್ಲ ನಾವು ಇಲ್ಲಿ ಕೊಟ್ಟಿರುವದಿಲ್ಲ. ಯಥಾವಕಾಶವಾಗಿ ಅವರ ಹೆಸರುಗಳನ್ನು ಮುಂದೆ ಪ್ರಕಟಿಸುವೆವು.

ಈ ಸಂಸ್ಥೆಗಳ ಪರವಾಗಿ ಒಂದು ಮಹಾಸಭೆಯನ್ನು ಕರೆಯಬೇಕೆಂತಲೂ ಅನೇಕರು ಸೂಚಿಸಿದ್ದರು. ಆದರೆ ಈ ಸಂಘಗಳು ವ್ಯವಸ್ಥಿತವಾಗಿ ಕೆಲವು ದಿವಸ ನಡೆದ ಮೇಲೆ ಅವುಗಳ ಪರವಾಗಿ ಇಂಥ ಒಂದು ಸಭೆಯನ್ನು ಕರೆಯುವದು ಹೆಚ್ಚಿಗೆಶ್ರಯೋಜನಕರವೆಂದು ನಾವು ಭಾವಿಸಿ ಈ ಪ್ರಯತ್ನವನ್ನು ನಾವು ಸದ್ಯಕ್ಕೆ ತಡೆದಿದ್ದೇವೆ.

ಆದರೆ ಶ್ರೀಮನ್ನಿರಂಜನಮಹಾದೇವಸ್ವಾಮಿಗಳು ಸರ್ವಭೂಷಣ ಮಠ ಬೆಂಗಳೂರ ಇವರು ಶಿವಾನುಭವ ಸಂಘಗಳಿಗೋಸ್ಕರ ಒಂದು ಬೋಧಕ ವರ್ಗವನ್ನು ಪ್ರಾರಂಭಿಸುವದು ಅವಶ್ಯವೆಂದು ನಮಗೆ ಸೂಚಿಸಿದರು. ಈ ಸೂಚನೆಯು ಅತ್ಯಂತ ಮಹತ್ವದ್ದು ಇರುತ್ತದೆ. ಈಗ ಅನೇಕ ಸಂಘಗಳಲ್ಲಿ ವಚನಗ್ರಂಥಗಳನ್ನು ಓದುವ ಪರಿಪಾಠವು ಇರುತ್ತದೆ. ಇವುಗಳನ್ನು ಓದುವಂಥವರನ್ನು ಹೀಗೆ ಒತ್ತಟ್ಟಿಗೆ ಬರಮಾಡಿಕೊಂಡು ಅವರಿಗೆ ಆವಶ್ಯಕ ಶಿಕ್ಷಣ ಕೊಡುವದರಿಂದ ಅವರ ಶಿವಾನುಭವದ ಕಾರ್ಯಗಳು ಗ್ರಾಮಗಳಲ್ಲಿ ಹೆಚ್ಚಿಗೆ ಉತ್ತಮ ರೀತಿಯಿಂದ ಜರಗುತ್ತ ಹೋಗುವದರಲ್ಲಿ ಏನೂ ಸಂದೇಹವಿರಲಾರದು. ಆದ್ದರಿಂದ ಈಗ ಬೋಧಕ ವರ್ಗಕ್ಕೋಸ್ಕರ ಅವಶ್ಯವಿರುವ ವಿಷಯಗಳ ಸಂಗ್ರಹವನ್ನು ನಾವು ಮಾಡುತ್ತಲಿದ್ದೇವೆ. ಕೆಲವು ಪಠ್ಯಪುಸ್ತಕಗಳೂ ರಚಿಸಲ್ಪಡುವವು. ಮೊದಲು ವಿಜಾಪುರಕ್ಕೆ ಸಮೀಪವಿರುವ ಸಂಘಗಳ ಪರವಾಗಿ ಇಲ್ಲಿಯೇ ಒಂದು ವರ್ಗವು ಬೇಗನೆ ಪ್ರಾರಂಭಿಸಲ್ಪಡುವದು. ಇಲ್ಲಿ ನಮಗೆ ಬಂದ ಅನುಭವದಿಂದ ಬೇರೆ ಕಡೆಗೆ ಅಂದರೆ ಬೆಳಗಾವ ಧಾರವಾಡ, ಕಲಬುರ್ಗಿ, ಬೆಂಗಳೂರ ಇಲ್ಲಿಯೂ ಕ್ರಮವಾಗಿ ಬೋಧಕ ವರ್ಗಗಳು ಏರ್ಪಡಿಸಲ್ಪಡುವವು.

ಈಪ್ರಕಾರ ಶಿವಾನುಭವ ಸಂಘಗಳನ್ನು ಏರ್ಪಾಡು ಮಾಡುವ ಪ್ರಯತ್ನಗಳ ವಿಷಯವಾಗಿ ಸಂಕ್ಷಿಪ್ತ ವರದಿಯು ಇದೆ. ಇದರ ಮೇಲಿಂದ ಇವುಗಳ ಮಹತ್ವವು ಎಷ್ಟಿದೆಂಬದನ್ನು ಶಿವಾನುಭವ ಪತ್ರಿಕೆಯ ವಾಚಕರಿಗೆ ಗೊತ್ತಾಗದೆ ಇರದು. ಯಾವಲ್ಲಿ ಈ ಸಂಘಗಳ ಏರ್ಪಾಡು ಇನ್ನೂ ಇಲ್ಲವೋ ಅಲ್ಲಿಯೂ ಅವುಗಳ ಬಗ್ಗೆ ವೀರಶೈವ ಮಹಾಜನರು ವಿಶೇಷ ಪ್ರಯತ್ನ ಮಾಡಬೇಕೆಂದು ನಮ್ಮ ವಿನಂತಿ ಇದೆ.

ಕನಿಷ್ಟ ಕರ್ನಾಟಕದಲೆಲ್ಲ ೩೦೦-೪೦೦ ಸಂಸ್ಥೆಗಳಾದರೂ ಬೇಗನೆ ಉಂಟಾಗುವದು ಅವಶ್ಯವದೆ. ಇದರಿಂದ ಸಮಾಜದಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ವಾಙ್ಮಯಾತ್ಮಕ ಸುಧಾರಣೆಯಕಾರ್ಯಗಳನ್ನು ಕೈಕೊಳ್ಳಲಿಕ್ಕೆ ಬಹಳ ಅನುಕೂಲವಾಗುವದು. ಶಿವಾನುಭವ ಸಂಘಗಳನ್ನು ಸ್ಥಾಪಿಸಲಪೇಕ್ಷಿಸುವವರು ನಮ್ಮ ಕಡೆಗೆ ಹೆಚ್ಚಿನ ವಿವರಣೆಗಳ ಬಗ್ಗೆ ಬರೆಯಬೇಕು.

ರಾಣೆಬಿನ್ನೂರಲ್ಲಿಯ ರಾ॥ ರಾ॥ ಬಸವಪ್ಪನವರು ಅಂಕಲಕೋಟಿ ಇವರು ಶಿವಾನುಭವ ಪ್ರೇಮಿಗಳಿರುತ್ತಾರೆ. ಅವರು 'ಶಿವಾನುಭವ ದೀಪಿಕೆ' ಎಂಬ ಪುಸ್ತಕವನ್ನು ಸ್ವಂತ ಖರ್ಚಿನಿಂದ ಅಚ್ಚು ಹಾಕಿಸಿದ್ದಾರೆ. ಅವರು ಅದರ ಪ್ರತಿಗಳನ್ನು ಶಿವಾನುಭವ ಸಂಘಗಳಿಗೆಲ್ಲ ಉಚಿತವಾಗಿ ಕೊಡಲು ಒಪ್ಪಿದ್ದಾರೆ. ಆ ಪ್ರಕಾರ ಅವರು ನಮ್ಮ ಕಡೆಗೆ ೬೭ ಪ್ರತಿಗಳನ್ನು ಈಗ ಕಳಿಸಿರುವರು. ಇದಕ್ಕೋಸ್ಕರ ಆಯಾ ಶಿವಾನುಭವ ಸಂಘಗಳ ವತಿಯಿಂದ ನಾವು ಅವರ ಆಭಾರವನ್ನು ಅತ್ಯಂತವಾಗಿ ಎಡಸುತ್ತೇವೆ. ಪುಸ್ತಕಗಳು ಬೇಗನೆ ಆಯಾ ಸಂಘಗಳಿಗೆ ಕಳಿಸಿಕೊಡಲ್ಪಡುವವು.

ಈ ವರೆಗೆ ಸ್ಥಾಪಿತವಾದ ಶಿವಾನುಭವ ಸಂಘಗಳಲ್ಲಿ ಚಟುವಟಿಕೆಯುಳ್ಳ ಅನೇಕ ಸದ್ಗೃಹಸ್ಥರು ಇದ್ದಾರೆ. ಅಲ್ಲದೆ ಅವುಗಳ ಸಭಾಸದರ ಸಂಖ್ಯೆಯು ಈಗ ಸುಮಾರು ೧೫೦೦ ಇರುತ್ತದೆ. ಈ ಯಾವತ್ತರೂ ಸುಸಂಘಟಿತರಾಗಿ ಪ್ರಯತ್ನಗಳನ್ನು ನಿಷ್ಕಲಂಕ ಮನಸ್ಸಿನಿಂದ ಮಾಡಿದಲ್ಲಿ ಸಮಾಜದಲ್ಲಿಯಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿ, ಇಡೀ ಹಿಂದುಸ್ತಾನದಲ್ಲಿ ಒಂದು ಮಹತ್ವದ ಜಳವಳಿಯನ್ನು ಅವರು ಮಾಡಬಹುದಾಗಿದೆ.

ಶಿವಾನುಭವ ಕಾರ್ಯಗಳನ್ನು ಮುಂದುವರಿಸುವಲ್ಲಿ ನಮಗೆ ಅನೇಕ ತೊಂದರೆಗಳುಂಟಾಗಿರುತ್ತವೆ. ಅವುಗಳನ್ನು ನಾವು ಇಲ್ಲಿ ವಿಸ್ತರಿಸುವದು ಅಪ್ರಯೋಜನಕರವು. ಆದರೂ ನಮಗೆ ಬಂದ ಮುಖ್ಯ ಆತಂಕಗಳು ದೊಡ್ಡ ದೊಡ್ಡ ಗ್ರಾಮಗಳಲ್ಲಿರುವ ವೈಯಕ್ತಿಕ ಕಲಹಗಳು, ತಮ್ಮ ವಾಙ್ಮಯದ ಬಗ್ಗೆ ಸುಶಿಕ್ಷಿತರಲ್ಲಿ ಇರುವ ಉದಾಸೀನಭಾವ, ರಾಜಕೀಯ ಕಲಹಗಳಲ್ಲಿ ಸೇರಿಕೊಂಡದ್ದರಿಂದ ಉಂಟಾಗಿರುವ ಈರ್ಷ್ಯಾಸೂಯೆಗಳು, ಇವುಗಳೇ ಮುಖ್ಯವಾಗಿರುತ್ತವೆ. ಇದರಿಂದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಶಿವಾನುಭವ ಸಂಘಗಳು ನಡೆಯುವದು ದುಸ್ತರವೆಂದು ನಾವು ವಿಷಾದಪೂರ್ವಕವಾಗಿ ಇಲ್ಲಿ ನಾವು ಹೇಳದೆ ಇರಲಾರೆವು.

ಇನ್ನುಮುಂದೆ ನಾವು ಸಮಾಜ ಸಂಘಟನೆಗೋಸ್ಕರ ಅವಶ್ಯವಿರುವ ಮಹತ್ವದ ವಿಷಯಗಳ ಬಗ್ಗೆ ಶಿವಾನುಭವ ಪತ್ರಿಕೆಯಲ್ಲಿ ಹೆಚ್ಚಿಗಿ ಪ್ರಸ್ತಾಪಿಸುತ್ತ ಹೋಗುವೆವು.

ಕೈ. ವಾ. ಹರ್ವಿ ವಿರುಪಾಕ್ಷಗೌಡರು.

ರಾಯಚೂರಿನ ಶ್ರೀಯುತ ಹರ್ವಿ ವಿರುಪಾಕ್ಷಗೌಡ ಇವರು ಈ ತಿಂಗಳು ಲಿಂಗೈಕ್ಯರಾದರೆಂದು ತಿಳಿಸಲು ನಮಗೆ ಬಹಳ ದುಃಖವಾಗುತ್ತದೆ. ಅವರು ಗ್ರಂಥಕರ್ತರೂ, ವೀರಶೈವ ಧರ್ಮಾಭಿಮಾನಿಗಳೂ, ಆಗಿದ್ದರು. ಅವರು ಎಲ್ಲ ಸಾರ್ವಜನಿಕ ಕಾರ್ಯಗಳಲ್ಲಿ ಬಹಳ ಉತ್ಸಾಹದಿಂದ ಪ್ರಯತ್ನಿಸುವವರಾಗಿದ್ದರು. ರಾಯಚೂರ ವೀರಶೈವ ಮಹಾಸಭೆಯ ಕಾಲದಲ್ಲಿ ಅವರು ಬಹಳ ಪರಿಶ್ರಮ ವಹಿಸಿ ಕಾರ್ಯ ಮಾಡಿದರು. ಇವರು ಶಿವೈಕ್ಯರಾದದ್ದರಿಂದ ಸಮಾಜಕ್ಕೆ ಬಹಳ ಹಾನಿಯಾಗಿರುತ್ತದೆ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಕೈ. ವಾ. ಮುರಗಯ್ಯಾ ಬಾಗೋಜಿ ರಬಕವಿ.

ಇದೇ ತಿಂಗಳು ೨೧ ಮೂ॥ ಮುರಗಯ್ಯ ಬಾಗೋಜಿ ಮುಕ್ಕಾಮು ರಬಕವಿ ಇವರು ಲಿಂಗೈಕ್ಯರಾದರೆಂದು ತಿಳಿಸಲು ನಮಗೆ ಬಹಳ ದುಃಖವಾಗುತ್ತದೆ. ಇವರು ಈ ವರೆಗೆ ಅನೇಕ ಮಹತ್ವದ ಸಾರ್ವಜನಿಕ ಕಾರ್ಯಗಳನ್ನು ಮಾಡಿದ್ದಾರೆ. ಇವರು ಆರಂಭದಲ್ಲಿ ಬಡತನದ ಮೂಲಕ ಬಹಳ ಕಷ್ಟಪಟ್ಟು ಶಿಕ್ಷಣವನ್ನು ಹೊಂದಿದರು. ಅವರು ವ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದ ಬಳಿಕ ತಮ್ಮ ಗ್ರಾಮದಲ್ಲಿಯೇ ಇಂಗ್ಲಿಷ ಶಾಲೆಯ ಶಿಕ್ಷಕರಾದರು. ಅವರು ಈ ನೌಕರಿಯನ್ನು ಬಿಟ್ಟು ಕೊಟ್ಟು ಬಣ್ಣದ ವ್ಯವಹಾರದಲ್ಲಿ ಸೇರಿದರು. ಮುಂದೆ ಕೆಲವು ವರ್ಷಗ

ಳಲ್ಲಿಯೇ ಅವರು ಅವರಲ್ಲಿ ವಿಶೇಷ ಧನ ಸಂಪಾದನೆ ಮಾಡಿದರು. ಹೀಗೆ ತಮ್ಮ ಕುಟುಂಬ ನಿರ್ವಾಹಕ್ಕೆ ಸಾಕಷ್ಟು ಉತ್ಪತ್ತಿಯಾದ ಕ್ಷಣದಲ್ಲಿ ಆ ವ್ಯವಹಾರವನ್ನು ಬಿಟ್ಟುಕೊಟ್ಟು ಧಾರ್ಮಿಕ ಮತ್ತು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದರು. ಅವರು ಯಾವಾಗಲೂ ಧಾರ್ಮಿಕ ಗ್ರಂಥಗಳನ್ನು ವ್ಯಾಸಂಗ ಮಾಡುವದರಲ್ಲಿ ಕಾಲ ಕಳೆಯುತ್ತಿದ್ದರು. ಅವರು ಈಜೆಗೆ ತಮ್ಮ ಗ್ರಾಮದ ಮುನಸಿಪಾಲಿಟಿಯ ಅಧ್ಯಕ್ಷರೂ ಆಗಿದ್ದರು. ಅವರ ಕರ್ತವ್ಯ ನಿಷ್ಠತೆಯ ಮೂಲಕ ಸರಕಾರದಲ್ಲಿಯೂ, ಪಟ್ಟಣದಲ್ಲಿಯೂ, ಬಹಳ ವರ್ಚಸ್ಸುಳ್ಳವರಾಗಿದ್ದರು. ಅವರು ೧೦ ಸಾವಿರ ರೂಪಾಯಿಗಳನ್ನು ಧಾರವಾಡ ವಿದ್ಯಾಭಿವೃದ್ಧಿ ಫಂಡಿಗೆ ದಾನವನ್ನು ಕೊಟ್ಟಿದ್ದಾರೆ. ಇವರಿಂದ ಇನ್ನೂ ಅನೇಕ ಮಹತ್ವದ ಸಾರ್ವಜನಿಕ ಕಾರ್ಯಗಳು ಜರಗುವ ಸಂಭವವಿತ್ತು. ಆದರೆ ಅಷ್ಟರಲ್ಲಿಯೇ ಅವರು ಲಿಂಗೈಕ್ಯರಾದದ್ದಕ್ಕೆ ನಾವು ಬಹಳ ವಿಷಾದ ಪಡುತ್ತೇವೆ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹರಿಹರನ ರಗಳೆಗಳು.

ಭಾಗ ೮.

ಬಾಹೂರ ಬೊಮ್ಮಯ್ಯನ ರಗಳೆ.

ಕಂದ॥ ಸಾಹಸ ನಿಧಿಯೆನಿಪ ವೃಷಭ।
ವಾಹನ ಫಣಿರಾಜಕಂಕಣಂ ರಾಜಧರಂ।
ಬಾಹೂರ ಬೊಮ್ಮತಂದೆಯ।
ನಾಹಾ ಮೆರೆದಂ ಪುರಾರಿ ಹಂಪೆಯ ರಾಯಂ॥

ರಗಳೆ.

ಪ್ರಥಮಸ್ಥಲ.

ಶ್ರೀ ಮೇರುವಿಂಗೆ ದಕ್ಷಿಣ ದಿಶಾಭಾಗದೊಳ್
ಭೂಮಿಗೆ ವಿಚಿತ್ರವೆಂದೆನಿಪುದತಿರಾಗದೊಳ್
ಹೆಸರ ಕಲ್ಯಾಣಪುರವಾ ಪುರಪ್ರಾಂತದೊಳ್
ಎಸೆವುದಂತೊಂದು ಯೋಜನದ ಪ್ರಮಾಣದೊಳ್
ಶಿವನ ತೋಳ್ತೊಡೆಯ ಪೆಸರಿಟ್ಟರಂದೊಪ್ಪದಿಂ
ಭುವನದೊಳ್ಬಾಹೂರೆನಿಪ್ಪೊಂದು ನಾಮದಿಂ

ಒಪ್ಪುವಾ ಪುರದೊಳೋರ್ವಂ ಶರಣನಿರುತಿರ್ಪ
ನಪ್ರತಿಮನತುಳಬಲನಭವನಾಜ್ಞೆಯೊಳಿರ್ಪ
ಆತನ ಪೆಸರ್ಬೊಮ್ಮತಂದೆ ಎಂಬುದು ಜಗಕೆ
ನೂತನಂ ತನ್ನ ಚಾರಿತ್ರವೀ ಕಲಿಯುಗಕೆ
ನೇಮಸ್ತನುತ್ತಮ ಸ್ನೇಹಿ ಪರಮಧ್ಯಾನಿ
ಕಾಮಹರನಚಲಭಕ್ತಿಯ ಭಾವದಭಿಮಾನಿ
ಆರ್ತಪರನತಿಕರುಣಿ ನಿರ್ಮಳಂ ನಿಶ್ಚಳಂ
ಸ್ವಾರ್ತವೆನಿಸುವ ಶಿವನ ಭಕ್ತಿಭರದುಜ್ವಳಂ
ಮಾಹೇಶ್ವರರ್ಬಂದಡಿದಿರಾಗಿ ಮೈಯ್ಮಿಕ್ಕಿ

ಆಹಾ ಎನುತೆದ್ದು ಗಣಪದಕೆ ಮೆಯ್ಯಿಕ್ಕಿ
ನಿಂದು ಕೈಮುಗಿದೆನ್ನ ಪುಣ್ಯವೈಯ್ತುಂದುದೇ
ಇಂದುಧರನತುಳ ಸುಖವೊಲಿದು ಕವಿತಂದುದೇ
ಎನ್ನ ಭಾಗ್ಯದ ಬೆಳಸು ವಿಪುಳ ಫಳವಾದುದೇ
ಎನ್ನ ಹೆಂಪಿನ ಹೆಚ್ಚ್ಚಸುಧೆಯುಮಿದಿರಾದುದೇ
ಶಿವನ ಸಂತತಿ ಕರುಣದಿಂದ ನಡೆತಂದುದೇ
ಶಿವನ ಬಳಗಂ ಭಕ್ತಿಯಂ ಕುಡಲ್ಬಂದುದೇ
ಎಂದು ಬಿಜಯಂಗೈಸಿ ತಂದು ಮಿಗೆ ಸಡಗರಿಸಿ
ಸಂದಣಿಪ ಹರುಷದಿಂದುಚ್ಚಾಸನದೊಳಿರಿಸಿ
ಪುಳಕತತಿ ಪೊಣ್ಮುತಿರೆ ಚರಣಂಗಳಂ ತೊಳೆದು
ನಲಿದು ಪಾದೋದಕಂಗಳನೊಲುಮೆಯಿಂ ತಳೆದು
ಭಾಳದೊಳಗೊಲಿಮೊತ್ತಿ ಕಂಗಳೊಳಗೊಲಿದೊತ್ತಿ
ಮೇಲೆನಿಪ ಉತ್ತಮಾಂಗದೊಳು ಉರದೊಳಗೊತ್ತಿ
ಆನಂದದಿಂದವಾರೋಗಿಸಲ್ಕಿಕ್ಕುತಂ
ನಾನಾ ಸುಖಂಗಳಂ ತರದಿಂದೆ ಸಾರ್ಚುತಂ
ಹೊನ್ನ ರನ್ನದ ತೊಡವು ನವ್ಯ ವಸ್ತ್ರವನಿತ್ತು
ಮನ್ನಿಸುತ್ತವರಂಘ್ರಿಗಳನಲ್ತಿಯಿಂ ಪೊತ್ತು
ಕಳಿಪುವಂ ಶರಣತತಿ ಪರಸುತಿರೆ ರಾಗದಿಂ
ಇಳಿಪುವಂ ಸಂಸಾರಭಾರಮಂ ಬೇಗದಿಂ

ಇಂತಪ್ಪ ಬಾಹೂರ ಬೊಮ್ಮಿತಂದೆಗೆ ಕರಂ
ಕಂತುಮದಮರ್ದನನ ನೇಮವೊಂದತಿಭರಂ
ಮಿಗೆ ಪೋಪನಲ್ಲಿಯುಂ ಸೋಮವಾರದೊಳತ್ತ
ಬಗೆ ಮಿಗಲ್ಕುಲ್ಯಾಣಪುರದ ಪುರಹರನತ್ತ
ಒಲವಿಂ ತ್ರಿಪುರಾಂತಕ ಪ್ರಭುವನೀಕ್ಷಿಸುತೆ
ಕಲಿಮಲಿನ ಕುಲವನಂದಂದಿಂಗೆ ಶೋಷಿಸುತೆ
ಇದು ನಿಯಮವಾಗಿರ್ಪುದಾ ಪರಮ ಭಕ್ತಂಗೆ
ಸದಮಳ ಸದಾಶಿವ ಶಿವಾರ್ಚನಾಸಕ್ತಂಗೆ

ಇರಲೊಂದು ಸೋಮವಾರದೊಳಂದು ಪೊರಮಟ್ಟು
ಪುರಹರನ ಧ್ಯಾನನಮಂ ಮನದೊಳಗೆ ಮುಂದಿಟ್ಟು

ಬಾಹೂರನೊಪ್ಪದಿಂ ಕಳಿದು ಮಿಗೆ ನಡೆಗೊಂಡು
ಸಾಹಸಾಭರಣನತಿ ನಿಷ್ಠೆಯಂ ಕೆಳಿಗೊಂಡು
ಮೇಲೆ ಝುಲ್ಲರಿ ನೆಗೆಯಲುನ್ನತಾಸನವೇರಿ
ಕಾಲಾಳ್ತುರಂಗ ಬಲವೊಡನೆ ಬರುತಿರೆ ಮೀರಿ
ಬರುತಿರ್ದನಪ್ರತಿಮಶಿವಭಕ್ತಿಭೂಷಣಂ
ಬರುತಿರ್ದನಮ್ಮಮ್ಮ ಸಂಸಾರಶೋಷಣಂ
ಬಂದು ಕಲ್ಯಾಣಪುರಮಂ ರಾಗದಿಂ ಪೊಕ್ಕು
ಸಂದ ಪುರವೀಧಿಯಂ ನೋಡುತೆ ಮನಂ ಮಿಕ್ಕು

ಬರುತಿರಲ್ಮುಂದೊಂದು ಬಿಳಿಯ ಜೋಳದ ರಾಶಿ
ನರರ ಜೀವನವ ರಕ್ಷಿಸುತಿಪ್ಪ ಹೊಸ ರಾಶಿ
ಇರಲದಂ ಮುಂದುಗೊಂಡೊರ್ವನಾ ವ್ಯವಹಾರಿ
ಕರೆವುತಂ ಮಾರುಗೊಂಬವರನತ್ಯುಪಕಾರಿ
ಎಲೆಲೆ ಶಂಕರಗಂಡನಂ ಕೊಳ್ಳರೇ ಎನುತೆ
ಸಲೆ ಬರ್ದುಕಿರೇಯವೃತಮಯ ಧಾನ್ಯವೆಂದೆನುತೆ
ಇರ್ಪಲ್ಲಿ ಬೊಮ್ಮಿತಂದೆಗಳೊಲಿದು ನೋಡುತಂ
ಬರ್ಪಲ್ಲಿಯೋರ್ವ ಸವಣಂ ಕಟಕಿಯಾಡುತಂ
ಜೋಳದ ಪೆಸರು ಶಂಕರನ ನಾಮವೆಂತಾಯ್ತು
ಆಳಿಗೊಂಬರನರಿಯರಕಟ ಶಂಕರನಾಯ್ತು
ಇದಕ್ಕೆ ಪ್ರತ್ಯಕ್ಷಮಂ ತೋರಬಲ್ಲವರುಂಟೆ
ಅದಿರದೀ ಜೋಳಮುಮನೋ ಎನಿಸುವವರುಂಟೆ
ಎಂಬ ನುಡಿಗೇಳ್ದು ಭೋಂಕನೆ ದಂಡಿಗೆಯನಿಳಿದು
ಅಂಬಕತ್ರಯನ ಸುತನತಿ ಕೋಪಮಂ ತಳೆದು
ಎಂತೊ ಅರುಹತ ಕುನ್ನಿ ಬೊಗಳುತಿರ್ದಪೆ ಎನುತೆ
ಮುಂತಿರ್ದ ಭಕ್ತಾಳಿಗವಧರಿಪುವೆಂದೆನುತೆ
ಪುರಜನಂಗಳು ನೆರೆದು ನೋಡುತ್ತಮಿರಲಲ್ಲಿ
ಪರ ಸಮಯಿಗಳು ಸರಿಯಲನು ಮಾಡುತಿರಲಲ್ಲಿ
ಮರೆದು ನುಡಿದಾರುಹತನೆದೆ ಬಿಕ್ಕಿ ಬಿರಿವುತಿರೆ
ಹೆರೆ ಸೂಡಿದನ ಭಕ್ತರೆಲ್ಲ ವೈವೆಚ್ಚುತ್ತಿರೆ
ರಾಸಿಯುಂ ಬಲವಂದು ಧಾಷೆಗುಡುತಂ ನಿಂದು

ಸೂಸದಚ್ಚರುವಿನೊಳಗಿಂಗೆ ಶಿವನಂ ತಂದು
ಪರಮ ಗುರುವೇ ಶಂಕರಾ ಶಂಕರಾಯೆಂದು
ಕರೆಯೆ ಜೋಳದ ರಾಸಿಯೊಳಗಣೆಂದಂತೊಂದು
ಪ್ರಣವಮಯವೆಂಬುದಂ ಧರೆಗೆ ಕೇಳಿಸುವಂತೆ
ತ್ರಿಣಯನುಂ ಭಕ್ತನೆಂದುದನುದ್ಧರಿಸುವಂತೆ
ಹರುಷದಿಂದೋ ಯೆಂಬ ವನಿ ಮೂವಡಿಸಿ ಮೂರೆ
ನೆರೆದ ನೆರವಿಗೆ ಶರಣನಲ್ಲಿ ನಂಬುಗೆ ಯೇರೆ
ಇರಲವ್ಮದೋಡಿದಂ ಸವಣನೆಂಬುವನಂದು
ಶರಣರಿಲ್ಲಕ್ಕುರಿಂ ಕೊಂಡಾಡುತಂ ಬಂದು
ಕಲ್ಯಾಣಪುರದೊಳಗೆ ಭರದಿಂದೆ ನೆರೆಯಿಸುತೆ
ಕಲ್ಯಾಣಪುರುಷನಂ ಪರಸುತಂ ರಾಗಿಸುತೆ

ಇರ್ದ ಗಣತತಿವೆರಸಿ ಹರುಷದಿಂ ನಡೆತಂದು
ಸಾರ್ದು ಶಿವನಿಳಯಮಂ ಪ್ರೇಮದಿಂ ಪುಗುತಂದು
ತ್ರಿಪುರಾಂತಕ ಪ್ರಭುವನಾನಂದದಿಂ ಕಂಡು
ಕಪಟರಹಿತಂ ನಿತ್ಯನೇಮಕ್ಕೆ ನೆಲೆಗೊಂಡು
ಶಿವಭಕ್ತಿ ತನ್ನಂ ಬಲಂಗೊಂಡು ಬಲವಂದು
ಶಿವನಿಷ್ಠೆ ಕೈಯಿಕ್ಕಿ ಮೆಯ್ಯಕ್ಕುತಂ ನಿಂದು
ಅಗಮುಸ್ಥಾನದೊಳು ಭಸಿತಮಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಆನಂದಜಲದೊಡನೆ ದರುಶನಂ ಮಾಡುತಂ
ನಾನಾ ಪುಳಕದೊಡನೆ ಪರುಶನಂ ಮಾಡುತಂ
ಸತ್ಕೃತಾರ್ಥತೆಯೊಡನೆ ಪಾದೋದಕಂಗೊಂಡು
ಅಕ್ಕರಿಂದಜಲ ಪ್ರಸಾದಮಂ ಕೈಕೊಂಡು
ತಾಳಮಂ ಕೊಂಡು ನಾದಪ್ರಿಯನ ನೆರೆ ಪಾಡಿ
ಆಳಾಪದಿಂ ಪುರಾತನರ ಗೀತಂ ಪಾಡಿ
ನಿಂದಿರ್ದು ಕೈಮುಗಿದು ನೋಡಿ ಬಿನ್ನೈಸುತಂ
ಇಂದುಧರನಾಜ್ಞೆಯಿಂ ನಿಂದು ಬಿನ್ನೈಸುತಂ
ದೇವ ನೀ ನೆನೆಯಿಸಲ್ನೆನೆವೆನೆಲೆ ಶಂಕರಾ
ದೇವ ನೀ ನುಡಿಯಿಸಲ್ನುಡಿವೆನೆಲೆ ಶಶಿಧರಾ
ದೇವ ನೀ ನಡೆಯಿಸಲ್ನಡೆವುತರ್ಪೆಂ ಶಿವನೆ

ದೇವ ನೀನೆಂತಿರಿಸಿದಂತಿರ್ಪೆನೆಲೆ ಭವನೆ
ದೇವ ನೀನಾಡಿಸುತಿರ್ಪ ಜಂತ್ರದ ರೂಪು
ದೇವ ಎನಗಾವಗಂ ನಿಮ್ಮ ಕರುಣದ ರೂಪು
ಎಂದು ಬಿನ್ನೈಸುತಂ ಭರ್ಗನಂ ಬೀಳ್ಕೊಂಡು
ಇಂದುಧರನಲ್ಲಿ ಕಾರುಣ್ಯಮುಂ ಕೆಳಿಗೊಂಡು
ತಿರುಗಿದಂ ಬಾಹೂರ ಕಡೆಗೆ ಕಟ್ಟಭಿಮಾನಿ
ಹರನ ಪುರಹರನ ಶಶಿಧರನ ಪರಮಧ್ಯಾನಿ

ಶರಣತತಿಯೊಡನೊಡನೆ ಗುಡಿಗಟ್ಟಿ ಬರುತವಿತೆ
ಪುರಜನಂ ಪರಿಜನಂ ನೋಡಿ ಬೆರಗಾಗುತಿರೆ
ಪರದೈವಸಂತಾನತಿಮಿರಭಾಸ್ಕರನೆಂಬ
ಪರಸಮಯವಿಪಿನಕುಲದಾವಪಾವಕನೆಂಬ
ಬಿರಿದೆತ್ತಿ ಕಹಳೆಗಳ್ದೆಸೆದೆಸೆಗೆ ಕರೆವುತಿರೆ
ಉರವಣಿಸಿ ನಡೆತಂದನಪ್ರತಿಮನೊಪ್ಪುತಿರೆ
ಬಂದು ಬಾಹೂರನತಿ ಸಂಭ್ರಮದೊಳಂ ಪೊಕ್ಕು
ಸಂದಣಿಪ ಗಣಪದವ ರಜದಿಂ ಮನಂ ಮಿಕ್ಕು
ಶರಣರಂ ನೋಡುತಂ ನಲಿದು ಕೊಂಡಾಡುತಂ
ಹರುಷದಿಂ ಮೂಡುತಂ ಶಿವನೊಳೋಲಾಡುತಂ
ಪರಮಸುಖವೇರುತಂ ಪುಳಕಮಂ ಹೇರುತಂ
ಕರುಣಮುಂ ತೋರುತಂ ತೃಪ್ತಿಯಂ ಬೀರುತಂ
ಶರಣತತಿ ಹಾರೈಸೆ ಶಿವಭಕ್ತಿ ತೇರೈಸೆ
ಹರಭಕ್ತಿ ಪೂರೈಸೆ ಪರಮಸುಖ ಕೋರೈಸೆ
ಎಸೆದಿರ್ದನಮ್ಮಮ್ಮ ಬಾಹೂರ ಬೊಮ್ಮಯ್ಯ
ಅಸಮನಯನನ ಸುತಂ ಬಾಹೂರ ಬೊಮ್ಮಯ್ಯ
ಅದರೆ ಕಲಿ ಬಾಹೂರ ಬೊಮ್ಮಯ್ಯನೆಮ್ಮಯ್ಯ
ಶರಣಜನಸಂತೋಷಿ ಬಾಹೂರ ಬೊಮ್ಮಯ್ಯ
ಇಂತು ಸುಖದಿಂದೆ ಬಾಹೂರೊಳೊಪ್ಪುತ್ತಮಿರೆ
ಸಂತತಂ ಶರಣತತಿ ಪೊಗಳುತ್ತಮಿರುತಮಿರೆ

ಪ್ರಥಮಸ್ಥಲ ಸಂಪೂರ್ಣ.

ದ್ವಿತೀಯಸ್ಥಲ.

—*—

ವೃತ್ತ॥

ಜೋಳಂ ಶಂಕರನೆಂದೊಡೋ ಎನಿಸಿದೈ ಬಾಹೂರ ಬೊಮ್ಮಯ್ಯ ಭೂ
ಪಾಳೋನ್ಮದ್ವಿಭಸಿಂಹನೆಂದೆನಿಸಿದೈ ಬಾಹೂರ ಬೊಮ್ಮಯ್ಯ ನೀಂ।
ತ್ರೈಲೋಕ್ಯಕ್ಕಧಿಕತ್ವವೆಂದೆನಿಸಿದೈ ಬಾಹೂರ ಬೊಮ್ಮಯ್ಯ ಕೇಳ್।
ಭಾಳಾಕ್ಷಂಗೆ ಭುಜಾಸ್ಯನೆಂದೆನಿಸಿದೈ ಬಾಹೂರ ಬೊಮ್ಮಯ್ಯನೇ॥

ಗದ್ಯಃ— ಎಂದು ಕೊಂಡಾಡುತಿರ್ಪ ಮಾಹೇಶ್ವರರ ನಡುವೆ ಬಾಹೂರ ಬೊಮ್ಮಯ್ಯಂ ಸಾಹಸಾಭರಣಂ ಗಂಗಾಧರನ ಗಂಭೀರದಂತೆ ರಾಜಕೇಸರಿಯ ತೇಜದಂತೆ ಕಪರ್ದಿಯ ಕೀರ್ತಿಯಂತೆ ಕಾಮಹರನ ಕಾಯ್ವಿನಂತೆ ಪುರಹರನ ಪ್ರತಾಪದಂತೆ ಕಾಲಹರನ ಲೀಲೆಯಂತೆ ಪಂಚಮುಖನ ಸಂತಾನದಂತೆ ಕುಳಿರ್ದು ಬೇರ್ವರಿವ ಶಿವ ಭಕ್ತಿಗೆಡೆಗೊಟ್ಟು ಅಂಕುರಿಪ ಶಿವಜ್ಞಾನಕ್ಕೆ ಮನಂಗೊಟ್ಟು ಪಲ್ಲವಿಪ ಶಿವಸ್ನೇಹಕ್ಕಿಂಬಾಗಿ ಬಳ್ಳಿವರಿವ ನಿಷ್ಠೆಗಡರ್ಪಾಗಿ ಪುಣ್ಯದಂತೆ ಜಂಗಮ ಪ್ರಕರದ ಸಂಗಡ ಸುಖಂ ಪಿಂಗದ ಲಿಂಗ ಸ್ನೇಹಿ ಮಂಗಳಾತ್ಮಕಂ ಸತ್ಯ ಶರಣರ ಸೂಳ್ನುಡಿ ಕವಿಯ ಸವಿ ರೂಪು ಕಂಗಳ ಕೌತುಕಂ ಸೋಂಕು ತನುಪುಳುಕಂಗಳ ಪ್ರಸಾದ ಪರಿಮಳಂ ಘ್ರಾಣೋತ್ಸಾಹಿ ಶಿವಸ್ತೋತ್ರ ನಾಲಗೆಯ ರಾಜ್ಯಂ ಘನಮೂರ್ತಿ ಮನೋಹರಮಾಗಿ ಸಾತ್ವಿಕ ಭಕ್ತಿ ರಸತರಂಗಿಣಿ ಸಮಾನುರಾಗಚಿತ್ತಪ್ರಭೂತಪ್ರಮೋದಪ್ರತಾಪಗಾತ್ರಚಿತ್ತ ನಾಗಿ ಕೆಲವುಂ ದಿನ ಒಲವಿನಿಂದಿರ್ಪಲ್ಲಿ ಪನ್ನಗಧರಂ ನಿನ್ನಂ ಮೆರೆದಪ ಬನ್ನಿಮೆಂದತ್ಯಾದರದಿಂ ಕರೆವಂತೆ ಸೋಮವಾರಂ ಬರೆ.

ಸುಪ್ರಭಾತ ಸಮಯದೊಳೆದ್ದು ಭಸ್ಮೋದ್ಧೂಳಿತಾವಯವನುಂ ರುದ್ರಾಕ್ಷಿ ಮಾಲಾಲಿಂಗಿತ ಸರ್ವಾಂಗನುಂ ಧವಳಾಂಬರ ಪಂವಸನನುಂ ನಿರ್ಮಳೋತ್ತರೀಯವಿಶೇಷನುಂ ನವ್ಯಾಭರಣಭೂಷಣನುಂ ಪ್ರಸ್ತ ಪ್ರಬದ್ಧತಾಳಯುಗಳನವಯವಭ್ಯಾಸಾಲಿಂಗಿತಸರ್ವಾಂಗನುಂ ಉಭಯ ಪಕ್ಷವಿಳಸಿತಪದಾತಿಬಲನುಂ ಪರಿವೃತಶಿವಭಕ್ತಪ್ರಕರನುಂ ತ್ರಿಪುರಾಂತಕ ಶ್ರೀಪಾದಪದ್ಮಾವಲೋಕನಾಸಕ್ತಚಿತ್ತನಾಗಿ ಗಜಾಸುರನ ವಿಜಯಕ್ಕೆ

ಪೊರಮಡುವ ರುದ್ರನಂತೆ ಬಾಹೂರಂ ಪೊರಮಟ್ಟ ಕಿರಿದಂತರಮುಂ ನಡೆತಂದು ಕಲ್ಯಾಣಮುಂ ಪೊಕ್ಕು ರಾಜವೀಥಿಯೋಳ್ನಡೆತರ್ಪಾಗಳ್ಮುಂದೆ.

ಪೆರ್ಮಾಡಿ ರಾಯನ ಪಟ್ಟದಾನೆ ಪಸ್ತನುದಾವಸ್ಥೆಯಿಂ ಮುಂದುಗಾಣದೆ ಕರ್ಣತಟದಿಂದೊರತೊಗುವ ಮದಗಂಧಕ್ಕೆಳಸಿದಳಿಕುಳಂ ಕರಿಮುರಿವೋಗೆ ಅಗ್ರಸಲ್ಲವದಿಂ ಪೊಯ್ದುಕೊಳುತ್ತಂ ಮದಜಲವನುಗುಳ್ವ ಕಡು ಸುಯ್ಲುಬಳೆವಿಡಿದು ಪಸರಿಸಿ ಪೊರಮಟ್ಟ ಸೀಕರನಿಕರಂ ವಡಬಾನಳನ ವಿಸ್ಫುಲಿಂಗದಂತೆ ಸೋಂಕಿದುದೆಲ್ಲವುಂ ಭುಗಿಲನುರುಪೆ ಪುಷ್ಕರಾಗ್ರದಿಂ ಘೂತ್ಕರಿಸುತ್ತಂ ಕೈಕೊಂಡ ರೂಪಂ ಕೋಡೊಳಿಟ್ಟೀ ತೆರದೊಳರೆವೆನೆಂಬುದಂ ತೋರ್ಪಂತೆ ಕೊಂಬಿನ ಮೊನೆಯೊಳುಂ ಬರಿಕೆಯ್ಯನೇರಿ ತೂಗಾಡುತಂ ತನ್ನ ನೆಳಲಂ ಪ್ರತಿದಂತಿಯೆಂದು ಕಟ್ಟುತ್ತೆರಗಿ ನಾಡೆ ನೀಡಿ ನಟ್ಟ ದಾಡೆಯಿಂ ಬೆಟ್ಟದ ತೋರ ಹೆಂಟೆಯುಂ ಎತ್ತಿ ನಿಟ್ಟಿಸಿ ನೋಡುತಂ ಕಾಲೊಳ್ಬಂಧಿಸಿದ ಮಾಲೆಯ ನಿಗಳಂಗಳುಂ ಘುಲಘುಲಿಸೆ ಜಾಣಂ ಸೆಳೆಡುಣ್ಮೈಪೊಣ್ಮೈ ಘಳಿಲನೆ ಕಂಪಿಸಿ ನಿಟ್ಟೋಡಿಯಾಡಿಗೊಂಡು ಪರಿದು ಪಿರಿಯ ಕರುಮಾಡಮುಂ ಮದದ ಬೆಂಕೆಯಿಂ ಹೊತ್ತಿ ಹೊಗೆಯೇರಿ ಮನ್ನಣೆಯ ಮುಂದ್ಯವಾಳಕ್ಕೆ ಮುಂದಡಿಯನಿಟ್ಟು ದನಿದೋರುವ ಜೋದರಂ ಬರಲಿತ್ತು ಭೋಂಕನೆ ಪಿಡಿದು ಹಸ್ತದೊಳಿತ್ತಿ ಪ್ರತಿಮಾನದೊಳ್ಪೊಪ್ಪುದಿಪ್ಪೆನಲ್ಪೊಯ್ದಿಟ್ಟಣಿಸಿ ತಲೆಯೊಳೊಟ್ಟಿಕೊಳುತ್ತಂ ಸಿಡಿದೊರಲುತೋಡಿದ ವನನರೆಯಟ್ಟಿ ಮೆಟ್ಟಿ ಸೀಳುತಂ ಅಳವಿಗೆ ಬಂದಾರೆಕಾರರನರಿದು ಸಣ್ಣಿಸುತ್ತಂ ಮಂಡಿಸಿ ತೊನೆವುತ್ತಂ ಅಡ್ಡ ನಿಲುತ್ತಂ ವಿಸಟಂಬರಿವುತಂ ತೋರಿ ತಪ್ಪುತವ್ವಳಿಸಿ ನಿಲುತಂ ಮಸಗಿ ಮೊರೆವುತಂ ಸುತ್ತಿ ಕೆಕ್ಕಳಿಸುತಂ ಹೊತ್ತು ಹೊಗೆವುತಂ ಮುರಿವುತಂ ಮಥನದ ಕಾಳಕೂಟಂ ಕುಂಜರಪತಿಯ ರೂಪುಗೊಂಡಂತುರವಣಿಸಿ ಬರ್ಪ ಸಿಂದೂರದ ಮುಂದೆ ಮುಂದಿಗೊಡುವದೇಡೆಕಾರರುಂ ಚೂಣಿಯ ಪಡಿಯರರ್ತೊಲಗು ತೊಲಗು ಸಾರು ಸಾರೆಂದಿಟ್ಟಣಿಸಿ ಮುಟ್ಟಿ ಬಂದ ಕಳಕಳಮಂ ಕಟ್ಟಿದಿರೋಳ್ಕೇಳ್ದು.

ಅಮ್ಮಮ್ಮ ಮಾರಾರಿಯ ಕೂರಸಿ ದಿಟ್ಟಿಮೂರನ ಕಟ್ಟಿದಲಗು ಪಶುಪತಿಯ ಪಾಶುಪತಾಸ್ತ್ರವೆನಿಸಿ ಬಾಹೂರ ಬೊಮ್ಮಯ್ಯಂ ಸಿಂಹ ವಿಕ್ರಮಂ ಗಜಾಸುರಾಂತಕನ ಕುವರಂ ಕೆಲಬಲದ ಮಾಹೇಶ್ವರರನಂಜದಿ

ರಂಜದಿರೆಂದೊಂದೆರಡಡಿಯನಿದಿರಾಗಿ ನಡೆದು ಜಡಿದು ನುಡಿದು ಸ
ಫಡಸಾವವನ ಮನೆಯಾನೆಗೆ ಶಾಶ್ವತನ ಮನೆಯಾನೆ ತೊಲಗುವದಲ್ಲಿ
ತೆಗೆ ತೆಗೆ ನಿಲ್ಲು ನಿಲ್ಲಿತ್ತ ಬಾರದಿರೆನ್ನಾಣೆಯೆಂದೆತ್ತಿ ಹಸ್ತನಿವಾರಣೆಯಿಂದ
ಹೂಂಕರಿಸಿ ನಡೆತರ್ಪ ಮದದಾನೆ ಭೋಂಕನೆ ನಿಂದು ತಾಳವಟ್ಟವು
ತೂಗದೊಡಲನೊಲೆಯದಗ್ರಪಲ್ಲವಮನಲುಗದೆ ಸುಂಡಿಲಂ ಭಂಡಾರಿ
ದಂತೆ ಕಂಡಿರಿಸಿದಂತೆ ನಟ್ಟು ನಿಂದಾಕೆಕಾರರಿರಿದೊಡಂ ಮಾವುತರಾ
ರ್ದೊಡಂ ನೆರದ ನೆರವಿ ಬೊಬ್ಬಿಟ್ಟೊಡಂ ಮಣ್ಣಾನೆಯಂತೆ ಮಿಡುಕ
ದಿರೆ ಕಂಡು ಕಂಡು ಭಯಂಗೊಂಡು ನೋಡುತಿರ್ಪ ಪಸಾಯಿತರು ಪರಿದು
ಬಂದರಸಂಗೆ ಮೆಯ್ಯಿಕ್ಕಿನಿಂದು.

ಎಲೆ ದೇವಾ ನಮ್ಮ ಪಟ್ಟದಾನೆ ಮದಂಗೊಂಡು ಸೂರ್ಯವೀಧಿ
ಯೊಳ್ಪಟ್ಟುತ್ತಂ ತುಳಿವುತ್ತಂ ಬರ್ಪಲ್ಲಿ ಬಾಹೂರ ಬೊಮ್ಮಯ್ಯನೆಂದೆಂಬ
ಪರಭಕ್ತಂ ತೊಲಗವಂಜದೈಯ್ತಂದು ಸಾವವನ ಮನೆಯಾನೆಗೆ ಶಾಶ್ವ
ತನ ಮನೆಯಾನೆ ಪೆಸರಿಸುವದಲ್ಲೆಂದಾಜ್ಞಾಪಿಸೆ ಮತ್ತ ಗಜವತ್ತಿತ್ತ
ಮಿಸುಕದೆ ನಿಂದಿರ್ದಪುದೆಂದು ಬಿನ್ನವಿಸಿದ ಬಿನ್ನಪದೊಡನೆ ಪೆರ್ಮಾಡಿ
ರಾಯನಿರ್ದ ಪರಿಯೊಳೆದ್ದು ಕಾಲ್ನಡೆಯೊಳ್ಕೈತಂದು ಮುಂದಿರ್ದಾನೆ
ಯುಮಂ ಕಟ್ಟಿದಿರೊಳಿರ್ದ ಬೊಮ್ಮಯ್ಯಗಳುಮಂ ಕಂಡು.

ಎಲೆ ಭಕ್ತಾ ನೀಂ ಶಾಶ್ವತನ ಮನೆಯಾನೆಯಾದೊಡೇಂ ಎನ್ನಾನೆ
ಯೊಡನೆ ಕೈಯಿಕ್ಕಿ ಗೆಲ್ದೆಯಲ್ಲದೆ ಮಂತ್ರದಿಂ ಮಾಯದಿಂ ಗತಿಸ್ತಂಭವಂ
ಮಾಳ್ಪುದಿದು ಕುಟಿಲಮಲ್ಲದೆ ದಿಟಮಲ್ತು ಇಂತೆಂದು ನುಡಿದ ಭೂಪ
ತಿಯ ಪೊಗಮುಂ ನೋಡಿ ಮುಗುಳ್ನಗೆ ನಗುತ್ತಂ ಧೈರ್ಯನಿಧಿ ಮಾಯಾ
ಮದಹರಣಂ ದಾಹೂರು ಬೊಮ್ಮಯ್ಯಂ ಅರಸಂಗಿಂತೆಂದಂ ಕೇಳಿಲೆ
ಪುರುಳನರಿಯದರಸುಮರುಳೆ ಗಣನಾಥರ ಮುಂದಿಂದ್ರನೈರಾವತಂ
ವಧ್ರಚ್ಛಾಯೆ ಅಗ್ನಿಯ ಪುಂಡರೀಕಂ ನೀರೊಳಗಣ ತಾವರೆ ಯಮನ
ವಾಹನಂ ಮನೆಯ ಮಹಿಷಂ ನೈಋತ್ಯನ ಕುಮುದಂ ನೀಲೋತ್ಪಲಂ
ವರುಣನಂಜನಂ ಕಣ್ಣ ಕಾಡಿಗೆ ಪವನನ ಪುಷ್ಪದತ್ತಂ ಕೆಯ್ಯ ಪೂವಾಳಿ
ಕುಬೇರನ ಸಾರ್ವಭೌಮಂ ಮಣ್ಣಾನೆ ಧನದಮಿತ್ರನ ಸುಪ್ರತೀಕಂ ಸ್ಥಾಣು
ವಶವರ್ತಿ ಎನಿಪ ಕಟ್ಟುಬ್ಬಟೆಯ ತೇಜದ ಫನ ಮಹಿಮರಪ್ಪೆವ್ಮೊಡನೆ
ನಿನ್ನಾನೆ ಕೆಯ್ಯಕ್ಕುವದುಂಟುಂಟದೇ ಮಾಣ್ಪುದೆಂದಾಕ್ಷೇಪಿಸಿನುಡಿದು ತನ್ನ

ಭಂಡಾರಿ ಶಾಂತಯ್ಯಗಳ ವಚನಗಳು

೧. ಅಗೆಯದ ಭಾವಿಯಲ್ಲಿ ಸೆಲೆ ಇಲ್ಲದ ನೀರಿದೆ. ಸೇದುವದಕ್ಕೆ ಹುರಿಯಿಲ್ಲದ ಕಣ್ಣ ತುಂಬುವುದಕ್ಕೆ ಬಾಯಿಲ್ಲದ ಕುಂಭ ಸೇದುವಾತನ ಕಣ್ಣು ತಲೆಯು ಹಿಂದೆ ಕಣ್ಣಿಯ ತೆಗವ ಕೈ ಇಲ್ಲದೆ ಬಾಯಿಯ ತಡಿ ತಡಹಾಯಿತ್ತು ಅಲೇಕನಾದ. ಶೂನ್ಯ ಕಲ್ಲಿನೊಳಗಾದ ಕಾರಣ

ಟೀಕೆ:— ಶ್ರುತ ಜ್ಞಾನಕ್ಕಸಾಧ್ಯವಾದ ಪರಮಾಮೃತ ತುಂಬಿ ಕೊಂಡಿರ್ದ ಚಿತ್ಕೂಪವೆಂಬುದೀಗ ಅಗೆಯದ ಭಾವಿಯಲ್ಲಿ ಎಂಬ ಶಬ್ದ ಕ್ಕರ್ಥ. ಆ ಚಿತ್ಕೂಪದಲ್ಲಿ ಭಿನ್ನಜ್ಞಾನವಿಲ್ಲದ ಪರಮಾಮೃತ ರಸವಿರು ತ್ತಿಹುದೆಂಬುದೀಗ ನೆಲೆ ಇಲ್ಲದ ನೀರಿದೆ ಎಂಬ ಶಬ್ದಕ್ಕರ್ಥ. ಆ ಪರಮಾ ಮೃತ ರಸನ ಅಂತರಂಗ ಬಹಿರಂಗದಲ್ಲಿ ಸಂಬಂಧವ ಮಾಡುವದಕ್ಕೆ ತಿವತತ್ವವನರಿಯಬೇಕೆಂಬ ಭ್ರಾಂತಳಿದು ಸ್ವಾನುಭಾವ ಸೂತ್ರದಿಂ ಸಂಬಂಧವ ಮಾಡಿದನೆಂಬುದೀಗ ಸೇದುವದಕ್ಕೆ ಹುರಿಯಿಲ್ಲದ ಕಣ್ಣ ಎಂಬ ಶಬ್ದಕ್ಕರ್ಥ. ಆ ಪರಮಾಮೃತ ರಸವನನವಗಹಿಸುವದಕ್ಕೆ ಭಿನ್ನಾ ಪೇಕ್ಷೆ ಇಲ್ಲದ ಅಖಂಡ ಚಿದ್ಭಾಂಡವೇ ಗಡಿಗೆಯಾಗಿಹುದೆಂಬುದೀಗ ತುಂಬುವುದಕ್ಕೆ ಬಾಯಿಲ್ಲದ ಕುಂಭವೆಂಬ ಶಬ್ದಕ್ಕರ್ಥ. ಆ ಪರಮಾ ಮೃತ ರಸವನು ಸ್ವಾನುಭಾವಸೂತ್ರದಿಂ ಸಂಬಂಧವ ಮಾಡುತ್ತಿರ್ದ ಶರಣನ ಸುಜ್ಞಾನ ದೃಷ್ಟಿಯ . ಜ್ಞಾನಸ್ವರೂಪನಾದ ಪರಶಿವತತ್ವದಲಿ ಲೀಯವಾಗಲಾ ಸ್ವಾನುಭಾವ ಸೂತ್ರದಿಂದವಗ್ರಹಿಸುವ ಸದ್ಭಾವ ಹಸ್ತ ವಿಲ್ಲದೆ ಅಹಂ ಬ್ರಹ್ಮವೆನಲು ಚಿತ್ಸ್ವರೂಪವನೊಳಕೊಂಡಿರ್ಪ ಗುರು ಮಾರ್ಗಾಚಾರ ಭಿನ್ನವಾಯಿತ್ತೆಂಬುದೀಗ ಸೇದುವಾತನ ಕಣ್ಣ ತಲೆಯ ಹಿಂದೆ ಕಣ್ಣಿಯ ತೆಗೆವ ಕೈಯಿಲ್ಲದ ಭಾವಿಯ ತಡಿ ತಡಹಾಯಿತ್ತು ಎಂಬ ಶಬ್ದಕ್ಕರ್ಥ. ಆ ಗುರುಮಾರ್ಗಾಚಾರಭಿನ್ನವಾಗಲು ಸಮಸ್ತ ವಿಶ್ವವು ಗಮಿಸುವುದಕ್ಕೆಯೂ ಲಯಿಸುವುದಕ್ಕೆಯೂ ಮಾತೃಸ್ಥಾನವಾದ ಚಿತ್ತು

ವಿಂಗೆ ಜೈತನ್ಯ ಸ್ವರೂಪವಾದ ಪರಬ್ರಹ್ಮವೆಂಬುದೀಗ ಅಲೇಕನಾದ ಎಂಬ ಶಬ್ದಕ್ಕರ್ಥ. ಆ ನಿರಾಕಾರವಾದ ಪರಬ್ರಹ್ಮವು ಕಲು ಹೃದಯವಾದಾತ್ಮನ ಮಧ್ಯದಲ್ಲಿ ಅಂತರ್ಗತವಾಯಿತ್ತೆಂಬುದೀಗ ಶೂನ್ಯ ಕಲ್ಲಿನೊಳಗಾದ ಕಾರಣ ಎಂಬ ಶಬ್ದಕ್ಕರ್ಥ.

೨. ಅಂಗ ಕೋಟಿ ಭುಜ ಅಳುವೇರಿ ತಲೆ ತೆನೆ ಕಣ್ಣು ಅಂಬುಗಂಡಿ ಕಾದುವ ಅರಸು ಅಸುರಾಜ ಕೂಟದ ಮನೆಯ ಐದು ಮಂದಿ ಎಂಟು ಘಟಾನೆ ಪಂಚವಿಂಶತಿ ಕುಮರಿ ಅಳು ಪರಿವಾರ ಕರಣಂಗಳ ಮೊತ್ತ ಕೂಡಿ ಇರಿಯಿತ್ತು. ಅರಿರಾಜ ತಮ ವಿರೋಧಿ ಒಡನೆ ಮುರಿದ ಅಸುರಾಜ ಪಶುಪತಿಯ ಗೆದ್ದ ಎನಗಾಯಿತ್ತು ಹೇಳಾ ಅಲೇಕನಾದ ಶೂನ್ಯ ಕಲ್ಲಿನೊಳಗಾದವನೇ.

ಟೀಕೆ— ಸರ್ವಾಂಗ ಲಿಂಗ ಸಂಬಂಧಿಯಾದ ಶರಣನ ಪ್ರಸಾದ ಕಾಯವೇ ಕೋಟಿಯಾದ ಕಾರಣ ಅಂಗಕೋಟಿಯೆಂಬ ಶಬ್ದಕ್ಕರ್ಥ. ಭಕ್ತಿನಿಷ್ಠೆಯೊಡನೆ ಕೂಡಿದ ಭುಜವೇ ಅಳುವೇರಿಯಾದವೆಂಬುದೀಗ ಭುಜ ಅಳುವೇರಿಯೆಂಬ ಶಬ್ದಕ್ಕರ್ಥ. ಸುಜ್ಞಾನ ಪ್ರಕಾಶವೇ ತೆನೆಯಾಯಿತ್ತಾಗಿ ತಲೆ ತೆನೆಯೆಂಬ ಶಬ್ದಕ್ಕರ್ಥ. ಅವಿರಳ ಜ್ಞಾನ ದೃಕ್ಕಿನಿಂ ನೋಡುತ್ತಿಹನೆಂಬುದೀಗ ಕಣ್ಣು ಅಂಬುಗಂಡಿಯೆಂಬ ಶಬ್ದಕ್ಕರ್ಥ. ಜ್ಞಾನಕ್ರಿಯೆಯಿಂದಾಚರಿಸುವ ಶರಣನ ಅಸುವೆಂದೊಡೆ ಜೀವನು. ಅಂತಪ್ಪ ಜೀವಂಗೆ ಒಡೆಯನಾಗಿಹ ಶರಣನೆಂಬುದೀಗ ಕಾದುವ ಅರಸು ಅಸುರಾಜನೆಂಬ ಶಬ್ದಕ್ಕರ್ಥ. ಪಂಚಕರಣಂಗಳ ವರ್ತನೆ ನಿವೃತ್ತಿಯಾಗಿ ಜ್ಞಾನಕರ್ತೃಗಣ್ಣಂಗಳಾಗಿ ಅತ್ಮನಿಗೆ ಸಹಾಯವಾಗಿಹ ಕಾರಣ ಕೂಟದ ಮನೆಯ ಐದು ಮಂದಿ ಎಂಬ ಶಬ್ದಕ್ಕರ್ಥ. ಅಷ್ಟಮದವಳಿದು ಚಿದಹಂಕಾರ ಸ್ವರೂಪವಾದ ಕಾರಣ ಎಂಟು ಘಟಾನೆ ಎಂಬ ಶಬ್ದಕ್ಕರ್ಥ. ಇಪ್ಪತ್ತೈದು ತತ್ವಭಾವವಳಿದು ಲಿಂಗತತ್ವವಾಗಿಹವೆಂಬುದೀಗ ಪಂಚವಿಂಶತಿ ಕುಮರಿ ಎಂಬ ಶಬ್ದಕ್ಕರ್ಥ. ಜೀವತ್ರಯಂಗಳಿಗೆ ಅತ್ಮವೆಂಬ ಅತ್ಮತ್ರಯ ಮಲತ್ರಯ ವೆಂಬುದೀಗ ಪರಿವಾರವೆಂಬ ಶಬ್ದಕ್ಕರ್ಥ. ಸಕಲ ಕರಣಂಗಳ ಮೊತ್ತವೆಲ್ಲವು ಜ್ಞಾನ ಕರಣಂಗಳಾಗಿ ಎಂಬ ಶಬ್ದಕ್ಕರ್ಥ. ಚಿತ್ಸ್ವರೂಪನಾದ ಶರಣನು ಈ ಪ್ರಕಾರದಲ್ಲಿ ಜ್ಞಾನ ಕ್ರಿವಿಡಿದಾಚರಿಸುತ್ತಿರಲಾಗಿ ಎಂಬುವೀಗ ಕೂಡಿ ಇರಿಯಿತ್ತು ಎಂಬ ಶಬ್ದಕ್ಕರ್ಥ. ಜ್ಞಾನ

ಕಲಾತ್ಮಂಗೆ ಹಗೆಯಾಗಿರ್ದ ಅರಿಷಡ್ವರ್ಗವೆಂಬುದೀಗ ಅರಿರಾಜನೆಂಬ ಶಬ್ದಕ್ಕರ್ಥ. ಆ ಅರಿ ಷಡ್ವರ್ಗಂಗಳನು ಕ್ರಿಯೆಯಿಂದ ನಿವೃತ್ತಿ ಮಾಡಿದ ಶರಣನು ಚಿದಗ್ನಿಯಿಂದಜ್ಞಾನ ತಮಸ್ಸನು ದಹಿಸಿದನೆಂಬುದೀಗ ತನು ವಿರೋಧಿಯೆಂಬ ಶಬ್ದಕ್ಕರ್ಥ. ಇಂತಪ್ಪ ಶರಣನಿಗೆ ಪರಶಿವ ತನ್ನ ನಿಜಪದವ ಕೊಟ್ಟನೆಂಬುದೀಗ ಒಡನೆ ಮುರಿದನೆಂಬ ಶಬ್ದಕ್ಕರ್ಥ. ಆ ಜ್ಞಾನ ಕಲಾತ್ಮನು ಶಿವನು ಕೊಡುವ ಖಂಡಿತ ಫಲ ಪದಂಗಳ ಸತ್ಕ್ರಿಯಾ ಚರಣೆಯಿಂದ ಧ್ವಂಸ ಮಾಡಿದನೆಂಬುದೀಗ ಅಸುರಾಜ ಪಶುಪತಿಯ ಗೆದ್ದ ಎನಗಾಯಿತ್ತು ಹೇಳಾ ಅಲೇಕನಾದ ಶೂನ್ಯ ಕಲ್ಲಿನೊಳಗಾದವನೇ ಎಂಬ ಶಬ್ದಕ್ಕರ್ಥ.

೩. ಆಡಿನ ಕೋಡಿನ ತುದಿಯ ಇಂಬಿನಲ್ಲಿ ಮೂರು ತೋಳಸ ಅಗಡ ಘನವಾಯಿತ್ತು. ಬೇಟೆಯು ಬೆಂಬಳಿಗೆ ಸಿಕ್ಕವು. ನಾಯ ತೊಟ್ಟಿಗೆ ತೊಡಕವು. ಹಿಂಡಿನ ಗೊಂದಲದಲ್ಲಿ ಹೊಕ್ಕು ಆಡ ತಿಂದಿಹವು. ಆಡ ಕೂಡುವ ಕಳಲಿಲ್ಲ. ತೋಳನ ಬಾಧೆ ಬಿಡದು. ಕೂಳು ಹೋದ ಮುನ್ನವೇ ಅರಿ ಅಲೇಕನಾದ ಶೂನ್ಯಕಲ್ಲಿನೊಳಗಾದವನ.

ಟೀಕೆ — ರಜೋಗಣ ಸಂಬಂಧವಾದ ಜೀವನ ಅಹಂಕಾರ ಮಮಕಾರಂಗಳಗ್ರದಲ್ಲಿ ಎಂಬುದೀಗ ಅಡಿನ ಕೋಡಿನ ತುದಿಯ ಇಂಬಿನಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರ ಮಮಕಾರಂಗಳ ಸಂಕಲ್ಪ ವಾರ್ಗದಿಂ ಉತ್ಪತ್ತಿ ಸ್ಥಿತಿ ಲಯಂಗಳ ಭೀತಿ ಘನವಾಯಿತ್ತಾತ್ಮಂಗೆ ಎಂಬುದೀಗ ಮೂರು ತೋಳನ ಅಗಡ ಘನವಾಯಿತ್ತೆಂಬ ಶಬ್ದಕ್ಕರ್ಥ. ಅಂತು ತಮ್ಮ ನಿಜನನರಿಯದೆ ಇರ್ಪ ಖಂಡಿತ ಜ್ಞಾನಗಳ ಭಿನ್ನಕ್ರಿಯೆ ಭಿನ್ನಜ್ಞಾನಕ್ಕೆ ಸಾಧ್ಯವಲ್ಲವೆಂಬುದೀಗ ಬೇಟೆಯು ಬೆಂಬಳಿಗೆ ಸಿಕ್ಕವು ಎಂಬ ಶಬ್ದಕ್ಕರ್ಥ. ಅಂತು ಪಂಚೇಂದ್ರಿಯಂಗಳೆಂಬ ಶ್ವಪನಗಳ ಕರಣ ಕರ್ಕಶಕ್ಕೆ ಸಿಕ್ಕವೆಂಬುದೀಗ ನಾಯ ತೊಟ್ಟಿಗೆ ತೊಡಕವು ಎಂಬ ಶಬ್ದಕ್ಕರ್ಥ. ಆ ಸಕಲ ಕರಣಂಗಳ ಸಮೂಹದಲ್ಲಿ ಹೊಕ್ಕು ಜೀವತ್ರಯಂಗಳ ಭಕ್ಷಿಸುತ್ತಿಹವೆಂಬುದೀಗ ಹಿಂಡಿನ ಗೊಂದಲದಲ್ಲಿ ಹೊಕ್ಕು ಆಡ ತಿಂದಿಹವು ಎಂಬ ಶಬ್ದಕ್ಕರ್ಥ. ಆ ಜೀವತ್ರಯಂಗಳನೊಳಕೊಂಬುವುದಕ್ಕೆ ಗುರು ಮಾರ್ಗಾಚಾರವಿಲ್ಲದೆ ಹೋಯಿತ್ತೆಂಬುದೀಗ ಆಡ ಕೂಡ ಕಳಲಿಲ್ಲವೆಂಬ ಶಬ್ದಕ್ಕರ್ಥ. ಅಂತಪ್ಪ ಗುರುಮಾರ್ಗಾಚಾರವಿಲ್ಲಾಗಿ ಉತ್ಪತ್ತಿ ಸ್ಥಿತಿಲಯದ

ಭೀತಿ ಘನವಾಯಿತ್ತಾತ್ಮಂಗೆಂಬುದೀಗ ತೋಳನ ಬಾಧೆ ಬಿಡದು ಎಂಬ ಶಬ್ದಕ್ಕರ್ಥ. ಅಂತು ಉತ್ಪತ್ತಿ ಸ್ಥಿತಿ ಲಯಕ್ಕೊಳಗಾಗಿ ಹೋಗುವದಕ್ಕೆ ಮೊದಲೇ ಸುಜ್ಞಾನೋದಯದಿಂ ನಿಜವನರಿದು ಗುರು ಕಾರುಣ್ಯದಿಂ ಮೋಕ್ಷವನೆಯ್ದ ದೆಂಬುದೀಗ ಕೂಳು ಹೋದ ಮುನ್ನವೇ ಅರಿ ಅಲೇಕನಾದ ಶೂನ್ಯ ಕಲ್ಲಿನೊಳಗಾದವನಾ ಎಂಬ ಶಬ್ದಕ್ಕರ್ಥ.

೪. ಆದಿಯನಾದಿಯೆ ಮಧ್ಯವ ಭೂಮಿಯಲ್ಲಿ ಒಂದು ಸಾಗರ ಹುಟ್ಟಿತ್ತು. ಸಾಗರದ ನಡುವೆ ಒಂದು ಸಲಿಲ. ಸಲಿಲದ ಮೇಲೊಂದು ನಿಳಯ. ನಿಳಯದೊಳಗೊಬ್ಬ ಸೂಳೆ, ಯೋನಿ ಎಂಟು, ಮೊಲೆ ಮೂರು, ತಲೆ ಆರು, ಕೈ ಐದು, ಕಾಲೊಂದು, ಇಂತೀ ನಟಣೆಯನಾಡುತಿರಲಾಗಿ ನೋಡಿದವನ ಮನ ಸೋತು ಕೂಡಿಹನೆಂದಡೆ ಕೂಡಬಾರದು. ಯೋನಿ ಎಂಟಾದವಳ ಹಿಡಿವಡೆ ಮೊಲೆ ಕೂರಲಗು. ಚುಂಬನಕ್ಕಧರ ನಂಜು ತೆಕ್ಕೆಗೆ ಅಳವಲ್ಲ. ಇದು ಎನಗೆ ಸುಖಕ್ಕೆಚ್ಚುಗವೆಂದು ಬಿಚ್ಚಿದೆ ಇವಳ ಕೂಟ ಒಚ್ಚತ ಬೇಡ ಅಲೇಕನಾದ ಶೂನ್ಯ ಕಲ್ಲಿನ ಮರೆಯಾದವನೆ.

ಟೀಕೆ:— ದೇಹ ಪ್ರಾಣಂಗಳ ಮಧ್ಯವೆನಿಸುವ ಅಂತರ್ದೇಹದಲ್ಲಿ ಸಂಸಾರ ಸಾಗರವಿರುತ್ತಿಹುದೆಂಬುದೀಗ ಆದಿಯನಾದಿಯ ಮಧ್ಯದ ಭೂಮಿಯಲ್ಲಿ ಒಂದು ಸಾಗರ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಸಂಸಾರ ಸಮುದ್ರದ ಮಧ್ಯದಲ್ಲಿ ಸಂಚಲ ರೂಪವಾದ ಮನೋಜಲ ಸಂಬಂಧವಾಗಿಹುದೆಂಬುದೀಗ ಸಾಗರದ ನಡುವೆ ಒಂದು ಸಲಿಲವೆಂಬ ಶಬ್ದಕ್ಕರ್ಥ. ಅಂತಪ್ಪ ಮನೋಜಲವನೊಳಕೊಂಡು ಸೂಕ್ಷ್ಮಾಂತರಂಗವೆಂಬ ನಿಳಯ ಒಪ್ಪುತ್ತಿಹುದೆಂಬುದೀಗ ಸಲಿಲದ ಮೇಲೊಂದು ನಿಳಯವೆಂಬ ಶಬ್ದಕ್ಕರ್ಥ. ಅಂತಪ್ಪಂತರಂಗದಲ್ಲಿ ಪ್ರಪಂಚು ರೂಪವಾದ ಮಾಯೆ ಇರುತ್ತಿಹಳೆಂಬುದೀಗ ನಿಳಯದೊಳಗೊಬ್ಬ ಸೂಳೆ ಎಂಬ ಶಬ್ದಕ್ಕರ್ಥ. ಆ ಪ್ರಪಂಚು ರೂಪುವಾದ ಮಾಯೆಗೆ ಅಷ್ಟ ತನುಗಳೇ ಭಗವಾಗೊಪ್ಪುತ್ತಿಹುದೆಂಬುದೀಗ ಯೋನಿ ಎಂಬ ಶಬ್ದಕ್ಕರ್ಥ. ಆ ಮಾಯೆಗೆ ಮಲತ್ರಯ ಮೂರು ಸ್ಥಾನವಾಗಿಹುದೆಂಬುದೀಗ ಮೊಲೆ ಮೂರು ಎಂಬ ಶಬ್ದಕ್ಕರ್ಥ. ಆ ಮಾಯೆಗೆ ಅರಿಷಡ್ವರ್ಗಂಗಳೇ ಅಜ್ಞಾನ ಸಂಬಂಧದಿಂ ಶಿರಸ್ಸುಗಳಾಗಿರುತ್ತವೆಂಬುದೀಗ ತಲೆ ಆರು ಎಂಬ ಶಬ್ದ

ಕ್ಕರ್ಥ. ಆ ಮಾಯೆಗೆ ಸಕಲ ಪ್ರಪಂಚು ಹಿಡಿವುದಕ್ಕೆ ಪಂಚ ಕರಣಂಗಳೇ ಹಸ್ತವಾಗಿರುತ್ತಿಹವೆಂಬುದೀಗ ಕೈ ಐದು ಎಂಬ ಶಬ್ದಕ್ಕರ್ಥ. ಅಂತಪ್ಪ ಮಾಯೆಗೆ ದುಶ್ಚರಿತ್ರವೆಂಬ ಚರಣ ಒಂದೇ ಎಂಬುದೀಗ ಕಾಲೊಂದು ಎಂಬ ಶಬ್ದಕ್ಕರ್ಥ. ಅಂತಪ್ಪ ಮಾಯೆ ನಾನಾ ಪ್ರಪಂಚಿನ ವಿಕಾರದ ಹೆಚ್ಚುಗೆಯಿಂ ಚರಿಸುತ್ತಿರಲು ಎಂಬುದೀಗ ಇಂತೀ ನಟಣೆಯಲಾಡುತ್ತಿರಲಾಗಿ ಎಂಬ ಶಬ್ದಕ್ಕರ್ಥ. ಆ ಮಾಯೆಯ ಸ್ವರೂಪು ಲಾವಣ್ಯವನು ಕಾಮುವಿಕಾರ ದೃಷ್ಟಿಯಿಂ ನೋಡಿದ ಜೀವನು ಆ ಕಾಮು ವಿಕಾರದಲ್ಲಿ ಮಗ್ನನಾಗಿರುತ್ತಿಹನೆಂಬುದೀಗ ನೋಡಿದವನ ಮನ ಸೋತು ಎಂಬ ಶಬ್ದಕ್ಕರ್ಥ. ಅಂತಪ್ಪಷ್ಟತನುಗಳೇ ಭಗವಾಗಿರ್ಪ ಅದ್ಭುತವಾದ ಮಾಯೆಯಲ್ಲಿ ಕೂಡಿಹೆನೆಂದಡೆ ಕೂಡಬಾರದೆಂಬುದೀಗ ಕೂಡಿಹೆನೆಂದೊಡೆ ಕೂಡಬಾರದು ಯೋನಿ ಎಂಟಾದವಳೆಂಬುದೀಗ ಶಬ್ದಕ್ಕರ್ಥ ಆ ಸಂಸಾರ ವಿಷಯ ರಸವ ತುಂಬಿಕೊಡಿರ್ದ ಘಟಸ್ವರೂಪಿನೀ ಸ್ತನವ ಸಂಕಲ್ಪ ಹಸ್ತದಿಂ ಪಿಡಿವಡೆ ಅತ್ಯಂತ ಕ್ರೂರವಾದ ಅಜ್ಞಾನ ಸ್ವರೂಪವಾಗಿಹುದೆಂಬುದೀಗ ಹಿಡಿವಡೆ ಮೊಲೆ ಕೂರಲಗು ಎಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯ ಸುಖವನನುಭವಿಸಿಹೆನೆಂದೊಡೆ ಅತ್ಯಂತ ವಿಷಮಯವಾಗಿರುತ್ತಿಹದೆಂಬುದೀಗ ಚುಂಬನಕ್ಕಧರ ನಂಜೆಂಬ ಶಬ್ದಕ್ಕರ್ಥ. ಅಂತಪ್ಪ ಅಜ್ಞಾನದ ಮಾಯೆಯನಪ್ಪಿಹೆನೆಂದೊಡೆ ಅಸಾಧ್ಯತರವಾಗಿಹುದು ಜೀವರಿಗೆಂಬುದೀಗ ತೆಕ್ಕೆಗೆ ಅಳವಲ್ಲ ಇದು ಎನಗೆ ಸುಖಕಚ್ಚುಗವೆಂದು ಬೆಚ್ಚಿದೆ. ಇವಳ ಕೂಟ ಒಚ್ಚತ ಬೇಡ. ಅಲೇಕನಾದ ಶೂನ್ಯ ಕಲ್ಲಿನ ಮರೆಯಾದವಳೆಂಬ ಶಬ್ದಕ್ಕರ್ಥ.

೫. ಆರೈದು ಕಾಣುವದಕ್ಕೆ ಸ್ಥಾಣು ಕರ್ತನಲ್ಲ. ನೋಯಿಸದೆ ಕಾಂಬುದಕ್ಕೆ ಅರಡಿಯಲ್ಲ ನೋಯದೆ ಕಾಂಬುದಕ್ಕೆ ಪಿಪೀಲಿಕನಲ್ಲ. ಬಂಧಿಸಿ ಕಾಂಬುವುದಕ್ಕೆ ಚಂದನದ ಶಿಲೆಯಲ್ಲ. ಭಕ್ತಿ ಎಂಬಂತಹ ಸತಿ ನಾನಾಗಿ ವಿರಕ್ತಿ ಎಂಬ ಘನಲಿಂಗ ಕೂಟಪುರುಷ ನೀನಾಗಿ ಇಂತೀ ಉಭಯದಿಂದೊದಗಿದ ರೂಪ ನಾಮವೇನೆಂಬೆ? ಅಲೇಕನಾದ ಶೂನ್ಯ ಕಲ್ಲಿನ ಹಂಗ ಬಿಡು ಬೇಡಿಕೊಂಬೆ.

೬. ಇನ್ನೆಲ್ಲರ ಕೇಳುವುದಕ್ಕೆ ಕುಲ, ಫಲ, ಮೂಲ, ದೇಹಿಕರು ಹಿಡಿದೆನ್ನ ಎದೆಯಲ್ಲಿ ಕಟ್ಟಿದ ಎಡೆಯಾಸೆ ಬಿಡದು. ಕೊಡುವ ಕೊಂಬಲ್ಲಿ

ದ್ವಿಜರ ನೊಡಗೂಡುವುದು ಬಿಡದು. ಎನ್ನೊಡೆಯ ಬಸವಣ್ಣ ಹೇಂಪ
ಮಾತಿಗೆ ಅಡಿ ಇಡಲಮ್ಮದೆ ಕಟ್ಟಿದೆ. ಹಿಡಿದರ್ಚಿಸುವದಕ್ಕೆ ತಿರದ ಕಡೆಯ
ಕಾಸೆ. ಮಜ್ಜನ ಮುಂಡಿಗೆಂದಂಯೆ. ಪಾದಕ್ಕೆಂದರಿಯೆ. ಕುಸುಮವನಿಕ್ಕು
ವದಕ್ಕೆ ಸಸಿಯಾವೆ. ಮಕುಟದಲ್ಲಿ ಪಾದಕ್ಕೆ ಮದನ ಪಿತನ ಅಕ್ಷಿಯದೆ.
ಅಂಗುಷ್ಠದಲ್ಲಿ ಊಟಕ್ಕೆ ಬಾಯೆ ಕಾಣೆ. ಕೂಟಕ್ಕೆ ಅವಯವಂಗ
ಳಿಲ್ಲ. ಮಾತಿಗಾತ್ಮನ ಕಾಣೆ. ಇದೇತರ ಮರಿ ಪಾಷಾಣದಂತಿದೆ.
ಇದರಾಟವೆನಗೆ ಕಾಟವಾಗಿವೆ. ಅಲೇಕನಾದ ಶೂನ್ಯಕಲ್ಲಾದ ಭೇದವ
ಎನಗೆ ಹೇಳು.

೭. ಊರೊಳಗಣ ಅರುಳಿಯ ಮರದಲ್ಲಿ ಮೂರು ವರ್ಣದ ಗಿಳಿ
ವುಂಯನಿಕ್ಕಿತ್ತು. ಬಲಿದು ರೆಕ್ಕೆ ಹಾರಲಾರದು. ಕೊಕ್ಕು ಬಲಿದು
ಕೆಂಪಾಗದು. ಬಾಯಿ ಬಲಿದು ಹಣ್ಣು ಮೆಲಲಾರದು. ಅದು ಓದಿ
ಸುವರಿಂಗೆ ಅಸಾಧ್ಯ. ಅಲೇಕನಾದ ಇವರೊಲವರವರ ಕೇಳಿಹರೆಂದು
ಕಲ್ಲಿನೊಳಗಾದ.

ಟೀಕೆಃ— ರಂಜಭೂಕ ಗ್ರಾಮವೆಂಬುದೀಗ ಊರೆಂಬ ಶಬ್ದಕ್ಕರ್ಥ.
ಅಂತಪ್ಪ ದೇಹದ ಮಧ್ಯದಲ್ಲಿ ಶಬ್ದ ಜಾಲಂಗಳಿಂದ ಉಲುಹುತ್ತಿಹ
ವಾಗ್ಜಾಲವೆಂಬುದೀಗ ಊರೊಳಗಣ ಅರುಳಿಯ ಮರದಲ್ಲಿ ಎಂಬ ಶಬ್ದ
ಕ್ಕರ್ಥ. ಆ ವಾಗ್ಜಾಲ ಭ್ರಾಂತಿನಲ್ಲಿರ್ಪ ಗುಣತ್ರಯ ಸಂಬಂಧಿಯಾದ
ಜೀವಪಂಸನಿಂ ಜೀವತ್ರಯಂಗಳು ಉದಿಸಿದನೆಂಬುದೀಗ ಮೂರು ವರ್ಣದ
ಗಿಳಿಮರಿಯನಿಕ್ಕಿತ್ತೆಂಬ ಶಬ್ದಕ್ಕರ್ಥ. ಶಿವ ಕೃಪೆಯಿಂದ ಜೀವತ್ರಯಂಗಳ
ಮಧ್ಯದಲ್ಲಿ ಸವ್ಯಜ್ಞಾನ ಪ್ರಧಾವಿಸಲು ಶ್ರೀಗುರು ಕಾರುಣ್ಯದಿಂ ಸರ್ವಾಂಗ
ಲಿಂಗ ಸಂಬಂಧಿಯಾಗಲು ಭಕ್ತಿ ಜ್ಞಾನಂಗಳು ನಿರ್ಧರವಾದವೆಂಬು
ದೀಗ ರೆಕ್ಕೆ ಬಲಿದು ಎಂಬ ಶಬ್ದಕ್ಕರ್ಥ. ಆ ಭಕ್ತಿ ಜ್ಞಾನಂಗಳೆರಡು
ನಿರ್ಧರವಾದ ಚಿದಾತ್ಮನು ಅನ್ಯವಾದ ಮಾಯಾ ಪ್ರಪಂಚಿನತ್ತ
ಹೋಗದೆಂಬುದೀಗ ಹಾರಲಾರದು ಎಂಬ ಶಬ್ದಕ್ಕರ್ಥ. ಅಂತು ಮಾಯಾ
ಪ್ರಪಂಚು ನಷ್ಟವಾಗಲು ಶರಣನ ಶಿವಧಾವ ನಿರ್ಧರವಾಗಿ ರಜೋ
ಗುಣವ ಹೊದ್ದವೆಂಬುದೀಗ ಕೊಕ್ಕು ಬಲಿದು ಕೆಂಪಾಗದು ಎಂಬ
ಶಬ್ದಕ್ಕರ್ಥ. ಅಂತು ರಜೋಗುಣ ನಿವೃತ್ತಿಯಾಗಲು ಶರಣನ ಶಿವ
ಪೇಕ್ಷೆ ಲಿಂಗದಲ್ಲಿ ಸ್ಥಿರವಾಗಿ ಭಿನ್ನ ಫಲಪವಂಗಳ ಸ್ವೀಕರಿಸದೆಂಬು

ದೀಗ ಬಾಯುಬಲಿದು ಹಣ್ಣು ಮೆಲಲಾರದು ಎಂಬ ಶಬ್ದಕ್ಕರ್ಥ. ಆ
ಜ್ಞಾನ ಕಲಾತ್ಮನ ಶ್ರುತಜ್ಞಾನದಿಂದಂದಿಹೆನೆಂದೊಡೆ ಸಾಧ್ಯವಲ್ಲನೆಂಬು
ದೀಗ ಅದು ಓದಿಸುವವಂಗೆ ಅಸಾಧ್ಯ ಅಲೇಕನಾದ ಇದರೊಲವರವ
ಕೇಳಿಹರೆಂದು ಕಲ್ಲಿನೊಳಗಾದನೆಂಬ ಶಬ್ದಕ್ಕರ್ಥ.

೮. ಊರ್ಧ್ವ ಭೂಮಿಯ ವಿರಾಗದಲ್ಲಿ ಸಪ್ತ ಸಮುದ್ರಕ್ಕೆ ಭೂಮಿ
ಯೊಂದೇ. ಆ ಭೂಮಿಯ ಮಧ್ಯದಲ್ಲೊಂದು ವಟವೃಕ್ಷ ಹುಟ್ಟಿತ್ತು.
ಕೊಂಬು ಮೂರು ಅವರ ಬೆಂಬಳಿಯಲ್ಲಿ ಹುಟ್ಟಿದ ಕವಲಿಗೆ ಲೆಕ್ಕವಿಲ್ಲ.
ಆ ಆಲದ ಹಣ್ಣಿಗೆ ಮೌನದ ಹಕ್ಕಿ ಈ ರೇಳು ಕೋಟಿ ಕೂಡಿ ಎಂಬತ್ತು.
ನಾಲ್ಕು ಲಕ್ಷ ಬೇಟಿಕಾರರ ಬಲಿಗೊಳಗಾಯಿತ್ತು. ಇದರೊಲವರವ ಕೇಳಿ
ಹರೆಂದು ಅಲೇಕನಾದ ಶೂನ್ಯಕಲ್ಲಿನ ನಿಳಯವೂಳಗಾದ.

ಟೀಕುಃ— ಅನೇಕ ಕೋಟಿ ಬ್ರಹ್ಮಾಂಡಂಗಳನೊಳಕೊಂಡು ಊರ್ಧ್ವ
ವಾಗಿರ್ಪ ನಿಷ್ಕಲ ಶಿವತತ್ವವೆಂಬುದೀಗ ಊರ್ಧ್ವ ಎಂಬ ಶಬ್ದಕ್ಕರ್ಥ.
ಆ ನಿಷ್ಕಲ ಶಿವತತ್ವಕ್ಕಾಧಾರವಾದ ಚಿತ್ಪೃಥ್ವಿಗೆ ಮತ್ತೊಂದು ಬಯಕೆ
ಇಲ್ಲದೆ ಪರಮ ಸಂತೋಷದಲಿ ಇರುತ್ತಿಹುದೆಂಬುದೀಗ ಭೂಮಿಯ
ವಿರಾಗದಲ್ಲಿ ಎಂಬ ಶಬ್ದಕ್ಕರ್ಥ. ಸಪ್ತ ಸಮುದ್ರಂಗಳು ಮೊದಲಾದ
ಅನೇಕ ತತ್ವ ಬ್ರಹ್ಮಾಂಡಂಗಳಿಗೆ ಆ ಚಿತ್ತೇ ಆಧಾರವಾಗಿಹುದೆಂಬುದೀಗ
ಸಪ್ತ ಸಮುದ್ರಕ್ಕೆ ಭೂಮಿಯೊಂದೇ ಎಂಬ ಶಬ್ದಕ್ಕರ್ಥ. ಆ ಚಿತ್
ಪೃಥ್ವಿಯ ಮಧ್ಯದಲ್ಲಿ ಅನೇಕ ಬ್ರಹ್ಮಾಂಡಂಗಳನೊಳಕೊಂಡಿರ್ಪ ಪರ
ಬ್ರಹ್ಮ ವೃಕ್ಷ ಹುಟ್ಟುತ್ತೆಂಬುದೀಗ ಆ ಭೂಮಿಯ ಮಧ್ಯದಲೊಂದು ವಟ
ವೃಕ್ಷ ಹುಟ್ಟುತ್ತೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮ ವೃಕ್ಷದಿಂ ಶಿವತತ್ವ
ಸದಾಶಿವತತ್ವ ಮಹೇಶ್ವರತತ್ವವೆಂಬ ತ್ರಿತತ್ವ ಉದಯವಾದವೆಂಬುದೀಗ
ಕೊಂಬು ಮೂರು ಎಂಬ ಶಬ್ದಕ್ಕರ್ಥ. ಆ ಮಹೇಶ್ವರ ತತ್ವದಿಂ ಹುಟ್ಟಿದ
ಅನೇಕ ಲೀಲಾವಿಗ್ರಹ ಮೂರ್ತಿಗಳೆಂಬುದೀಗ ಅವರ ಬೆಂಬಳಿಯಲ್ಲಿ
ಹುಟ್ಟಿದ ಕವಲಿಗೆ ಲೆಕ್ಕವಿಲ್ಲವೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮ ವೃಕ್ಷದ
ಉದಯವಾದ ಮುಕ್ತಿ ಫಲವೆನಿಸುವ ಚಿದ್ಘನ ಲಿಂಗವ ಶಬ್ದಜಾಲಂಗ
ಳಿಂದಳಿದು ನಿಃಶಬ್ದಸ್ವರೂಪವಾದ ಪರಮಾತ್ಮನೆಂಬ ಪಕ್ಷಿಯು ಅನೇಕ
ಕರಣಂಗಳನು ತನ್ನ ಶಿವಧಾವದಲ್ಲಿ ಅವಗ್ರಹಿಸಿಕೊಂಡು ಸರ್ವಾಚಾರ
ಸಂಪತ್ತು ಮೊದಲಾದ ಅನೇಕ ಶೀಲ ವ್ರತ ನಿಯಮಂಗಳಿಂ ಸಾಧಿಸುವ

ಭಕ್ತ ಜನಂಗಳ ಭಕ್ತಿ ಪಾಶಕ್ಕೊಳಗಾಯಿತ್ತೆಂಬುದೀಗ ಅಲವ ಹಲ್ಲಿನ
ಮೌನದ ಹಕ್ಕಿ ಈರೇಳು ಕೋಟಿ ಕೂಡಿ ಎಂಭತ್ತುನಾಲ್ಕುಲಕ್ಷ ಬೇಟ್ಟಿ
ಕಾರರ ಬಲೆಯೊಳಗಾಯಿತ್ತು ಇದರೊಲವರವ ಕೇಳಹರೆಂದು ಅಲೇಕ
ನಾದ ಶೂನ್ಯ ಕಲ್ಲಿನ ಸಳಯದೊಳಗಾದನೆಂಬ ಶಬ್ದಕ್ಕರ್ಥ.

೯. ಎತ್ತಬಾರದ ಕಲ್ಲು ನೀರ ಮೇಲೆ ತೆಪ್ಪದಂತೆ ಹೋಗುವಾಗ
ಮೇಲೆ ಕುಳಿತು ಒತ್ತುವರ ನುಂಗಿತ್ತು. ನುಂಗಿದವರು ಅಲ್ಲಿದ್ದಂತೆ
ಹೊಳೆಯ ನೀರ ತಪ್ಪಲಿಕೆ ಕುಡಿದು ಆ ತೆಪ್ಪ ಪೃಥ್ವಿಯಲ್ಲಿ ನಿಂದಿತ್ತು.
ಈ ಗುಣ ಬಿತ್ತಿಯ ಕೇಳಹರೆಂದು ಅಲೇಕನಾದ ಶೂನ್ಯ ಕಲ್ಲಿನ
ಮರೆಯಾದ.

ಟೀಕು:– ಭಿನ್ನ ಜ್ಞಾನಿಗಳ ಅವ್ಯಾಯನಕ್ಕೆ ಸಾಧ್ಯವಾದ ಸರ್ವಾಚಾರ
ಸಂಪತ್ತನೊಳಕೊಂಡಿರ್ಪ ನಿಷ್ಕಲ ಪರಬ್ರಹ್ಮವೆಂಬುದೀಗ ಎತ್ತ ಬಾರದ
ಕಲ್ಲು ಎಂಬ ಶಬ್ದಕ್ಕರ್ಥ. ಆ ಭಿನ್ನ ಜ್ಞಾನಿಗಳ ಸಂಚಲ ರೂಪವಾದ
ಮನೋಮಧ್ಯದಲ್ಲಿ ಆ ಪರಬ್ರಹ್ಮ ಅನ್ಯೋನ್ಯವಾಗಿಹುದೆಂಬುದೀಗ ನೀರ
ಮೇಲೆ ತೆಪ್ಪದಂತೆ ಹೋಗುವಾಗ ಎಂಬ ಶಬ್ದಕ್ಕರ್ಥ. ಆ ಲಿಂಗ ಸಂಬಂ
ಧಿಗಳಾಗಿ ಜ್ಞಾನಕ್ರಿಯೆವಿಡಿದಾಚರಿಸುತ್ತಿರ್ಪ ಭಕ್ತ ಜನಂಗಳ ತಾನೆ
ಒಳಕೊಂಡಿರುತ್ತಿಹುದೆಂಬುದೀಗ ಮೇಲೆ ಕುಳಿತು ಒತ್ತುವರ ನುಂಗಿತ್ತು
ಎಂಬ ಶಬ್ದಕ್ಕರ್ಥ ಆ ಪರಬ್ರಹ್ಮದಲ್ಲಿ ಅಡಗಿರ್ಪ ಭಕ್ತಜನಂಗಳು
ತಮ್ಮ ನಿಜವ ತಾವರಿಯದೆ ಭಿನ್ನಾಪೇಕ್ಷೆಯಿಂ ಫಲಪದಗಳನಿಚ್ಛಿಸಿ ಆ
ಫಲಪದಂಗಳಂ ಸಂಸಾರ ವಿಷಯ ಜಲ ಪ್ರವಾಹ ಭಿನ್ನಾಚಾರದಲ್ಲಿ
ನಿಂತು ಸೇವಿಸುತ್ತಿಹರೆಂಬುದೀಗ ನುಂಗಿದವರು ಅಲ್ಲಿದ್ದಂತೆ ಹೊಳೆಯ
ನೀರ ತಪ್ಪಲಿಕೆ ಕುಡಿದು ಎಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯ
ಜಲ ಪ್ರವಾಹದಲ್ಲಿ ಮುಳುಗಿದ ಅದ್ವೈತಿಗಳ ದೇಹದಲ್ಲಿ ಸರ್ವಾಚಾರ
ಸಂಪತ್ತಿನ ಪಾತ್ರ ಸ್ವರೂಪವಾದ ಚಿದ್ಘನಲಿಂಗವು ಅಡಗಿ ಹೋಯಿತ್ತೆಂಬು
ದೀಗ ಆ ತೆಪ್ಪ ಪೃಥ್ವಿಯಲ್ಲಿ ನಿಂದಿತ್ತು. ಈ ಗುಣ ಬಿತ್ತಿಯ ಕೇಳಿಹ
ರೆಂದು ಅಲೇಕನಾದ ಶೂನ್ಯ ಕಲ್ಲಿನ ಮರೆಯಾದನೆಂಬ ಶಬ್ದಕ್ಕರ್ಥ.

೧೦. ಊರ ಹೊರಗೊಂದು ಸಡು ಮುಠ ಅದರೊಳಗೆ ಅಡಗಿರ್ಪರು
ಎವರು ಕಳ್ಳರು. ಒಬ್ಬನಂಯೆ ಬಲೆಯುವ ಒಬ್ಬ ಹುಲಿಯ ಬಲೆಯುವ

ಮಧ್ಯದಲ್ಲಿ ನಿಲಬಾರದ ದುರ್ಗಂಧ. ಆ ತಾಯಿಗರ್ಭದಲ್ಲಿ ಅಸ್ಥಿ ತಾಕಿದರೆ
ತ್ರಿಶೂಲದಲ್ಲಿ ಇರಿದಂತೆ, ಆ ತಾಯಿ ನೀರ ಕುಡಿದರೆ ಹಿಡಿಗಲ್ಲು ಬಿದ್ದಂತೆ,
ಆ ತಾಯಿ ಉಂಡ ಅನ್ನದ ತುತ್ತು ಕಾರಸಿಡಿಲು ಬಿದ್ದಂತೆ, ಆ ತಾಯಿ
ಕುಡಿದ ಕಾರವು ಕಾಳಕೂಟ ವಿಷದಂತೆ, ಆ ತಾಯಿ ಹಸಿದಿದ್ದರೆ ಕಾಡ
ಗಿಚ್ಚಿನಲ್ಲಿ ಸಿಕ್ಕಿದಂತೆ, ಆ ತಾಯಿ ಸೀರೆಯುಂ ಬಿಗಿದುಟ್ಟರೆ ಕಾಲಪಾಶದಲ್ಲಿ
ಬಿಗಿದಂತೆ, ಆ ತಾಯಿ ನಡೆವಲ್ಲಿ ಕುಂಬಳ ಕಾಯನೆತ್ತಿ ಹಾಕಿದಂತೆ,
ಆ ತಾಯಿ ಕೋಪಿಸಿದರೆ ಕುಮ್ಮುಟಿಯಲ್ಲಿದ್ದಂತೆ, ಆ ತಾಯಿ ನಿದ್ರೆಯಲ್ಲಿ
ಉಚ್ಛ್ವಾಸ ನಿಶ್ವಾಸಂಗೈದಡೆ ಕೋದಂಬ ಸೇದಿದಂತೆ ಆ ತಾಯ ಗರ್ಭ
ದಲ್ಲಿ ಕೀಲಹುಳುವು ಕಡಿದೊಡೆ ಕಾಲಸರ್ಪ ಮಿಡಿಗಪ್ಪೆಯ ಕಡಿದಂತೆ,
ಅಂತಲ್ಲದೆ ಕದಲುವೊದಲುಗೂಡದು. ಅದರಿಂದ ಪಿಂಡಕ್ಕೆ ಮೊದಲು
ಮಾಸಕ್ಕೆ ನೂರು ಕೋಟಿ ಬಾಧೆ, ಎರಡನೆಯ ಮಾಸಕ್ಕೆ
ಐವತ್ತು ಕೋಟಿ ಬಾಧೆ, ಮೂರನೆಯ ಮಾಸಕ್ಕೆ ಇಪ್ಪತ್ತೈದುಕೋಟಿ
ಬಾಧೆ, ನಾಲ್ಕನೆಯ ಮಾಸಕ್ಕೆ ಹನ್ನೆರಡುಕೋಟಿ ಬಾಧೆ, ಐದನೆಯ
ಮಾಸಕ್ಕೆ ಆರುಕೆ ೀಟಿ ಬಾಧೆ, ಆರನೆಯ ಮಾಸಕ್ಕೆ ಮೂರು ಕೋಟಿ
ಬಾಧೆ, ಅದರ ಮೇಲೆ ದಿವ್ಯಜ್ಞಾನ ಹುಟ್ಟಿ ಹಿಂದಣ ಜನ್ಮ ನೂರು
ಮುಂದಣ ಜನ್ಮ ನೂರು ತನ್ನ ಜಾತಿ ಸ್ಮರತ್ವವನರಿದು, ತನ್ನ ಹೀನಾಧಿ
ಕಜನ್ಮವನ್ನು ತನ್ನ ಸ್ವರ್ಗನರಕವನ್ನು ತನ್ನ ಸುಖದುಃಖವನ್ನು ತನ್ನ
ಸ್ತುತಿನಿಂದೆಯನ್ನು ತನ್ನ ಕರ್ತವ್ಯ ಭೃತ್ಯತ್ವವನ್ನು ತನ್ನ ಸಿರಿ ಬಡತನ
ವನ್ನು ತನ್ನ ರೂಪುಕುರೂಪನ್ನು ತನ್ನ ಸತ್ಯಾಸತ್ಯವನ್ನು ತಿಳಿದು
ಸರ್ವರಲ್ಲಿಯೂ ಶಿವನೇ ಪೂಜ್ಯನೆಂದರಿದು, ಸರ್ವರೂ ಪೂಜಕರೆಂದರಿದು,
ನೋಟಕ್ಕೆ ಶಿವನೇ ಕರ್ತ, "ಅಸೌಯೊವಸರ್ವತಿನೀಲಗ್ರೀವೊವಿಲೋಹಿತಃ"
ಎಂಬ ಶ್ರುತಿ ಸಾಕ್ಷಿಯಾಗಿ ಆತ್ಮಚಕ್ಷುಜ್ಞೈತನ್ಯನಾಗಿ ಮನಸ್ಸಿಗೆ ಪ್ರೇರಕತ್ವವ
ಮಾಡುವಾತನು ಶಿವನೇ. ಅದರಿಂದ ನೋಟಕ್ಕೂ ಮನಸ್ಸಿಗೂ ಶಿವನೇ
ಕರ್ತನು. ಆ ನೋಟವನ್ನೂ ಮನಸ್ಸನ್ನೂ ಅಪಾತ್ರವ ಮಾಡಿದ ಕಾರಣ
ಈ ದೇಹಪಾಶವು ಎನಗೆ ಬಂದಿತೆಂದು ಈ ನೋಟವನ್ನೂ ಮನಸ್ಸನ್ನೂ
ಶಿವನಿಗೆ ಒಪ್ಪಿಸಿದರೆ ಚಿನ್ಮೂರ್ತಿಯಾಗುವೆನೆಂದು ಈ ನೋಟವನ್ನೂ
ಮನಸ್ಸನ್ನೂ ಒಪ್ಪಿಸುವ ಸಕೀಲು ಎನಗೆ ತಿಳಿಯದು. ವೀರಮಹೇಶ್ವರ
ರಿಗೆ ತಿಳಿವುದು. ಅವರ ಸೇವೆಯ ಮಾಡಿ ನೋಟವನ್ನೂ ಮನಸ್ಸನ್ನೂ
ಶಿವನಿಗೊಪ್ಪಿಸಿ ದೇಹಭಾರವನಿಳುಹುವೆನು. ವಿಷಯದಿಂದ ಬಂದ ಭಾರ

ವನ್ನು ನಿರ್ವಿಷಯದಿಂದ ಇಳುಹಿ, ಶಿವನೊಳಗೆ ಏಕಾರ್ಥವಾಗುವೆನೆಂದು
ಆರು ತಿಂಗಳು ಮೊದಲಾಗಿ ಒಂಭತ್ತನೆಯ ತಿಂಗಳು ಪರ್ಯಂತವು
ದಿನದಿನಕ್ಕೆ ಕೋಟಿಬಾಧೆಯಲ್ಲಿ ಚಿಂತಿಸುತ್ತಿಹುದು. ಅಮೇಲೆ ಉಕ್ಕಿನ
ಕಂಬಚ್ಚಿನಲ್ಲಿ ಚಿನ್ನದ ಸಲಾಕೆಯಂ ತೆಗೆದ ಹಾಗೆ ಹುಟ್ಟುವಲ್ಲಿ ಕೋಟಿ
ಬಾಧೆ ಹುಟ್ಟಿದ ಹಿಂದೆ ಪ್ರಸೂತಿವಾಯು ಸೋಂಕಿ ದಿವ್ಯಜ್ಞಾನ ಕೆಟ್ಟು
ತಾ ಕೆಟ್ಟ ಕೇಡ ಮರೆದು ಸುಖದುಃಖಂಗಳಿಂದೆ ಸ್ತುತಿನಿಂದೆಗಳಿಂದ ಬಂ
ದಾರಿದ್ರ್ಯದಿಂದೆ ರೂಪು ಕುರೂಪುಗಳಿಂದೆ ವಿದ್ಯಾವಿದ್ಯೆಗಳಿಂದೆ ಹೀನಾಧಿಕ
ದಿಂದೆ ಕುಲಾಕುಲಗಳಿಂದೆ ಜ್ಞಾನಾಜ್ಞಾನಂಗಳಿಂದೆ ಮುನ್ನೂರರುವತ್ತು
ರೋಗಂಗಳಿಂದೆ ವರುಷನೂರಕ್ಕೆ ಬರುವದು ಕೋಟಿಬಾಧೆ, ಸಾವಲ್ಲಿ
ಕೋಟಿಬಾಧೆ, ಇಪ್ಪತ್ತೆಂಟುಕೋಟಿ ನರಕಗಳು ಗರ್ಭನರಕಕ್ಕೆ ಸರಿಯಿಲ್ಲ.
ಈ ಗರ್ಭನರಕವು ಎಂದಿಗೆ ದೂರವಹುದೋ ಗುಹೇಶ್ವರಾ.

(೧೫) ಈ ದೇಹಮರ್ಗುಣ ಅವಲಕ್ಷಣ ದುಃಖ ಆಶಾಬದ್ಧ ಅಷ್ಟಿ
ದೇಹಧಾರವನಿಳುಹಿ ಪೋಷಿಸುವಂಥ ತಂದೆ ಯಾರೋ ಎನಗೆ? ಈ
ದೇಹ ದುರ್ವಿಷಯ ಹಾಳಾಗಲಿಕ್ಕೆ ಅವ್ಯಾಹತವಾಗಿ ಬಂದು ಪರಿಹರಿಸುವ
ದಯಾನಿಧಿ ಯಾರೋ ಎನಗೆ? ಈ ದೇಹದ ಪಂಚಾಗ್ನಿಯೆಂಬ ವಡಬಾನ
ಲಕ್ಕೆ ಅವ್ಯಾಹತವಾಗಿ ಬಂದು ದಿಗಿಲು ಬಿಡಿಸುವರಾರೋ? ಈ ದೇಹ
ದುರ್ಮದವೆಂಬ ಅನೆಗಳಿಗೆ ಸಿಂಹವಾಗಿ ಬಂದು ಭಯ ಬಿಡಿಸುವ ಕರು
ಣಾನಿಧಿ ಯಾರೋ? ಎನ್ನ ಅಜ್ಞಾನವೆಂಬ ಅಂಧಕಾರಕ್ಕೆ ಸುಜ್ಞಾನ
ಜ್ಯೋತಿಯಾಗಿ ಬಂದು ಇದು ಸ್ಥೂಲ ದೇಹದ ಸುಖ ಇದು ಸೂಕ್ಷ್ಮ
ದೇಹದ ಸುಖ, ಇದು ಕಾರಣ ದೇಹದ ಸುಖವೆಂದು ಕಾಣಲ್ಪಡ
ಹೇಳುವ ಗುರುವಾರೋ ಎನಗೆ? ಎನ್ನ ಸಂಕಲ್ಪವಿಕಲ್ಪವೆಂಬ ಘೋರಾ
ರಣ್ಯಕ್ಕೆ ದಾವಾನಲನಾಗಿ ಬಂದು ಶಂಭುಪುರಕ್ಕೆ ದಾರಿಯಂ ತೋರಿ
ಸುವ ಪರಮ ಗುರುವಾರೋ ಎನಗೆ? ಎನ್ನ ಭವಾಂಬುಧಿ ಎಂಬ ಸಮು
ದ್ರಕ್ಕೆ ಹಡಗಾಗಿ ಬಂದು ತಡಿಯಂ ಸೇರಿಸುವ ದಯಾನಿಧಿ ಯಾರೋ?
ಈ ನೋಟವೂ ಮನವೂ ಶಿವನೊಡವೆ. ಒಡವೆಯವನಿಗೆ ಒಡವೆಯ
ನೊಪ್ಪಿಸಿದರೆ ದೇಹ ಧಾರವು ಇಳಿವುದು. ಒಪ್ಪಿಸದಿರ್ದರೆ ದೇಹಭಾರವು
ಹರಿಯದು. ಗರ್ಭದಲ್ಲಿರುವಾಗ ಸೊಮ್ಮು ಕರ್ತನ ತಿಳಿವುದು. ಆ ಸೊಮ್ಮಂ
ಕೊಡಲಿಕ್ಕೆ ಕೂಡದು. ಗರ್ಭವಂ ಬಿಟ್ಟು ಬಂದರೆ ಒಡವೆ ಉಂಟು. ಕೊಡು
ವರೆ ಒಡವೆಯಾತನಂ ಕಾಣೆನು. ಒಡವೆಯಾತನಂ ಕಂಡರೆ ನೋಟ

ವನ್ನೂ ಮನಸ್ಸನ್ನೂ ಕೊಡಬಹುದು. ನೋಟವನ್ನೂ ಮನಸ್ಸನ್ನೂ ನಿಲಿಸಿ
ದಾತನು ಶಿವನಂ ಪೂಜಿಸುವನು. ಆ ಶಿವ ಕಳೆ ದೇಹಭಾರವನಿಳುಹಿ
ಭ್ರಮರಕೀಟನ್ಯಾಯದಿಂ ನಿಲಿಸುವುದು. ನೋಟವನ್ನೂ ಮನಸ್ಸನ್ನೂ
ನಿಲಿಸಿ ಪೂಜಿಸಿದರೆ ಆ ಶಿವಕಳೆ ಅವಂಗೆ ಸಾಕ್ಷಿಯಾಗಿ ಬಂಧ ಮುಕ್ತಿಯ
ನೀವುದಲ್ಲದೆ ದೇಹಭಾರವನಿಳುಹದು. ಇಂತಪ್ಪ ದೇಹಭಾರಕನು ಕಾಮ
ವಿಕಾರಿ ಎಂದು ಕಾಲಭೀತನೆಂದು ಕರ್ಮದೇಹಿಯೆಂದು ಅಶುದ್ಧನೆಂದು
ವಿಕಾರಿಯೆಂದು ದುರಾಚಾರ ಜೋರನೆಂದು ದುರ್ಮಾರ್ಗನೆಂದು ಭವ
ಭಾರಿಯೆಂದು ಹೇಳಲ್ಪಟ್ಟನು. ಮತ್ತೆ ಹೇಗೆಂದೊಡೆ— ನೋಟವನ್ನು
ಮನಸ್ಸನ್ನು ಶಿವನಿಗೊಪ್ಪಿಸಿ ಪೂಜಿಸುವಾತನೇ ಕಳಾಲಿಂಗ ಸಂಧಾನಿ
ಯೆಂದು ನಿರಾಭಾರಿಯೆಂದು ನಿಷ್ಕಾಮನೆಂದು ನಿರ್ವಿಕಾರಿಯೆಂದು ನಿರ್ಮ
ಲನೆಂದು ನಿಸ್ಸಂಗನೆಂದು ಹೇಳಲ್ಪಟ್ಟನು ಗುಹೇಶ್ವರಾ.

೧೬. ಈ ಆಶಾಬದ್ಧದೇಹವನೆಷ್ಟು ದಿನ ಹೊರುವೆನು, ಹೊರ
ಲಾರೆನಲ್ಲಾ ಎಂದುಪೋಷಣವ ಮಾಡಲು, ದುರ್ಗುಣವ ಕೊಡುವದಲ್ಲದೆ
ಸದ್ಗುಣವು ಬಾರದು. ಹಾನಿನ ಮುಂಗೆ ಹಾಲನೆರೆದ ಹಾಗೆ ಇಷ್ಟು
ದಿನವು ಈ ದೇಹವು ಸುಖವೆಂದಿರ್ದೆನು. ವಿಚಾರಿಸಿ ನೋಡಿದರೆ ದುಃಖ
ಸ್ವರೂಪವು. ಈ ದುಃಖಶರೀರಕ್ಕೆ ಪೋಷಣವಂ ಮಾಡಿದರೆ ಮಹಾ
ದೋಷವು. ಅದು ಹೇಗೆಂದೊಡೆ, 'ಅಪಾತ್ರದಾನೇನ ದರಿದ್ರದೋಷಃ'
ಎಂಬ ನ್ಯಾಯದಲ್ಲಿ ನೋಡಿದರೆ ಮಹಾಮೋಸವೆಂದು ಪುತ್ರಮಿತ್ರ
ಕಳತ್ರ ಜಾತಿ ಗೋತ್ರ ಭ್ರಾತೃ ಪಿತೃ ಮಾತೃ ಮೊದಲಾದ ಸರ್ವಸಂಪ
ದವಂ ಬಿಟ್ಟು ಒಂದು ಮಹಾರಣ್ಯದ ದಾರಿಯಂ ಹಿಡಿದೆನು. ಆ ವೇಳೆ
ಯಲ್ಲಿ ಪರಮೇಶ್ವರನು ತನ್ನ ನಿಜಚಿಹ್ನಂಗಳಂ ಮರಸಿಕೊಂಡು ಅನಂತ
ಕೋಟಿವೇದಶಾಸ್ತ್ರಪುರಾಣಾಗಮಮಂತ್ರಾರ್ಥಸಾರಸುಧಾರಸವಾದ ವೀರ
ಶೈವ ಪುಸ್ತಕವಂ ಹಸ್ತದಲ್ಲಿ ಪಿಡಿದುಕೊಂಡು ದಿವ್ಯಜಂಗಮದ ಸ್ವರೂ
ಪದ ಹಾಗೆ ಶ್ರೀಗುರು ಮೂರ್ತಿಯು ಕುಳ್ಳಿರಲಾಗಿ ಆ ಪುಣ್ಯಾತ್ಮ
ನನ್ನು ನೋಡಿದುದು ಹೇಗೆಂದೊಡೆ ಅಂಧಕನಿಗೆ ನೇತ್ರವು ಬಂದಂತೆ,
ದಂದ್ರನು ನಿಕ್ಷೇಪವ ಕಂಡಂತೆ, ರೋಗಿಯು ಸಂಜೀವನವಂ ಕಂಡಂತೆ,
ನೋಡಿದೆನು ಆ ಶ್ರೀಗುರುಮೂರ್ತಿಯನು ಗುಹೇಶ್ವರಾ.

೧೭. ಆ ಗುರುಮೂರ್ತಿಗೆ ಸಾಷ್ಟಾಂಗಪ್ರಣಾಮಂಗೈದು ಶರಣು
ಸಚ್ಚಿದಾನಂದ ನಮೋ ಭಕ್ತವತ್ಸಲ ನಮೋ ಮತ್ಪ್ರಾಣನಾಥ ನಮೋ

ಭಕ್ತೈಕದೇಹ, ಈ ದೇಹವೆಂಬ ಕಾರಾಗೃಹದಲ್ಲಿ ಹುಟ್ಟಿದ ಬಾಧೆಯ
ಹೇಳುವೆನು. ದಯದಿಂದ ಕೇಳಯ್ಯ ಸ್ವಾಮಿ:— ಕಾಮವೆಂಬ ತಸ್ಕ
ರನು ಹೊಕ್ಕು ನಿಜಜ್ಞಾನವೆಂಬ ರತ್ನವನಪಹರಿಸಿಕೊಂಡುಹೋದನು
ದೇವಾ! ಕ್ರೋಧವೆಂಬ ವ್ಯಾಘ್ರನು ಹೊಕ್ಕು ನಿಜಸ್ಥೈರ್ಯವೆಂಬುವ
ಕಾಮಧೇನುವಂ ಕಡಿದು ಕೆಡಹಿತ್ತು ದೇವಾ! ಲೋಭವೆಂಬುವ ಕಪಿ
ಹೊಕ್ಕು ಶಿವಸಕ್ರಿಯೆಯೆಂಬ ಹಣ್ಣಾ ನುಂಗಿತ್ತು ದೇವಾ! ಮೋಹವೆಂಬ
ಮಳೆ ಹೊಯ್ದು ಶಿವವಿಚಾರವೆಂಬ ಅಲೆ ತೇಲಿತ್ತು ದೇವಾ! ಮದ
ವೆಂಬ ಆನೆ ಹೊಕ್ಕು ನಿಶ್ಚಿಂತ ನಿರ್ಮಲತ್ವವೆಂಬ ತಾವರೆಗೊಳನಂ ಕಲ
ವಲವ ಮಾಡಿತ್ತು ದೇವಾ! ಮಾತ್ಸರ್ಯ ಕೋಪವೆಂಬ ಕಾಲಾನಲಂ
ಹೊಕ್ಕು ಶಾಂತಿಯೆಂಬ ಸಮುದ್ರವ ಬತ್ತಿಹೋಯಿತ್ತು ದೇವಾ! ಏನೋ
ವಿಕಾರವೆಂಬ ಚಂಡಮಾರುತನು ಹೊಕ್ಕು ಸತ್ಯಶೌಚಕ್ಷಮೆದಮೆ ಶಾಂತಿ
ದಾಂತಿದಯೆದಾಕ್ಷಿಣ್ಯ ಬ್ರಹ್ಮಚರ್ಯಾದಿ ಸತ್ಕೃತ್ಯವೆಂಬ ದೀಪಗಳು ಮಗ್ಗಿ
ಹೋದವು ದೇವಾ! ರಾಗದ್ವೇಷವೆಂಬ ಜೇನನೊಣವು ಕೂಡಿಕೊಂಡು
ಎನ್ನ ಜೀವಹಂಸನ ಬಾಧೆಗೊಳಿಸಲು ತಾಳಲಾಪೆನೇ? ಚಿದಾಕಾಶವು
ಜೀವನಿಗೆ ಉತ್ಪತ್ತಿ ಸ್ಥಿತಿಲಯಂಗಳು ಎಷ್ಟು ದಿನದಿಂದಿಹವು? ಇನ್ನೆಷ್ಟು
ದಿನಕ್ಕೆ ಲಯವು? ನಾನಾರು, ಈ ದೇಹಪಾಶದಲ್ಲಿ ಕಟ್ಟಿ ಮೋಹವೆಂಬ
ಸಮುದ್ರದಲ್ಲಿ ಮುಳುಗಿಸಿ ಏಳಗೊಡದೆ ಅಹಂಕಾರವೆಂಬ ಪರ್ವತವ
ಎದೆಯ ಮೇಲಿರಿಸಿ ಬಾಧಿಸುವರು ಆರು ಸ್ವಾಮಿ? ನಾನಾರು, ಈ ದೇಹ
ವಾರು? ಅಲ್ಲದಿದ್ದರೆ ನಾನೆಂಬ ಚೈತನ್ಯವೇ ದೇಹವಾಗಿ ಹುಟ್ಟಿತೋ,
ಇಲ್ಲವೆ ನಾ ಮಾಡುವ ಕರ್ಮವೇ ದೇಹವಾಯಿತೋ, ಎಂದರೆ ದೇಹ
ವಿಲ್ಲದ ಕಾಲಕರ್ಮವಿಲ್ಲ. ಹಾಗಾದರೆ ದೇಹಕ್ಕೂ ಕರ್ಮಕ್ಕೂ ಕರ್ತ
ನೊಬ್ಬನುಂಟು. ಆ ಕರ್ತನೇ ನಾನು. ದೇಹಾದಿ ಪ್ರಪಂಚ ಅಬದ್ಧವೆಂದೊಡೆ
ಕದಲಿದೊಡನೆ ಕರ್ಮದಲ್ಲಿ ಕೂಡಿತ್ತು. ಆ ಕರ್ಮದಿಂದೆ ನಾನಾ ಗರ್ಭದಲ್ಲಿ
ಹುಟ್ಟಿ ದುಃಖದಲ್ಲಿ ಹೊಂದುತ್ತಿರಲು, ಅಬದ್ಧವೆಂಬುದು ಹೇಗೆ? ಈ ರೀತಿ
ಯಲ್ಲಿ ಸರ್ವದುಃಖಗಳಲ್ಲಿ ಸರ್ವ ದೇಹಂಗಳಲ್ಲಿ ಮುಳುಗುವಾಡಿದೆಯಾ,
ನಿಮ್ಮ ಪಾದಪದ್ಮಂಗಳೇ ಎನಗೆ ದಿಕ್ಕೆಂದು ಬಂದೆನು. ಎನ್ನಂ ಕಾಯ್ದು
ರಕ್ಷಿಸಯ್ಯ ದುಃಖಸಂಹಾರಿ ಎಂದು ನಮಸ್ಕಾರವ ಮಾಡಲು, ಆ ಶ್ರೀಗುರು
ಸ್ವಾಮಿಯು ದಯಾದೃಷ್ಟಿಯಲ್ಲಿ ನೋಡಿ, ನಿನ್ನಂತರಂಗದ ಸಂಕಲ್ಪ
ವಿಕಲ್ಪಂಗಳಂ ಕೆಡಿಸಿ ನಿನಗೆ ಮೋಕ್ಷರಾಜ್ಯದ ಪಟ್ಟವಂ ಕಟ್ಟಿ ಆಳಿಸ್ಪ
ವೆನು ನಿನಗೆ ಭಯಬೇಡೆಂದು ಅಭಯವಿತ್ತನು ಗುಹೇಶ್ವರಲಿಂಗದಲ್ಲಿ.

೧೮. ಮೊದಲು ಏನೇನೂ ಇಲ್ಲದ ಕಾಲದಲ್ಲಿ ಪರಶಿವ ಬ್ರಹ್ಮವು
ಒಂಬೇ ಇದ್ದಿತ್ತು. ಆ ಪರಶಿವ ಲೀಲಾಮಾತ್ರದಿಂದ ಸರ್ವ ಜಗತ್ತು
ಆಯಿತ್ತು. "ಯಥಾ ಬೀಜಂ ತಥಾಂಕುರಃ" ಎಂಬ ನ್ಯಾಯದಲ್ಲಿ ನೋಡಿದರೆ
ಈ ಸಕಲ ಜಗತ್ತು ನೀನಲ್ಲ, ಆ ಪರಶಿವ ಬ್ರಹ್ಮವೇ ನೀನೆಂದು ಶಿಷ್ಯಂಗೆ
ಬೋಧಿಸಲು, ಆ ಶಿಷ್ಯನು ಆನಂದಮಯನಾಗಿ ಕೇಳ್ದೆ ಗುರುನಾಥ
ಮತ್ತೊಂದು ಬಿನ್ನಪವಂ. ಆ ಲಿಂಗ ಲೀಲಾವಿಲಾಸದಿಂದೆ ಕರ್ಮ
ಪಾಶಬಂಧದಲ್ಲಿ ಜೀವಾತ್ಮನಾಗಿ ಸರ್ವ ದುಃಖದಲ್ಲಿಯೂ ಹೊಂದುತ್ತಿ
ರಲು ನೀವು ದಯಾನಿಧಿಯಾಗಿ ಬಂದು ಎನ್ನ ಅಜ್ಞಾನವೆಂಬ ಅಂಧ
ಕಾರವಂ ಕೆಡಿಸಿ ಸುಜ್ಞಾನವೆಂಬ ಸೂರ್ಯೋದಯವಂ ಮಾಡಲು ಜೀವಾ
ತ್ಮಭಾವ ನಷ್ಟವಾಗಿ ಆ ಪರಶಿವ ಬ್ರಹ್ಮವೇ ನಾನೆಂದು ತಿಳಿದೆನು ಸ್ವಾಮಿ!
ಇನ್ನೊಂದು ಬಿನ್ನಪಂ. ಅದೇನೆಂದೊಡೆ ಜಾಗ್ರತ್ ಸ್ವರೂಪವಾದ ಸ್ಥೂಲ
ದೇಹವು, ಸ್ವಪ್ನ ಸ್ವರೂಪವಾದ ಸೂಕ್ಷ್ಮ ದೇಹವು, ಸುಷುಪ್ತಿ ಸ್ವರೂಪ
ವಾದ ಕಾರಣದೇಹಕ್ಕೆ ತಿಳಿಯದು. ಈ ಮೂರು ದೇಹಕ್ಕೆ ಸಾಕ್ಷಿಯಾದ
ಪರಶಿವಬ್ರಹ್ಮವೇ ತಾನಾದರೆ ತನುತ್ರಯ ವ್ಯವಹಾರವ ಹೊದ್ದುವದೇ?
ಫೇನಬುದ್ಬುದ ತೆರೆಗಳಿಲ್ಲದ ಸಮುದ್ರದ ಹಾಗೆ, ಗಾಳಿಯಿಲ್ಲದ ದೀಪದ
ಹಾಗೆ, ಎಲೆಯಿಲ್ಲದ ವೃಕ್ಷದ ಹಾಗೆ, ರೆಕ್ಕೆಯಿಲ್ಲದ ಪಕ್ಷಿಯಂತೆ, ರವಿ
ಶಶಿತಾರಾಮೇಘಂಗಳಿಲ್ಲದ ನಿರ್ಮಲಾಕಾಶದಂತೆ ತಾನು ನಿರ್ಮಲನಾಗಿ
ನಿರಾವರಣನಾಗಿರಬೇಕಲ್ಲದೆ ನಿರ್ವಿಕಾರ ಬ್ರಹ್ಮಲಕ್ಷಣ ಹಾಗಲ್ಲದೆ ತನು
ತ್ರಯ ವಿಕಾರಹೊದ್ದಿದ್ದರೆ ಆ ಬ್ರಹ್ಮ ತಾನಾಗಬಲ್ಲನೇ? ಕೆಲಬರು ತಾ
ಬ್ರಹ್ಮವಾದರೂ ಪ್ರಾರಬ್ಧಕರ್ಮ ಬಿಡದೆಂಬರು. ಕೆಲಬರು ತಾ ಸರ್ವ
ಸಾಕ್ಷಿ ವಿಕಾರವು ದೇಹೇಂದ್ರಿಯ ವಿಷಯ ತಸ್ಕರಂಗಳಿಲ್ಲದೆ ಆತ್ಮಂಗಿಲ್ಲ
ವೆಂಬರು. ಕೆಲಬರು ಆ ಬ್ರಹ್ಮವೇ ತಾನಾದಡೆಯೂ ವಿಕಾರದಲ್ಲಿ ಹೊದ್ದ
ಲಾಗದೆಂದು ದೇಹವನ್ನಾಶ್ರಯಿಸಿರುವರು. ಈ ಸಂಕಲ್ಪವೆನಗೆ ತಿಳಿಯದು.
ತಿಳುಹಿ ರಕ್ಷಿಸು ಶ್ರೀಗುರುನಾಥ ಎನಲಾಗಿ ಆ ಶ್ರೀಗುರುನಾಥ ಶಿಷ್ಯನ
ಪ್ರಶ್ನೆಗೆ ಮೆಚ್ಚಿ, ಕೇಳು ಕುಮಾರ, ನಿನಗೆ ನಿಶ್ಚಿಂತ ಕೈವಲ್ಯ ಸುಖವ ನೀವೇ
ಗುಹೇಶ್ವರಲಿಂಗದಲ್ಲಿ.

೧೯. ಗಜಶಾಸ್ತ್ರವ ಕಲಿತ ಮಾತ್ರದಲ್ಲಿ ಗಜವನೇರಬಹುದೇ ಸಾಧಕ
ವಿಲ್ಲದೆ? ಕರ್ಪೂರವಂ ಪಾತ್ರೆಯಲ್ಲಿ ಮಡಗಿದೊಡೆ ಶಿವಾರ್ಪಣವಾಗಬಲ್ಲುದೇ
ಅಗ್ನಿಯಂ ಮುಟ್ಟಿಸದೆ? ಕಾಶೀಮಹಾತ್ಮ್ಯವಂ ಕೇಳಿದಲ್ಲಿಯೇ ಸಾರೂ

ಸ್ಥಪದವಿಯಪ್ಪದೇ ನಡೆದು ಹೋಗಿ ಕಂಚಕ್ರೋಶಮಧ್ಯದಲ್ಲಿ ತಾರಕ ಬ್ರಹ್ಮೋಪದೇಶದಿಂದೆ ಜೀವಿಸದೆ? ಅಮೃತವೆಂದಲ್ಲಿಯೇ ತೃಪ್ತಿಯಪ್ಪದೇ ಘುಂಜಿಸದೆ? ಆ ಕ್ರಮದಲ್ಲಿ ತತ್ವಮಸಿ ವಾಕ್ಯಂಗಳನ್ನು ತಿಳಿದಲ್ಲಿಯೇ ತಾನು ಬ್ರಹ್ಮವಹನೆ? ತನುತ್ರಯವಿಕಾರವು ತೋರಿದಲ್ಲಿ ಶಿವೋಹಂ ಭಾವವಿಲ್ಲದೆ ಭಕ್ತಶಿವಮಹೇಶ್ವರರುಗಳಲ್ಲಿ ದಾಸೋಹಂ ಭಾವನಿಲ್ಲದೆ ಸುಮ್ಮನೆ ವಾಗ್ಬ್ರಹ್ಮವ ನುಡಿವರಿಗೆ ಕಾಲಕರ್ಮಂಗಳು ಬಿಡುವುದೇ ಗುಹೇಶ್ವರಾ?

೨೦. ಅಮೃತದಲ್ಲಿ ಕಹಿಯುಂಟೇ? ದಿವ್ಯ ಮಣಿಯಲ್ಲಿ ಕಪ್ಪುಂಟೇ? ಜ್ಯೋತಿರ್ಮಯದಲ್ಲಿ ಅಂಧಕಾರವುಂಟೇ? ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು ಸ್ಥಲವಂ ಕರತಳಾಮಳಕವಾಗಿ ತಿಳಿದು ಜ್ಞಾನಶೂನ್ಯದಲ್ಲಿ ತಾ ನಿಂದು ದಿನದಿನದಲ್ಲಿ ಅಭ್ಯಾಸವಂ ಮಾಡಲು ದೇಹಗುಣಾಂಗಳಿಗೆ ಯೋಜನೆ ಹುಟ್ಟಿ, ಈತನ ಭಂಗ ಪಡಿಸುವೆನೆಂದು ಬರುವವು. ಅದಕ್ಕೆ ಧೈರ್ಯಗೆಡದೆ ಧೀರನಾಗಿ ದೇಹಗುಣಾಂಗಳು ಕಾಡುವಲ್ಲಿ ಶಿವೋಹಂ ಎಂದು ಶಿವಭಕ್ತರಲ್ಲಿ ದಾಸೋಹಂ ಎಂದು ಮರೆಯದೆ ನಡೆದ ಶಿವಶರಣಂಗೆ ಅಜ್ಞಾನವುಂಟೇ? ಇಲ್ಲ. ಅದೆಂತೆಂದೊಡೆ:— ಕರ್ಮಸಾದಾಖ್ಯಂಗಳ ನರಿದು, ಗುರುಲಿಂಗಜಂಗಮಕ್ಕೆ ತನುಮನಧನವ ನಿರ್ವಂಚಕತ್ವದಿ ಈಕ್ಷಣ ಜ್ಞಾನ ಸ್ಪರ್ಶನದಿಂದರ್ಪಿಸಿ, ಕ್ರಿಯಾಂಗಲಿಂಗಕ್ಕಿತ್ತು, ಸ್ಥೂಲದೇಹಾಹಂಕಾರವ ನಷ್ಟವ ಮಾಡಿ, ಅಮೂರ್ತಿಮೂರ್ತಿಸಾದಾಖ್ಯಂಗಳನರಿದು ಇಷ್ಟಪ್ರಾಣಭಾವಂಗಳಿಗೆ ಈಕ್ಷಣ ಜ್ಞಾನ ಸ್ಪರ್ಶನದಿಂದ ನಿಶ್ಚಲನಾಗಿ ರೂಪು ರುಚಿ ತೃಪ್ತ್ಯಪರ್ಣಾಂಗಳ ಭೋಗಾಂಗಲಿಂಗಕ್ಕಿತ್ತು, ಸೂಕ್ಷ್ಮದೇಹವ ಚಲನೆಗುಣಾಂಗಳ ನಾಸ್ತಿವಾಡಿ, ಶಿವಸಾದಾಖ್ಯಮಹಾಸಾದಾಖ್ಯತನರಿದು ಆ ಇಷ್ಟಪ್ರಾಣಭಾವಂಗಳಿಗೆ ಈಕ್ಷಣ ಜ್ಞಾನ ಸ್ಪರ್ಶನದಿಂದೆ ಸಂಕಲ್ಪವಿಕಲ್ಪರಹಿತನಾಗಿ ತನು ಮನೋ ವಾಯುತತ್ವಂಗಳ ಯೋಗಾಂಗಲಿಂಗಕ್ಕೆ ತೃಪ್ತಿಯಂ ಮಾಡಿ, ಪಾಶಬದ್ಧನಿರ್ಮುಕ್ತನಾದ ಶರಣಂಗೆ ತನುತ್ರಯ ವಿಕಾರಂ ತೊಲಗುವದಲ್ಲದೆ ತನ್ನ ತಿಳಿದ ಮಾತ್ರದಲ್ಲಿ ತಾನೇ ಬ್ರಹ್ಮವೆಂದು ಮತ್ತೆ ಪ್ರಾರಬ್ಧಕರ್ಮವು ಬಿಡದೆಂಬ ತನುತ್ರಯ ಭಾರಕರ ನೋಡಿ ನಗುವನು ನಮ್ಮ ಗುಹೇಶ್ವರನು.

೨೧. ತನುತ್ರಯವಿಕಾರವಂ ತೊಲಗಿಸಿ ಶಿವಸ್ವರೂಪವಾಗುವದಕ್ಕೆ ಸಿದ್ಧಾಂತವು ಪ್ರಸ್ತುತಕ್ಕೆ ಬಾರದು. ವೇದಾಂತಮತವು ಪ್ರಯೋ

ಜನಕ್ಕೆ ಬಾರದು. ವೀರಶೈವದಲ್ಲಿ ತನುತ್ರಯವಿಕಾರಮುಂ ತೊಲಗಿಸಬಹುದು. ಅದೆಂತೆಂದೊಡೆ, ಮುಂದೆ ಸಿದ್ಧಾಂತನಿರ್ಣಯವಂ ಹೇಳುವೆನು. ಅನಾದಿಯಿಂದಲೂ ಮಲಮಾಯಾಕರ್ಮಂಗಳುಂಟು. ಶಿವನುಂಟು. ಆ ಮಲಮಾಯಾಕರ್ಮದಿಂದ ಜೀವನಿಗೆ ಆ ಪಾಶಬದ್ಧತ್ವವುಂಟಾಗಿ ಸುಖದುಃಖಿಂಗಳ ಬಿಡಕೂಡದು. ಶಿವಪೂಜಾಫಲದಿಂದ ಬಂಧಮುಕ್ತಿಯಲ್ಲದೆ ಸಹಜಮುಕ್ತಿಯಿಲ್ಲವೆಂದು ಹೇಳುವದು ಸಿದ್ಧಾಂತ ಗುಹೇಶ್ವರಾ.

ವೀರಶೈವ ಸಿದ್ಧಾಂತ ನಿರ್ಣಯ.

೨೨. ಅನಾದಿಯಿಂದಲೂ ನಿರ್ಮಲನಾಗಿ ಶುದ್ಧನಾಗಿ ಪಾಶಜೀವಗಳಂಟದಾತನಾಗಿ, ಶಿವರತಿಸುಖಸುಧಾಮಯನಾಗಿ, ಗುರುಲಿಂಗಜಂಗಮದ ಸೇವೆಯಲ್ಲಿ ಗುಣವುಳ್ಳವನಾಗಿ, ನಿಜಚಿನ್ಮಯರೂಪಿನಲ್ಲಿ ಹುಟ್ಟಿದ ತ್ರಿವರ್ಣಮಲತ್ರಯವ ವಿಷ್ಣುವಿಧಿಗಳ ಕೈಯ್ಯಲ್ಲಿ ತೊಳೆಯಬಾರದಂಹತವು, ಅಂತಪ್ಪ ಮಲತ್ರಯವ ತಾ ತೊಳೆದು ಜಗದ ಜೀವರ ತೊಲಗಿಸುವ ಜಾಣ್ಮೆಯುಳ್ಳಾತನೇ ವೀರಶೈವ ಸಿದ್ಧಾಂತಿ ಗುರುಗುಹೇಶ್ವರಲಿಂಗದಲ್ಲಿ.

ಅದ್ವೈತ ನಿರ್ಣಯ

೨೩. "ಜೀವಶ್ಚಿವಶ್ಚಿವೋಜೀವಃ ಸಜೀವಃ ಕೇವಲಶ್ಚಿವಃ॥ ಪಾಶಬದ್ಧೋಭವೇಜ್ಜೀವಃ ಪಾಶಮುಕ್ತಸ್ಸದಾಶಿವಃ" ಎಂಬ ವಾಕ್ಯ ಸಾಕ್ಷಿಯಾಗಿ ಹೀಗೆಂಬರು ಕೆಲವರು. ಪಾಶಬದ್ಧನು ಜೀವನು. ಶಿವನು ಪಾಶವಿಲಕ್ಷಣನು. ಜೀವನು ಪಶು. ಶಿವನು ಪಶುಪತಿ. ಪಶುವನು ಕಟ್ಟಲು ಬಿಡಲು ಪಶುಪತಿಯಿಂದಹುದಲ್ಲದೆ ಪಶುವು ತಾನೇ ಕಟ್ಟಿಕೊಂಡು ತಾನೇ ಬಿಟ್ಟುಕೊಂಬುದೇ? ಅದರಿಂದ ಜೀವನು ಜೀವನೇ. ಶಿವನು ಶಿವನೇ. ಅದರಿಂದ ವೇದಾಂತಲಕ್ಷಣ ಶರಣರಿಗಲ್ಲದೆ ಇತರರಿಗಸಾಧ್ಯ ಗುಹೇಶ್ವರಲಿಂಗದಲ್ಲಿ.

ಶಿವಾದ್ವೈತನಿರ್ಣಯ.

೨೪. "ಭಕ್ತಶ್ಚಿವಶ್ಚಿವೋಭಕ್ತಃ ಸಭಕ್ತಃ ಕೇವಲಶ್ಚಿವಃ॥ ಸಾಕಾರಸ್ತು ಭವೇದ್ಭಕ್ತೋ ನಿರಾಕಾರಸ್ಸದಾಶಿವಃ" ಎಂಬ ಶ್ರುತಿ ಸಾಕ್ಷಿಯಾಗಿ ಶಿವನು ಪಾಶವಿಲಕ್ಷಣನು, ಭಕ್ತನು ಪಾಶವಿಲಕ್ಷಣನು, ಶಿವನು ನಿರ್ಮಲನು, ಭಕ್ತನು ನಿರ್ಮಲನು, ನಿರಾಕಾರವಾದ ಶಿವನು ಜಗದ್ಧಿತಾರ್ಥವಾಗಿ ಭಕ್ತನಾದನು. ಅದೆಂತೆಂದೊಡೆ:— ಭಕ್ತಲಕ್ಷಣ ಕರ್ಮಕರ್ತೃಸಾದಾಖ್ಯದಿಂದ ಗುರುಸೇವೆ ಲಿಂಗನಿಷ್ಠೆ ಜಂಗಮಾರಾಧನೆಯಲ್ಲಿ ನಿರ್ವಂಚಕ

ನಾಗಿ ಆವುದಾನೊಂದು ಪದಾರ್ಥವನ್ನು ಸಾಕಾರ ನಿರಾಕಾರ ವಾಯ್ವಾ
ಕಾರ ಸ್ವರೂಪವಾದ ಇಷ್ಟಪ್ರಾಣಭಾವಕ್ಕೆ ಈಕ್ಷಣಜ್ಞಾನಸ್ಪರ್ಶನಾರ್ಪಣ
ದಿಂದ ತ್ಯಾಗಾಂಗದ ವಾಯುಗುಣ ವಿಕಾರವನ್ನು ಬಯಲು ಮಾಡು
ವನು ಶರಣ ಗುಹೇಶ್ವರಲಿಂಗದಲ್ಲಿ.

೨೫. ಮೂರ್ತಿಮಾಮೂರ್ತಿ ಸುದಾಖ್ಯದಿಂದ ನಿರಾಕಾರ ವಾಯ್ವಾ
ಕಾರ ಸ್ವರೂಪವಾದ ಇಷ್ಟಪ್ರಾಣಭಾವಂಗಳಲ್ಲಿ ನಿರ್ವಂಚಕನಾಗಿ ಆವು
ದಾನೊಂದು ಪದಾರ್ಥವನ್ನು ಸಚ್ಚಿದಾನಂದ ಸ್ವರೂಪವಾದ ಇಷ್ಟ
ಪ್ರಾಣಭಾವಕ್ಕೆ ಈಕ್ಷಣ ಜ್ಞಾನಸ್ಪರ್ಶನವನು ರೂಪುರುಚಿ ತೃಪ್ತಿಯಿಂದ
ಭೋಗಾಂಗದ ಮನೋಗುಣವಿಕಾರವನು ಬಯಲು ಮಾಡುವಾತನು
ಶರಣ ಗುಹೇಶ್ವರಲಿಂಗದಲ್ಲಿ.

೨೬. ಶಿವಸಾದಾಖ್ಯ ಮಹಾಸಾದಾಖ್ಯಂಗಳಿಂದ ದೇಹನೇತ್ರ
ಮನೋನೇತ್ರ ಆತ್ಮನೇತ್ರಂಗಳಲ್ಲಿ ನಿರ್ವಂಚಕನಾಗಿ ತನುಮನೋವಾಯು
ಪದಾರ್ಥಂಗಳನ್ನು ಆಹವನೀಯಾಗ್ನಿ ದಕ್ಷಿಣಾಗ್ನಿಗಾರ್ಹಪತ್ಯಾಗ್ನಿ ಸ್ವರೂಪ
ವಾದ ಇಷ್ಟಪ್ರಾಣಭಾವಕ್ಕೆ ಈಕ್ಷಣಜ್ಞಾನಸ್ಪರ್ಶನದಿಂದ ಜನನ ಕೋಶ.
ಪಾಶಬದ್ಧಾರ್ಪಣದಿಂದ ಯೋಗಾಂಗದ ಅಹಂಮಮತೆ ವಿಕಾರವನ್ನು
ಬಯಲು ಮಾಡುವಾತ ಶರಣನು ಗುಹೇಶ್ವರಲಿಂಗದಲ್ಲಿ.

೨೭. ಈ ರೀತಿಯಿಂದ ಮೂರು ದೇಹವನು ಕ್ರಿಯೆಯಿಂದ ಭಕ್ತಿ
ಯಿಂದ ಜ್ಞಾನದಿಂದ ಜಾಗ್ರದಭ್ರಮೆಯನ್ನು ಸ್ವಪ್ನದ ಭ್ರಾರವನ್ನು ಸುಷು
ಪ್ತಿಯ ಅಂಧಕಾರವೆಂಬ ಅವಸ್ಥಾತ್ರಯವನ್ನು ಇಷ್ಟಪ್ರಾಣಭಾವಕ್ಕರ್ಪಿ
ಸುವ ನಿರವಸ್ಥನಾದ ಶರಣನು ಶಿವನಲ್ಲದೆ ಅವಸ್ಥಾತ್ರಯ ಪಾಶಬದ್ಧನು
ಶಿವನೆಂದರೆ ನಗುವನು ನಮ್ಮ ಗುಹೇಶ್ವರಲಿಂಗವು.

೨೮. ತನುತ್ರಯವಂ ಲಿಂಗತ್ರಯಕ್ಕರ್ಪಿಸಿ ಪರಮಲಿಂಗವಾಗು
ವರ ಆರನು ಕಾಣೆ. ಮಲಮಾಯಾಕರ್ಮ ಪಾಶಬದ್ಧರಾಗಿ ದುರಾಚಾರ
ದುಷ್ಕರ್ಮಗಳಂ ಬಿಡದೆ ಮಾತಿನಲ್ಲಿ ಬ್ರಹ್ಮವ ನುಡಿವರು ಅನೇಕರುಂಟು.
ಮಾತಿನಲ್ಲಿ ಬ್ರಹ್ಮವ ನುಡಿವರು ತಮಗೆ ಚೈತನ್ಯಮೂರ್ತಿಯಾದ ಪರ
ಶಿವನ ಕಾಣಲರಿಯರು. ಅವರಾರೆಂದೊಡೆ— ವಿಷ್ಣು ತಾ ಬ್ರಹ್ಮವೆಂದು
ದೇಹವಿಲ್ಲದ ಶಿವನಿಗೆ ಆಹಾರ ಕೊಡಲಾರದೆ ಹೋದನು. ವಿರಿಂಚಿ ತಾನು
ಬ್ರಹ್ಮನೆಂದು ಶಿರವ ಹೋಗಲಾಡಿಸಿಕೊಂಡನು. ಇಂದ್ರನು ನಾನು ಬ್ರಹ್ಮ

ವೆಂದು ಭಗದೇಹಿಯಾದನು. ಮನ್ಮಥನು ತಾನು ಬ್ರಹ್ಮನೆಂದು ಭಾಳ
ಲೋಚನದಗ್ನಿಯಿಂ ಬೆಂದುಹೋದನು. ಸನತ್ಕುಮಾರನು ತಾನು ಬ್ರಹ್ಮ
ವೆಂದು ಒಂಟಿಯಾದನು. ಸಪ್ತಋಷಿಗಳು ತಾವು ಬ್ರಹ್ಮವೆಂದು ಇಂದ್ರನ
ಪಲ್ಲಕ್ಕಿಯ ಬೆಸ್ತರಾದರು. ಮನುಮಾಂಧಾತರು ತಾವು ಬ್ರಹ್ಮವೆಂದು
ದಕ್ಷಯಜ್ಞದಲ್ಲಿ ಸುರಾಮಾಂಸ ಭಕ್ಷಕರಾದರು. ಚಂದ್ರನು ತಾನು ಬ್ರಹ್ಮ
ವೆಂದು ವೀರಭದ್ರನಂಗುಷ್ಠದಲ್ಲಿ ನುಗ್ಗಾದನು. ಸೂರ್ಯನು ತಾನು
ಬ್ರಹ್ಮನೆಂದು ಹಲ್ಲುದೋರಬಡಿಸಿಕೊಂಡನು ಅಗ್ನಿಯು ತಾನು ಬ್ರಹ್ಮ
ವೆಂದು ನಾಲಗೆಯ ಕೊಯಿಸಿಕೊಂಡನು. ಸರಸ್ವತಿಯು ತಾನು ಬ್ರಹ್ಮ
ವೆಂದು ಮೂಕೊರತೆಯಾದಳು. ಲಕ್ಷ್ಮಿಯು ತಾ ಬ್ರಹ್ಮವೆಂದು ಧನಿಕರ
ಮನೆಯ ದಾಸಿಯಾದಳು. ಶಾಂಭವಿಯು ತಾ ಬ್ರಹ್ಮವೆಂದು ಶಿವನವಾ
ಮಾಂಗದಲ್ಲಿ ನಿಂದಳು. ದೇವದಾನವ ಮಾನವರು ತಾವು ಬ್ರಹ್ಮವೆಂದು
ಭವಾಂಬುಧಿಯಲ್ಲಿ ಮುಳುಗಿ ತೇಲುತ್ತಾ ತಡೆಯ ಕಾಣರು. ಹೀನಮಾನ
ವರು ತಾವು ಬ್ರಹ್ಮವೆಂದು ಜಿವ್ವಾಗುಹ್ಯಲಂಪಟತ್ವದಲ್ಲಿ ಹೊಂದಿದುದ
ನೋಡಿ ನಗುತ್ತಿದ್ದ ನಮ್ಮ ಗುಹೇಶ್ವರಲಿಂಗವು.

೨೯. ಈ ವಾಗ್ಬ್ರಹ್ಮಗಳೆಲ್ಲರೂ ಪಡುವ ಪಾಡ ನೋಡಿ ನಮ್ಮ
ಭಕ್ತರು ತ್ಯಾಗಾಂಗದಲ್ಲಿ ಇಷ್ಟಪ್ರಾಣಭಾವಕ್ಕೆ ಬಾಹ್ಯಪದಾರ್ಥರೂಪವಂ
ಈಕ್ಷಣ ಜ್ಞಾನಸ್ಪರ್ಶನದಿಂದರ್ಪಿಸಿ ದೇಹಪ್ರಸಾದಿಗಳಾಗಿ ಚರಶೇಷದಲ್ಲಿ
ಇಷ್ಟಲಿಂಗ ಪೂಜಕರಾಗಿ ಅನಿಷ್ಟವ ಪರಿಹರಿಸಿದರು. ಭೋಗಾಂಗದಲ್ಲಿ
ಇಷ್ಟಪ್ರಾಣಭಾವಕ್ಕೆ ದೇಹಪದಾರ್ಥರೂಪವ ರೂಪು ರುಚಿ ತೃಪ್ತಿಯಿಂದ
ರ್ಪಿಸಿ ಪ್ರಾಣಪ್ರಸಾದಿಗಳಾಗಿ ಲಿಂಗಶೇಷದಲ್ಲಿ ಸುರೂಪವಾದಂಗಪ್ರಾಣ
ಲಿಂಗನೈಷ್ಠರಾಗಿ, ವಾಯುಗುಣವಿಕಾರವ ಕೆಡಿಸಿದರು. ಯೋಗಾಂಗ
ದಲ್ಲಿಷ್ಟಪ್ರಾಣಭಾವಕ್ಕೆ ವಾಯುಪದಾರ್ಥರೂಪವ ಸ್ಥೂಲಸೂಕ್ಷ್ಮಕಾರಣ
ದಿಂದರ್ಪಿಸಿ, ಮಹಾಪ್ರಸಾದಿಗಳಾಗಿ ಗುರುಶೇಷದಲ್ಲಿ ಮನೋಗುಣವಿಕಾ
ರವ ಪರಿಹರಿಸಿದರು ಗುಹೇಶ್ವರಲಿಂಗದಲ್ಲಿ.

೩೦. ಸರ್ವಾಕಾರವಾದ ಸುವರ್ಣ ತಾರಕಮಧ್ಯದಲ್ಲಿ ಗುಹ್ಯಸ್ವರೂ
ಪವಾದ ಅಂಗಮಯ ಜ್ಯೋತಿಯನು ಕಮಲದಳಾಕಾರವಾದ ಹಿರಣ್ಯ
ತಾರಕವ ಕವಚಲಾಗಿ ಅಂಗಮಯ ಜ್ಯೋತಿಯೊಂದು ಧವಳ ಕುಂಭ
ಮಧ್ಯದ ನೀಲವರ್ಣ ತಾರಕಯುಗಳ ಮಧ್ಯದಲ್ಲಿ ಎರಡು ಕುಂಭಮಯ
ಹಸ್ತ ಪರಂಜ್ಯೋತಿಗಳಾಗಿ ಬೆಳಗಲಿಕೆ ಆ ಹಸ್ತಮಯ ಪರಂಜ್ಯೋತಿ

ಗಳನು ಧವಳವರ್ಣ ತಾರಕವು ಮುಚ್ಚಿತು. ಆ ತ್ರಿಕೋಣ ಮಧ್ಯದಲ್ಲಿ ಮಾಣಿಕ್ಯವರ್ಣವಾದ ಚಿದಾಕಾಶ ತಾರಕವು. ಆ ತಾರಕಮಧ್ಯದಲ್ಲಿ ಪಂಚ ಮುಖದಿಂದೊಪ್ಪಿದ ಸಮರಸವಿಮಲ ಪರಂಜ್ಯೋತಿಯನು ಹಂತವರ್ಣ ತಾರಕವು ಮುಚ್ಚಿತ್ತಾಗಿ ಈ ರೀತಿಯಾಗಿ ಷಡುತಾರಕ ತ್ರಿಲಿಂಗಸಂಗವು ಲಿಂಗಾಂಗಸಮರಸವಾದ ಶಾಂಭವಯೋಗವು ಗುಹೇಶ್ವರಲಿಂಗಕ್ಕಲ್ಲದೆ ಇತರರಿಗಸಾಧ್ಯವು.

೩೧. ಮಾನಸಪೂಜಕರು ಮಣ್ಣಾದರು ನಿಟಿಲಭ್ರೂಮಧ್ಯಧ್ಯಾನಿಗಳು ನೀರಾದರು. ನಾದವೇ ಬ್ರಹ್ಮವೆಂಬವರೆಲ್ಲರೂ ವಾದಿಗಳಾದರು. ಕಣ್ಣಮುಚ್ಚಿ ಧ್ಯಾನವ ಮಾಡುವರೆಲ್ಲರೂ ಶಿವದ್ರೋಹಿಗಳಾದರು. ಸಿರಿಮುಡಿಮೌನಿಗಳೆಲ್ಲ ಕಿಚ್ಚುಪಾಲಾದರು ವಾಯುಧಾರಣ ಮಾಡುವರೆಲ್ಲ ಪ್ರಳಯಕ್ಕೊಳಗಾದರು. ಬಯಲು ಬ್ರಹ್ಮವೆಂಬುವರೆಲ್ಲ ಭ್ರಮಿತರಾದರು. ಆತ್ಮನೇ ಬ್ರಹ್ಮನೆಂಬುವರೆಲ್ಲ ಅಡವಿಯಂ ಪೊಕ್ಕರ. ಪಶುಪತರೆಲ್ಲ ಭವಾಂಬುಧಿಯಲ್ಲಿ ಬಿದ್ದರು. ಅನಾದಿಪ್ರಮಥಗಣೇಂದ್ರರಾದ ಶರಣರಿಗಲ್ಲದೆ ಷಡುತಾರಕ ತ್ರಿಲಿಂಗಸ್ವರೂಪವಾದ ಶಾಂಭವ ಮುದ್ರೆಯು ಇತರರಿಗಸಾಧ್ಯವು ಗುಹೇಶ್ವರಲಿಂಗದಲ್ಲಿ.

೩೨. ಕೆಲವರು ಇದು ಶಾಂಭವಂ ಅದು ಶಾಂಭವಂ ಎಂಬರು. ಶಾಂಭವ ಮುದ್ರೆಯ ಕೀಲನರಿಯದೆ ಶಾಂಭವ ಮುದ್ರೆಯೆನಲು ಗುರು ಶಿಷ್ಯಸಂಬಂಧ. ಶಾಂಭವ ಮುದ್ರೆಯೆನಲು ನಿರಾಳನಿಲಯ. ಶಾಂಭವ ಮುದ್ರೆಯೆನಲು ಶರಣಸತಿ ಲಿಂಗಪತಿ ನ್ಯಾಯವು. ಶಾಂಭವ ಮುದ್ರೆಯೆನಲು ವಾಙ್ಮನಕ್ಕೆ ಅಗೋಚರ. ಶಾಂಭವಿ ಮುದ್ರೆ ಎನಲು ಲಿಂಗಾಂಗ ಸಮರಸವು. ಶಾಂಭವ ಮುದ್ರೆಯೆನಲು ಮನು, ಮುನಿ, ಅಜ, ಹರಿ, ಇಂದ್ರ, ಸುರಾಸುರರಿಗಸಾಧ್ಯವು. ಶಾಂಭವಮುದ್ರೆ ನಿಜಗುರು ಶಾಂತೇಶ್ವರನಿಗಲ್ಲದೆ ಇತರರಿಗಸಾಧ್ಯ ಗುಹೇಶ್ವರಾ.

೩೩. ಬಿಳಿಯ ಮುಗಿಲಿನ ಕರಿಯನಕ್ಷತ್ರ ಮಧ್ಯದಲ್ಲಿ ಉರಿಯುಂಕುರ ಹುಟ್ಟಿ ಒಂದೆರಡೆಂಬಂತೆ ಉರಿಯುತ್ತಿದೆ. ಹೊಸ್ತಲಲ್ಲಿಯ ಜ್ಯೋತಿಯಂತೆ ಒಳಹೊರಗೆ ಬೆಳಗುತ್ತಿದೆ. ಅದು ನೋಡಿದರೆ ಘನ. ನೋಡದಿರ್ದರೆ ಸಹಜ. ಈ ಭೇದವ ಗುಹೇಶ್ವರಲಿಂಗದಲ್ಲಿ ಚನ್ನಬಸವಣ್ಣ ಬಲ್ಲ.

ಪರವಸ್ತು ಸ್ವರೂಪ ನಿರ್ಣಯ.

೩೪. ವಾಙ್ಮಾತೀತಂ ಮನೋತೀತಂ ಭಾವಾತೀತಂಪರಾತ್ಪರಂ ॥
ಜ್ಞಾನಾತೀತಂ ನಿರಂಜನಂ ಕಲಾ ಸೂಕ್ಷ್ಮಂ ನ ಭಾವಯೇತ್ ॥

ಜ್ವಲತ್ಕಾಲಾನಲಾಭಾಸಾ ತಟಿತ್ಕೋಟಿ ಸಮಪ್ರಭಾ॥ ತಸ್ಯೋರ್ಧ್ವಂ ಚ ಶಿಖಾಸೂಕ್ಷ್ಮ ಚಿದ್ರೂಪಾ ಪರಮಾಕಲಾ ॥

ನೀಲತೊಯದ ಮಧ್ಯಸ್ಥಾ ವಿದ್ಯುಲ್ಲೇಖೆವ ಭಾಸ್ವರಾ ॥ ನೀವಾರ ಶೂಕವತ್ತನ್ವೀ ಪೀತಾಭಾಸ್ಯತ್ಯಣೂಪಮಾ ॥

ಟೀಕು— ಆ ಪರಶಿವಬ್ರಹ್ಮವು ವಾಚ್ಯಕ್ಕೆ ನುಡಿಯಬಾರದಿರ್ದಂಥ, ಮನಸ್ಸಿಗೆ ನೆನೆಯಬಾರದಿರ್ದಂಥ, ಭಾವಕ್ಕೆ ಭಾವಿಸಬಾರದಿರ್ದಂಥ, ಜ್ಞಾನಕ್ಕೆ ಸಿಲುಕದಿರ್ದಂಥ, ನಿರಂಜನವಾಗಿ, ಅತಿಸೂಕ್ಷ್ಮ ಕಳೆಯಾಗಿ, ಉರಿಯುತ್ತಿರುವ ಕಾಲಾಗ್ನಿ ಪ್ರಕಾಶವಾಗಿ, ಕೋಟಿಮಿಂಚುಗಳ ಪ್ರಭೆಗೆ ಸರಿಯಾಗಿ, ದೀಪದ ತುದಿಯ ಶಿಖೆಯ ಹಾಗೆ ಸೂಕ್ಷ್ಮವಾಗಿ, ದರ್ಪಣದ ಪ್ರತಿಬಿಂಬದ ಹಾಗೆ ಅಖಿಳ ಪ್ರಕಾಶಕ್ಕೆ ನಿಲುಕಬಾರದಂಥ ಸುಖದಾಯಕವಾದ ಶುದ್ಧ ಪರಮಕಳೆಯಾಗಿ ಕಾಣಲ್ಪಡುವುದು ಶಿವಯೋಗಿಗಳ್ಗೆ. ಅದು ಎಲ್ಲಿ ಎಂದೊಡೆ, ನೀಲಮಣಿ ಮಧ್ಯಸ್ಥಾನದಲ್ಲಿ ಕಾರ ಮೇಘದೊಳಗಣ ಮಿಂಚಿನ ಪ್ರಕಾಶವಾಗಿ ಆಕಾಶಸ್ವರೂಪವಾಗಿ ವಾಲಾಗ್ರ ಪ್ರಮಾಣಸ್ವರೂಪವಾಗಿ ಪೀತವರ್ಣವಾಗಿ ನಕ್ಷತ್ರದ ಹಾಗೆ ಚಂದ್ರಸೂರ್ಯರ ಬಿಂಬ ಪ್ರಕಾಶವಾಗಿ ತೃಣಧಾನ್ಯದ ಮುಳ್ಳಿನ ಹಾಗೆ ಕಾಣಲ್ಪಡುವುದು ಆತ್ಮಯೋಗಿಗಳ್ಗೆ. ಲಿಂಗ ಧ್ಯಾನಿಗಳ್ಗೆ ಗೋಮುಖ ವರ್ತುಳಗೋಳಕ ಸ್ವರೂಪವಾಗಿ ಕಾಣಲ್ಪಡುವುದು ಗುಹೇಶ್ವರಾ.

ಶಂಭುಸಂಬಂಧಯುಕ್ತಾ ತು । ಶಾಂಭವೀ ಪರಿಕೀರ್ತಿತಾ।
ಆಕಾಶಗುಣಯುಕ್ತಾ ತು । ಖೇಚರೀ ದ್ವಿವಿಧಾ ಭವೇತ್ ॥
ಖೇಚರೀಶಾಂಭವೀ ಮುದ್ರಾ ಜ್ಞಾನಮುದ್ರಾ ಪ್ರಕೀರ್ತಿತಾ ॥

೩೫. ಈ ಎರಡರಲ್ಲಿ ಆಕಾಶಗುಣದೊಡನೆ ಕೂಡಿದ ಖೇಚರೀಮುದ್ರೆಯಲಕ್ಷಣವನ್ನು ಹೇಳುವೆನು. ನಿರಾಕಾರವಾದ ಗುಣರಹಿತಾಕಾಶವನು, ವಿಸ್ಫುರದ್ಘಾಢತಮೋರೂಪವಾದ ಪರಾಕಾಶವನು, ಕಾಲಾನಲಸಮವಾದ ಮಹದಾಕಾಶವನು. ಅಪರಿಮಿತದ್ಯುತಿಭರಿತವಾದ ತತ್ವಾಕಾಶವನು, ರವಿಶತಕೋಟಿ ಪ್ರಕಾಶವಾದ ಸೂರ್ಯಾಕಾಶವನು ಇಪ್ಪೈದಾಕಾಶವ ನೋಡುವಾತನು ಆಕಾಶ ಸ್ವರೂಪವಹನು. ಈ ಪಂಚಾಕಾಶವನು ಸಾಧಿಸುವ ಕ್ರಮವೆಂತೆಂದೊಡೆ— ಕಾಲಾನಲಪ್ರಕಾಶವಾದ ಮಹದಾಕಾಶ ಬಾಹ್ಯಲಕ್ಷ್ಯವೆಂಬ ನಾಸಾಗ್ರವು ವಿಸ್ಫುರದ್ಘಾಢತಮೋರೂಪವಾದ ಪರಾಕಾಶವೇ ಆ ನಾಸಾಗ್ರಲಕ್ಷ್ಯದ ದೃಷ್ಟಿ. ರವಿಶತಕೋಟಿ ಪ್ರಕಾಶವಾದ ಸೂರ್ಯಾಕಾಶವೇ ಆಂತರ್ಲಕ್ಷ್ಯವೆಂಬ ಕಮಲ ನೀಲವರ್ಣಜ್ಯೋತಿ. ಅಪರಿಮಿತದ್ಯುತಿಭರಿತವಾದ ತತ್ವಾಕಾಶವೇ ಆಂತರ್ಲಕ್ಷ್ಯದಲ್ಲಿ ಮನೋಲಯವಾದ

ಜೀವಪರಮರೈಕ್ಯವು. ನಿರಾಕಾರವಾದ ಗುಣರಹಿತಾಕಾಶವೇ ತ್ರಿಕೂಟ ಮಧ್ಯದಲ್ಲಿ ನಿಂದು ವಾಯುಗುಣವಿಕಾರ ಮನೋಗುಣವಿಕಾರ ನಿವೃತ್ತಿಯಾದವು. ತನ್ನನಂದು ಶಿವನನರಿಯನು ಗುಹೇಶ್ವರಾ.

ಅಗ್ನಿಮಧ್ಯೇ ರವಿಸ್ಥಾನಂ। ರವಿಮಧ್ಯೇ ಚಂದ್ರಮಾಃ।
ತನ್ಮಧ್ಯೇ ಶಂಕರಂವೃಕ್ಷಂ। ಹೃದಯಂ ದಿವ್ಯಮಾನಸಂ॥
ಹೃದಯಾಂತರ್ಗಹಿರ್ವ್ಯಾಪ್ತೋಮಧ್ಯೇಸ್ಥಿತಸ್ವರೂಪಕಂ।
ಆತ್ಮಾಹಮಮಿರಷ್ಯೇವ ತಾರಕಬ್ರಹ್ಮಲಕ್ಷಣಂ॥

೩೬. 'ಮುಖದಿಂವ್ರಶ್ವಾಗ್ನಿಶ್ಚ ಪ್ರಾಣಾದ್ವಾಯುರಜಾಯತ' ಎಂಬ ಶ್ರುತಿ ಪ್ರಮಾಣದಿಂದ ಮುಖದಲ್ಲಿ ಅಗ್ನಿ ಹುಟ್ಟಿತ್ತಾಗಿ ಮುಖವೆಂದರೂ ಅಗ್ನಿಯೆಂದರೂ ಒಂದೇ. ಚಕ್ಷೋಸ್ಸೂರ್ಯೋ ಅಜಾಯತ ಯೆಂಬ ಶ್ರುತಿಸಾಕ್ಷಿಯಾಗಿ ನೇತ್ರದಲ್ಲಿ ಸೂರ್ಯ ಹುಟ್ಟಿದನಾಗಿ ನೇತ್ರವೆಂದರೂ ಸೂರ್ಯನೆಂದರೂ ಒಂದೇ. 'ಚಂದ್ರಮಾ ಮನಸೋಜಾತಃ' ಎಂಬ ಶ್ರುತಿ ಸಾಕ್ಷಿಯಾಗಿ ಮನದಲ್ಲಿ ಚಂದ್ರ ಹುಟ್ಟಿದನಾಗಿ ಚಂದ್ರನೆಂದರೂ ಮನವೆಂದರೂ ಒಂದೇ. ' ತನ್ಮಧ್ಯೇ ಶಂಕರಂ ವೃಕ್ಷಂ ಹೃದಯಂ ದಿವ್ಯಮಾನಸಂ' ಎಂಬ ಶ್ರುತಿಸಾಕ್ಷಿಯಾಗಿ ಆ ಪಾಣಲಿಂಗಮಧ್ಯದಲ್ಲಿ ತಾನೇ ಬ್ರಹ್ಮವೆಂದು ಮನಸ್ಸು ಪ್ರಕಾಶವಾಗಿ ಬೆಳಗುವದು. ' ಮಧ್ಯಸ್ಥಿತಸ್ವರೂಪಕಂ ' ಎಂಬ ಶ್ರುತಿಸಾಕ್ಷಿಯಾಗಿ ಆ ತ್ರಿಕೋಣ ಮಧ್ಯದಲ್ಲಿ ಆತ್ಮನಿರುವನು. ' ಆತ್ಮಾಹುಮಮಿರಷ್ಯೇವ ತಾರಕ ಬ್ರಹ್ಮಲಕ್ಷಣಂ ' ಎಂಬ ಶ್ರುತಿಸಾಕ್ಷಿಯಾಗಿ ಆ ತ್ರಿಕೋಣ ಮಧ್ಯದಲ್ಲಿ ಆತ್ಮ ತಾನೇ ಬ್ರಹ್ಮವೆಂದು ವಾಯು ಗುಣ ವಿಕಾರಮನೋಗುಣ ವಿಕಾರವನಂಟದೆ ತನಗೆ ಚೈತನ್ಯವಾದ ಪರ ಶಿವನನರಿಯದೆ ಇರ್ದ ಕಾರಣ ತಾರಕ ಬ್ರಹ್ಮಲಕ್ಷಣ ಗುಹೇಶ್ವರಾ.

೩೭. ಮುಖ ಮಧ್ಯದಲ್ಲಿ ನೇತ್ರ, ನೇತ್ರ ಮಧ್ಯದಲ್ಲಿ ಮನಸ್ಸು, ಮನೋಮಧ್ಯದಲ್ಲಿ ತಾನೇ ತಾನಲ್ಲದೆ ಮತ್ತೊಂದು ಸಾಧಕವಿಲ್ಲದಂಥಾದ್ದು ತಾರಕಬ್ರಹ್ಮವು ಗುಹೇಶ್ವರಾ.

ವೃತ್ತ.

ಶ್ರೀ ವಾಲ್ಮೀಕಿಯ ಸೋಮಣಾರ್ಯರೊಲವಿಂ ಸಂಗಾಹ್ವಯಂ
ಗೈದ ಹೃ। ತ್ತಾಪಂ ಧಗ್ನವುದಾಗೆ ಬೋಧಿಸಿದ ಸದ್ವಾಕ್ಯಂಗಳಂ ನೋಡಿ
ಜಿ। ದ್ದೀಪಂ ಶ್ರೀಗುರುಮೂರ್ತಿ ಪೇಳ್ದನಪಿಲಗಂ ಸಾಧಕರ್ಗ್ಗೀಪ್ಸಿತ।
ವ್ಯಾಪಾರೋಚಿತವಾದ ಶಾಂಭವಿಯನಾಜ್ಯೋತಿರ್ಮಯೋಪೇತವಂ॥

ವಚನಶಾಸ್ತ್ರಸಾರ ಗ್ರಂಥಗಳು.

(ರಾ ಸಾ ಪಿ. ಜಿ. ಹಳಕಟ್ಟಿ ಇವರಿಂದ ವಿರಚಿತವಾದವುಗಳು.)

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ — ೨—೮—೦

(೨) " " ಉತ್ತರಾರ್ಧ — ೧—೧೨—೦

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು. — ೪—೮—೦

(೩) ವಚನಶಾಸ್ತ್ರಸಾರ ಭಾಗ ೨
ಇದರಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇವೆ. — ೨—೪—೦

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ
ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಅಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರು, ಲಿಂಗ, ಜಂಗಮ ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೮೩ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮—೪—೦ ರೂಪಾಯಿಗಳಿಗೆ ದೊರೆಯುವವು. ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ—

ಹಿತಚಿಂತಕ ಪ್ರಿಂಟಿಂಗ ಪ್ರೆಸ್

ವಿಜಾಪುರ

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬುರುಜ ಓಣಿಯಲ್ಲಿರುವ ತಮ್ಮ ೧೬೨೦ (೮) ಮನೆಯಲ್ಲಿ ಪ್ರಸಿದ್ಧಿಸಿದರು.

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಡಿಶಂಬರ ೧೯೪೦. [ಸಂಚಿಕೆ

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ವೀರಶೈವ ವಾಙ್ಮಯಾವತಾರವನ್ನು ಕುರಿತು.	ಪಂ. ವೀರಭದ್ರ ಶಾಸ್ತ್ರಿಗಳು ಸಿಕಂದರಾಬಾದ.	೬೫
೨	ಶಿವನ ಸ್ವರೂಪ	ಶ್ರೀ. ಬ. ಚ. ಪಟ್ಟೇದ. ಪಂಟಮುರಿ	೯೬
೩	ಬಸವೇಶ್ವರನಕಿಂತಲೂ ಮೊದಲಿ ವೀರಶೈವ ಧರ್ಮ	ರಾ॥ ಸಾ॥ ಪಿ ಜಿ. ಹಳಕಟ್ಟಿ.	೧೦೯
೪	ಸ್ಫುಟವಿಷಯಗಳು.	—	೧೧೨
೫	ಶಿವಾನುಭವ ಶಬ್ದಕೋಶ	—	೧೫
೬	ಸಂಕೀರ್ಣ ವಚನಗಳು ಭಾಗ ೩	—	೯
೬	ಪರಿಹರನ ರಗಳೆಗಳು ಭಾಗ ೮	—	೯

ಶಿವಾನುಭವ.

ವರ್ಷ ೧೫	ಡಿಸೆಂಬರ ೧೯೪೦.	ಸಂಚಿಕೆ ೩

ವೀರಶೈವ ವಾಙ್ಮಯಾವತಾರವನ್ನು ಕುರಿತು.

(ಲೇಖಕರು:— ವಿದ್ಯಾನಿಧಿ, ಪಂಡಿತ ಚಿದಿರೆಮಠದ ವೀರಭದ್ರಶಾಸ್ತ್ರಿಗಳು ಸಿಕಿಂದರಾಬಾದ)

"ಪ್ರಬುದ್ಧಕರ್ನಾಟಕ"ದ ಗತಸಂಚಿಕೆಯಲ್ಲಿ ಶ್ರೀಮಾನ್ ಸಿ. ನಾರಾಯಣರಾವ್, ಎಂ. ಎ. ಪಿ. ಎಚ್. ಡಿ. ಅವರ "ವೀರಶೈವ ವಾಙ್ಮಯಾವತಾರ" ವೆಂಬ ಭಾಷಣವನ್ನು ಪ್ರಕಟಿಸಲಾಗಿದೆ. ಅದರಲ್ಲಿರುವ ಅನೇಕ ವಿಧಾನಗಳು ತರ್ಕಶುದ್ಧವಾಗಿಲ್ಲದುದರಿಂದ ಅವುಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಪ್ರಕಟಿಸುತ್ತಿರುವೆನು.

".....ವೀರಶೈವ ಮತಕ್ಕೆ ಪ್ರಮಾಣವೆಂದು ಹೇಳಲ್ಪಡುವ 'ಶೈವ ಸಿದ್ಧಾಂತಶಿಖಾಮಣಿ' ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿದೆ. ಈ ಗ್ರಂಥವು ಈಚೆಯದು.....ಇದನ್ನು ವೀರಣಾರಾಧ್ಯನ ಪೌತ್ರನೂ ಸಿದ್ಧಯ್ಯನ ಪುತ್ರನೂ ಆದ ರೇವಣನೆಂಬವನು ರೇಣುಕಕೃತಗ್ರಂಥಕ್ಕೆ ಟೀಕಾರೂಪವಾಗಿ ರಚಿಸಿದ್ದಾನೆ" ಎಂಬುದು ರಾಯರ ಮೊದಲನೆಯ ವಿಧಾನವಾಗಿದೆ. ಇದು ತುಂಬಾ ಪ್ರಾಮಾದಿಕವಾಗಿದೆ. ವೀರಶೈವವನ್ನು ಶೈವವೆಂದು ಸಾಮಾನ್ಯವಾಗಿ ಹೇಳಬಹುದಾದರೂ ಉದ್ದೇಶಪೂರ್ವಕವಾಗಿ ಶೈವವೆನಲಾಗದು. ತೆಲುಗು ದೇಶದ 'ಆರಾಧ್ಯರು' ತಮ್ಮನ್ನೂ ಕೆಲವು ವೀರಶೈವ ಗ್ರಂಥಗಳನ್ನೂ 'ಶೈವ' ಶಬ್ದದಿಂದ ವ್ಯವಹಾರ ಮಾಡುವುದುಂಟು. ಇದನ್ನು ವಿಮರ್ಶಿಸದೆ ಅವರು ಪ್ರಕಟಿಸಿದ ಹಾಗೆ 'ಶೈವ

ಸಿದ್ಧಾಂತಶಿಖಾಮಣಿ' ಎಂದು ಬರೆದಿದ್ದಾರೆ. ಇದರ ರೂಢನಾಮವು 'ಸಿದ್ಧಾಂತಶಿಖಾಮಣಿ'ಯೇ ಆಗಿದೆ. ಗ್ರಂಥಕರ್ತನೇ ಪುಸ್ತಕದ ಅಂತ್ಯ ದಲ್ಲಿ "ಶ್ರೀ ವೇದಾಗಮ ವೀರಶೈವಸರಣಂ...ಶ್ರೀ ಸಿದ್ಧಾಂತಶಿಖಾಮಣಿಂ" ಎಂಬ ಶ್ಲೋಕದಿಂದ "ವೀರಶೈವ ಸಿದ್ಧಾಂತಶಿಖಾಮಣಿ"ಯನ್ನಾಗಿಯೇ ಸ್ಪಷ್ಟಪಡಿಸಿದ್ದಾನೆ. ಶೈವವಲ್ಲ. ಈ ಗ್ರಂಥವನ್ನು ಸಿದ್ಧಯ್ಯನ ಮಗನಾದ ರೇವಣಸು ರಚಿಸಿದ್ದಾನೆಂದು ಶ್ರೀ ನಾರಾಯಣರಾವ್ ಅವರಂತಹ ವಿದ್ವಾಂಸರು ಬರೆದಿದ್ದಾರೆಂಬುದು ವ್ಯಸನಕರವಾದ ವಿಷಯ. ಗ್ರಂಥಾದಿಯ

"ಅಸೀದ್ . . . . ಶಿವಯೋಗೀತಿ ವಿಖ್ಯಾತಃ ॥೧೩॥
ತಸ್ಯ ವಂಶೇ . . . . ಮುದ್ದದೇವಾಭಿಧಾಚಾರ್ಯಃ ॥೧೫॥
ತಸ್ಯಾಸೀನ್ನಂದನಃ . . . . ಸಿದ್ಧನಾಥಾಭಿಧಃ ॥೧೭॥
ತಸ್ಯ ನಂದನಃ . . . . ಅಭವಚ್ಛಿವಯೋಗೀತಿ ॥೨೦॥
ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತಶಿಖಾಮಣಿಃ ॥೩೧॥

ಈ ಶ್ಲೋಕಗಳಿಂದ ಶಿವಯೋಗಿಯ ಪ್ರಪೌತ್ರನೂ ಮುದ್ದದೇವನ ಪೌತ್ರನೂ ಸಿದ್ಧನಾಥನ ಪುತ್ರನೂ ಆದ ಶಿವಯೋಗಿ ಶಿವಾಚಾರ್ಯನೇ ಸಿದ್ಧಾಂತ ಶಿಖಾಮಣಿಯನ್ನು ವಿರಚಿಸಿದ್ದಾನೆಂಬುದು ನಿರ್ವಿವಾದವಾಗಿದೆ. ರಾಯರ ಪ್ರಮಾದಕ್ಕೆ ಕಾರಣವೇನೆಂದರೆ ಯೇಲೂರಿನ ಶ್ರೀ ಮಲ್ಲಿಮಪಲ್ಲಿ ಮಲ್ಲಿ ಕಾರ್ಜುನ ಶಾಸ್ತ್ರಿಗಳು ೧೯೨೭ ರಲ್ಲಿ ತೆಲುಗಕ್ಷರಗಳಿಂದ ಸಿದ್ಧಾಂತಶಿಖಾ ಮಣಿಯೊಂದನ್ನು ಮುದ್ರಿಸಿದ್ದಾರೆ. ಅವರು ಸೊಸಲೆ ರೇವಣಾರಾಧ್ಯನ ಕನ್ನಡ ಟೀಕೆಯಿಂದ ಕೂಡಿದ ಸಂಸ್ಕೃತ ಪ್ರತಿಯನ್ನು ಆಧಾರವಾಗಿರಿಸಿ ಕೊಂಡು ತೆಲುಗು ಪ್ರತಿಯನ್ನು ಸಿದ್ಧಗೊಳಿಸುವಾಗ ಕನ್ನಡ ಟೀಕೆ ಯನ್ನು ಬಿಟ್ಟರೂ ಸೊಸಲೆ ರೇವಣಾರಾಧ್ಯನ ಟೀಕೆಯ ಆದಿಯಲ್ಲಿರುವ ಕೆಲವು ಶ್ಲೋಕಗಳನ್ನು ಪ್ರಮಾದದಿಂದ ಮೂಲಸಿದ್ಧಾಂತಶಿಖಾಮಣಿಯ ಆದಿಯಲ್ಲಿ ಸೇರಿಸಿ ಮುದ್ರಿಸಿರುವರು. ಆದರೂ ಸಿದ್ಧಾಂತಶಿಖಾಮಣಿಗೆ ಟೀಕೆಯನ್ನು ರಚಿಸುತ್ತೇನೆಂತಲೇ ಆತನು ಹೇಳಿದನೇ ಹೊರತು ಸಿದ್ಧಾಂತ ಶಿಖಾಮಣಿಯನ್ನು ಆತನೇ ರಚಿಸಿರಬಹುದೆಂಬ ಭ್ರಮೆಗೆ ಅವಕಾಶ ವಿಲ್ಲ. ಸಿದ್ಧಾಂತಶಿಖಾಮಣಿಯನ್ನು ಪೊಟ್ಟಪೊದಲು ಪ್ರಕಟಿಸಿದ ಕೈ. ವಾ. ವೀರಸಂಗಪ್ಪನವರ ಪ್ರತಿಯನ್ನಾಗಲಿ ವಾರದವರ ಪ್ರತಿಯನ್ನಾಗಲಿ ಆಮೇಲೆ ಮುದ್ರಿತವಾದ ವಿವಿಧಪಾಠಿಯ ಪ್ರತಿಗಳನ್ನಾಗಲಿ ಪ್ರಾಚೀನ ವಾದ ತಾಳಪತ್ರೋಲಿಯ ಪ್ರತಿಗಳನ್ನಾಗಲಿ ನೋಡಿದರೆ ಈ ಭ್ರಮೆಗೆ

ಅವಕಾಶವಿಲ್ಲ. ತಮ್ಮ ಪ್ರತಿಯನ್ನಾದರೂ ರಾಯರು ಸರಿಯಾಗಿ ನೋಡ ಬಹುದಾಗಿದ್ದಿತು. "ತ್ರೈಲೋಕ್ಯಸಂಪದಾಲೇಖ್ಯ" ಎಂಬ ಶ್ಲೋಕದಿಂದ ಸಿದ್ಧಾಂತಶಿಖಾಮಣಿಯ ಆರಂಭ. ಮಲ್ಲಿಕಾರ್ಜುನಶಾಸ್ತ್ರಿಗಳು ಮುದ್ರಿ ಸಿದ "ಯಸ್ಸೋಮೇಶ್ವರಲಿಂಗ—" ದಿಂದ "ಮಯಾ ಟೀಕಾ ಕಾರ ಯತೇ ಶ್ರೀ ಸಿದ್ಧಾಂತಶಿಖಾಮಣೇಃ" ಎಂಬ ವರೆಗಿರುವ ಶ್ಲೋಕಗಳು ಸೊಸಲೆ ರೇವಣಾರಾಧ್ಯನವೆಂಬುದನ್ನು ಸುಲಭವಾಗಿ ತಿಳಿಯಬಹುದು.

ಈ ಗ್ರಂಥವು ಈಜೆಯದೆಂಬ ವಾಕ್ಯದಲ್ಲಿ ರಾಯರ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯದಿದ್ದರೂ ಸೊಸಲೆ ರೇವಣಾರಾಧ್ಯನ ಸಮಕಾಲಿಕ ಗ್ರಂಥವ (೧೭ನೆಯ ಶತಮಾನದಲ್ಲಿ ಹುಟ್ಟಿದುದು) ನ್ನಾಗಿ ಅವರು ಊಹಿ ಸಿದಂತೆ ತೋರುತ್ತದೆ. ಇದೂ ಸಮುಂಜಸವಲ್ಲ. ಮಲ್ಲಿಕಾರ್ಜುನ ಪಂಡಿ ತಾರಾಧ್ಯನಿಗಿಂತಲೂ ಪೂರ್ವದಲ್ಲಿ ಕ್ರಿ. ಶ. ೧೮ನೆಯ ಶತಮಾನದಲ್ಲಿ ಪ್ರಸಿದ್ಧನಾಗಿದ್ದ ಶ್ರೀಪತಿ ಪಂಡಿತಾರಾಧ್ಯನು ವಿರಚಿಸಿದ ಶ್ರೀಕರಭಾಷ್ಯ ದಲ್ಲಿ ಅನೇಕಸಲ ಈ ಸಿದ್ಧಾಂತಶಿಖಾಮಣಿಯು ಸಗೌರವವಾಗಿ ಉದಾ ಹೃತವಾಗಿರುವದರಿಂದ ಶ್ರೀಪತಿ ಪಂಡಿತನಿಗಿಂತಲೂ ಆ ಗ್ರಂಥವು ಪ್ರಾಚೀ ನವೆಂದು .ನಿಸ್ಸಂದೇಹವಾಗಿ ಸ್ವೀಕರಿಸಬಹುದು. ಶ್ರೀಕರ ಭಾಷ್ಯವನ್ನು ಸಂಪಾದನೆ ಮಾಡಿದ ಶ್ರೀ ಸಿ. ಹಯವದನರಾಯರು ಆ ಭಾಷ್ಯದ ಕಾಲ ವನ್ನು ೧೪ನೆಯ ಶತಮಾನದವರೆಗೆ ಬಲಾತ್ಕಾರವಾಗಿ ಎಳದಿರುವರೆ ಹೊರತು ಅದರಲ್ಲಿ ತಥ್ಯಾಂಶವೇನೂ ಇಲ್ಲ. ಯಾರಿಂದಲೋ ಅನ್ಯರಿಂದ ಇತ್ತೀಚೆಗೆ ಸೇರಿಸಲ್ಪಟ್ಟ ಮಧ್ವಶಬ್ದವನ್ನು ಬಹಳವಾಗಿ ನಂಬಿಕೊಂಡು ಶ್ರೀಕಂಠಾಚಾರ್ಯ ಭಾಸ್ಕರಾಚಾರ್ಯರ ಕಾಲವನ್ನೂ ಅಸಮಂಜಸವಾಗಿ ನಿರ್ಣಯಿಸಿ ಶ್ರೀಕರಭಾಷ್ಯದ ಶ್ರೀಪತಿಪಂಡಿತನ ಸಮಯವನ್ನೂ ಕೆಳಕ್ಕೆ ತಳ್ಳಿದ್ದಾರೆ. ಹಯವದನರಾಯರ ಶ್ರೀಕರಭಾಷ್ಯ ಪ್ರತಿಗೆ ಮೂಲವಾದ ದೇವಿಡೀ ಜವಿಾಂದಾರ್ ಶ್ರೀ ಕಂದುಕೂರು ಬಾಲಸೂರ್ಯ ಪ್ರಸಾದ ಮಹಾಶಯರ ಪ್ರಾಚೀನ ಪ್ರತಿಯಲ್ಲಾಗಲಿ ಸಿಕಿಂದ್ರಾಬಾದಿನ ಪ್ರಾಚೀನ ಬರಹದ ಪ್ರತಿಯಲ್ಲಾಗಲಿ ಮಧ್ವಶಬ್ದವಿಲ್ಲ. ಶ್ರೀಕಂಠಾಚಾರ್ಯನ ಕಾಲ ವಾದರೂ ಮದ್ರಾಸಯೂನಿವರ್ಸಿಟಯ "Sivadwaita Sreekantha" (ಶ್ರೀಕಂಠನ ಶಿವಾದ್ವೈತ) ಎಂಬ ಪುಸ್ತಕದಲ್ಲಿ ಹತ್ತನೆಯ ಶತಾಬ್ದಿ ಯೊಂದು ನಿರ್ದೇತವಾಗಿದೆ. ಹಯವದನರಾಯರು ಮಾಡಿದ ಕಾಲ ಸೂಚನೆಗಳೆಲ್ಲವೂ 'ಶ್ರೀಪತಿ ಪಂಡಿತಾರಾಧ್ಯರ ಕಾಲನಿರ್ಣಯ"ವೆಂಬ

ಪುಸ್ತಕದಲ್ಲಿ ಸಪ್ರಮಾಣವಾಗಿ ನಿರಾಕರಿಸಲ್ಪಟ್ಟಿವೆ. ಇವರ ಇಂಗ್ಲೀಷು ಟೀಕೆಯನ್ನು ನೋಡಿ ಸಿದ್ಧಾಂತಶಿಖಾಮಣಿಗೆ ಸೊಸಲೆ ರೇವಣಾರಾಧ್ಯನು ಕರ್ತನೆಂಬುದನ್ನೂ ನಾರಾಯಣರಾಯರು ನಂಬಿರಬಹುದು. ಹಯವದನರಾಯರೇನೋ ಮದ್ರಾಸು ಓರಿಯಂಟಲ್ ಲೈಬ್ರರಿಯ ಕೇಟಲಾಗನ್ನು ನೋಡಿ ಕರ್ತೃನಿರ್ಣಯ ಮಾಡಿಕೊಂಡಿರುವರು. ಮೂಲ ಗ್ರಂಥವನ್ನು ನೋಡದೆ ಪರಪ್ರತ್ಯಯ ಮಾಡಿದರೆ ಇದಕ್ಕೂ ಹೆಚ್ಚಿನ ಫಲವಾಗಲಾರದೆಂಬುದು ಸರಿಯೇ! ಶ್ರೀಕಂಠಶಿವಾಚಾರ್ಯನೂ ತನ್ನ ಬ್ರಹ್ಮಸೂತ್ರಭಾಷ್ಯವ ಚತುರ್ಥಾಧ್ಯಾಯ ೪ನೆಯ ಪಾದದ "ಅವಿಭಾಗೇನ ದೃಷ್ಟತ್ವಾತ್" ಎಂಬ ಸೂತ್ರವ್ಯಾಖ್ಯಾನದಲ್ಲಿ ಸಿದ್ಧಾಂತಶಿಖಾಮಣಿಯ (೯-೧೪) "ಮುಕ್ತಃ ಶಿವಸಮೋ ಭವೇತ್" ಎಂಬ ಪ್ರಮಾಣವನ್ನುದ್ಧರಿಸಿದ್ದಾನೆ. ಇದರಿಂದ ಸಿದ್ಧಾಂತಶಿಖಾಮಣಿಯು ಹತ್ತನೆಯ ಶತಮಾನದಲ್ಲಿ ಪ್ರಸಿದ್ಧವಾಗಿದ್ದಿತೆಂಬುದು ಸ್ಪಷ್ಟವಾಗುತ್ತಿದೆ. ಅದರ ರಚನೆ ಪ್ರತಿಪಾದನೆ ಮೊದಲಾದವುಗಳು ಕೂಡ ಅದರ ಪ್ರಾಚೀನತ್ವವನ್ನು ಸೂಚಿಸಲು ಸಮರ್ಥವಾಗಿವೆ.

ಶ್ರೀ ಸಿ. ನಾರಾಯಣರಾಯರೇ ಇತ್ತೀಚೆಗೆ ಪ್ರಕಟಿಸಿದ ತೆಲುಗು ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯಲ್ಲಿಯೂ ಪ್ರಬುದ್ಧ ಕರ್ಣಾಟಕದ ಲೇಖದಲ್ಲಿಯೂ ಹಯವದನರಾಯರ ಶ್ರೀಕರಭಾಷ್ಯ ಶ್ರೀಪತಿ ಪಂಡಿತ ಕಾಲನಿರ್ಣಯವನ್ನು ಸರಿಯಾದುದಲ್ಲವೆಂದು ಹೇಳಿ ಶ್ರೀಪತಿ ಪಂಡಿತನು ೧೩ನೆಯ ಶತಮಾನದಲ್ಲಿದ್ದನೆಂಬುದನ್ನು ಸ್ವೀಕರಿಸಿದ್ದಾರೆ. ಅವನು ರಚಿಸಿದ ಭಾಷ್ಯದಲ್ಲಿಯೇ ಸಗೌರವವಾಗಿ ಉದ್ಧರಿಸಲ್ಪಟ್ಟ ಸಿದ್ಧಾಂತಶಿಖಾಮಣಿಯ ವಿಷಯವಾಗಿ "ಈ ಗ್ರಂಥವು ಈಜೆಯದು" ಎಂದು ಹೇಳುವದಾದರೆ ಹಯವದನರಾಯರ ಪೀಠಿಕೆಯ ಹೊರತು ಶ್ರೀಕರಭಾಷ್ಯವನ್ನಾಗಲಿ ಸಿದ್ಧಾಂತಶಿಖಾಮಣಿಯನ್ನಾಗಲಿ ನಾರಾಯಣರಾಯರು ಅವಲೋಕನೆ ಮಾಡಿಲ್ಲವೆಂತಲೇ ಧಾವಿಸದೇಕಾಗುವುದು.

ಶ್ರೀ ತೋಂಟದಾರ್ಯರು ಸಿದ್ಧಾಂತಶಿಖಾಮಣಿಗೆ ತತ್ತ್ವದೀಪಿಕೆಯೆಂಬ ಸಂಸ್ಕೃತ ಟೀಕೆಯನ್ನು ರಚಿಸಿದ್ದಾರೆ. ಅವರು ೧೬ನೆಯ ಶತಮಾನದವರು ಎಂದರೆ ಬಹಳ ಆಧುನಿಕರಾದುದರಿಂದ ಸಿದ್ಧಾಂತಶಿಖಾಮಣಿಯಲ್ಲಿರುವ "ಮುದ್ದದೇವ" ಎಂಬ ಶಬ್ದವನ್ನು ನೋಡಿ ತಮ್ಮ ಕರ್ಣಾಟಕದ ಸೋಲಾಪುರದ ಮುದ್ದನ ಗೌಡನೆಂದು ಭ್ರಮಿಸಿ "ಸಿದ್ಧನಾಥ" ನೆಂಬ ಹೆಸರಿಗೆ ಸಿದ್ಧರಾಮನೆಂಬ ವಿಪರೀತಾರ್ಥವನ್ನು ಬರೆದಿದ್ದಾರೆ. ಇದು ಸಹಜವಾಗಿ ಜರುಗಿದ ಪಂಡಿತಪ್ರಮಾದವಾಗಿದೆ. ಇದನ್ನೇ ಪರಮಾರ್ಥವೆಂದು ನಂಬಿ ಸಿದ್ಧಾಂತಶಿಖಾಮಣಿಯ ಕಾಲವನ್ನು ೧೬ನೆಯ ಶತಾಬ್ದಿಯೆಂದು ತಿಳಿದವರೂ ಕೆಲವರುಂಟು. ಇದರಲ್ಲಿ ಎಷ್ಟೂ ಸತ್ಯಾಂಶವಿಲ್ಲ. ತೆಲಗುದೇಶದ ಕೊಲನುಪಾಕೆ (ಕುಲ್ಯಪಾಕ) ಯಲ್ಲಿ ಅವತರಿಸಿದ ರೇಣುಕನ ಮಹಿಮೆ ವಿಶೇಷಗಳನ್ನು ಪರಂಪರೆಯಾಗಿ ತನ್ನ ಆಚಾರ್ಯ ವಂಶಪುರುಷರಿಂದ ತಿಳಿದ ಆಂಧ್ರ ದೇಶದವನೇ ಆದ ಶಿವಯೋಗಿ ಶಿವಾಚಾರ್ಯನು ಸಿದ್ಧಾಂತಶಿಖಾಮಣಿಯನ್ನು ರಚಿಸಿರುವನು. ಸಿದ್ಧಾಂತಶಿಖಾಮಣಿಯ ಶ್ಲೋಕಗಳಲ್ಲಿ ಅನೇಕ ಕಡೆ ಆಂಧ್ರಭಾಷೆಯ ಸಂಪ್ರದಾಯದಂತೆ ಯತಿಸ್ಥಾನವನ್ನು ಸಮಾಕ್ಷರ ಮೈತ್ರಿಯಿಂದ ರಚಿಸಿದ ಪಾದಗಳಿರುವದರಿಂದ ಆತನು ಆಂಧ್ರದೇಶದ ಕವಿಯೆಂದು ಸುಲಭವಾಗಿ ತಿಳಿಯಬಹುದು. ಯತಿಸ್ಥಾನದಲ್ಲಿ ಅಕ್ಷರಮೈತ್ರಿಯ ಪದ್ಧತಿಯು ಕನ್ನಡ ಭಾಷೆಯದಲ್ಲ. ಇದರ ವಿಸ್ತಾರವು ಮತ್ತೊಮ್ಮೆ ಪ್ರಕಟಿಸಲಾಗುವುದು. ಸಿದ್ಧರಾಮನಿಗೆ ಶಿವಯೋಗಿಯೆಂಬ ಮಗನಿದ್ದಂತೆಯೂ ಪೌರಾಣಿಕ ಪ್ರತೀತಿಯಿಲ್ಲ. ಸಿದ್ಧಾಂತಶಿಖಾಮಣಿಯಲ್ಲಿಯ ಸಿದ್ಧನಾಥನು ಸೊನ್ನಲಿಗೆಯ ಸಿದ್ಧರಾಮನೆಂದಿಗೂ ಅಲ್ಲ. ಸಿದ್ಧರಾಮನೇ ಆದ ಪಕ್ಷದಲ್ಲಿ ಆ ಹೆಸರನ್ನು ಸ್ಪಷ್ಟವಾಗಿ ಬರೆಯಲು ಛಂದೋಭಂಗಾದಿ ಯಾವ ಪ್ರತಿಬಂಧಕವೂ ಇರಲಿಲ್ಲ. ಮುದ್ದದೇವನು ಮುದ್ದನಗೌಡನೂ ಆಗಲಾರ. ಸೊನ್ನಲಿಗೆಯ ಮುದ್ದನಗೌಡನು ಲಿಂಗಾಂಗಿಯಲ್ಲ. ಸಿದ್ಧಾಂತಶಿಖಾಮಣಿಯ ಮುದ್ದದೇವನು ಅನೂಚಾನವಾಗಿ ಬಂದ ವೀರಶೈವಾಚಾರ್ಯ ಕುಲದಲ್ಲಿ ಹುಟ್ಟಿದವನೆಂತಲೂ ಇವರೆಲ್ಲರೂ ವೇದಾಗಮವಿಶಾರದರೂ ತಪಸ್ಸಂಪನ್ನರೂ ಆಗಿದ್ದರೆಂತಲೂ ಗ್ರಂಥಕರ್ತೃ ವಂಶಪರಿಚಯದಿಂದ ಸುಲಭವಾಗಿ ತಿಳಿಯತಕ್ಕ ಮಾತಾಗಿದೆ. ಶಿವಯೋಗಯ್ಯ ಮುದ್ದಯ್ಯ ಸಿದ್ಧನಾಥಯ್ಯ ಎಂಬ ಹೆಸರುಗಳು ಕುಲ್ಯಪಾಕದ ಪ್ರಾಚೀನ ಮಾಹೇಶ್ವರರಲ್ಲಿ ಹೆಚ್ಚಾಗಿಯೂ ಈಗ ಸ್ವಲ್ಪವಾಗಿಯೂ ಇವೆ. ರೇಣುಕನಿಗೆ ಸಿದ್ಧನಾಥನೆಂಬ ವಿಶೇಷಣವಿದ್ದಂತೆಯೂ (೨೧-೫೦) ಕುಲ್ಯಪಾಕವೆಂಬ ಪ್ರಕ್ಷೇತ್ರವು ರೇಣುಕನಿಗೆ ಸ್ಪಷ್ಟಫಲವಾಗಿದ್ದಂತೆಯೂ (೨೧-೫೯) ಸಿದ್ಧಾಂತಶಿಖಾಮಣಿಯಿಂದ ಸ್ಪಷ್ಟವಾಗಿ ತಿಳಿಯುತ್ತಿರುವದರಿಂದ ಈ ಗ್ರಂಥವು ಆಂಧ್ರದೇಶದಿಂದ ಅವತರಿಸಿತೆಂದು ನಿರ್ಣಯಿಸುವದೇ ಸಮಂಜಸವಾಗಿದೆ. ಇದು ಸ್ವಲ್ಪ ಸೂಕ್ಷ್ಮಾಂಶವಾದುದರಿಂದ ಆಧುನಿಕರಾದ ಪೌರಾ

ಣಕರೂ ಕೆಲವು ಕರ್ನಾಟಕ ಲೇಖಕರೂ ರೇಣುಕ ರೇವಣಸಿದ್ಧ ಎಂಬ ಹೆಸರುಗಳುಳ್ಳ ಅನೇಕ ವ್ಯಕ್ತಿಗಳನ್ನು ತಿಳಿಯದೆ ತದ್ವೈವಾದೆಯ ರೇವಣ ಸಿದ್ಧನಿಗೆ ಗಂಟುಹಾಕಿಕೊಂಡು ರೇಣುಕಾಚಾರ್ಯನ ಕಾಲವನ್ನು ೧೨ನೆಯ ಶತಾಬ್ದವೆಂದು ಬರೆದುಕೊಳ್ಳುತ್ತಿದ್ದಾರೆಯೇ ಹೊರತು ಇದು ಐತಿಹಾಸಿಕ ಸತ್ಯವಲ್ಲ. ರೇಣುಕನ ಉಪದೇಶರೂಪವಾಗಿ ಶಿವಯೋಗಿ ಶಿವಾಚಾರ್ಯನಿಂದ ರಚಿತವಾದ ಸಿದ್ಧಾಂತಶಿಖಾಮಣಿಯು ೧೦ನೆಯ ಶತಾಬ್ದದಲ್ಲಿಯೇ ಪ್ರಸಿದ್ಧವಾಗಿದ್ದು ವಿದ್ವದಾದರವನ್ನು ಪಡೆದಿದ್ದಿತೆಂಬುದಕ್ಕೆ ಶ್ರೀಕಂಠ ಶ್ರೀಕರಭಾಷ್ಯಗಳೇ ಸಾಕ್ಷಿಯಾಗಿವೆ.

ಶ್ರೀಕರಭಾಷ್ಯದಲ್ಲಿಯ ಸಿದ್ಧಾಂತವು "ಬಸವನ ಅನಂತರದಲ್ಲಿ ವಿಸ್ತರಿಸಿದ ವೀರಶೈವಸಿದ್ಧಾಂತದಿಂದ ಭೇದಿಸುತ್ತದೆ." ಎಂಬ ವಿಚಿತ್ರಧೋರಣೆಯನ್ನು ಅವರು ಬೈಲಿಗೆ ಹಾಕಿದ್ದಾರೆ. ಶ್ರೀಮಾನ್ ನಾರಾಯಣರಾಯರು ದಯಮಾಡಿ ಮೂಲಗ್ರಂಥಗಳಾದ ಶಿವಾಗಮ ಸಿದ್ಧಾಂತ ಶಿಖಾಮಣಿಗಳನ್ನೂ ಶ್ರೀಕರಭಾಷ್ಯವನ್ನೂ ಸ್ವತಃ ನೋಡಿ ಉಭಯ ಸಿದ್ಧಾಂತಗಳಿಗೆ ಇರುವ ವಿರೋಧವನ್ನು ಆಯಾ ಗ್ರಂಥಗಳ ಸ್ಥಲ ನಿರ್ದೇಶಪೂರ್ವಕವಾಗಿ ಪ್ರತಿಪಾದಿಸುವದಾದರೆ ತಕ್ಕ ಸಮಾಧಾನವನ್ನು ಬರೆಯಬಹುದು. ಹಯವದನರಾಯರ ಉಪೋದ್ಘಾತವನ್ನೇ ಅನುಸರಿಸಿ ಬರೆಯುತ್ತ ಹೋದರೆ ಪ್ರಯೋಜನವಾಗಲಾರದು. ಶ್ರೀಕರಭಾಷ್ಯದಲ್ಲಿ ಹೇಳಲ್ಪಟ್ಟ ಸೃಷ್ಟಿ, ಸ್ಥಿತಿ, ಲಯ, ವಾಚಿಕ, ಕಾಯಿಕ, ಮಾನಸಿಕ ಎಂಬ ಷಟ್‌ಸ್ಥಲಗಳು ವೀರಶೈವ ಗ್ರಂಥಗಳಲ್ಲಿ ದೊರೆಯದೆ 'ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಎಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿರುವದರಿಂದ ಪ್ರಾಚೀನ ವೀರಶೈವ ಮತಕ್ಕಿಂತಲೂ ಅರ್ವಾಚೀನ ವೀರಶೈವಮತವು ಬೇರೆ ಇದೆಯೆಂದು ನಾರಾಯಣರಾಯರು ಬರೆದಿದ್ದಾರೆ. ಇದು ಅತ್ಯದ್ಭುತವಾದ ಪೂರ್ವಪಕ್ಷವೆಂದು ಅವರು ಸಂಬಿರಬಹುದು. ಭಾಷ್ಯದಲ್ಲಿ ನಿರೂಪಿಸತಕ್ಕ ವಿಷಯಗಳಾವುವೆಂಬುದು ಅವರಿಗೆ ಬೇಕಾಗಿಲ್ಲ. ತಾವು ಕೇಳಿದ ಪ್ರಶ್ನೆಗಳಿಗೆ ಭಾಷ್ಯದಲ್ಲಿ ಉತ್ತರ ದೊರೆತರೆ ಅದನ್ನು ವೀರಶೈವ ಗ್ರಂಥವನ್ನಾಗಿ ಸ್ವೀಕರಿಸಲು ಅವರು ಸಂಸಿದ್ಧರಾಗಿರುವರು. ಇದು ಸಾಮಾನ್ಯವಾದ ಉಪಕಾರವಲ್ಲ. ಮನುಸ್ಮೃತಿಯಲ್ಲಿರುವ ಸ್ಮಾರ್ತಪ್ರಕ್ರಿಯೆಗಳಿಲ್ಲ ಶಂಕರಭಾಷ್ಯದಲ್ಲಿಯೂ ಪಾಂಚರಾತ್ರಾಗಮಪ್ರಕ್ರಿಯೆಗಳಿಲ್ಲ ರಾಮಾನುಜಭಾಷ್ಯದಲ್ಲಿಯೂ

ಪ್ರತಿಪಾದಿಸಲ್ಪಟ್ಟಿವೆ ಎಂಬ ನಂಬಿಕೆಯಿಂದ ಶಿವಾಗಮದ ಪ್ರಕ್ರಿಯೆಗಳಾದ ಏಕೋತ್ತರ ಶತಸ್ಥಲಗಳೂ ಲಿಂಗಧಾರಣವಿಧಾನವೂ ಪಾದಪೂಜಾ ಪದ್ಧತಿಯೂ ಸಮಾಧಿಮಾಡುವ ಸಲಕರಣಗಳೂ ಶ್ರೀಕರಭಾಷ್ಯದಲ್ಲಿ ವಿವರಿಸಲ್ಪಡದಿರುವದರಿಂದ ಅದು ಅರ್ವಾಚೀನ ವೀರಶೈವರ ಗ್ರಂಥವಲ್ಲವೆಂದು ನಿರ್ಣಯಿಸತಕ್ಕ ಮಹಾನುಭಾವರಿಗೆ ಹೇಳತಕ್ಕುದಿಲ್ಲ. ಶ್ರೀಕರಭಾಷ್ಯವು ಶಿವತತ್ತ್ವ, ಭೇದಾಭೇದ (ಶಕ್ತಿವಿಶಿಷ್ಟಾದ್ವೈತ), ಲಿಂಗಧಾರಣ ಶಿವಜಗತ್ಕಾರಣತ್ವ, ಶಿವಾಗಮ ಪ್ರಾಮಾಣ್ಯಗಳೆಂಬ ಮುಖ್ಯವಾದ ವಿಷಯಗಳನ್ನು ಸಿದ್ಧಾಂತಗೊಳಿಸಲು ಹುಟ್ಟಿರುವದೇ ಹೊರತು ವೀರಶೈವರ ಎಲ್ಲ ವಿಷಯಗಳನ್ನೂ ಸಂಗ್ರಹಿಸುವದಕ್ಕಲ್ಲ. ಶಿವಪರಬ್ರಹ್ಮನ ಸವಿಶೇಷತ್ವವನ್ನೂ ಸರ್ವಕರ್ತೃತ್ವವನ್ನೂ ಸಿದ್ಧಾಂತಗೊಳಿಸುವ ಪ್ರಸಂಗದಲ್ಲಿ ಅವನಿಗೆ ಸೃಷ್ಟಿಸ್ಥಿತಿಲಯವಾಚಕ ಕಾಯಿಕ ಮಾನಸಿಕ (ಇಚ್ಛಾಕ್ರಿಯಾಜ್ಞಾನ) ಗಳೆಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿವೆ. ಅಂದರೆ ಶಿವನ ವಿವಿಧ ಶಕ್ತಿಗಳೇ ಜಗತ್ತಿಗೆ ಉಪಾದಾನಕಾರಣವೆಂಬುದು ನಿರೂಪಿಸಲಾಗಿದೆ. ಇವು ಆರೂ ಶಿವನ ಶಕ್ತಿಗಳೇ ಹೊರತು ಬೇರಲ್ಲ. ಇವು ಸಹಜವಾಗಿ ಸೃಷ್ಟಿಸ್ಥಿತಿಲಯತಿರೋಧಾನ ಅನುಗ್ರಹಗಳೆಂಬ ಶಿವಾಗಮಗಳ ಪಂಚಕೃತ್ಯಗಳಲ್ಲಿ ಅಂತರ್ಗತವಾಗಿವೆ. ಇವನ್ನೇ ಶ್ರೀಕರ ಭಾಷ್ಯಕಾರನು ಸ್ಥಲಗಳೆಂದು ಹೇಳಿದ್ದಾನೆ. ಇದು ಆತನಿಗೆ ಬಹಳ ಇಷ್ಟವಾದ ವಿಷಯವಾದುದರಿಂದ ಶಿವನಿಗೆ "ಅದ್ವಿತೀಯ ಷಟ್‌ಸ್ಥಲ ಪರಶಿವಬ್ರಹ್ಮ" ಎಂಬ ವಿಶೇಷಣವನ್ನು ಅನೇಕಸಲ ಉಪಯೋಗಿಸಿದ್ದಾನೆ. ಈ ವಿಶೇಷಣವು ಶಿವನ ಹೊರತು ಮತ್ತಾರಿಗೂ ಸಲ್ಲತಕ್ಕುದಲ್ಲವೆಂಬ ಅಭಿಪ್ರಾಯವನ್ನು "ಅದ್ವಿತೀಯ" ಶಬ್ದದಿಂದ ಶ್ರೀಕರಭಾಷ್ಯಕಾರನು ಸಾರಿದ್ದಾನೆ. ಈ ಪ್ರಸಂಗದಲ್ಲಿ ಜೀವನು ಭಕ್ತಾದಿ ಷಟ್‌ಸ್ಥಲಕ್ರಮವನ್ನು ಅನುಸರಿಸಿ ದೇವತ್ವವನ್ನು ಸಂಪಾದಿಸುವ ಪದ್ಧತಿಯು ಶ್ರೀಕರಭಾಷ್ಯಕಾರನಿಂದ ನಿರೂಪಿತವಾಗಿಲ್ಲ. ಆದರೆ ಭಾಷ್ಯಕಾರನು ಈ ವಿಷಯವನ್ನೇ ಹೇಳಲ್ಲವೆಂಬುದು ಅಸಂಬದ್ಧ ವಿಧಾನವಾಗಿದೆ. ಶ್ರೀಕರಭಾಷ್ಯದ ಪ್ರಥಮಾಧ್ಯಾಯ ದ್ವಿತೀಯ ಸೂತ್ರದ ಕಡೆಯ ಭಾಷ್ಯದಲ್ಲಿ —

"ಯದ್ಭಕ್ತಸ್ಥಲಮಿತ್ಯಾಹುಸ್ತತ್ಸರ್ವಜ್ಞತ್ವಮುಚ್ಯತೇ ।
ಯನ್ಮಾಹೇಶ ರಕಂ ನಾಮ ಸಾ ತೃಪ್ತಿರ್ಮಮ ಶಾಂಕರಿ ॥
ಯತ್ಪ್ರಸಾದಾಭಿಧಂ ನಾಮ ತದ್ಬೋಧೋ ಮೇ ನಿರಂಕುಶಃ ।
ಯತ್ಪ್ರಾಣಲಿಂಗಕಂ ನಾಮ ತತ್ಸ್ವತಂತ್ರ್ಯಮುದಾಹೃತಂ ॥

ಯದಸ್ತಿ ಶರಣಂ ನಾಮ ಹ್ಯಲುಪ್ತಾ ಶಕ್ತಿರುಚ್ಯತೇ।
ಯದೈಕ್ಯಸ್ಥಲಮೂರ್ಧ್ವಸ್ಥಂ ಹ್ಯನಂತಾ ಶಕ್ತಿರುಚ್ಯತೇ॥"
(ಇತಿ ಜನ್ಮಾದ್ಯಧಿಕರಣಾಂತೇ)

ಎಂದು ಭಕ್ತ, ಮಾಹೇಶ್ವರ, ಪ್ರಸಾದ, ಪ್ರಾಣಲಿಂಗ, ಶರಣ, ಐಕ್ಯ, ಸ್ಥಳಗಳನ್ನು ಭೇರೀನಿನಾದದಿಂದ ಹೇಳಿರುವುದು ಪುಸ್ತಕ ನೋಡದವರಿಗೆ ಗೋಚರವಾಗುವುದಿಲ್ಲವಷ್ಟೆ! ವೀರಶೈವನಿಗೆ ಆರು ಸ್ಥಲಗಳೇ ಅಲ್ಲ. ತದಂತರ್ಗತಗಳಾವ ನೂರೊಂಮ ಸ್ಥಲಗಳವೆ ಇವೆಲ್ಲವೂ ಶಿವಾಗಮುಗಳಲ್ಲಿಯೂ ಸಿದ್ಧಾಂತಶಿಖಾಮಣಿಯಲ್ಲಿಯೂ ಹೇಳಿರುವದನ್ನು ತಿಳಿಯದೆ "ಈ ವಿವರಣವು ಎಂದಿನಿಂದ ಬರುತ್ತಿದೆಯೋ ಹೇಳಲಿಕ್ಕೆ ಆಧಾರಗಳಿಲ್ಲ" ವೆಂದು ನಾರಾಯಣರಾಯರು ಚಿಂತಿಸುತ್ತಿದ್ದಾರೆ. ಅವರ ಈ ಬರಹವು ಕೇವಲ ನಿರಾಧಾರವಾಗಿದೆ. ವೀರಶೈವಮತದ ಗ್ರಂಥಗಳನ್ನು ಅವಲೋಕಿಸದೆ ಕೇವಲ ಊಹೆಗಳಿಂದಲೇ ಮತಚರಿತ್ರೆಯನ್ನೂ ತತ್ತ್ವಗಳನ್ನೂ ನಿರೂಪಿಸುವುದು ಸುಲಭವಲ್ಲ.

ಶಿವತತ್ತ್ವಸಾರವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನು ರಚಿಸಿರುವುದು ಆಂಧ್ರದೇಶದಲ್ಲಿ ಸುಪ್ರಸಿದ್ಧವಾದ ವಿಷಯ. ಅದನ್ನು ಪ್ರಕಟಿಸಿದ ಆಂಧ್ರಸಾಹಿತ್ಯ ಕರಿಷತ್ತಿನವರೂ ಶ್ರೀ ಕೊ॥ ಲಕ್ಷ್ಮಣರಾಯರಂತಹ ಉದ್ದಾಮ ಪರಿಶೋಧಕರೂ ಅದನ್ನು ಪಂಡಿತಾರಾಧ್ಯರ ಕೃತಿಯೆಂದೇ ನಿರ್ಣಯಿಸಿದ್ದಾರೆ. ಆ ಗ್ರಂಥದಲ್ಲಿ ಸ್ವತಃ ಮಲ್ಲಿಕಾರ್ಜುನ ಪಂಡಿತನೇ—

ಒಂಡೇನಿ ಮಲ್ಲಿಕಾರ್ಜುನ
ಪಂಡಿತುಡನ ನುಂಡುಕಂಟಿ ಪ್ರಮಥಲಲೋ ನೆ
ನ್ನಂಡೊಕೊ ನೀ ಯಾಜ್ಞೋನ್ನತಿ
ನುಂತಂ ಗಾಂತು ನನಿ ಕೋರುಜುಂಡುದು ರುದ್ರಾ

ಎಂಬ ಪದ್ಯದಿಂದ ತಾನೇ ಈ ಶಿವತತ್ತ್ವಸಾರವನ್ನು ರಚಿಸಿದ್ದಾನೆಂಬುದನ್ನು ಸ್ಪಷ್ಟಗೊಳಿಸಿದ್ದಾನೆ. ಆತನ ಅನಂತರದಲ್ಲಿದ್ದ ಪಾಲ್ಕುರಿಕಿ ಸೋಮನಾಥನು ತನ್ನ ಪಂಡಿತಾರಾಧ್ಯ ಚರಿತ್ರೆಯ ದೀಕ್ಷಾಪ್ರಕರಣದಲ್ಲಿ—

ಅಂತ ಬಂಡಿತಮಲ್ಲಿಕಾರ್ಜುನ ಪ್ರಭುವು. . . .
ಶಿವತತ್ತ್ವಸಾರ ಸಂಚಿತ ಮಹಾಮಹಿಮ
'ಶಿವತತ್ತ್ವಸಾರ'ರ್ಮ ಶಿವಕೃತಿ ದೊಗಡು

ಎಂಬ ಅಂಶದಿಂದಲೂ ಚತುರ್ವೇದಸಾರದಲ್ಲಿಯ ಮತ್ತೊಂದು ಪದ್ಯದಿಂದಲೂ ಮಲ್ಲಿಕಾರ್ಜುನ ಪಂಡಿತಾರಾಧ್ಯನೇ ಆ ಗ್ರಂಥವನ್ನು ರಚಿಸಿದ್ದಾನೆಂದು ಹೇಳಿದ್ದಾನೆ. ಆಂಧ್ರಲೋಕವೆಲ್ಲವೂ ಇದನ್ನೇ ನಿಜವೆಂದು ತಿಳಿದಿದೆ. ಇದೇ ಡಾ. ನಾರಾಯಣರಾಯರೂ ಇತ್ತೀಚೆಗೆ ತಾವು ಪ್ರಕಟಿಸಿದ ಆಂಧ್ರ ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯಲ್ಲಿ (ಪುಟ ೭೯) ಶಿವತತ್ತ್ವಸಾರವನ್ನು ಪಂಡಿತಾರಾಧ್ಯನ ಕೃತಿಯೆಂತಲೇ ಬರೆದಿದ್ದಾರೆ. ಆದರೆ ಪ್ರಬುದ್ಧ ಕರ್ನಾಟಕದ ಗತಲೇಖದಲ್ಲಿ "ಮಲ್ಲಿಕಾರ್ಜುನ ಪಂಡಿತಾರಾಧ್ಯನು ಶಿವತತ್ತ್ವಸಾರವನ್ನು ಬರೆಯಲಿಲ್ಲವೆಂದೇ ನನ್ನ ಅಭಿಪ್ರಾಯ" ವೆಂದು ಸಾರಿದ್ದಾರೆ. ೧೨ನೆಯ ಶತಾಬ್ದಿಯ ಇಷ್ಟು ಸುಪ್ರಸಿದ್ಧವಾದ ಗ್ರಂಥವನ್ನು ೧೪ನೆಯ ಶತಮಾನದ ವರೆಗೆ ಎಳೆಯುವದಕ್ಕಾಗಿ ಅವರು ತೋರಿಸಿದ ಯುಕ್ತಿಯು ಹೀಗಿದೆ— "ಸೋಮನಾಥನ ಪಂಡಿತಾರಾಧ್ಯ ಚರಿತ್ರದಲ್ಲಿ ಶಿವತತ್ತ್ವಸಾರವೆಲ್ಲಾ ಪ್ರತ್ಯಕ್ಷರವೂ ಸೇರಿದೆ. ಸೋಮನಾಥನಂತಹ ಮಹಾತ್ಮರಿಗೆ ಗ್ರಂಥಚೌರ್ಯವನ್ನು ಆಪಾದಿಸುವದು ನ್ಯಾಯವಲ್ಲ. . . . ತಾನೇ ತನ್ನ ಗ್ರಂಥದಿಂದ ಕೆಲವು ಭಾಗಗಳನ್ನು ತೆಗೆದು ಪಂಡಿತಾರಾಧ್ಯನ ಹೆಸರಿನಿಂದ ಪ್ರಕಟಿಸಿರಬಹುದೆಂದು ನನಗೆ ತೋರುತ್ತದೆ."

ಸೋಮನಾಥನಂತಹ ಮಹಾತ್ಮನು ಗ್ರಂಥಚೌರ್ಯ ಮಾಡುವುದು ಅನುಚಿತವಾಗಿದ್ದರೆ, ತಾನು ಸೃಷ್ಟಿಸಿದ ಗ್ರಂಥವನ್ನು ಸುಪ್ರಸಿದ್ಧ ಪಂಡಿತ ಶಿರೋಮಣಿಯಾದ ಮಲ್ಲಿಕಾರ್ಜುನ ಪಂಡಿತನ ಹೆಸರಿನಿಂದ ಪ್ರಕಟಿಸಿದನೆಂಬುದು, "ಮದ್ಯಪಾನ ಮಾಡಿಲ್ಲ, ಮಾಂಸಭಕ್ಷಣ ಮಾಡಿದ್ದಾನೆ" ಎಂಬ ಹಾಗಿದೆ. ಅಖಂಡ ಪಂಡಿತನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನಿಂದ ಅನೇಕ ಗ್ರಂಥಗಳು ರಚಿಸಲ್ಪಟ್ಟಿದ್ದರೂ ಸೌಭಾಗ್ಯವಶದಿಂದ ಶಿವತತ್ತ್ವಸಾರವೊಂದು ಮಾತ್ರ ಲಭಿಸಿದೆ. ಅದು ಶೈಲಿಯಲ್ಲಿಯೂ ವಿಷಯನಿರೂಪಣ ಪದ್ಧತಿಯಲ್ಲಿಯೂ ಪ್ರತ್ಯೇಕತೆಯುಳ್ಳದ್ದಾಗಿ ಸೋಮನಾಥನ ಕವಿತೆಗಿಂತಲೂ ಭಿನ್ನತೆಯನ್ನು ಸ್ಪಷ್ಟಗೊಳಿಸಲು ಸಮರ್ಥವಾಗಿದೆ. ಅದನ್ನು ಸೋಮನಾಥನು ರಚಿಸಿರುವನೆಂಬುದು ಕೇವಲ ಸಾಹಸದ ಮಾತು. ಅದನ್ನು ನೋಡಿಯೇ ಸೋಮನಾಥನು ಅನುಭವಸಾರವನ್ನೂ ಕಾಕತಿ ಗಣಪತಿ ದೇವನು ಶಿವಯೋಗಸಾರವನ್ನೂ ರಚಿಸಿದ್ದಾರೆ. ಅನುಭವಸಾರವೆಂಬ ಕೃತಿಯಲ್ಲಿಯೇ ಶಿವತತ್ತ್ವಗಳನ್ನು ಸೋಮನಾಥನು

ನಿರೂಪಿಸಿರುವಾಗ ಮತ್ತೊಂದು "ಶಿವತತ್ತ್ವಸಾರ"ವನ್ನು ಬರೆದು ಪಿಷ್ಟ ಪೇಷಣಮಾಡುವ ಅವಶ್ಯಕತೆಯೇ ಇಲ್ಲ. ಸೋಮನಾಥನು ಆಂಧ್ರಭಾಷಾ ಪಾರಂಗತನೂ ವೇದವೇದಾಂತಾಭಿಜ್ಞನೂ ಆದ ಪ್ರೌಢಕವಿಯಾಗಿದ್ದಾನೆ. ಅವನು ವೇದೋಪನಿಷತ್ಸಾರಗಳನ್ನು ಹೇಳುವಾಗ ತನ್ನ ಕವಿತೆಯಲ್ಲಿ ಆಯಾ ವೇದವಾಕ್ಯಗಳನ್ನೇ ಹೊಂದಿಸಿದ್ದಾನೆ. ಇಂತಹ ಪ್ರಚಂಡ ಪ್ರತಿಭೆಯಿಂದ ಆತನ ದ್ವಿಪದ ಕಾವ್ಯವು ತುಂಬಿತುಳುಕುತ್ತಿದೆ. ಆದರಂತೆಯೇ ತನ್ನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಶ್ರೀಮಲ್ಲಿಕಾರ್ಜುನ ಪಂಡಿತಾರಾಧ್ಯನ ಉಪದೇಶ ವಿಶೇಷಗಳನ್ನು ತಿಳಿಸುವದಕ್ಕಾಗಿ ಆತನ ಶಿವತತ್ವಸಾರವನ್ನೇ ಆಯಾ ವಾಕ್ಯಗಳಲ್ಲಿ ಸಂಗ್ರಹಿಸಿ ಸೋಮನಾಥನು ನಿರೂಪಿಸುತ್ತ ಗ್ರಂಥರಚನೆ ಮಾಡಿರುವದು ಸಯುಕ್ತಿಕವಾಗಿಯೂ ಸಂಪ್ರದಾಯಶುದ್ಧವಾಗಿಯೂ ಇವೆ. ಪಂಡಿತಾರಾಧ್ಯನ ಸಿದ್ಧಾಂತವನ್ನು ಪಂಡಿತಾರಾಧ್ಯನ ವಾಕ್ಯಗಳಿಂದಲೇ ಹೇಳಿರುವ ಪದ್ಧತಿಯು ಪ್ರಶಂಸನೀಯವಾದುದಲ್ಲವೆ? ಇವನ್ನೇ ಗ್ರಂಥಜೌರ್ಯವೆಂದು ಹೇಳುವದಾದರೆ ಪ್ರಸಿದ್ಧ ಆಚಾರ್ಯರ ಗ್ರಂಥಗಳನ್ನೆಲ್ಲ ಆಧುನಿಕ ಕಲ್ಪಿತಗಳೆನ್ನಬಹುದು. ವಿದ್ಯಾರಣ್ಯರ ಪಂಚದಶ್ಯಾದಿ ಗ್ರಂಥಗಳಲ್ಲಿ ಶಾಂಕರಭಾಷ್ಯದ ಅನೇಕ ಸಿದ್ಧಾಂತ ವಾಕ್ಯಗಳು ತುಂಬಿರುವದರಿಂದ ವಿದ್ಯಾರಣ್ಯರೇ ಶಂಕರಭಾಷ್ಯವನ್ನು ಹುಟ್ಟಿಸಿರಬಹುದಲ್ಲವೆ! ಅಪ್ಪಯ್ಯದೀಕ್ಷಿತರ ರತ್ನತ್ರಯಪರೀಕ್ಷೆ, ಶಿವಾದ್ವೈತನಿರ್ಣಯ, ಶಿಖಂಡೀವಾಲಾ ಮೊದಲಾದ ಗ್ರಂಥಗಳಲ್ಲಿ ಶ್ರೀಕಂಠ ಶಿವಾಚಾರ್ಯನ ಭಾಷ್ಯಪುಕ್ತಿಗಳೂ ಸಿದ್ಧಾಂತವೂ ತುಂಬಿರುವದರಿಂದ ಶ್ರೀಕಂಠಭಾಷ್ಯವನ್ನು ಅಪ್ಪಯ್ಯದೀಕ್ಷಿತರೇ ಹುಟ್ಟಿಸಿರಬಹುದು. ಹೀಗೆಯೇ ಅನೇಕ ಗ್ರಂಥಗಳನ್ನು ತಲೆಕೆಳಗೆ ಮಾಡಬಹುದು.

ಶಿವತತ್ತ್ವಸಾರದ ಅಧುನಿಕತ್ವವನ್ನು ಹೇಳುವದರಲ್ಲಿ ಒಂದು ರಹಸ್ಯವಿದೆ. ಆ ಗ್ರಂಥದಲ್ಲಿ ಗುರುಜಂಗಮ ನಾಮಗಳೂ ಶ್ರೀಪತಿ ಪಂಡಿತ ನಾಮವೂ ಬಂದಿವೆ. ಇವು ಶ್ರೀಪತಿ ಪಂಡಿತನ ಮತ್ತು ವೀರಶೈವ ಮತದ ಕಾಲವನ್ನು ೧೫ನೆಯ ಶತಮಾನದಕ್ಕಿಂತಲೂ ಹಿಂದೆ ಎಂದು ನಿರ್ಣಯಿಸಲು ಮುಖ್ಯ ಸಹಾಯಕಾರಿಗಳಾಗಿವೆ. ಇದು ರಾಯರಿಗೆ ಇಷ್ಟವಿಲ್ಲ. ಹೊರಗೆ ನೋಡುವದಕ್ಕೆ ಹಯವದನರಾಯರು ನಿರ್ಣಯಿಸಿದ ಶ್ರೀಕರಭಾಷ್ಯದ ಕಾಲವನ್ನು ಖಂಡಿಸಿದ ಹಾಗೆ ನಟಿಸಿ ಶಿವತತ್ತ್ವಸಾರವು ೧೫ನೆಯ ಶತಮಾನದಲ್ಲಿ ಹುಟ್ಟಿದಂತೆ ಹೇಳಿದರೆ ಶ್ರೀಕರಭಾಷ್ಯ ಶ್ರೀಪತಿಪಂಡಿತರ ಕಾಲವೂ ಸಂಶಯಕಲ್ಲೋಲವಾಗುವದಷ್ಟೆ? ನಾರಾಯ

ಣರಾಯರ ಈ ವೈಖರಿಯು ಚರಿತ್ರೆ ಪರಿಶೋಧನೆಯಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗುವುದೆಂಬುದನ್ನು ಸತ್ಯಶೀಲರಾಲೋಚಿಸಲಿ!

ಶಿವತತ್ತ್ವಸಾರದ ಕನ್ನಡ ಅನುವಾದದ ಪ್ರತಿಯೂ ಇತ್ತೀಜೆಗೆ ದೊರೆತಿದೆ. ಅದರ ಬಗ್ಗೆ ಶ್ರೀ ವೇ. ಪ್ರಭಾಕರಶಾಸ್ತ್ರಿಗಳ ಲೇಖವನ್ನು ನಮ್ಮ ವಿಭೂತಿ ವರ್ಷ ೨, ಸಂಚಿಕೆ ೪ರಲ್ಲಿ ನೋಡಬಹುದು. ನಾನು ಹಿಂದೆ ಉದಹರಿಸಿದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವಸಾರದ ತೆಲುಗು ಪದ್ಯಕ್ಕೆ—

ಧರೆಯೊಳಗೆ ಮಲ್ಲಿಕಾರ್ಜುನ ವರಪಂಡಿತನೆನಿಸುತಿಹುದರಿಂ ನಿನ್ನಾಜ್ಞಾ
ಭರಮೆಸೆಯಲ್ ಪ್ರಮಥರೊಳಾ ನಿರಲೆಂದೀಕ್ಷಿಸುವೆ ನಿಮ್ಮ ಬಯಸುವೆ
ನೀಶಾ ॥

ಎಂಬ ಕನ್ನಡ ಪದ್ಯವು ಕನ್ನಡ ಶಿವತತ್ತ್ವಸಾರದಲ್ಲಿಯೂ ಇರುವದರಿಂದ ಆಂಧ್ರ ಶಿವತತ್ತ್ವಸಾರವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನೇ ವಿರಚಿಸಿದ್ದಾನೆಂಬುದು ಸಿದ್ಧಾಂತವೇ ಸರಿ. ಕನ್ನಡ ಶಿವತತ್ತ್ವಸಾರದ ಕರ್ತೃತ್ವದ ವಿಷಯದಲ್ಲಿ ಇನ್ನೂ ವ್ಯಕ್ತಿನಿರ್ಣಯವಾಗಿಲ್ಲ. ನಾರಾಯಣರಾಯರಿಗೂ ಈ ವಿಷಯ ತಿಳಿಯುವದಕ್ಕಾಗಿ 'ವಿಭೂತಿ' ಸಂಚಿಕೆ ಕಳುಹಿಸಲಾಗಿದೆ.

"ಬಸವನಿಗೆ ಪೂರ್ವದಲ್ಲಿ ಈ ಅರ್ವಾಚೀನರೂಪದಿಂದ ವೀರಶೈವವು ಇತ್ತೆಂಬುದಕ್ಕೆ ಯಾವ ಆಧಾರವೂ ಇಲ್ಲ" ಎಂದು ಬರೆಯುವ ರಾಯರಿಗೆ ಮತ್ತೊಮ್ಮೆ ವೀರಶೈವ ಮತಗ್ರಂಥಗಳನ್ನು ಸರಿಯಾಗಿ ಪರಿಶೀಲಿಸಿ ತಮ್ಮ ಊಹೆಗಳನ್ನು ಸರಿಪಡಿಸಿಕೊಳ್ಳಬೇಕೆಂದು ನಿವೇದಿಸುತ್ತೇನೆ.

ಇನ್ನು ವೀರಶೈವರ ಕನ್ನಡ ವಚನಗ್ರಂಥಗಳ ಹೆಸರುಗಳನ್ನೇನೋ ಅವರು ಬಹಳವಾಗಿ ಉದಾಹರಿಸಿದ್ದಾರೆ. ಆದರೆ ಅವುಗಳಲ್ಲಿಯೂ ಕೂಡ "ಬರೀಭಕ್ತಿ ಶಿವಸಾಮರಸ್ಯಯಾಚನೆಗ"ಳಿದ್ದಂತೆ ರಾಯರು ಭಾವಿಸಿದ್ದರಿಂದ ಶ್ರೀ ರಾಯರು ಅವುಗಳನ್ನೂ ನೋಡದೆ ಅವುಗಳಲ್ಲಿರುವ ವಿಸ್ತಾರವಾದ ಷಟ್‌ಸ್ಥಳ— ಅಷ್ಟಾವರಣಾದಿಗಳನ್ನು ತಿಳಿದಿಲ್ಲವೆಂದು ಗೊತ್ತಾಗುತ್ತದೆ. ವಚನಗಳ ಕಾಲದ ವಿಷಯದಲ್ಲಿ ಒಂದು ತೊಡಕಿರುವುದೇನೋ ಸತ್ಯ. ಶ್ರೀರಂಗನಾಥ ದಿವಾಕರರು ತಮ್ಮ 'ವಚನಶಾಸ್ತ್ರರಹಸ್ಯ'ದಂತಹ

ಕೆಲ್ಪೊತ್ತಿಗೆಯಲ್ಲಿಯೂ ವಚನೆಗಳ ಕಾಲದ ವಿಷಯವಾಗಿ ಜಾಗ್ರತೆಯಿಂದ ಮೌನವಹಿಸಿದ್ದಾರೆ. ವಚನಗಳ ವಿಷಯದಲ್ಲಿ ಪರಿಶ್ರಮಪಡುತ್ತಲಿರುವವರೂ ಅವುಗಳ ಕಾಲವನ್ನು ನಿಷ್ಕರ್ಷವಾಗಿ ಹೇಳುತ್ತಿಲ್ಲ. ಶ್ರೀ ಬಸವಾದಿಗಳ ಕಾಲದಲ್ಲಿಯೂ ಅವರಿಂದ ಹೇಳಲ್ಪಟ್ಟ ವಚನಗಳು ಪ್ರಚಾರದಲ್ಲಿದ್ದು ಅನಂತರದಲ್ಲಿ ಕ್ರಮಕ್ರಮವಾಗಿ ೧೬ನೆಯ ಶತಮಾನದ ಪ್ರಾಂತದಲ್ಲಿ ಈಗ ಕಾಣುವ ವಚನಗಳು ಪೂರ್ತಿಯಾಗಿ ಗ್ರಂಥರೂಪಕ್ಕೆ ಬಂದಿರಬಹುದೆಂದು ಕೆಲವು ಕಾರಣಗಳಿಂದ ನಾನು ನಂಬಿದ್ದೇನೆ. ಇದು ಸರಿಯಲ್ಲವೆಂದು ಸಪ್ರಮಾಣವಾಗಿ ಯಾರಾದರೂ ನಿರೂಪಿಸಿದರೆ ಆದರದಿಂದ ಸ್ವೀಕರಿಸುವದರಲ್ಲಿ ನನಗೆ ಸಂಕೋಚವಿಲ್ಲ. ಆದರೆ ಪ್ರಾಚೀನರ ಮೂಲವಿಲ್ಲದಲೇ ಇತ್ತೀಚೆಗೆ ಯಾರೋ ಸಂಪೂರ್ಣ ಹೊಸದಾಗಿ ರಚಿಸಿ ಬಸವಾದಿಗಳ ಹೆಸರಿನಿಂದ ಪ್ರಸಿದ್ಧ ಮಾಡಿದ್ದಾರೆಂಬ ನಾರಾಯಣರಾಯರ ಸಿದ್ಧಾಂತವು ಮಾತ್ರ ಪ್ರಾಮಾದಿಕವೆಂದು ಹೇಳಬಹುದು. ಈಗಿನ ಗ್ರಂಥಗಳಲ್ಲಿಯ ಕೆಲವು ವಚನಗಳು ಆಯಾ ಪ್ರಾಚೀನ ವ್ಯಕ್ತಿಗಳಿಂದಲೇ ಹೇಳಲ್ಪಟ್ಟಿರಬೇಕೆನ್ನುವಷ್ಟು ಸ್ಫೂರ್ತಿಯನ್ನೊಳಗೊಂಡಿವೆ.

"ವೀರಶೈವಾಚಾರ್ಯ ಪಂಚಕದಲ್ಲಿ ಕೆಲವರು ಬಸವನಿಗೆ ಪೂರ್ವಿಕರು, ಕೆಲವರು ಸಮಕಾಲಿಕರು, ಕೆಲವರು ಈಚೆಯವರು" ಎಂದು ರಾಯರು ಹೇಳಿಬಿಟ್ಟಿದ್ದಾರೆ. ಇದು ಕನ್ನಡ ಕವಿಚರಿತೆಯ ಸಂಗ್ರಹಾನುವಾದವೆಂತಲೂ ಹೇಳಬಹುದು.

ಶ್ರೀಕರಭಾಷ್ಯದ ಆದಿಯಲ್ಲಿ ಪ್ರಸಿದ್ಧನಾದ ರೇಣುಕಾಚಾರ್ಯನನ್ನೂ ತನ್ನ ಗುರುವಾದ ಏಕೋರಾಮಾಚಾರ್ಯನನ್ನೂ ಶ್ರೀಪತಿಪಂಡಿತನು ಸ್ತುತಿಸಿದ್ದಾನೆ. ದ್ವಿತೀಯಾಧ್ಯಾಯ ತೃತೀಯ ಪಾದದ "ಸಮಾಧ್ಯಭಾವಾಚ್ಚ ೪೬" ಎಂಬ ಸೂತ್ರದ ಭಾಷ್ಯದಲ್ಲಿ ಮರುಳಸಿದ್ಧ (ದಾರುಕಾಚಾರ್ಯ) ನನ್ನು ಹೇಳಿದ್ದಾನೆ. ರೇವಣ-ಮರುಳ-ಏಕೋರಾಮರ ಹೆಸರುಗಳು ಭಾಷ್ಯದಲ್ಲಿ ನಾಲ್ಕಾರು ಸಲ ಬಂದಿರುವದರಿಂದ ಇವರು ಶ್ರೀಪತಿಗಿಂತಲೂ ಪೂರ್ವಿಕರಿಂತಲೇ ಸಹಜವಾಗಿ ಗ್ರಹಿಸಬಹುದು: ಪಂಚಾಚಾರ್ಯ ಪಂಡಿತೋತ್ಪತ್ತಿ-ಶಂಕರಸಂಹಿತಾ-ವೀರಶೈವಾಗಮೋಪನಿಷತ್-ನಾರಾಯಣೋಪನಿಷದ್ಭಾಷ್ಯಗಳಲ್ಲಿ ವೀರಶೈವಾಚಾರ್ಯರಾದ ಪಂಡಿತಾರಾಧ್ಯ ವಿಶ್ವಾರಾಧ್ಯ ನಾಮಗಳೂ ಬಂದಿವೆ. ತೆಲುಗು ದೇಶದ ಮಲ್ಲಿಕಾರ್ಜುನ ಪಂಡಿತಾರಾಧ್ಯನು ವೀರಶೈವಾಚಾರ್ಯ (ಪಂಡಿತಾರಾಧ್ಯನಿ

ಗಿಂತಲೂ ಬೇರೆಂಬುದನ್ನು ತಿಳಿಯದೆ ಅನೇಕರು ಭ್ರಮೆಗೊಳಗಾಗಿದ್ದಾರೆ ಮಲ್ಲಿಕಾರ್ಜುನ ಪಂಡಿತನು ಗೃಹಸ್ಥನಾಗಿದ್ದು ಆತನ ವಂಶ ಪರಂಪರೆಯೂ ಈಗ ಇದೆ. ವೀರಶೈವಾಚಾರ್ಯ ಪಂಡಿತಾರಾಧ್ಯನೂ ಆತನ ಶಿಷ್ಯ ಚಂದ್ರಗುಂಡ ಶಿವಾಚಾರ್ಯನೂ ಶ್ರೀಶೈಲ ಗುರುಪೀಠಾಧಿಕಾರಿಗಳಾಗಿದ್ದ ಪ್ರಾಚೀನರೆಂತಲೂ ಆ ಪೀಠವೀಗಲೂ ಪರಂಪರೆಯಾಗಿ ವೀರಶೈವಾಧೀನವಾಗಿ (ಗುಂತಕಲ್ಲಿನಲ್ಲಿ) ಇದೆಯೆಂತಲೂ ಅನೇಕ ಐತಿಹಾಸಿಕ ಆಧಾರಗಳನ್ನು "ಆಚಾರ್ಯ ಪಂಡಿತ" ನೆಂಬ ಲೇಖದಲ್ಲಿ (ವಿಭೂತಿ ೧—೧೨. ೨—೧) ಪ್ರಕಟಿಸಲಾಗಿದೆ. ಶಿವಪಂಚಸ್ತವಕ್ಕೆ ಟೀಕೆಯನ್ನು ಬರೆದಿರುವ ಆಧುನಿಕ ವಿಶ್ವಾರಾಧ್ಯನನ್ನು ಕೆಲವರು ಪಂಚಾಚಾರ್ಯರಲ್ಲಿ ಒಬ್ಬನೆನ್ನಾಗಿಯೂ ಭಾವಿಸಿದ್ದಾರೆ. ಚತುರಾಚಾರ್ಯವ್ಯವಹಾರವೂ ಇರುವದರಿಂದ ವಿಶ್ವಾರಾಧ್ಯನು ಆಧುನಿಕನಾಗಿರಬಹುದೆಂದು ಮತ್ತೆ ಕೆಲವರು ಊಹಿಸುತ್ತಿರುವರು. ಇದು ಸರಿಯಲ್ಲ. ಪಂಚಕಲಶಾರ್ಚನೆಯಲ್ಲಿ ನಾಲ್ವರನ್ನು ಋತ್ವಿಜರನ್ನಾಗಿಯೂ ಒಬ್ಬನನ್ನು ಗುರುವನ್ನಾಗಿಯೂ ವಿನಿಯೋಗಿಸುವಾಗ ಸಾಮಾನ್ಯವಾಗಿ ಚತುರಾಚಾರ್ಯವ್ಯವಹಾರವನ್ನು ಮಾಡಿದರೂ ಇಲ್ಲಿ ಗುರುಶಬ್ದದಿಂದ ವಿಶ್ವಾರಾಧ್ಯನೇ ಸೂಚಿತನಾಗುತ್ತಿದ್ದಾನೆಂಬುದನ್ನು ಸಂಪ್ರದಾಯಜ್ಞರಿಗೆ ಹೇಳಬೇಕಾಗಿಲ್ಲ. "ಕಾಶೀಪೀಠಾಜೇ ಪ್ರಾಚೀನತ್ವ" ಎಂಬ ನನ್ನ ಮರಾಠಿ ಪುಸ್ತಕದಲ್ಲಿ ಈ ವಿಷಯವು ವಿಪುಲವಾಗಿ ನಿರೂಪಿಸಲ್ಪಟ್ಟಿದೆ. ಶಿವಾಗಮ ಶಂಕರ ಸಂಹಿತಾದಿಗಳಲ್ಲಿ ಹೇಳಿದಂತೆಯೂ, ಪರಂಪರೆಯಾಗಿ ಬಂದ ಪ್ರಕಾರವಾಗಿಯೂ ಪಂಚಾಚಾರ್ಯರು ಬಸವಾದಿಗಳಿಗಿಂತಲೂ ಪೂರ್ವಿಕರೇ ಹೊರತು ಯಾವುದಾದರೂ ಒಂದು ನಾಮಸಾಮ್ಯವು ಕಂಡಕೂಡಲೇ ಅವರನ್ನು ಆಚಾರ್ಯಪಂಚಕದಲ್ಲಿ ಸೇರಿಸುವುದು ಸಯುಕ್ತಿಕವಲ್ಲ.

ರಾಯರು ತಿಳಿದಂತೆ ಹರಿಹರನ ಕಾಲವು ಉದ್ಭಟಕಾವ್ಯದ ಸೋಮರಾಜನ ಕಾಲದ ಮೇಲೆ ಆಧಾರಪಟ್ಟಿಲ್ಲ. ಅನೇಕಗಳಾದ ಪ್ರಮಾಣಗಳಿಂದ "ಹರಿಹರದೇವ" ಎಂಬ ಗ್ರಂಥಪಟ್ಟಿಯಲ್ಲಿ ಹರಿಹರನ ಕಾಲವು ಕ್ರಿ. ಶ. ೧೨೧೬ ಎಂದು ನಿರ್ಣಯಿಸಲಾಗಿದೆ. ೧೨ಳಿಕರಲ್ಲಿದ್ದ ಮಲ್ಲಿಕಾರ್ಜುನಕವಿ ತನ್ನ ಸೂಕ್ತಿಸುಧಾರ್ಣವದಲ್ಲಿ ಹರಿಹರನ ಗಿರಿಜಾಕಲ್ಯಾಣದ ಪದ್ಯಗಳನ್ನು ಉದಾಹರಿಸಿದ್ದಾನೆನ್ನುವದನ್ನೂ ಡಾ. ವೆಂಕಟಸುಬ್ಬಯ್ಯನವರ ವಾದವನ್ನು ವಿಮರ್ಶಿಸಿ ಸೋಮರಾಜನ 'ಸಾಸಿರದ

ನೂಱಂ ಸಂದ ಎಂಬ ಕವಿಚಂತಕಾರರ ಪಾಠವೇ ಸರಿಯಾದುದೆಂಬುದನ್ನೂ ವಿಪುಲವಾಗಿ ಆ ಗ್ರಂಥದಲ್ಲಿ ನಿರೂಪಿಸಿದುದು ನಾರಾಯಣರಾಯರಿಗೆ ಗೊತ್ತಿಲ್ಲವೆಂತೆ ತೋರುತ್ತದೆ. ಆದರೂ ನಾನು ನೋಡಿದ ಒಂದು ವಿಷಯವನ್ನು ಬರೆಯುವದು ಅವಶ್ಯಕವೆಂದು ಕಾಣಿಸುತ್ತದೆ. ಕಳಿದ ೧೯೩೦ರ ಸುಮಾರಕ್ಕೆ ರಾಣಿಬೆನ್ನೂರು ಪ್ರಾಂತದಿಂದ ಮುದೇನೂರು ಹಿರಿಯಮಕದ ಶ್ರೀ ವಾಗೀಶ ಶಿವಾಚಾರ್ಯ ಸ್ವಾಮಿಗಳವರು ಕಾಶಿಗೆ ತಂದಿದ್ದ ಸೋಮರಾಜನ ಉದ್ಭಟಕಾವ್ಯದ ತಾಳದೋಲೆಯ ಪ್ರತಿಯಲ್ಲಿ 'ಸಾಸಿರದ ನೂಱಂ ಸಂದ ನಾಲ್ವತ್ತು ನಾಲ್ಕನೆಯಾ' (ಶಾ. ಶ. ೧೧೪೪) ಎಂಬ ಪಾಠವನ್ನೇ ನಾನು ಸ್ಪಷ್ಟವಾಗಿ ನೋಡಿದ್ದೇನೆ. ಪುನಃ ಆ ಪ್ರತಿಯಲ್ಲಿಯ ಓಲೆಯನ್ನು ಸಪ್ರತಿಬಿಂಬವಾಗಿ (ಫೋಟೊ ಸಹಿತ) ಮುಂದೆ ಪ್ರಕಟಿಸಲುದ್ಯುಕ್ತನಾಗಿರುವೆನು. ಇನ್ನು ಚಿತ್ರಭಾನು ಸಂವತ್ಸರವು ಶಾ. ೧೧೪೪ರಲ್ಲಿಯೇ ಆಗುತ್ತಿರುವದರಿಂದ 'ಸಂದ' ಎಂಬುದನ್ನು ಸರಿವಾಡುವುದು ಹೇಗೆ ಎಂದು ಆಕ್ಷೇಪವುಂಟು. ಸೋಮರಾಜನ ಪಾಠವು ಶಾ. ಶ. ೧೧೪೪ರ ಎಂದು ಅರ್ಥವಾಡಿದಾಗಲೂ ಈ ಆಕ್ಷೇಪವು ತಪ್ಪುವದಿಲ್ಲ. 'ಸಂದ'ಕ್ಕೆ 'ಹೋದ' ಎಂತಲೇ ಸಹಜವಾಗಿ ಅರ್ಥವಾಗುತ್ತಿದ್ದರೂ ಶಾ. ೧೧೪೪ರಲ್ಲಿ ಚಿತ್ರಭಾನು ಇಲ್ಲದಿರುವದರಿಂದ ಶಾ. ೧೧೪೪ ಸಂವತ್ಸರಗಳು ಕಳೆದು (ಸಂದ) ಶಾ ೧೧೪೪ನೆಯ ವರ್ಷಾರಂಭವೆಂಬುದನ್ನೇ ಗ್ರಹಿಸಬೇಕಾಗುವುದು. ಕೆಲವು ಶಾಸನಾದಿಗಳಲ್ಲಿ ಗತವರ್ಷಗಳೂ ವರ್ತಮಾನ ವರ್ಷಗಳೂ ಹೇಳಲ್ಪಟ್ಟಿರುವದರಿಂದ ಈ ವಿಧವಾದ ಒಂದು ವರ್ಷದ ತಾರತಮ್ಯವನ್ನು ಸ್ವೀಕರಿಸುವುದು ಅನುಚಿತವೇನೂ ಅಲ್ಲ. 'ನೂಱಂ ಸಂದ' ಎಂಬ ಪ್ರಯೋಗಗಳ ಶುದ್ಧಾಶುದ್ಧತೆ ಹೇಗಿದ್ದರೂ ಸೋಮರಾಜನ ಪ್ರಯೋಗವು ಇದ್ದಕ್ಕಿದ್ದ ಹಾಗೆ ಗ್ರಹಿಸಲ್ಪಡಬೇಕೆಂಬ ಅಭಿಪ್ರಾಯವನ್ನು ನಾನು ಸಮರ್ಥಿಸುತ್ತೇನೆ.

ಪಾಲ್ಕುರಿಕೆ ಸೋಮನಾಥನ ಕಾಲವೂ ಸೋಮರಾಜನ ಹೇಳಿಕೆಯನ್ನವಲಂಬಿಸಿಲ್ಲ. ಪಿಡುಪರ್ತಿ ಸೋಮನಾಥನು ಹೇಳಿದ ಹಾಗೆ ಓರುಗಲ್ಲಿನ ಮೊದಲನೆಯ ಪ್ರತಾಪರುದ್ರನ ಕಾಲದಲ್ಲಿ ಅಂದರೆ ಕ್ರಿ ಶ. ೧೧೯೦ ರಲ್ಲಿಯೇ ಪಾಲ್ಕುರಿಕೆ ಸೋಮನಾಥನು ಇದ್ದನೆಂಬುದನ್ನು ಗ್ರಹಿಸುವದಕ್ಕೆ ಬಾಧಕ ಪ್ರಮಾಣಗಳೇನೂ ಇಲ್ಲ. ಆಂಧ್ರ ಹಿಸ್ಟಾರಿಕಲ್ ಸೋಸೈಟಿಯವರ 'ಕಾಕತೀಯ ಸಂಚಿಕೆ' ಯಲ್ಲಿ ಹೀಗೆಯೇ ಸೋಮ

ನಾಥನ ಕಾಲವು ನಿರೂಪಿಸಲ್ಪಟ್ಟಿದೆ. ಮತ್ತೊಂದು ವಿಶೇಷವೂ ಇದೆ. ಪಾಲ್ಕುರಿಕೆ ಸೋಮನಾಥನು ಆಂಧ್ರದೇಶದಲ್ಲಿಯೂ ಹರಿಹರ ಕವಿಯು ಕರ್ನಾಟಕ ದೇಶದಲ್ಲಿಯೂ ದೂರಸ್ಥರಾಗಿರುವದರಿಂದಲೂ ಸಮಕಾಲಿಕರಾದುದರಿಂದಲೂ ತಮ್ಮ ತಮ್ಮ ಬಸವಚರಿತ್ರೆಗಳಲ್ಲಿ ಪರಸ್ಪರವಾಗಿ ನಾಮೋಲ್ಲೇಖನೆ ಮಾಡಿಲ್ಲ. ಆದುದರಿಂದಲೇ ಉಭಯರ ಗ್ರಂಥಗಳಲ್ಲಿ ಬಸವನ ಕಥಾಂಶಗಳ ಬಗ್ಗೆ ವಿರೋಧವಿದೆ. ರಾಯರು ಹೇಳಿದಂತೆ ಸೋಮನಾಥನು ೧೩ನೆಯ ಶತಮಾನದ ಕೊನೆಯಲ್ಲಿದ್ದರೆ ಹರಿಹರನ ಬಸವರಗಳೆಯನ್ನು ಅವಶ್ಯವಾಗಿ ಅವಲೋಕಿಸಿ ಅತನ ನಾಮೋಲ್ಲೇಖನವನ್ನು ತನ್ನ ಬಸವ ಪುರಾಣದಲ್ಲಿ ಮಾಡದೇ ಬಿಡುತ್ತಿರಲಿಲ್ಲ. ಕಾರಣವೇನೆಂದರೆ ಬಸವೇಶ್ವರನ ಚರಿತ್ರೆಯ ಬಗ್ಗೆ ಅನೇಕ ಅಂಶಗಳನ್ನು ಸಂಗ್ರಹಿಸುವದಕ್ಕೋಸ್ಕರ ಸೋಮನಾಥನು ಅವಶ್ಯವಾಗಿ ಪ್ರಯತ್ನಪಟ್ಟಿರಬೇಕು. ಎಲ್ಲಿಯೂ ಕೃತಿರೂಪದಿಂದ ಆಗ ಸೋಮನಾಥನಿಗೆ ಸಿಕ್ಕಿಲ್ಲ. ಆದುದರಿಂದಲೇ 'ಶಿವಭಕ್ತರ ಹೇಳಿಕೆಯನ್ನನುಸರಿಸಿ ಇದನ್ನು ರಚಿಸುತ್ತಿರುವೆ' ನೆಂದು ಬಸವಪುರಾಣದಲ್ಲಿ ಸೋಮನಾಥನು ಸೂಚಿಸಿದ್ದಾನೆ. ಸೋಮನಾಥನು ಬಸವನ ಕಾಲಕ್ಕೆ ಅಂದರೆ ಕ್ರಿ. ಶ. ೧೧೬೫ರ ಪ್ರಾಂತದಲ್ಲಿ ಹುಟ್ಟಿ ೧೨೯೦ರ ಪ್ರಾಂತದಲ್ಲಿ ಪಂಡಿತಾರಾಧ್ಯನ ಶಿಷ್ಯರಿಂದಲೂ ವೀರಶೈವ ಭಕ್ತರಿಂದಲೂ ಕೇಳಿದ ಕಥಾಂಶಗಳನ್ನು ಸಂಗ್ರಹಿಸಿ ಬಸವ ಪುರಾಣವನ್ನು ರಚಿಸಿ ಆಂಧ್ರ ಕರ್ನಾಟಕ ದೇಶಗಳಲ್ಲಿ ಪ್ರಸಿದ್ಧಿಯನ್ನು ಹೊಂದಿ ಪಂಡಿತಾರಾಧ್ಯ ಚರಿತ್ರಾದಿ ಪ್ರೌಢ ಗ್ರಂಥಗಳನ್ನು ನಿರ್ಮಿಸಿ ಸುಮಾರು ೧೩೨೪ ಸಂವತ್ಸರದ ಸಮೀಪದ ವರೆಗೂ ಜೀವಿಸಿರಬಹುದು. ಬಸವನ ಅನಂತರ ಎರಡು ಶತಾಬ್ದಿಗಳು ಕಳೆದ ಮೇಲೆ ಬಸವ ಪುರಾಣದ ರಚನೆಯಾಗಿದ್ದರೆ ಅದರಲ್ಲಿ ಅಂತಹ ಸ್ಫೂರ್ತಿಯೇ ಬರುತ್ತಿರಲಿಲ್ಲ. ಅಂತಹ ಸುಪ್ರಸಿದ್ಧನಾದ ಬಸವನ ಕಾಲದಲ್ಲಿ ಕವಿಗಳು ಯಾರೂ ಇರಲಿಲ್ಲ. ಹದಿನಾಲ್ಕನೆಯ ಶತಮಾನದ ವರೆಗೂ ಆತನ ಚರಿತ್ರೆ ಜಗತ್ತಿಗೆ ಗೊತ್ತಿಲ್ಲವೆಂದು ಹೇಳಿದರೆ ಅಸಂಗತವಾಗುವದಷ್ಟೆ! ಬಸವನ ಕಾಲಕ್ಕೆ ಸಮೀಪಸ್ಥರಾದ ಹರಿಹರನೂ ಸೋಮನಾಥನೂ ತಮ್ಮ ತಮ್ಮ ಮಾತೃಭಾಷೆಯಲ್ಲಿ ಬಸವ ಚರಿತ್ರೆಗಳನ್ನು ರಚಿಸಿದ್ದಾರೆಂತಲೂ ಆಮೇಲೆ ಇವನ್ನನುಸರಿಸಿ ಇತರ ಪುರಾಣಗಳು ಹುಟ್ಟಿದವೆಂದೂ ಭಾವಿಸುವದೇ ಸಮಂಜಸವಾಗಿದೆ. ಆದುದರಿಂದ ಸೋಮನಾಥನು ೧೩ಂಕ ಪ್ರಾಂತದಲ್ಲಿದ್ದನೆಂದು ರಾಯರು ಕಲ್ಪಿ

ಸಿವ ಕಾಲವನ್ನು ಗಾಳಿಯ ಮಾತೇ ಹೊರತು ಅದಕ್ಕೆ ಆಧಾರವಿಲ್ಲ. ಹರಿಹರ ಕೆರೆಯ ಪದ್ಮರಸರು ಮಲ್ಲಿಕಾರ್ಜುನ ಕವಿಯ (ಕ್ರಿ ಶ. ೧೨೪೫) ಸೂತ್ರಿ ಸುಧಾರ್ಣವದಲ್ಲಿ ಹೆಸರ್ಗೊಳ್ಳಲ್ಪಟ್ಟಿದ್ದಾರೆಂಬ ವಿಷಯವು ರಾಯರ ಬಗೆ ಗೊತ್ತಿಲ್ಲದೆ ಎಲ್ಲರನ್ನು ಹದಿಮೂರನೆಯ ಶತಾಬ್ದಿಯ ಅಂತ್ಯದಲ್ಲಿ ಇರಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ.

ರಾಯರಿಗೆ ಶಿವಾನುಭವದಲ್ಲಿ ಪ್ರಕಟಿತವಾದ ಬಸವೇಶ್ವರನ ಅರ್ಜುನವಾಡ ಶಿಲಾಶಾಸನದ ವಿಷಯವು ಗೊತ್ತಿಲ್ಲದುದರಿಂದ ಬಸವನು ನಿಜವಾಗಿ ಇದ್ದನೋ ಇಲ್ಲವೋ ಎಂದು ಏನೇನೋ ಬರೆದಿದ್ದಾರೆ. ಬಸವನು ಬಿಜ್ಜಳನ ಹತ್ತಿರ ಬಹಳ ಸ್ವಲ್ಪಕಾಲ ಅಂದರೆ ಐದಾರು ವರ್ಷಗಳು ಮಾತ್ರ ಇರುವದರಿಂದಲೂ ಅವನ ಕ್ರಾಂತಿಯ ಕಾಲವಾದುದರಿಂದಲೂ ಬಿಜ್ಜಳನ ಶಾಸನಗಳೆಲ್ಲವೂ ಬಸವನ ಮಂತ್ರಿತ್ವದ ಕಾಲಕ್ಕಿಂತ ಪೂರ್ವಕಾಲದವಾದುದರಿಂದಲೂ ಬಿಜ್ಜಳನ ಶಾಸನಗಳಲ್ಲಿ ಬಸವನು ಹೇಳಲ್ಪಟ್ಟಿಲ್ಲ. ಈ ವಿಷಯದಲ್ಲಿಯು ರಾಯರ ಬರಹಗಳು ಸಪ್ರಯೋಜನವಾಗಿಲ್ಲ. ಇನ್ನೊಂದು ಅದ್ಭುತ ವಿಷಯವೇನೆಂದರೆ ಅಬ್ಬೂರಿನ ಏಕಾಂತರಾಮಯ್ಯನ ಶಿಲಾಶಾಸನದಲ್ಲಿ ಬಸವನ ಹೆಸರು ಬಂದಿದೆಯೆಂದು ರಾಯರು ಜ್ಯೋತಿಷ ಹೇಳಿತ್ತಿರುವರು. ಬಸವನ ಹೆಸರು ಬಂದಿಲ್ಲವೆಂಬುದನ್ನು ಸತ್ಯವಾಗಿ ರಾಯರು ಶಾಸನ ನೋಡಿದಾಗ ತಿಳಿಯಬಹುದು. ಇನ್ನು ಮುನವಳ್ಳಿ ಶಾಸನದ ಬಸವನೇ ಕಲ್ಯಾಣದ ಬಸವನೆಂದು ಅವನು ಕ್ರಿಪಾದಿಸಹತ್ತಿದ್ದಾರೆಯೇ ಹೊರತು ಆ ಶಾಸನವನ್ನಾದರೂ ರಾಯರು ಸರಿಯಾಗಿ ಅರ್ಥಮಾಡಿಲ್ಲ. ೧೧೬೦ ರಲ್ಲಿ ಹುಟ್ಟಿದ ಅರ್ಜುನವಾಡ ಶಿಲಾಶಾಸನವು Epigraphia Indica, Vol. XXI, p. 9 ರಲ್ಲಿಯೂ ಮುದ್ರಿತವಾಗಿದ ಅದರಿಂದ ಬಸವನು ಬಾಗೇವಾಡಿಯವನೆಂತಲೂ ಮಾದಿರಾಜನ ಮಗನೆಂತಲೂ ಸಂಗಮೇಶ್ವರನ ಶಿಷ್ಯನೆಂತಲೂ ಸ್ಪಷ್ಟವಾಗಿ ಗೊತ್ತಾಗಿ ಬಿಡುವುದು. ಅರ್ಜುನವಾಡದ ಶಾಸನವನ್ನು ನೋಡದ ಡಾ. ಫ್ಲೀಟುಸಾಹೇಬರು Epigraphia Indica Vol. V ನಲ್ಲಿ ಮನಗೋಳಿ ಶಾಸನದ ಬಗ್ಗೆ ಬರೆದಿರುವ ಅಸಂಗತ ವಾಕ್ಯಗಳು ಕಾಂಟು. ಅದೇ ಪುಸ್ತಕದಲ್ಲಿಯು ಅಬ್ಬೂರು ಶಾಸನದ ವಿವರಣದಲ್ಲೂ ಫ್ಲೀಟ್‌ರವರು ಒರೆದ ವಿಷಯವು ಸಂಗತವಾಗಿಲ್ಲ. ಇದನ್ನೆಲ್ಲ ಬಹಳ ಪ್ರಮಾಣವನ್ನಾಗಿ ನಂಬಿ ಮೂಲಶಾಸನಗಳನ್ನು ನೋಡದೆ, ಡಾ.

ರಾಯರೂ ಅಡ್ಡಹಾದಿ ಹಿಡಿದಿರುವರು. ಪ್ರಬುದ್ಧಕರ್ಣಾಟಕ ಲೇಖದಲ್ಲಿಯೂ ತವ್ಮ ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯಲ್ಲಿಯೂ ಮನಗೋಳಿ ಬಸವನನ್ನು ಬಾಗೇವಾಡಿ ಬಸವನನ್ನಾಗಿ ಹೇಳುತ್ತ ಹೋಗಿದ್ದಾರೆ. ಇದರ ಬಗ್ಗೆ ಸ್ವಲ್ಪ ಸರಿಯಾದ ವಿವರಣೆಯನ್ನು ಮಾಡುವುದು ಅವಶ್ಯಕವೆಂದು ತೋರುತ್ತದೆ.

ಕ್ರಿ. ಶ. ೯೭೩-೯೯೭ ರಲ್ಲಿದ್ದ ದ್ವಿತೀಯ ತೈಲಪದೇವನಿಂದ ಮನಗೋಳಿ (ಮಣಿಂಗನಲ್ಲಿ)ಯ ಅಗ್ರಹಾರವನ್ನು ಪಡೆದ ಹಾರೀತಗೋತ್ರದ ಮಾಧವನು ಬಸವೇಶ್ವರನ ತಂದೆಯಾದ ಮಾದಿರಾಜನೆಂದು ಇವರು ಭ್ರಮೆಗೊಳಗಾಗಿದ್ದಾರೆ. ಹಾಗಾದರೆ ಹತ್ತನೆಯ ಶತಮಾನದಲ್ಲಿಯೇ ಬಸವನು ಹುಟ್ಟಿರಬೇಕಾಗುವುದು. ಇದರಿಂದಾಗುವ ಚಾರಿತ್ರಕಹಸ್ಯೆಯನ್ನು ಇವರು ಗಮನಿಸಿದಂತೆ ಕಾಣುವುದಿಲ್ಲ. ಮತ್ತು ಕಾಶ್ಯಪಗೋತ್ರದ ಚಂಡಿರಾಜಪುತ್ರ ಬಸವರಸಯ್ಯನನ್ನೂ ಬಸವೇಶ್ವರನನ್ನಾಗಿ ಹೇಳುವ ಫ್ಲೀಟರ ಸಿದ್ಧಾಂತವು ಎಷ್ಟು ಅವಿಚಾರಮೂಲಕವಾಗಿದೆಯೆಂಬುದು ಸ್ಪಷ್ಟವೇ ಸರಿ. ಮನಗೋಳಿಯಲ್ಲಿಯ ಕಲಿದೇವೇಶ್ವರನ ಆಲಯವು ಅನೆಯ ಜಗದೇಕಮಲ್ಲನಿಗಿಂತಲೂ (ಕ್ರಿ. ಶ. ೧೧೪೬) ಪೂರ್ವದಲ್ಲಿಯೇ ಇದ್ದಂತೆಯೂ, ಆ ಆಲಯವನ್ನು ನಿರ್ಮಿಸಿದ ಬಸವರಸಯ್ಯನು ಅವನಿಗಿಂತ ಹಿಂದಿನವನೆಂತಲೂ ಶಾಸನದ ಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ ತಿಳಿಯುವದು. ಅಂದರೆ ಅಲ್ಲಿಯ ಬಸವರಸಯ್ಯನು ಜಗದೇಕಮಲ್ಲನ ಸಮಕಾಲಿಕನಲ್ಲ. ಬಸವರಸಯ್ಯನು ಆಲಯವನ್ನು ನಿರ್ಮಿಸಿದ ೧೪೫ ವರ್ಷಗಳ ಅನಂತರದಲ್ಲಿ ಜಗದೇಕಮಲ್ಲನೂ ಬಂದು ಮನಗೋಳಿಯ ಮಾದಿರಾಜಾದಿಗಳ ಪ್ರಾರ್ಥನೆಯಂತೆ ೧೧೪೬ ರಲ್ಲಿ ಆಲಯಕ್ಕಾಗಿ ಮತ್ತೊಂದು ದಾನವನ್ನು ಕಾಲಾಮುಖ ಸದ್ಯೋಜಾತಪಂಡಿತನಿಗೆ ದಾನಮಾಡಿದ್ದಾನೆ. ಈ ಬಸವರಸಯ್ಯನಿಗೂ ಅನೆಯ ಜಗದೇಕಮಲ್ಲನಿಗೂ ಯಾವ ಸಂಬಂಧವೂ ಸಮಕಾಲಿಕತ್ವವೂ ಇಲ್ಲ. ಈ ಉಭಯರಿಗೂ ಬಾಗೇವಾಡಿಯ ಬಸವನಿಗೂ ಮೊದಲೇ ಸಂಬಂಧವಿಲ್ಲ. ಬಸವೇಶ್ವರನಿಗಿಂತಲೂ ಪೂರ್ವದಲ್ಲಿ "ಬಸವ" ಶಬ್ದವು ಪ್ರಚಾರವಾಗಿದ್ದುದನ್ನು ತಿಳಿಯದೆ ಆ ಹೆಸರಿನವರನ್ನೆಲ್ಲ ಬಾಗೇವಾಡಿ ಬಸವನಿಗೆ ಗಂಟುಹಾಕಲು ಹವಣಿಸುವದರಲ್ಲಿ ತಥ್ಯವೇನೂ ಇಲ್ಲ. ಬಸವೇಶ್ವರನ ವಂಶದ ಗೋತ್ರಾದಿಗಳು ಎಲ್ಲಿಯೂ ಹೇಳಲ್ಪಡದಿರುವದರಿಂದ ರಾಯರು ಮಾಡಿದ ಗೋತ್ರಾನ್ವೇಷಣವೂ ನಿಷ್ಫಲವಾಗಿದೆ.

ಶ್ರೀ ರಾಯರು ಒಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಒರುವಾಯಿ ಗ್ರಾಮದ ಬೆಣಕಪ್ಪನ ಗುಡಿಯಲ್ಲಿದ್ದ ಶಾಸನವೊಂದನ್ನು ಸಮನ್ವಯ ಮಾಡಲು ಹೊರಟಿದ್ದಾರೆ. (ಕ್ರಿ. ಶ. ೧೨೦೩ ರಲ್ಲಿ ಹುಟ್ಟಿದ ಈ ಶಾಸನವು South Indian Inscriptions, Vol. IX. Part I. ಪುಸ್ತಕದಲ್ಲಿ ೩೪೯ನೆಯ ಶಾಸನ.) ಅವರಲ್ಲಿರುವ ಮುಖ್ಯಾಂಶವು ಹೀಗಿದೆ—

"ಸ್ವಸ್ತಿ ಶ್ರೀಮತು ಯಾದವನಾರಾಯಣಂ ಪ್ರತಾಪಚಕ್ರವರ್ತಿ ಕೊಯ್ಸಳ ವೀರಬಲ್ಲಾಣವೇವರಾಜ್ಯಮುದ್ದರ ಬಸವದಂಡನಾಯಕ ಗುಣಪ್ರಭಾವವೆಂತೆಂದೊಡೆ—

ನುಡಿವಂ ಸತ್ಯವಚೋಕ್ತಿಯಂ, ಸಕಲಧರ್ಮವ್ಯಾಪ್ತಿಯಿಂದರ್ಥಮಂ
ಸಡೆವಂ, ವಿಪ್ರಸುರಾದಿಶಿಷ್ಟಜನತಾಸಂತುಷ್ಟಿಯಾಗಲ್ಕೆ ತಾ
ಕೊಡುವಂ, ದ್ರವ್ಯಮನೀಗುಣಾಶ್ರಯನುಮಂ ಲೋಕಂಬ ಬಾಪ್ಪೆಂಬಿನಂ
ಪಡೆವಂ, ಸದ್ಗುಡೆ ದಂಡನಾಥಬಸವಂ ಪ್ರಖ್ಯಾತಿಯಂ ಕೀರ್ತಿಯಂ
ಕಲಿಯಮೃತದಂಡನಾಥರ ಲಲಿತಾತ್ಮಜನೆಂದೊಡೊಪ್ಪುಗುಂ ಕವಿತನಮುಂ
ಸಲೆಸತ್ಯಾಮೃತವಾಕ್ಯಂ ಕುಲತಿಲಕಂ ಬಸವದಂಡನಾಥಾಧಿಪನೊಳ್ ॥

ಶ್ರೀಮದೀಶ್ವರಸಂವತ್ಸರ ಶ್ರಾವಣ ಬಹುಳ ಅಮಾವಾಸ್ಯಾ ಶುಕ್ರವಾರ ಸೂರ್ಯಗ್ರಹಣದಂದು ಶ್ರೀವಿನಾಯಕದೇವರ್ಗೆ ರಣಧವಳ ಬಸವಜಮೂಪಂ ಧಾರಾಪೂರ್ವಕಂ ಮಾಡಿಕೊಟ್ಟು...'—

ಇದರಲ್ಲಿಯ ಬಸವದಂಡನಾಥನು ಬಾಗೆವಾಡಿಯ ಬಸವನೆಂದು ಹೇಳುವುದು ತುಂಬಾ ಪರಿಹಾಸದ ಮಾತಾಗಿದೆ. ಕಲಿಯಮೃತದಂಡನಾಥನ ಮಗನೂ ವೀರಬಲ್ಲಾಳನ ಮಂತ್ರಿಯೂ ರಣಧವಳ ಬಿರುದಾಂಕಿತನೂ ಆದ ಒರುವಾಯಿ ಶಾಸನದ ಬಸವನು ಎಂದೆಂದಿಗೂ ಕಲ್ಯಾಣದ ಬಸವನಾಗಲಾರ. ಮತ್ತೊಂದು ಆಶ್ಚರ್ಯಕರವಾದ ವಿಷಯವೇನೆಂದರೆ ಮನಗೋಳಿಯ ಬಸವನನ್ನೂ ಒರುವಾಯಿ ಬಸವನನ್ನೂ ಒಂದು ಮಾಡಿ ಕಲ್ಯಾಣ ಬಸವನ ರೂಪವನ್ನು ತಯಾರ್ಮಾಡಲು ರಾಯರು ಯತ್ನಿಸಿದ್ದಾರೆ. ಅದಕ್ಕಾಗಿ ಬಿಜ್ಜಳನು ಮೃತಿಪಟ್ಟನಂತರ ಹೊಯ್ಸಳ ಬಲ್ಲಾಳನ ಹತ್ತಿರಕ್ಕೆ ಬಂದು ಬಿಜ್ಜಳನ ವಂಶವನ್ನು ಸಂಪೂರ್ಣವಾಗಿ ನಾಶಗೊಳಿಸಲು ಬಸವೇಶ್ವರನು ಹೆಣಗಾಡಿದ್ದಾನೆಂದು ರಾಯರು ಬರೆದಿದ್ದಾರೆ. ಮಹಾಪುರುಷರ ಮೇಲೆ ಹೇಯವಾದ ಅಪರಾಧಗಳನ್ನು ಹೊರಿಸುವ ಸಾಹಸವಿದೆಂದು ನಾನು ಹೇಳುತ್ತೇನೆ. ಈ ಮಾತುಗಳನ್ನೇ

ನಂಬಿದರೆ ಬಸವೇಶ್ವರನು ೨೫ನೆಯ ತೈಲಪನ ಮೊದಲ್ಗೊಂಡು ಹೊಯ್ಸಳದ ವೀರಬಲ್ಲಾಳನ ವರೆಗೆ ಅಂದರೆ ೧೨೦ ವರ್ಷಗಳ ಕಾಲ ಬಾಳಿದನೆಂದು ಹೇಳಬೇಕಾಗುವುದು. ಈ ಅಸಂಬದ್ಧ ವಿಷಯಗಳನ್ನು ಉದಾಸೀನ ಮಾಡಿ ಪಾಲ್ಕುರಿಕೆ ಸೋಮನಾಥನು ಹೇಳಿದಂತೆಯೂ, ಸಂಪ್ರದಾಯದಲ್ಲಿದ್ದಂತೆಯೂ ಬಸವೇಶ್ವರನು ಯೌವನದಲ್ಲಿ (೩೦, ೩೫ ವರ್ಷಗಳ ವಯಸ್ಸಿನಲ್ಲಿ) ಬಿಜ್ಜಳನೊಡನೆಯೇ ಶಿವೈಕ್ಯವಾಗಿರುವನೆಂಬುದೇ ಸರ್ವಸಮ್ಮತವಾಗಿದೆ. "ಬಸವೇಶ್ವರನ ಬಗ್ಗೆ ಶಾಸನ ಸಾಮಗ್ರಿ" ಎಂಬ ಲೇಖ (ವಿಭೂತಿ ೨-೪) ದಲ್ಲಿ ಇದನ್ನು ವಿಸ್ತರಿಸಿದೆ.

ಪಾಲ್ಕುರಿಕೆ ಸೋಮನಾಥನು "ಮೈಸೂರು ರಾಷ್ಟ್ರದ ತುಮಕೂರು ಜಿಲ್ಲಾ ಪಾಲ್ಕುರಿಕೆಯಲ್ಲಿ ಹುಟ್ಟಿದವ" ನೆಂಬ ಒಂದು ನವೀನ ಇತಿಹಾಸವನ್ನು ಅವರು ಹೇಳಿದ್ದಾರೆ. ಇದು ಅಸತ್ಯವಾದ ವಿಷಯವೆಂದು ನಾನು ಧಾರಾಳವಾಗಿ ಹೇಳಲಿಚ್ಛಿಸುತ್ತೇನೆ. ಒಂದು ನಾಮಸಾಮ್ಯವು ಸಿಕ್ಕಿದ ಕೂಡಲೇ ನಿಜಾಮು ದೇಶದ ಸುಪ್ರಸಿದ್ಧವಾದ ಓರುಗಲ್ಲಿನ ಹತ್ತಿರ ಇರುವ "ಪಾಲ್ಕುರಿಕೆ" ಯನ್ನು ತುಮಕೂರಿನ "ಹಾಲ್ಕುರಿಕೆ" ಯನ್ನಾಗಿ ಹೇಳುವದು ತುಂಬಾ ಅನ್ಯಾಯ. ಈ ಎರಡು ಗ್ರಾಮಗಳನ್ನೂ ರಾಯರು ನೋಡಿದಂತಿಲ್ಲ. ನಾನು ೧೯೨೪ ರಲ್ಲಿ ತುಮಕೂರು ತಾಲೂಕಿನ ಹಾಲ್ಕುರಿಕೆಯನ್ನೂ ನಾಲ್ಕೈದು ಸಲ ಓರುಗಲ್ಲಿನ ಹತ್ತಿರ ಇರುವ ಪಾಲ್ಕುರಿಕೆಯನ್ನೂ ನೋಡಿದ್ದೇನೆ. ರಾಯರು ಹೇಳಿದಂತೆ "ಪಾಲುಗುರ್ತಿ" ಯೆಂಬ ವ್ಯವಹಾರವು ಅದಕ್ಕೆ ಇಲ್ಲ. ಪ್ರಾಚೀನ ಕಾಲದಿಂದ ಈವರೆಗೂ ಅದಕ್ಕೆ 'ಪಾಲ್ಕುರಿಕೆ' ಎಂಬುದೇ ಶಿಷ್ಟ ವ್ಯವಹಾರವು. "ಪಾಲಕುರ್ತಿ" ಎಂಬ ಗ್ರಾಮ್ಯಜನರ ವ್ಯವಹಾರವೂ ಈಗ ಉಂಟು. ಸೋಮೇಶ್ವರ ದೇವಾಲಯವೂ ಸೋಮನಾಥನ ಸಮಾಧಿಯೂ ಈ ಊರಲ್ಲಿ ಇದ್ದು ಈಗಲೂ ಜಂಗಮಮಾಹೇಶ್ವರರ ಅಧೀನದಲ್ಲಿದೆ. ಪಾಲ್ಕುರಿಕೆ ಸೋಮನಾಥನ ಜ್ಞಾತಿಗಳಾಗಿ ತೋರುವ 'ಪಾಲಕುರಿಕೆ' ಎಂಬ ಮನೆಯ ಹೆಸರುಳ್ಳ ಮಾಹೇಶ್ವರರು, ವರಂಗಲ್ ಜಿಲ್ಲೆಯ ರಘುನಾಥಪಲ್ಲಿಯ ಹತ್ತಿರದಲ್ಲೂ ಸಿಕಿಂದ್ರಾಬಾದಿನಲ್ಲೂ ಎಂಜಾಲದಲ್ಲೂ ಈಗಲೂ ಇದ್ದಾರೆ. ಸೋಮನಾಥನ ಶಿಷ್ಯರಾಗಿ ಕಾಣುವ "ಪಿಡುಪರ್ತಿ" ಯವರೂ, ಬೀಗರಾಗಿ ಕಾಣುವ "ವಿಭೂತಿ" "ಶಿವರಾತ್ರಿ" ಯವರೂ ಗುರುಗಳ ಸ್ಥಾನವಾದ "ಕಟ್ಟಕೂರೂ" ಇದೇ ಪ್ರಾಂತದಲ್ಲಿ ಒತ್ತಟ್ಟಿಗೇನೇ ಹತ್ತಿರ ಹತ್ತಿರ ಇವೆ. "ವರಂಗಲ್ಲಿನ ಪ್ರತಾಪರುದ್ರನು ಸೋಮನಾಥನ ಪುರಾಣವನ್ನು ಕೇಳಿ

ವ್ಯನು" ಎಂಬ ಪಿಡುಪರ್ತಿಕವಿಯ ಹೇಳಿಕೆಯೂ ಮೇಲಿನ ಅಂಶಗಳನ್ನು ಬಲಪಡಿಸುತ್ತದೆ. ಸೋಮನಾಥನ ಗ್ರಂಥಗಳೂ ಈ ದೇಶದಲ್ಲಿ ಬಹಳ ಪ್ರಚಾರವಾಗಿವೆ. ೧೫ ವರ್ಷಗಳ ಹಿಂದೆ ಈ ಪಾಲ್ಕುರಿಕೆಯನ್ನು ನೋಡಿ ಪರಿಶೀಲನೆ ಮಾಡಿದ ಸುಪ್ರಸಿದ್ಧರಾದ ಶ್ರೀ ಶೇಷಾದ್ರಿ ರಮಣ ಕವಿಗಳು ತಮ್ಮ "ನಿಜಾಂರಾಷ್ಟ್ರ ಪ್ರಶಂಸೆ" ಎಂಬ ತೆಲುಗು ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ—

"ಸೋಮನಾಥನು ಓರುಗಲ್ಲಿಗೆ ಮೂರುಗಾವದ ದೂರದಲ್ಲಿರುವ ಪಾಲ್ಕುರಿಕೆಯಲ್ಲಿ ಶಿವೈಕ್ಯನಾದನು. ಆ ಪ್ರದೇಶದಲ್ಲಿ ಮಠವೊಂದು ದೇವಾಲಯದಂತೆ ಕಟ್ಟಲ್ಪಟ್ಟಿದೆ. ಅಲ್ಲೊಂದು ಶಿವಲಿಂಗವನ್ನು ಪ್ರತಿಷ್ಠಿಸಿ ಈಗಲೂ ಜಂಗಮರು ಪೂಜಿಸುತ್ತಿರುತ್ತಾರೆ. ಕವಿವರ್ಯನು ಶಿವೈಕ್ಯವಾದ ಸ್ಥಳದಲ್ಲಿ ದೊಡ್ಡ ಉತ್ಸವವು ಜರುಗಿಸಲ್ಪಡುತ್ತಿದೆ. ಕವಿಚರಿತ್ರೆಯನ್ನು ಗ್ರಂಥಸ್ಥ ಮಾಡಲಿಚ್ಛೆಯಾದರೆ ಇಲ್ಲಿ ಬಹಳ ಚರಿತ್ರೆ ರಹಸ್ಯಗಳು ಲಭಿಸುವುವು. ಸೋಮನಾಥನ ಗ್ರಂಥಗಳು ಕೂಡ ಇಲ್ಲಿ ಬಹಳ ವ್ಯಾಪಕವಾಗಿವೆ"—
(೧೫ನೆಯ ಪುಟ.)

ಇತ್ಯಾದಿ ಪ್ರಮಾಣಗಳಿಂದ ಪಾಲ್ಕುರಿಕೆ ಸೋಮನಾಥ ಕವಿಯ ಜನ್ಮನಿವಾಸ ಭೂಮಿಯು ಓರಂಗಲ್ಲಿನ ಹತ್ತಿರ ಇರುವ ಆಂಧ್ರದೇಶದ "ಪಾಲಕುರಿಕೆ"ಯೇ ಎಂಬುದು ಸಿದ್ಧಾಂತವೇ ಸರಿ. 'ಪಾಲ್ಕುರಿಕೆ' ಎಂಬ ಶಬ್ದವು ಈಗಿನ ಪ್ರಾಂತವಿಭಾಗವನ್ನನುಸರಿಸಿ ಕನ್ನಡ ನುಡಿಯೊಂದು ರಾಯರ ಹೇಳಿಕೆಯಿದೆ. ಅದು ಪ್ರಾಚೀನಕಾಲದಲ್ಲಿ ಯಾವ ಭಾಷೆಗೆ ಸೇರಿರುವುದೆಂಬುದನ್ನು ಹೇಳುವುದು ಸಾಧ್ಯವಿಲ್ಲ. ಅದು ಆಂಧ್ರ ಭಾಷೆಯದೇ ಏಕಾಗಬಾರದು? 'ಕುರ್ರು' ಎಂಬುದು ಔಪವಿಭಕ್ತಿಕವಾಗಿ "ಕುರಿಕೆ" ಯಾಗುತ್ತದೆ. ಅಂಗಲಕುರ್ರು = ಅಂಗಲಕುರಿಕೆ, ಮೋತು ಕುರ್ರು = ಮೋತ್ಕುರಿಕೆ ಮೊದಲಾದ ಗ್ರಾಮದ ರೂಪಗಳು ಆಂಧ್ರದೇಶದಲ್ಲಿಯೂ ಉಂಟು. ತುಮಕೂರಿನ ಹಾಲ್ಕುರಿಕೆಯು ಸೋಮನಾಥ ಕವಿಯ ಯಾವ ಸ್ಮೃತಿಯಿಂದಲೂ ಕೂಡಿರುವದಿಲ್ಲ. ಪಿಡುಪರ್ತಿ, ವಿಭೂತಿ ಮುಂತಾದ ಉಪನಾಮಗಳುಳ್ಳ ಜಂಗಮರಾಗಲಿ ಸೋಮನಾಥನ ಗ್ರಂಥಗಳಾಗಲಿ ಹಾಲ್ಕುರಿಕೆಯಲ್ಲಿಲ್ಲ. ಸೋಮನಾಥನ ಊರೆಂದು ಹೇಳುವ ಸಂಪ್ರದಾಯವೂ ಇಲ್ಲ. ಒಂದೆರಡು ತೆಲಗು ಸೊಟ್ಟ ಪುಟ್ಟ ನುಡಿಗಳು ಆ ಊರಲ್ಲಿ ಕೆಲವರಿಗೆ ತಿಳಿದರೂ ಅದು ಶುದ್ಧ ಕನ್ನಡ ಪ್ರದೇಶವೇ ಆಗಿದೆ. ಪಾಲ್ಕುರಿಕೆ ಸೋಮನಾಥನು ಅಲ್ಲಿ ಹುಟ್ಟಿ

ದ್ದರೆ ಅವನಿಗೆ ಕನ್ನಡದಲ್ಲಿಯೇ ದೊಡ್ಡ ಪಾಂಡಿತ್ಯವು ಸಹಜವಾಗಿ ಲಭಿಸಬೇಕಾಗಿದ್ದಿತು. ಅವನು ತನ್ನ ಬಸವಪುರಾಣವನ್ನು ಬಸವನ ಮತ್ತು ತನ್ನ ಮಾತೃಭಾಷೆಯಾದ ಕನ್ನಡದಲ್ಲಿಯೇ ರಚಿಸುತ್ತಿದ್ದನು. ಹಾಲ್ಕುರಿಕೆಯು ಪ್ರಾಚೀನಕಾಲದಿಂದ ಇದ್ದು ಸೋಮನಾಥನ ಭೂಮಿಯಾಗಿದ್ದರೆ ಅಪ್ರಸಿದ್ಧವಾಗಿರಲು ಕಾರಣಗಳಿಲ್ಲ. ಸೋಮನಾಥನು ಶುದ್ಧ ಆಂಧ್ರದೇಶ ಮಧ್ಯದಲ್ಲಿ ಹುಟ್ಟಿದನೆಂಬದನ್ನು ಆತನ ತೆಲಗು ಜಾಣ್ನುಡಿಯ ಬಿಗುವಿನಿಂದಲೇ ತಿಳಿಯಬಹುದು. ಬಸವಪುರಾಣದ ರಚನೆಮಾಡಿದ ಮೇಲೆ ಸೋಮನಾಥನಿಗೆ ಪ್ರಸಿದ್ಧಿಯುಂಟಾಗಿ ದೇಶದೇಶಾಂತರಗಳ ಸಂಚಾರದ ಮೂಲಕವಾಗಿ ಆತನಿಗೆ ತಮಿಳು, ಕನ್ನಡ, ಮರಾಠಿ ಭಾಷೆಗಳೂ ಬಂದಿರಬಹುದು. ಅಷ್ಟೇ ಹೊರತು ಕನ್ನಡಭಾಷೆಯಲ್ಲಿ ಸರಿಯಾದ ಪಾಂಡಿತ್ಯವಿತ್ತೆಂಬುದಕ್ಕೆ ನಿದರ್ಶನಗಳಿಲ್ಲ.

ವೀರಶೈವ ವಾಙ್ಮಯವು, ಸಂಸ್ಕೃತ ಆಂಧ್ರ ಕರ್ನಾಟಕ ಮಹಾರಾಷ್ಟ್ರ ದ್ರವಿಡಭಾಷೆಗಳಲ್ಲಿ ಅನಂತವಾಗಿದೆ. ಅಚ್ಚಾದ ಸಾಮಗ್ರಿಯೇ ಎರಡೆತ್ತುಗಳ ಗಾಡಿಗೆ ಸರಿಹೋಗುವಷ್ಟಿದೆ. ೧೫—೨೦ ವರ್ಷಗಳಿಂದ ವೀರಶೈವರ ಪತ್ರಿಕಾ ಪ್ರಪಂಚವೂ ಆರಂಭವಾಗಿದೆ. ಅನೇಕ ವಿಮರ್ಶೆಗಳೂ ಬಂದಿವೆ. ಬಹಳ ಪ್ರಾಚೀನಕಾಲದಿಂದಲೂ ಪ್ರಚಾರದಲ್ಲಿರುವ ವೀರಶೈವ ವಾಙ್ಮಯವು ೧೪ನೇ ಶತಮಾನದಲ್ಲಿ ಹುಟ್ಟಿತೆಂಬುದು ಸಾಹಸವೇ ಸರಿ. ಶ್ರೀ ಹಯವದನರಾಯರ ಶ್ರೀಕರಭಾಷ್ಯದ ಇಂಗ್ಲೀಷು ಪೀಠಿಕೆಯೂ ಶ್ರೀ ನಾರಾಯಣರಾಯರ ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯೂ ಅಪಸಿದ್ಧಾಂತಗಳಿಂದ ತುಂಬಿರುವವು. ಗ್ರಂಥಗಳನ್ನೂ ಶಾಸನಗಳನ್ನೂ ಸರಿಯಾಗಿ ಪರಿಶೀಲಿಸದೆ ಸಂಪ್ರದಾಯವನ್ನೂ ತಿಳಿಯದೆ" ಚರಿತ್ರಗ್ರಂಥಗಳ " ಹೆಸರಿನಿಂದ ಪ್ರಕಟಿಸಿದರೆ ಪ್ರಯೋಜನವಾಗಲಾರದು. ಸುಮ್ಮನೆ ಕಲ್ಪನಾತ್ಮಕವಾಗಿ ಬರೆಯುತ್ತ ಹೋದರೆ ವಿವಾದ ವಿಸ್ತಾರವಾಗುವದಲ್ಲದೆ ಪರಿಶ್ರಮೆಯ ಸಫಲವಾಗುವದಿಲ್ಲ. ಸಪ್ರಮಾಣವಾಗಿ ಗುಣದೋಷಾದಿಗಳನ್ನು ನಿರೂಪಿಸಿದರೆ ಯಾರಿಗೂ ಹಾನಿಯಿಲ್ಲವಷ್ಟೆ! ಪರಿಶೋಧಕನು ಬಹಳವಾಗಿ ನೋಡಿ ಸ್ವಲ್ಪವಾಗಿ ಬರೆಯಬೇಕೇ ಹೊರತು ಸ್ವಲ್ಪವಾಗಿ ನೋಡಿ ಬಹಳವಾಗಿ ಬರೆಯಬಾರದೆಂದು ನಿವೇದಿಸುತ್ತೇನೆ.

ಶಿವನ ಸ್ವರೂಪ.

(ಲೇಖಕರ ಬ. ಜಿ. ಪಟ್ಟೇದ ಮು. ವಂಟಮೂರಿ)

ದೇವರಿಗೆ ಶಿವನೆಂದೂ, ಪರಮಾತ್ಮನೆಂದೂ ಅನೇಕ ಹೆಸರುಗಳು ಇವೆ. ಅವನನ್ನು ವೀರಶೈವರು ಶಿವಲಿಂಗ, ಪರಶಿವಲಿಂಗವೆಂತಲೂ ಕರೆದಿದ್ದಾರೆ. ಅವನು ಸಾಕಾರನೂ ನಿರಾಕಾರನೂ ಇರುವನೆಂದು ಎಲ್ಲ ಹಿಂದುಗಳಂತೆ ಅವರವಾದರೂ ನಂಬಿಗೆಯಿದೆ. ಈ ಬಗ್ಗೆ ಶ್ರೀ ಬಸವಣ್ಣನವರು— "ಸಕಲ ನಿಃಕಲ ಕೂಡಿಕೊಂಡಿಪ್ಪೆಯಾಗಿ, ಸಕಲನು ನೀನೆಸೆ, ನಿಃಕಲನು ನೀನೇ ಕಂಡಯ್ಯಾ. ಎತ್ತೆತ್ತ ನೋಡಿದತ್ತ ನೀನೇ ದೇವಾ. ಸಕಲ ವಿಸ್ತಾರದ ರೂಹು ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಪಾದ ನೀನೇ ದೇವಾ, ಕೂಡಲ ಸಂಗಮ ದೇವಾ" ಎಂದು ನುಡಿದಿದ್ದಾರೆ. ಈ ವಚನದಿಂದ ದೇವರು ಸಾಕಾರನಾಗಿಯೂ, ನಿರಾಕಾರನಾಗಿಯೂ ಇರುವನೆಂದು ತಾನೇ ವ್ಯಕ್ತವಾಗುತ್ತದೆ. ಆದರೆ ಕೆಲವು ಅನ್ಯ ಧರ್ಮದವರು ಆತನು ಬರೇ ನಿರಾಕಾರನೆಂದು ವಾದಿಸುವರು. ಹೂವಿನ ವಿನಾ ಸುಗಂಧವೂ, ಹಣ್ಣಿನ ವಿನಾ ಸ್ವಾದವೂ, ಶರೀರದ ವಿನಾ ಪ್ರಾಣವೂ ಇರುವದುಂಟೆ? ಸಾಕಾರವನ್ನು ಬಿಟ್ಟು ನಿರಾಕಾರವನ್ನು ತಿಳಿಯುವದು ಹೇಗೆ? ಆಕಾರದ ಮೇಲಿಂದಲೇ ನಿರಾಕಾರವನ್ನು ಊಹಿಸಬೇಕಾಗುತ್ತದೆ. ಆ ಕಾರಣ ಸಗುಣತ್ವದಿಂದಲೇ ನಿರ್ಗುಣ ಸ್ವರೂಪವನ್ನು ಅರಿತುಕೊಳ್ಳುವದು, ದೊಡ್ಡವರಿಗೂ, ಸಜ್ಜನರಿಗೂ, ಜ್ಞಾನಿಗಳಿಗೂ, ಅಜ್ಞಾನಿಗಳಿಗೂ ಸುಲಭ ಸಾಧ್ಯವಾಗಿದೆ.

ಕೆಲವು ಮತದವರು, ದೇವರೆಂಬ ಒಬ್ಬ ಅಸಾಮಾನ್ಯ ವ್ಯಕ್ತಿಯು ಆಕಾಶದಲ್ಲಿ ಎಲ್ಲಿಯೋ ಇರುವನೆಂದು ತಿಳಿದಿರುವಂತೆ ಕಾಣುತ್ತದೆ. ಆದರೆ ಹಿಂದುಗಳು, ಆತನು ಅಣುರೇಣು ತೃಣಕಾಷ್ಠಾದಿಗಳಲ್ಲಿ ವಿಶ್ವವ್ಯಾಪಿಯೂ, ಅಷ್ಟಲ್ಲದೆ ಮತ್ತೂ ಹೆಚ್ಚಾಗಿ ಮಿಗೆ ಮಿರಿ ನಿಂತವನೂ, ಅಖಂಡನೂ, ಅದ್ವಯನೂ ಮುಂತಾಗಿ ಇರುವನೆಂದು ತಿಳಿದಿದ್ದಾರೆ. ತೋರುವ ಚರಾಚರ ಜಗವೆಲ್ಲಿ ಅವನ ದೃಶ್ಯ (ಸಾಕಾರ) ಸ್ವರೂಪ

ವೆಂದೂ, ಆ ಎಲ್ಲದರಲ್ಲಿಯೂ ಅವನು ವ್ಯಾಪಿಸಿ ಜಗತ್ತಿನ ಸೂತ್ರ ಚಾಲಕತ್ವವನ್ನು ವಹಿಸಿರುವ ಅಗಾಧ ಶಕ್ತಿಯು ಇಲ್ಲವೆ ಚೈತನ್ಯವು ಅದೃಶ್ಯ (ನಿರಾಕಾರ) ಸ್ವರೂಪವೆಂದು ಭಾವಿಸಿದ್ದಾರೆ. ಸಾಕಾರ ನಿರಾಕಾರಗಳೆರಡರ ಪೂಜೆಯೂ ಹಿಂದುಗಳಿಗೆ ಗ್ರಾಹ್ಯವಾಗಿದೆ. ಮೊಟ್ಟ ಮೊದಲು ಸಾಕಾರದಿಂದ ದೇವತಾರಾಧನೆಯು ಆರಂಭವಾದರೂ, ಮುಂದೆ ನಿರಾಕಾರ ಪರಮಾತ್ಮನನ್ನು ಪೂಜಿಸುವದರಲ್ಲಿಯೇ ಅದರ ಪರ್ಯವಸಾನವಾಗುವದು. ಅದೃಶ್ಯ ಉಗಿಯೇ ದೃಶ್ಯ ಮಂಜು ಮೋಡ ಜಲ ಬರ್ಫವಾಗುವಂತೆ, ನಿರಾಕಾರ ಪರಮಾತ್ಮನೇ ದೃಶ್ಯ ಜಗವಾಗಿರುವನು. ಹೇಗೆ ಉಗಿಯ ಸಲುವಾಗಿ ನೀರು ಬರ್ಫಗಳನ್ನು ತ್ಯಜಿಸುವ ಕಾರಣ ಬೀಳುವದಿಲ್ಲವೋ, ಹಾಗೆ ನಿರಾಕಾರದ ಸಲುವಾಗಿ, ನಮಗೆ ಆಕಾರವನ್ನು ಬಿಟ್ಟುಕೊಡುವ ಅವಶ್ಯಕತೆ ಏನೂ ಇಲ್ಲ. ಸಾಕಾರವನ್ನು ಹಿಡಿದೇ ನಿರಾಕಾರದ ಪ್ರಾಪ್ತಿಯನ್ನೂ ತತ್ಪರಿಣಾಮವನ್ನೂ ಹೊಂದಲು ಯಾವ ಪ್ರತಿಬಂಧವೂ ಇಲ್ಲ. ಇದರ ಮರ್ಮವನರಿಯದ ಪರಧರ್ಮೀಗಳು ನಮ್ಮ ಆಕಾರ (ಸಗುಣ ಮೂರ್ತಿ) ಪೂಜೆಯನ್ನು ವಿರೋಧಿಸಿ ಎಷ್ಟು ಹೋರಾಡಿದರೂ, ಹಿಂದುತ್ವದ ಮೇಲಿನ ಪ್ರೇಮವೂ, ಅಭಿಮಾನವೂ ಅಚ್ಚಳಿಯದೆ ಉಳಿದಿರುತ್ತವೆ. ಆದರೂ ಈಜೆಗೆ ಹಿಂದುಗಳ ಮೂರ್ತಿಪೂಜೆಯು ಅತಿರೇಕವನ್ನು ಹೊಂದಿ, ಅಸಹ್ಯವಾಗಿದೆ ಎಂಬುದನ್ನು ಮಾತ್ರ ಒಪ್ಪಲೇಬೇಕು. ಅಜ್ಞರು ಮೂರ್ತಿ ಪೂಜೆಯ ಗುಟ್ಟು ಅರಿತುಕೊಳ್ಳದೆ, ಬರೇ ದುರಭಿಮಾನಿಗಳಾಗಿ ತಮ್ಮ ತಮ್ಮ ಇಷ್ಟ ಮೂರ್ತಿಗಳ ಹಟ್ಟವಿಡಿದು, ಸಮಾಜದಲ್ಲಿ ಒಡಕು ಹುಟ್ಟಿಸಿ, ಅನರ್ಥವನ್ನು ಉಂಟು ಮಾಡುತ್ತಿರುವದು ಸರಿಯಲ್ಲ. ಈ ಸಂಗತಿಯನ್ನು ಲಕ್ಷಕ್ಕೆ ತಂದು ವೀರಶೈವರು ಅನೇಕ ಮೂರ್ತಿಗಳಾರಾಧನೆಯನ್ನು ಹಳಿದು, ಒಂದೇ ಒಂದಾದ ಇಷ್ಟಲಿಂಗದ ಪೂಜೆಯನ್ನು ಬಳಕೆಯಲ್ಲಿ ತಂದಿದ್ದಾರೆ. ಅದು ಸಾಕಾರ ನಿರಾಕಾರವೆರಡನ್ನೂ ಒಳಕೊಂಡಿದೆ. ಆದರೂ ಬಹು ಸಂಖ್ಯಾಕರಾದ ಇತರ ಹಿಂದುಗಳ ಸಂಸರ್ಗ ದೋಷವು ವೀರಶೈವರನ್ನೂ ಅಂಟಿಕೊಂಡಿದೆ.

ಪರಧರ್ಮೀಯರು, ಮನುಷ್ಯರೆಲ್ಲರು ದೇವರ ಮಕ್ಕಳೆಂದು ಬಗೆದು ಪರಸ್ಪರವಾಗಿ ಬಂಧುಪ್ರೇಮವನ್ನು ಬೆಳೆಸಲಿಕ್ಕೆ ಹವಣಿಸುತ್ತಿದ್ದರೆ, ಹಿಂದುಗಳಾದ ನಾವು ಎಲ್ಲ ಮಾನವ ಜಾತಿಯಲ್ಲದೆ, ಮಿಕ್ಕ ಯಾವತ್ತು ಸ್ಥಿರ ಚರ ಜಗತ್ತನ್ನು ಸಹ, ಕೇವಲ ಪರಮಾತ್ಮ ಸ್ವರೂಪ ಅರ್ಥಾತ್

ಸ್ವಸ್ವರೂಪವೆಂದೇ ಎಡಿಸುತ್ತೇವೆ. ಇದಕ್ಕಿಂತಲೂ ಮೇಲಾದ ಸದ್ಭಾವನೆ ತಾಳುವದು ದುರ್ಲಭ. ಆದಕಾರಣ ಎಲ್ಲ ಧರ್ಮದವರ ಬಗ್ಗೆ ನಮ್ಮಲ್ಲಿ ಆದರ ಬುದ್ಧಿಯೂ ಸಹಾನುಭೂತಿಯೂ ಪರಕೀಯರಿಗಿಂತ ಹೆಚ್ಚಾಗಿ ಸ್ಥಿರಪಟ್ಟಿವೆ. ಮನುಷ್ಯನು ಅವಿದ್ಯಾ ಮೂಲಕದಿಂದ ಆ ಜ್ಞಾನವನ್ನು ತ್ಯಜಿಸಿ, ತಮೋಗುಣಗಳನ್ನೂ ಜೀವ ಭಾವನೆಯನ್ನೂ ಅಳಿದು, ಶಿವ ಗುಣ ಸಂಪನ್ನನಾಗಿ, ತದನುಸಾರ ವರ್ತಿಸಿ, ಅಹಂಕಾರವನ್ನು ಮರೆದು ಪರಮಾತ್ಮನಲ್ಲಿ ಏಕವಾಗುವದೇ ಕೊನೆಯ ಗುರಿಯು.

ಈ ಜಗತ್ತಿನಲ್ಲಿ ಅತ್ಯಂತ ಗೂಢವಾದ ವಿಷಯವೆಂದರೆ ದೇವರೇ. ಬಹಳ ದಿವಸಗಳ ಹಿಂದೆ ಪ್ರಚಲಿತವಿದ್ದ ಕ್ರಮಿಕ ಳ ನೆಯ ಪುಸ್ತಕದಲ್ಲಿ "ದೇವರನ್ನು ಯಾರೂ ನೋಡಿಲ್ಲ" ಎಂಬದೊಂದು ಪಾಠವಿತ್ತು. ಸ್ಥೂಲ ದೇಹದ ಚರ್ಮ ಚಕ್ಷುವಿನಿಂದ ಮಾತ್ರ ದೇವರನ್ನು ಕಾಣುವದು ಅಸಾಧ್ಯ ವೆಂಬುದೇ ಅವರ ತಾತ್ಪರ್ಯ. ಯಾಕಂದರೆ ಈ ಕಣ್ಣುಗಳಲ್ಲಿ ಜಗತ್ತಿನೊಳಗಿನ ನಾನಾ ವಿಧ ಸ್ಥೂಲ ಪದಾರ್ಥಗಳನ್ನು ಮಾತ್ರ ಭಿನ್ನ ಭಿನ್ನ ಸ್ವರೂಪದಲ್ಲಿ ಕಾಣುವ ಸಾಮರ್ಥ್ಯವುಂಟು. ಆ ವಸ್ತುಗಳಿಗೆಲ್ಲ ರೂಪಗಳನ್ನನುಸರಿಸಿ ಪ್ರತ್ಯೇಕವಾದ ಹೆಸರುಗಳು ರೂಢವಾಗಿರುವರಿಂದ, ಅವನ್ನು ಕಂಡಕೂಡಲೆ ಆ ನಾಮರೂಪಗಳೇ ಮುಂದೆ ಬಂದು ನಿಲ್ಲುತ್ತವೆ. ಅವುಗಳಲ್ಲಿ ವ್ಯಕ್ತವಾಗಿರುವ ದೇವತ್ವವು ನಮಗೆ ಎಷ್ಟು ಮಾತ್ರವೂ ತೋರುವದೇ ಇಲ್ಲ. ಅದಕ್ಕೆ ದಿವ್ಯದೃಷ್ಟಿಯು ಬೇಕು. ಅಂತಹ ದೃಷ್ಟಿಯೆಂದರೆ ಮೇಲ್ತರದ ಅತ್ಯುಚ್ಚ ಜ್ಞಾನವೇ ಹೊರತು ಅನ್ಯವಲ್ಲ. ಇಂತಹ ದೃಷ್ಟಿಯನ್ನು ಪಡೆದವರಿಗೆ ದೇವರು ಎಲ್ಲೆಲ್ಲಿಯೂ ತುಂಬಿ ನಿಂತಿದ್ದಾನೆ. ಅವನಲ್ಲದೆ ಮತ್ತಾವುದೂ ಅವರಿಗೆ ಗೋಚರಿಸುವದೇ ಇಲ್ಲ. ಈ ಬಗ್ಗೆ ಮಹಾನುಭಾವರಾದ ಶ್ರೀಬಸವಣ್ಣನವರ ವಚನವು ಮೇಲೆ ಕೊಡಲ್ಪಟ್ಟಿದೆ. ಇದು ಸುಜ್ಞಾನಸಂಪನ್ನರ ಮಾತಾಯಿತು. ನಮಗೆ ಈಗ ಅವರ ಗೊಡವೆ ಬೇಡ. ಆದರೆ ಮಿಕ್ಕವರ ಸಲುವಾಗಿ ಪುರಾಣಾದಿ ಗ್ರಂಥಗಳು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ ಕರ್ತನಾದ ಸಕಲ ಪರಮೇಶ್ವರನ ಪುಸಮಸಕಾದ ಕಲ್ಪನೆಯನ್ನಾದರೂ ತಂದುಕೊಡುವ ಕುರಿತು, ಏನು ಉಸುರಿರುವವೋ ಅದನ್ನೇ ಸ್ವಲ್ಪದರಲ್ಲಿ ವಿವೇಚಿಸುವದು ಈ ಬರಹದ ಉದ್ದೇಶವಾಗಿದೆ.

ಹಿಂದ ತತ್ವಶಾಸ್ತ್ರಜ್ಞರು ಸ್ಥೂಲವಾನದಿಂದ ವಿಶ್ವರೂಪಿ ದೃಶ್ಯ ದೇವನನ್ನು ಏಷ್ಮೈಯ್ಯನೆಂದು ವರ್ಣಿಸಿರುವರು. ಪೃಥ್ವಿ ಜಲ ಅಗ್ನಿ ವಾಯು ಆಕಾಶಗಳೆಂಬೈದು ಮಹಾಭೂತಗಳು, ರವಿ ಶಶಿಗಳೆಂಬ ದಿವ್ಯವಾದ ಮಹಾಪ್ರಕಾಶಿಕೆಗಳು, ಆತ್ಮನೆಂಬ ಸರ್ವವ್ಯಾಪಿ ಚೈತನ್ಯ ಶಕ್ತಿಯು ಈ ಎಂಟು ಒಡವೆಗಳಿಂದ ಜಗತ್ತು ಉತ್ಪತ್ತಿಹೊಂದಿ ಬಾಳಿ, ತನ್ನ ಕಾರ್ಯದಲ್ಲಿ ಅವ್ಯಾಹತವಾಗಿ ನಿಮಗ್ನವಾಗಿರುವದರಿಂದ ಇವೇ ದೇವರ ಅಷ್ಟತನುವೆಂದು (ಸಾಕಾರಸ್ಥೂಲ ಸ್ವರೂಪವೆಂದು) ಹೇಳಿದ್ದಾರೆ. ಇದಲ್ಲದೆ ಪುರಾಣದಲ್ಲಿ ಅವನಿಗೆ (ಶಿವನಿಗೆ) ಮನುಜ ಪ್ರಾಣಿಯಂತೆಯೇ, ತದ್ರೂಪ ಆಕಾರವನ್ನು ಕಲ್ಪಿಸಿ ಬರೆದಿದ್ದಾರೆ. ಅದರಿ ಅವನಿಗೆ ಐದು ಮುಖಗಳೂ ಮೂರು ಕಣ್ಣುಗಳೂ ಹತ್ತು ತೋಳುಗಳೂ ಇರುವವೆಂದಿದ್ದಾರೆ. ಹಾಗು ಅವನು – ಗಂಗೆ, ಚಂದ್ರ, ವಿಷ, ಭಸ್ಮ, ತ್ರಿಶೂಲ, ಸರ್ಪ, ಗಜ ಚರ್ಮ, ರುಂಡಮಾಲೆಗಳನ್ನು ಧರಿಸಿಕೊಂಡಿರುವನು. ನಂದಿ ವಾಹನನಾಗಿರುವನು. ಸ್ಮಶಾನದಲ್ಲಿ ವಾಸಿಸುವನು. ಭೂತಗಣದಿಂದ ಸೇವಿಸಲ್ಪಡುವನು. ಮನಬಂದಂತೆ ತಾಂಡವನೃತ್ಯವಾಡುವನು. ಕಾಮ ಸಂಹರ–ಕಾಲಿಮರ್ದನ–ಸ್ವಯಂಭುವಾಗಿರುವನು. ಆದರೂ ಅವನಿಗೆ ಪಾರ್ವತಿ ಎಂಬ ಹೆಂಡತಿಯೂ ವಿಘ್ನೇಶ್ವರ ಷಣ್ಮುಖ ವೀರಭದ್ರರೆಂಬ ಮೂವರು ಮಕ್ಕಳೂ ಇರುವರು. ಭಿಕ್ಷೆಯಿಂದ ಜೀವಿಸುವನು ಇತ್ಯಾದಿ ಇತ್ಯಾದಿ ಉಲ್ಲೇಖಿಸಿರುವರು. ಇವೆಲ್ಲ ಉತ್ಪ್ರೇಕ್ಷಾ ರೂಪವಾಗಿರುವದರಿಂದ ಹೀಗೆಂದರೇನೆಂಬದನ್ನು ಕೆಳಗೆ ಕ್ರಮವಾಗಿ ಯಥಾಮತಿ ಆಲೋಚಿಸುವೆನು.

೧ ಪಂಚಮುಖಗಳು— ಪೃಥ್ವಿ, ಜಲ, ಅಗ್ನಿ, ವಾಯು ಆಕಾಶಗಳೆಂಬ ಐದು ಮಹಾಭೂತಗಳೇ ಶಿವನ ಸ್ಥೂಲಪಂಚಮುಖಗಳೆಂದು ನಿರೂಪಿತವಾಗಿವೆ. ಇವುಗಳ ದ್ವಾರವಾಗಿಯೇ ಅವನು ಸಾಕಾರತ್ವವನ್ನು ಹೊಂದುವನು. ಈ ಪಂಚತತ್ವಗಳು ಪಂಚೀಕೃತದಿಂದ ೨೫ ತತ್ವಗಳಾಗಿ ಪಿಂಡಾಂಡವಾಗಿರುವದು. ಪಿಂಡಾಂಡದಲ್ಲಿದ್ದುದೇ ಬ್ರಹ್ಮಾಂಡದಲ್ಲಿಯೂ ಇರುವದು.

೨ ತ್ರಿನೇತ್ರಗಳು— ಜಗತ್ತಿನಲ್ಲಿರುವ ಸೂರ್ಯ ಚಂದ್ರ ಅಗ್ನಿಗಳೆಂಬ ಪ್ರಕಾಶಿತ ವಸ್ತುಗಳೇ ಶಿವನ ಮೂರು ಕಣ್ಣುಗಳು. ಸೂರ್ಯನು ಉಗ್ರನಾಗಿ ಪ್ರಖರತೆಯಿಂದ ಪ್ರಕಾಶಿಸುತ್ತಾನೆ. ಚಂದ್ರನು ಸೌಮ್ಯನಾಗಿ

ಶಾಂತಸ್ವರೂಪದಿಂದ ಬೆಳಗುವನು. ಅಗ್ನಿಯು ಪ್ರಕಾಶಿಸುವದಲ್ಲದೆ, ಸರ್ವಪದಾರ್ಥಗಳನ್ನು ಉರುಹಿ ಒಂದೇ ಒಂದಾದ ಐಕ್ಯ ಸ್ವರೂಪದ ಭಸ್ಮಸ್ಥಿತಿಗೆ ತರುವನು. ಇದು ಹಣೆಗಣ್ಣೆಂದೂ ಪ್ರಳಯ ಕಾಲದಲ್ಲಿ ತೆರೆಯಲ್ಪಡುವದೆಂದೂ ಹೇಳಿದ್ದಾರೆ. ಇದೇ ಅಷ್ಟ ರುದ್ರಾಕ್ಷಿಯು. ನಿಜವಾಗಿ, ಈ ಅಗ್ನಿನೇತ್ರವು ಜ್ಞಾನಸ್ವರೂಪವು. ತಲೆಯಲ್ಲಿರುವ ಮಿದುಳಿನ ಶಕ್ತಿಯು. ಐಕ್ಯಸ್ವರೂಪದ ಸತ್ಯಜ್ಞಾನದಿಂದಲೇ ಜಗವು ನಾಶವಾಗಿ, ಒಂದೇ ಒಂದು ಪರಬ್ರಹ್ಮ (ಪರಮಾತ್ಮ) ಉಳಿಯುವದು. ಇದೇ ಜಗತ್ಪ್ರಳಯವು. ಅವಶೇಷ ಪರಮಾತ್ಮನೇ ಭಸ್ಮವು. ಭಸ್ಮಕ್ಕೂ ಪರಮಾತ್ಮತ್ವಕ್ಕೂ ಅಭೇದವು. ಈ ಮೂರು ನೇತ್ರಗಳನ್ನು ನಿರೀಕ್ಷಿಸಿದರೆ ಶಿವನು ತೇಜೋರೂಪಿಯಲ್ಲದೆ, ಉಗ್ರನೂ ಸೌಮ್ಯನೂ ಜ್ಞಾನನಿಧಿಯೂ ಆಗಿರುವನೆಂಬುದು ವ್ಯಕ್ತವಾಗುತ್ತದೆ.

೩ ದಶಭುಜಗರು— ಸುತ್ತುಮುತ್ತಲಿನ ಪೂರ್ವಾದಿ ಎಂಟು ದಿಕ್ಕುಗಳೂ, ಕೆಳಗೆ ಮೇಲೆ ಎಂಬೆರಡು ಬದಿಗಳೂ ಕೂಡಿ ಹತ್ತು ದಿಕ್ಕುಗಳಾಗುವವು. ಇವೇ ಪರಮಾತ್ಮ ತೋಳುಗಳೆಂದು ಬಗೆದಿರುವರು. ಇದರಿಂದ ಅವನು ಎಲ್ಲೆಲ್ಲಿಯೂ ವ್ಯಾಪ್ತನಾಗಿರುವನೆಂಬುದು ಸೂಚಿತವಾಗುವದು.

೪ ಗಂಗಾಧರ— ಶಿವನು ಗಂಗೆಯನ್ನು ಜಡೆಯಲ್ಲಿ ಧರಿಸಿದ್ದಾನೆ. ಗಂಗೆಯೆಂದರೆ ನೀರು, ಜಡೆಯೆಂದರೆ ಮೋಡಗಳು. ಈ ಮೇಘಗಳಿಂದಲೇ ಮಳೆದು ರೂಪದಿಂದ ನಮಗೆ ನೀರು ಸಿಗುವದಿಲ್ಲವೇ? ಆದುದರಿಂದ ಶಿವನು ಗಂಗಾಧರನೆಂದು ಹೇಳಲ್ಪಟ್ಟನು.

೫ ಚಂದ್ರಧಾರಿ— ಶಿವನು ಚಂದ್ರನನ್ನು ಶಿರದಲ್ಲಿ ಧರಿಸಿರುವನೆಂದು ಕಲ್ಪಿಸಿ, ಅವನಿಗೆ ಚಂದ್ರಶೇಖರನೆನ್ನುವರು. ಚಂದ್ರನಂತೆ ಪರಹಿತ ಗುಣವುಳ್ಳವನೂ ಅಮೃತತ್ವ ನೀಡುವವನೂ ಆದುದರಿಂದಲೇ ಅವನು ಚಂದ್ರಧರನೆಂದು ಹೇಳಲ್ಪಟ್ಟನು. ಇದರಿಂದ ಶಿವನು ಶಾಂತನೂ ಕಲ್ಯಾಣಕರ ಸ್ವರೂಪನೂ ಭಕ್ತವತ್ಸಲನೂ ಉದ್ಧಾರಕನೂ ಎಂಬದು ತಾನೇ ವ್ಯಕ್ತವಾಗುವದು.

೬ ವಿಷಧರ— ವಿಷ-ಅಮೃತವೆಂಬೆರಡು ಪದಾರ್ಥಗಳು ತೀರ ವಿರುದ್ಧಭಾವುಗಳು. ಅಮೃತವು ಮರಣವನ್ನು ತಪ್ಪಿಸಿದರೆ, ವಿಷವು ಅದನ್ನು

ಒದಗಿಸುತ್ತದೆ. ಸಂಸಾರದಲ್ಲಿ ಸುಖ ದುಃಖಗಳೆರಡೂ ಒಂದರೊಳಗೊಂದು ಬೆರೆದೇ ಇರುವವು. ನಾವು ಶುದ್ಧ ಸುಖವನ್ನು ಬಯಸಿದರೆ ಅದರೊಡನೆಯೇ ಅನಿಷ್ಟವಾದ ದುಃಖವು ತಾನು ಸಿದ್ಧವಾಗಿ ನಿಂತಿರುವದು. ಈ ಸುಖ ದುಃಖಗಳೇ ಲೌಕಿಕದಲ್ಲಿ ಅಮೃತ-ವಿಷಗಳೆಂದು ಭಾವಿಸಲ್ಪಟ್ಟವೆ. ಜ್ಞಾನಿಗಳ ದೃಷ್ಟಿಯಲ್ಲಿ ನಿಜವಾಗಿ ದುಃಖವು ಇಲ್ಲೇ ಇಲ್ಲ. ಅದು ಕೇವಲ ಅಜ್ಞಾನದ ಫಲವು. ಅವೆರಡಕ್ಕೂ ಪರಮಾತ್ಮನೇ ಆಶ್ರಯನಾಗಿರುವದರಿಂದ ಅವನಿಗೆ ಎರಡೂ ಪ್ರಿಯ. ದುಃಖವನ್ನಾದರೂ ಅಷ್ಟೇ ಆನಂದದಿಂದ ಅತನು ಗ್ರಹಿಸುವನು. ಅದುದರಿಂದ ಅವನು ವಿಷಧರನೆಂದು ಪ್ರಸಿದ್ಧಿ ಪಡೆದನು. ಇದೇ ಕಾರಣದಿಂದಲೇ ಅವನಿಗೆ ನೀಲಕಂಠನೆಂದೂ ಕರೆದರು. ದುಃಖವು ಗದ್ಗದ ಸ್ವರೂಪದಿಂದ ಕಂಠದಲ್ಲಿಯೇ ಪ್ರಕಟವಾಗುವದರಿಂದ ಅವನು ವಿಷವನ್ನು ಕಂಠದಲ್ಲಿ ಟ್ಟುಕೊಂಡಿರುವನೆಂದು ಭಾವಿಸಿದರು.

೭ ಭಸ್ಮ ಚರ್ಚಿತ— ಈ ಭಸ್ಮವು, ಭಿನ್ನ ಭಿನ್ನ ಸ್ವರೂಪದ ಪದಾರ್ಥಗಳು ಅಗ್ನಿಯಿಂದ ಸುಟ್ಟಮೇಲೆ ಉಳಿಯುವ ಐಕ್ಯ ಸ್ವರೂಪದ ವಸ್ತುವು. ಆದುದರಿಂದ ಇದು ಪರಮಾತ್ಮ ಸ್ವರೂಪವೆಂದು ಮೇಲೆ ನೇತ್ರದ ವರ್ಣನೆಯಲ್ಲಿ ಹೇಳಿರುತ್ತದೆ. ಪರಮಾತ್ಮನು ಚಿತಾ ಭಸ್ಮವನ್ನು ತನ್ನಂಗಕ್ಕೆ ಪೂಸಿಕೊಳ್ಳುವನೆಂದು ಪೌರಾಣಿಕರು ಹೇಳುತ್ತಾರೆ. ಇಲ್ಲಿ ಜಗತ್ತೇ ಚಿತೆಯು. ಹಣೆಗಣ್ಣಿನಿಸುವ ಜ್ಞಾನಾಗ್ನಿಯಿಂದ ಅದನ್ನು ಉರುಹಲು (ನಾಮ ರೂಪಗಳನ್ನು ಕಳೆಯಲು), ಅದು ಒಂದೇ ಒಂದಾದ ಸಚ್ಚಿದಾನಂದ ಪರಮಾತ್ಮ ಸ್ವರೂಪವೇ ಉಳಿಯುವದು. ಆ ಉಳುಮೆಯೇ ಶಿವನಾಗಿರುವದರಿಂದ ಅವನು ಭಸ್ಮ ಚರ್ಚಿತನೆಂದು ಹೇಳಲ್ಪಟ್ಟನು.

೮ ತ್ರಿಶೂಲಪಾಣಿ— ತ್ರಿಪುರಾಸುರರೆನಿಸಿದ ಆಣವ-ಮಾಯಾ-ಕಾರ್ಮಿಕಗಳೆಂಬ ಮೂರ್ಮಲಗಳನ್ನು, ಏಕಕಾಲಕ್ಕೆ ನಾಶಗೊಳಿಸುವ ಸಲುವಾಗಿ, ಮೂರು ಮೊನೆಗಳುಳ್ಳ ಶಸ್ತ್ರವನ್ನು (ಇಷ್ಟ-ಪ್ರಾಣ-ಭಾವಗಳೆಂಬ ಲಿಂಗ ರೂಪವನ್ನು) ಧರಿಸಿದನು. ಇವನ್ನೇ ಗುರು-ಲಿಂಗ-ಜಂಗಮವೆಂದೂ ವಿಭೂತಿ ರುದ್ರಾಕ್ಷಿ ಮಲತ್ರಯವೆಂದೂ ಸಹ ಹೇಳಬಹುದು. ಈ ಮೂರು ಒಂದೇ ಸ್ವರೂಪವಾಗಿದ್ದು ಹೆಸರಿನಲ್ಲಿ ಮಾತ್ರ ಭಿನ್ನವೆನಿಸುತ್ತವೆ. ತ್ರಿದಳಾತ್ಮಕವಾದ ಬಿಲ್ವಪತ್ರೆಯು ಈ ತ್ರಿಶೂಲ ಸ್ವರೂಪವೆಂಬ

ಭಾವನೆಯನ್ನು ತಳೆದೇ, ಲಿಂಗಾಯತರು ಲಿಂಗಪೂಜೆಯಲ್ಲಿ ಅದಕ್ಕೆ ಅಷ್ಟೊಂದು ಅಗ್ರಸ್ಥಾನವನ್ನು ಕೊಟ್ಟಿರುವರು.

೯ ಸರ್ಪಭೂಷಣ— ಸುಷುಮ್ನಾ ನಾಡಿಯೇ ಕುಂಡಲಿ ಸರ್ಪವಾಗಿರುವದು. ಇದು ಶಿರದಿಂದ ಹೊರಟು ಕತೇರುಕಾರಜ್ಜು (ಮೆದುಳವಾಗಿರುವದು. ಇದು ಶಿರದಿಂದ ಹೊರಟು ಕತೇರುಕಾರಜ್ಜು (ಮೆದುಳ ಬಳ್ಳಿ) ಎನ್ನಿಸಿಕೊಂಡು, ಬೆನ್ನೆಲುಬಿನ ಮಣಿಗಳೊಳಗಿಂದ ಕೆಳಮುಖವಾಗಿ ಹಬ್ಬಿರುವದು. ಅದರಿಂದ ಹೊರಟ ಜ್ಞಾನ ತಂತುಗಳು ಭ್ರೂವು ಘ್ಯ, ಕಂಠ, ಹೃದಯ, ನಾಭಿ, ಗುಹ್ಯ, ಗುದಗಳೆಂಬ ಷಟ್‌ಸ್ಥಾನಗಳಲ್ಲಿ ಕೇಂದ್ರೀಕೃತವಾಗಿ, ಲಿಂಗ (ಜ್ಞಾನ) ಸ್ವರೂಪವನ್ನು ಹೊಂದಿವೆ. ಇವೇ ದೇಹಗತ ಷಡ್ಲಿಂಗಗಳು. ಆದುದರಿಂದ ಶಿವನು ಫಣಿ ಭೂಷಣನಾದನು.

೧೦ ಗಜಚರ್ಮಾಂಬರಧಾರಿ— ಗಜವೆಂದರೆ ಅಹಂಕಾರವು. ಇದರಲ್ಲಿ ದೇಹ ಪ್ರಾಣಗಳೆರಡೂ ಬರುತ್ತವೆ. ಅದನ್ನು (ಪ್ರಸಾದಿ ಸ್ಥಾನದಲ್ಲಿ ಹೇಳಿದಂತೆ) ಶಿವನೊಳಡಗಿಸುವದರಿಂದ, ಅದು ಶಿವ ಸ್ವರೂಪವೇ ಆಗಿ, ಅವನನ್ನೆ ಆಶ್ರಯಿಸುವದು. ಆದರಿಂದ "ನಾನು" ಎಂದು ಹೇಳಲ್ಪಡುವ ಸ್ಥೂಲಕಾಯವು ದೇವಾಲಯವಾಗಿ, ಒಳಗಿರುವ ಪ್ರಾಣವೇ ಲಿಂಗವಾಗುವದರಿಂದ, ಆ ಶಿವಲಿಂಗಕ್ಕೆ ಭಕ್ತ ಕಾಯವು ಮೇಲುಹೊದಿಕೆ (ಅಂದರೆ ಚರ್ಮ) ವಾಯಿತು. ಅರ್ಥಾತ್ ಶಿವನು ಗಜಚರ್ಮಾಂಬರಧಾರಿಯಾದನು.

೧೧ ರುಂಡಮಾಲಾಧರ— ಭಕ್ತವತ್ಸಲನಾದ ಶಿವನು, ಸದ್ಭಕ್ತರನ್ನು ತನ್ನಲ್ಲಿ ಬೆರಿಸಿಕೊಂಬುವದು ಸರ್ವಶ್ರುತವಷ್ಟೆ! ಅದನ್ನೇ ಸ್ಥೂಲ ರೂಪದಲ್ಲಿ ಹೀಗೆ ವರ್ಣಿಸಿದ್ದಾರೆ. ಅವರ ದೇಹವನ್ನೇ (ಆದರಲ್ಲಿ ಉತ್ತಮಾಂಗವೆನಿಸಿದ ಶಿರವನ್ನೇ) ತಾನು ಸ್ವೀಕರಿಸಿಕೊಂಡನೆಂಬುದನ್ನು ತೋರಿಸುವ ದೆಸೆಯಿಂದಲೇ ಅವನು ರುಂಡಮಾಲಾಧರನೆಂದು ಬಣ್ಣಿಸಲ್ಪಟ್ಟನು.

೧೨ ನಂದಿವಾಹನ— ನಂದಿಯಂದರೆ ಪರಿಪೂರ್ಣ ಸ್ವರೂಪರ (ಚತುಷ್ಪಾದಯುತವಾದ) ಧರ್ಮವು. ಶಿವನು ಸದ್ಧರ್ಮದಲ್ಲಿಯೇ ತೋರುವನಾದುದರಿಂದ ಆತನು ನಂದಿವಾಹನನಾದನು.

೧೩ ಸ್ಮಶಾನವಾಸಿ— "ಯದ್ಭಸ್ಮಂ ತನ್ನಶ್ವಂ" ಎಂಬಂತೆ ಜಗತ್ತಿನೆಲ್ಲ ಲಯಕ್ಕೆ ಸ್ಥಾನವಾಗಿರುವದರಿಂದ ಅದು ಸ್ಮಶಾನವೇ ಸರಿ! ಈ ಜಗತ್ತಿನಲ್ಲಿಯೇ ಪರಮಾತ್ಮನು ಜೈತನ್ಯ ಸ್ವರೂಪವಾಗಿ ಬೆರೆದು ವಾಸಿಸುವದರಿಂದ, ಅವನು "ಸ್ಮಶಾನವಾಸಿ" ಎಂಬುದು ಸತ್ಯವಲ್ಲವೇ?

೧೪ ಭೂತಗಣಸೇವಿತ— ಭೂತಗಣವೆಂದರೆ ಪಂಚಮಹಾ ಭೂತಗಳು. ಇವನ್ನು ಪಂಚಮುಖಗಳ ಉಲ್ಲೇಖದಲ್ಲಿ ವಿಶದೀಕರಿಸಿರುತ್ತದೆ. ಅವುಗಳ ಮುಖಾಂತರವಾಗಿಯೇ ಪರಮಾತ್ಮನು ಸ್ಥೂಲಪ್ರಪಂಚವಾಗಿ (ನಾನಾ ರೂಪದ ಚರಾಚರ ವಸ್ತುಗಳಾಗಿ) ಪ್ರಕಟವಾಗುವದರಿಂದ ಶಿವನು ಭೂತಗಣಸೇವಿತನೆಂದು ಹೇಳಿಸಿಕೊಂಡನು.

೧೫ ತಾಂಡವನರ್ತನ— ಜಗತ್ತೇ ಪರಮಾತ್ಮನ ವಿರಾಟ್‌ಸ್ವರೂಪವು. ಅದು ಬಹು ವಿಧವಾದ ಅಸಂಖ್ಯ ಚರಾಚರಗಳಿಂದ ಕೂಡಿರುವದು. ಅವುಗಳೆಲ್ಲ ಜೈತನ್ಯ ಸ್ವರೂಪದಿಂದ ಪರಮಾತ್ಮನೇ ಸೂತ್ರಧಾರಕನು. ಅವುಗಳ ಚಲನವಲನಾತ್ಮಕ ಅನಂತ ಕ್ರಿಯೆಗಳು, ನಿರಾತಂಕವಾಗಿ ನಡೆದೇ ಇರುವವು. ಈ ಎಲ್ಲ ಚೇಷ್ಟೆಗಳ ಸಮಷ್ಟಿ ಸ್ವರೂಪವೇ ಆ ಪರಮಾತ್ಮನ ಮನಸೋಕ್ತವಾದ ತಾಂಡವನೃತ್ಯ (ಲೀಲೆ) ಆಗಿರುವದು. ಜಗತ್ತು ಪರಮಾತ್ಮನ ವಿಶ್ವತೋ (ಎಲ್ಲೆಡೆಗೆ) ಬಾಹು-ಮುಖ ಚಕ್ಷು-ಪಾದಗಳುಳ್ಳದ್ದಾಗಿರುವದೆಂಬದು ಪ್ರತ್ಯಕ್ಷ ತೋರುತ್ತದಷ್ಟೆ. ಈ ಎಲ್ಲ ಅವಯವಗಳಿಂದ ಸದೋದಿತವಾಗಿ ನಡೆದಿರುವ ಅಪಾರವಾದ ವ್ಯಾಪಾರಗಳ ಪರಿಣಾಮವೇ ತಾಂಡವನೃತ್ಯವೆನಿಸುವದು.

೧೬ ಪಾರ್ವತೀವಲ್ಲಭ- ಪಾರ್ವತಿಯು ಹಿಮವಂತರಾಜನ ಮಗಳು. ಹಿಮಾಲಯ ಪರ್ವತದಿಂದ ಅನೇಕ ನದಿಗಳು ಉಗಮ ಹೊಂದಿ ಹರಿದು ಆ ಪರ್ವತದ ಮಣ್ಣನ್ನು ಎಳೆದು ತಂದು, ಉತ್ತರ ಹಿಂದುಸ್ಥಾನದ ಬೈಲು ಭೂಮಿಯನ್ನೆಲ್ಲ ಬಹು ಬೆಳೆಯುಳ್ಳ ಭೂಮಿಯನ್ನಾಗಿ ಮಾಡಿರುತ್ತವೆ. (ಬೇರೆ ಕಡೆಗೆ ಇದೇ ಕ್ರಮವು). ಆರ್ಯರು ತಾವು ಮೊದಲು ಉತ್ತರ ಹಿಂದುಸ್ತಾನದಲ್ಲಿಯೇ ಈ ಅನುಭವವನ್ನು ಪಡೆದುದರಿಂದ, ಈ ಫಲಭರಿತವಾದ ಭೂದೇವಿಯೇ ಗಿರಿಕನ್ಯೆ ಎಂದು ಊಹಿಸಿದರು. ಇವಳೇ ಪಾರ್ವತಿಯು. (ಪರ್ವತ-ಇ) ಈಕೆಯೇ ಸಕಲ ಪ್ರಾಣಿಗಳ ಅನ್ನದಾತೆ ಎಂದು ಅನ್ನಪೂರ್ಣೆ ಎಂಬ ಅಭಿಧಾನವನ್ನು ಹೊಂದಿರುವಳು.

೧೭ ಮಕ್ಕಳೊಂದಿಗ– ಶಿವನಿಗೆ ಗಜಾನನ. ಷಣ್ಮುಖ, ವೀರೇ ಶರೆಂಬ ಮೂವರು ಮಕ್ಕಳಿರುವರೆಂದು ಹೇಳಿದ್ದಾರೆ. ಈ ವಿಷಯವಾಗಿ ಆಲೋಚಿಸುವಾ.

(ಅ) ಗಜಾನನ– ಇವನಿಗೆ ವಿಘ್ನೇಶ್ವರನೆಂದೂ, ಗಣಪತಿ (ವಿನಾಯಕ) ನೆಂದೂ ಬೇರೆ ಹೆಸರುಗಳೂ ಸಹ ಉಂಟು. ಶಿವನು ಚಿದ್ರೂಪನು. "ಪ್ರಜ್ಞಾನಂ ಬ್ರಹ್ಮ" ಎಂದು ಶ್ರುತಿಯ ಸಾರುತ್ತದೆ. ಈ ಶಿವನ ಮಕ್ಕಳೆಂದರೆ ಜ್ಞಾನದ ಸಂತತಿಯೇ ಹೊರತು, ಮತ್ತೇನೂ ಅಲ್ಲ. ಜ್ಞಾನದಲ್ಲಿಯೇ ಚಾತುರ್ಯವು ತಲೆದೋರುತ್ತದೆ. ಬಗೆಬಗೆಯ ಯುಕ್ತಿ ಪ್ರಯುಕ್ತಿಗಳು ಹೊರಹೊಮ್ಮುತ್ತವೆ. ಇವುಗಳವಲಂಬನದಿಂದ ನಡೆದರೆ ಸರ್ವ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವವು. ಬರೇ ಶಕ್ತಿಯನ್ನುಪಯೋಗಿಸಿದರೆ ಹಸಗೆಡುವ ಸಂಭವವುಂಟು. ಆದುದರಿಂದ ಈ ಚಾತುರ್ಯ ಯುಕ್ತಿಗಳಿಗೆ ವಿಘ್ನೇಶ್ವರನೆಂದು ಕರೆದಿರುವರು. ಪ್ರತಿಯೊಂದು ಕಾರ್ಯಾರಂಭದಲ್ಲಿ ವಿಘ್ನೇಶ್ವರನನ್ನು ಪೂಜಿಸಬೇಕು. ಅಂದರೆ "ಶಕ್ತಿಪ್ರಯೋಗವನ್ನೇ ಅವಲಂಬಿಸುವದಕ್ಕಿಂತ ಮೊದಲು, ಯುಕ್ತಿ-ಪ್ರಯುಕ್ತಿಗಳಿಂದ ಕಾರ್ಯ ಸಾಧಿಸಬಹುದೇನು," ಎಂಬ ಆಲೋಚನೆಯನ್ನು ಮಾಡಬೇಕು. ಇದೇ ವಿಘ್ನೇಶ್ವರ ಪೂಜೆಯ ಅರ್ಥವು. ಇಂತಹ ಹಂಚಿಕೆಗಾರನೇ ಸಮಾಜದಲ್ಲಿ ಮುಂದೆ ಬಂದು ಮೆರೆಯುವನು. ಅವನೇ ಮುಖಂಡನು ಅಥವಾ ವಿನಾಯಕನು. ಜ್ಞಾನ-ಯುಕ್ತಿ-ಚಾತುರ್ಯಗಳು ತಲೆಯ ಕೆಲಸಗಳು. ತಲೆಯಿಂದ ದೊಡ್ಡವನೆಂದು ತೋರಿಸುವ ಸಲುವಾಗಿಯೇ ಅತನಿಗೆ ಆನೆಯ ಶಿರವನ್ನು ಯೋಜಿಸಿದ್ದಾರೆ.

ಗಣಪತಿಯ ಬಗ್ಗೆ ಇರುವ ಒಂದು ಆಖ್ಯಾಯಿಕೆಯನ್ನು ಇಲ್ಲಿ ಹೇಳುವದು ಅಪ್ರಸ್ತುತವಾಗಲಾರದು. ಅದೇನೆಂದರೆ:– ಒಮ್ಮೆ ಶಿವನು ಜಗತ್ ಪ್ರದಕ್ಷಿಣೆಯನ್ನು ಮಾಡಿ ಮೊದಲು ಬಂದವರಿಗೆ ಬಹುಮಾನವ ನ್ನಿಟ್ಟಾಗ ಗುಹನು, ಶಕ್ತಿ ಪ್ರಯೋಗದಿಂದ ಬೇಗ ಸುತ್ತರಿದು ಬರಬೇಕೆಂದೂ, ತಾನೇ ಪಾರಿತೋಷಕ ಪಡೆಯಬೇಕೆಂದೂ, ಗಡಿಬಿಡಿಯಿಂದ ಮಯೂರ ವಾಹನನಾಗಿ ಭೂಪ್ರದಕ್ಷಿಣೆಗೆ ಹೊರಟು ಹೋದನು. ಆದರೆ ಸ್ಥೂಲಕಾಯನಾದ ಗಣಪತಿಯು ಚತುರನೂ, ಯುಕ್ತಿಗಾರನೂ ಆದುದರಿಂದ, ಜಗತ್ತು ಶಿವನಲ್ಲೇ ಗರ್ಭೀಕರಿಸಿರುವದನ್ನರಿತು, ಆವನಿಗೇ

ಪ್ರದಕ್ಷಿಣೆ ಹಾಕಿ ಸ್ವಸ್ಥ ಕುಳಿತುಬಿಟ್ಟನು. ಆಗ ಅವನ ಜಾಣತನಕ್ಕೆ ಮೆಚ್ಚಿ ಶಿವನು ಗಜಾನನನಿಗೇ ಮೆಚ್ಚುಗೊಟ್ಟನು. ಇದರಿಂದ ಗಣಪತಿಯು, ನಿಜ ಸ್ವರೂಪವೇನೆಂಬದು ವಿದಿತವಾಗುವದಿಲ್ಲವೆ?

ಇವನು ಪಾರ್ವತೀ ಪುತ್ರನು. ಸ್ವತಃ ದೇವಿಯರೇ ನಿರ್ಮಿಸಿದರಂತೆ. ಹೀಗೆ ಬರೇ ಶಕ್ತಿ ಸಂಜಾತನಾದವನಿಂದ ಅದಾವ ಕಾರ್ಯವೂ ಆಗದೆಂದು ಬಗೆದು ಪರಮಾತ್ಮನು ಕೃಪಾಭರಿತನಾಗಿ, ಆತನ ಮೊದಲಿನ ತಲೆಯನ್ನು ತೆಗೆದು, ತಾನು ಅದೇ ಅನುಗ್ರಹಿಸಿ ಸ್ವೀಕರಿಸಿ ತಂದ ಗಜಾಸುರನ ಬೃಹನ್ಮಸ್ತಕವನ್ನು ದಯಪಾಲಿಸಿದನು. ಹೀಗೆ ಅವನು ಶಿವಕರುಣೆಯಿಂದ ವಿಘ್ನಹರನೂ, ಗಜವದನನೂ ಆದನು; ಇರಲಿ. ಶಕ್ತಿಯ ಪ್ರಯೋಗ ಮಾಡಿ ಮಾಡಿ ಬೇಸತ್ತು ಹತಾಶರಾದ ಮೇಲೆ ಮನುಷ್ಯರು ಯುಕ್ತಿಯ ಕಡೆಗೆ ತಿರುಗುವ ಪರಿಪಾಠವುಂಟು. ಆದುದರಿಂದ ಶಕ್ತಿಯೇ ಯುಕ್ತಿಯ ತಾಯಿಯು.

(ಬ) ಷಣ್ಮುಖ— ತಾರಕಾಸುರನ (ಅನಿರ್ದ್ಯೆಯೆನಿಸುವ ಅಜ್ಞಾನದ) ಸಂಹಾರಕ್ಕೆ ಈತನ ಜನ್ಮವಾಯಿತು. ಶಿವನ ಅಚ್ಚ ವೀರ್ಯವು (ಜ್ಞಾನದ ಅಚ್ಚ ಕಚ್ಚು) ಅಗ್ನಿಯ ಮುಖಾಂತರವಾಗಿ, ಚಮತ್ಕಾರ ರೀತಿಯಿಂದ ಋಷಿಪತ್ನಿ (ಋಷಿಗಳೆಂಬ ಪತ್ನಿ) ಯರ ಗರ್ಭದಲ್ಲಿ ಸೇರಿ, ಅಲ್ಲಿಂದ ಗಳಿತವಾಗಿ ಪುನಃ ಕಲೆತು ಮುಖಗಳು (೬) ಆರಾದರೂ ದೇಹವು ಒಂದೇ ಇರುವ ವಿಚಿತ್ರ ಶಿಶುವು ಉತ್ಪನ್ನವಾಯಿತು. ಅದನ್ನೇ ಪಾರ್ವತೀ ದೇವಿಯು ಸಲುಹಿ ಮಾತೆ ಎನಿಸಿದಳು. ಈತನು ಮಹಾಜ್ಞಾನಿಯೂ, ಪರಮ ವೈರಾಗ್ಯಶೀಲನೂ ಆದನು.

ಜೀವೇಶ್ವರೈಕ್ಯವೆಂಬ ಆತ್ಯಂತಿಕ ನಿಜ ಜ್ಞಾನವನ್ನು ಬೇರೆ ಬೇರೆ ಮಾರ್ಗಗಳಿಂದ ತೋರಿಸಿಕೊಡುವ ಷಡ್ದರ್ಶನಗಳೆಂಬ ಆರು ಶಾಸ್ತ್ರಗಳನ್ನು ಬೇರೆ ಬೇರೆ ಋಷಿ ಜನರು ಬರೆದದ್ದು ಎಲ್ಲರಿಗೂ ಗೊತ್ತುಂಟು. ಇಂತಹ ಶುದ್ಧ ಶಿವಜ್ಞಾನವು ಅವರ ಗರ್ಭದಲ್ಲಿ ಮೂಡಿ ಹೊರಬಿದ್ದುದರಿಂದ ಋಷಿಪತ್ನಿಯರಿಂದ ಜನ್ಮವಾಯಿತೆಂದು, ಸುತ್ತು ಹಾಕಿ ಪೌರಾಣಿಕರು ವರ್ಣಿಸಿರುವರು. ಗ್ರಂಥಗಳು ಭಿನ್ನವಾಗಿದ್ದರೂ ಒಂದೇ ಪೊಂದಾದ ವಿಷಯವನ್ನೇ ಪ್ರತಿಪಾದಿಸುವದರಿಂದ, "ಮುಖಗಳು ಆರು, ದೇಹವು ಒಂದೇ" ಎಂದು ಹೇಳಿದ್ದಾರೆ.

(ಕ) ವೀರಭದ್ರ— ಸೃಷ್ಟಿಯ ಸ್ವಾಭಾವಿಕವಾದ ನಿಗ್ರಹ ಶಕ್ತಿಯೇ (ನಿಯತಿ ತತ್ವರೇ) ಈ ವೀರಭದ್ರನು. ಅಜ್ಞಾನ ವಶದಿಂದ ಸೃಷ್ಟಿಯ ನಿಯಮಗಳನ್ನು ಉಲ್ಲಂಘಿಸುವವರಿಗೆ ಅದು ತಪ್ಪದೆ ಶಿಕ್ಷಿಸುವದು. "ವಿನಾಶಕಾಲೇ ವಿಪರೀತ ಬುದ್ಧಿಃ" ಎಂದು ಸುಭಾಷಿತ ಉಂಟು. ಮನುಷ್ಯನು ದುರ್ಬುದ್ಧಿಯನ್ನು ಹಿಡಿದರೆ, ಅವನು ತನ್ನ ಮರಣಕ್ಕೆ ತಾನೇ ಆಮಂತ್ರಣವನ್ನಿತ್ತನೆಂದು ತಿಳಿಯಬೇಕು. ದುಷ್ಟತನ, ದುರಾಚಾರ, ಪರಪೀಡೆ, ಮದಾಂಧತೆ, ಕ್ರೂರ ಕೃತ್ಯಗಳು ಇವೇ ಮೊದಲಾದವು ದುರ್ಬುದ್ಧಿಯ ಲಕ್ಷಣಗಳು. ಇವುಗಳಿಂದ ಮನುಷ್ಯನು ತಾನೇ ನಾಶವಾಗುತ್ತಾನೆ.

"ದೇವಂ ಕೊಲ್ಲಂ ಮುನಿದಂಗಳ್‌ವೋಲ್ ಕೋಲಿಂದಂ।
ದಾವಂ ವಧ್ಯಂ ಕುಮತಿಯ ನವಗೀವಂ ಮುನ್ನಂ॥"

ಎಂದು ನೀತಿಯುಂಟು. ಅದಕಾರಣ ಶಿವನ ಅವಕೃಪೆಯೇ ವೀರಭದ್ರನು (ನಿಗ್ರಹಶಕ್ತಿಯು) ಎಂಬದರಲ್ಲೇನೂ ಸಂದೇಹವಿಲ್ಲ. ದಕ್ಷಾಧ್ವರ ಕಾಲದಲ್ಲಿ ವೀರಭದ್ರನ ಜನ್ಮವಾಯಿತೆಂದು ಪುರಾಣವುಂಟು. ಆಗ ದಕ್ಷಬ್ರಹ್ಮನ ನಾಸ್ತಿಕ್ಯ ಬುದ್ಧಿ, ಅಹಂಕಾರ, ಅವಿವೇಕತನಗಳ ಅತಿರೇಕವಾಯಿತು. ಅದನ್ನು ಕಂಡು ಶಿವನು ಅತ್ಯಂತ ತ್ರಾಸಗೊಂಡು ವೀರಭದ್ರನನ್ನು ಸೃಜಿಸಿ ದಕ್ಷನನ್ನು ಶಿಕ್ಷಿಸುವದು ಅವಶ್ಯವಾಯಿತೆಂದು ಪೌರಾಣಿಕರ ಮತವು.

೧೮. ಕಾಮಸಂಹರ— ಕಾಮವೆಂದರೆ ಬಯಕೆಯು. ಜಗತ್ತಿನೊಳಗಿನ ಸರ್ವ ಪದಾರ್ಥಗಳನ್ನು ಮನುಷ್ಯನು ಇಚ್ಛಿಸುವದು ಸ್ವಾಭಾವಿಕವು. ಅದರಲ್ಲಿಯೂ ಸ್ತ್ರೀ ವಿಷಯಕ ಮೋಹವು ದುರ್ನಿವಾರವಾಗಿರುವದರಿಂದ, ಆ ಬಯಕೆಯೇ ಮುಖ್ಯವಾಗಿ ಕಾಮವೆನಿಸುತ್ತದೆ. ಜಗತ್ತು (ಅಂದರೆ ಅದರೊಳಗಿನ ಸರ್ವ ಪದಾರ್ಥಗಳು) ಶಿವನಲ್ಲಿಯೇ ಹುಟ್ಟಿ ಬೆಳೆದು ಅಡಗುವವಾದ ಕಾರಣ, ಅವೆಲ್ಲ ಅವನಿಗೆ ಅಭಿನ್ನವಾಗಿಯೇ ಉಂಟು. ಆದುದರಿಂದ ಅವುಗಳ ಆಶೆಯು ಅವನಿಗೆ ಹುಟ್ಟುವದು ಅಸಂಭವ. ಅಂತೇ ಅವನು ಸದಾ ಶಾಂತನೂ ಅನಂವಛನನೂ ಆಗಿ ಕಾಮಸಂಹಾರಕನೆನಿಸಿರುವನು.

೧೯ ಕಾಲಮರ್ದನ— ಅಂದರೆ ಯಮನನ್ನು ನಾಶಗೊಳಿಸಿದವ. ಕಾಲವು ದಿನ ತಿಂಗಳು ವರ್ಷಾದಿಗಳಿಂದ ಎಣಿಸಲ್ಪಡುತ್ತದೆ. ಇವೆಲ್ಲ ಸೂರ್ಯನಿಂದಲೇ ಹುಟ್ಟುವದರಿಂದ ಅವನೇ ಯಮನ ತಂದೆಯಾಗಿರುವನು. ಕೀರ್ತನಕಾರರು ಕಾಲನಿಗೆ "ಯಮಾಜಿಭಾಸ್ಕರ"ನೆಂದೂ ಹೆಸರಿಟ್ಟಿದ್ದಾರೆ. ಯಾರ ಅಸ್ತಿತ್ವಕ್ಕಾದರೂ ಕಾಲಮರ್ಯಾದೆ (ಆಯುಷ್ಯ) ಉಂಟು. ಅದು ಅನುಲ್ಲಂಘನೀಯವು. ಮನುಷ್ಯರು ಕಾಲಾಧೀನತೆಗೆ ಮರಣವೆನ್ನುತ್ತಾರೆ. ಇಂತಹ ಸಾವು ಶಿವನಿಗೆ ಇಲ್ಲವೇ ಇಲ್ಲ. ಜಗತ್ತಿನ ಆದಿಕಾರಣನು ಅವನೇ ಆಗಿರುವದರಿಂದ ಅವೆಲ್ಲ ಕೊನೆಗೆ ಅವನಲ್ಲೇ ಲೀನವಾಗುವವು. ಆದರೆ ಆ ಮೂಲಕಾರಣವಾದ ವಸ್ತುವು ಅಭಂಗವಾಗಿ ಉಳಿದೇ ಉಳಿಯುವದು. ಮಣ್ಣಿನಿಂದ ಉದ್ಭವಿಸಿದ ವಿವಿಧ ಮಡಿಕೆಗಳು ನಾಶವಾದರೂ ಅವುಗಳಿಗೆ ಕಾರಣವಾದ (ಮೂಲಧನವಾದ) ಮಣ್ಣು ಕಡೆಗೆ ನಿರ್ಬಾಧವಾಗಿ ಇರುವದಲ್ಲವೇ? ಹಾಗೇ ಪ್ರಳಯ ಮಹಾ ಪ್ರಳಯವಾದರೂ ಕೂಡ ಶಿವನು ನಿತ್ಯನಾಗಿರುವನು. ಆದುದರಿಂದ ಅವನು ಕಾಲನನ್ನು ಜಯಿಸಿದವನಾಗಿ "ಮೃತ್ಯುಂಜಯ" ನೆಂದು ಹೆಸರು ಪಡೆದಿರುವನು.

೨೦ ಸ್ವಯಂಭು— ಸಕಲ ಜಗತ್ತಿನ ಹುಟ್ಟಿಗೆಲ್ಲ ತಾನೇ ಕಾರಣನೆನಿಸುವ ಪರಮಾತ್ಮನಿಗೆ ಜನ್ಮ ಕೊಡುವ ಅವ ವಸ್ತು ಇರುವದು? ಹಾಗೆ ಇರುವದು ಶಕ್ಯವಿಲ್ಲ. ಆದಕಾರಣ ಅವನು ಸ್ವಯಂಭು (ಸ್ವತಃ ಸಿದ್ಧ, ತನ್ನಿಂದತಾನೇ ಆದವ) ನೆಂಬುದರಲ್ಲೇನು ಸಂದೇಹ? ಅವನಿಗೆ ಜನ್ಮವಿಲ್ಲೆಂಬುವದರಿಂದಲೇ ಅವನನ್ನು 'ಅಭವ' ನೆಂದು ಕರೆಯುವರು.

೨೧ ಭಿಕ್ಷುಕ— ದೇವರು ನಿಷ್ಕಾಮನೆಂದು ಮೇಲೆ ಹೇಳಿದೆಯಷ್ಟೇ! ಹಾಗಾದರೆ ಅವನು ಭಿಕ್ಷುಕನಾಗುವದು ಹೇಗೆ? ನಿಷ್ಕಾಮಿ ಮತ್ತು ಭಿಕ್ಷುಕ ಇವೆರಡೂ ಶಬ್ದಗಳು ವಿರುದ್ಧಾರ್ಥದವು. ಶಿವನು ತನ್ನ ವಿನೋದಕ್ಕಾಗಿ ಜಗತ್ತನ್ನು ನಿರ್ಮಿಸಿ, ಅದರ ಸಂರಕ್ಷಣೆಗೆ ಬೇಕಾಗುವ ಎಲ್ಲ ಪದಾರ್ಥಗಳನ್ನೂ ಸೌಕರ್ಯಗಳನ್ನೂ (ಉದಾಹರಣಾರ್ಥವಾಗಿ, ನೀರು, ಆಹಾರ, ಮಳೆ ಬೆಳೆ, ಬೆಳಕು ಇತ್ಯಾದಿಗಳನ್ನು) ನಿರಪೇಕ್ಷ ಬುದ್ಧಿಯಿಂದ ಒದಗಿಸಿರುತ್ತಾನೆ. ಅದರ ಯಾವ ಪ್ರತಿಫಲವೂ ಅವನಿಗೆ ಬೇಡ. ಇದು ಎಲ್ಲ ಪ್ರಾಣಿಗಳಾಗಿ ಅವನು ಮಾಡಿದವರ ಪ್ರದಾನ. ಹೀಗಿದ್ದು ಆತನು ಪುನಃ ಭಿಕ್ಷುಕನಾಗಿ ಭಿಕ್ಷಾವೃತ್ತಿಯನ್ನವಲಂಬಿಸಿರುವನೆಂಬುದರ ಅರ್ಥ

ವೇನು? ಅದು ಇಷ್ಟೇ:- ಅವನ ಭಿಕ್ಷೆಯು. ಇತರರಂತಹದಲ್ಲ ಅವನು ಸದಾ ಆನಂದ ಘನನು ಆದಾಗ್ಯೂ ಒಂದು ವಸ್ತುವು ಅವನಿಗೆ ಬೇಕಾಗಿದೆ. ಅದು ಅತ್ಯಂತ ಪ್ರೀತ್ಯಾಸ್ಪದವಾಗಿ ಬಿಟ್ಟಿದೆ. ಅದನ್ನು ಶ್ರೀ ಬಸವಣ್ಣನವರು ಒಡೆದು ಹೇಳಿದ್ದಾರೆ. " ವೇದಪ್ರಿಯ ಶಿವನೆಂಬರು, ಅವನು ವೇದಪ್ರಿಯನಲ್ಲ. ನಾದಪ್ರಿಯ ಶಿವನೆಂಬರು, ಅವನು ನಾದಪ್ರಿಯನಲ್ಲ... ...ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ " ಆದುದರಿಂದ. ಶಿವನಿಗೆ ಭಕ್ತರಲ್ಲಿ ಇದೊಂದೇ ಪದಾರ್ಥದ ಭಿಕ್ಷೆ ಬೇಕಾಗಿದೆ. ಅದನ್ನೇ ನೀಡಿರಿಂದು ಅವನು ಮನೆಮನೆಗೆ ತಿರುಗಾಡುತ್ತಾನೆ. ಭಕ್ತಿಯ ಭಿಕ್ಷೆಯನ್ನು ಅವನಿಗೆ ಹಾಕುವದೆಂದರೆ – ಜ್ಞಾನಿಗಳೂ ಸದಾಚಾರಿಗಳೂ ಧರ್ಮಿಷ್ಠರೂ ಆಗಿ ಬಾಳಿ, ಕೊನೆಗೆ ಅವನನ್ನೇ ಸೇರುವದು, ಎಂದು ತಿಳಿಯದೇಕು. ಈ ಭಿಕ್ಷೆಯನ್ನು ಅವನು ತನ್ನ ಸಲುವಾಗಿ ಬೇಡುವದಿಲ್ಲ. ನಮ್ಮ ಉದ್ಧಾರಕ್ಕಾಗಿಯೇ ಸರಿ.

ಇಷ್ಟಕ್ಕೇ ತಿರಲಿಲ್ಲ. ಇನ್ನೂ ಅನೇಕ ವಿಷಯಗಳು ಇವೆ. ಆದಾಗ್ಯೂ ಮೇಲಿನ ವಿವರಣೆಯಿಂದ ಸಾಕಾರ ದೇವರ ಮೂರ್ತಿಯನ್ನು ಆದಾವ ರೀತಿಯಿಂದ ಸಜ್ಜುಗೊಳಿಸಿರುವರೆಂಬದರ ಕಲ್ಪನೆಯು ಸಾಮಾನ್ಯ ಜನರಿಗೆ ಹೊಳೆಯದೆ ಇರದು. ಈ ಬರಿಹದಲ್ಲಿ ನಾನು ಕಾಣಿಸಿದುದೆಲ್ಲ ಕೇವಲ ನಿಜವಾದುದೆಂದೇ ತಿಳಿಯದಾರದು. ನನ್ನ ಬುದ್ಧಿಗೆ ಗೋಚರಿಸಿದಂತೆ ನಾನು ನಿರೂಪಿಸಿರುವೆನು. ಬಲ್ಲ ಮಹಾನುಭಾವರು ಓದಿ ನೋಡಿ, ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ, ಜನತೆಯ ಮುಂದೆ ಸತ್ಯ ಸ್ವರೂಪವನ್ನು ಅವಶ್ಯವಾಗಿ ಇಡಬೇಕೆಂದು ಕೋರುವೆನು.

ಬಸವೇಶ್ವರನಕಿಂತಲೂ ಮೊದಲಿನ ವೀರಶೈವ ಧರ್ಮ.

(ಲೇಖಕ:– ರಾ॥ ಸಾ॥ ಫ. ಗು. ಹಳಕಟ್ಟಿ.)

ವೀರಶೈವ ಧರ್ಮದ ಸ್ವರೂಪು ಬಸವೇಶ್ವರನ ಕಾಲಕ್ಕಿಂತಲೂ ಮೊದಲು ಹೇಗಿತ್ತೆಂಬುದನ್ನು ವಿವರಿಸುವದೇ ಪ್ರಸ್ತುತ ಲೇಖದ ಮುಖ್ಯ ಉದ್ದೇಶವಾಗಿದೆ. ಈ ವಿಷಯವು ಬಹು ವಾದಗ್ರಸ್ತವಾದುದೆಂಬದನ್ನು ನಾವು ಅರಿತಿದ್ದೇವೆ. ಆದರೆ ನಮ್ಮ ವಾಚಕರು ಈ ಮಹತ್ವದ ವಿಷಯವನ್ನು ಕುರಿತು ಹೆಚ್ಚಿಗೆ ವಿಚಾರ ಮಾಡಬೇಕೆಂದೆಣಿಸಿ ಕೆಲವು ಸಂಗತಿಗಳನ್ನು ನಾವು ಅವರ ಮುಂದಿಡಲು ಅಪೇಕ್ಷಿಸಿದ್ದೇವೆ. ಅವುಗಳನ್ನು ಅವರು ಲಕ್ಷಿಸಬೇಕೆಂದು ನಮ್ಮ ಸವಿನಯ ವಿನಂತಿ ಇದೆ.

ಅನೇಕರು, ಮುಖ್ಯವಾಗಿ ವೀರಶೈವೇತರರು ಬಸವೇಶ್ವರನಕಿಂತಲೂ ಮೊದಲು ವೀರಶೈವ ಧರ್ಮವೇ ಅಸ್ತಿತ್ವದಲ್ಲಿದ್ದಿಲ್ಲವೆಂದು ಅಭಿಪ್ರಾಯ ಪಡುವದುಂಟು. ಈಚೀಜೆಗೆ ವೀರಶೈವರಲ್ಲಿಯೂ ಕೂಡ ಕೆಲವರು ಇದೇ ಅಭಿಪ್ರಾಯವನ್ನೇ ಸಮರ್ಥಿಸುವದು ತೋರಿಬರುತ್ತದೆ. ಆದರೆ ಈ ತರದ ವಿಧಾನಗಳಲ್ಲಿ ಸತ್ಯತೆಯು ಇಲ್ಲೆಂಬುದು ಈಗ ಹೆಚ್ಚು ಹೆಚ್ಚು ದೃಢಪಡುತ್ತಾ ನಡಿದದೆ. ಬೇರೆ ಕೆಲವರು ಮುಖ್ಯವಾಗಿ ವೀರಶೈವರಲ್ಲಿಯ ಪುರಾಣ ಮತವಾದಿಗಳು ವೀರಶೈವ ಧರ್ಮವು ಬಹು ಪುರಾತನ ಕಾಲದಿಂದಲೂ ಅಚ್ಚಳಿಯದೆ ಈಗಿದ್ದ ಹಾಗೆಯೇ ಯಾವಾಗಲೂ ಇತ್ತೆಂದು ಅಭಿಪ್ರಾಯಪಡುವದು ತೋರಿ ಬರುತ್ತದೆ. ಆದರೆ ಇವರ ಈ ತರದ ವಿಧಾನವೂ ಸಮರ್ಥನೀಯವಲ್ಲವೆಂದು ನಮಗೆ ತೋರುತ್ತದೆ. ಯಾಕಂದರೆ ಹಿಂದೂ ಧರ್ಮದ ಸ್ವರೂಪದಲ್ಲಿ ಕಾಲ ಕಾಲಕ್ಕೆ ಬದಲಾವಣೆಗಳಾಗುತ್ತ ಬಂದಿವೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅದು ವೇದಕಾಲದಲ್ಲಿದ್ದಂತೆ, ಉಪನಿಷತ್ತಿನ ಕಾಲದಲ್ಲಿರಲಿಲ್ಲ. ಉಪನಿಷತ್ತಿನ ಕಾಲದಲ್ಲಿ ಇದ್ದಂತೆ ಪೌರಾಣಿಕ ಕಾಲದಲ್ಲಿ ಇರಲಿಲ್ಲ. ಈ ಪ್ರಕಾರ ಅದರಲ್ಲಿ ಬದಲಾವಣೆಗಳಾಗುತ್ತಲೇ ಬಂದಿರುತ್ತವೆ. ಇದೇ ಸ್ಥಿತಿಯು ಶೈವ ಧರ್ಮಗಳಲ್ಲಿಯೂ ಕಂಡುಬರುತ್ತದೆ. ವೀರಶೈವವು ಈ ಶೈವಧರ್ಮಗಳಲ್ಲೊಂದಾಗಿದ್ದು ಇದರಲ್ಲಿಯೂ ಕೂಡ ಕಾಲ ಕಾಲಕ್ಕೆ ಪರಿಸ್ಥಿತಿಗೆ ಅನುಸಾರವಾಗಿ ಬದಲಾ

ವಣೆಗಳಾಗುತ್ತ ಬಂದಿವೆಂಬುದು ತೋರುತ್ತದೆ. ಬಸವೇಶ್ವರನ ಕಾಲದಲ್ಲಿ ಅದಕ್ಕೆ ಒಂದು ವಿಶೇಷ ಸ್ವರೂಪು ಉಂಟಾಯಿತು. ಆದರೆ ಇದು ಅವನ ತರುವಾಯದ ಶತಮಾನಗಳಲ್ಲಿ ಅಜ್ಞಳಯವೆ ಉಳಿಯತೆಂದು ಹೇಳಲಿಕ್ಕೆ ಬರುವದಿಲ್ಲ. ಆದರಲ್ಲಿ ಅನೇಕ ವ್ಯತ್ಯಾಸಗಳಾದವು. ಆದರೆ ಎಲ್ಲಿಯ ವರೆಗೆ ಆದರ ಮುಖ್ಯ ಸ್ವರೂಪದಲ್ಲಿ ಬದಲಾವಣೆಗಳಾಗಿಲ್ಲವೋ ಆ ವರೆಗೆ ಅದು ಹೊಸ ಧರ್ಮವೆಂದು ಹೇಳಲಿಕ್ಕೆ ಬರಲಾರದು. ಅವೇ ಮೇರೆಗೆ ಬಸವೇಶ್ವರನಕಿಂತಲೂ ಮೊದಲು ಪ್ರಚಲಿತವಿದ್ದ ಧರ್ಮವಲ್ಲಿ ವೀರಶೈವತ್ವದ ಮುಖ್ಯ ಲಕ್ಷಣಗಳು ಕಂಡು ಬರುತ್ತಿದ್ದರೆ ಅದರಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬಂದರೂ ಕೂಡ ಇವುಗಳ ಮೂಲಕ ಆಗ ವೀರಶೈವ ಧರ್ಮವೇ ಇರಲಿಲ್ಲವೆಂದು ಹೇಳುವದು ಅಷ್ಟೇ ತಪ್ಪಾದದ್ದು ಇರುತ್ತದೆ.

ಬಸವೇಶ್ವರನಕಿಂತಲೂ ಮೊದಲು ವೀರಶೈವ ಧರ್ಮವಿತ್ತೆಂಬುದಕ್ಕೆ ಶಿಲಾಶಾಸನಗಳಲ್ಲಿ ಅನೇಕ ಆಧಾರಗಳು ಈಜಿಗೆ ದೊರೆತಿರುತ್ತವೆ. ೧೧ನೆಯ ಶತಮಾನದ ಮಧ್ಯಭಾಗದಲ್ಲಿದ್ದ ದೇವರ ದಾಸಿಮಯ್ಯ, ಮತ್ತು ಸುಗ್ಗಳೆ ಇವರ ಉಲ್ಲೇಖಗಳಿದ್ದ ಶಿಲಾಶಾಸನಗಳು ಈಗ ಉಪಲಬ್ಧವಾಗಿವೆ. ಮುಂದೆ ಬಿಜ್ಜಳನ ತಂದೆಯಾದ ಪೆರ್ಮಾಡಿರಾಯನ ಕಾಲದಲ್ಲಿ ಕೊಂಡಗುಳಿಯ ಕೇಶಿರಾಜ, ತೆಲುಗು ಜೊಮ್ಮಯ್ಯ ಇಳಿಹಾಳ ಬ್ರಹ್ಮಯ್ಯ, ದಾಹೂರು ಬ್ರಹ್ಮಯ್ಯ ಇವರು ಪ್ರಸಿದ್ಧಿಗೆ ಬಂದದ್ದು ಕಂಡು ಬರುತ್ತದೆ. ಇವರ ತರುವಾಯ ಕೆಲವು ವರ್ಷಗಳಲ್ಲಿ, ಆದರೆ ಬಸವೇಶ್ವರನಕಿಂತ ಮೊದಲು, ರೇವಣ ಸಿದ್ಧೇಶ್ವರ, ಅವನ ಮಗ ರುದ್ರಮುನಿ, ಈ ರುದ್ರಮುನಿಯ ಶಿಷ್ಯ ಹಾವಿನಹಾಳ ಕಲ್ಲಿದೇವ, ಮತ್ತು ಗೋರಕ್ಷ ಇವರು ಪ್ರಸಿದ್ಧಿಗೆ ಬಂದರು. ಇವರಲ್ಲದೆ, ಇವರಕಿಂತ ಮೊದಲು ಜಯಸಿಂಹರಾಜನ ಕಾಲದಲ್ಲಿ ಶಂಕರ ದಾಸಿಮಯ್ಯ ಜೋಳ ರಾಜನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಚನ್ನಯ್ಯ ಹಾಗೂ ಕೆಂಭಾವಿ ಭೋಗಣ್ಣ, ಸಾಮವೇದಿ ಮತ್ತು ಶ್ವಪಚಯ್ಯ ಇವರೂ ಕೂಡ ಬಸವೇಶ್ವರನಕಿಂತ ಮೊದಲು ಇದ್ದರೆಂದು ಅವರ ಚರಿತ್ರೆಗಳಿಂದ ಕಂಡುಬರುತ್ತದೆ. ಇವರೆಲ್ಲರು ವೀರಶೈವರೆಂದು ಎಲ್ಲ ವಚನಕಾರರೂ ಅನೇಕ ವೀರಶೈವ ಗ್ರಂಥಕಾರರೂ ಅವರನ್ನು ತಮ್ಮ ಗ್ರಂಥಗಳಲ್ಲಿ ಬಹುಪೂಜ್ಯ ಭಾವದಿಂದ ವರ್ಣಿಸಿದ್ದುಂಟು. ಒಂದು ವೇಳೆ ಅವರು ಬೇರೆ ಧರ್ಮದವರಾಗಿದ್ದರೆ ಅವರನ್ನು ಹಾಗೆ ಇವರು ಎಂದೂ ಹೊಗಳುತ್ತಿದ್ದಿಲ್ಲ.

ಈಗ ನಾವು ಬಸವೇಶ್ವರನಕಿಂತಲೂ ಮೊದಲು ಆಗಿ ಹೋದ ಈ ಮಹಾಪುರುಷರ ವಿಚಾರಗಳೇನಿದ್ದವೆಂಬುದನ್ನು ಕಂಡು ಹಿಡಿಯುವದು ಬಹು ಮಹತ್ವದ ವಿಷಯವಾಗಿದೆ. ಒಂದು ವೇಳೆ ಅವರ ವಿಚಾರಗಳಲ್ಲಿ ವೀರಶೈವ ಧರ್ಮದ ಲಕ್ಷಣಗಳು ಕಂಡು ಬಂದಲ್ಲಿ ವೀರಶೈವ ಧರ್ಮವು ಬಸವೇಶ್ವರನಕಿಂತಲೂ ಮೊದಲು ನಿಜವಾಗಿ ಅಸ್ತಿತ್ವದಲ್ಲಿತ್ತೆಂದು ನಾವು ಭಾವಿಸಬೇಕಾಗುವದು. ಈ ಹಿಂದಿನ ಶಿವಶರಣರ ಚರಿತ್ರೆಗಳು ನಮಗೆ ಉಪಲಬ್ಧವಿವೆ. ಅವುಗಳಲ್ಲಿ ಸ್ವಾಭಾವಿಕವಾಗಿ ಕೆಲವು ಅದ್ಭುತ ಸಂಗತಿಗಳು ಕಂಡು ಬರುತ್ತವೆ. ಆದರೆ ಅವುಗಳನ್ನು ನಾವು ಲಕ್ಷಿಸದೆ, ಅವರ ಚರಿತ್ರೆಗಳಲ್ಲಿ ವೀರಶೈವತ್ವದ ಲಕ್ಷಣಗಳು ತೋರಿಬರುತ್ತವೋ ಹೇಗೆಂಬುದನ್ನು ನಾವು ಪರೀಕ್ಷಿಸುವದು ಮಹತ್ವದ್ದಾಗಿದೆ. ಹೀಗೆ ನಾವು ಪರೀಕ್ಷಿಸುವಲ್ಲಿ ಅವರ ವರ್ತನೆಗಳು ವೀರಶೈವ ಧರ್ಮಕ್ಕೆ ಹೊಂದುವವೆಂದು ಕಂಡು ಬಂದದ್ದಾದರೆ ಅವರ ಕಾಲದಲ್ಲಿ ವೀರಶೈವ ಧರ್ಮವು ಇತ್ತೆಂತಲೇ ನಾವು ಹೇಳಬೇಕಾಗುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ಕೆಲವು ಸುಗತಿಗಳನ್ನು ನಮ್ಮ ವಾಚಕರ ಎದುರಿಗೆ ಇಡಲು ಪ್ರಯತ್ನಿಸುತ್ತೇವೆ. ಅವು ಮುಂದಿನ ಲೇಖಾಂಕದಲ್ಲಿ ವಿವರಿಸಲ್ಪಡುವವು.

(ಮುಂದುವರಿಯುವದು.)

ಸ್ಫುಟವಿಷಯಗಳು.

ಶಿವಾನುಭವ ಸಂಘಗಳು— ನಾವು ಹೋದ ತಿಂಗಳಿನ ಶಿವಾನುಭವದ ಸಂಚಿಕೆಯಲ್ಲಿ ಶಿವಾನುಭವ ಸಂಘಗಳ ಸ್ಥಾಪನೆಯ ವಿಷಯವಾಗಿ ವಿವರಿಸಿದ್ದು ವಾಚಕರ ಲಕ್ಷದಲ್ಲಿರಬಹುದು. ಈ ತಿಂಗಳಿನಲ್ಲಿ ಕಲಘಟಗಿ ತಾಲೂಕಿನಲ್ಲಿ ಬೊಮ್ಮಿಗಟ್ಟಿ ಮುಕ್ಕಲ್ಲ ಮತ್ತು ಬೆಲವಂತರ ಮತ್ತು ಬೆಳಗಾವಿ ಜಿಲ್ಲಾ ಚಿಕ್ಕೋಡಿ ತಾಲೂಕಿನಲ್ಲಿ ಗಳತಗಿ ಈ ಗ್ರಾಮಗಳಲ್ಲಿ ಈ ಸಂಘಗಳು ಸ್ಥಾಪಿಸಲ್ಪಟ್ಟಿರುತ್ತವೆ. ಬೊಮ್ಮಿಗಟ್ಟಿಯಲ್ಲಿ ೧೪ ಜನರು ಸಂಘಕ್ಕೆ ಸಭಾಸದರು ಆಗಲು ಒಪ್ಪಿದ್ದಾರೆ. ಇದಕ್ಕೆ ಅಧ್ಯಷ್ಟರು ಶ್ರೀ ಚನ್ನವೀರಯ್ಯ ಗಂಗಯ್ಯ ಸುರಗಿ ಮಠ ಮತ್ತು ಕಾರ್ಯದರ್ಶಿಗಳು (೧) ಶ್ರೀ ವೀರಭದ್ರಪ್ಪ ರುದ್ರಪ್ಪ ತಿರಲಾಪೂರ ಮತ್ತು (೨) ಶ್ರೀ ಬಸವಣ್ಣೆಪ್ಪ ಪರಪ್ಪ ನೇನೆಕ್ಕಿ ಇವರು ಇದ್ದಾರೆ. ಈ ಸಭಾಸದರು ತಮ್ಮಲ್ಲಿ ರೂ. ೬—೬—೦ ವರ್ಗಣೀ ಮಾಡಿಕೊಂಡಿದ್ದಾರೆ. ಮುಕ್ಕಲ್ಲ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟ ಶಿವಾನುಭವ ಸಂಘಕ್ಕೆ ೧೫ ಜನ ಸಭಾಸದರಿದ್ದು ಅದಕ್ಕೆ ಅಧ್ಯಕ್ಷರು ಶ್ರೀ ರೇವಣಸಿದ್ದಯ್ಯ ವೀರಯ್ಯ ಹಿರೇಮಠ ಮತ್ತು ಕಾರ್ಯದರ್ಶಿಗಳು ಶ್ರೀ ಗಿರಿಪ್ಪ ಶಿವಬಸಪ್ಪ ಬಡಿಗೇರ ಇವರು ಇದ್ದಾರೆ. ಬೆಲವಂತರ ಗ್ರಾಮದಲ್ಲಿ ಸ್ಥಾಪಿತವಾದ ಸಂಘಕ್ಕೆ ೩೬ ಜನ ಸಭಾಸದರಿದ್ದು ಅದಕ್ಕೆ ಅಧ್ಯಕ್ಷರು ಶ್ರೀ ಶಿವಪ್ಪ ಕಲ್ಲಪ್ಪ ಕರಲಟ್ಟಿ ಮತ್ತು ಕಾರ್ಯದರ್ಶಿಗಳು (೧) ಶ್ರೀ ನಿಂಗಪ್ಪ ಫಕೀರಪ್ಪ ಅಣ್ಣಿಗೇರಿ ಮತ್ತು (೨) ಶ್ರೀ ಚನಬಸಯ್ಯಾ ಕರಬಸಯ್ಯಾ ಹಿರೇಮಠ ಇವರು ಇದ್ದಾರೆ. ಈ ಸಂಘಗಳು ಶ್ರೀಯುತ ಭೀಮಪ್ಪ ಸತ್ಯಪ್ಪ ಮಡಿವಾಳರ ಇವರ ಪರಿಶ್ರಮದಿಂದ ಏರ್ಪಡಿಸಲ್ಪಟ್ಟಿರುತ್ತವೆ. ಗಳತಗಿಯಲ್ಲಿ ೯ ಜನ ಸಭಾಸದರು ಇದ್ದಾರೆ. ಈ ಪ್ರಕಾರ ಈ ವರೆಗೆ ಬೇರೆ ಬೇರೆ ಗ್ರಾಮಗಳಲ್ಲಿ ಒಟ್ಟು ೭೧ ಶಿವಾನುಭವ ಸಂಘಗಳು ಸ್ಥಾಪಿತವಾಗಿರುತ್ತವೆ.

ಬೋಧಕ ವರ್ಗಗಳು— ಇನ್ನು ಮುಂದೆ ಈ ಸಂಘಗಳಿಗೋಸ್ಕರ ಬೋಧಕ ವರ್ಗಗಳನ್ನು ಅನುಕೂಲ ಸ್ಥಳಗಳಲ್ಲಿ ಏರ್ಪಡಿಸುವದು ಬಹಳ ಅವಶ್ಯವಾಗಹತ್ತಿರುತ್ತದೆ. ಈ ವರ್ಗಗಳ ಮೂಲಕ ಎಲ್ಲ ಕಡೆಗೂ ಈ ಸಂಘಗಳು ವ್ಯವಸ್ಥಿತವಾಗಿಯೂ, ಕ್ರಮಬದ್ಧವಾಗಿಯೂ

ಕಾರ್ಯಮಾಡಲು ಶಕ್ಯವಾಗುವದು. ಮೊದಲು ವಿಜಾಪುರ ಪಟ್ಟಣದಲ್ಲಿ ಈ ವರ್ಗವು ಪ್ರಾರಂಭಿಸಲ್ಪಡುವದು. ಈ ವರ್ಗಕ್ಕೆ ಕೆಳಗೆ ಕಾಣಿಸಿದ ಗ್ರಾಮಗಳಲ್ಲಿಯ ಗ್ರಾಮ ಉಪನ್ಯಾಸಕರು ಅಥವಾ ಗ್ರಾಮ ಬೋಧಕರು ಬರಮಾಡಲ್ಪಡುವರು. ಆ ಗ್ರಾಮಗಳು ಯಾವವೆಂದರೆ:—

೧ ಬಂಥನಾಳ, ೨ ಶಿರಶ್ಯಾಡ, ೩ ಲೋಣಿ, ೪ ಲಚ್ಯಾಣ, ೫ ಚಡಚಣ, ೬ ಬಬಲೇಶ್ವರ, ೭. ನಾಗಠಾಣ ೮ ದಾಶ್ಯಾಳ, ೯. ಸಿಂದಗಿ, ೧೦ ಥವಳಗಿ, ೧೧ ಗುಡೂರ, ೧೨ ಇಳಕಲ್ಲ, ೧೩ ಥಾಣಕಶಿರೂರ, ೧೪ ಬೇಲೂರ, ೧೫ ಜೊಳಚಗೋಡ, ೧೬. ಟಾಕಳಿ, ೧೭ ಬೂದೀಹಾಳ. ೧೮ ಕನಮಡಿ. ಈ ಎಲ್ಲ ಗ್ರಾಮಗಳು ವಿಜಾಪೂರ ಜಿಲ್ಲೆಯಲ್ಲಿಯವು ಇವೆ. ಇವಲ್ಲದೆ ಅಥಣಿ ತಾಲೂಕಿನಲ್ಲಿಯ ಕೆಳಗಿನ ಗ್ರಾಮಗಳೂ ಇದರಲ್ಲಿ ಸಮಾವೇಶವಾಡಲ್ಪಡುವವು. ಅವು ಯಾವವೆಂದರೆ— ೧೯ ತೆಲಸಂಗ, ೨೦ ಹಾಲಳ್ಳಿ, ೨೧ ಸವದಿ. ಮತ್ತು ಸಂಸ್ಥಾನಗಳಲ್ಲಿರುವ ೨೨ ಹುನೂರ, (ಸಂ. ಜಮಖಂಡಿ) ೨೩ ಜತ್ತಿ, ಈ ಪ್ರಕಾರ ೨೩ ಸಂಘಗಳಿಂದ ಪ್ರತಿನಿಧಿಗಳು ಈ ಬೋಧಕ ವರ್ಗದಲ್ಲಿ ಬರಮಾಡಿಕೊಳ್ಳಲ್ಪಡುವರು. ಇಷ್ಟರಲ್ಲಿಯೇ ನಮಗೆ ಸವದಿ, ಹುನೂರ, ಲೋಣಿ, ಬಬಲೇಶ್ವರ, ಬಂಥನಾಳ, ತೆಲಸಂಗ ಮತ್ತು ಥವಳಗಿ ಈ ಗ್ರಾಮಗಳಲ್ಲಿ ಕಾರ್ಯ ಮಾಡಲಿಚ್ಛಿಸುವವರು ತಮ್ಮ ಹೆಸರಗಳನ್ನು ಕಳಿಸಿದ್ದಾರೆ. ಇವರಲ್ಲಿ ಥವಳಗಿಯವರು ೭ ಜನರು ಇದ್ದಾರೆ. ಇವರಿಲ್ಲಿರೂ ತಮ್ಮ ತಮ್ಮ ಖರ್ಚಿನಿಂದಲೇ ವಿಜಾಪುರಕ್ಕೆ ಬಂದು ಈ ಶಿಕ್ಷಣ ಹೊಂದಲು ಒಪ್ಪಿಕೊಂಡಿದ್ದಾರೆ. ಕೊಡಗು ಮತ್ತು ಬೆಳಗಾವಿ ಜಿಲ್ಲೆಯಿಂದಲೂ ಕೆಲವು ಗ್ರಾಮಗಳಿಂದ ಹೆಸರುಗಳು ನಮ್ಮ ಕಡೆಗೆ ಬಂದಿವೆ. ಆದರೆ ಅವರಿಗೋಸ್ಕರ ಅವರಿಗೆ ಸಮೀಪವಿರುವ ಬೇರೊಂದು ಅನುಕೂಲ ಸ್ಥಳದಲ್ಲಿ ಬೋಧಕ ವರ್ಗಗಳು ಏರ್ಪಡಿಸಲ್ಪಡುವವು.

ವಿಜಾಪುರ ಪಟ್ಟಣಕ್ಕೆ ಸಂಬಂಧಿಸಿದ ಮೇಲೆ ಕಾಣಿಸಿದ ೨೩ ಗ್ರಾಮಗಳಲ್ಲಿಯ ಪ್ರತಿನಿಧಿಗಳಲ್ಲಿ ಬಹುಶಃ ೫೫ ಜನರು ಸುಶಿಕ್ಷಿತರೂ, ಈ ಮೊದಲಿಗೆ ಕೆಲಮಟ್ಟಿಗಾದರೂ ಧಾರ್ಮಿಕ ವಿಷಯಗಳನ್ನು ವ್ಯಾಸಂಗ ಮಾಡಿದವರೂ, ಈ ಭಾಗದಲ್ಲಿಯ ಪ್ರಮುಖ ಮತಾಧಿಕಾರಿಗಳೂ ಇದ್ದಾರೆ. ಆದ್ದರಿಂದ ಇಲ್ಲಿಗೆ ಈ ವರ್ಗವನ್ನು ೧೦ ತಿಂಗಳಾಗಲಿ ಅಥವಾ ೮-೧೦ ದಿವಸಗಳಾಗಲಿ ನಡಿಸುವದು ಅನಾವಶ್ಯಕವೆಂದು ತೋರು

ತ್ತಿದೆ. ಅವಂಗೋಸ್ಕರ ೨-೩ ದಿವಸಗಳು ಮಾತ್ರ ಈ [illegible] ನಡಿಸಿದರೆ ಸಾಕೆಂದು ನಮಗೆ ತೋರುತ್ತದೆ. ಈ ಅವಧಿಯಲ್ಲಿ [illegible] ಪ್ರಮಾಂತರಗಳಲ್ಲಿ ಧರ್ಮಬೋಧೆಯನ್ನು ಹೇಗೆ ನಡಿಸತಕ್ಕದ್ದು, ಆಯಾ [illegible] ಗ್ರಾಮಗಳಲ್ಲಿ ಯಾವ ಯಾವ ಕಾರ್ಯಗಳನ್ನು ಕೈಕೊಳ್ಳತಕ್ಕದ್ದು ಈ ಮೊದಲಾದ ಸಾಮಾನ್ಯ ವಿಷಯಗಳು ಮುಖ್ಯವಾಗಿ ಮುಂದಿನ [illegible] ಕ್ರಮಗಳು ಎಲ್ಲರೊಡನೆ ಚರ್ಚಿಸಲ್ಪಡುವವು.

ಪಠ್ಯಪುಸ್ತಕಗಳು:— ಆದರೆ ಈ ಕಾರ್ಯದಲ್ಲಿ ಶಿವಾನುಭವ ಸಂಘಗಳಿಗೋಸ್ಕರ ಕೆಲವು ಪಠ್ಯ ಪುಸ್ತಕಗಳನ್ನು ನಿರ್ಮಿಸುವದು ಬಹು ಅವಶ್ಯವೆಂದು ತೋರಹತ್ತಿರುತ್ತದೆ. ಈ ಕಾರ್ಯವನ್ನು ನಾವು ಈಗ ಕೈಕೊಂಡಿದ್ದೇವೆ. ಈ ಪುಸ್ತಕಗಳು ಹೇಗಿರಬೇಕೆಂಬುದನ್ನು ಕುರಿತು ಶ್ರೀಮನ್ನಿರಂಜನ ಸಂಗನಬಸವ ಸ್ವಾಮಿಗಳು ಬಂಥನಾಳ, ಶ್ರೀ ಬಸವಲಿಂಗ ಸ್ವಾಮಿಗಳು ತೆಲಸಂಗ, ಶ್ರೀ ಶಾಂತವೀರಸ್ವಾಮಿಗಳು ಬಬಲೇಶ್ವರ, ಹಲ್ಲೆವೆ ವಿಜಾಪುರ ಪಟ್ಟಣದಲ್ಲಿಯ ಕೆಲವು ಸುಶಿಕ್ಷಿತರು ಮತ್ತು ಶಿವಾನುಭವ ಸಂಘಗಳಲ್ಲಿ ಈ ವರೆಗೆ ಬೋಧ ಮಾಡುತ್ತ ಬಂದಿರುವ ಪ್ರಾಥಮಿಕ ಶಾಲೆಗಳ ಕೆಲವು ಶಿಕ್ಷಕರು ಇವರೊಡನೆ ಅನೇಕಸಲ ಚರ್ಚೆಗಳನ್ನು ನಡಿಸಿ ಇಷ್ಟರಲ್ಲಿಯೇ ಕೆಲವೊಂದು ಕ್ರಮವು ಗೊತ್ತು ಪಡಿಸಲ್ಪಟ್ಟಿರುತ್ತದೆ. ಮುಖ್ಯವಾಗಿ ಹಳ್ಳಿಯ ಜನರಿಗೆ ಉಪಯೋಗ ಬೀಳುವಂಥ ಮತ್ತು ಅವರಿಗೆ ತೀವ್ರ ತಿಳಿಯುವಂಥ ಪಠ್ಯಪುಸ್ತಕಗಳು ಬೇಕಾಗಿವೆ. ಹೀಗೆ ಒಟ್ಟಿಗೆ ೬ ಪುಸ್ತಕಗಳು ರಚಿಸಲ್ಪಡುವವು. ಅವುಗಳು ಯಾವವೆಂದರೆ— (೧) ವೀರಶೈವ ಧಾರ್ಮಿಕ ಸಾಮಾನ್ಯ ತತ್ವಗಳ ವಿವರಣೆ (೨) ವೀರಶೈವರ ಧಾರ್ಮಿಕ ಆಚಾರಗಳು, ಅಷ್ಟಾವರಣ ಪಂಚಾಚಾರ ನೀತಿಯಲಾದವುಗಳ ವಿವರಣೆ (೩) ವೀರಶೈವ ಸಂಸ್ಕೃತಿಯ ಇತಿಹಾಸ ಮತ್ತು ವೀರಶೈವ ಧಾರ್ಮಿಕ ಮತ್ತು ರಾಜಕೀಯ ಮಹಾಪುರುಷರ ಚರಿತ್ರೆಗಳು (೪) ಗೃಹ ಸುಧಾರಣೆ ಮತ್ತು ವ್ಯವಸ್ಥೆ (೫) ಬಾಲ ಬಾಲಕಿಯರಿಗೋಸ್ಕರ ನೈತಿಕ ಮತ್ತು ಭಕ್ತಿಪರವಾದ ವಚನಗಳು, (೬) ಮತ್ತು ಸಂಗೀತ ವಚನಗಳು. ಇವುಗಳಲ್ಲಿ ಕಡೆಯದು ಈಗ ಪ್ರಸಿದ್ಧವಾಗಿದೆ. ಮೊದಲನೆಯ ಪುಸ್ತಕವು ಜಾನೇವಾರಿ ತಿಂಗಳಿನ ಅಂತ್ಯದಲ್ಲಿ ಪ್ರಸಿದ್ಧಿಸಲ್ಪಡುವದು. ಅದು ಪ್ರಸಿದ್ಧವಾದ ಕೂಡಲೆ ಶಿವಾನುಭವ ಸಂಘಗಳ ಬೋಧಕ ವರ್ಗಕ್ಕೆ ಬರಲಿಚ್ಛಿಸುವ ಬೋಧಕರು ಅದನ್ನು

ತಂಪಾಳ್ಳತಕ್ಕದ್ದು. ಅವರು ಅದರಲ್ಲಿಯ ವಿಷಯಗಳನ್ನು ಮೊದಲು ಚನ್ನಾಗಿ ಅಭ್ಯಾಸ ಮಾಡಿಕೊಂಡು ವಿಜಾಪುರದಲ್ಲಿ ಪ್ರಾರಂಭವಾಗತಕ್ಕ ಬೋಧಕ ವರ್ಗಕ್ಕೆ ಬರತಕ್ಕದ್ದು. ಇದರಿಂದ ಬೋಧಕ ವರ್ಗದ ಕಾರ್ಯವನ್ನು ಸುಲಭವಾಗಿ ಮತ್ತು ತೀವ್ರವಾಗಿ ಜರಗಿಸಲಿಕ್ಕೆ ಶಕ್ಯವಾಗುತ್ತದೆ. ಈ ತರದ ಪ್ರಯತ್ನದಿಂದ ವೀರಶೈವರ ಧರ್ಮದ ಬಗ್ಗೆ ಜಾಗ್ರತಿಯು ಗ್ರಾಮಾಂತರಗಳಲ್ಲಿ ತೀವ್ರವಾಗಿ ಮತ್ತು ವ್ಯವಸ್ಥಿತವಾಗಿ ಪಸರಿಸುತ್ತ ಹೋಗುವದೆಂದು ನಾವು ಭರವಸೆ ತಾಳಿದ್ದೇವೆ.

ಬೋಧಕವರ್ಗದ ಕಾರ್ಯಗಳು ಮುಗಿದ ಕೂಡಲೆ ಬೋಧಕರು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿ ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಆವಶ್ಯಕ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡು ಕಾರ್ಯಕ್ಕೆ ಪ್ರಾರಂಭಿಸುವದು ಆವಶ್ಯಕವು. ವಿಜಾಪುರ ಜಿಲ್ಲೆಯಲ್ಲಿ ಬಂದ ಅನುಭವದ ಮೇಲಿಂದ ಬೇರೆ ಜಿಲ್ಲೆಗಳಲ್ಲಿಯೂ ಪ್ರಾಂತಗಳಲ್ಲಿಯೂ ಇದೇ ತರದ ಏರ್ಪಾಡು ಮಾಡಲ್ಪಡುವದು.

ಷಟ್‌ಸ್ಥಲ ಸಿದ್ಧಾಂತದ ಬಗ್ಗೆ ಅನೇಕರು ಅನೇಕ ಗ್ರಂಥಗಳನ್ನು ಈ ವರೆಗೆ ಪ್ರಕಟ ಮಾಡಿರುತ್ತಾರೆ. ವೃತ್ತ ಪತ್ರಿಕೆಗಳಲ್ಲಿಯೂ ಮಾಸಿಕ ಪತ್ರಗಳಲ್ಲಿಯೂ ಈ ವಿಷಯದ ಬಗ್ಗೆ ಅನೇಕ ಲೇಖನಗಳು ಮೇಲಿಂದ ಮೇಲೆ ಬರುತ್ತಾ ಇವೆ. ಅನೇಕ ವಿದ್ವಾಂಸರು ಶಿವಶರಣರ ವಚನಗಳ ಬಗ್ಗೆ ಮಹತ್ವದ ಉಪನ್ಯಾಸಗಳನ್ನು ಕಾಲಕಾಲಕ್ಕೆ ಮಾಡುವದುಂಟು. ಆದರೆ ಷಟ್‌ಸ್ಥಲ ಶಾಸ್ತ್ರ ಅಥವಾ ವೀರಶೈವ ಧರ್ಮದ ತಿಳುವಳಿಕೆಯು ಮಾತ್ರ ಗ್ರಾಮಾಂತರಗಳಲ್ಲಿ ಅತ್ಯಲ್ಪವಾಗಿರುತ್ತದೆ ಅಥವಾ ಅದು ಇಲ್ಲವೆಂದು ಹೇಳಿದರೂ ಅಡ್ಡಿ ಇಲ್ಲ. ಅದರ ಸಾಮಾನ್ಯ ತತ್ವಗಳು ಜನರಿಗೆ ಇನ್ನೂ ಅಪರಿಚಿತವಾಗಿರುತ್ತವೆ. ವಚನಕಾರರು ವಿಶ್ವಬಂಧುತ್ವಭಾವವುಳ್ಳವರು, ಅಸ್ಪೃಶ್ಯತಾನಿವಾರಣೆ ಮಾಡಿದವರು, ಉದಾರ ಮತವಾದಿಗಳು, ಜಾತಿಭೇದವನ್ನು ತೆಗೆದು ಹಾಕಿದವರು, ವಾಜ್ಮಯ ಕ್ರಾಂತಿಯನ್ನು ಮಾಡಿದವರು, ಎಂದು ಹೇಳಿದ ಮಾತ್ರಕ್ಕೆ ವೀರಶೈವ ಮತತತ್ವ ಬೋಧೆಯಾಗಲಾರದು. ಆದರೆ ಷಟ್‌ಸ್ಥಲಶಾಸ್ತ್ರ ಸಿದ್ಧಾಂತದ ವ್ಯವಸ್ಥಿತ ಅಭ್ಯಾಸವು ಮತ್ತು ಅದಕ್ಕನುಸಾರವಾದ ಆಚರಣೆಯು ಸಮಾಜದಲ್ಲಿ ಎಲ್ಲ ಕಡೆಗೆ ನೆಲೆಗೊಳ್ಳಬೇಕು. ಇದು ಆಗದ ಹೊರ್ತು ವೀರಶೈವ ಸಂಸ್ಕೃತಿಯ ಬಗ್ಗೆ ಪ್ರಯತ್ನಗಳು ನಡಿದವೆಂದು ಭಾವಿಸಲಿಕ್ಕೆ ಬರಲಾರದು. ಆದ್ದರಿಂದ ಇನ್ನು

ಮುಂದೆ ಶಿವಾನುಭವ ಸಂಘಗಳಲ್ಲಿ ಷಟ್‌ಸ್ಥಲ ಸಿದ್ಧಾಂತದ [illegible]ಗಳ ಅಭ್ಯಾಸವು ಸರಿಯಾಗಿ ಜರಗಬೇಕು, ಮತ್ತು ಶಕ್ಯನಿದ್ದಷ್ಟರ ವರೆಗೆ ಗ್ರಾಮಗಳಲ್ಲಿ ಅವುಗಳಂತೆ ಆಚರಣೆಗಳೂ ನಡೆಯಬೇಕು, ಈ ಧ್ಯೇಯವನ್ನಿಟ್ಟುಕೊಂಡು ಶಿವಾನುಭವ ಸಂಘಗಳು ಕಾರ್ಯ ಮಾಡುವದು ಬಹಳ ಅವಶ್ಯವಾಗಿರುತ್ತದೆ.

ಈ ತರದ ಕಾರ್ಯಗಳನ್ನು ಈಗಿನ ವೀರಶೈವ ಸಂಸ್ಕೃತ ಪಾಠಶಾಲೆಗಳ ಮುಖಾಂತರ ನಡಿಸುವದು ಬಹು ಅನುಕೂಲವಾದುದು. ಆದರೆ ಅವೆಲ್ಲವುಗಳಲ್ಲಿ ವೀರಶೈವ ಸಂಸ್ಕೃತಿಯ ಅಭ್ಯಾಸವು ನಡಿದಿರುವದಿಲ್ಲ. ನಡಿದಿದ್ದರೂ ಅದು ಅಪೂರ್ಣವಾಗಿರುತ್ತದೆ. ಅಥವಾ ಅದಕ್ಕೆ ಮುಖ್ಯ ಸ್ಥಾನವು ಕೊಡಲ್ಪಟ್ಟಿರುವದಿಲ್ಲ. ಆದರೆ ಅವುಗಳಲ್ಲಿ ವೀರಶೈವ ಸಂಸ್ಕೃತಿಯ ಅಭ್ಯಾಸಕ್ಕಿಂತಲೂ ಬ್ರಾಹ್ಮಣ ವೈದಿಕ ಸಂಸ್ಕೃತಿಯ ಅಭ್ಯಾಸವೇ ಹೆಚ್ಚಾಗಿ ನಡೆಯುತ್ತಾ ಇವೆ. ಕೆಲವು ಪಾಠ ಶಾಲೆಗಳಲ್ಲಿ ಒಂದೆರಡು ವಚನಗ್ರಂಥಗಳನ್ನು ಓದಿಸುವದುಂಟು. ಆದರೆ ಇಷ್ಟರಿಂದ ಈ ಕಾರ್ಯವು ನೆರವೇರದು. ಅನೇಕ ಪಾಠಶಾಲೆಗಳಲ್ಲಿ ಕಲಕತ್ತಾ, ಬನಾರಸ ಇಲ್ಲಿ ನಡೆಯುವ ಪರೀಕ್ಷಾವ್ಯವಸ್ಥೆಗಳಿಗೆ ಅನುಗುಣವಾಗಿ ಅಭ್ಯಾಸಗಳು ನಡೆದಿರುತ್ತವೆ. ಆದರೆ ಇವುಗಳು ವೀರಶೈವ ಸಂಸ್ಕೃತಿಯ ಅಭ್ಯಾಸವೆನಿಸಿಕೊಳ್ಳಲಾರವು. ಷಟ್‌ಸ್ಥಲ ಸಿದ್ಧಾಂತದ ಅಭಿವೃದ್ಧಿಗೋಸ್ಕರ ಸ್ವತಂತ್ರವಾದ ಪರೀಕ್ಷಾವ್ಯವಸ್ಥೆಯು ಸಮಾಜದಲ್ಲಿ ಆಗುವದು ಬಹು ಅವಶ್ಯವಿದೆ. ಶಿವಾನುಭವ ಸಂಘಗಳ ಮೂಲಕ ಇದರ ಅಭ್ಯಾಸವು ಮುಂದುವರಿಯುತ್ತ ಹೋಗಬೇಕು. ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಕಾಲವು ಮುಂದೆ ಬರಬಹುದೆಂದು ನಾವು ನಿರೀಕ್ಷಿಸಿದ್ದೇವೆ.

ಈಡಿಗೆ ಕೆಲವು ಮಹನೀಯರು ಶಿವಾನುಭವ ಸಂಘಗಳ ಕಾರ್ಯಗಳ ಬಗ್ಗೆ ತಾವು ಸಹಾನುಭೂತಿಯುಳ್ಳವರೆಂದು ನಮಗೆ ತಿಳಿಸುತ್ತಾ ಇದ್ದಾರೆ. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಆದರೆ ಇನ್ನಮುಂದೆ ಕಾರ್ಯ ಮಾಡತಕ್ಕ ಕಾಲವಾಗಿರುತ್ತದೆ. ಆದ್ದರಿಂದ ಈ ಮಹನೀಯರು ತಮ್ಮ ಗ್ರಾಮದಲ್ಲಿಯೇ ಒಂದು ಸಂಘವನ್ನು ಕೂಡಲೆ ಸ್ಥಾಪಿಸಿಕೊಂಡು ತಮ್ಮ ಜ್ಞಾನದ ಲಾಭವನ್ನು ತಮ್ಮಲ್ಲಿಯ ಅಜ್ಞಾನಾಂಧವರಿಗೆ ಉಂಟು ಮಾಡಿಕೊಡಲು ಮೊದಲು ಪ್ರಾರಂಭಿಸಬೇಕೆಂದು

ನಾವು ಅವರಿಗೆ ನಮ್ರಪೂರ್ವಕವಾಗಿ ಸೂಚಿಸುತ್ತೇವೆ. ಇಂಥ ಕಾರ್ಯಕ್ಕೆ ಯಾವ ಖರ್ಚು ವೆಚ್ಚವು ಬೇಕಾಗಿಲ್ಲ. ಸ್ವಲ್ಪ ಕಿಮ್ಮತ್ತಿನಲ್ಲಿ ಶಿವಾನುಭವ ಶಾಸ್ತ್ರದ ಗ್ರಂಥಗಳು ದೊರೆಯುತ್ತಲಿವೆ. ಅವುಗಳನ್ನು ಅವರು ತರಿಸಿಕೊಂಡು ಓದಿ ಅಭ್ಯಾಸ ಮಾಡಿ ತಮ್ಮ ಸಮೀಪದವರಿಗೆ ತಿಳಿಸಿ ಹೇಳಹತ್ತಬೇಕು. ಈ ಕಾರ್ಯವನ್ನು ಅವರು ನಡಿಸಿದ ಕೂಡಲೆ ಶಿವಾನುಭವ ಸಂಘವು ಅವರಿದ್ದಲ್ಲಿಯೇ ತಾನಾಗಿ ಉಂಟಾಗುವದು. ಇಂಥ ಸಂಘಗಳು ಕರ್ನಾಟಕದಲ್ಲಿ ಇಪ್ಪತ್ತರಲ್ಲಿ ಸಾವಿರಾರು ಸಂಖ್ಯೆಯಿಂದ ಆಗತಕ್ಕದ್ದಾಗಿತ್ತು. ಈ ಸ್ಥಿತಿಯು ಇನ್ನೂ ಪ್ರಾಪ್ತವಾಗದಿರುವದು ಬಹು ವಿಷಾದಕರವು. ಗ್ರಾಮಾಂತರಗಳಲ್ಲಿ ಅಸಂಖ್ಯ ಮತಾಧಿಕಾರಿಗಳಿರುವರು. ಆದರೆ ಅವರು ತಮ್ಮ ಕರ್ತವ್ಯದಿಂದ ಈಗ ಚ್ಯುತಿಯನ್ನು ಹೊಂದಿರುವರು. ಅವರೂ ಸಂಸ್ಕೃತಿಪ್ರಿಯರಾದ ಸುಶಿಕ್ಷಿತರೂ ಈ ಕಾರ್ಯವನ್ನು ಕೈಕೊಳ್ಳಬಹುದಾಗಿದೆ. ಬಸವಾದಿ ಪ್ರಮಥರ ಕಾಲದ ತರುವಾಯ ಕೆಲವು ಶತಮಾನಗಳ ವರೆಗೆ ಈ ತರದ ಕಾರ್ಯಗಳು ವೀರಶೈವ ಸಮಾಜದಲ್ಲಿ ನಡಿದವು. ಅದರಿಂದ ಅದು ಆಗ ಒಂದು ಬಹು ಪ್ರಬಲವಾದ ಸಮಾಜವಾಯಿತು. ಮತ್ತು ಅದರ ಪ್ರಭಾವವು ಕರ್ನಾಟಕದಲ್ಲಿ ಮಾತ್ರವಲ್ಲದೆ ಆಂಧ್ರ, ತಮಿಳು, ಮಲಿಯಾಳ ದೇಶಗಳಲ್ಲಿಯೂ ಕೂಡ ಹಬ್ಬಿತು. ಅಂದರೆ ಯಾವ ಪ್ರಾಂತಗಳಲ್ಲಿ ವೀರಶೈವರ ಸಂಖ್ಯೆಯು ಅತ್ಯಲ್ಪವಾಗಿರುತ್ತದೆಯೋ ಅಂಥಲ್ಲಿಯೂ ಕೂಡ ವರ್ಚಸ್ಸುಳ್ಳ ಸಮಾಜವು ಆದಾಯಿತು. ಮಹತ್ವದ ರಾಜಮನೆತನಗಳೂ ರಾಜ್ಯಾಧಿಕಾರಿಗಳೂ ಈ ಧರ್ಮವನ್ನು ಅಂಗೀಕರಿಸಿದರು. ಮತ್ತು ವೀರಶೈವ ಜನಾಂಗದ ಸಂಖ್ಯೆಯು ದೇಶದಲ್ಲೆಲ್ಲ ಬಹು ಛರದಿಂದ ಹೆಚ್ಚಿತು. ಈ ರೀತಿಯಾಗಿ ಈಗಲೂ ಎಲ್ಲ ಕಡೆಗೆ ಪ್ರಯತ್ನಗಳು ನಡೆಯುವದು ಬಹು ಅವಶ್ಯವಾಗಿದೆ. ವೀರಶೈವ ಧರ್ಮದ ತತ್ವಗಳು ವಿಶಾಲವಾದವುಗಳೂ ಸಾಂಪ್ರತ ಸ್ಥಿತಿಗೆ ಅನುಗುಣವಾದವುಗಳೂ ಇದ್ದು ಈಗಿನ ಸಮಾಜದ ಪ್ರಗತಿಯನ್ನು ಅವು ಕುಂಠಿತ ಮಾಡುವಂಥವಲ್ಲ. ಆದುದರಿಂದ ಅವುಗಳ ಪ್ರಸಾರಕ್ಕೋಸ್ಕರ ಹೆಚ್ಚಾಗಿ ದೇಶದಲ್ಲಿ ಪ್ರಯತ್ನಗಳುಂಟಾಗುವವೆಂದು ನಾವು ಛರವಸೆ ತಾಳಿದ್ದೇವೆ.

ಶಿವಾನುಭವ ಪತ್ರಿಕೆಗೋಸ್ಕರ ವಿನಂತಿಃ— ಶಿವಾನುಭವ ಪತ್ರಿಕೆಯು ವೀರಶೈವ ಸಂಸ್ಕೃತಿಯ ವಿಷಯವಾಗಿ ಮಾಡುತ್ತಿರುವ ಪ್ರಯತ್ನಗಳನ್ನು ಅದರ ವಾಚಕರೆಲ್ಲರೂ ಅರಿತಿದ್ದಾರೆ. ಆದರೆ ಅದಕ್ಕೆ ವೀರ

ಶೈವ ಸಮಾಜದ ಸಹಾಯವು ಕಮ ಹುಟ್ಟಿದಂದಿನಿಂದಲೂ ಈ ವರೆಗೆ ಕಿಂಚಿತ್ತಾದರೂ ಇಲ್ಲವೆಂದು ನಾವು ಬಹು ವಿಷಾದ ಪೂರ್ವಕವಾಗಿ ಹೇಳಬೇಕಾಗುವ ಪ್ರಸಂಗವು ಬಂದಿರುತ್ತವೆ. ಆರಂಭದಲ್ಲಿ ೨–೩ ವರ್ಷ ಮಾತ್ರ ಅದಕ್ಕೆ ೬೦೦–೭೦೦ ಚಂದಾದಾರರಾದರು. ಆದರೆ ಅಂದಿನಿಂದ ಈ ವರೆಗೆ ಅದಕ್ಕೆ ೧೫೦ ರಿಂದ ೨೦೦ ರ ವರೆಗೆ ಮಾತ್ರ ವರ್ಗದಾರರು ಉಳಿದಿದ್ದಾರೆ. ಈಚೀಚಿಗಂತೂ ಇವರ ಸಂಖ್ಯೆಯು ಅತ್ಯಲ್ಪವಾಗಿದೆ. ಈ ಆರೇಳು ವರ್ಷ ನಮ್ಮ ಸ್ವಂತದ ಖರ್ಚಿನಿಂದ ಈ ಪತ್ರಿಕೆಯನ್ನು ನಾವು ನಡಿಸಬೇಕಾಗಿದೆ. ನಾವು ಸ್ವತಃ ಗ್ರಾಮಾಂತರಗಳಿಗೆ ಹೋಗಿ ಚಂದಾದಾರರಿಗೋಸ್ಕರ ಪ್ರಯತ್ನ ಮಾಡುವದು ಆಗಿರುವದಿಲ್ಲ. ಇದು ನಮ್ಮ ದೇಹಸ್ಥಿತಿ ಮತ್ತು ಇಲ್ಲಿಯ ಕಾರ್ಯಬಾಹುಲ್ಯದ ಮೂಲಕ ಅಶಕ್ಯವಾಗಿರುತ್ತದೆ. ಪ್ರಮುಖ ಪಟ್ಟಣಗಳಲ್ಲಿಯ ಸುಶಿಕ್ಷಿತ ಮಹಾಜನರೂ, ಅದರಂತೆಯೇ ಶ್ರೀಮಂತರೂ, ಮತಾಧಿಕಾರಿಗಳೂ ನಮ್ಮ ಪತ್ರಿಕೆಗೋಸ್ಕರ ಪೂರ್ಣ ಉಪೇಕ್ಷಾ ಬುದ್ಧಿಯುಳ್ಳವರು. ಇವರು ಸಂಸ್ಕೃತಿ ಸಂಶೋಧನ, ವಾಙ್ಮಯಪ್ರೀತಿ ಇವುಗಳಿಗೆ ತೀರ ಹೊರತಾದವರೆಂದು ಹೇಳಲು ಪ್ರತ್ಯವಾಯವಿಲ್ಲ. ಇದಕ್ಕೆ ಕೆಲವರು ಮಾತ್ರ ಅಪವಾದವಾಗಿದ್ದಾರೆ. ಆದರೆ ಕೇವಲ ಜನರ ದೆಂಬಲದ ಮೇಲಿಂದ ನಡಿಯುವ ಈ ಪತ್ರಿಕೆಯನ್ನು ನಡಿಸುವದು ಕಷ್ಟಕರವಾಗಹತ್ತಿದೆ. ಆದ್ದರಿಂದ ನಮ್ಮ ಪತ್ರಿಕೆಯ ಚಂದಾದಾರರು ಮತ್ತು ಹಿತಚಿಂತಕರು ತಮ್ಮಲ್ಲಿ ಕೆಲವರನ್ನಾದರೂ ಚಂದಾದಾರರನ್ನಾಗಿ ಮಾಡಿಕೊಟ್ಟಲ್ಲಿ ನಾವು ಅವರಿಗೆ ಬಹಳ ಕೃತಜ್ಞರಾಗುವೆವು.

ಈ ಐದು ಶಕ್ತಿಗಳೇ ಜಗತ್ತಿನ ದೃಶ್ಯ ಪದಾರ್ಥಗಳನ್ನು ಉಂಟು ಮಾಡುತ್ತವೆ. ಈ ಪ್ರಕಾರ ಇವೆಲ್ಲವುಗಳ ಕ್ರಮವಿರುತ್ತದೆ. ಅಂದರೆ ಮೂಲಪ್ರಣವದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಪ್ರಣವಾಕ್ಷರಗಳಲ್ಲಿ ಜಗತ್ತಿಗೆ ಕಾರಣವಾಗಿರುವ ಕಲೆಗಳೂ ಶಕ್ತಿಗಳೂ ಹುದುಗಿರುತ್ತವೆ. ಹೀಗೆ ಈ ಎಲ್ಲಕ್ಕೆ ಮೂಲ ಆಧಾರವಾದವುಗಳು ಮಂತ್ರಗಳೇ. ನಿವೃತ್ತಿಕಲೆಯ ಕಾರ್ಯವು ಜಗತ್ತಿನ ಪ್ರಗತಿಯು ಆಗುವಲ್ಲಿ ಅದನ್ನು ಪರಮಾತ್ಮನತ್ತ ಒಯ್ಯುವದು ಇರುತ್ತದೆ. ಅಂದರೆ ಮಾಲಿನ್ಯವನ್ನು ತೊಳೆಯುವದೇ ಅದರ ಕಾರ್ಯವು. ಪ್ರತಿಷ್ಠಾ ಕಲೆಯ ಕಾರ್ಯವು ಪ್ರಗತಿಯಲ್ಲಿ ಸ್ಥಿರತೆಯನ್ನುಂಟು ಮಾಡುವದು ಇದೆ. ಶಾಂತಿ, ಶಾಂತ್ಯಾತೀತ ಇವುಗಳು ಜಗತ್ತಿನ ಕಾರ್ಯಗಳಲ್ಲಿ ಶಾಂತಿಯನ್ನು ಅಂದರೆ ಯಾವ ತರದ ಅವ್ಯವಸ್ಥಿತ ಚಲನೆಯನ್ನುಂಟು ಮಾಡಗೊಡದೆ ಅವುಗಳನ್ನು ನಿಧಾನವಾಗಿ ಸರಿಯಾದ ಮಾರ್ಗದಿಂದ ಒಯ್ಯುವ ಕಾರ್ಯಗಳನ್ನು ಮಾಡುತ್ತವೆ. ಈ ಕಲೆಗಳಿಗನುಸಾರವಾಗಿ ಆಯಾ ಶಕ್ತಿಗಳೂ ಉಂಟಾಗುತ್ತವೆ. ಹೀಗೆ ಉಂಟಾದ ಶಕ್ತಿಗಳು ಉಚ್ಚತರದ ಕಾರ್ಯಗಳಲ್ಲಿ ತೊಡಗಿಸುವಂಥವು ಇರುತ್ತವೆ. ನಿವೃತ್ತಿಯಲ್ಲಿ ಕ್ರಿಯಾಶಕ್ತಿ, ಪ್ರತಿಷ್ಠೆಯಲ್ಲಿ ಜ್ಞಾನಶಕ್ತಿ, ವಿದ್ಯೆಯಲ್ಲಿ ಇಚ್ಛಾಶಕ್ತಿ, ಶಾಂತಿಯಲ್ಲಿ ಆದಿಶಕ್ತಿ, ಶಾಂತ್ಯಾತೀತೆಯಲ್ಲಿ ಪರಾಶಕ್ತಿ, ಇವುಗಳು ಉದ್ಭವಿಸುತ್ತವೆ. ಶಾಂತ್ಯಾತೀತೋತ್ತರೆಯಲ್ಲಿ ಚಿತ್‌ಶಕ್ತಿಯು ಇರುತ್ತದೆ. ಅದೇ ಮಹಾಲಿಂಗವು, ಅಥವಾ ಮೂಲ ಪ್ರಣವವು. ಈ ಕಲೆಗಳು, ಶಕ್ತಿಗಳು ನ, ಮ, ಶಿ, ವಾ, ಯ ಎಂಬ ಪ್ರಣವಾಕ್ಷರಗಳೊಳಗಿಂದಲೇ ವ್ಯಕ್ತವಾಗುತ್ತವೆ. ಮನುಷ್ಯನು ಇವುಗಳನ್ನು ತಿಳಿದುಕೊಂಡು ಆಚರಿಸಿದಲ್ಲಿ ಅವನಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಎಂಬ ಲಿಂಗಗಳು ಕ್ರಮೇಣ ಬೆಳಗಹತ್ತುತ್ತಿವೆ. ಈ ಲಿಂಗಗಳ ಅಂತಿಮ ಸ್ಥಿತಿಯು ಮಹಾಲಿಂಗವೇ ಇರುತ್ತದೆ. ಮನುಷ್ಯನು ಅದರಲ್ಲಿ ಬೆರೆತಲ್ಲಿ ಶೂನ್ಯ ಸ್ಥಿತಿಯೊಳಗೆ ಹೋಗುತ್ತಾನೆ.

(೩೧) ಸಂಜ್ಞೆಗಳು— ಇವು ಐದು ಇವೆ. ಅವು ೧ ಪರ ೨ ಗೂಢ. ೩ ಶರೀರಸ್ಥ. ೪ ಲಿಂಗಕ್ಷೇತ್ರ. ೫ ಅನಾದಿ ಈ ಪ್ರಕಾರ ಇರುತ್ತವೆ. ಪರಮಾತ್ಮನ ಇರವು ಹೇಗಿರುತ್ತದೆಂಬುದನ್ನು ಇವುಗಳು ವಿವರಿಸುತ್ತವೆ.

ತಿಳಿದುಕೊಂಡು ಜಪವಾಡುವದನ್ನು ಗೊತ್ತು ಮಾಡಿಕೊಳ್ಳಬೇಕು. ಹೀಗೆ ಜಪಿಸಿದಲ್ಲಿ ಅವು ಪರಿಣಾಮಕಾರಿಗಳು. ಆ ಅರ್ಥಗಳು ಆಯಾ ಪ್ರಣಮಗಳಲ್ಲಿ ಗರ್ಭಿತವಾಗಿದ್ದು, ಅವುಗಳ ರೀತಿಯನ್ನು ಗುರುಮುಖದಿಂದ ಅರಿಯಬೇಕೆಂಬ ಸಾಂಪ್ರದಾಯವಿದೆ.

ಈ ಪ್ರಣಮಗಳು ಪಂಚಸಾದಾಖ್ಯಗಳನ್ನು ಸೂಚಿಸುತ್ತವೆ. ಜಗತ್ತಿನ ಆರಂಭದಲ್ಲಿ ಈ ಸಾದಾಖ್ಯಗಳಲ್ಲಿ ಉತ್ಪನ್ನವಾಗುವ ಶಕ್ತಿ ಮೊದಲ್ಗಾದವುಗಳಿಗೆ ಈ ಪ್ರಣಮಗಳೇ ಮೂಲಕಾರಣಗಳು. ಜಗತ್ತಿನಲ್ಲಿದ್ದಂತೆಯೇ ದೇಹದಲ್ಲಿಯೂ ಕೂಡ ಇವು ಇರುತ್ತವೆ. ಇವು ಅಲ್ಲಿ ಇರುವ ಮುಖ್ಯ ಸ್ಥಾನಗಳಿಂದರಿ ಷಟ್ ಚಕ್ರಗಳು. ಅವುಗಳಲ್ಲಿದ್ದುಕೊಂಡು ಅವು ಮನುಷ್ಯನ ವ್ಯಾಪಾರಗಳಿಗೆ ಪ್ರೇರಣೆಮಾಡುತ್ತವೆ. ಪ್ರಣಮಗಳ ಮೂಲಕ ಈ ವ್ಯಾಪಾರಗಳು ಸನ್ಮಾರ್ಗದಲ್ಲಿ ಸಾಗುತ್ತವೆ. ಹೀಗೆ ಸನ್ಮಾರ್ಗದಲ್ಲಿ ಹೋದದ್ದಾದರೆ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗ ಇವುಗಳು ಆಯಾ ಚಕ್ರಗಳಲ್ಲಿ ಬೆಳಗಹತ್ತುತ್ತಿವೆ. ಈ ಪ್ರಣಮಗಳನ್ನು ಸರಿಯಾಗಿ ಧ್ಯಾನಿಸಿದಲ್ಲಿ ಈ ಲಿಂಗಗಳು ಆಯಾ ಚಕ್ರಗಳಲ್ಲಿ ದೃಢಪಡುತ್ತಿವೆ. ಆದರೆ ಭಕ್ತಿ ಪೂರ್ವಕವಾಗಿ ಮತ್ತು ಅವುಗಳ ಅರ್ಥಗಳನ್ನು ತಿಳಿದುಕೊಂಡು ಅವುಗಳನ್ನು ಧ್ಯಾನಿಸತಕ್ಕದ್ದು. ಈ ತರದ ಧ್ಯಾನವು ಶಿವಯೋಗಕ್ಕೆ ಮುಖ್ಯ ಸಾಧನವು.

'ಓಂ ನಮಶ್ಶಿವಾಯ' ಇದು ಷಡಕ್ಷರ ಮಂತ್ರವೆಂದು ಹೇಳಲ್ಪಡುತ್ತಿದೆ. ಮೂಲ ಪ್ರಣಮವನ್ನು ಬಿಟ್ಟು ಉಚ್ಚರಿಸಿದರೆ, ಅದು ಪಂಚಾಕ್ಷರೀ ಮಂತ್ರವೆಂದೆನಿಸಿಕೊಳ್ಳಲ್ಪಡುತ್ತದೆ. ಓಂಕಾರವು ಅವ್ಯಕ್ತವಾದುದು. ಅದರೂ ಅದರ ಧಾವನ್ನಿಟ್ಟುಕೊಂಡು ಅದನ್ನು ಉಚ್ಚರಿಸಿದಲ್ಲಿ ಅದು ಷಡಕ್ಷರ ಮಂತ್ರವಾಗುವದು. ದೀಕ್ಷಾ ಕಾಲದಲ್ಲಿ ಈ ಮಂತ್ರವನ್ನು ಗುರುವು ಉಪದೇಶಿಸುತ್ತಾನೆ. ಹೀಗೆ ಉಪದೇಶಿಸಿ ಅವನು ಮಂತ್ರದ ಅರ್ಥವನ್ನೂ ತಿಳಿಸಿ ಕೊಡುವನು. ಅದನ್ನು ದೀಕ್ಷೆ ಹೊಂದುವವನು ತಿಳಿದುಕೊಂಡು ಅದರಂತೆ ಆಚರಿಸತಕ್ಕದ್ದು. ಈ ಆಚರಣೆಯೇ ಶಿವಯೋಗಕ್ಕೆ ಮುಖ್ಯಾಂಗವಾಗಿರುತ್ತದೆ. ಆದ್ದರಿಂದ ವೀರಶೈವರಲ್ಲಿ ಈ ಪಂಚಾಕ್ಷರೀ ಮಂತ್ರದ ಮಹತ್ವವು ಬಹಳವಿರುತ್ತದೆ. ಎಲ್ಲ ಮಂತ್ರಗಳ ಸಾರವೆಂತಲೂ ಅದು ಹೇಳಲ್ಪಡುತ್ತದೆ.

ಪ್ರಣವಗಳು ಪರಶಿವನ ಪಂಚಮುಖಗಳ ದ್ಯೋತಕಗಳಾಗಿವೆ. ದೀಕ್ಷೆ, ಲಗ್ನ, ಮೊದಲಾದ ಕಾಲಗಳಲ್ಲಿ ಪಂಚಕಲಶಗಳನ್ನು ಸ್ಥಾಪಿಸುವದುಂಟಷ್ಟೇ. ಆಗ ಅವು ಪರಶಿವನ ಪಂಚ ಮುಖಗಳೆಂದು ಭಾವಿಸಲ್ಪಡುತ್ತವೆ. ಆಗ ಈ ಪ್ರಣಮಗಳು ಆಯಾ ಸ್ಥಾನಗಳಲ್ಲಿ ಸ್ಥಾಪಿಸಲ್ಪಡುವದುಂಟು.

ಪ್ರಣಮಗಳು ದೇಹದಲ್ಲಿಯೂ ಕೂಡ ಸ್ಥಾಪಿಸಲ್ಪಡುತ್ತವೆ. ಇಂದ್ರಿಯಗಳಲ್ಲಿಯೂ ಅವುಗಳು ಸ್ಥಾಪಿಸಲ್ಪಡುವದುಂಟು. ವೀರಶೈವರಲ್ಲಿ ಉದ್ಧರಣೆಗಳೆಂಬವುಗಳಿವೆ. ಅವು ಷಟ್‌ಸ್ಥಲ ಶಾಸ್ತ್ರ ತತ್ವ ಬೋಧಕಗಳಾಗಿರುತ್ತವೆ. ಅವುಗಳಲ್ಲಿ ಪ್ರಣಮಗಳ ಮೂಲಕವಾಗಿಯೇ ಈ ತತ್ವಗಳು ಹೇಳಲ್ಪಟ್ಟಿರುತ್ತವೆ.

(೩೪) ಆತ್ಮಃ — ಎಲ್ಲ ಶರೀರಗಳಲ್ಲಿ ಆತ್ಮನು ಪ್ರತ್ಯೇಕವಾಗಿ ವಾಸಿಸುತ್ತಾನೆ. ಈ ಆತ್ಮನು ಪರಶಿವನ ಅಂಶವೇ ಇರುತ್ತದೆ. ಅದು ಪರಶಿವನಿಂದ ಉಗಮವಾಗಿ ಸೃಷ್ಟ ಪದಾರ್ಥಗಳೆಲ್ಲೆಲ್ಲ ಇದ್ದರೂ ಕಾಣದಂತಿರುತ್ತದೆ. ಮನುಷ್ಯನು ಮಾಯಾವಶನಾದಲ್ಲಿ ಪರಶಿವನ ಪೂರ್ಣ ಸ್ಥಿತಿಯು ಈ ಆತ್ಮನಲ್ಲಿ ತೋರಲಾರದು. ಆದರೆ ಮನುಷ್ಯನು ಸನ್ಮಾರ್ಗಿಯಾದಲ್ಲಿ ಪರಶಿವನ ಜ್ಯೋತಿಯು ಲಿಂಗ ರೂಪವಾಗಿ ಮನುಷ್ಯನಲ್ಲಿ ಕಾಣಹತ್ತುವದು. ಆಗ ಆತ್ಮನು ಪ್ರಕಟವಾಗಹತ್ತುವನು. ಜಡ ಪದಾರ್ಥಗಳಲ್ಲಿ ಈ ಪ್ರಗತಿಯು ಅತ್ಯಲ್ಪವಾದುದು. ಆದರೆ ಉಚ್ಚತರದ ಪ್ರಾಣಿ ಜಾತಿಗಳಲ್ಲಿ ಈ ಆತ್ಮನ ಪರಿಸ್ಥಿತಿಯು ಹೆಚ್ಚುವಿಕೆಯನ್ನು ಹೊಂದುತ್ತ ಹೋಗುತ್ತದೆ. ಹೀಗೆ ಆತ್ಮನು ಶಿವಾಂಶಿಕನಾಗಿರುತ್ತಾನೆ. ಅವನು ಪರಮಾತ್ಮನಿಗೆ ಸಂಬಂಧಪಟ್ಟವನು. ಆದರೆ ಶರೀರದಲ್ಲಿ ಮನಸ್ಸು, ಬುದ್ಧಿ, ಇಂದ್ರಿಯಗಳು, ಪ್ರಾಣ ಇವುಗಳಲ್ಲಿ ಅವನನ್ನು ಗುರುತಿಸಲಿಕ್ಕೆ ಬಾರದಿದ್ದರೂ ಇವೆಲ್ಲವುಗಳು ಅವನಿಗೆ ಸಂಬಂಧಿಸಿಕೊಂಡು ತಮ್ಮ ತಮ್ಮ ಕ್ರಿಯೆಗಳನ್ನು ಮಾಡುತ್ತವೆ. ಆತ್ಮನು ಸಾಯುವದಿಲ್ಲ. ಅವನು ಮರಣರಹಿತನಾದವನು. ಅವನು ಕಡೆಗೆ ಪರಶಿವನಲ್ಲಿಯೇ ಅಡಗುವನು. ಆ ವರೆಗೆ ಅವನು ಜನ್ಮಾಂತರಗಳನ್ನು ಎತ್ತುತ್ತ ಹೋಗುತ್ತಾನೆ.

(೩೫) ಆತ್ಮತ್ರಯಗಳು: — ಇವು ಜೀವಾತ್ಮ, ಅಂತರಾತ್ಮ ಮತ್ತು ಪರಮಾತ್ಮಗಳೆಂದು ಇರುತ್ತವೆ. (೧) ಜೀವಾತ್ಮನು ಸಂಸಾರದಿಂದ ತುಂಬಿ

ಕೊಂಡವನು. ಇದರಲ್ಲಿಯೇ ಅವನು ತೊಳಲಿ ಬಳಲಿ ಕಷ್ಟ ಪಡುತ್ತಾನೆ. ತಾನಾರೆಂಬುದನ್ನು ಅವನು ಅರಿಯನು. ತಮಸ ಭಾವಕ್ಕೆ ಒಳಗಾಗಿ ವ್ಯವಹರಿಸುತ್ತಾನೆ. (೨) ಆದರೆ ಅಂತರಾತ್ಮನು ಜೀವಾತ್ಮನಕಿಂತಲೂ ಉಚ್ಚಸ್ಥಿತಿಯನ್ನು ಹೊಂದಿದವನು. ತಾಮಸ ಸ್ವಭಾವವನ್ನು ಬಹು ಮಟ್ಟಿಗೆ ತೊಲಗಿಸಿದವನು. ತೊಲಗಿಸಿದರೂ ಕೂಡ ಸಂಸಾರವನ್ನು ಸಂಪೂರ್ಣವಾಗಿ ಬಿಟ್ಟವನಲ್ಲ. ಒಂದು ವೇಳೆ ಅದನ್ನು ಬಿಡದಿದ್ದರೂ ಕೂಡ ಅದರಲ್ಲಿ ಇಲ್ಲದ ಹಾಗೆ ಇರುತ್ತಾನೆ. ಯಾಕಂದರೆ ಪರಮಾತ್ಮನ ಅರಿವು ಅವನಲ್ಲಿ ಉಂಟಾಗಿರುತ್ತದೆ. ಅತನು ಆತ್ಮ ವಿವೇಕಿಯು. ಹೀಗೆ ಅಂತರಾತ್ಮನ ಸ್ಥಿತಿಯು ಇರುತ್ತದೆ. (೩) ಪರಮಾತ್ಮನು ಈ ಅಂತರಾತ್ಮನ ಕಿಂತಲೂ ಉಚ್ಚತರದ ಸ್ಥಿತಿಯನ್ನು ಹೊಂದಿರುತ್ತಾನೆ. ಅವನು ಕಾರಣಾತೀಯಾಗಿ ಅಲ್ಲಿ ಪ್ರಕಟತರ ಲಿಂಗ ಸ್ಥಿತಿಯನ್ನು ಹೊಂದಿ ಶರೀರದ ಎಲ್ಲ ವ್ಯಾಪಾರಗಳಲ್ಲಿ ಲಿಂಗ ಚೈತನ್ಯವನ್ನು ಉಂಟುಮಾಡಲು ಶಕ್ತನಾಗಿರುತ್ತಾನೆ. ಅವನು ನಿಃಕಲನು. ಯಾಕಂದರೆ ಅವನಲ್ಲಿ ಜ್ಞಾನವು ನಿರ್ಧಾರವಾಗಿರುತ್ತದೆ. ಅವನು ಇಹಲೋಕದ ಮತ್ತು ಪರಲೋಕದ ಸಕಲ ಸಂಸೃತಿಗಳನ್ನು ತೊಲಗಿಸಿದವನು.

ಜೀವಾತ್ಮನಿಗೆ ಬಹಿರಂಗ ಸ್ಥಿತಿಯು ಮಾತ್ರ ಇದೆ. ಆದರೆ ಅಂತರಾತ್ಮನಿಗೆ ಅಂತರಂಗ ಸ್ಥಿತಿಯು ಇದೆ. ಇವುಗಳ ಪ್ರಗತಿಯ ಮೂಲಕವೇ ಪರಮಾತ್ಮನು ಮನುಷ್ಯನಲ್ಲಿಲ್ಲ ಉಚ್ಚತರದ ಸ್ಥಿತಿಯನ್ನು ಏದಿಸುತ್ತಾನೆ. ಜೀವಾತ್ಮ ಅಂತರಾತ್ಮರು ಪರಸ್ಪರಾವಲಂಬಿಗಳಾಗಿದ್ದಾರೆ. ಇವುಗಳ ಶ್ರೇಷ್ಠತರ ಸ್ಥಿತಿಯ ಮೂಲಕವೇ ಪರಮಾತ್ಮನು ಮನುಷ್ಯನಲ್ಲಿ ತೋರುತ್ತಾನೆ. ಜೀವಾತ್ಮ ಅಂತರಾತ್ಮ ಪರಮಾತ್ಮರ ಪ್ರಗತಿ ಎಂದರೆ ಸ್ಥೂಲ, ಕಾರಣ ಶರೀರಗಳಲ್ಲಿ ಅನುಕ್ರಮವಾಗಿ ಸಂಬಂಧಿಸಿದ ಇಷ್ಟಲಿಂಗ, ಪ್ರಾಣಲಿಂಗ ಭಾವಲಿಂಗ ಇವುಗಳು ಪ್ರಕಟವಾಗುವದೇ ಇರುತ್ತದೆ. ಇವೆಲ್ಲವು ಪ್ರಕಟ ಹೊಂದಿದ ಕೂಡಲೆ ಅಕ್ಕನು ಪರಶಿವನಲ್ಲಿ ಬೆರೆಯುವನು. ಅದೇ ಲಿಂಗಾಂಗ ಸಾಮರಸ್ಯವು.

(೩೬) ಕೋಶಗಳು:— ಇವು ಅನ್ನಮಯಕೋಶ, ಪ್ರಾಣಮಯ ಕೋಶ, ಮನೋಮಯಕೋಶ, ವಿಜ್ಞಾನಮಯ ಕೋಶ, ಮತ್ತು ಆನಂದ ಮಯ ಕೋಶ, ಎಂದಿರುತ್ತವೆ. (೧) ಸ್ಥೂಲ ದೇಹವೇ ಅನ್ನಮಯ ಕೋಶವೆನಿಸಿಕೊಳ್ಳುತ್ತದೆ. ಅನ್ನದಿಂದ ಇದು ಪುಷ್ಟಿಯನ್ನುಹೊಂದುತ್ತದೆ.

(೨) ಶರೀರದಲ್ಲಿ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಉಂಟು. ಇವುಗಳ ಮೂಲಕ ಅದರ ವ್ಯಾಪಾರಗಳು ನಡೆಯುತ್ತವೆ. ಈ ಇಂದ್ರಿಯಗಳ ಮೂಲಕ ಮನುಷ್ಯನಿಗೆ ಮುಟ್ಟಿದರೆ ತಿಳಿಯುತ್ತದೆ. ಕರೆದರೆ ಅವನಿಗೆ ಕೇಳುತ್ತದೆ. ಶರೀರದಲ್ಲಿ ಪ್ರಾಣವಿದೆಂಬುದಕ್ಕೆ ಈ ವ್ಯಾಪಾರಗಳೇ ಚಿನ್ಹವು. ಇದೇ ಪ್ರಾಣಮಯ ಕೋಶವು (೩) ಮನುಷ್ಯನಲ್ಲಿ ಚಿತ್ತ, ಬುದ್ಧಿ, ಅಹಂಕಾರಗಳೆಂಬುವು ಇವೆ. ಇವುಗಳ ವ್ಯಾಪಾರವೇ ಮನೋಮಯ ಕೋಶವು. (೪) ಮೇಲೆ ವಿವರಿಸಿದ ಕೋಶಗಳ ಮೂಲಕ ಮನುಷ್ಯನು ನಿರ್ಧರಿಸುತ್ತಾನೆ, ತಿಳಿಯುತ್ತಾನೆ, ಪದಾರ್ಥಗಳ ನಿಜಸ್ವರೂಪನ್ನು ಗ್ರಹಿಸುತ್ತಾನೆ. ಇದೇ ವಿಜ್ಞಾನಮಯ ಕೋಶವು. (೫) ಆದರೆ ಈ ಎಲ್ಲ ವ್ಯಾಪಾರಗಳು ಅಳಿದು ಹೋಗಿ ಬಾಹ್ಯವೇನೂ ತೋರದೆ ಇರಲು ಮನುಷ್ಯನಲ್ಲಿ ನಿಜ ಸುಖವು ತಲೆದೋರುತ್ತದೆ. ಇದು ಶಾಶ್ವತವಾದುದು. ಇದೇ ಆನಂದಮಯಕೋಶವು. ಮನುಷ್ಯನ ಪ್ರಗತಿಯು ಈ ಎಲ್ಲ ಕೋಶಗಳಲ್ಲಿ ಉಂಟಾಗಬೇಕು. ಆದರೆ ಮನುಷ್ಯನ ಆಚರಣೆಗಳ ಪ್ರಕಾರ ಈ ಸ್ಥಿತಿಯು ಕ್ರಮೇಣ ಜರಗುತ್ತಿದೆ. ಅದು ಪೂರ್ಣತೆಯನ್ನು ಹೊಂದಿದ ಕೂಡಲೆ ಅವನಲ್ಲಿ ಶಾಶ್ವತ ಸುಖವು ತಲೆದೋರುತ್ತದೆ.

(೩೭) ಶಕ್ತಿಗಳು— ಇವು ಕ್ರಿಯಾಶಕ್ತಿ, ಜ್ಞಾನ ಶಕ್ತಿ, ಇಚ್ಛಾ ಶಕ್ತಿ, ಆದಿಶಕ್ತಿ, ಪರಾಶಕ್ತಿ ಮತ್ತು ಚಿತ್‌ಶಕ್ತಿ ಎಂದು ಆರು ಇರುತ್ತವೆ. ಹಿಂದೆ ಕ್ರಮಾಂಕ ೧೭ ನೆಯದರಲ್ಲಿ ಶಕ್ತಿ ಎಂಬುದು ಹೇಳಲ್ಪಟ್ಟಿದೆ. ಇದರ ಆರು ಸ್ವರೂಪಗಳೇ ಇವು ಇರುತ್ತವೆ. (೧) ಕರ್ಮೇಂದ್ರಿಯಗಳಾದ ವಾಕ್, ಪಾದ, ಪಾಣಿ, ಪಾಯು, ಗುಹ್ಯ ಇವುಗಳ ವ್ಯಾಪಾರಗಳು ಈ ಕ್ರಿಯಾ ಶಕ್ತಿಯಿಂದ ಜರಗುತ್ತವೆ. ಬಾಹ್ಯ ಕ್ರಿಯೆಗಳು ಈ ಶಕ್ತಿಯಿಂದಲೇ ನಡಿಯುತ್ತವೆ (೨) ಆದರೆ ಈ ಕರ್ಮೇಂದ್ರಿಯಗಳು ಸ್ವತಂತ್ರವಾಗಿ ವ್ಯವಹರಿಸಲಾರವು. ಅವುಗಳಿಗೆ ಜ್ಞಾನ ಶಕ್ತಿಯ ಸಹಾಯವು ಬೇಕು. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ ಇವುಗಳು ಜ್ಞಾನೇಂದ್ರಿಯಗಳು. ಈ ಜ್ಞಾನೇಂದ್ರಿಯಗಳಿಂದಲೇ ಜ್ಞಾನ ಶಕ್ತಿಯು ಬಲಪಡುವದು. ಕ್ರಿಯಾ ಶಕ್ತಿಗೆ ಈ ಜ್ಞಾನ ಶಕ್ತಿಯ ಸಹಾಯವು ಅತ್ಯವಶ್ಯವಾಗಿ ಬೇಕು. ಇಲ್ಲದಿದ್ದರೆ ಮನುಷ್ಯನ ಕ್ರಿಯೆಗಳು ತಪ್ಪಿ ಹೋಗುವವು. (೩) ಕ್ರಿಯಾ ಶಕ್ತಿ ಮತ್ತು ಜ್ಞಾನ ಶಕ್ತಿ ಇವುಗಳ ಚಲನೆಗೆ ಇಚ್ಛಾ ಶಕ್ತಿಯೂ ಅವಶ್ಯವಾದುದು. ಮನುಷ್ಯನಿಗೆ ಇಚ್ಛೆ

ಇಲ್ಲದಿದ್ದರೆ, ಕ್ರಿಯಾ ಶಕ್ತಿಯೂ ಜ್ಞಾನಶಕ್ತಿಯೂ ಕುಂಠಿತವಾಗುವವು. ಈ ಮೂರು ಶಕ್ತಿಗಳ ತರುವಾಯ ಆದಿಶಕ್ತಿ, ಪರಾಶಕ್ತಿ, ಮತ್ತು ಚಿತ್ ಶಕ್ತಿ ಎಂಬಿವು ಕ್ರಮವಾಗಿ ಬರುತ್ತವೆ. ಇವು ಉಳಿದವುಗಳಿಗಿಂತಲೂ ಸೂಕ್ಷ್ಮವಾದವುಗಳು (೪) ಆದಿಶಕ್ತಿಯು ಇಚ್ಛಾಶಕ್ತಿಗಿಂತ ಸೂಕ್ಷ್ಮವಾದುದು. ಇಚ್ಛೆಗೆ ಅದು ಪ್ರೇರಣೆ ಮಾಡುವಂತಹದು. ಅದು *Intuition* ಎಂದರೆ ಪ್ರೇರಣಾಶಕ್ತಿ ಎಂದು ಹೇಳಬಹುದು. ಇಚ್ಛೆಯೂ ಕೂಡ ಸ್ಥೂಲ ತರವಾದುದು. ಇವಕ್ಕೆ ಸಹ ಈ ಆದಿಶಕ್ತಿಯು ಪ್ರೇರಕವಾಗಿರುತ್ತದೆ. (೫) ಇದರ ತರುವಾಯ ಪರಾಶಕ್ತಿಯು ಇವೆ. ಇದು ಆದಿಶಕ್ತಿಗಿಂತಲೂ ಸೂಕ್ಷ್ಮವಾದುದು. ಈ ಶಕ್ತಿಯು ಶರಣ ಸ್ಥಲದಲ್ಲಿರುವವನಲ್ಲಿ ಜಾಗ್ರತವಾಗಿ ವ್ಯವಹರಿಸುತ್ತದೆ. ಇದು ಎಲ್ಲಕ್ಕೂ ಮಿಗಿಲಾದದ್ದು (೬) ಚಿತ್ ಶಕ್ತಿಯು ಪರಾಶಕ್ತಿಗಿಂತಲೂ ಸೂಕ್ಷ್ಮವು. ಇದು ಮಿಕ್ಕ ಎಲ್ಲ ಶಕ್ತಿಗಳನ್ನು ಗರ್ಭೀಕರಿಸಿಕೊಂಡಿರುತ್ತದೆ. ಇದು ಐಕ್ಯ ಸ್ಥಲದಲ್ಲಿರುವವನಲ್ಲಿ ಜಾಗ್ರತವಾಗಿರುತ್ತದೆ.

ಈ ಪ್ರಕಾರ ಚಿತ್‌ಶಕ್ತಿಯಿಂದ ಪರಾಶಕ್ತಿ, ಪರಾಶಕ್ತಿಯಿಂದ ಆದಿಶಕ್ತಿ ಆ ಮೇಲೆ ಅನುಕ್ರಮವಾಗಿ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಇವುಗಳು ಪ್ರಾದುರ್ಭವಿಸಿ ಮನುಷ್ಯನ ಬೇರೆ ಬೇರೆ ಶರೀರಗಳಲ್ಲಿ ಅವುಗಳ ಸ್ವಭಾವದಂತೆ ವ್ಯವಹರಿಸುತ್ತವೆ. ಇವೆಲ್ಲವುಗಳು ಪರಸ್ಪರಾವಲಂಬಿಗಳು. ಅವು ಒಂದನ್ನು ಬಿಟ್ಟು ಮತ್ತೊಂದು ವ್ಯವಹರಿಸಲಾರವು. ಮೇಲಿನ ಶಕ್ತಿಯು ಅದರ ಕೆಳಗಿನದಕ್ಕೆ ಪ್ರಾಣಸ್ವರೂಪವಾಗಿರುತ್ತದೆ. ಮತ್ತು ಮೇಲಿನದಕ್ಕೆ ಅದರ ಕೆಳಗಿನದು ಅಂಗ ಸ್ವರೂಪವಾಗಿರುತ್ತದೆ. ಹೀಗೆ ಮನುಷ್ಯನು ತನ್ನಲ್ಲಿ ಎಲ್ಲ ಶಕ್ತಿಗಳನ್ನು ಜೈತನ್ಯಗೊಳಿಸಿ ಸನ್ಮಾರ್ಗದಲ್ಲಿ ನಡೆದಲ್ಲಿ ಅವನಲ್ಲಿ ಪ್ರಗತಿಯುಂಟಾಗುತ್ತ ಹೋಗುತ್ತದೆ ಮತ್ತು ಕಡೆಗೆ ಪರಮಾತ್ಮನಲ್ಲಿ ಅವನು ಸಾಮರಸ್ಯವನ್ನು ಹೊಂದುವನು.

ಷಟ್‌ಸ್ಥಲ ಶಾಸ್ತ್ರದಲ್ಲಿ ಶಕ್ತಿ, ಭಕ್ತಿ, ಲಿಂಗ, ಕಲಾ, ಕ್ರಿಯೆ, ನಾದ, ಬಿಂದು, ಚಿತ್ ಎಂದು ಅನೇಕ ಶಬ್ದಗಳು ಬರುತ್ತಿದ್ದು ಅವು ಒಂದಕ್ಕೊಂದಲವನ್ನುಂಟು ಮಾಡುತ್ತಿವೆ. ಶಕ್ಯವಿದ್ದಷ್ಟರಮಟ್ಟಿಗೆ ನಾವು ಅವುಗಳ ಅರ್ಥಗಳನ್ನು ಇಲ್ಲಿ ಸ್ಫುಟಗೊಳಿಸಲು ಪ್ರಯತ್ನಿಸಿದ್ದೇವೆ.

ಒಬ್ಬ ಉಡುಬೇಟಕಾರ ಒಬ್ಬ ಬಳ್ಳುವಿನ ಕಾಲು ಕಣ್ಣಿನ ಪುಳಿಂದ ನೊಬ್ಬ ನಾಲ್ವರ ಬೇಟಿಯು ನೋಡುವ ಉಡುಗಳ್ಳ ಬೇಟೆ ಬೆಂಬಳಿಯಾದುದಿಲ್ಲ ಬೇಟೆಗೆ ಹೋದವರೆಲ್ಲರು ಕಾಟಕ್ಕೊಳಗಾದರು. ಇದರಾಟವ ಕೇಳಹರೆಂದಂಜಿ ಅಲೇಖನಾದ ಶೂನ್ಯ ಕಲ್ಲಿನ ನೆಲೆಮನೆಯ ಹೊಕ್ಕೆಯಲ್ಲ.

ಟೀಕೆ:— ಊರೆಂದೊಡೆ ದೇಹಭಾವಕ್ಕೆ ಹೊರಗಾದ ಶರಣನ ಜ್ಞಾನಕಾಯವೆಂಬುದೀಗ ಊರಹೊರಗೊಂದು ನಡುಮಠವೆಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ಪ್ರೃತಿಲಕ್ಷ, ಅಂತರ್ಲಕ್ಷ, ಭಕ್ತಿಕಾಂಡಿಗಳು ಇವರೇ ಮೊದಲಾದ ಐವರು ಅಡಗಿರುತ್ತಿಹರೆಂಬುದೀಗ ಅದರೊಳಗೆ ಅಡಗಿಪ್ಪರೈವರು ಕಳ್ಳರೆಂಬ ಶಬ್ದಕ್ಕರ್ಥ. ಚಿತ್ತ ವಸ್ತುವಿನಲ್ಲಿ ಲಯಿಸಿ ಕೂಡಬೇಕೆನ್ನುತ್ತಿಹನು ಅಂತರ್ಲಕ್ಷಯೋಗಿ ಎಂಬುದೀಗ ಒಬ್ಬನರಿಯೆ ಬಲೆಯುವನೆಂಬ ಶಬ್ದಕ್ಕರ್ಥ. ಭಿನ್ನಕ್ರಿಯೆಯನಾಚರಿಸಿ ಕಾಲವ್ಯಾಘ್ರನ ಬಾಧೆಯ ನಿಲಿಸಬೇಕೆನುತಿಹನು ಸಿದ್ಧಾಂತಿ ಎಂಬುದೀಗ ಒಬ್ಬ ಹುಲಿ ಬಲೆಯುವನೆಂಬ ಶಬ್ದಕ್ಕರ್ಥ. ಚಿತ್‌ಪ್ರಕಾಶಮಯವಾದ ಪರಶಿವ ತತ್ವವ ಲಕ್ಷಿಸಿ ಕೂಡಬೇಕೆನುತಿಹನು ಲಕ್ಷಯೋಗಿ ಎಂಬುದೀಗ ಒಬ್ಬ ಉಡುಬೇಟೆಕಾರನೆಂಬ ಶಬ್ದಕ್ಕರ್ಥ. ಪ್ರಣಮ ಸಂಬಂಧವಾದ ಅಭಿನ್ನ ಕ್ರಿಯಾಜ್ಞಾನ ಸೂತ್ರವಿಡಿದು ವಸ್ತುವಿನಲ್ಲಿ ಕೂಡಬೇಕೆನುತಿಹನು ಭಕ್ತಿಕಾಂಡಿಯೆಂಬುದೀಗ ಒಬ್ಬ ಬಳ್ಳುವಿನ ಕಾಲು ಕಣ್ಣಿನ ಪುಳಿಂದನೆಂಬ ಶಬ್ದಕ್ಕರ್ಥ. ಈ ನಾಲ್ವರ ಆಚರಣೆಯ ಹೊದ್ದದೆ ಕರುವಿನಿಂದ ಅಹಂ ಎಂಬ ಅದ್ವೈತ ಜ್ಞಾನಿಯೆಂಬುದೀಗ ಒಬ್ಬ ನಾಲ್ವರ ಬೇಟಿಯು ನೋಡುವ ಉಡಗಳ್ಳನೆಂಬ ಶಬ್ದಕ್ಕರ್ಥ. ತನ್ನ ನಿಜವೇ ಮಹಾಘನ ಲಿಂವೆಂದರಿಯದೆ ಭಿನ್ನವಿಟ್ಟಾಚರಿಸುವ ಈ ಭಿನ್ನ ಜ್ಞಾನಿಗಳಿಗೆ ಮೋಕ್ಷಮಾರ್ಗವು ಸಾಧ್ಯವಾದುದಿಲ್ಲವೆಂಬುದೀಗ ಬೇಟೆ ಬೆಂಬಳಿಯಾದುದಿಲ್ಲವೆಂಬ ಶಬ್ದಕ್ಕರ್ಥ. ಇಂತು ತಮ್ಮ ಭಿನ್ನಜ್ಞಾನ, ಭಿನ್ನ ಕ್ರಿಯೆ, ಭಿನ್ನ ಯೋಗಾಭ್ಯಾಸಂಗಳಿಂ ಸಾಧಿಸಿಹೆನೆಂಬುವರೆಲ್ಲರು ಫಲಪದಕ್ಕೊಳಗಾದರೆಂಬುದೀಗ ಬೇಟೆಗೆ ಹೋದವರೆಲ್ಲರು ಕಾಟಕ್ಕೊಳಗಾದರು. ಇದರಾಟವ ಕೇಳಹರೆಂದಂಜಿ ಅಲೇಖನಾದ ಶೂನ್ಯ ಕಲ್ಲಿನ ನೆಲೆ ಮನೆಯ ಹೊಕ್ಕೆಯಲ್ಲಾ ಎಂಬ ಶಬ್ದಕ್ಕರ್ಥ.

೧೧. ಒಡೆಯನಿಲ್ಲದ ಬಂಟ ತಲೆಯ ಕೂಯಿ ತಂದ. ಕಣ್ಣು ಬಾಯ ಹೊರಗಿರಿಸಿ ಇದು ತಲೆಯಲ್ಲ ಎಂಬುದ ಕೇಳಿ ಅಂಗವ ಹಾಕಿದ ಕಣ್ಣಿನ ಬೆಂಬಳಿಯಲ್ಲಿ ಎಂಬುದ ಕೇಳಿ ಅಂಗವ ಹಾಕಿದ ಕಣ್ಣಿನ ಬೆಂಬಳಿಯಲ್ಲಿ. ಇದನೆಲ್ಲರಿಂಗೂ ಹೇಳಲಾದೀತೆಂದು ಅಲೇಖನಾದ ಶೂನ್ಯ ಕಲ್ಲಿನ ಮರೆಯಾದ.

ಟೀಕೆ:— ಶಿವ ಸೇವಕತ್ವವೆಂಬುಭಯವಳವ ಶರಣ ತನ್ನ ಆತ್ಮಾಂತರ್ಗತವಾಗಿರ್ದ ಪರಿಪೂರ್ಣ ಜ್ಞಾನವನವ ಗ್ರಹಿಸಿದನೆಂಬುದೀಗ ಒಡೆಯನಿಲ್ಲದ ಬಂಟ ತಲೆಯ ಕೋಯಿ ತಂದನೆಂಬ ಶಬ್ದಕ್ಕರ್ಥ. ಆ ಪರಿಪೂರ್ಣ ಜ್ಞಾನದಿಂ ತಾನೆ ಬ್ರಹ್ಮವೆನಲು ಅಲ್ಲಿ ಶಿವಜ್ಞಾನ ದೃಷ್ಟಿಯ ಶಿವಾಪೇಕ್ಷೆಯು ನಾಸ್ತಿಯಾಯಿತ್ತೆಂಬುದೀಗ ಕಣ್ಣು ಬಾಯ ಹೊರಗಿರಿಸಿ ಎಂಬ ಶಬ್ದಕ್ಕರ್ಥ. ಇದು ಲಿಂಗಾಂಗ ಸಂಬಂಧದ ವಿಕಾರ್ಥವನರಿವ ಸಹಜವಲ್ಲವೆಂದು ಶ್ರೀಗುರು ಸೂಚಿಸಲು ಆ ಸುಜ್ಞಾನ ಬೋಧೆಯ ಕೇಳಿದ ಶಿಷ್ಯನು ಆತ್ಮಾಂಗವ ಮಹಾಜ್ಞಾನ ಸ್ವರೂಪವಾದ ಶ್ರೀಗುರು ತತ್ವದಲ್ಲಿ ಏಕೀಕರಿಸಿದನೆಂಬುದೀಗ ಇದು ತಲೆಯಲ್ಲವೆಂಬುದ ಕೇಳಿ ಅಂಗವ ಹಾಕಿದ ಕಣ್ಣಿನ ಬೆಂಬಳಿಯಲ್ಲಿ ಎಂಬ ಶಬ್ದಕ್ಕರ್ಥ. ಆ ಶಿಷ್ಯನು ಶ್ರೀಗುರು ತತ್ವದಲ್ಲಿ ಸಮರಸವಾದ ಭೇದವ ದ್ವೈತಾದ್ವೈತಗಳಿಗೂ ಅಸುರದೆ ಪಂಚಭೂತಾಶ್ರಯವಾದ ದೇಹವಲ್ಲಿ ಆ ಶಿವ ತತ್ವವಡಗಿತ್ತೆಂಬುದೀಗ ಇದನೆಲ್ಲರಿಗೂ ಹೇಳಲಾದೀತೆಂದು ಅಲೇಖನಾದ ಶೂನ್ಯಕಲ್ಲಿನ ಮರೆಯಾದನೆಂಬ ಶಬ್ದಕ್ಕರ್ಥ.

೧೨. ಕಲ್ಲಿನ ಹೋಳ ಬೆಲ್ಲವೆಂದು ಮಕ್ಕಳ ಕೈಯಲ್ಲಿ ಕೊಟ್ಟಡೆ ಹಲ್ಲಿನಲ್ಲಿ ಕಡಿದು ನಾಲಿಗೆಯಲ್ಲಿ ನಂಜಿ ಬೆಲ್ಲವಲ್ಲವೆಂದು ಹಾಯ್ಕಿ ಮನೆಯವರ ಕಾಡುವಂತೆ, ನಾನರಿಯದೆ ಕುರುಹಿಡಿದು ಅರುಮರವೆಯ ಮನಕ್ಕೆ ತೆರಪಾಗದು. ನಾನರಿವರೆ ಎನ್ನೊಡಗೂಡಿರ್ದ ತುಡುಗುಣಿ ಎನ್ನ ಬಿಡದು. ನಡೆಯ ಸತ್ವವಿಲ್ಲದೆ ಬಡವನ ಬಂಟನಾದ. ಮತ್ತೆ ಬಾಯ ಹೊಡೆಯಿಸಿಕೊಂಬುವುದಕ್ಕೆ ಅಂಜಲೇಕೆ? ಬಿಡು ಒಡೆಯನ. ಬಿಡದಿರ್ದಡೆ ಕಲ್ಲಿನ ಎಡೆಯೂಗು. ಇವರಿಲ್ಲರವಿಧಿವನಗಾಯಿತ್ತು. ಕೈಯಲ್ಲಿರ್ದ ಕಠಿಣವ ನಂಬಿ ಇದರ ಬಲ್ಲತನವ ಹೇಳಾ ಅಲೇಖನಾದ ಶೂನ್ಯ ಕಲ್ಲಿನ ಮರೆಯಾದವನೇ.

೧೩. ಕಾಲಲ್ಲಿ ಕಟ್ಟಿದ ಸಡೆಯ ಕೀಳುವರಿಲ್ಲ. ಕೈಯಲ್ಲಿ ಹಿಡಿದ ಮರನ ಬೇಡ ಎಂಬುವರಿಲ್ಲ. ತಲೆಯಲ್ಲಿ ಹೊತ್ತು ಕೊಂಗವ ಇಳುವರಿಲ್ಲ. ಸಡೆಗೆ ಮೂರುಕವೆ ಒಂದೆ ಬಿತ್ತವಟ್ಟ ಮರಕ್ಕೆ ಮೂರು ಗೋಟು ಮೂಡುವಾಕೆ ಒಬ್ಬಳೆ ಕೊಂಗಕ್ಕೆ ಎರಡು ಗೋಟು ತೋರುವವರು ಮೂವರು ರಾಶಿ ಒಂದೆ ಕೊಳಗನೆರಡು ಅಳಿವರು ಲೆಕ್ಕಕ್ಕೆ ಕಡೆ ಇಲ್ಲ ಇದ ಕೇಳಿಹರೆಂದಂಜಿ ಅಲೇಖನಾದ ಶೂನ್ಯ ಕಲ್ಲಿನೊಳಹೊಕ್ಕ.

ಟೀಕೆ:— ಶರಣನ ಅಭಿನ್ನ ಕ್ರಿಯಲ್ಲಿ ಸಂಬಂಧವಾದ ಶಿವಾದ್ವೈತ ಭಕ್ತಿಯನು ಬೇರ್ಪಡಿಸಬಾರದೆಂಬುದೀಗ ಕಾಲಲ್ಲಿ ಕಟ್ಟಿದ ಸಡೆಯ ಕೀಳುವರಿಲ್ಲವೆಂಬ ಶಬ್ದಕ್ಕರ್ಥ. ಆ ಶರಣನ ಸದ್ಭಾವದಲ್ಲಿ ಸಂಬಂಧವಾದ ಅಭಿನ್ನಾಚಾರವ ಬಿಡಸಲಳವಲ್ಲವೆಂಬುದೀಗ ಕೈಯಲ್ಲಿ ಹಿಡಿದ ಮರನ ಬೇಡಾ ಎಂಬುವರಿಲ್ಲ ಎಂಬ ಶಬ್ದಕ್ಕರ್ಥ. ಆ ಶಿವಾದ್ವೈತ ಭಕ್ತಿಯಿಂ ತ್ರಿವಿಧ ಭಕ್ತಿ ಪ್ರಭಾವಿಸಿದವೆಂಬುದೀಗ ಸಡೆಗೆ ಮೂರುಕವೆ ಎಂಬ ಶಬ್ದಕ್ಕರ್ಥ. ಆ ತ್ರಿವಿಧ ಭಕ್ತಿ ವಿಡಿದಾಚರಿಸುವ ಶರಣಂಗೆ ನಿತ್ಯ ಪದ ಸ್ವರೂಪವಾದ ಮಹಾಘನಲಿಂಗ ಒಂದೇ ಎಂಬುದೀಗ ಒಂದೇ ಬಿತ್ತವಟ್ಟವೆಂಬ ಶಬ್ದಕ್ಕರ್ಥ. ಸಕಲ ತತ್ವ ಬ್ರಹ್ಮಾಂಡಂಗಳಿಗೆ ಕಾರಣವಾದ ಮಹಾಘನಲಿಂಗವನೊಳಕೊಂಡಿರ್ಪ ಶರಣನ ಅಭಿನ್ನಾಚಾರದಲ್ಲಿ ತ್ರಿವಿಧಾಚಾರವಡಗಿಹದೆಂಬುದೀಗ ಮರಕ್ಕೆ ಮೂರು ಗೋಟು ಎಂಬ ಶಬ್ದಕ್ಕರ್ಥ. ಜ್ಞಾನಶಕ್ತಿ ಸ್ವರೂಪವಾದ ಶರಣನು ಅಭಿನ್ನಾಚಾರದಲ್ಲಿ ಸಕಲ ತತ್ವ ಕರಣಂಗಳೆಲ್ಲವನನು ಮಾಡಿ ಶಿವಾರ್ಪಿತಕ್ಕೊದಗಿಸುತ್ತಿಹಳೆಂಬುದೀಗ ಮೂಡುವಾಕೆ ಒಬ್ಬಳೆ ಎಂಬ ಶಬ್ದಕ್ಕರ್ಥ. ಆ ಲಿಂಗ ಸುಖ ಪ್ರಸನ್ನ ಪ್ರಸಾದವ ಸ್ವೀಕರಿಸಿದ ಶರಣ ಶಿವಭಾವದಲ್ಲಿ ಭಾವ ನಿರ್ಭಾವವೆಂಬುಭಯ ಸನ್ನಿಹಿತವಾಗಿಹುದೆಂಬುದೀಗ ಕೊಂಗಕ್ಕೆ ಎರಡು ಗೋಟು ಎಂಬ ಶಬ್ದಕ್ಕರ್ಥ. ಆ ಶಿವಭಾವ ಘಟಿಸಿದ ಶರಣನ ಆತ್ಮತ್ರಯಂಗಳಲ್ಲಿ ಕ್ರಿಯಾಜ್ಞಾನಭಾವವಳವಡಲು ಸಕಲ ಪ್ರಪಂಚ ನಿವೃತ್ತಿ ಮಾಡಿದನೆಂಬುದೀಗ ತೋರುವವರು ಮೂವರು ಎಂಬ ಶಬ್ದಕ್ಕರ್ಥ. ಆ ಸಕಲ ಪ್ರಪಂಚ ನಿವೃತ್ತಿಯಾದ ಶರಣನಲ್ಲಿ ನಿಜದ ನಿಧಿಯಪ್ಪ ಪರಶಿವತತ್ವ ಒಂದೇ ಎಂಬುದೀಗ ರಾಶಿ ಒಂದೇ ಎಂಬ ಶಬ್ದಕ್ಕರ್ಥ. ಆ ಲಿಂಗ ಸಂಬಂಧಿಯಾಗಿರ್ಪ ಶರಣನು ಜ್ಞಾನಕ್ರಿಯೆವಿಡಿದಾಚರಿಸಲು ಆ ಲಿಂಗ ಚೈತನ್ಯ ಅಂತರಂಗಕ್ಕೆ ವೇಧಿಸಿ ಪ್ರಾಣಲಿಂಗ ಸಂಬಂಧವಾದ ಸಕಲ ಕರಣಂಗಳು ಅಮರಗಣತ್ವವನೆಯ್ದಿ ಶಿವೋಹಂ ಎನುತಿರ್ದವೆಂಬುದೀಗ ಕೊಳ

ಗವೆರಡು ಅಳಿವರು ಲಿಕ್ಷಕ್ಕೆ ಕಡೆ ಇಲ್ಲ ಇದ ಕೇಳಿಹರೆಂದಂಜಿ ಅಲೇಖನಾದ ಶೂನ್ಯ ಕಲ್ಲಿನೊಳಹೊಕ್ಕನೆಂಬ ಶಬ್ದಕ್ಕರ್ಥ.

೧೪. ಕಂಬಳಿಯ ಕೌಪ ಕಟ್ಟಿದ ಮತ್ತೆ ಅವರವರ ಬೆಂಬಳಿಯಲ್ಲಿ ಕಂಬಳಿಯ ಹೊದ್ದಿಹೆನೆಂಬ ಆಸೆಯಾಕೆ ಹೊದೆಯಲಿಲ್ಲದ ಕಂಬಳಿಯ ಉಡಿಗೆ ಕಟ್ಟಿದ ಮತ್ತೆ ಈ ಪೈಗಡಿಗೆಯಣ್ಣಾಗಳ ಒಡಗೂಡಲಾಕೆ ಅವರ ತೊಡೆಯ ಸಂದಿಯಲ್ಲಿ ಕುಳಿತು ಅವರ ಮಾತಿಗೆ ಅಡುಮೆಯಾಗಲೇಕೆ ಇಂತಿವನರಿದಿದ್ದರೆಂದಡಿಗದ ಅಲೇಖನಾದ ಶೂನ್ಯಕಲ್ಲಿನ ಮರೆಯಾದ.

ಟೀಕು:— ಪರಿಪೂರ್ಣಜ್ಞಾನವನು ಶರಣ ಸರ್ವಾಂಗದಲ್ಲಿ ಸಮರಸವ ಮಾಡಿ ಸಕಲಕರಣಂಗಳ ವ್ಯವಹಾರವ ಕೆಡಿಸಿ ಜ್ಞಾನಕರಣಂಗಳ ಮಾಡಿದನೆಂಬುದೀಗ ಕಂಬಳಿಯ ಕೌಪ ಕಟ್ಟಿದ ಮತ್ತೆ ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣಜ್ಞಾನಿಯಾದ ಶರಣನು ತನುಮನ ಪ್ರಾಣೇಂದ್ರಿಯಂಗಳು ಮೊದಲಾದ ಸಕಲ ತತ್ವಂಗಳೆಲ್ಲ ಲಿಂಗ ತತ್ವಂಗಳಾಗಿದುದೇ ದ್ವೈತಾದ್ವೈತಿಯಾಗಿ ಮಾರ್ಗಿಗಳ ಅವರವರ ಕ್ರಿಯಾಜ್ಞಾನಯೋಗ ಮಾರ್ಗಂಗಳನರಿಯದೇಕೆಂಬ ಆಸೆ ಇರಬಾರದು ಶರಣಂಗೆಂಬುದೀಗ ಅವರವರ ಬೆಂಬಳಿಯಲ್ಲಿ ಕಂಬಳಿಯ ಹೊದ್ದಿಹೆನೆಂಬ ಆಸೆಯಾಕೆ ಎಂಬ ಶಬ್ದಕ್ಕರ್ಥ. ಅಂತಪ್ಪ ದ್ವೈತಾದ್ವೈತ ಯೋಗಮಾರ್ಗಿಗಳಿಗೆ ಸಾಧ್ಯವಲ್ಲದುದೇ ಪರಿಪೂರ್ಣ ಜ್ಞಾನ ಅಂತಪ್ಪ ಅರಿವನೆ ಶರಣ ಗುರುಮಾರ್ಗಾಚಾರದಲ್ಲಿ ಸಂಬಂಧವ ಮಾಡಿದನೆಂಬುದೀಗ ಹೊದೆಯಲಿಲ್ಲದ ಕಂಬಳಿಯ ಉಡಿಗೆ ಕಟ್ಟಿದ ಮತ್ತೆ ಎಂಬ ಶಬ್ದಕ್ಕರ್ಥ. ಕರಸ್ಥಲದಲ್ಲಿ ಲಿಂಗವ ಪಿಡಿದು ಲಿಂಗವೇ ನಿರ್ಮಲ ಅಂಗವೇ ಮಲಿನವೆಂದು ದ್ವೈತಭಾವ ದಿಂದೆರಡಿಟ್ಟು ಪರಿಸುವ ಕರ್ಮಕಾಂಡಿಗಳ ಷಟ್‌ಸ್ಥಲ ಮಾರ್ಗದಲ್ಲಿ ಕೂಡಲಾಗದೆಂಬುದೀಗ ಈ ಕೆಯ್ಯ ಗಡಿಗೆಯಣ್ಣಂಗಳ ಒಡಗೂಡಲೇಕೆ ಅವರ ತೊಡೆಯ ಸಂದಿಯಲ್ಲಿ ಕುಳಿತು ಅವರ ಮಾತಿಗೆ ಅಡುಮೆಯಾಗಲೇಕೆ ಇಂತಿವನರಿದಿಹರೆಂದು ಅಡಗಿದ ಅಲೇಖನಾದ ಶೂನ್ಯ ಕಲ್ಲಿನ ಮರೆಯಾದನೆಂಬ ಶಬ್ದಕ್ಕರ್ಥ.

೧೫. ಕುರುಹಿಂಗೆ ಆಚಾರದ ಪೂಜೆ. ಆರುಹಿಂಗೆ ಸಕಲ ಪರ್ಮ ಪ್ರಕೃತಿ ಪಂಚೇಂದ್ರಿಯದೊಳಗಾದ ಸಂಚಿತ ಕರ್ಮಂಗಳ ಶಂಕೆಯು

ಹರಿದಿಪ್ಪುದು. ತನು ಭಕ್ತಿ ವನ ಮಹದಲ್ಲಿಡಗೂಡಿದು ಅಲೇಖನಾದ ಶೂನ್ಯ ಕಲ್ಲಿನೊಳಗಿದ್ದವನ ಮೆಲ್ಲನೆ ಅರಿ.

೧೬. ಕಾಳಮೇಘ ಮುಂದಿರದ ಜಾಳಂದರದ ಮನೆಯಲ್ಲಿ ಒಬ್ಬ ಸೂಳೆಯ ಬಾಗಿಲಲ್ಲಿ ಎಂಭತ್ತುನಾಲ್ಕು ಲಕ್ಷ ಮಿಂಡಗಾರರು ಅವಳ ಸಂಗದಲ್ಲಿರಲಮ್ಮರು. ಅವಳು ತಾವೇ ಬರಲೆಂದು ಕರೆಯದಿಹಳು. ಅವಳಿಗೆ ಯೋನಿ ಹಿಂದು ಅಂಡ ಮುಂದು ಕಣ್ಣು ಅಂಗಾಲಿನಲ್ಲಿ ಕಿವಿ ಭುಜದಲ್ಲಿ ಕೈ ಮುಂಡೆಯ ಮೇಲೆ ಮೂಗು ಹಣೆಯಲ್ಲಿ ಮೂಗಿನ ದ್ವಾರ ಉಂಗುಷ್ಠದಲ್ಲಿ ಬಸಿರು ಬಾಯಲ್ಲಿ ನಡೆವಳು ತಲೆ ಮುಂದಾಗಿ ಕಾಲು ಮೇಲಾಗಿ ಅವಳು ಕೂಡುವ ಪರಿಯ ಹೇಳಾ ಅಲೇಖನಾದ ಶೂನ್ಯವ ಗೆದ್ದೆಯಲ್ಲ ಕಲ್ಲಿನ ಹೊಟ್ಟೆಯ ಮರೆಯಲ್ಲಿ.

ಟೀಕೆ— ಉಭ್ರಜ್ಞಾಯೆ ಮಾತ್ರವಾದ ದೇಹವು ಅಜ್ಞಾನ ಸಂಬಂಧವಾಗಿರುತ್ತಿಹುದೆಂಬುದೀಗ ಕಾಳಮೇಘ ಮುಂದಿರದ ಎಂಬ ಶಬ್ದಕ್ಕರ್ಥ. ನವದ್ವಾರಯುಕ್ತವಾದಂಥ ದೇಹವೆಂಬುದೀಗ ಜಾಳಂದರದ ಮನೆಯಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ಅಂತಹ ದೇಹದಲ್ಲಿ ನಿಷ್ಕಲ ಚಿಚ್ಛಕ್ತಿ ಇರುತ್ತಿಹಳೆಂಬುದೀಗ ಒಬ್ಬ ಸೂಳೆ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯ ಮೋಕ್ಷ ಮಾರ್ಗದಲ್ಲಿ ಎಂಬುದೀಗ ಬಾಗಿಲಲ್ಲಿ ಎಂಬ ಶಬ್ದಕ್ಕರ್ಥ. ಎಂಬತ್ತುನಾಲ್ಕು ಲಕ್ಷ ಯೋನಿದ್ವಾರದಲ್ಲಿ ಹುಟ್ಟಿ ಹುಟ್ಟಿ ಬರುತ್ತಿಹ ಸಕಲ ಜೀವರುಗಳು ಮೋಕ್ಷ ಮಾರ್ಗವ ನಿಶ್ಚೈಸುತ್ತಿಹರಲ್ಲದೆ ಆ ಚಿಚ್ಛಕ್ತಿಯಗೂಡಿ ಪರಮಾನಂದ ಸುಖವ ಸುಖಿಸಿಹೆನೆಂದೊಡೆ ಜೀವಭಾವ ಹಿಂಗದಾಗಿ ಅಸಾಧ್ಯವಾಗಿರುತ್ತಿಹುದೆಂಬುದೀಗ ಎಂಭತ್ತುನಾಲ್ಕುಲಕ್ಷ ಮಿಂಡಗಾರರು ಅವಳ ಸಂಗದಲ್ಲಿ ಇರಲಮ್ಮರು ಎಂಬ ಶಬ್ದಕ್ಕರ್ಥ. ಆ ಚಿತ್ತ ಗುರುಸ್ವರೂಪವಾದ ಕಾರಣ ಸುಜ್ಞಾನೋದಯವಾಗಿ ಸಕಲಪ್ರಪಂಚ ನಿವೃತ್ತಿಯ ಮಾಡಿ ಉಪಾವಸ್ಥೆಯ ಮುಂದುಗೊಂಡು ತಾವೇ ಬರಲೆಂದು ಸುಮ್ಮನಿರುತ್ತಿಹನು ಶ್ರೀಗುರುವೆಂಬುದೀಗ ಅವಳು ತಾವೇ ಬರಲೆಂದು ಕರೆಯದಿಹಳು ಎಂಬ ಶಬ್ದಕ್ಕರ್ಥ. ಅಂತಪ್ಪ ಚಿಚ್ಛಕ್ತಿಯ ನಿಜ ಸುಷುಪ್ತಿಯ ಮೂಲದಲ್ಲಿ ಕೂಡಿಹುದೆಂಬುದೀಗ ಅವಳಿಗೆ ಯೋನಿ ಹಿಂದೆಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯ ಸ್ವಸ್ಥಿರಚಿತ್ತವೆಂಬುದೀಗ ಮೋಕ್ಷದಲ್ಲಿ ಲೀಯವಾಗಿಹುದೆಂಬುದೀಗ ಅಂಡ ಮುಂದು ಎಂಬ ಶಬ್ದಕ್ಕರ್ಥ. ಆ ಚಿಚ್ಛ

ಜ್ಞಾನವನೊಳಕೊಂಡಿರ್ಪ ಸಜ್ಜೀವನನ್ಗ್ರಹಿಸಿತ್ತೆಂಬುದೀಗ ಹಾಲ ಕಂಬಳಿಯ ಕುರಿ ಕುಡಿಯಿತ್ತು ಎಂಬ ಶಬ್ದಕ್ಕರ್ಥ. ಆ ಚಿದಮೃತವ ಸ್ವೀಕರಿಸಿದ ಚಿದಾತ್ಮನು ತನ್ನ ಮಹಾಜ್ಞಾನದ ಮೂಲೆಯಲ್ಲಿ ಲಿಂಗತ್ರಯ ಸಂಬಂಧವಾದ ತನುತ್ರಯಂಗಳಡಗಿದ ಭೇದವ ಕಂಡು ಹರುಷೋಲ್ಲಾಸದಿಂದಿರುತ್ತಿಹುದೆಂಬುದೀಗ ಮೂರು ಲೋಕವೆಲ್ಲವು ಎನ್ನ ಕಂಬಳಿಯ ಗೊಪ್ಪೆಯಲ್ಲಿ ತುಂಬಿಯದೆ ಎಂದು ಸಂಭ್ರಮವ ಮಾಡುತ್ತದೆ ಎಂಬ ಶಬ್ದಕ್ಕರ್ಥ. ಈ ಲಿಂಗಾಂಗ ಸಮರಸಾನಂದದ ಸುಖವ ಕೃಪೆ ಮಾಡೆಂದು ಶ್ರೀಗುರುವಿಗೆ ಬಿನ್ನೈಸುತ್ತಿರ್ದನೆಂಬುದೀಗ ಇದರ ಸಂಗದ ಸುಖವ ಹೇಳಾ ಅಲೇಖನಾದ ಶೂನ್ಯ ಕಲ್ಲಿನ ಮರೆ ಬೇಡಾ ಎಂಬ ಶಬ್ದಕ್ಕರ್ಥ.

೧೮. ಜೊಚ್ಚಿಲ ಕೂಸು ಹೆತ್ತ ತಾಯ ಮೊಲೆಯನುಂಬಾಗ ಕತ್ತೆಯ ಮರಿ ಕೊರಳ ಕಚ್ಚಿತ್ತು. ಕತ್ತೆಯ ಮರಿಯ ಜೊಚ್ಚಿಲ ಕೂಸು ಮೊಲೆಯ ತೊಟ್ಟು ನುಂಗಿತ್ತು. ಮೊಲೆಯ ಹೊತ್ತಿರ್ದವಳ ಹೊಟ್ಟೆಯ ಸುಳಿ ನುಂಗಿತ್ತು. ಈ ಬಟ್ಟೆಯ ಕೇಳಿಹರೆಂದಂಜಿ ಅಲೇಖನಾದ ಶೂನ್ಯ ಕಲ್ಲಿನಾಥನಾದ.

ಟೀಕೆ:— ಚಿಚ್ಛಕ್ತಿಯು ಚಿದ್ಭರ್ಗದಿಂದುದಯವಾದ ಜ್ಞಾನ ಕಲಾತ್ಮನೆಂಬುದೀಗ ಜೊಚ್ಚಿಲ ಕೂಸು ಎಂಬ ಶಬ್ದಕ್ಕರ್ಥ. ಆ ಚಿತ್‌ಸ್ವರೂಪನಾದ ಶರಣನು ಆ ಚಿಚ್ಛಕ್ತಿಯಲ್ಲಿ ಅಮೃತ ಕುಂಭಸ್ವರೂಪಿನಿಂ ಒಪ್ಪುತ್ತಿರ್ದ ಚಿದ್ಘನಲಿಂಗವ ಸದ್ವಿವೇಕ ಮುಖದಿಂ ಸ್ವೀಕರಿಸುತ್ತಿರಲು ಎಂಬುದೀಗ ಹೆತ್ತ ತಾಯ ಮೊಲೆಯ ನುಂಬಾಗ ಎಂಬ ಶಬ್ದಕ್ಕರ್ಥ. ಅಂತು ಸ್ವೀಕರಿಸುತ್ತಿರಲು ಮಾಯಾ ಸಂಬಂಧವಾದ ಜಡ ದೇಹದಲ್ಲಿ ಸಂಕಲ್ಪರೂಪವಾದ ಮನಸ್ಸು ಹುಟ್ಟಿ ದೃಢ ಕಂಠವನವಗ್ರಹಿಸಿತ್ತೆಂಬುದೀಗ ಕತ್ತೆಯ ಮರಿ ಕೊರಳ ಕಚ್ಚಿತ್ತೆಂಬ ಶಬ್ದಕ್ಕರ್ಥ. ಆ ಮನಸ್ಸು ಚಿತ್‌ಸ್ವರೂಪನಾದ ಜ್ಞಾನ ಕಲಾತ್ಮನ ಅಮೃತ ಕುಂಭಸ್ವರೂಪಿನಿಂದೊಪ್ಪುತ್ತಿರ್ದ ಚಿದ್ಘನಲಿಂಗದ ಸತ್ಕ್ರಿಯಾಚಾರವನವಗ್ರಹಿಸಿತ್ತೆಂಬುದೀಗ ಕತ್ತೆಯ ಮರಿಯ ಜೊಚ್ಚಿಲ ಕೂಸು ಮೊಲೆಯ ತೊಟ್ಟು ನುಂಗಿತ್ತು ಎಂಬ ಶಬ್ದಕ್ಕರ್ಥ. ಆ ಅಮೃತ ಕುಂಭಸ್ವರೂಪಿನಿಂದೊಪ್ಪುತ್ತಿರ್ದ ಪರಶಿವ ತತ್ವದ ಹೊರಗೆನ್ನದೆ ಸರ್ವಾಂಗದಲ್ಲಿ ಧರಿಸಿಕೊಂ

ಕ್ತಿಯ ಜ್ಞಾನವೃಷ್ಟಿಯ ಚರ್ಯಾಪಾದದಲ್ಲಿ ಸಂಬಂಧವಾಗಿಹುದೆಂಬುದೀಗ ಕಣ್ಣಿ ಆಂಗಾಲಿನಲ್ಲಿ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯು ಸುಜ್ಞಾನ ಶಿರಸ್ಸು ಕ್ರಿಯಾಪಾದದಲ್ಲಿ ಸಂಬಂಧವಾಗಿಹುದೆಂಬುದೀಗ ತಲೆ ಮುಂಗಾಲಿನಲ್ಲಿ ಎಂಬ ಶಬ್ದಕ್ಕರ್ಥ. ಆ ಚಿತ್ಸ್ವರೂಪನಾದ ಶ್ರೀಗುರುವಿನ ಷಡಕ್ಷರಿಯ ಮಂತ್ರವು ನೈಷ್ಠಿಕೆಯಲ್ಲಿ ಸಂಬಂಧವಾಗಿಹುದೆಂಬುದೀಗ ಕಿವಿ ಭುಜದಲ್ಲಿ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯ ಸದ್ಭಾವ ಹಸ್ತವು ಜ್ಞಾನ ಸ್ವರೂಪವಾದ ಪರಶಿವತತ್ವದಲ್ಲಿ ಸಂಬಂಧವಾಗಿಹುದೆಂಬುದೀಗ ಕೈಮುಂಡಿಯ ಮೇಲೆ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯ ಸ್ವಾನುಭಾವ ಸದ್ಭಾವನೆಯು ಶಿವಾವ್ಯೆತ ಭಕ್ತಿಯಲ್ಲಿ ಸನ್ನಿಹಿತವಾಗಿಹುದೆಂಬುದೀಗ ಮೂಗು ಹಣೆಯಲ್ಲಿ ಎಂಬ ಶಬ್ದಕ್ಕರ್ಥ. ಆ ಸ್ವಾನುಭಾವದಲ್ಲಿ ಸಂಬಂಧವಾದ ಸದ್ವಿವೇಕ ದ್ವಾರವು ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗದಲ್ಲಿ ಸಂಯೋಗವಾಗಿಹುದೆಂಬುದೀಗ ಮೂಗಿನ ದ್ವಾರ ಉಂಗುಷ್ಠದಲ್ಲಿ ಎಂಬ ಶಬ್ದಕ್ಕರ್ಥ. ಆ ಮಹಾಲಿಂಗವ ನಿಜವನೊಳಕೊಂಡಿರ್ಪ ಚಿಚ್ಛಕ್ತಿಯ ಚಿದ್ಗರ್ಭವು ಶಿವಾಪೇಕ್ಷೆಯಲ್ಲಿ ಸಂಬಂಧವಾಗಿಹುದೆಂಬುದೀಗ ಬಸಿರು ಬಾಯಲ್ಲಿ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯ ಸುಜ್ಞಾನ ಪ್ರಕಾಶವು ಮಾರ್ಗಕ್ರಿಯೆಯಲ್ಲಿ ಒಡಗೂಡಿ ಅಭಿನ್ನಕ್ರಿಯಾಚಾರವು ಮೀರಿದ ಕ್ರಿಯದಲ್ಲಿ ಸಂಬಂಧವಾಗಿ ಆಚರಿಸುತ್ತಿಹಳೆಂಬುದೀಗ ನಡೆವಳು ತಲೆಯ ಮುಂತಾಗಿ ಕಾಲುಮೇಲಾಗಿ ಎಂಬ ಶಬ್ದಕ್ಕರ್ಥ. ಆ ಅನಾದಿ ಚಿಚ್ಛಕ್ತಿ ಸ್ವರೂಪವಾದ ಶ್ರೀಗುರು ತತ್ವದಲ್ಲಿ ಸಮರಸವಹ ಭೇದವ ನಿರೂಪಿಸೆಂದು ಬಿನ್ನೈಸುತ್ತಿರ್ದನೆಂಬುದೀಗ ಅವಳು ಕೂಡುವ ಪರಿಯ ಹೇಳಾ ಅಲೇಖನಾದ ಶೂನ್ಯವ ಗೆಪ್ಪೆಯುಲ್ಲ ಕಲ್ಲಿನ ಹೊಟ್ಟೆಯ ಮರೆಯಲ್ಲಿ ಎಂಬ ಶಬ್ದಕ್ಕರ್ಥ.

೧೭. ಕಾಳಾಡಿನ ಹಾಲ ಕಂಬಳಿಯ ಕುರಿ ಕುಡಿಯಿತ್ತು. ಮೂರು ಲೋಕವೆಲ್ಲವು ಎನ್ನ ಕಂಬಳಿಯ ಗೊಪ್ಪೆಯಲ್ಲಿ ತುಂಬಿಯುದೆ ಎಂದು ಸಂಭ್ರಮವ ಮಾಡುತ್ತಿದೆ. ಇದರ ಸಂಗದ ಸುಖ ಹೇಳಾ ಅಲೇಖನಾದ ಶೂನ್ಯ ಕಲ್ಲಿನ ಮರೆ ಬೇಡಾ.

ಟೀಕೆ:— ಅಖಂಡ ಪರಿಪೂರ್ಣವಾದ ಚಿತ್ತಿನ ಅವಿರಳ ಜ್ಞಾನದ ಪರವಶದ ಪರಮಕಾಷ್ಠೆಯೆಂಬುದೀಗ ಕಾಳಾಡಿನ ಎಂಬ ಶಬ್ದಕ್ಕರ್ಥ. ಆ ಚಿತ್ತೆಂಬ ಚಿದ್ಭೂಮಿಯಲ್ಲಿ ತುಂಬಿರ್ದ ಜ್ಞಾನಾಮೃತ ರಸವ ಮಹಾ

ಕೆಯ್ಯೊಳ್ ಸಿಂಗದ ಕಂಗಳಂ ಆರ್ದ ತಾಳವುಂ ಕೊಡಲೆತ್ತಲಾರದೆ ತಾ
ವಟ್ಟಲಂ ಮೇಲಾಗಿ ಘೀಳಿಟ್ಟು ಕಾಲೂರಿ ದರಿಣಿಯ ಮೇಲೆ ಕೆಡೆಯಲಾ
ಶ್ಚರ್ಯಂ ಒಟ್ಟಿ ಸತ್ಯ ಶರಣನ ಚರಣದೋಳ್ ಘೊಪ್ಪನೆ ಬಿದ್ದು ದೇವಾ
ಮಾತನರಿಯದ ಮೂರ್ಖಂಗೆ ಭಕ್ತಿಯರಿಯದ ಯುಕ್ತಿ ಹೀನಂಗೆ ನಿಸ್ಸೀ
ಮರನರಿಯದ ನಿರ್ದೀಹಂಗೆ ಸಿರಿಮರುಳ್ಪತ್ತಿದ ನಿರ್ಭಾಗ್ಯಂಗೆ ಕರುಣಿ
ಪುದೆಂದು ಕಾರ್ಪಣ್ಯ ಮುಖನಾಗಿ ಇರ್ದ ಧರಣೀಶನಂ ಶರಣರನುಮ
ತದಿಂ ಕರುಣಿಸಿ ನೋಡಿ ಸತ್ತಾನೆಗಾಯುಮನಿತ್ತು ತಾಳಮುಂ ತನ್ನತ್ತ
ತೆಗೆದುಕೊಂಡು ಶಶಿಧರನ ಬಿಸಿಗಣ್ಣಿವಿಭವಂ ದಾರಿದ್ರವಿದ್ರಾವಣನ ಭದ್ರ
ಗಜಂ ಶಂಕರನ ಬಿಂಕದ ಭಕ್ತಿಯ ಭಾವಕನೆನಿಸಿ ಬಾಹೂರ ಬೊಮ್ಮ
ಯ್ಯನಂ ಪೇರ್ವಾಡಿರಾಯನೋಲೈಸಿ ಬರೆ ಪುರಜನಂ ಕೈಯೆತ್ತಿ ಪರ
ಸಮಯಂ ಪರಿದೋಡೆ ರಭಸದಿಂ ನಡೆತಂದು ಕಪಟರಹಿತಂ ತ್ರಿಪು
ರಾಂತಕನಂ ಬಲವಂದು ಕಂಡು ಚಿತ್ತಂ ಸಂತಸಗೊಂಡು ಮನಂ
ಮುಟ್ಟಿ ಭಾವಂ ಬಲಿದು ಪಾದೋದಕಂಗೊಂಡು ಪುಣ್ಯಂ ನೆಲಿಸಿ ಪ್ರಸಾ
ದಮುಂ ಧರಿಸಿ ನಿತ್ಯನೇಮಂ ಮಾಡಿ ಸತ್ಯಸೇವ್ಯನಂ ಬೀಳ್ಕೊಂಡು
ಕಲ್ಯಾಣಪುರಮುಂ ಪೊರಮಟ್ಟು ಪೇರ್ವಾಡಿರಾಯನಂ ಮರಳಿ ಕಳುಪೆ
ಬಾಹೂರತ್ತಲಭಿಮುಖನಾಗಿ ಪದಾತಿ ಬಲಂ ಪಡಿಸಣಿಸಿ ನಿಸ್ಸಾಳ
ಧ್ವನಿಯುಣ್ಮೆ ಕಹಳಾರವಂ ಪೊಣ್ಮೆ ಬಾಹೂರಂ ಪೊಕ್ಕು ಮನಂಮಿಕ್ಕು
ಪರಮ ಸುಖದಿಂದಿರೆ ಬೊಮ್ಮಯ್ಯನುಂ ಜೋಳವಂ ಶಂಕರನೆಂದೋ
ಎನಿಸಿದ ಪೇರ್ವಾಡಿ ರಾಯನ ಪಟ್ಟದಾನೆಗೆ ತೊಲಗಪೆ ಕರಿಗೆ ಹರ
ಣಮುಂ ಕೊಟ್ಟನೆಂಬ ಸುಕೀರ್ತಿ ಜಗಮುಂ ಸುತ್ತಿ ಕೇಳ್ದ ಶರಣರ್ ತಮ
ತಮಗೆ ಜಂಗಮವಾರ್ಧಿ ಮೇರೆದಪ್ಪಿದಂತೆ ಕವಿತರಿ ಕಂಡು ಹರುಷಂ
ಗೊಂಡು ಬಂದ ಶರಣರನಿದಿರ್ಗೊಂಡು ಆತ್ಯಾದರದಿಂ ಮಿಗಿಲನಾರಾ
ಧಿಸಿ ಬಾಹೂರ ಬೊಮ್ಮಯ್ಯ ಶಿವಭಕ್ತಪ್ರೇಮಾವಲೋಕನ ನವ್ಯಕೋಶ
ಹೃತ್ಕಮಲ ಸಂಸ್ಪರ್ಶ ಶಿವದಾಸಂ ಸುಖಜಲಭರಿತಾಕ್ಷಪುಟ ಗದ್ಗದ
ಮಯಂ ಸಿತಿಲಾಕ್ಷರವಜೋವಿಳಾಸ ಪುಳಕಾಭರಣಂ ಸರ್ವಾಂಗನಾಗುತ್ತಂ
ಮಿರೆಯಿರೆ.

ದ್ವಿತೀಯ ಸ್ಥಲಂ ಸಂಪೂರ್ಣ.

ಡಿರ್ದ ಶರಣ ಸತಿಯ ಅಂತರ್ಭಾವದಲ್ಲಿರ್ದ ಚಿಬ್ಬಿಂದು ಸ್ವರೂಪವಾದ
ಶಿವಲಿಂಗವೇ ಬಂದವಗ್ರಹಿಸಿತ್ತೆಂಬುದೀಗ ಮೊಲೆಯು ಹೊತ್ತಿರ್ದವಳ
ಕೂಪ್ಪೆಯ ಸುಳಸುಂಗಿತ್ತು. ಈ ಒಟ್ಟಿಯ ಕೇಳಹರೆಂದಂಜಿ ಅಲೇಖನಾದ
ಶೂನ್ಯ ಕಲ್ಲಿನಂಥನಾದನೆಂಬ ಶಬ್ದಕ್ಕರ್ಥ.

೧೯. ಟಪ್ಪಣವ ಬರೆದ ಚಿತ್ರಕ್ಷನು ಆ ಘಟಕ್ಕೆ ಅಸುವನಾಶ್ರೈ
ಸಬಲ್ಲನೇ? ಶಿಲ್ಪಿನ ತಿಲೆ ಲೋಹ ಮೊದಲಾಗಿ ಕುರುಹು ಗೊಟ್ಟವ ದೇವ
ತಾ ಕಳೆಯ ತುಂಬುವನೇ? ತಿಲೆ ಲೋಹ ಲಕ್ಷಣದ ನೆಲೆ ಶುದ್ಧ
ಮಾಡುವನಲ್ಲದೆ ತಾ ಕಟ್ಟುವ ಇಷ್ಟಕ್ಕೆ ಕಟ್ಟಲಿಲ್ಲ. ಮೇಲೆ ರೊಕ್ಕವ
ಕಾರೆಂಬವಳಂತೆ, ಕಟ್ಟಹೋದ ಮಾನವ ಇಷ್ಟದಲ್ಲಿ ನೇಮಿಸದೆ ಇನ್ನಾರ
ಕೇಳುವೆನು ಅಲೇಖನಾದ ಶೂನ್ಯ ಕಲ್ಲಿನ ಮರೆಯಾದೆ.

೨೦. ತೆರೆಯ ಮರೆಯ ಬಹುರೂಪಿನಂತೆ, ಸೀರೆಯ ಮರೆಯ
ಉಪಸ್ಥಳದಂತೆ ಅಪೂರ್ವ ಕಟ್ಟಿದ ಮರೆಯ ಬಿಡುವನ್ನಕ್ಕ ಸೈರಿಸಲಾ
ರದವನಂತೆ ಎನ್ನ ತಲ್ಲಣ ನಿನ್ನಯ ಕಲ್ಲಿನ ಮರೆಯ ನಿನ್ನಯ
ರೂಪು ತೋರು ಎನ್ನಯ ಕಲ್ಲೆದೆಯ ಬಿಡಿಸು ಮನೋವಲ್ಲಭ ಅಲೇಖ
ನಾವ ಶೂನ್ಯ ಉರಿಗಲ್ಲಿನ ಖುಲ್ಲತನವ ಬಿಡು ಬೇಡಿಕೊಂಬೆ ನಿನ್ನನು.

೨೧. ಧ್ಯಾನವ ಮಾಡಿ ಕಾಲಲ್ಲಿ ಚಿತ್ರ ಪ್ರಕೃತಿಯ ಗೊತ್ತು. ಕುರು
ಹಿಡಿದು ತಂದಿಹೆನೆಂದಡೆ ಅದು ಶಿಲೆ ಉಳಿಯ ಹಂಗು. ಕೊಟ್ಟವನ
ಹಿಡಿದಿಹೆನೆಂದಡೆ ಗುತ್ತಿಗೆಯ ಕೇಣಿಕಾರ. ಮಾಡಿ ನೀಡಿ ಕಂಡಿಹೆನೆಂದಡೆ
ಎನ್ನ ಮನೆಗೆ ಬಂದವರೆಲ್ಲರು ಉಂಡುಟ್ಟು ಎನ್ನ ಹಂಗಿಗರು. ಆಗ
ರಗಳ್ಳನ ಹಾದರಿಗ ಕಂಡಂತೆ ಇನ್ನಾರಿಗೆ ಹೇಳುವರು? ಆಗದೆ ಎನ
ಗಾಯಿತ್ತು ಅಲೇಖನಾದ ಶೂನ್ಯ ಕಲ್ಲಿನ ಮರೆಯಾದವನೆ.

೨೨. ಪೃಥ್ವಿ ಆಕಾಶದ ಮಧ್ಯದಲ್ಲಿ ಖೇಚರ ಮಂಡಲ. ಆ ಮಂಡ
ಲದರಸು ವಿಹಂಗರಾಜ. ಮರೀಚಿಕ ಪ್ರಧಾನ ಮಹಾತಳ ತಳವಾರ.
ಇಂತೀ ಮಂಡಲ ಸುರಕ್ಷಪಲ್ಲಿರುತ್ತಿರಲಾಗಿ ಗೋರಕ್ಷಸೆಂಬರಸು ಮುತ್ತಿದ
ಮಂಡಲ ಪಟ್ಟಣ ಕೊಳುಹೋಗದು. ಮುತ್ತಿದರಸು ಬಿಟ್ಟು ಹೋದ. ಇದ
ಸಂತೈಸಲಂಜಿ ಅಲೇಖನಾದ ಶೂನ್ಯ ಕಲ್ಲಿನ ಒಳಹೊಕ್ಕು ಎಲ್ಲರ ಗೆದ್ದ.

ತೃತೀಯಸ್ಥಲ.

ವೃತ್ತ.

ಗಿರಿಜಾವಲ್ಲಭನಕ್ಕರಿಂ ಕರೆದಪಂ ಕೈಲಾಸ ಶೈಲಕ್ಕೆ ನೀ ।
ನಿರದೇಳೆಂದರುಪಲ್ಲೆ ಬರ್ಪ ತೆರದಿಂ ಸೂರ್ಯೋದಯಂ ಮುಂಬರಲ್ ।
ಪರವೈವಾಳ್ಮಮಪಾಟಲಂ ಬಲಯುತಂ ಬಾಹೂರ ಬೊಮ್ಮಯ್ಯನಾ ।
ದರದಿಂದಂ ನಲವೇರಿ ಮೀರಿ ಸೊರಮಟ್ಟಂ ಶೈವ ಸಾಕೋದಯಂ ॥

ರಗಳೆ.

ಇಂತು ಸೊರಮಟ್ಟು ಶಿವಭಕ್ತರೊಳ್ ನುಡಿಯುತಂ
ಕಂತುಮದಮರ್ದನನ ಕರುಣಮಂ ಪಡೆಯುತಂ
ಪಾತುತ ಮರಾತನರ ಗೀತದೊಳ್ ಬಾಳುತಂ
ಕಡುವ ಗಣಂಗಳೊಡನೊಡನೆ ಪುಟವೇಳುತಂ
ಶರಡರಂ ಸೋಂಕಿ ಪುಳುಕಿತಗಾತ್ರನಾಗುತಂ
ಪರಮಸುಖಸಂಪತ್ತಿಯಿಂ ತೇಗಿ ಬಾಗುತಂ
ನಡೆತಂದು ಕಲ್ಯಾಣಪುರದ ಹೊರಬನದೊಳಗೆ
ವೃಡನ ಸುತನಾನಂದದಿಂದ ಬರುತಿರಲೊಳಗೆ
ರವಿಯಸ್ತಗಿರಿಯ ಮೇಲತಿನಿರ್ಮಳಾಂಗದಿಂ
ತವತವಗೆ ಕಿರಣತತಿಯುಡುಗುತಿರೆ ತವಕದಿಂ
ಅಗಲಾ ವನದೊಳಗೆ ಮುಗಿವ ನಳಿನಂಗಳಿಂ
ರಾಗವಿಂದಲರ್ವ ನವಕುಸುಮಷಂಡಂಗಳಿಂ
ಸೊಗಯಿಸುವ ಗಗನಮನಗಲ್ವ ಪೊಣರ್ವಕ್ಕಿಯಂ
ಅಗಲದಂತೊಪ್ಪುವ ಚಕೋರಕುಲದಿಕ್ಕೆಯಂ
ಉದಯಿಸುವ ಪೂರ್ಣಶಶಿಬಿಂಬಸಂಪತ್ತಿಯಂ
ಒದವಿ ತೀವುವ ಜಂದ್ರಿಕಾಮಧುರವೃತ್ತಿಯಂ
ನೋಡುತಂ ಕಲ್ಯಾಣಪುರವನೊಲವಿಂ ಪೊಕ್ಕು
ನೋಡಲಿದಿರಿರ್ದ ಪುರವೀಗೆ ಮನಂವಿಕ್ಕು

ಬರುತಿರ್ದನಿತ್ತಲತ್ತ ಶಿವಾಲಯದೊಳಗೆ
ಅದುರೆ ತ್ರಿಪುರಾಂತಕಪ್ರಭುವಿನೋಲಗದೊಳಗೆ

ಶಿವಭಕ್ತಸಂತಾನವಿರಲೊಂದು ದೆಸೆಯಲ್ಲಿ
ಕವಿಗಮಕಿವಾದಿವಾಗ್ಮಿಗಳೊಂದು ದೆಸೆಯಲ್ಲಿ
ಸರಸ ನಾಯಕರ ಪಂಙ್ತಿಗಳೊಂದು ದೆಸೆಯಲ್ಲಿ
ನೆರೆದರಸುಮಕ್ಕಳೋಲಗ ಒಂದು ದೆಸೆಯಲ್ಲಿ
ಮುಗ್ಧೆ ಮಧ್ಯಪ್ರಗಲ್ಭೆಯರೊಪ್ಪಿ ಕುಳ್ಳಿರಲು
ಸ್ನಿಗ್ಧಸಾಹಿತ್ಯಜನವಲ್ಲಲ್ಲಿ ಕುಳ್ಳಿರಲು
ಬಲ್ಲಿದರ್ದೇವಹಾರಿಗಳ ತಂಡವಿರಲಲ್ಲಿ
ಎಲ್ಲಾ ಜನಂ ನೆರೆದು ತಿಂಥಿಣಿಸುತಿರಲಲ್ಲಿ
ಹೆಸರು ಕಲ್ಯಾಣದೇವಿಯರಿಂದು ಪೊಪ್ಪುತಿರೆ
ಎಸೆಯಲಾಕಯ ಮನೋವಲ್ಲಭಂ ನೋಡುತಿರೆ
ಸತ್ಯಸುಖಮಯನಪ್ಪ ಶಿವಭಕ್ತನಾಕೆಯೊಳು
ಅತ್ಯಂತ ನೋಹದಿಂ ಮನಹಿಂಗದಾಕೆಯೊಳು
ನೆಲಸಿರ್ಪ ನೇಹದಿಂ ನೋಡುತಿರಲಕ್ಕೆಯೊಳು
ನಲವಿಂದಲಖಿಳ ಜನ ನೋಡುತಿರಲೊಪ್ಪದೊಳು
ಮಾರ್ತೋಳಪ ಚಂದ್ರಮಂಡಲಮೆಂತಂತೆ
ನೀರ್ತೆಗೆದ ರತ್ನಾಕರನ ಕಾಂತಿಯಂತಂತೆ
ಇರ್ದೋಲಗದ ರಂಗಮಂಟಪದ ಮಧ್ಯದೊಳು
ಸಾರ್ದ ಸಂಗೀತ ತಂತ್ರಂ ಬೆಳೆವ ಸಮಯದೊಳು
ನೀಲಪಟವೆಸೆವ ಜವನಿಕೆ ನಡುವೆ ನೆರೆ ನಿಲಲು
ತಾಳದೋಲ್ಲಯಗತಿಗಳುಗ್ಗಡಣೆಯೆಸೆದಿರಲು
ದೇವ ಚಿತ್ತೈಸೆನಿಪ್ಪವಧಾರವೆಸೆವುತಿರೆ
ಯಾವುಜದ ನುಡ್ಪಿನ ಠಣತ್ಕಾರ ಉಣ್ಮುತಿರೆ
ಮೃದು ಮೃದಂಗದ ಧಿಮಿಧಿಮಿ ಸ್ವನಾದಂ ಮಸಗೆ
ಒದವಿ ಕರಡೆಯ ಕಟಕ ಧಟ್ಟಿಂಬ ರವ ಮೊಳಗೆ
ಕಹಳಾರವಂ ತಾರಮಧುರಮಂದ್ರವನುಗುಳೆ
ಬಹು ವಿಧದ ಗತಿಗೆ ಕೌಸಾಳ ಝಲ್ಲೆನಲುಗುಳೆ
ಸುಗತಿಗಳ ನಡುವೆ ಪುಷ್ಪಾಂಜಲಿಯ ನೀಡುತಿರೆ
ಬಗೆ ಮಿಗಲು ಹರನೋಲಗಂ ಬಳಸಿ ನೋಡುತಿರೆ

ತೊಲತೊಲಗು ತೊಲಗೆಂಬ ಧ್ವನಿ ಪುಟ್ಟಿದುದು ನಡುವೆ
ಕೆಲಸಾರು ಸಾರೆಂಬ ರವ ಪುಟ್ಟಿದುದು ನಡುವೆ

ಬಾಹೂರಬೊಮ್ಮಯ್ಯನೀ ಬಂದನೆಂದೆಂಬ
ಸಾಹಸಾಭರಣನೀ ಬಂದಪಂ ಸಾರೆಂಬ
ಉರುವಣೆಯ ಪಡಿಯರರ್ಮುಂದೆ ಬರುತಿರೆ ಕಂಡು
ಪಿಂದು ರಭಸಂಗಳಾಗಲ್ಕೆ ಬೊಟ್ಟಳಿಗೊಂಡು
ಗಿಳಿ ತುಂಬಿ ಕೋಗಿಲೆಯ ಹಿಂಡು ಕೆವರಿವ ತೆರದಿ
ಕಳಹಂಸೆ ಕೇಕಿ ಕೋಕಾಳಿ ಹೆದರಿದ ತೆರದಿ
ಎಲ್ಲಾ ಜನಂ ಕಿದಂ ಚಲ್ಲಿ ತಾನೈತಂದು
ಸಲ್ಲೀಲೆಯಿಂದೆ ಶಂಕರನನಪ್ಪುತ್ತಂದು
ಪಾದೋದಕಂ ಪ್ರಸಾದಂಗಳಂ ಕೈಕೊಂದು
ಆದರಂ ಮಿಗೆ ಶಿವಸಂಪದವನೆಡೆಗೊಂಡು
ಇರುತಿರಲ್ಪೋಗಮುಂಟಪದೊಳಗೆ ನಿಲಲಲ್ಲಿ
ಹರನ ಮುಂದಣ ಪಾತ್ರವೇಕಾಡದೆನಲಲ್ಲಿ

ಕೇಳುತೆ ಸುಖಪ್ರಿಯಂ ಸುಖವಳಿದು ನೆರೆ ನೊಂದು
ಆಳನಟ್ಟಳಲಿಂದ ಮುಳಿದು ನುಡಿದಪನಂದು
ಎಲೆ ಭಕ್ತ ಶಿವಭಕ್ತ ಜನದ ಸುಖಮಂ ಕೆಡಿಸಿ
ನಿಲಿಗೊಂಡ ನೃತ್ಯಮಂ ನೋಳ್ಪ ಭರವಂ ನಿಲಿಸಿ
ಓಲಗದ ಸುಖಲತೆಯನುಡಿಗಿ ಕುಡಿಯಂ ಕುಯ್ದು
ಆಲೋಕಿಸುವ ಜನದ ಕಣ್ಗೆ ಕಸವಂ ಹೊಯ್ದು
ಇನ್ನಾಡವೇಳ್ಪೊಡಂ ಪಾತ್ರವೇಕಾಡುವುದು
ಮುನ್ನೊಪ್ಪವೀ ನೃತ್ಯವೇಕೆ ಹಸನಾದಪುದು
ಹೊಸೆದ ಹೂ ನವ ಪರಿಮಳಂಗುಡಲ್ಬಲ್ಲುದೇ
ಬಿಸಿಲೊಳ್ಮೈದಿಲ್ವಿಕಾಸಮನೈದಬಲ್ಲುದೇ
ಇಂತು ಸುಖಮಂ ಕೆಡಿಸಿ ನೀ ಮಾಡಿತೇನಿಲ್ಲಿ
ಕಂತುಹರನಲ್ಲಿ ಪಡೆದರ್ಥವೇನಿಂತಿಲ್ಲಿ
ಎನೆ ಕೇಳ್ದು ಬಾಹೂರಬೊಮ್ಮಿತಂದೆಗಳಂದು
ಮನದೊಳಗೆ ಸುಯ್ದು ಭಕ್ತನನೀಕ್ಷಿಸುತೆ ನಿಂದು
ದೇವ ಎನ್ನಂ ದೂರಿ ತೋರವೇಳ್ಪದು ನಿನಗೆ
ದೇವ ಬೆಸಸುವುದು ಬೆಸಸುವುದಂಜಲೇಕೆನಗೆ

ವಚನಶಾಸ್ತ್ರಸಾರ ಗ್ರಂಥಗಳು.

(ರಾ ಸಾ **ಪಿ. ಜಿ. ಹಳಕಟ್ಟಿ** ಇವರಿಂದ ವಿರಚಿತವಾದವುಗಳು.)

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ ೨—೮—೦

(೨) ,, ,, ಉತ್ತರಾರ್ಧ ೧—೧೨—೦

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು.

(೩) ವಚನಶಾಸ್ತ್ರಸಾರ ಭಾಗ ೨ ೪—೮—೦

ಇದರಲ್ಲಿ ಪಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇವೆ.

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ ೨—೪—೦

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಆಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರಲಿಂಗ, ಜಂಗಮ, ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೬೨ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮—೪—೦ ರೂಪಾಯಿಗಳಿಗೆ ದೊರೆಯುವವು. ಟಪಾಲಖರ್ಚು ಪ್ರತ್ಯೇಕ.

ದೊರೆಯುವ ಸ್ಥಳ—


ಹಿತಚಿಂತಕ ಪ್ರಿಂಟಿಂಗ ಪ್ರೆಸ್

ವಿಜಾಪುರ

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬುರುಜ ಓಡೆಯಲ್ಲರುವ ತಮ್ಮ ೧೨೦(೮) ನೆಯಲ್ಲಿ ಪ್ರಕಟಿಸಿದರು.

R. N. B. 2554

ಶ್ರೀ



ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಜನವರಿ ೧೯೪೧. [ಸಂಚಿಕೆ ೪

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ಮಹಾದೇವಿಯಮ್ಮನ ವಚನಗಳು	ಶ್ರೀ ಸಿದ್ಧವೀರದೇವರು ಹೊನಮರ ಹುಬ್ಬಳ್ಳಿ	೧೧೯
೨	ಮೊರೆ (ಪದ್ಯ)	ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು ಸಿದ್ಧಗಂಗಾ	೧೨೪
೩	ಷಟ್‌ಸ್ಥಲ ಸಾರ	ಶ್ರೀ ಕಲ್ಯಾಣಪ್ಪ ಬ್ಯಾಳಿ ವಿಜಾಪುರ	೧೩೦
೪	ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ	ಶ್ರೀ ಜೀರಗೆ ಕ. ಬಸವಪ್ಪ ಬಿ. ಏ. ಬೆಂಗಳೂರ.	೧೩೯
೫	ಕನ್ನಡ ಸಂಸ್ಕೃತಿಯ ಮುಖ್ಯಾಂಗಗಳಾವುವು?	ಶ್ರೀ ಪುರಾಣಿಕ ಬುದ್ಧಯ್ಯ ಸ್ವಾಮಿಗಳು. ಧಾರವಾಡ.	೧೫೩
೬	ನೀ ಕೆಟ್ಟಿನಿಂದೂರ ತಳ್ಳವರನೆಲ್ಲ	ಶ್ರೀ ವೀರೇಶ್ವರ ಬೆಂಗಳೂರ.	೧೫೮
೭	ಬಸವೇಶ್ವರನಕಿಂತಲೂ ಮೊದಲಿನ ವೀರಶೈವ ಧರ್ಮ	ರಾ॥ ಬಾ॥ ಪಿ. ಜಿ. ಹಳಕಟ್ಟಿ. ವಿಜಾಪುರ	೧೫೯
೮	ಶಿವಾನುಭವ ಶಬ್ದಕೋಶ	—	೧೬೨

ಶಿವಾನುಭವ.

ವರ್ಷ ೧೫	ಜನವರಿ ೧೯೪೧.	ಸಂಚಿಕೆ ೪

ಮಹಾದೇವಿಯಮ್ಮನ ವಚನಗಳು.

(ಬರಹಗಾರರು:— ಶ್ರೀ. ಸಿದ್ಧವೀರದೇವರು ಹೊಸಮಠ ಹುಬ್ಬಳ್ಳಿ)

ಹಿಂದೂಸಮಾಜವು "ನಸ್ತ್ರೀಸ್ವಾತಂತ್ರ್ಯಮರ್ಹತಿ" ಎಂಬ ಭಾರಿಯ ಕೊಳನೆಳವಡಿಸಿ ಸ್ತ್ರೀ ಜನಾಂಗಕ್ಕೆ ಅಪಾರ ಅನ್ಯಾಯವಮಾಡಿದೆ. ಸ್ತ್ರೀಯರಿಗೂ ವೇದಾಧಿಕಾರವನ್ನು ಕೊಡದೆ ಆತ್ಮವಿಚಾರದ ತಿಳಿವಳಿಕೆಯತ್ತ ತೆರಳಲು ತೆಂವಿಲ್ಲನೆಂದು ತಡೆಯನ್ನುಂಟುಮಾಡಿದೆ. ಅವರನ್ನು ಅಕರುಣೆಯಿಂದ ಹಿಂದುಳಿದ ಪಂಗಡಕ್ಕೆ ತಳ್ಳಿದೆ. ತೂರಿದೆ. ಸ್ತ್ರೀಜೀವನನೆಲ್ಲ ಪುರುಷನ ಸೇವೆಯಲ್ಲಿಯೇ ಕಳೆದುಹೋಗಬೇಕು. " ಉದ್ಧರೇದಾತ್ಮನಾತ್ಮಾನಂ ನಾತ್ಮಾನ ಮವಸಾದಯೇತ್ " ಇದು ಸ್ತ್ರೀ ಜನಾಂಗಕ್ಕೆ ಅನ್ವಯಿಸದೆಂದು ಅದಂ ಮೇಲೆ ಅಡ್ಡಗೆರೆಯನ್ನು ಕೊರೆದಿದೆ. ಸ್ತ್ರೀಯು ಅಬಲೆ, ಪುರುಷನಿಲ್ಲದೆ ಗತಿಯಿಲ್ಲ. ಮತಿಯಿಲ್ಲ. ಸೃಷ್ಟಿ, ಪರಮಾತ್ಮ, ಜೀವ, ಆತ್ಮಮುಂತಾದ ಸೂಕ್ಷ್ಮವಿಚಾರಗಳನ್ನು ತಿಳಿಯುವ, ಪೂಜಿಸುವ ಮತ್ತು ಸಾಕ್ಷಾತ್ಕಾರ ಮಾಡಿಕೊಳ್ಳುವ ಬಾಧ್ಯತೆ ಸ್ತ್ರೀಯರಿಗಿಲ್ಲವೆಂದು ಸಾರಿತು ಶಾಸನಂಗೈಯಿತು. ಇಷ್ಟಕ್ಕೆ ಶಾಂತವಾಗದೆ ಇನ್ನೂ ಮುಂದೆ ಸಾಗಿ ಮಾನವಕೋಟಿಯಿಂದತ್ತತ್ತ. ತೂರಿಬಿಟ್ಟಿದೆ. 'ಹೆಣ್ಣುಮಾಯೆ ಹೆಣ್ಣುರಕ್ಕಸಿ ಹೆಣ್ಣುಮಾರಿ' ಮುಮುಕ್ಷುತ್ವಕ್ಕೆ ಅಡ್ಡಿಯಾಗುವಳು ಎಂದು ಮುಂತಾದ ಹೀನಾಯಮಾನಗಳಾದ ಮಾತುಗಳಿಂದ ದೂಷಿಸಿತು. ದೂರೀಕರಿಸಿತು. ಇದರಿಂದ ಸ್ತ್ರೀ ಜನಾಂಗವು

ಪ್ರಪಂಚದ ವಸ್ತುಜ್ಞಾನವನ್ನು ಸಾಹಿತ್ಯವನ್ನು ಸಂಸ್ಕೃತಿಯನ್ನು ಕಲೆಯನ್ನು ಮತ್ತು ಮನುಷ್ಯತ್ವದ ಗುಟ್ಟಿನ ಗುರಿಯನ್ನು ಗುರುತಿಸಲು ಮತಿ ಮಂದವಾಗಿ ಅವುದೂ ಅರಿಯದಂತಾಯಿತು. ಆದುದರಿಂದ ಹಿಂದೂ ಜನಾಂಗದ ಅರ್ಧಸಂಸ್ಕೃತಿಯನ್ನು ನಾಶಮಾಡಿದ, ಅರ್ಧಜನಾಂಗವನ್ನು ಪಶುಪಂಕ್ತಿಗೆಳೆದ ಪಾಪವು ಹಿಂದೂ ಧರ್ಮಶಾಸ್ತ್ರಕಾರರ ಮಡಲಿನಲ್ಲಿ ಕಟ್ಟಿದೆ ಎಂದು ತಿಳಿಯಬೇಕಾಗಿದೆ.

ಆದರೆ ವೀರಶೈವ ಧರ್ಮಶಾಸ್ತ್ರಕಾರರು ಸ್ತ್ರೀಯರಿಗಾಗಿರುವ ಈ ಅನ್ಯಾಯದಿಂದ ಹಿಂಸೆಯಿಂದ ದೂಷಣೆಯಿಂದ ಬಹಳ ದೂರವಾಗಿ ಸರಿದಿದ್ದಾರೆ. "ದಯೆಯಿಲ್ಲದ ಧರ್ಮ ಅವಾವುದಯ್ಯಾ, ಸಕಲಜೀವಾತ್ಮರಿಗೆ ಲೇಸನೇ ಬಯಸುವನು ಕುಲಜನು" ಎಂದು ಸಮಾನತೆಯನ್ನು ಸರಳತೆಯನ್ನು ಸಾರಿದ್ದಾರೆ. ಸಾಧಿಸಿದ್ದಾರೆ. ಅಧ್ಯಾತ್ಮ ತತ್ವವನ್ನರಿತು ಆಚರಿಸಿ ಮುಕ್ತಿಯನ್ನು ಪಡೆಯಲು ಮಾರ್ಗವನ್ನು ತೋರಿದ್ದಾರೆ. ಕೈಹಿಡಿದೊಯ್ದು ಮುಕ್ತಿಮಂದಿರಕ್ಕೆ ಮುಟ್ಟಿಸಿದ್ದಾರೆ. ಉದಾರ ಹೃದಯರಾಗಿದ್ದಾರೆ. ಸ್ತ್ರೀ ಜನಾಂಗಕ್ಕೆ ಉಪಕೃತರಾಗಿದ್ದಾರೆ.

ಪುರುಷನಂತೆಯೇ ಸ್ತ್ರೀಯೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸೃಷ್ಟಿ. ಪುರುಷನು ಹಿರಿದು ಸ್ತ್ರೀ ಕಿರಿದು ಎಂಬುದಕ್ಕೆ ಏನೂ ಕಾರಣ ಕಾಣದು. ಸ್ತ್ರೀಯನ್ನು ರಾಕ್ಷಸಿಯೆಂದು ಕರೆಯುವಾಗ ಪರಮಾತ್ಮನ ಸೃಷ್ಟಿಗೆ ಅವಮಾನಮಾಡಿದಂತಾಗುತ್ತದೆ. ಪರಮಾತ್ಮನಿಂದ ನಿರ್ಮಿತವಾದ ಈ ಸಜೀವ ವ್ಯಕ್ತಿಗಳಿಗೆ ಇಂಥ ಆರೋಪಗಳು ಸರ್ವಥಾ ಸಲ್ಲವು. ಪುರುಷನಂತೆ ಸ್ತ್ರೀಯೂ ಸಹ ಆಧ್ಯಾತ್ಮ ವಿಚಾರದಲ್ಲಿ ಪ್ರವೇಶಿಸಬಹುದು. ಲಿಂಗಾಂಗ ಸಾಮರಸ್ಯವನ್ನು ಪಡೆಯಬಹುದು. ಪುರುಷನು ಅವಮಾರ್ಗದಲ್ಲಿಯಿಟ್ಟರೆ ಅವನನ್ನು ತಿದ್ದಿ ಬೋಧಕಳಾಗಬಹುದು. ಸತಿಪತಿಗಳೊಂದಾಗಿ ಭಕ್ತಿಯನ್ನು ಸಾಧಿಸಬಹುದು. ಸತಿಪತಿಗಳೊಂದಾದ ಭಕ್ತಿ ಹಿತವಾಗಿದೆ, ವಿಹಿತವಾಗಿದೆ. ಸತಿಪತಿಗಳೊಂದಾಗದ ಭಕ್ತಿ ಅಮೃತದೊಳು ವಿಷವೆರೆಸಿದಂತೆ ವಿರಸವಾಗುವದು.

"ಗಂಡ ಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತಿ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆಮಾಂಸ

ಭಾಂಡಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಿಕೆಯ ಹೊರಗೆ ತೊಳೆದಂತೆ"

ಇಂತಾಗುವದು ಯಾವ ಧರ್ಮ? 'ಧರ್ಮಾರ್ಥಕಾಮ'ಗಳಲ್ಲಿ ಸತಿಪತಿಗಳು ಒಟ್ಟಾಗಿ ಭಾಗವಹಿಸುವದಷ್ಟೇ ಅಲ್ಲದೆ ಮೋಕ್ಷದಲ್ಲೂ ಸಹ ಸಮಾನವಾದ ಅಧಿಕಾರವಿದೆಯೆಂದು ವೀರಶೈವ ಧರ್ಮಶಾಸ್ತ್ರಕಾರರು ಸಾರಿ ಸಾರಿ ಹೇಳಿದ್ದಾರೆ. ಸ್ತ್ರೀಸ್ವತಂತ್ರ್ಯಾಪಹೃತ ಶಾಸ್ತ್ರಕಾರರನ್ನು ದೂರಿದ್ದಾರೆ. ಅವರಿಗೆ ಮಾರುತ್ತರವನ್ನು ಕೊಟ್ಟಿದ್ದಾರೆ. "ಹೆಣ್ಣು ಹೆಣ್ಣಲ್ಲ ರಾಕ್ಷಸಿಯಲ್ಲ ಹೆಣ್ಣು ಪುರುಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ" "ಹೆಣ್ಣು ಮಾಯೆಯಂಬರು, ಮಣ್ಣು ಮಾಯೆಯಂಬರು, ಹೊನ್ನು ಮಾಯೆಯಂಬರು ಹೆಣ್ಣು ಮಾಯೆಯಲ್ಲ. ಮಣ್ಣು ಮಾಯೆಯಲ್ಲ. ಹೊನ್ನು ಮಾಯೆಯಲ್ಲ. ತನ್ನ ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ" "ಎಲ್ಲಿ ನೋಡಿದಲ್ಲಿ ಮನ ಮೆಳಿಸಿದರೆ ಆಣೆ ನಿಮ್ಮ ಪ್ರಮಥರಾಣೆ ಪರವಧುವನು ಮಹಾದೇವಿಯೆಂಬೆ. ಕೂ. ಸ. ದೇವ" ಎಂದು ತಮ್ಮ ಉದಾತ್ತ ಉಚ್ಚ ತತ್ವಗಳನ್ನು ತೋರ್ಪಡಿಸಿದ್ದಾರೆ. ಸ್ತ್ರೀಯರಿಗೆ ಹಿರಿಮೆಯನ್ನು ಧಾರ್ಮಿಕ ಸ್ವಾತಂತ್ರ್ಯತೆಯನ್ನು ಕೊಟ್ಟಿದ್ದಾರೆ. ಮಹಾಮಾತೆಯೆಂದು ಮನ್ನಿಸಿದ್ದಾರೆ, ಮಾನಿಸಿದ್ದಾರೆ. ಕೈಮುಗಿದಿದ್ದಾರೆ.

ಈ ತೆರನಾಗಿ ವೀರಶೈವ ಧರ್ಮಶಾಸ್ತ್ರಕಾರರು ಸ್ತ್ರೀಯರಿಗೆ ಸರಿಯಾದ ಸ್ಥಾನ ಗೌರವಗಳನ್ನು ಕಲ್ಪಿಸಿಕೊಟ್ಟಿದ್ದರಿಂದ ಅನೇಕ ಜನ ಶರಣೆಯರು ಸುಂದರವಾದ ಸರಸವಾದ ಮೃದುವಾದ ಮುದ್ದಾದ ಕಾವ್ಯಗಳನ್ನು ವಚನಗಳನ್ನು ಬರೆದು ಕವಿತ್ರೆಯರಾದರು. ವಚನಕಾರರಾದರು. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಮರ್ಮವನ್ನರಿದಾಚರಿಸಿದರು ವೇದ ಸ್ಮೃತಿಗಳು ಕೊಡದ ಅಧಿಕಾರವನ್ನು ಹೊಂದಿ ಮನುಷ್ಯತ್ವದ ಗುರಿಯನ್ನು ಗುರುತಿಸಿದರು. ಸಾಧಿಸಿದರು. ಬೋಧಿಸಿದರು. ಪ್ರಪಂಚದ ಸ್ತ್ರೀ ಜನಾಂಗಕ್ಕೆ ಆದರ್ಶರಾದರು. "ರೂಪದಲ್ಲಿ ಹೆಣ್ಣಾದರೇನು? ಭಾವಿಸಲು ಗಂಡು ರೂಪು" ಎಂದು ಧೀರತನದಿಂದ ನುಡಿದರು. ನಡೆದರು ತಮ್ಮ ಮಹತ್ತರಗಳಾದ ಜೀವನಗಳಿಂದ ಹೆಸರಾದರು. ಅವರ ಪ್ರಭಾವವು ಕನ್ನಡ ತೆಲಗು ತಮಿಳು ಇತಿಹಾಸಗಳಲ್ಲಿ ಮತ್ತು ವೀರಶೈವ ಮತ ಗ್ರಂಥಗಳಲ್ಲಿ ತೇಜಃಪುಂಜವಾಗಿದೆ ಪುಣ್ಯಪ್ರದವಾಗಿದೆ.

ಅವರಲ್ಲಿ ಮಹಾದೇವಿಯಮ್ಮಗಳು ಒಬ್ಬರು. ಬಂದರು ದೇಶ (ಕಾಶ್ಮೀರ)ದ ಮಾಂಡವ್ಯಪುರವನ್ನು ಮಾಹಾದೇವಅಂಬ ಅರಸು ಆಳುತ್ತಿದ್ದನು ಅವನಿಗೆ ಮಹಾವಿಯೆಂಬ ಪತ್ನಿಯಿದ್ದಳು. ಅವರು ಶಿವಭಕ್ತರಾಗಿ ದಿನದಿನವೂ ಅರು ಸಾವಿರ ಜಂಗಮರಿಗೆ ಅರೋಗಣೆಯನ್ನೀಯುತ್ತಿದ್ದರು. ಒಮ್ಮೆ ಕಲ್ಯಾಣದ ಬಸವನಿಗೆ ಜಂಗಮರ ಬೇಕಾದುದರಿಂದ ಶೆಟ್ಟಿಯ ವೇಷವನ್ನು ಧರಿಸಿ ಮಾಂಡವ್ಯಪುರದ ಅರಮನೆಯಲ್ಲಿ ನುಗ್ಗಿ ಜಂಗಮರನ್ನು ಅಪಹರಿಸಿಕೊಂಡು ಹೋದನು ಈ ಸಂಗತಿಯನ್ನು ಅರಸು ಅರಿದು ಕೆರಳಿದನು ಸಿಡಿಮಿಡಿಗೊಂಡನು. ಇಬ್ಬರು ಚಾರರನ್ನು ಕರೆದು ಅವರ ಕತ್ತಿಗೆ ಬದನೆಯ ಕಾಯಿಗಳನ್ನು ಕಟ್ಟಿ ವೇಷಧಾರಿ ಜಂಗಮರನ್ನು ಮಾಡಿ ಬಸವನನ್ನು ಇರಿದುಕೊಲ್ಲಲು ಅವರ ಕೈಗೆ ಕಠಾರಿಯನ್ನಿತ್ತು ಕಳುಹಿದನು. ಅವರು ಕಲ್ಯಾಣವನ್ನು ಸೇರಿ ಶರಣರೊಡಗೂಡಿ ಕುಳಿತಿರಲು ಅವರ ಸಟೆಯಾದ ಲಿಂಗಗಳು ದಿಟವಾದ ಲಿಂಗಗಳಾಗಿವೆ. ಸತ್ಯ ಶರಣರಾಗಿದ್ದಾರೆ. ಈ ಸಂಗತಿಯನು ಅರಸನಿಗರುಹಲು,—

"ಹಿರಿಯರ ದರ್ಶನ ನಯನಕ್ಕೆ ಚಲುವು
ಸತ್ಪಾತ್ರಕ್ಕಿಡುವದು ಹಸ್ತಕ್ಕೆ ಚಂದ
ಸತ್ಯವನುಡಿವುದು ವಾಕ್ಯಕ್ಕೆ ಭೂಷಣ
ಶಿವಸ್ತುತಿ ಕೇಳುವದು ಕರ್ಣಕ್ಕೆ ಅಲಂಕಾರ
ಶರಣರೊಡನೆ ಸಂಘಾಷಣೆ ಪ್ರಾಣಕ್ಕೆ ಶೃಂಗಾರ

ಇಂತಿಲ್ಲದವನ ಬಾಳು ಹೊಲತಿಯ ಜೋಗತಿಯ ಕೈಯ ಪಾತ್ರೆಯಿಂದ ಕಡೆ" ಎಂದು ಅರಸೊತ್ತಿಗೆಯ ಆಶೆಯನ್ನು ಅಳಿದು ಮಹಾದೇವಿಯೊಡನೆ ಕಲ್ಯಾಣ ಪಟ್ಟಣವನ್ನು ಪ್ರವೇಶಿಸಿದನು ಎಂದು ಜೋರಬಸವ ಪುರಾಣ ಮುಂತಾದ ಗ್ರಂಥಕಾರರು ಹೇಳಿದ್ದಾರೆ. ಇದನ್ನೇ ಕವಿಚರಿತ್ರೆಕಾರರು ಒಪ್ಪಿಕೊಂಡು ಎತ್ತಿಕೊಂಡಿದ್ದಾರೆ.

ಮಹಾದೇವಿಯಮ್ಮನು ಅರಸಿಯಾಗಿದ್ದ ಸಂಗತಿಯನ್ನು ಅವಳ ವಚನಗಳೇ ಸೂಚಿಸುತ್ತವೆ.

---

(೧) ಇವರಲ್ಲಿ ಒಬ್ಬನು 'ನಿಜಲಿಂಗ ಚಿಕ್ಕಯ್ಯ' ನೆಂಬ ಹೆಸರಿನಿಂದ ಹೆಸರಾಗಿದ್ದಾನೆ. ಇವನ ನಿಜವಲ್ಲದ ಲಿಂಗವು ನಿಜಲಿಂಗವಾದುದಾಗಿ ನಿಜಲಿಂಗ ಚಿಕ್ಕಯ್ಯನೆಂಬಹೆಸರು ಬಂದಿರಬೇಕು. ಇವನನ್ನು ಹರಿಹರ ಎಂಬವಲಾದ ಕವಿಗಳು ಕೊಂಡಾಡಿದ್ದಾರೆ.

"ದುಕೂಲ ಮುಂತಾದ ವಸ್ತ್ರಂಗಳಲ್ಲಿ
ಹೇಯ ಮುಂತಾದ ಆಭರಣಂಗಳಲ್ಲಿ
ಮೌಕ್ತಿಕ ಮುಂತಾದ ಪಾಷಾಣಂಗಳಲ್ಲಿ
ಚಂದನ ಮುಂತಾದ ವಾಸನೆಯಲ್ಲಿ
ಅಂದಣ ಛತ್ರಚಾಮರ ಕರಿ ತುರಗಂಗಳು
ತಾನು ಸೋಂಕುವ ವೈಭವ ಮುಂತಾದ ಸಕಲ ಸುಖಂಗಳು
ಲಿಂಗಕ್ಕೆಂದು ಕಲ್ಪಿಸಿ ಅಂಗೀಕರಿಸುವನ ಇರವು
ವಾರಿಸಿಲೆ ನೋಡನೋಡಲಿಕ್ಕೆ ನೀರಾದಂತೆ....."

"ಕಾಷ್ಯವ ಸುವರ್ಣವ ಮಾಡಿಹೆನೆಂಬ ಘಾತಕತನವೆ? ನಿಮ್ಮ ಭಕ್ತಿ ಸಕಲ ದೇಶ ಕೋಶ ವಾಸ ಭಂಡಾರ ಸವಾಲಕ್ಷ ಮುಂತಾದ ಸಂಬಂಧ ಸ್ತ್ರೀಯರ ಬಿಟ್ಟು ಬಂದಿಹೆನೆಂಬ ಕೈಕೂಲಿಯೇ ನಿಮ್ಮ ಭಕ್ತಿ?"

ಇದು ಪೂರ್ವಾನುಭೂತ ರಾಜೋಪಯೋಗ್ಯವಿಷಯಂಗಳನ್ನು ನೆನೆನೆನೆದು ಹಾಡಿಕೊಂಡಿರುವದರಿಂದ ಮೊದಲು ನಾಡಿನ ನಾಡಿನೊಡೆಯನ ರಾಣಿಯಾಗಿ ಬಳಿಕ ಪರಮ ಶರಣೆಯಾದಳು.

ಉಡುತಡಿಯು ಅಕ್ಕಮಹಾದೇವಿಯು ಕಲ್ಯಾಣಕ್ಕೆ ಬಂದಾಗ ಅವಳ ದರ್ಶನಕ್ಕೆ ಬಂದ ಶರಣೆಯರ ಹೆಸರುಗಳಲ್ಲಿ ಮಹಾದೇವಿಯಮ್ಮಗಳ ಹೆಸರಿದೆಯಾದ್ದರಿಂದ ಅಮ್ಮನು ಅರಸೊತ್ತಿಗೆಯ ಆಶೆಯನ್ನು ಅತಿಗಳೆದು ಅಕ್ಕನಿಗಿಂತ ಮುಂದೆ ಬಂದು ಕಲ್ಯಾಣದ ಶರಣೆಯಾಗಿದ್ದಳು ಶರಣೆಯರಲ್ಲಿ ಮಹಾದೇವಿಯಮ್ಮನಿಗಿರುವ ಘನತೆ ಗೌರವಗಳು ಅಕ್ಕನಿಗಿಂತ ಕಡಿಮೆಯವಲ್ಲ. ಒಂದು ದೃಷ್ಟಿಯಿಂದ ಇನ್ನೂ ಮಿಗಿಲೆಂದರೂ ಸಲ್ಲುವದು. ಏಕೆಂದರೆ ಉಡುತಡಿಯ ಅಕ್ಕನು ಸ್ವತಃ ಅರಸವನೆತನದವಳಲ್ಲ ಅರಸೊತ್ತಿಗೆಯ ಸುಖವನ್ನು ಉಂಡವಳೂ ಅಲ್ಲ. ಕಾಶ್ಮೀರದ ಮಹಾದೇವಿಯು ಸ್ವತಃ ಅರಸಿ ಅರಸುಮನೆಯ ಹಲವಾರು ಸುಖಗಳನ್ನು ಅರಸನೊಡನೆ ಉಂಡುಟ್ಟು ಬಾಳಿದವಳು. ಅನುಭವಿಸುತ್ತಿರುವ ರಾಜಸುಖಗಳನ್ನು ಒಮ್ಮೆಗೆ ಒಮ್ಮನದಿಂದ ತಳ್ಳಿತೂರಿ ಶರಣೆಯಾದವಳು. ಹೀಗಾಗುವದು ಸರ್ವಸಾಧಾರಣವಾದ ಮಾತಲ್ಲ. ಅನುಭವಿಸಲಾಗದಿರುವ ಸುಖಸೌಲಭ್ಯಗಳನ್ನು ಬಿಡಬಹುದು. ಅನುದಿನವು ಅನುಭವಿಸುತ್ತಿರುವದನ್ನು ಬಿಟ್ಟುಬಿಡುವದು ತೀರಕಷ್ಟಸಾಧ್ಯ

ನಾದ ಮಾತು. ಇದು ಕಾರಣ ''ಉಟ್ಟ ಸೀರೆಯ ತೊರೆದು ಬಟ್ಟಬಯ
ಲಾದರು ಸೋಳೆಯ ಮಾರಯ್ಯನ ರಾಣಿಯರು'' ಎಂದು ಮುಂತಾಗಿ
ಶರಣರು ತುತಿಸಿರುವರು. ಮಹಾದೇವಿಯಮ್ಮ ಮಹಾದೇವಿಯಕ್ಕನಿ
ಗಿಂತ ವಿರತಿಯಲ್ಲಿ ಕೊಂಚ ಉನ್ನತಸ್ಥಾನವಿವೆಯೆಂದು ಹೇಳಿದರೆ ಏನೂ
ತಪ್ಪಾಗಲಿಕ್ಕಿಲ್ಲ. ಅಥವಾ ಇಬ್ಬರು ಮಹಾದೇವಿಯರೆ. ಅವಳು ಅಕ್ಕ
ಇವಳು ಅಮ್ಮ ಅಷ್ಟೇ!

ಮಹಾದೇವಿಯಮ್ಮನು ತನ್ನ ಜೀವನದಲ್ಲುಂಟಾದ ಜಾಜ್ವಲ್ಯ
ಮಾದ ಸ್ವಾನುಭಾವದಿಂದ ತತ್ವಪೂರಿತವಾಗಿ ಹೊರಹೊಮ್ಮಿದ ಕೆಲವು
ವಚನಗಳಿವೆ. ೬೩ ಮಾತ್ರ ಸದ್ಯಕ್ಕೆ ದೊರೆತಿವೆ. 'ಎನ್ನಯ್ಯ ಪ್ರಿಯ
ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ' ಎಂಬ ಮುದ್ರಿಕೆಯಿಂದ ಮೂಡಿವೆ.
ಪ್ರತಿಯೊಂದು ವಚನದಲ್ಲಿಯೂ ಅಪಾರವಾದ ಅರ್ಥಪೂರ್ಣತೆ ತುಂಬಿದೆ.
ಸೂಕ್ಷ್ಮ ತತ್ವ ತುಂಬಿದೆ. ಇವುಗಳ ಶಬ್ದವಿನ್ಯಾಸ ವಾಕ್ಯರಚನೆ ಉಪ
ಮಾನೋಪಮೇಯಾದ್ಯಲಂಕಾರಗಳು ಅಂದವಾಗಿವೆ. ಮೃದುವಾದ
ಮುದ್ದಾದ ಶಬ್ದಗಳು ಸಾಹಿತಿಗಳಿಗೆ ಮುದವನ್ನು ತೋರುತ್ತವೆ. ಇವು
ಸಾಮಾನ್ಯರಿಂದ ಅರಿತುಕೊಳ್ಳಲು ಕೊಂಚ ಕಷ್ಟಸಾಧ್ಯವಾದರು ತತ್ವ
ಜಿಜ್ಞಾಸುಗಳಿಗೆ ಬಂಬ ಸಂತೋಷವನ್ನುಂಟು ಮಾಡುವಂತೆವೆ.

ಶ್ರದ್ಧೆ, ಸನ್ಮಾರ್ಗ, ಭಕ್ತಿಹೀನಂಗೆ ವಿಶ್ವಾಸ ಘಾತಕಂಗೆ ವಂದಿಸಿ
ನಿಂದಿಸುವಂಗೆ ದೇವದೂರನೆಂದುಒತ್ತಿಬಿತ್ತರಿಪ ಬಗೆಯನ್ನಿಲ್ಲಿ ನೋಡಿ.
''ಕಲ್ಲಬಿತ್ತಿನೀರನೆರೆದಲ್ಲಿ ಪಲ್ಲವಿಸುವದು ದಿಟವೇ! ಬೀಜ ವೃಕ್ಷದಂತೆ?

ಶ್ರದ್ಧೆಸನ್ಮಾರ್ಗ ಭಕ್ತಿಯಿಲ್ಲದಲ್ಲಿ
ಗುರುಭಕ್ತಿ, ಲಿಂಗಪೂಜೆ, ಜಂಗಮಸೇವೆ
ಈ ತ್ರಿವಿಧ ಇತ್ತಲೇ ಉಳಿಯಿತ್ತು
ಮತ್ತೆ ನಿಜವಸ್ತು ಎತ್ತಣ ಸುದ್ದಿ ನಿಮಗೆ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲಿ
ವಿಶ್ವಾಸ ಬೇಕು.'' ಮತ್ತಂ ''ಬಿತ್ತಿದ ಬಿತ್ತು ಪೃಥ್ವಿಯ ಕೂಟ ಅಪ್ಪುವಿನ
ದ್ರವದಿಂದ ಮಸ್ತಕ ಒಡೆವುದಲ್ಲದೆ,
ಉಷ್ಣದ ಡಾವರಕ್ಕೆ ಬೆಂಕಿಯು ದೇಗಿಗೆ ಮಸ್ತಕ ಒಡೆವುದುಂಟೇ?
ಲಿಂಗವು ಭಕ್ತಿಯು ಶ್ರದ್ಧೆಗೆ, ವಿಶ್ವಾಸದ ಸುಸಂಗಿಗೆ

ನಿಶ್ಚಯವಪ್ಪಲಿಂಗ ದೃಷ್ಟವಪ್ಪುದಲ್ಲದೆ
ಉನ್ಮತ್ತನಪ್ಪ ವಿಶ್ವಾಸ ಘಾತಕಂಗೆ ವಂದಿಸಿ ನಿಂದಿಸುವಂಗೆ,
ಹಿಂದೆ ಮುಂದೆ ಬಂದುದ ಬಾಯಿಗೆಡುವವಂಗೆ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗ
ಸಂದಿಸನವಂಗೆ''

ಈಶ್ವರನು ಯಲ್ಲೆಡೆಯೊಳುಂ ನಿಲ್ಲದೆ ಬಲ್ಲಿದನಾಗಿ ಸಲ್ಲೀಲೆಯಿಂದೊ
ಪ್ಪುತಿಹನೆಂದು ಹೇಳುವ ವಚನವಿದು—

''ಪೂಜಿಸಿ ಕಂಡಿಹೆನೆಂದರೆ ಪೂಜೆಗೆ ತನ್ಮಯ ಮೂರ್ತಿ ನೀನು
ನೆನಹಿನಲ್ಲಿ ಅನುಕರಿಸಿ ಕಂಡಿಹೆನೆಂದಡೆ ಆ ನೆನಹಿಂಗೆ ಆತ್ಮಸ್ವರೂಪನು ನೀನು
ಎಲ್ಲಾಕಡೆಯಲ್ಲಿ ಭಿನ್ನವಮಾಡಿಕೊಂಡಿಹೆನೆಂದರೆ
ಅಣೋರಣೀಯಾನ್ ಮಹತೋಮಹೀಯ ನೀನು
ಸತ್ಯನೆಲ್ಲಿದ್ದಿತ್ತು ಅಲ್ಲಿ ತಪ್ಪದಿಪ್ಪೆ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಚನ್ನಮಲ್ಲಿಕಾರ್ಜುನನು
ವಿಶ್ವಾಸ ಎಲ್ಲಿದ್ದಪ್ಪುದು ಅಲ್ಲಿ ತಪ್ಪದಿಪ್ಪನು''

ಮತ್ತಂ– ''ಮಣ್ಣಿನಿತ್ತು ನಿನ್ನ ಕಂಡಿಹೆನೆಂದಡೆ ಜಗಚ್ಚರಿತ ನೀನು
ಹೊನ್ನಿನಿತ್ತು ನಿಮ್ಮ ಕಂಡಿಹೆನೆಂದಡೆ ಮನೋಮಯ ಮೂರ್ತಿ ನೀನು
ಹೆಣ್ಣಿನಿತ್ತು ನಿಮ್ಮ ಕಂಡಿಹೆನೆಂದಡೆ ತ್ರಿವಿಧಶಕ್ತಿ ಮೂರ್ತಿ ನೀನು,
ವಸನವನಿತ್ತು ನಿಮ್ಮ ಕಂಡಿಹೆನೆಂದಡೆ ಹಿರಣ್ಮಾನು ಮೂರ್ತಿ ನೀನು,
ಎನಗೇನು ನಿಮಗಿತ್ತು ಕಾಂಬ ಕಾಣಿಕೆ?
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ''

ಸ್ಥೂಲ, ಸೂಕ್ಷ್ಮ, ಕಾರಣ. ಲಕ್ಷಣವನುಳ್ಳ ಪರಶಿವನು ಅನುಭಾವಿ
ಯಾದ ಶರಣನ ಲಕ್ಷಣವನಿಲ್ಲಿ ಹೇಳಿಹರು—

''ಬೀಜದೊಳಗಣ ವೃಕ್ಷದ ಹಣ್ಣು ಅದನಾರು ಮೆಲಬಹುದು?
ಸಸಿಯೊಳಗಣ ಲತೆಪರ್ಣ ತಲೆದೋರದನ್ನಸುಗಂಪಿನ
ಕುಸುಮವನದಾರು ಮುಡಿಯುವರು?
ಇಂತೀ ಅರುವಿನ ಅರುಹ ಕುರುಹಿಟ್ಟು ಕಂಡವನೇ ಲಿಂಗಾಂಗಿ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ ಸ್ವಾನುಭಾವಿಯ
ಸನ್ನದ್ಧಸ್ಥಲ.''

ಮಾಡುವ ಮಾಟವು ಕ್ರಿಯಾಜ್ಞಾನ ಸಮೇತವಾಗಿರಬೇಕೆಂಬುದಕ್ಕೆ

"ನೀರು ನೆಲನಿಲ್ಲದೆ ಇರಬಹುದೆ?
ಬೀಜನೆಲನಿಲ್ಲದೆ ಹುಟ್ಟಬಹುದೆ?
ಜ್ಞಾನಕ್ರಿಯಿಲ್ಲದೆ ಅರಿಯಬಹುದೆ?
ಚಿತ್ ಚಿತ್ತಿಯಿಲ್ಲದೆ ವಸ್ತುಲಕ್ಷಿಸಿ ಗ್ರಹಿಸಬಹುದೆ?
ಇಂತೀ ಕ್ರಿಜ್ಞಾನ ಸಂಬಂಧ ಸ್ಥಲಭೇದ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ ಉಭಯ
ಸ್ಥಲಭೇದ."

"ಎಸೆವರ ಬಲ್ಲೆ. ಎಚ್ಚ ಬಾಣ ತಿರುಗಿ ಬಪ್ಪಂತೆ ಎಸೆವರ ಕಾಣೆ.
ಪೂಜಿಸುವರ ಬಲ್ಲೆ. ಪೂಜಿಸಿದ ಲಿಂಗ ಅಭಿಮುಖವಾಗಿ ಸರ್ವಾಂಗದಲ್ಲಿ
ವೇದಿಸುವರ ಕಾಣೆ.
ಆ ನುಡಿಗೆ ನೆಡೆ. ಆ ನೆಡೆಗೆ ನುಡಿ. ಉಭಯವ ವೇದಿಸುವರ ಕಾಣೆ
ಈ ಉಭಯವು ಸಿದ್ಧಿಯಾಗಿ ಸಿದ್ಧಾಂತವಾದಲ್ಲಿ ಎನ್ನಯ್ಯ ಪ್ರಿಯ ಇಮ್ಮಡಿ
ನಿಃಕಳಂಕ ಮಲ್ಲಿಕಾರ್ಜುನನು ಕ್ರಿಯಾನಿರತವಾದವಂಗಲ್ಲದೆ ಸಾಧ್ಯನಲ್ಲ."

ಲಿಂಗಾಂಗಿಯ ಇರವೆಂತು?

"ಲಿಂಗಭೋಗೋಪಭೋಗಿಯೆಂದು ತಾ ಮುನ್ನ ಬಿಟ್ಟುದ ಮುಟ್ಟಬಹುದೆ?
ತನ್ನ ಸುಖಕ್ಕೆ ತಾ ಭೋಗಿಸಿ ಲಿಂಗಮುಂತಾಗಿ ಕೂಡಿದೆನೆನ್ನಬಹುದೆ?
ಲಿಂಗದಂಗವನಂತು ತಾ ಕೂಡಲ್ಲದೆ ತನ್ನ ಇಂದ್ರಿಯಂಗಳ ಇಚ್ಛೆಯುಂಟೆ?

ತಾ ಕದ್ದ ಕಳವ ಪರಿಹರಿಸಿಕೊಳ್ಳಲರಿಯದೆ
ಇದಿರು ನೀವು ಬಸ್ಮ ಎಂಬ ಕಳ್ಳಿಗಾರನಂತೆ
ಈ ಸ್ಥಲವು ಇದಿರಿಡಬಾರದ ಕಾರುಹು
ಲಿಂಗಭೋಗೋಪಭೋಗಿ ತಾನಾಗಿ
ಉರಿಗೂಡಿ ಕರಗುವ ಕರ್ಪೂರದಂತಿರಬೇಕು
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಚನ್ನಮಲ್ಲಿಕಾರ್ಜುನನ
ಸಂಗಗೂಡಿಯೇ ಸುಖಿಸುವ ಲಿಂಗಾಂಗಿಯ ಇರವು"

ಹೊರಗಣ ಕ್ರಿಯೆಯು ಒಳಗಣ ಜ್ಞಾನವು ಬಾಹ್ಯದ ಅಂಗ
ಅಂತರಂಗದ ಲಿಂಗವು ಒಂದಾಗಬೇಕೆಂದು ಬೋಧಿಸಿದ ವಚನ-

"ಅವ ಬೀಜವ ಬಿತ್ತಿದಡು ಪೃಥುವಿಗೆ ಬೇರು

ಬಯಲಿಂಗೆ ಶಾಖೆ ತಲೆದೋರುವಂತೆ
ಐಕ್ಯಕ್ಕೆ ಮರೆ ಕ್ರಿಗೆ ಬಾಹ್ಯ ಉಭಯದ ಭೇದ ಉಳ್ಳನ್ನಕ್ಕ ಭಕ್ತಿಯ
ಹೋಂಟ ಬಿಡದು
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ."

ದೇವಲೋಕ ಮರ್ತ್ಯಲೋಕ ಬೇರಿಲ್ಲವೆಂದು ಕೈಲಾಸದ ಹಂಗು ಹರಿದಿರುವದನ್ನು ನೋಡಿ

"ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಿಹೆನೆಂಬುದು ಕೈಕೂಲಿ
ಕಾಯವೆರಸಿ ಕೈಲಾಸಕ್ಕೆ ಹೋದಿಹೆನೆಂಬುದು ಮತವಲ್ಲ
ಘನಲಿಂಗ ಕರಸ್ಥಲದಲ್ಲಿಪ್ಪ ಅನುವನರಿಯದೆ
ಇಲ್ಲಿಗೆ ಕರ್ಮ ಅಲ್ಲಿಗೆ ನಿಃಕರ್ಮವೆ?
ಹೋಮದ ಮಾಟದ ಒಳಹೊರಗಿನಂತೆ
ಮರ್ತ್ಯ ಕೈಲಾಸವೆಂಬ ಕಟ್ಟಳೆಯಿಲ್ಲ
ಆತ್ಮನಿಶ್ಚಯವಾದಲ್ಲಿಯೇ ಕೈಲಾಸ
ಮಹಾತತ್ವವಾದಲ್ಲಿಯೇ ಮರ್ತ್ಯದೊಳಗು
ಈ ಗುಣ ಸದಮಳ ಭಕ್ತಿಯ ಯುಕ್ತಿ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನು ಇಕ್ಕಿದ ಗೊತ್ತು"

ಮತ್ತಂ— "ಕಾಯಭ್ರಮೆಯಿಂದ ಕೈಲಾಸ
ಜೀವದ ಭ್ರಮೆಯಿಂದ ಮಹದ ಕೂಟವೆಂಬುದು
ಕಾಯದ ಜೀವದ ಭೇದವಂತಲ್ಲಿ
ಅತ್ತಲಿತ್ತಲೆಂದು ಮತ್ತೆ ಹಲಬಲಿಲ್ಲ ಇದು ನಿಶ್ಚಯದ ಕೂಟ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ"

ಈತೆರನಾಗಿ ಮಹಾದೇವಿಯಮ್ಮನ ಪ್ರತಿಯೊಂದು ವಚನಗಳು ಸಾಹಿತ್ಯದಿಂದ ತತ್ವದಿಂದ ತುಂಬಿವೆ.

ಅಮ್ಮನ ಭಕ್ತಿ ಜ್ಞಾನ ವೈರಾಗ್ಯಗಳನ್ನು ತಿಳಿಸುತ್ತವೆ.

ಅಧ್ಯಾತ್ಮ ಮಾರ್ಗದಲ್ಲಿ ಅಸ್ವಾತಂತ್ರತೆಯ ಸ್ತ್ರೀ ಜನಾಂಗಕ್ಕೆ ಮಾರ್ಗದರ್ಶಕವಾಗಿವೆ.

ಮಾತೆಯ ವಚನದಂತೆ ಮಹಾದೇವಿಯಮ್ಮಗಳ ವಚನಗಳು ಹಿತವಾಗಿವೆ, ವಿಹಿತವಾಗಿವೆ.

ಮೊರೆ.

(ಸೂ— ಶ್ರೀಮಾನ್ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು ಸಿದ್ಧಂಗಾ)

—ಃಂಃ—

ಹಿಮವಂಶಃ— ಓಂ ನಮೋ ಜಗದೀಶ ಸಪ್ತಕ್ತ ಹೃದಯೇಶ
ನಿತ್ಯಮಹಿಮಾಧಾರ ಸತ್ಯ ಗುಣಮಂದಾರ!
ಜಗಕೆ ನೀಂ ಕಾರಣನು ಕಾರಣವು ನಿನಗಿಲ್ಲ,
ಅಂತಕನು ನೀಂ ಜಗಕೆ ನೀನನಂತನು ದೇವ,
ಜಗಕೆ ನೀಂ ಮೊದಲಿಗನು ನಿನಗೆ ಮೊದಲಿನ್ನುಂಟಿ!
ಲೋಕಗಳನುದ್ಧರಿಸಿ ತನ್ನ ತಾ ನೆನೆಯುತಲಿ,
ನಿನ್ನಿಂದ ಜೀವಿಗಳ ಸೃಜಿಸುತಿಹೆಯನವರತ,
ಕಡೆಗೆ ನೀನವುಗಳನು ತನ್ನೊಳಗು ಮಾಡುತಿಹೆ,
ನೀರಾಗಿ ಬಿರುಸಾಗಿ ಹಿರಿದಾಗಿ ಕಿರಿದಾಗಿ
ಹಗುರುರಾಗಿ ಹೊರೆಯಾಗಿ ಕಂಡು ಕಾಣದೆ ಮೆರೆವೆ,
ವೇದಗಳ ಮೊದಲಿನೊಳಗೋಂಕಾರ ನೀನಲ್ತೆ!
ನಾದ ಮೂರುತಿ ನೀನು ಭವ ಮುರಿದು ಪೊರೆ ದೇವ.
ಪುಟ್ಟಲ್ಲದೊಂದಾಗಿ ಕೆಂಕರಿದು ಬಿಳಿದೆಂಬ
ಮೂರು ಗುಣದೆರಕೆಯಿಂ ಪ್ರಕೃತಿಯಾಗಿಹೆ ನೀನು.
ಪ್ರಕೃತಿಯನು ಪರಿಕಿಸುವ ಸಾಕ್ಷಿ ನೀಂ ನಿರ್ಲಿಪ್ತ
ಪುರುಷನೆಂದನವರತ ಮುನಿನಿಕರ ತುತಿಸುತಿದೆ,
ಪಿತರುಗಳ ಪಿತ ನೀನು ದೇವರಿಗೆ ದೇವತೆಯು,
ಪರಕೆ ನೀಂ ಪರತರನು ಜೊಮ್ಮರಿಗೆ ಬುಡ ನೀನು,
ದಾನ್ಗಾಳಯುರಿ ನೀರುತಿರೆ ಶತಿಗಳಿನ ನೊಡೆಯಂ
ರೆಂದೆಂಟು ವೈಯಿಂದ ತುಂಬಿರುವೆ ಸರ್ವೇಶ!
ಜಗದಂತರಾತ್ಮ ನೀಂ ಕರುಣಿಸುತೆ ಪೊರೆ ಜಗವ,
ನಿನ್ನೊಲವಿನಿಂದೆಮ್ಮ ಕುಲವು ಪಾವನವಾಯ್ತು,
ಸರ್ವಮಂಗಳೆ ದಯದಿ ಧನ್ಯರಾದೆವು ದೇವ!

ಸಂದಿಃ—ಕೊರಲೊಳಗೆ ಮಿರುಗುತಿಹ ಪೆರ್ಮಣಿಯ ಮರೆದಿಳೆಯ
ಧೂಳಿಯುಲಿ ಪುಡುಕುತಿಹ ತೆರನಂತೆ ಮದನಾರಿ!

ನಿಜಮನದಿ ತುಂಬಿರುವ ನಿನ್ನಿರವ ನರಿಯದೆಲೆ
ಜಲದೊಳಗೆ ಶಿಲೆಯೊಳಗೆ ಪುಡುಕುವರು ಗಾವಿಲರು
ಜೊಮ್ಮಾಂಡಗಳ ತುಂಬಿದಾಗಸವನರಿಯದಲೆ
ಮನೆಕಿಟಿಗಿಗೆಡೆ ಮಾಡಿ ಬಣ್ಣಿಸುವ ತೆರನಂತೆ,
ಪೆರಿದಲೆಯ! ನಿನ್ನಿರವ ನರಿದಿತರ ಸುರರೊಡನೆ
ಸಮಮಾಡಿ ಬಣ್ಣಿಸುವ ಮರುಳತೆಯ ನೇನೆಂಬೆ!
ಬಿಡಿಸಲಸದಳವಾದ ಗೂಢಾರ್ಥ ಗ್ರಂಥಿಗಳ
ಶ್ರುತಿವಚನ ತತಿಗಳಿಂ, ಮೇಧಾವಿಗಳ ಮತಿಗೆ
ಏಕಾರ್ಥವಾಗದಿಹ ತಂತ್ರಗಳ ತಂಡದಿಂ,
ಪುರಾಣ ಪುಂಜದಿಂ, ವಿಫಲ ಕಲಹಗಳಿಂದ
ಬಡಬಡಿಸ ಶಾಸ್ತ್ರಗಳ ಒಣಮಾತಿನಿಂದೆಂತು
ನಿಜದಿರವಿನರಿವಹುದು! ವಿಶ್ವೇಶ! ಸತ್ಕರ್ಮ
ದಿಂ ಬೆಂದು ಶುದ್ಧಾತ್ಮರಾದವರ ಬಿಡುಗಡೆಗೆ
ನೀನೊಲಿಯದಿರೆ ಬೇರೆ ಗತಿಯುಂಟಿ ದೇನೇಶ!
ತಾರೇಶ ತಲೆದೊಡವು, ಕೊರಲಮಣಿವರಗರಲ,
ತಣ್ಮಲಕ ಪಾಮ್ಬಡಗತೊರೆಯೊಡವೆ. ಹರಿಶಂವು,
ಗಿರಿವನೆಯು, ಗಿರಿಜೆಯರೆ ವೈಯಿಂದ, ಮೆರೆವರಸೆ!
ಲೋಕಗಳೆಗಾಧಾರ ನಿನ್ನೊಲವ ಪೊರೆದೇವ ಕರುಣದೊಳು

ಬ್ರಹ್ಮಃ—ಓರೋವರಿಸಗಿರ್ದ ವಿಪುಲ ತರಸಿನ ಫಲಕೆ
ದೋರೋರ್ವ ರೆಡೆಯಾಗಿ ಮೂಲೋಕ ಜೀವಿಗಳ
ತಂದೆ ತಾಯಿಗಳಾಗಿ ಮೆರೆವಗಜೆ ಶಂಕರರೆ!
ಪೊಡವಡುವೆ; ಕರುಣಿಸುತೆ ಮನ್ನಿಸುದು ಬಿನ್ನಪವ
ತಾರಕನ ಬಾಧೆಯಿಂ ವಿಶ್ವಜಗವು ತಪಿಸುತಿದೆ
ಎನ್ನಿಂದ ವರವಡೆದು ಬಳಿದು ಮಲೆವಸುರನಂ!
ನಾನಿಂದು ಮರ್ದಿಪುದು ತರವಲ್ಲ ದೇವೇಶ!
ಮುಳ್ಳು ಗಿಡವಾದೊಡಂ ಬೆಳೆಸಿ ಕಡಿದವರುಂಟಿ!
ದಳಪತಿಯ ಸೃಜಿಸುತಲಿ ದೀನರನು ಕಾಪಾಡು
ಸುರಸೇನೆಗಳ ಪೊರೆವ ದಳಪತಿಯ ನೆರವಿಂದ
ಸುರಪತಿಯು ಜಯಸಿರಿಯ ಸೆರೆಗೈದು ತರುವನಿದೊ,

(ಕೈತೋರಿಸಿ)ದೇವಗಣ ನಿಮ್ಮಡಿಯ ನೆನೆಯುತಿದೆ ಸರ್ವೇಶ !'
ಮರುಕದಿಂ ದೀನರನ್ನು ಕೈಹಿಡಿದು ಕಾಪಾಡು,
'ಮೊರೆಗೇಳಿಯಣುಗರೊಳು ಮುನಿವ ಮಾತೆಯರುಂಟೆ ?'
ವರವಿತ್ತು ಪೊರೆದೇವ ಶರಣಜನ ಸುರಭೂಜ.

ಷಟ್‌ಸ್ಥಲಸಾರ.

(ಲೇಖಕ– ಶ್ರೀ ಕಲ್ಯಾಣಪ್ಪ ಬ್ಯಾಳಿ ಬಿ. ಎ. ಬಿ. ಟಿ. ವಿಜಾಪುರ.)

ಅಂಗನು ಅಂದರೆ ಜೀವಾತ್ಮನು ಲಿಂಗದಲ್ಲಿ ಅಂದರೆ ಪರಮಾತ್ಮನಲ್ಲಿ ಐಕ್ಯವಾಗಬೇಕಾದರೆ ನಮ್ಮವರು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಅವಸ್ಥೆಗಳನ್ನು ಕಲ್ಪಿಸಿರುವರು. ಈ ಅವಸ್ಥೆಗಳಿಗೆ ಷಟ್‌ಸ್ಥಲಗಳೆಂಬ ಹೆಸರು. ಷಟ್‌ಸ್ಥಲಜ್ಞಾನವೆಂದರೂ ಒಂದೇ, ಲಿಂಗಾಂಗಸಾಮರಸ್ಯವೆಂದರೂ ಒಂದೇ ನಮ್ಮ ಷಟ್‌ಸ್ಥಲಗಳು ಲೌಕಿಕ ಪಾರಮಾರ್ಥಗಳೆರಡನ್ನೂ ಒಳ್ಳೆ ಜಾಣ್ಮೆಯಿಂದ ಕೂಡಿಕೊಂಡು ಹೋಗುತ್ತವೆ. ಷಟ್‌ಸ್ಥಲವೆಂದರೆ ಆಚಾರವಿಲ್ಲದೆ ಬರೇ ಶಾಸ್ತ್ರಾರ್ಥಪ್ರತಿಪಾದಿಸುವ ಗೊಳ್ಳ ವೇದಾಂತವಲ್ಲ. ಅನುಭವವಿಲ್ಲದ ಕೇವಲ ಅಂಧಶ್ರದ್ಧೆಯನ್ನು ಪ್ರತಿಪಾದಿಸುವ ಮರುಳು ಸಿದ್ಧಾಂತವಲ್ಲ. ನಮ್ಮ ಷಟ್‌ಸ್ಥಲದಲ್ಲಿ ಸುಲಲಿತವಾದ ವೇದಾಂತವೂ ಸುಗಮವಾದ ಸಿದ್ಧಾಂತವೂ ಕೂಡಿಕೊಂಡಿವೆ. ಷಟ್‌ಸ್ಥಲಮಾರ್ಗದಲ್ಲಿ ಅಪ್ಪೈತಿಗಳಂತೆ ಕೇವಲ ಜ್ಞಾನಕ್ಕಷ್ಟೇ ಮಹತ್ವವಿಲ್ಲ. ಪ್ಪೈತಿಗಳಂತೆ ಕೇವಲ ಭಕ್ತಿಗಷ್ಟೇ ಪ್ರಾಧಾನ್ಯವಿಲ್ಲ. ಬೌದ್ಧ ಮತದಂತೆ ನೀತಿಗಷ್ಟೇ ಪ್ರಶಸ್ತಿಯಿಲ್ಲ ಆದರೆ ಭಕ್ತಿ, ನೀತಿ, ಜ್ಞಾನಗಳ ಸಮುಚ್ಚಯವೇ ಷಟ್‌ಸ್ಥಲಮಾರ್ಗದ ರಹಸ್ಯವು.

ಪರಮಾತ್ಮನು ತನ್ನ ಲೀಲಾಮಾತ್ರದಿಂದ ಜೀವಜಗತ್ತುಗಳನ್ನು ನಿರ್ಮಿಸಿದ ವಿಕಾಸವಾದವೂ ಆ ಜೀವಜಗತ್ತುಗಳನ್ನು ತನ್ನೊಳಗೆ ಅಳವಡಿಸಿಕೊಳ್ಳುವ ಅಕುಂಚನವಾದವೂ ಷಟ್‌ಸ್ಥಲದಲ್ಲಿ ಅಡಕವಾಗಿವೆ. ವಿಕಾಸವಾದಕ್ಕೆ ಪರಮಾತ್ಮನ ಪ್ರವೃತ್ತಿಮಾರ್ಗವೆಂದೂ ಅಕುಂಚನವಾದಕ್ಕೆ

ನಿವೃತ್ತಿಮಾರ್ಗವೆಂದೂ ಹೇಳುವದುಂಟು. ಇವನ್ನೇ ಬೇರೆ ರೀತಿಯಲ್ಲಿ ಹೇಳಬೇಕಾದರೆ ಷಟ್‌ಸ್ಥಲಗಳು ಏಕತ್ವದಲ್ಲಿ ಅನೇಕತ್ವವನ್ನೂ ಅನೇಕತ್ವದಲ್ಲಿ ಏಕತ್ವವನ್ನೂ ಪ್ರತಿಪಾದಿಸುತ್ತವೆ. ಏಕತ್ವವು ಅನೇಕತ್ವವಾಗುವದೆಂದರೆ ನಿರಾಕಾರವಾದ ಆ ಪರವಸ್ತುವು ಸಾಕಾರವನ್ನು ಹೊಂದುವದು. ಅನೇಕತ್ವವು ಏಕತ್ವವಾಗುವದೆಂದರೆ ಸಾಕಾರವು ನಿರಾಕಾರದಲ್ಲಿ ಬೆರೆಯುವದು.

ಈ ಷಟ್‌ಸ್ಥಲಗಳ ವಿವರಣೆಯು ಸೂಕ್ಷ್ಮಾಗಮ, ಪಾರಮೇಶ್ವರಾಗಮ ವಾತುಲಾಗಮಾದಿಗಳಲ್ಲಿ ಪ್ರತಿಪಾದಿತವಾಗಿರುವದೇನೋ ನಿಜ. ಆದರೆ ಆ ಷಟ್‌ಸ್ಥಲಗಳು ವಚನವಾಙ್ಮಯದಲ್ಲಿ ಸ್ವಲ್ಪ ಮಾರ್ಪಾಟು ಹೊಂದಿ ಒಳ್ಳೆ ರಸಭರಿತವಾಗಿಯೂ ಸ್ಫೂರ್ತಿದಾಯಕವಾಗಿಯೂ ವಿವರಿಸಲ್ಪಟ್ಟಿವೆ. ಬೇಕಾದ ಶಿವಶರಣರ ವಚನಗಳನ್ನು ತೆಗೆದುಕೊಂಡರೂ ಅವು ಸ್ಥಲಮೆಟ್ಟುಗಳ ಅಸ್ಥಿವಾರದ ಮೇಲೆ ನಿಂತಿರುತ್ತವೆ. ವಚನಗಳನ್ನು ಷಟ್‌ಸ್ಥಲಗಳಿಗನುಸರಿಸಿ ವಿವೇಚಿಸುವದೇ ವೀರಶೈವ ಮತದ ವೈಶಿಷ್ಟ್ಯವು. ಆದರೆ ವಚನಗಳನ್ನು ಭಗವದ್ಗೀತೆಯಂತೆ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಇತ್ಯಾದಿ ಕ್ರಮಗಳಿಂದ ವಿಂಗಡಿಸುವದು ಸಮಂಜಸವಲ್ಲ. ರಾ॥ ಸಾ॥ ಹಳಕಟ್ಟಿಯವರು ಇತ್ತೀಚೆಗೆ ಹೊರಡಿಸಿದ **"ವಚನಶಾಸ್ತ್ರಸಾರ ಭಾಗ ೨"**ರಲ್ಲಿ ಈ ಷಟ್‌ಸ್ಥಲಗಳ ವಿವರವು ಒಳ್ಳೆ ಪರಿಪೂರ್ಣವಾಗಿಯೂ ಹೃದಯಂಗಮವಾಗಿಯೂ ಇದ್ದದ್ದು ಕಂಡುಬರುತ್ತದೆ. ಷಟ್‌ಸ್ಥಲಗಳ ಮಾಧುರ್ಯವನ್ನು ಸವಿಯಬೇಕೆಂಬ ರಸಿಕರು ಆ ವಚನಶಾಸ್ತ್ರಸಾರಗ್ರಂಥವನ್ನು ಅವಶ್ಯವಾಗಿ ಓದಬೇಕು.

ಪರಮಾತ್ಮನು ಮೊದಲು ತನ್ನ ಲೀಲಾಮಾತ್ರದಿಂದ ಲಿಂಗ ಮತ್ತು ಅಂಗರೂಪದಿಂದ ಕ್ರಮೇಣ ಜಗತ್ತಿನಲ್ಲಿ ಹೇಗೆ ತೋರುವನೆಂಬದನ್ನಷ್ಟು ವಿಚಾರಿಸೋಣ. ಪರಶಿವನು ಮೊದಲು ಭಾವಲಿಂಗವಾಗಿಯೂ ಬಳಿಕ ಪ್ರಾಣಲಿಂಗವಾಗಿಯೂ ಅನಂತರ ಇಷ್ಟಲಿಂಗವಾಗಿಯೂ ಪರಿಣಮಿಸಿದನು. ಆ ಭಾವಲಿಂಗವು ಕ್ರಿಯಾಭೇದದಿಂದ ಮಹಾಲಿಂಗ, ಪ್ರಸಾದಲಿಂಗ ಎಂಬೆರಡು ತೆರನಾಯಿತು. ಆ ಪ್ರಾಣಲಿಂಗವು ಜಂಗಮಲಿಂಗ ಶಿವಲಿಂಗ ಎಂಬೆರಡು ರೂಪದಿಂದ ಕಂಗೊಳಿಸಿತು. ಇಷ್ಟಲಿಂಗವು ಗುರುಲಿಂಗ ಆಚಾರಲಿಂಗ ಎಂಬೆರಡು ಭೇದವುಳ್ಳದ್ದಾಯಿತು. ಒಟ್ಟು ಪರವಸ್ತುವು ಕ್ರಿಯಾ ಭೇದದಿಂದ ಮೊದಲು ಮೂರಾಗಿ ಕೊನೆಗೆ ಆರಾದ ಪ್ರವೃತ್ತಿಗೆ ಲಿಂಗ ಷಟ್‌ಸ್ಥಲವೆಂಬ ಹೆಸರು.

ಆ ಪರವಸ್ತುವು ಆರುಲಿಂಗಗಳಾಗಿ ಆರುಶಕ್ತಿಗಳನ್ನು ಕೂಡಿಕೊಂಡು ಮುಂದೆ ಆರು ಅಂಗಗಳಾಗಿ ಪರಿಣಮಿಸಿತು. ಅದು ಹೇಗೆಂದರೆ ಮಹಾಲಿಂಗವು ಚಿಚ್ಛಕ್ತಿಯ ಸಹಾಯದಿಂದ ಐಕ್ಯಸ್ಥಲವಾಯಿತು. ಪ್ರಸಾದಲಿಂಗವು ಪರಾಶಕ್ತಿಯ ಸಹಾಯದಿಂದ ಶರಣಸ್ಥಲವಾಯಿತು. ಜಂಗಮಲಿಂಗವು ಆದಿಶಕ್ತಿಯ ಸಹಾಯದಿಂದ ಪ್ರಾಣಲಿಂಗಿಸ್ಥಲವಾಯಿತು ಶಿವಲಿಂಗವು ಇಚ್ಛಾಶಕ್ತಿಯ ಸಹಾಯದಿಂದ ಪ್ರಸಾದಿಸ್ಥಲವಾಯಿತು. ಗುರುಲಿಂಗವು ಜ್ಞಾನಶಕ್ತಿಯ ಸಹಾಯದಿಂದ ಮಹೇಶಸ್ಥಲವಾಯಿತು. ಆಚಾರವು ಕ್ರಿಯಾಶಕ್ತಿಯ ಸಹಾಯದಿಂದ ಭಕ್ತಸ್ಥಲವಾಯಿತು. ಇದಕ್ಕೂ ಮೊದಲು ಪರವಸ್ತುವು ಭಾವಪ್ರಾಣ ಇಷ್ಟಲಿಂಗಗಳಿಗನುಸಂಧಿಯೋಗಾಂಗ, ಭೋಗಾಂಗ, ತ್ಯಾಗಾಂಗ ಎಂಬ ಮೂರು ಅಂಗಗಳಾಗಿ ಕೊನೆಗೆ ಮೇಳ್ಕಂಡ ಆರುಅಂಗಗಳಾಗಿ ಅಳವಟ್ಟರೀತಿಗೆ ಅಂಗಷಟ್‌ಸ್ಥಲವೆನ್ನುವರು.

ಈ ಮೇರೆ ಒಬ್ಬ ಪರಮಾತ್ಮನು ಕ್ರಿಯಾಭೇದದಿಂದ ೩ ಲಿಂಗಗಳಾಗಿ ಕೊನೆಗೆ ೬ ಲಿಂಗಗಳಾಗಿಯೂ ೬ ಶಕ್ತಿಗಳ ಸಹಾಯದಿಂದ ಮೊದಲು ೩ ಅಂಗಗಳಾಗಿ ಕೊನೆಗೆ ೬ ಅಂಗಗಳಾಗಿಯೂ ಜಗತ್ತಿನಲ್ಲಿ ತೋರಿದ ಸ್ಥಿತಿಗೆ ಪರಮಾತ್ಮನ ಪ್ರವೃತ್ತಿಮಾರ್ಗವೆಂಬ ಹೆಸರು.

ಇನ್ನು ಅಂಗವು ಲಿಂಗವಾಗುವ ರೀತಿಗೆ ಪರಮಾತ್ಮನ ನಿವೃತ್ತಿಮಾರ್ಗವೆನ್ನುವರು. ಅದು ಪ್ರವೃತ್ತಿಮಾರ್ಗದ ವಿರುದ್ಧ ಕ್ರಮದಲ್ಲಿ ಸಾಗುತ್ತದೆ. ಅಂಗನು ಲಿಂಗದಲ್ಲಿ ಬೆರೆಯಲಿಕ್ಕೆ ಅಂದರೆ ಜೀವಾತ್ಮನು ಪರಮಾತ್ಮನಲ್ಲಿ ಐಕ್ಯಹೊಂದಲಿಕ್ಕೆ ಕ್ರಿಯಾಭೇದದಿಂದ ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲವೆಂದು ಮೂರು ಸ್ಥಲಗಳನ್ನು ಕಲ್ಪಿಸಿಕೊಂಡನು. ಗುರುಸ್ಥಲದಲ್ಲಿ ಭಕ್ತ-ಮಹೇಶಸ್ಥಲಗಳು ಅಡಗುತ್ತವೆ. ಲಿಂಗಸ್ಥಲದಲ್ಲಿ ಪ್ರಸಾದಿ ಪ್ರಾಣಲಿಂಗಿಸ್ಥಲಗಳು ಕೂಡಿಹೋಗುತ್ತವೆ. ಜಂಗಮಸ್ಥಲದಲ್ಲಿ ಶರಣ ಐಕ್ಯಸ್ಥಲಗಳು ಸಮಾವೇಶಹೊಂದುತ್ತವೆ.

ಈ ಷಡಂಗಗಳು ಷಡ್ವಿಧ ಭಕ್ತಿಯಿಂದ ಕೂಡಿಕೊಂಡು ಷಡ್ಲಿಂಗಗಳಲ್ಲಿ ಸಮರಸವಾಗುವವು. ಅದು ಹೇಗೆಂದರೆ ಭಕ್ತನು ಶ್ರದ್ಧಾಭಕ್ತಿಯಿಂದ ಆಚಾರಲಿಂಗದಲ್ಲಿಯು ಮಹೇಶನು ನಿಷ್ಠಾಭಕ್ತಿಯಿಂದ ಗುರುಲಿಂಗದಲ್ಲಿಯೂ ಪ್ರಸಾದಿಯು ಅವಧಾನ ಭಕ್ತಿಯಿಂದ ಶಿವಲಿಂಗದಲ್ಲಿಯೂ ಪ್ರಾಣಲಿಂಗಿಯು ಅನುಭಾವ ಭಕ್ತಿಯಿಂದ ಜಂಗಮಲಿಂಗದ

ಲ್ಲಿಯೂ ಶರಣನು ಆನಂದ ಭಕ್ತಿಯಿಂದ ಪ್ರಸಾದಲಿಂಗದಲ್ಲಿಯೂ ಐಕ್ಯನು ಸಮರಸ ಭಕ್ತಿಯಿಂದ ಮಹಾಲಿಂಗದಲ್ಲಿಯೂ ಅಡಗುವರು. ಮುಂದೆ ಆಚಾರ ಲಿಂಗವು ಗುರುಲಿಂಗದಲ್ಲಿಯೂ, ಗುರುಲಿಂಗವು ಶಿವಲಿಂಗದಲ್ಲಿಯೂ, ಶಿವಲಿಂಗವು ಜಂಗಮದಲ್ಲಿಯೂ, ಜಂಗಮಲಿಂಗವು ಪ್ರಸಾದಲಿಂಗದಲ್ಲಿಯೂ, ಪ್ರಸಾದಲಿಂಗವು ಮಹಾಲಿಂಗದಲ್ಲಿಯೂ ಸಮರಸ ಹೊಂದುವವು. ಅರ್ಥಾತ್ ಇಷ್ಟವು ಪ್ರಾಣದಲ್ಲಿ, ಪ್ರಾಣವು ಭಾವದಲ್ಲಿ ಬೆರೆಯುವವೆಂಬರ್ಥ ಇದಕ್ಕೇ ನಿವೃತ್ತಿಮಾರ್ಗವೆನ್ನುವರು

ನಾವು ಇಲ್ಲಿ ಪ್ರತಿಪಾದಿಸತಕ್ಕ ವಿಷಯವು ಪ್ರವೃತ್ತಿಮಾರ್ಗದ್ದಲ್ಲ. ಆದರೆ ನಿವೃತ್ತಿಮಾರ್ಗದ್ದಾಗಿರುತ್ತದೆ. ಅಂದರೆ ಅಂಗನು ಲಿಂಗದಲ್ಲಿ ಸಮರಸ ಹೊಂದುವದಕ್ಕೆ ಅವಶ್ಯವಾದ ಅಯಾಯ ಅವಸ್ಥೆಗಳನ್ನು ವಿವರಿಸುವದಾಗಿರುತ್ತದೆ. ಈ ಅವಸ್ಥೆಗಳು ಪರಸ್ಪರವುಳ್ಳವುಗಳಾಗಿವೆ. ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ. ಅವ ಅಷ್ಟು ಓತಪ್ರೋತವಾಗಿ ಹೆಣೆಯಲ್ಪಟ್ಟಿವೆ. ಮಾನವ ಶರೀರದಲ್ಲಿ ಬಾಲ್ಯ, ತಾರುಣ್ಯ, ವಾರ್ಧಕ್ಯಗಳೆಂಬ ಅವಸ್ಥೆಗಳಿರುತ್ತವೆ. ಈ ಅವಸ್ಥೆಗಳು ಒಂದಕ್ಕೊಂದು ಸಂಬಂಧಪಟ್ಟಿದ್ದರೂ ಒಂದೊಂದರ ವೈಶಿಷ್ಟ್ಯವೇ ಬೇರೆ ಪ್ರತಿಯೊಂದು ತನ್ನ ಕಾರ್ಯಕ್ಷೇತ್ರದಲ್ಲಿ ಪರಿಪೂರ್ಣವಾಗಿರುತ್ತದೆ. ಅದೇ ಮೇರೆಗೆ ಷಟ್‌ಸ್ಥಲಗಳಲ್ಲಿಯೂ ಅಂತೆಯೂ ಉಂಟು. ಅಂದಬಳಿಕ ನಾವು ಒಂದು ಸ್ಥಲವು ಇನ್ನೊಂದು ಸ್ಥಲಕ್ಕಿಂತ ಹೆಚ್ಚು ಅಥವಾ ಕಡಿಮೆಯೆಂದು ಭಾವಿಸಬಾರದು. ಒಂದು ಅವಸ್ಥೆಯು ವಿಕಾಸಹೊಂದಿ ಇನ್ನೊಂದಾಗಿರುತ್ತದೆ. ಆದರೆ ಅವು ಬೇರೆ ಬೇರೆಯಲ್ಲ. ಆದಕಾರಣ ಭಕ್ತಸ್ಥಲವು ಎಲ್ಲಕ್ಕೂ ಕಡಿಮೆಯಲ್ಲ. ಐಕ್ಯಸ್ಥಲವು ಎಲ್ಲಕ್ಕೂ ಹೆಚ್ಚಲ್ಲ. ಹೀಗೆ ಭಾವಿಸುವದು ಶುದ್ಧ ತಪ್ಪು. ಈ ವಿಚಾರವನ್ನು ಕಿತ್ತೊಗೆಯುವದಕ್ಕಾಗಿಯೇ ಶಿವಶರಣರು ಭಕ್ತಸ್ಥಲದಲ್ಲಿ ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ ಹೀಗೆ ಷಟ್‌ಸ್ಥಲಗಳನ್ನೂ ವಾಪ್ತಿಮಾಡಿಸಿರುವರು. ಅದರಂತೆ ಉಳಿದ ಪ್ರತಿಯೊಂದು ಸ್ಥಲದಲ್ಲಿಯೂ ಈ ಬಗೆಯ ಆರಾರು ಸ್ಥಲಗಳು ನೇರ್ಪಟ್ಟು ಒಟ್ಟು ೩೬ ಸ್ಥಲಗಳು ನಿರ್ಮಿತವಾಗಿವೆ. ಈ ೩೬ ಸ್ಥಲಗಳು ಮುಂದೆ ಳಳ ಅಂಗಸ್ಥಲ, ೫೬ ಲಿಂಗಸ್ಥಲ ಹೀಗೆ ೧೦೧ ಸ್ಥಲಗಳಾಗಿ ವಿವರಿಸಲ್ಪಟ್ಟಿವೆ. ಈ ವಿವರವು ಕಳಗಿನಂತಿದೆ.

ಅಂಗಸ್ಥಲ.

	ಭಾಗ		ಭಾಗ
(೧) ಭಕ್ತಸ್ಥಲ	೧೫	(೪) ಪ್ರಾಣಲಿಂಗಿಸ್ಥಲ	೫
(೨) ಮಹೇಶಸ್ಥಲ	೯	(೫) ಶರಣಸ್ಥಲ	೪
(೩) ಪ್ರಸಾದಿಸ್ಥಲ	೭	(೬) ಐಕ್ಯಸ್ಥಲ	೪
			೪೪

ಲಿಂಗಸ್ಥಲ.

	ಭಾಗ		ಭಾಗ
(೧) ಆಚಾರಲಿಂಗ	೯	(೪) ಜಂಗಮಲಿಂಗ	೧೨
(೨) ಗುರುಲಿಂಗ	೯	(೫) ಪ್ರಸಾದಲಿಂಗ	೯
(೩) ಶಿವಲಿಂಗ	೯	(೬) ಮಹಾಲಿಂಗ	೯
			೫೭

✓ಜಗತ್ತಿನ ಜೀವರುಗಳೆಲ್ಲ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ ಎಂಬ ಆರು ತತ್ವಗಳಿಂದ ಹುಟ್ಟಿರುತ್ತವೆ. ಈ ತತ್ವಗಳು ನಮ್ಮ ದೇಹದಲ್ಲಿ ನೆಲಸಿರುತ್ತವೆಂದು ಶಾಸ್ತ್ರಕಾರರು ಹೇಳುತ್ತಾರೆ. ಹೇಗೆಂದರೆ ಪೃಥ್ವಿಯೇ ನಾಸಿಕವು, ಅಪ್ಪುವೇ ಜಿಹ್ವೆಯು, ತೇಜವೇ ನೇತ್ರವು, ವಾಯುವೇ ತ್ವಚವು, ಆಕಾಶವೇ ಶ್ರೋತ್ರ, ಆತ್ಮವೇ ಹೃದಯ. ಈ ಆರು ಇಂದ್ರಿಯಗಳು ಆರು ಸ್ಥಲಗಳಿಂದು ಗ್ರಹಿಸಲ್ಪಟ್ಟಿವೆ. ಅದು ಹೇಗೆಂದರೆ ಭಕ್ತಸ್ಥಲವೇ ನಾಸಿಕವು. ಮಹೇಶಸ್ಥಲವೇ ಜಿಹ್ವೆಯು. ಪ್ರಸಾದಿಸ್ಥಲವೇ ನೇತ್ರವು. ಪ್ರಾಣಲಿಂಗಿಸ್ಥಲವೇ ತ್ವಚವು, ಶರಣಸ್ಥಲವೇ ಶ್ರೋತ್ರವು. ಐಕ್ಯಸ್ಥಲವೇ ಹೃದಯವು. ಇವೇ ಅಂಗಸ್ಥಲಗಳು ಇವು ಗಳ ಭೌತಿಕತ್ವವನ್ನು ಕಳೆದು ಶಿವತತ್ವಮಯವಾಗಿ ಮಾಡುವದೇ ಲಿಂಗಾಂಗ ಸಾಮರಸ್ಯವು. ಅಂದರೆ ಅಂಗಗುಣಗಳನ್ನಳಿದು ಆತ್ಮನು ಲಿಂಗಗುಡಿಯಾಗಬೇಕೆಂಬುದೇ ಅದರ ಅರ್ಥ.

ಅಂಗನು ನಾಸಿಕವನ್ನು ಆಚಾರಲಿಂಗವನ್ನಾಗಿಯೂ, ಜಿಹ್ವೆಯನ್ನು ಗುರುಲಿಂಗವನ್ನಾಗಿಯೂ, ನೇತ್ರವನ್ನು ಶಿವಲಿಂಗವನ್ನಾಗಿಯೂ, ತ್ವಚವನ್ನು ಜಂಗಮಲಿಂಗವನ್ನಾಗಿಯೂ, ಶ್ರೋತ್ರವನ್ನು ಪ್ರಸಾದಲಿಂಗವನ್ನಾಗಿಯೂ, ಹೃದಯವನ್ನು ಮಹಾಲಿಂಗವನ್ನಾಗಿಯೂ ಮಾಡಬೇಕು. ಅರ್ಥಾತ್ ಇಂದ್ರಿಯಗಳ ಪ್ರವೃತ್ತಿಯನ್ನು ಉದಾತ್ತಗೊಳಿಸುವದೇ

ಲಿಂಗಾಂಗ ಸಾಮರಸ್ಯವು. ಇದೇ ಷಟ್‌ಸ್ಥಲ ಸಿದ್ಧಾಂತದ ಸೊಬಗು ಸೌಂದರ್ಯ.

ಜೀವಾತ್ಮನು ಪ್ರಪಂಚದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸಬೇಕಾಗಿರುವದರಿಂದ ಅವನು ಪ್ರಾಪಂಚಿಕ ವ್ಯವಹಾರಗಳನ್ನು ಸರ್ವಥಾ ಬಿಡಲಾಗದು. ಭಗವದ್ಗೀತೆಯಲ್ಲಿ "ಸನ್ಯಾಸಃ ಕರ್ಮಯೋಗಶ್ಚ ನಿಶ್ರೇಯಸಕರಾವುಭೌ। ತಯೋಸ್ತು ಕರ್ಮ ಸನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ॥" ಅಂದರೆ ಸಂಸಾರವನ್ನು ಬಿಟ್ಟು ಸನ್ಯಾಸಿಯಾಗುವದೂ ಲೋಕದಲ್ಲಿದ್ದು ಜನಸೇವೆ ಮಾಡುವದೂ ಇವೆರಡೂ ಮೋಕ್ಷಕ್ಕೆ ಸಾಧನಗಳಾಗಿದ್ದರೂ ಸನ್ಯಾಸಿಯಾಗುವದಕ್ಕಿಂತ ಕರ್ಮಯೋಗಿಯಾಗುವದೇ ಹೆಚ್ಚಿನದೆಂದು ಹೇಳಿದೆ. ಷಟ್‌ಸ್ಥಲದಲ್ಲಿಯಾದರೋ ಸನ್ಯಾಸಕ್ಕೆ ಇಂಬಿಲ್ಲ. ಅದರಲ್ಲಿ ಕರ್ಮಯೋಗವೇ ಪ್ರಾಮುಖ್ಯವಾದುದು. ವೀರಶೈವನು ಇಷ್ಟ ಪ್ರಾಣಭಾವಲಿಂಗಗಳ ಸಹಾಯದಿಂದ ಭಕ್ತಿ, ಯೋಗ, ಜ್ಞಾನಗಳನ್ನು ಬೆಳಿಸಿಕೊಂಡು ತನ್ನ ಆತ್ಮವನ್ನು ಉದ್ಧಾರವನ್ನು ಮಾಡಿಕೊಂಡರೆ ಮುಗಿಯಲಿಲ್ಲ. ಅವನು ಸಮಾಜ ಪ್ರಾಣಿಯಾದುದರಿಂದ ಸಮಾಜ ಮತ್ತು ಲೋಕ ಹಿತದ ಕೆಲಸಗಳನ್ನು ಮಾಡಬೇಕೆಂದೇ ಷಟ್‌ಸ್ಥಲವು ಬೋಧಿಸುತ್ತದೆ. ಗುರುಲಿಂಗಜಂಗಮ ಸೇವಾರ್ಥವಾಗಿ ಮಾಡುವ ಕರ್ಮಕ್ಕೇ ನಮ್ಮವರು ಕಾಯಕವೆಂದು ಕರೆದಿರುವರು. "ಕಾಯಕವೇ ಕೈಲಾಸ" ವೆಂದು ಹೇಳಿರುವರು. ಆದುದರಿಂದ ವೀರಶೈವನು ಲೋಕದಲ್ಲಿ ಆಯಾಯ ಸ್ಥಲಗಳಿಗನುಸರಿಸಿ ಯಾವ ಯಾವ ಕ್ರಿಯೆಗಳನ್ನಾಚರಿಸುತ್ತಾನೆಂಬದನ್ನು ಇದರಿಂದಿಯಲ್ಲಿ ಸ್ವಲ್ಪ ವಿವೇಚಿಸೋಣ.

ಭಕ್ತಸ್ಥಲ.

ಭಕ್ತನಿಗೆ ಆಚಾರಲಿಂಗವೇ ಪ್ರಾಮುಖ್ಯವಾಗಿರುವದರಿಂದ "ಆಚಾರಃ ಪ್ರಥಮೋ ಧರ್ಮಃ" ಎಂಬಂತ ಆತನು ಯಾವಾಗಲೂ ಸದಾಚಾರಿಯಾಗಿರತಕ್ಕದ್ದು. ಭಕ್ತನ ನಡೆನುಡಿಗಳು ಶುದ್ಧವಾಗಿರತಕ್ಕದ್ದು. "ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ ತಾ ಘಟಸರ್ಪ ನೋಡಾ" ಎಂದು ಶರಣರು ಅಪ್ಪಣೆ ಕೊಡಿಸಿದ್ದಾರೆ. ಲಿಂಗ ಮುಟ್ಟಿದ ಕೈ ವಿಷಸಲು, ಲಿಂಗ ಧರಿಸಿದ ದೇಹ ದೇವಾಲಯವೆಂದು ತಿಳಿದು ಭಕ್ತನು ದುಶ್ಚಟ ದುರಾಚಾರಗಳಿಗಿಂಬುಗೊಡದೆ ಸದಾಚಾರ

ದಿಂದಲೇ ನಡೆಯಬೇಕು. ಭಕ್ತನು ಕೃಷಿ ವಾಣಿಜ್ಯ ಮೊದಲಾದ ಒಂದಿಲ್ಲೊಂದು ಕಾಯಕವನ್ನು ಕೈಕೊಂಡು ಗುರುಲಿಂಗ ಜಂಗಮ ದಾಸೋಹಕ್ಕಾಗಿಯೂ ಸ್ವಧರ್ಮೋನ್ನತಿಗಾಗಿಯೂ ತನ್ನ ತನು ಮನ ಧನಗಳನ್ನರ್ಪಿಸಬೇಕು. ಭಕ್ತನು ಭಿನ್ನ ಭಿನ್ನ ಕಾಯಕವ ಮಾಡುವ ಇತರ ಭಕ್ತರಲ್ಲಿ ಕುಲವನ್ನೆಣಿಸಬಾರದು. ಲಿಂಗಧಾರಿಗಳಾದ ಭಕ್ತರೆಲ್ಲರೂ ಸರಿಸಮಾನರು. "ಲಿಂಗಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಕೂಡಲ ಸಂಗಮದೇವಾ ಭಕ್ತರಲ್ಲಿ ಕುಲವನಾರಿಸಿದರೆ ನಿಮ್ಮ ರಾಣಿವಾಸದಾಣೆ" ಎಂದು ಬಸವಣ್ಣನವರು ಆಜ್ಞೆ ಕೊಡಿಸಿದ್ದಾರೆ. ಈಗ ಅಜ್ಞಾನದ ಮೂಲಕ ಸಮಾಜದಲ್ಲಿ ನೆಲೆಗೊಂಡ ಒಳಪಂಗಡಗಳನ್ನೆಲ್ಲ ಬದಿಗೊತ್ತಿ ಭಕ್ತರೆಲ್ಲರೂ ಒಂದೇ ಎಂಬ ವಿಚಾರವನ್ನು ಆಚರಣೆಯಲ್ಲಿ ತರುವದೇ ಭಕ್ತಸ್ಥಲದ ಗುಟ್ಟು. ಇದೇ ಆಚಾರಲಿಂಗಪೂಜೆಯು

ಮಹೇಶಸ್ಥಲ.

ಮಹೇಶನು ಗುರುವಿನಲ್ಲಿ ವಿಶೇಷವಾಗಿ ನಿಷ್ಠಾಭಕ್ತಿಯುಳ್ಳವನಾಗಿರುತ್ತಾನೆ. ಯಾಕಂದರೆ ಮಹೇಶಸ್ಥಲಕ್ಕೆ ಗುರುಲಿಂಗವೇ ಮುಖ್ಯ. ಮಹೇಶನು ಗುರುವಿನಿಂದ ತ್ರಿವಿಧ ದೀಕ್ಷಾಸಂಪನ್ನನಾಗಿ ಗುರುವು ಹೇಳಿಕೊಟ್ಟ ವ್ರತ ನೇಮಾದಿಗಳನ್ನು ತಪ್ಪದೆ ಆಚರಿಸುತ್ತ ಹೋಗುವನು. ಎಂಥ ವಿಘ್ನಗಳು ಬಂದರೂ ಆತನು ಹಿಡಿದ ವ್ರತವನ್ನೆಂದಿಗೂ ಬಿಡುವವನಲ್ಲ. ಮಹೇಶನು ಪರನಾರಿಯರನ್ನು ಕಣ್ಣೆತ್ತಿ ನೋಡನು. ಪರದ್ರವ್ಯವನ್ನು ಕೈಯಿಂದ ಮುಟ್ಟನು. ಅನ್ಯ ದೈವಕ್ಕೆಂದಿಗೂ ಎರಗನು. ತೀರ್ಥ ಯಾತ್ರೆಗಳಿಗೆಂದಿಗೂ ಹೋಗನು. ಪ್ರಾಯಶ್ಚಿತ್ತಗಳನ್ನೆಂದಿಗೂ ತೆಗೆದುಕೊಳ್ಳನು. ಗುರುಲಿಂಗ ಜಂಗಮನಿಂದೆಯನ್ನೆಂದಿಗೂ ಸೈರಿಸನು. ಜ್ಯೋತಿಷ್ಯ, ಶಕುನ, ಸೂತಕಗಳನ್ನು ನಂಬನು. ಯಜ್ಞಯಾಗ, ಬಲಿದಾನ ಮೊದಲಾದ ಹಿಂಸೆಗಳನ್ನೆಸಗಲಿ ಮಾತ್ರವೂ ಸಹಿಸನು. ವೇಷವೃತ್ತಿಯನ್ನು ಜರಿಯುವನು. ಮತ ಅಥವಾ ಸಂಸ್ಥೆಯ ಅಧಿಕಾರಿಯಾಗಿ ಸಮಾಜಕ್ಕೆ ಹಿತವಾಗುವ ವ್ಯಾಖ್ಯಾನ, ಕೀರ್ತನ, ಪ್ರವಚನ, ಲೇಖನ ಮುಂತಾದ ಕಾರ್ಯಗಳನ್ನು ನೆರವೇರಿಸುವನು. ಸಮಾಜ ಸೇವೆಯೇ ಮಹೇಶಸ್ಥಲದ ಲಕ್ಷಣವು.

ಪ್ರಸಾದಿ ಸ್ಥಲ.

ಪ್ರಸಾದಿಯು ಶಿವಾರ್ಪಣ ಬುದ್ಧಿಯಿಂದ ಶಿವಲಿಂಗವನ್ನು ಪೂಜಿಸುವಂತೆ ಲೋಕಹಿತದ ಕಾರ್ಯಗಳನ್ನು ಶಿವಾರ್ಪಣ ಬುದ್ಧಿಯಿಂದ ಮಾಡುವನು. ಆತನು ಮಾಡುವದು, ಉಣ್ಣುವದು, ಕೊಡಕೊಂಬುವದು ಮೊದಲಾದ ಸರ್ವ ಕಾರ್ಯಗಳು ಶಿವಾರ್ಪಣ ಬುದ್ಧಿಯಿಂದಲೇ ಜರುಗುತ್ತವೆ. ಪ್ರಸಾದಿಯು ಯಾವಾಗಲೂ ಪ್ರಸನ್ನಚಿತ್ತನಾಗಿರುತ್ತಾನೆ. "ಯದ್ಯತ್ಕರ್ಮಕರೋಮಿ ತತ್ತದಖಿಲಂ ಶಂಭೋತವಾರಾಧನಂ" ಎಂಬ ಮಾತು ಪ್ರಸಾದಿಗೆ ಸಮನ್ವಯಿಸುವದು. ಪ್ರಸಾದಿಯು ಲೋಕಸಂಗ್ರಹ ಕಾರ್ಯಗಳನ್ನು ಮಾಡುವಾಗ ನಾನು ಮಾಡಿದೆನೆಂದು ಅಹಂಭಾವ ತಾಳದೆ ಶಿವನೇ ಮಾಡಿದನೆಂಬ ಉದಾತ್ತಭಾವವನ್ನು ತಾಳುತ್ತಾನೆ.

ಪ್ರಾಣಲಿಂಗಿಯ ಸ್ಥಳ.

ಪ್ರಾಣಲಿಂಗಿಯು ಜಂಗಮಲಿಂಗ ಪೂಜಕನು. ಅಂದರೆ ಜಗತ್ತಿನ ಜೀವರಾಶಿಗಳನ್ನೆಲ್ಲ ಆತನು ಲಿಂಗರೂಪಾಗಿ ಕಾಣುವನು. 'ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸ ಪಂಡಿತಃ' ಎಂಬ ಮಾತು ಪ್ರಾಣಲಿಂಗಿಗೆ ಅನ್ವಯಿಸುತ್ತದೆ. ಭೂತದಯಾ ಗುಣವು ಪ್ರಾಣಲಿಂಗಿಯಲ್ಲಿ ಕೊನೆಯ ಸೀಮೆಯನ್ನು ಮುಟ್ಟಿರುತ್ತದೆ. ಸಕಲ ಚರಾಚರಾತ್ಮಕ ವಸ್ತುಗಳನ್ನು ಲಿಂಗವೆಂದು ಭಾವಿಸಿ ತನ್ನ ಪ್ರಾಣದಂತೆ ಕಾಣುವನಾದ್ದರಿಂದಲೇ ಆತನಿಗೆ ಪ್ರಾಣಲಿಂಗಿಯೆಂಬ ಹೆಸರು ಪ್ರಾಪ್ತವಾಗಿರುತ್ತದೆ. ವಿಶ್ವಪ್ರೇಮವು ಪ್ರಾಣಲಿಂಗಿ ಸ್ಥಲದ ಹೆಗ್ಗುರುತು. ಸಕಲ ಪ್ರಾಣಿಗಳ ಹಿತವೇ ಪ್ರಾಣಲಿಂಗಿಯ ಶಿವಯೋಗವು.

ಶರಣ ಸ್ಥಲ.

ಆನಂದ ಭಕ್ತಿಯಿಂದ ಪ್ರಸಾದಲಿಂಗವಾಗುವವನೇ ಶರಣನು. ಶರಣನು ತಾನು ಸತಿ ಲಿಂಗವು ಪತಿಯೆಂಬ ಭಾವದಿಂದ ಲಿಂಗಯ್ಯನಲ್ಲಿ ಆನಂದ ಭಕ್ತಿಯುಳ್ಳವನಾಗುವನು. ಈ ವಿಶ್ವದ ಸ್ಥಿತಿಯನ್ನು ಮೀರಿದ್ದೇ ಭಾವಲಿಂಗವು. ಆ ನಿರಾಕಾರದಲ್ಲಿ ಬೆರೆದು ಶರಣನು ಆನಂದ ಸಾಗರದಲ್ಲಿ ಮುಳುಗುವನು. ಅವನು ಜಗತ್ತಿನ ವ್ಯವಹಾರಗಳನ್ನು ದಾಟಿದವನಾದ್ದರಿಂದ ಜಗತ್ತಿನ ದುಃಖ ಸುಖಗಳಿಂದ ಆತನು ನಿರ್ಲಿಪ್ತನಾಗಿ

ರುತ್ತಾನೆ. ಅದಾಗ್ಯೂ ಜಗತ್ತಿನ ಕಾರ್ಯಗಳನ್ನು ಆಚರಿಸುತ್ತಲೇ ಇರುತ್ತಾನೆ. ಶರಣನು ತನ್ನ ದೃಷ್ಟಿ ಮಾತ್ರದಿಂದ ಪತಿತರನ್ನು ಪಾವನರನ್ನಾಗಿ ಮಾಡಲು ಸಮರ್ಥನಾಗಿರುತ್ತಾನೆ. ಶರಣನಿರ್ದ ಸ್ಥಲವೇ ಕ್ಷೇತ್ರ. ಶರಣನು ಮಿಂದ ಜಲವೇ ತೀರ್ಥ. ಶರಣನು ನುಡಿದ ವಾಕ್ಯವೇ ವೇದ. ಶರಣನು ನಡೆದದ್ದೇ ಸತ್ಪಥ. ಶರಣನ ಅಂಗಣವೇ ಕೈಲಾಸ. ಶರಣನು ಚಂಸಿದ್ದೇ ಧರ್ಮ. ತ್ಯಜಿಸಿದ್ದೇ ಅಧರ್ಮ. ಶರಣರೊಡನೆ ಸರಸವಾಡಿದರೆ ಕೇಡು ತಪ್ಪದು. ಒಟ್ಟಿನ ಮೇಲೆ ಶರಣನು ಜೀವನ್ಮುಕ್ತ ಸ್ಥಿತಿಯಲ್ಲಿರುತ್ತಾನೆ.

ಐಕ್ಯಸ್ಥಲ.

ಸಮರಸ ಭಕ್ತಿಯಿಂದ ಮಹಾಲಿಂಗವಾತವನೇ ಐಕ್ಯನು. ಅಂದರೆ ಲೋಕದ ಸ್ಥಿತಿ ಗತಿಗಳನ್ನು ಮರೆತು ಲಿಂಗದಲ್ಲಿ ನಿರಂತರ ನಿರ್ವಿಕಲ್ಪ ಸಮಾಧಿಯನ್ನು ಪಡೆದವನು ಐಕ್ಯನು. ಶರಣನು ಕೆಲಕಾಲ ನಿರ್ವಿಕಲ್ಪ ಸಮಾಧಿ ಪಡೆದರೆ ಐಕ್ಯನು. ನಿರಂತರ ಲಿಂಗನುಭವನೇ ಆಗಿರುತ್ತಾನೆ. ಈ ಸ್ಥಿತಿಯನ್ನು ಮೀರಿ ಬೇರೊಂದು ಅವಸ್ಥೆಯಿಲ್ಲ. ಈತನೇ ಸರ್ವಾಂಗ ಲಿಂಗಮಯನು. ಈತನೇ ಸಚ್ಚಿದಾನಂದ ನಿತ್ಯ ಪರಿಪೂರ್ಣನು. ನಿರಂಜನ ಪ್ರಣವ ಸ್ವರೂಪನು. ನಿತ್ಯಾನಂದ ನಿರ್ವಿಕಲ್ಪ ಸಮಾಧಿಸ್ಥನೇ ಐಕ್ಯನು.

ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ.

ಲೇಖಕರು– ಜೀರಗೆ ಕ. ಬಸವಪ್ಪ ಬಿ. ಏ ಬೆಂಗಳೂರ ನಗರ.

ಕೀರ್ತನಕೇಸರಿ ಶ್ರೀ. ಬಿ. ಶಿವಮೂರ್ತಿ ಶಾಸ್ತ್ರಿಗಳವರು ೧೯೪೦ನೆಯ ಇಸ್ವಿಯ ಅಗಸ್ಟ ತಿಂಗಳ ತಮ್ಮ "ಶರಣಸಾಹಿತ್ಯ" ಸಂಚಿಕೆಯಲ್ಲಿ "ಲಿಂಗಧಾರಣ ಮತ್ತು ಶಿವದೀಕ್ಷೆ" ಎಂಬ ಒಂದು ಲೇಖನವನ್ನು ಬರೆದು ಅದರಲ್ಲಿ ಈ ಮುಂದೆ ಕಂಡಂತೆ ಟೀಕೆ ಮಾಡಿದ್ದಾರೆ—"ಇಂದು ವೀರಶೈವ ಸಮಾಜದಲ್ಲಿ ಹಲವರು ದೀಕ್ಷಾಹೀನರಾಗಿರುವುದನ್ನು ನಾವು ನೋಡುತ್ತಿದ್ದೇವೆ. ಇದು ನಿಜವಾಗಿಯೂ ದುಃಖಕರವಾದ ಸಂಗತಿಯೇ ಸರಿ. ಮತ್ತೆ ಕೆಲವರು ಲಿಂಗಧಾರಣವೇ ಶಿವದೀಕ್ಷೆಯೆಂದು ಭ್ರಾಂತಿಪಟ್ಟಿದ್ದಾರೆ. ಇದು ಆಶ್ಚರ್ಯಕರವಾದ ಸಂಗತಿಯೇ ಸರಿ. ಇದಕ್ಕೆಲ್ಲ ವೀರಶೈವ ಧರ್ಮದ ತಿಳಿವಳಿಕೆಯೂ ನಡೆವಳಿಕೆಯೂ ಇಲ್ಲದುದೇ ಕಾರಣವೆನಿಸಿದೆ." ಈ ವಿಚಾರ ಸರಣಿಯಲ್ಲಿ ಅವರು ಎರಡು ಹೊಸ ಸಿದ್ಧಾಂತಗಳನ್ನು ಸಮರ್ಥನೆ ಮಾಡುವದಕ್ಕೆ ಪ್ರಯತ್ನಿಸಿದ್ದಾರೆ. ವೀರಶೈವ ಸಮಾಜದಲ್ಲಿ ಈಗ ಅನೇಕರು ಶಿವದೀಕ್ಷಾ ಹೀನರಾಗಿದ್ದಾರೆಂಬುದು ಒಂದು ಸಿದ್ಧಾಂತ. ಲಿಂಗಧಾರಣವು ಶಿವದೀಕ್ಷೆಯಲ್ಲವೆಂಬುದು ಮತ್ತೊಂದು ಸಿದ್ಧಾಂತ. ಮೊದಲನೆಯ ಸಿದ್ಧಾಂತಕ್ಕೆ ಎರಡನೆಯ ಸಿದ್ಧಾಂತವೇ ಆಧಾರ. ಲಿಂಗಧಾರಣ ಶಿವದೀಕ್ಷೆಗಳು ಭಿನ್ನವಾದವುಗಳೆಂಬ ಕೀರ್ತನ ಕೇಸರಿಗಳ ತಿಳುವಳಿಕೆಯಿಂದ ವೀರಶೈವ ಸಮಾಜದ ಬಹು ಮಂದಿಗಳು ಶಿವದೀಕ್ಷಾ ಹೀನರಾಗಿ ಬಿಟ್ಟಿದ್ದಾರೆ ಲಿಂಗಧಾರಣ ಶಿವದೀಕ್ಷೆಗಳ ನಿಜವಾದ ಅರ್ಥವನ್ನೂ, ಸಂಬಂಧವನ್ನೂ, ಕಾರ್ಯಾಚರಣೆಯನ್ನೂ ಮತ್ತು ಪರಿಣಾಮವನ್ನೂ ತಿಳಿಯದಿರುವುದೇ ಈ ತಿಳುವಳಿಕೆಗೆ ಕಾರಣವಾಗಿದೆ.

ವಿಚಾರ ಮಾಡಿ ನೋಡಿದರೆ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರು ತಿಳಿದಂತೆ ಲಿಂಗಧಾರಣ ಶಿವದೀಕ್ಷೆಗಳು ಭಿನ್ನವಾದವುಗಳಲ್ಲ. ಶಿವಶರಣರ ಅನಂತ ವಚನಗಳ ಪ್ರಕಾರವೂ ಸಿದ್ಧಾಂತ ಶಿಖಾಮಣಿಯೇ ಮುಂತಾದ ಅನಂತ ಸ್ವತಂತ್ರ ಗ್ರಂಥಗಳ ಪ್ರಕಾರವೂ ಲಿಂಗಧಾರಣ

ಶಿವದೀಕ್ಷೆಗಳಿಗೆ ಯಾವ ಭೇದವೂ ಇಲ್ಲ. ಒಂದರ ಕಾರ್ಯಕ್ರಮದಲ್ಲಿ ಮತ್ತೊಂದು ಹಾಸುಹೊಕ್ಕುಗಳಂತೆ ಹೆಣೆದುಕೊಂಡಿವೆ. ಶಿವದೀಕ್ಷೆಯನ್ನು ಬಿಟ್ಟು ಲಿಂಗಧಾರಣವಿಲ್ಲ. ಲಿಂಗಧಾರಣವನ್ನು ಬಿಟ್ಟು ಶಿವದೀಕ್ಷೆಯಿಲ್ಲ. ಶಿವದೀಕ್ಷೆಯು ಲಿಂಗಧಾರಣೆಯಲ್ಲಿ ಮುಕ್ತಾಯಗೊಳ್ಳಬೇಕು. ಲಿಂಗ ಧಾರಣವು ಶಿವದೀಕ್ಷೆಯಲ್ಲಿ ಆಚರಿಸಲ್ಪಡಬೇಕು. ಲಿಂಗಧಾರಣ ಮಾಡದೆ ಶಿವದೀಕ್ಷೆಯನ್ನು ನಡೆಯಿಸುವದಕ್ಕಾಗುವುದಿಲ್ಲ. ಶಿವದೀಕ್ಷೆಯಲ್ಲಲ್ಲದೆ ಲಿಂಗವನ್ನು ಧಾರಣಮಾಡುವುದಕ್ಕಾಗುವುದಿಲ್ಲ. ಹೇಗೆ ವಿವಾಹವು ಮಾಂಗಲ್ಯ ಧಾರಣೆಯಲ್ಲಿ ಮುಕ್ತಾಯಗೊಳ್ಳಬೇಕೋ ಹಾಗೆ ಶಿವದೀಕ್ಷೆಯು ಲಿಂಗ ಧಾರಣೆಯಲ್ಲಿ ಮುಕ್ತಾಯಗೊಳ್ಳಬೇಕು. ವಿವಾಹದಲ್ಲಲ್ಲದೆ ಮಾಂಗಲ್ಯವನ್ನು ಹೇಗೆ ಕಟ್ಟುವದಕ್ಕೆ ಬರುವುದಿಲ್ಲವೋ ಹಾಗೆ ಶಿವದೀಕ್ಷೆಯಲ್ಲಲ್ಲದೆ ಲಿಂಗವನ್ನು ಧಾರಣ ಮಾಡುವುದಕ್ಕೆ ಬರುವುದಿಲ್ಲ. ವಿವಾಹದಲ್ಲಿ ಹೇಗೆ ಪುರೋಹಿತನು ವಧುವರರಿಗೆ ವಿವಾಹಮಾಡಿ ಮಾಂಗಲ್ಯಧಾರಣೆಯನ್ನು ಮಾಡಿಸುತ್ತಾನೆಯೋ ಹಾಗೆ ಶಿವದೀಕ್ಷೆಯಲ್ಲಿ ಗುರುವು ಅಂಗಲಿಂಗಗಳ (ಶಿವಜೀವರ) ಸಂಬಂಧವನ್ನು ಮಾಡಿಸಿ ಲಿಂಗಧಾರಣವನ್ನು ಮಾಡಿಸುತ್ತಾನೆ.

ಈ ವಿಚಾರವು ಶಿವಶರಣರ ಅನಂತ ವಚನಗಳಲ್ಲಿ ಪ್ರತಿಪಾದಿತವಾಗಿದೆ.

"ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಆವ ಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ, ಗುರು ಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗವ ಧರಿಸಿದ ಆಚಾರಸಂಪನ್ನ ಸತ್ಕ್ರಿಯನಾದ ಮಹಾತ್ಮನೇ ಮೂರು ಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ"

ಈ ವಚನದಲ್ಲಿ "ಅಂಗದ ಮೇಲೆ ಲಿಂಗವ ಧರಿಸಿದ" ಎಂಬ ಪದಗಳು ಲಿಂಗ ಧಾರಣವನ್ನು ಸ್ಪಷ್ಟಪಡಿಸುತ್ತವೆ. ಮತ್ತೆ—

"ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೇನಯ್ಯಾ? ಲಿಂಗದೇವನ ಪೂಜಿಸಿ ಕುಲವನರಸುವರೇನಯ್ಯಾ?"

ಇಲ್ಲಿ "ಲಿಂಗದೇವನ ಪೂಜಿಸಿ" ಎಂಬ ಪದಗಳು ಲಿಂಗಧಾರಣವನ್ನು ಸೂಚಿಸುತ್ತವೆ. ಮತ್ತೆ—

"ಆಣವಮಲ, ಮಾಯಾಮಲ, ಕಾರ್ಮಿಕಮಲ, ಎಂಬ ಮಲತ್ರಯಂಗಳ ಕಳೆದು ಆಜ್ಞಾದೀಕ್ಷೆ, ಉಪವಾದೀಕ್ಷೆ, ಸ್ಪರ್ಶ ಕಾರೋಹಣ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ಥಾಯತ ಈ ಏಳನು ಕಾಯಕ್ಕೆ ಉಪದೇಶವ ಮಾಡುವುದು. ಸಮಯ, ನಿಸ್ಸಂಸಾರ, ನಿರ್ವಾಣ, ತತ್ವದೀಕ್ಷೆ, ಆಧ್ಯಾತ್ಮಿಕ, ಅನುಗ್ರಹ, ಸತ್ಯಶುದ್ಧಿ ಈ ಏಳನು ಪ್ರಾಣಕ್ಕೆ ಉಪದೇಶವ ಮಾಡುವುದು. ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಮನೋರ್ಲಯ, ಲಿಂಗನಿಜ, ಸದ್ಯೋನ್ಮುಕ್ತಿ ಏಳನು ಮನಕ್ಕೆ ಉಪದೇಶವ ಮಾಡುವುದು. ಈ ಕ್ರಮವನರಿದು ಕೂಡಲಚನ್ನಸಂಗಯ್ಯನಲ್ಲಿ ಸಹಜ ದೀಕ್ಷೆಯಯ್ಯಾ"

ಇಲ್ಲಿ "ಲಿಂಗಾಯತ ಲಿಂಗಸ್ಥಾಯತ" ಎಂಬ ಪದಗಳನ್ನು ಅವಲೋಕಿಸಬೇಕು. ಚನ್ನಬಸವಣ್ಣನವರು ಈ ಅತುಲವಾದ ವರ್ಣನೆಯಲ್ಲಿ ಲಿಂಗಧಾರಣವು ಶಿವದೀಕ್ಷೆಯಲ್ಲಿ ಯಾವ ಸ್ಥಾನವನ್ನು ಪಡೆದಿದೆಯೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮತ್ತೆ—

"ಶ್ರೀಗುರುಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ ಕರಸ್ಥಲಕ್ಕೆ ಕೊಟ್ಟ ಬಳಿಕ ಬೇರೆ ಯೋಗವುಂಟೆ?"

ಮತ್ತೆ

"ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ಕರತಳಾಮಳಕದಂತೆ ಮಾಡಿ ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟ ಶ್ರೀಗುರುಚನ್ನ ಬಸವಣ್ಣ ಹೆಸರಿಟ್ಟ ಲಿಂಗದ ಹೆಸರ ಹೇಳುವೆನು ಕೇಳಯ್ಯ"

ಮತ್ತೆ

"ಎನ್ನ ಸುಜ್ಞಾನದ ಕಾಯದ ಮಸ್ತಕದಲ್ಲಿ ಹಸ್ತವನಿರಿಸಿ ಮನಭಾವ ಕರಣೇಂದ್ರಿಯಗಳ ಸ್ವರೂಪೀಕರಿಸಿ ದೃಷ್ಟಿಗೆ ತೋರಿ ಕೈಯಲ್ಲಿ ಲಿಂಗವ ಕೊಟ್ಟ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯಾ"

ಈ ವಚನಗಳಿಂದ ಶಿವದೀಕ್ಷೆಯಲ್ಲಿ ಲಿಂಗಧಾರಣವೇ ಬಹುಮುಖ್ಯವಾದ ಕಾರ್ಯಕ್ರಮವಾಗಿರುತ್ತದೆಯೆಂಬುದು ಸ್ಪಷ್ಟವಾಗಿ ಕಂಡು ಬರು

ತ್ತದೆ. ಅಷ್ಟೇ ಏಕೆ? ಶಿವದೀಕ್ಷೆಯ ಗುರಿಯೇ ಲಿಂಗಧಾರಣೆಯಾಗಿದೆಯೆಂ
ಬುದು ವಿದಿತವಾಗುತ್ತದೆ.

ಇನ್ನು ಈ ವಿಚಾರದಲ್ಲಿ ಸ್ವತಂತ್ರ ಗ್ರಂಥಗಳು ಏನು ಹೇಳುತ್ತವೆ
ಯೆಂಬುದನ್ನು ನೋಡೋಣ. ಶ್ರೀ ಶಿವಯೋಗಿ ಶಿವಾಚಾರ್ಯನು ರೇಣು
ಕಾಗಸ್ತ್ಯ ಸಂವಾದ ರೂಪದಲ್ಲಿ ರಚಿಸಿರುವ ಸಿದ್ಧಾಂತ ಶಿಖಾಮಣಿಯು
ಎಲ್ಲರಿಗೂ ಪರಿಚಯವಾದ ಗ್ರಂಥ. ವೀರಶೈವ ಧರ್ಮತತ್ವ ನಿರ್ಣ
ಯಕ್ಕೆ ಈ ಗ್ರಂಥವೂ ಒಂದು ಮುಖ್ಯ ಆಧಾರವಾಗಿದೆ. ಈ ಗ್ರಂಥದಲ್ಲಿ
ಏಕೋತ್ತರ ಶತಸ್ಥಲಗಳೆಂದು ಪ್ರಸಿದ್ಧವಾದ ನೂರೊಂದು ಸ್ಥಲಗಳು
ವರ್ಣಿಸಲ್ಪಟ್ಟಿವೆ. ಈ ನೂರೊಂದು ಸ್ಥಲಗಳೇ ವೀರಶೈವನು ತನ್ನ ಜೀವ
ನದಲ್ಲಿ ಇಡಬೇಕಾದ ನೂರೊಂದು ಹೆಜ್ಜೆಗಳು. ಈ ರೀತಿ ಪ್ರಸಿದ್ಧವಾದ
ನೂರೊಂದು ಸ್ಥಲಗಳಲ್ಲಿ ಲಿಂಗಧಾರಣಸ್ಥಲವೆಂಬುದು ಒಂದು ಮುಖ್ಯ
ವಾದ ಸ್ಥಲ. ಇದು ನೂರೊಂದು ಸ್ಥಲಗಳಲ್ಲಿ ಐದನೆಯ ಸ್ಥಲ. ಪಿಂಡ
ಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕಾರುಣ್ಯಸ್ಥಲ, ಇವು
ಗಳೇ ಮೊದಲನೆಯ ನಾಲ್ಕು ಸ್ಥಲಗಳು. ಈ ನಾಲ್ಕು ಸ್ಥಲಗಳಾದ
ಮೇಲೆ ಬರತಕ್ಕುದೇ ಮೇಲೆ ಹೇಳಿದ ಪ್ರಸಿದ್ಧವಾದ <u>ಲಿಂಗಧಾರಣಸ್ಥಲ</u>.
ಈ ಸ್ಥಲದಲ್ಲಿ ಗುರುವು ಶಿಷ್ಯನಿಗೆ ಶಿವದೀಕ್ಷೆಯನ್ನು ಅನುಗ್ರಹಿಸುವ ವಿಚಾ
ರವು ಸಂಪೂರ್ಣವಾಗಿ ವರ್ಣಿಸಲ್ಪಟ್ಟಿದೆ ಲಿಂಗಧಾರಣವೇ ಬೇರೆಯಾಗಿ
ಶಿವದೀಕ್ಷೆಯೇ ಬೇರೆಯಾಗಿದ್ದ ಪಕ್ಷದಲ್ಲಿ ಈ ಸ್ಥಲಕ್ಕೆ ಶಿವಯೋಗಾಚಾ
ರ್ಯನು ಲಿಂಗಧಾರಣಸ್ಥಲವೆಂದು ಹೆಸರಿಟ್ಟು ಅದರಲ್ಲಿ ಶಿವದೀಕ್ಷೆಯನ್ನು
ಏಕೆ ವರ್ಣಿಸುತ್ತಿದ್ದನು? ಮತ್ತು ಶಿವಮೂರ್ತಿ ಶಾಸ್ತ್ರಿಗಳು ಹೇಳುವಂತೆ
(ಶರಣಸಾಹಿತ್ಯದ ಳಲಜ ನೆಯ ಪುಟದ ೧೦ ನೆಯ ಮತ್ತು ೧೧ ನೆಯ
ಪಂಕ್ತಿಗಳನ್ನು ನೋಡಿ) ಲಿಂಗಧಾರಣವಾದ ನಂತರ ಶಿವದೀಕ್ಷೆಯು ನಡೆ
ಯಬೇಕಾದುದು ನಿಜವಾಗಿದ್ದ ಪಕ್ಷದಲ್ಲಿ ಶಿವಯೋಗಾಚಾರ್ಯನು ತನ್ನ
ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಧಾರಣಸ್ಥಲವಾದ ನಂತರ ಶಿವದೀಕ್ಷಾ
ಸ್ಥಲವೆಂಬ ಒಂದು ಸ್ಥಲವನ್ನೇಕೆ ನಿರ್ಮಿಸಲಿಲ್ಲ? ಲಿಂಗಧಾರಣೆಗಾಗಿಯೇ
ಒಂದು ಸ್ಥಲವನ್ನು ವಿಸಲಾಗಿಟ್ಟ ಶಿವಯೋಗಾಚಾರ್ಯನು ಶಿವದೀಕ್ಷೆ
ಗಾಗಿ ಏಕೆ ಒಂದು ಸ್ಥಲವನ್ನು ವಿಸಲಾಗಿಡಬಾರದಾಗಿತ್ತು? ಇದಕ್ಕೆ
ಉತ್ತರವಿಷ್ಟೇ. <u>ಲಿಂಗಧಾರಣ ಶಿವದೀಕ್ಷೆಗಳು ಭಿನ್ನವಾದವುಗಳಲ್ಲ.</u> ಲಿಂಗ

<u>ಧಾರಣ ಶಿವದೀಕ್ಷೆಗಳೆರಡೂ ಒಂದೇ.</u> ಈ ವಿಚಾರದಲ್ಲಿ ಶಿವಯೋಗಾ
ಚಾರ್ಯನು ಶಿವಶರಣರ ಮಾರ್ಗವನ್ನೇ ಅನುಸರಿಸಿರುತ್ತಾರೆ.

ಇನ್ನು ಈ ಸಿದ್ಧಾಂತ ಶಿಖಾಮಣಿಯಲ್ಲಿ ವಿವರಿಸಲ್ಪಟ್ಟ ಶಿವದೀ
ಕ್ಷೆಯ ಅರ್ಥಾತ್ ಲಿಂಗಧಾರಣೆಯ ವಿವರಣೆಯನ್ನೂ ಮತ್ತು ಕ್ರಿಯಾ
ಚರಣೆಯನ್ನೂ ಅವಲೋಕಿಸುವ. "ಶಕ್ತಿಪಾತಂ ಸಮಾಲೋಕ್ಯ ದೀಕ್ಷಾಯಾ
ಯೋಜಯೇದಮುಂ । ದೀಯತೇ ಚ ಶಿವಜ್ಞಾನಂ ಕ್ಷೀಯತೆ ಪಾಶ
ಬಂಧನಂ॥" ಎಂದರೆ ಯಾವುದರಿಂದ ಪರಬ್ರಹ್ಮ ಪರಶಿವಾಭಿಧಾನವುಳ್ಳ
ಮಹಾಲಿಂಗದ ಜ್ಞಾನವು ಉಂಟುಮಾಡಿಕೊಡಲ್ಪಡುತ್ತದೆಯೋ ಯಾವು
ದರಿಂದ ಮಲಮಾಯಾ ಕರ್ಮಬಂಧವು ಕ್ಷೀಣಿಸಿ ಹೋಗುತ್ತದೆಯೋ
ಅಂಥ ಜ್ಞಾನಕ್ರಿಯಾತ್ಮಕವಾದ ಶಕ್ತಿಯೇ "ದೀಕ್ಷೆ" ಯೆಂದು ದೀಕ್ಷೆಯ
ಅರ್ಥವನ್ನು ವಿವರಿಸಿ ಇಂಥ ದೀಕ್ಷೆಯು ವೇಧಾ, ಮಂತ್ರ, ಕ್ರಿಯಾ
ಎಂದು ಮೂರು ತೆರನಾಗಿದೆಯೆಂದೂ ಶ್ರೀಗುರುವು ತನ್ನ ಕೃಪಾದೃಷ್ಟಿ
ಯಿಂದ ಜೀವನನ್ನು ನೋಡಿ ತನ್ನ ಶಿವಹಸ್ತವನ್ನು ಜೀವನ ಮಸ್ತಕ
ದಲ್ಲಿ ಸಂಯೋಜಿಸಿ ತನ್ನ ಕರಕಮಲದಿಂದ ಜೀವನು ಸಮುತ್ಪನ್ನನಾ
ಗುವಂತೆ ಮಾಡುವುದೇ ವೇಧಾ ದೀಕ್ಷೆಯೆಂದೂ ಜೀವನ ಕರ್ಣದಲ್ಲಿ
ಪಂಚಾಕ್ಷರೀ ಮಂತ್ರವನ್ನು ಉಪದೇಶ ಮಾಡುವುದೇ ಮಂತ್ರ ದೀಕ್ಷೆ
ಯೆಂದೂ ಕಲಶ ಬಂಧವನ್ನು ಮಾಡಿ ಸ್ಪಟ್ಟಿಕ ಮಂಡಲವನ್ನು ರಚಿಸಿ
ಜೀವನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಲ್ಲಿ ಕ್ರಮವಾಗಿ ಇಷ್ಟ
ಪ್ರಾಣಭಾವವೆಂಬ ಲಿಂಗತ್ರಯವನ್ನು ಪ್ರತಿಷ್ಠಿಸುವುದೇ ಕ್ರಿಯಾದೀಕ್ಷೆ
ಯೆಂದೂ ಶಿವಯೋಗಾಚಾರ್ಯನು ಬಹು ಸ್ಪಷ್ಟವಾಗಿ ವರ್ಣಿಸಿದ್ದಾನೆ.
ಇದರಿಂದ ಶಿವದೀಕ್ಷೆ ಲಿಂಗಧಾರಣೆಗಳು ಭಿನ್ನವಾದವುಗಳಲ್ಲವೆಂಬುದು
ಸ್ಪಷ್ಟವಾಗಿ ಕಾಣುತ್ತದೆ.

ಇನ್ನು ಕನ್ನಡ ನಾಡಿನ ಸುಪ್ರಸಿದ್ಧ ಯೋಗಿಯೂ ಷಟ್ಸ್ಥಲ
ಜ್ಞಾನಾನುಭಾವಿಯೂ ಉದ್ದಾಮ ಕವಿಯೂ ಆದ ಶ್ರೀ ತೋಂಟದ
ಸಿದ್ಧಲಿಂಗ ಯತಿಯು ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ವಿಚಾ
ರದಲ್ಲಿ ಹೇಳುವುದೇನೆಂಬುದನ್ನು ನೋಡೋಣ.

"ವೇಧಾ ದೀಕ್ಷೆ ಮಂತ್ರ ದೀಕ್ಷೆ ಕ್ರಿಯಾ ದೀಕ್ಷೆ ಎಂಬ ದೀಕ್ಷಾ
ತ್ರಯಂಗಳಿಂದ ತನುತ್ರಯಂಗಳ ಪೂರ್ವಾಶ್ರಯವ ಕಳಿದು ಲಿಂಗ

ತ್ರಯಗಳ ಸಂಬಂಧಿಸಿದನು. ಅದೆಂತೆಂದಡೆ ವೇಧಾ ದೀಕ್ಷೆಯೆಂದು ಶ್ರೀಗುರು ತನ್ನ ಹಸ್ತವ ಶಿಷ್ಯನ ಮಸ್ತಕದಲ್ಲಿ ಸಂಯೋಗವ ಮಾಡಿದುದು ಮಂತ್ರದೀಕ್ಷೆಯೆಂದು ಶ್ರೀ ಗುರು ಪ್ರಣವ ಪಂಚಾಕ್ಷರಿಯ ಮಂತ್ರವ ಕರ್ಣದಲ್ಲಿ ಉಪದೇಶಿಸಿದುದು. ಕ್ರಿಯಾದೀಕ್ಷೆಯೆಂದು ಆಮಂತ್ರ ಸ್ವರೂಪವನೆ ಇಷ್ಟಲಿಂಗ ಸ್ವರೂಪವ ಮಾಡಿ ಕರಸ್ಥಲದಲ್ಲಿ ಸಂಬಂಧಿಸಿದುದು. ಇದು ಕಾರಣ ವೇಧಾ ದೀಕ್ಷೆಯಿಂದ ಕಾರಣ ತನುವಿನ ಪೂರ್ವಾಶ್ರಯವಳಿದು ಭಾವಲಿಂಗ ಸಂಬಂಧವಾಯಿತ್ತು. ಮಂತ್ರ ದೀಕ್ಷೆಯಿಂದ ಸೂಕ್ಷ್ಮ ತನುವಿನ ಪೂರ್ವಾಶ್ರಯವಳಿದು ಪ್ರಾಣಲಿಂಗವಾಯಿತ್ತು. ಕ್ರಿಯಾ ದೀಕ್ಷೆಯಿಂದ ಸ್ಥೂಲತನುವಿನ ಪೂರ್ವಾಶ್ರಯವಳಿದು ಇಷ್ಟಲಿಂಗ ಸಂಬಂಧವಾಯಿತ್ತು. ಹೀಗೆ ಅಂಗ ತ್ರಯುಂಗಳಲ್ಲಿ ಲಿಂಗ ತ್ರಯಂಗಳ ಧರಿಸಿದನಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. "

ಮತ್ತು

"..... ಎಷ್ಟು ಅರುಹಾದರೂ ಅಂಗದ ಮೇಲೆ ಶಿವಲಿಂಗ ಧಾರಣವಿಲ್ಲದಿದ್ದರೆ ಅರುಹಲ್ಲ. ಅದು ನಮ್ಮ ಪುರಾತನರ ಮತವಲ್ಲ. ಸಾಕ್ಷಾತ್ ಪರಶಿವನು ತಾನಾದರೂ ಆಗಲಿ ಅಂಗದ ಮೇಲೆ ಲಿಂಗಧಾರಣವಿಲ್ಲದಿದ್ದರೆ ಅವನ ಮುಖವ ನೋಡಲಾಗದು ಕಾಣಾ. ಅದೇನು ಕಾರಣವೆಂದರೆ ಅದು ಶಿವಾಚಾರದ ಪಥವಲ್ಲದ ಕಾರಣ....."

ಈ ವಚನಗಳಿಂದ ತೋಂಟದ ಸಿದ್ಧಲಿಂಗ ಯತಿಗಳೂ ಸಹ ಲಿಂಗಧಾರಣೆ ಶಿವದೀಕ್ಷೆಗಳಿರಡೂ ಒಂದೇ ಎಂಬ ಅಭಿಪ್ರಾಯವನ್ನೇ ಸಮರ್ಥಿಸಿದ್ದಾರೆಂಬುದು ವಿದಿತವಾಗುತ್ತದೆ. ಲಿಂಗಧಾರಣ ಶಿವದೀಕ್ಷೆಗಳ ವಿಚಾರದಲ್ಲಿ ವಚನಕಾರರ ಮತ್ತು ಸ್ವತಂತ್ರ ಗ್ರಂಥಕಾರರ ಅಭಿಪ್ರಾಯಗಳು ಈ ರೀತಿಯಿರುವಲ್ಲಿ ಶಿವದೀಕ್ಷೆಯೇ ಬೇರೆ ಲಿಂಗಧಾರಣವೇ ಬೇರೆ ಎಂದು ಸಿದ್ಧಾಂತವಾಡಲಿಕ್ಕೆ ಹೋಗುವುದು ಭ್ರಾಂತಿಯೇ ಸರಿ.

ಇನ್ನು ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯು ಯಾವ ಯಾವ ಸನ್ನಿವೇಶಗಳಲ್ಲಿ ಮತ್ತು ಹೇಗೆ ಆಚರಿಸಲ್ಪಡುತ್ತದೆಯೆಂಬ ವಿಚಾರವನ್ನೂ ಮತ್ತು 'ಶಿವದೀಕ್ಷೆ' ಮತ್ತು 'ಲಿಂಗಧಾರಣ' ಪದಗಳು ಯಾವ ಯಾವ

ಸನ್ನಿವೇಶಗಳಲ್ಲಿ ಮತ್ತು ಹೇಗೆ ಪ್ರಯೋಗಿಸಲ್ಪಡುತ್ತವೆಯೆಂಬ ವಿಚಾರವನ್ನೂ ಅವಲೋಕಿಸೋಣ. ಸಾಮಾನ್ಯವಾಗಿ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಗೆ ಎರಡು ಸನ್ನಿವೇಶಗಳು ಒದಗುತ್ತವೆ. ಒಂದು ಲಿಂಗಧಾರಿಗಳಾದವರ ಹೊಟ್ಟೆಯಲ್ಲಿ ಮಕ್ಕಳು ಜನಿಸಿದಾಗ ಒದಗತಕ್ಕ ಸನ್ನಿವೇಶ. ಮತ್ತೊಂದು ಅಲಿಂಗಿಗಳು ಎಂದರೆ ವೀರಶೈವೇತರರು ಎಂದರೆ ಭವಿಗಳು ವೀರಶೈವ ಧರ್ಮವನ್ನು ಸ್ವೀಕಾರಮಾಡಬೇಕೆಂದು ಬಯಸಿ ಬಂದಾಗ ಒದಗತಕ್ಕ ಸನ್ನಿವೇಶ. ಈ ಎರಡೂ ಸನ್ನಿವೇಶಗಳಲ್ಲಿಯೂ ನಡೆಯಿಸಬೇಕಾದ ಶಿವದೀಕ್ಷೆ ಅಥವಾ ಲಿಂಗಧಾರಣೆಯ ಕಾರ್ಯಕ್ರಮವು ಒಂದೇ ಜಗಿರುತ್ತದೆ. ಆದರೆ ಸನ್ನಿವೇಶಗಳು ಮಾತ್ರ ಬೇರೆ ಬೇರೆ. ಒಂದರಲ್ಲಿ ದೀಕ್ಷಾಪೇಕ್ಷೆಯು ಮಗುವಾಗಿರುತ್ತಾನೆ. ಮತ್ತೊಂದರಲ್ಲಿ ಅವನು ವಯಸ್ಕನಾಗಿರುತ್ತಾನೆ. ಮೊದಲನೆಯ ಸನ್ನಿವೇಶದಲ್ಲಿ ಎಂದರೆಲಿಂಗಧಾರಿಗಳಾದವರ ಹೊಟ್ಟೆಯಲ್ಲಿ ಮಕ್ಕಳು ಜನಿಸಿದ ಸನ್ನಿವೇಶದಲ್ಲಿ ನಡೆಯತಕ್ಕ ಶಿವ ದೀಕ್ಷೆಯನ್ನುನಾವು ರೂಢಿಯಲ್ಲಿ ಲಿಂಗಧಾರಣೆಯೆಂದು ಕರೆಯುತ್ತೇವೆ. ಎರಡನೆಯ ಸನ್ನಿವೇಶದಲ್ಲಿ ಎಂದರೆ ವೀರಶೈವೇತರರು ವೀರಶೈವ ಧರ್ಮವನ್ನು ಸ್ವೀಕಾರ ಮಾಡಲು ಅಪೇಕ್ಷಿಸಿದ ಸನ್ನಿವೇಶದಲ್ಲಿ ನಡೆಯತಕ್ಕ ಶಿವದೀಕ್ಷೆಯನ್ನು ಶಿವದೀಕ್ಷೆಯೆಂದೇ ಕರೆಯುತ್ತೇವೆ. ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯು ನಡೆಯತಕ್ಕ ಬೇರೆ ಬೇರೆ ಸನ್ನಿವೇಶಗಳನ್ನು ಸೂಚಿಸುವುದಕ್ಕೋಸ್ಕರ ಈ ರೀತಿಯಲ್ಲಿ ನಾವು ಲಿಂಗಧಾರಣೆಯೆಂದು ಒಂದು ಸನ್ನಿವೇಶದಲ್ಲಿಯೂ ಶಿವದೀಕ್ಷೆಯೆಂದು ಮತ್ತೊಂದು ಸನ್ನಿವೇಶದಲ್ಲಿಯೂ ಶಬ್ದಪ್ರಯೋಗ ಮಾಡುತ್ತೇವೆ. ಆದರೆ ಈ ಎರಡು ಸನ್ನಿವೇಶಗಳಲ್ಲಿಯೂ ನಡೆಯತಕ್ಕ ಕ್ರಿಯಾಚರಣೆಗಳು ಮಾತ್ರ ತತ್ಪದಲ್ಲಿಯೂ ಮತ್ತು ಪರಿಣಾಮದಲ್ಲಿಯೂ ಒಂದೇ ಆಗಿವೆ.

ಲಿಂಗಧಾರಿಗಳಾದವರ ಹೊಟ್ಟೆಯಲ್ಲಿ ಮಕ್ಕಳು ಜನಿಸಿದಾಗ ನಡೆಯಕ್ಕ ಲಿಂಗಧಾರಣ ಕಾರ್ಯಕ್ರಮಗಳನ್ನು ನಾವೆಲ್ಲರೂ ಅನೇಕ ವೇಳೆ ನೋಡಿರುತ್ತೇವೆ. ಶಿವದೀಕ್ಷೆಯು ಮೂರು ಮುಖ್ಯ ಪ್ರಭೇದಗಳಾದ ವೇಧಾ, ಮಂತ್ರ, ಕ್ರಿಯಾ, ಎಂಬ ತ್ರಿವಿಧ ದೀಕ್ಷೆಗಳು ಶಿಶುವಿನ ಶಿವದೀಕ್ಷೆಯಲ್ಲಿ ಗುರುವಿನಿಂದ ಶಿಶುವಿಗೆ ಅನುಗ್ರಹಿಸಲ್ಪಡುತ್ತವೆ. ಅಲ್ಲದೆ ಶಿಶುವಿನ ಶಿವದೀಕ್ಷೆಯಲ್ಲಿ ಅಷ್ಟಾವರಣಗಳು ಎಂದರೆ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದ ಎಂಬ

ಎಂದು ಆವರಣಗಳು ತಮ್ಮ ತಮ್ಮ ಪವಿತ್ರ ಕರ್ತವ್ಯಗಳನ್ನು ನೆರವೇ
ರಿಸಿ ಶಿಶುವಿನ ಶಿವದೀಕ್ಷೆಯನ್ನು ಶೋಭಾಯಮಾನವಾಗಿ ಮಾಡುತ್ತವೆ.
ಗುರುವು ವಿಧಿವತ್ತಾಗಿ ದೀಕ್ಷೆಯ ಪ್ರಥಮ ಕಾರ್ಯಕ್ರಮಗಳನ್ನು ಕೈಗೊಂ
ಡು ಸೂತ್ರವನ್ನು ಹಿಡಿದು ಶಿಶುವನ್ನು ಕರೆಯಿಸಿಕೊಂಡು ಶಿಶುವಿನ ಹಸ್ತ
ಮಸ್ತಕ ಸಂಯೋಗ ಮಾಡಿ ಶಿಶುವಿನ ಕಾರಣ ತನುವಿನ ಪೂರ್ವಾಶ್ರ
ಯವನ್ನು ಕಳೆಯ ಧಾವಲಿಂಗ ಸಂಬಂಧವನ್ನು ಮಾಡಿ, ಶಿಶುವಿನ ಕಿವಿ
ಯಲ್ಲಿ ಮಂತ್ರವನ್ನು ಉಪದೇಶಮಾಡಿ, ಶಿಶುವಿನ ಸೂಕ್ಷ್ಮ ತನುವಿನ
ಪೂರ್ವಾಶ್ರಯವನ್ನು ಕಳೆಯ ಪ್ರಾಣಲಿಂಗ ಸಂಬಂಧವನ್ನು ಮಾಡಿ,
ಲಿಂಗವನ್ನು ಶಿಶುವಿಗೆ ಧಾರಣ ಮಾಡಿ ಶಿಶುವಿನ ಸ್ಥೂಲ ತನುವಿನ
ಪೂರ್ವಾಶ್ರಯವನ್ನು ಕಳೆದು ಇಷ್ಟಲಿಂಗ ಸಂಬಂಧವನ್ನು ಮಾಡುವನು.
ಈ ಕಾರ್ಯಕ್ರಮಗಳೇ ಮೇಲೆ ಹೇಳಿದ ಸಿದ್ಧಾಂತ ಶಿಖಾಮಣಿಯೇ
ಮುಂತಾದ ಆಧಾರಗಳ ರೀತ್ಯಾ ಕ್ರಮವಾಗಿ ವೇಧಾ ಮಂತ್ರ ಮತ್ತು
ಕ್ರಿಯಾ ದೀಕ್ಷೆಗಳೆನಿಸಿಕೊಳ್ಳುವವು. ಇದು ಯಾರಿಗಾದರೂ ಅರ್ಥ
ವಾಗತಕ್ಕ ಮಾತಾಗಿದೆ. ಇನ್ನು ಅಷ್ಟಾವರಣಗಳು ಶಿಶುವಿನ ಶಿವದೀಕ್ಷೆ
ಯಲ್ಲಿ ಹೇಗೆ ಆಚರಿಸಲ್ಪಡುತ್ತವೆಂಬುದನ್ನು ನೋಡೋಣ. ಅಷ್ಟಾವರಣ
ವೆಂದರೆ ಗುರು, ಲಿಂಗ, ಜಂಗಮಲಿಂಗ, ವಿಭೂತಿ, ರುದ್ರಾಕ್ಷಿ, ಮಂತ್ರ,
ಪಾದೋದಕ, ಪ್ರಸಾದಗಳೆಂಬುದು ಹಿಂದೆಯೇ ಹೇಳಲಾಗಿದೆ. ಶಿಶುವಿಗೆ
ಲಿಂಗವನ್ನು ಧರಿಸುವವನೇ ಗುರು. ಶಿಶುವಿನ ಕಿವಿಯಲ್ಲಿ ಉಪದೇಶಿಸ
ಲಾಗುವ ಮಂತ್ರವೇ ಮಂತ್ರ. ಶಿಶುವಿಗೆ ಧಾರಣೆ ಮಾಡಲಾಗುವ ಲಿಂಗವೇ
ಲಿಂಗ. ಲಿಂಗವನ್ನು ಧರಿಸುವದಕ್ಕೆ ಮುಂಚಿತವಾಗಿಯೇ ಗುರುವು ಶಿಶು
ವಿಗೆ ವಿಭೂತಿಯನ್ನು ಪೂಸಿ ರುದ್ರಾಕ್ಷಿಯನ್ನು ಧರಿಸುವನು. ಈ ವಿಭೂತಿ
ರುದ್ರಾಕ್ಷಿಗಳೇ ವಿಭೂತಿ ರುದ್ರಾಕ್ಷಿ. ಲಿಂಗಧಾರಣೆಯಾದ ಮೇಲೆ ಶಿಶು
ವನ್ನು ಜಂಗಮ ಪಾದದ ಮೇಲೆ ಇಟ್ಟು ನಮಿಸಲಾಗವುದು. ಈ ಜಂಗ
ಮವೇ ಜಂಗಮ. ಈ ಜಂಗಮದ ಪಾದವನ್ನು ಉದಕದಿಂದ ಅಭಿಷೇ
ಕಿಸಿ ಆ ಉದಕವನ್ನು ಶಿಶುವಿನ ಲಿಂಗದ ಮೇಲೆ ಬರೆದು ಆ ಉದಕ
ವನ್ನು ಶಿಶುವಿನ ಬಾಯಿಗೆ ಕೊಡಲಾಗುವದು. ಈ ಉದಕವೇ ಪಾದೋ
ದಕ. ಅನಂತರ ಜಂಗಮಕ್ಕೆ ಉಣಬಡಿಸಿ ಆ ಜಂಗಮ ಒಕ್ಕು ಮಿಕ್ಕ
ಪದಾರ್ಥವನ್ನು ಶಿಶುವಿನ ಲಿಂಗಕ್ಕೆ ನಿವೇದಿಸಿ ಆ ಪದಾರ್ಥವನ್ನು ಶಿಶು
ವಿನ ಬಾಯಿಗೆ ಕೂಡಲಾಗುವದು. ಇದೇ ಪ್ರಸಾದ. ಇದೀಗ ಶಿಶು
ವಿನ ಶಿವದೀಕ್ಷೆಯಲ್ಲಿ ಅಷ್ಟಾವರಣಗಳು ತಮ್ಮ ತಮ್ಮ ಪವಿತ್ರ ಕೆಲ

ಸಗಳನ್ನು ಮಾಡುವ ಕ್ರಮ. ಈ ರೀತಿಯಲ್ಲಿ ಲಿಂಗಧಾರಿಗಳ ಹೊಟ್ಟೆ
ಯಲ್ಲಿ ಮಕ್ಕಳು ಹುಟ್ಟಿದಾಗ ಮಾಡತಕ್ಕ ಲಿಂಗಧಾರಣ ಕಾರ್ಯ
ಕ್ರಮವು ಶ್ರೀ ಶಿವಮೂರ್ತಿ ಶಾಸ್ತ್ರಿಗಳವರು ಹೇಳುವಂತೆ ಶಿವದೀಕ್ಷೆ
ಎನಿಸಿಕೊಳ್ಳದಿದ್ದರೆ— ಶಿವಶರಣರ "ಲಿಂಗ ಮುಟ್ಟಲೊಡನೆ ಶಿವಕುಲವ
ಹುದು ತಪ್ಪದು," "ಲಿಂಗಭಕ್ತನೇ ಕುಲಜ," "ಲಿಂಗವಿದ್ದವರ ಮನೆ
ಕೈಲಾಸ" ಇವೇ ಮುಂತಾದ ಅಸಂಖ್ಯಾತ ಶಿವಶರಣರ ಅಭಯ ಸಂ
ಪತ್ತುಗಳು ಪುಸಿಯಾಗಿ ಹೋಗುವುದಿಲ್ಲವೇ? ಎಂದ ಮೇಲೆ ಶಿಶುವಿನ
ಶಿವದೀಕ್ಷೆಯು ಮೇಲೆ ಕಂಡ ಎಲ್ಲ ಕಾರಣಗಳಿಂದ ವೀರಶೈವ ಧರ್ಮ
ಸ್ವೀಕಾರದ ಶಿವದೀಕ್ಷೆಯಷ್ಟೇ ಪರಿಪೂರ್ಣವಾದುದೂ ಫಲಕಾರಿಯಾ
ದುದೂ ಆಗಿದೆಯೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಯಿತು.

ಈ ಸಂದರ್ಭದಲ್ಲಿ ಯಾರಾದರೂ ಒಂದು ಕುಂಟು ಆಕ್ಷೇಪಣೆ
ಯನ್ನು ಒಡ್ಡಬಹುದಾಗಿದೆ. ಶಿಶುವಿನ ಶಿವದೀಕ್ಷೆಯು ವೀರಶೈವ ಧರ್ಮ
ಸ್ವೀಕಾರದ ಶಿವದೀಕ್ಷೆಯಷ್ಟು ದೀರ್ಘವಾಗಿಯೂ ಆಡಂಬರವಾಗಿಯೂ
ನಡೆಯದೆ ಸ್ಥೂಲವಾಗಿ ನಡೆಯುತ್ತದೆ ಎಂಬುದೇ ಆ ಕುಂಟು ಆಕ್ಷೇ
ಪಣೆ. ಆದರೆ ಈ ಸ್ಥೂಲತೆಗೆ ಸಪ್ರಮಾಣವಾದ ಮತ್ತು ಸಶಾಸ್ತ್ರೀಯ
ವಾದ ಕಾರಣವುಂಟು. ತಂದೆತಾಯಿಗಳು ಲಿಂಗಧಾರಿಗಳಾದುದರಿಂದ
ಶಿಶುವಿನ ಬೆಳವಣಿಗೆಯು ಲಿಂಗಧಾರಿಯಾದ ತಾಯಿಯ ಗರ್ಭದಲ್ಲಿಯೂ
ಜನನವಾದ ಮೇಲೆ ಲಿಂಗಧಾರಿಗಳಾದ ತಾಯಿತಂದೆಗಳ ಮತ್ತು ಬಂಧು
ಗಳ ಸಮೂಹದಲ್ಲಿ ನಡೆಯುತ್ತದೆ. ಲಿಂಗಧಾರಿಗಳ ಆಚರಣೆಯನ್ನು
ಅದು ಸದಾ ನೋಡುತ್ತದೆ, ಕೇಳುತ್ತದೆ, ಮತ್ತು ಅನುಕರಣಮಾಡು
ತ್ತದೆ. ತಂದೆತಾಯಿಗಳು ಪ್ರತಿದಿನವೂ ಸ್ನಾನಶಿವಪೂಜೆಗಳನ್ನು ಮಾಡುವ
ಕಾಲಕ್ಕೆ ಮಗುವಿಗೂ ಸ್ನಾನಮಾಡಿಸಿ ಹತ್ತಿರ ಕೂಡಿಸಿಕೊಂಡು ಅದಕ್ಕೂ
ವಿಭೂತಿ ರುದ್ರಾಕ್ಷಿ ಧಾರಣಗಳನ್ನು ಮಾಡಿ ತಮ್ಮ ಲಿಂಗಪೂಜೆಯ
ಜೊತೆಗೆ ಶಿಶುವಿನ ಲಿಂಗಕ್ಕೂ ಅಭಿಷೇಕ ಮಾಡಿ ಪೂಜೆಮಾಡುತ್ತಾರೆ.
ಶಿಶುವು ಇದೆಲ್ಲವನ್ನೂ ನೋಡುತ್ತದೆ. ಸ್ವಲ್ಪ ಬೆಳವಣಿಗೆಯಾದ ಮೇಲೆ
ಸ್ನಾನವಾದ ಕೂಡಲೆ ಅದು ಮೌನವಾಗಿಯೇ ಶಿವಪೂಜೆಯ ಮನೆಗೆ
ಹೋಗಿ ತಂದೆತಾಯಿಗಳ ಪಕ್ಕದಲ್ಲಿ ಕುಳಿತು ಅವರನ್ನು ಅನುಕರಣ
ಮಾಡುತ್ತ ವಿಭೂತಿ, ರುದ್ರಾಕ್ಷಿಗಳನ್ನು ತಾನೇ ಧಾರಣಮಾಡಿಕೊಳ್ಳು
ತ್ತದೆ. ವಯಸ್ಸು ಹೆಚ್ಚಿದಂತೆಲ್ಲ ತಂದೆತಾಯಿಗಳು ಹೇಳುವ ಶಿವ

ಪೂಜಾಮಂತ್ರ ಮಂಗಳಾರತಿ ಪದ ವಚನ ಶ್ರೀ ರುದ್ರ ನಮಕ ಚಮ
ಕಾದಿಗಳನ್ನು ಹೃದ್ಗತಮಾಡಿಕೊಳ್ಳುತ್ತದೆ. ಸಂಪೂರ್ಣ ವಯಸ್ಸಿಗೆ ಬಂದ
ಮೇಲೆ ತಂದ ತಾಯಿಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಶಿವಪೂಜೆ
ಮುಂತಾದ ವೀರಶೈವ ಕ್ರಿಯೆಗಳನ್ನು ಆಚರಿಸಲು ಅದು ಸಮರ್ಥವಾ
ಗುತ್ತದೆ. ಈ ರೀತಿಯಲ್ಲಿ ಶಿಶು ದೆಸೆಯಲ್ಲಿ ಗುರುವು ಕರುಣಿಸಿದ ದೀಕ್ಷೆಯ
ಪ್ರಭಾವವು ಶಿಶುವು ಬೆಳಬೆಳದಂತೆಲ್ಲ ಹೆಚ್ಚುತ್ತ ಹೋಗಿ ಶಿಶುವು ಉತ್ತಮ
ಲಿಂಗಾಂಗಿಯಾಗಿಯೂ ಷಟ್‌ಸ್ಥಲ ಸಂಪನ್ನನಾಗಿಯೂ ಪರಿಣಮಿಸುತ್ತದೆ.
ಶಿಶುವಿನ ಶಿವದೀಕ್ಷೆಯು ಸ್ಥೂಲವಾಗಿ ನಡೆಯಿಸಲ್ಪಟ್ಟರೂ ಅದು ಇಷ್ಟೊಂದು
ಫಲಕಾರಿಯಾಗಿ ಪರಿಣಮಿಸುವುದಕ್ಕೆ ಕಾರಣವೆಂದರೆ ದೀಕ್ಷೆಯನ್ನು
ಶಿಶುದೆಸೆಯಲ್ಲಿ ಕೊಟ್ಟುದೇ. ಶಿಶುದೆಸೆಯಲ್ಲಿ ಯಾವುದು ಬಹು ಜಾಗ್ರತಿ
ಯಾಗಿಯೂ ಪರಿಣಾಮಿಕಾರಿಯೂ ಹಿಡಿಯುತ್ತದೆ, ಇದನ್ನು ಮನಶ್ಶಾ
ಸ್ತ್ರಜ್ಞರು ಒಪ್ಪಿಕೊಂಡಿರುತ್ತಾರೆ. "*Child is the father of the man*" ಎಂಬುದೇ ಅವರ ಸಿದ್ಧಾಂತ. ಇದರಿಂದಲೇ ಶಿಶು ಹುಟ್ಟಿದಾ
ಗಲೇ ಏಕೆ ಶಿಶುವು ಗರ್ಭದಲ್ಲಿರುವಾಗಲೇ ಎಂಟನೆಯ ತಿಂಗಳಿನಲ್ಲಿ
ಎಂದರೆ ಗರ್ಭದಲ್ಲಿ ಶಿಶುವಿಗೆ ಜ್ಞಾನೋದಯವಾದಾಗ್ಗೆ ಶಿವದೀಕ್ಷೆಯನ್ನು
ಮಾಡುವುದು ಶ್ರೇಷ್ಠವಾದುದೆಂದು ಪ್ರಾಜ್ಞರ ಮತವಿದೆ. ಈ ವಿಚಾ
ರಕ್ಕೆ ವೀರ ಅಭಿಮನ್ಯು, ಚಕ್ರವರ್ತಿ ನೇಪೋಲಿಯನ್, ಛತ್ರಪತಿ ಶಿವಾಜಿ,
ಷಟ್‌ಸ್ಥಲಸ್ಥಾಪನಾಚಾರ್ಯ ಜನ್ನಬಸವೇಶ್ವರ ಇವರುಗಳೇ ಒಳ್ಳೆಯ
ಉದಾಹರಣೆಗಳಾಗಿದ್ದಾರೆ. ಈ ಎಲ್ಲ ಕಾರಣಗಳಿಂದ ಶಿಶುದೆಸೆಯಲ್ಲಿ
ಲಿಂಗಧಾರಣದ ಹೆಸರಿನಲ್ಲಿ ಮಾಡತಕ್ಕ ಶಿವದೀಕ್ಷೆಯು ವೀರಶೈವ ಧರ್ಮ
ಸ್ವೀಕಾರದ ಕಾಲದಲ್ಲಿ ಶಿವದೀಕ್ಷೆಯ ಹೆಸರಿನಲ್ಲಿ ಮಾಡತಕ್ಕ ಶಿವದೀಕ್ಷೆ
ಯಷ್ಟೇ ಪರಿಪೂರ್ಣವಾದುದೂ ಪರಿಣಾಮಕಾರಿಯಾದುದೂ ಆಗಿದೆ.

ಶಿವದೀಕ್ಷೆಗೆ ಸಂಬಂಧಪಟ್ಟ ಇನ್ನು ಒಂದೆರಡು ವಿಚಾರಗಳನ್ನು
ಪ್ರತಿಪಾದಿಸಿ ಈ ಲೇಖನವನ್ನು ಮುಗಿಸುತ್ತೇನೆ. ಕೆಲವು ವೀರಶೈವರಲ್ಲಿ
ಇತ್ತೀಚೆಗೆ ಒಂದು ಹೊಸಪದ್ಧತಿಯು ಪ್ರಾರಂಭವಾಗಿದೆ. ಲಿಂಗಧಾರಿ
ಗಳ ಹೊಟ್ಟೆಯಲ್ಲಿ ಹುಟ್ಟಿ ಲಿಂಗಧಾರಣವನ್ನು ಪಡೆದವರಿಗೇ ಮತ್ತೊಮ್ಮೆ
ಲಿಂಗಧಾರಣವನ್ನು ಮಾಡುವುದೇ ಆ ಪದ್ಧತಿ. ಹೀಗೆ ಎರಡನೆಯ ಸಲ
ಮಾಡತಕ್ಕ ಲಿಂಗಧಾರಣೆಗೆ ಅವರು ಶಿವದೀಕ್ಷೆಯೆಂದು ಹೆಸರಿಟ್ಟಿದ್ದಾರೆ.
ಮೊದಲನೆಯ ಸಲ ಮಾಡಿದ ಎಂದರೆ ಶಿಶು ದೆಸೆಯಲ್ಲಿ ಮಾಡಿದ ಲಿಂಗ

ಧಾರಣವು ಶಿವದೀಕ್ಷೆಯಲ್ಲವೆಂಬ ಭ್ರಾಂತಿಯೇ ಇದಕ್ಕೆ ಕಾರಣ. ಲಿಂಗ
ಕಟ್ಟಿಕೊಂಡವರಿಗೇ ಮತ್ತೊಮ್ಮೆ ಲಿಂಗ ಕಟ್ಟಲಿಕ್ಕೆ ಹೋಗತಕ್ಕ ಈ
ಕಾರ್ಯವು ಅರ್ಥವಿಲ್ಲದ ವ್ಯರ್ಥ ಕಾರ್ಯವಾಗಿದೆ. "ತಲೆಶಿರೋಭಾರ"
ದಂತೆ ಭಾರವಾಗಿದೆ. ಹಾಡಿದ್ದೇ ಹಾಡುವ ದಾಸಣ್ಣನ ಕಥೆಯಾಗಿದೆ.
ಭಕ್ತರನ್ನೇ ಮತ್ತೊಮ್ಮೆ ಭಕ್ತರನ್ನಾಗಿ ಮಾಡತಕ್ಕ ಈ ಪದ್ಧತಿಯು ಕೆಲ
ವರಿಗೆ ಒಂದು ಪುಣ್ಯದ ಕಲಸವಾಗಿಯೇ ಪರಿಣಮಿಸಿದೆ. ಈ ಕಾರ್ಯ
ವನ್ನು ಕೆಲವು ವೀರಶೈವರು ಸಾಮೂಹಿಕವಾಗಿಯೂ ಮತ್ತೆ ಕೆಲವರು
ವೈಯ್ಯಕ್ತಿಕವಾಗಿಯೂ ನಡೆಯಿಸುತ್ತಿದ್ದಾರೆ. ಶಿವದೀಕ್ಷೆಯೆಂದರೇನು,
ಶಿವದೀಕ್ಷೆಯನ್ನು ಯಾರಿಗೆ ಯಾವ ಸನ್ನಿವೇಶದಲ್ಲಿ ಯಾವ ರೀತಿಯಲ್ಲಿ
ಅನುಗ್ರಹಿಸಬೇಕು, ಶಿವದೀಕ್ಷೆಯ ಮಹತ್ವವೇನು, ಅದರ ಗುರಿಯೇನು, ಫಲ
ವೇನು, ಎಂಬವೇ ವಿಚಾರಗಳನ್ನು ನಾವೀಗ ಮರೆತು ಬಿಟ್ಟಿದ್ದೇವೆ. ಶಿವಶರ
ಣರ ದೀಕ್ಷಾ ಪದ್ಧತಿಯನ್ನು ನಾವೀಗ ಬದಿಗೊತ್ತಿ ಬಿಟ್ಟಿದ್ದೇವೆ. ಶಿವಶರಣರು
ದೀಕ್ಷೆಗೆ ಬಹಳವಾದ ವ್ಯಾಪ್ತಿಯನ್ನು ಕೊಟ್ಟಿದ್ದರು. ಅವರು ದೀಕ್ಷೆಯನ್ನು
ಮತ ಪ್ರಚಾರಕ್ಕಾಗಿಯೇ ನಿರ್ಮಿಸಿದರು. ಭಾರತ ಭೂಮಿಯ ಪ್ರತಿ
ಯೊಬ್ಬ ಭಾರತೀಯನನ್ನೂ ಪುನೀತನನ್ನಾಗಿ ಮಾಡಬೇಕೆಂಬುದೇ ಅವರ
ಪವಿತ್ರ ಉದ್ದೇಶವಾಗಿತ್ತು. ಪತಿತರನ್ನು ಪಾವನರನ್ನಾಗಿಯೂ ಪಾಪಿಗ
ಳನ್ನು ಪುಣ್ಯವಂತರನ್ನಾಗಿಯೂ ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿಯೂ
ಮಾಡಿ ಲೋಕ ಸೇವೆ ಮಾಡಬೇಕೆಂಬುದೇ ಅವರ ಜೀವನದ ಉಸಿರಾಗಿ
ದ್ದಿತು. ಇದಕ್ಕಾಗಿಯೇ ಅವರು ದೀಕ್ಷೆಯನ್ನು ಏರ್ಪಡಿಸಿದರು. ಶಿವ
ಶರಣರ ಯಾವ ವಚನಗಳನ್ನು ನೋಡಿದರೂ ಅವುಗಳಲ್ಲಿ 'ಭವಿಗಳನ್ನು
ಭಕ್ತನನ್ನಾಗಿ ಮಾಡುವುದು, ಅಲಿಂಗಿಗಳನ್ನು ಲಿಂಗಿಗಳನ್ನಾಗಿ ಮಾಡು
ವುದು, ಮಾಂಸಶರೀರಗಳನ್ನು ಮಂತ್ರ ಶರೀರಗಳನ್ನಾಗಿ ಮಾಡುವುದು'
ಈ ವಿಚಾರಗಳೇ ತುಂಬಿ ತುಳುಕುತ್ತವೆ. ಈ ಕಾರಣದಿಂದಲೇ ಶಿವ
ಶರಣರು ಶಿವದೀಕ್ಷೆಯನ್ನು ಪುಣ್ಯದ ಕೆಲಸವೆಂದು ಭಾವಿಸಿ ಅದನ್ನು
ಪ್ರತಿಯೊಬ್ಬ ವೀರಶೈವನೂ ತನ್ನ ಶಕ್ತಿಯಿದ್ದ ಮಟ್ಟಿಗೆ ಆಚರಣೆಗೆ
ತಂದು ಲೋಕೋಪಕಾರ ಮಾಡಬೇಕೆಂದು ಕಟ್ಟು ಮಾಡಿದರು. ಅವರ
ಕಾಲದಲ್ಲಿ ಶಿವದೀಕ್ಷೆ ಅಥವಾ ಲಿಂಗಧಾರಣೆಯ ಮೂಲಕ ಲಕ್ಷೋಪ
ಲಕ್ಷ ಜನರು ಲಿಂಗವಂತ ಧರ್ಮಕ್ಕೆ ಸೇರಿಕೊಂಡು ಪುನೀತರಾದರು.
ಆದರೆ ಈ ಹೊತ್ತಿಗೆ ಆ ಶಿವಶರಣರ ಶಕ್ತಿ ಸಾಹಸಗಳೂ ಉತ್ಸಾಹ
ಔದಾರ್ಯಗಳೂ ತ್ಯಾಗ ಬುದ್ಧಿ ವಿಶಾಲ ಭಾವನೆಗಳೂ ನಮ್ಮಲ್ಲಿಲ್ಲದೆ

ಹೋಗಿದೆ. ಶಿವಶರಣರು ಆಚರಿಸಿದ 'ಭವಿಗಳನ್ನು ಭಕ್ತರನಾಗಿ' ಮಾಡ ತಕ್ಕ ಕಾರ್ಯಕ್ರಮವನ್ನು ಆಚರಿಸಲು ನಮಗೆ ಔದಾರ್ಯವೂ ಶಕ್ತಿಯೂ ಸಾಲದೆ ಅಥವಾ ಇಲ್ಲಿಗೆ ಲಿಂಗ ಕಟ್ಟಿಕೊಂಡವರಿಗೆ ಮತ್ತೊಮ್ಮೆ ಲಿಂಗ ಕಟ್ಟುವ ಅಪಹಾಸ್ಯಕ್ಕೆ ಗುರಿಯಾಗಿದ್ದೇವೆ. ಹೊಟ್ಟೆ ತುಂಬಿದವರಿಗೆ ಅನ್ನವನ್ನು ಹಾಕುವ ಜಾಣತನಕ್ಕೆ ಪಕ್ಕಾಗಿದ್ದೇವೆ. ಈ ವಿಚಾರವನ್ನು ದೀರ್ಘವಾಗಿ ಪರ್ಯಾಲೋಚಿಸಿದಲ್ಲಿ ವೀರಶೈವರ ಶಕ್ತಿ ಎಷ್ಟರ ಮಟ್ಟಿಗೆ ಕುಂದಿ ಕುಗ್ಗಿಹೋಗಿದೆಯೆಂಬುದು ವ್ಯಕ್ತವಾಗುತ್ತದೆ. ಲಿಂಗ ಕಟ್ಟಿಕೊಂಡವರಿಗೇ ಮತ್ತೊಮ್ಮೆ ಲಿಂಗ ಕಟ್ಟುವುದಕ್ಕೆ ಹೋಗತಕ್ಕ ಕಾರ್ಯಕ್ರಮವನ್ನು ಶಿವದೀಕ್ಷೆಯೆನ್ನುವದಕ್ಕಿಂತಲೂ "ವೀರಶೈವರ ಅಶಕ್ತಿ ಪ್ರದರ್ಶನ" ವೆಂದಾಗಲೀ ಅಥವಾ "ವೀರಶೈವ ಸಂಸ್ಕೃತಿಯ ಅವರೋಹಣ" ವೆಂದಾಗಲೀ ಅಥವಾ "ಶಿವದೀಕ್ಷೆ ಅಥವಾ ಲಿಂಗಧಾರಣೆಯ ಅಪಭ್ರಂಶ" ವೆಂದಾಗಲೀ ಕರೆದರೆ ಹೆಚ್ಚು ಒಪ್ಪುವುದಿಲ್ಲವೇ? ಕ್ಷಮಿಸಿ. ಈ ವಿಚಾರಗಳನ್ನು ನಾನು ಯಾರ ಮನಸ್ಸನ್ನೂ ನೋಯಿಸಬೇಕೆಂದು ಹೇಳುತ್ತಿಲ್ಲ. ವೀರಶೈವರ ಅಶಕ್ತಿಯನ್ನೂ ವೀರಶೈವ ಧರ್ಮದ ಕ್ಷೀಣತೆಯನ್ನೂ ನೋಡಿ ಕಣ್ಣೀರಿಡುತ್ತಾ ಈ ಮಾತುಗಳನ್ನು ಹೇಳುತ್ತಿದ್ದೇನೆ. ಈಗಲಾದರೂ ವೀರಶೈವರು ಜಾಗ್ರತರಾಗಿ ತಮ್ಮ ಕರ್ತವ್ಯವೇನೆಂಬುದನ್ನು ಅರಿಯಬೇಕು. ತಮ್ಮ ಕೈಲಾದವುಟ್ಟಿಗೆ ಲೋಕ ಸೇವೆಯನ್ನು ಮಾಡಲು ಮುಂದೆ ಬರಬೇಕು. ಶಿವಶರಣನನ್ನು ನೆನೆಸಿಕೊಂಡು ಧೈರ್ಯದಿಂದ ಮುಂದೆ ಅಡಿಯಿಡಬೇಕು.

ಇನ್ನು ಒಂದೇ ಒಂದು ವಿಚಾರ. ಶ್ರೀ ಶಿವಮೂರ್ತಿ ಶಾಸ್ತ್ರಿಗಳವರು ತಮ್ಮ ಲೇಖನದಲ್ಲಿ "ವೀರಶೈವರು ವೈದಿಕರ ಷೋಡಶ ಕರ್ಮಗಳಲ್ಲಿ. ಶ್ರಾದ್ಧಾದಿ ಪಟ್ಕರ್ಮಗಳನ್ನು ಬಿಟ್ಟು, ನಾಮಕರಣ, ಲಿಂಗಧಾರಣ, ವಿವಾಹ, ಶಿವದೀಕ್ಷೆ (ಉಪನಯನ) ಮೊದಲಾದ ದಶಸಂಸ್ಕಾರಗಳನ್ನು ಅಂಗೀಕರಿಸಿದ್ದಾರೆ" ಎಂದು ಬರದು "ಶಿವದೀಕ್ಷೆ" ಎಂಬ ಪದದ ಪಕ್ಕದಲ್ಲಿ ಅವರಣ ಚಿಹ್ನೆಯೊಳಗೆ "ಉಪನಯನ" ಎಂಬ ಪದವನ್ನು ಕಾಡಿಸಿ ಶಿವದೀಕ್ಷೆಯು ಉಪನಯನವೇ ಆಗಿದೆ ಎಂಬ ಅಥವಾ ಉಪನಯನಕ್ಕೆ ಸಮವಾದುದಾಗಿದೆಯೆಂಬ ಅರ್ಥಬರುವಂತೆ ಮಾಡಿದ್ದಾರೆ. ವಿಚಾರಮಾಡಿ ನೋಡಿದರೆ ಶಿವದೀಕ್ಷೆಯು ಉಪನಯನವೂ ಆಗುವುದಿಲ್ಲ. ಉಪನಯನಕ್ಕೆ ಸಮಾನವೂ ಆಗುವುದಿಲ್ಲ. ಈ

ವಿಚಾರದಲ್ಲಿ ಪಂಡಿತ ಶ್ರೀ ವೈ. ನಾಗೇಶ ಶಾಸ್ತ್ರಿಗಳವರಿಂದ ಟೀಕಿಸಲ್ಪಟ್ಟು ಶಿವಾನುಭವ ಗ್ರಂಥಮಾಲೆಯಲ್ಲಿ ೧೮ನೆಯ ಗ್ರಂಥವಾಗಿ ಪ್ರಕಟಿಸಲ್ಪಟ್ಟ ಮೊಗ್ಗೆಯ ಮಾಯಿದೇವ ಕೃತ "ಶಿವಾನುಭವ ಸೂತ್ರ"ದ ಒಂದು ಭಾಗವನ್ನು ಇಲ್ಲಿ ಉದ್ಧರಿಸುತ್ತೇನೆ.—

ಗರ್ಭಾಷ್ಟಮೇಬ್ದೇ ಕುರ್ವೀತ ಬ್ರಾಹ್ಮಣಸ್ಯೋಪನಯನಂ" ॥ಮನುಸ್ಮೃತಿ॥ ಎಂದು ಅಷ್ಟಮ ವರ್ಷದಲ್ಲಿ ಉಪನಯನ ಸಂಸ್ಕಾರವು ಹೇಳಲ್ಪಡುವುದು. ಈ ಸಂಸ್ಕಾರದಿಂದ ಶರೀರವು ಕರ್ಮಾಧಿಕೃತವಾಗುವುದು. ಆದರೆ ಶರೀರದ ಜಡಭಾವವು ಹಿಂಗುವುದಿಲ್ಲ. ಆದುದರಿಂದಲೇ ಬ್ರಹ್ಮೋಪನಿಷತ್ತಿನಲ್ಲಿ "ಕರ್ಮಣ್ಯಧಿಕೃತಾ ಯೇ ತು ವೈದಿಕೇ ಬ್ರಾಹ್ಮಣಾದಯಃ। ತೈಃ ಸಂಧಾರ್ಯಮಿದಂ ಸೂತ್ರಂ ಕ್ರಿಯಾಂಗಂ ತದ್ಧಿ ವೈ ಸ್ಮೃತಂ" ಉಪನಯನ ಸಂಸ್ಕಾರದಿಂದಾದ ಯಜ್ಞೋಪವೀತ ಧಾರಣವು ಯಾಗಾದಿ ವೈದಿಕ ಕರ್ಮಾಧಿಕಾರಪ್ರದವೆಂದು ಹೇಳಲ್ಪಟ್ಟಿದೆ. ಈ ಕರ್ಮಕಲಾಪಕ್ಕೆ ಸ್ವರ್ಗಾದಿ ಲೋಕಪ್ರಾಪ್ತಿರೂಪವಾದ ಫಲವಲ್ಲದೆ ಅನ್ಯವಿಲ್ಲವು. ಇದನ್ನು ತಿಳಿದ ಪ್ರಾಕೃತ ಬ್ರಾಹ್ಮಣನು ಪುಣ್ಯಕ್ಷಯಾನಂತರದಲ್ಲಿ ದುಃಖಪ್ರದವಾದ ಸ್ವರ್ಗಾದಿ ಲೋಕವನ್ನುಂಟು ಮಾಡುವ ಶಿಖಾಯಜ್ಞೋಪವೀತವನ್ನೂ ಯಜ್ಞಸಹಧರ್ಮಚಾರಿಣಿಯಾದ ಪತ್ನಿಯನ್ನೂ ತ್ಯಜಿಸಿ, ಜ್ಞಾನನಿಷ್ಠನಾಗಿ ಮುಕ್ತನಾಗಲು ಹವಣಿಸುವನು. ತತ್ಪೈರೇಭಿರ್ನಿಬದ್ಧಾತ್ಮಾ ಸರ್ವಧರ್ಮೈಶ್ಚ ಸಂಯುತಃ। ನಾನ್ಯೇನ ಶಕ್ಯತೇ ಮೋಕ್ತುಂ ಮುಕ್ತ್ವಾ ದೀಕ್ಷಾಂ ಶಿವಾತ್ಮಿಕಾಂ॥" ಸರ್ವಜ್ಞಾನೋತ್ತರ ಸೂತ್ರ॥ ಇತ್ಯಾದಿ ಪ್ರಮಾಣದಿಂದ ಶಿವನ ಶಕ್ತಿರೂಪವಾದ ಶಿವದೀಕ್ಷೆಯನ್ನು ಬಿಟ್ಟು ಆತ್ಮೈಕತ್ವ ಜ್ಞಾನಾದಿಯಾದ ಮತ್ತೊಂದು ಪಾಯದಿಂದ ಮಲಪಾಕಾದಿ ಸರ್ವಧರ್ಮಗಳಿಂದಲೂ ತತ್ವಗಳಿಂದಲೂ ಬಂಧಿಸಲ್ಪಟ್ಟ ಆತ್ಮನು ಬಂಧಮುಕ್ತತೆಗೋಸುಗ ಸಮರ್ಥನಾಗಿ ಮಾಡಲ್ಪಡಲಾರನು ಎಂಬುದಾಗಿ ತಿಳಿದುಬರುವುದು. ತತ್ವಮಸ್ಯಾದಿ ವಾಕ್ಯದಿಂದ ಪಡೆಯುವ ಜ್ಞಾನೋಪದೇಶವು ಈ ದೀಕ್ಷಾಂಗವಾಗಿರುವುದಲ್ಲದೆ ಬೇರಿಲ್ಲವೆಂಬುದು ಸೂತ್ರಪ್ರತಿಪಾದಿತ ವಿಷಯದಿಂದಲೇ ತಿಳಿದುಬರುವುದು. ದೀಕ್ಷಿತನೆಂದರೆ ಮುಕ್ತಾತ್ಮನೆಂಬುದೇ ವೀರಶೈವ ಸಂಪ್ರದಾಯವು. ದೀಕ್ಷಾನಂತರದಲ್ಲಿ ಆಚ

ಸುವ ಜ್ಞಾನಕ್ರಿಯೆಗಳು ಲೋಕಹಿತಾರ್ಥವಾದವುಗಳೆಂದು ಹೇಳ ಲ್ಪಡುವವು. ಆದುದರಿಂದ ದೀಕ್ಷಾಸಂಸ್ಕಾರವು ಉಪನಯನ ಸಂಸ್ಕಾ ರಕ್ಕೆ ಸಮಾನವಾದುದಲ್ಲವು. ಪ್ರಾಕೃತನು ಉಪನಯನದಲ್ಲಿ ಹೊಂದಿದ ಶಿಖಾಯಜ್ಞೋಪವೀತವನ್ನು ಸನ್ಯಾಸ ಸ್ವೀಕಾರ ಕಾಲಕ್ಕೆ ತ್ಯಜಿಸುವಂತೆ ವೀರಶೈವನು ದೀಕ್ಷಿತನಾಗಿ ತ್ಯಜಿಸಿತಕ್ಕುದಾವುದಿ ಲ್ಲವು. ಆತನು ತ್ಯಜಿಸತಕ್ಕ ಪ್ರಾಕೃತಾಚಾರಗಳನ್ನು ದೀಕ್ಷಾ ಪೂರ್ವ ದಲ್ಲಿಯೇ ತ್ಯಜಿಸಿರುವನು. ಈ ಕಾರಣದಿಂದಲೇ ಯಥಾ ಮ ತೀಷು ತುರೀಯತ್ವೇನ ಶಸ್ಯತೇ॥ ಸನ್ಯಾಸ ಇತ್ಯಯಂ ದೇವಿ ವೀರ ಶೈವಸ್ತಥಾಶ್ರಮಃ॥" ಅಂದರೆ ಪ್ರಾಕೃತಮತಗಳಲ್ಲಿ ಚತುರ್ಥಾ ಶ್ರಮವೆಂದು ಪ್ರಶಸ್ತಿಯನ್ನು ಪಡೆದ (ಮುಕ್ತಿ ಹೇತುವಾದ ಜ್ಞಾನದ ಅರ್ಜನೆಗೆ ಮುಖ್ಯವಾದುದೆಂದು ನೆಗಳ್ತೆವಡೆದ) ಯಾವ ಸನ್ಯಾಸ ವಿದೆಯೋ ಅದರಂತೆಯೇ ಈ ವೀರಶೈವಾಶ್ರಮವಿರುವುದು. ಅಂದರೆ ಸನ್ಯಾಸವನ್ನು ಗ್ರಹಿಸಿದ ಪ್ರಾಕೃತನಿಗೂ ದೀಕ್ಷಿತನಾದ ವೀರಶೈವನಿಗೂ ಸಾಮ್ಯವಿರುವುದೆಂದು ಪಾರಮೇಶ್ವರಾಗಮವು ಹೇಳುತ್ತಿರುವುದು. ಇದರಿಂದ ದೀಕ್ಷೆಯು ಉಪನಯನಕ್ಕೆ ಸಮಾನವು ಅಥವಾ ದೀಕ್ಷೆಯೇ ಉಪನಯನವು ಎಂದು ಹೇಳುವುದು ಅವಿಚಾರ ರಮ ಣೀಯವಾಗಿರುವುದು." (ಶಿವಾನುಭವ ಸೂತ್ರ ೫೩ ಮತ್ತು ೫೪ ನೆಯ ಪುಟಗಳು.)

ಈ ಕಾರಣದಿಂದ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯು ಉಪ ನಯನವೂ ಅಲ್ಲ, ಉಪನಯನಕ್ಕೆ ಸಮಾನವೂ ಅಲ್ಲ.

ಉಪಸಂಹಾರ.

ಈ ರೀತಿಯಲ್ಲಿ ವಿವೇಚಿಸಲಾದ ಸಪ್ರಮಾಣವಾದ ಮತ್ತು ಸಶಾ ಸ್ತ್ರೀಯವಾದ ಮೇಲೆ ಕಂಡ ಎಲ್ಲ ಕಾರಣಗಳಿಂದ ಶಿವದೀಕ್ಷೆ ಲಿಂಗ ಧಾರಣೆಗಳು ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಹೇಳುವಂತೆ ಭಿನ್ನವಾದ ಪುಗಳಲ್ಲ. ಅವೆರಡೂ ಒಂದೇ ಕಾರ್ಯಕ್ರಮವಾಗಿವೆ. ಶಿವದೀಕ್ಷೆಯಲ್ಲಿ ಲಿಂಗಧಾರಣವಿದೆ. ಲಿಂಗಧಾರಣೆಯಲ್ಲಿ ಶಿವದೀಕ್ಷೆಯಿದೆ. ಶಿವದೀಕ್ಷೆಯು ಲಿಂಗಧಾರಣೆಯಲ್ಲಿ ಮುಕ್ತಾಯಗೊಳ್ಳಬೇಕು. ಲಿಂಗಧಾರಣವು ಶಿವದೀ ಕ್ಷೆಯಲ್ಲಿ ಆಚರಿಸಲ್ಪಡದೇಕು. ಒಂದನ್ನು ಬಿಟ್ಟು ಮತ್ತೊಂದಿಲ್ಲ. ಅವು

ಹಾಸುಹೊಕ್ಕುಗಳಂತೆ ಒಂದಕ್ಕೊಂದು ಹೆಣೆದುಕೊಂಡಿವೆ. ಎಂದಮೇಲೆ "ಇಂದು ವೀರಶೈವ ಸಮಾಜದಲ್ಲಿ ಹಲವರು ದೀಕ್ಷಾಹೀನರಾಗಿರುವುದನ್ನು ನಾವು ನೋಡುತ್ತಿದ್ದೇವೆ" ಎಂಬ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರ ಮಾತು ನ್ಯಾಯವಾದುದಲ್ಲ.

ಕನ್ನಡ ಸಂಸ್ಕೃತಿಯ ಮುಖ್ಯಾಂಗಗಳಾವುವು ?

ಲೇಖಕ:— ಪುರಾಣಿಕ ಬುದ್ಧಯ್ಯಾ ಸ್ವಾಮಿಗಳು ಧಾರವಾಡ.

ಕರ್ನಾಟಕ ದೇಶದ ಸಂಸ್ಕೃತಿಯ ಮುಖ್ಯಾಂಗಗಳೇ ಕನ್ನಡ ಸಂಸ್ಕೃತಿಯ ಮುಖ್ಯಾಂಗಗಳಾಗಿರುವವು. ಅವುಗಳಲ್ಲಿ ಧರ್ಮ, ವಾಙ್ಮಯ, ತತ್ವಜ್ಞಾನ, ಶಿಲ್ಪಕಲೆ, ರಸಾಯನ ಶಾಸ್ತ್ರ, ಅರಸು ಮನೆತನಗಳು, ರಾಜ್ಯಾಡಳಿತೆ, ರಾಜಕಾರಣ ಹಾಗೂ ಗಾಯನ ಕಲೆ, ಮೊದಲಾದವುಗಳೇ ಬಹಳೇ ಪ್ರಾಮುಖ್ಯವಾಗಿರುವವು. ಇದರ ಸತ್ಯತೆಯನ್ನು ಓದುಗರು ಕೆಳಗೆ ಕಾಣಿಸಿದ ಅರಸುಮನೆತನಗಳ ಪ್ರಾಚೀನ ಇತಿಹಾಸದಿಂದ ಮನಗಾಣಬಹುದು.

ಕ್ರಿ. ಶ. ೨೦೫ ವರ್ಷಗಳ ಪೂರ್ವದಲ್ಲಿ ಎಲೆಲಾ ಎಂಬುವ ಚೋಳ ದೇಶದ ಅರಸನು ಮೈಸೂರ ದಂಡಿನ ಸಹಾಯದಿಂದ ಸಿಲೋನವನ್ನು ಗೆದ್ದನು. ೫ನೆಯ, ೬ನೆಯ, ೭ನೆಯ ಶತಮಾನಗಳಲ್ಲಿ ಆಳುತ್ತಿದ್ದ ಕೊಂಕಣದ ಮಯೂರರಸರು ಪಾಂಡ್ಯರ ಸೇನಾನಾಯಕನಾದ ಮೆಹರನ ಮೇಲೆ ಸಾಗಿ ಹೋಗುವ ಕೋಸರಂಗೆ ಸಹಾಯ ಮಾಡಿದವರು ಕರ್ನಾಟಕಸ್ಥರೇ. ೭ನೆಯ ಶತಮಾನದಲ್ಲಿ ಪಾಂಡ್ಯದೇಶವನ್ನು ಕೈವಶ ಮಾಡಿಕೊಂಡ ಕಲಭ್ರ ಅರಸರು ಕರ್ನಾಟಕದವರೇ. ೮ನೆಯ ಶತಮಾನದ ಮಧ್ಯದಲ್ಲಿ ಕಂಚಿಯ ಪಲ್ಲವ, ಕೇರಳ, ಪಾಂಡ್ಯ, ಚೋಳ ಅರಸರನ್ನು ಸೋಲಿಸಲು ಸಹಾಯ ಮಾಡಿದವರು ಕರ್ನಾಟಕದ ದಂಡಾಳುಗಳೆಂದು ಪ್ರತೀತಿಯಿದೆ.

ಮೊದಲಿನ ಕಾಲದ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯಸಣ, ಸೇವುಣ, ಕಲಭೂರ್ಯ, ಕಲಚೂರ್ಯ, ರಟ್ಟ, ಶಿಲಾಹಾರ, ಕೊಂಗಾಳ್ವ, ಚೆಂಗಾಳ್ವ, ಸೈಂದ, ಬಾಣ, ನೋಣಂಬ, ವೈದುಂಬ, ಸಾಂತರ, ಸೇನಾವರ, ಪುನ್ನಾಡ, ವಿಜಯನಗರ, ಮೈಸೂರ, ಕುರ್ಗ, ಕಳದಿ, ಬೀಳಗಿ, ಹಾಗಲವಾಡಿ, ಉಮ್ಮತ್ತೂರು, ನುಗ್ಗೇಹಳ್ಳಿ, ಬೇಲೂರ, ಸುಗಟೂರ, ಹದಿನಾಡು, ಮುಡಿಗೇರೆ, ಚಿತ್ರಕಲ್ಲದುರ್ಗ, ನಿಡುಗಲ್ಲು, ಜನ್ನಪಟ್ಟಣ, ಮೂಗಡಿ, ಎಲಹಂಕ, ಸಂತೆಬೆನ್ನೂರ, ಪಿರಿಯಪಟ್ಟಣ, ಸ್ವಾದಿ, ಚಿಕ್ಕನಾಯಕನಹಳ್ಳಿ, ಮದ್ಗರಿ, ಬಿಜ್ಜಾವರ ಮೊದಲಾದ ಅರಸರು ಹಾಗೂ ಪಾಳೆಯಗಾರರು ಕರ್ನಾಟಕದವರೇ. ಸದ್ಯದಲ್ಲಿ ಕರ್ನಾಟಕಮೊಕಗೆ ಜೀವಿಸಿರುವ ವೇಸಾಯರಾದರೂ ಹಿಂದಿನ ಕಾಲದ ಕರ್ನಾಟಕದ ಸಣ್ಣದೊಡ್ಡ ಅರಸರ ವಂಶಜರೇ.

ನೇಪಾಳ ಹಾಗು ಗುಜರಾತದ ಅರಸುಮನೆತನಗಳು ಕರ್ನಾಟಕವೇಕದವು. ಬಂಗಾಲದ ಸೇನರು ತಾವು ಕರ್ನಾಟಕದ ಅರಸು ಮನೆತನದವರ ವಂಶಿಕರೆಂದು ಹೇಳಿಕೊಳ್ಳುವರು. ಕನೋಜ ಅರಸರು ಕರ್ನಾಟಕದ ನಂದಪಾಲ ಅರಸರ ವಂಶಿಕರೆಂದು ಹೇಳುವರು. ಜೋಧಪುರ ಹಾಗೂ ಬಿಕಾನೇರದ ರಾಠೋಡರಸರು ಕರ್ನಾಟಕದ ಅರಸು ಮನೆತನದವರೆಂದು ಹೇಳುವರು. ಕಳಿಂಗ ದೇಶದ ಗಂಗರು ಹಾಗೂ ಕದಂಬರು ಕರ್ನಾಟಕ ದೇಶದ ಗಂಗ ಹಾಗೂ ಕದಂಬ ಅರಸರ ವಂಶಿಕರೆಂದು ಹೇಳಿಕೊಳ್ಳುವರು. ಪೂರ್ವ ಬಂಗಾಲದ ಅರಸರಾದರೂ ಕರ್ನಾಟಕದವರೇ. ಇದರಂತೆ ಅನೇಕ ಧರ್ಮ ಸಂಸ್ಥಾಪಕರೂ ಧಾಪ್ಯಕಾರರೂ ಕರ್ನಾಟಕದವರೇ ಆಗಿರುವರು. ಇದನ್ನೆಲ್ಲ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರೆ ಕನ್ನಡ ಸಂಸ್ಕೃತಿಯು ಕರ್ನಾಟಕ ದೇಶದ ಸಂಸ್ಕೃತಿಯು ಹೊರ್ತು ಬೇರಿಲ್ಲೆಂಬುವದು ಗೊತ್ತಾಗುವದು.

ಇನ್ನು ಕನ್ನಡ ಸಾಹಿತ್ಯ ಪ್ರೇಮಿಗಳು ಸದ್ಯಕ್ಕೆ ಕನ್ನಡ ಸಂಸ್ಕೃತಿಯ ಬಗ್ಗೆ ಮಾಡತಕ್ಕ ಮುಖ್ಯ ಕಾರ್ಯಗಳು ಯಾವವು ಎಂಬುದನ್ನೇ ವಿಚಾರಿಸುವದು ಈ ಲೇಖನದ ಮುಖ್ಯೋದ್ದೇಶವಾಗಿರುವದು. (೧) ಕನ್ನಡ ಸಂಸ್ಕೃತಿಯ ಮುಖ್ಯಾಂಗಗಳಲ್ಲಿ, ಹಳೇ ಗದ್ಯ ಪದ್ಯಾತ್ಮಕ ಗ್ರಂಥಗಳ, ಶಿಲಾಶಾಸನಗಳ ಹಾಗೂ ಲಾವಣಿ (ಜನಪದ ಸಾಹಿತ್ಯ) ಮೊದಲಾದ ಪದಗಳ ಸೂಚೀಪತ್ರವನ್ನು ತಯಾರಿಸುವದು. (೨) ಅದಕ್ಕನುಸರಿಸಿ ಒಂದು ಮಧ್ಯವರ್ತಿ ಪುಸ್ತಕಾಲಯವನ್ನು ಏರ್ಪಡಿಸಿ ಅದರಲ್ಲಿ ಮೇಲಿನ ಎಲ್ಲ ಪುಸ್ತಕಗಳನ್ನು ಸಂಗ್ರಹಿಸುವದು. ಇವುಗಳನ್ನು ಪುಕ್ಕಟೆಯಾಗಿ ಇಲ್ಲವೆ ಮಾರತೆಗೆದುಕೊಂಡು ಇಲ್ಲವೆ ಪ್ರತಿ ಮಾಡಿಸಿ ದೊರಕಿಸಿ ಇಡುವದು. (೩) ಆಮೇಲೆ ಪಂಡಿತರಿಂದ ಅವುಗಳ ವಿಷಯಾನುಸಾರವಾಗಿ ವರ್ಗೀಕರಿಸುವದು. ಈ ರೀತಿ ಹಿಂದಕ್ಕೆ ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆಯವರು ಒಬ್ಬ ಪ್ರಚಾರಕನನ್ನು ನೇಮಿಸಿ ಸ್ವಲ್ಪ ದಿನಗಳಲ್ಲಿ ಸುಮಾರು ೨೦೦೦ ಹಳೆಯ ಗ್ರಂಥಗಳ ಸೂಚೀಪತ್ರವನ್ನು ತಯಾರಿಸಿರುವರು. ಮತ್ತು ಅವುಗಳಲ್ಲಿಯ ವಿಷಯಗಳ ವರ್ಗೀಕರಣವನ್ನು ಮಾಡಿ ಒಂದು ಲೇಖವನ್ನು ಡಾ॥ ಎಸ್. ಸಿ. ನಂದೀಮಠರವರು ಪ್ರಸಿದ್ಧಿಸಿರುವರು. (೪) ತದನಂತರ ಒಂದೊಂದು ವಿಷಯದಲ್ಲಿ ಪ್ರಾವೀಣ್ಯವನ್ನು ದೊರಕಿಸುವ ಸಲುವಾಗಿ ವಿಶ್ವವಿದ್ಯಾಲಯದವರ ಕಡೆಯಿಂದ ತಕ್ಕ ವಿದ್ಯಾರ್ಥಿಗಳಿಗೆ ಅನುಕೂಲತೆಗಳನ್ನು ಒದಗಿಸಿ ಕೊಡುವದು.

ಈ ಮೇಲಿನ ಎಲ್ಲ ಕೆಲಸಗಳನ್ನು ಸಂಘಶಕ್ತಿಯಿಂದ ಮಾಡಿದರೆ ಹಾ ಹಾ ಎನ್ನುವಷ್ಟರಲ್ಲಿ ಕನ್ನಡದ ಏಳಿಗೆಯಾಗಬಹುದು. ಈ ದಾರಿಯನ್ನು ಮೊದಲು ನಮಗೆ ತೋರಿಸಿ ಕೊಟ್ಟವರು ದಿವಂಗತರಾದ ಮಹಾಮಹೋಪಾಧ್ಯಾಯ ಪಾಕ್ತನ ವಿಮರ್ಶ ವಿಚಕ್ಷಣ ರಾವಬಹಾದ್ದೂರ ಆರ್. ನರಸಿಂಹಾಚಾರ್ಯರವರು. ಇದರಲ್ಲಿ ಇವರೇ ಕನ್ನಡಿಗರಿಗೆ ಆದ್ಯ ಮಾರ್ಗದರ್ಶಕರು. ಇವರು ಕನ್ನಡ ಕವಿಗಳ ಚರಿತ್ರೆಗಳನ್ನು ಮೂರು ಭಾಗವಾಗಿ ಪ್ರಕಟಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿರುವರು. ಅವುಗಳಲ್ಲಿ ೧೪೪ ಕವಿಗಳ ನಾಮನಿರ್ದೇಶವು ಮಾಡಲ್ಪಟ್ಟಿದೆ. ಅದರಲ್ಲಿ ೯೩೩ ಕವಿಗಳು ಪುರಾತನರಿರುವರು. ಅವರ ವಿವರವು—

ಕ. ಭಾಗ	ಜೈನರು	ವೀರಶೈವರು	ಬ್ರಾಹ್ಮಣರು	ಇತರರು	ಅಂತೂ
೧	೯೫	೯೦	೪೫	೫೦	೨೪೦
೨	೫೬	೧೪೫	೭೬	೨೪	೩೦೧
೩	೨೩	೧೯೧	೧೦೪	೩೦	೩೫೨
	೧೭೪	೪೨೬	೨೨೯	೧೦೪	೯೩೩
ಹೊಸಬರು	೧	೨೭	೧೫೯	೨೪	೨೧೫
	೧೭೫	೪೫೩	೩೪೪	೧೩೨	೧೧೪೪

ಈ ಮಹಾ ವ್ಯಕ್ತಿಯ ಪ್ರಯತ್ನವನ್ನು ನೋಡಿದರೆ ನಮಗೆ ದಂಗು ಬಡಿಯುವಂತಿದೆ. ಇವರಂತೆ ವಿಜಾಪುರದ ರಾವಬಹಾದ್ದೂರ ಪಿ. ಜಿ. ಹಳಕಟ್ಟಿಯವರು ಶಿವಶರಣರ ವಚನಗಳನ್ನು ಹೊರಗೆಡವಿ ತಮ್ಮ ಜನ್ಮವನ್ನು ಸ್ವಾರ್ಥಕಗೊಳಿಸಿಕೊಂಡರಲ್ಲದೆ ಉಳಿದವಂಗೆ ದೊಡ್ಡ ಉಪಕಾರ ಮಾಡಿದರು. ಶಿವಾನುಭವ ಮಾಸಪತ್ರಿಕೆಯ ದ್ವಾರದಿಂದ ಈ ವರೆಗೆ ಸುಮಾರು ಒಂದು ೧೦೦ ಗ್ರಂಥಗಳನ್ನು ಇವರು ಅಚ್ಚು ಮಾಡಿಸಿ ಹೊರ ಗೆಡವಿರುವರು. (*Charity begins at home*) ಎಂಬ ನಾಣ್ಣುಡಿಯಂತೆ ಅವು ಕೇವಲ ವೀರಶೈವರ ವಿಷಯಕವಾಗಿದ್ದರೂ ಇವರ ಕೆಲಸದಿಂದ ಕರ್ನಾಟಕದ ಮೇಲೆ ದೊಡ್ಡ ಉಪಕಾರವಾಗಿರುವದು. ಇತ್ತೀಚೆಗೆ ಮಿ॥ ಎಸ್. ಶ್ರೀಕಂಠ ಶಾಸ್ತ್ರಿ ಎಮ್. ಎ. ರವರು ಮೈಸೂರು ವಿಶ್ವ ವಿದ್ಯಾಲಯದ ಸಹಾಯದಿಂದ (*Sources of Karanataka History Volume I*) ಎಂಬುದೊಂದು ಗ್ರಂಥವನ್ನು ಅಚ್ಚು ಮಾಡಿಸಿ ಕರ್ನಾಟಕಸ್ಥರಿಗೆ ಮಹದುಪಕಾರ ಮಾಡುತ್ತಿರುವರು. ಇದಕ್ಕೂ ಹೆಚ್ಚಿನ ಗ್ರಂಥಗಳನ್ನು ಅಚ್ಚು ಮಾಡಿಸುವ ಸಾಮರ್ಥ್ಯವು ಅವರಿಗೆ ದೇವರು ದಯಪಾಲಿಸಲೆಂದು ಆ ದಯಾಘನನಾದ ಪರಮಾತ್ಮನನ್ನು ಅನನ್ಯಭಾವದಿಂದ ಪ್ರಾರ್ಥಿಸುವೆವು.

ಇಂಥ ಅಮೂಲ್ಯವಾದ ಪೂರ್ವಿಕರ ಸಂಸ್ಕೃತಿಯ ಇಡಿಗಂಟು ಕರ್ನಾಟಕದವರಿಗೆ ಇದ್ದಂತೆ ಭಾರತದೊಳಗಣ ಇನ್ನುಳಿದ ಯಾವ ಪ್ರಾಂತದವರಿಗೂ ಇರಲಿಕ್ಕಿಲ್ಲವೆಂದು ತರ್ಕಿಸಿದರೆ ಅಷ್ಟೇನು ದೊಡ್ಡ ತಪ್ಪಾಗಲಿಕ್ಕಿಲ್ಲ. ಇಂಥ ಪ್ರಾಚೀನ ಸಂಸ್ಕೃತಿಯನ್ನು ಉಪೇಕ್ಷಿಸಿ ಉಳಿದವರಂತೆ ನಡೆಯುವದೆಂದರೆ ಮಳಿ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದಂತೆ ಹಾಸ್ಯಾಸ್ಪದ ವಾಗುವದಲ್ಲದೆ ಪಿತೃದ್ರೋಹದ ಪಾಪವು ಸಂಭವಿಸುವದು. "ಮನೆ ಗೆದ್ದು ಮಾರು ಗೆದೆ" ಎಂಬ ನಾಣ್ಣುಡಿಯಂತೆ ಮೊದಲು ನಮ್ಮ ಪೂರ್ವ ಸಂಸ್ಕೃತಿಯನ್ನು ಬೆಳಕಿಗೆ ತರಬೇಕು. ಆಮೇಲೆ ಅವಶ್ಯ ಬಿದ್ದಂತೆ ಅನ್ಯರ ಸಂಸ್ಕೃತಿಯನ್ನು ಅಪೇಕ್ಷಿಸಬೇಕು. ಮೊದಲಿನ ಕೆಲಸ ಮಾಡದೆ ಮತ್ತು ಕರ್ನಾಟಕ ಮಾತೆಯ ಋಣವನ್ನು ತೀರಿಸದೇಕೆಂಬ ಕೊಚ್ಚೆಗಾರಿಕೆಯನ್ನು ಅರಿಯದೆ ಕನ್ನಡ ಸಾಹಿತಿಗಳು ಮನಬಲ್ಲಂತೆ ಕುಡಿದಾಡಿದರೆ ಇತ್ತೀಚೆಗೆ ಸಂಗೀತ ನಾಟಕ ಸಿನೇಮಾಗಳು ಬಂದು ದಕ್ಷಿಣದ ಪ್ರಾಚೀನ ಗಾಯನ ಕಲೆಯನ್ನು ಹದಗೆಡಿಸುವ ಹಾಗೆ

ಆಗುವದು. ಇದಲ್ಲದೆ "ಇದ್ದ ಕೂಸೂ ಎಣ್ಣೆ ಕಾಣದು, ಇನ್ನೊಂದು ಕೊಡು ಮಹಾರಾಯಾ" ಎಂಬಂತೆ ಅತಿ ಪ್ರಸಂಗ ದೋಷವೂ ಬರುವದು.

ಕವಿಚರಿತೆಯ ೩ನೆಯ ಭಾಗದ ಮೇಲಿಂದ ನೋಡಲು ೨೦ನೆಯ ಶತಮಾನದಲ್ಲಿ ಮೇಲೆ ತೋರಿಸಿದಂತೆ ಒಟ್ಟು ೨೧೫ ಗ್ರಂಥಕರ್ತರು ಆಗಿರುವರು. ಅಂದ ಮೇಲೆ ಬರಹಗಾರರಿಗೇನೂ ಕೊರತೆ ಇಲ್ಲ. ಆದರೆ ಇಂಗ್ಲಿಷ ಸರಕಾರದವರ ಆಳಿಕೆಯು ಪ್ರಾರಂಭವಾದಂದಿನಿಂದ ಈ ವರೆಗೂ ಮೊದಲು ಸುಶಿಕ್ಷಿತರಾದವರಲ್ಲಿ ಪರಧರ್ಮ ಸಹಿಷ್ಣುತೆ ಇಲ್ಲದಿರುವದರಿಂದ ಹಿಂದಿನ ಕನ್ನಡ ಸಂಸ್ಕೃತಿಯು ಬೆಳಕಿಗೆ ಬರಲೊಲ್ಲದು. ಇದಕ್ಕೆ ಉದಾಹರಣೆ ಎಂದರೆ ರಾವಬಹಾದ್ದೂರ ಪಿ. ಜಿ. ಹಳಕಟ್ಟಿಯವರು ಹರಿಹರನ ರಗಳೆಗಳನ್ನು ಅಚ್ಚು ಹಾಕಲುದ್ಯುಕ್ತರಾಗಿ ಈ ಮೊದಲು ಎಷ್ಟೋ ಹೊರಗೆಡವಿರುವರು. ಈ ರಗಳೆಗಳ ಭಾಷೆಯ ವಿಷಯವಾಗಿ ಹೆಚ್ಚಿಗೆ ಹೇಳಬೇಕಾಗಿಲ್ಲ. ದಿವಂಗತರಾದ ಪ್ರೋಫೆಸರ್ ಟಿ. ಎಸ್. ವೆಂಕಣ್ಣಯ್ಯನವರು ಹೇಳಿದ್ದೇ ಸಾಕು. ಅಂದಮೇಲೆ ನಿಜವಾದ ಭಾಷಾಪ್ರೇಮಿಗಳು ಈ ಕವಿಯನ್ನು ಇಷ್ಟರಲ್ಲಿ ತಮ್ಮ ತಲೆಯ ಮೇಲೆ ಹೊತ್ತುಕೊಂಡು ಕುಣಿದಾಡಬೇಕಾಗಿತ್ತು ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಶೆಕ್ಸಪಿಯರನ ನಾಟಕಗಳ ಮುದ್ರಣವು ಹೊರಟಂತೆ ಈ ರಗಳೆಯ ಮುದ್ರಣವಾದರೂ ಹೊರಡಬೇಕಾಗಿತ್ತು. ಹಾಗಿಲ್ಲುದದರಿಂದ ಇಲ್ಲಿಯವರೆಗೆ ಹರಿಹರನ ವಿಷಯವಾಗಿ ಇಷ್ಟು ಉಪೇಕ್ಷೆಯು ತೋರ ಬೇಕಾದರೆ ಈ ಕವಿಯು ಭಾರತದಲ್ಲಿ ಹುಟ್ಟದೆ ಬೇರೆ ದೇಶದಲ್ಲಿ ಹುಟ್ಟಿದ್ದರೆ ಇಲ್ಲವೆ ಲಿಂಗಾಯತೇತರನಾಗಿದ್ದರೆ ಒಳಿತಾಗುತ್ತಿತ್ತೆಂದೆನ್ನ ಬೇಕಾಗುತ್ತದೆ. ಆದರೂ ಇತ್ತೀಚೆಗೆ ಸಾಹಿತ್ಯ ವಿಷಯದಲ್ಲಿ ಜಾತ್ಯಭಿಮಾನವು ಕಡಿಮೆಯಾಗುತ್ತಿರುವದರಿಂದ ಇಂಥ ಉಪೇಕ್ಷೆಯು ಬಹಳ ದಿವಸ ಉಳಿಯಲಾರದು.

ಕವಿಚರಿತೆಕಾರರಂತೆ ಕನ್ನಡ ಭಾಷಾಸೇವೆ ಮಾಡಿ ಸುಶಿಕ್ಷಿತರಾದವರು ಇಂಥ ಅಭಿಮಾನವನ್ನು ಹಿಡಿಯದೆ ಯಶಃಕಾಯರಾಗಿ ಉಳಿಯುವಂತೆ ಮಾಡಬೇಕು. ಕರ್ನಾಟಕಸ್ಥರಲ್ಲಿ ಹುರುಪು ಕಡಿಮೆ ಇಲ್ಲ. ಹಣದ ಕೊರತೆಯಿಲ್ಲ. ಕೆಲಕೆಲವು ಪ್ರಸಂಗಗಳಲ್ಲಿ ಹಣದ ಅಪವ್ಯಯವಾಗುವದನ್ನು ನಿಲ್ಲಿಸಿ ಅದರ ಸದ್ವಿನಿಯೋಗವನ್ನು ಮಾಡಿದರೆ ಸಾಕು. ಕನ್ನಡ ಭಾಷೆಯ ಸೇವೆಯಂತೆ ಸಂಸ್ಕೃತ ಭಾಷೆಯ

ಸೇವೆಯನ್ನಾದರೂ ಮಾಡಬೇಕು. ಏಕೆಂದರೆ ಕರ್ನಾಟಕದಲ್ಲಿ ಅನೇಕ ಸಂಸ್ಕೃತ ಗ್ರಂಥಕರ್ತರು ಆಗಿ ಹೋಗಿರುವರು. ಆ ಗ್ರಂಥಗಳ ಸಂಖ್ಯೆ ಯಾದರೂ ಕರ್ನಾಟಕದಲ್ಲಿ ಕನ್ನಡಕ್ಕಿಂತಲೂ ಕಡಿಮೆ ಇಲ್ಲ. ಹಿಂದಕ್ಕೆ ಸೊಲ್ಲಾಪುರದ ಲಿಂಗೈಕ್ಯರಾದ ರಾವಬಹಾದ್ದೂರ ಶ್ರೀಮಂತ ಮಲ್ಲಪ್ಪಾ ಬಸಪ್ಪಾ (ಅಪ್ಪಾಸಾಹೇಬ) ವಾರದರವರು ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚಮಾಡಿ ವೀರಶೈವ ಧರ್ಮಕ್ಕೆ ಸಂಬಂಧಪಟ್ಟ ಸುಮಾರು ಒಂದು ನೂರು ಸಂಸ್ಕೃತ ಗ್ರಂಥಗಳನ್ನು ಅಚ್ಚುಮಾಡಿಸಿರುವರು. ಇದರಂತೆ ಅನ್ಯ ಮತೀಯರು ಈ ಗ್ರಂಥಗಳನ್ನು ಬೆಳಕಿಗೆ ತರಬೇಕು.

(ಧಾರವಾಡ ೨೫ನೆಯ ಸಾಹಿತ್ಯ ಸಮ್ಮೇಲನದ
ವಿಸಾಹಿತ್ಯಗೋಷ್ಠಿಗೆ ಕಳಿಸಿದ ಲೇಖನ)

ನೀ ಕೆಚ್ಚಿನಿಂ ದೂರ ತಳ್ಳುವರನೆಲ್ಲ !

ನಾ ಹೆಚ್ಚು ನೀ ಕಡಿಮೆ ಎಂಬವರನೆಲ್ಲ
ನೀ ಕೆಚ್ಚಿನಿಂ ದೂರ ತಳ್ಳುವರನೆಲ್ಲ ॥ ಪಲ್ಲ ॥

ನಾವು ಪಲ್ಲಕ್ಕಿಯೊಳು ಕುಳ್ಳಿರಲು ಪುಟ್ಟಿಹೆವು
ನೀವು ಪಲ್ಲಕ್ಕಿಯನು ಹೊರಲು ಪುಟ್ಟಿಹಿರೆಂಬ
ತೀವಿದ ಅಹಂಕಾರ ಭಾವದಿಂ ಮೆರೆವವರ
ನಾವಾಗಲೂ ದೂರ ತಳ್ಳುವುದು ಧೀರ! ॥ ೧ ॥

ನಾ ಹೆಚ್ಚು ನೀ ಕಡಿಮೆ ಎಂಬವರನೆಲ್ಲ.....
ಭುವನದೊಳಗಿಹ ಭಕ್ತತತಿಲೆ ಎಲ್ಲ ಸಮನೆಂಬ
ಶಿವಶಾಸ್ತ್ರದನುಭವವ ಕೇಳರಿಯೆಯೂ ?
ಅವ ಗುರುವಿಗೆ ತಾನೆ ಭಕ್ತಿಯಿರಬೇಡವೇ ?
ಈ ವಿಧದಿ ಭಕ್ತಿ ರಹಿತರು ಗುರುಗಳಹರೆ ? ॥ ೨ ॥

—ನಾ ಹೆಚ್ಚು ನೀ ಕಡಿಮೆ ಎಂಬವರನೆಲ್ಲ.....
ನಾವು ಭಿಕ್ಷವ ಬೇಡಿ ಪಾಲಿಸಲು ಪುಟ್ಟಿಹೆವು
ನೀವು ಭಿಕ್ಷವ ನೀಡಿ ಮುಕ್ತಿ ಪಡೆಯಿರಿ ಎಂಬ
ಜೀವಗಳ್ಳರ ಮಾತಿಗಳುಕದಂಜದೆ ನೀನು
ಠೀವಿಯಿಂದವರ ಬುದ್ಧಿಯತಿದ್ದಿ ಕಳಸುವುದು ॥ ೩ ॥

ಶ್ರೀ ವೀರೇಶ್ವರ ಬೆಂಗಳೂರು ನಗರ.

ಬಸವೇಶ್ವರನಕ್ಕಿಂತಲೂ ಮೊದಲಿನ ವೀರಶೈವ ಧರ್ಮ.

ರಾವಬಹಾದ್ದೂರ ಪಿ. ಜಿ. ಹಳಕಟ್ಟಿ. ಬಿ. ಎ ಎಲ್. ಎಲ್. ಬಿ. ವಿಜಾಪುರ.

[ಹಿಂದಿನಿಂದ ಮುಂದೆ ಸಾಗಿದ್ದು]

ನಾವು ಹಿಂದಿನ ಸಂಚಿಕೆಯಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ವಿವೇಚಿಸುವಲ್ಲಿ ಬಸವೇಶ್ವರನಕಿಂತಲೂ ಮೊದಲು ಆಗಿಹೋದ ಶಿವಶರಣರ ವಿಚಾರಗಳೇನಿದ್ದವೆಂಬುದನ್ನು ಕಂಡುಹಿಡಿಯುವದು ಬಹು ಮಹತ್ವದ್ದೆಂದು ಉಲ್ಲೇಖಿಸಿದ್ದು ವಾಚಕರ ಸ್ಮರಣೆಯಲ್ಲಿರಬಹುದು. ಅದರಲ್ಲಿ ನಾವು ಹಿಂದಿನ ಶಿವಶರಣರಲ್ಲಿ ದೇವರದಾಸಿಮಯ್ಯ, ಶಂಕರದಾಸಿಮಯ್ಯ, ಬಾಹೂರು ಬೊಮ್ಮಯ್ಯ ಮೊದಲಾದರಿರುವರೆಂದು ವಿವರಿಸಿದ್ದೇವೆ. ಆದ್ದರಿಂದ ಇವರ ಚರಿತ್ರೆಗಳಿಂದ ಯಾವ ಮತತತ್ವಗಳು ಹೊರಪಡುತ್ತವೆಂಬದನ್ನು ಕುರಿತು ವಿವೇಚಿಸುವುದು ಪ್ರಸ್ತುತ ಲೇಖದ ಮುಖ್ಯ ಉದ್ದೇಶವಾಗಿರುತ್ತದೆ. ಇವರಲ್ಲಿ ದೇವರದಾಸಿಮಯ್ಯನು ಕೇವಲ ಕಾಲ್ಪನಿಕ ಪುರುಷನಿರದೆ ಐತಿಹಾಸಿಕ ಪುರುಷನಿದ್ದನೆಂಬದು ಅವನ ಉಲ್ಲೇಖಗಳಿದ್ದ ಕೆಲವು ಶಿಲಾಶಾಸನಗಳಿಂದ ದೃಢಪಡುತ್ತದೆ. ಇವುಗಳಲ್ಲಿ ನಿಜಾಮ ಇಲಾಖೆಯಲ್ಲಿರುವ ಗೊಬ್ಬೂರು ಗ್ರಾಮದಲ್ಲಿಯ ಶಾಸನವು ಬಹು ಮುಖ್ಯವಾಗಿರುತ್ತದೆ, ಇದು ೧೧೪೮ನೇ ಇಸ್ವಿಯದು. ಅಂದರೆ ಬಸ

ವೇಶ್ವರನು ಪ್ರಸಿದ್ಧಿಗೆ ಬರುವದಕ್ಕಿಂತಲೂ ಇದು ಮೊದಲಿನದಾಗಿದೆ. ಇದರ ವಿಷಯವಾಗಿ ಶಿವಾನುಭವ ಸಂಪುಟ ೫ ಸಂಚಿಕೆ ೯ ಪುಟ ೩೨೯ ನೋಡತಕ್ಕದ್ದು. ಈ ದೇವರದಾಸಿಮಯ್ಯನು ೧೦೦೮ ರಿಂದ ೧೦೪೦ರ ವರೆಗೆ ಆಳಿದ ಚಾಲುಕ್ಯ ಜಯಸಿಂಹರಾಜನ ಕಾಲದಲ್ಲಿ ಪ್ರಸಿದ್ಧಿಗೆ ಬಂದನೆಂದು ತಿಳಿದುಬರುತ್ತದೆ.

ಪರಮಾತ್ಮನ ಸ್ವರೂಪು.

ಒಂದು ಧರ್ಮದ ವೈಶಿಷ್ಟ್ಯವು ಅದರಲ್ಲಿ ಪರಮಾತ್ಮನ ಸ್ವರೂಪು ಹೇಗೆ ವಿವರಿಸಲ್ಪಟ್ಟಿರುತ್ತದೆಂಬದರ ಮೇಲೆ ಬಹಳ ಅವಲಂಬಿಸಿರುತ್ತದೆ. ಹಿಂದೂ ಧರ್ಮದಲ್ಲಿ ಅನೇಕ ಪಂಗಡಗಳೂ, ಜಾತಿಗಳೂ, ಪಂಥಗಳೂ ಇವೆ ಅವುಗಳಲ್ಲಿ ಅನೇಕವುಗಳು ಅವು ಮನ್ನಿಸುತ್ತಿರುವ ದೇವತೆಗಳ ಹೆಸರುಗಳನ್ನೇ ತಮ್ಮ ಹೆಸರನ್ನಾಗಿ ಇಟ್ಟುಕೊಂಡಿರುವದು ಕಂಡುಬರುತ್ತದೆ. ಉದಾ— ಶೈವ, ವೈಷ್ಣವ, ಗಾಣಪತ್ಯ, ಶಾಕ್ತ, ಜೈನ ಇತ್ಯಾದಿ. ಆದ್ದರಿಂದ ಬಸವೇಶ್ವರನ ಕಾಲದಲ್ಲಿ ವಚನಕಾರರ ವಿಚಾರಗಳು ಪರಮಾತ್ಮನ ಬಗ್ಗೆ ಅವವಿದ್ದವು ಮತ್ತು ಅವೇ ವಿಚಾರಗಳು ಅವನ ಪೂರ್ವದಲ್ಲಿಯೂ ಕೂಡ ಇದ್ದವೋ ಹೇಗೆ ಎಂಬದನ್ನು ಕಂಡು ಹಿಡಿಯುವದು ಬಹು ಮಹತ್ವದ ವಿಷಯವಾಗಿದೆ. ಬಸವೇಶ್ವರನ ಕಾಲದಲ್ಲಿ ದೇವರು ಒಬ್ಬನೇ ಇದ್ದಾನೆ, ಅವನು ಸರ್ವವ್ಯಾಪಿಯಾಗಿದ್ದಾನೆ, ಅವನು ಎಲ್ಲೆಲ್ಲಿಯೂ ಇದ್ದಾನೆ, ಎಂಬ ವಿಚಾರಗಳು ಪ್ರಾಮುಖ್ಯವಾಗಿದ್ದುದು ತೋರಿಬರುತ್ತವೆ. ಈ ಬಗ್ಗೆ ಅಸಂಖ್ಯ ವಚನಗಳನ್ನು ನಾವು ಉದಹರಿಸಬಹುದು. ಅವುಗಳನ್ನು ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ (ಏನೇ ಆವೃತ್ತಿ) ಪುಟ ೧೦೦ ರಿಂದ ೪೦೦ ವರೆಗೆ ವಾಚಕರು ನೋಡಬಹುದು. ಈ ಕಾಲದಲ್ಲಿ ವೀರಶೈವರು ಜನಸಾಮಾನ್ಯರಲ್ಲಿ ಪ್ರಚಲಿತವಿದ್ದ ಅಸಂಖ್ಯ ದೇವತೆಗಳನ್ನು ನಿರಾಕರಿಸಿದರು. ಇಷ್ಟೇ ಅಲ್ಲ, ತ್ರಿಮೂರ್ತಿಗಳನ್ನೂ ಸಹ ಅವರು ಮನ್ನಿಸಲಿಲ್ಲ. ಆದರೆ ಈ ಬಗೆಯ ವಿಚಾರಗಳು ಬಸವೇಶ್ವರನಕಿಂತಲೂ ಮೊದಲು ಸಹ ರೂಢವಾಗಿದ್ದವೋ ಹೇಗೆಂಬುದನ್ನು ಸ್ಥಾಪಿಸುವದು ಬಹು ಮಹತ್ವದ ವಿಷಯವಾಗಿರುತ್ತದೆ. ಈ ವಿಷಯವಾಗಿ ದೇವರದಾಸಿಮಯ್ಯನ ಚರಿತ್ರೆಯಿಂದ ಕಂಡುಬರುವ ಸಂಗತಿಗಳನ್ನು ನಾವು ಇಲ್ಲಿ ಉಲ್ಲೇಖಿಸುತ್ತೇವೆ.

ದೇವರದಾಸಿಮಯ್ಯ.

ಇವನ ಕಾಲದಲ್ಲಿ ದೇವರ ಸ್ವರೂಪು ಹೇಗಿರುತ್ತದೆಂಬದರ ಬಗೆ ಕರ್ನಾಟಕದಲ್ಲಿ ಒಹು ನಿಕರವಾದ ವಾದಗಳಿದ್ದ ಹಾಗೆ ತೋರುತ್ತದೆ. ಈ ಕಾಲದಲ್ಲಿ ಜೈನ ಧರ್ಮದ ಸಂಸ್ಕೃತಿಯ ಪ್ರಾಬಲ್ಯವಿದ್ದದ್ದೇ ಇದಕ್ಕೆ ಮುಖ್ಯ ಕಾರಣವು. ಯಾಕಂದರೆ, ಜೈನರು ಪರಮಾತ್ಮನ ಅಸ್ತಿತ್ವವನ್ನು ಅಲ್ಲಗಳೆದು ಅವನು ಶೂನ್ಯನಾಗಿದ್ದನೆಂದು ಅಭಿಪ್ರಾಯಪಡುತ್ತಾರೆ. ಆದರೆ ಈ ಬಗೆಯ ವಿಚಾರಗಳನ್ನು ಆಗಿನ ಪುರಾತನ ಶಿವಶರಣರು ಅಂಗೀಕರಿಸದೆ ಪರಮಾತ್ಮನು ಜಗತ್ತಿನಲ್ಲೆಲ್ಲ ಹರಡಿದ್ದಾನೆ ಮತ್ತು ಜೀವನು ಕಡೆಗೆ ಪರಮಾತ್ಮನಲ್ಲಿಯೇ ಬೆರೆದು ಹೋಗುತ್ತಾನೆ ಎಂದು ಭಾವಿಸಿದರು. ಇದು ದೇವರದಾಸಿಮಯ್ಯನ ಜೀವನಚರಿತೆಯಿಂದ ನಮಗೆ ತಿಳಿದು ಬರುತ್ತದೆ. ಈ ವಿಷಯವಾಗಿ ಜಯಸಿಂಹರಾಯನ ಆಸ್ಥಾನದಲ್ಲಿ ನಡೆದ ವಿವಾದಗಳು ಬಸವಪುರಾಣ ಖಂಡನೆಯ ಸಂಧಿಯಲ್ಲಿ ವಿಸ್ತೃತವಾಗಿ ಕೊಡಲ್ಪಟ್ಟಿವೆ. ಈ ವಾದವು ಅಲ್ಲಿ ನಡೆದು ಅದರ ಅಂತ್ಯದಲ್ಲಿ ಶ್ರಾವಕರು ಒಂದು ಘಟಸರ್ಪನನ್ನು ಒಂದು ಗಡಿಗೆಯಲ್ಲಿ ತಂದಿಂಸಿ ಅದರಲ್ಲಿ ಪರಮಾತ್ಮನನ್ನು ತೋರಿಸೆಂದು ದೇವರದಾಸಿಮಯ್ಯನನ್ನು ಆಹ್ವಾನಿಸುವರು. ಆಗ ದೇವರದಾಸಿಮಯ್ಯನು ಆ ಗಡಿಗೆಯಲ್ಲಿ ಕೈಹಾಕಿ ಅದರಲ್ಲಿಯ ಘಟಸರ್ಪನನ್ನು ಮುಟ್ಟಲು ಅದು ಅವನ ಭಕ್ತಿಯ ಪ್ರಭಾವದಿಂದ ಸ್ಫಟಿಕಲಿಂಗವಾಯಿತು. ಇದೇ ಕಥಾನಕವು ಶಿವಶರಣರ ಅನೇಕ ಚರಿತ್ರ ಗ್ರಂಥಗಳಲ್ಲಿ ಇವನ ವಿಷಯವಾಗಿ ಬಂದಿರುತ್ತದೆ. ಈ ಕಥೆಯ ಮುಖ್ಯ ಭಾವವೇನೆಂಬುದನ್ನು ಮಾತ್ರ ವಾಚಕರು ವಿಚಾರಮಾಡಬೇಕು. ಇದರಲ್ಲಿ ಪರಮಾತ್ಮನು ಜಗತ್ತಿನಲ್ಲೆಲ್ಲ ತುಂಬಿಕೊಂಡಿದ್ದಾನೆ, ಅವನನ್ನು ಭಕ್ತಿಯಿಂದ ಜನರು ಪ್ರಕಟಮಾಡಿಕೊಳ್ಳಬಹುದು. ಎಂಬ ಅಭಿಪ್ರಾಯವಿದೆಂಬುದು ಸ್ಪಷ್ಟವದೆ. ಈ ಅಭಿಪ್ರಾಯವನ್ನು ದೇವರದಾಸಿಮಯ್ಯನೇ ಕೆಳಗೆ ಕಾಣಿಸಿದ ತನ್ನ ವಚನದಲ್ಲಿಯೂ ಸ್ಪಷ್ಟವಾಗಿ ಹೇಳಿದ್ದಾನೆ.

"ಇಂತೆಂದ ಭೂಮಿಯ, ಇಂತೆಂದ ಗಗನವ, ಇಂತೆಂದ ಸಕಲ
ಸಾಗರವ, ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ ಅಚಿಂತ್ಯನ
ನಾರು ಬಲ್ಲರೈ ರಾಮನಾಥಾ?"

ಮಹಾದೇವಿಯಕ್ಕನಾದರೂ ಶ್ರೀಶೈಲದ ಅರಣ್ಯದಲ್ಲಿ ಹೋಗುತ್ತಿರುವಾಗ್ಗೆ ನವಿಲುಗಳಲ್ಲಿ ಗಿಳಿಗಳಲ್ಲಿ ಹಂಸೆಗಳಲ್ಲಿ ಕೊಳನಲ್ಲಿ ಪರಮಾತ್ಮ

ನ್ನನ್ನೇ ದೃಷ್ಟಿಸುತ್ತ ಹೋದದ್ದು ಆಕೆಯ ವಚನದಿಂದ ತಿಳಿದುಬರುತ್ತದೆ. ಅದೇ ಅಭಿಪ್ರಾಯದ ಬಸವನ ವಚನಗಳಾದರೂ ಅನೇಕವಿವೆ. ಅವನು ಒಂದು ಕಡೆಯಲ್ಲಿ 'ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ ಸಕಲ ವಿಸ್ತಾರದ ರೂಹು ನೀನೇ ದೇವಾ' ಎಂದು ಮೊದಲಾಗಿ ಹೇಳಿದ್ದಾನೆ. ಬಸವೇಶ್ವರನ ಕಾಲವಲ್ಲಿದ್ದ ಈ ವಿಚಾರಗಳು ಅವನ ಕಾಲಕ್ಕಿಂತಲೂ ಮೊದಲು ೧೦೦-೧೫೦ ವರ್ಷಗಳ ಪೂರ್ವದಲ್ಲಿಯೂ ಕೂಡ ಪ್ರಚಲಿತವಾಗಿದ್ದವೆಂಬುದು ದೇವರದಾಸಿಮಯ್ಯನು ಜಯಸಿಂಹನ ಆಸ್ಥಾನದಲ್ಲಿ ಪ್ರಸ್ತಾಪಿಸಿದ ವಿಷಯಗಳಿಂದ ಕಂಡುಬರುತ್ತದೆ. ಹೀಗೆ ಪ್ರಸ್ತಾಪಿಸಿದವನು ಅವನೊಬ್ಬನೇ ಅಲ್ಲ, ಅವನಂತೆ ಇನ್ನೂ ಅನೇಕರು ಇರುವದಾಗಿ ಕಂಡುಬರುತ್ತದೆ. ಅವರಲ್ಲಿ ಬಾಹೂರು ಬೊಮ್ಮಯ್ಯನು ಒಬ್ಬನಾಗಿದ್ದಾನೆ. ಈ ಶಿವಶರಣನು ವಿಜಾಪುರ ಜಿಲ್ಲಾ ಮುದ್ದೇಬಿಹಾಳ ತಾಲೂಕಿನಲ್ಲಿರುವ ಬಾಹೂರು ಎಂಬ ಗ್ರಾಮದವನು. ಇವನ ವಿಷಯವಾಗಿ ಹರಿಹರನು ರಚಿಸಿದ ರಗಳೆಯು ಈಗ ಪ್ರಸಿದ್ಧವಾಗಿದೆ. (ಶಿವಾನುಭವ ಸಂಪುಟ ಸಂಚಿಕೆ ೨ ನೋಡಿರಿ) ಅವನ ಚರಿತ್ರೆಯಿಂದ ಕೆಳಗೆ ಕಾಣಿಸಿದ ಸಂಗತಿಗಳು ವ್ಯಕ್ತವಾಗುತ್ತವೆ.

ಬಾಹೂರು ಬೊಮ್ಮಯ್ಯ.

ಬಾಹೂರು ಬೊಮ್ಮಯ್ಯನು ಬಿಜ್ಜಳನ ತಂದೆಯಾದ ಪೆರ್ಮಾಡಿರಾಯನ ಕಾಲದಲ್ಲಿ ಪ್ರಸಿದ್ಧಿಗೆ ಬಂದನು. ಈ ಪೆರ್ಮಾಡಿಯು ೧೧೨೬ರಲ್ಲಿ ಚಾಲುಕ್ಯ ರಾಜನಾದ ೩ನೆಯ ಸೋಮೇಶ್ವರನಿಗೆ ಮಾಂಡಲಿಕನಾಗಿ ತರ್ದವಾಡಿ (ವಿಜಾಪುರ ಜಿಲ್ಲೆಯ ಉತ್ತರ ಭಾಗ)ಯಲ್ಲಿ ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಆದ್ದರಿಂದ ಇವನ ಕಾಲಕ್ಕಿದ್ದ ಬಾಹೂರು ಬ್ರಹ್ಮಯ್ಯನು ಬಸವನಕಿಂತಲೂ ಸ್ವಲ್ಪ ಹಿಂದಿನವನು. ದೇವರದಾಸಿಮಯ್ಯನ ಕಾಲದಲ್ಲಿ ಪರಮಾತ್ಮನ ಸ್ವರೂಪದ ಬಗ್ಗೆ ಯಾವ ಚರ್ಚೆಗಳು ನಡೆದಿದ್ದವೋ ಅವೇ ಚರ್ಚೆಗಳು ಪೆರ್ಮಾಡಿರಾಯನ ಕಾಲದಲ್ಲಿಯೂ ನಡೆದಿದ್ದವೆಂದು ಈ ಬಾಹೂರುಬ್ರಹ್ಮಯ್ಯನ ಚರಿತ್ರೆಯಿಂದ ತಿಳಿದುಬರುತ್ತದೆ. ಹರಿಹರ ಕವಿಯು ತನ್ನ ರಗಳೆಯಲ್ಲಿ ಈತನ ಬಗ್ಗೆ ಹೇಳಿರುವದೇನೆಂದರೆ:— ಒಂದು ಸೋಮವಾರ ದಿವಸ ಬ್ರಹ್ಮಯ್ಯನು ಪುರಹರನ ಧ್ಯಾನವನ್ನು ಮನದೊಳಗೆ ಮುಂದಿಟ್ಟುಕೊಂಡು ಬಾಹೂರು

ಗ್ರಾಮದಿಂದ ಕಲ್ಯಾಣಪುರಕ್ಕೆ ಬಂದು ಪುರದ ವೀಧಿಯಿಂದ ಬರುತ್ತಾ ಇದ್ದನು. ಆಗ ಅಲ್ಲಿ ಒಬ್ಬ ಶ್ರವಣ ವರ್ತಕನು ಬಿಳಿಯ ಜೋಳದ ರಾಶಿಯನ್ನು ತನ್ನ ಮುಂದಿಟ್ಟುಕೊಂಡು ಮಾರಲಿಕ್ಕೆ ಕುಳಿತಿದ್ದನು. ಅವನು ತನ್ನೆದುರಿಗೆ ಹಾದು ಹೋಗುತ್ತಿದ್ದ ಆ ಬ್ರಹ್ಮಯ್ಯನನ್ನು ಕಂಡು ಅವನಿಗೆ ಹಾಸ್ಯಮಾಡಬೇಕೆಂದುದ್ದೇಶಿಸಿ, 'ಎಲೈ ಜನಗಳೇ ಇದು (ಜೋಳದ ರಾಶಿ) ಅವ್ಯಕ್ತಮಯಾಧಾನ್ಯ, ಶಂಕರಗಂಡನು, ಇದನ್ನು ತೆಗೆದುಕೊಂಡು ಜೆನ್ನಾಗಿ ಬದುಕಿರಿ' ಎಂದು ಕೂಗಿ ಬೀದಿಯಲ್ಲಿ ಹೋಗುವ ಜನರಿಗೆ ಹೇಳುತ್ತಿದ್ದನು. ಆ ಶ್ರವಣ ವ್ಯಾಪಾರಿಯು ಆ ಜೋಳದ ರಾಶಿಗೆ ಹೀಗೆ ಪರಮಾತ್ಮನ ಹೆಸರನ್ನಿಟ್ಟು ಜನರನ್ನು ಕೂಗಿ ಕರೆಯುತ್ತ ಪುನಃ ಅಂದದ್ದು 'ಈ ಜೋಳದಲ್ಲಿ ಪರಮಾತ್ಮನನ್ನು ಪ್ರತ್ಯಕ್ಷವಾಗಿ ತೋರಬಲ್ಲವರುಂಟೇ? ಈ ಜೋಳವನ್ನು 'ಓ' ಎಂದೆನಿಸುವವರುಂಟೇ?' ಎಂದು ಬ್ರಹ್ಮಯ್ಯನನ್ನು ಕುರಿತು ಆಹ್ವಾನಿಸಿ ನುಡಿದನು. ಈ ಆಹ್ವಾನವನ್ನು ಬ್ರಹ್ಮಯ್ಯನು ಕೇಳಿದೊಡನೆಯೇ ತಾನು ಹತ್ತಿದ್ದ ದಂಡಿಗೆಯನ್ನಿಳಿದು 'ಎಲೋ ಅರುಹತನೇ, ಏನು ಬೊಗಳುತ್ತ ಇರುವಿ' ಎಂದೆನುತ್ತ ಅಲ್ಲಿ ನೆರೆದಿದ್ದ ಜನಸಮೂಹಕ್ಕೆ 'ಎಲೈ ಜನಗಳೇ ಈ ಜೋಳದ ರಾಶಿಯಲ್ಲಿ ಪರಮಾತ್ಮನನ್ನು ತೋರಿಸಿಕೊಡುವೆನು' ಎಂದು ನುಡಿದು, ಅವನು ಆ ರಾಶಿಯ ಸುತ್ತಲೂ ಪ್ರದಕ್ಷಿಣೆಯನ್ನು ಹಾಕಿ ತನ್ನ ನಿಶ್ಚಲವಾದ ಧ್ಯಾನದಿಂದ ಪರಮಾತ್ಮನನ್ನು ಆಹ್ವಾನಿಸಿ, 'ಎಲೈ ಪರಮಗುರುವೇ ಶಂಕರಾ, ಶಂಕರಾ' ಎಂದು ಕರೆಯಲು ಜಗತ್ತು ಪ್ರಣಮಮಯವಾದುದೆಂದು ತಿಳಿಯುವಂತೆಯೂ ಪರಮಾತ್ಮನು ಭಕ್ತನನ್ನು ಉದ್ಧರಿಸುವನೆಂಬುದನ್ನು ಎಲ್ಲರಿಗೂ ತೋರುವಂತೆಯೂ ಆ ರಾಶಿಯಲ್ಲಿ 'ಓ' ಎಂಬ ದನಿಯು ಗಟ್ಟಿಯಾಗಿ ಹೊರಸೂಸಿತು! ಇದನ್ನು ಅಲ್ಲಿ ನೆರೆದ ಜನಸಮೂದಾಯವು ಕೇಳಿ ಬ್ರಹ್ಮಯ್ಯನನ್ನು ಕೊಂಡಾಡಿ ಅವನನ್ನು ಕಲ್ಯಾಣಪುರದಲ್ಲಿ ಮೆರೆಯಿಸಿದರು. ಈ ಬಗೆಯ ಕಥೆಯನ್ನು ಹರಿಹರನು ತನ್ನ ರಗಳೆಯಲ್ಲಿ ಹೇಳಿದ್ದಾನೆ.

ಬಾಹೂರು ಬ್ರಹ್ಮಯ್ಯನ ಈ ಕಥೆಗೂ ದೇವರದಾಸಿಮಯ್ಯನ ಕಥೆಗೂ ಬಹಳ ಸಾಮ್ಯವಿದೆ. ಅವರಿಬ್ಬರೂ ಜಗತ್ತಿನಲ್ಲಿ ಪರಮಾತ್ಮನೊಬ್ಬನೇ ಇದ್ದಾನೆ, ಅವನು ವಿಶ್ವವ್ಯಾಪಿಯಾಗಿದ್ದಾನೆ, ಅವನನ್ನು ಭಕ್ತಿಯಿಂದ ಕಾಣಬಹುದು, ಎಂಬುದನ್ನು ತಮ್ಮ ತಮ್ಮ ದೃಷ್ಟಾಂತಗಳಿಂದ

ಸಿದ್ಧಪಡಿಸಿಕೊಟ್ಟಿದ್ದಾರೆ. ಈ ದೃಷ್ಟಾಂತಗಳು ಅದ್ಭುತವಾದುವೆಂದು ಅವುಗಳನ್ನು ವಾಚಕರಲ್ಲಿ ಅನೇಕರು ನಿರೀಕ್ಷಿಸಲಿಲ್ಲ. ಆದರೆ ಅವುಗಳೊಳಗೆ ಒಂದು ಮಹತ್ವದ ಧಾರ್ಮಿಕ ತತ್ವವು ಅಡಕವಾಗಿರುತ್ತದೆಂಬುದನ್ನು ಅವರು ವಿಚಾರ ಮಾಡಬೇಕೆಂದು ನಾವು ಸೂಚಿಸುತ್ತೇವೆ. ಬಸವೇಶ್ವರನಕಿಂತ ಮೊದಲು ನಮ್ಮ ನಾಡಿನಲ್ಲಿ ಅನೇಕ ತರದ ದೇವತೆಗಳ ಆರಾಧನೆಗಳು ಪ್ರಚಲಿತವಿದ್ದವೆಂದು ತೋರುತ್ತದೆ. ಈ ದೇವತೆಗಳಿಗೋಸ್ಕರ ಬೇರೆ ಬೇರೆ ಪಂಗಡಗಳಲ್ಲಿ ಪರಸ್ಪರ ಕಲಹಗಳೂ ಏಳುತ್ತಿದ್ದವು. ಆದರೆ ಆಗಿನ ಕಾಲದ ವೀರಶೈವರು ಪರಮಾತ್ಮನು ಒಬ್ಬನೇ ಇದ್ದಾನೆ ಮತ್ತು ಎಲ್ಲದರಲ್ಲಿಯೂ ಅವನು ತುಂಬಿದ್ದಾನೆ. ಎಂಬ ಉಪನಿಷದ್ವಾಕ್ಯಗಳ ಆಶಯ ತತ್ವವನ್ನೇ ಪ್ರತಿಷ್ಠಾಪಿಸಿದರು.

ಶಂಕರದಾಸಿಮಯ್ಯ.

ಶಂಕರದಾಸಿಮಯ್ಯನು ದೇವರದಾಸಿಮಯ್ಯನಿಗೆ ಸಮಕಾಲೀನನಾಗಿದ್ದನು. ಅವನೂ ಜಯಸಿಂಹರಾಜನ ಆಸ್ಥಾನದಲ್ಲಿ ಪ್ರಸಿದ್ಧಿಗೆ ಬಂದನು. ಅವನ ರಗಳೆಯನ್ನು ಹರಿಹರ ಕವಿಯು ರಚಿಸಿದ್ದಾನೆ. (ಹರಿಹರನ ರಗಳೆಗಳು ಭಾಗ ೩. ನೋಡಿರಿ.) ಅವನ ಚರಿತ್ರೆಯನ್ನು ನಿರೀಕ್ಷಿಸಿದಲ್ಲಿ ಅನೇಕ ದೇವತೆಗಳನ್ನು ಆರಾಧಿಸದೆ ಒಬ್ಬನೇ ದೇವನನ್ನು ಪೂಜಿಸಬೇಕೆಂದು ಅವನೂ ಕೂಡ ಪ್ರತಿಷ್ಠಾಪಿಸಿದುದು ಕಂಡುಬರುತ್ತದೆ. ಈ ಕಾಲದಲ್ಲಿ ಮೈಳಯ ಅಥವಾ ಮೈಲಾರ, ಭೈರವ, ನರಸಿಂಹ, ಮಾರಿಕವ್ವೆ ಎಂಬ ದೇವತೆಗಳನ್ನು ಬಹುಜನ ಸಮಾಜವು ಪೂಜಿಸುತ್ತಿದ್ದಹಾಗೆ ತೋರಿಬರುತ್ತದೆ. ಅದೇಮೇರೆಗೆ ಅನೇಕ ಭೂತಪಿಶಾಚಿಗಳ ಆರಾಧನೆಯೂ ನಡೆಯುತ್ತಿತ್ತು. ಆದರೆ ಶಂಕರದಾಸಿಮಯ್ಯನು ಇಂಥ ದೇವತೆಗಳನ್ನು ನಿರಾಕರಿಸಬೇಕೆಂದು ಬೋಧಿಸಿದುದೂ ಹಾಗೆ ಅವನು ನಡೆದುತೋರಿಸಿದುದೂ ಅವನ ಚರಿತ್ರೆಯಿಂದ ತಿಳಿದುಬರುತ್ತದೆ. ನಾರಸಿಂಹನ ಪೂಜೆಯು ಅವನ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಬಹು ಪ್ರಬಲವಾಗಿತ್ತು. ಜಯಸಿಂಹರಾಜನ ಆಸ್ಥಾನದಲ್ಲಿದ್ದ ಇದರ ಪೂಜೆಯನ್ನು ಇವನು ನಿರಾಕರಿಸಿದನು. ಈಗಿನಂತೆಯೇ ಮೈಲಾರನ ಪೂಜೆಯೂ ಜನರಲ್ಲಿ ಹೆಚ್ಚಿತ್ತು. ನಾಯಾಗಿ ಬೊಗಳುವದು ಈ ದೇವತೆಯ ಒಂದು ವಿಧದ ಭಜನೆಯಾಗಿತ್ತು. ಬಸವನ ಕಾಲದ ವಚನಕಾರರು ಈ ವಿಧವನ್ನು ತಮ್ಮ ವಚನಗಳಲ್ಲಿ ಬಹು ಕಟುವಾದ ಶಬ್ದಗಳಿಂದ ಹಳಿದಿದ್ದಾರೆ. ಆದರೆ ಬಸವನ ಮೊದಲು

ಇದ್ದ ಶಂಕರದಾಸಿಮಯ್ಯನು ಈ ಮೈಲಾರನನ್ನು ಧಿಕ್ಕರಿಸಿದ್ದಾನೆ. ಮೈಲಾರನ ಕಡೆಯಿಂದ ಅವನು ತನಗೆ ಕೊಡೆಹಿಡಿಸಿಕೊಂಡಿದ್ದು ಅವನ ಚರಿತ್ರೆಯಲ್ಲಿದೆ. ಭೈರವನ ಪೂಜಕರೂ ಈ ಕಾಲದಲ್ಲಿ ಹೆಚ್ಚಾಗಿದ್ದರು. ಡಮರುಗವನ್ನು ಹಿಡಿದು ತಲೆಗೆದರಿ ಅಲಗನ್ನು ತಿವಿದುಕೊಳ್ಳುತ್ತ ತಿರುಗುವದು ಭೈರವದೇವನ ಒಂದು ವಿಧದ ಪೂಜೆಯಾಗಿತ್ತು. ಇದು ನಿಜ ಭಕ್ತಿಯಲ್ಲೆಂದು ಶಂಕರದಾಸಿಮಯ್ಯನು ಸಾರಿದನು. ಅವನ ಪ್ರಭಾವಕ್ಕೆ ಭೈರವದೇವನು ಬೆದರಿ ಅವನ ಪದತಳಕ್ಕೆ ನಮಸ್ಕರಿಸಿದನೆಂದು ಅವನ ಚರಿತ್ರೆಯಲ್ಲಿ ಹೇಳಿದೆ. ಹಾಗೆಯೇ ಮಾರಿಮಸಣಿಗಳನ್ನೂ ಭಜಿಸಕೂಡದೆಂದು ಶಂಕರದಾಸಿಮಯ್ಯನು ಪುರಜನರಲ್ಲಿ ಸಾರಿದನು. ಇಂಥ ಕ್ಷುದ್ರ ದೇವತೆಗಳು ಮನುಷ್ಯನು ನಿಜಭಕ್ತಿಯುಳ್ಳವನಿದ್ದರೆ ಅವನಿಗೆ ಎಂದಿಗೂ ಕೇಡು ಮಾಡಲಾರವು, ಇಷ್ಟೇಅಲ್ಲ ಅವನಿಗೆ ಅವು ಆಳಾಗಿ ದುಡಿಯುವವೆಂಬದನ್ನು ಶಂಕರದಾಸಿಮಯ್ಯನು ತೋರಿಸಿಕೊಟ್ಟನು. ಶಂಕರದಾಸಿಮಯ್ಯನಿಗೋಸ್ಕರ ಈ ದೇವತೆಗಳು ಕೊಟ್ಟಣವನ್ನು ಕುಟ್ಟಿತಂದು ಹಾಕಿದವೆಂದು ಅವನ ಚರಿತ್ರೆಯಲ್ಲಿ ಹೇಳಿದೆ. ಈ ಪ್ರಕಾರ ಶಂಕರದಾಸಿಮಯ್ಯನಾದರೂ ದೇವರದಾಸಿಮಯ್ಯ, ಬಾಹೂರ ಬೊಮ್ಮಯ್ಯಗಳಂತೆ ಪರಮಾತ್ಮನಾರು, ಅವನ ಸ್ವರೂಪವೇನು, ನಿಜಭಕ್ತಿಯಾವುದು, ಎಂಬುದನ್ನು ತನ್ನ ನಡೆನುಡಿಯಿಂದ ಸಿದ್ಧಪಡಿಸಿದ್ದಾನೆ. ಅವನ ಚರಿತ್ರೆಯಿಂದ ಪರಮಾತ್ಮನೊಬ್ಬನೇ ಇದ್ದಾನೆಂಬ ತತ್ವವು ಬಸವೇಶ್ವರನಕಿಂತಲೂ ಮೊದಲು ರೂಢವಾಗಹತ್ತಿತ್ತೆಂಬುದು ತಿಳಿದುಬರುತ್ತಿದೆ.

ಪುರಾತನ ಶಿವಶರಣರು ಇಂಥ ಧಾರ್ಮಿಕ ತತ್ವಗಳನ್ನು ಪ್ರಚಾರ ಮಾಡುವಲ್ಲಿ ಅವರಿಗೆ ಅನೇಕ ತೊಂದರೆಗಳು ಉದ್ಭವಿಸಿದವು. ಆದರೆ ಇವರು ಪರಸಮಯಿಗಳನ್ನು ಶಾಸ್ತ್ರಾಧಾರದಿಂದ ಖಂಡಿಸಿದ್ದಲ್ಲದೆ ತಮ್ಮ ವರ್ತನೆಯಿಂದಲೂ ತಮ್ಮ ಈ ಸಿದ್ಧಾಂತವನ್ನು ನೆಲೆಗೊಳಿಸಿದರು. ದೇವರ ಸಂಬಂಧದ ಅವರ ಈ ವಿಶಾಲವಾದ ತತ್ವವನ್ನು ಮುಂದೆ ಬಸವನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಶಿವಶರಣರು ಮತ್ತಿಷ್ಟು ಹೆಚ್ಚಿಗೆ ಬಲಪಡಿಸಿದರು.

ಅನೇಕರು ಬಸವೇಶ್ವರನು ವೀರಶೈವ ಧರ್ಮಸ್ಥಾಪಕನೆಂದು ಹೇಳುವದುಂಟು. ಆದರೆ ಅವನಕಿಂತಲೂ ಮೊದಲು ದೇಶದಲ್ಲಿ ವೀರಶೈವ ಧಾರ್ಮಿಕ ಜಾಗ್ರತಿಯು ತಲೆದೋರಹತ್ತಿತ್ತೆಂಬುದು ಅವನ ಹಿಂದಿನ ಈ ಶಿವಶರಣರ ಚರಿತ್ರೆಗಳನ್ನು ನಿರೀಕ್ಷಿಸಿದರೆ ಕಂಡುಬರದೆ ಇರಲಾ

ರದು. ಈ ಶಿವಶರಣರಲ್ಲಿ ದೇವರದಾಸಿಮಯ್ಯ, ಶಂಕರದಾಸಿಮಯ್ಯ, ಪ್ರಭುದೇವ, ದೇವಣಸಿದ್ಧ, ಬಾಹೂರು ಬ್ರಹ್ಮಯ್ಯ ಇವರೇ ಮೊದಲಾದವರು ಮುಖ್ಯರಿವ್ವ, ಇವರ ಚರಿತ್ರೆಗಳನ್ನು ನಾವು ಪರಿಶೀಲಿಸಿದಲ್ಲಿ ಈ ಸಂಗತಿಯು ದೃಢಪಡುತ್ತಿದೆ. ಆದರೆ ಮುಂದೆ ಬಸವೇಶ್ವರನ ಕಾಲದಲ್ಲಿ ಅನೇಕ ಶಿವಶರಣರು ಉದ್ಭವಿಸಿ ಅವರು ವೀರಶೈವ ಧರ್ಮಕ್ಕೆ ಒಂದು ವ್ಯವಸ್ಥಿತ ಸ್ವರೂಪವನ್ನು ತಂದುಕೊಟ್ಟರು. ಆದರೆ ಬಸವೇಶ್ವರನು ಬಹಳ ವರ್ಷಗಳ ವರೆಗೆ ಜೀವಿಸಲಿಲ್ಲ. ಅವನ ಕಾಲದಲ್ಲಿ ಅನೇಕ ವಿಪ್ಲವಗಳು ಉಂಟಾದವು. ಆದರೂ ಅವನ ತರುವಾಯ ಅವನು ಪ್ರಾರಂಭಿಸಿದ ಮಹತ್ವದ ಕಾರ್ಯಗಳು ಮತ್ತಿಷ್ಟು ಹೆಚ್ಚಿಗೆ ಪ್ರಬಲವಾದವು. ಆಗ ಅಸಂಖ್ಯ ವಚನಕಾರರು ದೇಶದಲ್ಲಿ ಉದ್ಭವಿಸಿ ಬಸವೇಶ್ವರನ ತತ್ವಗಳನ್ನು ಮತ್ತಿಷ್ಟು ಬಲವಾಗಿ ಪ್ರಸಾರವಾಡಿದರು. ಅವುಗಳಲ್ಲಿ ಪರಮಾತ್ಮನ ಬಗ್ಗೆ ಶುದ್ಧ ಸಾತ್ವಿಕ ವಿಚಾರಗಳನ್ನು ಅವರು ಪ್ರಸಾರಪಡಿಸಿದ್ದು ಅತಿ ಮಹತ್ವದ್ದಾಗಿದೆ.

ಪರಮಾತ್ಮನು ಸರ್ವವ್ಯಾಪಿಯೂ, ನಿರಾಕಾರನೂ ಇದ್ದಾನೆಂಬ ಸಿದ್ಧಾಂತವು ಈ ಪ್ರಕಾರ ಸ್ಥಾಪನೆಯಾದ ಬಳಿಕ ಅವನನ್ನು ಹೇಗೆ ಪೂಜಿಸಬೇಕು ಮತ್ತು ಅವನೊಡನೆ ಹೇಗೆ ಸಾಮರಸ್ಯವನ್ನು ಹೊಂದಬೇಕು, ಎಂಬ ವಿಚಾರಗಳು ಸ್ವಾಭಾವಿಕವಾಗಿ ಮುಂದೆ ಬರುತ್ತವೆ. ಹಿಂದೂ ಸಮಾಜದಲ್ಲಿ ಶಿವ, ವಿಷ್ಣು, ಬ್ರಹ್ಮ, ಈ ತ್ರಿವಮೂರ್ತಿಗಳ ಮೂಲಕ ಪರಮಾತ್ಮನನ್ನು ಆರಾಧಿಸುವದುಂಟು. ಆದರೆ ವೀರಶೈವರು ತಮ್ಮ ಆರಾಧನೆಯಲ್ಲಿ ಒಂದು ವಿಶಿಷ್ಟತೆಯನ್ನು ತೋರಿಸಿದ್ದಾರೆ. ಇದು ಯಾವುದೆಂಬದನ್ನು ಕುರಿತು ನಾವು ಮುಂದಿನ ಲೇಖದಲ್ಲಿ ವಿವರಿಸುತ್ತೇವೆ.

---

(೩೮) ಚಕ್ರಗಳು:— ಇವು ಮೂಲ ಚಿತ್ತುವಿನ ಮೂಲಕ ಮಿದುಳಿನಲ್ಲಿ ಉಂಟಾಗುವ ಜೈತನ್ಯಕ್ಕೆ ಕೇಂದ್ರಸ್ಥಾನಗಳೆಂದು ಹೇಳಬಹುದು. ಇವು ಒಟ್ಟು ೯ ಇವೆ. ಮಿದುಳಿನಲ್ಲಿ ಮೂರು ಮತ್ತು ಶರೀರದ ಉಳಿದ ಭಾಗಗಳಲ್ಲಿ ಆರು ಹೀಗೆ ಇವೆ. ಗುದದಲ್ಲಿ ಆಧಾರ ಚಕ್ರ, ಗುಹ್ಯದಲ್ಲಿ ಸ್ವಾಧಿಷ್ಠಾನ ಚಕ್ರ, ಉದರ ಅಥವಾ ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ, ಹೃದಯದಲ್ಲಿ ಅನಾಹತಚಕ್ರ, ಕಂಠದಲ್ಲಿ ವಿಶುದ್ಧಿಚಕ್ರ, ಲಲಾಟದಲ್ಲಿ ಆಜ್ಞಾಚಕ್ರ ಹೀಗೆ ಇವೆ. ಮಿದುಳಿನ ಮಧ್ಯಭಾಗದಲ್ಲಿ ಅಂದರೆ ನೆತ್ತಿಯಲ್ಲಿ ಬ್ರಹ್ಮಚಕ್ರ, ಇದರ ತರುವಾಯ ಮಸ್ತಕಾಗ್ರದಲ್ಲಿ ಶಿಖಾಚಕ್ರ ಮತ್ತು ಇದಕ್ಕೂ ಮುಂದೆ ತಲೆಯ ಹಿಂಭಾಗದಲ್ಲಿ ಪಶ್ಚಿಮಚಕ್ರ. ಮಿದುಳಿನಲ್ಲಿ ಮೊದಲು ಚಲನೆಗಳುಂಟಾಗುತ್ತವೆ. ಈ ಚಲನೆಗಳು ಸ್ನಾಯು (*nerves*) ಗಳ ಮೂಲಕ ಶರೀರದಲ್ಲೆಲ್ಲ ಹರಡುತ್ತವೆ. ಹೀಗೆ ಪಸರಿಸುವಲ್ಲಿ ನರಗಳು ಅಥವಾ ಸ್ನಾಯುಗಳೊಳಗಿಂದ ಅವು ಮೊದಲು ಬೆನ್ನೆಲುವಿನ ರಂಧ್ರದೊಳಗೆ ಪ್ರವೇಶ ಮಾಡುತ್ತವೆ. ಅಲ್ಲಿಂದ ಅವು ಮೇಲ್ಕಂಡ ಚಕ್ರಗಳಲ್ಲಿಗೆ ಹೋಗಿ ಅಲ್ಲಿಂದ ಶರೀರದಲ್ಲೆಲ್ಲ ಪಸರಿಸಿ ಅದರ ಅನೇಕ ಕ್ರಿಯೆಗಳಿಗೆ ಕಾರಣವಾಗುತ್ತವೆ. ಈ ಚಲನೆಗಳಿಗೋಸ್ಕರ ಈ ಚಕ್ರಗಳು ರೇಲ್ವೆಯ ಜಂಗಶನ್ನುಗಳೆಂದು ಹೇಳಬಹುದು. ಇಲ್ಲಿಗೆ ಹೇಗೆ ಅನೇಕ ದಿಕ್ಕುಗಳಿಂದ ರೇಲ್ವೆಗಳು ಬಂದು ಮುಟ್ಟುತ್ತವೋ ಮತ್ತು ಅಲ್ಲಿಂದ ಅವು ಬೇರೆ ಬೇರೆ ಸ್ಥಾನಗಳಿಗೆ ಹೋಗುತ್ತವೋ, ಹಾಗೆಯೇ ಈ ಚಕ್ರಗಳ ಕಾರ್ಯಗಳಿರುತ್ತವೆ. ಮಿದುಳಿನಿಂದ ಬರುವ ಚಲನೆಗಳು ಈ ಚಕ್ರಗಳಿಗೆ ಮೊದಲು ಬರುತ್ತವೆ. ಮಿದುಳಿನಲ್ಲಿರುವ ಬ್ರಹ್ಮಚಕ್ರವು ಆಧಾರಸ್ವಾಧಿಷ್ಠಾನಚಕ್ರಗಳಿಗೆ, ಶಿಖಾಚಕ್ರವು ಮಣಿಪೂರಕ ಅನಾಹತ ಚಕ್ರಗಳಿಗೆ ಮತ್ತು ಪಶ್ಚಿಮ ಚಕ್ರವು ವಿಶುದ್ಧಿ, ಆಜ್ಞಾಚಕ್ರಗಳಿಗೆ ಪ್ರತ್ಯಕ್ಷ ಸಂಬಂಧಪಡುತ್ತವೆ. ಮಿದುಳಿನಲ್ಲಿ ಉತ್ಪನ್ನವಾಗುವ ಈ ಚಲನೆಗಳು ಆಯಾ ಚಕ್ರಗಳ ದ್ವಾರಾ ಬೇರೆ ಬೇರೆ ಅವಯವಗಳಿಗೆ ಪಸರಿಸುತ್ತವೆ. ಹೀಗೆ ಚಕ್ರಗಳು ಶಕ್ತಿಯನ್ನು ವ್ಯವಸ್ಥೆಗೊಳಿಸುವ ಕಾರ್ಯವಮಾಡುತ್ತವೆ.

ಈ ಚಕ್ರಗಳಿಗೆ ಅನುಕ್ರಮವಾಗಿ ೪, ೬, ೧೦, ೧೨, ೧೬, ೨ ದಳಗಳಿವೆ. ಈ ದಳಗಳಲ್ಲಿ ಋಂ ಅಕ್ಷರಗಳಿರುತ್ತವೆ. ಆಧಾರಚಕ್ರದ ದಳಗಳಲ್ಲಿ ವ ಶ ಷ ಸ ಅಕ್ಷರಗಳು, ಸ್ವಾಧಿಷ್ಠಾನದ ದಳಗಳಲ್ಲಿ ಬ ಭ ಯ ರ ಲ ಅಕ್ಷರಗಳು, ಮಣಿಪೂರಕದಲ್ಲಿ ಡ ಢ ಣ ತ ಥ ದ ಧ ನ ಪ ಫ ಅಕ್ಷರಗಳು, ಅನಾಹತ

ಯೋಗ ಮೊದಲಾದವುಗಳ ಮೂಲಕವಲ್ಲ. ಹೀಗೆ ಲಿಂಗಮುಖ ಮಾಡಿದಲ್ಲಿ ಆಧಾರದಲ್ಲಿ ಆಚಾರಲಿಂಗವು, ಸ್ವಾಧಿಷ್ಠಾನದಲ್ಲಿ ಗುರುಲಿಂಗವು, ಮಣಿಪೂರಕದಲ್ಲಿ ಶಿವಲಿಂಗವು, ಅನಾಹತದಲ್ಲಿ ಜಂಗಮಲಿಂಗವು, ವಿಶುದ್ಧಿಯಲ್ಲಿ ಪ್ರಸಾದಲಿಂಗವು, ಆಜ್ಞೆಯಲ್ಲಿ ಮಹಾಲಿಂಗವು ನೆಲೆಗೊಳ್ಳುತ್ತವೆ. ಬ್ರಹ್ಮರಂಧ್ರದಲ್ಲಿ ನಿಷ್ಕಲ ಲಿಂಗವು, ಶಿಖಿಯಲ್ಲಿ ನಿಶ್ಶೂನ್ಯಲಿಂಗವು, ಪಶ್ಚಿಮದಲ್ಲಿ ನಿರಂಜನಲಿಂಗವು ಪ್ರಕಟವಾಗುವವು. ಈ ಲಿಂಗಗಳ ಪ್ರಕಾಶದಿಂದ ಕರ್ಮೇಂದ್ರಿಯ ಜ್ಞಾನೇಂದ್ರಿಯ ಮೊದಲಾದವುಗಳ ಕ್ರಿಯೆಗಳು ಶರೀರದಲ್ಲಿ ನಡಿಯುವವು.

ಈ ಲಿಂಗಗಳ ಸಾಧನೆಗೋಸ್ಕರ ಹಿಂದೆ ಹೇಳದಂತೆ ಷಟ್‌ಸ್ಥಲದ ಆಚರಣೆಯು ಮನುಷ್ಯನಿಗೆ ಅವಶ್ಯವಾದುದು. ಅದರ ಆಚರಣೆಗಳ ಮೇರೆಗೆ ಅವನು ಜಗತ್ತಿನಲ್ಲಿಯ ತನ್ನ ವ್ಯಾಪಾರಗಳನ್ನು ನಿರ್ವರ್ತಿಸತಕ್ಕದ್ದು. ಅವುಗಳಂತೆಯೇ ಅವನು ಸಾಧನೆಗಳನ್ನು ಮಾಡತಕ್ಕದ್ದು. ಈ ಸಾಧನೆಗೆ ಅಷ್ಟಾವರಣಗಳು ಸಹಾಯಕಾರಿಗಳು. ಅಷ್ಟಾವರಣಗಳಲ್ಲಿ ಗುರುಲಿಂಗಜಂಗಮಗಳು ಮುಖ್ಯವಾದವುಗಳು. ಇವುಗಳ ಸಾಧನೆಯನ್ನು ಸಾಧಿಸತಕ್ಕದ್ದು. ಇವುಗಳನ್ನು ಅವನು ಅನುಕ್ರಮವಾಗಿ ಇಷ್ಟ ಪ್ರಾಣ ಭಾವಲಿಂಗಗಳ ಮೂಲಕ ತನ್ನಲ್ಲಿ ಸಾಧಿಸತಕ್ಕದ್ದು. ಇಷ್ಟಲಿಂಗದಿಂದ ಗುರುವನ್ನೂ ಪ್ರಾಣಲಿಂಗದಿಂದ ಲಿಂಗವನ್ನೂ ಭಾವಲಿಂಗದಿಂದ ಜಂಗಮವನ್ನೂ ಸಾಧಿಸತಕ್ಕದ್ದು. ಗುರುಕೊಟ್ಟದ್ದೇ ಇಷ್ಟಲಿಂಗವು ಈ ಇಷ್ಟಲಿಂಗದ ಧ್ಯಾನದಿಂದ ಹೃದಯಕಮಲದಲ್ಲಿದ್ದ ಪ್ರಾಣಲಿಂಗವು ಅರಳುತ್ತದೆ. ಈ ಹೃದಯಕಮಲದಲ್ಲಿ ಜೀವನು ನಾಸವಾಗಿರುತ್ತಾನೆ. ಅವನು ಪ್ರಾಣಲಿಂಗದೊಡನೆ ಬೆರೆಯಲು ಭಾವಲಿಂಗವು ಪ್ರಜ್ವಲಿಸಹತ್ತುತ್ತದೆ. ಇದು ಹಣೆಗಣ್ಣಿನಲ್ಲಿದೆ. ಅದು ಓಂಕಾರ ರೂಪವಾದುದು. ಅದುವೆ ಆಜ್ಞಾಚಕ್ರವು. ಈ ಭಾವಲಿಂಗದಿಂದ ಮುಂದೆ ಮಿದುಳಿನಲ್ಲಿ ತ್ರಿವೇಣೀ ಸಂಗವಿದ್ದು ಅಲ್ಲಿಗೆ ಹೋಗತಕ್ಕದ್ದು. ಅದು ಸಂಗಮ ಕ್ಷೇತ್ರವೆಂತಲೂ ಹೇಳಲ್ಪಡುತ್ತದೆ. ಅಲ್ಲಿ ಎಡಕ್ಕೆ ಬಲಕ್ಕೆ ಎರಡು ದಾರಿಗಳಿವೆ. ಅವುಗಳಲ್ಲಿ ಹೋಗದೆ ಮಧ್ಯ ಮಾರ್ಗವನ್ನು ಹಿಡಿಯಬೇಕು. ಅದು ಬಹು ಸೂಕ್ಷ್ಮವಾದುದು. ಅದು ತಲೆವಾಗಿಲವೆಂತಲೂ ಹೇಳಲ್ಪಡುವದು. ಅಲ್ಲಿಂದ ಮುಂದೆ ಹೋಗಲು ನಿಷ್ಕಲಲಿಂಗವು ತೋರುವದು. ಅದು ನಿರುಪಾಧಿಕಜ್ಯೋತಿಯು.

ಚಕ್ರದಲ್ಲಿ, ಕ ಖ ಗ ಘ ಙ ಚ ಛ ಜ ಝ ಞ ಟ ಠ ಅಕ್ಷರಗಳು, ವಿಶುದ್ಧಿಚಕ್ರದಲ್ಲಿ, ಅ ಆ ಇ ಈ ಉ ಊ ಋ ೠ ಌ ೡ ಎ ಏ ಐ ಒ ಓ ಔ ಅಂ ಅಃ ಅಕ್ಷರಗಳು ಇವೆ. ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ೨ ದಳಗಳಿವೆ. ಅವುಗಳಲ್ಲಿ ಹಂ ಸಂ ಎಂಬ ಅಕ್ಷರಗಳು ಇವೆ. ಬ್ರಹ್ಮಚಕ್ರವು ಸಹಸ್ರದಳವುಳ್ಳದ್ದು. ಅದು ಸಹಸ್ರಾಕ್ಷರ ಅನಂತವೇದಗಳನ್ನೊಳಕೊಂಡಿದೆ. ಮಸ್ತಕಾಗ್ರದಲ್ಲಿರುವ ಶಿಖಾಚಕ್ರಕ್ಕೆ ೩ ದಳಗಳು ಇವೆ. ಪಶ್ಚಿಮಚಕ್ರದಲ್ಲಿ ಒಂದು ದಳವಿದೆ. ಈ ಯಾವತ್ತು ಚಕ್ರಗಳಲ್ಲಿ ಶಕ್ತಿಗಳಿಗೆ ಕಾರಣವಾದ ಪ್ರಣವಾಕ್ಷರಗಳಿರುತ್ತವೆ. ಆಧಾರಚಕ್ರದಲ್ಲಿ ನಕಾರವು, ಸ್ವಾಧಿಷ್ಠಾನದಲ್ಲಿ ಮಕಾರವು, ಮಣಿಪೂರಕದಲ್ಲಿ ಶಿಕಾರವು ಅನಾಹತದಲ್ಲಿ ವಕಾರವು, ವಿಶುದ್ಧಿಯಲ್ಲಿ ಯಕಾರವು, ಆಜ್ಞೆಯಲ್ಲಿ ಓಂಕಾರವು ಇರುತ್ತವೆ. ಬ್ರಹ್ಮಚಕ್ರದಲ್ಲಿ ಬಕಾರವು, ಶಿಖಾಚಕ್ರದಲ್ಲಿ ಷ್ಟಕಾರವು, ಪಶ್ಚಿಮಚಕ್ರದಲ್ಲಿ ಹಕಾರವು ಇರುತ್ತವೆ. ಈ ಪ್ರಣವಾಕ್ಷರಗಳ ಮೂಲಕವೇ ಮಿದುಳಿನ ಚಲನೆಗಳು ಸ್ನಾಯುಗಳೊಳಗಿಂದ ಶರೀರದಲ್ಲಿ ಸಂಚರಿಸುತ್ತವೆ. ಅವು ಶಕ್ತಿಗಳ ರೂಪದಲ್ಲಿ ತೋರುತ್ತವೆ. ಶಂ ಅಕ್ಷರಗಳಿಗೆ ಮೂಲವಾದುದು ಲಲಾಟ ಚಕ್ರದಲ್ಲಿರುವ ಓಂಕಾರವೇ ಇರುತ್ತಿದೆ. ಮಿದುಳಿನಲ್ಲಿ ಉಂಟಾಗುವ ಚಲನೆಗಳು ಈ ಪ್ರಣವಾಕ್ಷರಗಳ ಮೂಲಕ ನಾಡಿಗಳ ದ್ವಾರಾ ಶರೀರದಲ್ಲಿರುವ ಆಯಾ ಚಕ್ರಗಳಿಗೆ ತಲ್ಪಿ ಅಲ್ಲಿಂದ ಶರೀರದ ಆಯಾ ಅವಯವಗಳ ಕಡೆಗೆ ಹರಿದುಹೋಗುತ್ತವೆ.

ಯೋಗಾಭ್ಯಾಸಿಗಳು ಈ ಚಕ್ರಗಳ ಜ್ಞಾನವನ್ನು ಮಾಡಿಕೊಳ್ಳಬೇಕು. ಹೀಗೆ ಮಾಡಿಕೊಂಡು ಅವುಗಳನ್ನು ಲಿಂಗಸಾಧನೆಯ ಮೂಲಕ ಉತ್ತೇಜನಗೊಳಿಸಬೇಕು. ಈ ರೀತಿಯನ್ನು ವೀರಶೈವರು ಒಪ್ಪಿಕೊಂಡಿದ್ದಾರೆ. ಹೀಗೆ ಮಾಡಿದಲ್ಲಿ ಮನುಷ್ಯನಿಗೆ ಸಿದ್ಧಿಗಳು ಪ್ರಾಪ್ತವಾಗುವವು. ಆದರೆ ಲಿಂಗನಿಷ್ಠರಾದ ವೀರಶೈವರು ಈ ಸಿದ್ಧಿಗಳನ್ನು ಮಾಡಕೂಡದು. ಅವರು ಚಕ್ರಗಳ ಮೂಲಕ ಹರಿಯುವ ನಾನಾಬಗೆಯ ಶಕ್ತಿಗಳನ್ನು ಲಿಂಗಮುಖವನ್ನಾಗಿ ಮಾಡಿ ತಮ್ಮ ಕ್ರಿಯೆಗಳನ್ನು ಮಾಡತಕ್ಕದ್ದು. ಶಿವಯೋಗಿಗಳಿಗೂ ಇತರಯೋಗಿಗಳಿಗೂ ಇರುವ ಭೇದವು ಇದೇ ಇದೆ. ಶಿವಯೋಗಿಯು ಆಯಾ ಚಕ್ರಗಳಲ್ಲಿ ಆಯಾ ಲಿಂಗಗಳನ್ನು ಬರಮಾಡಿಕೊಳ್ಳತಕ್ಕದ್ದು. ಈ ರೀತಿಯನ್ನು ಅವನು ಷಟ್‌ಸ್ಥಲಾಚರಣೆ, ಅಷ್ಟಾವರಣಗಳು ಇವುಗಳ ಮೂಲಕ ಸಾಧಿಸತಕ್ಕದ್ದು. ಕಷ್ಟಕರವಾದ ಹಠ

ನಿರಾಳ ಲಿಂಗವ. ಅದನ್ನು ಪೂಜೆಮಾಡಬೇಕು. ಅಂದರೆ ಪರಶಿವನಲ್ಲಿ ಬೆರೆಯುತ್ತಾನೆ. ಇದನ್ನು ಸಾಧಿಸುವದೇ ಶಿವಯೋಗವು.

ಈ ಸಾಧನೆಯನ್ನು ಯೋಗ್ಯ ಆಸನ, ಪ್ರಾಣಾಯಾಮ, ಮತ್ತು ಲಿಂಗಧ್ಯಾನದಿಂದ ಸಾಧಿಸಬೇಕು. ಲಿಂಗಪೂಜೆಯನ್ನು ಈ ಧ್ಯೇಯವ ನ್ನಿಟ್ಟುಕೊಂಡು ಭಕ್ತನು ನಿತ್ಯ ಆಚರಿಸಬೇಕು. ಆದ್ದರಿಂದ ವೀರಶೈವನ ಲಿಂಗಪೂಜೆಯು ಆ ಶಿವಯೋಗಕ್ಕೆ ಸಾಧಕವಾಗಿದೆ.

ವೀರಶೈವರು ಈ ಪ್ರಕಾರ ಯೋಗಾಭ್ಯಾಸದ ಮುಖ್ಯ ತತ್ವಗಳನ್ನು ಸ್ವೀಕರಿಸಿದ್ದಾರೆ. ಆದರೆ ಸಾಧನೆಯಲ್ಲಿ ಹಠಯೋಗಿಗಳ ಕ್ಲೇಶಕರವಾದ ಮಾರ್ಗವನ್ನು ಅವರು ಕೈಕೊಳ್ಳುವದಿಲ್ಲ. ಅಂದರೆ ಇಂದ್ರಿಯಗಳನ್ನು ಕ್ಲೇಶಪಡಿಸಬಾರದು. ಅಥವಾ ನಿರ್ಜನ ಪ್ರದೇಶಗಳಿಗೆ ಹೋಗಬಾರದು. ನಿತ್ಯದ ತನ್ನ ಆಚರಣೆಗಳನ್ನು ಷಟ್‌ಸ್ಥಲಶಾಸ್ತ್ರದ ತತ್ವಗಳಂತೆ ಜರುಗಿಸಬೇಕು. ಈ ಷಟ್‌ಸ್ಥಲದ ಆಚರಣೆಗಳಂತೆ ನಡೆದರೆ ಚಕ್ರಗಳಲ್ಲಿ ಲಿಂಗಜ್ಯೋತಿಯು ತಾನಾಗಿಯೇ ಬೆಳಗಹತ್ತುತ್ತದೆ. ಈ ಆಚರಣೆಗಳಾವವೆಂಬುದು ವಚನಶಾಸ್ತ್ರಸಾರ ಭಾಗ ೨ ಪುಟ ೧೭೩ ರಲ್ಲಿ ಹೇಳಲ್ಪಟ್ಟಿದೆ. ಇದು 'ಶಬ್ದಕೋಶ' ಮಾತ್ರ ಇರುವದರಿಂದ ಅವುಗಳನ್ನು ಇಲ್ಲಿ ಸವಿಸ್ತಾರವಾಗಿ ನಿರೂಪಿಸುವದು ಅನಾವಶ್ಯಕವು.

ಈ ರೀತಿಯಾಗಿ ಪರ್ತಿಸಿದಲ್ಲಿ ಲಿಂಗಾಂಗ ಸಾಮರಸ್ಯವು ಪ್ರಾಪ್ತವಾಗುತ್ತದೆ. ಇದರಲ್ಲಿ ಶುದ್ಧ ನೈತಿಕಾಚಾರ, ವೀರಶೈವಾಚರಣೆಗಳು, ಮಂತ್ರಗಳ ಮೂಲಕ ಧ್ಯಾನ, ಇವೇ ಮೊದಲಾದವುಗಳು ಮುಖ್ಯವಾಗಿರುತ್ತವೆ. ಇವುಗಳಿಂದ ಮನುಷ್ಯನು ಲಿಂಗ ಶರೀರಿಯಾಗುವನು.ಆಗ ಆಯಾ ಚಕ್ರಗಳಲ್ಲಿ ಲಿಂಗವು ಬೇರೆ ಬೇರೆ ರೂಪದಿಂದ ಬೆಳಗಹತ್ತುವದು. ವಿಶ್ವವೆಲ್ಲ ಲಿಂಗಮಯವಾಗಿ ತೋರಹತ್ತುವದು ಮತ್ತು ಕಡೆಗೆ ಪರಶಿವನಲ್ಲಿ ಬೆರೆಯುವನು.

ಈ ಚಕ್ರಗಳಿಗೆ ವರ್ಣಗಳಿವೆ. ಅವು ಅನುಕ್ರಮವಾಗಿ ಪೀತವರ್ಣ, ಶ್ವೇತವರ್ಣ, ಹರಿತವರ್ಣ, ಮಾಂಜಿಷ್ಠವರ್ಣ, ಕಪೋತವರ್ಣ, ಮಾಣಿಕ್ಯವರ್ಣ, ಇವುಗಳಿವೆ. ಕಡೆಯ ೩ ಚಕ್ರಗಳಿಗೆ ಜ್ಯೋತಿರ್ವರ್ಣ, ಮಹಾಜ್ಯೋತಿರ್ವರ್ಣ, ಅಗಣಿತ ಮಹಾಜ್ಯೋತಿರ್ವರ್ಣ ಇವುಗಳಿವೆ.

ಈ ಚಕ್ರಗಳಿಗೆ ಅಧಿದೇವತೆಗಳಿದ್ದಾರೆ. ಅನುಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ ಇವರು ಇರುವರು. ಮತ್ತು ಕಡೆಯ ಮೂರು ಚಕ್ರಗಳಲ್ಲಿ ಪರಮೇಶ್ವರ ಸರ್ವೇಶ್ವರ ಮತ್ತು ಮಹಾದೇವ ಎಂದು ಹೇಳಲ್ಪಡುತ್ತಾರೆ.

ಈ ಚಕ್ರಗಳು ಸಾದಾಖ್ಯಗಳೆಂತಲೂ ಹೇಳಲ್ಪಡುತ್ತವೆ. ಅವು ಅನುಕ್ರಮವಾಗಿ ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ ಮತ್ತು ಮಹಾಸಾದಾಖ್ಯಗಳು ಮತ್ತು ಕಡೆಯ ಸಾದಾಖ್ಯಗಳು ಅಗಮ್ಯ, ಅಗೋಚರ, ಅಪ್ರಮಾಣವೆಂದಿವೆ.

ಆತ್ಮನ ವಿಕಾಸವೂ ಅದರಂತೆಯೇ ಹೆಚ್ಚುತ್ತ ಹೋಗುತ್ತದೆ. ವಿಕಾಸ ಹೊಂದಿದ ಹಾಗೆ ಆತ್ಮನು ಅನುಕ್ರಮವಾಗಿ ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಎಂದು ಹೇಳಲ್ಪಡುತ್ತಾನೆ. ಮತ್ತು ಕಡೆಯ ಮೂರು ಆತ್ಮನ ಸ್ಥಿತಿಗಳು ಮಹಾತ್ಮ, ದಿವ್ಯಾತ್ಮ, ಮತ್ತು ಚಿನ್ಮಯಾತ್ಮ ಎಂದು ಹೇಳಲ್ಪಡುತ್ತವೆ.

ಈ ಚಕ್ರಗಳಿಗೆ ಆಕೃತಿಗಳೂ ಉಂಟು. ಅವು ಯಾವವೆಂದರೆ ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧ ಚಂದ್ರಾಕೃತಿ, ದರ್ಪಣಾಕೃತಿ, ಜ್ಯೋತಿರಾಕೃತಿ, ಇವುಗಳಿವೆ. ಮತ್ತು ಕಡೆಯ ಚಕ್ರಗಳಿಗೆ ಅನುಕ್ರಮವಾಗಿ ನಿಷ್ಕಳಾಕೃತಿ, ನಿಶ್ಶೂನ್ಯಾಕೃತಿ, ನಿರಂಜನಾಕೃತಿ ಎಂಬ ಹೆಸರುಗಳಿವೆ.

ಕಲೆಗಳು ಇವೆ. ಅವು ಯಾವವೆಂದರೆ, ನಿವೃತ್ತಿ, ಪ್ರತಿಷ್ಠಾ, ವಿದ್ಯಾ ಶಾಂತಿ, ಶಾಂತ್ಯಾತೀತ, ಶಾಂತ್ಯಾತೀತೋತ್ತರ ಇವು ಇವೆ. ಕಡೆಯವುಗಳು ಅನುಕ್ರಮವಾಗಿ ಅನಾದಿ, ನಿರ್ಮಾಯ, ಅನಿರ್ವಾಚ್ಯ ಎಂಬವುಗಳಿವೆ.

ಆಯಾ ಚಕ್ರಗಳನ್ನು ಒಳಕೊಂಡ ಹಾಗೆ ಶಿವಯೋಗಿಗೆ ನಾದಗಳು ಕೇಳಿಸುತ್ತವೆ. ಅವು ಅನುಕ್ರಮವಾಗಿ ಭ್ರಮರ, ವೇಣು, ಘಂಟಾ, ಭೇರಿ, ಮೇಘ ಮತ್ತು ಪ್ರಣವ ಇವುಗಳು-ಮತ್ತು ಕಡೆಯ ಮೂರು ನಾದಗಳು ದಿವ್ಯನಾದ, ಸಿಂಹನಾದ ಮತ್ತು ಮಹಾನಾದ ಎಂದು ಇವೆ.

ಆದರೆ ಮೇಲೆ ಹೇಳಿದ ಕಲೆಗಳು, ಪ್ರಣವಾಕ್ಷರಗಳು, ಪಂಚಾಕ್ಷರಗಳು, ಚಕ್ರಗಳು, ಚಕ್ರಗಳಿಗೆ ಸಂಬಂಧಿಸಿದ ದಳಗಳು, ದಳಗಳಲ್ಲಿ

ರುವ ಅಕ್ಷರಗಳು, ವರ್ಣಗಳು, ಬೆಳಕುಗಳು, ಆಕೃತಿಗಳು, ನಾದಗಳು ಅಧಿ ದೇವತೆಗಳು, ಇವುಗಳನ್ನು ಶರೀರದಲ್ಲಿ ಹುಡುಕಲಿಕ್ಕೆ ಹೋದರೆ ಅಲ್ಲಿ ದೊರೆಯಲಾರವು. ಅಲ್ಲಿ ಬರೇ ರಕ್ತ, ಮಾಂಸ ಇವುಗಳೇ ಕಾಣ ಬರುವದು ನಿಶ್ಚಯವು. ಇವುಗಳನ್ನು ಕಾಣಲಿಕ್ಕೆ, ಮುಟ್ಟಲಿಕ್ಕೆ, ಕೇಳಲಿಕ್ಕೆ ಅಂತರ್ಜ್ಞಾನವೇ ಬೇಕು. ಈ ಜ್ಞಾನವು ಆತ್ಮನಿಗೆ ಸಂಬಂಧಿಸಿರುತ್ತದೆ. ಪ್ರಯೋಗದಿಂದ ಅಥವಾ ಅನುಭಾವದಿಂದ ಅಥವಾ ಪರಿಣಾಮದಿಂದ ಅವುಗಳನ್ನು ಮನುಷ್ಯನು ತಿಳಿಯಬೇಕು. ಆದರೆ ಮುಂದೆ ಹೇಳತಕ್ಕ ನಾಡಿಗಳು ಮತ್ತು ವಾಯುಗಳು ಇವುಗಳಿಗಿಂತಲೂ ಹೆಚ್ಚಿಗೆ ಸ್ಥೂಲವಾಗಿರುತ್ತವೆ. ಅವುಗಳ ಕ್ರಿಯೆಗಳಾದರೂ ಹೆಚ್ಚಿಗೆ ಸ್ಥೂಲತರವಾದವುಗಳು.

(೩೯) ನಾಡಿಗಳುಃ— ನಾಡಿಗಳು ದೇಹದಲ್ಲೆಲ್ಲ ಪಸರಿಸಿರುತ್ತವೆ. ಅವು ಜೀರ್ಣವಾದ ಆರಳೆಯ ಪರ್ಣದಂತೆ ಇರುತ್ತವೆಂದು ವಚನಕಾರರು ವರ್ಣಿಸುವದುಂಟು. ಅವು ಅಸಂಖ್ಯಾತವಾಗಿವೆ. ಆದರೂ ಅವುಗಳಲ್ಲಿ ಮುಖ್ಯವಾದವುಗಳು ೭೨ ಸಾವಿರ. ಅವುಗಳಲ್ಲಿ ೧೫೦೦ ನಾಡಿಗಳು ಕಾರಣ ನಾಡಿಗಳೆಂದು ಹೇಳಲ್ಪಡುತ್ತವೆ. ಅವುಗಳಲ್ಲಿ ೭೦೦ ನಾಡಿಗಳು ಮುಖ್ಯವಾದವುಗಳು. ಅವುಗಳಲ್ಲಿ ೧೦೦ ನಾಡಿಗಳು ಮುಖ್ಯ ನಾಡಿಗಳಃ. ಅವುಗಳಲ್ಲಿ ೫೦ ನಾಡಿಗಳು ಪ್ರಧಾನವಾದವುಗಳು. ಅವುಗಳಲ್ಲಿ ೨೮ ನಾಡಿಗಳು ಪ್ರಯೋಜನನಾಡಿಗಳೆಂದು ಹೇಳಲ್ಪಡುತ್ತವೆ. ಅವುಗಳಲ್ಲಿ ೧೦ ನಾಡಿಗಳು ಅತ್ಯಧಿಕವಾದವುಗಳು. ಅವು ಈಡಾ, ಪಿಂಗಳ, ಸುಷುಮ್ನ ಗಾಂಧಾರಿ, ಹಸ್ತಿ ಜಿಹ್ವೆ, ಪೂಷ, ಪಯಸ್ವಿನೀ, ಲಕುಹ, ಅಲಂಬು, ಶಂಕಿನೀ ಹೀಗೆ ಇವೆ. ಇವುಗಳಲ್ಲಿ ಈಡಾ ಪಿಂಗಳ ಸುಷುಮ್ನಗಳೇ ಅತ್ಯಂತ ಬೀಜನಾಡಿಗಳೆಂದು ಭಾವಿಸಲ್ಪಟ್ಟಿರುತ್ತವೆ. ಈ ನಾಡಿಗಳ ಕ್ರಿಯೆಗಳು ಶರೀರದಲ್ಲಿರುವ ನರಗಳಿಂದ (Nerves) ನಡೆಯುತ್ತಿವೆ. ಶರೀರವು ಉಸುರಾಡಿಸುವದು, ನಿರೀಕ್ಷಿಸುವದು. ಕೇಳುವದು, ಹಸಿವೆಯಾಗುವದು, ಆಹಾರದಿಂದ ಅದಕ್ಕೆ ಶಾಂತಿಯಾಗುವದು ಇವು ಅತ್ಯಂತ ಅವಶ್ಯವಾದವುಗಳಷ್ಟೇ. ಇವು ಈ ನಾಡಿಗಳ ಮೂಲಕವೇ ಚಲನೆ ಹೊಂದುತ್ತವೆ. ಈಡಾ ಇದು ನಾಸಾಪುಟದ ಎಡಭಾಗ. ಅದು ವಾಯುವನ್ನು ಹೊರಗೆ ಹಾಕುತ್ತದೆ. ಪಿಂಗಳ ಇದು ನಾಸಾಪುಟದ ಬಲಭಾಗ. ಇದು ವಾಯುವನ್ನು ಒಳಕ್ಕೆ ಎಳೆದುಕೊಳ್ಳುತ್ತಿದೆ. ಸುಷುಮ್ನವು

ಇವುಗಳಿಗೆ ಮಧ್ಯವಾಗಿದ್ದುಕೊಂಡು ತಲೆ ಮಿದುಳಿನಲ್ಲಿ ಪ್ರವೇಶಿಸುತ್ತದೆ. ಅದು ವಾಯುವನ್ನು ಕುಂಭದಂತೆ ತಡೆಯುತ್ತದೆ. ಗಾಂಧಾರೀ ಇದು ಬಲದ ನೇತ್ರ. ನಿರೀಕ್ಷಣ ಕೃತ್ಯವನ್ನು ಮಾಡುತ್ತದೆ. ಹಸ್ತಿ ಜಿಹ್ವೆ ಇದು ಎಡದ ನೇತ್ರ. ನಿದ್ರಾವ್ಯಸನಕ್ಕೆ ಕಾರಣವಾಗಿದೆ. ಪೂಷ ಇದು ಬಲದ ಕರ್ಣ. ನಾದಾದಿ ಶಬ್ದಗಳನ್ನು ಕೇಳಿಸುತ್ತದೆ. ಪಯಸ್ವಿನೀ ಇದು ಎಡದ ಕರ್ಣ. ವಾದ್ಯಾದಿಗಳನ್ನು ಕೇಳಿಸುತ್ತದೆ. ಲಕುಹ ಇದು ಗುದದಲ್ಲಿದ್ದು ದೇಹದ ಭಾರಣೆಯನ್ನು ಹೊರುತ್ತದೆ. ಅಲಂಬು ಇದು ಮೇಢ್ರದಲ್ಲಿದ್ದು ಕ್ಷುಧಾದಿಗಳನ್ನು ಉಂಟು ಮಾಡುತ್ತದೆ. ಶಂಕಿನೀ ಇದು ನಾಭಿಯಲ್ಲಿದ್ದು ಕ್ಷುಧಾದಿಗಳನ್ನು ಉಪಶಮನ ಮಾಡುತ್ತದೆ. ಇವುಗಳಿಗೂ ಬೇರೆ ಬೇರೆ ಅಧಿದೇವತೆಗಳು ಇರುತ್ತಾರೆ. ಇವುಗಳಲ್ಲಿ ಸುಷುಮ್ನಾ ನಾಡಿಯ ಮಹತ್ವವು ವಿಶೇಷವಿದೆ. ಅದು ಗುದಸ್ಥಾನದಿಂದ ಬೆನ್ನೆಲುವಿನ ನಡುವೆ ತಂತಿಯಂತೆ ಕಪಾಲ ಪರಿಯಂತರ ಉದ್ದವಾಗಿ ಇರುತ್ತದೆ. ಇದಕ್ಕೆ ಬಲಗಡೆ ಇರುವದು ಪಿಂಗಳ ನಾಡಿ. ಅದು ಸಹ ಕಪಾಲ ಪರಿಯಂತರ ಬಂದು ಅಲ್ಲಿಂದ ಮಿದುಳಿನಲ್ಲಿ ಸೂರ್ಯ ಮಂಡಲವನ್ನು ವ್ಯಾಪಿಸಿರುತ್ತದೆ. ಅದರ ಮೂಲಕ 'ಎಡಮೂಗಿನಿಂದ ಉಸುರು ಹೊರಟು ಹೋಗುತ್ತದೆ. ಸುಷುಮ್ನ ನಾಡಿಯ ಅಗ್ನೇಯದಲ್ಲಿ ಸೂಕ್ಷ್ಮವಾದ ರಂಧ್ರವಿರುತ್ತದೆ. ಅದೇ ಬ್ರಹ್ಮ ರಂಧ್ರ. ಈ ಸುಷುಮ್ನ ನಾಡಿಯನ್ನು ಜೈತನ್ಯಗೊಳಿಸುವದರಿಂದ ಮನುಷ್ಯನ ಯೋಗ ಸಾಮರ್ಥ್ಯವು ಹೆಚ್ಚುವದು. ಆಸನ ಮತ್ತು ಪ್ರಣಾಯಾಮ ಇವುಗಳೊಡನೆ ಕೂಡಿದ ಯೋಗ ಸಾಧನೆಯಿಂದ ಈ ನಾಡಿಯು ಉತ್ತೇಜಿತವಾಗುವದು. ೯ ವಿಧ ಚಕ್ರಗಳಿಗೂ ಈ ನಾಡಿಗಳಿಗೂ ನಿಕಟ ಸಂಬಂಧವಿರುತ್ತದೆ. ಚಕ್ರಗಳೊಳಗಿಂದ ಹೊರಡುವ ಶಕ್ತಿಗಳು ಅತ್ಯಂತ ಸೂಕ್ಷ್ಮ ಸ್ಥಿತಿಯಲ್ಲಿದ್ದು ಅವು ನಾಡಿಗಳ ಮೂಲಕವೇ ಶರೀರದಲ್ಲಿ ಪ್ರಕಟವಾಗುತ್ತವೆ. ಆದ್ದರಿಂದ ಈ ನಾಡಿಗಳನ್ನು ಬಲಪಡಿಸಿ ಅವುಗಳನ್ನು ಅಂಕಿತದಲ್ಲಿಟ್ಟುಕೊಳ್ಳತಕ್ಕದ್ದು. ಇದರಿಂದ ಶರೀರದ ಬಾಹ್ಯ ಕ್ರಿಯೆಗಳೂ ಚಕ್ರಗಳೂ ಪರಸ್ಪರವಾಗಿ ಸುವ್ಯವಸ್ಥೆಯಿಂದ ನಡೆಯುವವು.

(೪೦) ವಾಯುಗಳುಃ— ಇವು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಮತ್ತು ನಾಗ; ಕೂರ್ಮ, ಕೃಕರ, ದೇವದತ್ತ, ಧನಂಜಯ ಎಂದು ಹತ್ತು ಇವೆ. ಮೊದಲಿನ ಐದು ಪ್ರಾಣ ವಾಯುಗಳೆಂದು ಹೇಳಲ್ಪಡುತ್ತಿವೆ. ಈ ಎಲ್ಲ ವಾಯುಗಳು ಶರೀರದ ರಕ್ಷಣೆಗೋಸ್ಕರ ಅವಶ್ಯಕವಾದವುಗಳು. ಇವಿಲ್ಲದಿದ್ದರೆ ಮನುಷ್ಯನು ಮೃತನಾಗುತ್ತಾನೆ. ಮನುಷ್ಯನು ಉಸಿರಾಡಿಸುವದು ಶರೀರದಲ್ಲಿಯ ಕಶ್ಮಲಗಳನ್ನು ಹೊರ ದೂಡುವದು ಅನ್ನವನ್ನು ಜೀರ್ಣಿಸಿ ಅದು ಶರೀರದಲ್ಲೆಲ್ಲ ಹಂಚಿಹೋ ಗುವಂತೆ ಮಾಡುವದು ಇವೇ ಮೊದಲಾದ ಕಾರ್ಯಗಳು ದೇಹ ಪುಷ್ಟಿಗೆ ಅವಶ್ಯವಾದವುಗಳು. ಶರೀರದಲ್ಲಿ ಉಗಮ ಹೊಂದುವ ಆಯಾ ಶಕ್ತಿಗಳು ನಾಡಿಗಳ ಮುಖಾಂತರ ನರಗಳಲ್ಲಿ ಪಸರಿಸುತ್ತಲೂ ಮುಂದೆ ಈ ವಾಯುಗಳ ಮೂಲಕ ಶರೀರದ ಆಯಾ ಭಾಗಗಳಲ್ಲಿ ಚಲನೆಗಳ ನ್ನುಂಟುಮಾಡುತ್ತಲೂ ಇರುತ್ತವೆ. ಈ ವಾಯುಗಳು ಜೈತನ್ಯವನ್ನುಂಟು ಮಾಡಿದ ಕೂಡಲೆ ಮೇಲ್ಕಂಡ ಕ್ರಿಯೆಗಳು ಜರಗುತ್ತವೆ.

ಪ್ರಾಣವಾಯುವು ಎಲ್ಲ ನಾಡಿಗಳನ್ನು ಸುತ್ತಿಕೊಂಡು ಮೂಲಾಧಾರ ದಲ್ಲಿ ಹೊರಟು ನಾಭಿಚಕ್ರವನ್ನು ತಾಕಿ, ಈಡಾಪಿಂಗಳದಲ್ಲಿ ಹೋಗಿ ಕಪಾಳದಲ್ಲಿ ಸುತ್ತಿಕೊಂಡು ಅಲ್ಲಿಂದ ಮೂಗಿನಿಂದ ಹೊರಟು ಉಶ್ವಾಸನಿಶ್ವಾ ಸವನ್ನುಂಟು ಮಾಡುತ್ತಿದೆ. ಅಪಾನವಾಯುವು ಗುದಸ್ಥಾನದಲ್ಲಿದ್ದು ದೇಹ ದಲ್ಲಿಯ ಕಶ್ಮಲಗಳು ಹೊರಗೆಹೋಗುವಂತೆ ಮಾಡುತ್ತಿದೆ. ಮತ್ತು ಅನ್ನ ರಸವ್ಯಾಪ್ತಿಯನ್ನು ಮಾಡುತ್ತಿದೆ. ವ್ಯಾನವಾಯುವು ಚರ್ಮದಲ್ಲಿದ್ದು ತನ್ನ ಸೊಂಕಿದ್ದನ್ನು ಅರಿಯುವಂತೆ ಮಾಡುತ್ತಿದೆ. ಅನ್ನವನ್ನು ಭಕ್ಷಿಸುವಂತೆ ಅದು ಮಾಡಿ ೭೨ ಸಾವಿರ ನಾಡಿಗಳನ್ನು ಸಂಬಂಧಿಸಿಕೊಂಡು ಶರೀರವನ್ನು ಅನ್ನಪಾನದಿಂದ ರಕ್ಷಿಸುತ್ತದೆ. ಉದಾನವಾಯು ಕಂಠದಲ್ಲಿದ್ದು ಅನ ರಸದ ಸ್ಥಾಪನೆ ಮಾಡುತ್ತಿದೆ. ಅದು ಸ್ವಪ್ನಾವಸ್ಥೆಯನ್ನುಂಟು ಮಾಡು ತ್ತಿದೆ. ಸೀನುವಂತೆ ಮಾಡುತ್ತಿದೆ. ಸಮಾನವಾಯು ನಾಭಿಯಲ್ಲಿದು ಅನ್ನರಸವನ್ನು ರೋಮನಾಳಗಳಲ್ಲಿ ಹಂಚಿಹಾಕುತ್ತಿದೆ. ನಾಗವಾಯು ದುಃಖ ಮಾಡುವದನ್ನು ಉಮ್ಮಳಿಸುವದನ್ನು ಮಾಡಿಸುತ್ತದೆ. ಕೂರ್ಮ ವಾಯು ಉದರಲಲಾಟದಲ್ಲಿ ಇದ್ದು ಪೋರೆಯನ್ನು ಮೇಲೆ ಕೆಳಗುಮಾಡು ವದು, ಮನುಷ್ಯನು ನಗುವುದು, ಕಣ್ಣುಗಳನ್ನು ಮುಚ್ಚುವದು, ತೆರೆಯು ವದು. ಆಕಳಿಕೆ ಬರುವದು ಇವುಗಳನ್ನು ಮಾಡಿಸುತ್ತಿದೆ. ಕೃಕರವಾಯು

ನಾಸಿಕಾಗ್ರದಲ್ಲಿದ್ದು ಸ್ಪುಳೆಯನ್ನು ಮಾಡಿಸಿ ಗಮನಾಗಮನವನ್ನು ಮಾಡಿ ಸುತ್ತಿದೆ. ದೇವದತ್ತವಾಯು ಗುಹ್ಯ ಮತ್ತು ಕಟಿಯಲ್ಲಿದ್ದು ಏಳುವದು, ಕುಳ್ಳಿರುವದು, ಮಾತನಾಡುವದು, ಸುತ್ತಿಕೊಂಡು ಬೀಳುವದು, ಹೀಗೆ ಜೈತನ್ಯವನ್ನು ಮಾಡಿಸುತ್ತದೆ. ಧನಂಜಯ ವಾಯುವು ಬ್ರಹ್ಮರಂಧ್ರ ದಲ್ಲಿದ್ದು ಸಮುದ್ರದಂತೆ ಘೋಷವನ್ನು ಮಾಡಿಸಿ ಮರಣ ಕಾಲದಲ್ಲಿ ಪ್ರಬ್ಧವಾಗುವದು. ಬಾಹ್ಯದಲ್ಲಿ ಈ ಕಾರ್ಯಗಳಾಗುವದು ವಾಯುಗ ಳಿಂದಲೇ. ಇಲ್ಲಿ ವಾಯು ಎಂದರೆ ವಾತಾವರಣದಲ್ಲಿ ನಾವು ಉಸುರಾ ಡಿಸುವ ವಾಯುವೆಂಬ ಅರ್ಥವಲ್ಲ. ಇವುಗಳು ಚಕ್ರಗಳೊಳಗಿಂದ ನಾಡಿಗ ಳಲ್ಲಿ ಹರಿಯುತ್ತಿರುವ ಜೈತನ್ಯವನ್ನು ಶರೀರದ ಆಯಾ ಭಾಗಗಳಿಗೆ ಒಯ್ಯುವ ಸಾಧನಗಳೆಂದು ಹೇಳಬಹುದು.

(೪೧) ಅವಸ್ಥೆಗಳುಃ— ಜಾಗ್ರತ್, ಸ್ವಪ್ನ, ಸುಷುಪ್ತಿ, ತೂರ್ಯ, ತೂರ್ಯಾತೀತ ಎಂದು ೫ ಅವಸ್ಥೆಗಳಿರುತ್ತವೆ. ಮನುಷ್ಯನ ಪ್ರಗತಿ ಯನ್ನು ಇವುಗಳ ಮೂಲಕ ವಿವರಿಸುವ ವಾಡಿಕೆಯುಂಟು. ಮನುಷ್ಯನಿಗೆ ಅಂತರಂಗ ಬಹಿರಂಗವೆಂಬವೆರಡು ಇರುತ್ತವೆ. ಇವುಗಳಲ್ಲಿ ಬಹಿರಂಗದ ಕ್ರಿಯೆಗಳು ಜಾಗ್ರಾವಸ್ಥೆಯನ್ನು ಸೂಚಿಸುತ್ತವೆ. ಇದು ಸ್ಥೂಲವು ಅಂತರಂ ಗವು ವಿಕಾಸಹೊಂದುವಾಗ ಬಾಹ್ಯಕ್ರಿಯೆಗಳ ಮೇಲಿನ ಲಕ್ಷ್ಯವು ಹೊರಟು ಹೋಗಿ ಅದು ಜಾಗ್ರತವಾಗುತ್ತದೆ. ಇದು ಸ್ವಪ್ನಾವಸ್ಥೆಯು. ಮುಂದೆ ಬಾಹ್ಯ ಕ್ರಿಯೆಗಳೂ ಅಂತರಂಗ ಕ್ರಿಯೆಗಳೂ ನಷ್ಟವಾಗಿ ಮನುಷ್ಯನು ಯಾವಾಗಲೂ ಪರಮಾತ್ಮನ ಧ್ಯಾನದಲ್ಲಿ ಮಗ್ನನಾಗುತ್ತಾನೆ. ಇದು ಅತ್ಯಂತ ಉಚ್ಚತರ ಸ್ಥಿತಿಯು ಎಂದು ಹೇಳಲ್ಪಡುತ್ತದೆ. ಇದು ಸುಷುಪ್ತಾ ವಸ್ಥೆಯು. ಇದರಲ್ಲಿ ಮನುಷ್ಯನಿಗೆ ನಿಜ ಸುಖವು ತಲೆದೋರುತ್ತದೆ. ಆಗ ಅವನಿಗೆ ಅಂತರಂಗ ಬಹಿರಂಗನೆಂಬ ಭೇದಗಳು ಉಳಿಯುವದಿಲ್ಲ. ಇದೇ ತೂರ್ಯಾವಸ್ಥೆಯು. ಇದರ ಮುಂದೆ ಪ್ರಗತಿಯುಂಟಾದಲ್ಲಿ ಈ ಸುಖವೂ ಅಸ್ತಿತ್ವದಲ್ಲಿ ಉಳಿಯುವದಿಲ್ಲ. ಇದು ತೂರ್ಯಾತೀತಾವಸ್ಥೆಯು. ಆದರೆ ವೀರಶೈವರು ತಮ್ಮ ಪ್ರಗತಿಯನ್ನು ಈ ರೀತಿಯಾಗಿ ಭಾವಿಸುವ ದಿಲ್ಲ. ಮೇಲ್ಕಂಡ ಶಬ್ದಗಳು ವಚನಗಳಲ್ಲಿ ಆಗಿಂದಾಗ್ಗೆ ಬರುವದಿಲ್ಲ. ವಚನಕಾರರು ಅಂತರಂಗ ಬೇರೆ, ಬಹಿರಂಗ ಬೇರೆ ಎಂದು ಅವುಗಳಲ್ಲಿ ಭೇದ ಎಣಿಸುವದಿಲ್ಲ ಯಾಕಂದರೆ ಅಂತರಂಗದಲ್ಲಿ ಯಾವ ಶಕ್ತಿಗಳು ವಿಕಾಸ ಹೊಂದುತ್ತವೋ ಅವುಗಳ ಉಪಯೋಗವನ್ನು ಮನುಷ್ಯನು ಬಹಿ

ರಂಗದಲ್ಲಿಯೂ ಕೂಡ ಮಾಡಬೇಕೆಂದು ಅವರ ಮುಖ್ಯ ತತ್ವವಿದೆ. ಅಂದರೆ ಮನುಷ್ಯನಿಗೆ ಬಹಿರಂಗವನ್ನು ಅಂದರೆ ಬಾಹ್ಯ ಕ್ರಿಯೆಗಳನ್ನು ಬಿಡಲಿಕ್ಕೆ ಬರಲಾರದು. ಇಷ್ಟೇ ಅಲ್ಲ, ಈ ಬಹಿರಂಗದ ಕ್ರಿಯೆಗಳ ಸಹಾಯದಿಂದಲೇ ಅವನು ಅಂತರಂಗದ ಗುಣಗಳನ್ನು ಅಂದರೆ ಇಂದ್ರಿಯ, ಮನಸ್ಸು, ಬುದ್ಧಿ ಈ ಮೊದಲಾದವುಗಳನ್ನು ವಿಕಾಸಮಾಡಿಕೊಳ್ಳತಕ್ಕದ್ದು. ಹೀಗೆ ಅಂತರಂಗ ಬಹಿರಂಗಗಳು ಪರಸ್ಪರಾವಲಂಬಿಗಳಾಗಿವೆ. ಆದ್ದರಿಂದ ಅವರು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಅವಸ್ಥೆಗಳಲ್ಲಿ ಭೇದ ಮಾಡುವದಿಲ್ಲ. ತೂರ್ಯ ಎಂಬ ಶಬ್ದವನ್ನು ಅವರು 'ಲಿಂಗಸುಖ' ಎಂಬ ಭಾವದಲ್ಲಿ ಆಗಿಂದಾಗ್ಗೆ ಉಪಯೋಗಿಸುವದುಂಟು. ಇದು ವಚನಗಳಲ್ಲಿ ಬರುತ್ತದೆ. ತೂರ್ಯಾತೀತ ಈ ಶಬ್ದವನ್ನು ಅವರು ಶೂನ್ಯ ಎಂಬ ಅರ್ಥದಲ್ಲಿ ಉಪಯೋಗಿಸುವದುಂಟು. ಆದರೆ ಮನುಷ್ಯನ ವಿಕಾಸವನ್ನು ಅವರು ಮೇಲ್ಕಂಡ ಅವಸ್ಥೆ ಸೂಚಕ ಶಬ್ದಗಳಿಂದ ಹೇಳುವದಿಲ್ಲ. ಆದರೆ ಅವರು ಆಚಾರಲಿಂಗ, ಗುರು ಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಈ ಶಬ್ದಗಳಿಂದ ಹೇಳುವದುಂಟು. ಮೊದಲಿನ ಎರಡು ಶಬ್ದಗಳಿಂದ ಅಂದರೆ ಆಚಾರಲಿಂಗ, ಗುರುಲಿಂಗ ಇವುಗಳಿಂದ ಮನುಷ್ಯನ ಬಾಹ್ಯ ಕ್ರಿಯೆಗಳ ವಿಕಾಸತೆಯನ್ನು ಅವರು ನಿರ್ದೇಶಿಸುತ್ತಾರೆ. ಮುಂದಿನ ಎರಡು ಶಬ್ದಗಳು ಅಂದರೆ ಶಿವಲಿಂಗ, ಜಂಗಮಲಿಂಗ ಇವುಗಳಿಂದ ಮನುಷ್ಯನ ಅಂತರಂಗದ ವಿಕಾಸತೆಯನ್ನು ಹೇಳುತ್ತಾರೆ. ಮತ್ತು ಕಡೆಯ ಶಬ್ದ ಳಾದ ಪ್ರಸಾದಲಿಂಗ, ಮಹಾಲಿಂಗ ಇವುಗಳಿಂದ ಮನುಷ್ಯನ ತೂರ್ಯಾವಸ್ಥೆಯನ್ನು ಅವರು ಹೇಳುತ್ತಾರೆ. ಮತ್ತು ಈ ಲಿಂಗಗಳ ತರುವಾಯ ಶೂನ್ಯ ಲಿಂಗಗಳೆಂಬುವಿವೆ. ಇವುಗಳ ಮೂಲಕ ಅವರು ತೂರ್ಯಾತೀತಾವಸ್ಥೆಯನ್ನು ಹೇಳುತ್ತಾರೆ. ಈ ಪ್ರಕಾರ ಲಿಂಗಶಬ್ದದಿಂದ ಅವರು ಬೇರೆ ಬೇರೆ ಅವಸ್ಥೆಗಳನ್ನು ಸೂಚಿಸುತ್ತಾರೆ.

(೮೭) ಶಾಂಭವಯೋಗಃ— ಶಿವನಲ್ಲಿ ಮನಸ್ಸನ್ನು ಏಕಾಗ್ರತೆಯಾಗಿರಿಸುವದೇ ಶಾಂಭವಯೋಗವೆಂದು ಹೇಳಲ್ಪಡುತ್ತದೆ. ಈ ಮನಸ್ಸು ಪರಮಾತ್ಮನಲ್ಲಿ ದೃಢಪಡಬೇಕು. ಇದೇ ಈ ಶಾಂಭವ ಯೋಗದ ಉದ್ದೇಶವಿರುತ್ತದೆ. ಆಗ ತಾನು ನಿಜವಸ್ತುವಲ್ಲ, ಆದರೆ ಶಿವನೇ ನಿಜವಸ್ತುವು ಮತ್ತು ಸತ್ಯನು ಎಂಬ ಭಾವವು ಬಲಿಯಬೇಕು. ಭಕ್ತನು ಇದರಲ್ಲಿ ಪ್ರಣಾಯಾಮವನ್ನು ಆಚರಿಸಿ ಆಸನವನ್ನು ಬಲಿದು ಏಕಾಗ್ರ

ಚಿತ್ತನಾಗಬೇಕು. ಆ ಮೇಲೆ ತನ್ನ ಕರದಲ್ಲಿಯ ಇಷ್ಟಲಿಂಗವನ್ನು ಧ್ಯಾನಿಸಬೇಕು. ಅದು ಅರುಹಿನ ಕುರುಹೆಂದು ಅವನು ಅದನ್ನು ಭಾವಿಸಬೇಕು. ಅಂದರೆ ಈ ಲಿಂಗವು ಚಿದ್ಘನಲಿಂಗವೆಂತಲೇ ಅವನು ತಿಳಿಯಬೇಕು. ಸಾಧಕನು ಹೀಗೆ ಹೃತ್‌ಕಮಲದಲ್ಲಿ ಅದನ್ನು ಸರಿಯಾಗಿ ನೆಲೆಗೊಳಿಸಬೇಕು. ಈ ಕಮಲಕ್ಕೆ ೧೨ ದಳಗಳಿವೆ. ಪೂರ್ವದಳವನ್ನೇರಲು ಗುಣಿಯಾಗಿರುವನು. ಆಗ್ನಿದಳವನ್ನೇರಲು ಹಸಿವೆಯಾಗುವದು. ದಕ್ಷಿಣದಳವನ್ನೇರಲು ಕ್ರೋಧಿಯಾಗುವನು. ನೈಋತ್ಯದಳವನ್ನೇರಲು ಅಸತ್ಯವಂತನಾಗುವನು. ವರುಣದಳವನ್ನೇರಲು ನಿದ್ರೆಗೆಯ್ಯುವನು. ವಾಯುದಳವನ್ನೇರಲು ಚಂಚಲನಾಗುವನು. ಉತ್ತರ ದಳವನ್ನೇರಲು ಧರ್ಮಿಷ್ಠನಾಗುವನು. ಈಶಾನ್ಯ ದಳವನ್ನೇರಲು ಕಾಮಾತುರನಾಗಿರುವನು. ಈ ೮ ದಳಗಳ ಮೇಲೆ ಹರಿದಾಡುವ ಜೀವನ ಸ್ಥಿತಿಯನ್ನು ತೊಲಗಿಸಿ ಅದನ್ನು ನಡುಮಧ್ಯದಲ್ಲಿ ತಂದಿರಿಸಲು ಸಂಸಾರ ರಹಿತನಾಗುವನು. ಹೀಗೆ ನೆಲೆಗೊಂಡ ಕೂಡಲೆ ಆ ಜೀವನಲ್ಲಿ ಲಿಂಗ ಕಳೆಯು ಬೆಳಗುವದು. ಅದೇ ಪ್ರಾಣಲಿಂಗವೆನಿಸುವದು. ಆ ಮೇಲೆ ಸಾಧಕನು ಅದನ್ನು ಮಸ್ತಕದಲ್ಲಿರುವ ಕಳೆಯಲ್ಲಿ ಅಂದರೆ ಭಾವಲಿಂಗದಲ್ಲಿಟ್ಟರೆ ಅದು ಶಾಂಭವಯೋಗವೆಂದೆನಿಸುವದು. ಆಗ ಅರಿವಾತನು, ಅರಿವು, ಮತ್ತು ಅರಿಯತಕ್ಕ ಪರಶಿವನು, ಇವರಲ್ಲಿ ಪರಸ್ಪರ ಐಕ್ಯತೆಯುಂಟಾಗುವದು. ಹಾಗೆಯೇ ನೆನೆವಾತನು ನೆನಹು, ಮತ್ತು ನೆನೆಯತಕ್ಕ ಶಿವನು, ಮತ್ತು ನೋಡುವಾತನು, ನೋಟ, ಮತ್ತು ನೋಡತಕ್ಕ ವಸ್ತು, ಇವೆಲ್ಲವೂ ಏಕಾಕಾರವಾಗುವವು. ಇದನ್ನು ಸಾಧಿಸಿದಲ್ಲಿ ಅದೇ ಶಾಂಭವ ಯೋಗವು.

(೮೩) ಮುದ್ರೆಗಳುಃ— ಇವು ಧ್ಯಾನ ಮುದ್ರೆ, ಖೇಚರ ಮುದ್ರೆ, ಷಣ್ಮುಖಮುದ್ರೆ, ಶಾಂಭವ ಮುದ್ರೆ ಎಂದು ನಾಲ್ಕು ಇರುತ್ತವೆ. ಇವು ಪರಮಾತ್ಮ ದರ್ಶನಕ್ಕೆ ಸಹಾಯಕಾರಿಗಳೆಂದು ಭಾವಿಸಲ್ಪಟ್ಟವೆ. ಒಬ್ಬನು ಶುಚಿಯಾಗಿ ಒಂದು ಸ್ಥಳದಲ್ಲಿ ಪದ್ಮಾಸನದಲ್ಲಿ ಕುಳಿತು ನಾಸಿಕಾಗ್ರದಲ್ಲಿ ದೃಷ್ಟಿಯನ್ನಿಟ್ಟು ಪಂಚಾಕ್ಷರೀ ಮಂತ್ರಜಪವನ್ನು ಶಿವಾರ್ಪಣ ಬುದ್ಧಿಯಿಂದ ಮಾಡುವುದು ಧ್ಯಾನಮುದ್ರೆ ಎಂದೆನಿಸುವುದು. ನಾಸಿಕಾಗ್ರದಲ್ಲಿ ನೋಡುತ್ತ ಧ್ಯಾನಾಸಕ್ತನಾದರೆ ಘಂಟೆ, ಶಂಖ, ವೇಣು, ತಾಳ ಮದ್ದಳೆ, ಭೇರಿ, ಮೇಘ ಹೀಗೆ ಅನೇಕತೆರನಾದ ನಾದಗಳು ಕೇಳಬರುವವು. ಇದರಲ್ಲಿ ಕಡೆಯನಾದವನ್ನು ಕೇಳುತ್ತಲಿರಲು ಪ್ರಣಮದ

ಮಂಜಾಡಿಪಳಿಯಗಾಯಿತು. ಆದರೆ ಆಸುಸಂಧಾನದಲ್ಲೇ ಜೀವಿಗಳು ಬಾಯಾರಿ ಬಳಲಿ ಸುಸ್ತಾಗಿ ಬೀಳುವುದನ್ನು ಬಗೆದ ಆಸುಬಂಧುವಿನ ಬಲಿದು ಸುಸ್ತು ಬೀಳುವುದು. ಪ್ರಾಣಾಯಾಮವನ್ನು ಬಗೆದ ಆಸುಬಂಧುವಿನ ಬದಲು ಆ ಜೀವಿಗಳು ಬೆಳೆಯಲು ಸಂಗಡ ಬಹುದಿನ ಬಾಳಿ ಬಂಧುಗಳಾಗಿ ಬಾಳುವುದು. ಪ್ರಾಣಾಯಾಮವನ್ನು ಕೊಡದಿದ್ದರೆ ಬದಲು ಬಾಯಿಬಿಡುವುದಾಗಿ ಬಿದ್ದು ಬಾಡಿಹೋಗಲು ಕೊಡದಿದ್ದರೆ ಬಾಯಿಬಿಡುವ ಪದಾರ್ಥವಾಗಿ ಹೊಕ್ಕಿದ್ದರೂ ಕಾಲಾಂತರ ಸೂರ್ಯ ಪ್ರಕಾಶದಿಂದ ಹೊಕ್ಕಿದ್ದರೂ ಅಂಗಾರವಾಗಿ ಬಾಡಿಹೋಗುವುದು. ಆದು ಬಲ್ಲವರಿಗೆ ಪ್ರತ್ಯಕ್ಷವಾದುದೆಂದು ಹೇಳಬೇಕಿಲ್ಲ.

(೪೪) ಪಲಿತಾಂಶ :— ಆಹ್ವಾನ ಮಾಡಿದ ೧೬೦ ಪದ್ಯಗಳಲ್ಲಿ ೪೫ ಪದ್ಯಗಳನ್ನು ಹೇಳಬಹುದೆಂದು. ಮಿಕ್ಕ, ೨೮೦ ಪದ್ಯ, ಗದ್ಯ, ಪ್ರಬಂಧ, ಅಲಂಕಾರ ಮುಂತಾದ ಪ್ರತಿಕಾರ್ಯಗಳಲ್ಲಿ ಪ್ರತಿಭಾಪ್ರದರ್ಶನ ಮಾಡಿದ ೩೦ ಕ್ಕೂ ಅಂಗಾಂಗಿಗಳಾಗಿ ಪ್ರತಿಯೊಂದು ಕೋಷ್ಟಕದಲ್ಲಿಯೂ ಅಗ್ರಪಂಕ್ತಿಯಲ್ಲಿ ಬೀರಿದ ೧೦೦ ಕ್ಕೂ ಅಧಿಕ ಪ್ರಾಣಿಗಳಲ್ಲಿ ಪ್ರತಿಯೊಂದು ಪ್ರಾಣಿಯೂ ಪ್ರಾಣಾಯಾಮವನ್ನು ಬಗೆದ ಆಸುಬಂಧುವಿನ ಬಲಿದು ಸುಸ್ತು ಬೀಳುವುದು ಪ್ರಾಣಾಯಾಮವನ್ನು ಬಗೆದ ಆಸುಬಂಧುವಿನ ಬದಲು ಆ ಜೀವಿಗಳು ಬೆಳೆಯಲು ಸಂಗಡ ಬಹುದಿನ ಬಾಳಿ ಬಂಧುಗಳಾಗಿ ಬಾಳುವುದು. ಪ್ರಾಣಾಯಾಮವನ್ನು ಕೊಡದಿದ್ದರೆ ಬದಲು ಬಾಯಿಬಿಡುವ ಪದಾರ್ಥವಾಗಿ ಹೊಕ್ಕಿದ್ದರೂ ಕಾಲಾಂತರ ಸೂರ್ಯ ಪ್ರಕಾಶದಿಂದ ಹೊಕ್ಕಿದ್ದರೂ ಅಂಗಾರವಾಗಿ ಬಾಡಿಹೋಗುವುದು. ಆದು ಬಲ್ಲವರಿಗೆ ಪ್ರತ್ಯಕ್ಷವಾದುದೆಂದು ಹೇಳಬೇಕಿಲ್ಲ.

ವಚನಶಾಸ್ತ್ರಸಾರ ಗ್ರಂಥಗಳು.

(ರಾ ಬ **ಪಿ. ಜಿ. ಹಳಕಟ್ಟಿ** ಇವರಿಂದ ವಿರಚಿತವಾದವುಗಳು.)

(೧) ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧ ೨—೮—೦

(೨) ,, ,, ಉತ್ತರಾರ್ಧ ೧—೧೨—೦

ಈ ಎರಡು ಗ್ರಂಥಗಳ ಮೂಲಕ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅರಿಯಬಹುದು.

(೩) ವಚನಶಾಸ್ತ್ರಸಾರ ಭಾಗ ೨ ೪—೮—೦

ಇದರಲ್ಲಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆ ಇದೆ.

(೪) ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ ೨—೪—೦

ಇದರಲ್ಲಿ ವೀರಶೈವರ ಕ್ರಿಯೆಗಳ ಮತ್ತು ಅಷ್ಟಾವರಣಗಳ ಸಾಮಾನ್ಯ ನಿರೂಪಣೆ ಇರುವದಲ್ಲದೆ ಗುರಲಿಂಗ, ಜಂಗಮ, ಇವುಗಳ ಸವಿಸ್ತಾರವಾದ ವಿವರಣೆ ಇರುತ್ತದೆ.

ಈ ನಾಲ್ಕು ಗ್ರಂಥಗಳ ಒಟ್ಟು ಪುಟ ಸಂಖ್ಯೆ ೧೫೮೬ ಇದ್ದು ಇವುಗಳ ಬೆಲೆಯು ೧೧ ರೂಪಾಯಿ ಇರುತ್ತದೆ. ಆದರೆ ಈ ಗ್ರಂಥಗಳೆಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಂಡಲ್ಲಿ ಅವುಗಳು ಮೂರುನಾಲ್ಕಾಂಶ ಬೆಲೆಗೆ ಅಂದರೆ ಒಟ್ಟು ೮—೪—೦ ರೂಪಾಯಿಗಳಿಗೆ ದೊರೆಯುವವು ಟಪಾಲಖರ್ಚು ಪ್ರತ್ಯೇಕ.


ದೊರೆಯುವ ಸ್ಥಳ—

ಹಿತಚಿಂತಕ ಪ್ರಿಂಟಿಂಗ ಪ್ರೆಸ್

ವಿಜಾಪುರ

ಇದನ್ನು ವಿಜಾಪುರದಲ್ಲಿ ರಾ ಬ ಳ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀ ಬರುಜ ಓಣಿಯಲ್ಲಿರುವ ತಮ್ಮ ೧೬೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

ಶ್ರೀ



ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಫೇಬ್ರುವರಿ ೧೯೪೧. [ಸಂಚಿಕೆ ೫

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ಲಿಂಗಾಯತ ಸಮಾಜ ರಚನೆ	ಶ್ರೀ ಕಲ್ಯಾಣಪ್ಪ ಬ್ಯಾಳಿ ವಿಜಾಪುರ	೧೬೭
೨	ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ	ಶ್ರೀಗುರುಸಿದ್ಧ ಸ್ವಾಮಿಗಳು ಸಿದ್ಧಗಂಗಾಕ್ಷೇತ್ರ	೧೭೪
೩	ಬಸವೇಶ್ವರನಕಿಂತ ಮೊದಲಿನ ರಾ. ಬ. ಪಿ. ಜಿ. ಹಳಕಟ್ಟಿ ವೀರಶೈವ ಧರ್ಮ		೧೭೯
೪	ಸಂಕೀರ್ಣ ವಚನಗಳು ಭಾಗ ೩	...	೧೭
೫	ಶಿವಾನುಭವ ಶಬ್ದಕೋಶ	...	೪೫
೬	ಹರಿಹರನ ರಗಳೆಗಳು ಲಾವಣಿ	...	೧೩
೭	ಶಿವಾನುಭವ ಸೃಷ್ಟಿಯ ವಚನಗಳು	...	

ಶಿವಾನುಭವ.

ವರ್ಷ ೧೫	ಫೇಬ್ರುವರಿ ೧೯೪೧.	ಸಂಚಿಕೆ ೫

ಲಿಂಗಾಯತ ಸಮಾಜ ರಚನೆ.

(ಲೇಖಕರು – ಶ್ರೀಯುತ ಕಲ್ಯಾಣಪ್ಪ ಬ್ಯಾಳಿ. ಬಿ. ಎ. (ಬಿ ಟಿ.) ವಿಜಾಪುರ)

ಆಧ್ಯಾತ್ಮಿಕ ದೃಷ್ಟಿಯಿಂದ ಲಿಂಗಾಯತರೆಲ್ಲರೂ ಸರಿಸಮಾನರೆಂದೂ ಅವರಲ್ಲಿ ಹೆಚ್ಚುಕಡಿಮೆಯೆಂಬ ಜಾತಿಭೇದಗಳಿಲ್ಲವೆಂದೂ ಆಗಮಗಳೂ ಶಿವಶರಣರ ವಚನಗಳೂ ಘಂಟಾಘೋಷವಾಗಿ ಸಾರುತ್ತವೆ. ಲಿಂಗವಂತ ಸ್ತ್ರೀ ಪುರುಷಬಾಲಕರೆಲ್ಲರಿಗೂ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳಿಗನುಸರಿಸಿ ನಡೆದು ಮೋಕ್ಷಪಡೆಯಲು ಸಮಾನವಾದ ಅಧಿಕಾರವಿರುತ್ತದೆ. ಲಿಂಗಧಾರಿಗಳಲ್ಲಿ ಅನ್ನಪಾನ, ಶರೀರಸಂಬಂಧಗಳು ಜಾತಿಭೇದವಿಲ್ಲದೆ ನಡೆಯಲಿಕ್ಕೆ ಶಾಸ್ತ್ರದೃಷ್ಟಿಯಿಂದ ಯಾವ ಅಭ್ಯಂತರವೂ ಕಂಡುಬರುವದಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ" ಎಂದು ಹೇಳಿದಂತೆ ನಮ್ಮ ಪುರಾತನರು ಶ್ರಮವಿಭಾಗತತ್ವವನ್ನನುಸರಿಸಿ ಸಮಾಜ ರಚನೆಯನ್ನು ಮಾಡಿದ್ದರಿಂದ ಅದು ಸರ್ವಾಂಗಸುಂದರವೂ ಪರಿಪೂರ್ಣವೂ ಆಗಿದೆ. ನಮ್ಮ ಸಮಾಜದಲ್ಲಿ ಏನಾದರೂ ತಾರತಮ್ಯಗಳು ಕಂಡುಬಂದರೆ ಅವು ಗುಣಕರ್ಮ ಅಧಿಕಾರಗಳ ಮೂಲಕವಾಗಿರುವವೇ ಹೊರತು ಜಾತಿಯಿಂದಲ್ಲವೆಂಬುದನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು.

ವೀರಶೈವ ಮತ್ತು, ಲಿಂಗಾಯತ ಈ ಶಬ್ದಗಳ ಅರ್ಥವು ಬೇರೆ ಬೇರೆಯೆಂದು ತಪ್ಪುತಿಳುವಳಿಕೆಯನ್ನು ಅನೇಕರು ಮಾಡಿಕೊಂಡಿದ್ದಾರೆ. ಆದರೆ

ನನ್ನ ಅಭಿಪ್ರಾಯದಲ್ಲಿ ಇವೆರಡೂ ಒಂದೇ ಅರ್ಥದ ಪರ್ಯಾಯ ಶಬ್ದಗಳು. ವೀರಶೈವರೆಂದರೆ ಜುಳದ ಶೈವರಂತೆ ಜಾತಿವಿಶಿಷ್ಟವಾದ ವರ್ಣಾಶ್ರಮ ಧರ್ಮಕ್ಕೆ ದಾಸರಾಗದೆ ಅದರ ವಿರುದ್ಧ ಕ್ರಾಂತಿಯನ್ನು ಮಾಡಿ ತಮ್ಮ ವ್ಯಕ್ತಿತ್ವ ವೈಶಿಷ್ಟ್ಯಗಳನ್ನು ಕಾಪಾಡಿಕೊಂಡ ವೀರರು. ಅದೇ ವೀರಶೈವರೇ ಗುಡಿಗುಂಡಾರಗಳಲ್ಲಿರುವ ಸ್ಥಾವರಲಿಂಗಗಳನ್ನು ನಿಷೇಧಿಸಿ ಶ್ರೀಗುರುವು ಕರಸ್ಥಲಕ್ಕೆ ಕರುಣಿಸಿಕೊಟ್ಟ ಇಷ್ಟಲಿಂಗದ ಹೊರತು ಬೇರೆ ದೈವವಿಲ್ಲೆಂದು ಸಾರಿ ಅದನ್ನು ತಮ್ಮ ದೇಹದ ಮೇಲೆ ಧರಿಸಿಕೊಂಡದ್ದರಿಂದ ಲಿಂಗಾಯತರೆನಿಸಿಕೊಂಡರು. ಆದರೆ ಲಿಂಗಾಯತ ಶಬ್ದವು ಉತ್ತರ ಕರ್ನಾಟಕದಲ್ಲಿ ಹೆಚ್ಚು ಬಳಕೆಯಲ್ಲಿದ್ದಂತೆಯೂ ವೀರಶೈವ ಶಬ್ದವು ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಚಾರದಲ್ಲಿದ್ದಂತೆಯೂ ಕಂಡು ಬರುತ್ತವೆ. ಅದು ಸ್ಥಾನಿಕ ವೈಶಿಷ್ಟ್ಯವೇ ಹೊರತು ತತ್ವತಃ ಈವೆರಡು ಪರ್ಯಾಯದಿಂದ ಒಂದೇ ಅರ್ಥದ ಶಬ್ದಗಳಿರುವದರಿಂದ ಅವುಗಳಲ್ಲಿ ಭಿನ್ನತ್ವವನ್ನು ಕಲ್ಪಿಸಬಾರದು.

ಸಮಾಜರಚನೆಗನುಸರಿಸಿ ವೀರಶೈವರಲ್ಲಿ ಅರ್ಥಾತ್ ಲಿಂಗಾಯತರಲ್ಲಿ ಕ್ರಿಯಾಭೇದದಿಂದ ಮೂರು ವಿಭಾಗಗಳು ಕಲ್ಪಿಸಲ್ಪಟ್ಟಿವೆಯೆಂದು ಶ್ರೀನಿಜಗುಣ ಶಿವಯೋಗಿಗಳು ತಮ್ಮ ವಿವೇಕ ಚಿಂತಾಮಣಿಯಲ್ಲಿ ಹೇಳಿದ್ದಾರೆ. ಅವು ಯಾವವೆಂದರೆ (೧) ಸಾಮಾನ್ಯವೀರಶೈವ (೨) ವಿಶೇಷ ವೀರಶೈವ (೩) ನಿರಾಧಾರಿ ವೀರಶೈವ. ಇದೇ ವಿಭಾಗವನ್ನು ನಾವು (೧) ಭಕ್ತವರ್ಗ (೨) ಮಾಹೇಶ್ವರ ವರ್ಗ (೩) ನಿರಂಜನ ವರ್ಗವೆಂತಲೂ ಬೇರೆ ರೀತಿಯಾಗಿ ವಿಂಗಡಿಸಬಹುದು.

ಭಕ್ತವರ್ಗ.

ಸಮಾಜಕ್ಕೆ ಅವಶ್ಯವಾಗಿರುವ ಎಲ್ಲ ತರಹದ ಕಸಬುಕಾಯಕಗಳನ್ನು ಮಾಡಿಕೊಂಡು ಸಮಾಜದ ಸಂಪತ್ತನ್ನು ಬೆಳೆಯಿಸುತ್ತ ಅಷ್ಟಾವರಣ ನಿರತರಾಗಿ ಧರ್ಮಪೋಷಣೆಯನ್ನು ಮಾಡುವವರೆಲ್ಲರೂ ಭಕ್ತರೆಂದು ಸಾಮಾನ್ಯವಾಗಿ ಹೇಳಬಹುದು. ಭಕ್ತವರ್ಗದಲ್ಲಿ ಒಕ್ಕಲಿಗ, ಬಣಜಿಗ, ಗಾಣಿಗ, ಸೆಟ್ಟಿ, ಸಾಹುಕಾರ, ಮಡಿವಳ, ಹಡಪಿಗ, ಉಪ್ಪಾರ, ಹೂಗಾರ, ಕುಂದಾರ, ಕಂಬಾರ, ಚರ್ಮಕಾರ, ಬಡಿಗ, ಕೂಲಿಕಾರ ಮೊದಲಾದ ಕಸಬುಗಾರರೆಲ್ಲರೂ ಸಮಾವೇಶವಾಗುತ್ತಾರೆ. ಸಮಾಜದಲ್ಲಿ ಇವರಿಗೆ

ಸಾಮಾನ್ಯ ಜನರು (*Mass*) ಎಂದೆನ್ನುವ ಸಾಂಪ್ರದಾಯವುಂಟು. ಆದರೆ ಇವರು ಕಾಯಕಷ್ಟದ ಹೋರೆಗಳನ್ನು ಮಾಡುತ್ತಾರೆಂದು ತಿಳಿದು ಅವರು ಕಡಿಮೆ ಯೋಗ್ಯತೆಯವರೆಂದೆನ್ನಲಿಕ್ಕೆ ಬರುವದಿಲ್ಲ. ಅವರು ದುಡಿದು ಕಷ್ಟಬಟ್ಟು ಮಾಹೇಶ್ವರ, ನಿರಂಜನ ವರ್ಗದವರನ್ನು ಪೋಷಿಸುವದರಿಂದ ಅವರು ಕಡಿಮೆಯೆನ್ನಲಿಕ್ಕೆ ಸರ್ವಥಾ ಬರುವದಿಲ್ಲ. ಎಲ್ಲರೂ ಕುಳಿತು ಉಣ್ಣುವವರಾದರೆ ದುಡಿದು ಹಾಕುವವರಾರು? ಅದು ಕಾರಣ ದುಡಿತವು ಕೀಳೆಂದು ಭಾವಿಸದೆ ಮೇಲೆಂದು (*Dignity of Labour*) ತಿಳಿದು ನಮ್ಮ ಶರಣರು "ಕಾಯಕವೇ ಕೈಲಾಸ" ವೆಂದು ಹೇಳಿದ್ದಾರೆ. ಆದ್ದರಿಂದ ಭಕ್ತರು ಸಮಾಜದಲ್ಲಿ ಪವಿತ್ರವಾದ ಮತ್ತು ಪುಣ್ಯಕರವಾದ ಕೆಲಸವನ್ನು ಮಾಡುವ ಮಹಾತ್ಮರೆಂದೇ ತಿಳಿಯತಕ್ಕದ್ದು. ಪರೋಪಕಾರ ಮಾಡುವವರಿಗೆ ಕಡಿಮೆಯೆಂದು ತಿಳಿಯುವದು ಕೇಳುತನವಲ್ಲವೇ?

ಮಾಹೇಶ್ವರ ವರ್ಗ.

ಭಕ್ತವರ್ಗದವರು ಸಮಾಜದ ಆಚಾರ ಸಂಸ್ಕೃತಿಗಳ ಪರಿಪಾಲನೆ, ಶಿಕ್ಷಣಪ್ರಸಾರ, ವಿಧಿವಿಧಾನ ಮೊದಲಾದ ಕಾರ್ಯಗಳನ್ನು ನಡೆಯಿಸಿಕೊಂಡು ಹೋಗಲು ಸಮರ್ಥರಾದ ಕೆಲವು ಯೋಗ್ಯ ವ್ಯಕ್ತಿಗಳನ್ನು ತಮ್ಮೊಳಗೆ ಆರಿಸಿಕೊಂಡು ಅವರಿಗೆ ಮಾಹೇಶ್ವರರೆಂಬ ಬೇರೆ ಹೆಸರು ಕೊಟ್ಟು ಅವರನ್ನು ಗೌರವಿಸಹತ್ತಿದರು. ಆದರೆ ಕಾಲಾಂತರದಿಂದ ಈ ಮಾಹೇಶ್ವರ ವರ್ಗವು ತಮ್ಮದೊಂದು ಜಾತಿಯನ್ನೇ ಬೇರೆ ಕಲ್ಪಿಸಿಕೊಂಡು ಬರಹತ್ತಿತು. ಆದರೆ ಭಕ್ತರು ಮಾಡಿದ್ದರಿಂದಲೇ ಅವರು ಮಾಹೇಶ್ವರರಾದರೇ ಹೊರತು ಅವರೇನೂ ಸರ್ವಾಧಿಕಾರಿಗಳಲ್ಲ. ದೇವ ನಿರ್ಮಿತ ನಿರಂಕುಶ ಪ್ರಭುಗಳೂ ಅಲ್ಲ. ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಪ್ರಜೆಗಳು ಪ್ರೇಮದಿಂದ ಆರಿಸಿದ ಅಧ್ಯಕ್ಷರಂತೆ ಭಕ್ತರು ಪ್ರೇಮದಿಂದ ಆರಿಸಿ ಅಧಿಕಾರಕೊಟ್ಟ ಪ್ರತಿನಿಧಿಗಳೇ ಮಾಹೇಶ್ವರರು. ಮಾಹೇಶ್ವರತ್ವವು ವಂಶಪರಂಪರಾಗತವಾಗಿ ಬಂದ ಜಾತಿಯ ಸೊತ್ತಲ್ಲವೆಂಬದನ್ನು ಯಾರೂ ಮರೆಯಲಾಗದು.

ಮಾಹೇಶ್ವರರಲ್ಲಿ ಅಧಿಕಾರ ಮತ್ತು ಕಾರ್ಯಭೇದದಿಂದ ಕೆಲವು ತಾರತಮ್ಯಗಳು ಗಣಿಸಲ್ಪಟ್ಟಿವೆ. ಅವುಗಳನ್ನು ಇದರಡಿಯಲ್ಲಿ ಕ್ರಮದಿಂದ ಕೊಡಲಾಗಿದೆ.

೧. ಗುರುವರ್ಗಃ— ಈ ವರ್ಗದಲ್ಲಿ ಪಂಚಾಚಾರ್ಯರು, ಪಟ್ಟದದೇವರು, ಚರಂತಿಗಳು, ಹಿರೇಮಠದವರು ಸ್ಥನೇಶವಾಗುತ್ತಾರೆ. ಪಂಚಾಚಾರ್ಯರು ಉಜ್ಜಯಿನಿ, ರಂಭಾಪುರಿ, ಪರ್ವತ, ಕೇದಾರ, ಕಾಶಿಯೆಂಬ ಪಂಚಪೀಠಗಳನ್ನು ತಮ್ಮ ಕೇಂದ್ರಗಳನ್ನು ಮಾಡಿಕೊಂಡು ತಮ್ಮ ಶಾಖಾಮಠವರ್ಗವನ್ನು ಅಲ್ಲಲ್ಲಿ ಸ್ಥಾಪಿಸಿ ತಮ್ಮ ಪ್ರತಿನಿಧಿಗಳನ್ನು ಅಲ್ಲಿಗೆ ಭಕ್ತರ ಒಪ್ಪಿಗೆಯಿಂದ ನಿಯಮಿಸಿದರು. ಅವರಿಗೆ ಪಟ್ಟದ್ದೇವರೆಂಬ ಹೆಸರು. ಈ ಪಟ್ಟದ್ದೇವರು ತಮ್ಮ ಶಿಷ್ಯಮನೆತನಗಳ ನೇಮಕ್ಕೆ ಚಾರಣೆ ಮಾಡಲಿಕ್ಕೆ ತಮ್ಮ ಕೈಕೆಳಗಿನ ಅಧಿಕಾರಿಗಳಾಗಿ ಚರಂತಿಗಳನ್ನು ಅಲ್ಲಲ್ಲಿ ಕಳುಹಿಸಿಕೊಡುತ್ತಿದ್ದರು. ಹಳ್ಳಿಪಳ್ಳಿಗಳಲ್ಲಿ ಸಹ ಪಂಚಾಚಾರ್ಯರ ಸಂಬಂಧವಿರಬೇಕೆಂದು ಅಯಾಯ ಪೀಠ ಹಾಗೂ ಸೂತ್ರಗೋತ್ರಕ್ಕೊಳ್ಳ ಪಟ್ಟ ಹಿರೇಮಠಗಳು ಸ್ಥಾಪಿಸಲ್ಪಟ್ಟವು. ಈ ಹಿರೇಮಠದವರು ಗಣಾಚಾರಿ, ಮಠಪತ್ತಿ, ಶೆಟ್ಟಿ ಮತ್ತು ಪ್ರಮುಖ ದೈವದವರನ್ನು ಕೂಡಿಕೊಂಡು ಊರೊಳಗೆ ದೀಕ್ಷೆ. ವಿವಾಹ, ಅಂತ್ಯವಿಧಿ, ಲಿಂಗಧಾರಣ, ನಾಮಕರಣ ಮೊದಲಾದ ಸಂಸ್ಕಾರಗಳನ್ನು ಮಾಡಹತ್ತಿದರು. ಮತ್ತು ಊರೊಳಗಿನ ವ್ಯಾಜ್ಯಗಳನ್ನು ಸಹ ತೀರಿಸುತ್ತಿದ್ದರು. ಈ ರೀತಿಯಾಗಿ ಗುರುವರ್ಗವು ಸಮಾಜವನ್ನು ಒಳ್ಳೇ ಬಂಧುರವಾಗಿಯೂ ಭದ್ರವಾಗಿಯೂ ಇಟ್ಟುಕೊಂಡು ಭಕ್ತರು ಧರ್ಮಭ್ರಷ್ಟರಾಗಿ ಹೋಗದಂತೆ ಜಾಗರೂಕರಾಗಿ ನಡೆದುಕೊಳ್ಳುತ್ತಿದ್ದರು.

೨. ಅಯ್ಯಗಳುಃ— ಮಾಹೇಶ್ವರ ವರ್ಗದಲ್ಲಿ ಅಯ್ಯನವರೆಂಬ ಇನ್ನೊಂದು ಮಹತ್ವದ ಪೆಂಗಡವು ಸಮಾವೇಶವಾಗಿರುತ್ತದೆ. 'ಅಯ್ಯ' ಶಬ್ದವು 'ಆರ್ಯ' ಎಂಬದರ ತದ್ಭವವು. ಅಯ್ಯಗಳೆಂದರೆ ಮನೆ ತೀರಿಸುವ ಗಣಂಗಳೆಂದು ಮಾತ್ರ ಭಾವಿಸಬಾರದು. ಅವರು ಸಮಾಜದಲ್ಲಿ ಶಿಕ್ಷಣ ಪ್ರಸಾರದ ಕೆಲಸ ಮಾಡುವ ಪವಿತ್ರವಾದ ಶಾಲಾಗುರುಗಳು. ಅವರಿಗೆ ಭಕ್ತವರ್ಗವು ಕಾಳುಕಡಿ ಬಟ್ಟೆಬರಿಗಳನ್ನು ಕೊಟ್ಟು ಪೋಷಿಸುತ್ತಿದ್ದಿತು. ಹಿಂದಕ್ಕೆ ಅಯ್ಯಗಳ ಶಾಲೆಗಳು ಒಳ್ಳೇ ಹೆಸರಾಗಿದ್ದವು. ಈಗಲೂ ಹಿಂದಿನ ಅವಶೇಷಗಳು ಅಲ್ಲಲ್ಲಿ ಕಂಡುಬರುತ್ತವೆ. ಅವರು ವ್ಯವಹಾರಕ್ಕೂ ತಮ್ಮ ಸಂಸ್ಕೃತಿಗೂ ಉಪಯುಕ್ತವಾದ ಓದು ಬರಹ ಗಣಿತ ಕಾವ್ಯ ಮತತತ್ವ ಮೊದಲಾದ ವಿಷಯಗಳನ್ನು ಚಿಕ್ಕಮಕ್ಕಳಿಗೆ ಕಲಿಸಿಕೊಡುತ್ತಿದ್ದರು. ಪುರಾಣ ಪುಣ್ಯಕಥೆಗಳನ್ನು ಭಕ್ತರಿಗೆ ಹೇಳುತ್ತಿದ್ದರು. ಹಳ್ಳಿಪಳ್ಳಿಗಳಲ್ಲಿ ಈ ಅಯ್ಯಗಳು ಹರಡಿಬಿಟ್ಟಿದ್ದರಿಂದ ಲಿಂಗಾಯತರಲ್ಲಿ ನಿರಕ್ಷರತನವನ್ನು ಹೋಗಲಾಡಿಸಲು ಶಕ್ಯವಾಯಿತು. ವೀರಶೈವರಲ್ಲಿ ಅನೇಕ ಕವಿಗಳೂ, ವಚನಕಾರರೂ, ತತ್ವವೇತ್ತರೂ ಆಗಲಿಕ್ಕೆ ಈ ಅಯ್ಯಗಳು ಕಲಿಸಿದ ಅಕ್ಷರವಿದ್ಯೆಯೇ ಮುಖ್ಯ ಕಾರಣವು.

೩. ಗಣಂಗಳುಃ— ಮಾಹೇಶ್ವರ ವರ್ಗದಲ್ಲಿ ಗಣಂಗಳೆಂಬ ಒಂದು ಶಾಖೆಯು ಅತ್ಯಂತ ಮಹತ್ವದ್ದಾಗಿರುತ್ತದೆ ಸ್ವಧರ್ಮರಕ್ಷಣೆಗಾಗಿಯೂ ಪರಧರ್ಮದವರ ಹಾವಳಿಯನ್ನು ತಗ್ಗಿಸುವದಕ್ಕಾಗಿಯೂ ಗಂಡುಗಲಿಗಳಾಗಿ ವೀರವೃತ್ತಿಯಿಂದ ಜೀವಿಸುತ್ತಿದ್ದರು. ಇವರಿಗೆ ಗಣಂಗಳೆಂಬ ಹೆಸರು. ಭಕ್ತರು ಇವರ ಸಲುವಾಗಿ ವಿವಾಹ, ಮಹೋತ್ಸವ, ಪ್ರಸ್ಥಪ್ರಯೋಜನ ಕಾಲಗಳಲ್ಲಿ ಗಣಾರಾಧನೆ ಮಾಡಿಸುತ್ತಿದ್ದರು. ಶಿವನ ಪ್ರಮುಥಗಣಂಗಳು ಶಿವನ ಸೈನಿಕರಾದಂತೆ ಈ ಗಣಂಗಳು ವೀರಶೈವ ಸಮಾಜದ ಸೈನಿಕರಾಗಿದ್ದರು. ಬಸವಣ್ಣನವರ ಬಳಿಯಲ್ಲಿ ೧ ಲಕ್ಷ್ಯ ೯೬ ಸಾವಿರ ಗಣಂಗಳು (Defence force) ಇದ್ದರೆಂದು ಪುರಾಣ ಪ್ರಸಿದ್ಧವಿದೆ ವೀರಶೈವ ಪಂಚಾಚಾರಗಳಲ್ಲಿ ಗಣಾಚಾರವು 'ಗಣ' ಶಬ್ದದ ವೀರವೃತ್ತಿಯನ್ನೇ ವ್ಯಕ್ತಪಡಿಸುತ್ತದೆ. ಬಿಜ್ಜಳನ ಸೈನ್ಯಕ್ಕೂ ನಮ್ಮ ಗಣಂಗಳಿಗೂ ಘೋರ ಸಂಗ್ರಾಮಗಳಿಸಿ ಕೂನೆಗೆ ೬೭೦ ಅಮರಗಣಂಗಳು ಉಳಿದು ಬಸವೇಶನಿದ್ದೆಡೆಗೆ ಸಾಗಬೇಕೆಂದು ಸಂಗಮದ ಕಡೆಗೆ ಹೊರಟಿರಲು ಅದಕ್ಕೆ ಸವಿಪಿಸಿರುವ ಈಗಿನ ಅಮರಗೋಳ ಎಂಬಲ್ಲಿ ಆತನ ಐಕ್ಯದ ಸುದ್ದಿಯನ್ನು ಕೇಳಿ ಅವರೆಲ್ಲರೂ ಅಲ್ಲಿಯೇ ಐಕ್ಯರಾದ್ದರಿಂದ ಆ ಸ್ಥಳಕ್ಕೆ ಅಮರಗೋಳ ಎಂಬ ಹೆಸರು ಬಂದಿತೆಂದು ಕೆಲವರು ಹೇಳುತ್ತಾರೆ. ಬೇರೆ ಕೆಲವರು ಆ ೬೭೦ ಅಮರಗಣಂಗಳು ಜೀವನ್ನ ಬಸವೇಶನ ಅಂಗರಕ್ಷಕರಾಗಿ ಅವನನ್ನು ಕಲ್ಯಾಣದಿಂದ ಉಳಿವಯ ವರೆಗೂ ಉಳಿಸಿಕೊಂಡು ಹೋದರೆಂತಲೂ ಹೇಳುವದುಂಟು. ಏನೇ ಇರಲಿ, ಒಟ್ಟಿನ ಮೇಲೆ ಸುಮಾರು ೨ ಲಕ್ಷ ವೀರಶೈವ ಸೈನ್ಯವು ಬಸವಣ್ಣನವರ ಕಾಲದಲ್ಲಿ ಒಳ್ಳೇ ಸುಸಂಘಟಿತವಾದ ಸುಸ್ಥಿತಿಯಲ್ಲಿತ್ತೆಂಬದು ನಿರ್ವಿವಾದವು. ಆದರೆ ಮುಂದೆ ಈ ಗಣಂಗಳ ಸಂಘಟನೆಯು ಸಡಲಿತು. ಆದರೆ ಆ ಗಣಂಗಳ ವಂಶಜರು ಈಗ ಆ ವೀರ ವೃತ್ತಿ (Martial spirit) ಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ವೀರಶೈವರು ಹೆಸರಿನ ಮೇಲಿಂದ ಶೀಖರಂತೆ ಯುದ್ಧಪ್ರಿಯ ಜನಾಂಗವಿರಲೇ ಬೇಕು.

ಅಂಥ ಹುದುಗಿಕೊಂಡ ವೀರಶ್ರೀಯು ನವ್ಯನಾಡಿನಲ್ಲಿ ಪುನಃ ಜಲ ನೆಯನ್ನುಂಟು ಮಾಡಬೇಕಾಗಿದೆ. ಈಗಿನ ಯುದ್ಧ ಪ್ರಸಂಗದಲ್ಲಂತೂ ವೀರಶೈವರದೊಂದು ಪ್ರತ್ಯೇಕವಾದ "ಸೈನ್ಯದಳ"ವಿರುವದು ಅತ್ಯಾವಶ್ಯಕವು.

ನಿರಂಜನ ವರ್ಗ.

ನಿರಂಜನ ವರ್ಗದವರು ನಿರಧಿಕರಣ ದೀಕ್ಷೆಹೊಂದಿದ ಶಕ್ತಿಪಾತ ಪುನೀತ ಜೀವಾತ್ಮರು. ಅವರು ಸ್ವಯಂಸ್ಫೂರ್ತಿಯಿಂದ ಪ್ರೇರಿತರಾಗಿ ಲೋಕಸಂಗ್ರಹ ಕಾರ್ಯ ಮಾಡುವರು. ಇಂಥ ವ್ಯಕ್ತಿಗಳು ಭಕ್ತವರ್ಗದಲ್ಲಿ ಉದ್ಭವಿಸಬಹುದು. ಇಲ್ಲವೇ ಮಾಹೇಶ್ವರ ವರ್ಗದಲ್ಲಿ ಜನಿಸಬಹುದು. ಇವರು ತಮ್ಮ ಸ್ವಾನುಭವದಿಂದಲೂ ಈಶ್ವರಾನುಗ್ರಹದಿಂದಲೂ ಆಚಾರ ವಿಚಾರ ಉಚ್ಚಾಂಗಗಳಲ್ಲಿ ಶ್ರೇಷ್ಠತರಗತಿಗೇರಿ ಭಕ್ತಮಾಹೇಶ್ವರ ವರ್ಗಗಳೆಲ್ಲ ಮಾರ್ಗದರ್ಶಿಗಳಾಗಿರುತ್ತಾರೆ. ನಿರಂಜನ ವರ್ಗದಲ್ಲಿ ವಿರಕ್ತರು ಶಿವಯೋಗಿಗಳು, ಶರಣರು, ಎಂಬ ಕ್ರಿಯಾಭೇದಗಳುಂಟು. ಇವರು ಕ್ರಮದಿಂದ ಜ್ಞಾನಮಾರ್ಗ, ಯೋಗಮಾರ್ಗ, ಕರ್ಮಮಾರ್ಗ, ಇವುಗಳ ನೆಲೆಕಲೆಗಳನ್ನರಿತು ಆಚರಿಸಿ ಸಮಾಜಕ್ಕೆ ಅದರ ರುಚಿಯನ್ನು ಹಚ್ಚಿಕೊಡುವಂಥವರಾಗಿರುತ್ತಾರೆ.

೧. ವಿರಕ್ತರುಃ— ಇವರು ಷಟ್‌ಸ್ಥಲ ತತ್ವಗಳನ್ನರಿತು ಆಚರಿಸಿ ಷಟ್‌ಸ್ಥಲ ಬ್ರಹ್ಮಗಳೆನಿಸಿಕೊಂಡು ವೀರಶೈವಮತತತ್ವ ಸಂವಾದ ಸಂಶೋಧನ ಕಾರ್ಯಗಳನ್ನು ಮಾಡಿ ಗ್ರಂಥಗಳನ್ನು ಪ್ರಕಟಿಸಿ ಆ ಅಧ್ಯಾತ್ಮ ಜ್ಞಾನಭಾಂಡಾರವನ್ನು ಸಮಾಜದಲ್ಲಿ ಹರಡುವಂಥವರು. ಲಗ್ನವಾದರೆ ಪ್ರಪಂಚದ ಜಂಜಾಟ ಸ್ವಾರ್ಥಗಳು ಬೆಳೆಯಬಹುದೆಂದು ತಿಳಿದು ಆಜನ್ಮ ಬ್ರಹ್ಮಚಾರಿಗಳಾಗಿ ನಿಸ್ವಾರ್ಥಬುದ್ಧಿಯಿಂದ ಇವರು ಲಿಂಗಾಂಗ ಸಾಮರಸ್ಯಜ್ಞಾನ ಪ್ರಸಾರ ಮಾಡುವ ಪವಿತ್ರಕಾರ್ಯವನ್ನು ಕೈಕೊಂಡರು. ಈ ವಿರಕ್ತಸ್ವಾಮಿಗಳು ಕನ್ನಡ ಸಂಸ್ಕೃತ ಭಾಷೆಯಲ್ಲಿ ಎಷ್ಟೋ ಕಾವ್ಯಗಳನ್ನೂ ಮತಗ್ರಂಥಗಳನ್ನೂ ತತ್ವಪದಗಳನ್ನೂ ಬರೆದು ಸಮಾಜಕ್ಕೆ ಮಹದುಪಕಾರ ಮಾಡಿದ್ದಾರೆ.

೨. ಶಿವಯೋಗಿಗಳುಃ— ಇವರು ನಿರಂತರ ಪ್ರಾಣಲಿಂಗಾನುಸಂಧಾನದಿಂದ ಸಮರಸಸುಖವನ್ನನುಭವಿಸಿ ತಮ್ಮ ಅಂತಃಕರಣದ

ಪ್ರಭಾವವನ್ನು ಸಮಾಜದಲ್ಲಿ ಹರಡಿ ಅದಕ್ಕೆ ಸುಖಶಾಂತಿಯನ್ನುಂಟು ಮಾಡುವ ಮಹಾತಪಸ್ವಿಗಳು. ಇವರು ತಮ್ಮ ಸ್ವಾರ್ಥಕ್ಕಾಗಿ ಯೋಗವನ್ನು ಬಲಿಸಿಕೊಳ್ಳದೆ ತಮ್ಮ ಅಂತಃಕರಣದ ಪ್ರಕಾಶ ಕಿರಣಗಳನ್ನು ಸಮಾಜದಲ್ಲಿ ಹರಡಿ ಜನತೆಯಲ್ಲಿ ದಿವ್ಯ ಚೇತನವನ್ನುಂಟು ಮಾಡುವಂಥವರು. ಬಹಿರಂಗವಾಗಿ ಇವರ ಕಾರ್ಯವು ನಡೆಯದಿದ್ದರೂ ಆಂತರಂಗಿಕವಾಗಿ ಜನರ ಮನಃ ಪ್ರವೃತ್ತಿಗಳನ್ನು ಪರಿವರ್ತನ ಮಾಡಿಬಿಡುವರು. ಇವರಿಗೆ ನಾವು ಮಾನಸಶಾಸ್ತ್ರದ ಶಕ್ತಿಮಂದಿರ (Psychic power houses) ಗಳೆನ್ನಬಹುದು. ಶಿವಯೋಗಿಗಳು ಯೋಗ ಮಾರ್ಗದವರು. ಇವರು ಜನರ ಮನೋವೃತ್ತಿಗಳನ್ನು ಮಾರ್ಪಾಟು ಮಾಡುವ ಮಹಾಮಹಿಮರು.

೩. ಶರಣರುಃ— ವಿರಕ್ತರು ಅವಿವಾಹಿತರಾಗಿದ್ದರೆ ಶರಣರು ವಿವಾಹಿತರಾಗಬಹುದು. ಶರಣರು "ನುಡಿದಂತೆ ನಡೆ, ಇದೇ ಜನ್ಮ ಕಡೆ" ಎಂಬ ತತ್ವದಂತೆ ಆಚರಿಸಿ ಜನತೆಗೆ ಒಳ್ಳೆ ಮಾದರಿಯನ್ನು ಹಾಕಿಕೊಡುವಂಥವರು. ಲೋಕಸಂಗ್ರಹ ಕಾರ್ಯವೇ ಇವರ ಕಾರ್ಯಕ್ಷೇತ್ರವು. ಇವರು ತಮ್ಮ ಆಚರಣೆಯಿಂದ ಜನತೆಗೆ ನೀತಿ ಸದಾಚಾರ ಸದ್ಭಕ್ತಿಗಳನ್ನು ಕಲಿಸಿಕೊಡುತ್ತಾರೆ. ಬಸವಾದಿ ಶಿವಶರಣರು ಶಿವಾನುಭವ ಮಂಟಪದಲ್ಲಿ ಉದಾತ್ತ ತತ್ವಗಳನ್ನು ಚರ್ಚಿಸಿ ಬೆಳಕಿಗೆ ತಂದರು. ಸನ್ಯಾಸಿಗಳಾಗಿ ಲೋಕಸೇವೆ ಮಾಡುವದಕ್ಕಿಂತ ಗೃಹಸ್ಥರಾಗಿ ಮಾಡುವದಾದರೂ ಶ್ರೇಯಸ್ಕರವೆಂದು ಭಾವಿಸಿ ಜನಕಾದಿಗಳಂತೆ ಬಸವಾದಿ ಶರಣರು ಆಚರಿಸಿ ಲೋಕಪ್ರಿಯರಾದರು. ಶಿವಶರಣರೆಂದರೆ ಲೋಕಸಂಗ್ರಹ ಕಾರ್ಯ ಮಾಡುವ ಕರ್ಮಯೋಗಿಗಳು. ಶ್ರೀಕೃಷ್ಣನು ಅರ್ಜುನನಿಗೆ "ತಸ್ಮಾತ್ ಯೋಗೀ ಭವಾರ್ಜುನ" ಎಂದು ಶರಣರ ಕರ್ಮಯೋಗವನ್ನುಪದೇಶಿಸಿದ್ದಾನೆ.

ಜಂಗಮರುಃ— ಜಂಗಮರ ಕಾರ್ಯಕ್ಷೇತ್ರವಂತೂ ಕೇವಲ ನಿಃಸ್ವಾರ್ಥಮಯವಾಗಿರುವದು. ತಾವು ಅನೇಕ ಕಷ್ಟಗಳನ್ನನುಭವಿಸಿ ಲೋಕಹಿತಾರ್ಥವಾಗಿ ನಿರಂತರ ಸಂಚರಿಸಿ ಜನರಲ್ಲಿ ಸದಾಚಾರ ಸದ್ಭಕ್ತಿಗಳು ನೆಲೆಗೊಳ್ಳುವಂತೆ ಮಾಡತಕ್ಕದ್ದು. ಪ್ರಮುಖರ ಮಾರ್ಗವನ್ನು ದೇಶದ ತುಂಬೆಲ್ಲ ಹರಡಿದ ಶ್ರೇಯಸ್ಸು ಜಂಗಮರಿಂಗೇ ಸಲ್ಲುತ್ತದೆ. ವೀರಶೈವ

ಇತಿಹಾಸದಲ್ಲಿ ಜಂಗಮರು ಮಾಡಿದ ಕಾರ್ಯವು ಚಿರಸ್ಮರಣೀಯವಾಗಿರುತ್ತದೆ. ಜಂಗಮರ ಈ ಅಪಾರ ಸೇವೆಗೆ ಮನಸೋತು ಬಸವಣ್ಣನು ಜಂಗಮಪ್ರಾಣಿಯಾದನು. ಹಿಂದಕ್ಕೆ ಜಂಗಮರು ಅವಿಶ್ರಾಂತ ಪರಿಶ್ರಮಪಟ್ಟು ದೇಶದಲ್ಲೆಲ್ಲ ಸಂಚರಿಸಿ ಲಿಂಗಾಯತ ಮತವನ್ನು ಪ್ರಸಾರ ಮಾಡಿದರು.

ಒಟ್ಟಿನ ಮೇಲೆ ಈ ಎಲ್ಲ ವರ್ಗದವರು ನಮ್ಮ ಸಮಾಜಕ್ಕೆ ಮಾಡಿದ ಸೇವೆಯು ಘನತರವಾದುದೂ ಉದಾತ್ತವಾದುದೂ ಆಗಿದೆ. ನಮ್ಮ ಸಮಾಜದಲ್ಲಿ ಉಜ್ವಲವಾದ ಭಕ್ತಿ, ಕರ್ಮ, ಜ್ಞಾನ, ಯೋಗಗಳನ್ನು ಕಾಲಕಾಲಕ್ಕೆ ಈ ವರ್ಗದವರು ಬೆಳಿಯಿಸುತ್ತ ಬಂದದ್ದು ಶ್ಲಾಘನೀಯವಾಗಿದೆ.

"ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ."

ಲೇ:—ಶ್ರೀಗುರು ಸಿದ್ಧಸ್ವಾಮಿಗಳು ಸಂಸ್ಕೃತ ಮಹಾಪಾಠಶಾಲಾ
ಶ್ರೀಸಿದ್ಧಗಂಗಾಕ್ಷೇತ್ರ.

[ವೇ॥ ಬ್ರ॥ ಶ್ರೀ॥ ತರ್ಕ. ಸಾಹಿತ್ಯ ವೇದಾಂತ ವಿದ್ವಾನ್ ಪಿ. ಚಂದ್ರಶೇಖರಭಟ್ಟರವರ, ತರ್ಕ ಶಾಸ್ತ್ರೀಯಾಧ್ಯಯರು ಬೆಂಗಳೂರ ಸಂಸ್ಕೃತ ಕಾಲೇಜ ಇವರು ಶ್ರೀಸಿದ್ಧಗಂಗಾ ಸಂಸ್ಕೃತ ಕಾಲೇಜಿನಲ್ಲಿ ಮಾಡಿದ ಭಾಷಣದ ಸಾರಾಂಶ]

ಪ್ರಪಂಚದಲ್ಲಿ ಅಲ್ಪಸ್ವಲ್ಪ ಜ್ಞಾನವನ್ನು ಪಡೆದು ಅವಿಚಾರತೆಯಿಂದ ಪ್ರಮತರಾದ ಮಾನವ ವ್ಯಕ್ತಿಗಳನ್ನು ಉದ್ಧಾರ ಮಾಡಲು ಅನೇಕ ದರ್ಶನಗಳೂ ಶಾಸ್ತ್ರಗಳೂ ಹೊರಟಿವೆ. ಈ ದರ್ಶನಗಳು ಆಸ್ತಿಕ ನಾಸ್ತಿಕವೆಂದು ಎರಡು ವಿಧವಾಗಿವೆ. ಇವುಗಳಲ್ಲಿ ಆಸ್ತಿಕ ದರ್ಶನಗಳು ಆರೆಂದೂ ನಾಸ್ತಿಕ ದರ್ಶನಗಳು ಆರೆಂದೂ ವಿಭಾಗಿಸಲ್ಪಟ್ಟಿವೆ. ನಿರ್ದಿಷ್ಟ ಧ್ಯೇಯ ಸಂಪಾದನೆ ಅಂದರೆ ಮೋಕ್ಷ ಸಂಪಾದನೆಗೆ ಸುಗಮವಾದ ಹಾದಿಯನ್ನು ತೋರುವುದೇ ಇವುಗಳ ಮುಖ್ಯ ಧ್ಯೇಯ. ಆದಕಾರಣ ಈ ದರ್ಶನಗಳಿಂದ ಹೊರಟ ಮತಗಳು ಕ್ರಮೇಣ ತಮ್ಮ ತಮ್ಮ ಮತವೇ

ಹೆಚ್ಚೆಂದು ಹೇಳುವುದಲ್ಲದೆ ಇತರ ಮತಗಳನ್ನು ಹೀಯಾಳಿಸಹತ್ತಿದವು. ಇದು ಅವಿಚಾರತೆಯ ಫಲವಲ್ಲದೆ ಜ್ಞಾನಿಗಳು ಎಂದಿಗೂ ಹೀಗ ಭಾವಿಸುವುದಿಲ್ಲ. ದರ್ಶನಗಳಲ್ಲಾಗಲಿ, ಶಾಸ್ತ್ರಗಳಲ್ಲಾಗಲಿ ವಿಮರ್ಶಿಸಿ ನೋಡಿದರೆ ಈ ರೀತಿ ಯಾವ ಉಚ್ಚ ನೀಚ ಭಾವನೆಗಳೂ ಕಂಡುಬರುವುದಿಲ್ಲ. ಮತಗಳು ಅನೇಕವಾದರೂ ಅವುಗಳ ಅಂತಿಮ ಧ್ಯೇಯವು ಒಂದೇ ಆಗಿರುತ್ತದೆ. ಒಂದು ನಿರ್ದಿಷ್ಟ ಸ್ಥಾನವನ್ನು ಸೇರಲು ಭಿನ್ನ ಭಿನ್ನ ಮಾರ್ಗಗಳಿದ್ದರೂ ಸೇರುವ ಸ್ಥಳವು ಒಂದೇ ಆಗಿರುತ್ತದೆ. ಇದಕ್ಕಾಗಿ ಇತರರ ಪಂಥಗಳನ್ನಳಿಯುವುದು ತರವಲ್ಲ. ಪರಮಾತ್ಮನು ಒಬ್ಬನೇ ಆಗಿದ್ದು ಅಪರವರ ಮನೋಭಾವನೆಯಂತೆ ಭಿನ್ನ ಭಿನ್ನ ರೂಪದಲ್ಲಿ ತೋರುತ್ತಾನೆಯೇ ಹೊರತು ವಸ್ತುಸ್ಥಿತಿಯಲ್ಲವನು ಭಿನ್ನನಲ್ಲ. ಉದಾಹರಣೆಯಾಗಿ ಭಿನ್ನ ಭಿನ್ನ ರಸಗಳಲ್ಲಿ ಅಭಿರುಚಿಯುಳ್ಳ ಜನರಿಗೆ ಆಯಾಯ ರಸದಿಂದ ತೃಪ್ತಿ ಎಂಬುದು ಹೇಗೆ ಒಂದಾಗಿರುತ್ತದೆಯೋ ಅಂತೆಯೇ ಅಭಿರುಚಿ ವೈವಿಧ್ಯವುಳ್ಳ ಜನರು ತಮಗಭಿಮತವಾದ ದೇವತೋಪಾಸನಾದಿಗಳಿಂದ ತೃಪ್ತರಾಗುತ್ತಾರೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮತ್ತು ವಿವಿಧ ಬಣ್ಣಗಳ ಹಸುಗಳ ಹಾಲೂ ಒಂದೇ ರೀತಿಯಾಗಿರುವಂತೆ ಪರಮಾತ್ಮನಲ್ಲಿ ಭೇದವಿಲ್ಲದಿರುವದರಿಂದ ಆಯಾಯ ಮತಾವಲಂಬಿಗಳು ತಮ್ಮ ಮತವೇ ಹೆಚ್ಚೆಂದು ಹೇಳಕೊಂಡರೂ ಇತರ ಮತಗಳನ್ನು ನಿಂದಿಸುವಾರದು.

ಶಕ್ತಿ ವಿಶಿಷ್ಟಾದ್ವೈತಕ್ಕೇ ಶಿವಾದ್ವೈತವೆಂತಲೂ ಹೇಳುವದುಂಟು. ಇದರಲ್ಲಿ ಮತಪ್ರಕ್ರಿಯೆಗಳನ್ನು ವಿಭಜಿಸುತ್ತಾ ಪ್ರಥಮತಃ ಪತಿ, ಪಶು, ಪಾಶ ಎಂದು ಮೂರು ವಿಭಾಗಗಳನ್ನು ಮಾಡಿರುತ್ತಾರೆ. ಇವುಗಳಲ್ಲಿ ಪತಿ ಎಂಬುವನೇ ಈಶ್ವರ. ಇವನು ಸ್ವತಂತ್ರ. ಸರ್ವನಿಯಾಮಕ, ನಿತ್ಯಮುಕ್ತ. ಅಲ್ಲದೆ ಇವನು ಉದ್ಧಾರಕ ಸಂಕಲ್ಪವುಳ್ಳವನು. ಇವನ ಸ್ವರೂಪವು ಶಕ್ತಿಯುತವಾದುದು. ಜಗತ್ತಿಗೆ ಇವನು ನಿಮಿತ್ತಕಾರಣನೂ ಉಪಾದಾನ ಕಾರಣನೂ ಹೌದು. ಈ ಶಿವನು ಶಕ್ತಿಯುತನೆನ್ನುವದಕ್ಕೆ "ನ ಶಿವೇನ ವಿನಾ ಶಕ್ತಿಃ ನ ಚ ಶಕ್ತಿರ್ವಿನಾ ಶಿವಃ ವಾಯುರ್ಗಂಧವದಸ್ಯೋನ್ಯಂ ಮರುತಾಂಬರ ಯೋರಿವ॥". ಎಂದು ಅನೇಕ ಪ್ರಮಾಣಗಳಿವೆ. ಅದ್ವೈತ ಮತರೀತ್ಯಾ ಈ ಶಕ್ತಿಯನ್ನು ಅವಿದ್ಯೆಯೆಂದರೆ ಜಗತ್ತಿನ ಸೃಷ್ಟಿಯೇ ಇಲ್ಲದಂತಾಗುತ್ತದೆ. ಇವಕ್ಕೆ ನಿದರ್ಶನವಾಗಿ ಈ ಶಕ್ತಿ

ವಿಶಿಷ್ಟಾದ್ವೈತ ಮತದಲ್ಲಿ "ಶಿವಶಕ್ತಿಗಳು ಪರಸ್ಪರ ಕೂಡಿದಲ್ಲೇ ಜಗತ್ ಸೃಷ್ಟಿ" ಎಂಬ ಉಕ್ತಿ ಇದೆ. ಇದರಿಂದ ಜಗತ್ ಸೃಷ್ಟಿಯಾಗಬೇಕಾದರೆ ಶಿವಶಕ್ತಿಗಳು ಪರಸ್ಪರ ಸಂಬಂಧಿಸಿರುತ್ತವೆಂದಾಯಿತು.

ಇಂತಹ ಜಗತ್ ಸೃಷ್ಟಿಯಲ್ಲಿ ಮೋಕ್ಷವನ್ನು ಪಡೆಯಲು ಲಿಂಗಾಂಗ ಸಾಮರಸ್ಯಜ್ಞಾನವೇ ಮುಖ್ಯವಾದ ಸಾಧನವಾಗಿರುತ್ತದೆ. ಇಲ್ಲಿ ಲಿಂಗವು ಆರು ವಿಧವಾಗಿದೆ. ಇದರಲ್ಲಿ ಮಹಾಲಿಂಗವೇ ಪರಮಾತ್ಮ (ಈಶ್ವರ). ಉಳಿದ ಐದು ಲಿಂಗಗಳು ಅವನ ರೂಪಗಳೇ ಆಗಿವೆ. ಸದ್ಯೋಜಾತಾದಿ ಐದು ಲಿಂಗಗಳನ್ನು ಬೋಧಿಸುವ ಐದು ವೇದ ಮಂತ್ರಗಳಿವೆ.

ಜಡಾಜಡಾತ್ಮಕವಾದ ಪ್ರಪಂಚವು ಲಯವಾದರೆ ಶಕ್ತಿಯಲ್ಲಿ ಅಡಗುವದು. ಮೇಲೆ ಹೇಳಿದ ಮೂರ್ತಿ ಭೇದಗಳಾದರೋ "ಸಾಧಕಸ್ಯತು ಮೋಕ್ಷಾರ್ಥಂ ಮೂರ್ತಿಭೇದಃ ಪ್ರಕಲ್ಪ್ಯತೆ" ಎಂಬಂತೆ ಅನೇಕಾಕಾರಗಳನ್ನು ಭಕ್ತರ ಉದ್ಧಾರಕ್ಕಾಗಿ ಧರಿಸುವದರಿಂದ ಅವು ಸಾಫಲ್ಯವನ್ನು ಹೊಂದಿವೆ. ನಿರಾಕಾರ ವಸ್ತುವು ಅದೃಶ್ಯವಾದ್ದರಿಂದ ಸಾಮಾನ್ಯರ ಮನವಂಕೆಯಾಗುವುದಿಲ್ಲವಾದ ಪ್ರಯುಕ್ತ ಸಾಕಾರಾವತಾರಗಳನ್ನು ಹೊಂದಿರುತ್ತಾನೆ. ಶಾಸ್ತ್ರರೀತ್ಯಾ "ಆಕಾರವಾನ್ ಸ್ತ್ವವಾನಾಕಾರಸ್ತ್ವವಜ್ಞಃ" ಎಂದು ಆಕಾರವು ಅವಶ್ಯಕ.

ಅಂಗ ಎಂದರೆ ಉಪಾಸಕನು. ಹಿಂದೆ ಹೇಳಿದ ಲಿಂಗ ಈ ಅಂಗ ಇವರಿಬ್ಬರ ಸಾಮರಸ್ಯವೇ ಮೋಕ್ಷವೆಂದು ವೀರಶೈವ ದರ್ಶನಗಳಲ್ಲಿ ಕಂಡಿಂದ ಹೇಳಲ್ಪಟ್ಟಿರುತ್ತದೆ.

ಪಶು.

ಪಶು ಎಂದರೆ ಜೀವನೆಂದೂ ಅವನು ಸುಖದುಃಖಭಾಗಿಯಾಗಿರುವದರಿಂದಲೂ ಅಸ್ವತಂತ್ರನಾಗಿರುವುದರಿಂದಲೂ ಪಶುವೆಂದು ಕರೆಯಲ್ಪಟ್ಟಿರುವನು. ಈ ಪಶುವನ್ನು ಶಕ್ತಿಗಿಂತ ಕಡಿಮೆಯಾಗಿಯೂ ಪಾಶಕ್ಕಿಂತ ಅಧಿಕನನ್ನಾಗಿಯೂ ಗಣಿಸುವುದರಿಂದ ಇದಕ್ಕೆ ಮಧ್ಯಮಸ್ಥಾನವು ಕೊಡಲಾಗಿದೆ. ಇತರ ಮತಸ್ಥರು ಯಾರೂ ಈ ಜೀವನನ್ನು ಪಶುವೆಂದು ಕರೆಯದಿದ್ದರೂ ವೀರಶೈವರು ಮಾತ್ರ ಜೀವನು ಕರ್ಮದಿಂದ ಸುಖದುಃಖಗಳನ್ನನುಭವಿಸುವುದರಿಂದ ಪಶುವೆಂದು ಕರೆಯುತ್ತಾರೆ. ಅಲ್ಲದೆ

ಈ ಶಕ್ತಿವಿಶಿಷ್ಟಾದ್ವೈತವನ್ನು ಮೂವತ್ತೆರಡು ತತ್ವಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳಲ್ಲಿ ನಿಯತಿ ಕಾಲ ಕಲಾದಿಸಪ್ತತತ್ವಗಳು ಶುದ್ಧತತ್ವಗಳು. ಮಂತ್ರೇಶ್ವರ, ಅನಂತೇಶ್ವರ, ವಿದ್ಯೇಶ್ವರ ಮುಂತಾದ ಮಹೇಶ್ವರರು ಶುದ್ಧ ಕಲೆಗಳಿಂದ ಬಂಧಿತರು. ಈ ಸಪ್ತತತ್ತ್ವಗಳನ್ನೇ ಸಗುಣ ಲಿಂಗಗಳೆಂದು ಕರೆಯುತ್ತಾರೆ. ಉಳಿದ ೫೫ ಅಶುದ್ಧತತ್ತ್ವಗಳಿಂದ ಆಕ್ರಾಂತರಾದವರನ್ನೇ ಪಶುವೆಂದು ಕರೆಯುತ್ತಾರೆ. ನಿತ್ಯಾನಿತ್ಯವಸ್ತುವಿವೇಕ, ಇಹಪರಾರ್ಥ ಫಲಭೋಗವಿರಾಗ, ಶಮಾದಿಷಟ್ಕ ಸಂಪತ್ತಿ, ಮುಮುಕ್ಷುತ್ವ, ಇವೇ ಸಾಧನ ಚತುಷ್ಟಯಗಳು. ಇತರ ಸಿದ್ಧಾಂತಗಳೂ ಈ ತತ್ವವನ್ನು ಒಪ್ಪುತ್ತವೆ. ಮೋಕ್ಷವನ್ನು ಹೊಂದಲು ಈ ಸಾಧನ ಚತುಷ್ಟಯಸಂಪನ್ನನಾದ ಸಾಧಕನೇ ಅಧಿಕಾರಿಯು. ಸರ್ವ ಶಾಸ್ತ್ರಜ್ಞರು ವಿಷಯಾದಿ ಸುಖಗಳನ್ನು ಕ್ಷಣಿಕವೆನ್ನುತ್ತಾರೆ. ತ್ರಿಕಾಲಾಬಾಧಿತವಾಗಿಯೂ ದುಃಖಸಂಮಿಶ್ರವಿಲ್ಲದೆಯೂ, ನಿತ್ಯವಾಗಿಯೂ, ನಿರಾಲಂಬವಾಗಿಯೂ ಇರುವ ಸುಖವೇ ಶ್ರೇಷ್ಠ ಸುಖವು. ಅಂತಹ ಸುಖವು ಲಭಿಸಬೇಕಾದರೆ ಮೋಕ್ಷದಿಂದಲ್ಲದೆ ಬೇರೆ ಯಾವುದರಿಂದಲೂ ಲಭಿಸಲಾರದು. ಇದನ್ನು ಹೊಂದುವುದೇ ಮನುಷ್ಯನ ಧ್ಯೇಯ.

ಪಾಶ.

"ಪಾಶ್ಯತೇ ಇತಿ ಪಾಶಃ, ಪಾಶ್ಯತೇ ಅನೇನ ಇತಿ ವಾ ಪಾಶಃ." ಪಶುವನ್ನು ಕಟ್ಟುವದು ಪಾಶವೆಂದರ್ಥ. ಪಾಶವು ಮಲ, ಮಾಯಾ, ರೋಧನ ಶಕ್ತಿ ಎಂದೂ, ಕರ್ಮವೆಂತಲೂ ನಾಲ್ಕು ವಿಧವಾಗಿದೆ. ಮಲ, ಪಾಶವು ಅನರ್ಥ ಪರಂಪರೆಗೆ ಮೂಲಕಾರಣ. ಪೂರ್ವೋಕ್ತ ಜೀವನನ್ನು ವಿಜ್ಞಾನಕಲಾ, ಪ್ರಲಯಕಲಾ, ಸಕಲಕಲಾ ಎಂದು ಮೂರು ತೆರನಾಗಿ ವಿಭಾಗಿಸಿದ್ದಾರೆ. ಇದರಲ್ಲಿ ವಿಜ್ಞಾನಕಲಾ ಎಂಬ ಜೀವನು ಮಲಭೇದನು ಪ್ರಲಯಕಲಾಜೀವನು ಮಲಪಾಶ ಕರ್ಮಪಾಶಗಳಿಂದ ಬಂಧಿತನು. ರೋಧನ ಶಕ್ತಿಎಂದರೆ ಇದ್ದುದನ್ನು ಮರೆಮಾಚಿ ತನ್ನನ್ನು ತೋರ್ಪಡಿಸಿಕೊಳ್ಳುವಿಕೆ. ಉದಾಹರಣೆಯಾಗಿ ರಾಹು ಗ್ರಹವು ಬೇರೆಯಾಗಿದ್ದಾಗ ಕಾಣದಿದ್ದರೂ ಚಂದ್ರಾವೃತವಾದಲ್ಲಿ ಕಾಣುವಂತೆ ಇಲ್ಲಿಯೂ ತಿಳಿಯಬಹುದು.

ಶಕ್ತಿವಿಶಿಷ್ಟಾದ್ವೈತದಲ್ಲಿರುವ ರೋಧ ಶಕ್ತಿಯನ್ನು ಅದ್ವೈತವು ಮರೆಮಾಡಿರುತ್ತದೆ. ಆದ್ದರಿಂದ ಈ ಪಾಶನಿವೃತ್ತಿಗೆ ಪ್ರಯತ್ನ ಪಡಬೇಕು.

ತದಕ್ಕೆ ಉಪಾಸನಾತ್ರಯಗಳಾದ ಶ್ರವಣ, ಮನನ, ನಿಧಿಧ್ಯಾಸೆಗಳು ಆವಶ್ಯಕ.

ನಾಸ್ತಿಕರು ಪ್ರತಿಕವಾದ ಜ್ಞಾನೋತ್ಪತ್ತಿಯೇ ಮೋಕ್ಷವೆಂದೂ, ನೈನರು ಚತುರ್ದಶಗುಣವಿನಾಶವೇ ಮೋಕ್ಷವೆಂದೂ, ಹೇಳುತ್ತಾರೆ. ಇದರಲ್ಲಿ ಯಾವ ಪುರುಷಾರ್ಥವೂ ಸಾಗುವಂತಿಲ್ಲ. ಏಕವಿಂಶತಿ ದುಃಖಧ್ವಂಸವೇ ಮೋಕ್ಷವೆಂದು ನೈಯ್ಯಾಯಿಕರೂ ಅವಿದ್ಯೆಯ ನಾಶವೇ ಮೋಕ್ಷವೆಂದು ವೇದಾಂತಿಗಳೂ, ಆನಂದಾವಿರ್ಭಾವವೇ ಮೋಕ್ಷವೆಂದು ಮತ್ತೆ ಕೆಲವರೂ, ನಿರ್ಗುಣ ಬ್ರಹ್ಮಮಾತ್ರ ಶೇಷವೇ ದೋಷವೆಂದು ಅದ್ವೈತಿಗಳೂ, ಶಕ್ತಿವಿಶಿಷ್ಟಾದ್ವೈತವಾದಿಗಳಾದ ವೀರಶೈವರು ಶಕ್ತಿ ವಿಶಿಷ್ಟನಾದ ಶಿವನಲ್ಲಿ ಸಪ್ತಸ್ಥಲಾಚರಣೆಯ ಮೂಲಕ ಐಕ್ಯವನ್ನೊಂದುವುದೇ ಅಂದರೆ ಜೀವನು ಶಿವನಲ್ಲಿ ಐಕ್ಯವನ್ನು ಹೊಂದುವುದು ಅರ್ಥಾತ್ ಅಂಗವು ಲಿಂಗ ದೇಹವಾಗುವುದು ಅದನ್ನೇ ಮೋಕ್ಷವೆಂದೂ ಹೇಳುವರು.

ಅದ್ವೈತಕ್ಕೂ ಶಿವಾದ್ವೈತಕ್ಕೂ ಇರುವ ಅಂತರವೇನೆಂದರೆ:— ಅದ್ವೈತಿಗಳು ನಿರ್ಗುಣ ಬ್ರಹ್ಮನೊಬ್ಬನೇ ಎಂತಲೂ ಶಕ್ತಿ ಎಂಬುದು ಅವಿದ್ಯೆಯೆಂತಲೂ ಕರೆಯುತ್ತಾರೆ. ಅಲ್ಲದೆ ಇವರು ವಿವರ್ತವಾದಿಗಳು. ವೀರಶೈವರು ಪರಿಣಾಮವಾದಿಗಳು. ಉಪಾಸಕನಿಗೆ ಬೇಕಾದ ಸಾಧನ ಚತುಷ್ಟಯಗಳನ್ನು ಮಾತ್ರ ಎರಡೂ ಮತದವರೂ ಅಂಗೀಕರಿಸುತ್ತಾರೆ. ಹೀಗೆ ಈ ಎರಡು ಮತಗಳು ಭಿನ್ನಭಿನ್ನವಾಗಿದ್ದರೂ ಪರಸ್ಪರ ಸಂಬಂಧದಿಂದಿರುತ್ತವೆ.

ಪೂರ್ವೋಕ್ತ ಶಕ್ತಿ ವಿಶಿಷ್ಟಾದ್ವೈತ ಮತಾನುಯಾಯಿಗಳಾದ ವೀರಶೈವರಲ್ಲಿ ಲಿಂಗಧಾರಣವೆಂಬುದು ಬಹು ಮುಖ್ಯವಾದುದು. ಇದು ಅನಾವಿಯಿಂದಲೂ ನಡೆದು ಬಂದಿದೆ. ಇದು ಅನಾದಿ ಎಂಬುದಕ್ಕೆ "ದೇವ ಧಾರಣೋಭೂಯಾಸಂ" "ಅಯಂಮೇಹಸ್ತೋಭಗವಾನಯಂ ಮೇ ಹಸ್ತೋ ಭಗವತ್ತರಃ ಅಯಂಮೇವಿಶ್ವ ಭೇಷಜೋ ಯಂ ಶಿವಾಭಿಮರ್ಶನಃ" ಇತ್ಯಾದಿ ವೇದ ವಾಕ್ಯಗಳೂ ಶ್ರುತಿಗಳೂ ಪ್ರಮಾಣಗಳಾಗಿವೆ. ಅಲ್ಲದೆ ಸರ್ವಾರ್ಥವನ್ನು ಪ್ರಕಾಶಿಸುವ ಸರ್ವಜ್ಞಕಲ್ಪವೆಂದು ಪ್ರಸಿದ್ಧಿಪಡೆದ ಅನಾದಿಯಾದ ವೇದದಲ್ಲಿ ಉಕ್ತವಾಗಿದೆ ಎಂದ ಮೇಲೆ ಅಲ್ಪ ಸ್ವಲ್ಪ ಕಾಲ ಅದೃಶ್ಯವಾಗಿದ್ದು ನಂತರ ವಿಶೇಷಾಕಾರವನ್ನು ಹೊಂದಿದ

ಮಾತ್ರದಿಂದಲೇ ನೂತನವಾದುದೆಂದು ಯಾರೂ ಪರಿಗಣಿಸಲಾಗುವುದಿಲ್ಲ. ಆದ ಕಾರಣ ಈ ವೀರಶೈವ ಮತವು ಮತ್ತು ಅದರಲ್ಲಿನ ಆಚರಣೆಗಳು ವೇದಸಮ್ಮತವಾದುವು ಎಂಬುದಕ್ಕೆ ವೇದಾದಿ ಶ್ರುತಿ ಸ್ಮೃತಿ ಪುರಾಣೋಪನಿಷತ್ತುಗಳನ್ನೇ ಉದಹರಿಸಿ ಹೇಳಿದರು. ಅಲ್ಲದೆ ವೀರಶೈವ ಮತವು ಅವೈದಿಕವೆಂದು ಹೇಳುವುದು ಶಾಸ್ತ್ರಪರಿಚಯವಿಲ್ಲದ ಅಜ್ಞರ ಮಾತಾಗಿದೆ.

ಬಸವೇಶ್ವರನಕಿಂತಲೂ ಮೊದಲಿನ ವೀರಶೈವಧರ್ಮ.

ರಾವಬಹಾದ್ದೂರ ಪಿ. ಜಿ. ಹಳಕಟ್ಟಿ ಬಿ. ಎ ಎಲ್ ಎಲ್. ಬಿ. ವಿಜಾಪುರ.

(ಹಿಂದಿನಿಂದ ಮುಂದೆ ಸಾಗಿದ್ದು)

ಬ್ರಹ್ಮ ವಿಷ್ಣು ಶಿವ.

ನಾವು ಹಿಂದಿನ ಸಂಚಿಕೆಯಲ್ಲಿ ಬಸವೇಶ್ವರನಕಿಂತ ಪೂರ್ವದಲ್ಲಿ ಪರಮಾತ್ಮನ ಸ್ವರೂಪದ ಬಗ್ಗೆ ಆವ ವಿಚಾರಗಳು ಶಿವಶರಣರಲ್ಲಿ ರೂಢಿವಾಗಿದ್ದವೆಂಬುದನ್ನು ಕುರಿತು ವಿವೇಚಿಸಿದೆವು. ದೇವರದಾಸಿಮಯ್ಯ, ಬಾಹೂರುಬೊಮ್ಮಯ್ಯ, ಮತ್ತು ಶಂಕರದಾಸಿಮಯ್ಯ ಇವರ ಚರಿತ್ರೆಗಳಿಂದ ಪರಮಾತ್ಮನು ಒಬ್ಬನೇ ಇದ್ದು ಅವನು ಸರ್ವವ್ಯಾಪಿಯಾಗಿಯಾಗಿರುತ್ತಾನೆಂಬ ಅಭಿಪ್ರಾಯವು ಅವರಲ್ಲಿದ್ದದ್ದನ್ನು ನಾವು ಉಲ್ಲೇಖಿಸಿದೆವು. ಆಕಾರರಹಿತನಾದ ಇಂಥ ಪರಮಾತ್ಮನನ್ನು ಹೇಗೆ ಪೂಜಿಸಬೇಕೆಂಬ ವಿಷಯವು ಬಹು ಮಹತ್ವದ್ದಾಗಿದೆ. ಇದು ಉಪಾಸನೆಯ ವಿಷಯವಿದ್ದು ಈ ಬಗ್ಗೆ ಹಿಂದೂ ಸಮಾಜದಲ್ಲಿ ಅನೇಕ ಬಗೆಯ ಭಿನ್ನಾಭಿಪ್ರಾಯಗಳು ಉಂಟಾಗಿರುವದು ಕಂಡುಬರುತ್ತದೆ. ವೈದಿಕ ಕಾಲದಲ್ಲಿ ಯಜ್ಞಯಾಗಾದಿಗಳು ಪ್ರಚಲಿತವಾಗಿದ್ದವು. ಉಪನಿಷತ್ಕಾಲದಲ್ಲಿಯೂ ಕೂಡ ಇವೇ ಪದ್ಧತಿಯು ಮುಂದುವರಿದ ಹಾಗೆ ತೋರುತ್ತದೆ. ಆದರೆ

ಮುಂದೆ ಬಾಳಿ ಬೆಳೆದ ವೈದಿಕ ಕಾಲಗಳು ಹಿಂದುಸ್ತಾನದಲ್ಲಿ ಪ್ರಾರಂಭವಾದವು. ಆಗ ಬೌದ್ಧಾಲಯಗಳೂ ಜೈತ್ಯಾಲಯಗಳೂ ಶೈವ ದೇವಾಲಯಗಳೂ ದೇಶದಲ್ಲೆಲ್ಲ ಪ್ರಾದುರ್ಭವಿಸಿದವು. ಇವುಗಳ ಕಾಲದಿಂದ ಮೂರ್ತಿ ಪೂಜೆಯು ಹಿಂದೂ ಸಮಾಜದಲ್ಲಿ ಪ್ರಸಾರವಾಗಹತ್ತಿತು. ಹೀಗೆ ನಾನಾವಿಧ ಉಪಾಸನೆಗಳು ದೇಶದಲ್ಲಿ ರೂಢವಾದವು.

ಇದೇ ಕಾಲದಲ್ಲಿ ಪೌರಾಣಿಕ ಯುಗವು ಉದಯವಾಗಲಾಗಿ ಬ್ರಹ್ಮ ವಿಷ್ಣು ರುದ್ರ ಈ ದೇವತೆಗಳಿಗೆ ಸಂಬಂಧಿಸಿದ ಅನೇಕ ತರದ ವರ್ಣನೆಗಳಿಂದ ಕೂಡಿದ ಪುರಾಣಗಳು ಪ್ರಚಾರಹೊಂದಿದವು. ಅವುಗಳಲ್ಲಿಯ ವಿಚಿತ್ರವಿಚಿತ್ರ ಕಥೆಗಳು ಬಹುಜನ ಸಮಾಜದ ಮನಸ್ಸನ್ನು ಏಕಹಿಡಿದವು. ರಾಮ, ಕೃಷ್ಣ ಮೊದಲಾದ ವಿಷ್ಣುವಿನ ದಶಾವತಾರದ ಕಥೆಗಳೂ ಈಶ್ವರನ ಪಂಚವಿಂಶತಿ ಲೀಲೆಗಳೂ ದೇಶದಲ್ಲಿ ರೂಢವಾಗಹತ್ತಿದವು. ಷಣ್ಮುಖ, ವೀರಭದ್ರ, ಗಣಪತಿ, ಪಾರ್ವತಿ, ಸೀತಾ, ರಾಮ, ಕೃಷ್ಣ, ವಿಷ್ಣು, ಶಿವ ಈ ಮೊದಲಾದ ದೇವತೆಗಳ ದೇವಾಲಯಗಳು ದೇಶದಲ್ಲಿ ಕಟ್ಟಲ್ಪಡಹತ್ತಿದವು. ಈ ದೇವತೆಗಳಲ್ಲಿ ಆವುದಾನೊಂದರ ಉಪಾಸನೆ ಮಾಡದೆ ಇದ್ದ ಒಂದು ಧರ್ಮವಾದರೂ ಈಗ ಹಿಂದೂ ಸಮಾಜದಲ್ಲಿ ದೊರೆಯುವದು ದುರ್ಲಭವಾಗಿರುತ್ತದೆ.

ಈ ಪ್ರಕಾರ ಜನರು ತಮ್ಮ ತಮ್ಮ ದೇವತೆಗಳನ್ನು ಕಲ್ಪಿಸಿಕೊಂಡು ತಮ್ಮ ಭಕ್ತಿಯ ಪ್ರಕಾರ ಉಪಾಸನೆ ಮಾಡಲು ಅವರು ಸ್ವತಂತ್ರರಿರುವರು. ಆದರೆ ಆ ದೇವತೆಗಳ ಹೆಸರಿನಿಂದ ಅವರು ತಮ್ಮ ತಮ್ಮಲ್ಲಿ ಹೋರಾಟವನ್ನೆಸಗುವ ಪರಿಸ್ಥಿತಿಯುಂಟಾಗುವದು ಮಾತ್ರ ಸಮಾಜಕ್ಕೆ ಹಾನಿಕರವಾದದ್ದು. ಬ್ರಹ್ಮ ವಿಷ್ಣು ಶಿವ ಇವರ ಹೆಸರಿನಿಂದ ಕೆಲವೊಂದು ಕಾಲದಲ್ಲಿ ಸಮಾಜದಲ್ಲಿ ವೈಮನಸ್ಸುಗಳೂ, ಹೋರಾಟಗಳೂ ನಡೆದದ್ದು ಇತಿಹಾಸದಿಂದ ತಿಳಿದುಬರುತ್ತದೆ. ಇತ್ತ ವಿಷ್ಣು ಬಹು ಜನ ಸಮಾಜವಂತೂ ಮಾರಿ ಮಸಡಿ ಈ ಮೊದಲಾದ ರುದ್ರ ದೇವತೆಗಳ ಮೂರ್ತಿಗಳನ್ನು ಮಾಡಿಕೊಂಡು ಅವುಗಳ ಹೆಸರಿನಿಂದ ಹಿಂಸಾ ಕರ್ಮಗಳನ್ನು ಸಹ ನಡಿಸುತ್ತಿದ್ದುದು ಕಂಡುಬರುತ್ತಿದೆ. ಸಮಾಜಕ್ಕೆ ಈ ಸ್ಥಿತಿಯುಂಟಾಗುವದು ಅದರ ಧಾರ್ಮಿಕ ಅವನತಿಯನ್ನು ತೋರಿಸುತ್ತದೆ.

ಬಸವಾದಿ ಶಿವಶರಣರು ದೇವರ ಬಗ್ಗೆ ಇರುವ ಇಂಥ ವಿಚಾರಗಳನ್ನು ದೂರಮಾಡಿ ಒಬ್ಬನೇ ದೇವರಿದ್ದಾನೆ ಎಂಬ ತತ್ವವನ್ನು ಸಾರಿ

ದರು. ಅವರು ಅನೇಕ ದೇವರುಗಳ ಅಸ್ತಿತ್ವವನ್ನು ಅಲ್ಲಗಳೆದರು. ಶಿವ ಶರಣರು ಪಂಚಮುಖನಾದ ತ್ರಿನೇತ್ರವುಳ್ಳ ಶಿವನನ್ನು ಆರಾಧಿಸುವವರೆಂದು ಬಹು ಜನರು ಈಗಲೂ ತಿಳಿದಿದ್ದಾರೆ. ಆದರೆ ಈ ಶಿವಶರಣರ ಅಭಿಪ್ರಾಯಗಳು ತೀರ ಭಿನ್ನವಾದವುಗಳೆಂಬದು ಕೆಳಗೆ ಕಾಣಿಸಿದ ವಚನಗಳಿಂದ ಕಂಡುಬರುವದು.

"ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡದೇಡ. ದೇವನೊಬ್ಬನೇ ಕಾಣಿರೋ" ಎಂದು ಬಸವೇಶ್ವರನು ಹೇಳಿರುವನು. ಸ್ವತಂತ್ರ ಸಿದ್ಧಲಿಂಗೇಶ್ವರನು "ಇಬ್ಬರು ಮೂವರು ದೇವರೆಂದು ತಬ್ಬಿಬ್ಬಿಕೊಂಡು ನುಡಿಯಬೇಡ. ಒಬ್ಬನೇ ದೇವ ಕಾಣಿರಣ್ಣಾ" ಎಂದು ಹೇಳಿದ್ದಾನೆ. ಮೋಳಿಗಿ ಮಾರಯ್ಯನು "ರುದ್ರನೇ ದೇವರೆಂದು ಆರಾಧಿಸಿ ಶಿಲೆಯೊಳಗೆ ಹೊರಟಿಗೊಂಡು ಕೆಟ್ಟರಲ್ಲಾ ಭಕ್ತ ಜನಂಗಳು" ಎಂದು ಹೇಳಿದ್ದಾನೆ. "ಗಂಗಾಧರ ಗೌರೀಶ್ವರ ದೇವರಲ್ಲ. ಶಂಕರ ಶಶಿಧರ ದೇವರಲ್ಲ. ಪಂಚಮುಖ ದಶಭುಜವನುಳ್ಳ ನಂದಿವಾಹನರು ದೇವರಲ್ಲ. ತ್ರಿಶೂಲ ಖಟ್ವಾಂಗಧರರು ದೇವರಲ್ಲ" ಎಂದು ಬೇರೊಬ್ಬ ವಚನಕಾರನು ಹೇಳಿದ್ದಾನೆ.

"ವೀರಭದ್ರ ಬಸವಣ್ಣ ಮಲ್ಲಿಕಾರ್ಜುನನೆಂಬ ದೈವಂಗಳಿಗೆ ನಮ್ಮ ಕುಲದೈವಂಗಳೆಂದು ಹೇಳುವವರಿಗೆ ಗುರುವಿಲ್ಲ" ಎಂದು ಚನ್ನಬಸವೇಶ್ವರನು ಹೇಳಿದ್ದಾನೆ "ಜೆನಕನು (ಗಣಪತಿ) ಹರನ ಮಗನೆಂಬ ಪಾತಕರು ನೀವು ಕೇಳಿರೋ. ಪಾರ್ವತಿ ಹರನ ಸತಿ ಎಂಬ ಶಿವದ್ರೋಹಿಗಳು ನೀವು ಕೇಳಿರೋ. ಸ್ವಾಮಿ ಕಾರ್ತಿಕ ಹರನ ಮಗನೆಂಬ ಲಿಂಗ ದ್ರೋಹಿಗಳು ನೀವು ಕೇಳಿರೋ" ಎಂದು ಇನ್ನೊಬ್ಬ ವಚನಕಾರನು ಬಹು ಸ್ಪಷ್ಟ ರೀತಿಯಿಂದ ಈ ವಿಷಯವನ್ನು ಕುರಿತು ಹೇಳಿದ್ದಾನೆ.

ಈ ಉಕ್ತಿಗಳ ಮೇಲಿಂದ ಬಸವೇಶ್ವರನ ಕಾಲದಲ್ಲಿ ದೇವರ ಬಗ್ಗೆ ಯಾವ ವಿಚಾರಗಳು ಇದ್ದವೆಂಬುದು ಸ್ಪಷ್ಟವಾಗುತ್ತದೆ. ಅವರು ಬ್ರಹ್ಮ ವಿಷ್ಣು ರುದ್ರ ಈ ತ್ರಿಮೂರ್ತಿಗಳಲ್ಲಿ ಯಾವ ದೇವತೆಯನ್ನೂ ಸ್ವೀಕರಿಸಿರುವದಿಲ್ಲ. ಆದರೆ ಅವರ ಈ ವಿಚಾರಗಳು ಅವನಕಿಂತ ಮೊದಲಿನ ಕಾಲದಲ್ಲಿ ರೂಢವಾಗಿದ್ದವೋ ಹೇಗೆ, ಅವುಗಳಲ್ಲಿ ಮುಂದೆ ಆವ

ಬದಲಾವಣೆಗಳಾದವು ಎಂಬುವನ್ನು ವಿವೇಚಿಸುವುದು ನಮ್ಮ ಪ್ರಸ್ತುತ ಲೇಖಮಾಲೆಯ ಉದ್ದೇಶವಾಗಿರುತ್ತದೆ.

ಬಸವೇಶ್ವರನಕಿಂತ ಹಿಂದಿನ ಕಾಲವನ್ನು ಐತಿಹಾಸಿಕ ದೃಷ್ಟಿಯಿಂದ ನಿರೀಕ್ಷಿಸಿದಲ್ಲಿ ಬಸವೇಶ್ವರನ ಕಾಲಕ್ಕೆ ದೇವರ ಬಗ್ಗೆ ಇದ್ದ ಉಚ್ಚ ವಿಚಾರಗಳು ಅವನಕಿಂತ ಹಿಂದಿನ ಕಾಲದಲ್ಲಿ ಶಿವಶರಣರಲ್ಲಿ ರೂಢವಾಗಿದ್ದಿಲ್ಲೆಂದು ತೋರುತ್ತದೆ. ಈ ಕಾಲದಲ್ಲಿ ನಾವು ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ ಪರಮಾತ್ಮನು ವಿಶ್ವವ್ಯಾಪಿಯಾದವನೆಂಬ ಅಭಿಪ್ರಾಯಗಳ ದ್ದದ್ದು ತೋರಿಬಂದರೂ ಕೂಡ ಆಗ ಶೈವ ವೈಷ್ಣವ ಭೇದಗಳು ದೇಶದಲ್ಲಿ ಬಹು ಪ್ರಬಲವಾಗಿದ್ದವೆಂದು ಕಂಡುಬರುತ್ತದೆ. ಈ ಕಾಲದ ವೀರ ಶೈವ ಶರಣರು ಶೈವ ಪಕ್ಷಾಭಿಮಾನಿಗಳಾಗಿ ಹೋರಾಡಿದರೆಂದು ತಿಳಿಯುತ್ತದೆ. ದಕ್ಷಿಣ ದೇಶದಲ್ಲಿ ಚೋಳರಾಜರು ಶಿವೋಪಾಸನೆಗೆ ಮೆಚ್ಚಿದವರಾಗಿದ್ದರು. ಆದರೆ ಉತ್ತರ ದೇಶದಲ್ಲಿದ್ದ ಅನೇಕ ಚಾಲುಕ್ಯರಾಜರು ವಿಷ್ಣುವಿನ ಉಪಾಸಕರಾಗಿದ್ದರು. ಈ ಉಭಯ ರಾಜಮನೆತನಗಳಲ್ಲಿ ಶಿವ ವಿಷ್ಣುಗಳ ಉಪಾಸನೆಯ ಬಗ್ಗೆ ಕಲಹಗಳೆದ್ದು ವಿಷ್ಣುವಿನ ದೇವಾಲಯಗಳನ್ನ ಈಶ್ವರನ ದೇವಾಲಯಗಳನ್ನಾಗಿ ಮತ್ತ ಈಶ್ವರನ ದೇವಾಲಯಗಳನ್ನು ವಿಷ್ಣುವಿನ ದೇವಾಲಯಗಳನ್ನಾಗಿ ಮಾಡಿದ್ದು ಕಂಡುಬರುತ್ತದೆ. ಈ ಸ್ಥಿತಿಯು ಬಸವೇಶ್ವರನ ಕಾಲದ ವರೆಗೂ ಕರ್ನಾಟಕದಲ್ಲಿ ನಡೆಯಿತು.

ಆದರೆ ಬಸವೇಶ್ವರನ ಕಾಲದಲ್ಲಿ ಅಂದರೆ ಅವನು ಸ್ಥಾಪಿಸಿದ ಶಿವಾನುಭವ ಮಂಟಪದಲ್ಲಿ ಪರಮಾತ್ಮನು ಒಬ್ಬನೇ ಇದ್ದಾನೆಂತಲೂ ಯಾವ ತರದ ಮೂರ್ತಿಗಳನ್ನು ವೀರಶೈವರು ಪೂಜಿಸಬಾಂದೆಂತಲೂ ನಿರ್ಧಾರವಾಯಿತು. ಶಿವ, ವಿಷ್ಣು, ಗಣಪತಿ ಈ ಮೊದಲಾದ ಯಾವ ದೇವತೆಗಳನ್ನು ಸಹ ಪೂಜಿಸದೆ ಇಷ್ಟಲಿಂಗ ಒಂದನ್ನೇ ಅವರು ಪೂಜಿಸಬೇಕೆಂಬ ವಿಚಾರಗಳು ಪ್ರಸಾರ ಮಾಡಲ್ಪಟ್ಟವು. ಇಷ್ಟೇಅಲ್ಲ, ಸ್ಥಾವರ ಲಿಂಗವುಳ್ಳ ಶಿವಾಲಯಗಳನ್ನು ಸಹ ಅವರು ಮನ್ನಿಸಕೂಡದೆಂದು ಸಾರಲ್ಪಟ್ಟಿತು. ಮತ್ತು ಈ ಅಭಿಪ್ರಾಯವನ್ನು ಒಳಕೊಳ್ಳುವ ಅಸಂಖ್ಯ ವಚನಗಳು ರಚಿಸಲ್ಪಟ್ಟವು. ಈ ಅಭಿಪ್ರಾಯಗಳು ಬಸವೇಶ್ವರನ ತರುವಾಯ ಅವನಿಗೆ ಸಮೀಪವಿರುವ ಕಾಲದಲ್ಲಿ ಅನೇಕ ವಚನಕಾರರಿಂದ ಪ್ರತಿಪಾದಿಸಲ್ಪಟ್ಟಿರುತ್ತವೆ.

ಆದರೆ ಷಟ್‌ಸ್ಥಲಶಾಸ್ತ್ರದ ತತ್ವಗಳ ಬಗ್ಗೆ ವಿವೇಚನೆಗಳು ಬಸವೇಶ್ವರನ ತರುವಾಯ ಅನೇಕ ವರ್ಷಗಳ ವರೆಗೆ ಬಹು ಪ್ರಬಲವಾಗಿ ನಡೆದಂತೆ ನಮಗೆ ತೋರುತ್ತದೆ. ಈ ಕಾಲವು ಸುಮಾರು ೫೦ ರಿಂದ ೧೦೦, ೧೫೦ ವರ್ಷಗಳ ವರೆಗೂ ನಡೆದಿರಲಿಕ್ಕೆಬೇಕು. ಆಗ ಈ ವಿಷಯದ ಬಗ್ಗೆ ಅಸಂಖ್ಯ ಗ್ರಂಥಗಳೂ ವಚನಗಳೂ ರಚಿಸಲ್ಪಟ್ಟವು. ಅವುಗಳಲ್ಲಿ ಮಾತ್ರ ವಿಷ್ಣು, ಬ್ರಹ್ಮ, ರುದ್ರ ಇವರ ವಿಚಾರಗಳ ಬಗ್ಗೆ ಕೆಲವು ಮಾರ್ಪಾಡುಗಳು ಆದದ್ದು ನಮ್ಮ ದೃಷ್ಟಿಗೆ ಬೀಳುತ್ತದೆ. ಸೃಷ್ಟಿಯ ರಚನೆಯ ಕಾರ್ಯದಲ್ಲಿ ಬ್ರಹ್ಮ ವಿಷ್ಣು ರುದ್ರರಿಗೆ ಕೆಲವೊಂದು ಸ್ಥಾನವು ಅವರಿಂದ ಈ ಕಾಲದಲ್ಲಿ ಕೊಡಲ್ಪಟ್ಟಿತು. ಉದಾಃ — ಸಾದಾಖ್ಯಗಳಲ್ಲಿ ಈ ತ್ರಿಮೂರ್ತಿಗಳಿಗೆ ಸ್ಥಾನವು ಕಲ್ಪಿಸಿಕೊಡಲ್ಪಟ್ಟಿರುತ್ತದೆ. ಇಷ್ಟೇ ಅಲ್ಲ, ಅಲ್ಲಿ ಸರಸ್ವತಿ ಲಕ್ಷ್ಮೀ ಮತ್ತು ಪಾರ್ವತೀ ಇವರು ಒಂದು ವಿಧದ ಶಕ್ತಿಗಳು ಎಂದು ಭಾವಿಸಿ ಅವರು ಈ ಸಾದಾಖ್ಯಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತಾರೆ. ಈ ಪ್ರಕಾರ ಪರಮಾತ್ಮನು ಒಬ್ಬನೇ ಇದ್ದಾನೆಂಬ ಮೊದಲಿನ ವಿಚಾರಗಳಲ್ಲಿ ಒಂದು ಬಗೆಯ ಮಾರ್ಪಾಡುಗಳು ಈ ಕಾಲಕ್ಕೆ ಉಂಟಾಗಿರುತ್ತವೆ. ಇವಾದರೂ ಆಯಾ ಸಮಾಜಗಳಲ್ಲಿ ಸಮಾಧಾನವನ್ನುಂಟುಮಾಡುವಂಥ ಶ್ರೇಷ್ಠ ತರದ ವಿಚಾರಗಳಿಂತೆಲೇ ನಾವು ಭಾವಿಸಬೇಕು.

ಆದರೆ ಬಸವೇಶ್ವರನ ತರುವಾಯ ಸುಮಾರು ೧೦೦—೧೫೦ ವರ್ಷಗಳು ಸಂದಿ ಹೋದಬಳಿಕ ಹೊಸ ವಿಚಾರಗಳು ತಲೆದೋರಹತ್ತಿದವು. ಬಸವೇಶ್ವರನ ಕಾಲಕ್ಕೆ ಉಂಟಾಗಿದ್ದ ವಚನಗಳ ಅಭ್ಯಾಸವು ಮುಂದೆ ಕ್ರಮೇಣ ಕಡಿಮೆಯಾಗಹತ್ತಿತು. ಆಗ ಅವನ ಮತ್ತು ಅವನ ಜೋಡಿಗರಾದ ವಚನಕಾರರ ಉದಾತ್ತ ವಿಚಾರಗಳು ಮರೆತು ಹೋಗಹತ್ತಿದವು. ಜಾತಿ ಭೇದವು ಹೆಚ್ಚು ಹೆಚ್ಚಿಗೆ ರೂಢವಾಗಹತ್ತಿತು. ಅನೇಕ ದೇವತೆಗಳ ಪೂಜೆಯು ಸಮಾಜದಲ್ಲಿ ರೂಢವಾಯಿತು. ಪುರಾತನ ಶಿವಶರಣರ ಚರಿತ್ರೆಗಳಲ್ಲಿ ಬದಲಾವಣೆಗಳು ಮಾಡಲ್ಪಡಹತ್ತಿದವು. ಮತ್ತು ಅವರ ಬಗ್ಗೆ ಅನೇಕ ತರದ ಕಲ್ಪಿತ ಪುರಾಣಗಳು ಬರೆಯಲ್ಪಡಹತ್ತಿದವು. ಆಗ ಶಿವ, ವಿಷ್ಣು ಎಂಬ ಭೇದಗಳು ಪುನಃ ಉದ್ಭವಿಸಿದವು. ಶಿವನ ಲೀಲೆಗಳನ್ನು ವರ್ಣಿಸುವ ಗ್ರಂಥಗಳು ಹೆಚ್ಚಾಗಹತ್ತಿದವು. ವೀರಶೈವರಲ್ಲಿ ಪ್ರಸಿದ್ಧಿಗೆ ಬಂದ ಚನ್ನ ಬಸವ ಪುರಾಣವು ಬರೇ ಶಿವನ ಲೀಲೆಗಳನ್ನು ವರ್ಣಿಸುವ ಗ್ರಂಥವಿದೆ.

ಇಂಥ ವಿಚಾರಗಳು ವೀರಶೈವ ಮತಕ್ಕೆ ಸಂಬಂಧಪಟ್ಟವಾದವು
ಶಿವಶರಣರ ವಚನಗಳ ಅಭ್ಯಾಸವು ಮತ್ತು ಅವುಗಳಂತೆ ಆಚರ
ಸಮಾಜದಲ್ಲಿ ಕಡಿಮೆಯಾದದ್ದೇ ಈ ಸ್ಥಿತಿಗೆ ಮುಖ್ಯ ಕಾರಣ
ದೆ.

ಈ ಪ್ರಕಾರ ನಾವು ಈ ವಿಷಯದಲ್ಲಿ ನಾಲ್ಕು ವಿಭಾಗಗಳನ್ನು ಮಾಡು
. (೧) ಬಸವೇಶ್ವರನ ಪೂರ್ವದ ಕಾಲ (೨) ಬಸವೇಶ್ವರನಕಾಲ
ಬಸವೇಶ್ವರನ ತರುವಾಯ ಆದರೆ ಅವನಿಗೆ ಸಮೀಪವಿರುವ ಕಾಲ
ವೀರಶೈವಪೌರಾಡಕ ಕಾಲ. ಈ ಪ್ರತಿಯೊಂದು ಕಾಲದ ಬಗ್ಗೆ
ಮುಂದಿನ ಸಂಚಿಕೆಗಳಲ್ಲಿ ಪ್ರಸ್ತಾಪಿಸುತ್ತ ಹೋಗುವೆವು.

ಭಂಡಾರಿ ಶಾಂತಯ್ಯನ ವಚನಗಳು.

ಪ್ರಸ್ತಾವನೆ.

ಭಂಡಾರಿ ಶಾಂತಯ್ಯನ ವಚನಗಳನ್ನು ನಾವಿಲ್ಲಿ ಪ್ರಸಿದ್ಧಿಸಿದ್ದೇವೆ. ಇವನ ವಚನಗಳು ನಮಗೆ ದೊರೆತವು ೩೨ ಮಾತ್ರ. ಆದರೆ ಇವುಗಳಲ್ಲಿ ಒಂದು ವಿಶಿಷ್ಟತೆ ಇದೆ. ಅವೆಲ್ಲವೂ ಬಹುತರವಾಗಿ ಒಡಪಿನ ವಚನಗಳಿವೆ. ಅವುಗಳಿಗೆಲ್ಲ ಟೀಕೆಗಳಿವೆ. ಈ ಟೀಕೆಗಳಲ್ಲಿ ಕೆಲವು ಲಿಂಗ ಲೀಲಾವಿಲಾಸ ಕರ್ತನಾದ ವಿಜಯನಗರದ ಕಲ್ಲುಮಠದ ಪ್ರಭುದೇವಾರ್ಯನು ಬರೆದವುಗಳು. ಉಳಿದವುಗಳು ಸಟೀಕ ಬೆಡಗಿನ ವಚನಗಳಲ್ಲಿಯವು ಇವೆ. ವಿವೇಚಿಸಿದ ವಿಷಯಗಳು ಹೆಚ್ಚಿನ ತರಗತಿಯವಾಗಿವೆ. ಆಧ್ಯಾತ್ಮಿಕ ಉಚ್ಚ ವಿಚಾರಗಳು ಅವುಗಳಲ್ಲಡಕವಾಗಿವೆ. ಪರಮಾತ್ಮನ ಸ್ವರೂಪ, ಪರಮಾತ್ಮನಿಗೂ ಜೀವನಿಗೂ ಇರುವ ಸಂಬಂಧ, ಜ್ಞಾನ ಕ್ರಿಯೆಗಳ ಪರಸ್ಪರ ಸಂಬಂಧ, ಆಚಾರದ ಸ್ವರೂಪ, ಭಕ್ತಿಯ ಮಹತ್ವ, ಮನಸ್ಸು, ದೇಹ, ಆತ್ಮ ಇವುಗಳಿಂದರೇನು, ಇಂಥ ವಿಷಯಗಳು ಈ ವಚನಗಳಲ್ಲಿ ನಿರೂಪಿಸಲ್ಪಟ್ಟಿವೆ.

ಭಂಡಾರಿ ಶಾಂತಯ್ಯನ ಚರಿತ್ರೆಯು ನಮಗೆ ಉಪಲಬ್ಧವಿಲ್ಲ. ಅವನು ಬಿಜ್ಜಳನ ಕಾಲದಲ್ಲಿ ಭಂಡಾರದ ಮೇಲಿನ ಅಧಿಪತಿಯಾಗಿದ್ದನೆಂದು ಅವನ ಹೆಸರಿನಿಂದ ಊಹಿಸಬಹುದಾಗಿದೆ. ಅವನ ವಚನಗಳಲ್ಲಿ ತೋರುವ ನಿರೂಪಣಾ ಪದ್ಧತಿ ಮತ್ತು ಭಾಷೆ ಇವುಗಳ ಮೇಲಿಂದ ಅವನು ಬಸವನಿಗೆ ಸಮಕಾಲೀನನಾಗಿರಬೇಕೆಂದು ತೋರುತ್ತಿದೆ.

ಈ ವಚನಗಳಲ್ಲಿ ಬಹುತರ ಎಲ್ಲವೂ ತಾತ್ವಿಕ ವಿಚಾರವುಳ್ಳವುಗಳೇ ಇರುವದರಿಂದ ಇವುಗಳಲ್ಲಿ ನಾವು ಷಟ್‌ಸ್ಥಲಗಳಿಗನುಸರಿಸಿ ಭಾಗಗಳನ್ನು ಮಾಡಿರುವದಿಲ್ಲ. ಅಕ್ಷರಾನುಕ್ರಮವಾಗಿ ಎಲ್ಲ ವಚನಗಳನ್ನು ಜೋಡಿಸಿದ್ದೇವೆ.

ಈ ವಚನಗಳು ಒತ್ತಟ್ಟಿಗೆ ನಮಗೆ ದೊರೆತವುಗಳಲ್ಲ. ಸಂಗ್ರಹ ಗ್ರಂಥಗಳಿಂದ ಆಯ್ದುಕೊಂಡು ನಾವು ಈ ಗ್ರಂಥದಲ್ಲಿ ಅಚ್ಚುಹಾಕಿದ್ದೇವೆ.

ವಿಜಾಪುರ.
೧೧-೨-೪೧

ಫ. ಗು. ಹಳಕಟ್ಟಿ
ಸಂಪಾದಕ.

ಟೀಕೆಃ— ದೇಹಾತ್ಮರಗಳು ಮಧ್ಯದಲ್ಲಿ ಎಂಬುದೀಗ ಪೃಥ್ವಿ ಆಕಾಶದ ಮಧ್ಯದಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹಾತ್ಮರ ಮಧ್ಯದಲ್ಲಿ ಚಿದಾಕಾಶ ಇರುತ್ತಿಹುದೆಂಬುದೀಗ ಖೇಚರ ಮಂಡಲ ಎಂಬ ಶಬ್ದಕ್ಕರ್ಥ. ಆ ಚಿದಾಕಾಶ ಮಂಡಲದಲ್ಲಿ ಸಕಲ ಕರಣಂಗಳಿಗೆ ಕರ್ತನಾದ ಮಹಾ ಘನಲಿಂಗವೆಂಬರಸು ಒಪ್ಪುತ್ತಿಹನೆಂಬುದೀಗ ಆ ಮಂಡಲದರಸನು ವಿಹಂಗ ರಾಜನೆಂಬ ಶಬ್ದಕ್ಕರ್ಥ. ಸಕಲ ಪ್ರಪಂಚು ನಿವೃತ್ತಿಯು ಸದ್ವಿವೇಕ ಸ್ವರೂಪವನೆಯ್ದಿದ ಮನಸ್ಸೇ ಪ್ರಧಾನವಾಗಿಹುದೆಂಬುದೀಗ ಮುರೀಚಿಕ ಪ್ರಧಾನನೆಂಬ ಶಬ್ದಕ್ಕರ್ಥ. ಈ ದೇಹವ ತಾಳಿರ್ದ ಜೀವನು ಏಕಾಗ್ರ ಚಿತ್ಸ್ವರೂಪಿನಿಂದ ಎಚ್ಚತ್ತಿಹ ಕಾರಣ ಮಹಾತಳ ತಳವಾರನೆಂಬ ಶಬ್ದಕ್ಕರ್ಥ. ಸಕಲ ತತ್ವಂಗಳೆಲ್ಲ ಲಿಂಗತತ್ವಂಗಳಾಗಿ ಸುಖಮಯದಿಂದೊಪ್ಪಿತ್ತಿರಲು ಎಂಬುದೀಗ ಇಂತೀ ಮಂಡಲ ಸುರಕ್ಷೆಯಲ್ಲಿರುತ್ತಿರಲಾಗಿ ಎಂಬ ಶಬ್ದಕ್ಕರ್ಥ. ಅಹಂ ಎಂಬ ಅದ್ವೈತಜ್ಞಾನದಿಂ ಬಂದು ಆ ಚಿದಾಕಾಶ ಮಂಡಲದಲ್ಲಿರ್ಪ ಪರವಸ್ತುವನವಗ್ರಹಿಸಲು ಆ ಚಿದಾಕಾಶವು ಕಾಯ ಪುರವೆಂಬ ಪಟ್ಟಣವು ಸಾಧ್ಯವಲ್ಲದೆ ಹೋಯಿತ್ತೆಂಬುದೀಗ ಗೋರಕ್ಷನೆಂಬರಸು ಮುತ್ತಿದ ಮಂಡಲ ಪಟ್ಟಣ ಕೋಳು ಹೋಗದು ಎಂಬ ಶಬ್ದಕ್ಕರ್ಥ. ಆ ಅದ್ವೈತ ಜ್ಞಾನಿಗಳು ಸಾಧಿಸುತ್ತಿಹರು ಅವರಿಂಗೆ ಸಾಧ್ಯವಾಗಿಹುದು ಚಿದಾಕಾಶವೆಂಬುದೀಗ ಮುತ್ತಿದರಸು ಬಿಟ್ಟು ಹೋದನೆಂಬ ಶಬ್ದಕ್ಕರ್ಥ. ಅಂತಪ್ಪ ಅದ್ವೈತ ಜ್ಞಾನಿಗಳಿಗೆ ಸುಜ್ಞಾನ ಬೋಧೆಯ ಬೋಧಿಸಲಂಜಿ ಆ ಶರಣ ವಿಲಕ್ಷಣನಾಗಿ ಶಿವಾದ್ವೈತ ಭಕ್ತಿಯಿಂ ವಾಗದ್ವೈತವ ನಿವೃತ್ತಿ ಮಾಡಿದನೆಂಬುದೀಗ ಇದ ಸಂತೈಸಲಂಜಿ ಅಲೇಖನಾದ ಶೂನ್ಯಕಲ್ಲಿನೊಳ ಹೊಕ್ಕು ಎಲ್ಲರ ಗೆದ್ದನೆಂಬ ಶಬ್ದಕ್ಕರ್ಥ.

೨೩. ಬ್ರಹ್ಮಮೂರ್ತಿಗೂ ಶಿಲೆ ಒಂದೇ. ವಿಷ್ಣುಮೂರ್ತಿಗೂ ಶಿಲೆ ಒಂದೇ. ರುದ್ರಮೂರ್ತಿಗೂ ಶಿಲೆ ಒಂದೇ, ರೂಪಿನನತಾರ ಭಿನ್ನವಾಯಿತ್ತು. ಸ್ಥೂಲ ಸೂಕ್ಷ್ಮ ಕಾರಣದಂತೆ, ಕುಂಭಜಲ ಬಿಂಬದಂತೆ ಇನ್ನಾರನಹುದೆಂಬೆ ಇನ್ನಾರನಲ್ಲ ಎಂಬೆ? ಬ್ರಹ್ಮನ ಕಾಲು, ವಿಷ್ಣುವಿನ ಕೈ, ರುದ್ರನ ಕಣ್ಣು, ಈಶ್ವರನ ತಲೆ, ಸದಾಶಿವನ ಪ್ರಾಣವಾದಲ್ಲಿ ಇವು ಸಮಯ. ಈ ಪಂಚಕೋಶಕ್ಕಾಧಾರ ಪರಮಜ್ಞಾನ. ಅದ ಭೇದಿಸಲರಿಯದೆ ವಾದವ ಮಾಡಿದರಿಲ್ಲರು ನಾದಬಿಂದುಕಳಾತೀತನನರಿ ಅಲೇಖನಾಧ ಶೂನ್ಯ ಕಲ್ಲಿನೊಳಗಾದಿವನ.

೨೪. ಬಾಯಲ್ಲಿ ಕಾಲು ಹುಟ್ಟ ಕೈಯ್ಯಲ್ಲಿ ಕಣ್ಣು ಹುಟ್ಟ. ನಾಸಿಕ ಕವಿಯಾಯಿತ್ತು. ಇಷ್ಟಹೇಳಲಾರದೆ ಅಲೇಖನಾದ ಶೂನ್ಯಕಲ್ಲಿನೊಳಗಾದ.

ಟೀಕು:— ಸುಜ್ಞಾನೋದಯವಾದ ಶರಣನು ಶಿವಾಪೇಕ್ಷೆಯ ಮುಂದುಗೊಂಡಲ್ಲಿ ಶ್ರೀಗುರು ಕರುಣದಿಂದಂಗದಲ್ಲಿ ಮಹಾಘನಲಿಂಗ ಸಂಬಂಧವಾಗಲಾಗಿ ಲಿಂಗದಲ್ಲಿ ಅಭಿನ್ನಕ್ರಿಯಾಚಾರವಳವಟ್ಟಿತ್ತೆಂಬುದೀಗ ಬಾಯಲ್ಲಿ ಕಾಲುಹುಟ್ಟ ಎಂಬ ಶಬ್ದಕ್ಕರ್ಥ. ಆ ಲಿಂಗದಲ್ಲಿ ಸತ್ಕ್ರಿಯಾಚಾರವಳವಟ್ಟ ಶರಣನ ಸದ್ಭಾನ ಹಸ್ತದಲ್ಲಿ ಶಿವಜ್ಞಾನ ಸ್ವರೂಪವಾದ ಭಾವಲಿಂಗ ಸಂಬಂಧವಾಯಿತ್ತೆಂಬುದೀಗ ಕೈಯ್ಯಲ್ಲಿ ಕಣ್ಣು ಹುಟ್ಟ ಎಂಬ ಶಬ್ದಕ್ಕರ್ಥ. ಆ ಭಾವಲಿಂಗಸಂಬಂಧವಾದ ಶರಣನ ಸ್ವಾನುಭಾವ ಸದ್ಭಾವನೆ ಪ್ರಣಮ ಮಂತ್ರವನೊಳಕೊಂಡು ಅಂತರಂಗದಲ್ಲಿ ಪ್ರಾಣಲಿಂಗ ಸಂಬಂಧವಾಯಿತ್ತೆಂಬುದೀಗ ನಾಸಿಕ ಕವಿಯಾಯಿತ್ತು ಇಷ್ಟಹೇಳಲಾರದೆ ಅಲೇಖನಾದ ಶೂನ್ಯ ಕಲ್ಲಿನೊಳಗಾದನೆಂಬ ಶಬ್ದಕ್ಕರ್ಥ.

೨೫. ಬಾಯಿಲ್ಲದ ಪಶು ಬಿತ್ತಿದ ಹೊಲನ ಹೊಕ್ಕು ಹುಟ್ಟಿದ ಸಸಿಯ ಮೇದು ಒಡೆಯನಿಲ್ಲದ ಪರವ ತೊಂಡಕೂಡಿದ ತೊಂಡಿನ ಹಟ್ಟಿಯ ಬಾಗಿಲೊಂದು ಬೀಗ ಒಂಬತ್ತು ಮೂರೆಸಳಿನ ಬೀಗ ಮೂರು ಆರೆಸಳಿನ ಬೀಗ ಮೂರು ಇಪ್ಪತ್ತೈದೆಸಳಿನ ಬೀಗ ಮೂರು ತೆಗೆವ ಕೈಗೆ ನಾಭಿ ಇಲ್ಲ ಸಿಕ್ಕಿತ್ತು ಹಸು ಹಟ್ಟಿಯಲ್ಲಿ ಇನ್ನಾರಿಗೆ ಹೇಳುವೆ ಅಲೇಖನಾದ ಶೂನ್ಯಕಲ್ಲಿನೊಳಗಾದವನ ಬಲ್ಲವರಾರು?

ಟೀಕೆ:- ಭಿನ್ನಾಪೇಕ್ಷೆ ಇಲ್ಲದ ಶಿವಾಪೇಕ್ಷೆಯ ಮುಂದುಗೊಂಡಿರ್ದ ಚಿತ್ತೆಂಬ ಕಾಮಧೇನುವೀಗ ಬಾಯಿಲ್ಲದ ಪಶ ವೆಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಭಿನ್ನಕ್ರಿಯಾಚಾರವಿಲ್ಲದ ಭಕ್ತಿಕ್ಷೇತ್ರದಲ್ಲಿ ನಿಂದು ಎಂಬುದೀಗ ಬಿತ್ತಿದ ಹೊಲನ ಹೊಕ್ಕು ಎಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಜನನಾಂಕುರ ನಷ್ಟವಾದ ಸದ್ವಿವೇಕವೆಂಬ ಸಸಿಯ ಸವಿವುತ್ತಿ ಹನೆಂಬುದೀಗ ಹುಟ್ಟಿದ ಸಸಿಯ ಮೇದು ಎಂಬ ಶಬ್ದಕ್ಕರ್ಥ. ಅಂತು ಸ್ವೀಕರಿಸಿದ ಶರಣನು ಅಹಂ ಎಂಬ ಅದ್ವೈತಜ್ಞಾನವಿಲ್ಲದ ನಿಷ್ಕಲ ಪಂಚ್ರಹ್ಮವ ತನ್ನಾಚಾರ ಸ್ವರೂಪವಾದ ತನುಮನ ಪ್ರಾಣಂಗಳಲ್ಲಿ ಅವಗ್ರಹಿಸಿದನೆಂಬುದೀಗ ಒಡೆಯನಿಲ್ಲದ ಪರವ ತೊಂಡಕೂಡಿದನೆಂಬ ಶಬ್ದಕ್ಕರ್ಥ. ಅಂತಪ್ಪ ಆಚಾರಾಂಗವನೊಳಕೊಂಡಿರ್ಪ ಸತ್ಪಥವಾರ್ಗ

ಒಂದೇ ಎಂಬುದೀಗ ತೊಂಡಿನ ಹಟ್ಟಿಯ ಬಾಗಿಲೊಂದು ಎಂಬ ಶಬ್ದಕ್ಕರ್ಥ. ಅಂತು ಸತ್ಪಥವಾರ್ಗವಿಡಿದಿರ್ಪ ಶರಣಂಗೆ ತನುತ್ರಯಂಗಳೆಂಬ ಮೂರೆಸಳನೊಳಕೊಂಡಿಹುದೇ ಗುರುತತ್ವ, ಮನತ್ರಯಂಗಳೆಂಬ ಮೂರೆಸಳನೊಳಕೊಂಡಿರ್ಪ ಲಿಂಗತತ್ವ, ಧನತ್ರಯಂಗಳೆಂಬ ಮೂರೆಸಳನೊಳಕೊಂಡಿರ್ಪುದೇ ಜಂಗಮತತ್ವ, ಇಂತೀ ನವವಿಧವನೊಳಕೊಂಡಿರ್ಪುದೇ ಸಚ್ಚಿದಾನಂದ ಸ್ವರೂಪವಾದ ಗುರು ಲಿಂಗ ಜಂಗಮವೆಂಬುದೀಗ ಬೀಗ ಒಂಬತ್ತು ಮೂರೆಸಳಿನ ಬೀಗ ಮೂರು ಎಂಬ ಶಬ್ದಕ್ಕರ್ಥ. ಆ ಶರಣಂಗೆ ಷಡ್ವಿಧಲಿಂಗ ಷಡ್ವಿಧಭಕ್ತಿ ಷಡ್ವಿಧವೆಂಬ ಹದಿನೆಂಟಿಸಳನೊಳಕೊಂಡು ಲಿಂಗತ್ರಯ ತೋರುತ್ತಿಹವೆಂಬುದೀಗ ಆರೆಸಳಿಗೆ ಬೀಗ ಮೂರೆಂಬ ಶಬ್ದಕ್ಕರ್ಥ. ಅಂಗಸ್ಥಲವಿಪ್ಪತ್ತೈದು ಲಿಂಗಸ್ಥಲವಿಪ್ಪತ್ತೈದು ಭಕ್ತಿಸ್ಥಲವಿಪ್ಪತೈದು ಇಂತೀ ಎಪ್ಪತ್ತೈದು ಎಸಳನೊಳಕೊಂಡಿರ್ಪ ಕ್ರಿಯಾ ಜ್ಞಾನ ಭಾವಂಗಳೆಂಬುದೀಗ ಇಪ್ಪತ್ತೈದೆಸಳಿನ ಬೀಗ ಮೂರೆಂಬ ಶಬ್ದಕ್ಕರ್ಥ. ಈ ಸ್ಥಲಕುಳ ಸಂಬಂಧವಾದ ಶರಣನ ಸದ್ಭಾವ ಹಸ್ತಕ್ಕೆ ಭಿನ್ನಜ್ಞಾನ ದೂರವಿಲ್ಲವೆಂಬುದೀಗ ತೆಗೆವ ಕೈಗೆ ನಾಭಿ ಇಲ್ಲವೆಂಬ ಶಬ್ದಕ್ಕರ್ಥ. ಆ ಚಿತ್ತೆಂಬ ಸುರಭೇನು ಶರಣನಾಚಾರಾಂಗದಲ್ಲಿ ಸಂಬಂಧವಾದ ಭೇದವ ದ್ವೈತಾದ್ವೈತಗಳಿಗುಸುರದೆ ಶಬ್ದ ಮುಗ್ಧವಾಗಿರ್ದನೆಂಬುದೀಗ ಸಿಕ್ಕಿತ್ತು ಹಸು ಹಟ್ಟಿಯಲ್ಲಿ ಇನ್ನಾರಿಗೆ ಹೇಳುವೆ ಅಲೇಖನಾದ ಶೂನ್ಯ ಕಲ್ಲಿನೊಳಗಾದವನ ಬಲ್ಲವರಾರು ಎಂಬ ಶಬ್ದಕ್ಕರ್ಥ.

೨೬. ಮಗನ ಕೊಂದು ತಿಂದ ತಾಯ ಕಂಡೆ. ಬಂಧುಗಳ ಕೊಂದು ನಂಟರಲ್ಲಿ ಕೂಪನ ಕಂಡೆ. ಅತ್ತೆ ಅಳಿಯನ ಒತ್ತಿನಲ್ಲಿ ಮಲಗಿ ಕೂಸು ಹುಟ್ಟಿತ್ತು. ಅಳಿಯ ಅತ್ತೆಯ ನೋಡಿ ಅತ್ತೆ ಅಳಿಯನ ನೋಡಿ ಹೋಯಿತ್ತು ಹೋಗದಿದೆ ಎಂದು ನಗುವರ ಕಂಡೆ. ಅವರಿಬ್ಬರ ಹೆತ್ತ ಕೂಸು ನಾನಿವರಳಿಯನಲ್ಲ ಎಂದು ಹೋಯಿತ್ತು. ಇದ ಕೇಳಿಹರೆಂದು ಹೇಳಲಂಜಿ ಅಲೇಖನಾದ ಶೂನ್ಯಕಲ್ಲಿನೊಳಹೊ್ಕ.

ಟೀಕೆ:— ಮಗನೆಂದಡೆ ಜೀವನು. ಅಂತಪ್ಪ ಜೀವನ ಜೀವಭಾವವ ಜ್ಞಾನಶಕ್ತಿ ನಿವೃತ್ತಿ ಮಾಡಿದಳಿಂಬುದೀಗ ಮಗನ ಕೊಂದು ತಿಂದ ತಾಯ ಕಂಡೆನೆಂಬ ಶಬ್ದಕ್ಕರ್ಥ. ಅಂತು ಜೀವ ಭಾವ ಪ್ರಪಂಚು ನಿವೃತ್ತಿಯಾಗಲು ಸಕಲ ಕರಣಂಗಳ ಪ್ರಕೃತಿಭಾವವ ಸುಜ್ಞಾನಪ್ರಕಾಶದಿಂ ಸಂಹ

ರಿಸಿ ಲಿಂಗ ಸಂಬಂಧವ ಮಾಡಲು ಆ ಕರಣಂಗಳೆಲ್ಲವು ಅಮರ ಗಣತ್ವ
ವನೆಯ್ದಿ ನಿತ್ಯಸ್ವರೂಪನಾದ ಶರಣಂಗೆ ಸ್ವಯಾತ್ಮ ಬಂಧುಗಳಾಗಿರ್ದ
ವೆಂಬುದೀಗ ಬಂಧುಗಳ ಕೊಂದು ನಂಟರಲ್ಲಿ ಕೂಪನ ಕಂಡೆನೆಂಬ ಶಬ್ದ
ಕ್ಕರ್ಥ. ಜ್ಞಾನಶಕ್ತಿ ಹುಂಬೆ ಹುಟ್ಟಿದ ಕ್ರಿಯಾಶಕ್ತಿ ವಲ್ಲಭನೇ ಶರಣ.
ಆ ಶರಣನಲ್ಲಿ ಜ್ಞಾನಶಕ್ತಿ ಸ್ವರೂಪನಾದ ಶ್ರೀಗುರು ಆ ಚಿತ್ಸ್ವರೂಪನಾದ
ಶಿಷ್ಯನಲ್ಲಿ ದೀಕ್ಷಾತ್ರಯಗಳಿಂದವಿರಳ ಸಂಗವ ಮಾಡಲು ಅತ್ಯಾಂತಗರ್
ತವಾಗಿರ್ದ ಚಿತ್ಪ್ರಭಾವಾಂಗವೇ ಬಹಿಷ್ಕರಿಸಿ ಇಷ್ಟಲಿಂಗವಾಗಿ ಉದಿಸಿತ್ತೆಂ
ಬುದೀಗ ಅತ್ತಿ ಅಳಿಯನ ಒತ್ತಿನಲ್ಲಿ ಮಲಗಿ ಕೂಸು ಹುಟ್ಟಿತ್ತೆಂಬ ಶಬ್ದ
ಕ್ಕರ್ಥ. ಸರ್ವಾಂಗ ಲಿಂಗ ಸಂಬಂಧ ಘಟಿಸಿದ ಶರಣನು ತಾನೇ ಪ್ರಾಣ
ಚೈತನ್ಯ ಸ್ವರೂಪವಾದ ಶ್ರೀಗುರುತತ್ವ ಸುಜ್ಞಾನ ದೃಷ್ಟಿಯಿಂ ನಿರೀಕ್ಷಿಸು
ತ್ತಿರ್ದನೆಂಬುದೀಗ ಅಳಿಯ ಅತ್ತಿಯ ನೋಡಿ ಎಂಬ ಶಬ್ದಕ್ಕರ್ಥ. ಆ
ಶ್ರೀಗುರು ತನ್ನ ಕೃಪಾದೃಷ್ಟಿಯಿಂ ಚಿದ್ರೂಪನಾದ ಶಿಷ್ಯನೇ ಚಿತ್ಪ್ರಭಾಂಗ
ಸ್ವರೂಪನೆಂದು ನಿರೀಕ್ಷಿಸುತ್ತಿರ್ದನೆಂಬುದೀಗ ಅತ್ತಿ ಅಳಿಯನ ನೋಡಿ,
ಎಂಬ ಶಬ್ದಕ್ಕರ್ಥ. ಆ ಗುರು ಶಿಷ್ಯರೆಂಬ ಭಿನ್ನಭಾವ ನಿವೃತ್ತಿಯಾಗಲು
ಆ ಭಿನ್ನ ಭಾವದಿಂ ಶಿಷ್ಯನು ಗುರು ತತ್ವದಲ್ಲಡಗಿ ಬ್ರಹ್ಮ ಸ್ವರೂಪನಾಗಿರ್ದ
ನೆಂಬುದೀಗ ಹೋಯಿತ್ತು ಹೋಗದಿಪ ಎಂಬ ಶಬ್ದಕ್ಕರ್ಥ. ಇಂತು
ಗುರುಶಿಷ್ಯರ ಸಮರಸದೇಕಾರ್ಥವ ಸಕಲ ಕರಣಂಗಳು ಸುಜ್ಞಾನ
ದೃಷ್ಟಿಯಿಂ ಕಂಡು ಶಿವೋಹಂ ಶಿವೋಹಂ ಎಂದು ಪರವು ಹರುಷತೆಯು
ನೆಯ್ದಿತ್ತೆಂಬುದೀಗ ಎಂದು ನಗುವವರ ಕಂಡೆನೆಂಬ ಶಬ್ದಕ್ಕರ್ಥ. ಆ
ಗುರು ಶಿಷ್ಯರ ಸಂಪರ್ಕದಿಂದುದಯವಾದ ಭಕ್ತಾಂಗನೆಗೆ ಇಷ್ಟಲಿಂಗವೇ
ವಲ್ಲಭನಾದ ಕಾರಣ ಅಳಿಯನೆಂಬುದೀಗ ಅವರಿಬ್ಬರ ಹೆತ್ತ ಕೂಸು ನಾನಿ
ವರಳಿಯನಲ್ಲ ಎಂಬ ಶಬ್ದಕ್ಕರ್ಥ. ಆ ಸದ್ರೂಪವಾದ ಇಷ್ಟಲಿಂಗವು ಗುರು
ಶಿಷ್ಯರೀರ್ವರನವಗ್ರಹಿಸಿ ನಿರ್ವಯಲಾಯಿತ್ತೆಂಬುದೀಗ ಹೋಯಿತ್ತು
ಎಂಬ ಶಬ್ದಕ್ಕರ್ಥ. ಆ ಗುರು ಶಿಷ್ಯರಿಬ್ಬರು ಮಹಾ ಘನಲಿಂಗ
ದಲ್ಲಿ ಏಕಾರ್ಥವಾದ ಭೇದವು ದ್ವೈತಾದ್ವೈತಗಳಿಗುಸುರಲಿಪ್ರವೆಂಬುದೀಗ
ಇದ ಕೇಳಹರೆಂದು ಹೇಳಲಂಜ ಅಲೇಖನಾದ ಶೂನ್ಯ ಕಲ್ಲಿನೊಳಹೊಕ್ಕ
ನೆಂಬ ಶಬ್ದಕ್ಕರ್ಥ.

೨೨. ಮಾರ್ಜಾಲನ ಹೃದಯದಲ್ಲಿ ಮೂಷಕ ಮನೆಯ ಮಾಡಿತ್ತು. ಅದಕ್ಕೆ ಮಡಿವಾಡಂಗಳಿಂದ ಆಶ್ರಯ ಒಂದು. ಬಾಗಿಲು ಬೇರೆ.

ಅದಕ್ಕೆ ಹೋಗಿಯಾಡುವ ನಾಟಕಶಾಲೆ ಪವನನೆಂಬ ಸೂಳೆ ಆ ಘಟ
ದಿಂದಾಡುತ್ತಿರಲಾಗಿ ಕಾಲು ಜಾರಿ ನೆಲಕ್ಕೆ ಬಿದ್ದಳು. ಬಿದ್ದ ಘಾಯಕ್ಕೆ
ಯೋನಿ ಒಡೆಯಿತ್ತು. ಮೊಲೆ ಹರಿಯಿತ್ತು. ಕಿವಿ ಕಿತ್ತು ಕಣ್ಣು ಹಿಂಚು
ಮುಂಜಾಯಿತ್ತು. ನೋಡುವ ಅಣ್ಣಗಳ ಬಯಕೆ ಹರಿಯಿತ್ತು. ಯೋನಿ
ಕಿತ್ತಲ್ಲಿ ಕೂಟಕ್ಕೆ ಸುಖವಿಲ್ಲ. ನೋಟಕ್ಕೆ ಬೆಂಬಳಿಯಿಲ್ಲ. ಪವನನ ಆ ಘಟ
ಹೋಯಿತ್ತು. ಕಾಲನ ಕಮ್ಮಟಕ್ಕೆ ಅಲೇಖನಾದ ಶೂನ್ಯ ಕಲ್ಲಿನೊಳಗಾ
ಯಿತ್ತು ಬಾರಯ್ಯ.

ಟೀಕೆಃ— ಪಂಚಭೂತಾಶ್ರಯವಾದ ದೇಹಮಧ್ಯದಲ್ಲಿರ್ಪ ಮಾಯಾ
ಮಾರ್ಜಾಲನ ಹೃದಯವನೆ ಮನಸ್ಸಾಶ್ರಯವ ಮಾಡಿಕೊಂಡಿತ್ತೆಂಬುದೀಗ
ಮಾರ್ಜಾಲನ ಹೃದಯದಲ್ಲಿ ಮೂಷಕ ಮನೆ ಮಾಡಿತ್ತೆಂಬ ಶಬ್ದಕ್ಕರ್ಥ.
ಅಂತಪ್ಪ ಮನಕ್ಕೆ ಷಡಾಧಾರ ಚಕ್ರಂಗಳ ನೊಳಕೊಂಡಿರ್ಪ ದೇಹವೇ
ಆಶ್ರಯವಾಯಿತ್ತೆಂಬುದೀಗ ಅದಕ್ಕೆ ಮಡಿವಾಡಂಗಳಿಂದ ಆಶ್ರಯ ಒಂದೇ
ಎಂಬ ಶಬ್ದಕ್ಕರ್ಥ. ಆ ದೇಹಕ್ಕೆ ನವದ್ವಾರಂಗಳೇ ಬಾಗಿಲುವಾಡವಾ
ಗೊಪ್ಪತ್ತಿಹುದೆಂಬುದೀಗ ಬಾಗಿಲು ಬೇರೆ ಎಂಬ ಶಬ್ದಕ್ಕರ್ಥ. ಆ ಷಡಾ
ಧಾರ ಚಕ್ರದಲ್ಲಿ ಷಡುಸೋಪಾನವಿಟ್ಟು ಸಾಧಿಸುತ್ತಿಹರು ಯೋಗಿ ಜನಂಗ
ಳೆಂಬುದೀಗ ಅದಕ್ಕೆ ಆಡುವ ನಾಟಕಶಾಲೆ ಎಂಬ ಶಬ್ದಕ್ಕರ್ಥ. ಸ್ವಸ್ಥಪದ್ಮಾ
ಸನದಲ್ಲಿ ಕುಳಿತು ಅಧೋಮುಖದ ವಾಯುವ ಊರ್ಧ್ವ ಮಾಡಿ ರೇಚಕ
ಪೂರಕಂಗಳ ಪ್ರಾಣಾಯಾಮದಿಂ ಕುಂಭದಲ್ಲಿ ನಿಲಿಸಿ ಮನಮಾರು
ತಂಗಳ ಒಬ್ಬಳೆಯಿಂ ಸುಷುಮ್ನದ್ವಾರದಿಂ ಬ್ರಹ್ಮರಂಧ್ರವನೆಯ್ದಿ ಪರದಲ್ಲಿ
ಬೆರಸಿಹೆನೆಂಬ ವಾಯುಸಾಧಕರಿಗೆ ಸಾಧ್ಯವಾಗದು ಪರಬ್ರಹ್ಮವೆಂಬುದೀಗ
ಪವನನೆಂಬ ಸೂಳೆ ಆ ಘಟದಿಂದಾಡುತ್ತಿರಲಾಗಿ ಎಂಬ ಶಬ್ದಕ್ಕರ್ಥ. ಅಂತಪ್ಪ
ಭಿನ್ನ ಯೋಗಕ್ಕೆ ಮೋಕ್ಷ ಮಾರ್ಗವು ಸಾಧ್ಯವಾಗದೆ ದೇಹಭಾವದಲ್ಲಿ
ಲಯವಾದುದೆಂಬುದೀಗ ಕಾಲು ಜಾರಿ ನೆಲಕ್ಕೆ ಬಿದ್ದಳು ಎಂಬ ಶಬ್ದಕ್ಕರ್ಥ.
ಅಂತಪ್ಪದೇಹಭಾವದಲ್ಲಿ ಕೂಡಿದಾತ್ಮಂಗೆ ನಿಜ ಸುಷುಪ್ತಿ ಭಗ್ನವಾಯಿ
ತ್ತೆಂಬುದೀಗ ಬಿದ್ದ ಘಾಯಕ್ಕೆ ಯೋನಿ ಒಡೆಯಿತ್ತೆಂಬ ಶಬ್ದಕ್ಕರ್ಥ.
ಅಂತಪ್ಪ ನಿಜ ಸುಷುಪ್ತಿ ಭಿನ್ನವಾದಲ್ಲಿ ಪರಮಾಮೃತಸ್ಥಾನ ನಷ್ಟವಾಯಿ
ತ್ತೆಂಬುದೀಗ ಮೊಲೆ ಹರಿಯಿತ್ತೆಂಬ ಶಬ್ದಕ್ಕರ್ಥ. ಆ ಪರಮಾಮೃತಸ್ಥಾನ
ನಷ್ಟವಾದಲ್ಲಿ ಅನಾಹತ ಕರ್ಣದ್ವಾರವು ಭಿನ್ನವಾಗಿ ಸುಜ್ಞಾನ ದೃಷ್ಟಿ
ಪಲ್ಲಟವಾಯಿತ್ತೆಂಬುದೀಗ ಕಿವಿ ಕಿತ್ತು ಕಣ್ಣು ಹಿಂಚು ಮುಂಜಾಯಿತ್ತೆಂಬ

ಶಬ್ದಕ್ಕರ್ಥ. ಇಂತಿವೆಲ್ಲವು ನಷ್ಟವಾಗಲು ಪರಶಿವ ತತ್ವವ ನಿರೀಕ್ಷಿಸಬೇಕೆಂಬ ಖಂಡಿತ ಜ್ಞಾನಿಗಳ ಬಯಕೆಯಡಗಿತ್ತೆಂಬುದೀಗ ನೋಡುವ ಅಣ್ಣಗಳ ಬಯಕೆ ಹರಿಯಿತ್ತೆಂಬ ಶಬ್ದಕ್ಕರ್ಥ. ಆ ನಿಜ ಸುಷುಪ್ತಿ ಸ್ಥಾನ ಧಗ್ನವಾದಲ್ಲಿ ಲಿಂಗಾಂಗದ ಸಮರಸದ ಕೂಟಕ್ಕೆ ತೆರಪಿಲ್ಲದೆ ಹೋಯಿತ್ತೆಂಬುದೀಗ ಯೋನಿ ಕೆತ್ತಲ್ಲಿ ಕೂಟಕ್ಕೆ ಸುಖವಿಲ್ಲ ಎಂಬ ಶಬ್ದಕ್ಕರ್ಥ. ಆ ಭಿನ್ನ ಯೋಗಿಗಳು ಇನ್ನು ಭಿನ್ನವಿಟ್ಟು ಈಕ್ಷಿಸಿಹೆನೆಂದೊಡೆ ತೆರಪಿಲ್ಲವೆಂಬುದೀಗ ನೋಟಕ್ಕೆ ಬೆಂಬಳಿ ಇಲ್ಲವೆಂಬ ಶಬ್ದಕ್ಕರ್ಥ. ಪವನ ಯೋಗದಿಂ ಸಾಧಿಸಿಪೆನೆಂಬ ಭಿನ್ನಯೋಗಿಗಳ ಹೆಚ್ಚಿಗೆ ಇಲ್ಲವು ಯಮನ ಮರಣ ಬಾಧೆಗೊಳಗಾಯಿತ್ತೆಂಬುದೀಗ ಪವನನ ಆ ಘಟ ಹೋಯಿತ್ತು ಕಾಲನ ಕಮ್ಮಟಕ್ಕೆ ಅಲೇಖನಾದ ಶೂನ್ಯಕಲ್ಲಿನೊಳಗಾಯಿತ್ತು ಬಾರಯ್ಯ ಎಂಬ ಶಬ್ದಕ್ಕರ್ಥ.

೮. ಶಿವ ಶಿವ ಎಲ್ಲರ ಉಂಟಾದುದ ಹೇಳಿ. ಇಲ್ಲದ ಬಯಲಿಂಗೆ ಮನವನಿಕ್ಕಿದರು. ಎನಗಿನ್ನಾವುದು ಬಟ್ಟೆ ? ಬಸವಣ್ಣನ ಕರುಣೆಯಿಂದ ಕಟ್ಟಿದ ಲಿಂಗಕ್ಕೆ ಹುಟ್ಟು ಮೆಟ್ಟಲರಿಯೆ. ಕೊಟ್ಟಾತ ಹೇಳಿದುದಿಲ್ಲ. ಕಟ್ಟಿಕೋ ಎಂದಾತ ಈ ಬಟ್ಟೆಯಲ್ಲಿರು ಎಂದುದಿಲ್ಲ. ಕಡ್ಡಾಯಕ್ಕೆ ಕಟ್ಟಿದ ಈ ವಡ್ಡಗಲ್ಲಿನ ಮುರಿವ ಎನಗೊಂದು ಬುದ್ಧಿಯು ಹೇಳಾ ಅಲೇಖನಾದ ಶೂನ್ಯಕಲ್ಲಿನೊಳಗೇಕೆ ಆದೆಯಯ್ಯ.

೯. ಸ್ಥಲ ಕುಳವ ನರಿಯಬೇಕೆಂಬರು ಭಕ್ತನಾಗಿ. ಮಹೇಶ್ವರನಾಗಬೇಕೆಂಬರು ಮಹೇಶ್ವರನಾಗಿ. ಪ್ರಸಾದಿಯಾಗಬೇಕೆಂಬರು ಪ್ರಸಾದಿಯಾಗಿ. ಪ್ರಾಣಲಿಂಗಿಯಾಗಬೇಕೆಂಬರು ಪ್ರಾಣಲಿಂಗಿಯಾಗಿ. ಶರಣನಾಗಬೇಕೆಂಬರು ಶರಣನಾಗಿ. ಐಕ್ಯನಾಗಬೇಕೆಂಬರು ಐಕ್ಯನಾಗಿ. ಏತರಿಂದ ಕೂಟವ ನಾನರಿಯೆ. ಒಳಗಣ ಮಾತು ಹೊರಹೊಮ್ಮಿಯಲ್ಲದೆ ಎನಗರಿಯಬಾರದು. ಎನಗೈಕ್ಯನಾಗಿ ಶರಣನಾಗಬೇಕು. ಶರಣನಾಗಿ ಪ್ರಾಣಲಿಂಗಿಯಾಗಬೇಕು. ಪ್ರಾಣಲಿಂಗಿಯಾಗಿ ಪ್ರಸಾದಿಯಾಗಬೇಕು. ಪ್ರಸಾದಿಯಾಗಿ ಮಹೇಶ್ವರನಾಗಬೇಕು. ಮಹೇಶ್ವರನಾಗಿ ಭಕ್ತನಾಗಬೇಕು. ಭಕ್ತನಾಗಿ ಸಕಲ ಯುಕ್ತನಾಗಬೇಕು. ಯುಕ್ತಿ ನಿಶ್ಚಯವಾದಲ್ಲಿಯೇ ಐಕ್ಯ ಸ್ಥಲ. ಒಳಹೊರಗಾಯಿತ್ತು. ಅಲೇಖವಾಯಿತ್ತು. ಎನಗೆ ಕಾಣಬರಿದಾಯ್ತು. ಅಲೇಖನಾದ ಶೂನ್ಯಶಿಲೆಯ ಹೊರಹೊಮ್ಮಿ ಕಂಡೆ ನಿನ್ನನು.

೩೦. ಸಾಸುವೆಯ ಹಾಲು ಸಾಧಕಾಂಗರ ನಾಸಿಕದ ನೀರ ಬರಿಸಿತ್ತು. ಮೂಷಕನ ಮೀಸೆಯ ಬಿಂದು ಮೂರು ಲೋಕವ ಮುಳುಗಿಸಿತ್ತು. ಕಾಸದ ನೀರು ಬಿಸಿಯಾಗಿ ಕುಡಿವವರ ಮೀಸೆಯ ಸುಟ್ಟಿತ್ತು. ಸಾಸುವೆಯ ಮೂಷಕನ ಮೀಸೆಯ ಬಿಸಿನೀರ ಕುಡಿವಾತನ ಬಾಯೊತ್ತಿನ ಮೀಸೆಯಲ್ಲಿ ಹುಟ್ಟಿತ್ತೊಂದು ಹಾಸರುಗಲ್ಲಿನ ಮೇಲೆ ಕುಳ್ಳಿರ್ದಾತನ ಕೇಳಿಹರೆಂದು ಅದೇತಕ್ಕಡಗಿದೆ ಅಲೇಖಮಯ ಶೂನ್ಯಕಲ್ಲಿನ ಮನೆಯೊಳಗೆ.

ಟೀಕೆಃ— ಶಿವಾದ್ವೈತ ಭಕ್ತಿರಸವೆಂಬದು ಎಲ್ಲಕ್ಕೂ ಕಠಿಣವಾಗಿಹುದೆಂಬುದೀಗ ಸಾಸುವೆಯ ಹಾಲು ಎಂಬ ಶಬ್ದಕ್ಕರ್ಥ. ಅಂತಪ್ಪ ಸದ್ಭಕ್ತಿಯಿಂ ಶ್ರೀಕಾರುಣ್ಯವ ಹಡೆದು ಸತ್ಕ್ರಿಯಾಜ್ಞಾನವಿಡಿದಾಚರಿಸುವ ಸದ್ಭಕ್ತಜನಂಗಳೆಂಬುದೀಗ ಸಾಧಕಾಂಗರ ಎಂಬ ಶಬ್ದಕ್ಕರ್ಥ. ಅಂತಪ್ಪ ಸದ್ಭಕ್ತ ಜನಂಗಳ ಸ್ವಾನುಭಾವ ವಾಸನೆಯಲ್ಲಿ ಅಡಗಿರ್ಪ ಸದ್ವಿವೇಕ ಜಲವ ಪ್ರಭಾವಿಸಿತ್ತೆಂಬುದೀಗ ನಾಸಿಕನೀರ ಬರಿಸಿತ್ತು ಎಂಬ ಶಬ್ದಕ್ಕರ್ಥ. ಆ ಸದ್ವಿವೇಕ ಜಲವನೊಳಕೊಂಡಿರ್ಪ ಶರಣನ ಮನಸ್ಸಿನಲ್ಲಿ ನೈಷ್ಠಿಕಾ ಸ್ವರೂಪವಾದ ಸಕಲ ಕರಣಂಗಳಲ್ಲಿ ಸಂಬಂಧವಾದ ಚಿದ್ವಿಂದು ತನುತ್ರಯಂಗಳನೊಳಕೊಂಡು ತೋರುತ್ತಿಹುದೆಂಬುದೀಗ ಮೂಷಕನ ಮೀಸೆಯ ಬಿಂದು ಮೂರು ಲೋಕವ ಮುಳಿಗಿಸಿತ್ತು ಎಂಬ ಶಬ್ದಕ್ಕರ್ಥ. ಅಂತು ಚಿದ್ವಿಂದು ತನುತ್ರಯಂಗಳನೊಳಕೊಂಡಲ್ಲಿ ತಾಪತ್ರಯಾಗ್ನಿಯಲ್ಲಿ ಕಾಯದೆ ಇರ್ದ ಪರಮಾನಂದ ಜಲವು ಜ್ಞಾನಾಗ್ನಿ ಸ್ವರೂಪವಾಗಿ ಆ ಪರಮಾನಂದ ಜಲವ ಸ್ವೀಕರಿಸುವ ಭಕ್ತಜನಂಗಳ ನೈಷ್ಠೆಯನೊಳಕೊಂಡಿರ್ಪ ಸಕಲ ಕರಣಂಗಳನವಗ್ರಹಿಸುತ್ತಿಂಬುದೀಗ ಕಾಸದ ನೀರು ಬಿಸಿಯಾಗಿ ಕುಡಿವವರ ಮೀಸೆಯ ಸುಟ್ಟಿತ್ತು ಎಂಬ ಶಬ್ದಕ್ಕರ್ಥ. ಶಿವಾದ್ವೈತ ಭಕ್ತಿರಸವೆಂಬುದೀಗ ಸಾಸುವೆಯ ಎಂಬ ಶಬ್ದಕ್ಕರ್ಥ. ಆ ಭಕ್ತಿಯಲ್ಲಿ ಸಂಬಂಧವಾದ ಶರಣ ಮನಸ್ಸೆಂಬುದೀಗ ಮೂಷಕನ ಎಂಬ ಶಬ್ದಕ್ಕರ್ಥ. ಆ ಮನೋಮಧ್ಯದಲ್ಲಿ ನಿಷ್ಠೆಯೊಡನೆ ಕೂಡಿದ ಸಕಲಕರಣಂಗಳೆಂಬುದೀಗ ಮೀಸೆಯ ಎಂಬ ಶಬ್ದಕ್ಕರ್ಥ. ಆ ನಿಷ್ಠೆಯಿಂ ಜ್ಞಾನಾಗ್ನಿ ಸ್ವರೂಪವಾದ ಪರಮಾನಂದ ಜಲವ ಸ್ವೀಕರಿಸುತ್ತಿಹ ಶರಣನ ಎಂಬುದೀಗ ಬಿಸಿನೀರ ಕುಡಿವಾತನ ಎಂಬ ಶಬ್ದಕ್ಕರ್ಥ. ಆ ಪರಮಾನಂದ ಜಲವ ಸ್ವೀಕರಿಸುವ ಶರಣನ ಶಿವಾ

ಪೇಕ್ಷೆಯಲ್ಲಿ ಕೂಡಿದ ಸಕಲ ಕರಣಾಂಗಳ ಮಧ್ಯದಲ್ಲಿ ಅನೇಕ ತತ್ವಂ
ಗಳನೊಳಕೊಂಡಿರ್ಪ ಅಖಂಡ ಜ್ಞಾನಚಿತ್ತು ಉದಯವಾಯಿತ್ತೆಂಬು
ದೀಗ ಬಾಯೊತ್ತಿನ ಮೀಸೆಯಲ್ಲಿ ಹುಟ್ಟತೊಂದು ಹಾಸರುಗಲ್ಲು ಎಂಬ
ಶಬ್ದಕ್ಕರ್ಥ. ಆ ಚಿತ್ತಿನ ಮಧ್ಯದಲ್ಲಿ ಸಾಹಿತ್ಯವಾಗಿರ್ಪುದೇ ಮಹಾಘನ
ಲಿಂಗವೆಂಬುದೀಗ ಹಾಸರುಗಲ್ಲಿನ ಮೇಲೆ ಕುಳ್ಳಿರ್ದಾತನ ಕೇಳಿಹರೆಂದು
ಅವೇತಕ್ಕಡಗಿದೆ, ಅಲೇಖನುಯ ಶೂನ್ಯಕಲ್ಲಿನ ಮೊನೆಯೊಳಗೆ ಎಂಬ
ಶಬ್ದಕ್ಕರ್ಥ.

೩೧. ಸಿರಿಯ ಭೂಮಿಯ ಮಧ್ಯದಲ್ಲಿ ಉರಿಯ ಮಡು ಹುಟ್ಟಿತ್ತು.
ಆ ಮಡುವಿನ ಮಧ್ಯದಲ್ಲಿ ಐದು ಸರಗೂಡಿದ ಬಾವಿ. ಆ ಬಾವಿಯೊಳಗೆ
ಮೂರು ಮುಖದ ಹುಲಿ ಹುಟ್ಟಿತ್ತು. ಒಂದು ಕೊಂದು ತಿಂಬುದು.
ಒಂದು ಕೊಲ್ಲದೆ ತಿಂಬುದು. ಒಂದು ಎಲ್ಲರ ನೋಡಿ ತಿಂಬುದು ಅಲ್ಲ
ಎಂಬುದು ಹುಲಿಯ ಬಣ್ಣ ಮೊದಲು ಕಪ್ಪು ನಡುವೆ ಬಾಸುರ ತುದಿ
ಯಲ್ಲಿ ಬಿಳಿದು ಹಗೆವಣ್ಣ ಸಹಿತವಾಗಿ ಹುಟ್ಟಿದ ಹುಲಿ ಉರಿಯ ಮಡುವ
ನೀಂಟಿ ರಸದ ಘಾವಿಯ ಕುಡಿದು ತಿಂಬವೆರಡು ಮುಖ ತಿನ್ನದ ಮುಖ
ದಲ್ಲಿ ಕಡೆಕಪ್ಪು ನಡುವಣ ಬಾಸುರ ತುದಿಯ ಬಿಳುಪಿನಲ್ಲಿ ಅಡಗಿ ಒಡ
ಗೂಡಿತ್ತು. ಅದರ ತೊಡಿಗೆಯ ಕೇಳಿಹರೆಂದಂಜಿ ಅಡಗಿದೆ ಅಲೇಖನಾದ
ಶೂನ್ಯ ಕಲ್ಲಿನೊಳಗಾಗಿ.

ಟೀಕೆಃ— ಪ್ರಾರಬ್ಧ ಭೋಗ ಸಂಬಂಧವಾದ ಸ್ಥೂಲ ದೇಹವೆಂಬು
ದೀಗ ಸಿರಿಯ ಭೂಮಿಯ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹ ಮಧ್ಯ
ದಲ್ಲಿ ತಾಪತ್ರಯಾಗ್ನಿಯನೊಳಕೊಂಡಿರ್ಪ ಸಂಸಾರ ವಿಷಯ ರಸದ
ಘಾತಕವ ಕಾಣಬಾರದೆಂಬುದೀಗ ಮಧ್ಯದಲ್ಲಿ ಉರಿಯ ಮಡು ಹುಟ್ಟಿ
ತ್ತೆಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯ ರಸದ ಮಧ್ಯದಲ್ಲಿ ಸಂಸಾರ
ವಿಷಯ ರಸವನೊಳಕೊಂಡು ಪಂಚ ವಿಷಯುಂಗಳೇ ಕೂಪವಾಗಿರುತ್ತಿಹ
ವೆಂಬುದೀಗ ಆ ಮಡುವಿನ ಮಧ್ಯದಲ್ಲಿ ಐದು ಸರಗೂಡಿದ ಘಾವಿ
ಯೆಂಬ ಶಬ್ದಕ್ಕರ್ಥ. ಆ ವಿಷಯ ಕೂಪದಲ್ಲಿ ಅವಸ್ಥಾತ್ರಯುಂಗಳೇ
ಮುಖವಾಗಿಯುಳ್ಳ ಜೀವನಿಂ ಜೀವತ್ರಯುಂಗಳು ಉದಿಸಿದವೆಂಬುದೀಗ
ಆ ಘಾವಿಯೊಳಗೆ ಮೂರು ಮುಖದ ಹುಲಿ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಆ
ಜಾಗ್ರಾವಸ್ಥೆಯು ಮುಖವಾಗಿರ್ಪ ವಿಶ್ವನು ಸಕಲ ಪ್ರಾಣಿಗಳ ಸಂಹರಿಸಿ

ಭಕ್ಷಿಸುತ್ತಿಹುದೆಂಬುದೀಗ ಬಂದು ಕೊಂದು ತಿಂಬುದು ಎಂಬ ಶಬ್ದಕ್ಕರ್ಥ.
ಆ ಸ್ವಪ್ನಾವಸ್ಥೆಯ ಮುಖದಿಂ ತೇಜಸ್ಸನ್ನು ಇಂದ್ರಿಯುಂಗಳಲ್ಲಿ ವಿಷಯ
ಸುಖವನನುಭವಿಸುತ್ತಿಹವೆಂಬುದೀಗ ಬಂದು ಕೊಲ್ಲದೆ ತಿಂಬುದು
ಎಂಬ ಶಬ್ದಕ್ಕರ್ಥ. ಆ ವಿಶ್ವ ತೇಜಸ್ಸಿನ ವರ್ತನೆಯು ಪ್ರಾಜ್ಞನು
ವಿವೇಕ ಮುಖದಿಂ ಕಂಡು ವಿಡಂಬಿಸುತ್ತಿಹುದೆಂಬುದೀಗ ಅಲ್ಲ ಎಂಬುದು
ಎಂಬ ಶಬ್ದಕ್ಕರ್ಥ. ಆ ವಿಶ್ವನು ಅಜ್ಞಾನ ಸಂಬಂಧಿಯಾಗಿಹನೆಂಬುದೀಗ
ಆ ಹುಲಿಯ ಬಣ್ಣ ಮೊದಲು ಕಪ್ಪು ಎಂಬ ಶಬ್ದಕ್ಕರ್ಥ. ಆ ತೈಜಸನು
ಜ್ಞಾನಾ ಜ್ಞಾನಾ ಸಂಬಂಧಿಯಾಗಿಹನೆಂಬುದೀಗ ನಡುವೆ ಬಾಸುರವೆಂಬ
ಶಬ್ದಕ್ಕರ್ಥ. ಆ ಪ್ರಾಜ್ಞನು ನಿರ್ಮಲ ಸ್ವರೂಪವಾದ ಸುಜ್ಞಾನಿಯಾಗಿಹ
ನೆಂಬುದೀಗ ತುದಿಯಲ್ಲಿ ಬಿಳಿದು ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವ
ತ್ರಯುಂಗಳ ಮಧ್ಯದಲ್ಲಿ ಶಿವಕೃಪೆಯಿಂ ಸಮ್ಯಜ್ಞಾನ ಪ್ರಕಾಶಿಸಲು ಸಕಲ
ಕರಣಾಂಗಳ ವರ್ತನೆಯು ಲಯವ ಮಾಡುತ್ತಿಹುದೆಂಬುದೀಗ ಹಗೆವಣ್ಣ
ಸಹಿತವಾಗಿ ಹುಟ್ಟಿದ ಹುಲಿ ಎಂಬ ಶಬ್ದಕ್ಕರ್ಥ. ಆ ಸಕಲ ಕರಣಾಂಗಳ
ಲಯವ ಮಾಡಿದ ಸುಜ್ಞಾನ ಪ್ರಕಾಶದಿಂ ತಾಪತ್ರಯಾಗ್ನಿಯೊಡನೆ
ಕೂಡಿದ ಸಂಸಾರ ವಿಷಯ ರಸದ ಘಾತವನವಗ್ರಹಿಸಿತ್ತೆಂಬುದೀಗ ಉರಿಯ
ಮಡುವನೀಂಟಿ ಎಂಬ ಶಬ್ದಕ್ಕರ್ಥ. ಅಂತು ಪಂಚ ವಿಷಯುಂಗಳಲ್ಲಿ
ಸಂಸಾರ ವಿಷಯ ರಸವ ನಿವೃತ್ತಿ ಮಾಡಿದನೆಂಬುದೀಗ ರಸದ ಘಾವಿಯ
ಕುಡಿದು ಎಂಬ ಶಬ್ದಕ್ಕರ್ಥ. ಅಂತು ಜಾಗ್ರತ್ ಸ್ವಪ್ನಂಗಳಿಂ ಸಕಲ
ಪ್ರಪಂಚು ಗ್ರಹಿಸುತ್ತಿರ್ಪ ವಿಶ್ವತೈಜಸನೆಂಬುಭಯವು ಪ್ರಾಜ್ಞನ ಅರು
ಪಿನಲ್ಲಿ ಲೀಯವಾದವೆಂಬುದೀಗ ತಿಂಬ ಮುಖವೆರಡು ಮುಖ ತಿನ್ನದ
ಮುಖದಲ್ಲಿ ಅಡಗಿ ಎಂಬ ಶಬ್ದಕ್ಕರ್ಥ. ಶ್ರೀಗುರು ಕಾರುಣ್ಯದಿಂ ತ್ರಿವಿಧ
ಲಿಂಗ ಸಂಬಂಧವಾಗಲು ಇಷ್ಟಲಿಂಗ ಸಂಬಂಧಿಯಾದ ವಿಶ್ವನು ಪ್ರಾಣ
ಲಿಂಗ ಸಂಬಂಧಿಯಾದ ತೈಜಸನು ಅರುವಿನಲ್ಲಿ ಸಮರಸವಾಗಿ ಎಂಬು
ದೀಗ ಕಡೆ ಕಪ್ಪು ನಡುವಣ ಭಾಸುರವೆಂಬ ಶಬ್ದಕ್ಕರ್ಥ. ಆ ಪ್ರಾಣ
ಲಿಂಗ ಸಂಬಂಧಿಯಾದ ಪ್ರಾಜ್ಞನ ಮಹಾಜ್ಞಾನದ ಇರವಿನಲ್ಲಿ ಸಮರಸ
ವಾದನೆಂಬುದೀಗ ತುದಿಯ ಬಿಳುಪಿನಲ್ಲಿ ಅಡಗಿ ಎಂಬ ಶಬ್ದಕ್ಕರ್ಥ. ಆ
ಮಹಾಜ್ಞಾನ ಸ್ವರೂಪನಾದ ಪ್ರಾಜ್ಞನು ಭಾವಲಿಂಗದಲ್ಲಿ ಅಡಗಿ ನಿಷ್ಪ
ತ್ತಿಯಾಯಿತ್ತೆಂಬುದೀಗ ಒಡಗೂಡಿತ್ತು. ಅದರ ತೊಡಿಗೆಯ ಕೇಳಿಹ
ರೆಂದಂಜಿ ಅಡಗಿದೆ ಅಲೇಖನಾದ ಶೂನ್ಯಕಲ್ಲಿನೊಳಗಾಗಿ ಎಂಬ
ಶಬ್ದಕ್ಕರ್ಥ.

೩೨. ಹುಟ್ಟದೇ ಬ್ರಹ್ಮನ ಹಂಗಿನಲ್ಲಿ? ಬೆಳೆಯದೇ ವಿಷ್ಣುವಿನ ಹಂಗಿನಲ್ಲಿ? ಸಾಯದೇ ರುದ್ರನ ಬೆಂಬಳಿಯಲ್ಲಿ? ಹರಿಯಿತ್ತು ಬ್ರಹ್ಮನ ಬಲೆ. ಗುರುವಿನ ಕರಸ್ಥಲದಲ್ಲಿ ಬಿಟ್ಟಿತ್ತು. ವಿಷ್ಣುವಿನ ಸುಖ ಲಿಂಗಾರ್ಪಿತದಲ್ಲಿ ಮರೆಯಿತ್ತು. ರುದ್ರನ ಮರಣ ವಸ್ತುವಿನ ಮೂರ್ತಿಯಲ್ಲಿ. ಮತ್ತೆ ನಾನಿನ್ನಾರ ಕೇಳಿಹೆ? ಅಲೇಖನಾದ ಶೂನ್ಯಕಲ್ಲ ಬಿಟ್ಟ ತೆರನ ಕಂಡೆ.

ರೆಮ್ಮವ್ವೆಯ ವಚನಗಳು.

ಪ್ರಸ್ತಾವನೆ.

ನಾವಿಲ್ಲಿ ರೆಮ್ಮವ್ವೆಯ ವಚನಗಳನ್ನು ಪ್ರಸಿದ್ಧಿಸಿದ್ದೇವೆ. ಈ ವಚನಗಳು ಭಕ್ತನಾದವನು ಮಹೇಶ್ವರ ಸ್ಥಲದವನಾಗಿ ಹೇಗೆ ಆಚರಿಸಬೇಕೆಂಬುದನ್ನರುಹುತ್ತವೆ. ಷಟ್‌ಸ್ಥಲದಲ್ಲಿ ಆರುಸ್ಥಲಗಳಿದ್ದು ಪ್ರತಿಯೊಂದುಸ್ಥಲದಲ್ಲಿ ಪುನಃ ಆರುಸ್ಥಲಗಳಾಗಿ ಒಟ್ಟು ೩೬ ಸ್ಥಲಗಳಾಗುತ್ತವೆ. ಒಂದು ಸ್ಥಲದ ವಿಶಿಷ್ಟತೆಯನ್ನು ಭಕ್ತ, ಮಹೇಶಾದಿ ಆರು ಸ್ಥಲಗಳಿಗನುಸರಿಸಿ ಕಾಯ್ದುಕೊಂಡು ವರ್ತಿಸುವದು ಷಟ್‌ಸ್ಥಲದ ಆಚರಣೆಯಾಗಿರುತ್ತದೆ. ಅಂದರೆ ಭಕ್ತನು ಒಂದು ಸ್ಥಲದಲ್ಲಿದ್ದುಕೊಂಡು ಅದರಿಂದಲೇ ತನ್ನ ಪ್ರಗತಿಯನ್ನುಂಟು ಮಾಡಿಕೊಳ್ಳಬಹುದೆಂದು ಈ ೩೬ ಸ್ಥಲಗಳ ರಚನೆಯಾಗಿದೆಂದು ಕಂಡುಬರುತ್ತಿದೆ. ಈ ಗ್ರಂಥದಲ್ಲಿ ರೆಮ್ಮವ್ವೆಯು ಮಹೇಶ್ವರ ಸ್ಥಲಕ್ಕೆ ಹೊಂದಿಕೆಯಾಗಿರುವ ವ್ರತಾದಿಗಳನ್ನು ಹೇಗೆ ನಿರವೇರಿಸಬೇಕೆಂಬುದನ್ನು ವಿವರಿಸಿದ್ದಾಳೆ. ಆದ್ದರಿಂದ ಈ ವಚನಗಳನ್ನು ನಾವು ಮಹೇಶನ ಭಕ್ತ, ಮಹೇಶನ ಮಹೇಶ ಇತ್ಯಾದಿ ಆರು ವಿಭಾಗಗಳಾಗಿ ವಿಂಗಡಿಸಿದ್ದೇವೆ.

ವೀರಶೈವರು ಅಂಧತೆಯಿಂದ ತಮ್ಮ ಕ್ರಿಯಾದಿಗಳನ್ನು ನಿರವೇರಿಸಿದಲ್ಲಿ ಅವರಲ್ಲಿ ಪ್ರಗತಿಯಾಗಲಾರದೆಂದು ವಚನಕಾರರು ಭಾವಿಸಿರುತ್ತಾರೆ. ಅವುಗಳನ್ನು ಅವರು ಷಟ್‌ಸ್ಥಲಾನುಸಾರವಾಗಿಯೇ ಜರಗಿಸತಕ್ಕದ್ದು. ಈ ಸಂಗತಿಯನ್ನು ನಾವು ರೆಮ್ಮವ್ವೆಯ ವಚನಗಳಲ್ಲಿ ಚನ್ನಾಗಿ ಕಂಡುಕೊಳ್ಳಬಹುದಾಗಿದೆ.

ನಾವು ೧೯೩೩ನೇ ಇಸ್ವಿಯಲ್ಲಿ ವಚನಶಾಸ್ತ್ರಸಾರ ಭಾಗ ೧ ಈ ಗ್ರಂಥವನ್ನು ಪ್ರಸಿದ್ಧಿಸುವಾಗ 'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ಎಂಬ ಮುದ್ರಿಕೆಯು ರೆಮ್ಮವ್ವೆಯದೆಂತಲೂ 'ಏಲೇಶ್ವರಲಿಂಗ' ಎಂಬ ಮುದ್ರಿಕೆಯುಏಲೇಶಕೇತಯ್ಯನದೆಂತಲೂ ಕೆಲವು ಗ್ರಂಥಗಳ ಆಧಾರದಿಂದ ಭಾವಿಸಿ ಆ ರೀತಿಯಾಗಿ ಅದರ ಪರಿಶಿಷ್ಟ 'ಬ' ಇದರಲ್ಲಿ ಕಾಣಿಸಿದ್ದೇವೆ. ಆದರೆ ೧೯೩೩ನೇ ಇಸ್ವಿಯಲ್ಲಿ ನಾವು ಪ್ರಸಿದ್ಧಿಸಿದ ಅದರ ಎರಡನೆಯ ಆವೃತ್ತಿಯಲ್ಲಿ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬ ಮುದ್ರಿಕೆಯು

ೀಶಕೇತಯ್ಯನದೆಂದು ಸ್ವತಂತ್ರ ಬೇರೊಂದು ಮುದ್ರಿಕಾ ಗ್ರಂಥದ
ಾರದಿಂದ ಭಾವಿಸಿ ಆ ರೀತಿ ಅದರಲ್ಲಿ ಕಾಣಿಸಿ, ಅದಕ್ಕೆ ಟಿಪ್ಪಣಿಯಾಗಿ
ಾ 'ರೆಮ್ಮವ್ವೆ' ಯದೆಂತಲೂ ಬೇರೆ ಆಧಾರಗಳು ದೊರೆಯುತ್ತಿವೆಂದು
ರಲ್ಲಿ ಕಾಣಿಸಿದ್ದೇವೆ. ಆದರೆ ಏಲೇಶಕೇತಯ್ಯನ ಗ್ರಾಮವು ಯಾತಗಿರಿಗೆ
ೀಪವಿರುವ 'ಏಳೇರಿ' ಇಂಬುದಿದೆಂದು ನಮಗೆ ಈಚೆಗೆ ತಿಳಿದು
ದೆ. ಇಲ್ಲಿ ಏಲೇಶ್ವರ ದೇವಸ್ಥಾನವಿದ್ದು ಕೇತಯ್ಯನ ಐತಿಹ್ಯವೂ
ುಂಟು. ಆದ್ದರಿಂದ 'ಏಲೇಶ್ವರಲಿಂಗ' ಇದು ಏಲೇಶಕೇತಯ್ಯನ
ಕೆಯೇ ಇರುತ್ತದೆಂದು ಸ್ಪಷ್ಟವಾಗುತ್ತದೆ. ಒಬ್ಬ ವಚನಕಾರನು
ಾಬ್ಬ ವಚನಕಾರನ ಮುದ್ರಿಕೆಯನ್ನು ತೆಗೆದುಕೊಳ್ಳುವದಿಲ್ಲ. ಆದ್ದ
'ಆಚಾರವೇ ಪ್ರಾಣವಾದ ಮಹೇಶ್ವರಲಿಂಗ' ಈ ಮುದ್ರಿಕೆಯು ನಾವು
ಲು ಭಾವಿಸಿದಂತೆ ರೆಮ್ಮವ್ವೆಯದೇ ಇರುತ್ತದೆಂದುತೋರುತ್ತದೆ.

ಕದಿರೀಕಾಯಕದ ರೆಮ್ಮವ್ವೆ ಎಂಬ ಇನ್ನೊಬ್ಬ ಸ್ತ್ರೀವಚನಕಾರ
ಕೆ. ಆಕೆಯ ಮುದ್ರಿಕೆಯು "ಕದಿರಿರೆಮ್ಮೆಯೊಡೆಯ ಗುಮ್ಮೇಶ್ವರಾ"
ಇವೆ. ಆದರೆ ಆಕೆಗೂ ಈಗಿನ ರೆಮ್ಮವ್ವೆಗೂ ಏನೂ ಸಂಬಂಧ
ದಿಲ್ಲ.

ರೆವ್ವೆಯ ಚರಿತ್ರೆಯು ನಮಗೆ ತಿಳಿದು ಬಂದಿಲ್ಲ. ಆಕೆಯು
ನಳೆರುವಳೆಂದು ಆಕೆಯ ವಚನಗಳ ರಚನಾ ಪದ್ಧತಿಯಿಂದ
ತೋರುತ್ತಿದೆ.

ಈ ಗ್ರಂಥವನ್ನಾದರೂ ನಾವು ಬೇರೆ ಬೇರೆ ವಚನಗಳ ಸಂಗ್ರಹ
ಗಳೊಳಗಿಂದ ಆಯ್ದು ಸಿದ್ಧಪಡಿಸಿದ್ದೇವೆ.

ಾಪುರ
-೧೯೪೧ }

ಫ. ಗು. ಹಳಕಟ್ಟಿ
ಸಂಪಾದಕ.

ಗಳಲ್ಲಿ ಅಂದರೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಇವುಗಳಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವ ಲಿಂಗ, ಜಂಗಮ-ಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಾಗಿ ಧ್ಯಾನಿಸುವದು ಧ್ಯಾನಯೋಗವೆನಿಸುವದು. ಹೀಗೆ ಧ್ಯಾನಿಸಿದಲ್ಲಿ ಆಯಾ ಲಿಂಗಗಳು ಆಯಾಚಕ್ರಗಳಲ್ಲಿ ಸ್ಥಾಪ್ಯವಾಗುವವು. ಇದರಿಂದ ಭಾವ, ಕರಣ ಮನ ಮುಖ್ಯವಾದ ಸರ್ವಾಂಗದಲ್ಲಿ ಆ ಲಿಂಗವು ತೊಳಗಿ ಬೆಳಗಹತ್ತಲು ಆ ಲಿಂಗದೊಡನೆ ಆಚರಣೆಗಳುಂಟಾಗುವವು. ಇದೇ ಧಾರಣ ಯೋಗವು ಈ ಆರು ಲಿಂಗಗಳು ಇಷ್ಟ ಪ್ರಾಣ ಭಾವಲಿಂಗದೊಳಗಿನವಿದ್ದದರಿಂದ ಅವುಗಳಲ್ಲಿಯೇ ಬೆರೆದು, ಆಮೇಲೆ ಈ ತ್ರಿವಿಧ ಲಿಂಗಗಳನ್ನು ಪುನಃ ಏಕಾಕಾರ ಮಾಡಿ, ಅಖಂಡ ಪರಿಪೂರ್ಣ ಕೇವಲ ಪರಂಜ್ಯೋತಿ ಸ್ವರೂಪವಾಗಿರುವ ಮಹಾಲಿಂಗದೊಡನೆ ಸಂಯೋಗವಾಗಬೇಕು. ಇದೇ ಸಮಾಧಿ ಯೋಗವು. ಇತರ ಯೋಗಗಳಲ್ಲಿ ಈ ತೆರದ ಲಿಂಗ ಸಂಬಂಧವಿರುವುದಿಲ್ಲ. ಅವು ಕೇವಲ ಕರ್ಮಕೌಶಲಗಳಾಗಿವೆ. ಆದರೆ ಶಿವಯೋಗಿಯು ತನಗೆ ಗುರುವಿತ್ತ ಇಷ್ಟಲಿಂಗವನ್ನು ದೃಷ್ಟಿಯಿಂದ ಗ್ರಹಿಸುವನು. ಹೀಗೆ ಗ್ರಹಿಸಿ ಪ್ರಾಣಲಿಂಗವನ್ನು ತನ್ನ ಮನಸ್ಸಿನಿಂದೆ ದೃಢವಾಗಿ ಹಿಡಿದು ಮುಂದೆ ಭಾವಲಿಂಗವನ್ನು ತನ್ನ ಭಾವದಿಂದ ಅರಿಯುವನು. ಹೀಗೆ ತ್ರಿವಿಧ ಲಿಂಗಗಳೊಡನೆ ಆಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನು ತಾನಾಗಿ ಬಯಲಾಗುವನು. ಇದಕ್ಕೆ ಯಾವುದು ಸಾಧನವೋ ಅದೇ ಶಿವಯೋಗವು.

(೪೫) ಪಂಚಕರ್ಮೇಂದ್ರಿಯಗಳು:—ಇವು ವಾಕ್, ಪಾಣಿ, ಪಾದ, ಗುದ, ಗುಹ್ಯ ಎಂದು ಐದು ಇವೆ. ಇವು ಕ್ರಿಯಾ ರೂಪವಾಗಿರುತ್ತವೆ. ಇವು ಸ್ವತಂತ್ರವಾಗಿರದೆ ಜೀವನಿಗೆ ಅಧೀನವಾಗಿರುತ್ತವೆ. ಜೀವನು ಮನಸ್ಸನ್ನು ಇಂದ್ರಿಯಗಳೊಡನೆ ಬೆರಿಸಲು ಅವು ವಾಯುವಿನ ಚೈತನ್ಯ ಬಲದಿಂದ ವ್ಯವಹರಿಸುತ್ತವೆ. ವಾಗಿಂದ್ರಿಯವು ಮಾತು ಕಥೆಯಾಡುತ್ತಿದೆ. ಪಾಣೇಂದ್ರಿಯವು ಕೊಡುವದು, ತೆಗೆದುಕೊಳ್ಳುವದು, ಹಿಡಿಯುವದು ಮೊದಲಾದ ಕಾರ್ಯಗಳನ್ನು ಮಾಡುತ್ತಿದೆ. ಪಾದೇಂದ್ರಿಯವು ಹೋಗುವದು ಬರುವದು ಈ ಮೊದಲಾದ ಕಾರ್ಯಗಳನ್ನು ಮಾಡುತ್ತದೆ. ಗುದೇಂದ್ರಿಯವು ಮಲ ವಿಸರ್ಜನ ಕಾರ್ಯವನ್ನು ಮಾಡುತ್ತಿದೆ. ಗುಹ್ಯೇಂದ್ರಿಯವು ಮೈಥುನ ಕಾರ್ಯ ಮಾಡುತ್ತಿದೆ. ಇವೆಲ್ಲವೂ ಕರ್ಮೇಂದ್ರಿಯಗಳು. ಗುಪ್ತ ವಾಯುವೆಂತಲೂ ಹೆಸರಿದೆ.

(೪೬) ಪಂಚಜ್ಞಾನೇಂದ್ರಿಯಗಳು:— ಇವು ಶ್ರೋತ್ರ, ತ್ವಕ್ಕು, ನೇತ್ರ ಜಿಹ್ವೆ, ಘ್ರಾಣ ಇವು ಇವೆ. ಇವುಗಳಿಗೆ ಬುದ್ಧೀಂದ್ರಿಯಗಳೆಂಬ ಹೆಸರೂ ಇವೆ. ಶ್ರೋತ್ರೇಂದ್ರಿಯ ಅಥವಾ ಶ್ರವಣೇಂದ್ರಿಯಕ್ಕೆ ಆಕಾಶ ತತ್ವವೆ ಮೂಲ ಚೈತನ್ಯವು. ಶಬ್ದವನ್ನು ಈ ಇಂದ್ರಿಯವು ಗ್ರಹಿಸುತ್ತದೆ. ತ್ವಗಿಂದ್ರಿಯಕ್ಕೆ ವಾಯು ತತ್ವವು ಮೂಲ ಚೈತನ್ಯವು. ಇದು ಸ್ಪರ್ಶನ ವಿಷಯವನುಳ್ಳದ್ದು. ನಯನೇಂದ್ರಿಯಕ್ಕೆ ಅಗ್ನಿ ತತ್ವವು ಮೂಲ ಚೈತನ್ಯವು. ಇದಕ್ಕೆ ರೂಪು ವಿಷಯವಾಗಿರುತ್ತದೆ. ಜಿಹ್ವೇಂದ್ರಿಯಕ್ಕೆ ಅಪ್ಪು ತತ್ವವು ಮೂಲ ಚೈತನ್ಯವು ಇದು ರಸ ವಿಷಯವನ್ನು ಗ್ರಹಿಸಿ ಸಿಹಿ ಕುರುಚಿಗಳನ್ನು ಗ್ರಹಿಸುವದು. ಘ್ರಾಣೇಂದ್ರಿಯಕ್ಕೆ ಪೃಥ್ವಿ ತತ್ವವು ಮೂಲ ಚೈತನ್ಯವು. ಅಲ್ಲಿ ಗಂಧ ವಿಷಯವಿದ್ದು ಅದು ಸುಗಂಧ ದುರ್ಗಂಧವನ್ನರಿಯುವದು.

(೪೭) ಪಂಚ ವಿಷಯಗಳು:— ಇವುಗಳಿಗೆ ತನ್ಮಾತ್ರೆಗಳು ಎಂಬ ಹೆಸರೂ ಇವೆ. ಇವು ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳಿರುತ್ತವೆ. ಇವುಗಳು ಅನುಕ್ರಮವಾಗಿ ಶ್ರೋತ್ರೇಂದ್ರಿಯ, ತ್ವಗಿಂದ್ರಿಯ, ನಯನೇಂದ್ರಿಯ, ಜಿಹ್ವೇಂದ್ರಿಯ, ಘ್ರಾಣೇಂದ್ರಿಯ ಇವುಗಳಿಗೆ ಸಂಬಂಧಪಡುತ್ತವೆ.

(೪೮) ಕರಣ ಚತುಷ್ಟಯಗಳು:— ಇವು ಮನ, ಬುದ್ಧಿ, ಚಿತ್ತ, ಅಹಂಕಾರ ಇವುಗಳಿರುತ್ತವೆ. ಮನಸ್ಸಿಗೆ ವಾಯುವು ಮೂಲ ಚೈತನ್ಯವು. ಮನಸ್ಸು ಸಂಕಲ್ಪ ವಿಕಲ್ಪಗಳನ್ನು ಮಾಡಿಸುತ್ತದೆ. ಬುದ್ಧಿಗೆ ಅಪ್ಪು ಮೂಲ ಚೈತನ್ಯವು. ನಿಶ್ಚೈಸುವದೇ ಅದರ ಕಾರ್ಯವು. ಚಿತ್ತಕ್ಕೆ ಪೃಥ್ವಿಯೇ ಮೂಲ ಚೈತನ್ಯವು. ಅದು ಸಂಸಾರವಿಷಯಕವಾದ ಕಾರ್ಯಗಳನ್ನು ಮಾಡಿಸುತ್ತದೆ. ಅಹಂಕಾರಕ್ಕೆ ಅಗ್ನಿಯೇ ಮೂಲ ಚೈತನ್ಯವು. ಅದು ಅಹಂಭಾವದಿಂದ ಅಹಂಕರಿಸುತ್ತಿದೆ. ಇವು ನಾಲ್ಕು ಕರಣ ಚತುಷ್ಟಯಗಳು. ಇವೆಲ್ಲವೂ ಆತ್ಮನಿಗೆ ಸಂಬಂಧಪಟ್ಟವುಗಳಿರುತ್ತವೆ.

(೪೯) ತ್ಯಾಗಾಂಗ ಭೋಗಾಂಗ ಯೋಗಾಂಗಗಳು:— ಇವು ಭಕ್ತನ ಆಚರಣೆಗಳು. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಅನುಕ್ರಮವಾಗಿ ಸಂಬಂಧಿಸಿರುತ್ತವೆ. ತ್ಯಾಗಾಂಗ, ಭೋಗಾಂಗ, ಯೋಗಾಂಗಗಳಿಂದ ಈ ಮೂರು ಶರೀರಗಳಲ್ಲಿ ಇಷ್ಟ ಪ್ರಾಣ ಭಾವಲಿಂಗಗಳು ಅನುಕ್ರಮ

ವಾಗಿ ನೆಲೆಗೊಳ್ಳುತ್ತವೆ. ಸಂಸಾರದಲ್ಲಿ ಕೆಡಕಾದುದು ಅವುದೋ ಅದನ್ನು ಬಿಡುವುದೇ ತ್ಯಾಗಾಂಗವು. ಕೆಡಕಿನ ಕಡೆಗೆ ತನುಗುಣಗಳ ಪ್ರವೃತ್ತಿ ಇರುತ್ತದೆ. ಈ ಪ್ರವೃತ್ತಿಯನ್ನು ತೊಲಗಿಸಿ ಸದಾಚಾರದ ಕಡೆಗೆ ಮನುಷ್ಯನು ಒಲಿಯಬೇಕು. ಇದೇ ಅವನಲ್ಲಿಯ ತ್ಯಾಗಾಂಗವು. ಲಿಂಗದೊಡನೆ ಮನುಷ್ಯನು ತನ್ನ ಎಲ್ಲ ಸುಖಗಳನ್ನು ಭೋಗಿಸುವದೇ ಭೋಗಾಂಗವು. ಅಂದರೆ ಅವನು ಶಿವಾರ್ಪಣ ಬುದ್ಧಿಯಿಂದ ತನ್ನ ಕೃತ್ಯಗಳನ್ನು ಮಾಡಬೇಕು. ಈ ಬಗೆಯ ಅರ್ಪಣದಿಂದ ಅವನು ಶಿವಪ್ರಸಾದವನ್ನು ಪಡೆದು ಜಗತ್ತಿನಲ್ಲಿವ್ಯವಹರಿಸುತ್ತಾನೆ. ಅವನು ಲಿಂಗ ಭೋಗೋಪಭೋಗಿ ಎಂದೆನಿಸಿಕೊಳ್ಳುತ್ತಾನೆ. ಇದೇ ಭೋಗಾಂಗವು ಮನುಷ್ಯನು ತನ್ನ ನಿಜದಲ್ಲಿ ಬೆರೆಯಲು ಅದು ಯೋಗಾಂಗವು. ತ್ಯಾಗಾಂಗ ಭೋಗಾಂಗಗಳಿಂದ ಮನುಷ್ಯನಲ್ಲಿ ಅವನ ನಿಜವು ಅಳವಡುತ್ತದೆ. ಈ ನಿಜದಲ್ಲಿ ಏಕರೂಪವಾಗಲು ಅದೇ ಯೋಗಾಂಗವೆನಿಸಿಕೊಳ್ಳುತ್ತದೆ.

(೫೦) ಇಷ್ಟಪ್ರಾಣ ಭಾವಲಿಂಗಗಳು:— ತ್ಯಾಗಾಂಗ, ಭೋಗಾಂಗ, ಯೋಗಾಂಗಗಳಿಂದ ಮನುಷ್ಯನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಪರಮಾತ್ಮನ ಕಳೆಯು ಪ್ರಜ್ವಲಿಸಹತ್ತುತ್ತದೆ. ಈ ಕಳೆಯೇ ಲಿಂಗವೆನಿಸಿಕೊಳ್ಳುತ್ತದೆ. ಇದೇ ಆ ಮೂರು ಶರೀರಗಳಲ್ಲಿ ಅನುಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬ ಹೆಸರುಗಳನ್ನು ತಾಳಿ ಪ್ರಕಟವಾಗುತ್ತದೆ. ಇಷ್ಟಲಿಂಗವು ಸತ್‌ಕ್ರಿಯಾ ಸ್ವರೂಪವುಳ್ಳದ್ದಾಗಿರುತ್ತದೆ. ಈ ಕ್ರಿಯೆಗಳಿಗೆ ಸಾಧನವಾಗಿರುವಂಥವು ಇಂದ್ರಿಯಗಳು. ಈ ಇಂದ್ರಿಯಗಳಿಗೆ ಚೈತನ್ಯವ್ವಾಗಿರುವದು ಪ್ರಾಣವು. ಈ ಪ್ರಾಣದಲ್ಲಿಯೇ ಪ್ರಾಣಲಿಂಗವು ನೆಲೆಗೊಳ್ಳುತ್ತದೆ. ಈ ಪ್ರಾಣಲಿಂಗಕ್ಕೆ ಪುನಃ ಮೂಲವಾಗಿರುವದು ಭಾವಲಿಂಗವು. ಭ್ರಮೆಗಳು ಮನುಷ್ಯನಲ್ಲಿ ನಷ್ಟವಾಗಿ ಶಿವಾನುಭವವು ನೆಲೆಗೊಳ್ಳಲು ಈ ಭಾವಲಿಂಗವು ಕಾರಣ ಶರೀರದಲಿ ಪ್ರಜ್ವಲಿಸಹತ್ತುತ್ತದೆ. ಈ ಪ್ರಕಾರ ಇಷ್ಟಲಿಂಗವು ಅಂಗದಲ್ಲಿ ಅಳವಡುತ್ತದೆ, ಪ್ರಾಣಲಿಂಗವು ಮನದಲ್ಲಿ ಅಳವಡುತ್ತದೆ, ಭಾವಲಿಂಗವು ಭಾವದಲ್ಲಿ ಅಳವಡುತ್ತವೆ. ಅಂದರೆ ಇಷ್ಟ ಲಿಂಗವು ಬಾಹ್ಯಶರೀರದಲಿ ತೋರುತ್ತವೆ. ಪ್ರಾಣಲಿಂಗವು ಪ್ರಾಣದಲ್ಲಿ ತೋರುತ್ತದೆ. ಭಾವಲಿಂಗವು ಇವೆಲ್ಲ ಪುಗಳಿಗೂ ಮೇಲಿರುವ ಕಾರಣ ಶರೀರದಲ್ಲಿ ನೆಲೆಗೊಂಡಿರುತ್ತವೆ.

(೫೧) ಭಕ್ತಿಗಳು – ಇವು ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಸುಜ್ಞಾನ ಮತ್ತು ಸಮರಸ ಎಂದು ಆರು ವಿಧವಾಗಿವೆ. ಶ್ರದ್ಧೆ ಎಂದರೆ ನಂಬಿಗೆ, ಅಥವಾ ವಿಶ್ವಾಸವು ದೃಢವಾದ ನಂಬಿಗೆಯೇ ನಿಷ್ಠೆಯಾಗಿದೆ. ವಿಶ್ವಾಸವು ಬಲಿಯಲು ನಿಷ್ಠೆ ಎಂದೆನಿಸಿಕೊಳ್ಳುತ್ತದೆ. ವಿಶ್ವಾಸವುಳ್ಳವನೇ ಭಕ್ತಸ್ಥಲದವನು. ನಿಷ್ಠೆಯುಳ್ಳವನು ಮಹೇಶ್ವರಸ್ಥಲದವನು. ಇವೆರಡೂ ಸ್ಥೂಲ ಶರೀರಕ್ಕೆ ಸಂಬಂಧಿಸಿವೆ. ಮನಸ್ಸಿಗೆ ಸಂಬಂಧಿಸಿದುದು ಅವಧಾನ ಭಕ್ತಿಯು. ಅವಧಾನವೆಂದರೆ ಮನಸ್ಸಿನ ಏಕಾಗ್ರತೆಯು. ಇದು ಪ್ರಸಾದಿಸ್ಥಲಕ್ಕೆ ಸಂಬಂಧಿಸಿದುದು. ಮನಸ್ಸಿನಲ್ಲಿ ಏಕಾಗ್ರತೆಯುಂಟಾಗಲು ಅಂತರಂಗದ ಕ್ರಿಯೆಗಳನ್ನು ಸರಿಯಾಗಿ ಜರಗಿಸುವ ಯೋಗ್ಯತೆಯುಂಟಾಗುವದು. ಜೀವನ ಈ ಸ್ಥಿತಿಯೇ ಅನುಭಾವ ಭಕ್ತಿಯು. ಇದು ಪ್ರಾಣಲಿಂಗಿಗೆ ಸಂಬಂಧಿಸಿದುದು. ಇವನಲ್ಲಿ ಅಂತರಂಗ ಬಹಿರಂಗವೆರಡೂ ಪರಸ್ಪರತ್ವವನ್ನು ಹೊಂದಿ ಕಾರ್ಯ ಮಾಡುತ್ತವೆ. ಅವಧಾನ ಭಕ್ತಿ ಮತ್ತು ಅನುಭಾವ ಭಕ್ತಿ ಇವೆರಡೂ ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿದವು. ಸುಜ್ಞಾನಭಕ್ತಿ ಮತ್ತು ಸಮರಸಭಕ್ತಿಗಳು ಕಾರಣಶರೀರಕ್ಕೆ ಸಂಬಂಧಿಸಿದವು. ಇವುಗಳಲ್ಲಿ ಸುಜ್ಞಾನ ಭಕ್ತಿಯು ಶರಣಸ್ಥಲಕ್ಕೆ ಸಂಬಂಧಿಸಿರುತ್ತದೆ. ಕಾರ್ಯಗಳ ರೀತಿ, ಅವುಗಳ ಮರ್ಮ ಅಥವಾ ಹೆದವನ್ನು ಅರಿತು ಮಾಡುವದೇ ಸುಜ್ಞಾನ ಭಕ್ತಿ ಎನಿಸಿಕೊಳ್ಳುತ್ತದೆ. ಈ ಭಕ್ತಿಯುಳ್ಳವನು ಪೂರ್ಣ ಅನುಭವವನ್ನು ಹೊಂದಿದವನಿರುತ್ತಾನೆ. ಇವನಲ್ಲಿ ಕ್ರಿಯಾಜ್ಞಾನಗಳ ಭೇದಉಳಿಯುವದಿಲ್ಲ. ಸಮರಸಭಕ್ತಿಯು ಐಕ್ಯಸ್ಥಲಕ್ಕೆ ಸಂಬಂಧಿಸಿದುದು. ಇದು ಮನುಷ್ಯನ ಎಲ್ಲ ಶರೀರಗಳಲ್ಲಿ ಉಂಟಾಗುವ ಎಲ್ಲತರದ ಅನುಭವಗಳಲ್ಲಿ ಸಾಮರಸ್ಯತೆಯನ್ನುಂಟು ಮಾಡುತ್ತದೆ.

(೫೨) ಹಸ್ತಗಳು— ಇವು ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ ಎಂದು ಆರು ಇರುತ್ತವೆ. ಸುಚಿತ್ತವು ಸಂಸಾರ ಲೋಲುಪತೆಯನ್ನು ದೂರಮಾಡಿ ವಿಶ್ವಬಂಧುತ್ವಭಾವವನ್ನುಂಟು ಮಾಡುತ್ತದೆ. ಇದು ನೈತಿಕಾಚಾರಕ್ಕೆ ಕಾರಣವಾದುದು. ಸುಬುದ್ಧಿಯು ಮನಸ್ಸಿನ ಚಾಂಚಲ್ಯವನ್ನು ಹೋಗಲಾಡಿಸಿ ತಿಳುವಳಿಕೆಯನ್ನು ಹುಟ್ಟಿಸುವದು. ನಿರಹಂಕಾರವು ಅಹಂಭಾವವನ್ನು ಹೋಗಲಾಡಿಸಿ ಅರ್ಪಣ ಬುದ್ಧಿಯಿಂದ ಆಚರಿಸುವಂತೆ ಮಾಡುವದು. ಸುಮನವು

ಶುದ್ಧಾಂತಃಕರಣವನ್ನುಂಟು ಮಾಡುತ್ತದೆ. ಸುಜ್ಞಾನವು ಇಂದ್ರಿಯಗಳ ದುಷ್ಪ್ರವೃತ್ತಿಗಳನ್ನು ದೂರಮಾಡುತ್ತದೆ. ಲಿಂಗಪ್ರಸಾದವಾಗಿ ಲಿಂಗ ಸಂಸಾರಿಯಾಗಿ ಆಚರಿಸುವಂತೆ ಮಾಡುತ್ತದೆ. ಸದ್ಭಾವವು ಲಿಂಗದಲ್ಲಿ ತಾ ಕೂಡಿ ತನ್ನಲ್ಲಿ ಲಿಂಗವು ಕೂಡಿ ತಾನು ಮತ್ತು ಲಿಂಗ ಎಂಬ ಉಭಯಭಾವವಳಿದು ತಾನು ತಾನಾಗಿರುವಂತೆ ಮಾಡುತ್ತದೆ. ಇವೆಲ್ಲವು ಮನುಷ್ಯನಿಗೆ ಹಸ್ತಗಳಂತೆ ಇರುತ್ತವೆ. ಅಂದರೆ ಇವುಗಳ ಸಹಾಯದಿಂದಲೇ ಅವನು ಆಚರಿಸಿ ಆರು ಸ್ಥಲಗಳ ಪ್ರಕಾರ ಪ್ರಗತಿಯನ್ನು ಹೊಂದುತ್ತಾ ಹೋಗುತ್ತಾನೆ.

(೫೩) ಅಂಗಸ್ಥಲಗಳು – ಇವು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದಿರುತ್ತವೆ. ಇವೇ ಮುಖ್ಯ ಷಟ್‌ಸ್ಥಲ ವಿಭೇದಗಳು. ಭಕ್ತನು ವಿಶ್ವಾಸವುಳ್ಳವನು. ನೀತಿವಂತನು, ಸದಾಚಾರಿಯು. ಮಹೇಶ್ವರನು ದೃಢಚಿತ್ತನು, ಶೂರನು, ಹಿಡಿದುದನ್ನು ಬಿಡುವವನಲ್ಲ, ವ್ರತನಿಷ್ಠನು, ಧೈರ್ಯವಂತನು, ಏಕಲಿಂಗ ನಿಷ್ಠಾಪರನು, ಸತ್‌ಶೀಲನು, ಅನ್ಯಾಯವನ್ನು ನಿಗ್ರಹಿಸುವವನು, ಸಾಮರ್ಥ್ಯವಂತನು. ಕಷ್ಟಗಳನ್ನು ಲೆಕ್ಕಿಸುವವನಲ್ಲ. ಪ್ರಸಾದಿಯು ಆತ್ಮಾರ್ಪಣ ಭಾವದಿಂದ ವರ್ತಿಸುವವನು, ನಿಷ್ಠಾವಂತ ಕರ್ಮಿಯು, ಏಕಾಗ್ರಚಿತ್ತನು, ಅಹಂಕಾರವಿರಹಿತನು, ತಾನೆಂಬುದನ್ನು ಬಿಟ್ಟವನು. ಪ್ರಾಣಲಿಂಗಿಯು ಇಂದ್ರಿಯಗಳನ್ನು ಅಂಕಿತದಲ್ಲಿಟ್ಟುಕೊಂಡವನು, ಲಿಂಗದಲ್ಲಿ ಆಸಕ್ತಿಯುಳ್ಳವನು, ಲಿಂಗದೊಡನೆ ಆಚರಿಸುವವನು, ಪ್ರಾಣವೇ ಲಿಂಗವಾಗಿರುವವನು. ಶರಣನು ಶಿವಾನುಭವವನ್ನು ಹೊಂದಿದವನು, ಲಿಂಗದ ಅರಿವುಳ್ಳವನು. ಲಿಂಗದ ಪ್ರಕಾಶದಲ್ಲಿಯೇ ಆಚರಿಸುವವನು, ವಿಶ್ವಕುಟುಂಬಿಯಾಗಿರುವವನು, ತನ್ನದೆಂಬುದನ್ನು ಸಂಪೂರ್ಣ ತೊರೆದವನು, ವಿನಯ ಪೂರ್ಣನು, ಶರಣು ಭಾವವುಳ್ಳವನು ಐಕ್ಯನಲ್ಲಿ ಅವತರದ ಭೇದಭಾವವು ಇರುವದಿಲ್ಲ, ತಾನೂ, ತನ್ನ ಕ್ರಿಯೆಗಳೂ, ಜಗತ್ತೂ ಇವುಗಳಲ್ಲೆಲ್ಲ ಸಾಮರಸ್ಯ ಭಾವವುಳ್ಳವನಾಗಿರುತ್ತಾನೆ. ಅವನು ಮನುಷ್ಯನ ಶ್ರೇಷ್ಠತ್ವದ ಪರಮಾವಧಿ ಸ್ಥಿತಿಯನ್ನು ಹೊಂದಿರುತ್ತಾನೆ. ಭಕ್ತನಿಗೆ ಕ್ರಿಯೆ, ಮಹೇಶ್ವರನಿಗೆ ನಿಶ್ಚಯವು, ಪ್ರಸಾದಿಗೆ ಅರ್ಪಣವು, ಪ್ರಾಣಲಿಂಗಿಗೆ ಯೋಗವು, ಶರಣನಿಗೆ ನಿಬ್ಬೆರಗು, ಐಕ್ಯನಿಗೆ ನಿರ್ಲೇಪವೆಂದು ಬೇರೊಂದು ವಿಧವಾಗಿ ಹೇಳಲ್ಪಡುತ್ತದೆ. ಭಕ್ತನಿಗೆ ಕಿಂಕರತ್ವವು, ಮಹೇಶ್ವರನಿಗೆ ಸಾಂಸಾರ ವಿಚಾರವು, ಪ್ರಸಾ

ದಿಗೆ ತನುಗುಣಲೋಪವು, ಪ್ರಾಣಲಿಂಗಿಗೆ ಅಂತರ್ಲಕ್ಷವು, ಶರಣನಿಗೆ ನಿಸ್ಸಂಗತ್ವವು, ಐಕ್ಯಂಗೆ ಬಯಲು ಎಂತಲೂ ಹೇಳಬಹುದು. ಷಟ್ ಸ್ಥಲ ಶಾಸ್ತ್ರದಲ್ಲಿ ಈ ಸ್ಥಲಗಳ ವಿಷಯವಾಗಿ ವಿಸ್ತೃತ ವಿವೇಚನೆಗಳಿರುತ್ತವೆ.

(೫೪) ಉಪಾಂಗಗಳು:— ಇವು ಭಕ್ತಿ, ಕರ್ಮಕ್ಷಯ, ಬುದ್ಧಿ, ವಿಚಾರ, ದರ್ಪಸಂಕ್ಷಯ, ಸಮ್ಯಜ್ಞಾನ ಎಂದು ಆರು ಇರುತ್ತವೆ. ಭಕ್ತಿ ಮತ್ತು ಕರ್ಮಕ್ಷಯ ಇವು ಸ್ಥೂಲ ಶರೀರಕ್ಕೆ ಸಂಬಂಧವಾದವುಗಳು. ಸೂಕ್ಷ್ಮ ಶರೀರಕ್ಕೆ ಸಂಬಂಧವಾದವುಗಳು ಬುದ್ಧಿ ಮತ್ತು ವಿಚಾರ. ಮತ್ತ ಕಾರಣಶರೀರಕ್ಕೆ ಸಂಬಂಧವಾದವುಗಳು ದರ್ಪಸಂಕ್ಷಯ ಮತ್ತು ಸಮ್ಯಜ್ಞಾನ. ಇವು ಆರು ಉಪಾಂಗಗಳು. ಇವು ವಚನಶಾಸ್ತ್ರದಲ್ಲಿ ಬಹು ಕ್ವಚಿತ್ತಾಗಿ ಉಲ್ಲೇಖಿಸಲ್ಪಡುತ್ತವೆ. ಆದರೆ ಕೆಲವು ಆಗಮ ಗ್ರಂಥಗಳಲ್ಲಿ ಬರುವದುಂಟು.

(೫೫) ಅಂಗಗಳು:— ಇವು ಸರ್ವಜ್ಞತಾ, ತೃಪ್ತಿ, ಅನಾದಿಬೋಧ, ಸ್ವತಂತ್ರತಾ, ಅಲುಪ್ತಾಶಕ್ತಿ, ಅನಂತಶಕ್ತಿ ಎಂದು ಆರು ಇವೆ. ಇವು ಮೇಲೆ ಹೇಳಿದ ಉಪಾಂಗಗಳಿಂದ ಆಯಾ ಸ್ಥಲಗಳಲ್ಲಿ ಆಗುವ ಪರಿಣಾಮಗಳೆಂದು ಹೇಳಬಹುದು. ಇವಾದರೂ ವಚನಶಾಸ್ತ್ರ ಗ್ರಂಥಗಳಲ್ಲಿ ಕ್ವಚಿತ್ತಾಗಿ ಬರುತ್ತವೆ. ಆದರೆ ಕೆಲವು ಆಗಮಗ್ರಂಥಗಳಲ್ಲಿ ಇವು ಉಲ್ಲೇಖಿಸಲ್ಪಡುವದುಂಟು. ಭಕ್ತಿಯ ಮೂಲಕ ಸರ್ವಜ್ಞತೆಯು, ಕರ್ಮಕ್ಷಯದ ಮೂಲಕ ಅನಾದಿ ಬೋಧವು, ವಿಚಾರದ ಮೂಲಕ ಸ್ವತಂತ್ರತೆಯು, ದರ್ಪ ಸಂಕ್ಷಯದ ಮೂಲಕ ಅಲುಪ್ತಾಶಕ್ತಿಯು, ಸಮ್ಯಜ್ಞಾನದ ಮೂಲಕ ಅನಂತಶಕ್ತಿಯು, ಮನುಷ್ಯನಲ್ಲಿ ಅಳವಡುತ್ತವೆಂಬ ಭಾವವು ಇವುಗಳಲ್ಲಿದೆ.

(೫೬) ಷಡ್ಲಿಂಗಗಳು:— ಇವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದಿವೆ. ಇವು ಅನುಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಇವುಗಳಿಗೆ ಸಂಬಂಧಪಡುತ್ತವೆ. ಅಂದರೆ ಈ ಆರು ಸ್ಥಲಗಳಲ್ಲಿ ಆಯಾ ಲಿಂಗಗಳು ಮನುಷ್ಯನಲ್ಲಿ ಅಳವಡುತ್ತವೆ. ಭಕ್ತಸ್ಥಲದಲ್ಲಿ ಶ್ರದ್ಧಾ ಭಕ್ತಿಯ ಮೂಲಕ ಆಚಾರಲಿಂಗವಳವಡುತ್ತದೆ. ಸ್ಥೈತಿಕ ಉನ್ನತಿಯೇ ಈ

ಆಚಾರಲಿಂಗವಾಗಿರುತ್ತದೆ. ಆಚಾರಲಿಂಗವು ನಿಷ್ಠೆಯಿಂದ ಬಲಪಡಲು ಅದು ಮಹೇಶ್ವರ ಸ್ಥಲದಲ್ಲಿ ಗುರುಲಿಂಗವೆನಿಸಿಕೊಳ್ಳುತ್ತಿದೆ. ಅವಧಾನ ಭಕ್ತಿಯಿಂದ ಲಿಂಗದಲ್ಲಿ ಮನ ಮಗ್ನವಾಗಲು ಹೃದಯದಲ್ಲಿ ಶಿವಲಿಂಗವು ತೋರುವದು. ವಂದೆ ಆ ಲಿಂಗದೊಡನೆ ವ್ಯವಹರಿಸಲಾಗಿ ಅದು ಚೈತನ್ಯಾತ್ಮಕವಾದ ಜಂಗಮಲಿಂಗವು. ಮನುಷ್ಯನಲ್ಲೆಲ್ಲ ತಲೆದೋರುವದು. ಶರಣನಲ್ಲಿ ಪ್ರಸಾದಲಿಂಗವಿರುತ್ತದೆ. ಮತ್ತು ಐಕ್ಯನಲ್ಲಿ ಮಹಾಲಿಂಗವಿರುತ್ತವೆ. ಮನುಷ್ಯನಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಭಾವಗಳಿರುತ್ತವೆ. ಇವುಗಳಿಂದಲೇ ಮನುಷ್ಯನ ಕ್ರಿಯೆಗಳು ನಡೆಯುತ್ತವೆ. ಲಿಂಗವಶದಿಂದ ಆಚರಿಸುವ ಮನುಷ್ಯನಲ್ಲಿ ಚಿತ್ತಕ್ಕೆ ಆಚಾರಲಿಂಗವು. ಬುದ್ಧಿಗೆ ಗುರುಲಿಂಗವು, ಅಹಂಕಾರಕ್ಕೆ ಶಿವಲಿಂಗವು, ಮನಕ್ಕೆ ಜಂಗಮಲಿಂಗವು, ಜ್ಞಾನಕ್ಕೆ ಪ್ರಸಾದಲಿಂಗವು, ಭಾವಕ್ಕೆ ಮಹಾಲಿಂಗವು ಸಂಬಂಧಪಡುತ್ತವೆ. ಆವುದಾನೊಂದು ಕ್ರಿಯೆಯನ್ನು ಮಾಡುವಲ್ಲಿ, ಮನುಷ್ಯನು ಮೊದಲು ಅದಕ್ಕೆ ಎಳಿಸಲ್ಪಡುವನು, ಆಮೇಲೆ ಅದಕ್ಕೆ ಮೋಹಿಸಲ್ಪಡುವನು, ಆಮೇಲೆ ಅದರಲ್ಲಿ ಕೂಡುವನು, ಕೂಡಿದಬಳಿಕ ಅದರಲ್ಲಿ ಸುಖ ಪಡುವನು, ಸುಖಪಡೆದು ಪರಿಣಾಮತೆಯನ್ನು ಹೊಂದುವನು, ಆಮೇಲೆ ಆ ವಿಷಯದಲ್ಲಿ ಏಕಾಕಾರಹೊಂದುವನು, ಹೀಗೆ ಕ್ರಮವಿದೆ. ಈ ಕಾರ್ಯಗಳೆಲ್ಲ ಆಯಾ ಲಿಂಗಗಳಲ್ಲಿ ಸಂಬಂಧಪಡುತ್ತವೆ. ಎಳಿಸಲ್ಪಡುವದು ಆಚಾರಲಿಂಗದ ವಿಷಯ. ಎಳಿಸಿ ಮೋಹಿಸುವದು ಗುರುಲಿಂಗವಿಷಯ. ಮೋಹಿಸಿ ಕೂಡುವದು ಶಿವಲಿಂಗ ವಿಷಯ. ಕೂಡಿ ಸುಖಬಡುವದು ಜಂಗಮಲಿಂಗವಿಷಯ. ಸುಖಬಡೆದು ಪರಿಣಾಮಿಸುವದು ಪ್ರಸಾದ ಲಿಂಗ ವಿಷಯ. ಪರಿಣಾಮಿಸಿ ಏಕಾಕಾರ ಹೊಂದುವದು ಮಹಾಲಿಂಗ ವಿಷಯ. ಈಡಾ ಪಿಂಗಳನಾಡಿಯ ದೆಸೆಯಿಂದ ಶರೀರದಲ್ಲಿ ಚೈತನ್ಯ ಉಂಟಾಗುವದರಿಂದ ನಾಸಿಕಕ್ಕೆ ಆಚಾರಲಿಂಗವು. ಗುರುವು ಮಂತ್ರ ಮೂರ್ತಿಯಾಗಿ ಭಕ್ತನಲ್ಲಿ ನೆಲೆಗೊಳ್ಳುತ್ತಾನೆ. ಈ ಮಂತ್ರವು ಜಿಹ್ವೆಗೆ ಸಂಬಂಧಪಡುವದರಿಂದ ಅದು ಗುರುಲಿಂಗವು. ಸ್ವಯಂ ಪ್ರಕಾಶವು ಶಿವನಾಗಿದ್ದು ಅದು ನೇತ್ರದಲ್ಲಿ ನೆಲಿಸಿರುವದರಿಂದ ನೇತ್ರಕ್ಕೆ ಶಿವಲಿಂಗವು. ತ್ವಕ್ಕು ಸರ್ವಾಂಗದಲ್ಲಿರುವದರಿಂದ ಅದರಲ್ಲಿ ಸರ್ವ ವ್ಯಾಪಿಯಾದ ಜಂಗಮಲಿಂಗವಿದೆ. ಶರಣನಿಗೆ ಮಹಾನಾದವೇ ಪ್ರಸಾದವಾದ ಕಾರಣ ಅದು ಶ್ರೋತ್ರಕ್ಕೆ ಸಲ್ಲುವ ಕಾರಣ ಶ್ರೋತ್ರದಲ್ಲಿ ಪ್ರಸಾದಲಿಂಗ

ಎರುತ್ತದೆ. ಅತ್ಮನಲ್ಲಿ ಮಹಾಲಿಂಗವಿರುತ್ತದೆ. ಈಗೆ ಷಡ್ಲಿಂಗಗಳು ಮನುಷ್ಯನ ಶರೀರ ಮತ್ತು ಕ್ರಿಯೆಗಳಲ್ಲಿ ಅನೇಕ ವಿಧವಾಗಿ ತಲೆಪೋರುತ್ತವೆ.

(೫೭) ತ್ರಿವಿಧ ಆಚಾರಲಿಂಗಃ— ಇವು ಸದಾಚಾರ, ನಿಯತಾಚಾರ, ಗಣಾಚಾರ ಎಂದಿವೆ. ಎಲ್ಲ ಜನರು ಅಹುದೆಂಬುದೇ ಸದಾಚಾರವೆಂದು ವಚನಕಾರರ ವ್ಯಾಖ್ಯೆ ಇದೆ. ಕೆಲವೊಂದು ಉದ್ದೇಶ ಅಥವಾ ಧ್ಯೇಯವನ್ನಿಟ್ಟುಕೊಂಡು ಮಾಡುವದು ನಿಯತಾಚಾರವಾಗಿದೆ. ಕೈಕೊಂಡ ಕಾರ್ಯದಲ್ಲಿ ಎಷ್ಟು ಬಿಕ್ಕಟ್ಟುಗಳು ಬಂದರೂ ಕೂಡ ಅವುಗಳನ್ನು ಎದುರಿಸಿ ಧೈರ್ಯದಿಂದ ಕಾರ್ಯ ಮಾಡುವದು ಗಣಾಚಾರವು. ಗಣಾಚಾರದಲ್ಲಿ ಮನುಷ್ಯನು ಅವಶ್ಯವಿದ್ದಲ್ಲಿ ವಿರೋಧಿಗಳನ್ನು ಪ್ರತಿಭಟಿಸಲು ಸಿದ್ಧನಾಗಿರಬೇಕು. ಪ್ರಸಂಗ ಬಂದರೆ ತನ್ನ ಪ್ರಾಣವನ್ನು ಕೊಡಲೂ ಸಿದ್ಧನಾಗಿರಬೇಕು.

(೫೮) ತ್ರಿವಿಧ ಗುರುಲಿಂಗ:— ಇವು ದೀಕ್ಷೆ, ಶಿಕ್ಷೆ, ಅನುಭಾವ ಎಂಬಿವೆ. ಆಚರಿಸುವಲ್ಲಿ ತಿಳಿದವರಿಂದ ಮೊದಲು ಹೇಳಿಸಿಕೊಳ್ಳಬೇಕು. ಇದು ದೀಕ್ಷೆ ಎನಿಸುವದು. ಹೀಗೆ ಹೇಳಿಸಿಕೊಂಡ ಬಳಿಕ ಅದನ್ನು ಮನನ ಮಾಡಬೇಕು. ಇದು ಶಿಕ್ಷೆ ಎನಿಸುವದು. ಮನನ ಮಾಡಿಕೊಂಡ ಬಳಿಕ ಅದರ ಜ್ಞಾನವು ಅವನಿಗೆ ಆಗುವದು. ಇದು ಅನುಭಾವವು.

(೫೯) ತ್ರಿವಿಧ ಶಿವಲಿಂಗಃ— ಇವು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗವಿರುತ್ತವೆ. ಕೆಡಕನ್ನು ತ್ಯಜಿಸಿ ಉತ್ತಮವಾದುದು ಆವುದೋ ಅದರಂತೆ ವರ್ತಿಸುವದೇ ಇಷ್ಟಲಿಂಗವಾಗಿರುತ್ತದೆ. ಇಷ್ಟಲಿಂಗಧಾರಣವೇ ಹೀಗೆ ವರ್ತಿಸಲು ಮನುಷ್ಯನಿಗೆ ಒಂದು ಬಗೆಯ ಅಡುವೆಂದು ಹೇಳಬಹುದು. ಪ್ರಾಣಲಿಂಗದಲ್ಲಿ ತನುಗುಣಗಳನ್ನು ಹೋಗಲಾಡಿಸಿಕೊಂಡು ಆತ್ಮಾರ್ಪಣದಿಂದ ತನ್ನಲ್ಲಿ ಲಿಂಗಗುಣಗಳನ್ನು ಬರಮಾಡಿಕೊಳ್ಳಬೇಕು. ಭಾವಲಿಂಗದಲ್ಲಿ ಲಿಂಗವಲ್ಲದೆ ಬೇರೊಂದಾವುದನ್ನೂ ಭಾವಿಸದೆ ಇರುವದು.

(೬೦) ತ್ರಿವಿಧ ಜಂಗಮಲಿಂಗಃ— ಇವು ಸ್ವಯಂ ಚರ ಪರವೆಂದಿರುತ್ತವೆ. ಸ್ವಯಂ ಎಂದರೆ ತಾನು. ಇಲ್ಲಿ ಭಕ್ತನು ಶ್ರೇಷ್ಠತರಗತಿಯುಳ್ಳವನಾಗಿ ತಾನೇ ತಾನಾಗಿ ಆಚರಿಸುತ್ತಾನೆ. ಚರವೆಂದರೆ ತನಗೆ

ಎಂದಡೆ ಸುಖಪ್ರಿಯಂ ಬೊಮ್ಮಯ್ಯನಂ ನೋಡಿ
ನಿಂದಂ ಮಾತಾಡಿದಂ ಕಟಕಿಗಳನುರೆ ಕೂಡಿ
ಬಗೆವೆಚ್ಚಿ ಜೋಳಮುಂ ನುಡಿಯಿಸಿದೆನೆಂದೆಂಬ
ಜಗಪತಿಯ ಆನೆಯಂ ಗಂಡುಗೆಡಿಸಿದೆನೆಂಬ
ಗರ್ವವೆಮ್ಮೊಡನೇಕೆ ಬಾಹೂರಬೊಮ್ಮಯ್ಯ
ಉರ್ವಿನಿಂಯಾಡುವಡೆ ಪೇಳ್ದಪೇಂ ಕೇಳಯ್ಯ

ಎನುತೆ ತನ್ನಯ ಕೆಯ್ಯೊಳಳ್ತಿಯಿಂ ಪಿಡಿದಿರ್ದ
ಮನಸಿಜನ ಕೆಯ್ಯಿಂದ ಸೆಳೆದುಕೊಂಡಂತಿರ್ದ
ಇಕ್ಷುದಂಡಮನಲ್ಲಿ ಹರುಷದಿಂದಂ ನೋಡಿ
ತ್ರಕ್ಷನಣುಗನೆನಿಪ್ಪಬೊಮ್ಮಯ್ಯನಂ ನೋಡಿ
ಈ ಕಬ್ಬನೀ ನಂದಿಗಾರೈಸೆ ಕೂಡೆ ಬಳಿಕ
ಈ ಕೇಳಿಕೆಯನಳಿದು ಮುಳಿಸು ತಿರುಗುಗು ಬಳಿಕ
ನಿನ್ನ ಸಾಮರ್ಥ್ಯಮುಂ ನೋಡುವೆಂ ನಾನೆಂದು
ನಿನ್ನೊಬ್ಬಟೆಯ ಭಕ್ತಿಯಂ ಕಾಣ್ಬೆ ನಾನೆಂದು
ಎನಲಿಕ್ಷುದಂಡಮಂ ' ಕಳಿದುಕೊಂಡಂ ಧೀರ
ನನುಮಾನವಿಲ್ಲದಪ್ರತಿಮನುನ್ನತ ವೀರ
ನಲ್ಲಿ ನಂದಿಯ ಮುಂದೆ ಕುಳ್ಳಿರುತ್ತಮ್ಮಮ್ಮ
ಬಲ್ಲಿದಂ ಭಾಷೆಗುಡುತಿರ್ದನೊಲಿದಮ್ಮಮ್ಮ
ಒಂದು ಕಬ್ಬೈದುವದ ನಂದೀಶ ದೇವಂಗೆ
ಮುಂದರಂ ಕೈಲಾಸಮೇರುಸಮಕಾಯಂಗೆ
ಇಲ್ಲಿ ಕಲ್ಯಾಣದ ಬಹಿರ್ನಂದನದೊಳಗೆ ಬೆಳೆದ
ಎಲ್ಲ ರಸಪ್ರಸರಮಧುರಂಗಳಂ ತಪೆ ತಳಿದ
ಕಬ್ಬಿನಿತುಮಂ ತರಿಸಿ ಆರೈಸಲಿಕ್ಕಿಸುವೆ
ಉರ್ವಿ ಬೆರಗಾಗಲೆನ್ನೊಡನೊಡನೆ ನಡೆಯಿಸುವೆ
ಈವೂರ ಕೆರೆಯಗ್ಗಣಿಯನೊಲಿದು ಕುಡಿಯಿಸುವೆ
ದೇವಾಲಯಮುಮುಂ ಪ್ರದಕ್ಷಿಣಂ ಬರಿಯಿಸುವೆ
ಮುಂತೆ ಹಳೆಯಂತೆ ಹರನಿಳಯದೊಳು ಕುಳ್ಳಿರಿಸೆ
ಇಂತಿದಂ ಜನವೆಲ್ಲ ನೋಡುತಿರೆ ಮಾಡಿದಪೆ
ಮಾಡದೊಡೆ ಮರ್ತ್ಯದೊಳಗಿಹೆನೆಂಬ ಮಾತಿಲ್ಲ

ಮಾಡುವೆಂ ಮಾಡುವೆಂ ಮಾಡುವೆಂ ಪುಸಿಯಲ್ಲ
ಅನಘರಿಂಪುದೀಶ್ವರನ ಭಕ್ತಾಳಿ ಭಾಷೆಯಂ
ಶಿವನೊಲಿದು ಕರುಣಿಸುವ ಸಾಮರ್ಥ್ಯರಾಶಿಯಂ

ಎಂದು ನುಡಿವುತ್ತಮಿರೆ ತಮತಮಗೆ ಹಂತಂದು
ಬಂದು ಪಟ್ಟಣದ ಹೊರವೊಳಲ ಬನದೊಳು ನಿಂದು
ವೊಂಗೊಟ್ಟ ಕಬ್ಬನಿತುವಂ ಜೇಣಿಯಂ ಕೊಂಡು
ಅಂಗವಿಸಿಯಡುಕ ತೊಡಗಿತ್ತಲ್ಲಿ ಸಾಲ್ಗೊಂಡು
ಬರಲಲ್ಲಿ ಹರನ ರಾಜಾಂಗಣದೊಳಗೆ ನೋಡೆ
ತರದಿಂದ ಸನ್ನ ತಟ್ಟಿಗಳ ಹಾಸುತೆ ಕೂಡೆ
ತೊಳಗುವದಡೆಂಬಂಗಳಂ ಮೇಗೆ ಮಿಗೆ ಹಾಸಿ
ಅಳಗಳರಸುವ ಸುಪ್ರಸವಕುಲಮುಮುಂ ಹಾಸಿ
ಇಕ್ಷುದಂಡವ ಮೊದಲತುದಿಗಳಂ ಕಳೆವುತಂ
ಪ್ರಕ್ಷಾಲನಂ ಮಾಡಿ ತಂದು ತಂದಿಳುಪುತಂ
ಇರಲೊಂದೆರಳ್ಬಿಟ್ಟವಂತಿ ಕಬ್ಬುಗಳೊಟ್ಟಿ
ಕರುಹೋದಯಂ ಬಂದು ಪೂರ್ವಾದ್ರಿಯಂ ಮುಟ್ಟಿ
ನಂದೀಶ್ವರಂ ಕಬ್ಬನಾರೈಸುವಂದಮಂ
ಇಂದು ನೋಡುವೆನಿಳೆಗೆ ಪೊಸತೆನಿಪ ಛಂದಮಂ
ಎಂಬಂತೆ ರವಿಯುದಯವಾಗುತಿರೆ ಬೆಳಗುತಂ
ಇಂಬಿನಿಂ ಬಾಹೂರ ಬೊಮ್ಮಯ್ಯನದ್ಭುತಂ
ತ್ರಿಪುರಾಂತಕಪ್ರಭುವಿನಲ್ಲಿ ನೇಮಂ ಮಾಡಿ
ವಿಪುಳವರಕಾರುಣ್ಯವರಶಂಭುವಂ ನೋಡಿ

ದೇವ ನಿಶ್ಚಿಂತಸಜ್ಜನಜನಾಧೀನನೇ
ದೇವ ನಿಜಪದಭಕ್ತಿಯುಕ್ತರಾಧೀನನೇ
ದೇವ ಶಿವಯೋಗಿಗಳ ಮಾನಸಧ್ಯಾನವೇ
ದೇವ ಸದ್ಭಕ್ತಕುಲಹೃತ್ಸಮಲಧಾನುವೇ
ದೇವ ನಿರ್ಗುಣತತ್ವಸುಗುಣಸ್ವರೂಪನೇ
ದೇವ ಭೀಕರತರಪಿನಾಕ್ಯೇಕಚಾಪನೇ
ದೇವ ತ್ರಿಶೂಲ ಡಮರುಗ ವಿಮಲ ಹಸ್ತನೇ
ದೇವ ಭಕ್ತಾವರಣಶರಣಕರಣಸ್ತನೇ

ದೇವ ಪುಣ್ಯಪ್ರಕರಸೇವಿತಪದಾಬ್ಜನೇ
ದೇವ ಮೌಲಿನ್ಯಸ್ತವಿಸ್ತರಪದಾಬ್ಜನೇ
ದೇವ ವೃಷಭೇಂದ್ರಂಗೆ ಕರುಣಿಸಿಲೆ ಶಂಕರಾ
ದೇಶ ನಂದೀಶಂಗೆ ಬೆಸಸಿಲೆ ಕೃಪಾಕರಾ
ಎಂದು ಬಿನ್ನೈಸುತಿರೆ ಶಿವನ ಸಿರಿ ಮುಡಿಯಿಂದ
ಒಂದರಲ್ಸರಿಯೆ ಕಾಣುತ್ತ ಸಂತಸವಿಂದ
ಪರಿತಂದು ಪಾದೋದಕ ಪ್ರಸಾದಂಗೊಂಡು
ತಿರುಗಿ ವೃಷಭೇಂದ್ರನಲ್ಲಿಗೆ ಬಂದು ಕೈಕೊಂಡು
ಇದೆ ರುದ್ರನಾದೇಶವವಧರಿಸು ನಂದೀಶ
ಇದೆ ಶಿವನ ಕಾರುಣ್ಯವೇಳಯ್ಯ ನಂದೀಶ
ಸಕಲಮುಂ ರಕ್ಷಿಸುವ ಶಿವಧರ್ಮಮೂರ್ತಿಯೇ
ಮಕರಧ್ವಜಾರಿಯ ಮಹಾಪುಣ್ಯಕೀರ್ತಿಯೇ
ಶಂಕರನ ದೃಷ್ಟಿನಾರಿಯ ನೇಮದಚಲಿತನೆ
ಶಂಕರನ ತೊಡೆಮಡಕ್ಕಳವಡುವ ಸನ್ನುತನೆ
ಅಸಮನಯನನ ಸರ್ವಸಾಮರ್ಥ್ಯಸನ್ನಿಭನೆ
ಮುಸುಟಿಯಾ ಚೌಂಡಂಯನ ಮನೋವಲ್ಲಭನೆ
ಬಾರಯ್ಯ ನಂದೀಶ ಬಾರಯ್ಯ ವೃಷಭೇಂದ್ರ
ಬಾರಯ್ಯ ಪುಣ್ಯಮಯ ಬಾರ ನಿರ್ಮಳಚಂದ್ರ

ಎಂಬ ನುಡಿ ವೃಷಭರಾಜನ ಚಿತ್ತದೊಳ್ಪೆರಸೆ
ತ್ರ್ಯಂಬಕಧ್ಯಾನಮುಮನೊತ್ತರಿಸುತಂಕುರಿಸೆ
ಯಳಲ್ವ ಕೆವಿಗಳನೆತ್ತಿ ಧ್ವನಿಯನಾರೈವುತಂ
ಹೊಳೆವ ಶಿವಲಿಂಗಮುಂ ನೋಡಿ ಹಾರೈಸುತಂ
ಕೆಲಕೊಮ್ಮೆ ಬಲಕೊಮ್ಮೆ ವದನಮುಂ ತಿರುಪುತಂ
ನಲವಿಂದೆ ಶಂಕರಂಗಾನತನುಮಾಗುತಂ
ಸರಸರನೆ ಹಿಂಬೆರಕನೈಯ್ತಂದು ಬೇಗದಂ
ಪೊರಮಡಲ್ಕನುವಾಗುತಂ ನಿಂದು ರಾಗದಿಂ
ಹೊಳೆವಪರಭಾಗಮುಂ ಸಂಗನತ್ತಲ್ತೋರಿ
ಬಾಗಿಲಂ ಕಳೆದು ಬೆಳೆದಂ ನೋಡಲಮ್ಮಮ್ಮ
ಮೇಗೆ ತಾರಾಪಥವ ವಿೂರುತಿರಲಮ್ಮಮ್ಮ

ಕುಣಿವುತಂ ಬಾಹೂರ ಬೊಮ್ಮಯ್ಯನೆಯ್ತಂದು
ತ್ರಿಣಯನ ಸುವಾಹನಕೆ ಮೆಯಿಕ್ಕುತಂ ನಿಂದು
ದೇವ ಆರೋಗಿಸುವುದಿಷ್ಟುದಂಡಂಗಳಂ
ದೇವ ಕೈಕೊಂಬುದೀ ಸವಿಯ ತಂಡಂಗಳಂ
ಎನಲಲ್ಲಿ ನಂದೀಶ್ವರಂ ಸುಮ್ಮನಿರುತಿರಲ್
ಮನದೊಳಗೆ ಶಿವಲಿಂಗಮುಂ ಭಾವಿಸುತ್ತಿರಲ್
ಅರಿದೆನರಿದೇಂ ದೇವ ನಿನ್ನೊಳೊಂದುತ್ತಮುಂ
ಅರಿದೆನಭವ ಪ್ರಸಾದಾಸಕ್ತಚಿತ್ತಮುಂ
ಎನುತಿಕ್ಷುವೆಲ್ಲವಂ ಲಿಂಗಾರ್ಪಿತಂ ಮಾಡೆ
ಜನವೆಲ್ಲ ಕೌತುಕವಿದೆಂದು ಭರದಿಂ ನೋಡೆ
ಬಳಿಕ ಕೈಕೊಂಡನಾ ನೆರೆದ ಕಬ್ಬೆಲ್ಲವಂ
ಇಳೆ ಬಣ್ಣಿಸುತ್ತಮಿರಲಿಕ್ಷುಗಳನೆಲ್ಲಮುಂ
ಉಶ್ವಾಸದೊಳ್ಕಾಯವಾಯ್ತು ಕಬ್ಬಿನ ರಾಶಿ
ನಿಶ್ವಾಸದೋಳ್ ತೆರಳುತಿರ್ದುದಾ ವಾರಾಶಿ

ಆಗಳಾ ಭಕ್ತರೆಲ್ಲರ್ ಕುಣಿದು ಕೊಂಡಾಡೆ
ಮೇಗೆ ದೇವರ್ಕಳೆಲ್ಲರ್ ಕೂಡೆ ನಲಿದಾಡೆ
ದೇವವಾಯವಧಾರು ಧರೆ ಬಳುಂಕದ ತೆರದಿ
ದೇವ ಉಪ್ಪರ ಉಡುಪ್ರತತಿ ಉದುರದ ತೆರದಿ
ಎಂದು ಜೋಳ್ಕೈಸುತಂ ಮುಂದೆ ಭಕ್ತಂ ನಡೆಯೆ
ಹಿಂದೆ ಬಸವಂ ಭಕ್ತನೊಡನೆ ನಲವಿಂ ನಡೆಯೆ
ಬಸವನೊಡನೊಡನೆ ಶಿವಭಕ್ತಸಂತತಿ ನಡೆಯೆ
ಎಸೆವ ಭಕ್ತರ ಹಿಂದೆ ಪುರ ಜನಂಗಳ್ ನಡೆಯೆ
ಸುರರುತ್ಸವಂಬಡೆಯೆ ಪರಡೈಸರೆಡೆಯೊಡೆಯೆ
ಶರಣತತಿಗಳ್ನಡೆಯೆ ಪರಸಮಯಿಗಳ್ಕೆಡೆಯೆ
ನಡೆದನಣುಗಂ ತಟಾಕದ ತಟಕೆ ಒಲುಮೆಯಿಂ
ಮೃಡವಾಹನಂ ಬಂದು ಮೊಗವಿಕ್ಕಿ ನಲ್ಮೆಯಿಂ
ದೇವ ನೀಂ ಕೈಕೊಂಬಡಂಬುಧಿಗಳೈಯ್ದುವವೆ
ದೇವ ನಿಮ್ಮಸುರನಾನುವ ದೇವ ಕುಲವೊಳವೆ
ತೆರೆಯುಳಿದು ಜಲವುಳಿವ ತೆರದಿಂದೆ ಕೈಕೊಂಡು

ಕೋವಿದ ಚಂದ್ರಿಕೆಗೆ ಕವಿ ಕಾಲ್ಮೊಗಂ ಮೂಡಿತೋ
ಕೈಲಾಸಗಿರಿ ಬಸವನಂಗದೊಳ್ಮೂಡಿತೋ
ಸಕಲ ಲೋಕದ ಸುಕೃತನಿಧಿ ಸೀಮೆಗೊಂಡುದೋ
ಅಕಳಂಕ ಶಿವಕೀರ್ತಿ ಮೂರ್ತಿಯುಂ ತಳೆದುದೋ
ಎಂಬಂತೆ ನಿಂದ ನಂದಿಯ ಮೂರ್ತಿಯುಂ ಕಂಡು
ಅಂಬರದೊಳಿಂಬಿಲ್ಲೆನಿಪ್ಪ ರೂಪಂ ಕಂಡು

ಬಾಹೂರ ಬೊಮ್ಮಯ್ಯನಕ್ಕರಿಂ ಮೆಯ್ಯಿಕ್ಕಿ
ಸಾಷ್ಟಾಂಗಪ್ರಣಾಮಾನಂದದಿಂ ಮೆಯ್ಯಿಕ್ಕಿ
[illegible]
[illegible]
[illegible]

ಮೆರೆವುದೆನ್ನಯ ಭಾಷೆಯಂ ಸ್ವಾಮಿ ಬಗೆಗೊಂಡು
ಎನುತವಿರಲಗ್ಗಣಿಯನಾದಂಸಿ ತಿರುಗುತಂ
ಮನಸಿಜಾರಿಯ ಭಕ್ತನೊಡನೊಡನೆ ಒದಗುತಂ
ಬಂದು ಶಿವನಿಳಯಮಂ ಬಲವರಿಸಿ ಬರಲಲ್ಲಿ
ತಂದು ಶಿವರಂಗಮುಂಟಪದೊಳಗೆ ಇರಿಸಿದಂ

ದೇವ ಮೆರೆಯಿಸಿದಕ್ಕೆ ಕರುಹವೇಳ್ವುದು ತಂದೆ
ದೇವ ಸಮ್ಮುಖವನೋಸರಿಸಿರ್ಪುದೆಲೆ ತಂದೆ
ಎನುತಡ್ಡವಾಗಿರಿಸಿ ಬಾಹೂರ ಬೊಮ್ಮಯ್ಯ
ನನಘನಪ್ರತಿಮನಾ ಬಾಹೂರ ಬೊಮ್ಮಯ್ಯ
ಆಗಲು ಸುಖಪ್ರಿಯನ ವದನಮುಂ ನೆರೆ ನೋಡಿ
ರಾಗದಿಂ ಭಕ್ತಸಂಕುಳಂ ಕೊಂಡಾಡೆ
ಪೇರ್ಮಾಡಿರಾಯನತಿ ಕೌತುಕಂಬಡುತವಿರೆ
ಕೂರ್ಮೆಯಿಂ ಶರಣತತಿ ಗುಡಿಗಟ್ಟಿ ಕುಣಿವುತಿರೆ
ಪೂಮಳೆಗಳೊಳಗೆ ದುಂದುಭಿಕುಳಧ್ವನಿಯೊಳಗೆ
ಎವಾತೊ ಬಿರುದೆತ್ತಿ ಕರೆವ ಕಹಳೆಗಳೊಳಗೆ
ಬಂದ ಪುಷ್ಪಕವನಾನಂದದಿಂದೇರುತಂ
ಇಂದುಧರ ಶರಣೆನುತೆ ಗಗನಕ್ಕೆ ಮೀರುತಂ
ಬಂದು ನಂದೀಶ್ವರನ ಬಾಗಿಲೊಳು ನಲ್ಮೆಯಿಂ
ನಿಂದು ಪುಷ್ಪಕವನಿಳದಂತಲ್ಲಿ ಒಲ್ಮೆಯಿಂ
ಸದಮಳಶಶಿಪ್ರಭೆಯನಿಳಿಕೈದ ಚರಣಕ್ಕೆ
ಉದಯಾರ್ಕಬಿಂಬಮಂ ಕರೆವ ಪದಕಮಲಕ್ಕೆ
ಹರಿಯರಸಿ ಕಾಣಲಾರದ ಪಾದಯುಗಳಕ್ಕೆ
ಶರಣತತಿ ಸ್ಪರುಶನಂ ಮಾಳ್ಪಂಘ್ರಿ ಯುಗಳಕ್ಕೆ
ಮುನಿಗಳ ಮನಂ ಬಯಸಿ ಬಾಯೊರೆವ ಚರಣಕ್ಕೆ
ಮನುಗಳಂತರ್ಧಾನದೊಳು ನೆನೆವ ಚರಣಕ್ಕೆ
ನಿತ್ಯನ ನಿರಾಶ್ರಯನ ನಿರುಪಮನ ಚರಣಕ್ಕೆ
ಅತ್ಯತಿಷ್ಠದ್ದಶಾಂಗುಲನ ಪದಕಮಲಕ್ಕೆ
ಮೆಯ್ಯಕ್ಕೆ ಸೈಗೆಡೆಯೆ ಬಾಹೂರ ಬೊಮ್ಮಯ್ಯ
ಒಯ್ಯನೆತ್ತಿದನು ಹರಿಕಮಲಜರ ಮುತ್ತಯ್ಯ

ಎತ್ತಿ ಮೂರ್ಧ್ನಿಘ್ರಾಣಮುಂ ಮಾಡಿ ಶಂಕರಂ
ಮತ್ತಲ್ಲಿ ನಂದೀಶನಂ ನೋಡಿ ಶಶಿಧರಂ

ಕೇಳು ನಂದೀಶ ಇಂತಪ್ಪ ಭಕ್ತರುಮುಂಟಿ
ಜೋಳವಂ ಧರಣಿಯೊಳಗೋ ಎನಿಸಿದವರುಂಟಿ
ಮುದ್ದಾನೆಯಂ ನಿಲಿಸಿ ಕೊಂದು ನೋಡಿದರುಂಟಿ
ಮುದವಳಿಯೆ ಮತ್ತೆ ಹರಣಂಗೊಟ್ಟರಿಂತುಂಟಿ
ಬಸವನಂ ಕಬ್ಬಿಂದೆ ತುಷ್ಟಿವಡಿಸಿದರುಂಟಿ
ಎಸೆಯಲಗ್ಗಣಿಗೊಳಿಸಿ ಬಲವರಿಸಿದವರುಂಟಿ
ಭಾಪುರೇ ಮದ್ಭಕ್ತ ಬಾಹೂರ ಬೊಮ್ಮಯ್ಯ
ಭಾಪು ಮರ್ಕುಭಾಪುರೇ ಬಾಹೂರ ಬೊಮ್ಮಯ್ಯ
ಎಂದು ಕೊಂಡಾಡುತಂ ಗಣಪದವನೊಲಿದಿತ್ತು
ಮುಂದಿರ್ದ ಪಾರ್ವತಿಗೆ ತೋರಿ ಸುಖಮುಂ ಪೊತ್ತು
ನತಜನಸುಖಾವರುಷ ಹರುಷಮಯನೊಪ್ಪಿದಂ
ಶ್ರುತಿಮುಸ್ತಕನ್ಯಸ್ತ ಚರಣತಳನೊಪ್ಪಿದಂ
ಜಲಶಯನನಯನನಮುಂಡಿತಪಾದನೊಪ್ಪಿದಂ
ಜಲಜಭವ ಪಂಚಮಶಿರೋಹಸ್ತನೊಪ್ಪಿದಂ
ಸ್ಮರಕಾಲಪುರಜಲಂಧರ ಮಥನನೊಪ್ಪಿದಂ
ಪರಮಗುರು ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ಬಾಹೂರು ಬೊಮ್ಮಿತಂದೆಯ
ನಾಹಾ ನೆರೆ ಮೆರೆದ ಶಂಭುನಿಜ ಭಕ್ತಿಯನು।
ತ್ಸಾಹದೊಳಿನಗೀಗೆ ನತ
ವ್ಯೂಹದಯಾವಾರ್ಧಿ ಹಂಪೆಯ ವಿರೂಪಾಕ್ಷಂ ॥

ತೆಲುಗು ಜೊಮ್ಮಯ್ಯನ ರಗಳೆ.

ಕಂದ ಗಿರಿಜಾ ವಲ್ಲಭನಂಬರ।
ಪುರಮಥನಂ ದೇವ ಹಂಪೆಯ ವಿರೂಪಾಕ್ಷಂ।
ಕರುಣಂ ಮಿಗೆ ನೆರೆದಂ ಸಾ।
ದರದಿಂದಂ ತೆಲುಗುಜೊಮ್ಮಿತಂದೆಯ ನಿಳೆಯೊಳ್ ॥

ಪ್ರಥಮಸ್ಥಲ.

ರಗಳೆ.

ಧರೆಗೆಸೆವ ಕಲ್ಯಾಣವೆಂಬ ಪಟ್ಟಣದೊಳಗೆ
ಹರಭಕ್ತನೋರ್ವನಿರ್ದಂ ಭಕ್ತಿ ತೊಳತೊಳಗೆ
ನಾಮಂ ತನಗೆ ಜೊಮ್ಮಿತಂದೆ ಎಂದೊಪ್ಪಿರಲ್।
ಭೀಮನಾಥಂಗತಿ ಪ್ರೇಮತರವಾಗಿರಲ್ ॥
ಮನ್ನೆಯಂ ಸಾವಂತಪತಿಭಕ್ತಿಭೂಷಣಂ।
ಅನ್ನೆಯಂ ಹೊದ್ದಬಾರದ ಸುಖನಿವೇಷಣಂ
ಏಕನಿಷ್ಠಂ ಶಿವನನಲ್ಲದೊಲ್ಲದ ಮಾನಿ
ಲೌಕಿಕವನೆಳ್ಳಿನಿತವನುಸರಿಸದಭಿಮಾನಿ
ಸತ್ಯನಚಲಂ ಮಹೋತ್ಸಾಹಿ ಕಲಿ ನಿಷ್ಠಾಖಿ
ನಿತ್ಯಲಿಂಗಾರ್ಚನಾನಿರತನಭವಪ್ರೇಮಿ
ನಿಂದೆಯಂ ಸೈರಿಸದ ನಿತ್ಯತರ ಗುರುಮೂರ್ತಿ
ಇಂದುಧರನ ಪ್ರತಾಪಾರಂಭ ವರಕೀರ್ತಿ
ಉರಿಯಂತೆ ಸಿಡಿಲಂತೆ ಶಿವದೂಷಕಾವಳಿಗೆ
ಸಿರಿಯಂತೆ ಸುಖದಂತೆ ಹರನ ಶರಣಾವಳಿಗೆ
ಭವಿಗಳಂ ಪುಳುವಿಂದೆ ಕಷ್ಟವಾಗಿಯೆ ಕಂಡು
ಶಿವಭಕ್ತರಂ ಬಂಧುಬಳಗವೆಂದೇ ಕಂಡು

ಇಂತಿರಲ್ ಭೀಮನಾಥಂ ಕನಸಿನೊಳ್ ಬಂದು
ಸಂತತಂ ವಿುಗೆ ಜಂಗಮಾಕಾರದೊಳ್ನಿಂದು

ಕಂಡೀ ಭಕ್ತನಂ ಪರೀಕ್ಷಿಸಿ ನೋಳ್ಪೆನೆಂದಿನ್ನು ಪ್ರತ್ಯಕ್ಷಂ ಕಂಡರೆ ಬಿಡುವೆ
ನಲ್ಲದೊಡೆ ದಂಡಿಸುವೆನೆಂದು ನೆನದೆಲೆ ಜೊಮ್ಮಯ್ಯ ಪುರಾಣಭಟ್ಟಂ
ಪುಸಿ ನುಡಿದುದಕ್ಕೆ ಪ್ರಮಾಣವಾವುದು ವಿಶ್ವರೂಪ ವಿಷ್ಣುಪುರಾಣವು
ನೋದಲಸತ್ಯಮೆಂದುದಕ್ಕೆ ಪ್ರತ್ಯಕ್ಷಮುಂ ಉಳಿಕೆವಾಗ್ವಿಡಂಬಮುಂ ನಮ್ಮೊ
ಡನಾಡಲಾಗದು ಸದ್ಭಕ್ತಿಯುಳ್ಳೊಡೆ ತೋರ್ಪುದೆಂದು ಪೇರ್ಮಾಡಿರಾಯಂ
ನುಡಿಯೆ ಜೊಮ್ಮಯ್ಯಂ ಕೇಳ್ದು ಎಲೆಲೆ ಮರುಳರಸೇ ಹರಭಕ್ತರೊಳ
ಸತ್ಯಮುಂಟೇ ದೂಷಕಂ ನರಕಕ್ಕಿಳೆಯಲ್ಪುಸಿ ನುಡಿ ಇಂತಿದಕ್ಕೆ ಪ್ರತ್ಯಕ್ಷ
ವೀಗಳಾ ಪೆಣನಂ ಮುಸುಂಕಿಟ್ಟು ತೆಗೆಯಲ್ಪಳುವಿನ ರಾಶಿಯಾಗದಿ
ರ್ದೊಡವನಲ್ಲ ನಾನಪರಾಧಿ ಎನ್ನಂ ಶೀಕ್ಷಿಪುದೆನಲರಸನೊಡಂ
ಬಟ್ಟು ಜೊಮ್ಮಣ್ಣಂಗೆ ಕೈಗೊಟ್ಟು ಗಳಗಳನೆ ನಡೆತಂದು ಭಕ್ತ ನೀಂ
ತೋರ್ಪುದಂ ತೋರಾ ಎನಲ್ಪರಮಶಿವನಿಷ್ಠಾ ನಿಧಿ ಓಸರಿಸದ ಭಾಷೆ
ವಂತಂ ಜೊಮ್ಮಯ್ಯನಲಗಂ ಕೇಳ್ತಿಲೆ ದೇವ ಭೀಮನಾಥ ನಿನಗೆ ಕಟ್ಟ
ದೊರೆಯನವಧಾರವಧಾರೆನ್ನ ಬಿನ್ನಪವ ಪರಸಮಯ ದ್ವೇಷದಿಂದಿಂ
ದೊಡಂ ಭಕ್ತನೆಂಬ ಗರ್ವದಿಂ ಭವಿಯ ಕೊಂದಡಂ ಪೇಳ್ದ ಪುರಾಣ
ವಪ್ಪುದಲ್ಲೆಂಬ ಸಂದೇಹದಿಂ ಮಡಿಪಿದೊಡಂ ನಿನ್ನ ಮೇಲೆ ಸ್ನೇಹ
ವಿಲ್ಲದಂ ನ್ಯಾಯದಿಂ ಪ್ರಾಣಿಯ ನೋಯಿಸಿದಡಂ ನೀನೇ ಸಾಕ್ಷಿ
ಇದೇ ದಿಬ್ಯವೆಂದು ಭಾಷೆಗೊಡುತ್ತಂ ಬಂದು ದೂಷಕನ ಪೆಣಂ ಕಾಣ
ಲಾಗದೆಂಬಂತೆ ಭೋಂಕನೆ ಪಚಡದಿಂ ಮುಸುಂಕಿಕ್ಕಿ ತೆಗೆಲಮ್ಮಮ್ಮ
ನಿಂದಕನವಯವಂ ಕಲಸಿ ಪುಸಿಯ ಪುಂಜಂ ಬಳಸಿ ಬೆಳೆದಂತೆ ನಿಂದೆಯ
ಗುಡ್ಡೆ ನಿಮಿರ್ದಂತೆ ಪಾಪದ ಬೀಜ ಒರ್ಬುಳಿಸಿದಂತೆ ದೋಷದ ಹುತ
ನೆಗೆದಂತೆ ಪುಳುವಿನ ರಾಶಿ ವಿಲಿವಿಲಿಸುತ್ತಿರದಂ ಕಂಡು ಕಣ್ಮುಚ್ಚಿಕೊಂಡು
ತೆಗೆತೆಗೆ ಎಂದು ಹೇಸಿ ಪಾಪಕ್ಕೆ ಹೇಡ್ಯೆಸಿ ಪುಳುವೆಲ್ಲಂ ಪೊರಕ್ಕೆ ಚಲ್ಲಿಸಿ
ಪರಿತಂದು ಜೊಮ್ಮಯ್ಯನ ಪದತಳಕ್ಕೆರಗಿ ನಿಮ್ಮಂ ಪರೀಕ್ಷಿಸಿದ ಪಾಪಿಗೆ
ಕರುಣಿಪುದೆಂದು ಪೇರ್ಮಾಡಿರಾಯಂ ನಿಂದು ಕೈಮುಗಿದು ನಿಶ್ಚಳ
ಭಕ್ತನಂ ಭದ್ರಾಸನದ ಮೇಲಕ್ಕೆ ಬಿಜಯಂಗೈಸಿ ಚರಣಯುಗಳಕ್ಕೆ ಇಚ್ಛಾಭ್ಯ
ಸಿರ ಪೊಂಗಳಂ ಕಾಣ್ಕೆ ಇತ್ತು ಕೊಂಡಾಡುತಿರ್ಪ ಸಮಯದೊಳ್

ಸದ್ಭಕ್ತೆ ಲಕುವಮಾದೇವಿಯರಾರಾಧಿಸಿ ಕಳುಪಿದ ಪೊನ್ನ ಪೊಟ್ಟ
ಣಮುಂ ಹಾರೈಸಿಕೊಂಡು ರನ್ನದ ತೊಡಿಗೆಗಳಂ ಹರುಷದಿಂ ತೊಟ್ಟು
ದಿವ್ಯ ವಸ್ತ್ರಮನುಟ್ಟು ಸಿಂಹಾಸನದೊಳೊಪ್ಪುತ್ತಿರ್ಪ ನಿಸ್ಸೀಮನಂ ಕಂಡ

ದ್ವಿತೀಯ ಸ್ಥಲಂ.

ಕಂದ॥ ಹರನಿಂದೆಗೈದನಂ ಸಂ
ಹರಿಸಿ ಹರಜ್ಞಾನಿ ಹರನ ತೇಜೋಭರಣಂ।
ಹರನಣುಗಂ ಹರನಾಜ್ಞಾ
ಧರನಚಲಂ ಜೊವ್ಮಿತಂದೆಯಿಪ್ಪವಸರದೊಳ್॥

ಗದ್ಯಃ— ಹರನಿಂದೆಗೈದ ಶಿವದ್ರೋಹಿಯಂ ತೀರ್ಚಿ ಏಕನಿಷ್ಠೆಯಿಂ ಹರನೊಲವಂ ತೊಡರ್ಚಿ ಪರಿಚ್ಛೇದಮನೊಡರ್ಚಿ ನಿರ್ಮಲ ಶೀಲಂ ಕರ್ಮ ವಿಧ್ವಂಸಿ ಜೊವ್ಮಿತಂದೆ ಸತ್ಯಶರಣರ ನಡುವೆ ನಿತ್ಯನಾಗಿರಲಿತ್ತ ಪೇವರ್ಮಾಡಿರಾಯಂ ಪುಂಡಾಣಭಟ್ಟಂಗೆ ಮನಂ ಪಗೆಯಾದುದಂ ಪುಸಿ ನುಡಿ ವಿಷಮಾದುದಂ ಶಿವನಿಂದೆಯೇ ಕೊಂದುದೆಂದರಿಯದೆ ಪರಿಚಾರಕರಂ ಕರೆದು ಪಾರ್ವನೇಕೆ ಪುರಾಣಮುಂ ಪೇಳದುಸುರದಿರ್ದಪನೆಂದು ಕೇಳಲೋರ್ವರುಂ ಪೇಳಲಮ್ಮದೆ ಸುಮ್ಮನಿರೆ ಮತ್ತೆ ಮತ್ತಾತ್ಕ್ರವಿಸಿ ಜೊವ್ಮಿತಂದೆಗಳ್ಕೊಂದರೆಂದು ಪೇಳಲಂಜಿ ಕೈಸನ್ನೆ ಬಾಯಿಸನ್ನೆಯಿಂ ಕೇಳೆ ತೊರ್ಪಾಗಳ್ತಾನರ್ಚಿಸುವ ವಿಷ್ಣು ಪ್ರತಿಮೆ ತನ್ನೆದಿಸೆಯಿಂದಾದ ಶಿವನಿಂದೆಯಂ ಕೇಳ್ದು ಕಣ್ಣನೀರಿಕ್ಕುತಿರಲದಂ ಕಂಡಿದೇನುತ್ಪಾತವೆಂದರಸಂ ಭೋಂಕನೆ ಪೊರಮಟ್ಟು ನಡೆತರುತ್ತೆ ಕಾಳ್ಪುರಾಣ ಒಂದೆಸೆ ತಾನೊಂದೆಯಾಗಿ ಕರುಳು ಕುಪ್ಪಳಿಸತ್ತಿರ್ದ ನಿತ್ಯನರಕಿಯಂ ಕಂಡು ಮುಖದ ಕಾಯ್ಪಿಂ ಕಂಗಳ ಕಾಂತಿಯಿಂ ಮನದ ಕೌತುಕದಿಂ ಚಿತ್ತದ ನಿರೋಧದಿಂ ತಲೆದೂಗುತ್ತಂ ಪೇವರ್ಮಾಡಿರಾಯಂ ಸಿಂಹಾಸನಾರೂಢನುಂ ಕೋಪಾರೂಢನುಮಾಗಿ ಶೋಭಿತ ಮಕುಟವರ್ಧನುಂ ಪರಿವೃತರಾಜ ಪುತ್ರರುಂ ಪರಿವೇಷ್ಟಿತಮಂತ್ರಿವರ್ಗನುಮಾಗಿ ವಾದವಿಪ್ರನಿಕಾಯನುಂ ಪ್ರಣುತ ಕವಿಜನ ನಿಕಾಯನುಂ ಕೋಪಾಗ್ನಿಕಣಕಲಿತನಿರೀಕ್ಷಣನುಮಾಗಿ ಪೇವರ್ಮಾಡಿರಾಯಂ ಪಡಿಯರರಿಂ ಜೊವ್ಮಯ್ಯನಂ ಮತ್ತೆಮತ್ತೆಕರೆಯ ಕಳಿಪುತಿರಲಿತ್ತಲಾತನ ಧರ್ಮಪತ್ನಿ ಶಿವಲಿಂಗಾರ್ಚನಾನಿರತೆ ಜಂಗಮಸ್ನೇಹಿ ಸತ್ಯಭಕ್ತೆ ಲಕುಮಾದೇವಿ ಶಿವನಿಂದೆ ವಿಪ್ರವಧೆನಿವಿತ್ತವರಸಂ ಜೊಮ್ಮಣ್ಣಂಗೆ ಮುನಿದು ಕರೆಯಲ್ಕಳುಪಿ ಕುಪಿತನಾಗಿರ್ದಪನೆಂಬ ಕಠಿಣವಾರ್ತೆಯಂ ಕರ್ಣಪರಂಪರೆಯಿಂ ಲಕುಮಾದೇವಿ ಕೇಳ್ದು ಹರಹರ ಹರನೇ ಬಲ್ಲಂ

ಶಿವಭಕ್ತಂಗಳಿಲ್ಲದ ಚನ್ನಂ ಅಧ್ವಮಾಗಲದು ಮುನ್ನೆಂದುಂ ಪೊಡ
ವಡದ ಜೊಮ್ಮಣ್ಣನಿಂದು ಪೊಡವಡೆ ತನಗೆ ಪೊಡಮಟ್ಪನೆಂದ
ರಸಂ ಮುನ್ನಿಸುವನೆಂಬ ಬಗೆಯಿಂ ತನ್ನ ಪ್ರಾಣಲಿಂಗವಂ ಸಿಂಗರಿಸಿ
ಮಾಣಿಕ್ಯದ ಸಿಂಹಾಸನವೆರಸರಸನರಿಯದಂತೆ ಶಿವಭಕ್ತೆಯರು ಸಹಿತೆ
ಲಕುಮಾದೇವಿ ಪಿಡಿದರ್ಚ ಸಮಯದೊಳು

ಇತ್ತಲ್ಮಂದೆ ಬರ್ಪರಸಾಳ್ಗಳಿಂ ಪಿಂದೆ ಬರ್ಪ ಪುರಜನದಿಂ ಕೆಲ
ಬಲದೋರ್ಚರ್ಪ ಭಕ್ತನಿಕರದ ನಡುವೆ ವಿಭೂತಿಯ ಕಾಂತಿ ನಳನಳಿಸೆ
ರುದ್ರಾಕ್ಷೆಯ ಉಲಿಪು ಘಲುಘಲಿಸೆ ಕೆಯ್ಯಲಗಿನ ಬೆಳಗು ಬಳ್ಳಿವರಿಯೆ
ಕಲಿಯುಗ ವೀರಭದ್ರಂ ಪರಸಮಯ ಪರಿಚ್ಛೇದಿ ಪರವಾದಿ ಕೋಲಾ
ಹಲಂ ಜೊವ್ಮಿತಂದೆ ಒರೆವುಟ್ಟಿದ ತ್ರಿಶೂಲದಂತೆ ತೊಡರ್ಚಿದ ಧಾಳ
ಲೋಚನದಂತೆ ಘಳುಘಳಿಸಿ ನಡೆತಂದು ಸಭಾನಿಳಯಮುಂ ಪುಗು
ತರುತಂ ಮೇಲಂ ನೋಡಿ ತೊಳತೊಳಪ ಲಿಂಗಮುಂ ಘಳಿಲನೆ ಕಂಡು
ನಿಜಭಕ್ತಿಯ ಭರದಿಂ ಪೊಡಮಡಲ್ಕೈಯೆತ್ತುತ್ತೊಲ್ಲದೆ ನಿಂದು ಭವಿಯ
ಪಿಂದಿರಲೇಕೆ ಪೊಡಮಡಿಸಿಕೊಳಲೊಲಿವರೇ ಕೆಲಕ್ಕೆ ಬಿಜಯಂಗೈವು
ದೆಂದೆತ್ತಿದ ಹಸ್ತಮುಂ ಮತ್ತೊಂದೆಸೆಗೆ ಸನ್ನೆದೋರೆ ಶಿವಲಿಂಗಂ ಸಿಂಹಾಸ
ನಮುಂ ಬಿಟ್ಟು ಭಕ್ತನ ಕೆಯ್ಯೊಡನೆ ಸರನೆ ತಿರುಗಿ ಸರಿಸಕ್ಕೆ ಬಂದು
ಕೆಲಸಾರ್ದ ಗಗನಾಸನಮುಂ ಕೈಕೊಂಡಿರೆ ಬಳಿಕ್ಕೆ ಪೊಡಮಟ್ಟು ಸಂತ
ಸಂಬಟ್ಟು ದೇವದೇವನ ಸುಕುಮಾರಲಿಂಗ ಸರ್ವಾಭಿಮಾನಿ ಬಿಸಿಲು ಗಾಳಿ
ಯೊಳರ್ಪರೇ ಸೆಜ್ಜೆಗೆ ಬಿಜಯಂಗೈವುದೆಂದು ಬಿನ್ನೈಸಿ ಬಿಜಯಂಗೈಸಿ
ನಿರ್ಮಳ ಚಿತ್ರಂ ಜೊಮ್ಮಯ್ಯಂ ಸಭೆಯುಂ ಲೆಕ್ಕಿಸದೆ ನಿಂದಿರ್ದಿರವಂ
ನೋಡಿ ಪೊದಲೊಳೆ ವಿಪ್ಲುಪ್ರತಿಮೆ ಕಣ್ಣಾ ನೀರಿಕ್ಕಿತಂ ತತ್ಪದವಂ
ನೋಡೆ ನೋಡೆ ಶಿವಲಿಂಗವಂ ಕೈಸನ್ನೆಯಿಂ ಬರಿಸಿದ ಸಾಮರ್ಥ್ಯಮುಂ
ಬಿಜಯಂಗೈಸಿದ ಸ್ನೇಹಮುಂ ನಿಂದ ನಿಲವಂ ಬಗೆಯದ ಬಲ್ಮೆಯಂ ಲೆಕ್ಕಿ
ಸದ ಗರ್ವತೆಯುಂ ಕೈಕೊಳ್ದ ಕಡುನಿಷ್ಠೆಯುಂ ಕಂಡು ಭೂಪಂಗೆ
ಕೋಪವಳಿದು ನಂಬುಗೆ ಬೆಳೆದು ಭೀತಿಯುದ್ಭವಿಸಿ

ಎನಯ್ಯ ಜೊಮ್ಮಯ್ಯ ನಿನಪರಾಧಿ ಪುರಾಣಭಟ್ಟನಂ ಕೊಂದು
ದಕ್ಕೆ ಕಾರಣನೇನಿನಿ ಕೇಳರಸ ನಿನಗೆ ವಿಚಾರವಿಲ್ಲ ಪುರಾಣಭಟ್ಟನಂ
ಕೊಲ್ಲೆ ಶಿವನಿಂದೆಯುಂ ಮಾತಿ ಪುಸಿ ನುಡಿದ ದ್ರೋಹಿಯುಂ ಕೊಂದೆ
ನಿನ್ನಂ ತಡೆಯೆನೆಂಬ ಪೇಳ್ದ ಜೊವ್ಮಿತಂದೆಯುಂ ಪೇವರ್ಮಾಡಿರಾಯಂ

ಬಿನ್ನೈಸಿದಂ ನಿಂದೆ ಕೇಳ್ದ ಕಡುಗೋಪದಿಂ
ಅವಧಂಪುದಾನಿಂದು ಮಾಡಿದಪರಾಧಮಂ
ಕಿವಿಯಿಂದಲಿಂದಾದ ಗುರುತರ ನಿರೋಧಮಂ
ಶಿವನಿಂದೆಯಂ ಕೇಳ್ದ ಪಾಪಿಗೇನೆಂತಯ್ಯ
ಭವಿಯನೋಲೈಸಿದಪರಾಧಿಗೇನೆಂತಯ್ಯ
ಹರನಿಂದೆಗೇಳಲೇಕೋಲಗಿಸಲೇಕೆನಗೆ
ಹರಭಕ್ತರಲ್ಲದರ ಸಂಗಡವವೇಕೆನಗೆ
ನಿಂದಿಸಿದ ವಿಪ್ರನಂ ಕೊಂದೆ ಎನಗೈದದದು
ಇಂದವನ ವಂಶವಂ ನಟ್ಟು ಹರಗುವೆನೆಂದು
ಪೇಳರೀ ಇದಕೆ ಪರಿಹಾರಮಂ ಭಕ್ತರಿರ
ಎಂದು ಬಿನ್ನೈಸೆ ಭಕ್ತರ್ಬಂದು ತರ್ಕೈಸೆ
ಇಂದುಧರನಾಜ್ಞೆ ನಿಮಗುಂಟೆಂದು ಹಾರೈಸೆ
ಪಾಪಿಯಂ ಪರಿಹರಿಸಿದಪ್ರತಿಮ ಜೊಮ್ಮಯ್ಯ
ಪಾಪಕರನಂ ದ್ರೋಹಿಯಂ ತೀರ್ಚಿದೆವ್ಮಯ್ಯ
ಶಿವನಿಂದೆಯಂ ಗೈದನಂ ಕೊಂದೆನಿನ್ನೇನಯ್ಯ
ಶಿವಭಕ್ತ ನಿನಗೊಂದು ತಪ್ಪುಂಟೆ ಬೊಮ್ಮಯ್ಯ
ಎಂದು ಬೆಸಸಿದ ಭಕ್ತರಾಜ್ಞೆಯಂ ಕೈಕೊಂಡು
ಬಂದ ಭಕ್ತಾಳಿಯಂ ಭಯದಿಂ ಬಲಂಗೊಂಡು
ಗಣಪರ್ವದಿಂ ಕೇಳ್ದ ನಿಂದೆಯಂ ನೀಗುತಂ
ತಡೆವಂತೆ ಶರಣತತಿಗಿತ್ತು ಸುಖಿಯಾಗುತಂ
ಭೀಮನಾಥನೊಳಜಲಿತ ಪ್ರಸಾದಂಬಡೆದು
ಶರಣಸಂಗಂ ತನಗೆ ಪಿರಿದು ತುಷ್ಟಿಯನೀಯೆ
ನಿರುಪಮಾನಂದಸುಖಜಲದಿ ತೆರೆ ಮೇಲ್ವಾಯೆ
ತನ್ನ ನಿಳಯದೊಳು ಜೊಮ್ಮಯ್ಯನೊಪ್ಪುತ್ತಮಿರೆ

ಪ್ರಥಮ ಸ್ಥಲಂ ಸಮಾಪ್ತ.

ಕೆಟ್ಟ ಇಟ್ಟಯ ಭಂಡನೆನಿಪ ಪಾರ್ವಂ ಪಿಡಿದು
ಆಕಾಶಗಂಗೆ ಮುನ್ನುಳ್ಳುದುದನಟವಟಿಸಿ
ಲೋಕಾಯತಂ ಹುಸಿಯನುಚ್ಚರಿಸಲಳವಡಿಸಿ
ವಿಷ್ಣುಪದವೆಂದು ಗಗನದ ನಾಮವಲ್ಲಿರ್ದ್ ಮ
ವಿಷ್ಣುಪದಿಯಾದಳಿಂಬರ್ಥಮುಮನರಿದಿರ್ದ್ ಮ
ವಂಚಿಸಿ ಶಿವದ್ರೋಹಿ ಕಾಳ್ಗೆಡೆವುತಿರುತಮಿರೆ
ಪಂಚಮುಖನಿಂದೆಯಂ ಮಾಡುತ್ತಮಿರುತಮಿರೆ

ಕೇಳ್ದ ಜೊಮ್ಮಣ್ಣನೆಂತೆಂತದೆಂತೊವ್ಮೊನ್ಮೆ
ಆಳ್ದನೇ ಧರಿಯಿಸಿದನಿದನಾಡಲಾನವ್ಮೆ
ಎಲೆಲೆಲೆ ಶಿವದ್ರೋಹಿ ಇಂತು ಪುಸಿ ನುಡಿವರೇ
ಎಲೆ ಪಾಪಿ ಪಾಪಿ ಪಾತಕ ಇಂತು ಬೊಗುಳ್ವರೇ
ಎನುತ ಅಲಗಿಂ ಧೊಪ್ಪನಿರಿದನಾ ದ್ರೋಹಿಯಂ
ತನುವನಿರ್ವೈಗಾಣೆ ನರಕರಂಬಾಹಿಯಂ
ಇರಿದು ಭೋಂಕನೆ ಸೆಳೆಯೆ ಬೀಳ್ವನಾ ವಿದ್ರೋಹಿ
ಒರಗಿ ನೆತ್ತರವ ಕಾರುತ್ತಿರ್ದ ಕಡು ಪಾಪಿ
ಬಲುಗರವು ಹೊಡೆದಂತೆ ಬೆರೆತನಾ ಪಾತಕಂ
ಹಲುಗಚ್ಚಿ ಹೆಣನಾದನೆಂತಾತ್ಮಘಾತಕಂ
ಅಂತಾ ಶಿವದ್ರೋಹಿಯಂ ತೀರ್ಚಿ ಪೊರಮಟ್ಟ
ಕಂತುಮದಮರ್ದನನ ತೇಜಮುಂ ಮುಂದಿಟ್ಟ
ಶಿವನಿಂತು ಕೇಳಿಸಿದನೇ ತನ್ನ ನಿಂದೆಯಂ
ಅವನದಲ್ಲಲ್ಲ ತಪ್ಪಂ ಬರ್ಪುದೆನ್ನಯಂ

ಎನುತೆ ಘೂರ್ಮಿಸುತೆ ನಿಜನಿಳಯಕ್ಕೆ ನಡೆತಂದು
ಮನಸಿಜಾರಿಯ ಶರಣರಂ ಕರೆಯಿಸುತ್ತಂದು
ಎಲ್ಲರಂ ನೆರಪಿ ಗಣತಿಂಥಿಣಿಗೆ ಮೆಯ್ಯಿಕ್ಕಿ
ಎಲ್ಲಾ ಗಣಂಗಳಂ ಬಲವಂದು ಮೆಯ್ಯಿಕ್ಕಿ
ನಿಂದಿರ್ದು ಕೈಮುಗಿದು ಕಣ್ಣನೀರ್ಕಡಲಾಗೆ
ಸಂದಣಿಸಿ ದುಃಖವೀರ್ಮಡಿಸಿ ನೂರ್ಮಡಿಯಾಗೆ
ಬಿನ್ನೈಸಿದಂ ಜೊಮ್ಮಿತಂದೆಯನುರಾಗದಿಂ

ಬಾರಯ್ಯ ಬಾರರಸ ಬಾರೆನ್ನ ಗತಿಮತಿಯೆ
ಬಾರ ನಂಬಿದರೊಲವೆ ಬಾರ ಶರಣರ ಬಲವೆ
ಬಾರ ಪುಣ್ಯದ ಫಲವೆ ಬಾರ ಮುಕ್ತಿಯ ನಿಲವೆ
ಎಂದೆಂದು ಜೋಳ್ಕೆಸಿ ಕರೆದು ಬಿಜಯಂಗ್ಯೆಸಿ
ಮುಂದೈಪ ಹರುಷದಿಂದೊಲಿದೊಲಿದು ಹಾಡ್ಯೆಸಿ
ಛಂದದಿಂ ಪಾಡುತಂ ಮಜ್ಜನಕ್ಕೆರೆದೆರೆದು
ಚಂದನವನಿತ್ತಿತ್ತು ನೋಡಿ ಸುಖದೋಳ್ಕೆನೆದು
ಪುಳುಕಿಸುತೆ ಸಿಂಹಾಸನಕ್ಕೆ ಬಿಜಯಂಗ್ಯೆಸಿ
ಎಳಸುವಜ್ಜರಕ್ಕಳಂ ಸಿರಿ ಮುಡಿಯೊಳಗೆ ಸೂಡಿ
ನವಧೂಪ ಧೂಮ್ರದಿಂಮೊಸರ್ವ ಪರಿಮಳವಿತ್ತು
ನವ ಕಾಂತಿಗಳನೇಳಿಪಾರತಿಗಳಂ ಪೊತ್ತು
ಕಂಪೆಸೆವ ಅಮೃತಾನ್ನದಾರೋಗಣೆಯನಿತ್ತು
ಕಂಪಿಪುವ ವೀಳೆಯಮನಸಮನಯನಂಗಿತ್ತು
ಸೊಂಪೇರಿ ಶಿವನೇಕನಿಷ್ಠೆಯಂ ಮುಂದಿಟ್ಟು
ಸಾದರಂ ಭೀಮನಾಥನ ಕೃಪೆಯ ಮುಂದಿಟ್ಟು
ಮನೆಯಿಂದ ಪೊರಮಟ್ಟು ಉನ್ನತಾಸನವೇರಿ
ಘನಮಹಿಮೆಯುಂ ಮನದೊಳಿಡೆಗೊಂಡು ನಲವೇರಿ
ಪಡೆತರುತ್ತರಮನೆಯ ಮುಂದೆ ಭರದಿಂದಿಳಿದು
ಮೃಡನೆ ಶರಣೆಂದೆನುತೆ ಬಾಗಿಲ್ಗಳಂ ಕಳೆದು
ಎಡಬಲದ ರಾಜಪುತ್ರರು ನಡನಡುಗುತಿರೆ
ಪಡೆತಂದನಾ ವಿಭೂತಿಯ ವೀರನಮ್ಮಮ್ಮ
ಪಡೆತಂದವಲ್ಲಿ ಸುರಗಿಯ ಸುಭಟನಮ್ಮಮ್ಮ

ಒರುತಿರಲ್ಮುಂದೊಂದು ಪಿರಿಯ ಮಾಳಿಗೆಯೊಳಗೆ
ಅರಸನಾ ವಿಘ್ನವಂ ಪೂಜಿಸುತ್ತಿರಲೊಳಗೆ
ಪೊರಗೆ ನಿಂದಿರ್ದನಾ ಜೊಮ್ಮಣ್ಣನತಿಬಳಂ
ತೆರಪಿಲ್ಲದಬ್ಬ ಕರಿ ನೆರೆ ಮನದ ನಿಶ್ಚಳಂ
ನಿಂದರಲ್ಮೆಲದೊಳೀರ್ವಂ ಪುರಾಣಿಕನಲ್ಲಿ
ಸಂದಣಿಸಿ ವೈಷ್ಣವ ಪುರಾಣ ಓದುತ್ತಲ್ಲಿ
ಶಬ್ಧಕ ಪುರಾಣಮಂ ದಿಟ್ಟತನದಿಂ ಪಿಡಿದು

ಬೇಗದಿಂದಂ ಕರೆಯಿಸಲ್ಕಮ್ಮದಂಜುವಂ
ತನ್ನಿಚ್ಛೆಯೋಳ್ಪಂದು ತನ್ನಿಚ್ಛೆಯೊಳ್ಪೋಗಿ
ಮನ್ನಣೆಯ ಶಿವನ ತೇಜದ ಕಣಿಯ ಕರುವಾಗಿ

ಇರಲಿತ್ತ ಪೇರ್ಮಾಡಿರಾಯನೊಲುಮೆಯ ಕಾಂತೆ
ಪರಮ ಶಿವಲಿಂಗಾರ್ಚನಾನಿರತೆ ಗುಣಶಾಂತೆ
ತನಗೆ ಲಕುಮಾದೇವಿಯೆಂಬ ಪೆಸರೊಪ್ಪಿರಲ್
ಮನಸಿಜಾಂಯನಕ್ಕರಿಂದರ್ಚಿಸುತ್ತಿರಲ್
ಜೊಮ್ಮಯ್ಯನೇಕ ನಿಷ್ಠೆಯನಚಲ ಬಲುಪಮಂ
ಜೊಮ್ಮಣ್ಣನೆಸೆವ ಶಿವಭಕ್ತಿಯುತ್ಸಾಹಮಂ
ಪುರಹರನ ಪುರಮಪ್ರತಾಪದುರುವಣೆಯುಮಂ
ಹರನ ತೇಜಂ ನೆಲಸಿ ನಿಂದ ಸಂದಣಿಯುಮಂ
ಕೇಳ್ದು ಸಂತೋಷದಿಂ ಪರಮ ಹರುಷಂಗಳಂ
ತಾಳ್ದು ಹೊಸ ಹೊಸ ಪಂಯ ವಸ್ತ್ರಸಂತತಿಗಳಂ
ಚಂದನಂ ಕರ್ಪೂರವಗಿಲು ಧೂಪಂಗಳಂ
ಮುಂದೈಸಿ ಕಂಪಿಡುವ ಸಾಧು ಕಸ್ತೂರಿಗಳಂ
ಅಂದಂದು ಬಂದೆಸೆವ ಪೊಚ್ಚ ಪೊಸ ಪೂಗಳಂ
ಇಂದುಧರನಣುಗಂಗೆ ಪಂಪರಿಯ ಪೂಗಳಂ
ಕಳಿಪುತಿರೆ ಕೈಕೊಂಡು ಜೊಮ್ಮಣ್ಣನಳ್ತಿಯಿಂ
ಪುಳುಕಿಸುತೆ ಪೊಡವಮಡುತೆ ಶಿವಭಕ್ತಿಗೊಲ್ಮೆಯಿಂ
ಶಿವ ಸೋದರರದ ತೆರದಿ ಬಂದು ಕೃತ್ಯದೊಳಿರಲ್
ಶಿವನನರ್ಚಿಸುತೆ ಕೆಲವುಂ ದಿವಸವಿರುತಿರಲ್

ಇರ್ದು ಜೊಮ್ಮಯ್ಯಂಗಳೊಂದು ದಿನ ಉದಯದೊಳ್
ಸಾರ್ದು ಮೊಗಪ್ರಕ್ಷಾಲನಂ ಮಾಡಿ ಹರುಷದೊಳ್
ಆಗಮಸ್ಥಾನದೊಳ್ ಭಸಿತಮುಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಸೆಜ್ಜೆಯರಮನೆಯೊಳೊಪ್ಪುವ ಭೀಮನಾಥನಂ
ಸಜ್ಜನಪ್ರೇಮಿ ತನ್ನಯ ಪ್ರಾಣನಾಥನಂ
ಬಾರಯ್ಯ ಬಾರೆನ್ನ ಭಕ್ತಜನಬಂಧುವೇ

ಎಲೆ ಮಗನೆ ಜೊಮ್ಮಯ್ಯ ನಿನಗೊಂದನರುಪುವೆಂ
ನಲವಿಂದೆ ಸೂಕ್ಷ್ಮಧರ್ಮವನೊಲಿದು ತಿಳುಪುವೆಂ
ಈ ಪಟ್ಟಣದ ಕೆಲದ ಹತ್ತು ಯೋಜನದೊಳಗೆ
ಶಾಪಹತರಾಗಿ ಮೃಗವಾಗಿ ಕಾನನದೊಳಗೆ
ಕಾರಣಿಕ ಋಷಿಯರಿರ್ದಪರವರನಟ್ಟುವುದು
ಆರೈದು ಮೃಗದ ಜನನದ ಬೇಂಟೆಯಾಡುವುದು
ಮಾಯೆಯಂ ಕಳೆದು ಕೈಲಾಸಕ್ಕೆ ಕಳಿಪುವುದು
ಕಾಯವುಂ ಹೊತ್ತಿರ್ಪ ಭಾರವುಂ ಇಳಿಪುವುದು
ಎಂದು ಕರುಣಿಸಿ ಹರಂ ಶಿವಲಿಂಗದೊಳ್ಪುಗಲ್
ಅಂದು ಜೊಮ್ಮಯ್ಯಂಗೆ ಪುಳುಕಂಗಳ್ಮಿಗೆ ಮಿಗಲ್

ಎಳ್ದು ಕಣ್ದೆರೆದು ಹರುಷಂ ಮಿಕ್ಕು ಹಾರೈಸಿ
ಬಾಳ್ದು ಶಿವನಂ ಕಂಡ ಸುಖದೊಳಗೆ ಪೂರೈಸಿ
ಹರನಾಜ್ಞೆಯಿಂ ಮೃಗದ ಬೇಂಟೆಯಾಡುತ್ತಿರ್ದು
ಪರಮ ಋಷಿಗಳ ಕರ್ಮವಂ ಮಾಣಿಸುತ್ತಿರ್ದು
ಭಕ್ತರ್ಗೆ ಮಾಡಲಿಲ್ಲೆಂದುಮ್ಮಳಂ ಪುಟ್ಟಿ
ಯುಕ್ತಿಯಿಂ ಸೇವಕಾವೃತ್ತಿಗೆ ಮನಂ ಮುಟ್ಟಿ
ಬಂದು ಪೆರ್ಮಾಡಿರಾಯನನಕ್ಕರಿಂ ಕಂಡು
ಒಂದು ತಿಂಗಳ್ಗೆ ಸಾವಿರ ಹೊನ್ನನೆಡೆಗೊಂಡು
ಶರಣರ್ಗೆ ಮಾಡುತಂ ಭಕ್ತಿಯಂ ಸೂಡುತಂ
ಪರಮ ಹರುಷಂ ಮಿಕ್ಕು ಸುಖದೊಳೋಲಾಡುತಂ
ಜೋಳವಾಳಿಯೊಳಿರ್ದನಾ ಧರಾನಾಥಂಗೆ
ವೇಳೆಯಾಳನೊಳಿರ್ದನಾ ಭೀಮನಾಥಂಗೆ
ಪೆರ್ಮಾಡಿರಾಯಂಗೆ ಪೊಡವಡಂ ಲಕ್ಕಿಸಂ
ಅಮ್ಮಮ್ಮ ಶಂಕರಧ್ಯಾನೈಕಮಾನಸಂ
ಒಲ್ಮೈಸಬಂದಡೆಂದುಂ ಮರೆದು ಕುಳ್ಳಿರಂ
ಆಲೋಕಿಸಂ ದಿಟಂ ಕೈಕೊಳ್ಳನೊಬ್ಬರಂ
ಪುರುಷ ಸಿಂಹವನಾಳ್ವ ಮಾತಂಗಪತಿಯಂತೆ
ಅರಸ ಪೇರ್ಮಾಡಿರಾಯಂ ಭೀತಿಯಿಂದಿಂತೆ
ಪೋಗೆನಲ್ಕಮ್ಮದವನಂ ನೋಡಿ ನಡುಗುವಂ

ಶಿವಾನುಭವ ಗ್ರಂಥಮಾಲಾ ನಂ. ೫೬.

ಶಿವಾನುಭವ ಸೃಷ್ಟಿಯ ವಚನಗಳು.

ಸಂಪಾದಕರು.
ರಾ॥ ಬ॥ ಫ. ಗು. ಹಳಕಟ್ಟಿ,
ಬಿ. ಏ. ಎಲ್. ಎಲ್. ಬಿ.

ವಿಜಾಪುರ.
೧೯೪೧

ಬೆಲೆ ೬ ಆಣೆ.

ಪ್ರಸ್ತಾವನೆ.

ಈ ಗ್ರಂಥದಲ್ಲಿ ಮುಕ್ತ್ಯಂಗನಾ ಕಂಠಮಾಲೆ ಮತ್ತು ಜ್ಯೋತಿರ್ಮಯ ಶಾಂಭವೀ ದೀಕ್ಷೆ ಎಂಬೆರಡು ವಚನಗ್ರಂಥಗಳು ಅಡಕವಾಗಿರುತ್ತವೆ. ಇವುಗಳಲ್ಲಿ ೧ನೇ ಗ್ರಂಥದಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರನ ೨೧ ವಚನಗಳಿದ್ದು ಇವುಗಳಿಗೆ ಚನ್ನದೇವನೆಂಬವನು ಟೀಕೆಯನ್ನು ಬರೆದಿದ್ದಾನೆ. ಇದರಲ್ಲಿ ಸೃಷ್ಟಿಯ ಉಗಮವು ಹೇಗೆ ಉಂಟಾಯಿತು, ಪರಮಾತ್ಮನ ಮೂಲ ಚೈತನ್ಯ ರೂಪು ಜಗತ್‌ಸೃಷ್ಟಿಗೆ ಹೇಗೆ ಕಾರಣವಾಯಿತು, ಇವೇ ಮೊದಲಾದ ವಿಷಯಗಳನ್ನು ವಿವರಿಸಿ ಆಮೇಲೆ ಮುಕ್ತಿಗೆ ಸಾಧನವಾದ ಲಿಂಗಧಾರಣ ವಿಷಯವನ್ನು ಹೇಳಿದ್ದಾನೆ. ಆಮೇಲೆ ಅಂಗ ಲಿಂಗಸಂಬಂಧ ಮತ್ತು ಲಿಂಗಭಕ್ತಿಯ ಸ್ವರೂಪ ಇವುಗಳನ್ನು ವಿವರಿಸಿ ಶಿವಾನುಭವದ ಮೂಲಕ ಮೋಕ್ಷವನ್ನೈದಬೇಕೆಂದು ಸೂಚಿಸಿದ್ದಾನೆ.

ಎಂಡನೆಯ ಗ್ರಂಥದಲ್ಲಿ ಪ್ರಭುದೇವರ ೩೭ ವಚನಗಳಿವೆ. ಇವುಗಳನ್ನು ಪಾಲ್ಕುರಿಕೆಯ ಸೋಮಾರಾಧ್ಯನು ಆರಿಸಿದಂತೆ ಈ ಗ್ರಂಥದಲ್ಲಿ ಉಲ್ಲೇಖವಿರುತ್ತದೆ. ಇದರಲ್ಲಿ ಸೃಷ್ಟಿಯ ರಚನೆಯ ಬಗ್ಗೆ ಸವಿಸ್ತಾರವಾದ ವಿವೇಚನೆಯೂ ಶಿವಯೋಗದ ಗೂಢತತ್ವಗಳೂ ಹೆಚ್ಚಾಗಿ ನಿರೂಪಿಸಲ್ಪಟ್ಟಿರುತ್ತವೆ. ಸೃಷ್ಟಿಯ ರಚನೆಯಲ್ಲಿ ಶೂನ್ಯ ನಿರಾಲಂಬ ಸೃಷ್ಟಿ, ನಿರಾಳಸೃಷ್ಟಿ, ಮತ್ತು ಈಶಾನ್ಯ ಮೂರ್ತಿಯ ನಿರ್ಮಲ ಸೃಷ್ಟಿ ಹೀಗೆ ಮೂರು ವಿಭಾಗಗಳು ಮಾಡಲ್ಪಟ್ಟಿರುತ್ತವೆ. ಈ ಕಡೆಯ ವಿಭಾಗವು ಪ್ರಮಥ ಸೃಷ್ಟಿಯೆಂತಲೂ ಹೇಳಲ್ಪಡುತ್ತಿದೆ.

ಷಟ್‌ಸ್ಥಲದ ಮರ್ಮವನ್ನು ತಿಳಿಯಲಿಕ್ಕೆ ಜಗದ್ರಚನೆಯ ಜ್ಞಾನವು ಬಹು ಅವಶ್ಯವಾದುದು. ಈ ವಿಷಯವು ಪ್ರಭುದೇವರ ಸೃಷ್ಟಿಯ ವಚನ ಮತ್ತು ಮಹಾದೇವಿಯಕ್ಕನ ಸೃಷ್ಟಿಯ ವಚನ. ಇವುಗಳಲ್ಲಿ ವಿಶೇಷವಾಗಿ ಬಂದಿರುತ್ತದೆ. ಅವುಗಳೊಡನೆ ಈಗಿನ ಗ್ರಂಥದಲ್ಲಿಯ ವಿಷಯಗಳನ್ನೂ, ವಚನಶಾಸ್ತ್ರಸಾರ ಭಾಗ ೨. ಈ ಗ್ರಂಥದ ಪುಟ ೧೧ರಿಂದ ೭೧ರ ವರೆಗಿನ ಪುಟಗಳಲ್ಲಿರುವ ವಚನಗಳನ್ನೂ ಪರಿಶೀಲಿಸಿದ್ದಾದರೆ ಈ ಮಹತ್ವದ ವಿಷಯದ ಮೇಲೆ ವಿಶೇಷ ಪ್ರಕಾಶವು ಬೀಳುವಂತಿದೆ.

ಈ ಎಲ್ಲ ವಿಷಯಗಳನ್ನು ನಿರೂಪಿಸಿದ್ದಾದರೆ ಒಂದು ದೊಡ್ಡ ಗ್ರಂಥವೇ ಆಗುವದು. ಆದ್ದರಿಂದ ಈಗಿನ ಗ್ರಂಥದಲ್ಲಿ ಇವೆಲ್ಲ ವಿಷಯಗಳನ್ನು ನಾವು ವಿಸ್ತಾರವಾಗಿ ವಿವೇಚಿಸಲು ಪ್ರಯತ್ನಿಸಿಲ್ಲ.

ಈ ಎರಡೂ ವಚನಗ್ರಂಥಗಳ ಹಸ್ತಲಿಖಿತ ಪ್ರತಿಗಳು ನಮ್ಮ ಕಡೆಗೆ ಇದ್ದದ್ದಲ್ಲವೆ ಇವುಗಳನ್ನು ವೀರಯಾಗಿ ವೀರ ವೀರ ಕಾಲಗಳಲ್ಲಿ ಕೆಲ ಮಹ ನೀಯರು ಪ್ರಸಿದ್ಧಮಾಡಿದ್ದು ನಮಗೆ ಕಂಡುಬಂದಿರುತ್ತಿದೆ. ಇವುಗಳನ್ನು ನೊದಲು ಮೈಸೂರಿನ ಶ್ರೀ ಡಿ. ಆರ್. ತಿಪ್ಪಯ್ಯ ಶಾಸ್ತ್ರಿಗಳೂ ಈಚೆಗೆ ಜ್ಯೋತಿರ್ಮಯಶಾಂಭವದೀಕ್ಷೆಯನ್ನು ಶ್ರೀ ಚನಮಲ್ಲಪ್ಪನವರು ಎಡಿ ವೀರ ಸದ್ಧರ್ಮ ದೀಪಿಕೆ ಇವರೂ ಪ್ರಸಿದ್ಧಿಸಿದ್ದು ನಮಗೆ ತಿಳದುಬರುತ್ತದೆ. ಆದರೆ ಈ ಎರಡೂ ಗ್ರಂಥಗಳು ಒಂದೇ ವಿಷಯಕ್ಕೆ ಸಂಬಂಧಪಟ್ಟ ವಿರುವದರಿಂದ ಓದುವವರಿಗೆ ಅನುಕೂಲವಾಗಬೇಕೆಂದು ಅವೆರಡನ್ನು ಕೂಡಿಸಿಯೇ ಈ ಗ್ರಂಥದಲ್ಲಿ ನಾವು ಮುದ್ರಣಗೊಳಿಸಿರುತ್ತೇವೆ.

ವಿಜಾಪುರ
೧೫-೬-೧೯೪೫

ಫ. ಗು. ಹಳಕಟ್ಟಿ
ಸಂಪಾದಕ.

R. N. B. 2554

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಮಾರ್ಚ ೧೯೩೧. [ಸಂಚಿಕೆ ೬

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ಶಿವದೀಕ್ಷೆ ಅಥವಾ ಇಷ್ಟಲಿಂಗಧಾರಣ	ಶ್ರೀ ಬ. ಚೆ. ಪಟ್ಟೇದ	೧೮೫
೨	ಇದು ಭಾಗ್ಯವಯ್ಯಾ!	ಶ್ರೀ. ವೀರೇಶ್ವರ ಬೆಂಗಳೂರ	೧೯೩
೩	ವೀರಶೈವ ವಾಙ್ಮಯ ಸ್ವರೂಪ	ಕೈ. ವಾ. ಬಿ ಟಿ. ಗಚ್ಚಿನಮನಿ ಎಮ್. ಏ. ಬಿ. ಟಿ.	೧೯೪
೪	ವೀರಶೈವ ಕ್ಷೇತ್ರಗಳು	ಶ್ರೀ. ಬುದ್ಧಯ್ಯಾಸ್ವಾಮಿ ಪುರಾಣಿಕ	೨೦೨
೫	ಬಸವೇಶ್ವರನಕ್ಕಿಂತಲೂ ಮೊದಲಿನ ವೀರಶೈವ ಧರ್ಮ	ರಾ। ಬ। ಪಿ. ಜಿ. ಹಳಕಟ್ಟಿ	೨೦೫
೬	ಸೈಯಾಕರಣ ಭೀಮ ಅಥವಾ ಭೀಮಸೇನ	ಪ್ರೊ॥ ಕೆ. ಜಿ. ಕುಂದಣಗಾರ	೨೦೭
೭	ಸಂಕೀರ್ಣ ವಚನಗಳು ಭಾಗ ೩	...	೨೭—
೮	ಹರಿಹರನ ರಗಳೆಗಳು ಭಾಗ ೮	...	೨೯—
೯	ಶಿವಾನುಭವ ಶಬ್ದಕೋಶ	ರಾ। ಬ। ಪಿ. ಜಿ. ಹಳಕಟ್ಟಿ	೫೩—

ಇದನ್ನು ವಿಜಾಪುರದಲ್ಲಿ ರಾ। ಬ। ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ ಉಪಲೇಬ್ರರಿ ಎದುರುಗಡೆಯ ತಮ್ಮ
೧೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

ಶಿವಾನುಭವ.

ವರ್ಷ ೦೫	ಮಾರ್ಚ ೧೯೪೦.	ಸಂಚಿಕೆ ೬

ಶಿವದೀಕ್ಷೆ ಅರ್ಥಾತ್ ಲಿಂಗಧಾರಣ.

(ಲೇಖಕಃ- ಶ್ರೀಯುತ ಬಸವಪ್ಪ ಚೆನ್ನಪ್ಪ ಪಟ್ಟೇದ ವಂಟಮುರಿ)

ಶ್ರೀಮಾನ್ ಕ. ಬಸವಪ್ಪ ಜೀರಗೆ ಬಿ. ಏ. ಬೆಂಗಳೂರು ಅವರು ಶಿರೋಲೇಖದಲ್ಲಿ ಕಾಣಿಸಿದ ವಿಷಯವನ್ನು ಬರೆದು, ಶಿವಾನುಭವದ ಜನವರಿ (೧೯೪೧) ಸಂಚಿಕೆಯಲ್ಲಿ ಪ್ರಕಟ ಮಾಡಿರುವರಷ್ಟೇ. ಅದರಲ್ಲಿ ಅವರು ಕೀರ್ತನಕೇಸರಿ ಬಿ ಶಿವಮೂರ್ತಿಶಾಸ್ತ್ರಿಗಳು ತಮ್ಮ ಶರಣ ಸಾಹಿತ್ಯದ ಕಳೆದ ಅಗಷ್ಟ ತಿಂಗಳ ಸಂಚಿಕೆಯಲ್ಲಿ "ಲಿಂಗಧಾರಣ ಮತ್ತು ಶಿವದೀಕ್ಷೆ" ಎಂಬ ಶೀರ್ಷಿಕೆಯಲ್ಲಿ ಹುಲುಬಿಸಿದ ಲೇಖನವನ್ನು ಪ್ರತಿಭಟಿಸಿ ನಿರಾಕರಿಸಿರುವರು. "ಲಿಂಗಧಾರಣ ಶಿವದೀಕ್ಷೆಗಳು ಭಿನ್ನವಾದವುಗಳಲ್ಲ ಎರಡೂ ಒಂದೆ! ಆ ಕಾರಣ ಲಿಂಗಧಾರಣೆಯಾದ ಮೇಲೆ ಶಿವದೀಕ್ಷೆ ಎಂದು ಪುನಃ ಸಂಸ್ಕರಿಸುವ ಅವಶ್ಯಕತೆಯಿಲ್ಲ" ಎಂದು ಅವರ ಅಂಬೋಣವು. ಇಲ್ಲಿ ಇಬ್ಬರೂ ಬಲ್ಲವರು. ಒಬ್ಬರು ಶಾಸ್ತ್ರಿಗಳು, ಇನ್ನೊಬ್ಬರು ಪದವೀಧರರು ಇವರ ಪ್ರತಿವಾದನೆಗಳಲ್ಲಿ ಸೇರುವದು ಸಾಧಾರಣವಾದುದೇನೂ ಅಲ್ಲ. ಆದರೂ ಮೌಢ್ಯ ನೋಡುತ್ತ ಸುಮ್ಮನೆ ಕೂಡ್ರುವದಾದರೂ ಹೇಗೆ? "ವಾದೇ ವಾದೇ ಜಾಯತೇ ತತ್ವ ಬೋಧಃ" ಎಂಬುದನ್ನು ಸ್ಮರಿಸಿ ಶುದ್ಧ ಭಾವನೆಯಿಂದ ಯಥಾಮತಿ ನಿರೂಪಿಸುವುದೇ ಕರ್ತವ್ಯವೆಂದು ಈಗ ಕೈಹಾಕಿರುವೆನು.

ಶ್ರೀಮಾನ್ ಜೀರಗೆಯವರು, ನೂರೊಂದು ಸ್ಥಳಗಳಲ್ಲಿ ಲಿಂಗ ಧಾರಣವು ಐದನೆಯ ಸ್ಥಲವೆಂದೂ ಅವನ್ನು ವೀರಶೈವನು ಹೆಜ್ಜೆಯನಿರಿಸಿ ತನ್ನ ಜೀವನದಲ್ಲಿ ಅನುಸರಿಸಲೇಬೇಕೆಂದೂ ಹೇಳಿರುವುದು ಯೋಗ್ಯವು. ಆದರೆ ಜನ್ಮ ಲಿಂಗಧಾರಕೆ ಹೊಂದಿವ ಕೂಸು ತರ್ವಾದ ನಲ್ಲು ಹೆಜ್ಜೆಗಳನ್ನು ಇಕ್ಕಿ ತಾನೇ ಆ ಸ್ಥಲಕ್ಕೆ ಬಂದಿರುವುದೇ ? ಎಂಬುದನ್ನು ಮಾತ್ರ ಅವರು ನೆನೆಯಲಿಲ್ಲ. ಅದನ್ನು ನೆನೆದಿದ್ದರೆ, ಹುಡುಗನು ತಕ್ಕ ಮಟ್ಟಿಗೆ ದೊಡ್ಡವನಾದಮೇಲೆಯೇ ಲಿಂಗಧಾರಣ ಹೊಂದಲಿಕ್ಕೆ ಯೋಗ್ಯ ನಾನುವನೆಂಬುದು ಕೂಡಲೆ ಹೊಳೆಯುತ್ತಿತ್ತು. ಆಗ ಶಾಸ್ತ್ರಿಗಳು ಅದೇಕೆ ಜನ್ಮ ಸಂಸ್ಕಾರ (ಔಪಚಾರಿಕವಾಗಿ ಆಗುವ ಲಿಂಗಧಾರಣ) ಮತ್ತು ಶಿವದೀಕ್ಷೆ ಎಂದು ವಿಂಗಡಿಸಿರುವರೆಂಬುದರ ಉತ್ಪತ್ತಿಯು ಗೊತ್ತಾಗದೆ ಇರುತ್ತಿರಲಿಲ್ಲ; ಇರಲಿ ಹೀಗೆ ಹೊಸದಾಗಿ ಶಾಸ್ತ್ರಿಗಳೇ ವಿಭಾಗಿಸಿರುವರಿಂದಲ್ಲಿ ಹಾಗೆ ಮೊದಲಿನವರೇ ಉಂಟು ಮಾಡಿದ್ದಾರೆ. ವೀರಶೈವರಿಗೆ ೭೪ ಶೀಲಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಶಿವದೀಕ್ಷೆಯೇ ಪ್ರಾಮುಖ್ಯವಾದುದರಿಂದ, ಅದನ್ನು ಈ ಬಗೆಯಾಗಿ ಮೊದಲನೆಯ ಶೀಲವೆಂದು ಹೇಳಿದ್ದಾರೆ. "ಲಿಂಗಪೂಜೆಯ ಹೊರತು ಜನ್ಮ ಜನ್ಮಾಂತರಗಳ ಭಯವು ಹೋಗುವದಿಲ್ಲೆಂದು ತಿಳಿದು, ಗುರುಕರುಣೆಯನ್ನು ಪಡೆದುಕೊಂಡು, ಇಷ್ಟಲಿಂಗದಲ್ಲಿ ಶ್ರದ್ಧೆಯುಳ್ಳವನಾಗಿ, ಅನ್ಯ ದೇವರುಗಳನ್ನು ಮನಸ್ಸಿನಲ್ಲಿ ತಾರದೆ, ಗುರು-ಲಿಂಗ ಜಂಗಮದಲ್ಲಿ ದೃಢಭಕ್ತಿಯುಳ್ಳವನಾಗಿ ಇರುವದೇ ಮೊದಲನೇ ಶೀಲವು." ಎಂದು ಹೇಳಿದ್ದಾರೆ. ಮುಂದೆ ೧೪ ನೆಯದರಲ್ಲಿ "ಹೆಂಡತಿ ಗರ್ಭಿಣಿಯಾದಾಗ ಎಂಟು ತಿಂಗಳಲ್ಲಿ ಗುರು ಜಂಗಮರ ಹಸ್ತದಿಂದ ಹೊಟ್ಟೆಯೊಳಗಿನ ಶಿಶುವಿಗೆ ಲಿಂಗಧಾರಣ ಮಾಡಿಸಿ, ವಿಧೂಂ ಪಟ್ಟವನ್ನು ಕಟ್ಟಿಸುವದು" ಎಂದಿರುವದು. ಇದೇ ಮೇರೆಗೆ ದಶಕರ್ಮ ಪದ್ಧತಿ, ಸ್ವಯಂ ಪುರೋಹಿತ ಮೊದಲಾದ ಅಧುನಿಕ ಪುಸ್ತಕಗಳಲ್ಲಿಯೂ ಅವನ್ನು ಬೇರೆ ಬೇರೆಯಾಗಿಯೇ ವಿವರಿಸಿದ್ದಾರೆ. ಭಕ್ತರಲ್ಲಿ ಬಹುಶಃ ಮುಗ್ಗಿದ್ದರೂ ಮಾಹೇಶ್ವರರಲ್ಲಿ ಜನ್ಮ ಸಂಸ್ಕಾರವಲ್ಲದೆ, ಈಗಲಾದರೂ ಶಿವದೀಕ್ಷೆಯು ನಡೆದೇ ಅವೆ. ಇದೆಲ್ಲವನ್ನು ನೋಡಿದರೆ, ಶಾಸ್ತ್ರಿಗಳು ಅವನ್ನು ಅಗಲಿಸಿ ಬರೆದುದು ಯುಕ್ತವೇ ಸರಿ, ಎಂದು ಹೇಳಬೇಕಾಗುವದು.

ಲಿಂಗಧಾರಣ ಶಿವದೀಕ್ಷೆಗಳು ಹಾಸು ಹೊಕ್ಕುಗಳಂತಿರುವದೇನೂ ಸುಳ್ಳಲ್ಲ. ಸಿದ್ಧಾಂತಶಿಖಾಮಣಿಯೊಳಗಿನ ಲಿಂಗಧಾರಣ ಸ್ಥಲದ ವಿವರಣೆ

ಯಿಂದ, ಅದು ಬಹು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅದರೆ ಶಿಶುವಿನ ಲಿಂಗಧಾರಣೆಯು (ಐದನೆಯ ಹೆಜ್ಜೆಯಲ್ಲ) ಕೇವಲ ಔಪಚಾರಿಕವು. ತಂದೆತಾಯ್ಗಳು ತಮ್ಮ ಮಗುವಿಗೆ, ಲಿಂಗಾಯತತ್ವದ ಒಲವು ಹಚ್ಚುವುದಕ್ಕಾಗಿಯೂ, ತಮಗೆ ಭವಿಯು (ಅಲಿಂಗಿಯು) ಸಂಗಡ ವ್ಯವಹರಿಸಲಿಕ್ಕೆ ಬರುವ ತೊಂದರೆಯನ್ನು ನೀಗುವುದಕ್ಕಾಗಿಯೂ. ಅದಕ್ಕೆ ಧರಿಸಿದ ಲಿಂಗವಿದು. ವೀರಶೈವರು ತಮ್ಮ ಮನೆಗೂ ಮನೆಯೊಳಗಿನ ದನಕರುಗಳಿಗೂ ಭಾಂಡಗಳೇ ಮೊದಲಾದ ಉಪಕರಣಗಳಿಗೂ ಲಿಂಗಮುದ್ರೆ ಹಾಕಬೇಕೆಂದು ಶೀಲಗಳಲ್ಲಿ ಆಜ್ಞಾಪಿಸಿರುವಾಗ, ಲಿಂಗಸಂಬಂಧವಿಲ್ಲದ ತಮ್ಮ ಶಿಶುವಿನೊಡನೆ ಅವರು ಬಳಕೆಯಿಡುವುದೆಂತು? ಆಕಾರಣ ಮುದ್ರೆಯ ರೂಪವಾಗಿ ಆದು ಶಿಶುವಿಗೆ ಇರುವುದೇ ವಿನಾ ಶಿಶುವು ತಾನಾಗಿ ತನ್ನ ಸಲುವಾಗಿ ನಾಲ್ಕು ಹೆಜ್ಜೆ ಸಾಗಿಬಂದು ಪಡೆದ ಲಿಂಗವಲ್ಲ! ಈ ಜನ್ಮಲಿಂಗಧಾರಣೆಗೆ ಸಾಮಾನ್ಯ ಮಹೇಶ್ವರರೇ ಸಾಕು; ಆದರೆ ಶಿವದೀಕ್ಷೆ ವಿಶೇಷರಿಂದಸಿಸುವ ಪಟ್ಟಚಾರ್ಯಾಧಿಕಾರಿಗಳಲ್ಲದೆ ಸಾಗದೆಂಬುದನ್ನಾದರೂ ಇಲ್ಲಿ ಗಮನಿಸುವುದು ಅವಶ್ಯವಾಗಿದೆ.

ಶ್ರೀಮಾನ್ ಜೀರಗೆಯವರು ಬರೆದಂತೆ, ಲಿಂಗವಂತರ ಕೂಸು ಬೆಳೆಯಹತ್ತಿದಂತೆಲ್ಲ, ಮನೆಯಲ್ಲಿ ನೋಡಿ ಅನುಕರಣದಿಂದ ತನ್ನ ದೇಹದ ಮೇಲೆ ಧರಿಸಿರುವ ಲಿಂಗದ (ಅದು ದೇವರೆಂಬ) ಕಲ್ಪನೆಯನ್ನು ಪಡೆದು, ಅದನ್ನು ಪೂಜಿಸುತ್ತ ಹೋಗುತ್ತದೆಂಬುದಾವುದೂ ಒಪ್ಪುವಂತಹ ಮಾತು. ಮನೆಯ ಹಿರಿಯರು ಲಿಂಗವರ್ಗವನ್ನು ಅರಿತು ಆಚರಿಸುವವರಾದ್ದರೆ, ಈ ಅನುಕರಣವು ತುಸುಮಟ್ಟಿಗೆ ಪಕ್ಷಕರವಾಗಬಹುದು; ಅವರು ಅರಿಯದವರಿದ್ದರೆ ಹುಡುಗರಾದರೂ ಅದನ್ನೇ ಅನುಕರಿಸುವರು. ಆದುದರಿಂದ ಈ ಅನುಕರಣವು ಯಾವಾಗಲೂ ಗುಣಕಾರಿಯೆಂದೇ ಹೇಳುವದಕ್ಕಾಗುವದಿಲ್ಲ. ತಾಯ್ತಂದೆಗಳು ಆ ಹುಡುಗನ ಪ್ರಶ್ನೆಗೆ ಸಮಯೋಚಿತವಾಗಿ ತಕ್ಕ ಉತ್ತರವನ್ನು ಹೇಳಿ, ಅವನ ಜ್ಞಾನವನ್ನು ಕ್ರಮದಿಂದ ಬೆಳಸುತ್ತ ಸಾಗಬೇಕು. ನೀನು ಧರಿಸಿದ ಲಿಂಗವು ದೇವರು (ಪಿಂಡಸ್ಥಲದ ಬೀಜರೂಪ ಕಲ್ಪನೆ) ಎಲ್ಲರೂ ಅವನಿಂದಲೇ ಹುಟ್ಟಿದ್ದಾರೆ, (ಪಿಂಡಜ್ಞಾನ ಸ್ಥಲದ ಬೀಜರೂಪ ಕಲ್ಪನೆ), ನಮಗೆ ಸುಖ ದುಃಖಗಳೆಲ್ಲ ಅವನಿಂದಲೇ ಪ್ರಾಪ್ತಿಸುತ್ತವೆ. ಆದಕಾರಣ ಅವನನ್ನು ಪೂಜಿಸಬೇಕು. (ಇದೇ ಸಂಸಾರ ಧ್ಯೇಯಸ್ಥಲದ ಬೀಜರೂಪ ಕಲ್ಪನೆ)

ಇತ್ಯಾದಿಯಾಗಿ ಹೇಳಿ ಅವನಲ್ಲಿ ಲಿಂಗಭಕ್ತಿಯನ್ನು ಜಾಗ್ರತಗೊಳಿಸಬೇಕು. ಆಗ ಲಿಂಗವನ್ನು ಹೇಗೆ ಪೂಜಿಸಬೇಕೆಂದು ಅವನು ಕೇಳುವನು. ಕೂಡಲೆ ಗುರುವಿನ ಕಡೆಗೆ ದೊಟ್ಟವನಾಡಿ, ಅವನ ಕಡೆಯಿಂದ ಅದು ಗೊತ್ತಾಗುವದೆಂದು ಹೇಳಿ, ಗುರುವಿನ ವಿಷಯವಾಗಿ ಅವನಲ್ಲಿ ಹಂಬಲವು ಹುಟ್ಟುವಂತೆ ಮಾಡಬೇಕು (ಇದೇ ಗುರುಕಾರುಣ್ಯಸ್ಥಲದ ಬೀಜರೂಪ ಧಾವನೆ). ಹೀಗೆ ಅನುಗೊಳಿಸಿದ ಬಾಲಕನು ಶಕ್ತಿಯ ಹೆಚ್ಚಿಯಾವ ಲಿಂಗಧಾರಣೆಗೆ (ಶಿವದೀಕ್ಷೆಗೆ) ತಕ್ಕವನಾಗುವನು. ಮುಂದೆ ಯೋಗ್ಯಸಮಯ ನೋಡಿ ಅವನಿಗೆ ಶಿವದೀಕ್ಷೆ ಮಾಡಿಸಬೇಕು.

ಇಲ್ಲಿ ಯಾರಾದರೂ, "ಹಿರಿಯರೇ ಹುಡುಗನಿಗೆ ಬೋಧಿಸುವುದನ್ನು ಬಿಟ್ಟು ಗುರುವನ್ನೇಕೆ ತೋರಿಸುವದು?" ಎಂದು ಆಕ್ಷೇಪಿಸಬಹುದು. ಹಾಗೆ ಸಮಾಧಾನಕರವಾಗಿ ಬೋಧಿಸಲಿಕ್ಕೆ ಎಲ್ಲ ಮಕ್ಕಳ ಹಿರಿಯರು ಬಲ್ಲವರಾಗಿರುವದಿಲ್ಲ, ಒಂದು ವೇಳೆ ಬಲ್ಲವರಿದ್ದರೂ ಅವರ ಅನೇಕ ಕೆಲಸಗಳಲ್ಲಿ ವೇಳೆ ಸಿಕ್ಕುವುದಿಲ್ಲ. ಸಿಕ್ಕರೂ ಶಿಕ್ಷಣ ವಿಷಯದಲ್ಲಿ ಅವರು ತರಬೇತುಹೊಂದಿರುವದಿಲ್ಲ. ಹೊಂದಿದ್ದರೂ ಅವರ ಬಳಿಯಲ್ಲಿ ಬೇಕಾದ ಉಪಕರಣಗಳಿರುವದಿಲ್ಲ. ಇದ್ದರೂ ಅತಿಪರಿಚಯ (ಸಲುಗೆ) ಯ ಮೂಲಕ ಅದು ತಕ್ಕಷ್ಟು ಫಲಂಕಾರಿಯಾಗುವದಿಲ್ಲ. ಬೇರೆ ಗೃಹಸ್ಥನಲ್ಲಿ ಹುಟ್ಟುವಂತೆ ನಯವಿಧಯಗಳು ಹುಡುಗನಲ್ಲಿ ತೋರಲಾರವು. ಆದಕಾರಣ ಯೋಗ್ಯ ಗುರುವನ್ನೇ ಹಿಂಬಾಲಿಸುವದು ವಿಹಿತ. ಎಷ್ಟೇ ಕಲಿತವರಿದ್ದರೂ ಈಗ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದನ್ನು ನಾವು ನೋಡುವದಿಲ್ಲವೇ!

ಲಿಂಗಧಾರಣೆಗೂ ಶಿವದೀಕ್ಷೆಗೂ ಅಂತರವಿಲ್ಲೆಂದು ಶ್ರೀಮಾನ್ ಜೀರಗೆಯವರು ಹೇಳುವುದು ಸತ್ಯವು. ಆದರೆ ಕೂಡಿಗೆ ಲಿಂಗಧಾರಣೆಯೇ ಆಗಿರುವದಿಲ್ಲ. ಅದು ಲಿಂಗಮುದ್ರೆಯೇ ಸರಿ! ಇನ್ನು ಪಶುಗಳಿಗೆಳೆದಂತೆ ಕೂಡವಿಂದೆಳೆಯುವದಿಲ್ಲ. ಪ್ರತ್ಯಕ್ಷ ಲಿಂಗವನ್ನೇ ಮಾಹೇಶ್ವರರಹಸ್ತದಿಂದ ಕಟ್ಟಿಸುವರು. ಅವರು ಅದಕ್ಕೆ ಕೆಲ ಸಂಸ್ಕಾರ ಮಾಡಿ ಕಟ್ಟುವರಾದರೂ ಅವೆಲ್ಲ ಶಿಷ್ಯನಿನ (ಅತ್ಯಂತ ಕಳಲಿನ) ಅರುಹಿನ ಸುಪ್ತಿಯಲ್ಲಿ ಆಗಿರುವದರಿಂದ ಅವು ಆಗಿಯೂ ಆಗದಂತೆಯೇ ಸೈ! ಶಿಷ್ಯನಿಯಲ್ಲಿ ಮಾಡುವ ಸಂಸ್ಕಾರದ ಮಹಿಮೆಯನ್ನು ಅದೆಷ್ಟು ಕೊಂಡಾಡಿದರೂ, ಆ ಸಂಸ್ಕಾರದಲ್ಲೇ ಬೀಜರೂಪದಿಂದ ಎಲ್ಲವೂ ಬಂದಿರುವ

ದೆಂದು ಅದೆಷ್ಟು ಬಣ್ಣಿಸಿದರೂ ಅದೆಲ್ಲ ವ್ಯರ್ಥ! ಯಾಕಂದರೆ ಅದಕ್ಕೆ ಪ್ರತ್ಯಕ್ಷ ಅನುಭವದ ಬೆಂಬಲವಿಲ್ಲ! ಅದೇ ನಿಜವಾಗಿದ್ದರೆ ನಮ್ಮ ಸಮಾಜವು ಮಿಕ್ಕ ಸಮಾಜಗಳಿಗಿಂತ ಹೆಚ್ಚು ಪ್ರಗತಿಯಲ್ಲಿರಬೇಕಾಗಿತ್ತಿತ್ತು; ಹಾಗೇನೂ ಈಗ ಇಲ್ಲೆಂದು ಬೇರೆ ಹೇಳಬೇಕಾಗಿಲ್ಲ. ಭೂಮಿ ಬೀಜಗಳು ಎಷ್ಟೇ ಶುದ್ಧವಿದ್ದರೂ ಮೊಳೆತ ಸಸಿಯ ರಕ್ಷಣೆ ಮಾಡಿ, ಕಾಲಕಾಲಕ್ಕೆ ಕಳೆ ತೆಗೆಯುವದು, ಗೊಬ್ಬರಹಾಕುವದು, ನೀರು ಕೊಡುವದು ಮೊದಲಾದ ಅವಶ್ಯ ಸಂಸ್ಕಾರಗಳನ್ನು ಒದಗಿಸದೆ ಹೋದರೆ, ಅದು ಬೆಳೆದು ದೊಡ್ಡದಾಗಿ ಫಲವನ್ನೆಂತು ಕೊಡುವುದು? ಬಾಲಕನಿಗೆ ಸರಸ್ವತಿಯ ಇಲ್ಲವೆ ಗಣಪತಿಯ ಪೂಜೆ ಮಾಡಿ ಅಕ್ಷರಾಭ್ಯಾಸಕ್ಕೆ ಆರಂಭಿಸಿ "ಮುಂದೆ ನೀನೇ ಶಾಲೆಯಲ್ಲಿ ಅನುಕರಣದಿಂದಲೇ ಕಲಿ" ಎಂದು ಹೇಳಿಬಿಟ್ಟು ಬಿಟ್ಟರೆ, ಅವನು ಪಂಡಿತನಾಗಬಹುದೇ? ಗುರುಗಳು ಕೃಪೆಯಿಂದ ಶಿಕ್ಷಣ ಕೊಟ್ಟು ಮುಂದುವರಿಸುವದೇ ಯೋಗ್ಯ. ಬರೇ ಜನ್ಮ ಸಂಸ್ಕಾರ ಅನುಕರಣಗಳಿಂದಲೇ ಉತ್ತಮ ಲಿಂಗಾಂಗಿಯೂ ಷಟ್‌ಸ್ಥಲಜ್ಞಾನ ಸಂಪನ್ನನೂ ಆಗುವನೆಂದು ಹೇಳುವದು ಸರಿಯಲ್ಲ. ಅದರಿಂದ ಬಹಿರಂಗದ ಕೆಲ ಲೌಕಿಕ ಆಚಾರವಿಚಾರಗಳು ಬರಬಹುದು ಅದರೆ ಲಿಂಗವೆಂದರೇನು? ಲಿಂಗಾಯತನೆಂದರೇನು? ಲಿಂಗವು ಶಿವ-ಶಕ್ತಿಯುತವಾಗಿರುವುದು ಹೇಗೆ? ತಾನು ಅದನ್ನು ಧರಿಸಿ ಜ್ಞಾನ-ಕ್ರಿಯಾವಂತನಾಗಿ ಅದು ಹೇಗೆ ವರ್ತಿಸಬೇಕು? ಅದರ ಪ್ರಯೋಜನವೇನು? ಲೋಕದಲ್ಲಿ ತಾನು ಪಡೆಯತಕ್ಕ ಧ್ಯೇಯವೇನು? ಪರಸನು ಯದವರ ಮೂರ್ತಿ ಪೂಜೆಗಿಂತ ತನ್ನ ಲಿಂಗಾರ್ಚನೆಯೇ ಶ್ರೇಷ್ಠವೆಂತು? ಇವೇ ಮೊದಲಾದ ಅನೇಕ ಗೂಢ ವಿಷಯಗಳು ತಿಳಿದು, ವೈಯುಂಡು, ಆಚರಿಸಬೇಕಾದರೆ, ಶಿವದೀಕ್ಷೆಯೂ ಅದರ ಶಿಕ್ಷಣವನ್ನು ಸರಿಯಾಗಿ ಕೊಡುವ ಗುರುವೂ ಅವಶ್ಯವಾಗಿ ಬೇಕೇಬೇಕು. ಸಮಯಾಚಾರದಲ್ಲಿ (ಮಾರ್ಗಕ್ರಿಯೆಯಲ್ಲಿ) ನಡಿಸುವದೇ ಶಿಕ್ಷಾಗುರುವಿನ-ಮನೆ ಗುರುವಿನ-ಕರ್ತವ್ಯವು. ಇಲ್ಲಿ ಮಾರ್ಗಕ್ರಿಯೆಯೆಂದರೆ ಬರೇ ಬಹಿರಂಗಲಿಂಗ ಪೂಜಾದಿ ಕ್ರಿಯೆಗಳನ್ನು ಮಾಡಿ, ಆ ವಿಷಯಗಳನ್ನೆಲ್ಲ ಮುಖಪಾಠ ಮಾಡಿ ಬಾಯಿಂದ ಹೇಳದರಿ ತೀರಲಿಲ್ಲ; ಆ ಪ್ರಕಾರ ತನ್ನ ಜೀವದಲ್ಲಿ ಆಚರಣೆಗೆ (ಪ್ರತ್ಯಕ್ಷ ವ್ಯವಹಾರದಲ್ಲಿ ಬಳಕೆಗೆ) ತರುವದೆಂದು ತಿಳಿಯಬೇಕು. ಹೀಗೆ ಬಹಿರಂಗದ ಕ್ರಿಯೆಗಳಳವಟ್ಟ ಮೇಲೆ ಅಂತರಂಗದ (ಮೀರಿದ) ಕ್ರಿಯೆಗಳನ್ನು ಆರಾಧಿಸುವುದು ಅವಶ್ಯ. ಅದಕ್ಕೆ ಜ್ಞಾನಗುರುವು ಬೇಕು. ಇದೆಲ್ಲ ಜನ್ಮಲಿಂಗಧಾರಣೆಯಿಪ್ಪರಿಂದಲೇ ಸಾಧ್ಯವಿಲ್ಲ.

ಶಿವದೀಕ್ಷೆಕೊಂದು ಈ ವಿಧವಾಗಿ ನಾವು ವೀರಶೈವತ್ವದ ಮರ್ಮವರಿಯದೆ, ಬರೇ ಜನ್ಮ ಸಂಸ್ಕಾರವೇ ಮುಖ್ಯವೆಂದೂ ಅದರಲ್ಲೇ ಎಲ್ಲವೂ ಅಡಕವಾಗಿರುವುದೆಂದೂ ಮುಂದೆ ಅನುಕರಣದಿಂದ ತಾನೇ ಪ್ರಾಪ್ತವಾಗುವುದೆಂದೂ ಭ್ರಾಂತಿಪಟ್ಟುಕೊಂಡೇ ಈಗ ಈ ನಿಕೃಷ್ಟಸ್ಥಿತಿಗೆ ಬಂದಿದ್ದೇವೆ. ನಮ್ಮಲ್ಲಿ ಶಿವಭಕ್ತಿಂ ಗುಣಗಳೆಲ್ಲ ಲೋಪವಾಗಿ, ಭವಿಗುಣಗಳಿಗೆ ಮಾತ್ರ ತವರುಮನೆಯಾಗಿದ್ದೇವೆ. ಸಂಘಟನೆ, ಪರಸ್ಪರಪ್ರೇಮ, ಮುಂತಾದವೇನೂ ಇಲ್ಲದೆ, ಬರೇ ದ್ವೇಷಾಸೂಯೆ, ಸ್ವಾರ್ಥಪರಾಯಣತೆ, ಅಹಂಕಾರಗಳ ಆಗರವಾಗಿದ್ದೇವೆ. ಇನ್ನುಮೇಲಾದರೂ ಎಚ್ಚತ್ತು ಕಣ್ತೆರೆದು ನಡೆಯುವಾ ಬನ್ನಿರಿ! ಹೀಗೆ ವಿಚಾರಿಸಿ ನೋಡಿದ್ದರೆ "ಲಿಂಗಕಟ್ಟಿಕೊಂಡವರಿಗೆ ಮತ್ತೊಮ್ಮೆ ಲಿಂಗಕಟ್ಟುವರು" ಎಂಬ ಆಕ್ಷೇಪಕ್ಕೆ ಅವಕಾಶವೇ ಇಲ್ಲವಾಗುವದು. ಹುಡುಗನ ಸ್ವಂತ ಆಪೇಕ್ಷೆಯಂತೆ ಅವನಿಗೆ ಮಾಡುವ ಮೊದಲನೆಯ ಸಂಸ್ಕಾರವೆಂದರೆ ಶಿವದೀಕ್ಷೆಯೇ, ಅರ್ಥಾತ್ ನಿಜವಾದ ಲಿಂಗಧಾರಣವೇ ಸರಿ. ಜನ್ಮ ಸಂಸ್ಕಾರವು ವಿವಾಹದ ಪೂರ್ವದಲ್ಲಿ ಕನ್ಯಾನಿಶ್ಚಯ ಮಾಡುವ ವಿಧಾನದಂತೆ ಇರುವುದೆಂದು ಒಪ್ಪಬಹುದೇ ವಿನಾ ಅದೇ ಶಿವದೀಕ್ಷೆಯೆಂದು ಎಣಿಸಕೂಡದು. ವಾಙ್ನಿಶ್ಚಯದ ಕನ್ಯೆಯೇ ಹೆಂಡತಿಯಾಗತಕ್ಕವಳಾದರೂ ಅಕೆಗೆ ವಿವಾಹ ಸಂಸ್ಕಾರವಾಗಲೇಬೇಕು. ಆದಿಲ್ಲದೆ ಆಕೆ ಹೆಂಡತಿಯಾಗಲಾರಳು. ಅದೇ ಪ್ರಕಾರ ಜನ್ಮಸಂಸ್ಕಾರ ಹೊಂದಿದವನನ್ನು ಶಿವದೀಕ್ಷೆಗೊಳಿಸದೆ ಬಿಟ್ಟರೆ ಅವರು ಲಿಂಗಾಯತರಾಗಲಾರರು. ಬರೇ ಲಿಂಗಮುದ್ರೆಯು ಹಸುವಿನಂತೆ ಭವಿಗಳೇ ಆಹುದು!

ಇಲ್ಲಿ ಇನ್ನೊಂದು ಸಂಗತಿಗೆ ಲಕ್ಷ್ಯಗೊಡುವದು ಅವಶ್ಯವದೆ. ಹಳ್ಳಿಪಟ್ಟಿಗಳಲ್ಲಿ ಜನ್ಮಸಂಸ್ಕಾರವು ಅದು ಹೇಗೆ ನಡೆಯುತ್ತದೆಂಬುದೇ ಆ ವಿಷಯ. ಪಟ್ಟಿಡೆಗರಿಗೆ ಅದರ ಅನುಭವವು ಅಷ್ಟೇನೂ ಇರುವ ಸಂಭವವಿಲ್ಲ. ಶ್ರೀವಾನ್ ಜೀರಗೆಯವರು ಅದರಲ್ಲೇ ತ್ರಿವಿಧ ದೀಕ್ಷೆಗಳೂ ಅಷ್ಟಾವರಣಗಳೂ ಸಂಕ್ಷೇಪತಃ ಬೀಜರೂಪದಿಂದ ಒದಗುತ್ತವೆಂದು ಹೇಳುವದು ಸರಿ ಇರಬಹುದು. ಆದರೆ ಪ್ರತ್ಯಕ್ಷ ಹಳ್ಳಿಯ ಅನುಭವ ವಿರುವವರಿಗೆ ಅದು ಸಮ್ಮತವಾಗುವದು ಕಠಿಣವು. ಏಕಂದರೆ ಇಲ್ಲಿ ಜನ್ಮ ಸಂಸ್ಕಾರವು ಸರಿಯಾಗಿ ನಡೆಯುವುದಿಲ್ಲ. ಅದಕ್ಕೆ ಅಯ್ಯತನ [illegible] ವರ್ಷದ ಅನನುಭವ, ಬಾಲ

ಮಹೇಶ್ವರರು ಅನೇಕ ಸಾರಿ ಬರುವುದುಂಟು. ಇದಲ್ಲದೆ ಏನೂ ಅರಿಯದ, ಬರೇ ಹೆಸರಿಗೆ ಮಾತ್ರ ಸ್ವಾಮಿ ಎಂದು ಹೇಳಿಸಿಕೊಳ್ಳುವ, ದಾಡ್ಡ ವಯಸ್ಸಿನ ಅಯ್ಯನವರಾವರೂ ಬಹು ಜನರಿರುವುದುಂಟು. ಅವರನ್ನು ಬಿಟ್ಟರೆ, ಬೇರೆ ಮಹೇಶ್ವರರೇ ಸಿಗುವುದಿಲ್ಲ. ಮೇಲಾಗಿ ಅವರೇ ಮಠವನ್ನು ಮತವವರೂ ಹಕ್ಕುದಾರರೂ ಸಹ ಆಗಿರುತ್ತಾರೆ. ಇಂತಹರ ಸಂಖ್ಯೆ ಇತ್ತಿತ್ತ ಕಡಿಮೆಯಾಗುತ್ತ ನಡೆದಿದ್ದರೂ, ಇನ್ನೂ ನೋಡಲಿಕ್ಕೆ ಬಹಳೇ ಕಡೆ ದೊರೆಯುವದೇನೂ ಅಪರೂಪವಲ್ಲ. ಇರಲಿ. ಈ ಬಾಲ ಮಹೇಶ್ವರರಾಗಲಿ ಒಲಿತ ಮಾಹೇಶ್ವರರಾಗಲಿ ಸುಮ್ಮನೆ ತಮ್ಮ ಹಸ್ತ ಸ್ಪರ್ಶನದಿಂದ ಆ ಲಿಂಗ ಕೊಡುವರೇ ವಿನಾ, ಯಾವ ವಿಧಾನ ಮಾಡುವದನ್ನು ಅರಿಯರು. ಪಡೆಯುವದು ಕಳಲು, ಕೊಡುವವರು ಇಂತಹರು, ಹೇಗಾದರೂ ಒಮ್ಮೆ ಸಂಸ್ಕಾರ ಮುಗಿದು ಹೋಗಿ ಊಟಕ್ಕೆ ಮಾರ್ಗವಾಗಲೆನ್ನುವ ಅಶಿಕ್ಷಿತ ತಂದೆತಾಯ್ತಂದೆಗಳು, ಇಂತು ತ್ರಿದೋಷ ಸ್ಥಿತಿಯಲ್ಲಿ ಆ ಸಂಸ್ಕಾರದ ಗತಿ ಏನಾಗುವದೆಂಬುವನ್ನು ಹೇಳಲಿಕ್ಕೆ ಬೇಡ. ಸುಮ್ಮನೆ ಜಗ್ಗಿ ಅದನ್ನು ಶಿವದೀಕ್ಷೆಗೆ ಹೇಗಾದರೂ ಹೋಲಿಸಿ ತೋರಿಸಿದಪ್ಪಕ್ಕೆ ಅದು ಸಮುಚಿತವೆನಿಸದು. ಕೂಸಿನ ತಲೆಯ ಮೇಲೆ ಹಸ್ತವಿಡುವದೂ ಕಿವಿಯಲ್ಲಿ ಮಂತ್ರೋಪದೇಶ ಮಾಡುವದೂ ಮುಂತಾದ ವಿಷಯಗಳು, ಇತ್ತ ಕಡೆಯ ಅನುಭವದಿಂದ ನೋಡಿದರೆ, ಕೇವಲ ಕಟ್ಟು ಕಥೆಗಳಂತೆಯೇ ತೋರುತ್ತವೆ ಎಂಟನೇ ತಿಂಗಳ ಸಂಸ್ಕಾರಕ್ಕಂತೂ ಹೀಗೆ ಸಂಬಂಧಗೊಳಿಸುವದು ಶಕ್ಯನೇ ಇಲ್ಲ. ಜನ್ಮ ಲಿಂಗಧಾರಣವು ಒಂದು ವಿಧವ ಲಿಂಗ ಮುದ್ರೆಯೇ ಎಂಬುದಕ್ಕೆ ಈ ಅಷ್ಟಮಮಾಸ ಸಂಸ್ಕಾರವೇ ಸಾಕ್ಷಿ. ಸಾರಾಂಶವೇನೆಂದರೆ ಅದು ಶೀಲಾಚಾರಕ್ಕೆ ಜನುವಾಗಲೆಂದು ಧರಿಸಿದುದೇ ಹೊರತು, ಇನ್ನೇ ಹೆಜ್ಜೆಯೆನಿಸುವ ಲಿಂಗಧಾರಣೆಯಲ್ಲವೆಂದು ಧಾರಳವಾಗಿ ಹೇಳಬಹುದು.

ಈ ವಿವರಣೆಯಲ್ಲಿ ಹೊಗಡುವ ಮಥಿತಾರ್ಥವೇನೆಂದರೆ— (೧) ಜನ್ಮ ಲಿಂಗಧಾರಣವು ಅಲಿಂಗಿ ಸಂಪರ್ಕ ತಪ್ಪಿಸಿ ಶೀಲಪಾಲನೆ ಮಾಡಿಕೊಳ್ಳುವ ಉದ್ದೇಶದಿಂದ ತಾಯಿತಂದೆಗಳು ಮಾಡಿವ ಯೋಜನೆ. (೨) ಅದಾದರೂ ಕೇವಲ ಅಜ್ಞಾನ ಸ್ಥಿತಿಯಲ್ಲಿ ಕಳಲಿರುವಾಗ ಅದು ಆಗಿಯೂ ಆಗದಂತೆಯೇ ಸರಿ. (೩) ೧೦೧ ಸ್ಥಳಗಳ ಮೊದಲಿನ ನಾಲ್ಕು ಹೆಜ್ಜೆಗಳನ್ನು ನಡೆದ ಬಳಿಕ ಆದುದಲ್ಲ. (೪) ತನಗೋಸುಗ ಇಚ್ಛೆಯಿಂದ

ಕೂಸು ತಾನು ಪಡೆದುದಲ್ಲ (೫) ದೀಕ್ಷಾಕಾಲದ ಸಂಸ್ಕಾರಗಳೆಲ್ಲ ಜ.ಗ
ಲಿಂಗಧಾರಣೆಯಲ್ಲಿ ಬೀಜವೂಪದಿದಾದರೂ ಆಗುತ್ತವೆಂದು ನಂಬ್ಕೂ
ವದು ಅಪ್ರಶಸ್ತ. ಒಂದು ವೇಳೆ ನಂಬಿದರೂ ನಿಷ್ಫಲ. ಪ್ರತ್ಯಕ್ಷತೆಯೆ
ಇದಕ್ಕೆ ನಿದರ್ಶನ. (೬) ಇನ್ನು ಸಂಸ್ಕಾರಕ್ಕೆ ಸಾಮಾನ್ಯ ವಾಹೇಶ್ವರರು
ಸಾಕು. ಆದರೆ ಶಿವದೀಕ್ಷೆ ವಿಶೇಷವೆನಿಸುವ ಪಟ್ಟಚಾರಾಧಿಕಾರಿ ಗುರು
ವಗದವರಿಲ್ಲದೆ ನಡೆಯದು (೭) "ಪಂಕಿಯೇರನ್ನು ತಕ್ಕೊಳ್ಳುವದಾದ
ಶಿವದೀಕ್ಷೆ ಬೇಕು; ಲಿಂಗಾಯತರಲ್ಲಿ ಹುಟ್ಟಿದವರಿಗೆ ಅದು ಬೇಡ'
ಎನ್ನುವದು ಉಚಿತವಲ್ಲ. (೮) ಶಿವದೀಕ್ಷೆಯು ಅನವಶ್ಯವಾಗಿದ್ದರೆ ವಾಹೇ
ಶ್ವರರು ಹಿಂದೆಯೂ ಈಗಲೂ ಸಹ ಇದನ್ನು ಹೊಂದುತ್ತಿದ್ದಿಲ್ಲ. ಅದು
ಅವರಲ್ಲಿ ಸಾರ್ವತ್ರಿಕವಾಗಿದೆ.

ನನಗೆ ತೋರಿದುದನ್ನು ಮೇಲೆ ಹೇಳಿರುವೆನು. ಇದನ್ನೂ ಕೀರ್ತನ
ಕೇಸರಿ ಶಿವಮೂರ್ತಿ ಶಾಸ್ತ್ರಿಗಳು ಮತ್ತು ಶ್ರೀಮಾನ್ ಜೀರಗೆಯವರು
ಬರೆದುದನ್ನೂ ಸಮಾಲೋಚಿಸಿ, ವಾಚಕರು ತಾವೇ ಒಂದು ನಿರ್ಣ
ಯಕ್ಕೆ ಬರಬೇಕು; ಇಲ್ಲವೆ ತಮ್ಮ ಮತವನ್ನು ಪ್ರಸಿದ್ಧಿಸಬೇಕು. ಒಟ್ಟಿಗೆ
ನಿಜವಾದುದು ಜನತೆಯ ಮುಂದೆ ಬರುವದೇ ಇಷ್ಟವಾಗಿದೆ.

ಇದು ಭಾಗ್ಯವಯ್ಯ!

(ಲೇ:- ಶ್ರೀ. ವೀರೇಶ್ವರ, ಬೆಂಗಳೂರುನಗರ)

ಇದುಭಾಗ್ಯ ಇದುಭಾಗ್ಯ ಇದುಭಾಗ್ಯವಯ್ಯ।
ಪದಮಲ ಶಿವಾಚಾರ ಪಥವನರಿದಾಚರಿಪು ॥
ದಿದುಭಾಗ್ಯ ಇದುಭಾಗ್ಯ ಇದುಭಾಗ್ಯವಯ್ಯ ॥ಪ॥

ಸ್ಥೂಲ ಸೂಕ್ಷ್ಮದ ಕಾರಣದ ತನುಗಳೊಳಗಿರುವ
ಮೂಲ ಆಣವ ಮಾಯ ಕಾರ್ಮಿಕ ಮಲವ ಕಳೆದು
ಶೀಲದಿಷ್ಟ ಪ್ರಾಣ ಭಾವ ಲಿಂಗಗಳಿಡುವ ॥೧॥

ಅಮಲ ಲಿಂಗಾಚಾರ ಶಿವ ಗಣಾಚಾರಗಳು
ವಿಮಲ ಭೃತ್ಯಾದಿ ಶೈವಾಚಾರಗಳು ಎನಿಪ
ಸುಮನ ಪಂಚಾಚಾರಗಳ ಸಂಗೊಳಿಸಿಕೊಂಬ ॥೨॥

ಶೂರಹಸ್ತದ ಖಡ್ಗಧಾರೆಯೊಲು ಸೂಕ್ಷ್ಮವಹ
ವೀರಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ
ನೀರಜದೊಲಿಹ ಶರಣ ಐಕ್ಯ ಷಟ್‌ಸ್ಥಲದರಿವು ॥೩॥

ವಿನುತ ಗುರುಲಿಂಗ ಜಂಗಮ ಪಾದುದಕವಾದಿ
ಘನಪ್ರಸಾದವು ಭಸ್ಮ ರುದ್ರಾಕ್ಷಿ ಮಂತ್ರಗಳ
ಮನ ಬುದ್ಧಿ ಚಿತ್ತ ಶರೀರಗಳೊಳವಡಿಪುದಿದು ॥೪॥

ಶಶಿಧರನ ಭಕುತಿಯನು ವಸುಧೆಯೊಳು ಬಿತ್ತಿರುವ
ಉಪಮನಯನನ ರೂಪರೇಷೆಗೊಂಡಿರುವ ಶ್ರೀ
ಬಸವಪ್ರಭು ಗುರುಚನ್ನಬಸವಾದಿಗಳ ನೆನೆವ ॥೫॥

ವೀರಶೈವ ವಸಂತವನದೆ ವಿಹರಿಸುತಿರ್ದು
ಸಾರ ಸಚರಾಚರಕು ಲೇಸ ಬಯಸುತಲಿರುವ
ವೀರೇಶ್ವರನ ಧರ್ಮಸುಧೆಯ ನೀಂಟುತೆ ನಲಿವ ॥೬॥
ಇದುಭಾಗ್ಯ ಇದುಭಾಗ್ಯ ಇದುಭಾಗ್ಯವಯ್ಯ!

ವೀರಶೈವ ವಾಙ್ಮಯ ಸ್ವರೂಪು.

(ಲೇಖಕ– ಕೈ. ವಾ. ಬಿ. ಟಿ. ಗಜ್ಜಿನಮನಿ ಎಮ್. ಏ. ಬಿ. ಟಿ.)

ಜೈನಕವಿಗಳು ಮೊದಲಿನ ಕಾಲದಲ್ಲಿ ಅನೇಕತರದ ಲೌಕಿಕ ಚರಿತ್ರೆಗಳನ್ನು, ಪಾರಮಾರ್ಥಿಕವಾದ ತೀರ್ಥಂಕರ ಪುರಾಣಗಳನ್ನು ಮತ್ತು ಶಾಸ್ತ್ರೀಯವಾದ ಗ್ರಂಥಗಳನ್ನು ಬರೆದು ಕನ್ನಡದ ಮೇಲೆ ತಮ್ಮ ವರ್ಚಸ್ಸನ್ನು ಅಚ್ಚೊತ್ತಿಯುದಂತೆ ಕೂಡ್ರಿಸಿದರು. ಆದರೆ ೧೨ನೆಯ ಶತಮಾನದಲ್ಲಿ ಜನರಲ್ಲಿ ಧರ್ಮಜಾಗ್ರತಿಯೂ ಸ್ವತಂತ್ರ ವಿಚಾರಗಳೂ ತಲೆಯೆತ್ತಿ ಜನರ ಆತ್ಮಿಕ ವಿಚಾರದಲ್ಲಿ ಜೀವನಚರಿತ್ರೆಗಳಲ್ಲಿ ಕ್ರಾಂತಿಯಾದಂತೆ ವಾಙ್ಮಯದಲ್ಲಿಯೂ ಚಳವಳಿಯಾರಂಭಿಸಿತ್ತು. ಅದರ ಪ್ರಚಾರಕರು ಬಸವನೇ ಮೊದಲಾದ ವಚನಕಾರರು ಆಗಿದ್ದರು. ಆಗೊಂದು ತೆರವಾದ ಗದ್ಯವೇ ಹೊಸದಾಗಿ ಪ್ರಾರಂಭಿಸಲ್ಪಟ್ಟಿತು. ಅದು ಜೈನ ಮತದ ನಾಸ್ತಿಕ್ಯದಿಂದ ಸ್ವತಂತ್ರವಾಗಬಯಸಿದ್ದಂತೆ, ಭಕ್ತಿಯನ್ನೇ ತಳಹದಿಯಾಗಿ ಮಾಡಿಕೊಂಡಂತೆ, ರಾಜರ ಸಭಾಸ್ಥಾನವನ್ನು ಬಹಿಷ್ಕರಿಸಿ ಜನಸಮುದಾಯವನ್ನೇ ಉದ್ದೇಶಿಸುವಂತೆ ಗುಣಗಳಿಂದ ಕೂಡಿತ್ತು. ಈಗಿದ್ದ ಶೈಲಿಯು ಬಸವನ ಮುಂದೆ ಉಗಮವಾಗಿ ಬಸವನ ಮತ್ತು ಅವನ ಸರಿಕಂಲ್ಲಿ ಪೂರ್ಣದೆಸೆಗೆ ಬಂದು ಬೆಳೆಯಿತು. ಸ್ವಲ್ಪ ಶಬ್ದಗಳಿಂದ ಗೂಢಾರ್ಥವು ಮಾರ್ಮಿಕವಾದ ಮತ್ತು ದೈನಿಕ ಭಾಷೆಯಲ್ಲಿಯೇ ಅಚ್ಚುಕಟ್ಟಾಗಿ ಹೇಳಿದೆ. ಕಾವ್ಯಗುಣವಾದ ನಾದವು ಅದರಲ್ಲಿದ್ದು, ಮುಕ್ತಾಯ ಸ್ವರ-ಅರ್ಥಗಳೊಡನೆ ಕೂಡಿ ಓದಿದೊಡನೆ ಕರ್ಣಗಳಲ್ಲಿಯೂ ಮನದಲ್ಲಿಯೂ ನಿಂತುಕೊಳ್ಳುವಂತಿದೆ. ಕಾವ್ಯದೊಳಗೆ ಗದ್ಯವನ್ನೂ, ಗದ್ಯದೊಳಗೆ ಕಾವ್ಯವನ್ನೂ ಕೂಡಿಸಿ ಹೆಣೆದಿದೆ. ಈ ತರದ ಗದ್ಯವು ಬರೀ ಕನ್ನಡ ಭಾಷೆಯ ವಾಗ್ವೈಖರಿಯನ್ನು ಮಾತ್ರ ತೋರಿಸದೆ ಜಗತ್ತಿನ ಗದ್ಯ ಶೈಲಿಯೊಳಗೆ ಯಾವ ದರ್ಜಿ ಕಡಿಮೆಯಾಗದಂತಹದೆಂದು ಹೇಳಬಹುದು. ಈ ಕಾಲದ ವಚನ ವೈಖರಿಯು ಸರ್ವಜ್ಞನ ವಚನಗಳಲ್ಲಿ ಫಲಬಿಟ್ಟಿತೆಂದು ತಿಳಿಯಬೇಕು. ಈ ವಚನಗಳಲ್ಲಿ ಅಗಮುದಲ್ಲಿನ ಸಂಸ್ಕೃತವಾಕ್ಯಗಳುಳ್ಳಂತಹ ಸಮುದ್ರದಲ್ಲಿ ಹಚ್ಚಿನ ನಡುಗಡ್ಡೆಗಳಂತೆ ಕಂಗೊಳಿಸುವವು. ವಚನ ಪ್ರಪಂಚಕ್ಕೆ ಶರಣರು, ಶರಣೆಯರು ಸಹಾಯ ಮಾಡಿರುವರು. ಅವರಲ್ಲಿ ಅಕ್ಕಮಹಾದೇವಿ, ಬಿಜ್ಜಮಹಾದೇವಿ, ನೀಲಲೋಚನೆ, ಮುಕ್ತಾಯಕ್ಕ, ಕಾಳವ್ವೆ

ಬೊಂತಾದೇವಿ, ಅಕ್ಕನಾಗಾಯಿ, ಮಸಣಮ್ಮ, ಗೊಗ್ಗವ್ವೆ, ಇವರೇ ಪ್ರಾಮುಖ್ಯರು.

ಜೈನ–ಬ್ರಾಹ್ಮಣಕವಿಗಳು ತಮ್ಮ ಮತ ತತ್ವಗಳನ್ನು ಸಂಸ್ಕೃತ ಭಾಷೆಯಲ್ಲಿಯೇ ವಿಶೇಷವಾಗಿ ಬರೆದಿದ್ದಾರೆ. ಆದರೆ ವೀರಶೈವರು ತಮ್ಮ ಮತ ಸಿದ್ಧಾಂತಗಳನ್ನು ಬೆಳಿಸುವದಕ್ಕಾಗಿ ಸಂಸ್ಕೃತದಲ್ಲಿ ಅಷ್ಟೊಂದು ಸಾಹಸ ಪಟ್ಟಿರುವದನ್ನು ನಾವು ನೋಡಲಾಗುವದಿಲ್ಲ.

ಮುಖ್ಯವಾಗಿ ವೀರಶೈವ ಮತವಿಷಯಗಳಲ್ಲಿ ಅಂಗಸ್ಥಲ ೪೫, ಲಿಂಗಸ್ಥಲ ೫೭ ಹೀಗೆ ನೂರೊಂದು ಸ್ಥಲಗಳು ವೀರಶೈವವನ್ನೆಲ್ಲ ತಿಳಿಸುವುದರಿಂದ ದೀಕ್ಷಾವಿಧಾನಗಳು, ಪೂಜಾವಿಧಾನಗಳು, ಪ್ರಸಾದ, ವಿಭೂತಿ, ರುದ್ರಾಕ್ಷಿ, ಪಾದೋದಕಾದಿಗಳ ಮಹಿಮೆಯ ನಿರೂಪಣಗಳೂ ಜಂಗಮಾರ್ಚನೆ ಸದ್ಭಕ್ತಿ ನಮಸ್ಕಾರಾದಿಗಳ ಫಲವಿವರಣೆಗಳು ಮುಂತಾದವುಗಳನ್ನೆಲ್ಲ ಹೇಳಿ ಜನರು ಪ್ರವೃತ್ತಿಮಾರ್ಗವನ್ನು ಬಿಟ್ಟು ನಿವೃತ್ತಿ ಮಾರ್ಗಾವಿುಗಳಾಗುವಂತೆ ಈ ವಚನಗಳು ಬೋಧಿಸುತ್ತವೆ. ಈ ಷಟ್‌ಸ್ಥಲಗಳ ಒಳಭೇದಗಳು ಎಷ್ಟೇ ಆದರೂ ಇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಂಡು ಅರಿಷಡ್ವರ್ಗಗಳನ್ನು ಗೆದ್ದು ಕರಸ್ಥಲದಲ್ಲಿ ಲಿಂಗವನ್ನಿಟ್ಟುಕೊಂಡು ಲಿಂಗಾಂಗ ಸಾಮರಸ್ಯವನ್ನು ಹೊಂದಿ ಸಮಾಧಾನದಿಂದ 'ಶಿವೋಹಂ' ಎಂದು ಸ್ತೋತ್ರವಾಡುತ್ತ ಮುಕ್ತಿಯನ್ನು ಪಡೆಯಬೇಕೆಂಬುದೇ ವಚನಕಾರರ ಉಪದೇಶಸಾರಾಂಶವಾಗಿದೆ. ಅಷ್ಟಾವರಣಾದಿಗಳನ್ನು ಆಚರಣೆಯ ವಿಧಿಗಳನ್ನು ಬಣ್ಣಿಸಿ ಎಲ್ಲರೂ ಭಕ್ತಿ-ಜ್ಞಾನ-ವೈರಾಗ್ಯ ತತ್ಪರರಾಗಬೇಕೆಂದು ಒತ್ತಿ ಹೇಳುವದೇ ವಚನಕಾರರ ಸಾಂಪ್ರದಾಯ.

ಶೈಲಿ ದೃಷ್ಟಿಯಿಂದ ವಚನಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಒಂದು ರಸ ಸಂಬಂಧವನ್ನು ಹೆಚ್ಚು ಪಡೆದುದು, ಮತ್ತೊಂದು ರಸಸಂಬಂಧವನ್ನಷ್ಟು ಪಡೆಯದೇ ಇದ್ದುದು.

ಮೊದಲಿನ ಪಂಗಡಕ್ಕೆ ಸೇರಿದ ವಚನಗಳಲ್ಲಿ ಮತತತ್ವ ನಿರೂಪಣಾರ್ಥವಾಗಿ ಉಪಯೋಗವಾಗುವುದರಿಂದ ವಚನಗಳಲ್ಲಿ ಅಭಿಪ್ರಾಯವು ಸೂತ್ರಗಳಲ್ಲಿರುವಂತೆ ಅಲ್ಪಾಕ್ಷರಗಳಿಂದ ಪೋಷಿತವಾಗಿ, ಆ ವಚನಗಳು ಮಾತಿನ ಬಿಗಿಕಟ್ಟನ್ನು ಹೊಂದಿವೆ. ಭಕ್ತ್ಯತಿಶಯಗಳಿಂದ ಕವಿತಾವೇಶವು ತಲೆದೋರಿದಾಗ ವಚನಗಳು ಹೊರಹೊರಡುವದರಿಂದ ಕಾವ್ಯ

ಲಕ್ಷಣವಾದ ರಸಸ್ಫೂರ್ತಿಯುನ್ನವು ಪಡೆದಿರುತ್ತವೆ. ಈ ರಸಸ್ಫೂರ್ತಿಯು ದೆಸೆಯಿಂದಲೇ ಪ್ರಾಸಾನುಪ್ರಾಸಗಳು ಅನೇಕ ವಚನಗಳಲ್ಲಿ ನಿರಾಯಾಸವಾಗಿ ಹೊಂದಿಕೊಂಡು ಬಂದಿರುವವು. ಕ್ಲಿಷ್ಟವಾದ ಛಂದೋನಿಯಮಗಳಿಗೆ ಇವು ಒಳಬಾರದಿದ್ದರೂ ವಚನಗಳ ಭಾಗಗಳು ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ ಮತ್ತು ಹಾಡುಗಳಿಗೆ ಅವಕಾಶವನ್ನು ಕೊಟ್ಟಿರುತ್ತವೆ. ಕೆಲವು ಗ್ರಂಥಗಳಿಗೆ ವಚನನಾಮವಿದ್ದರೂ ಒಳಗಡೆಯೆಲ್ಲ ಹಾಡುಗಳೇ ಇರುವುದೂ ಹಾಡುಗಳನ್ನು ಸಾಂಘಿತ್ತಾಗಿ ವಚನಗಳಿಂದೇ ಕರೆಸ್ಪದೂ ಉಪಪ್ಪಂಛಕಗಳಾಗಿವೆ.

ಆಂಗ್ಲೇಯ ಭಾಷೆಯಲ್ಲಿ (Enphimistic Style) ಎಂದು ಯಾವದಕ್ಕೆ ಅನ್ನುತ್ತಾರೋ ಸ್ವಲ್ಪ ಹೆಚ್ಚು ಕಡಿಮೆ ಆ ಶೈಲಿಯನ್ನೇ ವಚನಗಳು ಹೊಂದಿವೆಯೆಂದು ಹೇಳಬಹುದು. ವಚನಗಳನ್ನು ಕೇಳುವವರ ಕಿವಿಗೆ ಇಂಪಾಗಿ, ಓದುವವರ ಮನಸ್ಸಿಗೆ ಮನೋಹರವಾಗಿ, ಪದ ವೈಚಿತ್ರಿಯನ್ನು ಹೊಂದಿರುವದಲ್ಲದೆ ಹಾಡುವುದಕ್ಕೂ ಅನುಕೂಲವಾಗಿರುವವೆಂಬುದನ್ನು ಯಾರೂ ಮರೆಯಬಾರದು. ವಚನಗಳಲ್ಲಿ ಉಪಯೋಗವಾಗಿರುವ ಪದಗಳು ಹಳೆಗನ್ನಡದವೆಂದು ಹೇಳುವ ಹಾಗಿಲ್ಲದಿದ್ದರೂ ವಾಕ್ಯಸರಣಿಯು ಕೆಲವು ಮಟ್ಟಿಗೆ ಹಳೆಗನ್ನಡ ಶೈಲಿಯನ್ನೇ ಅನುಸರಿಸಿದೆ ಎಂದು ಹೇಳಬಹುದು. ಬಸವನ ಕಾಲದ ವಚನಗಳಲ್ಲಿ ನಾಲ್ಕು ಭಾಗವಾಗಿ ಅವನ್ನು ವಿಭಾಗಿಸಬಹುದು. (೧) ಬಸವೇಶ್ವರನ ಮಾದರಿಯವು. ಭಕ್ತಿಯ ವಚನಗಳು. (೨) ಚನ್ನಬಸವನ ಮಾದರಿಯವು. ಜ್ಞಾನಮಯ ವಚನಗಳು, (೩) ಅಲ್ಲಮನ ಮಾದರಿಯವು. ಅಧ್ಯಾತ್ಮಿಕ ವಚನಗಳು. (೪) ಆಂಬಿಗರ ಚೌಡಯ್ಯನ ಮಾದರಿಯವು. ನಿಷ್ಠುರವಾದ ವಿಡಂಬಾತ್ಮಕ ವಚನಗಳು.

ಇನ್ನು ಕಾವ್ಯಪ್ರಪಂಚದಲ್ಲಿ ಹರಿಹರ, ಕೆರೆಯ ಪದ್ಮರಸ, ರಾಘವಾಂಕರು ವೀರಶೈವರಲ್ಲಿ ಆದ್ಯಕವಿಗಳು. ಕಲ್ಯಾಣವು ಆಗ ವಚನ ಗ್ರಂಥಗಳಿಗೆ ಕೇಂದ್ರಸ್ಥಾನವಾದಂತೆ ಹಂಪಿಯು ಕಾವ್ಯಕ್ಕೆ ಆಗಿದೆ.

ಹರಿಹರನು ೬೩ ಪುರಾತನರ ಚರಿತೆಯನ್ನೂ ಇನ್ನೂ ಹಲವು ಮಂದಿ ಶಿವಭಕ್ತರ ಚರಿತೆಯನ್ನೂ ರಗಳೆ ರೂಪದಲ್ಲಿಯೇ ಬರೆದನು.

ನೋಡುವೊಡೊಂದಕ್ಷರಮದು ಮಾಡುವಡುಚ್ಚರಣೆಗರಿದು
ಮೂರುಂತೆರನುಂ।
ಕೂಡೆ ಕವಿತತಿ ವಿಚಾರಿಸದೇಡದರಿಂ ರಳಕುಳಕ್ಷಳಂಗಳನಿದಿರೊಳ್।

ಎಂದು ರಳಕುಳ ಭೇದವನ್ನು ಕಿತ್ತೊಗೆದನು. ರಾಘವಾಂಕನು ಕಾವ್ಯಕ್ಕೆ ಸುಲಭವಾದ ರಮಣೀಯವಾದ ಷಟ್‌ಪದೀ ರೂಪವನ್ನು ಕಾವ್ಯ ಪ್ರಪಂಚಕ್ಕೆ ತಂದುಕೊಟ್ಟನು. ಮತ್ತು ಇವನು ಆಗ ಪ್ರಚಾರದಲ್ಲಿದ್ದ ಕಾವ್ಯದ ವಿಪುಲ ವರ್ಣನೆಯನ್ನು ಬಿಟ್ಟುಕೊಟ್ಟು ಕಥಾ ಪ್ರಸಂಗವನ್ನೂ ನೀತಿಬೋಧೆಯನ್ನೂ ಹೆಚ್ಚು ಮಾಡಿದನು. ಪದ್ಮರಸನು ರಘಟೆಯಲ್ಲಿಯೇ ಕಾವ್ಯವನ್ನು ಬರೆದನು. ಪಾಲ್ಕುರಿಕೆ ಸೋಮನಾಥನೂ ರಗಳೆಯಲ್ಲಿಯೇ ಕನ್ನಡ ಕವಿತೆ ಬರೆದನು.

ಭಕ್ತಿರಸವನ್ನೇ ಪ್ರಾಧಾನ್ಯವಾಗಿಟ್ಟುಕೊಂಡ ವೀರಶೈವರಲ್ಲಿ ಒಮ್ಮೊಮ್ಮೆ ಶೃಂಗಾರರಸ ಭೂಯಿಷ್ಠ ಕಾವ್ಯ ಬರೆದವರುಂಟು. ಸೋಮೇಶ್ವರ ಮತ್ತು ಷಡಕ್ಷರದೇವ ಇವರು ಒಮ್ಮೊಮ್ಮೆ ಪ್ರೌಢವಾಗಿಯೂ ಲಕ್ಷಣಬದ್ಧವಾಗಿಯೂ, ಇರುವ ಶೈಲಿಯನ್ನು ಬರೆದು ಇದರಲ್ಲಿ ತಮ್ಮ ವಿದ್ವತ್ತಿನ ಮೇರೆಯನ್ನು ತೋರ್ಪಡಿಸಿದರು. ಇವರಲ್ಲದೆ ಪದ್ಮಣಾಂಕ, ಷಡಕ್ಷರದೇವ. ಸುರಂಗಕವಿ, ವೀರಭದ್ರರಾಜ, ಚಂದ್ರಕವಿ, ಮೊದಲಾದವರು ಚಂಪೂ ಗ್ರಂಥಗಳನ್ನು ಬರೆದರು. ಸೋಮರಾಜ ೧೩೨೨ ಹರಿಹರ ೧೮೦, ಸುರಂಗಕವಿ ೧೫೦, ವೀರಭದ್ರರಾಜ ೧೫೯೦, ಮೊದಲಾದವರು ಅತ್ಯಂತ ಪ್ರೌಢತರವಾದ ಗ್ರಂಥಗಳನ್ನು ಬರೆದಿದ್ದಾರೆ. ಅಲ್ಲದೆ ಶ್ರುತಿ ಭಾಗಗಳಿಗೂ ಕನ್ನಡದಲ್ಲಿ ಟೀಕೆಗಳನ್ನು ಬರೆದು ಪ್ರಕಟಪಡಿಸುವ ಪದ್ಧತಿಯನ್ನು ವೀರಶೈವ ಗ್ರಂಥಕರ್ತರೇ ಪ್ರಾರಂಭಿಸಿದಂತೆ ತೋರುತ್ತದೆ. (B. ಕೃಷ್ಣಪ್ಪ)

ನೀತಿಶತಕಗಳನ್ನು ಮತ್ತು ಭಕ್ತಿಯುಕ್ತ ಹಾಡುಗಬ್ಬಗಳನ್ನು ಪ್ರಚಾರಕ್ಕೆ ತಂದವು ವೀರಶೈವ ಕವಿಹುಹರ ನಿಜಗುಣರಿಗೆಂದು ಹೇಳಬಹುದು.

ಮಣಸೋಲಿ, ಅಬ್ಬಲೂರ ಕಳಚೂರ್ಯರ ೧೧-೧೨ ಶತಕಗಳ ಅರ್ಜುನವಾಡ ೧೩ನೇ ಶತಕದ ಶಾಸನಗಳಿಂದ ಲಿಂಗಾಯತ ಮತ ವಿಷಯಕವಾದ ಶಾಸನಾಂತರ್ಗತ ಆಧಾರವಿದೆಯೆಂದು ವ್ಯಕ್ತವಾಗುತ್ತದೆ. ಮಾದಿರಾಜ ಬಸವರ ಹೆಸರುಗಳಿರುತ್ತವಾದರೂ ಅವರು ತಂದೆ ಮಕ್ಕಳಾಗಿದ್ದರೆಂಬಂತಿಲ್ಲ.

ವೀರಶೈವ ಮತ ಪ್ರಾಬಲ್ಯದಿಂದ ವೀರಶೈವ ಪುರಾಣಗಳೂ ವೀರಶೈವ ವಚನಗಳೂ. ತತ್ವನಿರೂಪಣೆಯ ಗ್ರಂಥಗಳೂ, ಹೇರಳವಾಗಿ ಹೊರ

ವಿದ್ವನು. ಭಕ್ತಿ ಜ್ಞಾನ ವೈರಾಗ್ಯ ನೀತಿ ಇವುಗಳ ಬೋಧಕ್ಕಾಗಿ ಕಥೆಗಳನ್ನು ರಚಿಸುವುದಕ್ಕೆ ವೀರಶೈವರೇ ಆದಿಯೆಂದು ದೃಢವಾಗಿ ಹೇಳಬಹುದು. ಹಾಡುಗಳಲ್ಲಿಯೂ ಕೀರ್ತನೆಗಳಲ್ಲಿಯೂ ಇವರು ಬ್ರಾಹ್ಮಣರಂತೆಯೇ ಉತ್ತಮ ರೀತಿಯಲ್ಲಿ ಬರೆದಿರುವರು.

ಬಸವೇಶ್ವರಾದಿಗಳ ಜೀವನ ಚರಿತ್ರೆಯನ್ನು ವೀರಶೈವ ತತ್ವಗಳೊಂದಿಗೆ ತಿಳಿಸುವ ಕಾವ್ಯಗಳನ್ನು ವೀರಶೈವ ಪುರಾಣಗಳೆಂದು ಕರೆಯಬಹುದು. ಆ ಮೇಲೆ ಯಾರು ಯಾರು ಮಹಿಮಾ ಪುರುಷರೆಂದು ತಿಳಿದುಬಂದರೋ ಅವರು ಅಧುನಿಕರಾದರು. ಅವರ ಚರಿತ್ರೆಗಳನ್ನು ಬರೆದು ಪುರಾಣಗಳೆಂದು ಕರೆಯುವದು ವಾಡಿಕೆಯಾಯಿತು.

ಜೀವನ ಚರಿತ್ರೆಗಳನ್ನು ಬರೆಯತೊಡಗಿದಾಗ ಬಸವೇಶ್ವರಾದಿಗಳಲ್ಲದೆ ಹಿಂದಿನ ತಮಿಳು ನಾಡಿನ ಅರವತ್ತು ಮೂರು ಪುರಾತನರಲ್ಲಿ ಹಲವರು ಕಥಾನಾಯಕರಾಗುತ್ತ ಬಂದರು. ಇವರೆಲ್ಲರು ತಮಿಳ ದೇಶದಲ್ಲಿದ್ದ ಶಿವಭಕ್ತರು; ಇವರ ಕಥೆಗಳನ್ನು ಬಸವೇಶ್ವರಾದಿಗಳು ತಮ್ಮ ಶಿಷ್ಯಮಂಡಳಿಯೊಳಗೆ ಪ್ರಸಾರ ಮಾಡಿದರು. ಆ ಪುರಾತನರ ಚರಿತ್ರೆಗಳು ಕೂಡ ವೀರಶೈವ ಪುರಾಣಗಳೆಂದು ಪ್ರಸಿದ್ಧಿ ಪಡೆದಿವೆ.

ಚಂಪೂಶೈಲಿಯನ್ನಾಗಲಿ ಷಟ್‌ಪದಿ ಶೈಲಿಯನ್ನಾಗಲಿ ಸಾಂಗತ್ಯ ಶೈಲಿಯಲ್ಲಾಗಲಿ ಈ ಪುರಾಣಗಳನ್ನು ಬರೆಯಬಹುದು. ಯಾವ ದಾವ ಮಹಾಧಿಪತಿಗಳು ಸಂಸ್ಕೃತ ಕನ್ನಡದಲ್ಲಿ ಪಾಂಡಿತ್ಯವನ್ನು ಹೊಂದಿ ಪ್ರೌಢಕಾವ್ಯಗಳನ್ನು ರಚಿಸುವ ಸಾಮರ್ಥ್ಯವುಳ್ಳವರಾಗಿದ್ದಾರೋ ಅವರೆಲ್ಲರೂ ಸಾಮಾನ್ಯವಾಗಿ ಚಂಪೂಶೈಲಿಯಲ್ಲಿಯೇ ಪುರಾಣಗಳನ್ನು ಬರೆದರು. ಆದರೆ ಇಂತಹ ಚಂಪೂಪುರಾಣಗಳ ಸಂಖ್ಯೆ ಬಹಳ ಕಡಿಮೆ. ಪುರಾಣಗಳಲ್ಲಿ ಹೆಚ್ಚುಸಂಖ್ಯೆಯವು ಷಟ್‌ಪದಿಗಳಲ್ಲಿಯೂ ಸಾಂಗತ್ಯದಲ್ಲಿಯೂ ದೊರೆಯುತ್ತವೆ.

ಈ ಪುರಾಣಗಳಲ್ಲಿ ಪಂಚವಿಂಶತಿ ಲೀಲಾಕಥಾನಕಂಗಳೂ ಪುರಾತನ ಚರಿತ್ರೆಗಳೂ, ಲಿಂಗಾಂಗಸಾಮರಸ್ಯ, ವಿಭೂತಿ ಪ್ರಸಾದಾದಿಗಳ ಮಹಿಮಾನಿರೂಪಣವೂ ತುಂಬಿರುತ್ತವೆ. ಕೆಲವು ಪುರಾಣಗಳಲ್ಲಿ ಬ್ರಹ್ಮಾಂಡ ಸೃಷ್ಟಿವಿಷಯಗಳೂ ದಯಾಧರ್ಮಸ್ವರೂಪಗಳೂ ಕಂಡುಬರುತ್ತವೆ. ಈಶ್ವರನ ಮತ್ತು ಬಸವೇಶ್ವರನ ಮತ್ತು ಪುರಾತನರ ಸ್ತೋತ್ರಗಳು ಅಲ್ಲಲ್ಲಿ

ತುಂಬಿರುತ್ತವೆ. ಕೈಲಾಸ ವರ್ಣನೆಯೂ ಈಶ್ವರಸ್ಥಾನ ವರ್ಣನೆಯೂ, ಈಶ್ವರ ಮತ್ತು ಪಾರ್ವತಿ ಇಲ್ಲವೆ ಈಶ್ವರ ಮತ್ತು ನಂದಿ ಇವರುಗಳ ಸಂಭಾಷಣೆಗಳು ಆದಿಯಲ್ಲಿ ಬರುತ್ತವೆ. ಇವಲ್ಲದೆ ಗ್ರಂಥಾರಂಭದಲ್ಲಿ ಈಶ್ವರನ ಸ್ತುತಿಯೂ ಅನಂತರ ಬಸವೇಶ್ವರ, ಸಿದ್ಧರಾಮ, ಅಲ್ಲಮ, ಚನ್ನಬಸವಾದಿಗಳ ಸ್ತೋತ್ರಗಳೂ ಇರುತ್ತವೆ. ಕೆಲವು ಗ್ರಂಥಗಳಲ್ಲಿ ಪವಾಡ ಪುರುಷರು ನಡೆಯಿಸಿದ ವಾಕ್ಯಾರ್ಥಗಳೂ ವೇದ, ಆಗಮ, ಶ್ರುತಿ ಸ್ಮೃತಿ, ಇತಿಹಾಸ, ಉಪನಿಷದ್ವಾಕ್ಯ ಇವುಗಳಿಂದ ಶಿವಾದ್ವೈತ ಸ್ಥಾಪನೆಯು ಕಂಡುಬರುತ್ತವೆ. ಗ್ರಂಥಾಂತ್ಯದಲ್ಲಿ ಈಶ್ವರನು ಪ್ರತ್ಯಕ್ಷನಾಗಿ ಎಲ್ಲರನ್ನೂ ಕೈಲಾಸಕ್ಕೆ ಕರೆದುಕೊಂಡು ಹೋಗುವನು.

ಷಟ್‌ಪದಿಯ ಗುಟ್ಟನ್ನು ತಿಳಿದು ಅದನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಪ್ರತ್ಯಕ್ಷ ಪಡಿಸುವದರಲ್ಲಿ ಭೀಮಕವಿಯೇ ಪ್ರಸಿದ್ಧನು. ಚಾಮರಸ, ಕುಮಾರವ್ಯಾಸ, ಕುಮಾರವಾಲ್ಮೀಕಿ ಇವರುಗಳ ಕೈಯಲ್ಲಿ ಭಾವಿಸೀ ಷಟ್‌ಪದಿಯ ಪರಿಪೂರ್ಣಸೌಂದರ್ಯದಿಂದ ತುಂಬಿ ಭಾವಪ್ರದರ್ಶಕವಾಗಿ, ರಸಿಕಜನ ಮನೋಹಾರಿಯಾಗಿ, ಇದು ಶೋಭಿಸಿರುತ್ತದೆ.

ಲಕ್ಕಣ್ಣದಂಡೇಶನು ಶಿವತತ್ವ ಚಿಂತಾಮಣಿಯನ್ನು ರಚಿಸಿದಂದಿನಿಂದ ಗುಬ್ಬಿಯ ಮಲ್ಲಣಾರ್ಯನ ವರೆಗೆ ಒಂದು ಕಾಲನೆಂದು, ಅಲ್ಲಿಂದ ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದ ಕಾಲಕ್ಕೆ ಇನ್ನೊಂದು ಕಾಲವೆಂದು ಅನ್ನೋಣ. ಮೊದಲನೇ ಕಾಲದಲ್ಲಿ ಅಂದರೆ ಚಾಮರಸ, ಬೊಮ್ಮರಸ, ಚತುರ್ಮುಖ ಬೊಮ್ಮರಸ, ನೀಲಕಂಠಾಚಾರ್ಯ, ಸಿಂಗಿರಾಜ ಇವರುಗಳ ಕಾಲದಲ್ಲಿ ಪ್ರಸಿದ್ಧವಾದ ಸಾಂಗತ್ಯ ಪುರಾಣವಾವುದೂ ಇಲ್ಲ. ಎರಡನೇ ಸ್ಥಾನದಲ್ಲಿ ಜೇರಮಾಂಕ ಚೆನ್ನಬಸವಾಂಕ ವಿರಕ್ತತೋಂಟದಾರ್ಯ ಇವರು ಮುಖ್ಯವಾಗಿದ್ದು ಕಿಕ್ಕೇರಿಯಾರಾಧ್ಯನ ನಂಜುಂಡನ ಭೈರವೇಶ್ವರಕಾವ್ಯ, ಒಸಪನ ಚಿಕ್ಕಯ್ಯನ ಸಾಂಗತ್ಯ, ದೇವನ ನನ್ನಯ್ಯಗಳ ಚರಿತೆ, ಇವು ಸಾಂಗತ್ಯ ಪುರಾಣಗಳಲ್ಲಿ ಮುಖ್ಯ, ಕ್ರಿ. ಶ. ೧೬೦೦ ರಿಂದ ಈ ಪುರಾಣಗಳ ಕ್ಷೀಣದೆಸೆಯಾಗುತ್ತ ಹೋಗುತ್ತದೆ. ವೀರಶೈವ ಪುರಾಣಗಳ ಪ್ರಪಂಚಸ್ಥಿತಿಯನ್ನು ಬೇರೆ ವಿಧವಾಗಿ ಭಾವಿಸುತ್ತವೆ ಮತ್ತು ಭಕ್ತಿಯೊಂದರಿಂದ ಮುಕ್ತಿಯಾಗುತ್ತದೆಂದು ಸಾರುತ್ತವೆ. ಇಹಲೋಕಸೌಖ್ಯವನ್ನು ತ್ಯಜಿಸಬೇಕೆಂದು ಅವುಗಳಲ್ಲಿ ಪ್ರತಿಪಾದಿತವಾಗಿಲ್ಲ. ಜನರು ಶುದ್ಧಾಂತಃಕರುಣಿಗಳೆಂದು ಅವು ಬೋಧಿಸುತ್ತವೆ.

ವೀರಶೈವರು ನೂತನ ಸಾಹಿತ್ಯೋಪಕರಣವನ್ನು ತೆಗೆದುಕೊಂಡು ಅದನ್ನು ಸರ್ವಸಾಮಾನ್ಯರೂ ಉಪಯೋಗಿಸುವಂತೆ ಮಾಡಿಕೊಟ್ಟ ಮತ್ತು ಸಮಸ್ತಭಾವಗಳನ್ನು ವಿವರಿಸತಕ್ಕ ಸಾಮಗ್ರಿಯನ್ನಾಗಿ ಮಾಡಿಕೊಟ್ಟ ಉಪಕಾರವು ಪುರಾಣ ಕರ್ತೃಗಳಿಂದಾಗಿರುತ್ತದೆ. ಷಟ್‌ಪದಿಗಳು ಮೊದಲು ಓದುಗಬ್ಬಗಳಾಗಿ ಬರಬರುತ್ತ ಹಾಡುಗಬ್ಬಗಳಾಗಿ ಹಾಡುಗಬ್ಬಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬೆರೆತುಹೋಗಿರುವದನ್ನು ನೋಡಿದರೆ ರಸಭಾವಗಳನ್ನು ಹೊರಗೆಡುವುದಕ್ಕೆ ಷಟ್‌ಪದಿಗಳು ಎಂತಹ ಪ್ರಯೋಜನಕಾರಿಯಾದ ಉಪಕರಣಗಳೆಂಬುದು ತಿಳಿಯದೇ ಇರಲಾರದು. ಷಟ್‌ಪದಿಗಳು ಹಾಡುವದಕ್ಕೂ ರಾಗವಾಗಿ ಹೇಳುವದಕ್ಕೂ ಕಥಾ ವಿವರಣಕ್ಕೂ ಏಕಕಾಲದಲ್ಲಿ ಉಪಯುಕ್ತವಾಗಿರುವುದರಿಂದಲೂ ಅವುಗಳ ಪದಸರಣಿಯು ಸುಲಭಗ್ರಾಹ್ಯವಾಗುವುದರಿಂದಲೂ ಹೆಂಗಸರು ಮಕ್ಕಳು ಮೊದಲುಗೊಂಡು ಎಲ್ಲ ಜನರು ಸಾಹಿತ್ಯದಲ್ಲಿ ಭಾಗಿಗಳಾಗಲು ಅನುಕೂಲಿಸಿತು.

ನಮಗೆ ದೊರೆತ ಷಟ್‌ಪದೀ ಗ್ರಂಥಗಳಲ್ಲಿ ರಾಘವಾಂಕನ ಗ್ರಂಥಗಳೇ ಮೊದಲಿನವು. ಆದ್ದರಿಂದ ಷಟ್‌ಪದಿಗಳು ೧೨ನೆಯ ಶತಮಾನದಲ್ಲಿ ಬಳಕೆಯಲ್ಲಿ ಬಂದುವೆಂದು ಹೇಳಬಹುದು. ರಾಘವಾಂಕನ ಪೂರ್ವದಲ್ಲಿ ಯಾರೂ ಷಟ್‌ಪದಿಗಳಲ್ಲಿ ಗ್ರಂಥಗಳನ್ನು ಬರೆದಿಂಲಿಲ್ಲವೆಂದೂ ಆತನೇ ಅವುಗಳನ್ನು ನಿರ್ಮಿಸಿದನೆಂದೂ ಸಿದ್ಧನಂಜೇಶನು ಹೇಳುವುದು ನಿಜವಲ್ಲ. ಎಲ್ಲ ಷಟ್‌ಪದಿಗಳನ್ನು ಅಲ್ಲದಿದ್ದರೂ ಪರಿವರ್ಧಿನಿ ವಾರ್ಧಿಕಗಳನ್ನು ನಿರ್ಮಿಸುವಲ್ಲಿ ರಾಘವಾಂಕನ ಅಂಗವಿದ್ದರೂ ಇರಬಹುದು.

ನಾಗವರ್ಮನ ಛಂದೋಂಬುಧಿಯಲ್ಲಿ 'ಮುಂದರಧರಗಣ' ಎಂಬುದೊಂದು ಶರಷಟ್‌ಪದಿ ಕಾಣಿಸಿಕ್ಕುವುದು. ರನ್ನನ ಗದಾಯುದ್ಧದಲ್ಲಿರುವ (IXಂಗ) 'ಮಾತ್ರಾ ಸಮಕ ಷಟ್‌ಪದಿ' ಇದು ಪರಿವರ್ಧಿನಿಯೇ ಸರಿ. ಕನ್ನಡ ಷಟ್‌ಪದಿಗೂ ಕೇದಾರಭಟ್ಟನು ತನ್ನ ವೃತ್ತ ರತ್ನಾಕರದಲ್ಲಿ ಹೇಳಿರುವ ಷಟ್‌ಪದಿಗೂ ಏನೂ ಸಂಬಂಧವಿಲ್ಲ. (T. H. M. ಸದಾಶಿವಯ್ಯ); ಮತ್ತು ಮದನತಿಲಕವು ಶರಷಟ್‌ಪದಿಯಲ್ಲಿ ಬರೆಯಲ್ಪಟ್ಟಿದೆ.

ಕಾಲಜ್ಞಾನಗಳೆಂಬ ಗ್ರಂಥಗಳನ್ನು ವೀರಶೈವಮತಸ್ಥ ಕವಿಗಳೇ ಪ್ರಚಾರಕ್ಕೆ ತಂದರು. (ಬಿ. ಕೃಷ್ಣಪ್ಪ M. A.) ವೀರಶೈವ ವಾಙ್ಮಯ ಲಕ್ಷಣಗಳು ಇವವೆಂದರೆ:—

(೧) 'ಅ' ಕಾರವನ್ನು ಸಂಪೂರ್ಣವಾಗಿ ಬಿಟ್ಟರು. ಆದರೆ ಬ ಕಾರವು ಮಾತ್ರ ೧೮ನೇ ಶತಮಾನದ ವರೆಗೆ ಉಳಿದುಕೊಂಡಿತು.

(೨) ಪದಾದಿಯಲ್ಲಿಯೂ ಕ್ರಿಯಾಪದದಲ್ಲಿಯೂ ಪಕಾರಕ್ಕೆ ಹಕಾರಾದೇಶವಾಯಿತು,

(೩) ಲಕ್ಷಣ ಬದ್ಧವಾಗಿ ಬರೆಯುತ್ತಿದ್ದ ಜೈನರಿಗೆ ವಿರೋಧವಾಗಿ ವಾಕ್ಯರಚನೆ, ಪ್ರಯೋಗ, ಪ್ರಾಸು ಇವುಗಳ ಕಡೆಗೆ ದುರ್ಲಕ್ಷ.

(೪) ಚಂಪೂ ಕಾವ್ಯಗಳ ಹೀನಸ್ಥಿತಿ.

(೫) ಕನ್ನಡದ ಹೊಸ ಛಂದಸ್ಸುಗಳು ತಲೆದೋರಿ, ಸಂಸ್ಕೃತ ಛಂದಸ್ಸಿಗೆ ಬದಲಾಗಿ ನಿಂತವು. ತ್ರಿಪದಿ, ಚೌಪದಿ, ಷಟ್‌ಪದಿ, ರಗಳೆ, ಸಾಂಗತ್ಯಗಳು ಪ್ರಚಾರದಲ್ಲಿ ಬಂದವು.

(೬) ನವಸ್ತುತಿ ಕಡಿಮೆಯಾಯಿತು.

(೭) ಭವಾಳಿಯಿಂದ ಬೇಸತ್ತವಾದವರಿಗೆ ಚರಿತ್ರ ಗ್ರಂಥವಾಗಿ ಹೊಸ ಸ್ವರೂಪನ್ನು ಮುಂದಿಟ್ಟರು.

(೮) ಹೆಂಗಸರಿಗೂ ಬಾಲಕರಿಗೂ, ಪಾಮರರಿಗೂ ಸಹ ತಿಳಿಯುವಂತೆ ಸುಲಭಶೈಲಿಯಲ್ಲಿ ಬರೆದರು.

(೯) ಭಕ್ತಿಯೇ ಪ್ರಾಧಾನ್ಯವಾಯಿತು.

(೧೦) ವಚನವೆಂಬ ಸಾಹಿತ್ಯರೂಪವು ವಿಪುಲವಾಯಿತು.

(೧೧) ರೂಢಿಯಿಂದ ಬಲಹೊಂದಿದ ಷಟ್‌ಪದಿಯು ಮಾರ್ಪಾಟುವಾಯಿತು.

(೧೨) ವಿಷಯ ಉದ್ದೇಶ:— ಜನರ ಆಚಾರ ವಿಚಾರಗಳಲ್ಲಿ ಕಾಪಟ್ಯವನ್ನೂ ನಿರ್ಬಂಧವನ್ನೂ ಕತ್ತರಿಸಿ ಸ್ವಾತಂತ್ರ್ಯ ಹೊಂದಲಿಕ್ಕೆ ಸರ್ವ ಸಮರ್ಥತೆಯನ್ನು ಮತ್ತು ವಿಶ್ವಬಂಧುತ್ವವನ್ನು ಬೋಧಿಸಿ ಮನುಷ್ಯ ಜನ್ಮವನ್ನು ಸಂತೋಷದಿಂದಲೂ ಸೌಖ್ಯದಿಂದಲೂ ಕಳೆಯುವಂತೆ ಮಾಡಿದರು.

ವೀರಶೈವ ಕ್ಷೇತ್ರಗಳು.

(ಸಂಗ್ರಾಹಕರು:- ಪುರಾಣೀಕ ಬುದ್ಧಯ್ಯಸ್ವಾಮಿಗಳು ಧಾರವಾಡ.)

ಶಿವ ಶಿವ ಶಿವ ಶಿವ ಲಿಂಗ। ದಯಪಾಲಿಸೊ ಗುರುಪ್ರಭುಲಿಂಗ ॥ಪ॥

ಶ್ರೀಕರ ಶುಧದ ಮಹಾಕರುಡೆ ಕೊಲ್ಲೀ । ಪಾಕಿ ಸೋಮವರಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೧॥

ವಿಶ್ವಂಭರನುತ ಶಾಶ್ವತಕಾಶಿಯ । ವಿಶ್ವನಾಥ ಶಿವಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೨॥

ಸೇತುಬಂಧ ಸುಪುನೀತ ಕ್ಷೇತ್ರ ವಿ । ಖ್ಯಾತ ರಾಮಪತಿಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೩॥

ಬಲ್ಲಿದ ಶ್ರೀಗಿರಿ ಸಲ್ಲಲಿತ ವರದ । ಮಲ್ಲೇಶ್ವರ ಜಯಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೪॥

ಪೆಂಪು ಸೊಂಪು ಸುಖದಿ-ಪುಗೊಡುವ ಶ್ರೀ । ಹಂಪೆವಿರೂಪಾಕ್ಷಲಿಂಗ॥
ದಯಪಾಲಿಸೊ ಗುರುಪ್ರಭುಲಿಂಗ ॥೫॥

ಕಾಲ ವಿಜಯ ಕರುಣಾಪಾಲ ಗಣ । ಲೋಲ ಗೋಲಗಿರಿಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೬॥

ಸ್ವರ್ಣಲಯಾರ್ಚಿತ ಪರ್ಣಜ ನುತ ಗೋಕರ್ಣ ಮಹಾಬಲಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೭॥

ಕಾಮಿತಜನಸುರ ಭೂಮಿ ಭುಸ್ವಾಗಲ । ಸೋಮನಾಥ ಶಿವಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೮॥

ದಕ್ಷಾಧ್ವರಹರ ಶಿಕ್ಷ ದಿವಿಜವಿರು । ಪಾಕ್ಷಮಹಾಬಲಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೯॥

ಪಾಪಗಿರಿ ಕುಲಿಶ ರೂಪ ಕೇದಾರ । ಗೋಪನಾಥ ಘನಲಿಂಗ ॥
ದಯಪಾಲಿಸೊ ಗುರುಪ್ರಭುಲಿಂಗ ॥೧೦॥

ಕಿಂಕರ ಜನಪಾಲಿಂಕ ಬಾಗಿಪುರ । ಬಂಕನಾಥ ಘನಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೧॥

ದೀರ್ಘೇತಿ ಕುಲವರ ನಾರ್ಗೇವುನೋಹರ । ಗಾರ್ಗ್ಯವರದ ಮಹಾಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೨॥

ಮಿತ್ರಕೋಟಿ ರುಚಿಗಾತ್ರಸುಕಲ್ಯಾಣ । ತ್ರಿಪುರಾಂತಕ ಮುನಿಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೩॥

ಶಸ್ತಭಕ್ತಚಯಸುಸ್ಥಿರಕಾಳ । ಹಸ್ತೇಶ್ವರ ಜಯಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೪॥

ಪಡಗರ ನಂಬಿಗೆ ಪಡಿಹೊನ್ನದೋರಿದ । ವೃಡವಾಲ್ಮಿಕ ಪತಿಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೫॥

ಜಂಬುಜಹರಿಮುಖರಂಜಿಸಿದನುಪಮ । ನಂಜುಂಡೇಶ್ವರಲಿಂಗ ॥
ದಯಪಾಲಿಸೊ ಗುರು ಪ್ರಭುಲಿಂಗ ॥೧೬॥

ನಿರುತಶಂಕರೇಶ್ವರನಗರಾಧಿಪ । ಪರತರಶಂಕರ ಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೭॥

ಜಂಬುದ್ವೀಪಕೆದಿಂಬ ಜಂಬುಪುರ । ಜಂಬುಕೇಶ್ವರ ಘನಲಿಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೮॥

ಪಂಚಲಕ್ಷಣವೇ ಸಂಚಿತಮುನಿವಳ್ಳಿ । ಪಂಚಲಿಂಗದಯಪಾಂಗ ॥
ದಯಪಾಲಿಸೊಗುರು ಪ್ರಭುಲಿಂಗ ॥೧೯॥

ಬಳ್ಳವ ಭಜಿಸಿದ ಮಲ್ಲೇಶಗೊಲಿದ । ಬಳ್ಳೇಶ್ವರ ಜಯಲಿಂಗ ॥
ದಯಪಾಲಿಸೊಗುರುಪ್ರಭುಲಿಂಗ ॥೨೦॥

ಎಲ್ಲ ಕ್ಷೇತ್ರದೊಳು ಜಲ್ವಪುಷ್ಪಗಿರಿ। ಮಲ್ಲಿಕಾರ್ಜುನ ಮಹಾಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೧॥

ದೃಢವಧುವಿನ ಕಲ್ಗಡಗಿಯೊಳುದಿಸಿದ। ಗಡಿಗೀಶ ಬಸವಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೨॥

ಮಂಡಿತಾಯು ಮಾರ್ಕಂಡೆಗಿತ್ತ ಶ್ರೀ। ದಂಡನಾಥ ಶಿವಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೩॥

ಧೀರ ಓಹಿಲಯ್ಯಗೆ ಸಾರಸ್ವದೋರಿದ। ಸೌರಾಷ್ಟ್ರಕ ಸೋಮಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೪॥

ಪನ್ನಗಶಯನಹ ಉನ್ನತವಡ್ಡಿಜ। ಗನ್ನಾಥ ಮಹಾಶಿವಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೫॥

ರಾಜ ಉಜ್ಜಯಿಗೆ ಸೋಜಿಗ ಪರಶೇ। ವೈಜನಾಥ ಘನಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೬॥

ಓಲಿದಾವಯ್ಯಗೆ ಖಲರಂ ಗೆಲಿಸಿದ। ಪುಲಿಗೇರಿ ಸೋಮಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೭॥

ನಡಿನುಡಿಯಿಂದೇ ದೃಢಶರಣರ ವಧು। ಒಡೆಯ ಕಪ್ಪಡಿಯ ಸಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೮॥

ಶೀಲಧಕ್ರಜನ ಲೋಲಹೂಲಿನಗ। ರಾಲಯಗುರು ವೃಷಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೨೯॥

ಎಲ್ಲ ಕ್ಷೇತ್ರದೊಳು ಬಲ್ಲಿದತೀರ್ದಳ। ಅಲ್ಲಮಪ್ರಭುಮಹಾಲಿಂಗ॥
ದಯಪಾಲಿಸೊಗುರು ಪ್ರಭುಲಿಂಗ ॥೩೦॥

ಬಸವೇಶ್ವರನಕಿಂತಲೂ ಮೊದಲಿನ ವೀರಶೈವಧರ್ಮ.

(ಲೇಖಕರು:- ರಾವಬಹಾದ್ದೂರ ಪಿ. ಜಿ. ಹಳಕಟ್ಟಿ ಬಿ ಏ. ಎಲ್. ಎಲ್. ಬಿ. ವಿಜಾಪುರ)

ಈ ವಿಷಯ ವಿವೇಚನೆ ಮಾಡುವಲ್ಲಿ ನಾವು ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ ನಾಲ್ಕು ವಿಭಾಗಗಳನ್ನು ನಾವು ಮಾಡಬಹುದಾಗಿದೆ. ಅವು ಯಾವವೆಂದರೆ (೧) ಬಸವೇಶ್ವರನ ಪೂರ್ವದ ಕಾಲ (೨) ಬಸವೇಶ್ವರನ ಕಾಲ (೩) ಬಸವೇಶ್ವರನ ತರುವಾಯದಲ್ಲಿ ಅವನಿಗೆ ಸಮೀಪವಿರುವ ಕಾಲ (೪) ವೀರಶೈವ ಪೌರಾಣಿಕ ಕಾಲ. ಈ ಕಾಲಗಳಲ್ಲಿ ಬಸವೇಶ್ವರನ ಪೂರ್ವದ ಕಾಲದಲ್ಲಿ ಬ್ರಹ್ಮ ವಿಷ್ಣು ಶಿವ ಈ ತ್ರಿಮೂರ್ತಿಗಳ ವಿಷಯವಾಗಿ ಯಾವ ವಿಚಾರಗಳು ಆಗಿನ ವೀರಶೈವ ಸಮಾಜದಲ್ಲಿ ರೂಢವಾಗಿದ್ದವೆಂಬುದನ್ನು ಕುರಿತು ನಾವು ಇಲ್ಲಿ ವಿವೇಚಿಸಲಿಚ್ಛಿಸಿದ್ದೇವೆ.

ಕರ್ನಾಟಕದಲ್ಲಿ ಹಿಂದುಸ್ತಾನದಲ್ಲಿಯ ವಿದ್ವಜ್ಜನರ ಆಗಮನ.

ಈ ಪೂರ್ವದ ಕಾಲದಲ್ಲಿ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧ ರಾಜಮನೆತನಗಳಾದ ರಾಷ್ಟ್ರಕೂಟ ಚಾವುಕ್ಯ ಚಾಲುಕ್ಯರು ಆಳುತ್ತಿದ್ದದರಿಂದ ಹಿಂದುಸ್ತಾನದಲ್ಲಿಯ ಮುಖ್ಯ ಧರ್ಮಪ್ರವರ್ತಕರೂ ವಿದ್ವಾಂಸರೂ ಈ ರಾಜರ ಆಸ್ಥಾನಗಳಿಗೆ ಆಗಿಂದಾಗ್ಗೆ ಆಗಮಿಸುತ್ತಾ ಇದ್ದರು. ಕಾಶ್ಮೀರದೇಶದಲ್ಲಿಯ ಶೈವ ಮೊದಲಾದ ಸಮಾಜದವರು ಕರ್ನಾಟಕಕ್ಕೆ ಬಂದು ಇಲ್ಲಿ ಅನೇಕ ಕಡೆಗೆ ವಾಸವಾಡಿದರು. ಅಲ್ಲಿಯ ವಿದ್ವಾಂಸ ಪಂಡಿತರು, ಚಾಲುಕ್ಯ ವಿಕ್ರಮಾರ್ಜುನನ ರಾಜನಲ್ಲಿ ಪ್ರಸಿದ್ಧಿಗೆ ಬಂದರು. ಬಸವೇಶ್ವರನು ಅನೇಕ ಜಂಗಮರನ್ನು ಒಂದು ಹಬ್ಬದಲ್ಲಿ ಹಾಕಿಕೊಂಡು ಉತ್ತರ ದೇಶದಿಂದ ಇವರನ್ನು ಕಲ್ಯಾಣಕ್ಕೆ ತಂದನೆಂದು ಒಂದು ದಂತ ಕಥೆಯುಂಟು. ಈ ಪ್ರಕಾರ ಉತ್ತರ ದೇಶದಲ್ಲಿಯವರಂತೆ, ದಕ್ಷಿಣದವರ ಸಂಬಂಧವೂ ಹೆಚ್ಚಾಗಿತ್ತು. ಕರ್ನಾಟಕದೇಶದ ರಾಜರಿಗೆ ತಮಿಳುದೇಶದ ಚೋಳ ಮತ್ತು ಪಾಂಡ್ಯರಾಜರೊಡನೆ ಯುದ್ಧ ಹೂಡುವ ಪ್ರಸಂಗಗಳು ಆಗಿಂದಾಗೆ ಒದಗುತ್ತಿದ್ದವು. ಇದರಿಂದ ಕನ್ನಡಿಗರಿಗೂ ತಮಿಳರಿಗೂ ನಿಬಿಡವಾದ ಪರಿಚಯ ಸಂಬಂಧವು ಉಂಟಾದದ್ದು ಕಂಡುಬರುತ್ತದೆ. ಉತ್ತರ ದೇಶ

ದಲ್ಲಿ ನೊದಲು ಪ್ರಾದುರ್ಭವಿಸಿದ ಪಾಶುಪತಮತಸ್ಥರು ಸಹ ಕರ್ನಾಟಕದ ಅನೇಕ ಭಾಗಗಳಲ್ಲಿ ವಾಸವಾಗಿದ್ದರು. ವಿಜಾಪುರ ಜಿಲ್ಲೆಯಲ್ಲಿರುವ ಮುತ್ತಿಗಿ ಗ್ರಾಮದಲ್ಲಿ ಲಕುಲೀಶನೆಂಬ ಅವರ ಒಬ್ಬ ಪ್ರಸಿದ್ಧ ಪುರುಷನು ವಾಸವಾಡುತ್ತಿದ್ದನು. ಉತ್ತರ ಹಿಂದುಸ್ತಾನದ ಗೋರಕ್ಷ ಪಂಥದ ಜನರ ಅನುಯಾಯಿಗಳು ಕೊಲ್ಹಾಪುರದಲ್ಲಿ ನೆಲಿಸಿದ್ದರೆಂದು ತೋರುತ್ತದೆ ಜೈನರ ವಸಹಾತುಗಳು ಸಹ ಕರ್ನಾಟಕದಲ್ಲಿ ಅನೇಕ ಕಡೆಗೆ ಉಂಟಾಗಿದ್ದವು ಹೀಗೆ ಹಿಂದುಸ್ತಾನದಲ್ಲಿಯ ಪ್ರಮುಖ ಮತಗಳ ಅನುಯಾಯಿಗಳು ಕರ್ನಾಟಕದಲ್ಲಿ ಬಹುಕಾಲದಿಂದಲೂ ನೆಲಿಸಹತ್ತಿದ್ದರಿಂದ ಅವರ ಸಂಸ್ಕೃತಿಯ ಪರಿಣಾಮಗಳು ಕರ್ನಾಟಕಸ್ಥರ ಮೇಲೆ ಆಗುತ್ತ ಬರುವದು ಸ್ವಾಭಾವಿಕವಾಗಿಯತ್ತದೆ.

ಕರ್ನಾಟಕದಲ್ಲಿ ಶೈವ ಧರ್ಮಗಳ ಪ್ರಾಬಲ್ಯ.

ಕರ್ನಾಟಕದಲ್ಲಿಯ ಬಹುಜನ ಸಮಾಜದ ಮೇಲೆ ದಕ್ಷಿಣದಲ್ಲಿಯ ಮತ್ತು ಉತ್ತರ ದೇಶದಲ್ಲಿಯ ಶೈವ ಧರ್ಮಗಳು ಎಲ್ಲಕ್ಕಿಂತ ಹೆಚ್ಚಿಗೆ ಬಹು ಪ್ರಬಲವಾದ ಪರಿಣಾಮಗಳನ್ನುಂಟು ಮಾಡಿದವೆಂದು ಕಂಡು ಬರುತ್ತದೆ. ಇಲ್ಲಿ ಕಾಳಾಮುಖರೆಂಬ ಹೆಸರಿನ ಶೈವ ಸಮಾಜಗಳು ಬಹು ಕಡೆಗೆ ಪ್ರಬಲ ಹೊಂದಿದ ಸಂಗತಿಯು ಶಿಲಾಶಾಸನಗಳಿಂದ ಸ್ಪಷ್ಟವಾಗುತ್ತದೆ. ಇವರ ಶಾಸನಗಳು ದಕ್ಷಿಣಕ್ಕೆ ಬಳ್ಳಿಗಾವಿಯಿಂದ ಉತ್ತರಕ್ಕೆ ವಿಜಾಪುರ ಜಿಲ್ಲೆಯಲ್ಲಿರುವ ಭೀಮತೀರ್ಥದವರೆಗೂ ಪಸರಿಸಿರುತ್ತವೆ. ಗುಜರಾಥವ್ಯಾಪ್ತದಲ್ಲಿ ಸೋಮನಾಥನ ದೇವಾಲಯವು ಪ್ರಸಿದ್ಧವಾಗಿದ್ದು ಅದರ ಭಕ್ತನಾದ ಅದಯ್ಯನು ವ್ಯಾಪಾರದ ನಿಮಿತ್ಯ ಕುಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರಕ್ಕೆ ಬಂದು ವಾಸವಾಗಿದ್ದನು. ಮತ್ತು ಅವನು ಗುಜರಾಥದ ಸೋಮನಾಥ ಲಿಂಗವನ್ನು ಇಲ್ಲಿ ಸ್ಥಾಪಿಸಿದನೆಂಬ ಐತಿಹ್ಯವಿದೆ. ವೀರಶೈವರಲ್ಲಿ ಪ್ರಸಿದ್ಧನಾಗಿರುವ ಶಿವಭಕ್ತನಾದ ಉಭಟನು ಗುಜರಾಥದಲ್ಲಿ ಬಹು ಪ್ರಖ್ಯಾತಿಯನ್ನು ಹೊಂದಿದ್ದನು ಹರಿಹರನು ಇವನ ಒಗ್ಗೆ ಒಂದು ರಗಳೆಯನ್ನು ಬರೆದಿರುವದಲ್ಲದೆ ' 'ಉದ್ಭಟ ಕಾವ್ಯ' ವೆಂಬ ಪ್ರಸಿದ್ಧ ಗ್ರಂಥವೂ ಉಂಟು. ಹೀಗೆ ಕರ್ನಾಟಕದಲ್ಲಿ ಶೈವಧರ್ಮಗಳು ಪ್ರಬಲ ಸ್ಥಿತಿಯನ್ನು ಹೊಂದಿದ್ದವು. ಅದರೆ ಇದನ್ನು ಸಾಮಾನ್ಯ ಜನರು ಸಹಜವಾಗಿ ಅನುಸರಿಸುವವರಾಗಿದ್ದರು.

ಕರ್ನಾಟಕದಲ್ಲಿ ವೈಷ್ಣವ ದೇವಾಲಯಗಳು.

ಈ ಪ್ರಕಾರ ಕರ್ನಾಟಕದಲ್ಲಿ ಶೈವ ಧರ್ಮಗಳು ಹೆಚ್ಚುತ್ತಿರಲು ಅವುಗಳೊಡನೆ ವೈಷ್ಣವ ಧರ್ಮವೂ ಕೂಡ ಪ್ರಬಲವಾಗಿರದೇಕೆಂದು ತೋರುತ್ತದೆ. ಅನೇಕ ಚಾಲುಕ್ಯ ರಾಜರು ವೈಷ್ಣವ ಮತಾನುಯಾಯಿಗಳಾಗಿದ್ದರು. ಅವರ ಧ್ವಜವು ವಿಷ್ಣುವಿನ ಚಿನ್ಹವಾದ ವರಾಹವಿರುತ್ತದೆ ಬದಾಮಿಯಲ್ಲಿರುವ ಬಹು ಸುಂದರವಾಗಿ ಕೊರೆದ ದೇವಾಲಯವು ವಿಷ್ಣು ದೇವತೆಯದಾಗಿರುತ್ತದೆ. ಇವೇ ಮೇರೆಗೆ ಅನೇಕ ವೈಷ್ಣವ ದೇವಾಲಯಗಳೂ ಕರ್ನಾಟಕದಲ್ಲಿ ಪಸರಿಸಿದ್ದವು.

ಶೈವ ವೈಷ್ಣವ ಕಲಹಗಳು.

ಆದರೆ ಅವುದೋ ಒಂದು ಕಾರಣದಿಂದ ತಮಿಳು ದೇಶದಲ್ಲಿ ಶೈವ ವೈಷ್ಣವ ಮತಸ್ಥರಲ್ಲಿ ತೀಕ್ಷ್ಣವಾದ ಕಲಹಗಳು ಒಂದು ಕಾಲಕ್ಕೆ ಉಂಟಾಗಿದ್ದವೆಂದು ಕಂಡುಬರುತ್ತದೆ. ಇವು ಮುಖ್ಯವಾಗಿ ಚೋಳರಾಜರ ಕಾಲದಲ್ಲಿ ಅಂದರೆ ೧೦ನೇ ಶತಮಾನದ ಆದಿ ಮತ್ತು ಮಧ್ಯಭಾಗಗಳಲ್ಲಿ ಬಹು ಹೆಚ್ಚಾಗಿದ್ದಂತೆ ತೋರುತ್ತದೆ ೧೦೭೦ ರಿಂದ ೧೧೧೭ರವರೆಗೆ ಕಾಂಚೀ ಪಟ್ಟಣದಲ್ಲಿ ೧ನೇ ಕುಲೋತ್ತುಂಗಚೋಳನು ರಾಜ್ಯವಾಳುತ್ತಿದ್ದು ಅವನು ವೈಷ್ಣವ ಧರ್ಮಾನುಯಾಯಿಗಳ ಮೇಲೆ ಮಾಡಿದ ಉಪಟಳದ ಮೂಲಕ ರಾಮಾನುಜಾಚಾರ್ಯನು ಅವನ ರಾಜ್ಯವನ್ನು ತೊರೆದು ಹೋಗಬೇಕಾಯಿತು. ಈ ರಾಜನು ೬೩ ಪುರಾತನರ ಚರಿತ್ರೆಗಳನ್ನು ಸಂಗ್ರಹಿಸಿ ತಮಿಳಿನಲ್ಲಿ ಪ್ರಸಿದ್ಧಿಪಡಿಸಿದನು. ಈ ಪುರಾತನರು ವೀರಶೈವರಿಗೂ ವಂದ್ಯರಾಗಿದ್ದು ಇವರ ಬಗ್ಗೆ ಆದರ ಪೂರ್ವಕವಾಗಿ ಮಾಡಿದ ಉಲ್ಲೇಖಗಳು ವೀರಶೈವ ವಾಙ್ಮಯದಲ್ಲಿ ಅಸಂಖ್ಯಾತವಾಗಿರುತ್ತವೆ. ಬಸವೇಶ್ವರನ ಉಲ್ಲೇಖವಿದ್ದ ಅಜ್ಞಾತನವಾಡ ಶಿಲಾಶಾಸನದಲ್ಲಿ ಸಹ ಅವನು ಪುರಾತನರ ಒಗ್ಗೆ ಅತಂತ ಭಕ್ತಿಭಾವವುಳ್ಳವನಾಗಿದ್ದನೆಂದು ಹೇಳಲ್ಪಟ್ಟಿದೆ. ಈ ಪ್ರಕಾರ ಬಸವೇಶ್ವರನ ಪೂರ್ವದಲ್ಲಿ ವೀರಶೈವರು ಶಿವನನ್ನು ಅತ್ಯಂತ ಭಕ್ತಿಭಾವದಿಂದ ಪೂಜಿಸುತ್ತಿದ್ದರೆಂಬುದು ನಿರ್ವಿವಾದವಾದ ಸಂಗತಿಯಾಗಿರುತ್ತದೆ. ಆದರೆ ಅವರು ತಮಿಳು ದೇಶದ ಪರಿಸ್ಥಿತಿಯನ್ನು ಹಿಂಬಾಲಿಸುವವರಾಗಿ ವಿಷ್ಣುವಿನನ್ನು ಹೀಯಾಳಿಸಲಿಕ್ಕೆ ಹಿಂದುಮುಂದೆ ನೋಡುತ್ತಿರಲ್ಲವೆಂತಲೂ ಕೂಡ ಕಂಡು ಬರುತ್ತದೆ. ಈ ಕಾಲದಲ್ಲಿ ದಕ್ಷಿಣ ದೇಶದಲ್ಲಿ ಶೈವ ವೈಷ್ಣವ ಕಲಹ

ಗಳು ಮತಿವೀರಿದ್ದವು. ಇವುಗಳ ಸೋಂಕು ಕರ್ನಾಟಕಕ್ಕೂ ತಗಲಿತು. ಜೈನರ ಪ್ರಾಬಲ್ಯದ ಮೂಲಕ ಪರಮಾತ್ಮನು ಜಗತ್ತಿನಲ್ಲಿ ಇದ್ದಾನೋ ಇಲ್ಲವೋ ಎಂಬದರ ಬಗ್ಗೆ ಮೊದಲು ವಾದಗಳು ಉಂಟಾದವು. ಆದರೆ ಮುಂದೆ ಶಿವನು ಶ್ರೇಷ್ಠನೋ ಅಥವಾ ವಿಷ್ಣುವು ಶ್ರೇಷ್ಠನೋ ಎಂಬುದರ ಬಗ್ಗೆ ಕಲಹಗಳು ಏಳಹತ್ತಿದವು. ಆದರೆ ಇವು ಬಸವೇಶ್ವರನ ಕಾಲದಲ್ಲಿ ಮತ್ತು ಅವನ ತರುವಾಯದ ಕಾಲದಲ್ಲಿ ಉಂಟಾಗಲು ಕಾರಣವಿದ್ದಿಲ್ಲ. ಯಾಕೆಂದರೆ ದೇವರು ಒಬ್ಬನೇ ಇದ್ದು ಅವನು ವಿಶ್ವವ್ಯಾಪಿಯಾಗಿದ್ದಾನೆಂಬ ಅಭಿಪ್ರಾಯಗಳು ಆಗ ತಲೆದೋರಿದ್ದವು. ಇದರಿಂದ ಯಾವ ದೇವರು ಹೆಚ್ಚು ಮತ್ತು ಯಾವ ದೇವರು ಕಡಮೆ ಎಂಬ ಪ್ರಶ್ನೆಯೇ ಉದ್ಭವಿಸುವದಿಲ್ಲ. ಈ ಕಾಲದಲ್ಲಿ ಉಂಟಾದ ವಚನಗಳಲ್ಲಿ ತ್ರಿಮೂರ್ತಿಗಳೆಲ್ಲರೂ ನಿರಾಕರಿಸಲ್ಪಟ್ಟಿರುವದು ಕಂಡುಬರುತ್ತದೆ. ಪಂಚಮುಖ ಪಾರ್ವತೀವಲ್ಲಭನಾದ ಶಿವನನ್ನು ಸಹ ಶಿವಶರಣರು ಅಲ್ಲಗಳೆದಿದ್ದಾರೆ. ಅವರು ಸ್ಥಾವರಲಿಂಗವಿದ್ದ ಶಿವಾಲಯಗಳನ್ನು ಮನ್ನಿಸುವದಿಲ್ಲ. ಅವರು ಇಷ್ಟಲಿಂಗವನ್ನು ಮಾತ್ರ ಮನ್ನಿಸುವವರು. ಇಂಥವರಿಗೆ ಬ್ರಹ್ಮ ವಿಷ್ಣು ಶಿವ ಇವರಲ್ಲಿ ಯಾರು ಅಧಿಕರು, ಯಾರು ಕಡಿಮೆಯವರು ಎಂಬುದನ್ನು ಗೊತ್ತುಪಡಿಸುವ ವಿಷಯವು ಅಪ್ರಸ್ತುತವಾದದ್ದು. ಆದರೆ ಇಂಥ ಉದಾತ್ತ ವಿಚಾರಗಳು ಬಸವೇಶ್ವರನಕಿಂತ ಮೊದಲು ಆಗಿಹೋದ ಶಿವಶರಣರ ಚರಿತ್ರೆಗಳಲ್ಲಿ ಕಂಡುಬರುವದಿಲ್ಲ. ಇದು ಕೆಳಗಿನ ಉದಾಹರಣೆಗಳಿಂದ ವಾಚಕರಿಗೆ ಕಂಡುಬರುವದು.

ಶಂಕರದಾಸಿಮಯ್ಯ.

ಶಂಕರ ದಾಸಿಮಯ್ಯನು ದೇವರದಾಸಿಮಯ್ಯನಿಗೆ ಸಮಕಾಲೀನನಾಗಿ ೧೧ನೇ ಶತಮಾನದ ಪ್ರಥಮಾರ್ಧ ಭಾಗದಲ್ಲಿ ರಾಜ್ಯ ಮಾಡಿದ ಚಾಲುಕ್ಯ ಜಯಸಿಂಹರಾಯನ ಆಳಿಕೆಯಲ್ಲಿ ಪ್ರಸಿದ್ಧಿಗೆ ಬಂದನು. ಹರಿಹರ ಕವಿಯು ಇವನ ವಿಷಯವಾಗಿ ಒಂದು ರಗಳೆಯನ್ನು ಬರೆದಿದ್ದಾನೆ. ಇದರಿಂದ ತಿಳಿಯುವದೇನಂದರೆ, ಕಲ್ಯಾಣ ಪಟ್ಟಣದಲ್ಲಿ ಒಂದು ನೃಸಿಂಹ ದೇವಾಲಯವಿದ್ದು ಅಲ್ಲಿಯ ಬ್ರಾಹ್ಮಣರು ಅರಸನೆಡೆಗೆ ಹೋಗಿ ಶಂಕರದಾಸಿಮಯ್ಯನೆಂಬವನು ಈಗ ಮುದುನೂರೊಳಗಿದ್ದು ಅವನು ಪರದೈವದ ಪ್ರತಿಮೆಗಳನ್ನು ತನ್ನ ನೊಸಲಗಣ್ಣಿನಿಂದ ದಹಿಸುತ್ತಿರುವನು. ಅವನನ್ನು ಕಲ್ಯಾಣಕ್ಕೆ ಬರಮಾಡಿಕೊಂಡು ನಮ್ಮ ನರಸಿಂಹಮೂರ್ತಿಯನ್ನು ನೋಡಿ

ಸಬೇಕೆಂದು ವಿನ್ನಹ ಮಾಡಿದರು. ಆಗ ರಾಜನು ಶಂಕರದಾಸಿಮಯ್ಯನನ್ನು ಕಲ್ಯಾಣಕ್ಕೆ ಕರೆಯಿಸಿ, ಅವನಿಗೆ ನೀವು ನೃಸಿಂಹ ಪ್ರತಿಮೆಯನ್ನು ನಿಮ್ಮ ನೊಸಲುಗಣ್ಣಿನಿಂದ ನೋಡಬೇಕು, ಅಂದರೆ ಅದರ ಘನ ಪ್ರತಿಷ್ಠೆಯಾಗುವದು, ಹೀಗೆ ನೋಡಿ ಕರುಣಿಸಿರಿ, ಎಂದು ಹೇಳಿಕೊಳ್ಳಲು ಆಗ ಶಂಕರದಾಸಿಮಯ್ಯನು ಅರಸನ ಅಭಿಪ್ರಾಯವನ್ನರಿತು ಕೋಪದಿಂದ ತನ್ನ ಕಣ್ಣನ್ನು ತೆರೆಯಲು, ಆ ನೃಸಿಂಹ ಪ್ರತಿಮೆಯು ಉರಿದು ಹೋಗಿ ನೆಲಕ್ಕುರುಳಿತು. ಹೀಗೆ ಕಥಾನಕವಿದ್ದು ಇದರ ಮೇಲಿಂದ ಬಸವೇಶ್ವರನಕಿಂತ ಹಿಂದೆ ಆಗಿ ಹೋದ ಶಿವಶರಣರು, ಶಿವ ಮತ್ತು ವಿಷ್ಣು, ಈ ದೇವತೆಗಳ ಬಗ್ಗೆ ಉಂಟಾದ ಕಲಹಗಳಲ್ಲಿ ಶೈವರ ಪಕ್ಷ ವಹಿಸಿ ವಿಷ್ಣುದೇವಾಲಯಗಳನ್ನು ಶಿವದೇವಾಲಯಗಳನ್ನಾಗಿ ಮಾಡುವದರಲ್ಲಿ ತೊಡಗಿದ್ದರೆಂದು ಕಂಡು ಬರುತ್ತದೆ.

ರೇವಣಸಿದ್ಧ.

ರೇವಣಸಿದ್ಧನು ಅವ ಕಾಲಕ್ಕೆ ಇದ್ದನೆಂಬ ವಿಷಯವಾಗಿ ನಾವು ಶಿವಾನುಭವ ಸಂಪುಟ ೧೪ ಸಂಚಿಕೆ ೪ ಪುಟ ೨೧೧ ಇದರಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದೇವೆ. ಅದರಲ್ಲಿ ನಾವು ಅವನು ೧೧೩೮ರಿಂದ ೧೧೫೮ರ ವರೆಗೆ ಕಾಂಚೀ ಪಟ್ಟಣದಲ್ಲಿ ರಾಜ್ಯವಾಳಿದ ೨ನೇ ಕುಲೋತ್ತುಂಗ ಚೋಳ ರಾಜನಲ್ಲಿ ಪ್ರಸಿದ್ಧಿಗೆ ಬಂದಿರಬೇಕೆಂದು ಊಹಿಸಿದ್ದೇವೆ. ಇವನಕಿಂತಲೂ ಮೊದಲು ರಾಜ್ಯವಾಳಿದ ವಿಕ್ರಮ ಚೋಳನು ವಿಷ್ಣುವಿನ ಪಕ್ಷಪಾತಿಯಾಗಿದ್ದರಿಂದ ದೇಶತ್ಯಾಗ ಮಾಡಿದ್ದ ರಾಮಾನುಜಾಚಾರ್ಯನು ಮರಳಿ ತನ್ನ ಕಾಂಚೀ ಪಟ್ಟಣಕ್ಕೆ ಆಗ ಬಂದು ಅಲ್ಲಿ ವಾಸವಾಗಿದ್ದನು. ಆದರೆ ಈ ರಾಜನ ತರುವಾಯ ಪಟ್ಟಕ್ಕೇರಿದ ಈ ೨ನೇ ಕುಲೋತ್ತುಂಗಚೋಳನ ಕಾಲದಲ್ಲಿ ರೇವಣಸಿದ್ಧೇಶ್ವರನು ಇವನ ರಾಜಧಾನಿಗೆ ಬಂದು ವಿಷ್ಣು ದೇವತೆಯ ಸ್ಥಾನದಲ್ಲಿ ಶಿವನನ್ನು ಸ್ಥಾಪಿಸಿದ್ದರ ವಿವರಣೆಯು ಹರಿಹರನ ರಗಳೆಯಲ್ಲಿ ಬಂದಿರುತ್ತದೆ. ಈ ಪ್ರಕಾರ ರೇವಣಸಿದ್ಧನ ಕಾಲದಲ್ಲಿಯೂ ದೇಶದಲ್ಲಿ ಶಿವ ವಿಷ್ಣು ಈ ವಿಷಯವಾಗಿ ವಿರೋಧಗಳು ಉತ್ಪನ್ನವಾಗಿದ್ದವು. ಇದಕ್ಕೋಸ್ಕರ ರಾಮಾನುಜಾಚಾರ್ಯನು ದೇಶತ್ಯಾಗ ಸಹ ಮಾಡಬೇಕಾಯಿತು, ಅವನಿಗೆ ಸಮಕಾಲೀನನಾದ ರೇವಣಸಿದ್ಧೇಶ್ವರನು ಶಿವನ ಪಕ್ಷಪಾತಿಯಾಗಿ ಶಿವದೇವಾಲಯಗಳ ಪ್ರತಿಷ್ಠಾಪನೆಗೋಸ್ಕರ ಪ್ರಯತ್ನಿಸುತ್ತಿದ್ದನೆಂಬುದು ಸ್ಪಷ್ಟವಾಗುತ್ತಿದೆ.

ತೆಲುಗು ಜೊಮ್ಮಯ್ಯ.

ಹರಿಹರನು ತೆಲುಗು ಜೊಮ್ಮಯ್ಯನ ಬಗ್ಗೆಯೂ ಒಂದು ರಗಳೆಯನ್ನು ಬರೆದಿದ್ದಾನೆ. ಇವನು ೧೧೩೮ರಿಂದ ೧೧೫೫ರ ವರೆಗೆ ತರ್ದವಾಡಿ ನಾಡಿನಲ್ಲಿ ಮಹಾಮಂಡಲೇಶ್ವರನಾಗಿ ಆಳಿದ ಬಿಜ್ಜಳನ ತಂದೆಯಾದ ಪೆರ್ಮಾಡಿ ರಾಯನಲ್ಲಿ ಮಂತ್ರಿಸ್ಥಾನವನ್ನು ಹೊಂದಿದ್ದನು. ತೆಲುಗು ಜೊಮ್ಮಯ್ಯನು ಶಿವಶರಣರಲ್ಲಿ ಭಕ್ತನಾಗಿ ವೀರಶೈವರಲ್ಲಿ ಪ್ರಸಿದ್ಧನಾಗಿದ್ದಾನೆ. ಒಂದು ದಿವಸ ಪೆರ್ಮಾಡಿರಾಯನ ಆಸ್ಥಾನದಲ್ಲಿ ಒಬ್ಬ ಪುರಾಣಿಕನು ಪುರಾಣವನ್ನು ಹೇಳುತ್ತಿರುವಲ್ಲಿ, ಅವನು ಶಿವನ ನಿಂದೆಯಾಗುವಂತೆ ಅದರ ಅರ್ಥವಾಡಿ ಜನರಿಗೆ ಹೇಳುತ್ತಿದ್ದನು. ಆಗ ಜೊಮ್ಮಯ್ಯನು ಅವನನ್ನು ಅಲ್ಲಿಯೇ ಕಡಿದುಹಾಕಿ ಬಿಟ್ಟನು. ಹೀಗೆ ಈತನ ಬಗ್ಗೆ ಕಥೆ ಇದೆ. ಜೊಮ್ಮಯ್ಯನು ಬಸವೇಶ್ವರನ ಪೂರ್ವದವನಾಗಿದ್ದು ಇವನ ಕಾಲದಲ್ಲಿಯೂ ವಿಷ್ಣು ಮತ್ತು ಶಿವ ಇವರ ನಡುವೆ ಕಲಹಗಳು ಹೆಚ್ಚಾಗಿದ್ದವೆಂಬುದು ಕಂಡುಬರುತ್ತದೆ.

ವರದಾನಿಗುಡ್ಡಮ್ಮೆ

ವರದಾನಿಗುಡ್ಡಮ್ಮೆಯ ಚರಿತ್ರೆಯಾದರೂ ಶೈವ ವೈಷ್ಣವ ಕಲಹಗಳನ್ನು ವ್ಯಕ್ತಪಡಿಸುತ್ತದೆ. ಈಕೆಯ ಉಲ್ಲೇಖವಿದ್ದ ಶಿಲಾಶಾಸನವನ್ನು ಪ್ರೊ. ಕೆ. ಜಿ. ಕುಂದಣಗಾರ ಎಮ್. ಎ. ಇವರು ತಮ್ಮ "ಉತ್ತರ ಕರ್ನಾಟಕದ ಮತ್ತು ಕೊಲ್ಲಾಪೂರ ಸಂಸ್ಥಾನದೊಳಗಿನ ಶಿಲಾಶಾಸನಗಳು" ಎಂಬ ಹೆಸರಿನ ಇಂಗ್ಲಿಷ ಗ್ರಂಥದಲ್ಲಿ ಪ್ರಕಟಿಸಿರುತ್ತಾರೆ. ಈ ಶಾಸನವು ೧೨೭೨ನೇ ಇಸ್ವಿಯದು ಇರುತ್ತದೆ. (ಶಿವಾನುಭವ ಸಂಪುಟ ೧೩, ಸಂಚಿಕೆ ೧೧, ಪುಟ ೪೮೨ ನೋಡಿರಿ.) ಇದರಿಂದ ಈ ಶಿವಶರಣೆಯು ಬಸವೇಶ್ವರನ ಕಾಲಕ್ಕೆ ಸಮೀಪಸ್ಥಳಾಗಿದ್ದಳೆಂದು ಕಂಡುಬರುತ್ತದೆ. ಈಕೆಯ ಒಂದು ಪುರಾಣವು ನಮಗೆ ಉಪಲಬ್ಧವಾಗಿದ್ದು ಅದರ ಸಾರವನ್ನು ನಾವು ಶಿವಾನುಭವ ಪತ್ರಿಕೆಯ ೧೨ನೇ ಸಂಪುಟ ೬ನೇ ಸಂಚಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಅದರ ಮೇಲಿಂದ ಈಕೆಯು ಬಸವೇಶ್ವರನಿದ್ದ ಕಾಲದಲ್ಲಿ ಕಲ್ಯಾಣ ಪಟ್ಟಣದಲ್ಲಿ ಕೆಲವು ಕಾಲ ವಾಸವಾಗಿದ್ದಳೆಂದು ತಿಳಿದುಬರುತ್ತದೆ. ವೀರಶೈವರಲ್ಲಿ ಅತಿ ಪ್ರಸಿದ್ಧ ಕವಿಯಾದ ಲಕ್ಕಣ್ಣ ದಂಡೇಶನಾದರೂ ತನ್ನ 'ಶಿವತತ್ವ ಚಿಂತಾಮಣಿ' ಎಂಬ ಗ್ರಂಥ

ದಲ್ಲಿ ಈಕೆಯ ಚರಿತ್ರೆಯನ್ನು ಕೊಟ್ಟಿದ್ದಾನೆ. (ಈ ಪುಸ್ತಕವು ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಸಿದ್ಧವಾಗಿದೆ.) ಆದರೆ ಈಕೆಯು ಬಸವೇಶ್ವರನಿಗೆ ಸಮಕಾಲೀನಳೆಂಬುದು ಸಂದೇಹಾಸ್ಪದವು. ಯಾಕಂದರೆ ವೀರಶೈವರಲ್ಲಿ ಆಗಿಹೋದ ಎಲ್ಲ ಶಿವಶರಣರು ಬಸವೇಶ್ವರನ ಕಾಲದಲ್ಲಿಯೇ ಇದ್ದರೆಂತಲೂ, ಅವರು ಕಲ್ಯಾಣ ಪಟ್ಟಣದಲ್ಲಿಯೇ ವಾಸಿಸಿದರೆಂತಲೂ ಅವರವರ ಪುರಾಣಗಳಲ್ಲಿ ವರ್ಣಿಸುವ ವಾಡಿಕೆಯು ಇರುತ್ತಿದೆ. ಉದಾಃ— ದೇವರದಾಸಿಮಯ್ಯ, ಶಂಕರದಾಸಿಮಯ್ಯ, ಇವರನ್ನು ಸಹ ಬಸವೇಶ್ವರನಿಗೆ ಸಂಬಂಧಿಸಿ ಕೆಲವು ಗ್ರಂಥಕಾರರು. ಅವರ ಬಗ್ಗೆ ಪುರಾಣಗಳನ್ನು ಬರೆದದ್ದುಂಟು. ಆದ್ದರಿಂದ ಇಂಥ ಉಲ್ಲೇಖಗಳನ್ನು ನಾವು ಕೂಡಲೆ ನಂಬದೆ ಈ ಶಿವಶರಣರ ಚರಿತ್ರೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡುವದು ಬಹು ಅವಶ್ಯವಿರುತ್ತದೆ. ಹೀಗೆ ನಾವು ವಿವೇಚಿಸಿದಲ್ಲಿ ಕೆಲವು ಶಿವಶರಣರು ಬಸವೇಶ್ವರನಕಿಂತಲೂ ಮೊದಲಿನವರೆಂತಲೂ, ಅನೇಕರು ಅವನ ಸಮಕಾಲೀನರೆಂತಲೂ ತಿಳಿದು ಬರುತ್ತದೆ. ಈ ವಿಷಯವನ್ನು ಕುರಿತು ನಾವು ವಿಸ್ತೃತವಾಗಿ ಶಿವಾನುಭವ ಸಂಪುಟ ೧೪ ಇದರಲ್ಲಿ ಅನೇಕ ಲೇಖಗಳನ್ನು ಪ್ರಸಿದ್ಧಿಸಿದ್ದೇವೆ. ವರದಾನಿ ಗುಡ್ಡಮ್ಮೆಯ ಚರಿತ್ರೆಯನ್ನು ನಾವು ಪರಿಶೋಧಿಸಿದಲ್ಲಿ ಈಕೆಯು ಇತರ ಕೆಲವು ಸ್ತ್ರೀ ವಚನಕಾರರಂತೆ ಬಸವೇಶ್ವರನ ಶಿವಾನುಭವ ಮಂಟಪದಲ್ಲಿದ್ದದ್ದರ ಉಲ್ಲೇಖವು ಎಲ್ಲಿಯೂ ಇರುವದಿಲ್ಲ. ಈಕೆಯ ಚರಿತ್ರೆ ಮತ್ತು ಶಿಲಾಶಾಸನ ಇವುಗಳ ಮೇಲಿಂದ ನೋಡಿದರೆ ಅವಳು ಬಸವೇಶ್ವರನಕಿಂತಲೂ ಸ್ವಲ್ಪ ಹಿಂದೆ ಅಂದರೆ ರೇವಣಸಿದ್ಧೇಶ್ವರನ ಕಾಲದಲ್ಲಿಯೇ ಇರಬೇಕೆಂದು ನಮಗೆ ತೋರುತ್ತದೆ. ಈಕೆಯ ಚರಿತ್ರೆಯಿಂದ ಶಿವ ವಿಷ್ಣು ಇವರ ವಿಷಯವಾಗಿ ಜಗಳಗಳಿದ್ದು ಅವುಗಳ ಬಗ್ಗೆ ತಿಳಿದು ಬರುವದೇನಂದರೆ:— ಮಲಾಪಹಾರೀ ನದಿಯ ದಂಡೆಯ ಮೇಲೆ ಇದ್ದ ಅಲಂಪುರ ಎಂಬ ಗ್ರಾಮದಲ್ಲಿ ಬ್ರಹ್ಮೇಶ್ವರ ಲಿಂಗವೆಂಬ ಶಿವಾಲಯವನ್ನು ಅಲ್ಲಿಯ ವೈಷ್ಣವರು ಕಿತ್ತು ಹಾಕಿದ್ದರು. ಆದ್ದರಿಂದ ಅವಳು ಒಂದು ಸೈನ್ಯವನ್ನು ಕೂಡಿಸಿಕೊಂಡು ಅಲ್ಲಿಗೆ ಹೋಗಿ ವಿರೋಧಿಗಳನ್ನು ಯುದ್ಧದಲ್ಲಿ ಸೋಲಿಸಿ ಪುನಃ ಆ ದೇವಾಲಯದಲ್ಲಿ ಬ್ರಹ್ಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದಳೆಂದು ತಿಳಿಯುತ್ತದೆ. ಇವಳ ಚರಿತ್ರೆಯಿಂದ ಈ ಕಾಲದಲ್ಲಿ ಶಿವ, ವಿಷ್ಣು ಈ ದೇವತೆಗಳ ವಿಷಯವಾಗಿ ಬರೇ ಒಡಕುಗಳಷ್ಟೇ ಅಲ್ಲ, ಒಮ್ಮೊಮ್ಮೆ

ಯುದ್ಧಗಳೂ ಕೂಡ ನಡೆದಿದ್ದು ಕಂಡು ಬರುತ್ತದೆ. ಆದರೆ ಈ ಸ್ಥಿತಿಯು ಬಸವೇಶ್ವರನಕಿಂತಲೂ ಮೊದಲು ಮಾತ್ರ ಇದ್ದ ಹಾಗೆ ನಮಗೆ ತೋರುತ್ತದೆ.

ಬಸವೇಶ್ವರ.

ಆದರೆ ಈ ವಿಲಕ್ಷಣ ಪರಿಸ್ಥಿತಿಯು ಬಸವೇಶ್ವರನ ಕಾಲದಲ್ಲಿ ಬದಲಾವಣೆಯಾಯಿತೆಂದು ನಮಗೆ ತೋರುತ್ತದೆ. ಅವನ ಕಾಲದಲ್ಲಿ ಪರಮಾತ್ಮನ ಬಗ್ಗೆ ಉಚ್ಚ ವಿಚಾರಗಳು ಉಂಟಾದವು. ಆದರೆ ಈ ಪರಿಸ್ಥಿತಿಯುಂಟಾಗಲು ಕೆಲವು ಕಾಲ ಗತಿಸಿರಲಿಕ್ಕೆಬೇಕು.

ಬಸವೇಶ್ವರನ ಆರಂಭದ ಕಾಲ.

ಬಸವೇಶ್ವರನು ಚಿಕ್ಕವಯಸ್ಸಿನವನಿದ್ದಾಗ ರೇವಣಸಿದ್ಧೇಶ್ವರ, ವರದಾನಿಗುಡ್ಡನಮ್ಮ, ತೆಲುಗು ಜೊಮ್ಮಯ್ಯ, ಇವರು ಮಂಗಳವಾಡನಾಡಿನಲ್ಲಿ ಪ್ರಸಿದ್ಧರಾಗಿದ್ದರು. ಆಗ ಶಿವ, ವಿಷ್ಣು ಈ ದೇವತೆಗಳ ಸಂಬಂಧವಾಗಿ ಜನತೆಯಲ್ಲಿ ಕ್ಷೋಭೆಗಳುಂಟಾಗಿ ಒಂದು ಕಡೆಗೆ ಬ್ರಾಹ್ಮಣರು ಮತ್ತೊಂದುಕಡೆಗೆ ಶಿವಸಾಂಪ್ರದಾಯಕರು ಇವರ ನಡುವೆ ಹೋರಾಟಗಳು ನಡೆಯುತ್ತಿದ್ದವು. ಇವುಗಳ ಪರಿಣಾಮಗಳು ಬಸವೇಶ್ವರನ ಮನಸ್ಸಿನ ಮೇಲೆ ಅವನು ಚಿಕ್ಕವನಾಗಿದ್ದಾಗ, ಅಂದರೆ ಅವನು ಮಂಗಳವಾಡದಲ್ಲಿರುವ ವರೆಗೆ, ಆಗಿರಲಿಕ್ಕೆಬೇಕು. ಆ ಪಟ್ಟಣದಲ್ಲಿ ಅವನು ಮಹಾಮಂಡಲೇಶ್ವರನಾದ ಬಿಜ್ಜಳನ ಕೈಕೆಳಗೆ ಲೇಖಕನಾಗಿ ಕೆಲವು ವರ್ಷ ಕೆಲಸ ಮಾಡಿದನು. ಇದೇ ಕಾಲದಲ್ಲಿಯೇ ರೇವಣಸಿದ್ಧೇಶ್ವರನು ಬಿಜ್ಜಳನ ಆಸ್ಥಾನದಲ್ಲಿ ಬಹು ಪ್ರಬಲ ಪುರುಷನಾಗಿದ್ದನು. ಆದ್ದರಿಂದ ಈ ಜಗಳಗಳ ಪರಿಸ್ಥಿತಿಯು ಬಿಜ್ಜಳನು ಕಲ್ಯಾಣದಲ್ಲಿ ಪಟ್ಟವೇರುವ ವರೆಗೂ ಹೆಚ್ಚು ಕಡಿಮೆ ಪ್ರಮಾಣದಿಂದ ನಡೆದಿರಲಿಕ್ಕೆಬೇಕು.

ಬಸವೇಶ್ವರನು ಪ್ರಧಾನಿಯಾದ ಬಳಿಕಿನ ಕಾಲ.

ಮುಂದೆ ಬಿಜ್ಜಳನು ಚಾಲುಕ್ಯರಾಜನನ್ನು ಸಿಂಹಾಸನದಿಂದ ತಳ್ಳಿ ತಾನೇ ಪಟ್ಟವೇರಿದನು. ಆಗ ಬಸವೇಶ್ವರನು ಅವನ ಮಂತ್ರಿಯಾಗಿ ನೇಮಿಸಲ್ಪಟ್ಟನು. ದೇವರದಾಸಿಮಯ್ಯನ ಕಾಲದಿಂದ ೧೦೦–೧೫೦ ವರ್ಷಗಳಿಂದಲೂ ವೀರಶೈವ ಧರ್ಮದ ಚಳವಳಿಗಳು ಉತ್ಪನ್ನವಾಗಿದ್ದವು.

ಬಸವೇಶ್ವರನಿಗೆ ರಾಜ್ಯದಲ್ಲಿ ಮಹತ್ವದ ಸ್ಥಾನವು ದೊರೆತ ಕೂಡಲೆ ಆಗ ದೇಶದಲ್ಲಿದ್ದ ಶಿವಶರಣರು ಅವನಿದ್ದೆಡೆಗೆ ಬರಹತ್ತಿದರು. ಅವರಲ್ಲಿ ಪ್ರಭುದೇವ, ಮಡಿವಾಳಮಾಚಿದೇವ, ಸಿದ್ಧರಾಮ, ಮಹಾದೇವಿಯಕ್ಕ ಇವರೇ ಮೊದಲಾದವರು ಮುಖ್ಯರಾಗಿದ್ದರು. ಆಗ ಶಿವಾನುಭವ ಕೂಟವು ಕಲ್ಯಾಣದಲ್ಲಿ ಸ್ಥಾಪಿತವಾಯಿತು. ಅಲ್ಲಿ ಹಿಂದಿನ ಶೈವಧರ್ಮಗಳ ಪರಿಶೀಲನೆ ನಡೆದು ವೀರಶೈವ ಧರ್ಮದ ಪುನರ್ರಚನೆಯಾಯಿತು. ಮತ್ತು ಶಿವಾನುಭವದ ಉಚ್ಚವಿಚಾರಗಳು ಸ್ಥಿರಗೊಳಿಸಲ್ಪಟ್ಟವು. ಅವುಗಳಲ್ಲಿ ಪರಮಾತ್ಮನ ಬಗ್ಗೆ ವಿಚಾರಗಳು ಬಹು ಮಹತ್ವದವೆಂದು ನಮಗೆ ತೋರುತ್ತದೆ. ಅವುಗಳಾವವಿದ್ದವೆಂಬುದನ್ನು ನಾವು ಹಿಂದೆಯೇ ವಿವರಿಸಿದ್ದೇವೆ.

ಈ ಕಾಲದಲ್ಲಿ ಈ ಹೊಸ ಪರಿಸ್ಥಿತಿಯುಂಟಾದ ಮೂಲಕ ಬಸವೇಶ್ವರನ ವಚನಗಳಲ್ಲಿ ತ್ರಿಮೂರ್ತಿಗಳನ್ನು ಪೂರ್ಣವಾಗಿ ಅಲ್ಲಗಳೆದಂಥವುಗಳು ಅನೇಕವು ದೊರಕುತ್ತವೆ. ಆದರೆ ಅವುಗಳೊಡನೆ ಬ್ರಾಹ್ಮಣರನ್ನೂ ವಿಷ್ಣುವಿನನ್ನೂ ಜರಿದಂಥವಾದರೂ ಕೂಡ ದೊರೆಯುತ್ತವೆ ಆದರೆ ನಿಂದಾಯುಕ್ತ ಈ ಎರಡನೇ ತರದ ವಚನಗಳು ಬಸವೇಶ್ವರನು ಶಿವಾನುಭವ ಮಂಟಪವನ್ನು ಸ್ಥಾಪಿಸುವದಕ್ಕಿಂತ ಮೊದಲಿನವು, ಅಂದರೆ ಅವನು ಇನ್ನೂ ಮಂಗಳವಾಡದಲ್ಲಿ ಇದ್ದಾಗಿನವು, ಇರಲಿಕ್ಕೆಬೇಕೆಂದು ನಾವು ಊಹಿಸುತ್ತೇವೆ. ಆದರೆ ಕಲ್ಯಾಣಪಟ್ಟಣದಲ್ಲಿ ಮುಂದೆ ಶಿವಾನುಭವ ಮಂಟಪವು ಸ್ಥಾಪಿತವಾದ ಬಳಿಕ ಅಲ್ಲಿ ಈ ವಿಷಯದ ಬಗ್ಗೆ ವಿಶೇಷ ಚರ್ಚೆಗಳಾಗಿ ಪರಮಾತ್ಮನ ಸ್ವರೂಪ ಮತ್ತು ಇಷ್ಟಲಿಂಗದ ಅವಶ್ಯಕತೆ ಇವುಗಳು ಹೆಚ್ಚಿಗೆ ವಿವೇಚಿಸಲ್ಪಟ್ಟವು. ಈ ಸಂಗತಿಯು ಶೂನ್ಯಸಂಪಾದನೆಯೊಳಗಿನ 'ಸಿದ್ಧರಾಮೇಶ್ವರನ ಸಂಪಾದನೆ' ಮತ್ತು ಇತರ ಶರಣರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಇದರ ಪರಿಣಾಮವಾಗಿ ಈ ಕಾಲದಲ್ಲಿ ದೇವರು ಒಬ್ಬನೇ ಇದ್ದಾನೆ. ಮತ್ತು ಅವನೊಬ್ಬನನ್ನೇ ವೀರಶೈವರು ಮನ್ನಿಸತಕ್ಕದ್ದು, ಎಂಬ ತತ್ವವು ಜನತೆಯಲ್ಲಿ ಪ್ರಚಾರ ಮಾಡಲ್ಪಟ್ಟಿತು.

ಬಸವೇಶ್ವರನ ಕಾಲದ ಶಿವಶರಣರ ವಿಚಾರಗಳು.

ಆದರೆ ಹೀಗೆ ಪ್ರಚಾರ ಮಾಡಲ್ಪಟ್ಟ ಈ ತತ್ವವು ಆಗಿನ ವೀರಶೈವರಿಗೆ ಹೊಸದಾದದ್ದೆಂದು ತಿಳಿಯಲಿಕ್ಕೆ ಬರಲಾರದೆಂದು ನಾವು ಇಲ್ಲಿ ಹೇಳುವದು

ಅವಶ್ಯವದೆ. ಅದು ಮೊದಲಿನಿಂದಲೂ ಅವರಲ್ಲಿ ರೂಢವಾಗಹತ್ತಿತ್ತೆಂಬುದು ದೇವರದಾಸಿಮಯ್ಯ ಬಾಹೂರುಬೊಮ್ಮಯ್ಯ ಇವರ ಚರಿತ್ರೆಗಳಿಂದ ಕಂಡು ಬರುತ್ತದೆ. ಆದರೂ ಕೆಲವೊಂದು ಆಗಂತುಕ ವಿಶಿಷ್ಟ ಕಾರಣಕ್ಕೋಸ್ಕರ ಹರ-ಹರ ಅಥವಾ ಶಿವ-ವಿಷ್ಣು ಎಂಬ ಕಲಹಗಳು ಈ ಶತಮಾನದ ಮಧ್ಯದಲ್ಲಿ ಉತ್ಪನ್ನವಾಗಿ ಅವು ದೇಶದಲ್ಲಿ ಬಹಳ ಕೋಲಾಹಲವನ್ನುಂಟು ಮಾಡಿದವು. ಈ ಮೂಲಕ ವಿಪ್ಲವಗಳು, ಕರ್ನಾಟಕ ದೇಶದಲ್ಲಿ ಮತ್ತು ತಮಿಳ ದೇಶದಲ್ಲಿ, ಸಂಭವಿಸಿದವು. ಆದರೆ ಬಸವೇಶ್ವರನು ಮಂತ್ರಿಪದವನ್ನು ಸ್ವೀಕರಿಸಿದ ಬಳಿಕ ಅವನ ಸಮಕಾಲೀನರಾಗಿದ್ದ ವಚನಕಾರರು ಈ ವೈಷಮ್ಯ ಭಾವವನ್ನು ತೊಲಗಿಸಿ, ಸಮಾಜದಲ್ಲಿ ನೆಮ್ಮದಿಯನ್ನುಂಟು ಮಾಡಿದರು. ಪ್ರಭುದೇವ, ಸಿದ್ಧರಾಮೇಶ್ವರ, ಚನ್ನಬಸವ, ನೋಳಿಗೆಯ ಮಾರಯ್ಯ, ಮಹಾದೇವಿಯಕ್ಕ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯ, ಇವರು ಶಿವಾನುಭವ ಮಂಟಪದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದವರಾಗಿದ್ದರು. ಅವರೆಲ್ಲರೂ ಪರಮಾತ್ಮನ ಬಗ್ಗೆ ಶ್ರೇಷ್ಠತರದ ಉದಾರ ವಿಚಾರಗಳನ್ನೇ ತಮ್ಮ ವಚನಗಳಲ್ಲಿ ಹೊರಗೆಡವಿದ್ದಾರೆ.

ಉದಾಃ — ಪ್ರಸಿದ್ಧ ವಚನಕಾರನಾದ ನೋಳಿಗಮಾರಯ್ಯನು ಶಿವಾನುಭವ ಮಂಟಪದಲ್ಲಿದ್ದು ಅವನು ತನ್ನ ವಚನಗಳಲ್ಲಿ ಒಂದೆಡೆಗೆ "ರುದ್ರನೇ ದೇವರೆಂದು ಆರಾಧಿಸಿ ಶಿಲೆಯೊಳಗೆ ಹೊರಟಿಗೊಂಡು ಕೆಟ್ಟರಲ್ಲಾ ಭಕ್ತ ಜನಂಗಳು. ವಿಷ್ಣುವೇ ದೇವರೆಂದು ಆರಾಧಿಸಿ ಮರನ ಸುತ್ತಿ ಕೆಟ್ಟರಲ್ಲಾ ಭೂಸುರಾದಿಗಳು" ಎಂದು ನುಡಿದಿದ್ದಾನೆ. ಇಲ್ಲಿ ಅವನು 'ಭಕ್ತ ಜನಂಗಳು' ಎಂದರೆ ವೀರಶೈವರೆಂದೇ ಅವನ ಅಭಿಪ್ರಾಯವಿದ್ದು ಅವನು ತನ್ನ ಸಮಾಜದವರನ್ನೇ ಇಲ್ಲಿ ನಿಂದಿಸಿದ್ದಾನೆ. ದೇವರ ಬಗ್ಗೆ ಇಂಥ ಅಭಿಪ್ರಾಯವುಳ್ಳ ಅಸಂಖ್ಯ ವಚನಗಳು ಈ ಕಾಲದಲ್ಲಿ ರಚಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಅನೇಕವುಗಳು ವಚನಶಾಸ್ತ್ರಸಾರ ಭಾಗ ೧ ಇದರಲ್ಲಿ ಕೊಡಲ್ಪಟ್ಟಿವೆ.

ಶಿವಶರಣರು ಶಿವಾಲಯಗಳನ್ನು ಸ್ಥಾಪಿಸಲಿಲ್ಲ.

ಬಸವೇಶ್ವರನ ಕಾಲದಲ್ಲಿ ಈ ಪ್ರಕಾರ ದೇವರು ಒಬ್ಬನೇ ಇದ್ದಾನೆ ಮತ್ತು ಅವನನ್ನು ಇಷ್ಟಲಿಂಗದ ಮೂಲಕವಾಗಿಯೇ ಆರಾಧಿಸಬೇಕೆಂಬ ತತ್ವವು ಸಾರಲ್ಪಟ್ಟಿದ್ದರಿಂದ ದೇವಾಲಯಗಳನ್ನು ಕಟ್ಟಿಸುವ ಪದ್ಧತಿಯು,

ಆಗಿನ ವೀರಶೈವರಲ್ಲಿ ನಿಂತು ಹೋಯಿತು. ಸಿದ್ಧರಾಮೇಶ್ವರನು ಸುಂದರವಾದ ದೇವಾಲಯಗಳನ್ನು ಕಟ್ಟುವದರಲ್ಲಿ ಬಹಳ ಮಗ್ನನಾಗಿದ್ದನು. ಆದರೆ ಅಲ್ಲಮಪ್ರಭುವು ಅವನನ್ನು ಕಂಡು "ಹೀಗೆ ಗುಡಿಗಳನ್ನು ಕಟ್ಟಿಸಬೇಡ. ದೇಹವೇ ದೇಗುಲವಾಗಿದ್ದು ಅಲ್ಲಿಯೇ ಪರಮಾತ್ಮನನ್ನು ಕಾಣು" ಎಂದು ಬೋಧಿಸಿದನು. ಆದರೆ ಈ ಕಾಲದಲ್ಲಿ ಜೈನರೂ, ಕಾಳಾಮುಖ ಮೊದಲಾದ ಶೈವ ಪಂಥಿಗಳೂ, ಶಿವಾಲಯ ಮತ್ತು ವಿಷ್ಣು ದೇವಾಲಯಗಳನ್ನು ವಿಶೇಷವಾಗಿ ಕಟ್ಟಿಸುತ್ತಾ ಇದ್ದರು. ಕರ್ನಾಟಕವು ಆಗ ಶಿಲ್ಪ ಶಾಸ್ತ್ರದಲ್ಲಿ ಬಹಳ ಮುಂದುವರಿದ ದೇಶವಾಗಿತ್ತು. ಆದರೆ ಬಸವೇಶ್ವರ ಮೊದಲಾದ ಶಿವಶರಣರೂ ಅವರ ತರುವಾಯ ಉತ್ಪನ್ನರಾದ ವಚನಕಾರರೂ ಹೀಗೆ ದೇವಾಲಯಗಳನ್ನು ವೀರಶೈವರು ಕಟ್ಟಿಸಕೂಡದೆಂಬ ಅಭಿಪ್ರಾಯವನ್ನು ಪ್ರಸಾರ ಮಾಡಿದರು. ಇದರ ಪರಿಣಾಮವಾಗಿ ಬಸವೇಶ್ವರನ ಕಾಲದಲ್ಲಿ ಶಿವಾಲಯಗಳನ್ನು ಕಟ್ಟಿಸುವದು ಅಥವಾ ವಿಷ್ಣು ದೇವಾಲಯಗಳನ್ನು ಕೆಡಿಸುವದು ಸ್ವಾಭಾವಿಕವಾಗಿ ನಿಂತು ಹೋಯಿತು.

ಶಿವಶರಣರು ಮಠಗಳನ್ನು ಸ್ಥಾಪಿಸಿದರು

ಆದರೆ ಬಸವಾದಿ ಪ್ರಮಥರ ಕಾಲದ ವೀರಶೈವರು ದೇವಾಲಯಗಳನ್ನು ಕಟ್ಟಿಸುವದರ ಬದಲು ಗ್ರಾಮಾಂತರಗಳಲ್ಲಿ ಮಠಗಳನ್ನು ಸ್ಥಾಪಿಸುತ್ತಾ ಹೋದರು. ಇದು ವೀರಶೈವ ಸಮಾಜದ ಒಂದು ವೈಶಿಷ್ಟ್ಯವು. ಈ ಮಠಗಳಲ್ಲಿ ಅವರು ಜಂಗಮರನ್ನು ಇಟ್ಟು ತತ್ವಬೋಧೆಯು ಮತ್ತು ಶಿಕ್ಷಣ ಪ್ರಸಾರದ ಕಾರ್ಯಗಳು ದೇಶದಲ್ಲೆಲ್ಲ ನಿರಂತರ ನಡಿಯುವ ಯೋಜನೆಯನ್ನು ಮಾಡಿದರು. ಇಲ್ಲಿ ಮಠಾಧಿಪತಿಗಳು ಶಿವಶರಣರ ವಚನ ಗ್ರಂಥಗಳ ಸಂಗ್ರಹವನ್ನು ಮಾಡಿ ಜನರಲ್ಲಿ ಧರ್ಮದ ಪ್ರಭಾವವನ್ನು ಬೀರುವ ಕಾರ್ಯವನ್ನು ಕೈಕೊಂಡರು. ಇದರಿಂದ ವೀರಶೈವರು ವಾಸನಾಗಿರುವ ಭಾಗಗಳಲ್ಲೆಲ್ಲ ಮಠಗಳು ಸ್ಥಾಪಿಸಲ್ಪಟ್ಟವು. ಅವುಗಳಿಗೆ ಆಗಿನ ಜನರು ಸ್ಥಿರತರವಾದ ಆದಾಯಗಳನ್ನು ಕಲ್ಪಿಸಿ ನಿರಂತರ ಧರ್ಮಕಾರ್ಯಗಳೂ ಧರ್ಮಬೋಧೆಯೂ ನಡೆಯುವ ಏರ್ಪಾಡು ಮಾಡಿದರು. ಒಬ್ಬ ಬಸವೇಶ್ವರನ ಕಾಲದಲ್ಲಿ ಯಾವ ಶಿವಾನುಭವ ಮಂಟಪವು ಉದಯವಾಯಿತೋ ಅದರ ಸ್ವರೂಪು ಮುಂದೆ ಗ್ರಾಮಾಂತರಗಳಲ್ಲಿ ಸ್ಥಾಪಿಸಲ್ಪಟ್ಟ ಮಠಗಳಲ್ಲಿ ಚಿರಸ್ಥಾಯಿಯಾಗಿ ಉಳಿಯಿತು. ಈ ಮಠಗಳ ಮೂಲಕ ದೇವಗಿ

ರಿಯ ಯಾದವ ರಾಜರು ಉತ್ತರ ಕರ್ನಾಟಕದಲ್ಲಿ ಮತ್ತು ಹೊಯ್ಸಳ ರಾಜರು ದಕ್ಷಿಣ ಕರ್ನಾಟಕದಲ್ಲಿ ರಾಜ್ಯವಾಳುವ ವರೆಗೂ ವಚನಕಾರರ ತತ್ವಗಳು ದೇಶದಲ್ಲೆಲ್ಲ ಪ್ರಚಾರ ಮಾಡಲ್ಪಟ್ಟವು. ಆದರೆ ಮುಂದೆ ಮುಸಲ್ಮಾನರ ದಾಳಿಗಳು ಬರಲು ಈ ಎರಡೂ ರಾಜ್ಯಗಳು ಲಯವನ್ನು ಹೊಂದಿದವು. ಆಗ ಮಾತ್ರ ಕೆಲವು ಕಾಲ ದೇಶದಲ್ಲಿ ಅವ್ಯವಸ್ಥೆಯುಂಟಾಗಿ ಶಿವಶರಣರ ವಚನ ವಾಙ್ಮಯವನ್ನು ಅಭ್ಯಾಸ ಮಾಡುವದು ನಿಂತು ಹೋಯಿತು.

ಈ ಮೇರೆಗೆ ಈ ವಿಷಯದ ಐತಿಹಾಸಿಕ ವಿವೇಚನೆಯು ಇದ್ದು ಮುಂದಿನ ಸಂಚಿಕೆಯಲ್ಲಿ ನಾವು ಬಸವೇಶ್ವರನ ತರುವಾಯದ ಕಾಲವನ್ನು ಕುರಿತು ಹೆಚ್ಚಿಗೆ ಪ್ರಸ್ತಾಪಿಸುವೆವು.

ಶೋಚನೀಯ ನಿಧನ.

ಗುಳೇದಗುಡ್ಡ ಮುನಿಸಿಪಲ್ ಎಸ್. ಎಮ್. ಸ್ಕೂಲಿನ ಶಿಕ್ಷಕರಾದ ಶ್ರೀಮಾನ್ ಬಿ. ಟಿ. ಗಚ್ಚಿನಮನಿ ಎಮ್. ಏ. ಬಿ. ಟಿ ಇವರು ತಾರೀಖು ೨೨-೨-೪೧ ನೇ ದಿವಸ ಕೈಲಾಸವಾಸಿಗಳೆಂದು ತಿಳಿಸಲು ನಮಗೆ ತುಂಬಾ ವ್ಯಸನವಾಗುತ್ತದೆ. ಇವರು ಬಡತನದಲ್ಲಿ ಹುಟ್ಟಿ ಬೆಳೆದು ಉಚ್ಚ ಶಿಕ್ಷಣವನ್ನು ಪಡೆದು ಆದರ್ಶ ಶಿಕ್ಷಕರೆನಿಸಿಕೊಂಡರು. ಇವರು ತಾವು ಪಡೆದ ಶಿಕ್ಷಣಕ್ಕನುಗುಣವಾಗಿ ವಾಙ್ಮಯ ಸೇವೆಯಲ್ಲಿ ನಿರತರಾಗಿದ್ದರು. ಐಹೊಳೆಯಲ್ಲಿ ದೊರೆತ ಶಿಲಾಶಾಸನಗಳ ಆಧಾರದಿಂದ "ಪಾಳೆಯಗಾರ" ಎಂಬ ಐತಿಹಾಸಿಕ ಕಾದಂಬರಿಯನ್ನು ಒರೆದಿದ್ದಾರೆ. ಅಲ್ಲದೆ ಅವರು ಕನ್ನಡ ವಾಙ್ಮಯವನ್ನು ಚನ್ನಾಗಿ ಅಭ್ಯಾಸಿಸಿ "ಕಲ್ಪವೃಕ್ಷ" ಎಂಬ ಸಂಶೋಧನಾತ್ಮಕ ಗ್ರಂಥವನ್ನು ಬರೆದು ಅದರ ಹಸ್ತಲಿಖಿತ ಪ್ರತಿಯನ್ನು ನಮ್ಮ ಕಡೆಗೆ ಅಭಿಪ್ರಾಯಕ್ಕೋಸ್ಕರ ಕಳಿಸಿದ್ದರು. ಅದರಲ್ಲಿಯ ಕೆಲವು ಪುಟಗಳನ್ನು ನಾವು ಈ ಸಂಚಿಕೆಯಲ್ಲಿ ಪ್ರಸಿದ್ಧಿಪಡಿಸಿದ್ದೇವೆ. ಇಷ್ಟರಲ್ಲಿಯೇ ಅವರು ಅಕಸ್ಮಾತ್ತಾಗಿ ಶಿವಾಧೀನರಾದದ್ದು ನಮಗೆ ತಿಳಿಯಬಂದಿದೆ. ಇದಕ್ಕೋಸ್ಕರ ನಾವು ಬಹಳ ವಿಷಾದ ಪಡುತ್ತೇವೆ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಲಿ.

— ಸಂಪಾದಕ

ವೈಯಾಕರಣ ಭೀಮ ಅಥವಾ ಭೀಮಸೇನ.

ಲೇಖಕರು:— ಪ್ರೊಫೆಸರ ಕೆ. ಜಿ. ಕುಂದಣಗಾರ ಎಮ್. ಏ.
(ರಾಜಾರಾಮ ಕಾಲೇಜ ಕೊಲ್ಹಾಪೂರ.)

ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ಕನ್ನಡದ ಧಾತು ಕೋಶವನ್ನು ಬರೆಯಲಾರಂಭಿಸುವಾಗ—

ವೇದಸಮನಾಗಿ ಭೀಮನಿ
ನಾದುದು ಸಂಸ್ಕೃತದ ಧಾತುವಾತೆರದಿಂದಂ ॥
ಯಾದವ ಕಟಕಾಚಾರ್ಯನಿ
ನಾದುದು ಕರ್ಣಾಟಧಾತು ಕವಿಕೇಶವನಿಂ ॥

ಎಂಬ ಪದ್ಯದಿಂದ ಸರ್ವಸಮ್ಮತವಾದ **ಭೀಮನ** ಸಂಸ್ಕೃತದ ಧಾತು ಕೋಶವನ್ನು ಅನುಸರಿಸಿ ತಾನು ಈ ಕೋಶವನ್ನು ರಚಿಸಿದಂತೆ ಹೇಳುತ್ತಾನೆ. ಆದರೆ ಈ ಸಂಸ್ಕೃತದ ಕೋಶವನ್ನು ರಚಿಸಿದ ಭೀಮನು ಯಾರೆಂಬುದನ್ನು ತನ್ನ ವೃತ್ತಿಯಲ್ಲಿ ಹೇಳಿಲ್ಲ. ಕನ್ನಡಪಂಡಿತರಾರೂ ಈತನ ಬಗ್ಗೆ ಬರೆದಂತೆ ತಿಳಿದುಬರುವುದಿಲ್ಲ. ಆದುದರಿಂದ ಈ ಭೀಮನು ಯಾರೆಂಬುದನ್ನು ಇಲ್ಲಿಯ ವರೆಗೆ ನನಗೆ ಹೇಳಲುಬರುತ್ತಿರಲಿಲ್ಲ. ಈಗ ಶ್ರೀಮಾನ್ ಪಿ. ಕೆ. ಗೋಡೆಯವರು *New Indian Antiquary* ಎಂಬ ಮಾಸಿಕದ ಸಂಪುಟ ೨ ಸಂಚಿಕೆ ೭ರಲ್ಲಿ ಈತನ ಬಗ್ಗೆ ಒಂದು ಪುಟ್ಟ ಲೇಖವನ್ನು ಬರೆದಿದ್ದಾರೆ. ಅದರ ಆಧಾರದಿಂದ ಈ ಲೇಖನವು ಬರೆಯಲಾಗಿದೆ.

ಡಾ॥ ಎಸ್. ಕೆ. ಬೆಳವಳಕರರವರು ತಮ್ಮ *Systems of Sanskrit Grammar* ಎಂಬ ಪುಸ್ತಕದ 'ಧಾತುಪಾಠ' ಎಂಬ ಪರಿಚ್ಛೇದದಲ್ಲಿ ಹೀಗೆಂದಿದ್ದಾರೆ: (ಅದರ ಭಾಷಾಂತರವು ಇಲ್ಲಿ ಕೊಡಲಾಗಿದೆ.)

'ಮಾಧವೀಯ ಧಾತುವೃತ್ತಿಯು ಅದೇ ವಿಷಯವನ್ನು ವಿವೇಚಿಸುತ್ತಿದೆ. ಅದನ್ನು ಬರೆದವರು ಮಾಧವಾಚಾರ್ಯರಿರಬಹುದು, ಅಥವಾ ವೇದಭಾಷ್ಯಕಾರರಾದ ಸಾಯಣಾಚಾರ್ಯರಿರಬಹುದು. ಅವರು (ಸಾಯಣಾಚಾರ್ಯರು) ತಮ್ಮಕ್ಕಿಂತ ಪೂರ್ವದಲ್ಲಿ ಇದ್ದ ವೈಯಾಕರಣರ

ದುಡಿವೆಯ ಫಲಗಳನ್ನು ಒಪ್ಪಿಕೊಂಡು ಅಲ್ಲಿ ಉಪಯೋಗಿಸಿಕೊಂಡಿದ್ದಾರೆ; ಮತ್ತು ಅವರೆಲ್ಲರ ಹೆಸರುಗಳನ್ನು ಹೇಳಿದ್ದಾರೆ. ಅವರಲ್ಲಿ **ಪಾಣಿನಿಯ ಮಾರ್ಗವನ್ನು ಅನುಸರಿಸಿದ ಭೀಮಸೇನ, ಮೈತ್ರೇಯ ರಕ್ಷಿತರ** ಹೆಸರುಗಳನ್ನು ಪ್ರಾಮುಖ್ಯವಾಗಿ ಹೇಳಬಹುದು.

ಸಾಯಣಾಚಾರ್ಯರು ಸು. ಕ್ರಿ. ಶ. ೧೩೫೦ ರಲ್ಲಿದ್ದವರು. ಆದುದರಿಂದ ಅವರು ಆಧುನಿಕ ಸೌಕರ್ಯಗಳಿಲ್ಲದ ಆ ಕಾಲದಲ್ಲಿ ಭೀಮಸೇನನ ಹೆಸರನ್ನೆತ್ತಿ ಹೇಳಬೇಕಾದರೆ ಅತನು ಸು. ೧೩೦೦ಕ್ಕಿಂತಲೂ ಪೂರ್ವದವನಾಗಿರಬೇಕು. ಆ ಕಾರಣ ೧೩೦೦ ಅತನ ಕಾಲದ ಈಚೆಯ ಮಟ್ಟು ಎಂದು ಭಾವಿಸಬಹುದು. ಇನ್ನು ಪೂರ್ವದ ಮಟ್ಟನ್ನು ಶೋಧಿಸುತ್ತಿರುವಾಗ ಕೆಲವು ಆಧಾರಗಳು ದೊರೆಯುತ್ತವೆ.

ಆಫ್ರೆಕ್ಟನು ತನ್ನ ಕ್ಯಾಟಾಲೊಗೊಸ್ ಕ್ಯಾಟಾಲೊಗೊರಮ್ ಎಂಬ ಪುಸ್ತಕದಲ್ಲಿ **ಭೀಮಸೇನನ ಧಾತುಪಾಠದ** ಕೆಲವು ಪ್ರತಿಗಳ ವಿವರವನ್ನು ಹೇಳಿದ್ದಾನೆ; ಮತ್ತು ಅತನು **ಭೈಮಿವ್ಯಾಕರಣದ** ಕರ್ತೃವೆಂದೂ, ರಾಯಮುಕುಟ ಮತ್ತು ಪದ್ಮನಾಭರು ಆಗ್ರಂಥದಿಂದ ಉದಹರಿಸಿದಂತೆಯೂ ಹೇಳುತ್ತಾನೆ. ಭಾಂಡಾರಕರ ಓರಿಯೆಂಟಲ್ ರಿಸರ್ಚ ಇನ್ಸ್ಟಿಟ್ಯೂಟಿನ (ಭಾಂಡಾರಕರ ಪೌರ್ವಾತ್ಯ ಸಂಶೋಧಕ ಸಂಸ್ಥೆಯ) ಲ್ಲಿನ ಹಸ್ತಲಿಖಿತ ಗ್ರಂಥಸಂಗ್ರಹದಲ್ಲಿ **ಭೀಮಸೇನನ** ಧಾತುಪಾಠದ ಮೂರು ಪ್ರತಿಗಳಿವೆ. ಇವುಗಳ ಬಗ್ಗೆ ಡಾ. ಬೆಳವಳಕರವರು ಹೀಗೆನ್ನುತ್ತಾರೆ.

'ಧಾತುಗಳ ಪಟ್ಟಿಯನ್ನು ಪಾಣಿನಿಯು ರಚಿಸಿದ್ದಾನೆ. **ಭೀಮಸೇನನು** ಆಧಾತುಗಳಿಗೆ ಅರ್ಥ ಬರೆದಿದ್ದಾನೆ. ಈಭೀಮಸೇನನು ಪ್ರಾಚೀನನು. ಈಧಾತುಪಾಠದ ಮೇಲೆ ಅತನು ಪ್ರದೀಪವೆಂಬ ಟೀಕೆಯನ್ನು ಬರೆದಿದ್ದಾನೆ.'

ಮ. ಮ. ಹರಪ್ರಸಾದ ಶಾಸ್ತ್ರಿಯವರು ಬಂಗಾಲ ರಾಯಲ್ ಏಸಿಯಾಟಿಕ್ ಸೊಸಾಯಟಿಯ ಗ್ರಂಥಸಂಗ್ರಹಾಲಯದೊಳಗಿನ ಧಾತುಪಾಠಗಳ ಪ್ರತಿಗಳ ಬಗ್ಗೆ ಹೀಗೆ ಬರೆದಿರುವರು. 'ಳಕಾರಳ ನೆಯ ನಂಬರಿನ ಪ್ರತಿಯು ಮೈತ್ರೇಯರಕ್ಷಿತನದು. ಅತನು ಬೌದ್ಧನು. ಪಾಣಿನಿಯ ಧಾತುಗಳ ಪಟ್ಟಿಗೆ ಟೀಕಾಕಾರನವನು. **ಭೀಮಸೇನನಿಗಿಂತ** ಈಚೆಯ

ವನು.' ಶ್ರೀಶಬಾಬುವಿನ ಅಭಿಪ್ರಾಯದ ಮೇರೆಗೆ ಮೈತ್ರೇಯರಕ್ಷಿತನ ಕಾಲ ಸು. ೧೧೦೦. ಭೀಮಸೇನನು ಇವನ ಪೂರ್ವದವನಾಗಿರುವುದರಿಂದ ಈ ಆಧಾರದಿಂದ ಅವನು ೧೧೦೦ ಕ್ಕಿಂತ ಪೂರ್ವದವನು ಎಂದಾಯಿತು. ಅಂದರೆ ಅವನ ಕಾಲ ೧೩೦೦ ರಿಂದ ೨೦೦ ವರ್ಷ ಹಿಂದೆ ಹೋದಂತಾಯಿತು.

ಭೀಮಸೇನನ ಕಾಲವನ್ನು ಇನ್ನೂ ಹಿಂದಕ್ಕೊಯ್ಯಲು ಮತ್ತೊಂದು ಬಲವಾದ ಆಧಾರವಿದೆ. ಉಮಾಸ್ವಾತ್ಯಾಚಾರ್ಯರು ತತ್ವಾರ್ಥಸೂತ್ರವೆಂಬ ಆಗಮಗ್ರಂಥವನ್ನು ರಚಿಸಿರುವರಷ್ಟೇ. ಅವರ ಕಾಲ ಕ್ರಿ. ಶ. ದ ೧ನೆಯ ಮತ್ತು ೪ನೆಯ ಶತಮಾನಗಳ ಮಧ್ಯದಲ್ಲಿ ಎಲ್ಲಿಯೋ ಇರಬಹುದೆಂದು ಪ್ರೊ. ಎಚ್. ಆರ್. ಕಪಾಡಿಯಾರವರು ನಿರ್ಣಯಿಸುತ್ತಾರಾದರೆ ಸತೀಶಚಂದ್ರವಿದ್ಯಾಭೂಷಣರು ಅವರು ಕ್ರಿ. ಶ. ೧ರಿಂದ ೬೫೦ರ ಮಧ್ಯೆ ಇದ್ದರೆಂದು ನಿರ್ಣಯಿಸುತ್ತಾರೆ. ಅದು ಹೇಗೆಯೇ ಇದ್ದರೂ ಉಮಾಸ್ವಾತ್ಯಾಚಾರ್ಯರು ೪ನೆಯ ಶತಮಾನಕ್ಕೆ ಹಿಂದೆ ಇದ್ದವರೆಂಬುದು ನಿರ್ವಿವಾದದ ಮಾತು. ಇನ್ನು ಸಿದ್ಧಸೇನ ಗಣಿಯವರು ಅಚಾರ್ಯರ ತತ್ವಾರ್ಥಸೂತ್ರ ಭಾಷ್ಯಕ್ಕೆ ವಿಸ್ತಾರವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಸಿದ್ಧಸೇನಗಣಿಯವರು ಕ್ರಿ. ಶ. ೬ನೆಯ ಶತಮಾನಕ್ಕೆ ಈಚೆಯವರಲ್ಲವೆಂದು ಪ್ರೊ ಕಾಪಾಡಿಯಾರವರು ಆಪುಸ್ತಕದ ಮುನ್ನುಡಿಯಲ್ಲಿ ಹೇಳಿದ್ದಾರೆ. ಸತೀಶಚಂದ್ರ ವಿದ್ಯಾಭೂಷಣರಾದರೋ ತಮ್ಮ *History of Indian Logic* ಎಂಬ ಪುಸ್ತಕದ ಪು. ೧೮೨ರಲ್ಲಿ ಸಿದ್ಧಸೇನಗಣಿಯವರ ಸು. ೬೦೦. ರಲ್ಲಿ ಇದ್ದವರೆಂದು ನಿರ್ಣಯಿಸಿದ್ದಾರೆ. ಈಸಿದ್ಧಸೇನಗಣಿಯವರ ವ್ಯಾಖ್ಯಾನದಲ್ಲಿ ವೈಯಾಕರಣ **ಭೀಮಸೇನನನ್ನು** ಆಧರಿಸಿರುವದರಿಂದ ಭೀಮಸೇನನ ಕಾಲವನ್ನು ಸು. ಕ್ರಿ. ಶ. ೬೦೦ಕ್ಕೆ ತುಸು ಹಿಂದೆ ಒಯ್ಯಲು ಆಧಾರದೊರೆತುದಾಗಿದೆ. ಇದೇ ಪೂರ್ವದ ಮಟ್ಟು ಎಂದು ಗ್ರಹಿಸಬಹುದು.

ಉಮಾಸ್ವಾತ್ಯಾಚಾರ್ಯರ ಭಾಷ್ಯವು ಹೀಗಿದೆ:—

"**चिती संज्ञानविशुद्धयोः धातुः । तस्य चित्तमिति भवति निष्ठान्तमौणादिकंच ।**"

ಇದರ ಮೇಲೆ ಸಿದ್ಧಸೇನಗಣಿಯವರ ವ್ಯಾಖ್ಯಾನವು:—

" चिती संज्ञानविशुद्धयोर्धातुरित्यादि । भीमसेनात्परतोऽन्यै-र्वैयाकरणैरर्थद्वये पठितो धातुः संज्ञाने विशुद्धौच । इह विशु द्ध्यर्थस्य सह सञ्ज्ञानेन ग्रहणम् । अथवानेकार्था धातवः इति सञ्ज्ञाने पठितो विशुद्धावपि वर्तते । भाष्यकृता चोप युज्यमान मेवार्थमाभिसन्धाय विशुद्धिरपि पठिता तस्य चित्तमिति रूपं भवति निष्ठान्तमौणादिकं च चेततीति चित्तं विशुद्धयतीत्यर्थः "

ಇಲ್ಲಿ ಭೀಮಸೇನನನ್ನು ಆಧರಿಸಿರುವುದು ಧಾತುಪಾಠದ ಭೀಮ ಸೇನನೆಂಬುದು ಸ್ಪಷ್ಟವಾಗಿದೆ. ಸಿದ್ಧಸೇನಗಣಿಯವರ ವ್ಯಾಖ್ಯಾನದಲ್ಲಿ ಭೀಮಸೇನನಿಂದ ತೆಗೆದುಕೊಂಡ ಬೇರೆ ಆಧಾರಗಳಿರಬಹುದು. ಸಂಶೋ ಧಕರು ಅವುಗಳನ್ನು ಶೋಧಿಸುವುದು ಆವಶ್ಯಕ. ಈತನ ವಿಷಯವಾಗಿ ಮತ್ತೆ ಯಾವ ಸಂಗತಿಗಳೂ ತಿಳಿಯುವುದಿಲ್ಲ.

ಮೇಲಿನ ವಿವೇಚನೆಯಿಂದ ಕೆಳಗಿನ ನಿರ್ಣಯಗಳನ್ನೆ ಕಂಡು ಕೊಳ್ಳಬಹುದು.

೧ **ವೈಯಾಕರಣ ಭೀಮ** ಅಥವಾ **ಭೀಮಸೇನನು** ಧಾತು ಪಾಠವನ್ನು ರಚಿಸಿದ್ದಾನೆ. ಅವನು ಕ್ರಿ. ಶ. ೬೦೦ಕ್ಕೆ ತುಸು ಹಿಂದೆ ಇದ್ದವನು. **ಕೇಶಿರಾಜನು** ತನ್ನ ಧಾತುಕೋಶದಲ್ಲಿ ಈತನನ್ನು ಅನು ಸರಿಸಿದ್ದಾನೆ.

೨ ಈತನು ಯಾವ ಮತದವನೆಂಬುದು ತಿಳಿದುಬಂದಿಲ್ಲ. ಒಂದು ವೇಳೆ ಜೈನನಲ್ಲೆಂದು ಭಾವಿಸುವುದಾದರೆ ೬ನೆಯ ಶತಮಾನದಲ್ಲಿ ತತ್ವಾ ರ್ಥಸೂತ್ರದಂತಹ ಆಗಮಗ್ರಂಥದ ವ್ಯಾಖ್ಯಾನದಲ್ಲಿ ಮತದ್ವೇಷವೇನೂ ಇಲ್ಲದೆ ಭೀಮಸೇನನ ಧಾತುಪಾಠದ ಆಧಾರವನ್ನು ಗ್ರಹಿಸುವುದು ಧರ್ಮ ಸಹಿಷ್ಣುತೆಯ ಉದಾಹರಣೆ. ಇದೆಲ್ಲ ಊಹೆ ಮಾತ್ರ.

೩ ಅದನ್ನು ಸರ್ವಸಮ್ಮತವೆಂದು ಕೇಶಿರಾಜನು ಒಪ್ಪಿಕೊಳ್ಳುವುದು ಆತನ ಗುಣಗ್ರಾಹಕತೆ.

೪ ಇದರಿಂದ ಕೇಶಿರಾಜನು ಸಂಸ್ಕೃತ ಪಂಡಿತನೆಂದೂ, ಆತನು ಸಿದ್ಧಸೇನನ ವ್ಯಾಖ್ಯಾನವನ್ನು ಓದಿದವನೆಂದೂ ಊಹಿಸಿದರೆ ತಪ್ಪಾಗದು.

ರೆವ್ಮುವ್ವೆಯ ವಚನಗಳು.

ಮಹೇಶ್ವರನ ಭಕ್ತ.

(೧) ವ್ರತವೆಂಬುದೇನೋ ? ವಸ್ತುವ ಕಾಂಬುದಕ್ಕೆ ನಿಚ್ಚಣಿಗೆ. ವ್ರತವೆಂಬುದೇನೋ ಇಂದ್ರಿಯಂಗಳ ಸಂದ ಮುರಿವ ಕುಜಕುತಾರ. ವ್ರತವೆಂಬುದೇನೋ ಸಕಲ ವ್ಯಾಪಾರಕ್ಕೆ ದಾವಾನಲ. ವ್ರತವೆಂಬುದೇನೋ ಸರ್ವದೋಷನಾಶಕ. ವ್ರತವೆಂಬುದೇನೋ ಚಿತ್ತ ಸುಯಿಧಾನದಿಂದ ವಸ್ತುವ ಕಾಂಬುದಕ್ಕೆ ಸಾಧಕ. ವ್ರತವೆಂಬುದೇನೋ ಆಚಾರವೇ ಪ್ರಾಣ ವಾದ ರಾಮೇಶ್ವರನ ಲಿಂಗವು ಅವರಿಗೆ ಜೊಚ್ಚಲುಮಗನಾಗಿಪ್ಪನು.

(೨) ಆಠಾರ ಭಾವಕ್ಕೆ ಒಳಗಾಗದ ವಸ್ತು, ಆಠಾರ ಭ್ರಮೆಗೆ ಹೊರಗಾದ ವಸ್ತು. ಆಠಾರಾಚಾರಕ್ಕೆ ಒಳಗಾಗದ ವಸ್ತು, ಆಠಾರನಾ ಚಾರಕ್ಕೆ ಹೊರಗಾದ ವಸ್ತು. ಆಚಾರ ಶ್ರದ್ಧೆ ಇದ್ದಲ್ಲಿ ನೀನೆಂಬೆ. ಆಚಾ ರಕ್ಕೆ ಪ್ರಾಣವಾದ ರಾಮೇಶ್ವರಲಿಂಗ ಆ ಗುಣವಿಲ್ಲದಿರ್ದಡೆ ನೀನು ಎನ್ನ ವನಲ್ಲ ಎಂಬೆ.

(೩) ಗುರುವಾದಡೂ ಆಚಾರಭ್ರಷ್ಟನಾದಡೆ ಅನುಸರಿಸಲಾಗದು. ಲಿಂಗವಾದಡೂ ಆಚಾರ ಹಳುವಾದಲ್ಲಿ ಪೂಜಿಸಲಾಗದು. ಜಂಗಮವಾ ದಡೂ ಆಚಾರ ಅನುಸರಣೆಯಾದಲ್ಲಿ ಕೂಡಲಾಗದು. ಆಚಾರವೇ ವಸ್ತು, ವ್ರತವೇ ಪ್ರಾಣ, ಕ್ರಿಯೆಯೇ ಜ್ಞಾನ, ಜ್ಞಾನವೇ ಆಚಾರ ಪ್ರಾಣ ವಾದ ರಾಮೇಶ್ವರಲಿಂಗವು ತಾನೆ.

(೪) ಆಚಾರ ಅನುಸರಣೆಯಾದಲ್ಲಿ ಅಲ್ಲ ಅಹುದೆಂದು ಶ್ರುತದಲ್ಲಿ ಕೇಳಿ ದೃಷ್ಟದಲ್ಲಿ ಕಂಡು ಅನುಮಾನದಲ್ಲರಿದು ಸಂದೇಹವ ಬಿಟ್ಟು ಅದ ಕಂಡ ಮೇಲೆ ಆತನಂಗವ ಕಂಡಡೆ ಸಂಗದಲ್ಲಿ ನುಡಿದಡೆ ಲಿಂಗಕ್ಕೆ ಸಲ್ಲ, ಜಂಗಮಕ್ಕೆ ದೂರ. ಅದು ಕುಂಭಿನೀನರಕ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಸಲ್ಲದ ನೇಮ.

(೫) ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ, ಕೃಷಿ ತೀರಿದ ಮೇಲೆ ಗುರುದರ್ಶನ, ಲಿಂಗಪೂಜೆ, ಜಂಗಮಸೇವೆ, ಶಿವಭಕ್ತರ

ಸುಖಸಂಧಾನಕ್ಕೆ, ಶರಣರ ಸಂಗ ಈ ನೇಮವನರಿವುತಿಪ್ಪುದು ಸದ್ಭಕ್ತ ಸದಾತ್ಮನ ಮುಕ್ತಿ. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗಕ್ಕೆ ಆತನೇ ಜೀತನಭಾವ.

(೬) ವ್ರತಿಗಳ ಮನೆಗೆ ವ್ರತಿಗಳು ಬಂದಲ್ಲಿ ಎನ್ನ ಮನೆಗೆ ಇವರು ಬಂದರೆಂದು ಭಿನ್ನಭಾವವಾದಾಗಳೇ ವ್ರತಕ್ಕೆ ದೂರ. ಆಚಾರಕ್ಕೆ ಕೊರತೆ. ತಮ್ಮ ಮನೆಗೆ ತಾವು ಬಂದರೆಂದು ಅನ್ಯಭಾವವಿಲ್ಲದೆ, ಅರ್ಥ ಪ್ರಾಣಾಭಿಮಾನವೆಂದು ಕಟ್ಟುಮಾಡಿಮೊಡೆ ಸಮಯಾಚಾರಕ್ಕೆ ದೂರ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಒಪ್ಪದ ನೇಮ.

(೭) ಸರಸಕ್ಕೆ ಸತ್ತವರುಂಟೇ? ವಿನೋದಕ್ಕೆ ಪರದಾರವ ಮೂಡಿದವರುಂಟೇ? ಅರ್ಥಿಗೆ ಕಣ್ಣ ಕುತ್ತಿದರೆ ಆ ಕೆಟ್ಟ ಕೇಡು ಅದಾರಿಗೆ ಕೊರತೆ, ಹೇಳಾ? ಭಕ್ತ ಜಂಗಮದಲ್ಲಿ ಚಚ್ಚುಗೋಷ್ಠಿಯ ಮಾಡುವ ಮಿಟ್ಟಿಯ ಭಂಡರಿಗೆ ಸತ್ಯ ಸದಾಚಾರ ಮುಕ್ತಿ ಭಾವವೆಂದೂ ಇಲ್ಲ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಸಲ್ಲದ ನೇಮ.

(೮) ಅಡಗು, ಸುರೆ, ಕಟುಕ, ಪರದಾರ, ಪರಪಾಕ ಇಂತಿದನು. ಬೆರಸುವವರನಾ ಬೆರೆಸೆನ್ದೆಂದು ಅವರ ನಿರೀಕ್ಷಿಸೆನೆಂದು ಮತ್ತದನು ಮರೆದು ತ್ರಿವಿಧದಾಸೆಯ ಕುರಿತು ಮತ್ತವರ ಸಂಗವ ಮಾಡಿದೆನಾದಡೆ ಲಿಂಗಕ್ಕೆ ಸಲ್ಲ. ಜಂಗಮಕ್ಕೆ ದೂರ. ಪ್ರಸಾದವಿಲ್ಲ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾದರೂ ವ್ರತಭ್ರಷ್ಟನೆಂದು ಬಿಡುವೆ.

(೯) ಆಜೆಯಲ್ಲಿ ಕೇಳಿದ ಮಾತ ಈಜೆಯಲ್ಲಿ ನುಡಿದು ಮತ್ತಾ ಜೆಯಲ್ಲಿ ಬೆರಿಸುವವ ಭಕ್ತನಲ್ಲ. ಆತನ ಸತಿಯ ಈಜೆಯಲಿ ಕೂಡಿ ಆತನಿದ್ದಾಗ 'ಅಮ್ಮಾ' ಎಂದು ಆತ ಸಂದಲ್ಲಿ ಸತಿ ಎಂಬ ಭಂಡರಿಗೇಕೆ ವ್ರತನೇಮ ನಿತ್ಯ? ಇಂತಿವರ ಕಳೆದುಳಿಯಬೇಕು, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವನರಿವುದಕ್ಕೆ.

(೧೦) ವಿಪ್ರಂಗೆ ವೇದ ಮಂತ್ರವ ಬಿಟ್ಟು, ವಿಜಾತಿಯಲಿ ಬೆರಿಸಲಿಕ್ಕೆ ಸುಜಾತಿಗೆ ಹೊರಗಪ್ಪರೆಂಬರು ನೋಡಾ. ಶ್ರೀ ವಿಭೂತಿ ರುದ್ರಾಕ್ಷಿ ಶಿವಲಿಂಗ ಮುಂತಾದ ನಾನಾ ವ್ರತ ನೇಮ ನಿತ್ಯದ ಭಾವವ ಬಿಟ್ಟು ಬಂದವನ ಗುರುವಾದಡು, ಲಿಂಗವಾದಡು, ಜಂಗಮವಾದಡು, ನೋಡಿದಡೆ ನುಡಿಸಿದಡೆ ಎನ್ನವ್ರತಕ್ಕದೇ ಭಂಗ. ಅನುಸರಣೆಯಲ್ಲಿ ಬಂದ

ವರ ಕಂಡು ಕೇಳಿ, ಅವರಂಗಣವ ಕೂಡಿಕೊಂಡವರ, ಇದ ನಾನರಿತು, ಅಂಗೀಕರಿಸಿದೆನಾದಡೆ, ಇಹಪರಕ್ಕೆ ಹೊರಗು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾಯಿತ್ತಾದಡೂ ವ್ರತಬಾಹ್ಯನಾದಡೆ ಎತ್ತಿಹಾಕುವೆನು.

(೧೧) ಭಾಜನಕ್ಕೆ ಸರ್ವಾಂಗ ಪಾವುಡವ ಬಾಸಣಿಸುವಾಗ ಅದು ಆ ಕುಂಭಕ್ಕೋ, ತನ್ನ ಅಂಗಕ್ಕೋ, ಎಂಬುದನರಿದು ಸರ್ವಾಂಗ ಪಾವುಡವ ಕಟ್ಟುವ ವಿವರ. ಮನ, ಬುದ್ಧಿ, ಚಿತ್ತ, ಅಹಂಕಾರವೆಂಬ ಚತುರ್ಭಾವದ ಸೆರಗಿನಲ್ಲಿ ಗುಹ್ಯೇಂದ್ರಿಯವೆಂಬವಂ ಕಳೆದು ಜಿಹ್ವೇಂದ್ರಿಯವೆಂಬ ಅಂಗಭಾಜನಕ್ಕೆ ಸರ್ವಾಂಗ ಪಾವುಡವಂ ಕಟ್ಟಿ ಮಣ್ಣೆಂಬಾಸೆಯ ಬಿಟ್ಟು ಹೊನ್ನೆಂಬಾಸೆಯ ಬಿಟ್ಟು ಹೆಣ್ಣೆಂಬ ಮೋಹದಲ್ಲಿ ಮುಗ್ನವಾಗದೆ, ಮಣ್ಣೆಂಬಾಸೆ ಗುರುವಿನಲ್ಲಿ ಹೊನ್ನೆಂಬಾಸೆ ಲಿಂಗದಲ್ಲಿ ಹೆಣ್ಣೆಂಬ ಮೋಹ ಜಂಗಮದಲ್ಲಿ ಕೊಡುವ ವ್ರತವನರಿಯದೆ ಮಣ್ಣ ಮಡಕೆಯ ಗನ್ನದಲ್ಲಿ ಕಟ್ಟಿದಡೆ, ಪ್ರಸನ್ನ ವ್ರತದಣ್ಣಗಳೆಲ್ಲರೂ, ಇದ ಜೆನ್ನಾಗಿ ತಿಳಿದು ನೋಡಲಾಗಿ, ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ ವ್ರತನೇಮ ಹರಿಯಿತ್ತು.

(೧೨) ಖಂಡಿತ ವ್ರತದ ನಿರಂಗನ ವ್ರತವೆಂತುಟು ಎಂದರೆ, ತನ್ನ ಸತಿಗೆ ಗರ್ಭ ತಲೆದೋರಿದಲ್ಲಿಯೇ ಮುಖವ ಕಾಂಬುದಕ್ಕೆ ಮುನ್ನವೇ ಲಿಂಗಧಾರಣವ ಮಾಡಿ, ನೋಡಿದ ಮತ್ತೆ ಗಣಸಾಕ್ಷಿಯೂಗಿ ವಿಭೂತಿಯ ಪಟ್ಟವ ಕಟ್ಟಿ ಇಪ್ಪುದೇ ವ್ರತ ಶೀಲ ನೇಮ. ಹಾಗಲ್ಲದೆ ದಿಂಡೆಯತನದಲ್ಲಿ ಮಕ್ಕಳಿಗೆ ಸಂದೇಹದ ವ್ರತವ ಕಟ್ಟಬಹುದೇ? ಬುದ್ಧಿಯಾದಂದಿಗಾಗಲಿ ಎಂಬವರ ಅಂಗಣವ ಮೆಟ್ಟಲಾಗದು. ಅದೆಂತೆಂದರೆ, ವ್ರತದಂಗದಲ್ಲಿ ಬೆಳೆದ ಗರ್ಭವನು.....ಎಂಬವನ ವ್ರತ ಅಂದೇ ಬಿಟ್ಟಿತ್ತು. ಅದೆಂತೆಂದೊಡೆ ತನ್ನ ಅಂಗದಲ್ಲಿ ಆದ ಲಿಂಗದೇಹಿಯ ಮುಂದಕ್ಕೆ ಭವಿಸಂಗಕ್ಕೆ ಈಡು ಮಾಡುವ ವ್ರತಭಂಗಿತನ ಕಂಡು ಅವನೊಡನೆ ನುಡಿದಡೆ ಕುಂಭೀನರಕ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವೇ ಅವನ ಹಿಂಗಿರಬೇಕು.

(೧೩) ತಾ ವ್ರತಿಯಾಗಿ ಮಕ್ಕಳಿಂದು ಮಾಡದಿರ್ದಡೆ ಆ ವ್ರತಕ್ಕೆ ತಾನೇ ಹೊರಗು. ತನ್ನಂಗ ಮನ ಭಾವ ಕರಣಂಗಳಲ್ಲಿ ಸಂಗದಲ್ಲಿ ಇದ್ದವರೆಲ್ಲಕ್ಕೂ ತನ್ನಂಗದ ವ್ರತವ ಮಾಡಬೇಕು. ಇದು ಸೀಮೆವಂತರ ಯುಕ್ತಿ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಾಚಾರದ ಗೊತ್ತು.

ಮಹೇಶ್ವರನ ಮಹೇಶ.

(೧೪) ಲವಣ ನಿರಶನದ ಆಯತದಂದವೆಂತೆಂದಡೆ.ಕಾರ, ಲವಣ ನಿಷಿದ್ಧವೆಂದು ಬಿಟ್ಟು ಮತ್ತೆ ಬಿಳಿಯ ಲವಣ ಬಳಸುವದು. ಬಿಳಿಯ ಲವಣ ನಿಷಿದ್ಧವೆಂದು ಬಿಟ್ಟು ಮತ್ತೆ ಸೈಂಧವ ಲವಣವ ಬಳಸುವುದು. ಸೈಂಧವಲವಣ ನಿಷಿದ್ಧವೆಂದು ಬಿಟ್ಟು ಮತ್ತೆ ವೃತ್ತಿಕೆ ಲವಣವ ಬಳಸುವುದು. ಈ ಅನುವ ನಾನೆಂದುದಿಲ್ಲ. ನಿಮ್ಮ ನೀವೇ ಬಲ್ಲಿರಿ. ಅನು ವಿಂಗೆ ತಕ್ಕ ವ್ರತ, ವ್ರತಕ್ಕೆ ತಕ್ಕ ಆಚಾರ, ಆಚಾರಕ್ಕೆ ತಕ್ಕ ಖಂಡಿತ. ಆವಾವ ನೇಮದಲಿ ಭಾವಶುದ್ಧವಾದವಂಗೆ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ಪ್ರಸನ್ನವಾಗಿಪ್ಪನು.

(೧೫) ಬಹುಜಲವಂ ಬಿಟ್ಟಲ್ಲಿ ಶೀಲವಲ್ಲ. ಪರಪಾಕ ದ್ರವ್ಯವ ಬಿಟ್ಟಲ್ಲಿ ಶೀಲವಲ್ಲ. ಅದೆಂತೆಂದೊಡೆ,ಅದು ಮನದ ಅರೋಚಕ. ಆ ಗುಣ ಜಗದ ಮಚ್ಚು. ಈ ಗುಣ ವ್ರತಕ್ಕೆ ಸಲ್ಲದು. ವ್ರತವಾವುದೆಂದಡೆ ಪರಾ ಪೇಕ್ಷೆಯ ಮರೆದು ಪರಸತಿಯ ತೊರೆದು ಗುರುಲಿಂಗಜಂಗಮದಲ್ಲಿ ತಾಗುನಿರೋಧಮಂ ತಾಳದೆ ಹೆಣ್ಣು, ಹೊನ್ನು, ಮಣ್ಣಿಗಾಗಿ ತಪ್ಪಿನುಡಿ ಯದೆ ಒಡೆಯರು ಭಕ್ತರಲ್ಲಿ ತನ್ನ ಕುರಿತು ಗೆಲ್ಲಸೋಲಕ್ಕೆ ಹೋರದೆ ತನಗೊಂದು ಬೇಕೆಂದು ಅನ್ಯರ ಕೈಯಲ್ಲಿ ಹೇಳಿಸದೆ ಬಹು ಧಾಳಕ ತನವಂ ಬಿಟ್ಟು ಸರ್ವಾತ್ಮಜೇತನವನರಿತು ತಾ ಮರೆದುದ ಅರಿದು ಎಚ್ಚತ್ತು ನೋಡಿ ಅಹುದಾದುದ ಹಿಡಿದು ಅಲ್ಲಾದುದ ಬಿಟ್ಟು ಬಹು ದುಃಖವಂ ಮರೆದು ಇಂತೀ ಸರ್ವ ಗುಣ ಸಂಪನ್ನನಾಗಿ ಆತ್ಮಂಗರು ಹಿನ ಶೀಲವ ಮಾಡಿ ಕಾಯಕ್ಕೆ ಮರವೆಯಿಲ್ಲದಾಚಾರನಂಗೀಕರಿಸಿ ಇಂತೀ ಕಾಯ ಮನ ಅರಿವಿನಾಚಾರದಲ್ಲಿ ನಿಂದು ಎತಕ್ಕು ಮರವೆ ಇಲ್ಲದೆ ಸರ್ವಾ ವಧಾನಂಗಳಲ್ಲಿ ಹೊರಗಣ ಮಾಟ ಒಳಗಣ ಕೂಟ ಉಭಯ ಶುದ್ಧ ವಾದಲ್ಲಿ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ಜಿಡ್ಡು ಹರಿ ಯಿತ್ತು.

(೧೬) ಭಾಜನದ ಕಂಟಕ್ಕೆ ಪಾವುಡವ ಬಾಸಣಿಸಲಾಗಿ, ವ್ರತಕ್ಕೆ ಬೀಜ ಮೊದಲಾಯಿತ್ತು. ಭವಿಸಂಗ ಭವಿಪಾಕ ಅನ್ಯದೈವವ ಪೂಜಿಸುವರ ದೂರಸ್ತನಾಗಿರಬೇಕು, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವ ನರಿಯಬೇಕಾದರೆ.

(೧೭) ಭವಿ ನಿರೀಕ್ಷಣೆಯಾದ ದ್ರವ್ಯಂಗಳ ಮುಟ್ಟಿನೆಂಬಲ್ಲಿ ಮುಟ್ಟಿದ ಭೇದವಾವುದು ಹೇಳಿರಣ್ಣಾ? ವ್ರತಕ್ಕೆ ದ್ರವ್ಯ ಮೊದಲೋ, ದ್ರವ್ಯಕ್ಕೆ ವ್ರತ ಮೊದಲೋ, ತಾ ಮಾಡಿಕೊಂಡ ನೇಮ ಮೊದಲೋ, ಇದ ನಾನರಿಯೆ ನೀವು ಹೇಳಿರಯ್ಯಾ ಕೂಸಿನವ್ವೆ ಹಣದಾಸೆಗೆ ಕರೆದು ಕೂಸು ಗಾಸಿಯಾದಂತೆ ಆಯಿತ್ತು. ವ್ರತಾಚಾರದ ಹೊಲಬು ನಿಹಿತವಾದು ದಿಲ್ಲ. ಏತದ ತುದಿಯಲ್ಲಿ ತೂತು ಮಡಕೆಯ ಕಟ್ಟಿದಲ್ಲಿ ಮಡಕೆಯ ನೀರಿನ ನಿಹಿತವನರಿಯದವನಂತೆ ವ್ರತಾಚಾರ ಸಲ್ಲದು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ನೇಮಘಾತುಕರುಗಳಿಗಿದು ಅಸಾಧ್ಯ.

(೧೮) ಪಾಕ ಲವಣವ ಬಿಟ್ಟು ಪರವಧುವ ಅಪೇಕ್ಷಿಸಿ ಬೇಡ ಲಾಗದು. ಅಪ್ಪು ಲವಣವ ಬಿಟ್ಟು ಸಪ್ಪೆಯ ಕೊಂಬಲ್ಲಿ ಉಚ್ಚೆಯ ಬಚ್ಚಲ ಮುಟ್ಟಲಾಗದು. ಉಚ್ಚೆಯ ಬಚ್ಚಲ ಬಿಟ್ಟಲ್ಲಿ ಮತ್ತೊಬ್ಬರ ಅಪ್ಪ ಅಣ್ಣ ಎಂದು ಬಾಗಿಲ ತಪ್ಪಲ ಕಾಯಲಾಗದು. ಇಂತೀ ವ್ರತಾ ಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ತಪ್ಪದ ನೇಮ.

(೧೯) ತಾ ವ್ರತಿಯಾಗಿದ್ದಲ್ಲಿ ತನ್ನ ಸೀಮೆಯೊಳಗಾಗಿ ಕಟುಕ ಪರದಾರ ಹುಸಿ ಕೊಲೆ ಕಳವು ಅನ್ಯಾಹಾರ ನಿಂದಕ ದುರ್ಜನ ಭವಿ ಸಂಗವುಳ್ಳವರ ತಂದೆತಾಯಿ ಎಂದು ಹೆಂಡರು ಮಕ್ಕಳೆಂದು ಬಂಧು ಬಳಗವೆಂದು ಅವರನು ಅಂಗಣದಲ್ಲಿ ಕೂಡಿಕೊಂಡರೆ ಅವರು ತಂದ ಕೂಳನಿಕ್ಕಿದಡೆ ತಿಂಗಳು ಸತ್ತ ನಾಯಮಾಂಸವ ತಂದು ತಿಂದ ದೋಷ ತಪ್ಪದು. ಇದಕ್ಕೆ ಹಿಂದು ನೆನೆಯಲಿಲ್ಲ, ಮುಂದು ನೋಡಲಿಲ್ಲ. ಈ ತಪ್ಪು ಹೊತ್ತಲ್ಲಿಯೇ ಅಂದಿಗೆ ನೂರು ತುಂಬಿತ್ತೆಂದು ಅಂಗವ ಬಿಡಬೇಕು. ಅಂಗವ ಬಿಡದ ಭಂಡರ ಕಂಡರೆ ಆಚಾರವೇ ಪ್ರಾಣವಾದ ರಾಮೇ ಶ್ವರಲಿಂಗನೊಪ್ಪ.

(೨೦) ತನ್ನಾಚಾರಕ್ಕೆ ಬಂದವರು ತನ್ನವರೆಂದು ಭಾವಿಸಬೇಕ ಲ್ಲದೆ ತನ್ನಾಚಾರಕ್ಕೆ ಹೊರಗಾದವರ ಅಣ್ಣತಮ್ಮನೆಂದು ತಾಯಿತಂದೆ ಎಂದು ಹೊನ್ನು ಮಣ್ಣು ಹೆಣ್ಣಿನವರೆಂದು ಅಂಗೀಕರಿಸಿದೊಡೆ ಅವರಂಗ ಣವ ಕೂಡಿದಡೆ ಅವರೊಂದಾಗಿ ನುಡಿದಡೆ ಭಕ್ತರು ಸತ್ಯರಿಗೆ ಮುನ್ನವೇ ಹೊರಗು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ಅವರನೊಳ ಗಿಟ್ಟುಕೊಳ್ಳ.

(೨೧) ವ್ರತಾಚಾರವೆಂಬುದು ತನಗೋ ತನ್ನ ಸತಿಗೋ? ವ್ರತಾಚಾರಿಗಳ ಗರ್ಭದಿಂದ ಬಂದ ಶಿಸುವ ಅನ್ಯರಿಗೆ ಕೊಡಬಹುದೇ? ಇಂತೀ ತಮ್ಮ ಕ್ರಿವಂತರಲ್ಲಿ ತಂದು, ಕ್ರಿವಂತರಲ್ಲಿಯೇ ಕೊಟ್ಟು, ಉಭಯ ಛಿನ್ನವಿಲ್ಲದಿಪ್ಪುದೇ ಸಜ್ಜನವ್ರತ. ಸದಾತ್ಮರಯುಕ್ತಿ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ಮುಕ್ತಿ.

೨೨. ಆಚಾರ ತಪ್ಪಿದರೆ ಪ್ರಾಯಶ್ಚಿತ್ತ ಉಂಟೆಂಬ ಅನಾಚಾರಿಗಳ ಮುಖವ ನೋಡಬಹುದೇ? ಆಚಾರ ನೋಟದ ಹೊನ್ನೇ, ಮೊತ್ತದ ಮಡಕೆಯೇ, ಸಂತೆಯ ವ್ಯವಹಾರವೇ, ಜೂಜಿನ ಮಾತೇ, ವೇಶಿಯ ಸತ್ಯವೇ? ಪೂಸರ ವಾಕ್ಯವೇ? ಇಂತೀ ವ್ರತದ ನಿಹಿತವನತಿಗಳಿದಲ್ಲಿ. ಇಷ್ಟ ಬಾಹ್ಯನ ವ್ರತಭ್ರಷ್ಟನ ಸರ್ವಪ್ರಮಥಂಲ್ಲಿ ನಾನಂತು ಕೂಡಿದೆನಾದಡೆ ಅರಿಯದೆ ಕೂಡಿ ಮತ್ತರಿದಡೆ ಆ ತನುವ ಬಿಡದಿರ್ದಡೆ ಎನಗದೇ ಭಂಗ. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವಾದಡೂ ತಪ್ಪಿದಡೆ ಹೊರಗೆಂದು ಮತ್ತೆ ಕೂಡಿಕೊಳ್ಳೆ.

೨೩. ಎರಿಯ ಕೆಳಗೆ ಬಿದ್ದ ನೀರು ಪೂರ್ವದಂತೆ ಗಟ್ಟಕ್ಕೆ ಏರಬಲ್ಲುದೇ? ವ್ರತಾಚಾರವ ಮೀರಿ ಕೆಟ್ಟ ಅನಾಚಾರಿ ಸದ್ಭಕ್ತರ ಕೂಡಬಲ್ಲನೇ? ದೇವಾಲಯದಲ್ಲಿ ಸತ್ತರಿ ಸಂಪ್ರೋಕ್ಷಣವಲ್ಲದೆ ದೇವರು ಸತ್ತಲ್ಲುಂಟೇ? ತಾ ಸೋಂಕಿಗೆ ಹೆದರದೆ ಕೂಡಿದ ದುರ್ಗುಣಕುಂಟೇ ಪ್ರಾಯಶ್ಚಿತ್ತ? ಇದ ಕಂಡಲ್ಲಿ ಗುರುವಾದಡೂ ಬಿಡಬೇಕು. ಲಿಂಗವಾದಡೂ ಬಿಡಬೇಕು. ಜಂಗಮವಾದಡೂ .ಬಿಡಬೇಕು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾದಡೂ ಬಿಡಬೇಕು.

(೨೪) ಚಿನ್ನೊಡೆದಡೆ ಕರಗಿಸಿದರೆ ರೂಪಪ್ಪುದಲ್ಲದೆ ಕರಗಿಸದಿರ್ದೊಡೆ ರೂಪಪ್ಪುದೇ? ಮಧ್ಯಮ ಮನುಜ ತಪ್ಪಿದೊಡೆ ಒಪ್ಪಚ್ಚಿ ಹೇಳಬಹುದಲ್ಲದೆ, ಸದ್ಭಕ್ತ ತಪ್ಪಿದೊಡೊಪ್ಪಬಹುದೇ? ಆಚಾರ ತಪ್ಪಿದಲ್ಲಿ ಲಿಂಗವೇ ಕಡೆಯಲ್ಲದೆ ದೇರೊಂದಂಗವ ಮಾಡಿ ಗುರುಲಿಂಗಜಂಗಮದ ಮುಖದಿಂದ ಶುದ್ಧನೆಂದು ತಂದು ಕೂಡಿಕೊಳ್ಳಬಹುದೇ? ಆಚಾರ ಭ್ರಷ್ಟನ ಜಂಗಮವ ಕೊಂದವನ ಇವರ ಕಂಡು ನುಡಿದಡೆ ಕುಂಭನೀ ಪಾತಕಕೊಳಗು. ಇದಕ್ಕೆ ಸಂದೇಹವಿಲ್ಲ. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಾಣತಿ.

(೨೫) ನಾನಾ ವ್ರತದ ಭವಂಗಳುಂಟು. ಲಕ್ಷಕ್ಕಿಕ್ಕಿಹೆನೆಂಬ ಕೃತ್ಯದವರುಂಟು. ಗುರುಲಿಂಗ ಜಂಗಮದ ತಪ್ಪ ಕಂಡರೆ ಒಪ್ಪುವರುಂಟೇ? ಇಂತೀ ಶೀಲವೆಲ್ಲವೂ ತಾ ಮಾಡಿಕೊಂಡ ಕೃತ್ಯ ತಪ್ಪಿದಲ್ಲಿ ದೃಷ್ಟವ ಕಂಡು ಆ ವ್ರತವನೊಪ್ಪಬಹುದೇ? ಕೊಪ್ಪರಂಕೆಯಲ್ಲಿ ಅಪೇಯವನಪ್ಪು ವಿನಲ್ಲಿ ಕದಡಿ, ಅಶುದ್ಧವಲ್ಲ ಎಂದು ಮತ್ತೆ ಕುಡಿಯಬಹುದೇ? ತಪ್ಪದ ನೇಮವನೊಪ್ಪಿ ತಪ್ಪ ಕಂಡಲ್ಲಿ ಬಿಟ್ಟು ಇಂತೀ ಉಭಯಕ್ಕೆ ತಪ್ಪದ ಗುರು ವ್ರತಾಚಾರಕ್ಕೆ ಕರ್ತನಾಗಿರಬೇಕು. ಇಂತೀ ಕಷ್ಟರ ಕಂಡು ದ್ರವ್ಯ ದಾಸೆಗೆ ಒಪ್ಪಿದೆನಾದಡೆ ಅವನು ಸತ್ತನಾಯ ಮಾಂಸವ ತಿಂದಂತೆ. ನಾ ತಪ್ಪಿನುಡಿದೆನಾದಡೆ ಎನಗೆ ಎಕ್ಕಲ ನರಕ. ಅಂಜಿ ಇತ್ತ ಬಾ ಎಂಬವನಲ್ಲ. ವ್ರತ ತಪ್ಪಿದವಂಗೆ ನಾ ಕಟ್ಟಿದ ತೊಡರು. ಎನ್ನ ಹಿಡಿದಡೆ ಕಾದುವೆ, ಕೇಳಿದಡೆ ಹೂಳುವೆ. ಎನ್ನಾಶ್ರಯದ ಮಾರ್ಜಾಲ ಗೋ ಮುಂತಾದ ದೃಷ್ಟದಲ್ಲಿ ಕಾಂಬ ಜೀತನಕ್ಕೆಲ್ಲಕ್ಕೂ ಎನ್ನ ವ್ರತದ ಕಟ್ಟು. ಇದ ತಪ್ಪಿದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವೇ ಎಚ್ಚತ್ತ ಬದುಕು.

(೨೬) ಎಂಬತ್ತು ನಾಲ್ಕು ಲಕ್ಷ ವ್ರತದೊಳಗಾದ ಶೀಲ ಸಂಭವಿಸಿ ನಿಂದಿತ್ತು. ಮೂವತ್ತಾರು ಮೂವತ್ತಾರರಲ್ಲಿ ಸಂಭವಿಸಿ ನಿಂದಿತ್ತು. ಇಪ್ಪತ್ತೈದರೊಳಗಾಗಿ ಸಂಭವಿಸಿ ನಿಂದುದು. ಹದಿಮೂರು ಹದಿಮೂರರಲ್ಲಿ ಸಂಭವಿಸಿ ನಿಂದುದು. ಮೂರೆಯಾಯಿತ್ತು. ಮೂರು ವ್ರತಕ್ಕೆ ಮುಕುತಿಯಾಗಿ ತಬ್ಬಿಬ್ಬಿಗೊಳ್ಳುತ್ತಿದೇನೆ. ನಾ ಹಿಡಿದ ಒಂದು ನೇಮಕ್ಕೆ ಸಂದೇಹವಾಗಿ ಒಂದನೂ ಕಾಣದಿದೇನೆ. ಒಂದರ ಸಮಶೀಲಕ್ಕೆ ಸತಿ ಪುತ್ರರು ಎನ್ನಂಗದೊಳಗಿರರು. ಎನ್ನಂಗದ ಜೀವ ಧನ ಹೊಂದಿ ಹೋದಾಗ ಎನ್ನಂಗ ವ್ರತ ಅಲ್ಲಿಯೇ ಬಯಲು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ಶೀಲ ಕಡೆ ನಡು ಮೊದಲಿಲ್ಲ.

ಮಹೇಶ್ವರನ ಪ್ರಸಾದಿ.

(೨೭) ಎನ್ನ ಸಮಗ್ರಾಹಕ ಶೀಲ ಸಂಪಾದಕರಲ್ಲದೆ ಎನ್ನ ಕಣ್ಣಿನಲ್ಲಿ ನೋಡ, ಎನ್ನ ಜಿಹ್ವೆಯಲ್ಲಿ ನೆನೆಯ, ಮಿಕ್ಕಾದ ತಟ್ಟುವ ಮುಟ್ಟುವ ತಾಗುವ ಸೋಂಕುವ ನಾನಾ ಗುಣಂಗಳಲ್ಲಿ ಸಾಧಿಸಿಯಲ್ಲದೆ ಬೆರೆಯ, ಕೊಂಬಲ್ಲಿ ಕೊಡುವಲ್ಲಿ ಎನ್ನ ವ್ರತಾಚಾರವನಂಗೀಕರಿಸಿದವರಿಗಲ್ಲದೆ. ಹಾಗೆ ಇದಕ್ಕೆ ದೃಷ್ಟವ ನೋಡಿಹೆನೆಂದರೆ ತೋರುವೆ, ಶ್ರುತದಲ್ಲಿ ಕೇಳಿಹೆನೆಂದಡೆ ಹೇಳುವೆ. ಅನುಮಾನದಲ್ಲಿ ಅರಿದಿಹೆನೆಂದರೆ ಎನ್ನಾಚಾರ ಆತ್ಮನ ಎನ್ನ ಕೈಯ್ಯಲ್ಲಿ ಹಿಡಿದು ನಿಮ್ಮ ಕೈಯಲ್ಲಿ ಕೊಡುವೆ. ಈ ಭಾಷೆ ಗತನೆಂದು ಕಟ್ಟಿವೆ. ತೊಡರುವ ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ ಎನಗೆ ಸಂ ಇಲ್ಲವೆಂದು ಎಲೆದೊಟ್ಟ ನುಂಗಿದೆ.

(೨೮) ವ್ರತ ನೇಮ ಶೀಲವುಂ ಮಾಡಿಕೊಂಡು ಸಮಯಾಚಾರದಲ್ಲಿ ನಡೆದೆನೆಂಬ ಭಕ್ತನ ಕ್ರಮವೆಂತೆಂದಡೆ, ತಾನು ಭೋಗಿಸುವಂತಹ ಸಕಲ ದ್ರವ್ಯಂಗಳೆಲ್ಲವನು ಜಂಗಮಕ್ಕೆ ಕೊಟ್ಟು ತಾನು ಕೊಳಬೇಕು. ಅವಾವೆಂದಡೆ ಮಜ್ಜನ, ಭೋಜನ, ಅಂದಣ, ಸತ್ತಿಗೆ, ಚಾಮರ, ಆನೆ, ಕುದುರೆ, ಕನ್ನಡಿ, ಪರಿಮಳ. ಲೇಪನ, ಗಂಧ, ಅಕ್ಷತೆ, ವಸ್ತ್ರ, ರತ್ನಾಭರಣ, ತಾಂಬೂಲ, ಮೆಟ್ಟಡಿ, ಮಂಚ, ಸುಪ್ಪತ್ತಿಗೆ ಒಡೆಯಂಗೆ ಆಯಿತ್ತೆಂಬುದ ಕೇಳಿ ಆ ಒಡೆಯನ ವಾಕ್ಯಪ್ರಸಾದದಿಂದ ಮಹಾಪ್ರಸಾದವೆಂದು ಎಲ್ಲ ವ್ರತಂಗಳಿಗೆಯೂ ಜಂಗಮಪ್ರಸಾಪವೇ ಪ್ರಾಣ. ಎಲ್ಲ ನೇಮಕ್ಕೆಯೂ ಜಂಗಮದರ್ಶನವೇ ನೇಮ, ಎಲ್ಲ ಶೀಲಕ್ಕೆಯೂ ಜಂಗಮದ ಮಾಟವೇ ಶೀಲ ಎಲ್ಲ ವ್ರತ ನೇಮ ಶೀಲಂಗಳೆಲ್ಲವು ಜಂಗಮವ ಮುಂದಿಟ್ಟು ಶುದ್ಧತೆಯಹ ಕಾರಣ ಆ ಜಂಗಮದಲ್ಲಿ ಅರ್ಥ ಪ್ರಾಣ ಅಪಮಾನ ಮುಂತಾದ ಈ ಮೂರಕ್ಕು ಕಟ್ಟು ಮಾಡಿದೆನಾದಡೆ ಎನಗೆ ದ್ರೋಹ. ಆ ಜಂಗಮದ ದರ್ಶನದಿಂದವೇ ಸಕಲ ದ್ರವ್ಯಂಗಳು ಪವಿತ್ರವು. ಆ ಜಂಗಮದ ಪಾದತೀರ್ಥದಿಂದವೇ ಮಹಾಘನಲಿಂಗಕ್ಕೆ ಜೀವಕಳೆ ಆ ಜಂಗಮದ ಪ್ರಸಾದದಿಂದವೇ ಮಹಾಘನಲಿಂಗಕ್ಕೆ ತೃಪ್ತಿ. ಇಷ್ಟನರಿದ ಬಳಿಕ ಜಂಗಮಲಿಂಗಕ್ಕೆ ಸಂದೇಹವ ಮಾಡಿದೆನಾದಡೆ ಎನಗೆ ಕುಂಭೀಪಾತಕ ನಾಯಕನರಕ ತಪ್ಪದು. ಈ ಜಂಗಮದ ಭಕ್ತಿ ಕಿಂಚಿತ್ತು ಕೊರತೆ ಇಲ್ಲದ ಹಾಗೆ ಜೀವವುಳ್ಳ ಪರ್ಯಂತರ ಇದೇ ಆಚಾರವಾಗಿ, ಇದೇ ಪ್ರಾಣವಾಗಿ ನಡೆದು, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವ ಸೊಡಗೂಡುವನು.

ರಸನೇಳ್ದು ಕೈಮುಗಿದು ದೇವ ದೇವ ಮುನ್ನರಿಯದೋಲೈಸಿಕೊಂಡ ತಪ್ಪಂ ಮನ್ನಿಸಿ ಕರುಣದಿಂ ನೋಳ್ಪುದೆಂದು ಬಿನ್ನೈಸಿ ಈ ಕಲ್ಯಾಣಕ್ಕೆ ಯೋಜನಾಂತರದೊಳೊಂದು ಸಂವತ್ಸರಕ್ಕೆ ಪನ್ನೀರ್ವರ್ಹಿರ ಪೊನ್ನನಿಕ್ಕುವ ಪಟ್ಟಣಮುಂ ಶಿವಪುರಮುಂ ಮಾಡಿ ಸದಾನಂದಲೀಲೆಯಿಂದಿರ್ಪದೆಂದಾನೆಯ ಮೇಲಿರಿಸಿ ಪುರಮುಂ ಪೊರಮಟ್ಟು ಶರಣರ ಸಂದಣಿ ಸಹಿತಾ ಪುರಕೆ ಬಿಜಯಂಗೈಸಿ ಪೇರ್ಮಾಡಿರಾಯುಂ ದಂಡನಾಥಮುಂಡಳಿಕದಿಂದೋಲೈಸೆ ಸಕಲ ಭಕ್ತರ ನಡುವೆ ಸುಕೃತದ ಸರ್ವ ಸೂರೆಕಾರನೇಕ ನಿಷ್ಕಾಲಂಕೃತ ಸರ್ವಾಂಗಂ ಅನ್ಯಸನುಯಪನ್ನಗವೇಳೆವಹ್ನಿ ಪರದೈವಧರಾಧರ ಶಂಬೊಮ್ಮನ ತಲೆವಿಡಿದನ ಹೆಮ್ಮೆಯ ಮಗಂ ಜೊಮ್ಮಿತಂದೆ ಪುಸಿ ಪುರಾಣಮುಂ ಪೇಳ್ದ ಪುರಾಣಭಟ್ಟನಂ ತೀರ್ಚಿ ಪ್ರತ್ಯಕ್ಷಮುಂ ತೋರಿದನೆಂಬ ಗಣ್ಯ ಪುಣ್ಯ ಕೀರ್ತಿ ಧರಣಿಯುಂ ಪರ್ವಿ ಪಲ್ಲನಿಸಿ ಬೆಳೆಯೆ ಭೀಮನಾಜ್ಞೆಯುಂ ಪೊತ್ತು ಬೇಂಟೆಯ ನೆವದಿಂ ಕಾರಣಿಕ ಮೃಗಂಗಳ ಭವದ ಭಾರಮನಿಳುಪಿ ಬಂದ ಜಂಗಮುದಳ್ತಿಯುಂ ಸಲಿಸುತಂ ಬೇಡಿದ ಭಕ್ತರ್ಗಿಲ್ಲೆನ್ನದೀವುತ್ತಂ ಪಾಡುವ ಶರಣರ್ಗೆ ಮೈಯ್ಯಾನುತಂ ಶಿವಗೋಷ್ಠಿಯೋಲೈಕೆಯುತಂ ಶಿವಪೂಜೆಯೊಳುರ್ವಿ ಕೊರ್ವುತಂ ಶಿವಶೀಲ ಸಂತಾನ ಭರಿತವಪ್ಪ ಶಿವಪುರದೊಳು ಶೈವಸುಖ ಸಂತತಂ ವಿನೋದದಿಂ ತೆಲುಂಗು ಜೊಮ್ಮಯ್ಯಗಳೊಪ್ಪುತ್ತವಿರೆಯಿರೆ.

ತೃತೀಯಸ್ಥಲ.

ವೃತ್ತ॥

ಸಮಶೀಲಪ್ರಭವಪ್ರನೋದಶರಣವ್ರಾತಂ ಸದಾ ರಂಜಿಸಲ್ ।
ವಿಮಳಜ್ಞಾನನಿಧಾನನಪ್ರತಿಮನುರ್ವಿವಂದ್ಯ ನಾಶ್ಚರ್ಯವಿ
ಭ್ರಮಯುಕ್ತಂ ಶುಚಿಭೀಮನಾಥಚರಣಾಂಭೋಜಾತಭೃಂಗಂ
ದಯಾ ।
ರಮಣೀನಾಥನುದಾರಧೀರನೆಸೆದಿರ್ದಂ ಬೊಮ್ಮಣ್ಣನಾಸ್ಥಾನ
ದೊಳ್ ॥

ರಗಳೆ

ಇಂತು ಶಿವಸುಖದೊಳಪ್ರತಿಮಸುಖದಿಂದಿರ್ದು
ಕಂತುಮದಮರ್ದನನ ಪದಯುಗಳಮಂ ಸಾರ್ದು
ಭೀಮನಾಥನ ಕರುಣದಿಂ ಬೇಂಟೆಗೆಂದಲ್ಲಿ
ಕಾಮಹರನಣುಗನೋಡಿಯುತ್ಸವ ಬಡುತಲ್ಲಿ
ಮೃಗಯಾವಿನೋದಪಂಕರವೆನಿಸುತಂತಲ್ಲಿ
ಸೊಗಯಿಸುವ ಸಮಶೀಲಶರಣರೊಳಗೈದಲ್ಲಿ
ವನದೊಳಗೆ ಸುಳಿವ ಕಾರಣಿಕ ಮೃಗವೃಂದಮುಂ
ತನತನಗೆ ಪಂತಂದು ನೀರ್ಗೆಂದು ಬಂದವಂ
ಎಳೆವುಲ್ಲಳಂ ಮೇದು ಕೊಣಕಿಡುವ ಪುಲ್ಲೆಯುಂ
ತಿಳಿನೀರ್ಗಳಂ ಕುಡಿದು ನಲಿದಾಡುವೆರಳೆಯುಂ
ಮರಿಗಳಂ ಕೊಡವೊನೆಯಿಂದೆ ತುರಿಸುತ್ತಿರ್ಪ
ಒರೆವ ಮುಂಬದನೊಸರಿ ಹೊಸನಸಿಗೆ ನಲಿತರ್ಪ
ಕಣ್ಮುಚ್ಚಿ ಕಿವಿಯಳಲೆ ತನು ಕರಗುತಿರೆ ನೆರೆವ
ಉಣ್ಮೆ ಪೊಣ್ಮುವ ಪುಳಕದಿಂದೆ ಜೆಬ್ಬನೆ ಬಿರಿವ
ಮೃಗದ ಪೋವಳಿಪಜ್ಜೆಯರಸಿ ಮರುಗುತಿರ್ಪ
ಮೃಗವೊಂದರೊಂದರೊಳ್ ಪೊರ್ದು ಪೆಣಗುತ್ತಿರ್ಪ
ಪುಲ್ಲೆಯರಳಿಗಳ ಹಿಂಡಂ ಹರುಷದಿಂ ಕಂಡು

ಅಲ್ಲಿ ಜೊಮ್ಮಣ್ಣನಾ ಕಾರಣಿಕರಂ ಕಂಡು
ರುದ್ರಾಕ್ಷ ಮಾಲೆಗಳನುರದೆ ಜಾಚಿಯೆಕೊಳುತೆ
ರುಪ್ರನಿಂದೆ ಸಸಿತೆನ್ನಲ್ಲಿ ತಪ್ಪಿಲ್ಲೆನುತೆ
ಬಿಲ್ಲವತ್ತದ ಬಿಲ್ಲನಳವಡಲ್ಪಿಡಿಕೈಸಿ
ಬಿಲ್ಲೊಳೆಸೆವರ್ಧನಾರಿಯನೊಪ್ಪೆ ಮೇಳೈಸಿ
ಕಣಿಗಿಲೆಯ ಕೋಲತುದಿಯೋಳ್ಪಿಳಿವಲಗು ಮೆರೆಯೆ
ಎಣೆಗೂಡಿ ಹೊಗರೊಳಗೆ ಪಂಚಾಕ್ಷರಂಗಳೊಗೆಯೆ
ದಿವ್ಯ ಸರವಂ ಕೊಂಡು ತಿರುವಾಯ್ಗಳೊಳಗಿಟ್ಟು
ನವ್ಯ ಭಕ್ತಂ ಮುನಿದು ನಿಮಿರ್ದು ನೀಡಡಿಯಿಟ್ಟು
ಮುಟ್ಟಿ ದೃಢಬಂಧಂ ಧನುರ್ದಂಡದೊಳಗೆ ಸಲೆ
ದೃಷ್ಟಿಯುಂಬಿನ ಕೊನೆಯ ಮೊನೆಯೊಳಿಚ್ಚತ್ತು ನಿಲೆ
ಕಾರಣಿಕ ಮೃಗಶರೀರವನಲ್ಲಿ ಲಕ್ಷಿಸುತೆ
ಅರೈದು ಶರದ ಮೃಗದೆಡೆಯುಂ ವಿವೇಕಿಸುತೆ
ಳಿಲನೆಚ್ಚುಂ ಜೊಮ್ಮಿತಂದೆ ಮೃಗವಳುಕುತಿರೆ
ಅಳವಡೆ ಶರಂ ಶಿರಂಗೊಂಡುರ್ಚಿ ಪಾರುತಿರೆ
ತೊಡುವುದಂ ನಡುವುದಂ ಕಾಣಲಾಗುತ್ತಮಿರೆ
ಬಿಡುವುದಂ ಪೋದುದನೀಕ್ಷಿಸಲ್ಬಾರದಿರೆ
ಮೃಗಶರೀರಂ ನೊಂದು ಬಿದ್ದುದೀ ಧರೆಯೊಳಗೆ
ನೆಗೆದವು ವಿಮಾನದೊಳು ಜೀವವಂ ಜರಿಬೊಳಗೆ
ಭಕ್ತಿಬಾಣಂ ತಾಗಿ ಮುಕ್ತಿ ಬಂದೆಡೆಗೊಂಡು
ಯುಕ್ತಿ ಕೊಳ್ಳದ ಭಕ್ತಿ ಮುಕ್ತಿಯೋಳ್ನಿಲೆಗೊಂಡು
ವೈರಾಗ್ಯಶಸ್ತ್ರವೆಂದೆಸುತವಿರಲಂತಲ್ಲಿ
ತಾರಾದ್ರಿಗೈದುವವು ಮೃಗಜೀವವಂತಲ್ಲಿ
ಬಾಣ ತಾ ಗೀರ್ವಾಣಪದವಿಯಂ ಕೊಡುತವಿರೆ
ಜಾಣನೆಸುತಿರ್ದನಾ ಋಷಿಜನಂ ಪರಸುತಿರೆ
ಕಾರಣಿಕರಲ್ಲದ ಮೃಗಂಗಳ್ಗುಳಿಯಲೀಸಂ
ಮಾರಹರನುರುಪಿದ ಮೃಗಂಗಳಂ ಎಸೆವವಂ
ಇಂತು ಬೇಂಟೆಯನಾಡಿ ಘನಸುಖವನೆಡೆಗೊಂಡು
ಸಂತಸುಖದಿಂ ತಿರುಗಿ ಪುರದತ್ತ ನಡೆಗೊಂಡು

ಬಂದು ಶಿವಲಿಂಗಾರ್ಚನಂಗೈದು ಸುಖದೊಳಿರೆ
ಸಂದಣಿಪ ಬೇಂಟೆಯುಂ ನಿಚ್ಚಲಾಡುತ್ತಮಿರಿ

ಜೊಮ್ಮಣ್ಣನೇಕನಿಷ್ಠೆಯ ಭಕ್ತಿಯಂ ಕೇಳ್ದು
ಜೊಮ್ಮಣ್ಣನಾಡುತಿಹ ಬೇಂಟೆಯುಂ ನೆರೆ ಕೇಳ್ದು
ಕೊಂಡಗೂಳಿಯ ಕೇಶಿರಾಜ ದಣ್ಣಾಯಕರು
ಪುಂಡರೀಕಾಜಿನದ ತನುಮನೋದೈವಿಕರು
ಎಲ್ಲವುಂ ಲೇಸಾಯ್ತು ಬೇಂಟೆಯೊಂದೇ ಪೊಲ್ಲ
ಅಲ್ಲಿ ಮಾಣಿಸೆನಭವಭಕ್ತಂಗದಲ್ಲಲ್ಲ
ಎಂದು ತಮ್ಮೊಳಿಂದೆ ಪೊರಮಟ್ಟು ನಡೆತಂದು
ಸಂದಣಿಪ ಭಕ್ತಸಂಕುಲದಿಂದಲೈತಂದು
ಜೊಮ್ಮಣ್ಣನಿರ್ಪ ಶಿವಪುರವನೊಲವಿಂ ಪೊಕ್ಕು
ಸಮ್ಮಾನದಿಂದೆ ಪೊಗಳುತ್ತಂ ಮನಂ ವಿಕ್ಕು
ಅವರ ನಿಳಯದ ಮುಂದೆ ಉನ್ನತಾಸನವಿಳಿದು
ಶಿವಭಕ್ತರೊಡನೆ ಪರಮಾನಂದವಂ ತಿಳಿದು
ಬಂದೊಳಗೆ ಪುಗುತೆ ಜೊಮ್ಮಣ್ಣನಲ್ಲಿಗೆ ಹೋದ
ನಿಂದುಧರನ ಪ್ರತಾಪಾಗ್ನಿಯಲ್ಲಿಗೆ ಹೋದ
ನೆನುತಲ್ಲಿ ಪಿಶಿತಮಾಲೆಗಳಿರ್ಪುದಂ ಕಂಡು
ಮನವಳಿದು ಹೇಸಿ ತಿರುಗಿದನುಮ್ಮಳಂಗೊಂಡು
ಶಿವಭಕ್ತರಂ ದೂರದಿಂದೆ ಕೇಳ್ವುದು ಲೇಸು
ಪವಡಿಸಲ್ಮಮ್ಮಳವೆ ಪೊಗಳುತಿರ್ಪುದೆ ಲೇಸು

ಎನುತ ಬಂದಾ ಪುರದ ಶಿವನಿಳಯದೋಳ್ಪೊಕ್ಕು
ಅನುನಯದೊಳುಪಕರಣವೆಲ್ಲಮುಮನಿಂಬಿಟ್ಟು
ಸುರುಚಿರಸ್ಥಾನದೊಳು ಸಿಂಹಾಸನವನಿಕ್ಕಿ
ಹರುಷದಿಂ ಮೇಲೆ ಮೃದುವೆನಿಪ ಗದ್ದುಗೆಯಿಕ್ಕಿ
ಕಾಮಹರನಂ ಭೀಮನಾಥಕುಲಸ್ವಾಮಿಯಂ
ವ್ಯೋಮಕೇಶನನಭವನುನ್ನತಪ್ರೇಮಿಯಂ
ಸೋಮನಾಥನನಕ್ಕರಿಂದೆ ಬಿಜಯಂಗೈಸಿ
ವಾಮಾರ್ಧನಾರಿಯಂ ಒಲಿದು ಬಿಜಯಂಗೈಸಿ

ದೇವತಾರ್ಚನೆಗೆ ಕೇಶಿರಾಜ ದಣ್ಣಾಯಕರು
ಭಾವಿಸುತ್ತಿರಲಿತ್ತ ಹರನ ಗಣನಾಯಕರು

ಇತ್ತಲಾ ಜೊಮ್ಮಣ್ಣನೊಲಿದು ಬೇಂಟೆಯನಾಡಿ
ಹತ್ತೆಂಟು ಮೃಗಶರೀರಂಗಳಂ ನೆರೆ ಕೂಡಿ
ಬಂದು ಪುರಮುಂ ಪೊಕ್ಕು ನಿಳಯಕ್ಕೆ ನಡೆತಂದು
ಬಂದರುಂಟೇ ಶಿವನ ಭಕ್ತರರಸುತಲಿಂದು
ಜೊಮ್ಮಯ್ಯನರಸಿಯುಂ ಎಂದಿನಂದದಿ ಕೇಳಿ
ಆಂದಲ್ಲಿ ಶಿವಭಕ್ತೆ ಪೇಳ್ದಳುತ್ಸವ ವೇಳೆ
ಶರಣಸಂತತಿವೆರಸಿ ಪಿರಿಯರೋರ್ವರ್ಬಂದು
ಹರುಷದಿಂ ನಿಳಯದೊಳು ನಿಮ್ಮ ಬರವಂ ಕೇಳ್ದು
ಪಿಶಿತಮಾಲೆಯನಿಲ್ಲಿ ನೆರೆ ಕಂಡು ಪೇಸುತಂ
ಮುಸುಕ ಮೂಗಿನೊಳಿಟ್ಟು ಶಿವಶಿವನೆ ಎನುತಂ
ತಿರುಗಿ ಪೋದರು ಭೀಮನಾಥನಾಲಯದತ್ತಂ

ಎನೆ ಕೇಳ್ದು ಜೊಮ್ಮಣ್ಣನತಿ ಹರುಷಮಯನಾಗಿ
ನಡೆತರುತ ನಡೆತರುತ್ತೋರೋರ್ವರಂ ಕಂಡು
ಮೃಡಶರಣರೋರೋರ್ವರ್ಸುಖದೊಳಪ್ಪಿಯೆ ಕೊಂಡು
ಇರ್ಪಲ್ಲಿ ನುಡಿದನಾ ಜೊಮ್ಮಣ್ಣನೊಲ್ಮೆಯಿಂ
ಸರ್ಪಭೂಷಣನ ತೇಜೋಭರಣನಳ್ತಿಯಿಂ
ಎನ್ನ ಮನೆ ಇರ್ದಂತೆ ಇಲ್ಲಿ ನೀವಿರ್ದಿರೇ
ಉನ್ನತಾನಂದಮಯ ನೀವಿಂತು ಬರ್ದಿರೇ
ಬಂದು ಕರುಣಿಪುದೆಂದು ನೆರೆ ಬೇಡಿಕೊಳುತಮಿರೆ
ತಂದೆ ಬಿಜಯುಂಗೈವುದೆಂದು ಕರೆಯುತ್ತಮಿರೆ
ಅಂದು ದಣ್ಣಾಯಕರು ಗಸಣಿಗೊಳುತಂತಲ್ಲಿ
ನೊಂದು ಸಮಶೀಲವಿಲ್ಲದೆ ನುಡಿದರಂತಲ್ಲಿ
ಸೋಮಯ್ಯನೊಲ್ದು ಸಿಂಹಾಸನವನೆಡೆಗೊಂಡು
ಸೋಮಧರನಾ ಪರಮಪೂಜೆಗಳನೊಳಕೊಂಡು
ಇರ್ದಪನಿದಕ್ಕೇನ ಮಾಡುವಂ ಪೇಳಿರೇ
ಇರ್ದ ಪರಿಯಳವಡಿಸಿಯಾಯ್ತಲ್ಲಿ ನೋಡಿರೇ

ಎನೆ ಜೊಮ್ಮಿತಂದೆಗಳ್ ಹೊಸೆವ ಹೂವಿನ ತೆರದಿ
ತನು ಕರಗಿ ಮನದೊಳಗೆ ನಟ್ಟಯಿಸಿ ತಾನುರದೆ
ಸೋಮಧರನಳವಡಿಕೆಯಾದೊಡಿರ್ದಂತಿರ್ಕೆ
ಸೋಮಯ್ಯನುಂ ಸಿಂಹಪೀಠವನಗಲದಿರ್ಕೆ
ಎಂದೆನುತ ಪೋಗಲಾ ಜೊಮ್ಮಿತಂದೆಗಳತ್ತ
ಪಿಂದೆ ದಣ್ಣಾಯಕರು ಪರಿಣಾಮದಿಂದಿತ್ತ
ಇರೆ ಜೊಮ್ಮಿತಂದೆಗಳ ನೋವನರುಪಲ್ಕೆಂದು
ಚರಿತದಿಂ ತನುಗುಣವ ತೋರುವೆನಿರಲ್ಕೆಂದು
ಅಲ್ಲಿ ಕೇಶಿಯರಾಜದಣ್ಣಾಯಕರ್ಕಂಡು
ಸಲ್ಲೀಲೆಯಿಂ ದೂರ ಪೊರವಣ್ಕೆ ಬರಲೆಂದು
ಸೋಮನಾಥಂಗೆ ಸದ್ಭಕ್ತರಂ ಕಾಪಿಟ್ಟು
ನಾಮವಂ ನಾಲಿಗೆಯ ತುದಿಯೊಳಗೆ ಸೈತಿಟ್ಟು
ಬಂದನೀಶ್ವರಭಕ್ತರೊಡನೊಡನೆ ನಡೆದು ಬರೆ
ಬಂದೂರ ಪೊರಗೆ ಕೆರೆಯೋರಿ ಏರುತ್ತಮಿರೆ
ಪಚ್ಚೆಯ ರಸದ ತೊರೆಗಳಂತಿರ್ಪ ಗದ್ದೆಯಂ
ಅಚ್ಚರಿಯ ಫಲವಿತತಿ ಹೆಚ್ಚಿದ ವನಾಳಿಯಂ
ತೀವಿದ ಕೊಳಂಗಳಂ ಕಮಲಷಂಡಂಗಳಂ
ಧಾವಕದೊಳಡಿಯಿಡುವ ಹಂಸೆಮಿಥುನಂಗಳಂ
ವನದೊಳಗೆ ನೆರೆವ ವಿದ್ಯಾಧರಿಯರಿಕ್ಕೆಯಿಂ
ತನತನಗೆ ಬರುತಿರ್ಪ ಖಗವ್ಯಗದ ತೆಕ್ಕೆಯಿಂ
ಮೃಗಜೀವಮುಂ ಕೊಂಡು ಪೋಪ ಗಣನಿಚಯಮುಂ
ಗಗನದೋಳ್ಗೆ ನೆಗೆವ ಪುಷ್ಪಕಪ್ರಕರಮುಂ
ಕೂಡೆ ಕೌತುಕವಾಗೆ ದಣ್ಣಾಯಕರ್ಕಂಡು
ನೋಡಿ ತಲೆದೂಗಿ ಮನದೋಲ್ವಿಸ್ಮಯಂಗೊಂಡು
ತಿರುಗಿ ಮತ್ತೊಮ್ಮೆ ನೋಡಲ್ಕೇನುವಿಲ್ಲದಿರೆ
ಪಿರಿದಪ್ಪ ಕೌತುಕಂ ಚಿತ್ತದೋಳ್ತೋರುತಿರೆ
ಕನಸು ಕಂಡೆದ್ದತ್ತ ತೆರದಿ ಬೆರಗಾಗುತಂ
ಮನಸಿನೊಳಗದ್ಭುತವಿದೆಂದು ಮಾತಾಡುತಂ

ತಿರುಗಿ ಬಂದಾ ಪುರದ ಶಿವನಿಳಯಮುಂ ಪೊಕ್ಕು
ಹರಹರ ನಮಶ್ಶಿವಾಯೆನುತುಮ್ಮಳಂ ಮಿಕ್ಕು
ಕುಳ್ಳಿರ್ದು ಶಿವಪೂಜೆಯುಂ ಮಾಡಲೆಂದಲ್ಲಿ
ಬಳ್ಳಿವರಿದಡರ್ವ ನೋಟದೊಳು ನೋಡುತ್ತಲ್ಲಿ
ಮಜ್ಜನಕ್ಕೆರೆಯಲೆಂದಾ ಸೋಮನಾಥನಂ
ಸಜ್ಜನಸ್ನೇಹದಿಂ ಪಾರ್ವತೀನಾಥನಂ
ಕರಕೆ ಬಿಜಯಂಗೆಯ್ಯಲೆಂದು ಕೆಯ್ಯಂ ನೀಡಿ
ಹರ್ಷದಿಂ ಜೊಮ್ಮಣ್ಣನಿರಿಸಿದಂತಿರೆ ನೋಡಿ
ದಣ್ಣಾಯಕರ ಮನದ ಹೇಸಿಕೆಗಳೆಯಲೆಂದು
ಅಣ್ಣ ಜೊಮ್ಮಯ್ಯನಂ ಮೆರೆದು ತೋರುವೆನೆಂದು
ಗದ್ದುಗೆಯ ಮೇಲಿಂದ ಅತ್ತಿತ್ತ ಚಲಿಸದಿರೆ
ಇದ್ದಿದ್ದಿದೇನಾಯ್ತೆನುತ ನೋಡುತ್ತಮಿರೆ
ಮತ್ತೊಮ್ಮೆ ಕರೆಯಲೆಂದೊಲಿದು ಭರದಿಂ ನೋಡೆ
ಉತ್ತಮುಂ ಜೊಮ್ಮಣ್ಣತಂದೆಗೆ ಮನಂ ಕೂಡೆ
ಬಂದು ನೊಂದೇಕಿರ್ದಪಿರಿ ಮನೆಗೆ ಬನ್ನಿರೇ
ಇಂದೆನ್ನನಿಂತು ನೋಯಿಸಲೇಕೆ ಬನ್ನಿರೇ
ಎನಲಲ್ಲಿ ದಣ್ಣಾಯಕರ್ಕಂಡು ಸಿಗ್ಗಾಗಿ
ಮನದೊಳಗೆ ಸೋಮನಾಥನ ಪರಿಗೆ ಬೆರಗಾಗಿ
ಭಕ್ತರೊಳ್ಪಲವೇಕೆ ಭಕ್ತರೊಳ್ಬಲುಹೇಕೆ
ಭಕ್ತರೊಳ್ಪೂರದಭಿಮಾನದಾಸೆಗಳೇಕೆ
ಎನುತಲಾ ದಂಡನಾಯ್ಕರ್ನುಡಿದರಂತಲ್ಲಿ
ಮನಸಿಜಹರಂ ನೀವಿರೆಂದಿರಿಸಿದಂತಲ್ಲಿ
ಇರ್ದಪಂ ಸೋಮನಾಥಂ ಚಲಿಸದಿತ್ತಲುಂ
ಸಾರ್ದು ಸಿಂಹಾಸನದಿ ನೆಲೆ ಮಿಡುಕನಿತ್ತಲುಂ
ಸೋಮನಾಥಂ ಬರಲ್ಬಂದಪೆವು ನಾವೆನಲು
ಭೀಮನಾಥನ ಕೂಡೆಯಾರೋಗಿಸಲ್ಕೆನಲು
ಇರವೇಳ್ದಡಿರ್ದ ದೇವಂ ಸೋಮನಾಥ ವಿಭು
ಬರವೇಳ್ದು ಬಿನ್ನೈಸೆ ಬಾರದಿರ್ಪನೆ ಶಂಭು
ಎಂತೆಂತೆನುತ್ತಲಗಿನಾಯತಂ ಗೊಳುತಿರಲು
ಮುಂತೆ ದಣ್ಣಾಯಕರ ಕೈಗೆ ಲಿಂಗಂ ಬರಲು

ಓತು ಜೊಮ್ಮಣ್ಣನಂ ತೆಗೆದಪ್ಪಿ ಬಿಗಿಯಪ್ಪಿ
ಕೌತುಕದ ಮೇಲೆ ಕೌತುಕವಡಸಿ ಮತ್ತಪ್ಪಿ
ಒಡನೊಡನೆ ನಡೆತಂದು ನಿಜನಿಳಯಮುಂ ಪೊಕ್ಕು
ಎಡೆಮಾಡಿದೆಡೆಗಳೊಳು ಲಿಂಗಾರ್ಚನೆಗೆ ಮಿಕ್ಕು
ಮಜ್ಜನಂ ಪೂಜೆಧೂಪಾರತಿಗಳಂ ಕೊಟ್ಟು
ಪ್ರಜ್ವಲಿಪ ಲಿಂಗಕ್ಕೆ ನೇಹಮುಂ ಮುಂದಿಟ್ಟು
ಜೊಮ್ಮಣ್ಣನರಸಿ ಪರಿಯಾಣಕ್ಕೆ ಬಡಿಸುತಿರೆ
ಸುಮ್ಮಾನ ಉಡುಗಿ ದಣ್ಣಾಯಕರ್ನಡುಗುತಿರೆ
ಸೋಮನಾಥನನೊಮ್ಮೆ ಬಡಿಸುತಿರ್ಪರನೊಮ್ಮೆ
ಭೀಮನಾಥನನೊಮ್ಮೆ ಜೊಮ್ಮಣ್ಣನುಮನೊಮ್ಮೆ
ನೋಡುತಂ ದಂಡನಾಯ್ಕರ್ಕರಗಿ ಕೊರಗುತಿರೆ
ಬಾಡುತಂ ನುಡಿಯಲಮ್ಮದೆ ಕಂದಿ ಕುಂದುತಿರೆ
ಇರೆ ಜೊಮ್ಮಿತಂದೆ ಎಲ್ಲವ ನೋಡಿ ನಸುನಗುತೆ
ಹರುಷದಿಂ ದಂಡನಾಯ್ಕರ ಮೊಗವನೀಕ್ಷಿಸುತೆ
ಆರೋಗಿಸಲ್ಕಿಕ್ಕಿ ಎನೆ ಸುಮ್ಮನಿರೆ ಕಂಡು
ಮಾದಾರಿಯಣುಗನವರಂಜುವಿಧವಂ ಕಂಡು
ಎಲೆ ಸೋಮನಾಥ ದಣ್ಣಾಯಕರ ಮನದಂತೆ
ಪಲಲವಂ ಪಕ್ವಾನ್ನತತಿಗಳಂ ಮಾಡಿಂತೆ
ಎನಲಲ್ಲಿ ಬಿಸುಪ ಹೊಂಗೆ ಗಾರಿಗೆಗಳಾಗುತಿರೆ
ತನಿವಾಲ ಸಣ್ಣ ಸೇವಗೆಯ ಪಾಯಸವಾಗೆ
ತೊಳಗುವಿಡ್ಡಲಿಗೆ ಮಂಡಿಗೆಗಳಾಗುತ್ತಮಿರೆ
ಕಳವೆಯೋಗರ ಪತ್ರಪುಷ್ಪಫಲವಾಗುತಿರೆ
ಕಂಡು ದಣ್ಣಾಯಕರು ಹಿಗ್ಗಿ ಹಾರೈಸುತಂ
ಹಿಂಡೇಳ್ವ ಪುಳಕದಿಂ ಹಾರೈಸಲಿಕ್ಕುತಂ
ಸಂಗಡಂ ಲಿಂಗಪ್ರಸಾದಮುಂ ಕೈಕೊಂಡು
ಹಿಂಗದಾನಂದಸುಖಮುಂ ಮನದೊಳಿಡೆಗೊಂಡು
ಶಿವರಾತ್ರಿಯಂ ಮಾಡಿ ಸಂಗಸುಖದಿಂದಮಿರೆ
ದಿವಸಕರನುದಯವಾದುದನೇನುವರಿಯದಿರೆ
ಶರಣಸಂಗದಿ ಇರುಳ್ಪಗಲೆಂಬುದರಿಯದಿರೆ

ಸಂಬಂಧಿಸಿದವರನ್ನು ತನ್ನಂತೆ ಮಾಡುವ ಉದ್ದಿಶ್ಯವಾಗಿ, ಅವರೊಡನೆ ವ್ಯವಹರಿಸುವವನು. ಪರವೆಂದರೆ ಯಾವಾಗಲೂ ಅರಿವು ಮುಂತಾಗಿ ಆಚರಿಸುವವನು.

(೬೧) ತ್ರಿವಿಧ ಪ್ರಸಾದಲಿಂಗಃ — ಇವು ಶುದ್ಧ ಸಿದ್ಧ ಪ್ರಸಿದ್ಧವೆಂದು ಮೂರು ಇವೆ. ಸದಾಚಾರದಿಂದ ಶುದ್ಧತೆಯನ್ನು ಹೊಂದಿ ಗುರು ಮುಖದಿಂದ ಎಂದರೆ ಜ್ಞಾನಿಗಳಿಂದ ಮಲತ್ರಯಗಳನ್ನು ಹೇಗೆ ಕಳೆಯ ಬೇಕೆಂಬುದನ್ನು ತಿಳಿದು ಅದರಂತೆ ಆಚರಿಸಲು ಕೆಡಕಾದುದಾವುದೋ ಅದು ಕಳೆದು ಹೋಗುತ್ತದೆ. ಹೀಗೆ ದೇಹದಲ್ಲಿಯ ಮಾಲಿನ್ಯವು ಕಳೆದು ಹೋಗಿ ಉಳಿದ ಶೇಷವೇ ಶುದ್ಧ ಪ್ರಸಾದವು. ಹೀಗೆ ದೇಹದಲ್ಲಿಯ ಅಶುದ್ಧತೆಯು ಹೋಗುತ್ತಿರಲಾಗಿ ಮನುಷ್ಯನ ಕರಣ ಅಥವಾ ಇಂದ್ರಿಯಗಳಲ್ಲಿಯ ಮಾಲಿನ್ಯವು ಸಹ ಹೊರಟುಹೋಗಹತ್ತುವದು. ಆಗ ಅದರಲ್ಲಿಯ ಲಿಂಗದ ಗುಣವು ಬಲಪಟ್ಟು ತೋರಹತ್ತುವದು. ಹೀಗೆ ಕರಣಗಳಲ್ಲಿಯ ದುಷ್ಪ್ರವೃತ್ತಿಗಳನ್ನು ಹೋಗಲಾಡಿಸಿ ಉಳಿವ ಶೇಷವೇ ಸಿದ್ಧ ಪ್ರಸಾದವಾಗಿರುತ್ತದೆ. ಹೀಗೆ ಸಿದ್ಧಪ್ರಸಾದವು ಎಡೆಗೊಳ್ಳಹತ್ತಲು ಜಗತ್ತಿಗೋಸ್ಕರ ಇರುವ ಖಂಡಿತ ಭಾವ ಅಥವಾ ಭಿನ್ನಭಾವವು ಹೊರಟು ಹೋಗಿ ಅಭಿನ್ನಭಾವವು ಅಥವಾ ವಿಶ್ವಬಂಧುತ್ವಭಾವವು ಉಂಟಾಗುತ್ತದೆ. ಆಗ ತಾನೂ ಹೊರಗಿನದೂ ಎಂಬುಭಯಭಾವವು ಹೊರಟು ಹೋಗುತ್ತದೆ. ಇದೇ ಜಂಗಮವನ್ನು ಅಳವಡಿಸಿಕೊಳ್ಳುವದು. ಹೀಗೆ ಅಭಿನ್ನತೆಯನ್ನು ಹೋಗಲಾಡಿಸಲು ಉಳಿದ ಶೇಷವೇ ಪ್ರಸಿದ್ಧಪ್ರಸಾದವು. ಇವೆಲ್ಲವೂ ಪ್ರಸಾದಲಿಂಗವೆನಿಸಿಕೊಳ್ಳುತ್ತವೆ. ಮನುಷ್ಯನಲ್ಲಿ ಯಾವುದು ಭೇದವನ್ನುಂಟುಮಾಡುತ್ತದೋ ಅದನ್ನು ಹೋಗಲಾಡಿಸುವುದೇ ಪ್ರಸಾದದ ಕಾರ್ಯವಾಗಿದೆ. ಹೀಗೆ ಹೋಗಲಾಡಿಸಿದ ಬಳಿಕ ಮನುಷ್ಯನ ಕ್ರಿಯೆ, ಕರಣ, ಜ್ಞಾನಗಳಲ್ಲಿ ಯಾವುದು ಉಳಿಯುತ್ತದೋ ಅದೇ ಅನುಕ್ರಮವಾಗಿ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಗಳೆಂದೆನಿಸಿಕೊಳುತ್ತವೆ.

(೬೨) ತ್ರಿವಿಧಮಹಾಲಿಂಗಃ—ಇವು ಪಿಂಡಜ, ಅಂಡಜ, ಬಿಂದುಜ, ಎಂದಿರುತ್ತವೆ. ಮಹಾಲಿಂಗವು 'ಅರಿವು' ಇದರ ಒಂದು ಬಗೆಯ ಪ್ರಕಾಶವಾಗಿರುತ್ತದೆ. ತನ್ನ ಸುತ್ತಲಿನ ದೃಶ್ಯ ಪದಾರ್ಥಗಳೇ ಪಿಂಡ, ಜಗತ್ತಿನಲ್ಲಿಯವು ಅಂಡ, ಮತ್ತು ಇವುಗಳಿಗೆ ಮೀರಿದವುಗಳೇ ಬಿಂದು.

ಹೀಗೆ ಪದಾರ್ಥಗಳಲ್ಲಿ ಮೂರು ಭಾಗಗಳು ಇರುತ್ತವೆ. ಮಹಾಲಿಂಗವು ತನ್ನ ಸುತ್ತಲಿನ ದೃಶ್ಯ ಪದಾರ್ಥಗಳಿಗೆ ಸಂಬಂಧಿಸಿ ತನ್ನಲ್ಲಿ ಅಳವಟ್ಟಿಲ್ಲ ಅದು ಪಿಂಡಜವು. ಇದಕ್ಕೂ ಸೂಕ್ಷ್ಮವಾಗಿರುವ ಜಗತ್ತಿನಲ್ಲೆಲ್ಲ ಸಂಬಂಧಿಸಿಕೊಂಡು ತನ್ನಲ್ಲಿ ಅಳವಡಲು ಅಂದು ಅಂಡಜವು. ಮುಂದೆ ಈ ಜಗತ್ತಿಗೂ ಕೂಡ ಮೇಲಿರುವ ಮಹತ್ತಿನಲ್ಲಿ ಸಂಬಂಧಿಸಿಕೊಂಡಲ್ಲಿ ಅದು ಬಿಂದುಜವು. ಇಲ್ಲಿ ನಾವು ನಾದ ಬಿಂದು. ಕಲೆಗಳಲ್ಲಿ ಯಾವುದನ್ನು ಬಿಂದುವೆಂದು ಉಲ್ಲೇಖಮಾಡಿರುತ್ತೇವೆಯೊ ಅದೇ ಈ ಬಿಂದುವಿದೆ. ಈ ಬಿಂದುವಿಗೆ ಸಂಬಂಧಿಸಿಕೊಂಡು ತನ್ನಲ್ಲಿ ಈ ಮಹಾಲಿಂಗದ ಪ್ರಕಾಶವು ಎಡೆಗೊಳ್ಳಬೇಕು. ಇದು ಬಿಂದುಜ ಮಹಾಲಿಂಗವು. ಇದು ಐಕ್ಯ ಸ್ಥಿತಿಯಲ್ಲಿರುವವನ ಉತ್ಕೃಷ್ಟ ಸ್ಥಿತಿಯು. ಈ ಬಿಂದುಜ ಸ್ಥಿತಿಯನ್ನು ಹೊಂದಿದ ತರುವಾಯ ಮನುಷ್ಯನು ಶೂನ್ಯದ ಮೂರು ಸ್ಥಿತಿಗಳಲ್ಲಿ ಪ್ರವೇಶ ಹೊಂದಲು ಅರ್ಹನಾಗುತ್ತಾನೆ. ಮತ್ತು ಕಡೆಗೆ ನಿರವಯ ಅಥವಾ ಬಯಲು ಎಂಬುದರಲ್ಲಿ ಅಡಗುತ್ತಾನೆ.

ಹೀಗೆ ಆರು ಅಂಗಗಳಲ್ಲಿ ಹಿಂದೆ ನಂ॥ ೫೭ ರಿಂದ ೬೨ ರ ವರೆಗೆ ಪ್ರತಿಯೊಂದರಲ್ಲಿ ಮೂರು ಮೂರು ಭಾಗಗಳಂತೆ ಒಟ್ಟು ೧೮ ವಿಭಾಗಗಳನ್ನು ಷಟ್‌ಸ್ಥಲ ಜ್ಞಾನಿಗಳು ಕಲ್ಪಿಸಿರುತ್ತಾರೆ. ಹೀಗೆಯೇ ೬ ಅಂಗಸ್ಥಲಗಳಲ್ಲಿ ಪ್ರತಿಯೊಂದು ಸ್ಥಲದಲ್ಲಿ ಮೂರು ಮೂರರಂತೆ ಒಟ್ಟು ೧೮ ಸ್ಥಲಗಳನ್ನು ಪುನಃ ಮಾಡಿರುತ್ತಾರೆ. ಅವುಗಳ ವಿವರಣೆ ಏನಂದರೆ: —

(೬೩) ತ್ರಿವಿಧಭಕ್ತಃ— ಇವು ಗುರುಭಕ್ತ, ಲಿಂಗಭಕ್ತ, ಜಂಗಮ ಭಕ್ತ ಎಂದಿರುತ್ತವೆ. ತನುಕ್ರಿಯೆಯಿಂದ ತನುಮನಧನವನ್ನರ್ಪಿಸುವವನು ಗುರುಭಕ್ತನು. ಮನಕ್ರಿಯೆಯಿಂದ ಇವುಗಳನ್ನರ್ಪಿಸುವವನು ಲಿಂಗಭಕ್ತನು. ಧನಕ್ರಿಯೆಯಿಂದ ತನುಮನಧನಗಳನ್ನರ್ಪಿಸುವವನು ಜಂಗಮ ಭಕ್ತನು. ಇವುಗಳಲ್ಲಿ ಧನಕ್ರಿಯೆಯಿಂದ ಧನವನ್ನು ಅರ್ಪಿಸುವದೇ ಭಕ್ತನ ಅತ್ಯಂತ ಉತ್ಕೃಷ್ಟ ಸ್ಥಿತಿಯನ್ನು ತೋರಿಸುತ್ತದೆ. ಸದಾಚಾರವೇ ತನುಕ್ರಿಯೆ ಎನಿಸಿಕೊಳ್ಳುತ್ತದೆ. ಅದನ್ನು ಒಳಕೊಂಡು ಅರ್ಪಿಸುವವವೇ ಗುರುಭಕ್ತನು. ಲಿಂಗಾನುಭಾವಿಯು ಮನಕ್ರಿಯೆಯುಳ್ಳವನು ಹೀಗೆ ಅರ್ಪಣ ಮಾಡುವವನೇ ಲಿಂಗಭಕ್ತನು. ತನ್ನದೆಂಬುದೆಲ್ಲವೂ ಧನವೆಂದೆನಿಸಿಕೊಳ್ಳುತ್ತಿದೆ. ಅದೆಲ್ಲವರ ಬಗ್ಗೆ ಅರ್ಪಣದ ಕ್ರಮಾನುಸಾರವಾಗಿ ಮಾಡುವವನು ಜಂಗಮಭಕ್ತನು. ಈ ಎಲ್ಲ ಕಾರ್ಯಗಳಲ್ಲಿ ಶ್ರದ್ಧಾಭಕ್ತಿಯುಳ್ಳವನಾಗಿರಬೇಕು. ಹೀಗೆ ಭಕ್ತನಲ್ಲಿ ಮೂರು ವಿಧಗಳಿವೆ.

(೬೪) ತ್ರಿವಿಧ ಮಹೇಶ್ವರಃ— ಇವುಗಳು ಇಹಲೋಕ ವೀರ, ಪರಲೋಕ ವೀರ, ಲಿಂಗ ವೀರ ಎಂದು ಮೂರಿವೆ. ಮಹೇಶ್ವರನು ನಿಷ್ಠೆಯುಳ್ಳವನು. ಹಿಡಿದ ಕಾರ್ಯಗಳನ್ನು ಬಿಡುವುದಿಲ್ಲ. ಮರಣವನ್ನೂ ಕೂಡ ಲೆಕ್ಕಿಸನು. ನಿಂದಕರನ್ನೂ ತನ್ನ ಕಾರ್ಯಗಳಲ್ಲಿ ಪ್ರತಿರೋಧಿಸುವವರನ್ನೂ ಶಿಕ್ಷಿಸಲು ಸನ್ನದ್ಧನಾಗಿರುವನು. ಇವನು ಇಹಲೋಕ ವೀರನು. ಮಾನಸಿಕ ಧೈರ್ಯವುಳ್ಳವನಾಗಿ ಧರ್ಮಾರ್ಥ ಕಾಮ ಮೋಕ್ಷಗಳನ್ನು ಸಹ ಹಿಂದಕ್ಕಿಟ್ಟು ನಿಷ್ಕಾಮಿಯಾಗಿ ಶಿವಕಾರ್ಯದಲ್ಲಿ ಸನ್ನದ್ಧನಾದವನು ಪರಲೋಕ ವೀರನು. ಶೂರರು ಅನೇಕರು ಇದ್ದಾರೆ. ಆದರೆ ಮಾನಸಿಕ ಧೈರ್ಯವುಳ್ಳವರು. ದೊರೆಯುವದು ದುರ್ಲಭ. ಇವರು ಪರಲೋಕ ವೀರರೆಂದು ಹೇಳಲ್ಪಡುತ್ತಾರೆ. ಆ ಮೇಲೆ ಯಾವನು ಅಂಗದಲ್ಲಿ ಲಿಂಗವುಳ್ಳವನಾಗಿ ಸರ್ವ ಕರಣಗಳನ್ನು ತನ್ನಲ್ಲಿಂಬಿಸಿಕೊಂಡು ವರ್ತಿಸುತ್ತಾನೋ ಅವನು ಲಿಂಗವೀರನು. ಕರಣಗಳನ್ನು ಗೆಲ್ಲುವದಕ್ಕೆ ಬಹು ಕಡುತರವಾದ ಸ್ಥೈರ್ಯವು ಬೇಕು. ಹೀಗೆ ಮಾಡುವವನು ಲಿಂಗವೀರನು.

(೬೫) ತ್ರಿವಿಧ ಪ್ರಸಾದಿಃ— ಇವು ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ ಎಂದಿವೆ. ಅರ್ಪಣ, ಅವಧಾನ, ಪರಿಣಾಮ ಎಂದು ಕಾರ್ಯಗಳಲ್ಲಿಯೂ ಮೂರು ರೀತಿಗಳಿರುತ್ತವೆ. ಅರ್ಪಣ ಬುದ್ಧಿಯಿಂದ ಮೊದಲು ಕಾರ್ಯವನ್ನು ಕೈಕೊಳ್ಳಬೇಕು. ಹೀಗೆ ಕೈಕೊಂಡಲ್ಲಿ ಅವನಲ್ಲಿ ಅವಧಾನ ಭಾವವು ಅಥವಾ ಏಕಾಗ್ರತೆಯು ಆ ಕಾರ್ಯಕ್ಕೋಸ್ಕರ ಉಂಟಾಗುವದು. ಹೀಗೆ ಕಾರ್ಯ ಮಾಡಿದಲ್ಲಿ ಅದರ ಸುಪರಿಣಾಮಗಳು ಅವನಲ್ಲಿ ಎಡೆಗೊಂಡು ಅವರಲ್ಲಿ ಅವನು ಏಕಾಕಾರ ಹೊಂದುತ್ತಾನೆ. ಈ ಮೂರು ಕ್ರಿಯೆಗಳಲ್ಲಿ ಅನುಕ್ರಮವಾಗಿ ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ ಎಂದು ಮೂರು ವಿಧಗಳು ಉಂಟಾಗುತ್ತವೆ. ಉದಾಹರಣಾರ್ಥವಾಗಿ, ಕಾಯದ ಕೈಯ್ಯಲ್ಲಿ ಇಷ್ಟಲಿಂಗಕ್ಕೆ ಅರ್ಪಿಸುವವನು ಅರ್ಪಿತ ಪ್ರಸಾದಿಯಾಗುವನು. ಇಂದ್ರಿಯಗಳಲ್ಲಿ ಐದು ಲಿಂಗಗಳನ್ನು ಸ್ಥಾಪಿಸಿ ಅವುಗಳ ಅನುಭವವನ್ನು ಮನದ ಕೈಯಲ್ಲಿ ಕೊಟ್ಟು ಕೊಳ್ಳುವವನು ಅವಧಾನ ಪ್ರಸಾದಿಯು. ಅಂಗವೆಲ್ಲವು ಲಿಂಗಮಯವಾಗಿ ಭಾವ ಭರಿತನಾದವನು ಪರಿಣಾಮ ಪ್ರಸಾದಿಯು.

(೬೬) ತ್ರಿವಿಧ ಪ್ರಾಣಲಿಂಗಿಃ— ಇವು ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ, ಎಂದಿರುತ್ತವೆ. ಪ್ರಸಾದಿಯಾಗಿ ಏಕಾಗ್ರಚಿತ್ತನಾದಲ್ಲಿ

ಅವನಲ್ಲಿ ಲಿಂಗವು ಅನುಗೊಳ್ಳಹತ್ತುತ್ತಿದೆ. ಮನುಷ್ಯನ ಬಾಹ್ಯದಲ್ಲಿ ಆಚಾರ, ಅವನ ಅಂತರಂಗದಲ್ಲಿ ಲಿಂಗ ಮತ್ತು ಭಾವದಲ್ಲಿ ಜಂಗಮ ಇವುಗಳು ಇರುತ್ತವೆ. ಇವುಗಳ ತಿರುಳು ಅಥವಾ ಸಾರ ಅವನ ಪ್ರಾಣದಲ್ಲಿ ಅನುಕ್ರಮವಾಗಿ ಬೆರೆಯಲು ಅವನು ಆಚಾರಪ್ರಾಣಿ, ಲಿಂಗಪ್ರಾಣಿ, ಮತ್ತು ಜಂಗಮಪ್ರಾಣಿ ಎಂದು ಮೂರು ವಿಧಗಳು ಆಗುತ್ತವೆ. ಇವು ಪ್ರಾಣಲಿಂಗಿಯ ಮೂರು ವಿಧಗಳಾಗಿವೆ. ಹೀಗಿರುವವನೇ ಶಿವಯೋಗಿಯು. ಮತ್ತು ಅವನ ಅಂತಿಮ ಸ್ಥಿತಿಯಲ್ಲಿ ಜಂಗಮಪ್ರಾಣಿ ಎಂದು ಹೇಳಬಹುದು. ಅಂದರೆ ಬಾಹ್ಯದಲ್ಲಿ ಆಚಾರವನ್ನು ಗ್ರಹಿಸುವವನು ಆಚಾರ ಪ್ರಾಣಿಯು. ಹೀಗೆ ಸತ್‌ಕ್ರಿಯೆಗಳನ್ನು ವ್ಯಾಪ್ತಿಮಾಡುತ್ತ ಲಿಂಗದೊಡನೆ ಪ್ರಾಣವು ಏಕಾಕಾರಹೊಂದಿ ಪ್ರವಹಿಸಹತ್ತಲು ಅವನು ಲಿಂಗಪ್ರಾಣಿಯು. ಇದರ ಮುಂದೆ ಜಗತ್ತಿನಲ್ಲಿ ತುಂಬಿಕೊಂಡಿರುವ ಚೈತನ್ಯಕ್ಕೆ ತನ್ನದೆಲ್ಲವನ್ನು ನಿವೇದಿಸಿ, ಅದರಲ್ಲಿ ತಾನೇ ತಾನಾಗಿರುವವನು ಜಂಗಮಪ್ರಾಣಿಯು,

(೬೭) ತ್ರಿವಿಧ ಶರಣಃ— ಇವು ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ತೃಪ್ತಿಲಿಂಗಾರ್ಚಕ ಎಂದಿವೆ. ಪ್ರಸಾದದ ಶೇಷವೇ ಶರಣನೆನಿಸಿಕೊಳ್ಳುತ್ತಾನೆ. ಅವನಲ್ಲಿ ಪ್ರಸಾದಲಿಂಗವು ನೆಲೆಗೊಂಡಿರುತ್ತದೆ. ಅವನ ಬಾಹ್ಯದಲ್ಲಿ ಇಷ್ಟಲಿಂಗವು ಅಂತರಂಗದಲ್ಲಿ ಪ್ರಾಣಲಿಂಗವು ಭಾವದಲ್ಲಿ ತೃಪ್ತಿಲಿಂಗವು ಅಥವಾ ಭಾವಲಿಂಗವು ಇವುಗಳಿದ್ದು ಅವನ ಬಾಹ್ಯದ ಇಷ್ಟಲಿಂಗಾಚಾರಗಳನ್ನು ಮಾಡುವಲ್ಲಿ ಯಾವ ತರದ ಅನಿಷ್ಟಗಳು ಅಂದರೆ ತಡೆಗಳುಂಟಾಗುವದಿಲ್ಲ. ಆದ್ದರಿಂದ ಅನಿಷ್ಟ ನಷ್ಟವಾಯಿತ್ತಾಗಿ ಇಷ್ಟಲಿಂಗಾರ್ಚಕನೆಂದು ಹೇಳಲ್ಪಡುತ್ತಾನೆ. ಅವನು ತಾನು ಮತ್ತು ತನ್ನ ಸುತ್ತಲಿನ ಪರಿಸ್ಥಿತಿ ಇವುಗಳಲ್ಲಿ ಯಾವ ತರದ ಭೇದ ಬುದ್ಧಿಯುಳ್ಳವನಿರುವದಿಲ್ಲಾದ್ದರಿಂದ ಅವನು ಪ್ರಾಣಲಿಂಗಾರ್ಚಕನು. ಈ ಅಭೇದ ಭಾವವು ಅವನ ಇಹ ಪರದಲ್ಲಿಯೂ ಕೂಡ ಇರುವದಿಲ್ಲ. ಆದ್ದರಿಂದ ಅವನು ತೃಪ್ತಿಲಿಂಗಾರ್ಚಕನು. ಶರಣನು ಸುಜ್ಞಾನ ಭಕ್ತಿಯುಳ್ಳವನು ಭೇದ ಭಾವವಿಲ್ಲದಿರುವುದೇ ಈ ಸುಜ್ಞಾನ ಭಕ್ತಿಯು. ಈ ಭೇದವು ಬಾಹ್ಯದಲ್ಲಿರದಿದ್ದರೆ ಅವನು ಇಷ್ಟ ಲಿಂಗಾರ್ಚಕನು. ಇದು ಸುತ್ತಲಿನ ಜಗತ್ತಿನೊಡನೆಯೂ ಇರದಿದ್ದರೆ ಅವನು ಪ್ರಾಣಲಿಂಗಾರ್ಚಕನು. ಇಹ ಪರಗಳೆರಡರಲ್ಲಿಯೂ ಇರದಿದ್ದರೆ ಅವನು ಭಾವಲಿಂಗಾರ್ಚಕನು.

(೬೮) ತ್ರಿವಿಧ ಐಕ್ಯಃ— ಈ ಭೇದಗಳು ಕಾಯ ಲಿಂಗೈಕ್ಯ, ಜೀವ ಲಿಂಗೈಕ್ಯ, ಭಾವಲಿಂಗೈಕ್ಯ ಎಂದಿರುತ್ತವೆ. ಐಕ್ಯನಲ್ಲಿ ಮಹಾಲಿಂಗದ ಪ್ರಕಾಶವು ಬೆಳಗುತ್ತಿರುತ್ತದೆ. ಈ ಪ್ರಕಾಶವು ಬಾಹ್ಯಕ್ರಿಯೆಗಳಲ್ಲಿ ತಲೆದೋರಲು. ಇದೇ ಕಾಯಲಿಂಗೈಕ್ಯವು. ಆಗ ಆ ಕ್ರಿಯೆಗಳು ಪ್ರಕಾಶಮಯವಾಗುತ್ತವೆ. ಮಹಾಲಿಂಗದ ಪ್ರಕಾಶವು ಅನುಭಾವದಲ್ಲಿ ತೋರಲು ಅನುಭಾವವು ಪ್ರಕಾಶಮಯವಾಗುತ್ತದೆ. ಇದೇ ಜೀವಲಿಂಗೈಕ್ಯವು. ಮಹಾಲಿಂಗದ ಪ್ರಕಾಶವು ಅರಿವು ಇದರಲ್ಲಿ ತೋರಲು ಈ ಅರಿವು ಪ್ರಕಾಶಮಯವಾಗುತ್ತಿದೆ. ಇದೇ ಭಾವಲಿಂಗೈಕ್ಯವು. ಪ್ರಕಾಶವೆಂದರೆ ಚರ್ಮ ಚಕ್ಷುವಿಗೆ ಕಾಣುತ್ತಿರುವ ಬೆಳಕು ಅಲ್ಲ. ಅದು ಲಿಂಗಸೊಡನೆ ಬೆರೆದಂಥ ಒಂದು ಬಗೆಯ ಶಿವಾನುಭವದ ಅತ್ಯುಚ್ಚ ಸ್ಥಿತಿ ಎಂದು ಹೇಳಬಹುದು.

ಹೀಗೆ ಆರು ಅಂಗಗಳಲ್ಲಿ ಹಿಂದೆ ನಂ. ೬೩ ರಿಂದ ೬೮ರ ವರೆಗೆ ಹೇಳಿದಂತೆ ಮೂರು ಮೂರು ವಿಭಾಗಗಳಾಗಿ ೧೮ ವಿಭಾಗಳನ್ನು ಷಟ್‌ಸ್ಥಲ ಜ್ಞಾನಿಗಳು ಮಾಡಿರುತ್ತಾರೆ. ಲಿಂಗಸ್ಥಲಗಳು ೧೮, ಅಂಗಸ್ಥಲಗಳು ೧೮, ಹೀಗೆ ೩೬ ಸ್ಥಲಗಳು ಆಗುತ್ತವೆ.

(೬೯) ಮೂವತ್ತಾರು ಲಿಂಗಸ್ಥಲಗಳು (೧ನೇ ವಿಧ):— ಮುಂದೆ ಲಿಂಗಸ್ಥಲಗಳು ೩೬ ಮತ್ತು ಅಂಗಸ್ಥಲಗಳು ೩೬ ಹೀಗೆ ಬೇರೆ ಸ್ಥಲಗಳು ಉಂಟಾಗುತ್ತವೆ. ಷಟ್‌ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಮನುಷ್ಯನು ಆ ಒಂದೇ ಸ್ಥಲದ ಅನುಭವ ಮಾತ್ರವಲ್ಲದೆ ಉಳಿದ ಐದು ಸ್ಥಲಗಳ ಅನುಭವವನ್ನೂ ಹೊಂದಬೇಕು. ಹೀಗೆ ಹೊಂದದೆ ಹೋಪಲ್ಲಿ ಅವನು ಪ್ರಗತಿಯನ್ನು ಹೊಂದಲಾರನು. ಉದಾಃ — ಭಕ್ತನು ಸದಾ ಭಕ್ತಸ್ಥಲದಲ್ಲಿ ಉಳಿದರೆ ಅವನು ಮೋಕ್ಷವನ್ನು ಹೊಂದಲಾರನು. ಅವನು ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಸ್ಥಲಗಳ ಅನುಭವವನ್ನು ಹೊಂದಲೇಬೇಕು. ಇನ್ನೊಬ್ಬನು ಪ್ರಾಣಲಿಂಗಿ ಸ್ಥಲದವನಿರುತ್ತಾನೆ. ಅವನು ಅದರ ಅಭ್ಯಾಸದಲ್ಲಿಯೇ ಉಳಿದರೆ ಅವನಲ್ಲಿ ಪ್ರಗತಿಯಾಗಲಾರದು. ಅವನು ಭಕ್ತ, ಮಹೇಶ್ವರ, ಪ್ರಸಾದಿ, ಶರಣ ಐಕ್ಯ ಇವುಗಳ ಅನುಭವವನ್ನು ಹೊಂದಲೇಬೇಕು. ಇವುಗಳ ಅನುಭವವು ಅವನು ಆಯಾ ಶರೀರಗಳ ಕ್ರಿಯೆಗಳ ಮತ್ತು ಆಯಾ ಇಂದ್ರಿಯಗಳ ಜ್ಞಾನವನ್ನು ಮಾಡಿಕೊಂಡಲ್ಲಿ ಸಾಧ್ಯವಾಗುತ್ತದೆ. ಈ ಎಲ್ಲ ಅನುಭವಗಳು ಲಿಂಗಸ್ಥಲದಲ್ಲಿ ೩೬ ಮತ್ತು ಅವುಗಳಿಗನು

ಸಾರವಾಗಿಯೇ ಅಂಗಸ್ಥಲದಲ್ಲಿ ೩೬ ಹೀಗೆ ಇರುತ್ತವೆ. ಅವುಗಳ ವಿವರಣೆಗಳು ಕೆಳಗೆ ಕೊಡಲ್ಪಟ್ಟಿವೆ.

(೭೦) ಷಡ್ವಿಧ ಆಚಾರಲಿಂಗಃ – ಇವು ಕ್ರಿಯೆ, ಮಂತ್ರ, ನಿರೀಕ್ಷಣ, ಯಜನ, ಈಳನ, ವೇಧಾ ಎಂದಿರುತ್ತವೆ. ಆಚಾರಲಿಂಗನ ಆರು ವಿಧದ ಪ್ರಗತಿಗಳು ಇಲ್ಲಿ ಹೇಳಲ್ಪಟ್ಟಿವೆ.

ಆಚಾರ ಲಿಂಗವು ಆರಂಭದಲ್ಲಿ ಸಕ್ರಿಯೆಯುಳ್ಳದ್ದು. ಸದಾಚಾರ, ಗಣಾಚಾರ, ಶಿವಾಚಾರ, ಭೃತ್ಯಾಚಾರ, ಲಿಂಗಾಚಾರ ಹೀಗೆ ಪಂಚಾಚಾರ ಸ್ವರೂಪುಳ್ಳದ್ದು. ಹೀಗೆ ವರ್ತಿಸುವದು ಆಚಾರಲಿಂಗದೊಳಗಣ ಆಚಾರ ಲಿಂಗವು.

ಈ ಮೆಟ್ಟಲಿನ ತರುವಾಯ ಮಂತ್ರ ಸ್ವರೂಪವಾದ ಗುರು ಲಿಂಗವಿದೆ. ಅಲ್ಲಿ ಆಚಾರಲಿಂಗವು ಮಂತ್ರಾತ್ಮಕವಾಗಿ ಪಂಚಾಕ್ಷರೀ ಮಂತ್ರ ಸ್ಮರಣ ಮಾಡುವದೇ ಇದರ ಲಕ್ಷಣವಾಗಿರುತ್ತದೆ. ಹೀಗೆ ವರ್ತಿಸುವದೇ ಆಚಾರಲಿಂಗದೊಳಗಣ ಗುರುಲಿಂಗವು.

ಈ ಗುರುಲಿಂಗದ ತರುವಾಯ ನಿರೀಕ್ಷಣ ಸ್ವರೂಪವಾದ ಶಿವ ಲಿಂಗವಿದೆ. ಇಲ್ಲಿ ಎವೆ ಹಳಚದೆ ಇಷ್ಟಲಿಂಗ ನಿರೀಕ್ಷಣ ಮಾಡುವದೇ ಈ ಆಚಾರಲಿಂಗದ ಕಾರ್ಯವಾಗಿದೆ. ಇದು ಆಚಾರ ಲಿಂಗದೊಳಗಣ ಶಿವಲಿಂಗವು.

ಶಿವಲಿಂಗದ ತರುವಾಯ ಯಜನ ಸ್ವರೂಪವಾದ ಜಂಗಮಲಿಂಗ ವಿದೆ. ಇಲ್ಲಿ ಆಚಾರ ಲಿಂಗದ ಕಾರ್ಯಗಳು ಯಜನ ಅಷ್ಟವಿಧಾರ್ಚನೆ ಷೋಡಶೋಪಚಾರಗಳನ್ನು ಮಾಡುವದೇ ಇರುತ್ತವೆ. ಇದು ಆಚಾರಲಿಂಗದೊಳಗಣ ಜಂಗಮಲಿಂಗವು.

ಜಂಗಮಲಿಂಗದ ತರುವಾಯ ಈಳನ ಎಂದರೆ ಸ್ತೋತ್ರ ಸ್ವರೂಪವಾದ ಪ್ರಸಾದಲಿಂಗವಿದೆ. ಇಲ್ಲಿ ಆಚಾರಲಿಂಗದ ಕಾರ್ಯವು ಪರಮಾತ್ಮನನ್ನು ಭಕ್ತಿ ಪೂರ್ವಕನಾಗಿ ಸ್ತೋತ್ರ ಮಾಡುವದೇ ಇರುತ್ತದೆ. ಇದು ಆಚಾರಲಿಂಗದೊಳಗಣ ಪ್ರಸಾದ ಲಿಂಗವು.

ಪ್ರಸಾದ ಲಿಂಗದ ತರುವಾಯ ವೇಧಾ ಅಂದರೆ ಜ್ಞಾನ ಸ್ವರೂಪವಾದ ಮಹಾಲಿಂಗವಿದೆ. ಇಲ್ಲಿ ಮನುಷ್ಯನು ಇಷ್ಟಲಿಂಗ ಧ್ಯಾನ

ದಲ್ಲಿ ಸುಜ್ಞಾನ ಭಕ್ತಿಯೊಡನೆ ಮಗ್ನನಾಗಿರಬೇಕು. ಇದೇ ಇಲ್ಲಿಯ ಕಾರ್ಯವು. ಇದು ಆಚಾರ ಲಿಂಗದೊಳಗಣ ಮಹಾಲಿಂಗವು.

ಹೀಗೆ ಆಚಾರ ಲಿಂಗದ ಬಾಹ್ಯ ಕ್ರಿಯೆಗಳು ಮೇಲಿನ ಆಯಾ ಸ್ಥಲಗಳಿಗನುಸಾರವಾಗಿ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಮೊದಲು ಸತ್‌ಕ್ರಿಯೆ, ಆ ಮೇಲೆ ಮಂತ್ರಜಪ, ಆ ಮೇಲೆ ಅವಧಾನಪೂರ್ವಕವಾಗಿ ಮಾಡಿದ ಲಿಂಗ ನಿರೀಕ್ಷಣೆ, ಆ ಮೇಲೆ ಅನುಭಾವಭಕ್ತಿ ಪೂರ್ವಕವಾಗಿ ಮಾಡಿದ ಆಚರಣೆಗಳು, ಆ ಮೇಲೆ ಶರಣುಭಾವದಿಂದ ಮಾಡಿದ ಪರಮಾತ್ಮನ ಪ್ರಾರ್ಥನೆಗಳು, ಮತ್ತು ಕಡೆಗೆ ಇಷ್ಟಲಿಂಗದ ಧ್ಯಾನ ಇವುಗಳು ಆಚಾರಲಿಂಗದ ಆರು ವಿಧದ ಸ್ಥೂಲ ಕ್ರಿಯೆಗಳ ತರಗತಿಗಳಾಗಿರುತ್ತದೆ. ಇವೇ ಆಚಾರ ಲಿಂಗದ ಷಡ್ವಿಧಗಳು.

(೭೧) ಷಡ್ವಿಧ ಗುರುಲಿಂಗಃ— ಇವು ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾ ದೀಕ್ಷೆ, ಬೋಧಾದೀಕ್ಷೆ, ಪ್ರಸನ್ನದೀಕ್ಷೆ, ನಿರ್ವಾಣದೀಕ್ಷೆ ಎಂದಿರುತ್ತವೆ.

ಗುರುಲಿಂಗವು ಮಂತ್ರದಿಂದ ತುಂಬಿದ್ದಾಗಿರುತ್ತದೆ. ಇದೇ ಇದರ ಮುಖ್ಯ ಲಕ್ಷಣವು. ಅದು ಆಚಾರಲಿಂಗದೊಡನೆ ಬೆರೆಯಲು ಅಲ್ಲಿ ಆ ಗುರುಲಿಂಗದ ಶಕ್ತಿಯು ಅಂಗದ ವರ್ತನೆಯನ್ನು ನಷ್ಟಮಾಡುವದು. ಮತ್ತು ಸತ್‌ಕ್ರಿಯಾನುಗ್ರಹ ಮಾಡುವದು. ಹೀಗೆ ಮಾಡಿ ಇಷ್ಟಲಿಂಗದ ಕಳೆಯನ್ನು ಮನುಷ್ಯನ ಕ್ರಿಯೆಗಳಲ್ಲಿ ಪ್ರತಿಷ್ಠಿಸುವದು. ಇದೇ ಗುರುಲಿಂಗದೊಳಗಣ ಆಚಾರಲಿಂಗವು.

ಮುಂದೆ ಗುರುಲಿಂಗವು ಗುರುಲಿಂಗದೊಳಗೆ ಬೆರೆಯಲಾಗಿ ಅಲ್ಲಿ ಆ ಗುರುಲಿಂಗವು ಪಂಚಾಕ್ಷರೀಮಂತ್ರಪ್ರಭಾವದಿಂದ ಪ್ರಾಣದ ದುಷ್ಟ ಪ್ರವೃತ್ತಿಗಳನ್ನು ಅಳಿಯುವದು. ಮತ್ತು ಅದನ್ನು ಚಿತ್‌ಪ್ರಾಣವನ್ನಾಗಿ ಮಾಡುವದು. ಆಗ ಮಂತ್ರಾನುಗ್ರಹ ಸ್ವರೂಪವಾದ ಪ್ರಾಣಲಿಂಗವು ಮನುಷ್ಯನಲ್ಲಿ ನೆಲೆಗೊಳ್ಳುವದು. ಹೀಗಾದಲ್ಲಿ ಅದು ಗುರುಲಿಂಗದೊಳಗಣ ಗುರುಲಿಂಗವು.

ಗುರುಲಿಂಗವು ಶಿವಲಿಂಗದಲ್ಲಿ ಬೆರೆಯಲು ಅತ್ಮನ ವರ್ತನೆಯು ನಷ್ಟವಾಗುವದು. ಇದು ಗುರುವಿನ ಹಸ್ತಮಸ್ತಕ ಸಂಯೋಗದಿಂದ

ಉಂಟಾಗುತ್ತದೆ. ಆಗ ಭಾವಲಿಂಗದ ಕಳೆಯು ಮನುಷ್ಯನಲ್ಲಿ ಪ್ರಾದುರ್ಭವಿಸುವದು. ಇದೇ ವೇಧಾ ದೀಕ್ಷೆಯನ್ನು ಉಂಟುಮಾಡುವಂತಹದು. ಇದೇ ಗುರುಲಿಂಗದೊಳಗಣ ಶಿವಲಿಂಗವು.

ವೇಧಾ ದೀಕ್ಷೆಯ ತರುವಾಯ ತ್ರಿವಿಧಲಿಂಗದ ಜ್ಞಾನವನ್ನುಂಟು ಮಾಡಿಕೊಂಡು ಅದರ ಅನುಭಾವದಲ್ಲಿರುವುದೇ ಬೋಧಾ ದೀಕ್ಷೆ ಎನಿಸುವದು. ಇದೇ ಬೋಧಾನುಗ್ರಹವುಳ್ಳ ಜಂಗಮಲಿಂಗವು. ಇದೇ ಗುರುಲಿಂಗದೊಳಗಣ ಜಂಗಮಲಿಂಗವು.

ಇದರ ತರುವಾಯ ಪ್ರತ್ಯಕ್ಷ ನಿರ್ಮಲ ವಸ್ತುವೇ ನೀನೆಂದು ಅನುಗ್ರಹಿಸುವುದೇ ಪ್ರಸನ್ನದೀಕ್ಷೆ ಎನಿಸುವದು. ಇದೇ ಪ್ರತ್ಯಕ್ಷಾನುಗ್ರಹ ಸ್ವರೂಪವಾದ ಪ್ರಸಾದಲಿಂಗವು. ಇದೇ ಗುರುಲಿಂಗದೊಳಗಣ ಪ್ರಸಾದಲಿಂಗವು.

ಇದರ ತರುವಾಯ ಮೋಕ್ಷಸ್ವರೂಪವಾದ ವಸ್ತುವೇ ತಾನೆಂದು ಅನುಗ್ರಹಿಸುವಂತಹದೇ ನಿರ್ವಾಣ ದೀಕ್ಷೆಯಾಗಿದೆ. ಇದೇ ಮೋಕ್ಷಾನುಗ್ರಹ ಸ್ವರೂಪವಾದ ಮಹಾಲಿಂಗವು. ಇದೇ ಗುರುಲಿಂಗದೊಳಗಣ ಮಹಾಲಿಂಗವು.

ಹೀಗೆ ಗುರುಲಿಂಗದ ಕ್ರಿಯೆಗಳು ಆಯಾ ಸ್ಥಲಗಳಿಗನುಸಾರವಾಗಿ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಮೊದಲು ಕ್ರಿಯೆ, ಮಂತ್ರ, ವೇಧಾ ದೀಕ್ಷೆಗಳನ್ನು ಮೊದಲಿನ ಮೂರು ಸ್ಥಲಗಳಲ್ಲಿ ಹೊಂದಿ, ಮುಂದೆ ಶಿವಾನುಭವವು ಉತ್ಪನ್ನವಾದಂತೆ ಬೋಧೆ, ಆಮೇಲೆ ಪ್ರಸನ್ನತೆ, ಕಡೆಗೆ ನಿರ್ವಾಣ, ಈ ಸ್ಥಿತಿಗಳು ಪ್ರಾಪ್ತವಾಗುವವು. ಇವೇ ಗುರುಲಿಂಗದೊಳಗಣ ಷಡ್ವಿಧಗಳು.

(೬) ಷಡ್ವಿಧ ಶಿವಲಿಂಗಃ— ಇವು ಕರಸ್ಥಲ, ನಯನಸ್ಥಲ, ಹೃದಯಸ್ಥಲ, ಮುಂತ್ರಸ್ಥಲ, ತ್ರಿಕೂಟಸ್ಥಲ, ಲಯಸ್ಥಲ ಎಂದು ಇರುತ್ತವೆ. ಶಿವಲಿಂಗವು ನಿರೀಕ್ಷಣ ಸ್ವರೂಪವಾದುದೆಂದು ಹೇಳಲ್ಪಡುತ್ತಿದೆ. ಇಲ್ಲಿ ಅವಧಾನ ಭಕ್ತಿ ಅಂದರೆ ಏಕಾಗ್ರಚಿತ್ತವು ಇದೆ. ಆದರೆ ಈ ಏಕಾಗ್ರಚಿತ್ತಕ್ಕೊಸ್ಕರ ಒಂದು ವಸ್ತುವು ಅವಶ್ಯವಾದುದು. ಈ ವಸ್ತುವು ಲಿಂಗವೇ ಆಗಿದ್ದು ಇದರ ಪ್ರಕಾಶಮಯವಾದ ನಿರೀಕ್ಷಣೆಗೋಸ್ಕರ ದೇಹದಲ್ಲಿ ಬೇರೆ ಬೇರೆ ಆರು ಸ್ಥಳಗಳಿರುತ್ತವೆ. ಅವು ಅನುಕ್ರಮವಾಗಿ ಇಲ್ಲಿ ಹೇಳಲ್ಪಟ್ಟಿವೆ. ಅವು ಯಾವವೆಂದರೆ—

R N. B. 2554

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] . ಎಪ್ರಿಲ ೧೯೩೧. [ಸಂಚಿಕೆ ೬

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ಶಿವದೀಕ್ಷೆ ಅಥವಾ ಲಿಂಗಧಾರಣೆ	ಶ್ರೀ. ಕಾನಕಾನಹಳ್ಳಿ ಬಸಪ್ಪ	೨೨೧
೨	ಲಿಂಗಧಾರಣ ಮತ್ತು ಶಿವದೀಕ್ಷೆ	ಶ್ರೀ. ಓರ್ವ ವೀರಶೈವ	೨೨೪
೩	ವೀರಶೈವರು ಹಿಂದುಗಳೇ?	ಶ್ರೀ. ಕಲ್ಯಾಣಪ್ಪ ಬ್ಯಾಳಿ	೨೨೮
೪	ಲಿಂಗಾಯತ ಸಮಾಜ ರಚನೆ	ಶ್ರೀ ಬ. ಚೆ. ಪಟ್ಟೇದ	೨೩೪
೫	ಬಸವೇಶ್ವರನಕ್ಕಿಂತಲೂ ಮೊದಲಿನ ವೀರಶೈವ ಧರ್ಮ	ರಾ ಬ ಪಿ. ಜಿ. ಹಳಕಟ್ಟಿ	೨೩೫
೬	ವೀರಶೈವ ಧ್ವಜ	ಶ್ರೀ. ಕೆ. ಡಿ. ಬ್ಯಾಳಿ	೨೬೨
೭	ಹರಿಹರನ ರಗಳೆಗಳು ಭಾಗ ೮	...	೨೬
೮	ಶಿವಾನುಭವ ಶಬ್ದಕೋಶ	ರಾ ಬ ಪಿ. ಜಿ. ಹಳಕಟ್ಟಿ	೨೧
೯	ಹರಳಯ್ಯನ ಚರಿತ್ರೆಯು	—	೧—೮

ಇದನ್ನು ವಿಜಾಪುರದಲ್ಲಿ ರಾ ಬ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಬಾಪಲೀಬುರಜ ಓಣಿಯಲ್ಲಿರುವ ತಮ್ಮ ೧೬೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

ಶಿವಾನುಭವ.

ವರ್ಷ ೧೫ | ಏಪ್ರಿಲ ೧೯೪೧. | ಸಂಚಿಕೆ ೭

ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ.

(ಲೇಖಕಃ— ಕಾನಕಾನಹಳ್ಳಿ ಬಸಪ್ಪ ಬೆಂಗಳೂರ ನಗರ.)

ಶಿವಾನುಭವದ ಜನವರಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀಮಾನ್ ಜೀರಗೆ ಕ. ಬಸವಪ್ಪ ಬಿ. ಎ. , ಅವರ "ಶಿವದೀಕ್ಷೆ ಅರ್ಥಾತ್ ಲಿಂಗ ಧಾರಣೆ" ಎಂಬ ಶೀರ್ಷಿಕೆಯ ವಿದ್ವತ್ ಹಾಗೂ ಅನುಭವ ಪೂರ್ಣವಾದ ಲೇಖನಕ್ಕೆ ಶ್ರೀಯುತ ಬಸವಪ್ಪ ಚೆನ್ನಪ್ಪ ಹಟ್ಟೀದ ವಂಟಮುರಿ ಎಂಬುವರು ಅದೇ ಪತ್ರಿಕೆಯ ಮಾರ್ಚ ತಿಂಗಳ ಸಂಚಿಕೆಯಲ್ಲಿ ಒಂದು ಟೀಕೆಯನ್ನು ಬರೆದಿವ್ವಾರೆ. ಶ್ರೀಯುತರು ವಿಚಾರವನ್ನು ವಿಮರ್ಶಿಸಲಿಕ್ಕೆ ಹೊರಟು ತಾವು ಶಾಸ್ತ್ರಕ್ಕೆ ವಿರುದ್ಧವಾದ ಕೆಲವು ನೂತನ ಸಂಶೋಧನೆಯನ್ನೇ ನಡೆಸಿದ್ದಾರೆ. ಅವುಗಳನ್ನು ಒಂದೊಂದಾಗಿ ಈ ಲೇಖನದಲ್ಲಿ ವಿಮರ್ಶಿಸಿವಾಡಿ ಅವುಗಳು ಎಷ್ಟರಮಟ್ಟಿಗೆ ಸಶಾಸ್ತ್ರೀಯವಾಗಿವೆ ಎಂಬುದನ್ನು ನಿರ್ಣಯಿಸುವದೇ ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ಶ್ರೀಯುತರು ತಮ್ಮ ಲೇಖನದಲ್ಲಿ "ಶ್ರೀಮಾನ್ ಜೀರಗೆಯವರು ನೂರೊಂದು ಸ್ಥಲಗಳಲ್ಲಿ ಲಿಂಗಧಾರಣವು ಐದನೆಯ ಸ್ಥಲವೆಂದೂ ಅದನ್ನು ವೀರಶೈವನು ಹೆಜ್ಜೆಯನ್ನಿಕ್ಕಿ ತನ್ನ ಜೀವನದಲ್ಲಿ ಅನುಸರಿಸಲೇಬೇಕೆಂದೂ ಹೇಳಿರುವದು ಯೋಗ್ಯವು. ಆದರೆ ಜನ್ಮಲಿಂಗಧಾರಣೆ ಹೊಂದಿದ ಕೂಸು ತತ್ಪೂರ್ವದ ನಾಲ್ಕು ಹೆಜ್ಜೆಗಳನ್ನು ಇಕ್ಕಿ ತಾನೇ ಆ ಸ್ಥಲಕ್ಕೆ ಬಂದಿರುವದೇ ?" ಎಂದು ಪ್ರಶ್ನಿಸಿದ್ದಾರೆ. ಶ್ರೀಮಾನ್ ಹಟ್ಟೀದ

ಅವಂಗೆ ಪಿಂಡೋತ್ಪತ್ತಿ, ಪಿಂಡದ ಬೆಳವಣಿಗೆ, ಪಿಂಡಜ್ಞಾನ, ಪಿಂಡಕ್ಕೆ ಹಿಂದಣ ಜನ್ಮದ ಸ್ಮರಣೆಯು ಬಂದು ಈಗ ಈ ಪ್ರಪಂಚಕ್ಕೆ ಏಕೆ ಇಳಿದು ಬಂದೆನಪ್ಪಾ ಎಂಬ ಸಂಸಾರ ಹೇಯ ಈ ವಿಚಾರಗಳ ಬಗ್ಗೆ ಶಾಸ್ತ್ರಗ್ರಂಥಗಳೂ ಅನುಭವಿಗಳ ವಾಕ್ಯಗಳೂ ಏನು ಹೇಳುತ್ತಿವೆ ಎಂಬುದು ವಿಶದವಾಗಿ ತಿಳಿದಂತೆ ಇಲ್ಲ; ಯಾವ ವೇದಾಂತ ಗ್ರಂಥವನ್ನು ತೆಗೆದುಕೊಂಡರೂ, ಯಾವ ಶಿವಶರಣರ ವಚನಗಳನ್ನು ತೆಗೆದುಕೊಂಡರೂ, ಯಾವ ಅನುಭವಿಗಳ ಹಾಡು, ತತ್ವ, ಗೀತೆ ಇವುಗಳನ್ನು ತೆಗೆದುಕೊಂಡರೂ ಶಿಶುವು ತಾಯ ಗರ್ಭದಲ್ಲಿ ಪಿಂಡಸ್ಥಲ, ಪಿಂಡಜ್ಞಾನ ಸ್ಥಲ, ಸಂಸಾರ ಹೇಯಸ್ಥಲ ಎಂಬ ಮೂರು ಸ್ಥಲಗಳಲ್ಲಿ ಹೆಜ್ಜೆಯನ್ನು ಇಟ್ಟೇ ಇಡುತ್ತದೆಂದು ನಿರ್ಣಯಿಸಿದ್ದಾರೆ. ಶ್ರೀ ಪಟ್ಟೇದ ಅವರಿಗೆ ಈ ವಿಚಾರದಲ್ಲಿ ಅನುಮಾನ ಬಂದರೆ ಆ ಎಲ್ಲ ಗ್ರಂಥಗಳನ್ನೂ ನೋಡಬಹುದು. ಇನ್ನು ವಯಸ್ಕರಾದ ಅಲಿಂಗಿಗಳಿಗೆ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯನ್ನು ನಡೆಸುವಾಗಲೂ ಸಹ ಅವರು ಹುಟ್ಟಿದ ಕಾಲವನ್ನಾಗಲಿ ಬಳೆವ ಕಾಲವನ್ನಾಗಲೀ ಗಣನೆಗೆ ತೆಗೆದುಕೊಳ್ಳುವದೇ ಇಲ್ಲ. ಶಿವದೀಕ್ಷಾಕಾಲದಲ್ಲಿಯೇ ಅವರು ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರ ಹೇಯಸ್ಥಲ ಎಂಬ ಮೂರು ಸ್ಥಲಗಳನ್ನು ತಾಯಗರ್ಭದಲ್ಲಿ ಹೇಗೆ ಶಿಶುವು ದಾಟುತ್ತದೋ ಹಾಗೆ ವಯಸ್ಕರಾದ ಅಲಿಂಗಿಗಳೂ ಸಹ ದಾಟಿದಂತೆ ಮಾಡಿ ಅಮೇಲೆ ಶ್ರೀಗುರುವಿನ ಕರಕಮಲದಲ್ಲಿ ಹೊಸಜನ್ಮವನ್ನು ಪಡೆದಂತೆ ಗಣಿಸಿ, ಅನಂತರ ಗುರುಕರುಣವನ್ನೆಸಗಿ, ಲಿಂಗಧಾರಣೆಯನ್ನು ಮಾಡಲಾಗುವದು ಎಂದ ಮೇಲೆ ಲಿಂಗಧಾರಿಗಳ ಹೊಟ್ಟೆಯಲ್ಲಿ ಹುಟ್ಟಿದ ಕೂಸಿಗೆ ಲಿಂಗಧಾರಣದ ಹೆಸರಿನಲ್ಲಿ ಮಾಡುವ ಕ್ರಿಯಾಚರಣೆಯೂ ಒಂದೇ. ವಯಸ್ಕರಾದ ಅಲಿಂಗಿಗಳಿಗೆ ಶಿವದೀಕ್ಷೆ ಹೆಸರಿನಿಂದ ಮಾಡುವ ಕ್ರಿಯಾಚರಣೆಯೂ ಒಂದೇ. ಇವೆರಡಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಶ್ರೀಮಾನ್ ಜೀರಗೆಯವರು ಈ ವಿಚಾರದಲ್ಲಿ ವಿವೇಚಿಸಿರುವುದು ನ್ಯಾಯವಾದುದೇ ಆಗಿದೆ.

ಇನ್ನು ಮುಂದೆ ಶ್ರೀಯುತ ಪಟ್ಟೇದ ಅವರು "ಭಕ್ತರಲ್ಲಿ ಬಹುಶಃ ಮುಗ್ಧಿದ್ದರೂ ಮಹೇಶ್ವರರಲ್ಲಿ ಜನ್ಮಸಂಸ್ಕಾರವಲ್ಲದೆ ಈಗಲಾದರೂ ಶಿವದೀಕ್ಷೆ ನಡದೇ ಅದೆ" ಎಂದು ಬರೆದಿದ್ದಾರೆ. ಭಕ್ತರು ಬೇರೆ, ಮಹೇಶ್ವರರು ಬೇರೆ, ಎಂತಲೂ, ಭಕ್ತರಿಗೆ ಲಿಂಗಧಾರಣೆ, ಮಹೇಶ್ವರರಿಗೆ ಶಿವ

ದೀಕ್ಷೆ ಎಂಬೂ ಒಂದು ವಿಚಿತ್ರವಾದ ವಿಂಗಡಿಕೆಯನ್ನು ಮಾಡಿದ್ದಾರೆ. ಭಕ್ತರು ಬೇರೆ ಮಹೇಶ್ವರರು ಬೇರೆ ಎಂದು ಯಾವ ವಚನಗ್ರಂಥಗಳಲ್ಲೂ ಕಂಡುಬರುವದಿಲ್ಲ. ಭಕ್ತ, ಮಹೇಶ್ವರ ಎಂಬುವು ಆರು ಸ್ಥಲಗಳಲ್ಲಿ ಸೇರಿದವು. ಪ್ರತಿಯೊಬ್ಬ ಲಿಂಗಧಾರಿಯೂ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳನ್ನು (ಮೆಲ್ಲಮೆಲ್ಲನೆ ಅಲ್ಲ) ಕುಳಿತಾಗ, ನಿಂತಾಗ, ಶಿವಪೂಜೆ ಮಾಡುವಾಗ, ಸದಾಕಾಲದಲ್ಲಿಯೂ ಎಡಬಿಡದೆ ಆಚರಿಸಬೇಕಾದ ಪವಿತ್ರ ಸ್ಥಲಗಳವು. ಅವುಗಳನ್ನು ಸ್ವಾರ್ಥಬುದ್ಧಿಯಿಂದ ಒಬ್ಬರಿಗೂ ಗೊತ್ತಿಲ್ಲದಂತೆ ತಮ್ಮತಮಗೆ ಹಂಚಿಕೊಳ್ಳುವದು ಶರಣಮಾರ್ಗವಲ್ಲ. ಇಲ್ಲಿ ಒಂದು ಮಾತು. ಹೀಗೆ ಹೇಳುವದರಿಂದ ಕೆಲವರು ತಮ್ಮ ಮಠಾಧಿಕಾರಗಳೂ ಮತ್ತೆ ವೀರಶೈವಸಮಾಜದವರು ಅರಿತ ಶಿವಾನುಭವಿಗಳಾದ ಕೆಲವಂಗೆ ಬೋಧೆ ಮಾಡಲು ಕೊಟ್ಟಿರುವ ಕೆಲವು ಹಕ್ಕುಗಳೂ ಕೈಬಿಟ್ಟು ಹೋಗಿಬಿಡುವವೆಂದು ಹೆದರಬೇಕಾದ ಅವಶ್ಯಕತೆಯಿಲ್ಲ. ಮಠಾಧಿಕಾರ ಮತ್ತು ಮೆಲ್ಕಂಡ ಇತರ ಹಕ್ಕುಗಳಿಗೂ ಈ ಷಟ್‌ಸ್ಥಲಕ್ಕೂ ಯಾವ ಸಂಬಂಧವೂ ಇಲ್ಲ. ಮಠಾಧಿಕಾರಿಗಳೂ ಸಹ ಷಟ್‌ಸ್ಥಲವನ್ನು ಬಿಡುವ ಹಾಗಿಲ್ಲ. ಎಂದ ಮೇಲೆ ಪಟ್ಟೇದ ಅವರು ಭಕ್ತರು, ಮಹೇಶ್ವರರು ಎಂದು ವಿಂಗಡಿಸಿರುವುದು ನ್ಯಾಯವಲ್ಲ.

ಇನ್ನು ಮುಂದೆ "ಈ ಜನ್ಮಲಿಂಗಧಾರಣೆಗೆ ಸಾಮಾನ್ಯ ಮಹೇಶ್ವರರೇ ಸಾಕು. ಆದರೆ ಶಿವದೀಕ್ಷೆಗೆ ವಿಶೇಷರೆಂದೆನಿಸುವ ಪಟ್ಟಚಾರಾಧಿಕಾರಿಗಳಲ್ಲದೆ ಸಾಗದು" ಎಂದು ಶ್ರೀ ಪಟ್ಟೇದ ಅವರು ಮತ್ತೊಂದು ಹೊಸ ಶೋಧನೆಯನ್ನು ಮಾಡಿದ್ದಾರೆ. ಮಾಹೇಶ್ವರರಲ್ಲಿ ಸಾಮಾನ್ಯರೆನ್ನುವರಾರು? ಪಟ್ಟಚಾರಾಧಿಕಾರಿಗಳಲ್ಲಿ ವಿಶೇಷರೆಂದೆನಿಸುವವರಾರು? ಇದು ಯಾವ ವಿಂಗಡಣೆ? ಲಿಂಗಧಾರಿಗಳ ಹೊಟ್ಟೆಯಲ್ಲಿ ಪರಿಶುದ್ಧವಾಗಿ ಹುಟ್ಟಿದ ಮಗುವಿಗೆ ಸಾಮಾನ್ಯ ಮಾಹೇಶ್ವರರು ಬಂದು, ಅನೇಕ ಜನ್ಮಗಳಿಂದಲೂ ಭವಿಗಳಾಗಿದ್ದು ಗುರುಕರುಣೆಯನ್ನು ಪಡೆಯಲಿಕ್ಕೆ ಬಂದ ವಯಸ್ಕ ಭವಿಗಳಿಗೆ ವಿಶೇಷರೇಕೆ? ಲಿಂಗಧಾರಿಗಳ ಹೊಟ್ಟೆಯಲ್ಲಿ ಹುಟ್ಟಿದ ಶಿಶುವು ಮಾಡಿದ ಪಾಪವೇನು? ಜನ್ಮಜನ್ಮಾಂತರದಿಂದಲೂ ಭವಿಯಾಗಿ ಬಳೆದು ಬಂದ ವಯಸ್ಕನು ಮಾಡಿದ ಪುಣ್ಯವೇನು? ಇದನ್ನು ಶ್ರೀ ಪಟ್ಟೇದ ಅವರು ವಿವರಿಸಿ ಹೇಳುವರೇ? ಮತ್ತೆ ಲಿಂಗ ಧಾರಣೆಯಲ್ಲಿ

ಜನ್ಮ ಸಂಸ್ಕಾರ ಅಥವಾ ಔಪಚಾರಿಕ ಲಿಂಗಧಾರಣೆ ಎಂತಲೂ ಶಿವ ದೀಕ್ಷೆ ಎಂತಲೂ ಏಂಗಡಿಸಿದ್ದಾರೆ. ಶಿವಶರಣರು ಎಂದಿಗೂ ಔಪಚಾರಿಕವಾಗಿ ಕಾರ್ಯಗಳನ್ನು ನಡೆಸಿದವರಲ್ಲ. ಅವರು ನಡೆದಂತೆ ನುಡಿದವರು, ನುಡಿದಂತೆ ನಡೆದವರು 'ಲಿಂಗ ಮುಟ್ಟಲೊಡನೆ ಶಿವಕುಲವಹುದು ತಪ್ಪದು' 'ಪರುಷ ಮುಟ್ಟಲೊತನೆ ಕಬ್ಬುನ ಹೊನ್ನಪ್ಪುದು ತಪ್ಪದು' ಎಂದು ಸಾರಿ ಲಿಂಗಧಾರಣ ಹೊಂದಿದ ಕೂಡಲೇ ಭವಿಯು ಭಕ್ತನಾಗಿ ಶಿವಸಮ್ಮಾನನಾಗುವನೆಂದು ಸಾರಿ ಸಾರಿ ಹೇಳಿ ಅದರಂತೆ ಕಾರ್ಯಗಳಿನ್ನು ನಡಿಸಿದ್ದಾರೆ. ಇಂಥದ್ದರಲ್ಲಿ ಲಿಂಗಧಾರವು ಔಪಚಾರಿಕವಾಗುವದೆಂತು? ಇದಕ್ಕೆ ಬಸವಣ್ಣನವರ ಕಾಲದಲ್ಲಿ ನಡೆದ ಒಂದು ಸಂದರ್ಭವನ್ನು ಇಲ್ಲಿ ಉದಹರಿಸಬಹುದಾಗಿದೆ:— ಒಮ್ಮೆ ಬಸವಣ್ಣನವರು ಗಣಪರ್ವವನ್ನು ನಡೆಸಿದ್ದರು. ಬಸವಣ್ಣನವರ ಮನೆಗೆ ಲಕ್ಷೋಪಲಕ್ಷ ಶಿವಶರಣರು ಶಿವಪೂಜೆಗೆ ದಯ ಮಾಡಿಸಿದ್ದರು. ಅವರೊಳಗೆ ನಿರ್ಗತಿಕರೂ ಬಡವರೂ, ಹೊಟ್ಟಿಗಿಲ್ಲದವರೂ ಆದ ನಾಲ್ಕು ಭವಿ ಜನರು ಬಸವಣ್ಣನವರ ಮನೆಯ ಭೋಜನದ ಆಸೆಯ ಮೇಲೆ ಬದನೆಕಾಯಿಗಳನ್ನು ವಸ್ತ್ರದಲ್ಲಿ ಲಿಂಗದಂತೆ ಕಟ್ಟಿಕೊಂಡು ಬಸವಣ್ಣನವರ ಮನೆಯೊಳಕ್ಕೆ ಬಂದರು. ಸ್ವಲ್ಪ ಹೊತ್ತಿನಲ್ಲಿಯೇ ಇವರು ಯಾರೆಂಬುದು ಬಸವಣ್ಣನವರಿಗೆ ತಿಳಿಯಿತು. ಬಸವಣ್ಣನವರು ತನ್ನ್ಮ ವಿಶಾಲ ಹೃದಯದಿಂದ ಅವರನ್ನು ಲಿಂಗಾಂಗಿಗಳನ್ನಾಗಿ ಮಾಡಬೇಕೆಂದು ಮನಸ್ಸು ಮಾಡಿ ಅವರ ಬಳಿಗೆ ಬಂದು ಅವರಿಗೆ ನಮಸ್ಕಾರವನ್ನು ಮಾಡಿ ಶಿವಪೂಜೆಯನ್ನು ಮಾಡಿಕೊಳ್ಳಬೇಕೆಂದು ವಿನ್ನೈಸಿಕೊಂಡರು. ಬಸವಣ್ಣನವರಂತಹ ಮಹಾಪದವೀಧರರೂ ಮಹಾವಿಭೂತಿಗಳೂ ಈ ರೀತಿಯಲ್ಲಿ ವಿನಯದಿಂದ ವರ್ತಿಸಿದುದಕ್ಕೆ ಆ ಭವಿಗಳು ಜಜ್ಜನೆ ಜರಿದು ಅವರಲ್ಲಿ ಶಿವಭಕ್ತಿಯು ಅಗಲೇ ಅಂಕುರಿಸಿ ಗುರು ಕರುಣವು ಅಗಲೇ ಆಗಿ ಅವರು ಬಸವಣ್ಣನವರ ಪಾದಕ್ಕೆ ಬಿದ್ದು ಕಾವಾಡು ಬಸವಣ್ಣ, ಕ್ಷಮಿಸು ಬಸವಣ್ಣ, ನಮ್ಮನ್ನು ಪುನೀತರನ್ನಾಗಿ ಮಾಡು ಬಸವಣ್ಣ ಎಂಬುದಾಗಿ ಹಂಬಲಿಸಿದರು. ಆಗಲೇ ಅವರಿಗೆ ಬಸವಣ್ಣನವರು ಲಿಂಗಧಾರಣೆಯನ್ನು ಮಾಡಿಸಿ ಅವರನ್ನು ಪುನೀತರನ್ನಾಗಿ ಮಾಡಿದರು. ಇದು ಬಸವಣ್ಣವರ ಮತ್ತು ಶಿವಶರಣರ ನಿಜವಾದ ಸರಳ ಆಚರಣೆ. ಇದೇ ಶಿವಭಕ್ತಿ ಮಾರ್ಗ. ಇದೇ ಷಟ್‌ಸ್ಥಲ ಪಥ. ಈ ಕಾರಣದಿಂದ ಲಿಂಗಧಾರಣವು ಔಪಚಾರಿಕವಾಗಿರುವುದು ಎಂದು ಹೇಳುವುದು ಶಿವಶರಣ ಮಾರ್ಗಕ್ಕೆ ವಿರುದ್ಧ.

ಮುಂದೆ ಶ್ರೀಯುತ ಪಟ್ಟೇದ ಅವರು "ಶ್ರೀಮಾನ್ ಜೀರಗೆಯವರು ಬರೆದಂತೆ ಲಿಂಗವಂತರ ಕೂಸು ಬೆಳೆಯುವತ್ತಿದಂತೆಲ್ಲ ಮನೆಯಲ್ಲಿ ನೋಡಿ ಅನುಕರಣದಿಂದ ತನ್ನ ದೇಹದ ಮೇಲೆ ಧರಿಸಿರುವ ಲಿಂಗದ ಕಲ್ಪನೆಯನ್ನು ಪಡೆದು ಅದನ್ನು ಪೂಜಿಸುತ್ತ ಹೋಗುತ್ತದೆಂಬುದಾದರೂ ಒಪ್ಪುವಂತಹ ಮಾತು. ಮನೆಯ ಹಿರಿಯರು ಲಿಂಗ ಮಾರ್ಗವನ್ನು ಅರಿತು ಆಚರಿಸುವವರಿದ್ದರೆ ಈ ಅನುಕರಣವು ತುಸು ಮಟ್ಟಿಗೆ ಪಥ್ಯಕರವಾಗಬಹುದು. ಅವರು ಅರಿಯದವರಿದ್ದರೆ ಹುಡುಗರಾದರೂ ಅದನ್ನೇ ಅನುಕರಿಸುವರು. ಈ ಅನುಕರಣವು ಯಾವಾಗಲೂ ಗುಣಕಾರಿಯೆಂದೇ ಹೇಳುವುದಕ್ಕಾಗುವದಿಲ್ಲ" ಎಂದು ಹೇಳಿದ್ದಾರೆ. ಇದು ಆಶ್ಚರ್ಯಕರವಾದ ಮಾತು. ಮನೆಯ ಹಿರಿಯರು ಲಿಂಗವಂತರಾಗಿ ಲಿಂಗ ಮಾರ್ಗವನ್ನು ತಿಳಿಯದಿದ್ದರೆ ಅವರೆಂತಹ ಲಿಂಗಾಯತರು? ಎಂತಹ ದಡ್ಡ ವೀರಶೈವನಾದರೂ ಲಿಂಗಪೂಜೆಯನ್ನು ಮಾಡತಕ್ಕ ಕ್ರಮವನ್ನು ತಿಳಿದುಕೊಂಡೇ ಇರುವನು. ನಾನು ಈ ಪ್ರಾಂತದಲ್ಲಿ ಅನೇಕ ಕಡೆ ಸಂಚರಿಸಿದ್ದೇನೆ. ಲಿಂಗಾಯತರಿಗೆ ವಚನಗಳು ತಿಳಿಯದಿದ್ದರೂ, ಶಿವಾನುಭವವು ಅಷ್ಟಾಗಿ ಗೊತ್ತಾಗದಿದ್ದರೂ, ಲಿಂಗ ಪೂಜೆಯನ್ನು ಶುಚಿರ್ಭೂತರಾಗಿ ಅಚ್ಚುಕಟ್ಟಾಗಿ, ಸಾರಣೆ ಕಾರಣೆಯಿಂದ ಅಲಂಕೃತವಾದ ಪ್ರತ್ಯೇಕ ದೇವರ ಮನೆಗಳಲ್ಲಿ ನಡೆಸುತ್ತಾರೆ. ಲಿಂಗಾನುಸಂಧಾನವನ್ನೂ ಸಹಜೆನ್ನಾಗಿ ಮಾಡುತ್ತಾರೆ. ಇಷ್ಟೇ ಅಲ್ಲ ಲಿಂಗ ಮುಖ ಜಂಗಮ ಎಂಬ ತತ್ವವು ಅವರಿಗೆ ತಿಳಿಯದಿದ್ದರೂ ಊರಿಗೆ ಬಂದ ಲಿಂಗವಂತರನ್ನು ಮನೆಮನೆಗೆ ಹಂಚಿಕೊಳ್ಳುತ್ತಾರೆ. "ಎರೆದರೆ ನೆನೆಯದು. ಮರೆದರೆ ಜಾಡದು. ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ ಕೂಡಲಸಂಗಮದೇವ, ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು" ಎಂಬ ಬಸವಣ್ಣನವರ ವಚನವನ್ನು ಅವರು ಸಂಪೂರ್ಣ ಕಾರ್ಯ ರೂಪದಲ್ಲಿ ನಡೆಸುತ್ತಾರೆ. ಇದಕ್ಕಿಂತಲೂ ಹೆಚ್ಚಾದ ಲಿಂಗಮಾರ್ಗವಿದೆಯೇ? ಎಂದ ಮೇಲೆ ಮಗುವಿನ ಅನುಕರಣವು ಪಥ್ಯವಾಗುವುದಿಲ್ಲವೇ? ಒಂದು ವೇಳೆ ಶ್ರೀ ಪಟ್ಟೇದ ಅವರು ಹೇಳುವಂತೆ ತಂದೆ ತಾಯಿಗಳು ಲಿಂಗಮಾರ್ಗವನ್ನು ಆಚರಿಸುವವರಲ್ಲದಿದ್ದರೆ ಅವರು ಲಿಂಗವಂತ ಪಥಕ್ಕೇ ಸಲ್ಲರು. ಅವರು ಲಿಂಗಾಯತರೇ ಅಲ್ಲ. ಅವರ ಮಾತು ನಮಗೆ ಬೇಡವೇ ಬೇಡ.

ಇನ್ನು ಮುಂದೆ ಇದೇ ಪ್ರಬಂಧದಲ್ಲಿ ಅವರು ಹಲವು ಹೇಳಿಕೆಗಳನ್ನು ಮಾಡಿದ್ದಾರೆ. ಅವುಗಳು ಒಂದಕ್ಕೊಂದು ಸಮಂಜಸವಾಗುವುದಿಲ್ಲ. ಅವು

ಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಉದಹರಿಸುವೆನು. "ನೀನು ಧರಿಸಿದ ಲಿಂಗವು ದೇವರು. ಎಲ್ಲರೂ ಅವನಿಂದಲೇ ಹುಟ್ಟಿದ್ದಾರೆ. ನಮಗೆ ಸುಖದುಃಖಗಳೆಲ್ಲವೂ ಅವನಿಂದಲೇ ಪ್ರಾಪ್ತಿಸುತ್ತವೆ. ಆದ್ದರಿಂದಲೇ ಅವನನ್ನು ಪೂಜಿಸಬೇಕು" ಎಂದು ಹೇಳಿ ಇವುಗಳೇ ಕ್ರಮವಾಗಿ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರ ಹೇಯಸ್ಥಲ ಎಂದು ಹೇಳಿದ್ದಾರೆ. ಶ್ರೀಯುತ ಪಟ್ಟೇದ ಅವರು ಈ ಅರ್ಥವನ್ನು ಯಾವ ಗ್ರಂಥದಲ್ಲಿ ಶೋಧಿಸಿ ನೋಡಿದರೋ ಗೊತ್ತಾಗಲಿಲ್ಲ. "ಉದಕದೊಳಗೆ ಬೈಚಿಟ್ಟ ಬಿಲುಕೆಯು ಕಿಚ್ಚಿನಂತಿದ್ದಿತ್ತು. ಕಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲಸಂಗಮದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು" ಎಂದು ಬಸವಣ್ಣನವರು ಹಾಡಿ ದೇವರ ನಿಲವನ್ನು ವರ್ಣಿಸಿ ಪಿಂಡಸ್ಥಲವನ್ನು ಸೂಚಿಸಿದ್ದಾರೆ. ನೀನು ಧರಿಸಿದ ಲಿಂಗವು ದೇವರು ಎಂದು ಹೇಳುವುದು ಪಿಂಡಸ್ಥಲವಲ್ಲ. ಯಾಕೆಂದರೆ ಪಿಂಡಸ್ಥಲದ ಕಾಲದಲ್ಲಿ ಲಿಂಗಧಾರಣವೇ ನಡೆದಿರುವುದಿಲ್ಲ. ಲಿಂಗಧಾರಣವಾಗುವುದು ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಈ ಸ್ಥಲಗಳು ಆದ ಮೇಲೆ. ಇನ್ನು 'ಎಲ್ಲರೂ ಅವನಿಂದಲೇ ಹುಟ್ಟಿದ್ದಾರೆ' ಎಂಬುದೇ ಪಿಂಡಜ್ಞಾನಸ್ಥಲವೆಂದು ಶ್ರೀ ಪಟ್ಟೇದ ಅವರು ಪ್ರತಿಪಾದಿಸಿದ್ದಾರೆ. ಇದು ಅತ್ಯಾಶ್ಚರ್ಯಕರವಾಗಿದೆ. ಆದರೆ ಪಿಂಡಜ್ಞಾನಸ್ಥಲದ ಲಕ್ಷಣ ಇದಲ್ಲ. ಆತ್ಮನು ಬಹು ಪುರಾತನನು. ಪರಮಾತ್ಮನಾದ ದೇವರಿಗಿಂತಲೂ ಹಳೆಯನು ಎಂದು ಹೇಳುವ (Immortality of the soul) ಎಂಬ ಆತ್ಮನ ಅಮರತ್ವದ ಅರಿವೇ ಪಿಂಡ ಜ್ಞಾನ ಸ್ಥಲದ ಅರಿವು. ಸಾಕ್ಷಿ – "ಕಾಳಿಯ ಕಂಕಾಳದಿಂದ ಮುನ್ನ, ತ್ರಿಪುರಸಂಹಾರದಿಂದ ಮುನ್ನ, ಹರಿವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನ, ಮುನ್ನ, ಅಂದಿಂಗೆಳೆಯ ನೀನು ಹಳೆಯ ನಾನು ಮಹಾದಾನಿಕೂಡಲಸಂಗಮದೇವಾ" ಇದೀಗ ಪಿಂಡಜ್ಞಾನಸ್ಥಲದ ನಿಜವಾದ ಲಕ್ಷಣ. ಇನ್ನು 'ನಮಗೆ ಸುಖದುಃಖಗಳೆಲ್ಲ ಅವನಿಂದಲೇ ಪ್ರಾಪ್ತಿಸುತ್ತವೆ. ಆದಕಾರಣ ಅವನನ್ನು ಪೂಜಿಸಬೇಕು' ಇದೇ ಸಂಸಾರ ಹೇಯಸ್ಥಲವೆಂದು ಶ್ರೀಪಟ್ಟೇದ ಅವರು ವರ್ಣಿಸಿದ್ದಾರೆ. ಶಿವಶರಣರು ಸುಖದುಃಖಗಳಿಗೆ ದೇವರು ಕಾರಣನೆಂದು ಹೇಳುವುದಿಲ್ಲ. ಅವಕ್ಕೆ ನಾವೇ ಕಾರಣರೆಂದು ಹೇಳುತ್ತಾರೆ, "ಹೊಯ್ದರೆ ಹೊಯ್ಗಳು

ಕೈಮೇಲೆ. ಒಯ್ದರೆ ಬಯ್ಗಳು ಕೈಮೇಲೆ ..... ಕೂಡಲಸಂಗಮದೇವಯ್ಯ ನಿಮ್ಮ ಪೂಜಿಸಿದ ಫಲವು ಕೈಮೇಲೆ" ಎಂದು ಹೇಳಿ ನಾವು ಮಾಡಿದ ಕರ್ಮಕ್ಕೆ ನಾವು ತಕ್ಕ ಪ್ರತಿಫಲವನ್ನು ಹೊಂದುತ್ತೇವೆಂದು ಹೇಳಿದ್ದಾರೆ. "ಎಲಪೋ ಎಂದರೆ ನರಕ, ಅಯ್ಯಾ ಎಂದರೆ ಸ್ವರ್ಗ" ಎಂದು ಹೇಳಿ ಕೇವಲ ಮಾತುಗಳಲ್ಲಿಯೇ ಹೆಚ್ಚು ಕಡಿಮೆಯಾದರೂ ಅದಕ್ಕೆ ತಕ್ಕ ಪ್ರತಿಫಲ ನಮಗೆ ದೊರೆಯುತ್ತದೆಂದು ಹೇಳಿ "ಹೊತ್ತು ಹೋಗದ ಮುನ್ನ ಮೃತ್ಯು ಒಯ್ಯದ ಮುನ್ನ ತೊತ್ತು ಗೆಲಸವ ಮಾಡು" ಎಂದರೆ ಸಾಯುವದರೊಳಗಾಗಿ ಉಪಕಾರಕವಾದ ಜೀವನವನ್ನು ನಡೆಸಬೇಕೆಂದು ಶಿವಶರಣರು ಸಾರಿದ್ದಾರೆ. ಅವರೆಂದಿಗೂ ಸುಖದುಃಖಗಳಿಗೆ ದೇವರನ್ನು ಹೊಣೆಯನ್ನಾಗಿ ಮಾಡಿ ಹಣೆಯ ಮೇಲೆ ಕೈಯಿಟ್ಟುಕೊಂಡು ಸೋಮಾರಿಯಾಗಿ ಕೂತುಕೋ ಎಂದು ಹೇಳಿಲ್ಲ. ಶಿವಶರಣರು ದೇವರನ್ನು ಭಯದಿಂದ ಪೂಜಿಸಿದವರಲ್ಲ. ಹಿಂದೆ ವೇದಗಳ ಕಾಲದಲ್ಲಿ ಗುಡುಗು, ಮಿಂಚು, ಮಳೆ, ಬಿಸಿಲು, ಅಗ್ನಿ ಪರ್ವತಗಳ ಅನಾಹುತ, ಇವುಗಳಿಗೆ ನಿಜವಾದ ಕಾರಣಗಳು ಗೊತ್ತಿಲ್ಲದೆ ದೇವರು ಜನರ ಮೇಲೆ ಕೋಪಿಸಿಕೊಂಡು ಸೇಡು ತೀರಿಸಿಕೊಳ್ಳುತ್ತಿದ್ದಾನೆಂದು ಭ್ರಾಂತಿಪಟ್ಟು ವೇದ ಕಾಲದ ಜನರು ಭಯದಿಂದ ಪಂಚಭೂತಗಳನ್ನು ಉಪಾಸಿಸಲಿಕ್ಕೆ ಹತ್ತಿದರು. ಶಿವಶರಣರು ಎಂದಿಗೂ ಅಂತಹ ದಡ್ಡರಲ್ಲ. ಅವರು ಪ್ರಪಂಚದ ಉತ್ಪತ್ತಿಯ, ಪ್ರಪಂಚದ ಸ್ಥಿತಿಯ, ಪ್ರಪಂಚದ ಲಯದ ನಿಜವಾದ ಅರ್ಥವನ್ನೂ, ದೇವರ ನಿಜವಾದ ಸ್ವರೂಪವನ್ನೂ, ಶಕ್ತಿಯನ್ನೂ ಅವರು ಮನಗಂಡರು. ಇಂಥಾದ್ದರಲ್ಲಿ ದೇವರು ಸುಖದುಃಖಗಳಿಗೆ ಕಾರಣನಾದುದರಿಂದ ಅವನನ್ನು ಪೂಜಿಸಬೇಕೆಂಬುದು ವೀರಶೈವ ಲಕ್ಷಣವಲ್ಲ. ಈಗಿನ ವಾನಸಿಕ ಶಾಸ್ತ್ರಜ್ಞರೂ ಕೂಡ ಭಯದಿಂದ ಯಾವುದಕ್ಕೂ ತಲೆತಗ್ಗಿಸುವುದು ಮಾನವನ ಪ್ರಗತಿಗೆ ಕಳಂಕವೆಂದು ಸಾರಿದ್ದಾರೆ. ಬಸವಣ್ಣನವರ ವಚನವನ್ನು ಕೇಳಿ "ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯ ಎರಡಾಳಿನ ಭಾಷೆಯ. ಕೊಲುವೆನೆಂಬ ಭಾಷೆ ದೇವನದು. ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೆ ಕಳಿದುಕೊಂಡು ಸಚ್ಚಕ್ತರು ಗೆದ್ದರು ಕಾಣಾ ಕೂಡಲಸಂಗಮದೇವ" ಎಂದು ಎದೆ ತಟ್ಟಿ ವೀರಶೈವತ್ವದ ವೀರತನವನ್ನು ವರ್ಣಿಸಿದ್ದಾರೆ. ಇನ್ನು ಸಂಸಾರ ಹೇಯಸ್ಥಲವೆಂದರೇನು? ಪ್ರಪಂಚದಲ್ಲಿ ಸುಖ ದುಃಖಗಳು ಮಿಳ

ತವಾಗಿವೆ. ಹುಟ್ಟಿದ ಮೇಲೆ ಸಾವುದು ತಪ್ಪದು. ಈ ದೇಹವು ಶಾಶ್ವತವಾದುದಲ್ಲ. ಭವಕ್ಕೆ ಬಂದು ಮಾನವನು ಕಷ್ಟಪಡಬೇಕಾಗಿದೆ ಎಂಬವೇ ಮೊದಲಾದ ವಿಚಾರಗಳೇ ಸಂಸಾರ ಹೇಯ. ಈ ಸಂಸಾರ ಹೇಯ ಜ್ಞಾನವು ಬಾರದಿದ್ದರೆ ಮಾನವನಿಗೆ ಪ್ರಗತಿ ಇಲ್ಲ. ಉಪಕಾರ ಮಾಡುವ ಬುದ್ಧಿಯೂ ಬರುವದಿಲ್ಲ. ಆದುದರಿಂದ ಸಂಸಾರ ಹೇಯ ಹುಟ್ಟಬೇಕು. ಹಾಗೆ ಹುಟ್ಟಿದರೆ ಅವನು ಸಾತ್ವಿಕನಾಗುವನು. ಗುರು ಕರಣಕ್ಕೆ ಯೋಗ್ಯನಾಗುವನು.

ಇನ್ನು ಮುಂದೆ ಶ್ರೀ ಪಟ್ಟೇದ ಅವರು "ಯೋಗ್ಯ ಗುರುವನ್ನೇ ಹಿಂಬಾಲಿಸುವುದು ಎಹಿತ" ಎಂದು ಬರೆದಿದ್ದಾರೆ. ಇಲ್ಲಿ ಯೋಗ್ಯ ಗುರು ಗಳನ್ನು ಕಂಡು ಹಿಡಿಯುವುದೆಂತು? ಅವರ ಮುಖವನ್ನು ನೋಡಿಯೋ? ಅವರ ಕುಲವನ್ನು ನೋಡಿಯೋ? ಯಾವುದನ್ನು ನೋಡಿ? "ಲಾಂಛನಕ್ಕೆ ಶರಣೆಂಬೆ. ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ಛೀ ಎಂಬೆ" ಎಂಬ ಮಂತ್ರವನ್ನು ಬಸವಣ್ಣನವರು ಹೇಳಿಕೊಟ್ಟಿರುವಾಗ್ಗೆ ಭಯವೇನು? ಗುರುವು ಯೋಗ್ಯನೇ ಯೋಗ್ಯನಲ್ಲವೇ ಎಂಬುದನ್ನು ವಿಚಾರಿಸಲು ಶ್ರಮ ಪಡುವುದು ಯಾವ ಗ್ರಹಚಾರ? ಗುರುವು ಒಳ್ಳೆಯವನಾಗಿದ್ದರೆ ಸರಿ ಎನ್ನುತ್ತೇವೆ. ಕೆಟ್ಟವನಾಗಿದ್ದರೆ ಛೀ ಎನ್ನುತ್ತೇವೆ ಅಷ್ಟೆ. ಇನ್ನು ಲಿಂಗ ಧಾರಿಯಾದವನು ಭವಿಗೆ ಲಿಂಗವನ್ನು ಕಟ್ಟುವುದಕ್ಕೆ ಬರುವುದಿಲ್ಲವೇ? ಲಿಂಗವನ್ನು ಕಟ್ಟಿ ಉಪದೇಶವನ್ನು ಮಾಡುವಾಗ್ಗೆ ಅವನು ಗುರುಸ್ಥ ಲಕ್ಕೆ ಏರುವುದಿಲ್ಲವೇ? ಚನ್ನಬಸವಣ್ಣನವರಿಗೆ ಲಿಂಗವನ್ನು ಧರಿಸಿದ ಬಸವಣ್ಣನು ಯಾವ ಸ್ಥಲದಲ್ಲಿ ನಿಂತು ಲಿಂಗವನ್ನು ಧರಿಸಿದ? ಬಸವ ಣ್ಣನು ಶರಣಕೋಟಿಯಲ್ಲಿ ಏಕೈಕ ಭಕ್ತನಾದರೂ ಗುರುಸ್ಥಲದಲ್ಲಿ ನಿಂತು ಚನ್ನಬಸವಣ್ಣನವರಿಗೆ ಲಿಂಗವನ್ನು ಅನುಗ್ರಹಿಸಲಿಲ್ಲವೇ?

ಇನ್ನು ಮುಂದೆ ಹುಟ್ಟಿದ ಕೂಸಿಗೆ ಶ್ರೀಗುರುವು ಬಂದು ಹಸ್ತ ಮಸ್ತಕ ಸಂಯೋಗ ಮಾಡಿ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಕರ್ಣ ದಲ್ಲಿ ಮಂತ್ರವನ್ನುಪದೇಶಿಸಿ ಲಿಂಗವನ್ನು ಧಾರಣೆಮಾಡಿ ಅಷ್ಟಾವರಣ ಸಮ್ಮಂಧವನ್ನು ಮಾಡಿಕೊಡುವನು ಎಂದು ಶ್ರೀ ಜೀರಗೆಯವರು ಹೇಳಿದರೆ ಶ್ರೀ ಪಟ್ಟೇದ ಅವರು ಇದು ಲಿಂಗಧಾರಣವಲ್ಲ ಲಿಂಗ ಮುದ್ರೆ ಎಂದು ಪ್ರತಿಪಾದಿಸಿದ್ದಾರೆ. ಹಂಸ ಬೆಳ್ಳಗಿದೆ ಎಂದರೆ ಇಲ್ಲ ಕಪ್ಪಗಿದೆ ಎಂದು ಹೇಳಿದಹಾಗಾಯಿತು. ಲಿಂಗಮುದ್ರೆಯೆಂದರೇನು? ಲಿಂಗ ಮುದ್ರೆಯನ್ನು

ಒತ್ತುವುದೆಂತು? ಯಾರಿಗೆ ಒತ್ತುವರು? ಇದು ಯಾವ ಕಾಲದಲ್ಲಿ ರೂಢಿಗೆ ಬಂತು? ಇವನ್ನು ಶ್ರೀ ಪಟ್ಟೇದ ಅವರು ಪರಿಶೋಧಿಸುವರೇ? ಲಿಂಗ ಮುದ್ರೆಯೆಂದರೆ ಲಿಂಗದ ಚಿತ್ರವುಳ್ಳ ಈಗಿನ ರಬ್ಬರು ಸ್ಟಾಪಿನಂತಹ ಒಂದು ಮುದ್ರೆ. ಇದನ್ನು ಹಿಂದಿನ ಕಾಲದಲ್ಲಿ ಶೈವರು ತಮ್ಮ ಶೈವದ ಪ್ರತಿಭೆಯನ್ನು ತೋರಿಸುವುದಕ್ಕೋಸ್ಕರ ಚತುಷ್ಪಾದ ಪ್ರಾಣಿಗಳಿಗೂ, ಜಡವಸ್ತುಗಳಿಗೂ, ಮನೆ, ಭೂಮಿ, ಗಿಡ, ಗೆಂಟೆ, ಇವುಗಳಿಗೂ ಈ ಆಸ್ತಿಗಳು ಶೈವರಿಗೆ ಸೇರಿದವು ಎಂದು ತೋರಿಸುವುದಕ್ಕೋಸ್ಕರ ಮುದ್ರೆ ಯನ್ನು ಜೆನ್ನಾಗಿ ಕಾಸಿ ಪ್ರಾಣಿಗಳ ಮೇಲೆ ಬರೆ ಹಾಕಿದಂತೆ ಹಾಕುತ್ತಿ ದ್ದರು. ಮತ್ತು ಬೇರೆ ಬೇರೆ ರೀತಿಯಲ್ಲಿ ಜಡವಸ್ತುಗಳ ಮೇಲೂ ಲಿಂಗ ಮುದ್ರೆಯನ್ನು ಒತ್ತುತ್ತಿದ್ದರು. ಆದರೆ ಶ್ರೀ ಪಟ್ಟೇದ ಅವರು ಹೇಳುವಂತೆ ಲಿಂಗವಂತರ ಹೊಟ್ಟೆಯಲ್ಲಿ ಹುಟ್ಟಿದ ಕೂಸಿಗೆ ಲಿಂಗ ಮುದ್ರೆಯನ್ನು ಹಾಕಬೇಕಾದರೆ ಮುದ್ರೆಯನ್ನು ಜೆನ್ನಾಗಿ ಕಾಸಿಯೇ ಲಿಂಗದ ಆಕಾರ ಮಗುವಿನ ಮೈಮೇಲೆ ಕಾಣುವಂತೆ ಒತ್ತಬೇಕಾಗುತ್ತದೆ. ಅಯ್ಯೋ! ಇದೆಂತಹ ಹುಚ್ಚ! ಇದೆಂತಹ ಅನ್ಯಾಯ! ಲಿಂಗಧಾರಣವು ಲಿಂಗ ಮುದ್ರೆ ಎಂಬ ಮಾತನ್ನು ನಾನು ಇದು ವರೆಗೂ ಯಾವ ವಚನದಲ್ಲಾ ಗಲಿ, ಆಗಮಗಳಲ್ಲಾಗಲಿ, ಸ್ವತಂತ್ರ ಸಂಸ್ಕೃತ ಗ್ರಂಥಗಳಲ್ಲಾಗಲಿ, ಸ್ವತಂತ್ರ ಕನ್ನಡ ಗ್ರಂಥಗಳಲ್ಲಾಗಲಿ ಕೇಳಿರುವುದಿಲ್ಲ.

ಇನ್ನು ಮುಂದೆ ಶ್ರೀ ಪಟ್ಟೇದ ಅವರು 'ಮಗುವಿಗೆ ಲಿಂಗಧಾರಣ ಮಾಡುವುದಕ್ಕೆ ಮಗುವು ಅನನುಭವಿಯಾಗಿರುತ್ತದೆ. ಅದಕ್ಕೆ ಅನು ಭದ ಬೆಂಬಲವಿಲ್ಲ" ಎಂದು ಹೇಳಿದ್ದಾರೆ. ಅನುಭವ ಎಂದರೇನು? ಇದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಬುದ್ಧಿ ಅಥವಾ ಜ್ಞಾನ ಎಂದರೇನು ಎಂಬುದನ್ನು ತಿಳಿದಾಗಲೇ ನಮಗೆ ಮಗುವಿನ ಲಿಂಗಧಾರಣೆಯ ಒಳತತ್ವವು ಅರ್ಥವಾಗುತ್ತದೆ. ಅನುಭವವು ಹುಟ್ಟು ತ್ತಲೇ ಬರುವುದಿಲ್ಲ. ಅದು ಬೆಳ ಬೆಳದಂತೆಲ್ಲ ಮನುಷ್ಯನು ಮಾಡುವ ಕ್ರಿಯಾಚರಣೆಗಳಿಗನುಸಾರವಾಗಿ ವೃದ್ಧಿಯಾಗುತ್ತ ಹೋಗುತ್ತದೆ. ಆದರೆ ಬುದ್ಧಿ ಅಥವಾ ಜ್ಞಾನವು ಹುಟ್ಟುತ್ತಲೇ ಬರುತ್ತದೆ. ಅದು ಸದಾ ಆತ್ಮನಿಗೆ ಪಂಬೋಧೆಯನ್ನು ಮಾಡುತ್ತಿರುತ್ತದೆ. ಈ ಕಾರಣದಿಂದಲೇ ಶಿಶುದಿಶೆಯಲ್ಲಿ ಲಿಂಗಧಾರಣವನ್ನು ಮಾಡಿ ಶಿಶುವಿನ ಇಷ್ಟ ಪ್ರಾಣ ಭಾವ ಎಂಬ ಲಿಂಗಗಳನ್ನು ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಗೆ ಸಂಬಂ

ಧವನ್ನು ಮಾಡಿ ಶಿಶುವಿನ ಜ್ಞಾನವು ಒಂದು ಹಾದಿಯಲ್ಲಿ ಹೋಗುವಂತೆ ಮಾಡಲಾಗುವುದು. ಶಿಶುವು ಬೆಳೆದು ವಯಸ್ಕನಾದ ಮೇಲೆ ಅವನಿಗೆ ಅನುಭವವು ಬಂದಿರುವುದೆಂದು ಶ್ರೀ ಪಟ್ಟೇದ ಅವರು ಹೇಳುತ್ತಾರೆ. ಅವನಿಗೆ ಬಂದಿರುವ ಅನುಭವವು ಎಂತಹದೆಂದು ಅವರಿಗೆ ಗೊತ್ತಿರುವುದೇ? ಅವನಿಗೆ ಬಂದಿರುವ ಅನುಭವ ಬೀದಿಯಲ್ಲಿ ಹುಡುಗರ ಜತೆಗೆ ಗೋಲಿ ಗಜ್ಜಗಗಳನ್ನಾಡುವುದು. ಒಂದೊಂದು ವೇಳೆ ಮಠಕ್ಕೆ ಹೋಗದೆ ಚಕ್ಕರ್ ಕೊಡುವುದು. ಕೈಲಿ ಕಾಸಿಲ್ಲದಿದ್ದರೆ ಅಪ್ಪನ ಜೇಬಿಗೆ ಕೈ ಹಾಕಿ ಕಾಸನ್ನು ತೆಗೆದುಕೊಂಡು ತಿಂಡಿ ತೆಗೆದುಕೊಂಡು ತಿನ್ನುವುದು. ಈ ಅನುಭವಗಳೇ ಜೀನ್ಸಾಗಿ ಬಂದಿರುತ್ತವೆ. ಈ ಅನುಭವ ಶಿವದೀಕ್ಷೆಗೆ ಹೇಗೆ ಸಹಕಾರಿಯಾಗುವುದು? ಆದರೆ ಮಗುವಿಗೆ ಚಿಕ್ಕ ವಯಸ್ಸಿನಲ್ಲಿ ಲಿಂಗಧಾರಣೆ ಮಾಡಿ ಅದು ಲಿಂಗವಂತ ತಾಯಿ ತಂದೆಗಳ, ಬಂಧುಗಳ ಜೊತೆಯಲ್ಲಿ ಬಳೆದು ಶಿವ ಮಾರ್ಗವನ್ನು ಜೀನ್ಸಾಗಿ ಅನುಕರಣ ಮಾಡಿದರೆ ಮುಂದಕ್ಕೆ ಒಳ್ಳೆ ಶಿವಭಕ್ತಿ ಸಂಪನ್ನನೂ, ಷಟ್‌ಸ್ಥಲ ಆಚಾರ ಸ್ಥನೂ ಆಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ವಿಚಾರದಲ್ಲಿ ಶ್ರೀಮಾನ್ ಜೀರಗೆಯವರು ಹೇಳುವುದು ಸತ್ಯವಾದುದು.

ಇನ್ನು "ಜನ್ಮ ಸಂಸ್ಕಾರವು (ಶಿಶುವಿನ ಲಿಂಗಧಾರಣೆಯು) ವಿವಾಹ ಪೂರ್ವದಲ್ಲಿ ಕನ್ಯಾ ನಿಶ್ಚಯ ಮಾಡುವ ವಿಧಾನದಂತೆ ಇರುವುದೆಂದು ಒಪ್ಪಬಹುದೇ ವಿನಾ ಅದೇ ಶಿವದೀಕ್ಷೆ ಎಂದೆಣಿಸಕೂಡದು." ಎಂದು ಶ್ರೀ ಪಟ್ಟೇದ ಅವರು ಸೂಡಿದ್ದಾರೆ. ಶಿಶುವಿನ ಲಿಂಗಧಾರಣೆಯನ್ನು ಕನ್ಯಾ ನಿಶ್ಚಯಕ್ಕೆ ಹೋಲಿಸಿರುವುದು ಆಶ್ಚರ್ಯಕರವಾಗಿದೆ. ಮಗುವೇ! ನಿನಗೆ ಮುಂದೆ ಲಿಂಗವೆಂಬ ಗಂಡನನ್ನು ತಂದು ಮದುವೆ ಮಾಡುತ್ತೇವೆ ಎಂದು ಅರಿಶಿನ ಕುಂಕುಮವನ್ನಿಟ್ಟು ವೀಳ್ಯವನ್ನು ಕೊಡುವ ಪಕ್ಷಕ್ಕೆ ಬೇಕಾದರೆ ಕನ್ಯಾ ನಿಶ್ಚಯವೆಂದು ಶ್ರೀ ಪಟ್ಟೇದ ಅವರು ಹೇಳುವಂತೆ ಒಪ್ಪಿಕೊಳ್ಳಬಹುದು. ಆದರೆ ವಸ್ತುತಃ ಶಿಶುವಿನ ಲಿಂಗಧಾರಣೆ ಅರ್ಥಾತ್ ಶಿವದೀಕ್ಷೆಯಲ್ಲಿ ನಿಶ್ಚಯದ ಮಾತೇ ಇಲ್ಲ. ಶ್ರೀಗುರುವು ಹಸ್ತ ಮಸ್ತಕ ಸಂಯೋಗ ಮಾಡಿ, ಮಂತ್ರವನ್ನುಪದೇಶಿಸಿ, ಲಿಂಗಧಾರಣೆಯನ್ನು ಮಾಡಿ ಅಂಗ ಲಿಂಗ ಸಂಬಂಧವನ್ನು ಸಡಿಸಿ, ಅವರನ್ನು ಶರಣ ಸತಿ ಲಿಂಗ ಪತಿಯನ್ನಾಗಿ ಮಾಡುವನು. ಅದಕಾರಣ ಶ್ರೀ ಪಟ್ಟೇದ ಅವರು ಹೇಳುವಂತೆ ಶಿಶುವಿನ ಲಿಂಗಧಾರಣೆ ಅರ್ಥಾತ್ ಶಿವದೀಕ್ಷೆಯು ಎಂದೆಂದಿಗೂ ಕನ್ಯಾನಿಶ್ಚಯವಾಗುವದಿಲ್ಲ.

ಇನ್ನು ಮುಂದೆ "ಶ್ರೀಮಾನ್ ಜೀರಗೆಯವರು ಅದರಲ್ಲೇ (ಶಿಶುವಿನ ಲಿಂಗಧಾರಣೆಯಲ್ಲೇ) ತ್ರಿವಿಧ ದೀಕ್ಷೆಗಳು, ಅಷ್ಟಾವರಣಗಳು, ಸಂಕ್ಷೇಪತಃ ಬೀಜರೂಪದಿಂದ ಒದಗುತ್ತವೆಂದು ಹೇಳುವುದು ಸರಿ ಇರಬಹುದು. ಆದರೆ ಪ್ರತ್ಯಕ್ಷ ಹಳ್ಳಿಯ ಅನುಭವವಿರುವವರಿಗೆ ಅದು ಸಮ್ಮತವಾಗುವುದು ಕಠಿಣವು. ಏಕೆಂದರೆ ಇಲ್ಲಿ ಜನ್ಮ ಸಂಸ್ಕಾರವು ಸರಿಯಾಗಿ ನಡೆಯುವುದಿಲ್ಲ. ಅದಕ್ಕೆ ಅಯ್ಯತನವನ್ನು ಹೊಸದಾಗಿ ಹೊಂದಿರುವ ೧೦-೧೨ ವರ್ಷದ ಅನನುಭವ ಬಾಲ ಮಹೇಶ್ವರರು ಬರುವುದುಂಟು. ಇದಲ್ಲದೆ ಏನೂ ಅರಿಯದ ಬರೀ ಹೆಸರಿಗೆ ಸ್ವಾಮಿ ಎಂದು ಹೇಳಿಸಿಕೊಳ್ಳುವ ದೊಡ್ಡ ವಯಸ್ಸಿನ ಅಯ್ಯನವರಾದರೂ ಬಹು ಜನರಿರುವುದುಂಟು." ಎಂದು ಮುಂತಾಗಿ ಬರೆದಿದ್ದಾರೆ. ಶ್ರೀ ಪಟ್ಟೇದ ಅವರು ಹೇಳುವ ಈ ದೋಷವು ಯಾರಿಗೆ ಸೇರಿದ್ದು? ಏನೂ ಅರಿಯದ ೧೦-೧೨ ವರ್ಷದ ಅನನುಭವಿಗಳಾದ ಬಾಲ ಮಾಹೇಶ್ವರರನ್ನು ಕರೆದುಕೊಂಡು ಬಂದು ಅವರಿಗೆ ಅಡ್ಡ ಬೀಳು ಎಂದವರಾರು? ಅಂಥ ಅನನುಭವಿಗಳಾದ ಬಾಲಕರನ್ನು ಕರೆದುಕೊಂಡು ಬರುವವರು ದಡ್ಡರೋ? ಅಥವಾ ಆ ಬಾಲರೇ ದಡ್ಡರೋ? ದೊಡ್ಡ ವಯಸ್ಸಿನ ಅಯ್ಯನವರಾದರೂ ಅನುಭವವಿಲ್ಲವೆಂದ ಮೇಲೆ ಅವರನ್ನು ಕರೆಯುವುದು ಇನ್ನೂ ಹೆಚ್ಚು ದಡ್ಡತನವಲ್ಲವೇ? ಅನುಭವಿಗಳಾದ ಮತಾಧಿಕಾರಿಗಳು ಬಿಗದಿದ್ದಲ್ಲಿ ತಮ್ಮಲ್ಲೇ ಅನುಭವಿಗಳಾದವರನ್ನು ಕರೆದುಕೊಂಡು ಬಂದು ಕಾರ್ಯಗಳನ್ನು ನಡೆಸುವುದು ಜಾಣತನವಲ್ಲವೇ? ಎಂದ ಮೇಲೆ ಲಿಂಗಧಾರಣ ಅರ್ಥಾತ್ ಶಿವದೀಕ್ಷಾ ಕಾರ್ಯಗಳನ್ನು ನಡೆಸತಕ್ಕವರು ದಡ್ಡರಾದ ಮಾತ್ರದಿಂದಲೇ ಶಾಸ್ತ್ರಕ್ಕೆ ಏನೂ ಕೊರತೆಯಿಲ್ಲ. ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಶಿಶುವಿನ ಲಿಂಗಧಾರಣೆಯು ವೇಧಾ, ಮಂತ್ರ, ಕ್ರಿಯಾ ಎಂದು ಮೂರು ತರನಾಗಿ ಆಚರಿಸಲ್ಪಟ್ಟು ಅಷ್ಟಾವರಣಗಳು ತಮ್ಮ ಪವಿತ್ರ ಕೆಲಸಗಳನ್ನು ಮಾಡುವವು. ಲಿಂಗಧಾರಣೆ ಮಾಡುವವನು ದಡ್ಡನಾಗಲಿ ಜಾಣನಾಗಲಿ ಮೇಲ್ಕಂಡ ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ನಡದೇ ನಡೆಯಬೇಕು. ಹಾಗೆ ನಡೆಯದಿದ್ದರೆ ಅದು ವೀರಶೈವ ಮಾರ್ಗವಲ್ಲ. ಶರಣರ ತತ್ವವಲ್ಲ. ಕುಣಿಯಲಾರದ ಸೂಳೆ ಮದ್ದಳೆಯವನ ಮೇಲೆ ಬಿದ್ದಂತೆ ಲಿಂಗಧಾರಣ ಕಾರ್ಯಕ್ರಮಗಳು ಮಾಡಲಿಕ್ಕೆ ಬಾರದೆ ಶಾಸ್ತ್ರದ ಮೇಲೆ ಬೀಳುವುದು ಹೆಡ್ಡತನ.

ಇನ್ನು ಮುಂದೆ "ಕೂಸಿನ ತಲೆಯ ಮೇಲೆ ಹಸ್ತವಿಡುವುದು, ಕಿವಿಯಲ್ಲಿ ಮಂತ್ರೋಪದೇಶ ಮಾಡುವದು," ಮುಂತಾದ ವಿಷಯಗಳು ಇತ್ತ ಕಡೆಯ ಅನುಭವದಿಂದ ನೋಡಿದರೆ ಕೇವಲ ಕಟ್ಟುಕಥೆಗಳಂತೆಯೇ ತೋರುತ್ತದೆ." ಎಂದು ಶ್ರೀ ಪಟ್ಟೇದ ಅವರು ಬಾಯ್ಬಿಟ್ಟಿದ್ದಾರೆ. ಇದು ಅತ್ಯಾಶ್ಚರ್ಯಕರವಾಗಿದೆ. ತಮ್ಮ ಸ್ವಂತ ಮಾತು ಹಾಗಿರಲಿ. ತಮ್ಮ ಕಡೆಯ ಅನುಭವವನ್ನು ಬೇರೆ ಹೇಳುತ್ತಾರೆ ಇದರಿಂದ ಶ್ರೀ ಪಟ್ಟೇದ ಅವರು ಇರುವ ಸ್ಥಳದ ಸುತ್ತಣ ಪ್ರದೇಶಗಳ ಲಿಂಗಾಯತ ಜನಾಂಗವು ವೀರಶೈವಾಚರಣೆಯಲ್ಲಿ ಎಷ್ಟು ಹಿಂದುಳಿದಿದ್ದಾರೆ ಎಂಬುದು ಒಡೆದು ಕಾಣುತ್ತದೆ. ಹಸ್ತಮಸ್ತಕ ಸಂಯೋಗ, ಮಂತ್ರೋಪದೇಶ ಮುಂತಾದ ವಿಷಯಗಳು ಕೇವಲ ಕಟ್ಟು ಕಥೆ ಎಂದ ಮೇಲೆ ಆ ಪ್ರಾಂತದಲ್ಲಿ ಏನೋ ಒಂದು ಮೋಸ ನಡೆದಿರಬೇಕೆಂದು ವ್ಯಕ್ತವಾಗುತ್ತದೆ ಅಲ್ಲಿಯ ಅಯ್ಯಗಳು ಎಂದು ಹೆಸರಿಟ್ಟುಕೊಂಡಿರುವವರು ಆ ಪ್ರಾಂತದ ದಡ್ಡ ಭಕ್ತ ಶಿಷ್ಯಾಮಣಿಗಳಿಗೆ ಮುಂಕು ಬೂದಿಯನ್ನೆರಚಿ, ಕೃತ್ರಿಮದಿಂದ ಈ ಮುಖ್ಯ ತ್ರಿವಿಧ ದೀಕ್ಷಾ ಕ್ರಮಗಳನ್ನು ಲೋಪ ಮಾಡಿರಬಹುದೆಂದು ಶಂಕೆಯುಂಟಾಗುತ್ತದೆ. ಶ್ರೀ ಪಟ್ಟೇದ ಅವರು ಹೇಳುವ ಈ ಅನುಭವವು ನಿಜವಾಗಿದ್ದ ಪಕ್ಷದಲ್ಲಿ ಅದು ಬಹಳ ಶೋಚನೀಯವಾದ ಸಂಗತಿಯೇ ಸರಿ. ಇನ್ನು ಮುಂದಾದರೂ ಶ್ರೀ ಪಟ್ಟೇದ ಅವರು ಮತ್ತು ಅಲ್ಲಿಯ ಲಿಂಗವಂತರು ಒಟ್ಟು ಗೂಡಿ ಶಾಸ್ತ್ರವೇನೆಂಬುದನ್ನು ಅರಿತುಕೊಂಡು ವೀರಶೈವ ಜನಾಂಗಕ್ಕೇ ಅಪಮಾನಕರವಾದ ಈ ಕೊರತೆಗಳನ್ನು ಆದಷ್ಟು ಜಾಗ್ರತೆಯಾಗಿ ನೀಗುವರೆಂದು ನಾನು ಈ ಮೂಲಕ ಶ್ರೀ ಪಟ್ಟೇದ ಅವರನ್ನು ಭಕ್ತಿಯಿಂದ ಬೇಡಿಕೊಳ್ಳುತ್ತೇನೆ.

ಇನ್ನು ಮುಂದೆ "ಎಂಟನೆ ತಿಂಗಳ ಸಂಸ್ಕಾರಕ್ಕಂತೂ ಹೀಗೆ ಸಂಬಂಧಗೊಳಿಸುವುದು (ಹಸ್ತಮಸ್ತಕ ಸಂಯೋಗ, ಕರ್ಣೋಪದೇಶ ಮುಂತಾದವುಗಳನ್ನು ನಡೆಸುವುದು) ಶಕ್ಯವೇ ಇಲ್ಲ" ಎಂದು ಹೇಳಿದ್ದಾರೆ. ಇದರಿಂದ ಶ್ರೀ ಪಟ್ಟೇದ ಅವರಿಗೆ ಎಂಟನೆ ತಿಂಗಳ ಸಂಸ್ಕಾರವು ಹೇಗೆ ನಡೆಯುತ್ತದೆಂಬ ಅನುಭವವೇ ಇಲ್ಲವೆಂದು ಗೊತ್ತಾಗುತ್ತದೆ. ತಮಗೆ ಅನುಭವವಿಲ್ಲದ ಮಾತ್ರದಿಂದಲೇ ಶಾಸ್ತ್ರವೇ ಅಬದ್ಧವೆಂದು ಹೇಳುವುದು ವಿಹಿತವಲ್ಲ. ಎಂಟನೆ ತಿಂಗಳಲ್ಲಿ ಶಿಶುವು ಗರ್ಭದಲ್ಲಿರುವಾಗ್ಗೆ ಲಿಂಗಧಾರಣ ಅರ್ಥಾತ್ ಶಿವದೀಕ್ಷೆಯನ್ನು ಮಾಡುವ ಕ್ರಮವನ್ನು ಇಲ್ಲಿ

ಸೂಕ್ಷ್ಮವಾಗಿ ಹೇಳುತ್ತೇನೆ. ಹೇಗೆಂದರೆ:— ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯು ಪ್ರಥಮ ಕಾರ್ಯಾಚರಣೆಗಳನ್ನು ನಡೆಸಿ ಗುರುವು ಗರ್ಭಿಣಿಯ ಮಸ್ತಕದ ಮೇಲೆ ತಮ್ಮ ಶಿವಹಸ್ತವನ್ನಿರಿಸಿ ಹಸ್ತಮಸ್ತಕ ಸಂಯೋಗ ಮಾಡುವನು. ಆ ಮೇಲೆ ಆಕೆಯ ಕರ್ಣದಲ್ಲಿ ಮಂತ್ರೋಪದೇಶವನ್ನು ಮಾಡುವನು. ಆಮೇಲೆ ಆಕೆಗೆ ಲಿಂಗಧಾರಣವನ್ನು ಮಾಡುವನು. ಈ ರೀತಿಯಲ್ಲಿ ವೇಧಾ ಮಂತ್ರ ಕ್ರಿಯಾದೀಕ್ಷೆಗಳನ್ನು ತಾಯಿಯ ಮೂಲಕ ಗುರುವು ಶಿಶುವಿಗೆ ಅನುಗ್ರಹಿಸುವನು. ಅನುಭವವು ಹೀಗಿರುವಾಗ್ಯೆ ಅನಭವವನ್ನು ತಿಳಿಯದೆ ಎಂಟನೇ ತಿಂಗಳಲ್ಲಿ ತ್ರಿವಿಧ ದೀಕ್ಷೆಗಳನ್ನು ನಡೆಸುವದು ಶಕ್ಯವೇ ಇಲ್ಲ ಎಂದು ಹೇಳುವುದು ನ್ಯಾಯವಲ್ಲ.

ಈ ಎಲ್ಲ ಕಾರಣಗಳಿಂದ "ಶಿಶುವಿನ ಲಿಂಗಧಾರಣೆಯು ಔಪಚಾರಿಕವಾಗಿದೆ" ಎಂಬ ಶ್ರೀ ಬಸಪ್ಪ ಚನ್ನಪ್ಪ ಪಟ್ಟೇದ ವಂಟಮುರಿ ಇವರ ಮಾತು ನ್ಯಾಯವಾಗಿಲ್ಲ. ಶಿಶುವಿನ ಲಿಂಗಧಾರಣೆಯು ಎಂದಿಂದಿಗೂ ಔಪಚಾರಿಕವಾಗಿರುವುದಿಲ್ಲ. ಅದು ನಿಜವಾದ, ಪರಿಪೂರ್ಣವಾದ ಪರಿಣಾಮಕಾರಿಯಾದ ಲಿಂಗಧಾರಣ ಅರ್ಥಾತ್ ಶಿವದೀಕ್ಷೆಯೇ ಆಗಿದೆ. ಆಲ್ಲದೆ ಅದು ನೂರೊಂದು ಸ್ಥಲಗಳಲ್ಲಿ ಐದನೆಯ ಸ್ಥಲವಾಗಿದೆ

ಈ ವಿಚಾರದಲ್ಲಿ ಶ್ರೀಮಾನ್ ಜೀರಗೆ ಕ. ಬಸವಪ್ಪ ಬಿ. ಎ ಅವರು ಬರೆದಿರತಕ್ಕ ಅನುಭವಗಳು ನ್ಯಾಯವಾದವುಗಳೂ, ಶಾಸ್ತ್ರ ಸಮ್ಮತವಾದವುಗಳೂ ಆಗಿವೆ.

ಲಿಂಗಧಾರಣ ಮತ್ತು ಶಿವದೀಕ್ಷೆ.

(ಲೇಖಕರು— ಓರ್ವ ವೀರಶೈವ.)

ಪರತರಮುಕ್ತಿಗೆ ಜ್ಞಾನಕ್ರಿಯಾತ್ಮಕವಾದ ಷಟ್‌ಸ್ಥಲಾಚರಣೆಯೇ ಮುಖ್ಯೋಪಾಯವು. ಆ ಆಚರಣೆಯು ಅಳವಡಲು ದೀಕ್ಷೆಯು ಅವಶ್ಯವಾದುದು. ಆದಕಾರಣ ಸದ್ಗುರುವಿನಿಂದ ಶಿವದೀಕ್ಷೆ ಪಡೆದು ಷಟ್‌ಸ್ಥಲಾಚರಣೆಯನ್ನು ನಿಷ್ಠೆಯಿಂದ ನಡೆಯಿಸಿ ಮೋಕ್ಷವನ್ನು ಪಡೆಯುವದು ಮುಮುಕ್ಷುಗಳ ಕರ್ತವ್ಯವು. ಭ್ರಮರವು ತನ್ನಂತೆ ಆಗಲು ಯೋಗ್ಯತೆಯುಳ್ಳ ಕೀಟಗಳನ್ನು ತನ್ನ ವೈಷ್ಣಿಸಂಸ್ಕಾರವು ವೇಧಿಸುವಂತೆ ಮಾಡುವದರಿಂದ ಆ ಕೀಟಗಳು ಭ್ರಮರಗಳೇ ಆಗುತ್ತವೆ. ಹಾಗೆಯೇ ಸದ್ಗುರುವು ಶಿಷ್ಯನ ಅಂತರಂಗ ಪರಿಪಕ್ವತೆಯನ್ನು ಪರೀಕ್ಷಿಸಿ ದೀಕ್ಷೆ ಮಾಡಿ ತನ್ನಂತೆ ಮಾಡಿಕೊಳ್ಳುವನು. "ಕುಂಬಳಕಾಯಿಗೆ ಕಬ್ಬಿಣದ ಕಟ್ಟು ಕೊಟ್ಟರೆ ಕೊಳೆವುದಲ್ಲದೆ ಮಾಂಬುದೇ? ಆಳಿಮವದವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕೆ ಸಚ್ಚಕ್ತನಹನು ಕೂಡಲಸಂಗಮದೇವಾ." ಎಂದು ಬಸವೇಶ್ವರನು ಹೇಳಿದ್ದಾನೆ. ಆದಕಾರಣ ಕಂಡಕಂಡವರಿಗೆ ದೀಕ್ಷೆ ಮಾಡುವದು ಅನುಚಿತವು. ವೈದ್ಯನು ರೋಗಪೀಡಿತನಾದ ಮನುಷ್ಯನಿಗೆ ಯೋಗ್ಯಚಿಕಿತ್ಸೆಮಾಡಿ ಆ ರೋಗವನ್ನು ನೀಗುವಂತೆ ಸದ್ಗುರುವು ಭವರೋಗದಿಂದ ಬಳಲುವ ಆತ್ಮನಿಗೆ ಶಿವದೀಕ್ಷೆಯನ್ನು ಕೊಟ್ಟು ಅವನ ಸಂಸಾರ ಪಾಶವನ್ನು ಪರಿಹರಿಸುವನು ಶಿವದೀಕ್ಷೆಯು ಒಂದು ಆಧ್ಯಾತ್ಮಿಕ ಸಂಸ್ಕಾರ ಅಥವಾ ವಿಧಾನವಾಗಿರುವದರಿಂದ ಸದ್ಯೋಜಾತಾದಿ ಪಂಚಬ್ರಹ್ಮದ್ಯೋತಕವಾದ ಪಂಚಕಲಶಗಳನ್ನು ಹೂಡಿ ಶ್ರೀಗುರುವು ಗಣಸಾಕ್ಷಿಯಾಗಿ ಶಿಷ್ಯನಿಗೆ ಶಿವದೀಕ್ಷೆ ಮಾಡುವನು.

ಶ್ರೀಗುರುವು ಶಿಷ್ಯನ ಬ್ರಹ್ಮರಂಧ್ರದಲ್ಲಿರುವ ಚಿತ್ಶಕ್ತಿಯನ್ನು ಅನುಕ್ರಮವಾಗಿ ಭಾವ, ಮನಸ್ಸು, ದೃಷ್ಟಿಗಳಿಗೆ ತಂದು ಶಿವಮಂತ್ರಪೂರ್ವಕವಾಗಿ ಅದನ್ನು ಕರಸ್ಥಲದಲ್ಲಿ ಇಷ್ಟಲಿಂಗರೂಪದಿಂದ ನೆಲೆಗೊಳಿಸುವನು. ಈ ಕ್ರಿಯೆಗೆ ದೀಕ್ಷೆಯೆಂದೆನ್ನುವರು. ಈ ದೀಕ್ಷೆಯ ಕ್ರಮವೆಂತೆಂದರೆ ಗುರುವು ಶಿಷ್ಯನ ಮಸ್ತಕದಲ್ಲಿ ಹಸ್ತವನ್ನಿರಿಸಿದರೆ ಕಾರಣದೇಹಿಕ್ಕೆ ವೇಧಾದೀಕ್ಷೆಯಾಯಿತು. ಕಿವಿಯಲ್ಲಿ ಪ್ರಣವ ಪಂಚಾಕ್ಷರಿ ಮಂತ್ರವನ್ನು ಬೋಧಿಸಿದರೆ ಸೂಕ್ಷ್ಮದೇಹಕ್ಕೆ ಮಂತ್ರದೀಕ್ಷೆಯಾಯಿತು. ಇಷ್ಟಲಿಂಗವನ್ನು ಕರಸ್ಥಲಕ್ಕೆ ಕೊಟ್ಟರೆ ಸ್ಥೂಲಶರೀರಕ್ಕೆ ಕ್ರಿಯಾದೀಕ್ಷೆ ಮಾಡಿದಂತಾಯಿತು. ಒಟ್ಟಿನಮೇಲೆ ವೇಧಾದೀಕ್ಷೆಯಿಂದ ಭಾವಲಿಂಗವನ್ನು ಕಾರಣದೇಹದಲ್ಲಿಯೂ, ಪ್ರಾಣಲಿಂಗವನ್ನು ಸೂಕ್ಷ್ಮದೇಹದಲ್ಲಿಯೂ, ಇಷ್ಟಲಿಂಗವನ್ನು ಸ್ಥೂಲದೇಹವಲ್ಲಿಯೂ ಸಂಯೋಗ ಮಾಡುವದೇ ವೀರಶೈವ ದೀಕ್ಷೆಯು. ಗುರುವು ತನ್ನ ಆಧ್ಯಾತ್ಮ ಪ್ರಕಾಶ ಕಿರಣಗಳನ್ನು ಶಿಷ್ಯನಲ್ಲಿ ಪ್ರವೇಶಗೊಳಿಸುತ್ತಾನೆ. ಅರ್ಥಾತ್ ಲಿಂಗಧಾರಣವೇ ದೀಕ್ಷೆಯು. ಅಂದರೆ ಗುರುವು ಶಿಷ್ಯನಿಗೆ ಕರುಣಿಸಿಕೊಟ್ಟ ಜ್ಞಾನವು ಶಿಷ್ಯನ ಆಣವಮಲ, ಮಾಯಾಮಲ, ಕಾರ್ಮಿಕಮಲಗಳನ್ನು ಕಳೆದು ಗುರುವು ಅವನನ್ನು ಜ್ಞಾನಸಂಪನ್ನನನ್ನಾಗಿ ಮಾಡುವನು.

ಗುರುವೇ ಎಲ್ಲವನ್ನು ಮಾಡಿದಬಳಿಕ ತೀರಿತು, ಶಿಷ್ಯನು ಮಾಡತಕ್ಕದ್ದೇನು ಉಳಿಯಿತೆಂದು ನೀವು ಪ್ರಶ್ನೆಮಾಡಬಹುದು. ಅದಕ್ಕೆ ಉತ್ತರ ವಿಷ್ಟೇ. ವೀರಶೈವಮತವು ಜ್ಞಾನಕ್ರಿಯಾಸಮುಚ್ಚಯಾತ್ಮಕವಾಗಿರುತ್ತದೆ. ಗುರುವು ಜ್ಞಾನಮಾರ್ಗವನ್ನು ತೋರಿಸುವನು. ಶಿಷ್ಯನು ಕ್ರಿಯಾಮಾರ್ಗದಿಂದ ನಡೆಯಬೇಕೆಂಬುದೇ ದೀಕ್ಷೆಯ ಗುಟ್ಟು. ಗುರುವು ಶಿಷ್ಯನಲ್ಲಿ ಜ್ಞಾನವನ್ನುಂಟು ಮಾಡಬೇಕಾದರೆ ೨೧ ದೀಕ್ಷೆಗಳನ್ನು ಮಾಡುವನು. ಶಿಷ್ಯನು ಕ್ರಿಯೆಯನ್ನು ಸಾಧಿಸಿ ಮೋಕ್ಷಪಡೆಯಬೇಕಾದರೆ ವಿರುದ್ಧ ಕ್ರಮದಿಂದ ೨೧ ದೀಕ್ಷೆಗಳನ್ನು ಹೊಂದಬೇಕಾಗುತ್ತದೆ. ಗುರುವು ಶಿಷ್ಯನನ್ನು ತನ್ನಂತೆ ಜ್ಞಾನಸಂಪನ್ನನನ್ನು ಮಾಡಿದ ಮಾತ್ರಕ್ಕೆ ತೀರಲಿಲ್ಲ. ಆದರೆ ಕ್ರಿಯೆಯಿಂದ ಶಿಷ್ಯನು ಗುರುಸ್ವರೂಪಿಯಾಗಬೇಕಲ್ಲವೇ? ಶಿವದೀಕ್ಷಾಸಂಪನ್ನನಾದ ಶಿಷ್ಯನು ಶ್ರೀಗುರುವು ಕರುಣಿಸಿಕೊಟ್ಟ ಇಷ್ಟಲಿಂಗವನ್ನು ನಿಷ್ಠೆನಿಬ್ಬೆರಗಾಗಿ ಪೂಜಿಸಿ ಪ್ರಾಣಲಿಂಗಾನುಸಂಧಾನದಲ್ಲಿ ತಲ್ಲೀನನಾಗಿ ಕೊನೆಗೆ ಭಾವಲಿಂಗದಲ್ಲಿ ಬೆರೆಯುವನು. ಇದೇ ಕ್ರಿಯಾಮಾರ್ಗವು. ಈ ಹಾದಿಯಿಂದ ಹೋಗುವಾಗ ಅವನಿಗೆ ಶ್ರೀಗುರುವಿನ ಸಹಾಯವು ಬೇಕಾಗುತ್ತದೆ. ಗುರುವು ಶಿಷ್ಯನ ಆಧ್ಯಾತ್ಮಿಕ ಬೆಳವಣಿಗೆಯನ್ನರಿತು ಅವನಿಗೆ ಉಪಮಾದೀಕ್ಷೆಯಿಂದ ಮೊದಲ್ಗೊಂಡು ಸದ್ಯೋನ್ಮುಕ್ತಿಯ ವರೆಗೆ ಸ್ವಾನುಭವ ಸೂತ್ರವನ್ನು ಬೋಧಿಸುವನು. ಆಗ ಶಿಷ್ಯನು ಸಾಕ್ಷಾತ್ ಗುರುವೇ ತಾನಾಗುವನು. ಹೀಗೆ ಜ್ಞಾನಕ್ರಿಯಾಯುಕ್ತವಾದ ದೀಕ್ಷೆಗಳು ಹ್ರಾಸುಹೊಕ್ಕಾಗಿ ಹೆಣೆಯಲ್ಪಟ್ಟಿರುತ್ತವೆ.

ಒಕ್ಕಲಿಗನು ಭೂಮಿಯಲ್ಲಿ ಬೀಜವನ್ನು ಬಿತ್ತಿ ಆ ಸಸಿಯು ಬೆಳೆದು ದೊಡ್ಡದಾಗಿ ಬೀಜವನ್ನು ಕೊಡುವವರೆಗೂ ಅದಕ್ಕೆ ಕಳೆ, ಗೊಬ್ಬರ, ನೀರು, ಕತ್ತರಿಸೋಣ ಮುಂತಾದ ಸಂಸ್ಕಾರಗಳನ್ನು ಕೊಡುವಂತೆ ಗುರುವು ದೀಕ್ಷಾಪೂರ್ವಕವಾಗಿ ಲಿಂಗಧಾರಣ ಮಾಡಿದ ಬಳಿಕ ಶಿಷ್ಯನು ಕ್ರಿಯಾ ಮಾರ್ಗದಿಂದ ತನ್ನ ಸ್ವರೂಪಕ್ಕೆ ಬರುವವರೆಗೂ ಕೆಲವು ಸಂಸ್ಕಾರಗಳನ್ನು ಕೊಡುವನು.

ಗುರುವು ಶಿಷ್ಯನಿಗೆ ಲಿಂಗಧಾರಣ ಮಾಡುವಾಗ ಅಂಪರಿ ಅವನಲ್ಲಿ ಜ್ಞಾನೋದಯವನ್ನುಂಟುಮಾಡುವಾಗ ಶಿವದೀಕ್ಷೆಬೇಕು. ಶಿಷ್ಯನು ಕ್ರಿಯಾ ಮಾರ್ಗದಿಂದ ಮೋಕ್ಷವನ್ನು ಸಾಧಿಸುವಾಗಲೂ ಶಿವದೀಕ್ಷೆಬೇಕು. ಆದರೆ ಇವೆರಡೂ ಪ್ರಕಾರ ದೀಕ್ಷೆಗಳು ವಿರುದ್ಧ ಕ್ರಮದಲ್ಲಿ ನಡೆದಿರುತ್ತವೆಂಬ ದನ್ನು ನಾವು ಲಕ್ಷವಲ್ಲಿಡತಕ್ಕದ್ದು. ಉದಾಹರಣಾರ್ಥವಾಗಿ ಲಿಂಗ ಧಾರಣ ಮಾಡುವಾಗ ವೇಧಾ, ಮಂತ್ರ, ಕ್ರಿಯಾ ದೀಕ್ಷೆಗಳು ನಡೆದರೆ ಶಿಷ್ಯನು ಮೋಕ್ಷವನ್ನು ಸಾಧಿಸುವಾಗ ಕ್ರಿಯಾ-ಮಂತ್ರ-ವೇಧಾ ದೀಕ್ಷೆ ಗಳನ್ನು ಪಡೆಯುವನು.

ವೀರಶೈವ ಮತದಲ್ಲಿ ಗುರುವಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಅತನು ಅಂತಃಕರಣದಿಂದ ಶಿಷ್ಯನಿಗೆ ದೀಕ್ಷಾಪೂರ್ವಕವಾಗಿ ಲಿಂಗಧಾ ರಣಮಾಡಿ ಬಿಟ್ಟರೆ, ಪರುಷದ ಸೊಂಗಿನಿಂದ ಕಬ್ಬಿಣವು ಬಂಗಾರವಾದಂತೆ ಆ ಶಿಷ್ಯನು ಗುರುವಿನಂತೆ ಜ್ಞಾನ ಸಂಪನ್ನನಾಗುತ್ತಾನೆ. ಹಾಗೆ ಆಗದಿದ್ದರೆ ದೀಕ್ಷೆ ಕೊಟ್ಟ ಗುರುವಿಗೂ ಮಹತ್ವವಿಲ್ಲ, ಆ ದೀಕ್ಷೆಗೂ ಮಹತ್ವವಿಲ್ಲ. ಅದು ಕೇವಲ ಯಾಂತ್ರಿಕ ಕ್ರಿಯೆಯಾದಂತಾಗುವದು. ವೀರಶೈವರು ಪಾಕೃತರಂತೆ ಮಾಂಸ ಪಿಂಡಿಗಳಲ್ಲ. ಅಪ್ರಾಕೃತರಾದ ಮಂತ್ರ ಪಿಂಡಿಗಳು. ಪ್ರಾಕೃತರಲ್ಲಿ "ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರೇಣೈವ ದ್ವಿಜಾ ಬ್ರಾಹ್ಮಣಃ" ಎಂಬ ತತ್ವವಿರುವದರಿಂದ ೮ ವರ್ಷಗಳ ವರೆಗೆ ಅವರ ಬಾಲಕನಿಗೆ ಶೂದ್ರತ್ವವುಂಟು. ಅಮೇಲೆ ಅತನಿಗೆ ಜ್ಞಾನೋದಯವಾಯಿತೆಂದು ತಿಳಿದು ದ್ವಿಜತ್ವವನ್ನು ಕಲ್ಪಿಸಿ ಕೊಡುತ್ತಾರೆ. ಆದರೆ ಮಂತ್ರ ಪಿಂಡಿಗಳಾದ ವೀರಶೈವರ ಮಾತು ಹಾಗಲ್ಲ. ಶಿಶುವು ತಾಯಿಯ ಗರ್ಭದಲ್ಲಿ ೮ ತಿಂಗಳವಾದ ಕೂಡಲೆ ಅದರ ಸರ್ವಾಂಗಗಳು ಪೂರ್ಣವಾಗಿ ಅದಕ್ಕೆ ತಾನು ಯಾರು? ಇಲ್ಲಿಗೆ ಯಾಕೆ ಬಂದೆ? ಎಂಬ ಪರಿಜ್ಞಾನವುಂಟಾಗುತ್ತದೆಂದು ನಮ್ಮವರ ಗ್ರಹಿಕೆ. ಅಂತೆಯೇ ಹೊಟ್ಟೆಯ

ಶಿಶುವಿಗೆ ತಾಯಿಯ ಮುಖಾಂತರವಾಗಿ ಗುರುವು ದೀಕ್ಷಾಪೂರ್ವಕ ಲಿಂಗಧಾರಣ ಮಾಡುವನು. ಅದರಿಂದ ಸಸಿಯ ಬೆಳವಣಿಗೆಯಂತೆ ನಮಗೆ ಗೊತ್ತಾಗದೆ ಕೂಸಿನ ಆಧ್ಯಾತ್ಮಿಕ ಬೆಳವಣಿಗೆಯೂ ನಡೆಯುತ್ತದೆ.

ನಮ್ಮ ಸಮಾಜದಲ್ಲಿ ರೂಢವಾಗಿರುವ ಅನೇಕ ವಿಧಾನಗಳಿಗೆಲ್ಲ ದೀಕ್ಷೆಯೆಂದೇ ಹೇಳುವ ಸಾಂಪ್ರದಾಯವಿರುವದರಿಂದ ನಿಜವಾದ ದೀಕ್ಷೆಯಾವುದು? ಎಂಬುದೇ ನಮಗೆ ತಿಳಿಯದಂತಾಗಿದೆ. ಉದಾಹರಣಾರ್ಥವಾಗಿ ಭವಿಗಳನ್ನಾಗಲಿ, ಕುಲಗೆಟ್ಟವರನ್ನಾಗಲಿ, ಶುದ್ಧೀಕರಣ ಮಾಡಿ ಸಮಾಜದ ಜನಸಂಖ್ಯೆಯು ಹೆಚ್ಚಲೆಂದು ಮತದಲ್ಲಿ ತೆಗೆದುಕೊಳ್ಳುವಾಗ ಆಗುವ ಸಂಸ್ಕಾರಕ್ಕೆ ದೀಕ್ಷೆಯೆಂದೆನ್ನುವರು. ಸಮಾಜದಲ್ಲಿ ರೂಢಿವಶದಿಂದ ಭಕ್ತ ಮಾಹೇಶ ಎಂಬೆರಡು ಜಾತಿಗಳಾಗಿರುವದರಿಂದ ಲಿಂಗಧಾರಿಗಳಾದ ಭಕ್ತರು ಮಹೇಶ್ವರರಾಗಬೇಕಾದರೆ ಒಂದು ತರದ ವಿಧಾನವು ಬೇಕೆಂದು ಕೆಲವರು ಪ್ರತಿಪಾದಿಸುವರು. ಅದಕ್ಕೂ ದೀಕ್ಷೆಯೆಂದೇ ಹೆಸರು. ಮಾಹೇಶ್ವರರ ಮಕ್ಕಳು ೮ ವರ್ಷದವರಾಗಲು ಅಯ್ಯಾಚಾರ ಅಥವಾ ಅಯ್ಯತನವೆಂಬ ವಿಧಾನವನ್ನು ಮಾಡುವರು. ಅದಕ್ಕೂ ದೀಕ್ಷೆಯೆಂದೆನ್ನುವರು. ಅದೇ ಮೇರೆಗೆ ಪಟ್ಟಾಧಿಕಾರ ಕೊಡುವಾಗ ಇಲ್ಲವೆ ಸ್ಥಲ ಕೊಡಿಸುವಾಗ ಒಂದು ಬಗೆಯ ವಿಧಾನವುಂಟು. ಅದಕ್ಕೂ ದೀಕ್ಷೆಯೆಂಬ ಸಂಜ್ಞೆಯಿರುತ್ತದೆ. ಆದರೆ ನಿಜವಾದ ವೀರಶೈವ ದೀಕ್ಷೆಯಾವುದು? ಎಂಬುದೇ ಕಠಿಣ ವಿಷಯವಾಗಿದೆ.

ನನ್ನ ಅಭಿಪ್ರಾಯದಲ್ಲಿ ಲಿಂಗಧಾರಣ, ಶಿಷ್ಯನ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಮಾಡುವ ದೀಕ್ಷೆಗಳು ಮಾತ್ರ ನಿಜವಾದ ದೀಕ್ಷೆಗಳಲ್ಲದೆ ಉಳಿದವುಗಳಲ್ಲ. ವೀರಶೈವ ಶಿಶುವು ತಾಯಿಯ ಗರ್ಭದಲ್ಲಿ ೮ ತಿಂಗಳ ವಿದ್ದಾಗ ಅಥವಾ ಒಬ್ಬ ಪವಿತ್ರಾಂತಃಕರಣಿಯಾದ ವ್ಯಕ್ತಿಯು ವೀರಶೈವ ಮತಾವಲಂಬಿಯಾಗಬೇಕೆಂದು ಗುರುವಿಗೆ ಮರಿಹೊಕ್ಕಾಗ ಶ್ರೀಗುರುವು ಮಾಡುವ ದೀಕ್ಷೆಯೇ ನಿಜವಾದ ದೀಕ್ಷೆಯಾಗಿರುತ್ತದೆ. ಆದರೆ ಭಕ್ತವರ್ಗಕ್ಕಿಂತಲೂ ತಾವು ಹೆಚ್ಚಿನ ಸಂಸ್ಕಾರದವರೆಂದು ತೋರಿಸಲಿಕ್ಕೆ ಮಾಡುವ ಆಯ್ಯಾಚಾರ ದೀಕ್ಷೆಯು ೮ ವರ್ಷಕ್ಕೆ ಮುಂಜಾ ವಿಧಿಯನ್ನು ಮಾಡುವ ಬ್ರಾಹ್ಮಣರ ವಿಧಿಯ ಅನುಕರಣವೇ ಹೊರತು ಬೇರಲ್ಲ. ಇದು ಆಧ್ಯಾತ್ಮಿಕ ಬೆಳವಣಿಗೆಯ ದೀಕ್ಷೆಯಲ್ಲ. ಸಮಾಜ ಪ್ರತಿಷ್ಠತೆಯ ದೀಕ್ಷೆಯು.

ಅದೇ ಮೇರೆಗೆ ಅಧಿಕಾರ ಅಥವಾ ಸ್ಥಲಕೊಡುವಾಗ ಮಾಡುವ ದೀಕ್ಷೆ ಯಾದರೂ ಒಂದು ಅಧಿಕಾರದ ವಿಧಾನವೇ ಹೊರತು ನಿಜವಾದ ದೀಕ್ಷೆಗೂ ಅದಕ್ಕೂ ಸಂಬಂಧವೇ ಇಲ್ಲ. ಸಾಮಾಜಿಕ ವಿಧಾನಗಳೆಲ್ಲ ದೀಕ್ಷೆಗಳೆಂದರೆ ನಾಮಕರಣ, ವಿವಾಹ, ಅಂತ್ಯವಿಧಿ ಮೊದಲಾದವುಗಳೆಲ್ಲ ದೀಕ್ಷೆಗಳೆನ್ನಬೇಕಾದೀತು. ದೀಕ್ಷೆಯು ಸಮಾಜಗತವಲ್ಲ, ವ್ಯಕ್ತಿಗತವಾಗಿರುತ್ತದೆ.

ವೀರಶೈವರು ಹಿಂದುಗಳೇ ?

(ಲೇಖಕರು:— ಕಲ್ಯಾಣಪ್ಪಾ ಬ್ಯಾಳಿ ವಿಜಾಪುರ.)

"ಹಿಂದು" ಈ ಶಬ್ದವು ಪ್ರಾಚೀನಕಾಲದ ವಾಙ್ಮಯದಲ್ಲಿ ಕಂಡು ಬರುವದಿಲ್ಲ. ಅದು ಮಧ್ಯಂತರದಲ್ಲಿ ಬಂದದ್ದಾಗಿದೆ. ಹಿಂದು ಶಬ್ದವು ಸಿಂಧು ಎಂಬದರ ಅಪಭ್ರಂಶವು. ಆರ್ಯರು ಮೊದಲು ಸಿಂಧುನದೀ ತೀರದ ಮೇಲೆ ವಾಸಿಸುತ್ತಿದ್ದುದರಿಂದ ಗ್ರೀಕರು ಅವರಿಗೆ ಸಿಂಧುಗಳೆಂದು ಕರೆದರು. ಬರಬರುತ್ತ ಸಿಂಧುಗಳ ವರ್ಚಸ್ಸು ಇಡೀ ಹಿಂದುಸ್ಥಾನದ ತುಂಬೆಲ್ಲ ಹಬ್ಬಿದ್ದರಿಂದ ಇಡೀ ದೇಶದ ಜನರಿಗೆ ಸಿಂಧುಗಳೆಂಬ ಹೆಸರು ಪ್ರಾಪ್ತವಾಯಿತು. ಮುಸಲ್ಮಾನರು ಈ ದೇಶಕ್ಕೆ ಬಂದಬಳಿಕ ಇಲ್ಲಿಯ ಜನರಿಗೆ ಸಿಂಧುಗಳೆಂದು ಕರೆಯಲಿಕ್ಕೆ ಬಾರದೆ ಆ ಶಬ್ದವನ್ನು ಕೆಡಿಸಿ ಹಿಂದುಗಳೆಂದೆನ್ನಹತ್ತಿದರು. ಇದೇ ಶಬ್ದವನ್ನೇ ಪರದೇಶದಿಂದ ಬಂದ ಬ್ರಿಟಿಶರು ಮುಂದೆ ಅಂಗೀಕರಿಸಿದರು. ಆದುದರಿಂದ ಮುಸಲ್ಮಾನ ಕ್ರಿಸ್ತಿಯನ್‌ರ ಹೊರತಾಗಿ ಹಿಂದುಸ್ತಾನದಲ್ಲಿ ವಾಸಿಸುವ ಎಲ್ಲ ಜನರಿಗೂ ಹಿಂದುಗಳೆಂದು ಸಾಮಾನ್ಯವಾಗಿ ಹೇಳಬಹುದು.

ಬಹು ಪ್ರಾಚೀನಕಾಲದಲ್ಲಿ ಹಿಂದುಸ್ಥಾನದೊಳಗೆ ದ್ರಾವಿಡ ಸಂಸ್ಕೃತಿಯು ಪ್ರಚಾರದಲ್ಲಿತ್ತು. ದ್ರಾವಿಡರು ಶಿವೋಪಾಸಕರು. ಇವರ ಸಂಸ್ಕೃತಿಯು ಹಿಂದುಸ್ಥಾನದಲ್ಲಷ್ಟೇ ಅಲ್ಲ; ಇಜಿಪ್ತ, ಬಾಬಿಲೋನಿಯಾ, ಪಾಸಿಫಿಕ್ ದ್ವೀಪಗಳು ಮೊದಲಾದವುಗಳಲ್ಲಿ ಹಬ್ಬಿಕೊಂಡಿತ್ತೆಂಬುವದಕ್ಕೆ ಆಲ್ಲಿ

ಈಗಲೂ ಕಂಡುಬರುವ ಸ್ಥಾವರಲಿಂಗ ನಂದೀವಿಗ್ರಹಾದಿ ಅವಶೇಷಗಳು ಸಾಕ್ಷಿಗಳಾಗಿವೆ. ದ್ರಾವಿಡರಲ್ಲಿ ಜಾತಿಭೇದಗಳಿರಲಿಲ್ಲ, ಅವರು ಕಾಡು ಜನರಲ್ಲ. ಒಳ್ಳೇ ಸುಧಾರಣೆಹೊಂದಿದ ನಾಗರಿಕರು. ಈ ಶೈವದ್ರಾವಿಡರಲ್ಲಿ ಅನೇಕರು ಆರ್ಯಸಂಸ್ಕೃತಿಯ ಪ್ರಭಾವದಿಂದ ವೀರಶೈವರಾದರು.

ಆರ್ಯರು ಹಿಂದುಸ್ಥಾನಕ್ಕೆ ಬಂದು ಮೊದಲು ಪಂಜಾಬದಲ್ಲಿ ತಳವೂರಿದರು. ಇವರಲ್ಲಿಯೂ ಮೊದಲು ಜಾತಿಭೇದಗಳಿರಲಿಲ್ಲ. ಇವರು ಚತುರ್ವೇದಗಳನ್ನು ರಚಿಸಿದರು. ಇವರು ಇಂದ್ರ, ವರುಣ, ವಾಯು, ಅಗ್ನಿ, ವಿಷ್ಣು ಮೊದಲಾದ ನಿಸರ್ಗರೂಪಗಳನ್ನು ದೇವರೆಂದು ತಿಳಿದು ಆರಾಧಿಸುತ್ತಿದ್ದರು. ಇವರು ತಮ್ಮ ಶೌರ್ಯಸಾಹಸಗಳಿಂದ ದ್ರಾವಿಡರ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತ ಅಲ್ಲಿ ತಮ್ಮ ಸಂಸ್ಕೃತಿಯನ್ನು ನೆಲೆಗೊಳಿಸಿದರು. ಆದೇ ಮೇರೆ ದ್ರಾವಿಡರ ಸಂಸ್ಕೃತಿಯನ್ನಾದರೂ ಬಹು ಮಟ್ಟಿಗೆ ಅವರು ಅಂಗೀಕರಿಸಿದರು. ಶಿವನನ್ನು ತಮ್ಮ ದೇವರಂತೆ ಆರಾಧಿಸಹತ್ತಿದರು. ಸಂಸ್ಕೃತ ಭಾಷೆಯು ಆರ್ಯದ್ರಾವಿಡ ಸುಶಿಕ್ಷಿತ ವರ್ಗದವರ ಸಾಹಿತ್ಯಭಾಷೆಯಾಯಿತು. ಎಷ್ಟೋ ಋಷಿಗಳು ಶಿವೋಪಾಸಕರಾಗಿ ಯಜುರ್ವೇದದಲ್ಲಿ ಶಿವನ ಪರವಾಗಿ ಮಂತ್ರಗಳನ್ನು ರಚಿಸಿದರು. ಶೈವ ಋಷಿಗಳನೇಕರು ಆಗಮೋಪನಿಷತ್ತುಗಳನ್ನು ರಚಿಸಿದರು. ಈ ಮೇರೆಗೆ ಆರ್ಯದ್ರಾವಿಡ ಸಂಸ್ಕೃತಿಗಳು ಒಂದರೊಳಗೊಂದು ಕೂಡಿಬಿಟ್ಟವು. ಮುಂದೆ ಇಂಥವರೇ ದ್ರಾವಿಡರು, ಇಂಥವರೇ ಆರ್ಯರೆಂದು ಬೇರಳು ಮಾಡಿ ತೋರಿಸಲು ಶಕ್ಯವಿಲ್ಲದಂತಾಯಿತು. ಶಿವ-ವಿಷ್ಣು ದೇವರ ಆರಾಧನೆಯು ಆರ್ಯದ್ರಾವಿಡರಲ್ಲಿಯೂ ನಡೆಯಿತು. ಈ ಸಮಯದಲ್ಲಿ ಅವರವರ ಗುಣಕರ್ಮಗಳಿಗನುಸರಿಸಿ ಸಮಾಜದಲ್ಲಿ ಚಾತುರ್ವರ್ಣಾಶ್ರಮಗಳ ವ್ಯವಸ್ಥೆಯಾಯಿತು. ಆದರೆ ಜಾತಿವಾರ ವರ್ಣಾಶ್ರಮಗಳಿರಲಿಲ್ಲ.

ಮುಂದೆ ಶೈವವೈಷ್ಣವ ಬ್ರಾಹ್ಮಣರು ತಮ್ಮ ವರ್ಚಸ್ಸನ್ನು ಇತರರ ಮೇಲೆ ಕೂಡ್ರಿಸುವದಕ್ಕಾಗಿಯೂ ತಮ್ಮ ಸ್ವಾರ್ಥವನ್ನು ಮೆರೆಯಿಸುವದಕ್ಕಾಗಿಯೂ ಕೆಲವು ಸ್ಮೃತಿಗಳನ್ನು ಬರೆದು ಜಾತಿವಾರ ವರ್ಣಾಶ್ರಮಗಳನ್ನು ಬಳಕೆಯಲ್ಲಿ ತಂದರು. ಈ ಪದ್ಧತಿಯನ್ನು ವಿರೋಧಿಸಿ ವೀರಶೈವರು ಪ್ರತ್ಯೇಕವಾಗಿ ಉಳಿದದ್ದರಿಂದ ಇವರಿಗೆ ಅತಿವರ್ಣಾಶ್ರಮಿಗಳೆಂದು ಕರೆಯಬಹುದು. ವೀರಶೈವರು ಸ್ಮೃತಿಕಾರರ ವರ್ಣಾಶ್ರಮ

ಧರ್ಮಕ್ಕೆ ಬಾಹಿರರಾಗಿದ್ದರೂ ಶ್ರುತ್ಯಾಗಮ ಸಂಸಿದ್ಧವಾದ ಸನಾತನ ಧರ್ಮಕ್ಕೆ ಮತ್ತು ಪ್ರಾಚೀನ ದ್ರಾವಿಡಧರ್ಮಕ್ಕೆ ಬದ್ಧರಾಗಿದ್ದಾರೆ. ಆದ್ದರಿಂದ ಅವರಿಗೆ ಹಿಂದುಗಳಲ್ಲವೆಂದು ಸಾಧಿಸಲಿಕ್ಕೆ ಬರುವದಿಲ್ಲ. ವೀರಶೈವರಿಗೆ ಸ್ಮೃತಿಗಳು ಮಾನ್ಯವಿರದಿದ್ದರೂ ಶ್ರುತ್ಯಾಗಮಗಳು ಮಾನ್ಯವವೆ.

ಮುಂದೆ ಪೂರ್ವಮೀಮಾಂಸೆ, ಉತ್ತರಮೀಮಾಂಸೆ, ಸಾಂಖ್ಯ ಯೋಗ, ನ್ಯಾಯ ವೈಶೇಷಿಕಗಳೆಂಬ ಷಟ್‌ಶಾಸ್ತ್ರಗಳು ಹುಟ್ಟಲು ವೀರಶೈವರು ವೀಶೇಷತಃ ಉತ್ತರಮೀಮಾಂಸೆ, ಸಾಂಖ್ಯ, ಯೋಗ ಮಾರ್ಗಗಳನ್ನನುಸರಿಸಿ ತಮ್ಮ ಷಟ್‌ಸ್ಥಲಗಳನ್ನು ರಚಿಸಿ ಪ್ರಕಾಶಗೊಳಿಸಿದರು. ಷಟ್‌ಶಾಸ್ತ್ರಗಳು ಹಿಂದುಗಳಿಗೆ ಆಧಾರ ಗ್ರಂಥಗಳಾಗಿದ್ದು ಅವುಗಳ ತತ್ವಗಳನ್ನು ಆಯ್ದು ಅವುಗಳ ಮೇಲೆ ರಚಿಸಲ್ಪಟ್ಟ ಷಟ್‌ಸ್ಥಲ ಶಾಸ್ತ್ರವನ್ನು ಅನುಸರಿಸಿ ನಡೆಯುವ ವೀರಶೈವರಿಗೆ ಹಿಂದುಗಳಲ್ಲವೆಂದು ಸಾಧಿಸುವದು ವಿಹಿತವಲ್ಲ.

ಬರಬರುತ್ತ ಬ್ರಾಹ್ಮಣರ ಜಾತಿಮದಾಂಧತೆಯ ಉಪಟಳವು ಹೆಚ್ಚಾಗಲು ಕೆಲವು ಕ್ಷತ್ರಿಯರು ಅದನ್ನು ಬಲವಾಗಿ ವಿರೋಧಿಸಿ ತಮ್ಮ ಸ್ವಂತ ಮತಗಳನ್ನೇ ಸ್ಥಾಪಿಸಿದರು. ಗೌತಮಬುದ್ಧನೆಂಬ ಕ್ಷತ್ರಿಯ ರಾಜಕುಮಾರನು ವೈದಿಕ ಧರ್ಮದ ಯಜ್ಞಯಾಗಾದಿಗಳನ್ನು ಖಂಡಿಸಿ ವೀರಶೈವರಂತೆ ವರ್ಣಾಶ್ರಮಗಳ ಭೇದವನ್ನಲ್ಲಗಳೆದು ನೀತಿ ಸದಾಚಾರಗಳಿಗೆ ವಿಶೇಷ ಮಹತ್ವಕೊಟ್ಟನು. ಕರ್ಮಠರ ಪೂಜಾದಿ ಕ್ರಿಯೆಗಳನ್ನು ಧಿಕ್ಕರಿಸಿದನು. ವೀರಶೈವರಾದರೂ ಮುಂದೆ ಬೌದ್ಧ ಧರ್ಮದಲ್ಲಿ ಹೇಳಿದ ನೀತಿ ಸದಾಚಾರಗಳನ್ನು ಅಂಗೀಕರಿಸಿ ಪ್ರಚಾರದಲ್ಲಿ ತಂದರು. ಬೌದ್ಧರಂತೆ ಯಜ್ಞ ಯಾಗಾದಿಗಳ ವಿರುದ್ಧವಾಗಿ ಕ್ರಾಂತಿಯನ್ನು ಮಾಡಿದರು. ಬ್ರಾಹ್ಮಣರ ಸ್ಮೃತಿ ಧರ್ಮದ ವಿರುದ್ಧವಾಗಿ ಮಹಾವೀರನೆಂಬ ಮತ್ತೊಬ್ಬ ಕ್ಷತ್ರಿಯ ರಾಜಕುಮಾರನು ಜೈನ ಮತವನ್ನು ಸ್ಥಾಪಿಸಿದನು. ಅದರೊಳಗೆ ಶ್ರೇಷ್ಠವಾದ ಅಹಿಂಸಾ ತತ್ವವನ್ನು ವೀರಶೈವರು ಸ್ವಲ್ಪ ಮಾರ್ಪಡಿಸಿ ಸ್ವೀಕರಿಸಿದರು. ಈ ಮೇರೆಗೆ ಮೊದಲು ದ್ರಾವಿಡ ಸಂಸ್ಕೃತಿಯಿಂದು ಧ್ವನಿಸಿ ಆರ್ಯರ ವೇದಾಗಮೋಪನಿಷತ್ತು ಶಾಸ್ತ್ರಗಳಿಂದ ಬೆಳೆದು, ಬೌದ್ಧ ಜೈನ ಮತ ತತ್ವಗಳಿಂದ ಪರಿಪೋಷಿತವಾಗಿ ಕೊನೆಗೆ ವೀರ

ಶೈವ ಮತವು ತನ್ನ ಪ್ರತ್ಯೇಕವಾದ ವ್ಯಕ್ತಿತ್ವ ವೈಶಿಷ್ಟ್ಯಗಳನ್ನು ಕಾಪಾಡಿಕೊಂಡಿದೆ. ಅದುದರಿಂದಲೇ ಕೆಲವರು ವೀರಶೈವ ಧರ್ಮವು ಪ್ರತ್ಯೇಕವಾದುದೆಂದು ಸಾಧಿಸುವದು ಸಹಜವಾದರೂ ಅದು ಶ್ರುತ್ಯಾಗಮಿಕ ಧರ್ಮಗಳೇ ಅದಕ್ಕೆ ಆಧಾರಗಳಾಗಿರುವದರಿಂದ ಅದಕ್ಕೆ ಹಿಂದೂ ಧರ್ಮದಿಂದ ಭಿನ್ನತ್ವವನ್ನು ಕಲ್ಪಿಸಲಾಗುವದಿಲ್ಲ.

ಒಂದೇ ಧರ್ಮದಿಂದ ಅನೇಕ ಮತಮತಾಂತರಗಳು ಹುಟ್ಟಿ ಬಾಳುತ್ತವೆ. ಆದರೆ ಅವುಗಳು ಮತಗಳೇ ಹೊರತು ಧರ್ಮಗಳಲ್ಲ. ಕ್ರೈಸ್ತಿಯನ್ ಧರ್ಮದಲ್ಲಿ ರೋಮನ್ ಕಾಥೆಲಿಕ್, ಪ್ರೊಟೆಸ್ಟಂಟ ಎಂಬ ಎರಡು ಮತಗಳುಂಟು. ಅದರಂತೆ ಇಸ್ಲಾಂ ಧರ್ಮದಲ್ಲಿಯೂ ಸೇಖ, ಸೈಯ್ಯದ, ಮೊಗಲ, ಪಠಾಣಗಳೆಂಬ ಪಂಥಗಳಿರುವವು. ಅದೇ ಮೇರೆಗೆ ಹಿಂದೂ ಧರ್ಮದಲ್ಲಿ ವೈದಿಕ, ಜೈನ, ಬೌದ್ಧ, ವೀರಶೈವ, ಚಾರ್ವಾಕ, ನಾಸ್ತಿಕ ಶೀಖ ಇತ್ಯಾದಿ ಅನೇಕ ಮತಗಳು ಹುಟ್ಟಿರುತ್ತವೆ. ಅದುದರಿಂದ ಅವುಗಳಿಗೆ ಪ್ರತ್ಯೇಕವಾದ ಧರ್ಮಗಳೆನ್ನದೆ ಮತಗಳೆಂದೇ ಹೇಳುವದು ಯುಕ್ತವಾಗಿದೆ. ಈ ದೃಷ್ಟಿಯಿಂದ ವಿಚಾರಿಸಲು ಸಂಸ್ಕೃತಿ ಭಿನ್ನವಾದ ಕ್ರಿಸ್ತಿ, ಇಸ್ಲಾಂ ಧರ್ಮಗಳ ಹೊರತಾಗಿ ಹಿಂದುಸ್ತಾನದಲ್ಲಿರುವ ಮೇಲ್ಕಂಡ ಎಲ್ಲ ಮತಗಳನ್ನು ಸಮಾಜ ಸಂಸ್ಕೃತಿಯ ಮೂಲಕ ಹಿಂದೂ ಧರ್ಮದಲ್ಲಿ ಸಮಾವೇಶ ಮಾಡುವದು ಯುಕ್ತವಾಗಿದೆ.

ಬೌದ್ಧರಿಗೆ ಧರ್ಮಪದ ಜೈನರಿಗೆ ಸಮ್ಯಗ್‌ಜ್ಞಾನಾದಿ ಶಾಸ್ತ್ರಗಳು, ಶೀಖರಿಗೆ ಗ್ರಂಥಸಾಹೇಬ ಎಂಬ ಧರ್ಮಗ್ರಂಥಗಳಿರುವವು. ಅವು ಆಗಮೋಪನಿಷತ್ತುಗಳಿಂದ ಭಿನ್ನವಾಗಿರುವದರಿಂದ ಅವು ಸ್ವತಂತ್ರ ಧರ್ಮಗಳೆಂದರೂ ನಡೆಯಬಹುದು. ಆದರೆ ವೀರಶೈವ ಮತದ ಮಾತು ಹಾಗಲ್ಲ. ಅದು ವೇದಾಗಮೋಪನಿಷತ್ತುಗಳಿಂದಲೂ ಶಾಸ್ತ್ರಗಳಿಂದಲೂ ಪರಿಪುಷ್ಟವಾಗಿದೆ. ವೀರಶೈವವು ದ್ವೈತ ಅದ್ವೈತಗಳೆರಡನ್ನೂ ಜಾಣ್ಮೆಯಿಂದ ತನ್ನೊಳಗೆ ಅಳವಡಿಸಿಕೊಂಡದ್ದರಿಂದ ಅದಕ್ಕೆ "ದ್ವೈತಾದ್ವೈತ" ಮತವೆಂದೂ ಕರೆಯುತ್ತಿದ್ದಾರೆ. ವೀರಶೈವ ಷಟ್‌ಸ್ಥಲ ಶಾಸ್ತ್ರವನ್ನು ನೋಡಿದರೆ ಇದು ಪ್ರತ್ಯೇಕವಾದ ಮತವೆಂದು ಕರೆಯಿಸಿಕೊಳ್ಳುವಷ್ಟು ಯೋಗ್ಯತೆಯುಳ್ಳದ್ದಿದ್ದರೂ ಹಿಂದು ಧರ್ಮತತ್ವಗಳು ಅದರಲ್ಲಿ ತೊಡತೊಡಕಾಗಿ ಹೆಣೆಯಲ್ಪಟ್ಟದ್ದರಿಂದ ಅದು ಹಿಂದು ಧರ್ಮದ ಪ್ರಾಮುಖ್ಯವಾದ ಅಂಗವೆಂದೇ ತಿಳಿಯಬೇಕು.

ನಾವು ಹಿಂದುಗಳೆಂದರೆ ಶೂದ್ರಕೊಳಗೆ ನಮ್ಮ ಗಣನೆಯಾಗುವದೆಂದು ಹೆದರಿ ಹಿಂದುಗಳಲ್ಲವೆಂದು ಸಾಧಿಸಲಿಕ್ಕೆ ಹೋಗುವದು ತಪ್ಪು. ಜಾತಿಮದಾಂಧರಾದ ಕರ್ಮಠರು ನಮ್ಮ ಉದಾತ್ತ ತತ್ವಗಳಿಗೆ ಸಹಿಸದೆ ವಿರೋಧದಿಂದ ಸರಕಾರಕ್ಕೆ ತಿಳಿಸಿ ಕಾಯಿದೆಯಿಂದ ನಮ್ಮನ್ನು ಶೂದ್ರರೊಳಗೆ ಎಳೆದ ಮಾತ್ರಕ್ಕೆ ನಾವು ಹೌದೆಂದು ತಲೆಹಾಕುವದೇಕೆ? ಕಾಯಿದೆಕಾನೂನಗಳಲ್ಲಿ ವೀರಶೈವರು ಶೂದ್ರರೆಂದು ಗಣಿಸಲ್ಪಟ್ಟಿದ್ದರೆ ಹಾಗೆ ಮಾಡಿದವರ ಅಜ್ಞಾನ. ಮತ್ತು ಅದಕ್ಕೆ ನಾವು ಸುಮ್ಮನೆ ಕುಳಿತದ್ದು ನಮ್ಮ ತಪ್ಪು. ಶೂದ್ರರೆಂದರೆ ಒಬ್ಬರ ಸೇವೆಮಾಡಿಕೊಂಡು ಜೀವಿಸುವ ಕೀಳುಜನರು. ವೀರಶೈವರೇನೂ ಅಂಥ ಕೀಳುಜನರಲ್ಲ. ಶೂದ್ರರಿಗೆ ಉದಾರವಾದ ಮತ್ತು ಗಹನವಾದ ತತ್ವಗಳಿಲ್ಲ? ಶಾಸ್ತ್ರಪುರಾಣಗಳಿಲ್ಲಿ? ಅದರೆ ಶೂದ್ರತ್ವಕ್ಕೆ ವಿರೋಧವಾಗಿ ಸನಾತನತ್ವಕ್ಕೆ ಮಿಗಿಲಾಗಿ ನಮ್ಮ ಮತದಲ್ಲಿ ದಿವ್ಯತತ್ವಗಳು ಅಡಕವಾಗಿರುವದರಿಂದ ನಾವು ಶೂದ್ರರು ಹೇಗಾಗುತ್ತೇವೆ! ಉಳಿದವರು ಶೂದ್ರರೆಂದ ಮಾತ್ರಕ್ಕೆ ಅದು ಬಹಳ ದಿವಸ ಉಳಿಯಲಾರದು. ಅನೆಗೆ ಶ್ವಾನನೆಂದರೆ ಅಂದವನಿಗೇ ಮಾನಹಾನಿಯಲ್ಲದೆ ಅನೆಗೇನು ಅಪಮಾನವಲ್ಲವಷ್ಟೇ? ರತ್ನಕ್ಕೆ ಕಾಜೆಂದರೆ ಅದು ಕಾಜಾಗಬಲ್ಲುದೇ? ಗುಲಾಬಿ ಹೂವಿಗೆ ಕಣಗಿಲ ಹೂವೆಂದರೆ ಅದು ತನ್ನ ಗಮಗಮ ಸುವಾಸನೆಯನ್ನು ಬಿಡುವದೇ? ನಮ್ಮ ತತ್ವಗಳನ್ನು ಜಗತ್ತಿಗೆ ಶ್ರುತ ಪಡಿಸಿ ನಮ್ಮ ಮೇಲ್ಮೆಯನ್ನು ಕಾಪಾಡಿಕೊಳ್ಳಬೇಕಲ್ಲದೆ ನಮ್ಮ ವಿರೋಧಿಗಳು ನಮಗೆ ಶೂದ್ರರೆನ್ನುತ್ತಾರೆ, ಹೇಗೆ ಮಾಡಬೇಕೆಂದು ಹೆದರಿ ನಾವು ಹಿಂದುಗಳೇ ಅಲ್ಲವೆಂದು ಸಿಡಿದುಬೀಳುವದು ತಕ್ಕದ್ದಲ್ಲ. ಹಿಂದು ಧರ್ಮದಲ್ಲಿ ನಮಗೆ ಅತ್ಯಂತ ಮಹತ್ವದ ಮತ್ತು ಗೌರವದ ಸ್ಥಾನವಿದೆ. ಕ್ರಿಸ್ತಿಯನ್ನರಲ್ಲಿ ಪ್ರೊಟಿಸ್ಟಂಟರಿಗಿರುವಷ್ಟು ಯೋಗ್ಯತೆಯು ಹಿಂದು ಧರ್ಮದಲ್ಲಿ ವೀರಶೈವರಿಗಿದೆ. ಆದುದರಿಂದ ವೀರಶೈವರು ಹಿಂದುಗಳೇ ಅಹುದು.

ವೀರಶೈವರು ಹಿಂದುಗಳಲ್ಲವೆನ್ನುವದಕ್ಕೆ ಕೆಲವರು ಸಣ್ಣ ಪ್ರಮಾಣಗಳನ್ನು ಕೊಡುತ್ತಾರೆ. ಉದಾಹರಣಾರ್ಥ "ಹಿಂದುಗಳು ತಮ್ಮ ಹೆಣಗಳನ್ನು ಸುಡುತ್ತಾರೆ. ಆದರೆ ವೀರಶೈವರು ಹುಗಿಯುತ್ತಾರೆ. ಆದ್ದರಿಂದ ವೀರಶೈವರು ಹಿಂದುಗಳಲ್ಲ. ಹಿಂದುಗಳಿಗೆ ಚಂಡಿಕೆ ಜನಿವಾರಗಳುಂಟು. ವೀರಶೈವರಿಗೆ ಇಲ್ಲ. ಆದ್ದರಿಂದ ವೀರಶೈವರು ಹಿಂದುಗಳಲ್ಲ ಇತ್ಯಾದಿ." ಮುಸಲ್ಮಾನ ಕ್ರಿಸ್ತರು ಹೆಣಗಳನ್ನು ಹುಗಿಯುತ್ತಾರೆ.

ನಾವೂ ಹುಗಿಯುತ್ತೇವೆ. ಅಂದಬಳಿಕ ನಾವೂ ಕ್ರಿಸ್ತಿಯನ್ ಮುಸಲ್ಮಾನರಾದಂತಾಯಿತೇ? ಇಲ್ಲ ಹಿಂದೂಧರ್ಮದ ಪ್ರಕಾರ ಜಾತುವರ್ಣಗಳುಂಟು. ನಾಲ್ಕೂ ವರ್ಣದವರು ತಮ್ಮ ಹೆಣಗಳನ್ನು ಸುಡುವರು. ನಾಲ್ಕೂ ವರ್ಣದವಂಗೆ ಚಂಡಿಕೆ ಜನಿವಾರಗಳುಂಟು. ಆದರೆ ವೀರಶೈವರು ಜಾತಿವಿಶಿಷ್ಟವಾದ ಜಾತುವರ್ಣಗಳನ್ನು ಬಿಸುಟಬಿಟ್ಟಿದ್ದರಿಂದ ಅವರು ಬ್ರಾಹ್ಮಣ ಧರ್ಮದ ವರ್ಣಾಶ್ರಮಕ್ಕೆ ಬಾಹಿರರಾಗಿದ್ದಾರೆ. ಇಷ್ಟರಮೇಲಿಂದ ಅವರು ಹಿಂದುಗಳಲ್ಲವೆನ್ನಲಿಕ್ಕೆ ಬರುವದಿಲ್ಲ. ಆದರೆ ಶ್ರುತ್ಯಾಗಮದ ವಿಶಾಲತತ್ವಗಳು ವೀರಶೈವಮತದ ತಳಹದಿಯಾಗಿರುವದರಿಂದ ವೀರಶೈವರು ಹಿಂದುಗಳೇ.

ಜಾತುವರ್ಣಾಶ್ರಮಗಳಿಗೊಳಪಟ್ಟ ಮತಗಳಷ್ಟೇ ಹಿಂದೂಧರ್ಮದಲ್ಲಿ ಬರುತ್ತವೆ, ಉಳಿದವುಗಳು ಬರುವದಿಲ್ಲವೆಂದು ಹೇಳುವದು ಹುಚ್ಚುತನವು. ಬೌದ್ಧ ಜೈನಮತಗಳು ಸ್ಮೃತಿಪ್ರತಿಪಾದಿತವಾದ ಜಾತುವರ್ಣಗಳ ವಿರುದ್ಧವಾಗಿ ಜನ್ಮತಾಳಿದವು. ಅದರಂತೆ ವೀರಶೈವ ಧರ್ಮವೂ ಹೊರಟಿತು. ಮ. ಗಾಂಧಿಯವರೂ ಸ್ಮೃತಿಧರ್ಮಗಳ ಅನೇಕ ಆಚರಣೆಗಳಿಗೆ ವಿರೋಧವಾನಿದ್ದಾರೆ. ಅಂದಬಳಿಕ ಮ. ಗಾಂಧಿಯವರು ಹಿಂದುಗಳಲ್ಲವೇ? ಸ್ಮೃತಿಗಳಷ್ಟೇ ಹಿಂದೂಧರ್ಮದ ಅಸಾಧಾರಣ ಧರ್ಮವಲ್ಲ. ಶ್ರುತ್ಯಾಗಮಗಳೂ ಅದಕ್ಕೆ ತಳಹದಿಯಾಗಿವೆ. ವೀರಶೈವ ಮತವು ಸ್ಮೃತಿಗಳನ್ನು ಬಿಟ್ಟರೂ ಶ್ರುತ್ಯಾಗಮಶಾಸ್ತ್ರಗಳ ಅಸ್ತಿವಾರದ ಮೇಲೆ ನಿಂತಿರುವದರಿಂದ ವೀರಶೈವರು ಹಿಂದುಗಳಲ್ಲವೆಂದು ಹೇಳುವದು ಅನುಚಿತವು.

ಲಿಂಗಾಯತ ಸಮಾಜ ರಚನೆ.

(ಸಾಮಾನ್ಯ, ವಿಶೇಷ, ನಿರಾಭಾರಿಗಳು.)

ಲೇಖಕರು:— ಬಸವಪ್ಪ ಚಿನ್ನಪ್ಪ ಕಟ್ಟೀದ ವಂಟಮೂರಿ.

ಶ್ರೀ ಬ್ಯಾಳಿ ಕಲ್ಯಾಣಪ್ಪನವರು, ೧೯೪೧ ನೆಯ ಫೇಬ್ರುವರಿಯ ಶಿವಾನುಭವ ಸಂಚಿಕೆಯಲ್ಲಿ ಲಿಂಗಾಯತರ ಸಮಾಜರಚನೆಯನ್ನೂ ಕುರಿತು ಲೇಖಬರೆದು ಮಾಡಿದ ವಿವೇಚನೆಯು ಬಹು ಸಮರ್ಪಕವೂ ಮನನೀಯವೂ ಆಗಿರುವುದರಲ್ಲಿ ಅದಾವ ಸಂದೇಹವೂ ಇಲ್ಲ. ಅವರು ವೀರಶೈವದ ಮರ್ಮವರಿತವರು. ಆಬಗ್ಗೆ ಅಧಿಕಾರಯುತರಾಗಿ ಬರೆಯಬಲ್ಲವರು. ಅವರು ಐಕ್ಯದೃಷ್ಟಿಯವರು. ಅವರ ಧೋರಣವು ನನ್ನಂತ ಹಿಂಗೆ ಹೋಳಿಯದು ಸಹ. ಆದರೆ ಇಂತಹ ಮೇಲ್ತರಗತಿಯವರ ಸಂಖ್ಯೆಯು ಸಮಾಜದಲ್ಲಿ ತೀರಕಡಿಮೆ. ಉಳಿದವರು ಸ್ಥೂಲದೃಷ್ಟಿಯವರೇ. ಅವರಲ್ಲಿ ತಪ್ಪುತಿಳುವಳಿಕೆಗೆ ಅಸ್ಪದವಾಗಬಾರದೆಂದು "ಶ್ರೀನಿಜಗುಣಶಿವಯೋಗಿಗಳು ಮಾಡಿದ ಸಾಮಾನ್ಯರು, ವಿಶೇಷರು, ನಿರಾಭಾರಿಗಳು ಎಂಬ ವರ್ಗೀಕರಣವನ್ನು, ಭಕ್ತವರ್ಗ ಮಾಹೇಶ್ವರವರ್ಗ ನಿರಂಜನವರ್ಗ ಎಂದು ವಿಂಗಡಿಸಬಹುದು." ಎಂದು ಶ್ರೀ ಬ್ಯಾಳಿಯವರು ಬರೆದಿರುವದನ್ನು ತುಸು ಹೆಚ್ಚಿಗೆ ವಿವರಿಸುವದು ಆವಶ್ಯವಾಯಿತು. ಮೊದಲು ಭಕ್ತಶಬ್ದದ ನಿಜವಾದ ಅರ್ಥವನ್ನು ಸ್ಪಷ್ಟೀಕರಿಸಿ ತರುವಾಯ ವರ್ಗೀಕರಣಕ್ಕೆ ಕೈಹಾಕುವಾ.

ಲಿಂಗಾಯತ, ವೀರಶೈವ, ಶಿವಭಕ್ತ, ಲಿಂಗಾಂಗಿ, ಸಾಮಾನ್ಯ, ಲಿಂಗವಂತ ಈ ಶಬ್ದಗಳೆಲ್ಲ ಪರ್ಯಾಯ ವಾಚಕಗಳು. ಶಿವಭಕ್ತವೆಂಬುದನ್ನು ಬರೇ "ಭಕ್ತ" ಎಂತಲೂ ಉಪಯೋಗಿಸುವರು. ಜನತೆಯಲ್ಲಿ ಭವಿ, ಭಕ್ತ ಎಂಬೆರಡೇ ವರ್ಗಗಳೆಂದು ನಮ್ಮ ಮತವು ಸಾರುತ್ತದೆ. ಇಲ್ಲಿ ಭಕ್ತರೆಂದರೆ ಶಿವಭಕ್ತರೆಂದೇ ಅರ್ಥವು. ಸಮಸ್ತಲಿಂಗಾಂಗಿಗಳಿಗೆ ಸಾಮಾನ್ಯವಾಗಿ ಭಕ್ತರೆಂಬುದೊಂದು ರೀತಿ. ಮತ್ತು ಷಟ್‌ಸ್ಥಳದಲ್ಲಿ ಆರಂಭದ ಸ್ಥಳದವರಿಗೆ ಭಕ್ತರೆಂಬುದೊಂದು ರೀತಿ, ಹೀಗೆ ಎರಡು ಬಗೆಯಿಂದ ಭಕ್ತಶಬ್ದವು ನಮ್ಮಿಂದ ವ್ಯವಹರಿಸಲ್ಪಡುತ್ತದೆ. ಇದು ನಿಜವಾಗಿ ಎರಡು ವಿಧವಲ್ಲೇ ಅಲ್ಲ. ಮೊದಲು ಭವಿ ಇರುವವನು ಭಕ್ತವರ್ಗದಲ್ಲಿ ಸೇರಿಕೊಳ್ಳುವದರಿಂದ ಆರಂಭದ ಸ್ಥಾನದವನಿಗೆ ಭಕ್ತನೆಂಬ ಹೆಸರು ಪ್ರಾಪ್ತವಾಗುವದು ಸಾಹಜಿಕವದೆ. ಇದು ವ್ಯಾಪಕಾರ್ಥದ ಭಕ್ತ ಶಬ್ದವೇ ಹೊರ್ತು, ವ್ಯವಹಾರದಲ್ಲಿ ಜನರು ತಿಳಿಯುವಂತೆ ಅಕುಂಚಿತಾರ್ಥವು ಅದಕ್ಕೆ ಎಂದೂ ಇಲ್ಲ. ಆದರೂ ಅದು ಮೊದಲನೆಯ ಮೆಟ್ಟಿಲಿನ ಹೆಸರಿಂದು, ಕೆಲವರು ಅಲಕ್ಷದಿಂದ ಅದಕ್ಕೆ ಅಕುಂಚಿತಾರ್ಥವನ್ನು ಊಹಿಸುತ್ತಾರೆ; ಇದು ಸರಿಯಲ್ಲ. ಬೇಕಾದರೆ ಆರಂಭದವರಿಗೆ ಶ್ರದ್ಧಾಭಕ್ತರೆನ್ನಬಹುದು. ಇವರು ಭಕ್ತತ್ವದಲ್ಲಿ ಶ್ರದ್ಧೆಯನ್ನಿಟ್ಟು ಅದನ್ನು ಬುದ್ಧ್ಯಾಹಿಡಿದವರು; ಹೀಗೆಂದರೆ ಮುಂದಿನವರಿಗೆ ನಿಷ್ಠಾಭಕ್ತ, ಅವಧಾನಭಕ್ತ,...ಸಮರಸಭಕ್ತ ಎಂದಾಗಲಿ; ಮಹೇಶಭಕ್ತ, ಪ್ರಸಾದಿಭಕ್ತ... ಐಕ್ಯ ಭಕ್ತ ಎಂದಾಗಲಿ ಕರೆಯಬೇಕಾದೀತು. ಈ ವಿಷಯವಾಗಿ ವಚನಕಾರರು ಸ್ಪಷ್ಟವಾಗಿ ಉಸುರಿರುವರು. ಏನೆಂದರೇ —

"ಆಧಾರದಲ್ಲಿ ಆಚಾರಲಿಂಗವ ಧರಿಸಿ ಆಚಾರಲಿಂಗಭಕ್ತನಾದನಯ್ಯ ನಿಮ್ಮ ಶರಣ; ಸ್ವಾಧಿಷ್ಠಾನದಲ್ಲಿ ಗುರುಲಿಂಗವ ಧರಿಸಿ, ಗುರುಲಿಂಗ ಭಕ್ತನಾದನಯ್ಯ ನಿಮ್ಮ ಶರಣ; ಮಣಿಪೂರಕದಲ್ಲಿ ಶಿವಲಿಂಗವ ಧರಿಸಿ ಶಿವಲಿಂಗಭಕ್ತನಾದನಯ್ಯ ನಿಮ್ಮ ಶರಣ; ಅನಾಹತದಲ್ಲಿ ಜಂಗಮಲಿಂಗವ ಧರಿಸಿ, ಜಂಗಮಲಿಂಗ ಭಕ್ತನಾದನಯ್ಯ ನಿಮ್ಮ ಶರಣ, ವಿಶುದ್ಧಿಯಲ್ಲಿ ಪ್ರಸಾದಲಿಂಗವ ಧರಿಸಿ, ಪ್ರಸಾದಲಿಂಗ ಭಕ್ತನಾದನಯ್ಯ ನಿಮ್ಮ ಶರಣ; ಆಜ್ಞೆಯಲ್ಲಿ ಮಹಾಲಿಂಗವ ಧರಿಸಿ, ಮಹಾಲಿಂಗ ಭಕ್ತನಾದನಯ್ಯ ನಿಮ್ಮ ಶರಣ; ಇಂತು ಷಡಾಧಾರದಲ್ಲಿ ಷಡುಲಿಂಗವ ಧರಿಸಿ, ಷಟ್‌ಸ್ಥಲ ಭಕ್ತನಾದನಯ್ಯ ನಿಮ್ಮ ಶರಣ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ" ತಾತ್ಪರ್ಯವೇನೆಂದರೆ— ಲಿಂಗಪೂಜಕರೆಲ್ಲರು ಭಕ್ತರಾಗಿರುವದರಿಂದ, ಅದನ್ನು ಯಾವಾಗಲೂ ವ್ಯಾಪಕಾರ್ಥದಲ್ಲಿಯೇ ಭಾವಿಸಬೇಕು. ಕೂಸಾಗಿದ್ದರೂ ಮನುಷ್ಯನೇ! ತರುಣನಾದರೂ ಮನುಷ್ಯನೇ! ವೃದ್ಧನಾದರೂ ಮನುಷ್ಯನೇ! ಆಪ್ರಾಣಿಗೆ ಮನುಷ್ಯನೆಂಬ ಹೆಸರು ಹೇಗೆ ತಪ್ಪಲಾರದೋ ಹಾಗೆ, ಯಾವ ಸ್ಥಲದಲ್ಲಿದ್ದರೂ ವೀರಶೈವರಿಗೆ ಭಕ್ತರೆಂಬುದು ತಪ್ಪಲಾರದು. ಮೇಲಾಗಿ ಲಿಂಗಾಂಗಿಯು ಎಲ್ಲಿದ್ದರೂ ಆರು ಸ್ಥಲಗಳನ್ನೂ ಅನುಸರಿಸಲೇ ಬೇಕಾಗುವದು. ಅದುದರಿಂದ ಭಕ್ತರೆಂದರೆ ತಮಗಿಂತ ಕಡಿಮೆಯವರೆಂದು ಯಾವ ಸ್ಥಲದ

ವರೂ ಎಣಿಸಕೂಡದು. ಹಾಗೆ ಎಣಿಸಿದರೆ ಅದು ಅವರ ಅಜ್ಞಾನವನ್ನೇ ವ್ಯಕ್ತಗೊಳಿಸುತ್ತದೆ. ಶ್ರೀಸಿದ್ಧರಾಮೇಶ್ವರ ದೇವರ ಈ ವಚನವನ್ನು ಗಮನಿಸಿರಿ.

"ಲಿಂಗದ ಲೀಲೆ ಹೇಳುವಡೆನಗೆ ಅಸಾಧ್ಯವಯ್ಯ! ಭಕ್ತನ ಹಸ ದಲ್ಲಿ ಜಂಗಮನಾಗಿ ನೆಲಸಿದನಯ್ಯಾ ಲಿಂಗಮೂರ್ತಿಯು. ಜಂಗಮ ಹಸ್ತದಲ್ಲಿ ಭಕ್ತನಾಗಿ ನೆಲಸಿದನಯ್ಯಾ ಲಿಂಗ ಮೂರ್ತಿಯು ಜಂಗಮ ಪೂಜಿಸಿದ ಫಲ ಸಂಪದಾದಿ ಮೋಕ್ಷ ಕೊಟ್ಟಿತ್ತು ಭಕ್ತಂಗೆ; ಭಕ್ತ ಪೂಜಿಸಿದ ಫಲ ಜ್ಞಾನ ವೈರಾಗ್ಯ ಕೊಟ್ಟತ್ತು ಜಂಗಮಂಗೆ, ಕಪಿಲ ಸಿದ್ಧಮಲ್ಲಿಕಾರ್ಜುನಾ" ಇದರಲ್ಲಿ ಭಕ್ತ ಜಂಗಮರು ಪರಸ್ಪರರನ್ನು ತಮ್ಮ ಲಿಂಗದಂತೆಯೇ ಭಾವಿಸಬೇಕೆಂದೂ ಅದರ ಸಮಧುರ ಫಲವನ್ನು ಪಡೆಯಬೇಕೆಂದೂ ದೋಧಿಸಿವ್ವಾರೆ. ಇದರಿಂದ ಹೆಚ್ಚು ಕಡಿಮೆಗೆ ತಿಲಾಂಶವಾದರೂ ಅವಕಾಶವುಂಟೇ? ಒಮ್ಮೆ ಶಿವದೀಕ್ಷೆಯಿಂದ ಭಕ್ತರಾದ ಮೇಲೆ ಅದನ್ನು ಬಿಡದೆ ಅನುಸರಿಸಿ ಮುಕ್ತರಾಗಬೇಕೇ ಹೊರತು ಪುನಃ ಭವಿಗಳಾಗಬಾರದು.

ಶ್ರೀ ನಿಜಗುಣಾರಾಧ್ಯರು ವೀರಶೈವರ ವರ್ಗೀಕರಣ ಮಾಡುವದರಲ್ಲಿ "ಅವರು ಹೆಚ್ಚು ಇವರು ಕಡಿಮೆ" ಎಂದು ಹೇಳುವ ಉದ್ದೇಶವಿಲ್ಲ. ಯಾವದೊಂದು ಬೇರೆ ಸಾಮಾಜಿಕ ಭಾರವನ್ನು ವಹಿಸದೆ, ತಮ್ಮಷ್ಟಕ್ಕೆ ತಾವಿರುವವರೇ ಸಾಮಾನ್ಯರು. ಭವಿಗಳಾಗಿದ್ದಾಗ ಚತುರ್ವರ್ಣಾದಿ ಭೇದಗಳುಳ್ಳವರಾಗಿದ್ದರೂ, ಈಗ ಅವನ್ನೆಲ್ಲ ಬಿಟ್ಟು ಎಲ್ಲರೂ ಒಂದೇ ಒಂದಾದ ಶಿವದೀಕ್ಷೆಯನ್ನು ಹೊಂದಿ ಸಮಾನತೆವಡೆದುದರಿಂದಲೇ ಸಾಮಾನ್ಯರೆನಿಸಿದರು. ಈ ಬಗ್ಗೆ ಶ್ರೀ ಜೆನ್ನಬಸವೇಶ್ವರ ದೇವರು "ದಾಸೀ ಪುತ್ರನೇ ಆಗಲಿ ವೇಶ್ಯಾ ಪುತ್ರನೇ ಆಗಲಿ. ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ "ಶಿವ" ನೆಂದೇ ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುವದೇ ಯೋಗ್ಯವು.....ಕೂಡಲಚೆನ್ನಸಂಗಮದೇವಾ" ಎಂದೂ ಶ್ರೀ ಬಸವಣ್ಣನವರು "....ಅಂಗ, ಲಿಂಗ ಸಹಿತವಾಗಿ ಮನೆಗೆ ಬಂದರೆ, ಸಂಗಾ ನೀನೆಂಜೆ....."ಎಂದೂ ಶಿವದೀಕ್ಷೆಯುಕ್ತರನ್ನು ಹೊಗಳಿದ್ದಾರೆ. ಇರಲಿ. ಈ ಭಕ್ತರಲ್ಲಿ ಕೆಲವರು ಪ್ರಾಣಲಿಂಗಾನು ಸಂಧಾನಿಗಳು, ಚಟುವಟಿಕೆಯು ಕುತೂಹಲವುಳ್ಳವರಾಗಿ ಸಮಾಜ ಸೇವೆಯು

ಹೆಚ್ಚಿನ ಭಾರವನ್ನು ಧರಿಸಲಿಕ್ಕೆ ಸಿದ್ಧರಾದುದರಿಂದ, ಅವರನ್ನು ಆ ಕರ್ತವ್ಯಕ್ಕೆ ಪಟ್ಟಗಟ್ಟಿ, ಅವರಿಗೆ ಆಚಾರ್ಯರೂ ಪಟ್ಟಾಧಿಕಾರಿಗಳೂ ಚರಮೂರ್ತಿಗಳೂ ಎಂಬ ಹೆಸರಿಟ್ಟು, ಗುರುವರ್ಗದವರೆಂದರು. ಇವರೇ ವಿಶೇಷರು! ಇವರು ತಾವು ವಹಿಸಿದ ಸಮಾಜ ಸೇವೆಯ ಹೊಣೆಯೇ ಇವರನ್ನು ವಿಶೇಷರನ್ನಾಗಿ ಮಾಡಿತು. ಇವರು ಲೌಕಿಕ ರೀತಿಯಲ್ಲಿ ಸಮಾಜ ಪ್ರಗತಿಯ ಹೊಣೆಯನ್ನು ಹೊತ್ತಂತೆಯೇ, ನಿರಾಭಾರಿಗಳು ಪಾರಮಾರ್ಥಿಕ ರೀತಿಯಲ್ಲಿ (ಷಟ್‌ಸ್ಥಲ ಜ್ಞಾನಮಾರ್ಗದಲ್ಲಿ) ತಾವು ಸ್ವತಃ ನಿಂತರಾಗಿದ್ದು, ಸಮಾಜವನ್ನು ಹಾಗೆ ಸಿದ್ಧಪಡಿಸುವ ಹೊಣೆಯನ್ನು ಹೊತ್ತು, ಜನತೆಯಿಂದ ನಿರಂಜನಪಟ್ಟ (ಶೂನ್ಯಸಿಂಹಾಸನ) ದ ಅಧಿಕಾರಿಗಳೆನಿಸಿಕೊಂಡರು.

ಸೇವೆಯು ಸುಸೂತ್ರ ಸಾಗಬೇಕಾದರೆ ತಮಗೆ ಪ್ರಪಂಚದ ಜಂಜಡ ವಿರಬಾರದೆಂದು, ಗುರುವರ್ಗದವರು ಸಪತ್ನೀಕರಾಗದೆ ಹೆಣ್ಣನ್ನು ತೊರೆದು ಬ್ರಹ್ಮಚಾರಿಗಳಾಗಿ ನಿಂತರು. ಆದರೂ ಹೊನ್ನು ಮಣ್ಣುಗಳನ್ನು ಹಿಡಿದರು. ಇದಲ್ಲದೆ ಸೇವೆ ಸಾಕಾದಾಗ ಆ ಕರ್ತವ್ಯವನ್ನು ಬಿಟ್ಟು ಹೆಂಡತಿಯನ್ನು ಮಾಡಿಕೊಳ್ಳಲಿಕ್ಕೆ ಸಹ ಇವರಿಗೆ ಅನುಕೂಲವಿರುವದು. ಆದರೆ ನಿರಾಭಾರಿಗಳು ಈ ಮೂರರ ಭಾರವನ್ನು ನೀಗಿ ಸಂಪೂರ್ಣ ಸಂಸಾರವನ್ನು ತ್ಯಾಗಮಾಡಿ, ಆಜನ್ಮ ಸಮಾಜ ಸೇವಾ ಒದ್ಧರಾದವರು. ಇವರು ಸ್ವತಃ ಅಹಂಕಾರ ನಿರಾಕಾರಗಳೆರಡಕ್ಕೂ ಅತೀತವಾದ ಭಾವಲಿಂಗವನ್ನ ಪೂಜಿಸುತ್ತ, ಗುರುವರ್ಗದವರೆನ್ನಿಸುವ ವಿಶೇಷರನ್ನು ಪ್ರಾಣಲಿಂಗ ಪೂಜೆಯಲ್ಲಿ ಪ್ರೇರಿಸುತ್ತ, ಇವರ ದ್ವಾರವಾಗಿ ಸಾಮಾನ್ಯರ ಇಷ್ಟಪೂಜೆಯು ಸರಿಯಾಗಿ ನಡೆಯುವಂತೆ ಪ್ರೋತ್ಸಾಹಿಸುತ್ತ ತಮ್ಮ ಆಯುಷ್ಯವನ್ನು ಸದಾ ಲಿಂಗಾನಂದದಲ್ಲಿ ಕಳೆಯುತಕ್ಕವರು. ಪಂಚಾಚಾರ್ಯರಾದರೋ ತಾವು ಷಟ್‌ಸ್ಥಲಮಾರ್ಗದಲ್ಲಿ ಯೋಗ್ಯ ಪ್ರಗತಿಯನ್ನು ಹೊಂದುತ್ತ ಪಟ್ಟಾಧಿಕಾರಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕರ್ತವ್ಯ ಮಗ್ನರಾಗಿರುವಂತೆ ಮೇಲ್ವಿಚಾರಣೆಯನ್ನು ದಕ್ಷತೆಯಿಂದ ಜರಗಿಸುತ್ತ, ತಮ್ಮ ಜನ್ಮ ಸಾಫಲ್ಯವನ್ನು ಪಡೆಯುತಕ್ಕವರು. ವಿಶೇಷ ನಿರಾಭಾರಿಗಳಾದವರೆಲ್ಲರೂ ತಮ್ಮ ಗುಣಕರ್ಮಗಳಲ್ಲಿ ತೇಜಸ್ವಿಗಳಾಗಿದ್ದಾರೆ. ಅವರ ವರ್ಚಸ್ಸು ಸಮಾಜದಲ್ಲಿ ಬೆಳೆದು, ಎಲ್ಲ ಕಡೆಗೆ ಅವರ ಅಧಿಕಾರವು ಪ್ರಬಲವಾಗಿ ಸಾಗುವದು. ಈಗ ಆ ತೇಜಸ್ಸನ್ನು ಕಳೆದು ಕೊಂಡದ್ದರಿಂದಲೇ ಹತವೀರ್ಯ

ರಾಗಿರುವರು. ಈ ವಿಧದ ಲೌಕಿಕ ಸ್ವಾರ್ಥತ್ಯಾಗದ ಮೂಲಕವೇ ಸಮಾಜವು ಅವರ ಯೋಗಕ್ಷೇಮವನ್ನು ಸಂಪೂರ್ಣವಾಗಿ ವಹಿಸಿ, ಇಷ್ಟು ಗೌರವವನ್ನಿತ್ತಿರುವದು! ಇದೇ ಅವರು ಪಡೆಯುವ ಲೌಕಿಕ ಅಪ್ರತಿಮ ಸಂಪಾದನೆ! ಸೇವೆಯಿಂದ ಸಮಾಜದಲ್ಲಿ ಕೀಳುತನ ಬರದೆ, ತಿರುಗಿ ಅತ್ಯೋದ್ಧಾರದ ದೃಷ್ಟಿಯಿಂದ ಮೇಲ್ಮೆಯೇ ಪ್ರಾಪ್ತವಾಗುವ ದೆಂದು ಬಗೆದು ಸಾಮಾನ್ಯರೊಳಗಿಂದ ಬಲ್ಲಿದೆರಾದ ಈ ಗುರು ನಿರಾ ಭಾರಿವರ್ಗಗಳು ಸ್ವಸಂತೋಷದಿಂದಲೇ ಮುಂದೆ ಬಂದವು. ಭವಿಗಳಲ್ಲಿ ಸೇವೆಯು ಕೀಳಾದುದೆಂಬ ಕಲ್ಪನೆಯುಂಟು. ಆದರೆ ಭಕ್ತರಲ್ಲಿ ಕಾಯ ಕವೇ (ಒಂದಿಲ್ಲೊಂದು ರೀತಿಯ ಸಮಾಜಸೇವೆಯು) ಕೈಲಾಸವೆಂದು ಪರಿಗಣಿಸಲ್ಪಟ್ಟುದರಿಂದ ಸೇವಾಸಕ್ತರು ಪೂಜ್ಯರೇ ಆದರು. ಸ್ವಾರ್ಥ ತ್ಯಾಗಕ್ಕೊಸುಗ ಸಮಾಜವು ತಮ್ಮ ಪೂಜೆಯನ್ನು ಮಾಡುವದಾದರೂ, ತಾವೇನೂ ಶ್ರೇಷ್ಠರೆಂದು ಯಾರೂ ತಿಳಿಯಕೂಡದು. ಹಾಗೆ ತಿಳಿದರೆ ಅಹಂಕಾರವು ಸೋಂಕಿ, ಕೂಡಲೆ ಅವರು ಭಕ್ತತ್ವಕ್ಕೆ ಎರವಾಗಿ ಭವಿ ಗಳಾಗುವರು ಇದು ಭಕ್ತರಿಗೆ ಸಹಸಾ ಯೋಗ್ಯವಲ್ಲ; ಶ್ರೀಬಸವ ದೇವನಂತೆ ಯಾವಾಗಲೂ ಬಲು ಎಚ್ಚರದಿಂದಿರಬೇಕು.

ಇನ್ನು ಈ ಒರೆಗಲ್ಲಿಗೆ ಒರೆದು ನೋಡಿದರೆ ಶ್ರೀಮಾನ್ ಬ್ಯಾಳಿಯವರ ವರ್ಗೀಕರಣವು ಯಾವ ಮಟ್ಟಿಗೆ ಬರುವದೆಂಬದನ್ನು ನೋಡಿರಿ. ಅವರು ಸಾಮಾನ್ಯರನ್ನು ಭಕ್ತರೆಂದೂ, ವಿಶೇಷರನ್ನು ಮಹೇಶ್ವರರೆಂದೂ ನಿರಾ ಭಾರಿಗಳನ್ನು ನಿರಂಜನರೆಂದೂ ವಿಂಗಡಿಸಿರುವರು. ಶ್ರೀಸಿದ್ಧರಾಮೇ ಶ್ವರರ ಈ ವಚನದ ಕಡೆಗೆ ತುಸು ಲಕ್ಷವೀಯಿರಿ.— "ಭಕ್ತಂಗೆ ಜಂಗ ಮಂಗೆ ರೂಪದಲ್ಲಿ ಭೇದವೇ? ಅಲ್ಲಲ್ಲ! ಭಕ್ತನಾದಡೆ ಮೂರಕ್ಕೆ ಒಳಗು, ಜಂಗಮನಾದಡೆ ಮೂರಕ್ಕೆ ಹೊರಗು. ಒಳಗಾದವರ ಪಾದೋದಕ ಸಲ್ಲದು. ತಕ್ಕೊಂಡವರಿಗೆ ನರಕ ತಪ್ಪದು! ಕೊಟ್ಟವರಿಗೆ ಭವ ಹಿಂಗದು ಕಪಿಲಸಿದ್ಧಮಲ್ಲಿಕಾರ್ಜುನ" ಇದರಲ್ಲಿ ಮೂರಕ್ಕೆ (ಹೊನ್ನು ಹೆಣ್ಣು ಮಣ್ಣು ಗಳಿಗೆ) ಒಳಗಾದವರೆಲ್ಲ ಅಂದರೆ ಸಂಸಾರಿಗಳೆಲ್ಲ ಭಕ್ತರೆಂದೇ ಹೇಳ ಹೇಳಲಾಗಿದೆ. ಅರ್ಥಾತ್ ಅಯ್ಯನವರೂ * ಗಣಂಗಳೂ ಇದರಲ್ಲೇ

* ಟೀಪು— ನಿಜವಾದ ಅಯ್ಯಗಳಾರೆಂಬುದನ್ನು ಈ ವಚನದಲ್ಲಿ ನೋಡಿರಿ. "ಅಸ್ಪವಿಧಾರ್ಚನೆ ಪೋದಶೋಪಚಾರವಲ್ಲದೆ ನಿಮ್ಮ ಮುಟ್ಟಲರಿಯದ ವರ ಕಡೆಗೆ, ಅಯ್ಯಾ ಎಂತೆಂದೆನವರ? ಅವಭಾವದಲ್ಲಿ ಅವಜ್ಞಾನದಲ್ಲಿ ಅವ

(ಮುಂದಿನ ಪುಟ ನೋಡಿರಿ.)

ಬರುವರು. ಇವರು ವಿಶೇಷರೆನ್ನಿಸಿಕೊಳ್ಳಬೇಕಾದರೆ ಮೇಲೆ ಹೇಳಿದಂತೆ ಬಾಹ್ಯಾಂತರಗಳಲ್ಲಿ ವಿಶೇಷವನ್ನು ಧರಿಸಲೇಬೇಕು. ಅಂತಹ ಗುಣ ಕ್ರಿಯೆಗಳು ಬ್ರಹ್ಮಚಾರಿಗಳಾದ ಗುರುವರ್ಗದಲ್ಲೇ ತೋರಬಹುದು. ಅವರ ಹೊರತು ಬೇರೆಯವರು ವಿಶೇಷರಾಗಲಾರರು. ಶ್ರೀಮಾನ್ ಬ್ಯಾಳಿಯವರ ಈ ಅಭಿಪ್ರಾಯವು ಷಟ್‌ಸ್ಥಲದ ಮಾಹೇಶ್ವರತ್ವವನ್ನು ಅತಿಕ್ರಮಿಸುವದು. ಮಾಹೇಶ್ವರರು (ಅಯ್ಯನವರೂ ಗಣಂಗಳೂ) ಗುರು ವರ್ಗದವರ ಸಮಾಜಸೇವೆಗೆ ಬೇರೆ ಬೇರೆ ರೀತಿಯಿಂದ ಸಹಾಯ ಮಾಡು ವವರಷ್ಟೇ! ಅವನ್ನು ಶ್ರೀಮಾನ್ನರು ವಿಶದವಾಗಿ ಹೇಳಿದ್ದಾರೆ. ಅಷ್ಟು ದಿಂದಲೇ ಅವರು ವಿಶೇಷತ್ವಕ್ಕೆ ಬಾಧ್ಯರಾಗರು. ಇನ್ನು ಹಿರೇಮಠಗಳು ಹೇಗೆ ಉತ್ಪನ್ನವಾದವೆಂಬದನ್ನು ನೋಡುವಾ.

ಹಿರೇಮಠ.

ಒಂದು ಪಟ್ಟದ ಗೊತ್ರಸೂತ್ರಗಳಿಗೆ ಒಳಗಾದ ಶಿಷ್ಯಗಣವೆಲ್ಲವೂ ಮೊದಮೊದಲು ಅವರ ಸನ್ನಿಧಿಯಲ್ಲೇ ಒತ್ತಟ್ಟಿಗೆ ಇರುತ್ತಿದ್ದಿತು. ಮುಂದೆ ಬರಬರುತ್ತ ಶರೀರಸಂಬಂಧ, ಹೊಟ್ಟೆಹೊರಕೊಂಬುವದು, ಹೊಲಮನೆ ಮೊದಲಾದ ಸ್ಥಾವರ ಆಸ್ತಿಗಳು, ಇವೇ ಮುಂತಾದವು ಗಳ ಸೌಕರ್ಯ ಮೂಲಕವಾಗಿ ಅವರು ಸ್ಥಾನಾಂತರವನ್ನು ವಹಿಸಿ, ಸುತ್ತುಮುತ್ತು ಮೊಟ್ಟೆಯೊಳಗಿನ ನೆಲ್ಲೀಕಾಯಿ ಚದರಿದಂತೆ ದಿಕ್ಕಾಸಾ ಲಾದರು. ಅನೇಕರು ಬಹು ದೂರದೂರ ಸಹ ವಾಸಿಸಹತ್ತಿದರು. ಆಗ ತಮ್ಮ ತಮ್ಮ ಗುರುಗಳಿಂದಲೇ ಅವರವರ ಸಂಸ್ಕಾರಗಳು ಸಾಗು ವದು ಅಸಂಭವವಾಗಿ ತೊಂದರೆಗೀಡಾದರು. ಈ ಅನವಸ್ಥೆಯನ್ನು ದೂರ ಮಾಡಿ, ಸುವ್ಯವಸ್ಥೆಯನ್ನು ಸ್ಥಾಪಿಸುವ ಅನಿವಾರ್ಯಪ್ರಸಂಗವೇ ಒದ ಗಿತು. ಇದು ಎಲ್ಲ ಗುರುಗಳಿಗೂ ಶಿಷ್ಯರಿಗೂ ಸಾಮಾನ್ಯವಾದ ಆಪತ್ತಿ ಯಾಗಿ ಪರಿಣಮಿಸಿತು. ಆಗ ಎಲ್ಲ ಪಟ್ಟಾಧಿಕಾರಿಗಳು ಆಲೋಚಿಸಿ,

ಮುಖದಲ್ಲಿ ಅರಿವರವರದಾರಯ್ಯ! ಏನೆಂದೆ? ನಿಮ್ಮಲ್ಲಿ ಸಮ್ಯಕ್ಕಾದ ಸತ್ಯ ಶರಣರ ಕಂಡು, ಕೂಡಲಸಂಗಮದೇವ ಅವರನು ಅಯ್ಯ ಎಂಬೆನು" ಈ ವಚನವು ಷಟ್‌ಸ್ಥಲದೊಳಗಿನ "ಶರಣನ ಮಾಹೇಶ್ವರ" ವಿಭಾಗದಲ್ಲಿ ಬಂದದೆ. ಇದುದರಿಂದ ಶರಣಸ್ಥಲಕ್ಕೆ ಸಲ್ಲದೆ, ಅಯ್ಯ ಎಂಬ ಪದವಿಗೆ ಅವಸರವಿಲ್ಲೆಂದು ವ್ಯಕ್ತವಾಗುತ್ತದೆ.

ಒಂದು ಹಂಚಿಕೆಯನ್ನು ತೆಗೆದರು. ಏನೆಂದರೆ:— ಪ್ರತಿಯೊಂದು ಊರಲ್ಲಿರುವ ಎಲ್ಲ ಶಿವಭಕ್ತರ ಮನೆಗಳಲ್ಲಿ ಅಲ್ಲಿರುವ ಪಟ್ಟದದೇವರೇ ಎಲ್ಲ ಬಗೆಯ ಸಂಸ್ಕಾರಗಳನ್ನು ಹಕ್ಕಿನಿಂದ ನೆರವೇರಿಸಬೇಕು. ಗುರುವಿನ ಹಕ್ಕನ್ನು ತಾವೇ ತಕ್ಕೊಳ್ಳಬೇಕು. ಒಂದು ವೇಳೆ ಅವರ ಸ್ವಂತ ಗುರುಗಳು ಸಮಕ್ಷವು ಇದ್ದರೆ ಗುರುದೇವರೂ ಸ್ಥಾನಿಕ ಪಟ್ಟದದೇವರೂ ಆಲೋಚಿಸಿ, ಬಂದ ಹಕ್ಕನ್ನು ತಮ್ಮತಮ್ಮೊಳಗೆ ಹಂಚಿಕೊಳ್ಳಬೇಕು. ಈ ವ್ಯವಸ್ಥೆಯಿಂದ ಎಲ್ಲರಿಗೂ ಅನುಕೂಲವಾಯಿತು. ಹೆಜ್ಜೆಹೆಜ್ಜೆಗೆ ಗುರುಗಳು ಶಿಷ್ಯರ ಕಡೆಗೆ ಬರುವ ಗೋಜು ಉಳಿಯಲಿಲ್ಲ. ಈ ಮೇರೆಗೆ ಊರಲ್ಲೆಲ್ಲ ಗುರುಕಾರ್ಯವನ್ನು ನಡಿಸುವ ಒಂದು ಅಧಿಕೃತವಾದ ಮಠವು ನಿರ್ಮಾಣವಾಯಿತು. ಅದೇ ಹಿರೇಮಠವು! ಈ ವಿವರಣೆಯಿಂದ ಹಿರೇಮಠವೆಂದರೆ ಅದೇನು ಬೇರೆ ಮಠವಲ್ಲ. ಪಟ್ಟದದೇವರ ಮಠವೇ ಅದು ಎಂಬದು ಸುಲಭವಾಗಿ ಲಕ್ಷ್ಯದಲ್ಲಿ ಬರಬಹುದು.

ಇಲ್ಲಿ ಇನ್ನೊಂದು ಮಾತಿನ ಬಗ್ಗೆ ಹೇಳುವದು ಅತ್ಯಂತ ಅವಶ್ಯವಿದೆ. ಪಟ್ಟದದೇವರ ಮಠವೇ ಹಿರೇಮಠವೆಂದು ಮೇಲೆ ಹೇಳಲಾಗಿದೆಯಷ್ಟೇ. ಅಪ್ರಕಾರವೇ ಬಹುಶಃ ಈಗಲೂ ಎಲ್ಲಕಡೆ ಉಂಟು. ಪಟ್ಟವಿಲ್ಲದ ಹಿರೇಮಠಗಳು ಇಲ್ಲೇಇಲ್ಲ. ಆ ಮಠದಲ್ಲಿ ಕಾರಣಾಂತರದಿಂದ ಸೇರಿಕೊಂಡ ಮಹೇಶ್ವರರೆ ಪಟ್ಟಾಧಿಕಾರಿಗಳಿಲ್ಲದಾಗ (ಲಿಂಗೈಕ್ಯರಾಗಿ ಇನ್ನೂ ಹೊಸ ಅಧಿಕಾರಿಗಳಿಲ್ಲದಾಗ, ಇಲ್ಲವೆ ಪಟ್ಟಾಧಿಕಾರಿಯು ಅಲ್ಪವಯಸ್ಸನಿರುವಾಗ ಇತ್ಯಾದಿ) ತಾವೇ ಆ ಮಠದ ಶಿಷ್ಯರ ಮನೆಗಳಿಗೆ ಹೋಗಿ, ಲಿಂಗಪೂಜಾದಿಗಳನ್ನು ನಡಿಸಿ, ತಾವೂ ಸಹ ಗುರುಗಳೆಂಬಂತೆಯೇ, ಆ ಶಿಷ್ಯರಿಗೆ ಭಾಸವಾಗುವಂತೆ ಮಾಡಿದರು; ಹಾಗೂ ತಾವಾದರೂ ಗುರುಗಳೆಂಬ ಭ್ರಮೆಗೆ ಒಳಗಾದರು. ಹೀಗೆ ಅನೇಕ ಕಡೆ ಬಹುಕಾಲದ ವರೆಗೆ ನಡೆದುಬಂದದ್ದುಂಟು. ಇದಕ್ಕೆಲ್ಲ ಭಕ್ತರ ಔದಾಸೀನ್ಯವೇ ಕಾರಣವು. ಇಂತಹ (ಪಟ್ಟವನ್ನು ಮುಕ್ತಾಯಗೊಳಿಸಿದ) ಮಠಗಳು ಸಮಾಜದಲ್ಲಿ ತಲೆ ಎತ್ತಿದುದರಿಂದಲೇ "ಹಿರೇಮಠಗಳೆಂದರೆ ಪಟ್ಟದದೇವರ ಮಠಗಳಿಂದ ಭಿನ್ನವಾದವುಗಳೆ"ಂಬ ಭಾವನೆಗೆ ಆಸ್ಪದವಾಯಿತು. ಆದರೆ ಅದು ತಪ್ಪು. ಆಕಾರಣ ಈಗ ಬರೇ ಸಂಸಾರಿಗಳಿರುವ ಹಿರೇಮಠಗಳು ವಿಶೇಷ ವರ್ಗದಲ್ಲಿ ಬರಲಾರವು! ಅಲ್ಲಿರುವ ಅಯ್ಯನವರು ಗುರುಗಳಲ್ಲ. ತಮ್ಮ ಸಂಸಾರಕ್ಕೆ ತೊಂದರೆಯುಂಟಾದಾಗ

ಆ ಮಠದ ಶಿಷ್ಯರ ನೆನಪಾಗಿ ಸುಮ್ಮನೆ ಎಡತಾಗುವ ಸಾಧಕರು. ನಿಜವಾಗಿ ಅವರು ಗುರುತ್ವಕ್ಕೆ ಅಪಾತ್ರರು. ಅಯ್ಯತನವನ್ನೂ ಶಿವದೀಕ್ಷೆಯನ್ನೂ ಮಾಡಲಿಕ್ಕೆ ಪಟ್ಟಚರಮೂರ್ತಿಗಳೇ ಬೇಕು. ಹಿರೇಮಠದವರಾದರೂ ಸಾಮಾನ್ಯ ಮಹೇಶ್ವರರು ದೀಕ್ಷೆಗೆ ಬರುವದಿಲ್ಲ. ಯಾಕಂದರೆ ಅವರು ನಿಜವಾಗಿ ಗುರುಗಳೇ ಅಲ್ಲ. ಈ ಸಾಮಾನ್ಯ ಮಹೇಶ್ವರರಿಗೂ ಕೂಡ ಪಟ್ಟದೇವರೇ ಗುರುಗಳಾಗಿರುವರು. ಇಷ್ಟಲಿಂಗಾರಾಧನೆ ಮಾಡುವವರೂ, ಸಂಸಾರಿಗಳೂ, ಪಟ್ಟದದೇವರೇ ತಮ್ಮ ಗುರುಗಳೆಂದು ಹೇಳುವವರು ಇವರೆಲ್ಲರೂ ಭಕ್ತರೇ. ಸಾಮಾನ್ಯರೇ ಸರಿ. ವಿಶೇಷರೆಂದೂ ಆಗಲಾರರು! ಆದರೂ ಪಟ್ಟದದೇವರ ಸಮ್ಮತಿಯಿಂದ ಆ ಮಠದಲ್ಲಿರುವ ಸಂಸಾರಿಗಳು (ಅಯ್ಯನವರು) ಊರಲ್ಲಿರುವ ಲಿಂಗಾಯತರಿಗೆ ಶಿವದೀಕ್ಷೆಯನ್ನುಳಿದು ಬೇರೆ ಸಂಸ್ಕಾರಗಳನ್ನು ಮಾಡಬಹುದು.

ಈಗ ಗುರುವರ್ಗದವರ ವಿನಾ ಮಾಹೇಶ್ವರರೂ ಗಣಂಗಳೂ ಹಿರೇಮಠದವರೂ ವಿಶೇಷರಲ್ಲೆಂದು ಹೇಳಿದುದಾಯಿತು. ಇದೇ ಮೇರೆಗೆ ನಿರಂಜನ ವರ್ಗದಲ್ಲಿ ಶರಣರನ್ನೂ ಬಸವಾದಿ ಪ್ರಮಥರನ್ನೂ ಉದಹರಿಸಿದ್ದಾಯಿತು. ಇವರೂ ಶಿವಯೋಗಿಗಳೂ ಷಟ್‌ಸ್ಥಲದ ಐದನೆಯ ಮೆಟ್ಟಿಲಿನವರೆನ್ನಲಿಕ್ಕೆ ಅದಾವ ಆತಂಕವೂ ಇಲ್ಲ. ಆದರೆ ಇವರೂ ಸಂಸಾರಿಗಳಾಗಿರುವದರಿಂದ ನಿರಂಜನರೆನ್ನುವದು, ಸಾಮಾಜಿಕ ದೃಷ್ಟಿಯಿಂದ ಉಚಿತ ತೋರುವದಿಲ್ಲ. ಹಾಗೆ ಇವರನ್ನು ಸಂಬೋಧಿಸಿದ್ದು ಕಂಡು ಬಂದಿಲ್ಲ. ಆದುದರಿಂದ ಶರಣ ಶಿವಯೋಗಿಗಳನ್ನು ಅವರ ಗುಣಕರ್ಮಗಳಿಗನುಸರಿಸಿ, ತಾತ್ವಿಕದೃಷ್ಟಿಯಿಂದ ಉಚ್ಚವರ್ಗದಲ್ಲಿಯೂ, ಸಾಮಾಜಿಕ ದೃಷ್ಟಿಯಿಂದ ಭಕ್ತವರ್ಗದಲ್ಲಿಯೂ ಎಣಿಸಬಹುದು. ಭಕ್ತನಭಕ್ತ, ಭಕ್ತನಮಹೇಶ...ಭಕ್ತನ ಐಕ್ಯ, ಎಂದು ಮೊದಲೇ ಕಲ್ಪಿಸಿ ವಿಭಾಗಿಸಲ್ಪಟ್ಟುದರಲ್ಲಿ ಅನುರೂಪವಾದ ಸ್ಥಳದಲ್ಲಿ ಸೇರಿಸಬಹುದು. ಎಷ್ಟೇ ಉದಾತ್ತ ಸ್ಥಾನವನ್ನು ಹೊಂದಿದರೂ ಸಹ ಶ್ರೀಬಸವೇಶ್ವರನು ತನ್ನನ್ನು ಭಕ್ತನೆಂದೇ ಭಾವಿಸಿದ್ದನೆಂಬುದನ್ನು ನಾವು ಮರೆಯಲಾಗದು. ಅಹಂಕಾರಕ್ಕಾಸ್ಪದವಾಗುವ ಗುರುಜಂಗಮ ಪದವಿಗಳು ಅವನಿಗೆ ಬಲು ಬೇಸರಾಗಿದ್ದವು. ಭೃತ್ಯತ್ವವೇ (ಕಿರಿಯತನವೇ) ಅವನಿಗೆ ಪ್ರಿಯವಾಗಿತ್ತು. ಭಕ್ತನೆನಿಸಿಕೊಂಡರೇನು ಕಡಿಮೆತನ ಬರುವದೆಂದು ಯಾರೂ ಸಹಸಾ ನೆನೆಯ ಕೂಡದು.

ಉಪಸಂಹಾರ

ಸಂಸಾರದಲ್ಲಿ ಹ್ಯೇಯ ಉತ್ಪನ್ನವಾಗಿ ನಿವೃತ್ತಿವಿಡಿದು, ಗುರು ಕಾರುಣ್ಯ ಪಡೆದು ಶಿವದೀಕ್ಷೆ ಹೊಂದಿದವನೇ ಭಕ್ತನೆನಿಸುವನು. ಭಕ್ತನು ಸಂಸಾರಿಯಾದರೂ ಅದರಲ್ಲಿ ಕ್ರಮವಾಗಿ ಅಲಿಪ್ತತೆಯನ್ನು ಪಡೆಯಲೇ ಬೇಕು. ಸದಾ ಸಂಸಾರಲಿಪ್ತನಾಗಿ ವಿಷಯೋಪ ಭೋಗಿಯಾಗಿ ಜೀವಿಸುವವನೇ ಭವಿ. ಈ ಭವಿತನಕ್ಕೆ ಬೇಸತ್ತು ಅದನ್ನು ಹಳಿದು ಶಿವ ಮಾರ್ಗದಲ್ಲಿ ನಡಿಯುವ ನಿಶ್ಚಯ ಮಾಡಿದವರೇ ಲಿಂಗಾಂಗಿಗಳು. ಅಗ್ಗೇ ಇವರು ಬ್ರಹ್ಮ ಸೃಷ್ಟಿಯಿಂದ ಪಾರಾಗಿ ಶಿವ ಸೃಷ್ಟಿಯಲ್ಲಿ ಕಾಲಿಟ್ಟಂತಾಗುವದು. ಬಳಿಕ ಅದು ಹೇಗೆ ಪ್ರಗತಿಯನ್ನು ಹೊಂದುತ್ತ ಮುಂದರಿಯಬೇಕೆಂಬುದನ್ನೇ ಷಟ್‌ಸ್ಥಲಗಳು ಅರುಹುತ್ತವೆ. ಭಕ್ತನು ಮೊದಲು ತ್ಯಾಗಾಂಗಿಯೂ (ತನುಗುಣವಳಿದವನೂ) ತರುವಾಯ ಭೋಗಾಂಗಿಯೂ (ಲಿಂಗದೊಡನೆ ಸುಖ ಭೋಗಿಸುವವನೂ) ಕೊನೆಗೆ ಯೋಗಾಂಗಿಯೂ (ನಿಜದಲ್ಲಿ ಬೆರೆಯುವವನೂ) ಆಗಲೇಬೇಕು. ಈ ಪ್ರತಿಯೊಂದರಲ್ಲಿ ಎರಡೆರಡಾಗಿ ಭಕ್ತ ಮಹೇಶ, ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂದು ಷಡಂಗಿ (ಷಡಾಂಗಿ) ತ್ವವನ್ನು ಧರಿಸಲೇಬೇಕು. ಇವನಿಗೆ ಲಿಂಗಾಯತ, ವೀರಶೈವ, ಲಿಂಗಾಂಗಿ, ಭಕ್ತ (ಶಿವಭಕ್ತ) ಲಿಂಗವಂತ, ಸಾಮಾನ್ಯ (ವಿಷಮತೆಯನ್ನು ಬಿಟ್ಟು ಶಿವದೀಕ್ಷೆಯಿಂದ ಸಮಾನತೆ ವಿಡಿದವನು) ಎಂದು ಯಾವ ಹೆಸರಿನಿಂದ ಕರೆದರೂ ಸರಿಯೇ! ಅವನು ಕೊನೆಗೆ ಮುಕ್ತನೇ ಆಗುವನು. ಕೊನೆಗೆ ಅಂದರೆ ದೇಹ ಬಿಟ್ಟ ಮೇಲಲ್ಲಿ ಜೀವಿರುವಾಗಲೇ ಅಂತ್ಯಭಾಗದಲ್ಲಿ ಜೀವನ್ಮುಕ್ತನೆನಿಸುವನು. ಅಂತೇ "ಏಕೇನ ಜನ್ಮನಾ ಮುಕ್ತಿರ್ವೀರಾಣಾಂ ತು ಮಹೇಶ್ವರೀ" ಎಂದು ಶಿವನು ಜಗನ್ಮಾತೆಗೆ ಉಸುರಿದ್ದಾನೆ.

ಭೋಗಾಂಗಿ ಸ್ಥಲದ ಭಕ್ತನು ಪ್ರಾಣಲಿಂಗಾರ್ಚಕನಾಗಿ, ಅಕುಂಚಿತ ದೃಷ್ಟಿಯಳಿದು "ಆತ್ಮವತ್ ಸರ್ವಭೂತಾನಿ" ಎಂಬ ಅರಿವು ಹುಟ್ಟಿ, ಸಮಾಜ ಸುಧಾರಣೆಯ ಕರ್ತವ್ಯವನ್ನು ತನ್ನ ಸ್ವಂತ ಒಲವಿನಿಂದ ಹಿಡಿದಾಗಲೇ ಅವನು ವಿಶೇಷ ಭಕ್ತನಾಗುವನು. ವಿಶೇಷವೆಂದರೆ ಸಮಾಜ ಸೇವೆಯೇ—ಉದ್ಧಾರ ಕಾರ್ಯವೆ— ಹೊರತು ಮತ್ತೊಂದಲ್ಲ. ತನಗೆ ಕೆಲವು ಕುಟುಂಬಗಳನ್ನು ನೇಮಿಸಿಕೊಂಡು, ಅವನ್ನು ಸರಿಯಾಗಿ

ತ್ಯಾಗಾಂಗ ಮಾರ್ಗದಲ್ಲಿ ನಡೆಯುವಂತೆ ತಿದ್ದುವ ಹೊಣೆಗಾರಿಕೆಯನ್ನು ಪ್ರತಿಯೊಬ್ಬ ಪಟ್ಟಾಧಿಕಾರಿಯು ಹೊತ್ತಿರುವನು. ಅವರೇ ಅವನ ಶಿಷ್ಯರು. ಅವರ ಪೂರ್ವಜರಿಗೆ ಆ ಪಟ್ಟದ ಮೊದಲಿನ ಅಧಿಕಾರಿಗಳೇ ಶಿವದೀಕ್ಷೆಯನ್ನು ಅನುಗ್ರಹಿಸಿದವರು. ಪಟ್ಟಾಧಿಕಾರಿಯ ಕ್ಷೇತ್ರವು ದೊಡ್ಡದಿದ್ದರೆ ಅವನು ತನ್ನ ಸಹಾಯಕ್ಕೆಂದು ಒಬ್ಬ ಚರಮೂರ್ತಿಯನ್ನು ಸ್ವೀಕರಿಸುವನು. ಇವರ ಮೇಲಾಧಿಕಾರಿಗಳೇ ಆಚಾರ್ಯರು. ಅವರು ಐವರೇ ಇರುವದರಿಂದ ಪಂಚಾಚಾರ್ಯರೆಂದು ಪ್ರಸಿದ್ಧಿಪಡೆದಿರುವರು. ಇವರ ಕ್ಷೇತ್ರವು ಹೆಚ್ಚು ವಿಸ್ತಾರವಾದುದು. ಅಲ್ಲಲ್ಲಿಗೆ ಅವರ ಶಾಖಾ ಪಟ್ಟಾಧಿಕಾರಿಗಳಿರುವರು. ತಮ್ಮ ಕರ್ತವ್ಯಕ್ಕೆ ಕೊರತೆ ಬರಬಾರದೆಂದು ಇವರೆಲ್ಲರು ಬ್ರಹ್ಮಚಾರಿಗಳಿರುವರು.

ಯೋಗಾಂಗಿ ಸ್ಥಲದ ಭಕ್ತನು ಭಾವಲಿಂಗಾರ್ಚಕನಾಗಿ ತನ್ನ ಮಹಾಜ್ಞಾನ ಬಲದಿಂದ ಮನೋನಿಗ್ರಹವನ್ನು ಪಡೆದು, ಪೂರ್ಣ ವಿರಕ್ತಿಯನ್ನು ಧರಿಸಿ, ವಿಶ್ವ ಕುಟುಂಬಿ ಎನಿಸಿ, ಅವರ ಸೇವಾಸಕ್ತಿಯನ್ನು ಹಿಡಿದು, ಅವರಲ್ಲಿಯೇ ತನ್ನ ಇಡೀ ಆಯುಷ್ಯವನ್ನು ಸವಿಸುವ ದೃಢ ನಿಶ್ಚಯ ಮಾಡಿ, ವೈಯ್ಯಕ್ತಿಕ ಕೌಟುಂಬಿಕ ಸಾಮಾಜಿಕವೆಂಬ ಪ್ರಪಂಚದ ಯಾವ ಭಾವನ್ನೂ ಹೊರದೆ, ಕೇವಲ ಸತ್ಯಜ್ಞಾನ ನಿರತನಾಗಿ, ಅದೊಂದನ್ನೇ ಸಮಾಜದಲ್ಲೆಲ್ಲ ಹರಡುವ ವ್ರತವಿಡಿದರೆ ಅವನೇ ನಿಂಬಾಭಾರಿ ಭಕ್ತನೆನಿಸುವನು.

ಈಗ ಇಂತಹ ಭಕ್ತರಾಗಲಿ, ಗುರುಜಂಗಮರಾಗಲಿ, ಸಿಗುವದು ಅತ್ಯಂತ ಅಪರೂಪ. ಇದರ ಕಾರಣವೇಂದರೆ:— ವೀರಶೈವ ಸಮಾಜ ಯಂತ್ರದ ಮುಖ್ಯ ಚಕ್ರಗಳಂತಿರುವ ಗುರು ಜಂಗಮರು ಕರ್ತವ್ಯ ಪರಾಙ್ಮುಖರಾಗಿ ಮುಖ್ಯ ಚಕ್ರಗಳೇ ಹೀಗೆ ತುಕ್ಕು ಹಿಡಿದು ಮಣ್ಣಾಗೂಡಿ ನಿರುಪಯುಕ್ತವಾದ ಮೇಲೆ, ಅಂತಿಂತಹ ಕಿರುಕುಳ ಚಕ್ರಗಳಂತಿರುವ ಸಾಮಾನ್ಯರದು ಅದಾವ ಪಾಡು! ಅವು ಸ್ತಬ್ಧವಾದವು. ಪರದೇತಿಯಾದವು. ಅಲ್ಲಿಂದಲ್ಲೇ ಹಾಳಾದವು. ಹೀಗೆ ಭಕ್ತ ಗುರು-ಜಂಗಮರೆಲ್ಲರು ಬಹುಶಃ ತಮ್ಮ ಸ್ಥಳದಿಂದ ಗುಣಕರ್ಮದಿಂದ-ಚ್ಯುತರಾಗಿರುವರು. ಇದಕ್ಕೆ ಈಗಿನ ರಾಜಕೀಯ ವಾತಾವರಣದಿಂದುಂಟಾದ ಭೀಕರ ಬಡತನವಾದರೂ ಈಗ ಎಲ್ಲರೂ ಜೆನ್ನಾಗಿಯೇ ಕಣ್ದೆರೆವ ಕಾಲವು ಬಂದಿದೆ. ತಾವು "ಭವಿಗಳಲ್ಲ, ಭಕ್ತರೆಂ"ಬುದನ್ನು ನೆನೆದು ಸಾವರಿಸಿ

ಕೊಂಡು, ಎಚ್ಚತ್ತು, ಪುನಃ ಶಿವಮಾರ್ಗಕ್ಕೆ ಬರಬೇಕು. ನಿಜವಾದ ಕಾರ್ಯಕ್ಷಮ ಗುರು ಜಂಗಮರು ಸಿದ್ಧವಾಗುವಂತೆ ಬೇರೆ ಬೇರೆ ಸಂಸ್ಥೆಗಳನ್ನು ನಿರ್ಮಿಸಿ, ಅವರಿಗೆ ಯೋಗ್ಯ ಶಿಕ್ಷಣ ಕೊಟ್ಟು, ಅವರಲ್ಲಿ ಸಮಾಜೋದ್ಧಾರದ ಒಲವುಳ್ಳವರನ್ನೇ ಆರಿಸಿ, ಅಯಾ ಸ್ಥಲಗಳಿಗೆ ಪಟ್ಟಗಟ್ಟಬೇಕು. ಸುಂಬಳ ತೆಗೆದುಕೊಳ್ಳಲಿಕ್ಕೆ ಸಹ ಬಾರದ, ಏನೂ ಅರಿಯದ, ಹುಡುಗರನ್ನು ಗುರು ಜಂಗಮ ಸ್ಥಲಗಳಿಗೆ ನೇಮಿಸುವ ಈಗಿನ ಕೆಟ್ಟ ಹಾಳು ಪದ್ಧತಿಯನ್ನು ಸಂಪೂರ್ಣ ನಿಲ್ಲಿಸದಿದ್ದರೆ ನಮ್ಮ ಸಮಾಜವು ಇನ್ನು ಬಾಳಲಾರದು. ಬಸವಾದ ಪ್ರಮುಖರು ಸಾಹಸಬಟ್ಟು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗುವದು. ಮೇಲೆ ಹೇಳಿದಂತಹ ಯೋಗ್ಯರಾದ ಪ್ರೌಢರಾದ ಬ್ರಹ್ಮಚಾರಿಗಳನ್ನೇ ಗುರು-ವಿರಕ್ತರನ್ನಾಗಿ ನೇಮಿಸುವ ಬಗ್ಗೆ ಸಮಾಜವು ಎಷ್ಟು ದಕ್ಷತೆ ವಹಿಸಿದರೂ ಅದು ಸಾಲದು! ಯಾರೂ ದುರಾಗ್ರಹ-ದುರಭಿಮಾನಗಳಿಗೆ ಬಲಿಬೀಳದೆ, ಭಕ್ತರೆಲ್ಲರೂ—ಸರ್ವ ವೀರಶೈವರೆಲ್ಲರೂ ಒಂದಾಗಿ ವಿವೇಕಿಗಳಾಗಿ, ಈ ಸುಧಾರಣೆಯನ್ನು ಆದಷ್ಟು ಬೇಗನೆ ಕೈಕೊಳ್ಳಬೇಕು. ವಿನಾಕಾರಣ "ನಾ ಹೆಚ್ಚು ನೀ ಹೆಚ್ಚು" ಎಂಬ ಹುರುಳಿಲ್ಲದ ವಾದದಲ್ಲಿ ಹೊತ್ತುಗಳೆಯಬಾರದು. ಅದು ಭವಿಗಳದೊಂದು ಧ್ಯೇಯ. ಭಕ್ತರಲ್ಲಿ ಅಂತಹ ಮರುಳತನವಾವುದೂ ಇಲ್ಲ. ಬರೇ ಹೊಟ್ಟೆ ಹೊರಕೊಂಡು ಬಿದ್ದು ಸತ್ತು ಹೋಗಲಿಕ್ಕೆ ವೀರಶೈವರ ಜನ್ಮವಿಲ್ಲ. ಭಿಕ್ಷೆಯಿಂದ ಅಂತು ಇಂತು ಕಾಲಹರಣ ಮಾಡುವದಂತೂ ನಮ್ಮ ಮತದಲ್ಲಿ ಬಹು ತಿರಸ್ಕರಣೀಯವಾಗಿದೆ. ಅದಾದರೂ ಭವಿಗಳ ಅನುಕರಣವೇ! ಅದುದರಿಂದ ಹೊಣೆಗಾರರಾದ ಮುಖಂಡರೆಲ್ಲರೂ ಈ ವಿಷಯವನ್ನು ಒಳಿತಾಗಿ ಯೋಚಿಸಿ ನೋಡಬೇಕು. ಹಾಗು ತಮ್ಮ ಪವಿತ್ರ ಕರ್ತವ್ಯವನ್ನು ನೆರವೇರಿಸಬೇಕು.

ಹೀಗೆ ಬರೆಯುವದರಲ್ಲಿ ಯಾರನ್ನೂ ದೂಷಿಸುವ ಅಪೇಕ್ಷೆ ಇಲ್ಲ. ಎಂತೂ ಸಮಾಜಕ್ಕೆ ಕ್ಷೇಮವಾಗಲೆಂಬುದನ್ನೇ ಮುಂದಿಟ್ಟುಕೊಂಡು, ನನಗೆ ಹೊಳೆದುದನೆಲ್ಲ ಹೇಳಕೊಂಡಿದ್ದೇನೆ.

ಬಸವೇಶ್ವರನಕಿಂತಲೂ ಮೊದಲಿನ ವೀರಶೈವ ಧರ್ಮ.

(ಲೇಖಕರು:—ರಾ॥ ಬಾ॥ ಪಿ. ಜಿ. ಹಳಕಟ್ಟಿ ಬಿ. ಏ. ಎಲ್. ಎಲ್. ಬಿ. ವಿಜಾಪುರ)

ಬ್ರಹ್ಮ, ವಿಷ್ಣು, ರುದ್ರ.

(ಹಿಂದಿನಿಂದ ಮುಂದೆಸಾಗಿದ್ದು.)

ಈ ವಿಷಯದ ವಿವೇಚನೆಯನ್ನು ಮಾಡುವಲ್ಲಿ ನಾವು ಹಿಂದಿನ ಸಂಚಿಕೆಗಳಲ್ಲಿ ಹೇಳಿದಂತೆ ನಾಲ್ಕು ವಿಭಾಗಗಳನ್ನು ಮಾಡಬಹುದಾಗಿದೆ. ಅವು ಯಾವವೆಂದರೆ (೧) ಬಸವೇಶ್ವರನಕಿಂತ ಪೂರ್ವದಕಾಲ (೨) ಬಸವೇಶ್ವರನ ಕಾಲ (೩) ಬಸವೇಶ್ವರನ ತರುವಾಯದ ಕಾಲ ಮತ್ತು (೪) ವೀರಶೈವ ಪೌರಾಣಿಕಕಾಲ. ಬಸವೇಶ್ವರನಕಿಂತ ಪೂರ್ವದ ಕಾಲದಲ್ಲಿ ಬ್ರಹ್ಮ, ವಿಷ್ಣು, ರುದ್ರ ಈ ದೇವರುಗಳಲ್ಲಿ ಯಾರು ಶ್ರೇಷ್ಠರೆಂಬ ವಿಷಯವಾಗಿ ಸಮಾಜದಲ್ಲಿ ದೊಡ್ಡ ಕೋಲಾಹಲಗಳೆದ್ದಿದ್ದವೆಂತಲೂ, ಮುಂದೆ ಬಸವೇಶ್ವರನ ಕಾಲದಲ್ಲಿ ಒಬ್ಬನೇ ದೇವರೆಂಬ ವಿಚಾರಗಳು ನೆಲೆಗೊಂಡು ಇಂಥ ಕಲಹಗಳು ಕಡಿಮೆಯಾಗುತ್ತ ಹೋದವೆಂತಲೂ ನಾವು ಹಿಂದಿನ ಲೇಖಗಳಲ್ಲಿ ವಿವರಿಸಿದ್ದೇವೆ. ಆದರೆ ಪ್ರಸ್ತುತ ಲೇಖದಲ್ಲಿ ಈ ತ್ರಿಮೂರ್ತಿಗಳ ವಿಷಯವಾಗಿ ಬಸವೇಶ್ವರನ ಕಾಲದ ತರುವಾಯ ಯಾವ ವಿಚಾರಗಳು ರೂಢವಾಗಿದ್ದವೆಂಬುದನ್ನು ನಾವು ವಿವೇಚಿಸಲಿಣಿಸಿದ್ದೇವೆ.

ಬಸವೇಶ್ವರನ ಕಾಲದಲ್ಲಿ ಪರಮಾತ್ಮನು ಸರ್ವವ್ಯಾಪಿಯಾಗಿದ್ದು ಅವನೊಬ್ಬನೇ ಇದ್ದಾನೆಂಬ ತತ್ವವು ಪ್ರಚಾರ ಮಾಡಲ್ಪಟ್ಟಿತೆಂದು ಆಗ ಉಂಟಾದ ವಚನಗಳಿಂದ ಕಂಡುಬರುತ್ತದೆ. ಅವನ ಕಾಲದಲ್ಲಿ ತ್ರಿಮೂರ್ತಿಗಳು ಮನ್ನಿಸಲ್ಪಟ್ಟಂತೆ ಕಂಡುಬರುವದಿಲ್ಲ. ಯಾಕಂದರೆ ಪಂಚಮುಖ ದಶಭುಜವನುಳ್ಳ ಶಿವನೂ ಕೂಡ ದೇವರಲ್ಲೆಂಬ ಅನೇಕ ವಚನಗಳು ನಮಗೆ ದೊರೆಯುತ್ತವೆ. ಆಗ ಶಿವ, ಪರಮಾತ್ಮ, ಪರಬ್ರಹ್ಮ, ಪರಶಿವ ಇವೆಲ್ಲವೂ ಒಂದೇ ಅರ್ಥದಿಂದ ಉಪಯೋಗಿಸಲ್ಪಡುತ್ತಿದ್ದವು. ಯಾವ ವಚನಕಾರನಾದರೂ ಪರಮಾತ್ಮನ ಸ್ವರೂಪನ್ನು ಹೇಳುವಲ್ಲಿ

ಅವನಿಗೆ ಪಾರ್ವತಿ ಎಂಬ ಹೆಂಡತಿ ಇದ್ದಾಳೆ. ಅವನಿಗೆ ಷಣ್ಮುಖ ಗಣಪತಿ ಎಂಬ ಮಕ್ಕಳಿದ್ದಾರೆ, ಎಂದು ತನ್ನ ವಚನಗಳಲ್ಲಿ ಹೇಳದು ಕಂಡುಬರುವದಿಲ್ಲ. ದೇವರು ನಿರಾಕಾರನೂ, ಭವವಿಲ್ಲದವನೂ, ವಿಷಯ ರಹಿತನೂ, ಅಜಾತನೂ, ಎಂದು ಮೊದಲಾಗಿ ವರ್ಣಿಸಲ್ಪಟ್ಟಿರುತ್ತಾನೆ. ಇದರಿಂದ ನಾವು ಮೇಲೆ ಹೇಳಿದ ಸಂಗತಿಯು ದೃಢಪಡುತ್ತಿದೆ.

ಆದರೆ ಇಂಥ ವ್ಯಾಪಕ ಮತ್ತು ವಿಸ್ತೃತ ವಿಚಾರಗಳು ಪ್ರಸಾರ ಹೊಂದಲಿಕ್ಕೆ ದೇಶದಲ್ಲಿಯ ಆಗಿನ ಪರಿಸ್ಥಿತಿಯು ಮುಂದೆ ಅನುಕೂಲವಾಗಿರಲಿಲ್ಲೆಂದು ನಮಗೆ ತೋರುತ್ತದೆ. ಆಗ ದೇಶದಲ್ಲೆಲ್ಲ ಮಹತ್ವದ ಶಿವನ ಮತ್ತು ವಿಷ್ಣುವಿನ ದೇವಾಲಯಗಳು ಉದ್ಭವಿಸಿದ್ದವು. ಜನರಲ್ಲಿ ಅವು ವಿಶೇಷ ಮಹತ್ವವನ್ನು ಹೊಂದಿದ್ದವು. ಅವುಗಳಲ್ಲಿ ಈಗಲೂ ತೋರುವ ಅಸಂಖ್ಯ ಶಿಲಾಶಾಸನಗಳು ಈ ಸಂಗತಿಗಳನ್ನು ದೃಢಪಡಿಸುತ್ತಿವೆ. ಶಿವಾಲಯಗಳಲ್ಲಿಯ ಅರ್ಚಕರು ಆಗ ಕಾಳಾವಮುಖಪಂಥಿಗಳಾಗಲಿ ಇಲ್ಲವೆ ಇತರ ಶೈವಧರ್ಮಗಳ ಪ್ರಭೇದದವರಾಗಲಿ ಇದ್ದರು. ಇವರೆಲ್ಲರೂ ಬಸವೇಶ್ವರನ ಕಾಲದಲ್ಲಿ ಅಥವಾ ಅವನ ತರುವಾಯ ಸ್ವಲ್ಪ ದಿವಸಗಳಲ್ಲಿ ವೀರಶೈವಮತಾವಲಂಬಿಗಳಾದರು. ಹೀಗೆ ಅವರು ವೀರಶೈವ ಧರ್ಮವನ್ನು ಸ್ವೀಕರಿಸಿದ ಬಳಿಕ ಈ ದೇವಾಲಯಗಳಲ್ಲಿರುವ ತಮ್ಮ ಮಹತ್ವದ ಸ್ಥಾನಗಳನ್ನು ಬಿಡುವದು ಸ್ವಾಭಾವಿಕವಾಗಿ ಶಕ್ಯವಲ್ಲ. ಆದ್ದರಿಂದ ಅವರು ಈ ಶಿವಾಲಯಗಳ ಅರ್ಚಕರಾಗಿಯೇ ಉಳಿದಿರಲಿಕ್ಕೆಬೇಕು. ಮತ್ತು ಸಾಮಾನ್ಯ ಜನರಾದರೂ ಕೂಡ ಇಂಥ ದೇವಾಲಯಗಳಿಗೋಸ್ಕರ ತಮ್ಮ ಮೊದಲಿನ ಪೂಜ್ಯಭಾವವನ್ನು ಬಿಟ್ಟುಬಿಟ್ಟಿರಲಿಕ್ಕಿಲ್ಲ. ಜನರಲ್ಲಿಯ ಇಂಥ ಪರಿಸ್ಥಿತಿಯನ್ನು ಅನೇಕ ವಚನಕಾರು ಬಹು ಕಟುವಾದ ಶಬ್ದಗಳಿಂದ ನಿಷೇಧಿಸಿದ್ದಾರೆ. ಶಿವ ದೇವಾಲಯಗಳನ್ನು ನಿಷೇಧಿಸಿದ ಅವರ ವಚನಗಳು ಅನೇಕವಿರುತ್ತವೆ.

ಹೀಗೆ ಅನೇಕ ವಚನಕಾರರು ತ್ರಿಮೂರ್ತಿಗಳನ್ನು ನಿಷೇಧಿಸುತ್ತ ಬಂದರೂ ಬೇರೆ ಕೆಲ ವಚನಕಾರರು ಎಲ್ಲರಿಗೂ ಸಮುಬೀಳುವಂತೆ ಷಟ್‌ಸ್ಥಲದಲ್ಲಿ ಈ ತ್ರಿಮೂರ್ತಿಗಳಿಗೆ ಕೆಲವೊಂದು ಸ್ಥಾನವನ್ನು ಕಲ್ಪಿಸಿಕೊಟ್ಟದ್ದು ಕಂಡುಬರುತ್ತಿದೆ. ಅಂದರೆ ಇವರನ್ನು ಅವರು ಪೂರ್ಣವಾಗಿ ನಿರಾಕರಿಸಲಿಲ್ಲ. ಹೀಗೆ ಅವರನ್ನು ನಿರಾಕರಿಸದಿದ್ದರೂ ಇವನು ಈ ತ್ರಿಮೂರ್ತಿಗಳಿಗೆ ಕೆಲವೊಂದು ವಿಶೇಷ ಅರ್ಥವನ್ನು ಕೊಟ್ಟ ತಮ್ಮ

ವೀರಶೈವ ತತ್ವಕ್ಕೆ ಬಾಧೆ ಬರದಂತೆ ಮಾಡಿಕೊಂಡರು. ಈ ತರದ ಮಾರ್ಪಾಡು ಈಚೆಗೆ ಆಗಿರುತ್ತದೆಂದು ತೋರುತ್ತದೆ. ಆಗ ದೇಶದಲ್ಲಿ ಹರಿ, ಹರ ಈ ಉಭಯ ದೇವತೆಗಳಿಗೆ ಸಂಬಂಧವಿದ್ದ ಪ್ರಮುಖ ಪ್ರಭೇದವರು ಕರ್ನಾಟಕದಲ್ಲಿ ಇದ್ದರು. ಅವರಿಬ್ಬರಿಗೂ ಸರಿಬೀಳುವಂತೆ ಬಸವೇಶ್ವರನ ತರುವಾಯದ ಶಿವಶರಣರು ಷಟ್‌ಸ್ಥಲ ಶಾಸ್ತ್ರದಲ್ಲಿ ಕೆಲವೊಂದು ಏರ್ಪಡನ್ನು ಮಾಡಿದ್ದಾರೆ. ಇದರಿಂದ ಈ ಉಭಯ ಪಂಗಡದವರೂ ವೀರಶೈವ ಮಾರ್ಗವನ್ನು ವಿರೋಧಿಸಲು ಕಾರಣವಿಲ್ಲದಾಯಿತು. ಅವರು ಹೀಗೆ ಷಟ್‌ಸ್ಥಲ ಶಾಸ್ತ್ರದ ಕ್ರಮದಲ್ಲಿಯೇ ಮಾರ್ಪಡಿಸಿದ್ದು ಬಹು ಜಾಣತನದ ಸಂಗತಿಯಾಗಿದೆ. ಇದಕ್ಕೋಸ್ಕರ ನಾವು ಕೆಳಗೆ ಕಾಣಿಸಿದ ಕೆಲವು ಉದಾಹರಣೆಗಳನ್ನುಕೊಡುತ್ತೇವೆ

ಷಟ್‌ಸ್ಥಲ ಶಾಸ್ತ್ರದಲ್ಲಿ ಸಾದಾಖ್ಯಗಳೆಂಬುವಿವೆ. ಇವು ಬ್ರಹ್ಮಾಂಡವು ರಚನೆಗೆ ಬರುವ ಪೂರ್ವದಲ್ಲಿ ಆಗುವ ಕೆಲವು ಮಾರ್ಪಾಡುಗಳೆಂದು ಹೇಳಬಹುದು. ಇವು ಮಹಾ ಸಾದಾಖ್ಯ, ಶಿವಸಾದಾಖ್ಯ, ಅಮೂರ್ತಿ ಸಾದಾಖ್ಯ, ಮೂರ್ತಿಸಾದಾಖ್ಯ, ಕರ್ತೃಸಾದಾಖ್ಯ, ಮತ್ತು ಕರ್ಮ ಸಾದಾಖ್ಯ ಎಂದು ಇವೆ. ಕಡೆಯದಾದ ಕರ್ಮಸಾದಾಖ್ಯದೊಳಗಿಂದಲೇ ಈ ದೃಶ್ಯ ಜಗತ್ತಿನ ನಿರ್ಮಾಣವಾಗಿರುತ್ತದೆ. ಈ ಪ್ರತಿಯೊಂದು ಸಾದಾಖ್ಯಕ್ಕೆ ಒಬ್ಬೊಬ್ಬ ಅಧಿದೇವತೆಯು ಇರುತ್ತಾನೆ. ಅವರ ಹೆಸರುಗಳು ಅನುಕ್ರಮವಾಗಿ ಶಿವ, ಸದಾಶಿವ, ಈಶ್ವರ, ರುದ್ರ, ವಿಷ್ಣು, ಬ್ರಹ್ಮ ಎಂದು ಇರುತ್ತವೆ. (ವಚನಶಾಸ್ತ್ರಸಾರ ಭಾಗ ೨ ಪುಟ, ೧೬, ೨೨, ೨೩ ನೋಡಿರಿ) ಇದರಿಂದ ಷಟ್‌ಸ್ಥಲ ಶಾಸ್ತ್ರಕಾರರು ಈ ತ್ರಿಮೂರ್ತಿಗಳನ್ನು ಸಂಪೂರ್ಣವಾಗಿ ನಿರಾಕರಿಸದೆ ಸೃಷ್ಟಿಯ ರಚನೆಯಲ್ಲಿ ಅವರಿಗೆ ಕೆಲವೊಂದು ಸ್ಥಾನವನ್ನು ಕೊಟ್ಟಿದ್ದಾರೆಂದು ಕಂಡು ಬರುವದು. ಅವರೆಲ್ಲರೂ ನಿರಾಕಾರನಾದ ವಿಶ್ವವ್ಯಾಪಿಯಾದ ಪರಶಿವನ ಕೆಲವೊಂದು ಅಂಶವೆಂದು ಅವರು ಇಲ್ಲಿ ಹೇಳಿದ್ದಾರೆ.

ಷಟ್‌ಸ್ಥಲ ಶಾಸ್ತ್ರದಲ್ಲಿ ೨೧೬ ಸಕೀಲುಗಳೆಂಬುವಿವೆ. ಇವುಗಳಲ್ಲಿ ೩೪ ವಿಭಾಗಗಳಿದ್ದು ಒಂದೊಂದು ವಿಭಾಗದಲ್ಲಿ ೯ ತರಗತಿಗಳಿವೆ. ಈ ವಿವೇಚನೆಯಲ್ಲಿ ಅಧಿದೇವತೆಗಳೆಂಬುವಿದ್ದು ಅವು ಅನುಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಎಂದು ಮೊದಲಾಗಿ ಇರುತ್ತವೆ. (ವಚನಶಾಸ್ತ್ರಸಾರ ಭಾಗ ೨ ಪುಟ ೧೫೮ ನೋಡಿರಿ.) ಹೀಗೆ ಇದರಲ್ಲಿ ಈ ತ್ರಿಮೂರ್ತಿಗಳಿದ್ದು ಅವರ ವ್ಯಾಖ್ಯೆಗಳಾದರೂ ಮಾಡಲ್ಪಟ್ಟಿವೆ. ಅವು ಆವವೆಂದರೆ:—

"ಅನಾದಿ ಬ್ರಹ್ಮನ ಪೂಜೆಗೆ ಅಧಿಕಾರಿಯಾಗಿ ಇರುಹೆ ಮೊದಲಾದ ಆನೆ ಕಡೆಯಾದ ಎಳ ಲಕ್ಷ ಜೀವರ ಉತ್ಪತ್ತಿಗೆ ಕರ್ತೃವೆಂಬುದೀಗ ಬ್ರಹ್ಮನೆಂಬ ಶಬ್ದಕ್ಕರ್ಥ."

"ಅನಾದಿ ವಿಷ್ಣುವಿನ ಪೂಜೆಗೆ ಅಧಿಕಾರಿಯಾಗಿ ಇರುಹೆ ಮೊದಲು ಆನೆ ಕಡೆಯಾದ ಎಳ ಲಕ್ಷ ಜೀವ ಜಂತುಗಳಿಗೆ ಆಹಾರವಿತ್ತು ರಕ್ಷಿಸುವುದಕ್ಕೆ ಕರ್ತನೆಂಬುದೀಗ ವಿಷ್ಣುವೆಂಬ ಶಬ್ದಕ್ಕರ್ಥ"

"ಅನಾದಿ ರುದ್ರನ ಪೂಜೆಗೆ ಅಧಿಕಾರಿಯಾಗಿ ಇರುಹೆ ಮೊದಲು ಆನೆ ಕಡೆಯಾಗಿ ಎಳ ಲಕ್ಷ ಜೀವಜಂತುಗಳ ಸಂಹಾರಕ್ಕೆ ಕರ್ತನೆಂಬುದೀಗ ರುದ್ರನೆಂಬ ಶಬ್ದಕ್ಕರ್ಥ" ಇತ್ಯಾದಿ

ಹೀಗೆ ಈ ತ್ರಿಮೂರ್ತಿಗಳ ವಾಖ್ಯೆಗಳು ಇಲ್ಲಿ ಇವೆ., ಇದರ ಮೇಲಿಂದ ಷಟ್‌ಸ್ಥಲ ಶಾಸ್ತ್ರಜ್ಞರು ಹಿಂದಿನ ವಚನಕ್ಕಾರರಂತೆ ತ್ರಿಮೂರ್ತಿಗಳನ್ನು ಸಂಪೂರ್ಣವಾಗಿ ನಿರಾಕರಿಸಿಲ್ಲೆಂದು ತೋರಿಬರುತ್ತದೆ.

ಈ ವಿಷಯವಾಗಿ ಕೆಲವೊಬ್ಬ ವಚನಕಾರನು ಬಹು ಸ್ಪುಟವಾದ ರೀತಿಯಿಂದ ಕಲವು ವಚನಗಳನ್ನ ರಚಿಸಿದ್ದಾನೆ. ನಮ್ಮ ಮೇಲ್ಕಂಡ ಅಭಿಪ್ರಾಯಗಳನ್ನು ಅವನು ಬಹು ಅತ್ಯುತ್ತಮ ರೀತಿಯಿಂದ ಪ್ರಕಟ ಮಾಡಿದ್ದಾನೆ. ಅದ್ದರಿಂದ ಅವುಗಳನ್ನೇ ನಾವು ಇಲ್ಲಿ ಕೊಡುತ್ತೇವೆ.

ವಚನಗಳು.

(೧) ಬ್ರಹ್ಮನೇ ಘನವೆಂದು ಪೂಜೆಯ ಮಾಡುವ ಭವಿಗಳು ಒಮ್ಮೆ ನೀರೊಳು ಮುಳುಗಿ ಮುಕ್ತಿಯಿಲ್ಲದೆ ಹೋದರೆಂಬಿರಿ, ವಿಷ್ಣುವೇ ಘನವೆಂದು ಪೂಜೆಯ ಮಾಡುವ ಭವಿಗಳು ತಮ್ಮ ಭುಜವ ತಾವು ಸುಡಿಸಿಕೊಂಡು ಮುಕ್ತಿಯಿಲ್ಲದೆ ಹೋದರೆಂಬಿರಿ, ನಮ್ಮ ಶಿವನೇ ಘನವೆಂದು ಪೂಜೆಯ ಮಾಡುವ ಅಣ್ಣಗಳಿಗೆ ಕೈಲಾಸ ಪದವಾಯಿತ್ತೆಂದು ಹೇಳುವ ಕುನ್ನಿಗಳು ನೀವು ಕೇಳಿರೋ. ಅದು ಎಂತೆಂದರೆ— ಬ್ರಹ್ಮ ವಿಷ್ಣುಗಳ ಅಧಿಕಾರ ವಿಡಿದು ಒಮ್ಮನವಾಗಿ ನಮ್ಮ ಶಿವನೇ ಘನವು ಎಂದು ಭಾವಿಸಿ ಪೂಜೆಯ ಮಾಡುವ ಭಕ್ತರ ಭಕ್ತಿಭಾವಕ್ಕೆ ಮೆಚ್ಚಿ ಕೈಲಾಸ ಪದವು ಆಯಿತ್ತು ಕಾಣಿರೋ. ಅದು ಎಂತೆಂದರೆ ಹರಿ ಎಂಬಜಲವ ತಂದು ಹರನ ಮಂಡೆಯ ಮೇಲೆ ಎರೆಯಲು, ಬ್ರಹ್ಮನೆಂಬ ಬೋನವ ತಂದು

ನೈವೇದ್ಯವ ಹಿಡಿಯಲು, ಶಿವಭಕ್ತರಿಗೆ ಪ್ರಸಾದವಾಯಿತ್ತು ಕಾಣಿರೋ. ಅದು ಎಂತೆಂದರೆ ಹಸಿದು ಬಳಲಿ ಬಂದವಂಗೆ ಹರಿ ಎಂಬ ಜಲವ ಕೊಟ್ಟು ಬ್ರಹ್ಮ ಎಂಬುವ ಬೋನವ ನೀಡಲು ಮೂರು ಲೋಕಕ್ಕೆ ಪರಹಿತಾರ್ಥವೆಂಬ ಪ್ರಭೆ ಬೆಳಗು ತೋರಿತ್ತು ಕಾಣಿರೋ. ಅದು ಎಂತೆಂದರೆ, ಒಂದೇ ವಿಕ ಮೂರ್ತಿಯು ತ್ರಿಮೂರ್ತಿಯಾಗಿ ಬಂದು ಆನೆ ಮೊದಲು ಇರುಹೆ ಕಡೆ ಎಂಭತ್ತುನಾಲ್ಕು ಜೀವರಾಶಿಗಳನ್ನೆಲ್ಲ ಹುಟ್ಟಿಸುವದಕ್ಕೆ ಬ್ರಹ್ಮನೆಂಬ ಮೂರ್ತಿಯಾದ, ರಕ್ಷಿಸುವದಕ್ಕೆ ವಿಷ್ಣು ಮೂರ್ತಿಯಾದ, ಳಕ್ಷಿಸುವದಕ್ಕೆ ರುದ್ರ ಮೂರ್ತಿಯಾದನೆಂದು ನಾಲ್ಕು ವೇದ ಆರು ಶಾಸ್ತ್ರ ಹದಿನೆಂಟು ಪುರಾಣ ಇಪ್ಪತ್ತೆಂಟು ದಿವ್ಯಾಗಮ ಮೂವತ್ತೆರಡು ಉಪನಿಷತ್ ಶಾಸ್ತ್ರಂಗಳು ಹೇಳುತ್ತಿಹವು. ಇದನು ಅಂತೂ ಅರಿಯದ ಅಜ್ಞಾನಿಗಳು ಹರಿಸುರ ಬ್ರಹ್ಮಾದಿಗಳು ನಮ್ಮ ಹರನಿಗೆ ಸರಿ ಇಲ್ಲವೆಂದು ಹೇಳುವ ಕಿರುಕುಳು ಹದದ ನರಕಿಗಳ ಹಸಿವೆಗೆ ಬ್ರಹ್ಮನೇ ಬೋನವಾದ, ತೃಷೆಗೆ ಹರಿಯೇ ಜಲವಾದನೆಂದು ಇಕ್ಕುನೆನುಮುಂಡಿಗೆಯು ಇದನೆತ್ತುವರುಂಟೇ ನೋಡಾ ದಾಸಂಪ್ರಿಯ ರಾಮನಾಥಂ ಪ್ರಭುವೇ.

(೨) ನಾವು ಹರನ ಭಕ್ತರು ಹರಿಯ ಪೂಜೆಗೊಂಡು, ಹರಿ ಶಬ್ದವ ನೆನೆಯಲಾಗದು ಎಂದು ಹೇಳುವ ಅಣ್ಣಗಳಿರಾ, ಹರಿಯೇ ನಿಮ್ಮ ಶಿರದಲ್ಲಿ ಶಿವಲಿಂಗವಾಗಿರ್ಪುದು, ಹಂ ಶಬ್ದವೇ ನಿಮಗೆ ಮಂತ್ರವಾಗಿರ್ಪುದು, ಅದು ಎಂತೆಂದರೆ, ಹರನೇ ನಿರಾಕಾರ ಮಹಿಮೆಯಲ್ಲಿ ಹರಿಯಾದ. ಹರಿಯು ನಿರಾಕಾರ ಮಹಿಮೆಯಲ್ಲಿ ಬ್ರಹ್ಮನಾದ. ಈ ಮೂರು ಮೂರ್ತಿಗಳು ಒಂದುಗೂಡಲಿಕ್ಕೆ ಹರಿಹರದೇವರೆಂಬುವುದು ಬೆಂಕೆಯ ಶಿವಲಿಂಗದೇವವಾಯಿತ್ತು ಕಾಣಿರೋ. ಹರಿಹರ ಶಬ್ದವೇ ನಿಮಗೆ ಗುರು ಮಂತ್ರವಾಗಿಪ್ಪುದು. ಅದು ಎಂತೆಂದರೆ, ಅಕಾರ ನಿರಾಕಾರ ಏನೂ ಇಲ್ಲದಂದಿಂಗೆ ಓಂಕಾರವೆಂಬುವದೊಂದೇ ಅಕ್ಷರ ಹುಟ್ಟಿ ಪರಬ್ರಹ್ಮನಾದ. ಅದರ ಒಡಲೊಳಗೆ ಹುಟ್ಟಿದ ನಕಾರವೆಂಬ ಅಕ್ಷರವೇ ಬ್ರಹ್ಮನಾದ. ಮಕಾರವೆಂಬ ಅಕ್ಷರ ಹುಟ್ಟಿ ವಿಷ್ಣುವಾದ. ಶಿಕಾರವೆಂಬ ಅಕ್ಷರ ಹುಟ್ಟಿ ರುದ್ರನಾದ. ವಕಾರವೆಂಬ ಅಕ್ಷರ ಹುಟ್ಟಿ ಈಶ್ವರನಾದ. ಯಕಾರವೆಂಬ ಅಕ್ಷರ ಹುಟ್ಟಿ ಸದಾಶಿವನಾದ. ಇಂತಿವು ಆರು ಅಕ್ಷರ ಕೂಡಲಿಕ್ಕೆ "ಓಂ ನಮಃ ಶಿವಾಯ" ಎಂಬ ಷಡಕ್ಷರ ಗುರುಮಂತ್ರವಾಗಿರ್ಪುದು ಕಾಣಿರೋ. ಅದು ಎಂತೆಂದರೆ:— ಹರಿಹರದೇವರೆಂಬ ಬೆರಕೆಯ ಶಿವ

ಲಿಂಗದೇವರನೇ ನಿಮ್ಮ ಶಿರದಲ್ಲಿ ಕಟ್ಟಿ ಕರದಲ್ಲಿ ಹಿಡಿದುಕೊಂಡು ಹರಿ ಹರ ಶಬ್ದವೆಂಬ ಗುರುಮಂತ್ರವ ನೆನೆನೆನೆದು ಪೂಜೆ ಮಾಡುತಿರ್ಪರು ಕಾಣಿರೋ. ಅದು ಎಂತೆಂದರೆ:— ಹರಿಹರದೇವರೆಂಬುವ ಬೆರಕಿ ಶಿವ ಲಿಂಗದೇವರೇ ಕಾಲಕರ್ಮವ ಗೆಲಿದು ಅಧ್ಯಾತ್ಮ ಜ್ಞಾನವ ತಿಳಿವಂತೆ ಸಿದ್ಧಸಾಧಕರಿಗೆಲ್ಲ ಪ್ರಾಣಲಿಂಗವಾಯಿತ್ತು ಕಾಣಿರೋ. ಇಷ್ಟಲಿಂಗವೆಂದು ಶಿರದಲ್ಲಿ ಕಟ್ಟಿ ಕರದಲ್ಲಿ ಪೂಜೆಯ ಮಾಡಿದರೇನಯ್ಯ? ಹರಿಹರದೇವರೆಂಬುವ ಬೆರಕೆಯ ಶಿವಲಿಂಗದೇವರು ಒಂದೇ ಕಾಣಿರೋ. ಅದು ಎಂತೆಂದರೆ, ನಾವು ಹರಭಕ್ತರು. ಹರಿಯ ಪೂಜೆಯಗೊಂಡು ಹರಿ ಶಬ್ದವ ನೆನೆಯಲಾಗದು ಎಂದು ಹೇಳುವ ಅಣ್ಣಗಳು ಹರಿಹರದೇವರೆಂಬುವ ಬೆರಕೆಯ ಶಿವಲಿಂಗದೇವರೇ ಹರಿಶಬ್ದವೆಂಬ ಗುರುಮಂತ್ರವ ನೆನೆವುತ್ತಿರ್ದರು. ಇಂತಿವರಿಗೆ ಗುರುಮಂತ್ರವಾಗಿರ್ಪುದು ಕಾಣಿರೋ ಎಂದು ಇಕ್ಕುವೆನು ಮುಂಡಿಗೆಯ ಇದನೆತ್ತುವರಂಟೇ ದಾಸಂಪ್ರಿಯ ರಾಮನಾಥಂ ಪ್ರಭುವೇ.

(೩) ಎಲ್ಲ ದೇವರಿಗೆ ವಲ್ಲಭ ನಮ್ಮ ಏಕೋದೇವನೇ ದೈವವೆಂದು ಹಾಕುವಿರಿ ಮುಂಡಿಗೆಯ. ಏಕೋದೇವನೇ ದೈವ ಸಹಜ. ಏಕೋದೇವ ಮೂರು ಅಕ್ಷರ ಮೂರ್ತಿಗಳಾಗಿ ಬಂದು ಮೂರು ಲೋಕವನು ಹುಟ್ಟಿಸಿದ ಕಾಣಿರೋ. ಆನೆ ಮೊದಲು ಇರುಹೆ ಕಡೆ ಎಂಭತ್ತು ನಾಲು ಲಕ್ಷ ಜೀವರಾಶಿಗಳನು ಹುಟ್ಟಿಸುವುದಕ್ಕೆ ಬ್ರಹ್ಮನೆಂಬುವ ಮೂರ್ತಿಯಾದ. ರಕ್ಷಿಸುವುದಕ್ಕೆ ವಿಷ್ಣುವೆಂಬುವ ಮೂರ್ತಿಯಾದ. ಭಕ್ಷಿಸುವುದಕ್ಕೆ ರುದ್ರನೆಂಬುವ ಮೂರ್ತಿಯಾದ. ಈ ಮೂರು ಮೂರ್ತಿಗಳು ಕೂಡಲಿಕ್ಕೆ ಈಶ್ವರನೆಂಬಿವದೊಂದು ಆಕಾರ ಲಿಂಗ ಮೂರ್ತಿ ಆಯಿತ್ತು ಕಾಣಿರೋ. ಆ ಲಿಂಗವನು ಕೊಂಡು ನರರು ಸುರರು ತೆತ್ತೀಸ ಕೋಟಿ ದೇವಾದಿ ದೇವರ್ಕಳಗೆಲ್ಲರು ತಮ್ಮ ಜಾತಿ ಧರ್ಮದ ನೀತಿ ಆಚಾರದ ನಡೆ ನುಡಿಯನು ಅರಿತು ಪೂಜೆಯ ಮಾಡಿದರೇನಯ್ಯ? ಲಿಂಗಮಯವೆಂಬುದೊಂದೇ ಕಾಣಿರೋ. ಈ ಕಲಿಯುಗದಲ್ಲಿ ಹುಟ್ಟಿದ ಮನುಜರು ಆ ಲಿಂಗವನು ತಮ್ಮ ಶಿರದಲ್ಲಿ ಕಟ್ಟಿಕೊಂಡು ಶಿವಿಯಲ್ಲಿ ಪೂಜೆಯ ಮಾಡಿದರೆ ಶಿವಿಯಲಿಂಗವೆಂಬುವರು. ಗುಡಿಯಲ್ಲಿ ಪೂಜೆಯ ಮಾಡಿದರೆ ಸ್ಥಾವರಲಿಂಗವೆಂಬುವರು. ಕೊರಳಲ್ಲಿ ಇದ್ದರೆ ಇಷ್ಟಲಿಂಗವೆಂಬು

ವರು. ಇಂತು ಬೇರೆ ಬೇರೆ ಭಿನ್ನವನು ಮಾಡಿ ನುಡಿವ ಖುಲ್ಲಕುಹಕ ಮರುಳ ಮನುಜರು ಮಾಡಿದ ಭಕ್ತಿ ಏನಾಯಿತ್ತು ಎಂದರೆ ತಾಯ ಗರ್ಭದಲ್ಲಿ ಹುಟ್ಟಿ ತಾಯ ಯೋನಿಯಲ್ಲಿ ಬಂದು ತಾಯ ಭೋಗಿಸಿದಂತಾಯಿತ್ತು ಕಾಣಿರೋ ದಾಸಂ ಪ್ರಿಯ ರಾಮನಾಥಂ ಪ್ರಭುವೇ.

(೪) ಹರ ಹೆಚ್ಚು, ಹರಿ ಕಡಿಮೆ ಎಂದು ಜರಿದಾಡುವಂತಹ ನರಕೀಟಕರು ನೀವು ಕೇಳಿರೋ. ಹರನ ಮಗ ಹರಿಯಾದ. ಹರಿಯ ಮಗ ಬ್ರಹ್ಮನಾದ. ಇರುಹೆ ಕಡೆ ಆನೆ ಮೊದಲು ಎಂಬತ್ತುನಾಲ್ಕು ಲಕ್ಷ ಜೀವ ರಾಶಿಗಳೆಲ್ಲ ಬ್ರಹ್ಮನಿಂದ ಆದವು ಕಾಣಿರೋ. ಉಂಬಲ್ಲಿ ಉಡುವಲ್ಲಿ ಬ್ರಹ್ಮ, ಕೊಂಬಲ್ಲಿ ಕೊಡುವಲ್ಲಿ ಬ್ರಹ್ಮ, ಭಕ್ತಿಯ ಮಾಡುವಲ್ಲಿ ಬ್ರಹ್ಮ, ಮುಕ್ತಿಯ ಹೇಳುವಲ್ಲಿ ಬ್ರಹ್ಮ, ಮುಕ್ತಿಪದವ ಪಡೆವಲ್ಲಿ ಬ್ರಹ್ಮಮಯ ತಾನೇ ಆಗಿಹ ಕಾಣಿರೋ. ಹರನು ಹನ್ನೊಂದು ಅವತಾರವ ತಾಳಿ ದೇವ ದಾನವ ಮಾನವರನೆಲ್ಲ ಸಂಹಾರವ ಮಾಡಿ ಹರಿಯಾಗಿ ಬಂದ ಕಾಣಿರೋ. ಹರಿ ಹತ್ತವತಾರವ ತಾಳಿ ವರಾಹಕ್ಕೆ ಸರಿಯಾಗಿ ಬಂದ ನರಕಾಸುರನ ಸಂಹಾರ ಮಾಡಿ ನಾರಾಯಣನಾದ ಕಾಣಿರೋ. ಹರನೇ ಗುರುವಾಗಿ ಹರಿಯೇ ಭಕ್ತನೆಂದು ಅರಿತು ನೋಡುವ ಅಣ್ಣಗಳ ಅಂತರಂಗದಲ್ಲಿ ಹರಿ ಹರರು ಏಕಾಕಾರವಾಗಿರ್ಪರು ಕಾಣಿರೋ. ಎಂದು ನಾಲ್ಕು ವೇದ ಆರು ಶಾಸ್ತ್ರ ಇಪ್ಪತ್ತೆಂಟು ದಿವ್ಯಾಗಮ ಮೂವತ್ತೆರಡು ಉಪನಿಷತ್ ಶಾಸ್ತ್ರಂಗಳು ಹೇಳುತ್ತಿಹವು. ಇದನರಿತು ಅರಿಯದೆ ಹರ ಹೆಚ್ಚು ಹರಿ ಕಡಿಮೆ ಎಂದು ಜರಿದಾಡುವಂತಹ ನರಕೀಟಕರ ಮಾತು ಕರ್ಣದಲ್ಲಿ ಕೇಳಲಾಗದು ಕಾಣಾದಾಸಂಪ್ರಿಯ ರಾಮನಾಥಂ ಪ್ರಭುವೇ.

(೫) ನಾವು ಹರ ಭಕ್ತರು ಹರಿಯ ಪೂಜೆಯಗೊಂಡು ಹರಿಗೆ ಶರಣೆನ್ನಲಾಗದು ಎಂದು ಹೇಳುವ ಅಣ್ಣಗಳಿಗೆ ನಿಮಗೆ ಆಧಾರವೆಂಬ ಚಕ್ರದಲ್ಲಿ ಬ್ರಹ್ಮನೆಂಬವ ಪುರುಷ ಸರಸ್ವತಿ ಎಂಬ ಶಕ್ತಿ ಇವರಿಬ್ಬರು ಸತಿ ಪತಿಗಳಾಗಿಪ್ಪರು ಕಾಣಿರೋ. ನಿಮ್ಮ ಸ್ವಾಧಿಷ್ಠಾನವೆಂಬ ಚಕ್ರದಲ್ಲಿ ವಿಷ್ಣುವೆಂಬ ಪುರುಷ ಶ್ರೀ ಲಕ್ಷ್ಮಿ ಎಂಬ ಶಕ್ತಿ ಇವರಿಬ್ಬರು ಸತಿಪತಿಗಳಾಗಿ ಇರುತ್ತಿಹರು ಕಾಣಿರೋ. ನಿಮಗೆ ಮಣಿಪೂರಕ ಚಕ್ರದಲ್ಲಿ ರುದ್ರ ಪುರುಷ ಪಾರ್ವತೀದೇವಿ ಎಂಬ ಶಕ್ತಿ ಇವರಿಬ್ಬರು ಸತಿಪತಿಗಳಾಗಿರುತ್ತಿಹರು ಕಾಣಿರೋ. ನಾವು ಹರನ ಭಕ್ತರು, ಹರಿಯ ನೆನೆಯಲಾಗದು ಎಂಬುವ ಅಣ್ಣಗಳ ಅಂಗದೊಳಗೆ ಹರಿಯೇ ನೆಲೆಗೊಂಡು

ಇಹನು. ಹರಗೆ ವಂದಿಸಿ ಹರಿಯ ನಿಂದಿಸುವಂತಹ ಹಂದಿಗಳ ಮುಖವ ನೋಡಲಾಗದು ಕಾಣಾದಾಸಂಪ್ರಿಯ ರಾಮನಾಥಂ ಪ್ರಭುವೇ.

(೬) ಬ್ರಹ್ಮನು ಭವಿ ಎಂದು ಜರಿದಾಡಿದರೇನಯ್ಯ? ಬ್ರಹ್ಮಂಗೆ ಕುಂದಾಯಿತ್ತೇ? ಕುಂದಾಗಲಿಲ್ಲ. ಬ್ರಹ್ಮನೇ ಭವಿ ಎಂದು ಜರಿದಾಡುವ ಕುನ್ನಿಗಳ ತೃಷೆಯ ಕಳೆಯಬೇಕೆಂದು ಬ್ರಹ್ಮದೇವರೇ ಅನ್ನ ಪ್ರಸಾದವಾಗಿ ಬಂದ ಕಾಣಿರೋ. ವಿಷ್ಣುವೇ ಭವಿ ಎಂದು ಜರಿದಾಡಿದರೇನಯ್ಯ? ವಿಷ್ಣುವಿಂಗೆ ಕುಂದಾಯಿತ್ತೇ? ಕುಂದಾಗಲಿಲ್ಲ. ವಿಷ್ಣುವೇ ಭವಿ ಎಂದು ಜರಿದಾಡುವ ಕುನ್ನಿಗಳ ತೃಷೆಯ ಕಳೆಯಬೇಕೆಂದು ಹರಿ ಎಂಬ ಜಲವಾಗಿ ಬಂದ ಕಾಣಿರೋ. ಬ್ರಹ್ಮನೆಂಬ ಪಾಪಿನವನುಂಡು ಹರಿ ಎಂಬ ಜಲವ ಭಕ್ಷಿಸಿ ಬ್ರಹ್ಮ ಭವಿ ವಿಷ್ಣು ಭವಿ ಎಂದು ಜರಿದಾಡುವಂತಹ ಕುನ್ನಿಗಳು ಮಾಡಿದ ಭಕ್ತಿ ಏನಾಯಿತ್ತು ಎಂದರೆ ಬೀದಿಯೊಳಗೆ ಬಿದ್ದಿದ್ದ ಎಕ್ಕಡವ ಹಾದಿಯೊಳಗೆ ಹೋಗುವ ಶುನಕ ಕಂಡು ಕೊಂಡು ಓಡಿ ಹೋದ ಪರಿಯಾಯಿತ್ತು ಕಾಣಿರೋ. ಅದ ಕಂಡು ನಗುತಿದ್ದಾತ ದೇವಾಂಗ ವಾಸಿ ದಾತ × ಅಲ್ದಿಯ ಮನು ಸಂಪೂರ್ಣ ರಾಮನಾಥಂ ಪ್ರಭುವೇ.

(೭) ಹರ ಘನವೆಂದು ಪೂಜೆಯ ಮಾಡುವ ಅಣ್ಣಗಳ ಅಂಗ ದೊಳಗೆ ಹೊರಗೆ ಹರಿಯೇ ನೆಲೆಗೊಂಡಿರ್ಪನಯ್ಯ. ಹರಿಯೇ ಘನವೆಂದು ಪೂಜೆಯ ಮಾಡುವ ಅಣ್ಣಗಳ ಅಂಗದ ಒಳಗೆ ಹೊರಗೆ ಹರನೇ ನೆಲೆಗೊಂಡಿರ್ಪನಯ್ಯ. ಅದು ಎಂತೆಂದರೆ ಹರನೇ ಘನವೆಂದು ಪೂಜೆಯ ಮಾಡುವ ಅಣ್ಣಗಳ ಆಧಾರ ಚಕ್ರದಲ್ಲಿ ಬ್ರಹ್ಮನೇ ನೆಲೆಗೊಂಡಿರ್ಪನಯ್ಯ. ಸ್ವಾಧಿಷ್ಠಾನ ಚಕ್ರದಲ್ಲಿ ಹರಿಯೇ ನೆಲೆಗೊಂಡಿರ್ಪನಯ್ಯ. ಶಿಖಾಚಕ್ರದಲ್ಲಿ ಹರನೇ ನೆಲೆಗೊಂಡಿರ್ಪನಯ್ಯ. ಅದೆಂತೆಂದರೆ:— ಹರಗೂ ಹರಿಗೂ ಸರಿ ಇಲ್ಲವೆಂದು ಹೇಳುವ ಅಣ್ಣಗಳು ಶಿರದಲ್ಲಿ ಕಟ್ಟಿ ಕರದಲ್ಲಿ ಪೂಜೆಯ ಮಾಡುವ ಲಿಂಗದ ಆಧಾರ ಚಕ್ರವೇ ಬ್ರಹ್ಮ, ಸ್ವಾಧಿಷ್ಠಾನ ಚಕ್ರವೇ ಹರಿ,

---

× ಟೀಪು:— ಈ ವಚನಕಾರನು ಅಲದಿಯವನೆಂದು ತೋರುತ್ತದೆ. ಇದು ಕಲಬುರ್ಗಿ ಜಿಲ್ಲೆಯಲ್ಲಿ ಇದೆ. ಏಕಾಂತದ ರಾಮಯ್ಯನು ಇದೇ ಗ್ರಾಮದವನಿದ್ದು ಮುಂದೆ ಅವನು ಅಬ್ಬಲೂರಿಗೆ ಹೋದನು. ಅಬ್ಬಲೂರು ಶಾಸನದಲ್ಲಿ ಈ ಗ್ರಾಮವು ಅಳಂದೆ ಎಂದು ಬರೆಯಲ್ಪಟ್ಟಿದೆ.

ಶಿಖಾ ಚಕ್ರವೇ ಹರ. ಅದು ಎಂತೆಂದರೆ ನಿರಾಕಾರ ಪರಬ್ರಹ್ಮನೆಂಬ ಏಕ ಮೂರ್ತಿ ತ್ರಿಮೂರ್ತಿಯಾಗಿ ತ್ರಿಮೂರ್ತಿಯೇ ಏಕಮೂರ್ತಿಯಾಗಿ ಬಂದು ಹಂಗೆ ಸರಿ ಇಲ್ಲವೆಂದು ಹೇಳುವ ಅಣ್ಣಗಳ ಅಂಗದ ಒಳಗೆ ಹೊರಗೆ ಪೂಜೆಗೊಂಬುವ ಪರಿ ಭೇದವನರಿಯದೆ ನರನಾಯಕ ಸುರನಾಯಕರೆಲ್ಲ ಕಾಲಚಕ್ರನೆಂಬ ಪ್ರಳಯಕ್ಕೆ ಒಳಗಾಗಿ ಹೋದರು. ಅದು ಎಂತೆಂದರೆ. ಹರನೇ ಘನವೆಂದು ಪೂಜೆಯ ಮಾಡುವ ವಾದಿಗಳು ಸ್ಥಿರವಿಲ್ಲದೆ ಧುರ ಮರಣಕ್ಕೆ ಒಳಗಾಗಿ ಎಂಬತ್ತುನಾಲ್ಕು ಲಕ್ಷ ಜೀವ ರಾಶಿಗಳ ಯೋನಿಯಲ್ಲಿ ಹುಟ್ಟಿ ಚರಿಸಾಡುವ ಕಾಲ ಮುರಿಯಿತ್ತೇ? ಮುರಿಯಲಿಲ್ಲ. ಹರಿಯೇ ಘನವೆಂದು ಪೂಜೆಯ ಮಾಡುವ ವಾದಿಗಳು ಸ್ಥಿರವಿಲ್ಲದೆ ಧುರಮರಣಕ್ಕೆ ಒಳಗಾಗಿ ಎಂಬತ್ತು ನಾಲ್ಕು ಲಕ್ಷ ಜೀವ ರಾಶಿಗಳ ಯೋನಿಯಲ್ಲಿ ಹುಟ್ಟಿ ಚರಿಸಾಡುವ ಕಾಲ ಮುರಿಯಿತ್ತೆ? ಮುರಿಯಲಿಲ್ಲ ಅದು ಎಂತೆಂದರೆ:— ಹರಿ ಹರ ಬ್ರಹ್ಮಾದಿಗಳು ಸರಿಯಲ್ಲವೆಂದು ಹೇಳುವ ಅಂಣಗಳ ಸರ್ವಾಂಗದಲ್ಲಿ ಹರಿಹರಬ್ರಹ್ಮಾದಿಗಳು ನೆಲೆಗೊಂಡಿರ್ಪರಯ್ಯ. ಅದು ಎಂತೆಂದರೆ ನಡುಪಾದವು ಬ್ರಹ್ಮ, ಕಣಕಾಲವು ಹರಿ, ತೊಡೆಯೇ ಹರ, ನೀಡಿ ಮಾಡುವ ಹಸ್ತವೇ ಬ್ರಹ್ಮ. ಹಸ್ತ ಕಂಬಿಯೇ ಹರಿ. ತೋಳೇ ಹರ, ನೋಡುವ ನೇತ್ರದ ಕೆಂಪೇ ಬ್ರಹ್ಮ, ಕಪ್ಪೇ ಹರಿ, ಬಿಳಿದೇ ಹರ, ಒಳಗೆ ಸುಳಿದಾಡುವ ಛಾಯಾ ಮಾಯದ ಪುರುಷನೇ ಪರಬ್ರಹ್ಮ, ಅದು ಎಂತೆಂದರೆ ಹರಿಹರಬ್ರಹ್ಮಾದಿಗಳು ಸರಿಯಾಗಿ ಬಂದು ಎಂಭತ್ತು ನಾಲ್ಕುಲಕ್ಷ ಜೀವರಾಶಿಗಳ ಡಿಂಬವೆಂಬುವ ಮನೆಯೊಳಗೆ ಪೂಜೆಗೊಂಬುವ ಭೇದವೆಂತೆಂದರೆ, ನಿರಾಕಾರ ಪರಬ್ರಹ್ಮನೇ ಹರನಾದ. ಹರನ ವಾಮಭಾಗವೇ ಹರಿಯಾದ. ಹರಿಯಿಂದ ಬ್ರಹ್ಮನಾದ. ತ್ರಿಮೂರ್ತಿಗಳು ನಿರಾಕಾರ ಪರಬ್ರಹ್ಮನ ಗರ್ಭದಲ್ಲಿ ಹುಟ್ಟಿದ ಬ್ರಹ್ಮಬೀಜವೆಲ್ಲ ಒಂದೇ ಸರಿ ಎಂದು ಇಕ್ಕುವೆನು ಮುಂಡಿಗೆಯ ಎಂಬುದನೆತ್ತುವರುಂಟೇ ದಾಸಂಪ್ರಿಯ ರಾಮನಾಥಂ ಪ್ರಭುವೇ.

ಈ ವಚನಗಳಿಂದ ನಾವು ಈ ಲೇಖದ ಆರಂಭದಲ್ಲಿ ಹೇಳಿದ ಸಂಗತಿಗಳ ಸತ್ಯತೆಯು ಸ್ಪಷ್ಟವಾಗುತ್ತದೆ.

ಮುಂದೆ ಸಾಗುವದು.

ವೀರಶೈವ ಧ್ವಜ.

(ಲೇ:- ಪಂ॥ ಕೆ. ಪಿ. ಪಾಟೀಲ)

ಹೊಳೆಯಲಿವ್ಮಾ ವೀರಶೈವಧ್ವಜವಿಂದೇ ।
ಬೆಳೆಯಲೆಮ್ಮಯ ಸಕಲಭಾಗ್ಯಸೊಗಸಿಂದೆ ॥ಪಲ್ಲ॥

ಗುರು ರೇಣುಕರು ಶರಣ ಬಸವೇಶ್ವರಾದಿಗಳು ।
ನೆರೆ ನಿರಂಜನ ಪ್ರಭುವರೇಣ್ಯ ಜಂಗಮರು ॥
ಕಂಡೆ ಮಾದೇವಿ ನಾಗಮ್ಮ ನೀಲವ್ಮಗಳು ।
ಹರನೆ, ನಿನ್ನ ಸ್ವರೂಪದಿಂದೆ ಮೆರೆದಿಹರು ॥೧॥

ಹರಿಹರನು ರಾಘವಾಂಕನು ಪಾಲ್ಕುರಿಕೆ ಸೋಮ ।
ವಿರುಪಾಕ್ಷ ಜಕ್ಕಣ ಷಡಕ್ಷರಿಯು ಭೀಮ ॥
ಮೆರೆವ ಚಾಮರಸ ನಿಜಗಣಯೋಗಿ ಸರ್ವಜ್ಞ ।
ಹರ, ನಿನ್ನ ಶರಣರಿರವನ್ನು ಬೆಳಗಿಹರು ॥೨॥

ಕಿತ್ತೂರು ಕೊಡಗು ಬೆಳವಡಿ ಸ್ವಾದಿ ಕೆಳದಿಗಳು ।
ಉತ್ತಮೋತ್ತಮ ವೀರಶೈವ ರಾಜ್ಯಗಳು ॥
ಮತ್ತೆ ನೂರೆಂಟು ಸಂಸ್ಥಾನಗಳು ಸಂಪದವ ।
ಬಿತ್ತರಿಸಿ ಮೆರೆದವೈ ಹರ ನಿನ್ನ ದಯದಿ ॥೩॥

ಹರಭಕ್ತಿ ಶಿವಯೋಗ ಸುಜ್ಞಾನ ವೈರಾಗ್ಯ ।
ಗುರುಲಿಂಗ ಜಂಗಮ ಸೇವೆ ವಿಶ್ವಪ್ರೇಮಗಳು ॥
ಸರಿಸಮಾನತೆ ಸರ್ವಸ್ವಾತಂತ್ರ್ಯಕಾಯಕಗ-
ಳುರುತರದಿ ಶೋಭಿಪವು ಹರ ನಿನ್ನ ಮತದಿ ॥೪॥

ಸಕಲ ಕಲೆ ಕೈಕಸಬು ಮಂತ್ರಿಪದ ರಾಜ್ಯಪದ ।
ವಿಕಸಿತಸುಷ್ಟಿಸ್ಥಲದ ತತ್ವಂಗಳಂದೆ ॥
ಅಕಲಂಕವೆಂದೆನಿಸಿ ವೀರಶೈವ ಸುಧರ್ಮ ।
ಚಕಿಸುತಿದೆ ಹರ, ನಿನ್ನ ಕರುಣದೋಳ್ ನಿರುತ ॥೫॥

ಇಂತೆಸೆವ ವೀರಶೈವ ಸುಧರ್ಮ ಶರಧಿಯಲಿ ।
ಸಂತಸದೊಳೊಗೆತಂದ ರತ್ನರಾಶಿಯನು ॥
ಸಂತತದೊಳಾವು ಸಂಘಟನೆಯಿಂ ರಕ್ಷಿಸಲು ।
ಕಂತುಹರ ಕರುಣವನು ನೀಡಲೈನಿರತ ॥೬॥

ಬೇಂಟಿ ಬೇಡೆಂದು ದಣ್ಣಾಯ್ಕರುಂ ಪೇಳುತಿರೆ
ಬೇಂಟೆಯೊಂದಂ ಮಾಣ್ಬದಿನ್ನೆಂದು ನುಡಿಯುತಿರೆ

ಇತ್ತಲಾ ವನದ ಕಾರಣಿಕಮೃಗತತಿ ನೆರೆದು
ಹೊತ್ತು ಹೋಯಿತ್ತು ಬಾರಂ ಭಕ್ತನೆಂದೆಂದು
ಬಂದುಳಿದ ಮೃಗನಿಕರ ಒಂದಾಗಿ ನೋಡುತಂ
ನಿಂದು ತವ್ಮೊಳಗುಮ್ಮಳಂ ಪುಟ್ಟಿ ನೋಡುತಂ
ಜೊಮ್ಮಣ್ಣನೆಂಬವಂ ಸುಕೃತಸಿರಿವಲ್ಲಭಂ
ಎಮ್ಮೆಮ್ಮ ಜನ್ಮವಂ ನೀಗುವಾ ದುರ್ಲಭಂ
ಎಂದಾ ಪುರದ ಸುತ್ತಲುಂ ನೆರೆದು ನಿಂದಿರ್ದು
ದೇವಲೋಕಂ ತಪ್ಪಿತೆಮಗೆ ಶಿವಧೋ ಎಂದು
ಭೂವಳಯದೊಳಗಿನ್ನು ಪರಮಸುಖ ಬೇರೆಂದು
ಕಾರಣಿಕ ಮೃಗವೆಲ್ಲ ತೀರ್ದವೆಂದೆನುತವಿರೆ
ಮಾರಾರಿಯಲ್ಲಿಗೈದುವೆವೆಂದು ಪೇಳುತಿರೆ

ಬೆರಗಾಗಿ ದಂಡನಾಯಕರು ಕಂಗಳಂ ಮುಚ್ಚಿ
ಸೆರೆ ಕೌತುಕಂಗೊಂಡು ಶಿವನ ಮಹಿಮೆಗೆ ಮೆಚ್ಚಿ
ಅಸಮಾಕ್ಷ ನೀನೊಲಿಯೆ ಪಾಪವೇ ಪುಣ್ಯವದು
ಒಸೆದು ನೀನೊಲಿದಂಗನೀತಿಯೇ ನೀತಿಯದು
ದುಷ್ಕಾರ್ಯವೇ ಕಾರ್ಯವಕ್ರಮವೆ ಕ್ರಮವು ಅದು
ದುಷ್ಕುಲಂ ಸತ್ಕುಲವಧರ್ಮವೇ ಧರ್ಮವದು
ಎಂದು ಪದ್ಯವನೋದಿ ಹಾರೈಸಿ ಹಿಗ್ಗುತಿರೆ
ಇಂದುಧರನಾಜ್ಞೆಗತಿ ಕೌತುಕಂಬಡುತವಿರೆ
ನೋಡಿ ದಣ್ಣಾಯ್ಕರನವರೂರ್ಗೆ ಕಳಪುತಂ
ಕೂಡೆ ಸಮಶೀಲಗುಣಸಂತತಿಗೆ ಪೇಳುತಂ
ಪೊರಮಟ್ಟ ಜೊಮ್ಮಣ್ಣನಲ್ಲಿ ಬೇಂಟೆಗೆ ನಲಿದು
ಕರಿಗೊರಲನಾಜ್ಞೆಯಂ ಹೊತ್ತಭವನಂ ನೆನೆದು
ನಡೆತಂದು ವನದೊಳಗೆ ಸೊಕ್ಕು ನಲವಿಂದಂದು
ಮೃಡ ಭೀಮನಾಥ ಕರುಣಿಸು ಸಾಲ್ವುದೆನಗೆಂದು
ತನ್ನ ಬರವಂ ಪಾರ್ದು ನಿಂದ ಮೃಗನಿಚಯಮಂ

ಕಂದ॥ ಅಮ್ಮಮ್ಮ ಶಂಕರಂಗಿರಿ
ಶಂಮ್ಮದ್ಗುರು ಕೃಪೆಯೊಳೀಗೆ ಸದ್ಭಕ್ತಿಯ ನೊ
ಲ್ದೆಮ್ಮೊಳು ಚಂದ್ರಾಭರಣಂ
ಜೊಮ್ಮಣ್ಣನ ಕಂದನೆಂದು ಹಂಪೆಯ ರಾಯಂ

ಶಿವಮಹಿಮಾ ರಗಳೆ.

ವೇದದೊಳುಂ ಪುರಾಣನಿಕರಂಗಳೊಳುಂ ಘನಶಾಸ್ತ್ರವೃಂದದೊಳ್ ।
ವಾದಿನೊಳಂ ಸ್ಮೃತಿ ಪ್ರಕರದೋಳ್ ಸಕಲಾಗಮಮುಮಂತ್ರತಂತ್ರದೊಳ್ ।
ಮೇದಿನಿಯೋಳ್ ಪುರಾತನಕುಲಂ ನೆರೆ ತೋರಿದನೇಕದೃಷ್ಟದೊಳ್ ।
ನಾದಮಯಂ ಮಹೇಶನೆ ಘನಂ ಘನವೆಮ್ಮಯ ಹಂಪೆಯೀಶ್ವರಂ ॥೧॥

ಜಲಜಾಕ್ಷಾಕ್ಷವಿಶಾಲಪಾದನೆ ಘನಂ ಚಂಡಾಂಶುರಾತ್ರೀಶ್ವರ ।
ಜ್ವಲನಾಖ್ಯತ್ರಿಯಕ್ಷನಕ್ಷಯಸುರಶಿರೋಮಾಲಾವಿಶಾಲಂಘನಂ ।
ಗಳದೋಳ್‌ಗರಳಮನಿಟ್ಟ ಶಂಭುವೆ ಘನಂ ಕೇಳತ್ಯತಿಷ್ಯದ್ಯಶಾಂ ।
ಗುಲನೆಮ್ಮ ಪ್ರಭು ಹಂಪೆಯಾಬ್ಧನೆ ಘನಂ ಬ್ರಹ್ಮಾಂಡ ಸಂತಾನದೋಳ್ ।

ರಗಳೆ

ಶ್ರೀ ಪರಮಗುರು ಶಂಕರಪ್ರಭುವಿನಂಘ್ರಿಯೊಳ್
ಭಾಪು ಎನೆ ನೆಗಳ್ದನಾ ಮಾದಿರಾಜಾಂಘ್ರಿಯೊಳ್
ಶ್ರೀಗುರುಮಹಾದೇವರಾಜ್ಞೆಯಂ ಕೈಕೊಂಡು
ಬಾಗಿ ಹಂಪೆಯ ವಿರೂಪಾಕ್ಷನ ವರಂಗೊಂಡು
ಹೇಳಲುದ್ಯೋಗಿಸದೆನೀಶ್ವರನ ಮಹಿಮೆಯಂ
ಭಾಳಾಕ್ಷನೇ ಘನಂ ಘನವೆನಿಪ ಮಹಿಮೆಯಂ
ಆದಡೆನ್ನಕ್ಕರಿಂ ಬಲ್ಲಂತೆ ಬಣ್ಣಿಪೇಂ

ತನ್ನ ಬಾಣಂಗಳಿಂದೆಚ್ಚನಾ ಕಾಯಮುಂ
ಎಸಲಲ್ಲಿ ಮೃಗವೆಲ್ಲ ಬಿದ್ದವವನಿಯ ಮೇಲೆ
ಪೊಸ ಪುಷ್ಪವೃಷ್ಟಿ ಸುರಿತಂದವಾತನ ಮೇಲೆ

ದುಂದುಭಿಸ್ವನ ಉಚ್ಚೈದವು ಗಗನತಳದೊಳಗೆ
ಬಂದುದೊಂದನುಪಮದ ಪುಷ್ಪಕಂ ನಭದೊಳಗೆ
ಬಂದ ಪುಷ್ಪಕವನಾ ಜೊಮ್ಮಣ್ಣನೇರಿದಂ
ನಿಂದ ಶರಣರು ನೋಡೆ ಗಗನಕ್ಕೆ ಹಾರಿದಂ
ಮೃಗಕುಲದ ಪುಷ್ಪಕಂವೆರಸಿ ನೆಗೆದಂ ನೋಡ
ಜಗವೆಲ್ಲ ಬೆರಗಾಗೆ ಪೋಗುತಿರ್ದಂ ಕೂಡೆ
ಬಂದು ನಂದೀಶ್ವರನ ಬಾಗಿಲೊಳಗಂ ಪೊಕ್ಕು
ಇಂದುಧರನಂ ಕಂಡು ಭಕ್ತಿಸುಖಮುಂ ವಿಕ್ಕು
ದೇವ ಮೃಗವೇಷದ ಋಷಿಗಳೆಲ್ಲರ ತಂದೆ
ನಾವ ಪರಿಯಧಿಕರ್ಗೆ ಕರುಣಿಸುವುದೆಲೆ ತಂದೆ
ಎಂದು ಮೈಯ್ಯಿಕ್ಕಿ ಪಟ್ಟರ್ದ ಜೊಮ್ಮಣ್ಣನಂ
ಇಂದುಧರನಕ್ಕರಿಂ ನೋಡಿ ಹರುಷಂಗೊಂಡು
ಪಿಡಿದಪ್ಪಿ ತೆಗೆದಪ್ಪಿ ನೇಹದಿಂ ಮುಂಡಾಡಿ
ನುಡಿದು ನಂದೀಶಂಗೆ ಬೆಸಸುತಂ ಕೊಂಡಾಡಿ
ಎನ್ನ ನಿಂದೆಗೆ ಕೋಪಿಸುತ ಕೊಂದರಿಂತುಂಟೆ
ಎನ್ನ ಭಕ್ತರ್ಗೆಯಾನಲ್ಲದಿನ್ನೊಂದುಂಟೆ
ಭಾಪುರೇ ಜೊಮ್ಮಣ್ಣ ಧೀವುರೇ ಜೊಮ್ಮಣ್ಣ
ಭಾಪು ಮರ್ಕುಭಾಪೆನ್ನ ಭಕ್ತನಿಧಿ ಜೊಮ್ಮಣ್ಣ
ಎಂದು ಜೊಮ್ಮಣ್ಣಂಗೆ ಗಣಪದವಿಯಂ ಕೊಟ್ಟು
ಬಂದ ಋಷಿವೃಂದಮಂ ರುದ್ರಲೋಕದೊಳಿಟ್ಟು
ಹೊಸ ಜಡೆಯ ಶಶಿಕಳೆಯ ವಿಷಕಂಠನೊಪ್ಪಿದಂ
ಬಿಸುಗಣ್ಣ ಮಿಸುಪ ನವಭಸಿತಾಂಗನೊಪ್ಪಿದಂ
ಬ್ರಹ್ಮ ಪಂಚಮ ಶಿರಸ್ಥಿತಹಸ್ತನೊಪ್ಪಿದಂ
ಬ್ರಹ್ಮಾಂಡಫಳಧರಿತ ಕಲ್ಪಕುಜನೊಪ್ಪಿದಂ
ಅಹಾ ಮಹಾಮಹಿಮ ಘನತೇಜನೊಪ್ಪಿದಂ
ಅಹಾಹ ಹಂಪೆಯ ವಿರೂಪಾಕ್ಷನೊಪ್ಪಿದಂ

ಆದಿಯ ಪುರಾತನರು ಒಲಿಸಿದುದನೆಂದಪೇಂ
ಸಕಲ ವೇದಂಗಳುಂ ಬೊಬ್ಬಿಟ್ಟುದುಂಟಾಗಿ
ಸಕಲಮುಖದಿಂ ಬಣ್ಣಿಸುತ್ತಿರ್ಪುದುಂಟಾಗಿ
ಅದು ಕಾರಣಂ ಗುರುವಿರೂಪಾಕ್ಷನೇ ಘನಂ
ಸದಮಲಂ ಪಂಪಾವಿರೂಪಾಕ್ಷನೇ ಘನಂ
ಅಪ್ರತಿಮನತುಳಬಳನಹಿಕಂಕಣನೆ ಘನಂ
ಅಪ್ರತಿಹತಪ್ರತಾಪಪ್ರಕರನೇ ಘನಂ
ಅತ್ಯತಿಷ್ಠದ್ದಶಾಂಗುಲನಪ್ರತಿಮನೆಂದು
ನಿತ್ಯನೇಕೋರುದ್ರ ನ ದ್ವಿತೀಯ ನೀನೆಂದು
ಪರಮನ ನಮಸ್ಕಾರಮಾಲೆಗೆ ನಮೋ ಎಂದು
ಹರನ ಚರಣಕ್ಕೆ ಕರುಣಕ್ಕಂ ನಮೋ ಎಂದು
ಹರಿಗುಂ ಹರಂತಿಯೆಂದಭವನೆಂಪತಿಯೆಂದು
ಹರನೆಲ್ಲವಂ ತೀರ್ದಿ ಕಳೆವನಿತು ದಿಟವೆಂದು
ಸರ್ವಮನ್ಯಪ್ರರಿತ್ಯಾಜ್ಯಮೆನೆ ಶಿವನೆಂದು
ಸರ್ವಗುರುಧರೆಗೆ ಭರ್ಗೋ ದೇವನೆಯೆಂದು

ಇನ್ನುಂ ಪುರಾಣದೊಳು ಮಹಿಮೆಯಂ ಬಣ್ಣಿಪೇಂ
ಪನ್ನಗಾಭರಣನಾಧಿಕ್ಯವಂ ಪೇಳ್ದಪೇಂ
ಹರಿಯಜರ ನಡುವೆ ಹರನುರಿಲಿಂಗವಾದುದುಂ
ಹರಿಬ್ರಹ್ಮರರಸಿ ಕಾಣದೆ ನಿಂದರೆಂಬುದಂ
ಅಂದೊಮ್ಮೆ ಹರಿಯೊಡನೆ ಹುಸಿ ನುಡಿದ ಬ್ರಹ್ಮಂಗೆ
ಒಂದೆಡೆಯೊಳುಂ ಸ್ಥಾನವಿಲ್ಲ ನೋಡಾತಂಗೆ
ಮರೆದಹಂ ಬ್ರಹ್ಮಾಸ್ಮಿ ಎಂದ ಬ್ರಹ್ಮನ ಶಿರಂ
ಹರಿದು ಹೋದುದು ರುದ್ರನಿಂದಲಂತದು ಕರಂ
ಪೋಗೆ ಸೋಮಾಷ್ಪಕವನಲ್ಲಿ ಬಿನ್ನೈಸುತಂ
ವಾಗೀಶನತಿದೈನ್ಯದಿಂದ ಮಿಗೆ ಪೊಗಳುತಂ
ಇರಲಾತನಿಷ್ಟಿಯುಂ ಸಲಿಗಿ ಶಿರವಂ ಪಿಡಿದು
ಅರರೆ ಕಾಪಾಲಿ ಲೀಲಾಮಾತ್ರದಿಂ ನಡೆದು
ಭಿಕ್ಷುಕನ ವೇಷಮುಂ ನಟಿಯಿಸುತ್ತೈಯ್ತಂದು
ಮೋಕ್ಷದಿಂ ದ್ವಾರಾವತಿಗೆ ನಲಿದು ಬರಲಂದು
ಬರಲು ವಿಷ್ಣುಕ್ಷೇನನ್ನ ಬರೆ ಕಾಣುತಂ

ಈ ಸ್ಥಳದಲ್ಲ ಹೇಳಲ್ಪಟ್ಟಿರುವ ಕರಸ್ಥಲವು ಸುಚಿತ್ತವೆಂದು ಭಾವಿಸಬೇಕು. ಇದಕ್ಕೆ ಇಷ್ಟಲಿಂಗವಿವೆ. ಈ ಇಷ್ಟಲಿಂಗವೇ ಶಿವಲಿಂಗದೊಳಗಣ ಆಚಾರಲಿಂಗವಾಗಿರುತ್ತದೆ. ಇದರ ಮುಂದಿನದು ನಯನಸ್ಥಲವು. ಈ ನಯನವು ಸುಬುದ್ಧಿಗೆ ಹಸ್ತವಾದುದೆಂದು ಭಾವಿಸಿ ಕರಸ್ಥಲದ ಇಷ್ಟಲಿಂಗವನ್ನು ನಯನದಲ್ಲಿ ಎವೆ ಹಳಚದೆ ಅನುಮಿಷ ದೃಷ್ಟಿಯಿಂದ ನಿರೀಕ್ಷಿಸುವನು. ಇದೇ ಶಿವಲಿಂಗದೊಳಗಣ ಗುರುಲಿಂಗವು.

ನಯನಸ್ಥಲದ ಮುಂದಿನದು ಹೃದಯಸ್ಥಲವು. ಈ ಹೃದಯವು ನಿರಹಂಕಾರಕ್ಕೆ ಹಸ್ತವೆಂದು ಭಾವಿಸಿ, ಇಲ್ಲಿ ಇಷ್ಟಲಿಂಗವು ಪ್ರಾಣಲಿಂಗವಾಗಿ ವ್ಯವಹರಿಸುವುದು. ಇದೇ ಶಿವಲಿಂಗದೊಳಗಣ ಶಿವಲಿಂಗವು.

ಹೃದಯಸ್ಥಲದ ಮುಂದಿನದು ಮಂತ್ರಸ್ಥಲವು. ಈ ಮಂತ್ರಕ್ಕೆ ಸುಮನವೇ ಹಸ್ತವಾಗಿರುತ್ತದೆ. ಈ ಹಸ್ತದಲ್ಲಿ ಇಷ್ಟ, ಪ್ರಾಣ, ಭಾವ ಈ ಮೂರು ಲಿಂಗಗಳನ್ನು ಒಳಕೊಂಡು ತೋರುವ ಮಹಾಲಿಂಗವು ಪಂಚಾಕ್ಷರೀ ಮಂತ್ರಸ್ವರೂಪವಾಗಿ ವ್ಯವಹರಿಸುತ್ತಿದೆ. ಇದೇ ಶಿವಲಿಂಗದೊಳಗಣ ಜಂಗಮಲಿಂಗವು.

ಈ ಮಂತ್ರಸ್ಥಲದ ಮುಂದಿನದು ತ್ರಿಕೂಟಸ್ಥಲವು. ಈ ಸ್ಥಲಕ್ಕೆ ಹಸ್ತವಾಗಿರುವದು ಸುಜ್ಞಾನವು. ಈ ಸುಜ್ಞಾನ ಹಸ್ತದಲ್ಲಿ ಅರಿವು ಎಂಬ ಶಿವತತ್ವವು ಮುಂದುಗೊಳ್ಳಲು, ಅಲ್ಲಿ ಇಷ್ಟಲಿಂಗಕ್ಕೆ ಮಾಡುವಾತ, ಕೈಕೊಳ್ಳುವಾತ, ಮತ್ತು ಪೂಜಾದ್ರವ್ಯ ಇವೆಲ್ಲವೂ ಒಂದೇ ಎಂದು ಭಾವಿಸಿ ಆಚರಿಸುವನು. ಇದೇ ಶಿವಲಿಂಗದೊಳಗಣ ಪ್ರಸಾದಲಿಂಗವಿರುತ್ತದೆ.

ಈ ಮಂತ್ರಸ್ಥಲದ ಮುಂದಿನದು ಲಯಸ್ಥಲವಿರುತ್ತದೆ. ಇದರಲ್ಲಿ ಹಸ್ತವಾಗಿರುವುದು ಸದ್ಭಾವವು. ಈ ಕರತಾಣದಲ್ಲಿ ತಮ್ಮಂಗವನ್ನು ಅಡಗಿಸಿ ವಿಶ್ರಾಂತಿಯನ್ನು ಹೊಂದಬೇಕು. ಇದೇ ಶಿವಲಿಂಗದೊಳಗಣ ಮಹಾಲಿಂಗವು.

ಈ ಪ್ರಕಾರ ಶಿವಲಿಂಗವು ಮೊದಲು ಕರಸ್ಥಲ, ನಯನಸ್ಥಲ, ಹೃದಯಸ್ಥಲ, ತ್ರಿಕೂಟಸ್ಥಲ, ಮತ್ತು ಕಡೆಗೆ ಲಯಸ್ಥಲ, ಹೀಗೆ ಆಯಾಸ್ಥಲಗಳಲ್ಲಿ ವ್ಯವಹರಿಸುತ್ತ ಕಡೆಗೆ ಲಯಸ್ಥಲವನ್ನು ಹೊಂದುವದು. ಹೀಗೆ ಶಿವಲಿಂಗದ ಷಡ್ವಿಧಗಳಿವೆ.

(೭೩) ಷಡ್ವಿಧ ಜಂಗಮಲಿಂಗಃ— ಇವು ಸ್ವಯ, ಚರ ಪರ, ಪರಿ ಣಾಮಿ, ನಿರುಪಾಧಿಕ, ಪರಿಪೂರ್ಣ, ಎಂದಿರುತ್ತವೆ. ಜಂಗಮಲಿಂಗವು, ಇಲ್ಲಿ ಪ್ರಾಣಲಿಂಗಿಸ್ಥಲಕ್ಕೆ ಸಂಬಂಧಿಸಿದುದು. ಇದು ಆಚಾರಲಿಂಗದಲ್ಲಿ ಯೂ ಜನಸ್ವರೂಪುಳ್ಳದು. ಆದರೆ ಮುಂದೆ ಅದು ಪ್ರಗತಿಯನ್ನು ಹೊಂ ದುತ್ತ ಬೋಧಾ ದೀಕ್ಷೆಯಲ್ಲಿ ಬೋಧೆಯನ್ನು ಹೊಂದಿ ಆಮೇಲೆ ಪಂಚಾ ಕ್ಷರೀ ಮಂತ್ರರೂಪವಾಗಿ ಮುಂದೆ ಇಲ್ಲಿ ಅರಿವಿನ ಆಚರಣೆಯುಳ್ಳ ದ್ದಾಗಿರುತ್ತದೆ. ಆದರೆ ಈ ಆಚರಣೆಗೆ ವಿಂಗಡಿಸಿದ ಕ್ರಿಯೆ ಎಂಬ ಹೆಸರು. ಅದರ ಹಿಂದಿನ ಕ್ರಿಯೆಗಳಿಗೆ ಮಾರ್ಗಕ್ರಿಯೆಗಳೆಂಬ ಹೆಸರು.

ಈ ಅರಿವಿನ ಆಚರಣೆಗಳ ಮೂಲಕ ಅನುಕ್ರಮವಾಗಿ ಸ್ವಯ ಜಂಗಮ, ಚರಜಂಗಮ, ಪರಜಂಗಮ, ಪರಿಣಾಮಿ ಜಂಗಮ, ನಿರು ಪಾಧಿಜಂಗಮ, ಪರಿಪೂರ್ಣಜಂಗಮ, ಎಂದು ಹೇಳಲ್ಪಡುವನು. ಇಲ್ಲಿ ಜಂಗಮಲಿಂಗವು ಅನೇಕ ಬಗೆಯ ಬೋಧಾರೂಪುಳ್ಳುದಾಗಿ ವ್ಯವಹರಿ ಸುತ್ತದೆ.

ಸ್ವಯಜಂಗಮನು ಶಿವಾನುಭವವನ್ನು ಬೋಧಿಸುತ್ತ ಸ್ವಸ್ಥಾನದಲ್ಲಿ ರುವನು. ಅನ್ಯಾಧೀನನಾಗಿರುವದಿಲ್ಲ. ಶಿವಧ್ಯಾನಪರಾಯಣನಾಗಿರುತ್ತಾನೆ. ಇದು ಜಂಗಮಲಿಂಗದೊಳಗಿನ ಆಚಾರಲಿಂಗವು.

ಚರಜಂಗಮನು ಪಂಚಮುದ್ರಾಸಮೇತನಾಗಿ ತನಗೆ ದೊರಕಿದ್ದನ್ನು ಜಂಗಮಕ್ಕೆ ನೀಡಿ ಅವನು ಹೇಳಿದ ಜ್ಞಾನಾನುಭವ ಪ್ರಸಾದವನ್ನು ತೆಗೆದು ಕೊಂಡು ಅನುಭವಿಸುತ್ತಾನೆ. ಹೀಗೆ ಅನುಭವಿಸುತ್ತ ಪಾವನ ಮೂರ್ತಿ ಯಾಗಿ ಧರ್ಮೋದ್ಧಾರ ಮಾಡುತ್ತ ಚರಿಸುತ್ತಾನೆ. ಇದು ಜಂಗಮ ಲಿಂಗದೊಳಗಣ ಗುರುಲಿಂಗವು.

ಪರಜಂಗಮನು ಭಕ್ತಿ ಜ್ಞಾನ ವೈರಾಗ್ಯವಿಡಿದು ಆಚರಿಸುವನು. ಪರಾಪರವಾದ ಮೋಕ್ಷ ಸ್ವರೂಪನಾಗಿರುತ್ತಾನೆ. ಸ್ಥಾವರ ಜಂಗಮ ಕ್ಕೆಲ್ಲ ಅಧಿಷ್ಠಾನಕರ್ತನಾಗಿ ಆಚರಿಸುತ್ತಾನೆ. ಇದು ಜಂಗಮಲಿಂಗ ದೊಳಗಣ ಶಿವಲಿಂಗವು.

ಪರಿಣಾಮಿ ಜಂಗಮದಲ್ಲಿ ಸುಖದುಃಖಗಳು ಎರಡೂ ಇರುವದಿಲ್ಲ. ಮತ್ತು ಮಹಾಜ್ಞಾನವೇ ಪರಿಣಾಮವಾಗಿ ಅದರ ಆನಂದದಲ್ಲಿರುತ್ತಾನೆ. ಇದು ಜಂಗಮಲಿಂಗದೊಳಗಣ ಪ್ರಸಾದಲಿಂಗವು.

ನಿರುಪಾಧಿಕ ಜಂಗಮನು ಯಾವನನ್ನು ಯಾಚಿಸನು. ದೊರೆತಷ್ಟ ರಲ್ಲಿಯೇ ಸಂತುಷ್ಟನಾಗಿ ಯಾವ ತರದ ಉಪಾಧಿಗಳು ಇಲ್ಲದೆ ವ್ಯವಹರಿ ಸುತ್ತಾನೆ. ಇದು ಜಂಗಮಲಿಂಗದೊಳಗಣ ಪ್ರಸಾದಲಿಂಗವು.

ಪರಿಪೂರ್ಣ ಜಂಗಮನು ಸರ್ವಾಚಾರ ಸಂಪತ್ತಿನ ಆಚರಣೆಯಲ್ಲಿ ವ್ಯಾಪಿಸಿದ ಅರಿವುಳ್ಳಾತನಾಗಿರುತ್ತಾನೆ. ಇದು ಜಂಗಮಲಿಂಗದೊಳ ಗಣ ಮಹಾಲಿಂಗವು.

ಹೀಗೆ ಜಂಗಮಲಿಂಗವು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ಅಲ್ಲ ಲ್ಲಿಯ ಅನುಭವಗಳನ್ನು ಹೊಂದುತ್ತ ಪರಿಪೂರ್ಣ ಸ್ಥಿತಿಯನ್ನು ಹೊಂ ದುತ್ತಾನೆ.

(೭೪) ಷಡ್ವಿಧಪ್ರಸಾದಲಿಂಗಃ— ಇವು ಇಂದ್ರಿಯಾನಂದ, ಪ್ರಾಣಾ ನಂದ, ಜ್ಞಾನಾನಂದ, ಭಾವಾನಂದ, ತೂರ್ಯಾನಂದ, ಮಹದಾನಂದ. ಎಂದಿರುತ್ತವೆ. ಇವು ಶರಣಸ್ಥಲದಲ್ಲಿ ಪ್ರಕಟವಾದ ಉಚ್ಚಪರಿಸ್ಥಿತಿಯ ಸ್ವರೂ ಪಗಳು ಇರುತ್ತವೆ. ಇಲ್ಲಿ ಸುಜ್ಞಾನ ಭಕ್ತಿಯು ಇದ್ದು ಇದು ಇಲ್ಲಿ ಆನಂದದ ಸ್ವರೂಪದಲ್ಲಿರುತ್ತದೆ. ಈ ಆನಂದವು ಭಕ್ತನ ಮನ, ಕರಣ, ಇಂದ್ರಿಯ, ಜ್ಞಾನ ಮೊದಲಾದವುಗಳಲ್ಲೆಲ್ಲ ತೋರುತ್ತದೆ.

ಆಚಾರಲಿಂಗದಲ್ಲಿ ಪ್ರಸಾದಲಿಂಗವು ಪರಮಾತ್ಮನ ಸ್ತುತಿರೂಪ ವಾಗಿಯೂ, ಗುರುಲಿಂಗದಲ್ಲಿ ಅದು ಪರಮಾತ್ಮನು ನೀನೇ ಎಂಬ ಅನು ಗ್ರಹ ಉಂಟಾಗುವದರಿಂದ ಅದು ಪ್ರಸನ್ನದೀಕ್ಷೆಯಾಗಿಯೂ, ಶಿವಲಿಂಗ ದಲ್ಲಿ ಅದು ಸಾಮರಸ್ಯಾಚಾರವುಳ್ಳುದಾಗಿಯೂ, ಜಂಗಮಲಿಂಗದಲ್ಲಿ ಅದು ಸದಾ ಸಮಾಧಾನವೃತ್ತಿಯುಳ್ಳುದಾಗಿಯೂ, ಪ್ರಕಟವಾಗಿ ಪ್ರಸಾದ ಲಿಂಗಸ್ಥಲದಲ್ಲಿ ಅದು ಕೇವಲ ಆನಂದ ಸ್ವರೂಪದಲ್ಲಿ ಇರುತ್ತದೆ. ಹೀಗೆ ಇದರ ಪ್ರಗತಿಯು ಇರುತ್ತಿದೆ.

ಇಂದ್ರಿಯಾನಂದದಲ್ಲಿ ಅದು ಮೊದಲು ಪರಿಣಮಿಸುತ್ತದೆ. ಇಲ್ಲಿ ಅವನಿಗೆ ಯಾವ ಉಪಾಧಿಗಳಿಲ್ಲ. ಅವನ ಇಂದ್ರಿಯಗಳಲ್ಲೆಲ್ಲ ಆನಂ ದವು ತುಂಬಿಕೊಂಡಿರುತ್ತದೆ. ಪ್ರಸಾದಲಿಂಗದೊಳಗಿನ ಆಚಾರಲಿಂಗವು ಇದು ಇರುತ್ತದೆ.

ಮುಂದೆ ಅವನ ಪ್ರಾಣದಲ್ಲಿ ಅದಕಿಂತೆಯೇ ಆನಂದವು ತುಂಬಿ ಕೊಂಡಿರುವದರಿಂದ ಅದು ಪ್ರಾಣಾನಂದವು. ಇದು ಇಂದ್ರಿಯಾನಂದಕ್ಕಿಂತ ಹೆಚ್ಚಿಗೆ ಸೂಕ್ಷ್ಮವಾದುದು. ಇದು ಪ್ರಸಾದಲಿಂಗದೊಳಗಣ ಗುರುಲಿಂಗವು.

ಮುಂದೆ ಅವನ ಜ್ಞಾನದಲ್ಲಿಯೂ ಕೂಡ ಆನಂದವು ತುಂಬುವದು. ಆಗ ಶಿವತತ್ವದಲ್ಲಿ ಸ್ಥಿರಗೊಂಡಿರುವ ಆಸ್ತಿಕ್ಯಜ್ಞಾನವು ಅವನಲ್ಲಿ ತುಂಬಿರುತ್ತದೆ. ಇದು ಜ್ಞಾನಾನಂದವು. ಈ ಆನಂದವು ಪ್ರಾಣಾನಂದಕ್ಕಿಂತಲೂ ಸೂಕ್ಷ್ಮವಾದುದು. ಇದು ಪ್ರಸಾದಲಿಂಗದೊಳಗಣ ಶಿವಲಿಂಗವು.

ಮುಂದೆ ಅವನಲ್ಲಿ ಭಾವಾನಂದವುಂಟಾಗುತ್ತದೆ. ಇಲ್ಲಿ ಅವನು ಶಿವಭಾವದಲ್ಲಿ ಏಕಧ್ಯಾನಪೂರ್ವಕವಾಗಿ ಆನಂದಿಸುತ್ತಾನೆ. ಇದು ಪ್ರಸಾದಲಿಂಗದೊಳಗಣ ಜಂಗಮಲಿಂಗವು.

ಮುಂದೆ ಅವನಲ್ಲಿ ಭಾವಾನಂದಕ್ಕಿಂತಲೂ ಅತ್ಯಂತ ಶ್ರೇಷ್ಠತರವಾದ ತೂರ್ಯಾನಂದದಲ್ಲಿ ಆನಂದಿಸುತ್ತಾನೆ. ಇಲ್ಲಿ ಶರಣ ಸತಿ ಲಿಂಗ ಪತಿ ಎಂಬ ಭಾವದೊಳಗೆ ಆಚರಿಸುತ್ತಾನೆ. ಇದು ಪ್ರಸಾದಲಿಂಗದೊಳಗಣ ಪ್ರಸಾದಲಿಂಗವು.

ಇದರ ಮುಂದೆ ಮಹದಾನಂದವಿದೆ. ಇಲ್ಲಿ ಭಿನ್ನ ಕ್ರಿಯಾಚಾರಗಳಿಂದ ಬಿಡುಗಡೆ ಹೊಂದುತ್ತಾನೆ. ಇಲ್ಲಿ ಈ ಆನಂದವು ಪರಿಪೂರ್ಣಾಹ್ಲಾದ ಸ್ವರೂಪವಾಗಿರುತ್ತದೆ. ಇದು ಪ್ರಸಾದಲಿಂಗದೊಳಗಣ ಮಹಾಲಿಂಗವು.

ಹೀಗೆ ಪ್ರಸಾದಲಿಂಗವು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ಅಲ್ಲಲ್ಲಿ ನಾನಾ ಬಗೆಯ ಆನಂದವನ್ನು ಉತ್ಪನ್ನ ಮಾಡುತ್ತಿದೆ.

(೭೫) ಷಡ್ವಿಧ ಮಹಾಲಿಂಗಃ— ಇವು ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಭಾವಗವ್ಯ, ಸರ್ವತತ್ವಾಶ್ರಯ, ಮತ್ತು ಪರಿಪೂರ್ಣಪ್ರಕಾಶ ಎಂದು ಇರುತ್ತವೆ. ಇಲ್ಲಿ ಸಾಮರಸ್ಯ ಸ್ಥಿತಿಯು ಇರುತ್ತದೆ. ಆಕಾಶವೆಂದರೆ ಮನುಷ್ಯನಿಗೆ ಸಂಬಂಧಿಸಿದ ಶಕ್ತಿ, ಪ್ರಾಣ, ಅರಿವು ಮೊದಲಾದವೆಲ್ಲವೂ ಅತ್ಯಂತ ಪರಿಪಕ್ವತೆಯನ್ನು ಹೊಂದಿ ಲಿಂಗಕಳೆಯಿಂದ ತುಂಬಿಕೊಂಡು ಅತ್ಯಂತ ಸೂಕ್ಷ್ಮಸ್ಥಿತಿಯುಳ್ಳದಾಗಿ

ಮೂಲ ಚಿತ್ತಿನಲ್ಲಿ ವ್ಯವಹರಿಸುವ ಸ್ಥಿತಿಯು ಈ ಪ್ರಕಾರವಿದ್ದು ಅವುಗಳಿಗೆ ಆಗ ಬರುವ ಸ್ವರೂಪಿಗೆ ಆರಂಭದಲ್ಲಿ ಪಿಂಡಾಕಾಶವೆಂತಲೂ, ಆಮೇಲೆ ಬಿಂದ್ವಾಕಾಶವೆಂತಲೂ, ಮುಂದೆ ಅವುಗಳಿಗೆ ಮಹದಾಕಾಶವೆಂತಲೂ ಹೇಳಲ್ಪಡುತ್ತಿದೆ. ಆಮೇಲೆ ಭಾವಗವ್ಯ, ಆಮೇಲೆ ಸರ್ವತತ್ವಾಶ್ರಯ, ಮತ್ತು ಕಡೆಗೆ ಪರಿಪೂರ್ಣಪ್ರಕಾಶವೆಂದು ಅನುಕ್ರಮವಾಗಿ ಹೇಳಲ್ಪಡುತ್ತವೆ. ಈ ಸ್ಥಿತಿಗಳು ಅತ್ಯಂತ ಪರಿಪೂರ್ಣವಾದವುಗಳು.

ಪಿಂಡಾಕಾಶಃ— ಇದು ಅತ್ಯಂತ ಸೂಕ್ಷ್ಮಸ್ಥಿತಿಗೆ ಹೋದ ಶ್ರದ್ಧಾ ಭಕ್ತಿಗೆ ಅವಕಾಶಸ್ಥಾನವಾಗಿರುತ್ತದೆ. ಇದು ಪಿಂಡಾಕಾಶವೆಂದು ಹೇಳಲ್ಪಡುತ್ತಿದೆ. ಇದು ಮಹಾಲಿಂಗದೊಳಗಣ ಆಚಾರಲಿಂಗವು.

ಬಿಂದ್ವಾಕಾಶಃ— ಇದು ಪಿಂಡಕ್ಕಿಂತಲೂ ಸೂಕ್ಷ್ಮವಾದುದು. ನೈಷ್ಠಿಕಾಭಕ್ತಿಯು ಇಲ್ಲಿ ಅತ್ಯಂತ ಸೂಕ್ಷ್ಮಸ್ಥಿತಿಯನ್ನು ಹೊಂದಲು ಅದರ ವ್ಯವಹಾರಕ್ಕೆ ಅವಕಾಶಸ್ಥಾನವಾದುದು. ಇದು ಬಿಂದ್ವಾಕಾಶವು. ಇದು ಮಹಾಲಿಂಗದೊಳಗಣ ಗುರುಲಿಂಗವು.

ಮಹದಾಕಾಶಃ— ಇದು ಆತ್ಮನು ವ್ಯವಹರಿಸಲು ಸ್ಥಾನವಾದುದು. ಇದು ಹಿಂದಿನವುಗಳಿಗಿಂತಲೂ ಸೂಕ್ಷ್ಮವಾದುದು. ಇದು ಮಹಾಲಿಂಗದೊಳಗಣ ಶಿವಲಿಂಗವು.

ಭಾವಗವ್ಯಃ— ಇದು ಆಕಾಶದ ಸ್ಥಿತಿಗಳಿಗಿಂತಲೂ ಅತ್ಯಂತ ಸೂಕ್ಷ್ಮವಾದುದು. ಈ ಸ್ಥಿತಿಯು ಭಾವದಿಂದ ಪಾತ್ರ ತಿಳಿಯುತಕ್ಕುದು. ಅನುಭಾವಭಕ್ತಿಗೆ ಗೋಚರವಾಗುವಂತಹದು. ಇದು ಮಹಾಲಿಂಗದೊಳಗಣ ಪ್ರಸಾದಲಿಂಗವು.

ಸರ್ವತತ್ವಾಶ್ರಯಃ— ಇದು ಸಮಸ್ತಜ್ಞಾನತತ್ವಗಳಿಗೆ ಆಶ್ರಯವಾಗಿರುತ್ತದೆ. ಇದು ಮಹಾಲಿಂಗದೊಳಗಣ ಜಂಗಮಲಿಂಗವು.

ಪರಿಪೂರ್ಣ ಪ್ರಕಾಶಃ— ಅತ್ಯಂತ ವ್ಯಾಪಕವಾದ ಮಹಾಜ್ಞಾನದಲ್ಲಿ ಪ್ರಕಾಶಸ್ವರೂಪವಾಗಿ ವ್ಯವಹರಿಸಲು ಕಾರಣವಾದುದು. ಇದು ಪರಿಪೂರ್ಣ ಪ್ರಕಾಶವೆಂದೂ ಹೇಳಲ್ಪಡುತ್ತಿದೆ. ಇದು ಮಹಾಲಿಂಗದೊಳಗಣ ಮಹಾಲಿಂಗವು. ಇದು ಕಟ್ಟ ಕಡೆಯ ಸಾಮರಸ್ಯ ಸ್ಥಿತಿಯು.

(೬೬) ಮೂವತ್ತಾರು ಲಿಂಗಸ್ಥಲಗಳು (೩೬ನೇ ವಿಧ):— ಇವುಗಳ ವ್ಯಾಪ್ತಿಗಳು ಹಿಂದೆ ನಂ॥ ೭೦ ರಿಂದ ೭೫ರ ವರೆಗೆ ಹೇಳಲ್ಪಟ್ಟಿವೆ. ಆದರೆ ಇವುಗಳನ್ನು ಅನ್ನುವ ಸೌಕರ್ಯಕ್ಕೋಸ್ಕರ ಆಚಾರಲಿಂಗದೊಳಗಣ ಆಚಾರಲಿಂಗ, ಆಚಾರಲಿಂಗದೊಳಗಣ ಗುರುಲಿಂಗ ಎಂದು ಮೊದಲಾಗಿ ಆಚಾರಲಿಂಗದೊಳಗಣ ಷಡ್ವಿಧವನ್ನು ಹೇಳುವದುಂಟು. ಮುಂದೆ ಗುರುಲಿಂಗದೊಳಗಣ ಗುರುಲಿಂಗ ಆಮೇಲೆ ಗುರುಲಿಂಗದೊಳಗಣ ಆಚಾರಲಿಂಗ ಎಂದು ಮೊದಲಾಗಿ ಗುರುಲಿಂಗದೊಳಗಣ ಷಡ್ವಿಧಗಳು, ಆಮೇಲೆ ಶಿವಲಿಂಗದೊಳಗಣ ಶಿವಲಿಂಗ, ಆಮೇಲೆ ಶಿವಲಿಂಗದೊಳಗಣ ಆಚಾರಲಿಂಗ ಎಂದು ಮೊದಲಾಗಿ ಶಿವಲಿಂಗದೊಳಗಣ ಷಡ್ವಿಧಗಳು, ಹೀಗೆ ಮುಂದಿನ ಲಿಂಗಗಳೊಳಗಣ ಷಡ್ವಿಧಗಳನ್ನು ಹೇಳುತ್ತ ಕಡೆಗೆ ಅರನೆಯದಾದ ಮಹಾಲಿಂಗದೊಳಗಣ ಮಹಾಲಿಂಗ, ಆಮೇಲೆ ಮಹಾಲಿಂಗದೊಳಗಣ ಆಚಾರಲಿಂಗ ಹೀಗೆ ಇದರ ಷಡ್ವಿಧಗಳು, ಹೀಗೆ ಹೇಳುತ್ತ ಕಡೆಗೆ ಐಕ್ಯನೊಳಗಣ ಶರಣ ಈ ಸ್ಥಿತಿಯು ಉಳಯುತ್ತದೆ. ಹಿಂದೆ ವಿವರಿಸಿದ ಮೂವತ್ತಾರು ಲಿಂಗಸ್ಥಲ (೧೬ನೇ ವಿಧ)ಗಳಲ್ಲಿಯ ಅನೇಕ ವಿಶಿಷ್ಟ ಶಬ್ದಗಳನ್ನ ಸ್ಮರಣೆಯಲ್ಲಿಟ್ಟುಕೊಂಡು ಉಪಯೋಗಿಸುವದು ದುಸ್ತರವು. ಆದ್ದರಿಂದ ಈ ೩೬ನೇ ವಿಧದೊಳಗಿನಂತೆ ಹೇಳುವ ವಾಡಿಕೆಯುಂಟು ಆದರೆ ಈ ಎರಡೂ ವಿಧಗಳ ಅರ್ಥದಲ್ಲಿ ಯಾವ ಭೇದವೂ ಇರುವದಿಲ್ಲ.

(೬೭) ಮೂವತ್ತಾರು ಅಂಗಸ್ಥಲಗಳು (೧೬ನೇ ವಿಧ):— ಲಿಂಗಸ್ಥಲಗಳಲ್ಲಿ ಹಿಂದೆ ವಿವರಿಸಿದಂತೆ ೩೬ ವಿಧಗಳಿವೆ. ಆ ಸ್ಥಲಗಳಲ್ಲಿ ಉಂಟಾದ ಅನುಭವಗಳು ಭಕ್ತನ ಅಂಗದಲ್ಲಿ ತೋರುತ್ತವೆ. ಆದ್ದರಿಂದ ಅವುಗಳ ಪರಿಣಾಮಗಳು ಕೂಡ ಭಕ್ತನಲ್ಲಿ ೩೬ ಆಗಿರುತ್ತವೆ. ಇದರಿಂದ ಅಂಗಸ್ಥಲದಲ್ಲಿಯೂ ಲಿಂಗಸ್ಥಲದಂತೆ ೩೬ ವಿಧಗಳಾಗುತ್ತವೆ ೩೬ ಅಂಗಸ್ಥಲದಲ್ಲಿ ೩೬ ಲಿಂಗ ಸಂಬಂಧಮಾಡಿಕೊಳ್ಳತಕ್ಕದ್ದು. ಈ ಸಂಬಂಧವು ಭಕ್ತಿಯ ಮೂಲಕ ಸಿದ್ಧಿಸುತ್ತದೆ. ಅಂಗಕ್ಕೂ ಲಿಂಗಕ್ಕೂ ಸಂಬಂಧವನ್ನುಂಟು ಮಾಡಲು ಭಕ್ತಿಯೇ ಸಾಧನವು. ಈ ಭಕ್ತಿಯಾದರೂ ೩೬ ಅಂಗಸ್ಥಲ ಮತ್ತು ೩೬ ಲಿಂಗಸ್ಥಲಗಳಿಗನುಸಾರವಾಗಿ ೩೬ ವಿಧವಾಗಿರುತ್ತದೆ. ಇವು ಶ್ರದ್ಧಾಭಕ್ತಿಯೊಳಗಣ ಶ್ರದ್ಧಾಭಕ್ತಿ. ಶ್ರದ್ಧಾ ಭಕ್ತಿಯೊಳಗಣ ನಿಷ್ಠಾಭಕ್ತಿ, ಶ್ರದ್ಧಾ ಭಕ್ತಿಯೊಳಗಣ ಅವಧಾನಭಕ್ತಿ ಇತ್ಯಾದಿ ಇರುತ್ತವೆ.

ಉದಾಹರಣಾರ್ಥವಾಗಿ ಆಚಾರಲಿಂಗದೊಳಗಣ ಗುರುಲಿಂಗದ ಆಚರಣೆಯು ಶ್ರದ್ಧಾ ಭಕ್ತಿಯೊಳಗಣ ನಿಷ್ಠಾಭಕ್ತಿಯನ್ನೊಡಗೊಂಡಲ್ಲಿ ಭಕ್ತನೊಳಗಣ ಮಹೇಶ್ವರನಾಗುವನು. ಈ ಪ್ರಕಾರ ೩೬ ಅಂಗಸ್ಥಲದೊಳಗಣ ಆಚರಣೆ ಇರುತ್ತದೆ. ಈ ಪ್ರಕಾರ ೩೬ ವಿಧ ಲಿಂಗದ ಪ್ರಕಾಶವು ೩೬ ವಿಧ ಭಕ್ತಿಗಳೊಡನೆ ಕೂಡಿಕೊಳ್ಳಲು, ಆಗ ಅದು ೩೬ ವಿಧವುಳ್ಳ ಅಂಗವನ್ನು ವೇಧಿಸುತ್ತ, ತನುತ್ರಯ, ಷಡಿಂದ್ರಿಯಗಳು ಮತ್ತು ೩೬ ತತ್ವಗಳು ಇವುಗಳನ್ನು ವ್ಯಾಪಿಸುವದು. ಇದರಿಂದ ಮನುಷ್ಯನ ಸೂಕ್ಷ್ಮ ಶರೀರವು ಬಲಗೊಳ್ಳುತ್ತದೆ.

ಇದರ ತರುವಾಯ ಮನುಷ್ಯನ ಕಾರಣ ಶರೀರವು ಬಲಗೊಳ್ಳಬೇಕು. ಅದು ೩೬ ಸ್ಥಲಗಳಲ್ಲಿ ಆಗಬೇಕು. ಆದರೆ ಈ ೩೬ ಸ್ಥಲಗಳ ಆಚರಣೆಯು ಸ್ವಾನುಭವದಿಂದಲೇ ಉಂಟಾಗಬೇಕು. ಅಂದರೆ ಅದು ಅರಿವಿನಿಂದಲೇ ಆಗಬೇಕು. ಆದ್ದರಿಂದ ಇವುಗಳನ್ನು ಷಟ್‌ಸ್ಥಲ ಶಾಸ್ತ್ರದಲ್ಲಿ ಸವಿಸ್ತಾರವಾಗಿ ವಿವರಿಸುವದಿಲ್ಲ. ಆದರೆ ೩೬ ಸ್ಥಲಗಳು ಕ್ರಿಯೆಯಲ್ಲಿದ್ದುದರಿಂದ ಅವುಗಳನ್ನು ಮಾತ್ರ ಅವರು ವಿವರಿಸುತ್ತಾರೆ.

ಹೀಗೆ ೩೬ ಸ್ಥಲಗಳ ವಿವೇಚನೆಯು ೨ ವಿಧವಾಗಿರುತ್ತದೆ. ಆದರೆ ಈ ವಿಧಗಳ ಅರ್ಥದಲ್ಲಿ ಭಿನ್ನವಿಲ್ಲ. ಅನುಕೂಲತೆಗಾಗಿ ಶಬ್ದಯೋಜನೆಯಲ್ಲಿ ಮಾತ್ರ ಭಿನ್ನತೆಯಾಗಿರುತ್ತದೆ.

(೬೮) ಷಡ್ವಿಧಭಕ್ತಃ— ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗವೆಂದು ಇವು ಇವೆ. ಅಂದರೆ ಯಾವ ಅಂಗವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದ ಲಿಂಗ, ಮಹಾಲಿಂಗ ಇವುಗಳಿಗೆ ಸಂಬಂಧಪಡುತ್ತದೋ ಅದೆ ಎಂದು ಇಲ್ಲಿ ಆ ರೀತಿ ವರ್ಗೀಕರಣ ಮಾಡಿದ್ದಾರೆ. ಇಲ್ಲಿ ಈ ಲಿಂಗಗಳಿಗೋಸ್ಕರ ಶ್ರದ್ಧಾ ಭಕ್ತಿಯು ಸಂಬಂಧಪಡುತ್ತಿದೆ. ಇಲ್ಲಿ ಆಯಾ ಆರು ಲಿಂಗಗಳನ್ನು ಭಕ್ತ ಸ್ಥಲದಲ್ಲಿ ಸಂಬಂಧಪಡಿಸುವದು ಇರುತ್ತದೆ.

(೬೯) ಷಡ್ವಿಧ ಮಹೇಶ್ವರಃ— ಇವು ಆಚಾರನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ, ಪ್ರಸಾದನಿಷ್ಠೆ, ಮತ್ತು ಮಹನಿಷ್ಠೆ ಎಂದು ಇರುತ್ತವೆ. ಇಲ್ಲಿ ಬೇರೆ ಬೇರೆ ಆರು ಲಿಂಗಗಳಿಗೆ ನಿಷ್ಠಾಭಕ್ತಿಯು ಅನುಕ್ರಮವಾಗಿ ಸಂಬಂಧಪಡುತ್ತಿದೆ. ಆದ್ದರಿಂದ ಆಯಾ ಲಿಂಗಗಳಿಗೋಸ್ಕರ ಇರುವ ನಿಷ್ಠಾಭಕ್ತಿಯ ಮೂಲಕವೇ ಈ ಲಿಂಗಸ್ಥಲಗಳು ಪ್ರಕಟವಾಗುತ್ತವೆ.

(೮೦) ಷಡ್ವಿಧಪ್ರಸಾದಿಃ— ಈ ಸ್ಥಲದ ಪ್ರಗತಿಯು ೬ ವಿಧವಾಗಿರುತ್ತದೆ. ಅದು ಅವದೆಂದರೆ, ಆಚಾರಾವಧಾನಿ, ಗೌರವಾವಧಾನಿ, ಲಿಂಗಾವಧಾನಿ, ಜಂಗಮಾವಧಾನಿ, ಪ್ರಸಾದಾವಧಾನಿ, ಮಹದಾವಧಾನಿ ಎಂದಿರುತ್ತವೆ. ಪ್ರಸಾದಿಯ ಮುಖ್ಯ ವೈಶಿಷ್ಟ್ಯವು ಅವಧಾನಭಕ್ತಿಯು. ಅದ್ದರಿಂದ ಈ ಕ್ರಿಯೆಯ ಮೂಲಕವೇ ಪ್ರಸಾದಿಸ್ಥಲದ ತರಗತಿಗಳನ್ನು ಭಕ್ತನು ಹೊಂದತಕ್ಕದ್ದು.

(೮೧) ಷಡ್ವಿಧ ಪ್ರಾಣಲಿಂಗಿಃ— ಸಾಧ್ಯ, ವೇದ್ಯ, ಛೇದ್ಯ, ಯೋಗ್ಯ, ಸನ್ನಿಹಿತ ಮತ್ತು ಮಹಾನುಭಾವಿ ಎಂದು ಇವು ಇರುತ್ತವೆ. ಪ್ರಾಣಲಿಂಗಿಯ ಮುಖ್ಯ ಲಕ್ಷಣವು ಅನುಭಾವ ಭಕ್ತಿಯು. ಅನುಭಾವ ಭಕ್ತಿಯ ಮೂಲಕ ಪ್ರಾಣಲಿಂಗಿಯು ಸೂಕ್ಷ್ಮ ಶರೀರದ ಮೇಲೆ ಪೂರ್ಣ ಪ್ರಭುತ್ವ ವುಳ್ಳವನಾಗುತ್ತಾನೆ. ಇವನು ಸೃಷ್ಟಿಯಲ್ಲಿ ವ್ಯವಹರಿಸುವ ಶಕ್ತಿಗಳನ್ನೂ ಳಕೊಂಡಿರುತ್ತಾನೆ. ಅದ್ದರಿಂದ ಅವನ್ನಿಂದ ಸಿದ್ಧಿಗಳು ಸಹ ಜರಗುವವು. ಪೂರ್ಣ ಸ್ಥಿತಿಯುಳ್ಳ ಪ್ರಾಣಲಿಂಗಿಯು ಮಹಾನುಭಾವಿ ಎಂದು ಇಲ್ಲಿ ಹೇಳಲ್ಪಟ್ಟಿದೆ. ಇದರ ಆರಂಭದ ತರಗತಿಗಳು ಮೇಲೆ ಹೇಳಿದಂತೆ ಸಾಧ್ಯ, ವೇದ್ಯ, ಛೇದ್ಯ, ಯೋಗ್ಯ, ಸನ್ನಿಹಿತ ಎಂದು ಇರುತ್ತವೆ. ಸೃಷ್ಟಿಯ ನಿಯಮಗಳನ್ನು ಸಾಧಿಸಿಕೊಂಡವನು ಸಾಧ್ಯನು. ಅವುಗಳನ್ನು ಕಂಡು ಕೊಂಡವನು ವೇದ್ಯನು. ಅವುಗಳ ಬೇರೆ ಬೇರೆ ರೀತಿಗಳನ್ನು ಅರಿತವನು ಛೇದ್ಯನು. ಅವುಗಳನ್ನು ಅರಿತು ಆಚರಿಸುವವನು ಯೋಗ್ಯನು. ಆಚರಿಸಿ ಅವುಗಳೊಡನೆ ಇರುವವನು ಸನ್ನಿಹಿತನು. ಮತ್ತು ಅವುಗಳೊಡನೆ ತನ್ಮಯನಾಗಿ ವ್ಯವಹರಿಸುವವನು ಮಹಾನುಭಾವಿಯು.

(೮೨) ಷಡ್ವಿಧಶರಣಃ— ಇದರ ತರಗತಿಗಳು ಆಯತ, ಸ್ವಾಯತ, ಸನ್ನಿಹಿತ, ಕಳಾಗ್ರಾಹಕ, ಮನೋಮಗ್ನತೆ, ಘನಸಾಮರಸ್ಯ ಎಂದಿರುತ್ತವೆ. ಶರಣನಲ್ಲಿ ಲಿಂಗವಿಕಾಸತೆಯುಂಟಾಗುತ್ತದೆ. ಈ ವಿಕಾಸತೆಯ ತರಗತಿಗಳು ಇವು ಇರುತ್ತದೆ. ಆಯತ, ಸ್ವಾಯತ, ಸನ್ನಿಹಿತ ಇವು ಶರಣಸ್ಥಲದಲ್ಲಿರುವವನ ಲಿಂಗ ಸಾನ್ನಿಧ್ಯವನ್ನು ಸೂಚಿಸುತ್ತವೆ. ಲಿಂಗಾಯತ, ಲಿಂಗಸ್ವಾಯತ, ಲಿಂಗ ಸನ್ನಿಹಿತ ಎಂಬ ಶಬ್ದಗಳು ಷಟ್‌ಸ್ಥಲ ಶಾಸ್ತ್ರದಲ್ಲಿವೆ. ಲಿಂಗಾಯತ ಎಂದರೆ ಲಿಂಗದ ಮರ್ಮವನ್ನು ಸ್ಥೂಲಕ್ರಿಯೆಗಳಲ್ಲಿ ಅರಿತವನು ಎಂಬರ್ಥವು ಇಲ್ಲಿ ಇರುತ್ತದೆ. ಆದರೆ

ಹರಳಯ್ಯನ ಚರಿತ್ರೆಯು.

ತ್ರಿಪದಿ.

ಕತ್ತಿಯ ಕರದಲಿ ಪಿಡಿದೆತ್ತಿದ ಸಿರದ ಮಾಲೆ।
ಹೊತ್ತ ಶೂಲದ ಮೇಲೆ ಪೆಣನು ಶಿವ ನಿಮ್ಮ।
ಉತ್ತಮ ಮತಿಯ ಕುಡು ಎನಗೆ ॥೧॥

ಗಿರಿರಾಜನ ಮಗಳೆ-ಗರುವೆ ನೀ ಬಾರೆಂದು।
ಕರೆದು ನಿಮ್ಮಡಿಗೆರಗುವೆನು ಪಾರ್ವತಿ।
ಪರವ ಕೊಟ್ಟೆನಗೆ ಕರುಣಿಸು ॥೨॥

ಭಪ್ಪನ್ನ ದೇಶಕ್ಕೆ-ಹೆಪ್ಪ ಕೊಟ್ಟನು ಸ್ವಾಮಿ।
ಅಪ್ಪ ನಿಮ್ಮಡಿಗೆರಗುವೆನು ಬಸವಣ್ಣ।
ತಪ್ಪದೆ ಮತಿಯ ಕೊಡು ಎನಗೆ ॥೩॥

ಭಕ್ತರ ಮಾತೆಯೆ-ಅರ್ಥಿಯಲಿ ಬಲಗೊಂಬೆ।
ಸತ್ಯ ಬಸವಣ್ಣನರಸಿಯೆ ನೀಲಮ್ಮ।
ಉತ್ತಮ ಮತಿಯ ಕೊಡು ಎನಗೆ ॥೪॥

ಸಕ್ಕರೆಯ ಹಾಲನ್ನು-ಇಕ್ಕಿ ಎನ್ನ ಸಲಹುವ।
ಚಿಕ್ಕ ದಣ್ಣಾಯಕರ ಬಲಗೊಂಬೆ ಮುಂದಿನ್ನು।
ಒಕ್ಕಿದ ಪದಗಳ ನಡಿಸಯ್ಯ ॥೫॥

ಪಾತಕತನದಿಂದ-ಕೀಟಕ ದೈವವ ಹಾಡಿ।
ಕೋಟಲೆಗೊಂಡು ನುಡಿವರ ಮುಂದಿನ್ನು।
ಪಾಟಗೆಟ್ಟವರ ಕಥೆಯಲ್ಲ ॥೬॥

ವರವಿಲ್ಲದ ದೈವವ-ಸರವೆತ್ತಿ ಕೊಂಡಾಡಿ।
ಗುರುಮಂತ್ರ ಮೀರಿ ನರಕದಲಿ ಹೊರಳುವ।
ಪರಿಯಲ್ಲ ಪುಣ್ಯ ಕಥೆಗೇಳಿ ॥೭॥

ರಾಜಶೇಖರ ಬಸವ-ರಾಜನೋಲಗದಿಂದ ।
ರಾಜಬೀದಿಯಲಿ ಬರುತಿರಲು ಹರಳಯ್ಯ ಕಂಡು ।
ಓಜೆಯಲಿ ಕರವ ಮುಗಿದನು ॥೧೬॥

ಪೊವ್ವಾಡ ಪುರುಷನೆ ಪ-ರವಾದಿ ದಲ್ಲಣನೆ ।
ಪಾವನ ಮೂರ್ತಿ ಪರುಷವೆ ಬಸವಣ್ಣ ।
ದೇವ ನಿಮ್ಮಡಿಗೆ ಶರಣಾರ್ಥಿ ॥೧೫॥

ಶರಣೆಂದು ಹರಳಯ್ಯಗೆ–ಮರಳಿ ಬಸವೇಶ್ವರನು ।
ಶರಣು ಶರಣಾರ್ಥಿ ಎನುತಲಿ ತಾ ತನ್ನ ।
ಅರಮನೆಗಾಗಿ ನಡೆದನು ॥೧೪॥

ಶರಣ ಹರಳಯ್ಯಗಳು-ಶರಣು ವಂದನೆ ಹೊತ್ತು ।
ಭರದಿಂದ ಬಂದು ಮಠಕಾಗಿ ತಾ ತನ್ನ ।
ಅರಸಿಯ ಕೂಡೆ ನುಡಿದನು ॥೧೩॥

ಶರಣಿಗೆ ಶರಣ ಉ-ತ್ತರವಾಗಿ ಮುತ್ತೊಂದು ।
ಶರಣಿನ್ನಾವ ಪಂಯೆಂದಾ ತಾ ತನ್ನ ।
ಅರಸಿಯ ಕೂಡೆ ನುಡಿದನು ॥೧೨॥

ಇಂದಿನ ದಿನ ಶರಣಿಲಿ-ಬಂದಿರುವ ದೋಷಗಳ ।
ಎಂದಿಗೆ ಕಳೆವೆನೆನುತಲಿ ಕಲ್ಯಾಣಮ್ಮ ।
ಚಂದದಿಂದೊಂದ ನುಡಿದಳು ॥೧೧॥

ನಮ್ಮಲ್ಲಿ ಪಳಯು-ಪಟಾವಳಿ ಮೊದಲಿಲ್ಲ ।
ನಿರ್ಮಳ ಜ್ಞಾನಿ ಬಸವಣ್ಣನ ಪಾದಕ್ಕೆ ।
ಚಮ್ಮಾವುಗೆ ಅನುವ ಮಾಡುವ ॥೧೦॥

ಸತಿಯ ಮಾತನು ಕೇಳಿ-ಅತಿ ಬೇಗ ಹರಳಯ್ಯ ।
ಸುತನ ಕರವಿಡಿದು ನಡೆಸಿದ ಕಾಯಕವ ।
ಅತಿಬೇಗದಿಂದಲನುಮಾಡಿ ॥೯॥

ಅಂಗ ಹಿಂಗಿಸಿಕೊಂಬ-ಅಂಗವಿನ್ನಾವುದು ।
ಲಿಂಗಬಸವಗೆ ಚರಣವನೊಯ್ದರೆ ।
ಹಿಂಗುವುದೆನ್ನ ಭವಮಾಲೆ ॥೮॥

ಎಲ್ಲಾ ಪುರಾತನರ-ಮೆಲ್ಲಡಿಗಳ ನಾನು ।
ಸಲ್ಲೀಲೆಯಿಂದ ನೆನೆವೆನು ಮುಂದಿನ್ನು ।
ಬಲ್ಲಂತೆ ಪದವ ನಡಿಸುವೆ ॥೮॥

ಕಡೆಗಣ್ಣ ಖರ್ಜರ-ನಿಡುಗಣ್ಣ ಸಕ್ಕರಿ ।
ಒಡೆದು ಪೆದ್ದಂತೆ ರಸದಾಳಿ ಮುಂದಿನ್ನು ।
ತೊಡಗುವೆ ಹರಳಯ್ಯನ ಕಥೆಯ ॥೭॥

ಕಳುಹಿಸಿಕೊಂಡರು-ತ್ರಿಣಯನ ಕೆಯ್ಯಿಂದೆ ।
ಇಳೆಗೆ ಬಸವಣ್ಣನೊಡಗೂಡಿ ಶರಣರು ।
ಇಳೆದು ಬಂದರು ತಮ್ಮ ಮಠಕೆ ॥೧೦॥

ಒಬ್ಬರೊಬ್ಬರ ಕಂಡು-ಗಭ್ಯೈಸಿತು ಭಕ್ತಿ ।
ಹಬ್ಬಿತು ಕಲ್ಯಾಣಪುರದಲಿ ಮುಂದಿನ್ನು ।
ಕೊಬ್ಬಿದ ಬಿಜ್ಜಳನನಿಂವುದಕೆ ॥೧೧॥

ಎಲ್ಲರಿಗೆ ಕಾಯಕ-ವ್ರಳ ಕಟ್ಟಿನ ನೇಮ ।
ಹಳಯ್ಯಗಳಿಗೆ ವ್ರತ ಒಂದು ಶರಣರ ।
ಮೆಲ್ಲಡಿಗಳಿಗೆ ಚರಣವ ॥೨॥

ಚರಣವಗೈವುತ-ಶರಣಾಳಿಗೀವುತ ।
ಕರುಣದಿಂದವರು ಕುಡುವದನು ಕೈಕೊಂಡು ।
ಹರನ ಜಂಗಮಕೆ ಉಣಿಸುವ ॥೩॥

ಕೃತ್ಯದಿ ಹರಳಯ್ಯ ನಿರುತಿಹ ಸಮಯದಿ ।
ಅಸ್ತಮಯವಾಗೆ ಶಯನದಿ ಸ್ವಪ್ನದಿ ।
ಭಕ್ತ ಬಸವಣ್ಣಗೆ ಶರಣೆಂಬ ॥೧೪॥

ಕಂಡನು ಕನಸನು-ಕೆಂಡಗಣ್ಣಿನ ಭಕ್ತ ।
ದಂಡನಾಯಕಗೆ ಶರಣೆಂಬ ವ್ರತವ ಕೈ ।
ಕೊಂಡನು ತನ್ನ ಮನದಲಿ ॥೧೫॥

ಕೆಲ ದಿನವು ಇಂತು-ಕೆಲಬರರಿಯದಿರೆ ।
ಒಲವಿಂದ ಹರಳಯ್ಯನಿರಲು ಸಮಯದಿ ।
ಗೆಲವಿಂದ ಬಂದ ಬಸವಣ್ಣ ॥೧೬॥

ಮುತ್ತು ಮಾಣಿಕಗಳ-ತೆತ್ತಿಸಿದ ಜಲಾಶಯ।
ಉತ್ತಮ ಕಳುಕವಗೈದನು ಚರ್ಮಾವುಗೆ।
ಮುತ್ತೊಂದೊಮ್ಮನಗಳನಿಟ್ಟು ॥೩೬॥

ಒಪ್ಪವನಿಕ್ಕಿದ-ಎಪ್ಪತ್ತು ಗೊಂಡೆಯ।
ಸರ್ಪನ ಹೆಡೆಗೆಯ್ಯುತಲಿ ಚರ್ಮಾವುಗೆಯ।
ಸಃಪ್ರಾಣಿಯಿಂದ ನಯವಿಟ್ಟ ॥೩೭॥

ವಜ್ರ ಮಾಣಿಕಗಳು-ಗುಜ್ಜುಗೊಂಡೆಗಳಕ್ಕಿ।
ವಜ್ರ ಧಾಪೆಂಬ ನಲಿದನು ತಾ ತನ್ನ।
ಸಜ್ಜನ ಸತಿಯ ಕರಿದನು ॥೩೮॥

ಸತಿ ಶರಣೆ ಬಾ ಎಂದು-ಅತಿ ಹರುಷದಿಂದಲಿ।
ಯತಿರಾಯ ನಮ್ಮ ಬಸವನ ಪಾದಕ್ಕೆ।
ಸ್ತುತಿಸಿದೆ ಜೋಡು ಚರಣವ ॥೩೯॥

ಸತಿ ಪುರುಷರಿಬ್ಬರು-ಅತಿ ಹರುಷದಿಂದಲಿ।
ಮಥನ ನಮಗುಂಟು ಇದರಿಂದ ಹರಳಯ್ಯನ।
ಸತಿಯರುಹಿದಳು ಕಥನವ ॥೪೦॥

ವೀರಶೈವಾಗಮದ-ದಾರಿಗಳು ಕೆಟ್ಟಾವು।
ಕಾರುಣ್ಯನಿಧಿಯೆ ಅರಿದಿರು ನಿಮಗೊಂದು।
ನಾರಿಯ ಕಥನ ಕೇಳುವುದು ॥೪೧॥

ಹೇಳನ್ನಕಲ್ಯಾಣ-ಕಾಳಗ ಹಿಂದಕ್ಕು।
ಕೇಳು ಹರಳಯ್ಯ ನುಡಿವಂದ ಇವು ಮುಂದೆ।
ಸುಳ್ಳು ಮಾತಲ್ಲೆಂದರಿದಿರು ॥೪೨॥

ಕೆಡುವುದು ಕಲ್ಯಾಣ-ಪೊಡವೀಶನಳವನು।
ಬಿಡುವರು ಗಣಕುಲ ನೆಲೆಯನು ಬಸವಣ್ಣ।
ಮೃಡನ ಜಿಹ್ವೆಯಲಡಗುವನು ॥೪೩॥

ಬಂದುದು ಜಯಸುವೆ-ಸೆಂದನು ಹರಳಯ್ಯ।
ಮುಂದೆ ಬಸವಣ್ಣನಿವನೊಯ್ವೆ ಚರಣವ।
ಮುಂದಿಟ್ಟು ನಾನು ನಮಿಸುವೆ ॥೪೪॥

ರುದ್ರಾವತಾರದ-ಚಿದ್ರೂಪ ಶರಣನು।
ಸದ್ಭಕ್ತ ಸೀಮೆ ಪರಂಜ್ಯೋತಿ ಹರಳಯ್ಯ।
ರುದ್ರಾಕ್ಷಿ ಸ್ಥಾನದಿ ಧರಿಸಿ ॥೪೫॥

ಭಸಿತವನಿಟ್ಟನು-ನೊಸಲೊಳು ಹರಳಯ್ಯ।
ಶಶಿಧರಶರಣ ನಡೆಗೊಂಡ ಬೇಗದಿ।
ಬಸವಣ್ಣನಿರುವ ಮಠಕಾಗಿ ॥೪೬॥

ನಿಂದನು ಹರಳಯ್ಯ-ಮುಂದೆ ತಲೆವಾಗಿಲ।
ಲೊಂದು ಯೋಚನೆಯ ನೆನೆದನು ನಾವಿಲ್ಲಿಗೆ।
ಬಂದುದನರಿಪ ಪರಿ ಹೇಗೆ ॥೪೭॥

ಏಕ ವ್ರತದಿಂದ-ಲೋಕವನಾಳುವ।
ಸಾಕ್ಷಾತ್ ಮಂತ್ರಿ ಬಸವಣ್ಣನ ಕಾಂಬುದಕೆ।
ನೂಕುಸಂದಣಿ ವಶವಲ್ಲ ॥೪೮॥

ಲಕ್ಷದ ಮೇಲೆತೊಂ-ಭತ್ತಾರುಸಾವಿರ।
ಮುಕ್ಕಣ್ಣನವರೆನಿಸುವ ಬಸವಗೆ।
ಲೆಕ್ಕವೆ ನಾವು ಇವರಿಗೆ ॥೪೯॥

ಎಮ್ಮಯ್ಯ ಸಿರಿವಂತ-ಬ್ರಹ್ಮಾಂಡ ನಾಯಕ।
ಉಮಾಪತಿ ಶಿವನೆ ಹಿತಕಾರಿ ಕಾಂಬುದಕೆ।
ನಮ್ಮ ಪಾಡೇನು ಅವರಿಗೆ ॥೫೦॥

ಉರದ ಲಿಂಗವ ಬಿಟ್ಟು-ಕಂದೊಳಗಿಂಬಿಟ್ಟು।
ಪುರಹರನೆ ಕೇಳು ನುಡಿಯೊಂದ ನಾವು ಬಂದು।
ದರುಹಬೇಕೆಂದನವರಿಗೆ ॥೫೧॥

ಹಳ್ಳಿಗ ಬಂದಿಹ-ನೆಂದು ಬಸವಣ್ಣಗೆ।
ಮೆಲ್ಲನೆ ಕಿವಿಯೊಳರುಹೆಂದ ಪ್ರಾಣದ।
ವಲ್ಲಭನೊಡನೆ ಉಸುರಿದ ॥೫೨॥

ಚಿತ್ರ ಸಂಗಮನಾಥ-ಚಿತ್ರದಿಂದಲಿ ಹೋಗಿ।
ಚಿತ್ತದೊಳಗೆ ಅರುಹಿದನು ಬಾಗಿಲಿಗೆ।
ಭಕ್ತ ಬಂದಿಹನು ಬಸವಣ್ಣ ॥೫೩॥

ಬಂದುದನರಿದನು-ತಂದೆ ಬಸವಣ್ಣನು ।
ಮುಂದಣ ಹರೆಯ ಹೋಯಿಸಿದ ಬಸವಣ್ಣ ।
ನಂದಿಯ ಧ್ವಜವ ತರಿಸಿದ ॥೪೪॥

ಬಾಗಿಲಿಗೆ ಬಂದಿಹನು-ನಾಗಧರನ ಭಕ್ತ ।
ಸಾಗಿಸುವರಿಲ್ಲ ಒಳಯಿಕೆ ಇಂದಕ್ಕೆ ।
ನಾಗಲೆದೇವಿಗರುಹಿದ ॥೪೫॥

ನಂದಿಯ ಧ್ವಜವನು-ಮುಂದೆ ಗುಡಿ ತೋರಣ ।
ದುಂದುಭಿ ಹರೆ ಮೊಳಗಿಸಿದ ಬಸವಣ್ಣ ।
ಗಂಧದುಪ್ಪರಿಗೆಯಿಂದ ಹೊರಟ ॥೪೬॥

ಕಸ್ತುರಿ ಬಾಗಿಲ- ಮತ್ತೆ ಹೊರಹೊಂಟನು ।
ಸ್ವಸ್ತಿದಿಂದಲಿ ನಡೆಗೊಂಡ ಬಸವಣ್ಣ ।
ಮಸ್ತಕ ಮಡೆದು ನಮಿಸಿದ ॥೪೭॥

ವಜ್ರದ ಬಾಗಿಲಲಿ- ಹೆಜ್ಜೆವೊಂದಡಿ ಇಟ್ಟು ।
ಸಜ್ಜನ ಶರಣ ಬಸವಣ್ಣ ತಾನಾಗ ।
ಗುಜ್ಜಾಗಿ ಸಿರವ ಮಡೆದನು ॥೪೮॥

ಚಿನ್ನದ ಬಾಗಿಲ ಮುಂದೆ-ರನ್ನ ರತ್ನದ ಬೊಂಬೆ ।
ಬಿನ್ನೈಸಿದವು ಜಯತೆಂದು ಬಸವಣ್ಣ ।
ಚನ್ನಯ್ಯನವರ ಮಗ ಬಂದ ॥೪೯॥

ಚಿತ್ರದ ಬಾಗಿಲಲಿ-ಪುತ್ಥಳಿಬೊಂಬೆಗಳು ।
ಅರ್ಘಿಯಿಂದ ಕರಗಳ ಮುಗಿದು ಬಾಗಿಲಿಗೆ ।
ಕಕ್ಕಯ್ಯನವರ ಮಗ ಬಂದ ॥೫೦॥

ಬಂದು ಹೇಳಿದನಹುದು-ತಂದೆ ಸಂಗಮನಾಥ ।
ಬಂದೆನು ನಾನು ಅದರಿಂದ ಹರಳಯ್ಯ ।
ನಿಂದ ಬಾಗಿಲಿಗೆ ಇದಿರಾಗಿ ॥೫೧॥

ಭಕ್ತರ ಭಾಗ್ಯದ-ನಿಧಿಯೆ ಚಿಂತಾಮಣಿ ।
ಭಕ್ತರ ಬಲ ಸ್ವಯಂಜ್ಯೋತಿ ಬಸವಣ್ಣ ।
ಚಿತ್ತೈಸಿ ಪಾದ-ಜರಣಕೆ ॥೫೨॥

ತಕ್ಕೈಸಿಕೊಂಡನು-ಚಿತ್ತೈಸಿಕೊಂಡನು ।
ಚಿತ್ತೈಸಿದಿರಿ ಮುಕ್ತನಾದೆನು ಬಸವಣ್ಣ ।
ಕರ್ತು ಹರುಷದಿ ನುಡಿದನು ॥೫೩॥

ಓಂ ನಮಃ ಶಿವ ಶಿವ-ಏಳು ಬಾಗಿಲ ಹೊರಗೆ ।
ಕೀಳು ಮಾದಿಗರ ಹರಳುಗನು ನಾ ನಿಮ್ಮ ।
ಪಾದಚರಣವ ಹೋಲುವೆನೆ ॥೫೪॥

ಬಂದು ಬಾಲಕರಂತೆ-ಪಿಡಿದು ಬಂದಿಲ್ಲಿಗೆ ।
ಹಿಂದಣ ಪಾಪಕ್ಷಯವಕ್ಕು ಬಸವಣ್ಣ ।
ಮುಂದೆ ಕೊಂಡಾಡಿ ನಲಿದನು ॥೫೫॥

ಹಿಡಿವರೆ ಕರಗಳ-ಮೃಡನರಿವ ಶರಣರು ।
ಕೆಡುಕುಲದವರ ಧರೆಯೊಳು ಎಂದೆನುತ ।
ನುಡಿದ ಹರಳಯ್ಯ ಮುದದಿಂದ ॥೫೬॥

ಕೆಟ್ಟ ಕುಲದವರನು-ಮುಟ್ಟಬಹುದೆ ನೀವು ।
ಸೃಷ್ಟಿಗೀಶ್ವರನ ಶರಣರು ಎಂದೆನುತ ।
ಕಟ್ಟಣೆ ಮಾತನು ನುಡಿದನು ॥೫೭॥

ಪರುಷ ತಿಪ್ಪೆಯೊಳು-ಪರುಷ ಮಣ್ಣಾಗಿರಲು ।
ಅದ ಸಾಣೆಗಾರರು ಬಿಡುವರೆ ಎಂದೆನುತ ।
ಪರಶಿವ ಬಸವ ನುಡಿದನು ॥೫೮॥

ಕಕ್ಕಯ್ಯಗಳಲ್ಲಿ-ಒಕ್ಕ ಪ್ರಸಾದಕೆ ।
ಹೊಕ್ಕು ನಾ ಕಾಯ್ದೆನನುದಿನ ಹರಳಯ್ಯ ।
ಸಿಕ್ಕಿತೆ ಎನಗೆಲೆ ತಂದೆ ॥೫೯॥

ಹೊಲೆ ಎಂಬುದೊಂದು-ಕಲಿಯಲ್ಲಿ ಹುಟ್ಟಿತು ।
ನೆಲೆಯರಿಯದವರು ನುಡಿವರು ನಿಮ್ಮವ್ವನ ।
ಮೊಲೆವಾಲಿನೊಳಗೆ ವಿಷ ಉಂಟೆ ॥೬೦॥

ಅಚ್ಚ ಪ್ರಸಾದಕ್ಕೆ-ನಿಚ್ಚ ನಿಮ್ಮಲ್ಲಿ ಕಾಯ್ದೆ ।
ಹುಚ್ಚನೆ ನಾನು ಎಲೆ ತಂದೆ ಹರಳಯ್ಯ ।
ಸುಚಿತ್ತದೇಹಿ ಕರಣಾರ್ಥಿ ॥೬೧॥

ಭಕ್ತರಣುಗ ನಾನು-ಭೃತ್ಯನು ನಿಮ್ಮಡಿಗೆ ।
ಎತ್ತೊಂದು ನಾನು ಪರುಪ್ರಾಣಿ ಹರಳಯ್ಯ ।
ಸ್ತುತಿಸಬೆಡವೆಲೆ ತಂದೆ ॥೬೨॥

ಕಡಲನು ಜಡೆಯೊಳು-ಮುಡಿದನಡಿಯ ನಿಮ್ಮ ।
ನುಡಿಗೆಯಂಬಲಿಯ ಕವಿನಾಗ ಆರಾದೊಡೆ ।
ಬಿಡಿಸಿದರೆ ತಂದೆ ಧರೆಯೊಳು ॥೬೩॥

ಚರ್ಮದ ಕರ್ಮವ-ತೊಳೆವ ಪರುಷ ನೀನು ।
ವರ್ಮವ ಬಲ್ಲವರಾರು ಹರಳಯ್ಯ ।
ನಿರ್ಮಲವೇಹಿ ಶರಣಾರ್ಥಿ ॥೬೪॥

ಕರೆದ ನೀಲವ್ಮನ-ಭರದಿಂದ ಬಸವಣ್ಣ ।
ಶರಣ ಕುಲಕೆ ತಿಲಕಗೆ ಹರಳೈಯ್ಯಗೆ ।
ಶರಣು ಮಾಡೆಂದು ಅರುಹಿದ ॥೬೫॥

ಎಂದ ಮಾತನು ಕೇಳಿ-ಬಂದಳು ನೀಲವ್ಮ ।
ನಿಂದು ಹಸ್ತಗಳ ಮುಗಿದಳು ಚರಣಕ್ಕೆ ।
ವಂದಿಸಿ ಕೃಪೆಯ ಪಡೆದಳು ॥೬೬॥

ಶರಣು ಚಿನ್ಮಯರೂಪ-ಶರಣು ಭಕ್ತರ ಬಂಧು ।
ಶರಣು ಎವ್ಮಯ್ಯ ಪರುಷವೆ ಹರಳಯ್ಯ ।
ಶರಣು ನಿಮ್ಮಡಿಗೆ ಶರಣಾರ್ಥಿ ॥೬೭॥

ಶರಜೆ ನೀಲವ್ಮನು-ಶರಣ ಹರಳಯ್ಯಗೆ ।
ಶರಣು ಮಾಡಿದಳು ಚರಣಕೆ ನೀಲವ್ಮ ।
ವರ ಶಿಸುವು ನಾನೆಂದು ನಮಿಸಿದಳು ॥೬೮॥

ತೊತ್ತಿನ ಮಕ್ಕಳ-ತೊಡೆಯನೇರಿಸಬಹುದೆ ।
ಪೃಥ್ವಿಯೊಳಾಡುವ ನುಡಿಯುಂಟೆ ಎಲೆ ತಾಯಿ ।
ಭಕ್ತರಾಣೆನ್ನ ಬಿಡು ಬೇಗ ॥೬೯॥

ಹಸ್ತವ ಮುಗಿಯುತ-ವಿಸ್ತರಿಸಿದ ಶರಣರ ।
ಚಿತ್ತಜ ವೈರಿ ಬಸವೇಶ ನುಡಿಗೇಳಿ ।
ಕರ್ತು ಹರಳಯ್ಯ ನುಡಿದನು ॥೭೦॥

R. N. B. 2554

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಮೇ-ಜೂನ ೧೯೪೧. [ಸಂಚಿಕೆ ೮-೯

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ಶಿವಾನುಭವ ಸಂಘಗಳು	ರಾ। ಬಾ। ಫ. ಗು. ಹಳಕಟ್ಟಿ	೨೬೫
೨	ಶಿವದೀಕ್ಷೆ ಅರ್ಥಾತ್ ಲಿಂಗಧಾರಣ	ಶ್ರೀ. ಬ. ಚೆ. ಪಟ್ಟೇದ	೨೮೪
೩	ದೀಕ್ಷಾವಾದ	ಶ್ರೀ. ಮಾ. ಸಂ. ನಂಜಪ್ಪ	೨೯೨
೪	ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಎಂಬ ಬಗೆ	ಶ್ರೀ. ಎನ್. ರಾಚೋಟಯ್ಯ	೩೦೨
೫	ಬಸವೇಶ್ವರನಕ್ಕಿಂತಲೂ ಮೊದಲಿನ ವೀರಶೈವ ಧರ್ಮ	ರಾ। ಬಾ। ಪಿ. ಜಿ. ಹಳಕಟ್ಟಿ	೩೦೭
೬	ಪಾದೋದಕ	ಶ್ರೀ. ಮು. ಕ. ಮೂಮನಿ	೩೦೫
೭	ಸಂಕೀರ್ಣ ವಚನಗಳು ಭಾಗ ೨	...	೩೨
೮	ಶಿವಾನುಭವ ಶಬ್ದಕೋಶ	ರಾ। ಬಾ। ಪಿ. ಜಿ. ಹಳಕಟ್ಟಿ	೩೯
೯	ಹರಳಯ್ಯನ ಚರಿತ್ರೆಯು	—	೯

ಇವನ್ನು ವಿಜಾಪುರದಲ್ಲಿ ರಾ। ಬಾ। ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ ಉಪಲೀಬುರಜ ಓಣಿಯಲ್ಲಿರುವ ತಮ್ಮ

ಶಿವಾನುಭವ.

ವರ್ಷ ೧೫	ಮೇ ೧೯೪೧.	ಸಂಚಿಕೆ ೯

ಶಿವಾನುಭವ ಸಂಘಗಳು.

(ರಾ॥ ಬ॥ ಫ. ಗು. ಹಳಕಟ್ಟಿ ಬಿ. ಏ. ಎಲ್. ಎಲ್. ಬಿ.)

ಶಿವಶರಣರ ವಚನ ವಾಙ್ಮಯದ ಪ್ರಕಟನೆಯ ಕಾರ್ಯವನ್ನು ಶಿವಾನುಭವ ಪತ್ರಿಕೆಯು ಕೈಕೊಂಡು ಇಂದಿಗೆ ೧೫ ವರ್ಷಗಳಾದವು. ಈ ಅವಧಿಯಲ್ಲಿ ಅದರ ಮೂಲಕ ಅನೇಕ ಮಹತ್ವದ ಗ್ರಂಥಗಳು ಪ್ರಕಟವಾಗಿರುತ್ತವೆ. ಅವುಗಳ ಸಂಖ್ಯೆಯು ಈಗ ೫೫—೬೦ ವರೆಗೆ ಬಂದಿರುತ್ತದೆ. ಆದರೆ ಅವುಗಳಲ್ಲಿಯ ತತ್ವಗಳನ್ನು ಆಧುನಿಕ ಭಾಷೆಯಲ್ಲಿ ಸುಲಭಭಾಷೆಯಲ್ಲಿ ಗ್ರಂಥರೂಪದಿಂದಾಗಲಿ ಇಲ್ಲವೆ ಲೇಖರೂಪದಿಂದಾಗಲಿ ಜನತೆಯು ಮುಂದಿಡುವ ಕಾಲವು ಪ್ರಾಪ್ತವಾಗಿರುತ್ತದೆ. ಆದ್ದರಿಂದ ಇನ್ನು ಮುಂದೆ ಈ ಬಗೆಯ ಪ್ರಯತ್ನಗಳಿಗೆ ಪ್ರೋತ್ಸಾಹಕೊಡಬೇಕೆಂದು ನಾವು ಬಯಸಿದ್ದೇವೆ. ಆದ್ದರಿಂದ ಈ ದೃಷ್ಟಿಯಿಂದ ಬರೆದ ಲೇಖಗಳಿಗೆ ನಾವು ಈ ಪತ್ರಿಕೆಯಲ್ಲಿ ಇನ್ನು ಮುಂದೆ ಹೆಚ್ಚಾಗಿ ಸ್ಥಳ ಕೊಡುವೆವು.

ಶಿವಾನುಭವ ಶಾಸ್ತ್ರದ ತತ್ವಗಳನ್ನು ಪ್ರಕಟಪಡಿಸುವ ಕಾರ್ಯವು ಎಷ್ಟು ಮಹತ್ವವಾದದ್ದೋ, ಅಷ್ಟೇ ಅವುಗಳನ್ನು ಪ್ರಸಾರ ಪಡಿಸುವ ಕಾರ್ಯವೂ ಮಹತ್ವದ್ದಿದೆ. ಈ ಕಾರ್ಯದಲ್ಲಿ ಶಿವಾನುಭವ ಕೂಟಗಳು ಬಹಳ ಸಹಾಯಕಾರಿಗಳಾಗಿವೆ. ಇವುಗಳ ಮೂಲಕ ಶಿವಾನುಭವ ಶಾಸ್ತ್ರದ

ಅಭ್ಯಾಸವು ಎಲ್ಲ ಕಡೆಗೂ ನಡೆಯಲು ಅನುಕೂಲವಾಗುವದು. ವೀರ ಶೈವರು ಮುಂದೆ ಮಾಡತಕ್ಕ ಮಹತ್ವದ ಕಾರ್ಯವು ಇದಾಗಿದೆ.

ಇಂಥ ಸಂಘಗಳನ್ನು ಸ್ಥಾಪಿಸಲು ನಾವು ಹೋದ ವರ್ಷ ನವ ಕರ್ನಾಟಕ ಮತ್ತು ಶಿವಾನುಭವ ಪತ್ರಿಕೆಗಳ ಮೂಲಕ ವಿಶೇಷ ಪ್ರಯತ್ನಿಸುತ್ತ ಬಂದೆವು. ಇದರಿಂದ ಅನೇಕ ಶಿವಾನುಭವ ಸಂಘಗಳು ಅನೇಕ ಕಡೆಗೆ ಸ್ಥಾಪಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವುಗಳು ಚನ್ನಾಗಿ ಕಾರ್ಯ ಮಾಡುತ್ತಲಿವೆ. ಉಳಿದವುಗಳು ಅಷ್ಟು ಚನ್ನಾಗಿ ಕಾರ್ಯ ಮಾಡುತ್ತಿರುವದಿಲ್ಲ. ಈ ಸ್ಥಿತಿಯು ಹೀಗೆ ಆರಂಭದಲ್ಲಿರುವದು ಸ್ವಾಭಾವಿಕವಾಗಿದೆ. ಆದರೆ ಶಿವಾನುಭವ ಶಾಸ್ತ್ರದ ಬಗ್ಗೆ ಯಾರಿಗೆ ಪ್ರೀತಿಯು ಇರುತ್ತದೋ ಅವರು ಈ ಕಾರ್ಯವನ್ನು ಬಿಟ್ಟುಬಿಡದೆ ತಮ್ಮ ಗ್ರಾಮದಲ್ಲಿ ಮುಂದುವರಿಸುತ್ತಲೇ ಇರಬೇಕೆಂದು ನಮ್ಮ ಸೂಚನೆ ಇದೆ.

ಶಿವಾನುಭವ ಶಾಸ್ತ್ರದ ಮುಖ್ಯ ಉದ್ದೇಶವು ಆತ್ಮಸುಧಾರಣೆಯಾಗಿದೆ. ಇದರಲ್ಲಿ ಅನೇಕ ವಿಷಯಗಳು ಅಡಕವಾಗಿರುತ್ತವೆ. ಆದರೆ ಅವುಗಳಲ್ಲಿ ಮುಖ್ಯವಾದ ಕೆಲವುಗಳನ್ನು ಮಾತ್ರ ಆರಿಸಿ ಶಿವಾನುಭವ ಸಂಘಗಳೂ ಅವುಗಳ ಸಭಾಸದರೂ ಆಚರಣೆಯಲ್ಲಿ ತರಲು ಯತ್ನಿಸಬೇಕು. ಈ ದೃಷ್ಟಿಯಿಂದ ನಾವು ಕೆಳಗೆ ಕೆಲವು ಸೂಚನೆಗಳನ್ನು ಮಾಡಿದ್ದೇವೆ. ಅವು ನಮ್ಮ 'ಶಿಫಾರಸು'ಗಳೆಂದು ತಿಳಿಯಬೇಕೇ ಹೊರ್ತು ಅವು ಯಾರಿಗೂ ಬಂಧನಕಾರಕವಲ್ಲ. ಪ್ರತಿಯೊಂದು ಶಿವಾನುಭವ ಸಂಘವು ತನ್ನ ಕಾರ್ಯಕ್ರಮವನ್ನು ಏರ್ಪಡಿಸಲು ಅದು ಸ್ವತಂತ್ರವಾಗಿರುತ್ತದೆ.

ಈಚೆಗೆ ಅನೇಕ ಕಡೆಗೆ ಶಿವಾನುಭವ ಸಂಘಗಳನ್ನು ಏರ್ಪಡಿಸುವ ಕಾರ್ಯವನ್ನು ಅನೇಕ ವ್ಯಕ್ತಿಗಳೂ ಸ್ವಾಮಿಗಳೂ ಕೈಕೊಳ್ಳಹತ್ತಿರುತ್ತಾರೆ. ಇದು ಅತ್ಯಾನಂದಕರವಾಗಿರುತ್ತದೆ. ಕೆಲವು ದಿವಸಗಳ ಹಿಂದೆ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾ ಸ್ವಾಮಿಗಳವರ ಸನ್ನಿಧಿಯಲ್ಲಿ ಅನೇಕ ಮಹಾಸ್ವಾಮಿಗಳೂ ಸಭ್ಯಗೃಹಸ್ಥರೂ ಹಿರೇಕೆರೂರ ತಾಲೂಕು ಹಾವಸಭಾವಿಯಲ್ಲಿ ಸೇರಿ ಇಂಥ ಸಂಸ್ಥೆಗಳನ್ನು ಸ್ಥಾಪಿಸಲು ಮುಂದುವರಿದಿರುತ್ತಾರೆ. ಇದೇ ಮೇರೆಗೆ ಎಲ್ಲ ಕಡೆಗೂ ಪ್ರಯತ್ನಗಳಾಗಬೇಕು. ಹೀಗೆ ಕಾರ್ಯಗಳು ನಡೆದದ್ದಾದರೆ ಸಮಾಜದಲ್ಲಿ ಯೋಗ್ಯ ಸಂಘಟನೆಯುಂಟಾಗುವದು ಸುಲಭವಾಗುವದು.

ಶಿವಾನುಭವ ಸಂಘಗಳ ಸಭಾಸದರು ಕೈಕೊಳ್ಳಬಹುದಾದ ಕಾರ್ಯಕ್ರಮದ ಬಗ್ಗೆ ಸೂಚನೆಗಳು.

ಶಿವಾನುಭವ ಸಂಘಗಳ ಸಭಾಸದರು ಕೈಕೊಳ್ಳಬಹುದಾದ ಕಾರ್ಯಕ್ರಮದಲ್ಲಿ ನಾವು ಮೂರು ವಿಭಾಗಗಳನ್ನು ಮಾಡಬಹುದು. ಅವು ಯಾವವೆಂದರೆ:—

(೧) ಆತ್ಮಸುಧಾರಣೆಯ ಕಾರ್ಯಗಳು (೨) ಕುಟುಂಬ ಸುಧಾರಣೆಯ ಕಾರ್ಯಗಳು (೩) ಶಿವಾನುಭವ ಸಂಘಕ್ಕೋಸ್ಕರ ಮಾಡುವ ಕಾರ್ಯಗಳು. ಪ್ರತಿಯೊಬ್ಬನು ಈ ಮೂರೂ ಕರ್ತವ್ಯಗಳನ್ನು ಜರುಗಿಸುವದು ಬಹಳ ಅವಶ್ಯವಿರುತ್ತದೆ.

ಮನುಷ್ಯನು ಆಚರಿಸತಕ್ಕ ಕಾರ್ಯಗಳು ಅಸಂಖ್ಯವಾಗಿರುತ್ತವೆ. ಅದರೆ ಅವುಗಳಲ್ಲಿ ಬಹುಜನಸಮಾಜಕ್ಕೆ ಯಾವವು ಈ ಕಾಲಕ್ಕೆ ಅತ್ಯಂತ ಅವಶ್ಯವೋ ಮತ್ತು ಯಾವವು ವ್ಯವಹಾರ್ಯವೋ ಅವುಗಳನ್ನು ಮುಖ್ಯವಾಗಿ ಆರಿಸಿ, ಅವುಗಳಲ್ಲಿ ಕೆಲವುಗಳನ್ನು ಮಾತ್ರ ಕೈಕೊಂಡು ಕಾರ್ಯಾರಂಭ ಮಾಡುವುದು ಯೋಗ್ಯವಾಗಿದೆ. ಈ ದೃಷ್ಟಿಯಿಂದ ಈ ಕೆಳಗಿನ ಸೂಚನೆಗಳು ಮಾಡಲ್ಪಟ್ಟಿವೆ. ಈ ಸೂಚನೆಗಳು ಕೇವಲ ಮಾರ್ಗದರ್ಶಿಯಾಗಿವೆ ಎಂದು ಮಾತ್ರ ತಿಳಿಯಬೇಕು. ವ್ಯಕ್ತಿಗಳು ಮತ್ತು ಶಿವಾನುಭವ ಸಂಘಗಳು ತಮ್ಮ ತಮ್ಮ ಕಾರ್ಯಕ್ರಮಗಳನ್ನು ಗೊತ್ತುಪಡಿಸಿಕೊಳ್ಳಲಿಕ್ಕೆ ಅವೆಲ್ಲವೂ ಸ್ವತಂತ್ರವಾಗಿವೆ.

(೧)

ಆತ್ಮಸುಧಾರಣೆಯ ಕಾರ್ಯಗಳು.

ವಚನಗ್ರಂಥಗಳ ಅಭ್ಯಾಸಮಾಡುವದು ಮತ್ತು ಷಟ್‌ಸ್ಥಲ ತತ್ವಗಳ ಜ್ಞಾನ ಮಾಡಿಕೊಳ್ಳುವದು.

(೧) ವೀರಶೈವ ಧರ್ಮವು ಸ್ವಾನುಭವಕ್ಕೆ ಮತ್ತು ಆತ್ಮೋನ್ನತಿಗೆ ಬಹಳ ಮಹತ್ವವನ್ನು ಕೊಟ್ಟಿರುತ್ತದೆ. ಅದರ ತತ್ವಗಳು ಷಟ್‌ಸ್ಥಲ

ಶಾಸ್ತ್ರದಲ್ಲಿ ಅಡಕವಾಗಿವೆ. ಅದರಲ್ಲಿ ಕ್ರಿಯೆಗಳ ಸಂಖ್ಯೆಯು ಬಹಳ ಕಡಿಮೆ. ಕಡಿಮೆ ಇದ್ದರೂ ಇದ್ದವುಗಳು ಗರ್ಭಿತಾರ್ಥವುಳ್ಳವೂ, ಭಾವನಾ ಪೂರ್ಣವೂ ಆಗಿರುತ್ತವೆ. ಅವುಗಳ ಮರ್ಮವನ್ನು ವೀರಶೈವ ಸ್ತ್ರೀ ಪುರುಷರೆಲ್ಲರೂ ಅರಿಯುವದು ಅವಶ್ಯವು. ಇದನ್ನು ಅರಿಯಲು ವಾಚನ ಶಾಸ್ತ್ರದಷ್ಟು ಅತ್ಯುತ್ತಮವಾದ ವಾಙ್ಮಯವು ವೀರಶೈವ ಧರ್ಮದಲ್ಲಿ ಬೇರೆ ಯಾವದೂ ಇಲ್ಲೆಂದು ಹೇಳಬಹುದು ಆದ್ದರಿಂದ ಶಿವಾನುಭವ ಸಂಘಗಳ ಪ್ರತಿಯೊಬ್ಬ ಸಭಾಸದನು ವಚನ ಗ್ರಂಥಗಳನ್ನು ಆಗಿಂದಾಗೆ ಓದುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಮತ್ತು ಅವುಗಳ ಮೂಲಕ ಷಟ್‌ಸ್ಥಲ ಶಾಸ್ತ್ರದ ಮರ್ಮವನ್ನು ಅರಿಯಬೇಕು. ಇದು ತನ್ನ ಪ್ರಥಮ ಕರ್ತವ್ಯವೆಂದು ಅವನು ಭಾವಿಸಬೇಕು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ.

ನಾನು ದಿನಾಲು ಅಥವಾ ವಾರದಲ್ಲಿ ಕೆಲವೊಂದು ವೇಳೆಯನ್ನು ಗೊತ್ತುಪಡಿಸಿ ಶಿವಶರಣರ ವಚನಗಳನ್ನು ತಪ್ಪದೆ ಓದುವೆನು. ಮತ್ತು ಷಟ್‌ಸ್ಥಲಶಾಸ್ತ್ರದ ಮರ್ಮಗಳನ್ನು ತಿಳಿಯಲು ಪ್ರಯತ್ನಿಸುವೆನು.

ಪರಮಾತ್ಮನೊಬ್ಬನೇ ಇದ್ದಾನೆಂದು ನಂಬುವುದು.

(೨) ವೀರಶೈವ ಧರ್ಮದಲ್ಲಿ ಪರಮಾತ್ಮನು ಒಬ್ಬನೇ ಇದ್ದಾನೆ ಮತ್ತು ಅನೇಕ ದೇವತೆಗಳನ್ನು ವೀರಶೈವರು ಪೂಜಿಸಬಾರದು, ಎಂಬ ತತ್ವವು ಮುಖ್ಯವಾದುದು. ಅಲ್ಲದೆ ಪರಮಾತ್ಮನು ತನ್ನಲ್ಲಿಯೇ ಇದ್ದಾನೆಂತಲೂ ಅವನನ್ನು ತನ್ನಲ್ಲಿಯೇ ಕಾಣಬೇಕೆಂತಲೂ ವಚನಶಾಸ್ತ್ರವು ಹೇಳುತ್ತಿದೆ. ಮತ್ತು ಅವನನ್ನು ಹೀಗೆ ಕಾಣುವ ರೀತಿಯನ್ನು ಅದು ಸವಿಸ್ತಾರವಾಗಿ ಬೋಧಿಸುತ್ತದೆ. ಇದಕ್ಕೆ ಷಟ್‌ಸ್ಥಲ ಶಾಸ್ತ್ರವೆಂಬ ಹೆಸರು. ಈ ಶಾಸ್ತ್ರದಂತೆ ವೀರಶೈವರು ಶಕ್ಯವಿದ್ದಷ್ಟರಮಟ್ಟಿಗೆ ನಡೆಯುವದು ಅವರ ಕರ್ತವ್ಯವಾಗಿದೆ. ಆದರೆ ಅನೇಕ ದೇವತೆಗಳನ್ನು ನಂಬಿದರೆ ಈ ಮಾರ್ಗದಂತೆ ನಡಿಯಲು ಶಕ್ಯವಲ್ಲ. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ—

ಪರಮಾತ್ಮನು ಒಬ್ಬನೇ ಇದ್ದಾನೆಂದು ನಾನು ನಂಬುವೆನು ಮತ್ತು ಅನೇಕ ದೇವತೆಗಳನ್ನು ನಾನು ನಂಬುವದಿಲ್ಲ.

ಲಿಂಗಪೂಜೆಯ ಮೂಲಕ ಲಿಂಗಾನುಸಂಧಾನದಲ್ಲಿರುವದು.

(೩) ಎಲ್ಲ ಧರ್ಮಗಳಲ್ಲಿ ಆಚರಣೆಗೋಸ್ಕರ ಕೆಲವು ಧಾರ್ಮಿಕ ಕ್ರಿಯೆಗಳಿರುತ್ತವೆ. ವೀರಶೈವರಲ್ಲಿ ಲಿಂಗಧಾರಣೆಯು ಮಹತ್ವದ್ದಿದ್ದು ಅವರು ಯಾವಾಗಲೂ ಲಿಂಗಧಾರಕರಾಗಿ ಅದರ ಪೂಜೆಯನ್ನು ಮಾಡತಕ್ಕದ್ದು. ಇದು ಅವರ ಮುಖ್ಯ ಧಾರ್ಮಿಕ ಕ್ರಿಯೆಯಾಗಿದೆ. ಆದರೆ ವೀರಶೈವರ ಈ ಕ್ರಿಯೆಯಲ್ಲಿ ಬರೇ ಬಾಹ್ಯ ಉಪಚಾರಗಳು ಮುಖ್ಯವಾದವುಗಳಲ್ಲ. ಅದರಲ್ಲಿ ಆತ್ಮಾನುಸಂಧಾನದ ಅಥವಾ ಶಿವಯೋಗದ ತತ್ವಗಳು ಅಡಕವಾಗಿರುತ್ತವೆ. ಈ ರೀತಿಯನ್ನು ವಚನ ಶಾಸ್ತ್ರದಿಂದ ವೀರಶೈವರು ಅರಿಯತಕ್ಕದ್ದು. ಹೀಗೆ ಅರಿತು ಆಚರಿಸಿದಲ್ಲಿ ಮನುಷ್ಯನ ನೈತಿಕ, ಮಾನಸಿಕ, ಬೌದ್ಧಿಕ ಮತ್ತು ಯೌಗಿಕ ಸಾಮರ್ಥ್ಯವು ಬೆಳೆಯುತ್ತ ಹೋಗುತ್ತದೆ. ಹೀಗೆ ಶಿವಶರಣರ ಅಭಿಪ್ರಾಯವಿದೆ. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ ಅದು ಯಾವದೆಂದರೆ—

ನಾನು ಯಾವಾಗಲೂ ಲಿಂಗಧಾರಕನಾಗಿ ಪ್ರತಿದಿವಸ ಒಮ್ಮೆಯಾದರೂ ಕ್ರಮಯುಕ್ತ ರೀತಿಯಿಂದ ಲಿಂಗಪೂಜೆಯನ್ನು ಮಾಡಿ ಲಿಂಗಾನುಸಂಧಾನದಲ್ಲಿರುವೆನು.

ದುರ್ವ್ಯಸನ, ದುಶ್ಚಟ ಮತ್ತು ದುರ್ನಡತೆಗಳನ್ನು ಬಿಡುವುದು.

(೪) ಶಿವಶರಣರು ನೈತಿಕಾಚಾರಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ಉನ್ನತವಾದ ನೈತಿಕಾಚರಣೆಯಿಂದ ಲಿಂಗಶಕ್ತಿಯು ಮನುಷ್ಯನಲ್ಲಿ ಬಲಗೊಳ್ಳುತ್ತದೆಂದು ಅವರು ಅಭಿಪ್ರಾಯಪಡುತ್ತಾರೆ. ನೀತಿ ಶಾಸ್ತ್ರದ ಮೇಲೆಯೇ ಅವರ ಷಟ್‌ಸ್ಥಲ ಶಾಸ್ತ್ರವು ನೆಲೆಗೊಳಿಸಲ್ಪಟ್ಟಿದೆ. ಆದ್ದರಿಂದ ನೀತಿಯ ವಚನಗಳು ವಚನಗ್ರಂಥಗಳಲ್ಲಿ ಆಗಿಂದಾಗೆ ಬರುತ್ತವೆ. ಆದ್ದರಿಂದ ಇಂಥ ನೀತಿಯ ವಿಷಯಗಳನ್ನು ಶಕ್ಯವಿದ್ದಷ್ಟು ಎಲ್ಲರೂ ಪಾಲಿಸಲೇಬೇಕು. ಆದರೆ ಬಹು ಜನರಲ್ಲಿ ಅನೇಕ ತರದ ದುರ್ವ್ಯಸನಗಳೂ, ದುಶ್ಚಟಗಳೂ, ದುರ್ನಡತೆಗಳೂ ಇರುತ್ತವೆ. ಇವು ಅವರ ಆರ್ಥಿಕ, ಮಾನಸಿಕ, ಶಾರೀರಿಕ ಮತ್ತು ಬೌದ್ಧಿಕ ಹಾನಿಯನ್ನುಂಟುಮಾಡುತ್ತವೆ. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ—

ನಾನು ಶಿವಶರಣರ ನೈತಿಕ ಮಾರ್ಗವನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಅನುಸರಿಸುತ್ತ ನನ್ನ ಆರ್ಥಿಕ, ಮಾನಸಿಕ, ಶಾರೀರಿಕ ಹಾನಿಯನ್ನುಂಟು ಮಾಡುವ ದುರ್ವ್ಯಸನಗಳನ್ನೂ, ದುಶ್ಚಟಗಳನ್ನೂ, ದುರ್ನಡತೆಗಳನ್ನೂ ಬಿಟ್ಟು ಕೊಡುವೆನು.

ಕಾಯಕದ ತತ್ವಗಳನ್ನು ತಿಳಿದುಕೊಂಡು ಆಚರಿಸುವದು.

(೫) ಪ್ರತಿಯೊಬ್ಬ ವೀರಶೈವನು ಒಂದು ಉದ್ಯೋಗವನ್ನು ಮಾಡಿಯೇ ತನ್ನ ಉಪಜೀವನವನ್ನು ಸಾಗಿಸಬೇಕೆಂದು ಶಿವಶರಣರ ತತ್ವವಿದೆ. ಈ ಕಾರ್ಯದಲ್ಲಿ ಅವರು ಲಿಂಗಾನುಸಂಧಾನದ ವಿಚಾರಗಳನ್ನು ಅಡಕ ಮಾಡಿದ್ದಾರೆ. ಈ ದೃಷ್ಟಿಯಿಂದ ಮಾಡಿದ ಉದ್ಯೋಗಕ್ಕೆ ಅವರು ಕಾಯಕವೆಂಬ ಹೆಸರು ಕೊಟ್ಟಿದ್ದಾರೆ. ಆದ್ದರಿಂದ ವೀರಶೈವರು ಯಾರೂ ಭಿಕ್ಷೆಯನ್ನು ಬೇಡಬಾರದು. ಈ ನಿಯಮವು ಮಠಾಧಿಕಾರಿಗಳಿಗೂ, ಜಂಗಮರಿಗೂ, ಸ್ತ್ರೀಯರಿಗೂ ಕೂಡ ಅನ್ವಯಿಸುತ್ತದೆ. ಆದ್ದರಿಂದ ಅವರೆಲ್ಲರೂ ಒಂದು ಕಾಯಕವನ್ನು ಮಾಡುತ್ತ ತಮ್ಮ ನಿರ್ವಾಹವನ್ನು ಸಾಗಿಸತಕ್ಕದ್ದು. ಆದರೆ ಮಠಾಧಿಕಾರಿಗಳು ಮಾಡತಕ್ಕ ಬೋಧಕ ಕಾರ್ಯಗಳು ಕಾಯಕಗಳಿರುತ್ತವೆ. ಸ್ತ್ರೀಯರು ಮಾಡತಕ್ಕ ಶಿಶುಪೋಷಣೆ, ಅಡಿಗೆ, ಮತ್ತು ಗೃಹಕೃತ್ಯಾದಿ ಕಾರ್ಯಗಳು ಉತ್ತಮ ತರದ ಕಾಯಕಗಳು. ಹಾಗೆಯೇ ಅನೇಕರು ಮಾಡುತ್ತಿರುವ ಸಾರ್ವಜನಿಕ ಉಪಯುಕ್ತ ಕಾರ್ಯಗಳಾದರೂ ಕಾಯಕಗಳೆಂದು ತಿಳಿಯತಕ್ಕದ್ದು. ಆದ್ದರಿಂದ ಇಂಥವರ ಪ್ರಯತ್ನಗಳ ಉಪಯೋಗ ಮಾಡಿಕೊಳ್ಳುವವರು ಅವರಿಗೆ ಯೋಗ್ಯ ಪ್ರತಿಫಲವನ್ನು ಕೊಡಲೇಬೇಕು ಆದರೆ ಕೆಲವು ಉದ್ಯೋಗಗಳು ಕಾಯಕಗಳೆಂದು ಧಾವಿಸಲು ಬರಲಾರದು. ಉದಾ:—ಸ್ವತಃ ಒಕ್ಕಲುತನ ಮಾಡದೆ ತಮ್ಮ ಎಲ್ಲ ಜಮೀನುಗಳನ್ನು ಬೇರೆಯವರಿಗೆ ಸಾಗಿಸುತ್ತ ತಾವು ಕೆಲಸ ಮಾಡದೆ ಇರುವದು, ಬಾಡಿಗೆಯ ಮನೆಗಳಿದ್ದು, ತಾವು ಏನೂ ಶ್ರಮ ಮಾಡದೆ ಅವುಗಳ ಉತ್ಪನ್ನದ ಮೇಲೆಯೇ ಉಪಜೀವಿಸುವದು, ನಿವೃತ್ತ ಸರಕಾರೀ ಅಧಿಕಾರಿಗಳಿದ್ದು, ಅವರು ತಮ್ಮ ಪೆನಶನದ ಮೇಲೆ ಮಾತ್ರ ಉಪಜೀವಿಸುತ್ತ ಸೋಮಾರಿತನದಿಂದ ಕಾಲಕಳೆಯುವದು, ಶ್ರೀಮಂತರಾಗಿದ್ದು, ತಮ್ಮ ತೀವಿನಿಂದ ಬರುವ ಬಡ್ಡಿಯಿಂದ ತಮ್ಮ ನಿರ್ವಾಹ ಸಾಗಿಸುವುದು,

ಇವು ಕಾಯಕಗಳೆಂದು ಹೇಳಲಿಕ್ಕೆ ಬರಲಾರದು. ಇವರೆಲ್ಲರೂ ಬೇರೊಂದು ಉದ್ಯೋಗವನ್ನು ಅಥವಾ ತಮ್ಮ ಇದ್ದ ಉದ್ಯೋಗದಲ್ಲಿಯೇ ಹೆಚ್ಚಿಗೆ ಮನಸ್ಸು ಹಾಕಿ ಅದರಲ್ಲಿ ದುಡಿಯುವದನ್ನು ಮಾಡಬೇಕು. ಮನುಷ್ಯನು ತನ್ನ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಶಕ್ತಿ ಇರುವ ವರೆಗೆ ಒಂದು ಕಾಯಕವನ್ನು ಮಾಡಲೇಬೇಕು. ಇದಕ್ಕೆ ವಿರುದ್ಧವಾದ ವರ್ತನೆಯು ಶಿವಾನುಭವ ಶಾಸ್ತ್ರಕ್ಕೆ ಸಮ್ಮತವಾದುದಲ್ಲ. ಯಾಕಂದರೆ ಕಾಯಕದಲ್ಲಿ ಶಾರೀರಿಕ, ಮಾನಸಿಕ, ಮತ್ತು ಬೌದ್ಧಿಕ ಶ್ರಮದ ಕೆಲಸಗಳಿರುತ್ತವೆ. ಈ ಶ್ರಮದ ಮೂಲಕವಾಗಿಯೇ ಇಂದ್ರಿಯಗಳ ವಿಕಾಸವಾಗುತ್ತದೆ. ಈ ವಿಕಾಸದಲ್ಲಿಯೇ ಆತ್ಮಸುಧಾರಣೆ ಇರುತ್ತದೆ. ಕಾಯಕದ ಉದ್ದೇಶವು ಕೇವಲ ಉಪಜೀವನವಲ್ಲ. ಅದರಲ್ಲಿ ಲಿಂಗ ಶಕ್ತಿಯ ವಿಕಾಸವೂ ಇರುತ್ತದೆ. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ನನ್ನ ಮಾನಸಿಕ, ಶಾರೀರಿಕ, ಬೌದ್ಧಿಕ ಶಕ್ತಿಯು ಇರುವವರೆಗೂ ಅದನ್ನು ಸರಿಯಾದ ಮಾರ್ಗದಿಂದ ಉಪಯೋಗಿಸುತ್ತ ನನ್ನ ಉಪಜೀವನವನ್ನು ಸಾಗಿಸುವೆನು. ನಾನು ಪರಾವಲಂಬಿಯಾಗುವದಿಲ್ಲ. ನಾನು ಕೆಲವೊಂದು ಸತ್ಯ ಶುದ್ಧ ಕಾಯಕವನ್ನು ಮಾಡಿಯೇ ಉಪಜೀವಿಸುವೆನು.

ಕಾಯಕವನ್ನು ಮಾಡಿದ ಬಳಿಕ ಉಳಿದ ವೇಳೆಯನ್ನು ಉಪಯುಕ್ತ ಕಾರ್ಯಗಳಿಗಾಗಿ ಉಪಯೋಗಿಸುವುದು.

(೬) ಮನುಷ್ಯನು ತನ್ನ ಉಪಜೀವನದ ಉದ್ಯೋಗವನ್ನು ಮಾಡಿದ ಬಳಿಕ ಅವನಿಗೆ ಕೆಲವು ವೇಳೆಯು ಹೆಚ್ಚಿಗೆ ಉಳಿಯುವದುಂಟು. ಹೀಗೆ ಉಳಿದದ್ದಾದರೆ, ಆಗ ಕೆಲವೊಂದು ಉಪಯುಕ್ತ ಕಾರ್ಯದಲ್ಲಿ ಅಂದರೆ ಆತ್ಮೋದ್ಧಾರ, ಸಮಾಜೋದ್ಧಾರ ಮೊದಲಾದ ಕಾರ್ಯಗಳನ್ನು ಮಾಡುವಲ್ಲಿ, ಆ ವೇಳೆಯನ್ನು ಕಳೆಯತಕ್ಕದ್ದು. ಉಪಜೀವನಕ್ಕೋಸ್ಕರ ಕಾಯಕ ಮಾಡುವ ಅವಶ್ಯಕತೆ ಇಲ್ಲದವರು ಈ ಸೂಚನೆಯನ್ನು ಪಾಲಿಸುವದು ಯುಕ್ತವಾದುದು. ಅದು ಯಾವದೆಂದರೆ:—

ನಾನು ನಿತ್ಯದ ಉಪಜೀವನದ ಉದ್ಯೋಗವನ್ನು ಮಾಡಿದ ಬಳಿಕ ಉಳಿದ ವೇಳೆಯನ್ನು ನಾನು ಆತ್ಮಸುಧಾರಣೆಗಾಗಿ ಅಥವಾ ನನ್ನ ಕುಟುಂಬದ ಸುಧಾರಣೆಗಾಗಿ ಅಥವಾ ಸಮಾಜದ ಕೆಲವೊಂದು ಉಪಯುಕ್ತ ಕಾರ್ಯಕ್ಕಾಗಿ ಉಪಯೋಗಿಸುವೆನು.

ಜ್ಯೋತಿಷ್ಯ, ಶಕುನ ಮೊದಲಾದವುಗಳನ್ನು ನಂಬದಿರುವುದು.

(೭) ಜ್ಯೋತಿಷ್ಯ, ಶಕುನ ಇಂಥವುಗಳನ್ನು ಅವಲಂಬಿಸಿ ಕಾರ್ಯ ಮಾಡಬಾರದೆಂದು ಶಿವಶರಣರ ಅಭಿಪ್ರಾಯವದೆ. ಇಲ್ಲಿ ಈ ತರದ ಶಾಸ್ತ್ರಗಳ ಸತ್ಯಾಸತ್ಯತೆಯ ಬಗ್ಗೆ ಪ್ರಶ್ನೆಯು ಇರುವದಿಲ್ಲ. ಆದರೆ ಈ ಮಾರ್ಗದಿಂದ ನಡೆಯುವದು ಶಿವಶರಣರ ಮತಕ್ಕೆ ವಿರೋಧವಾದದ್ದು. ಯಾಕಂದರೆ ಷಟ್‌ಸ್ಥಲ ಶಾಸ್ತ್ರದ ಮರ್ಮವನ್ನು ವೀರಶೈವನು ಅರಿತುಕೊಂಡು ಶಿವಾರ್ಪಣ ಭಾವದಿಂದ ತನ್ನ ಕಾರ್ಯಗಳನ್ನು ಮಾಡಬೇಕು ಮತ್ತು ಹೀಗೆ ಮಾಡುವುದರಿಂದ ಅವನ ಕರ್ಮಗಳು ನಷ್ಟವಾಗುವವು ಎಂದು ಶಿವಶರಣರ ಅಭಿಪ್ರಾಯವಿರುತ್ತದೆ. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ—

ನಾನು ಯಾವ ಕಾರ್ಯದಲ್ಲಿಯೂ ಜ್ಯೋತಿಷ್ಯ, ಶಕುನ, ಮೊದಲಾದವುಗಳನ್ನು ಕೇಳುವದಿಲ್ಲ. ಆದರೆ ಶಿವಶರಣರ ಷಟ್‌ಸ್ಥಲ ಶಾಸ್ತ್ರ, ನೀತಿ ಶಾಸ್ತ್ರ ಮತ್ತು ಅನುಭವ ವಿದ್ಯೆ ಇವುಗಳನ್ನು ತಿಳಿದುಕೊಂಡು ಅವುಗಳಂತೆ ಆಚರಿಸುತ್ತ ನನಗೆ ಉಂಟಾದ ಸ್ವಾನುಭವ ಮತ್ತು ತಿಳುವಳಿಕೆಯಿಂದಲೇ ನಾನು ನನ್ನ ಕಾರ್ಯಗಳನ್ನು ಮಾಡುತ್ತ ಹೋಗುವೆನು.

ಅನಾವಶ್ಯಕ ಖರ್ಚು ಮಾಡದಿರುವುದು.

(೮) ಶಿವಶರಣರು ಶುಭಾಶುಭ ಕಾರ್ಯಗಳು, ಹಬ್ಬ ಹುಣ್ಣಿಮೆಗಳು, ತೀರ್ಥ ಯಾತ್ರೆಗಳು, ದೇವಾಲಯಗಳು ಇವುಗಳಿಗೆ ಮಹತ್ವ ಕೊಡುವದಿಲ್ಲ. ಹಾಗೆಯೇ ತಮಗೆ ಸಂಬಂಧಿಸದೆ ಇದ್ದ ದೇವತೆಗಳ ಜಾತ್ರೆಗಳನ್ನೂ ಹಬ್ಬಗಳನ್ನೂ ಉತ್ಸವಗಳನ್ನೂ ಅವರು ಮಾಡತಕ್ಕ

ದ್ದಲ್ಲ. ವಚನ ಶಾಸ್ತ್ರದ ಪ್ರಕಾರ ಇವುಗಳ ಮೇಲಿನ ನಂಬಿಕೆಯು ವೀರಶೈವರ ಧಾರ್ಮಿಕ ಉನ್ನತಿಗೆ ಕಾರಣವಲ್ಲ. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ಶುಭಾಶುಭ ಮತ್ತು ನನ್ನ ಮನೆತನದ ಕಾರ್ಯಗಳಿಗೋಸ್ಕರ ಅನಾವಶ್ಯಕ ಖರ್ಚು ಮಾಡುವದಿಲ್ಲ. ಹಾಗೆಯೇ ವೀರಶೈವರಿಗೆ ಸಂಬಂಧಿಸದೆ ಇದ್ದ ಕೆಲವೊಂದು ದೇವತೆಯ ಜಾತ್ರೆ, ಉತ್ಸವ, ಹಬ್ಬಗಳನ್ನು ನಾನು ಪಾಲಿಸುವದಿಲ್ಲ.

ಶಿವಾರ್ಪಣ ಬುದ್ಧಿಯಿಂದ ತನ್ನ ಕಾರ್ಯವಮಾಡುವುದು.

(೯) ಜನರಲ್ಲಿ ತಮ್ಮ ಕೀರ್ತಿಗಾಗಿ ಕಾರ್ಯ ಮಾಡುವ ಹಂಬಲವು ಬಹು ಹೆಚ್ಚಿಗಿರುತ್ತದೆ. ಆದರೆ ಶಿವಶರಣರ ತತ್ವದ ಪ್ರಕಾರ ಮನುಷ್ಯನು ಯಾವ ಕಾರ್ಯ ಮಾಡಿದರೂ ಅದರಿಂದ ಯಾವ ಫಲವನ್ನು ಅಪೇಕ್ಷಿಸದೆ ಶಿವಾರ್ಪಣ ಬುದ್ಧಿಯಿಂದಲೇ ಅದನ್ನು ಮಾಡುವದು ಅವನ ಕರ್ತವ್ಯವು. ಕಾರ್ಯ ಮಾಡುವಲ್ಲಿ ಆತ್ಮಪ್ರತಿಷ್ಠೆ ಎಂಬುದು ಅವನಲ್ಲಿ ಇರಕೂಡದು. ಆದರೆ ಸಾಮಾನ್ಯವಾಗಿ ಜನರು ಕೇವಲ ಆತ್ಮಪ್ರತಿಷ್ಠೆಗಾಗಿ ಕಾರ್ಯ ಮಾಡುತ್ತಿರುವುದರಿಂದ ಅವರಲ್ಲಿ ಪರಸ್ಪರ ಕಲಹಗಳು, ಈರ್ಷೆಗಳು, ಅಸೂಯೆಗಳು, ಮನಸ್ತಾಪಗಳು ಉಂಟಾಗುತ್ತವೆ. ಮತ್ತು ಸಮಾಜದಲ್ಲಿ ಪ್ರೇಮ ಮತ್ತು ಐಕ್ಯತೆಯು ಉಳಿಯುವದಿಲ್ಲ. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ಮಾಡುವ ಎಲ್ಲ ಕಾರ್ಯಗಳನ್ನು ಶಿವಾರ್ಪಣ ಬುದ್ಧಿಯಿಂದಲೇ ಮಾಡುವೆನು.

(೨)

ಕುಟುಂಬ ಸುಧಾರಣೆಯ ಕಾರ್ಯಗಳು.

ಹಿಂದೆ ಸೂಚಿಸಿದಂತೆ ಆತ್ಮಸುಧಾರಣೆಯನ್ನು ಮಾಡಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಈ ಕಾರ್ಯವು ಎಷ್ಟು ಮಹತ್ವವಾದದ್ದೋ, ಅಷ್ಟೇ ತನ್ನ ಮನೆಯಲ್ಲಿರುವ ಎಲ್ಲ ಜನರನ್ನು ಸುಧಾರಿಸು

ವದು ಮಹತ್ವವಾದದ್ದು. ಕುಟುಂಬದಲ್ಲಿ ತಾನು, ತನ್ನ ಹೆಂಡಿರು ಮಕ್ಕಳು, ತನ್ನ ಆಶ್ರಿತರು, ಸೇವಕರು ಇವರೆಲ್ಲರೂ ಬರುತ್ತಾರೆ. ಇವರು ಸುಧಾರಿಸಿದವರು ಇರದಿದ್ದರೆ ಆತ್ಮ ಸುಧಾರಣೆಗೆ ಪ್ರತಿಬಂಧವು ಉಂಟಾಗುತ್ತದೆ. ಆದ್ದರಿಂದ ಕೆಳಗಿನ ಸೂಚನೆಗಳು ಮಾಡಲ್ಪಟ್ಟಿವೆ.

ತನ್ನ ಕುಟುಂಬದಲ್ಲಿ ವಚನಗ್ರಂಥಗಳ ಅಭ್ಯಾಸ ನಡಿಸುವುದು.

(೧೦) ಪ್ರತಿಯೊಬ್ಬನು ಶಿವಶರಣರ ತತ್ವಗಳನ್ನು ತಾನು ಅರಿತುಕೊಳ್ಳುವದಲ್ಲದೆ ಅವುಗಳನ್ನು ಮನೆಯಲ್ಲಿರುವ ಎಲ್ಲರಿಗೂ ತಿಳಿಸಿ ಹೇಳಿ ಅವರು ಅವುಗಳಂತೆ ಶಕ್ಯವಿದ್ದಷ್ಟರ ಮಟ್ಟಿಗೆ ನಡೆಯುವಂತೆ ಪ್ರಯತ್ನಿಸುವದು ಅವಶ್ಯವು. ಹೀಗೆ ವರ್ತಿಸುವದು ಪ್ರತಿಯೊಬ್ಬ ಕುಟುಂಬಸ್ತನ ಮುಖ್ಯ ಕರ್ತವ್ಯವೆಂದು ಭಾವಿಸಬೇಕು. ಇದಕ್ಕೋಸ್ಕರ ಅವನು ವಾರದಲ್ಲಿ ಅಥವಾ ಪ್ರತಿದಿನ ಕೆಲವೊಂದು ವೇಳೆಯನ್ನು ಗೊತ್ತುಪಡಿಸಿ ಆಗ ಕುಟುಂಬದವರನ್ನೆಲ್ಲ ಒತ್ತಟ್ಟಿಗೆ ಕೂಡಿಸಿ ಶಿವಶರಣರ ವಚನಗಳನ್ನು ತನಗೆ ತಿಳಿದಷ್ಟರ ಮಟ್ಟಿಗೆ ಅವರಿಗೆ ತಿಳಿಸಿ ಹೇಳಬೇಕು. ಇದಲ್ಲದೆ ತನ್ನ ನಿತ್ಯದ ವ್ಯವಹಾರದಲ್ಲಿ ತನಗೆ ಕಂಡು ಬಂದ ಅನುಭವಗಳನ್ನೂ ಸಮಾಜದಲ್ಲಿ ನಡೆದ ಅಥವಾ ನಡೆಯುತ್ತಿರುವ ವಿಶೇಷ ಸಂಗತಿಗಳನ್ನೂ ಅವರಿಗೆ ತಿಳಿಸಿ ಹೇಳಬೇಕು. ಈ ಕ್ರಮವು ಪ್ರತಿ ಕುಟುಂಬದಲ್ಲಿಯೂ ಯಾವಾಗಲೂ ನಡೆಯಬೇಕು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ಕೆಲವೊಂದು ವೇಳೆಯನ್ನು ಗೊತ್ತುಪಡಿಸಿ ಆಗ ನನ್ನ ಕುಟುಂಬದವರೊಂದಿಗೆ ಶಿವಶರಣರ ತತ್ವಗಳನ್ನು ಓದುವೆನು ಮತ್ತು ಚರ್ಚಿಸುವೆನು ಅಥವಾ ಅಲ್ಲಿ ಆಗ ಬೇರೆಯವರು ಹೇಳಿದ್ದನ್ನು ನಾನು ಮನಮುಟ್ಟಿ ಕೇಳುವೆನು.

ಕುಟುಂಬದಲ್ಲಿ ಜ್ಞಾನ ಸಂಪಾದನೆಯ ಕಾರ್ಯಗಳಿಗೋಸ್ಕರ ಪ್ರಯತ್ನಿಸುವುದು.

(೧೧) ವೀರಶೈವ ಧರ್ಮದಲ್ಲಿ ಜ್ಞಾನ ಮತ್ತು ಅನುಭವ ಇವುಗಳಿಗೆ ಬಹಳ ಮಹತ್ವದ ಸ್ಥಾನವಿದೆ. ಆದ್ದರಿಂದ ಎಲ್ಲರೂ ಶಿವಶರಣರ

ವಿಚಾರಗಳನ್ನು ತಾವೇ ಓದಿಕೊಂಡು ತಿಳಿದುಕೊಳ್ಳುವುದು ಬಹು ಅಗತ್ಯವು. ಆದ್ದರಿಂದ ಮನೆಯಲ್ಲಿರುವ ಸಣ್ಣವರೂ, ದೊಡ್ಡವರೂ, ಸ್ತ್ರೀಯರೂ, ಪುರುಷರೂ ಎಲ್ಲರೂ ಓದುಬರಹ ಕಲಿಯಬೇಕು. ಅವರಲ್ಲಿ ಕೆಲವರು ಕೆಲಮಟ್ಟಿಗೆ ಮಾತ್ರ ಕಲಿತವರಿರಬಹುದು. ಅವರು ಇನ್ನೂ ಹೆಚ್ಚಿಗೆ ಜ್ಞಾನ ಸಂಪಾದನೆ ಮಾಡುವಂತೆ ಕುಟುಂಬದ ಯಜಮಾನನು ಮತ್ತು ಅದರಲ್ಲಿಯ ಎಲ್ಲ ಸುಶಿಕ್ಷಿತ ಸ್ತ್ರೀಪುರುಷರು ಪ್ರಯತ್ನಿಸಬೇಕು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ಓದು ಬರಹ ಗೊತ್ತಿಲ್ಲದ ನನ್ನ ಕುಟುಂಬದವರಿಗೆಲ್ಲ ಓದು ಬರಹ ಕಲಿಸುವೆನು ಅಥವಾ ಅವರಿಗೆ ಕಲಿಸುವ ವ್ಯವಸ್ಥೆ ಮಾಡುವೆನು. ಮತ್ತು ಅವರು ಕಲಿತವರಿದ್ದರೆ ಅವರ ಜ್ಞಾನ ಸಂಪಾದನೆಯ ಕಾರ್ಯಗಳು ಹೆಚ್ಚಾಗಿ ಮುಂದುವರಿಯುವಂತೆ ಏರ್ಪಾಡು ಮಾಡುವೆನು.

ಮನೆತನದ ದಿನಚರಿಯ ಕಾರ್ಯಗಳನ್ನು ಸುವ್ಯವಸ್ಥೆಯಿಂದಲೂ ನಿಯಮಿತತನದಿಂದಲೂ ಮಾಡುವುದು.

(೧೨) ನಮ್ಮ ದೇಶದಲ್ಲಿ ಶಿಸ್ತು, ಪದ್ಧತಿ, ಅಚ್ಚುಕಟ್ಟುತನ, ವ್ಯವಸ್ಥೆ, ಸ್ವಚ್ಛತೆ ಇವು ಇರದ್ದರಿಂದ ಅದು ಅನೇಕ ಹಾನಿಗಳಿಗೆ ಈಡಾಗಿರುತ್ತದೆ. ಈ ಸ್ಥಿತಿಯುಂಟಾಗಲಿಕ್ಕೆ ಮನೆತನಗಳಲ್ಲಿರುವ ಅವ್ಯವಸ್ಥೆಯೇ ಮುಖ್ಯ ಕಾರಣವು. ಆದ್ದರಿಂದ ಸ್ತ್ರೀ ಪುರುಷರು ತಮ್ಮ ಉಡಿಗೆ ತೊಡಿಗೆಗಳನ್ನು ಮತ್ತು ಮನೆಯಲ್ಲಿರುವ ಎಲ್ಲ ಸಾಮಾನುಗಳನ್ನು ಅಚ್ಚುಕಟ್ಟುತನದಿಂದ ಮತ್ತು ಸ್ವಚ್ಛತೆಯಿಂದ ಇಡಲು ಪ್ರಯತ್ನಿಸತಕ್ಕದ್ದು. ಅದರಂತೆ ಮನೆತನದಲ್ಲಿ ದಿನಾಲು ನಡೆಯುವ ದಿನಚರಿಯ ಕಾರ್ಯಗಳನ್ನಾದರೂ ಸುವ್ಯವಸ್ಥೆಯಿಂದ ಮತ್ತು ವೇಳೆಗೆ ಸರಿಯಾಗಿ ಮಾಡಲು ಪ್ರಯತ್ನಿಸತಕ್ಕದ್ದು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯ ಮನೆತನಗಳಲ್ಲಿ ಈ ವ್ಯವಸ್ಥೆಯು ತಪ್ಪದೆ ಇರುವದುಂಟು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ—

ನಾನು ನನ್ನ ಗೃಹಕೃತ್ಯಕ್ಕೆ ಬೇಕಾಗುವ ಅವಶ್ಯಕ ಜೀನಸುಗಳನ್ನೂ ಕುಟುಂಬದವರ ಉಡಿಗೆ ತೊಡಿಗೆಗಳನ್ನೂ ಸುವ್ಯವಸ್ಥೆಯಿಂದಲೂ ಸ್ವಚ್ಛತೆಯಿಂದಲೂ ಇಡುವೆನು. ಮತ್ತು ಮನೆತನದ ದಿನಚರಿಯ ಕಾರ್ಯ

ಗಳಲ್ಲಿ ಶಿಸ್ತು, ಪದ್ಧತಿ, ಅಚ್ಚುಕಟ್ಟುತನ, ನಿಯಮಿತತನ, ಸ್ವಚ್ಛತೆ ಇವುಗ
ಳಿರುವಂತೆ ಪ್ರಯತ್ನಿಸುವೆನು.

ಕುಟುಂಬದ ಜನರೆಲ್ಲರೂ ಆರೋಗ್ಯದ ನಿಯಮುಗಳನ್ನು ತಿಳಿದುಕೊಂಡು ಅವುಗಳನ್ನು ಪಾಲಿಸುವುದು.

(೧೩) ಶಿವಶರಣರು ಆರೋಗ್ಯತೆಗೆ ಮತ್ತು ಶರೀರ ಪಾಲನೆಗೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ ಇದು ಅವರ ವಚನಗಳಿಂದ ತಿಳಿದು ಬರುತ್ತಿದೆ. ಚಿರಂಜೀವಿ ಎಂದರೆ 'ನಿರೋಗಿ' ಎಂತಲೂ 'ಬಹು ದಿವಸ ಬಾಳುವವ' ಎಂತಲೂ ಅವರು ಹೇಳಿದ್ದಾರೆ. ಇಂದ್ರಿಯಗಳ ಶಕ್ತಿಣತೆಯು ಶಿವಾನುಭವದ ಕಾರ್ಯಗಳಿಗೆ ಯಾವಾಗಲೂ ಬಹಳ ಸಹಾಯಕಾರಿಯು. ಆದ್ದರಿಂದ ಕುಟುಂಬದ ಜನರೆಲ್ಲರೂ ಆರೋಗ್ಯದ ನಿಯಮಗಳನ್ನು ಅರಿತುಕೊಂಡು ಅವುಗಳನ್ನು ಪಾಲಿಸತಕ್ಕದ್ದು. ಇದೊಂದು ತಾವು ಮಾಡತಕ್ಕ ಧಾರ್ಮಿಕ ಕೃತ್ಯವೆಂದು ಭಾವಿಸಬೇಕು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವ ದೆಂದರೆ:—

ಕುಟುಂಬದವರೆಲ್ಲರಿಗೂ ಆರೋಗ್ಯದ ನಿಯಮಗಳನ್ನು ತಿಳಿಸಿ ಕೊಟ್ಟು ಅವರು ಹಾಗೆ ನಡೆಯುವಂತೆ ನಾನು ಪ್ರಯತ್ನಿಸುವೆನು.

ಮನೆಯಲ್ಲಿ ಶಿವಾನುಭವ ಮಂಟಪವನ್ನು ಸ್ಥಾಪಿಸುವುದು.

(೧೪) ಕುಟುಂಬದ ಜನರೆಲ್ಲರೂ ಶಿವಾನುಭವದ ವಿಚಾರಗಳನ್ನರಿತು ಅದರಂತೆ ಆಚರಿಸುವದು ಅವಶ್ಯವಾಗಿರುವದರಿಂದ ಈ ಕಾರ್ಯವನ್ನು ಮಾಡುವದಕ್ಕೋಸ್ಕರ ತಾನಿರತಕ್ಕ ಮನೆಯಲ್ಲಿಯ ಕೆಲವೊಂದು ಭಾಗವನ್ನು ಕಾದಿಡತಕ್ಕದ್ದು. ಇದಕ್ಕೆ 'ಶಿವಾನುಭವ ಮಂಟಪ' ಎಂಬ ಹೆಸರು ಇರತಕ್ಕದ್ದು. ಇದನ್ನು ಶುದ್ಧವಾಗಿಯೂ, ಪವಿತ್ರವಾಗಿಯೂ ಇಡತಕ್ಕದ್ದು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ನನ್ನ ಮನೆಯಲ್ಲಿ ಕೆಲವೊಂದು ಸ್ಥಳವನ್ನು ಗೊತ್ತುಪಡಿಸಿ ಅದನ್ನು ಶಿವಾನುಭವ ಕಾರ್ಯಗಳಿಗೋಸ್ಕರ ಉಪಯೋಗಿಸುವೆನು.

ಅದನ್ನು ಶುದ್ಧವಾಗಿಯೂ ಪವಿತ್ರವಾಗಿಯೂ ಇಡುವೆನು. ಅದು ನನ್ನ ಮನೆಯಲ್ಲಿಯ "ಶಿವಾನುಭವ ಮಂಟಪ" ವೆಂದು ಭಾವಿಸುವೆನು. ಮನೆಯಲ್ಲಿ ಹೀಗೆ ವ್ಯವಸ್ಥೆ ಮಾಡುವದು ಶಕ್ಯವಿಲ್ಲದಿದ್ದರೆ ಶಿವಾನುಭವದ ಕಾರ್ಯಗಳನ್ನು ನಡೆಯಿಸುವ ಸ್ಥಳವನ್ನು ಆಗಿನ ಪೂರ್ತಿಯಾದರೂ ಪವಿತ್ರವಾದುದೆಂದು ಭಾವಿಸಿ ಅದರಂತೆ ಆಚರಿಸುವೆನು.

ಈ ಕಾರ್ಯಕ್ರಮ ಪತ್ರಿಕೆಯಲ್ಲಿಯ ಕಾರ್ಯಗಳನ್ನು ಕ್ರಮೇಣ ಕೈಕೊಳ್ಳುತ್ತ ಹೋಗುವುದು.

(೧೫) ಈ ಕಾರ್ಯಕ್ರಮ ಪತ್ರಿಕೆಯಲ್ಲಿ ಅನೇಕ ಸೂಚನೆಗಳಿದ್ದು ಅವುಗಳನ್ನು ಪ್ರತಿಯೊಬ್ಬನು ತನ್ನ ಕುಟುಂಬದ ಜನರಿಗೆಲ್ಲ ತಿಳಿಸಿ ಹೇಳತಕ್ಕದ್ದು. ಮತ್ತು ಅವುಗಳಲ್ಲಿ ಅವರು ತಮಗೆ ಬೇಕಾದ ಕನಿಷ್ಟ ಯಾವದಾದರೂ ಒಂದನ್ನು ಆರಂಭದಲ್ಲಿ ಕೈಕೊಳ್ಳುವಂತೆಯೂ, ಮುಂದೆ ಹೆಚ್ಚಿಗೆ ಉಳಿದವುಗಳನ್ನೂ ಕ್ರಮೇಣ ಆರಿಸುತ್ತ ಹೋಗುವಂತೆಯೂ ಪ್ರೋತ್ಸಾಹಿಸತಕ್ಕದ್ದು. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ.

ಈ ಕಾರ್ಯಕ್ರಮ ಪತ್ರಿಕೆಯಲ್ಲಿ ಕಾಣಿಸಿದ ವಿಷಯಗಳಲ್ಲಿ ಕನಿಷ್ಟ ಒಂದನ್ನಾದರೂ ನನ್ನ ಕುಟುಂಬದಲ್ಲಿಯ ಎಲ್ಲ ಸ್ತ್ರೀ ಪುರುಷರು ಆರಂಭದಲ್ಲಿ ಕೈಕೊಂಡು ಅವರು ಹಾಗೆ ನಡೆಯುವಂತೆಯೂ ಮುಂದೆ ಬರಬರುತ್ತ ತಮ್ಮ ಇಚ್ಛೆಗೆ ಬಂದ ಹೊಸ ಹೊಸ ಸುಧಾರಣೆಯ ಕಾರ್ಯಗಳನ್ನು ಅವರು ಕೈಕೊಳ್ಳುತ್ತ ಹೋಗುವಂತೆಯೂ ಅವರಿಗೆ ನಾನು ಪ್ರೋತ್ಸಾಹಿಸುವೆನು.

(೩)

ಶಿವಾನುಭವ ಸಂಘಕ್ಕೋಸ್ಕರ ಮಾಡುವ ಕಾರ್ಯಗಳು.

ಶಿವಾನುಭವ ಸಂಘದ ಸಭಾಸದನಾಗಿರುವುದು.

(೧೬) ಮನುಷ್ಯನು ತನ್ನ ಮತ್ತು ತನ್ನ ಕುಟುಂಬದ ಸುಧಾರಣೆಯನ್ನು ಮಾಡುವ ಕಾರ್ಯದಲ್ಲಿ ಶಿವಾನುಭವ ಸಂಘಗಳು ಅವನಿಗೆ ಬಹಳ ಸಹಾಯಕಾರಿಯಾದವುಗಳು. ಅದರಂತೆಯೇ ಅವುಗಳು ಜನಸುಧಾ

ರಹಿತ ಕಾರ್ಯಗಳಲ್ಲಿಯೂ ಅವನಿಗೆ ಸಹಾಯವಾಗುತ್ತವೆ. ಶಿವಾನುಭವ ಸಂಘಗಳಿಗೆ ಸಭಾಸದನಾಗುವ ಉದ್ದೇಶಗಳು ಇವೇ ಇರುತ್ತವೆ. ಆದ್ದರಿಂದ ಶಿವಶರಣರ ವಿಚಾರಗಳು ಸಮ್ಮತವಿರುವಂಥ, ಅವುಗಳಿಗನುಸಾರವಾಗಿ ನಡೆಯಲು ಪ್ರಯತ್ನಿಸುವಂಥ, ಮತ್ತು ಉಚ್ಚ ವರ್ತನೆಯುಳ್ಳಂಥ ಸಭಾಸದರಿರುವ ಒಂದು ಶಿವಾನುಭವ ಸಂಘಕ್ಕೆ ಅವನು ಸಭಾಸದನಾಗತಕ್ಕದ್ದು. ಆಮೇಲೆ ಅವನು ಅದರ ಕಾರ್ಯಗಳಲ್ಲಿ ಪೂರ್ಣ ಮನಸ್ಸು ಹಾಕಿ ಸುಧಾರಣೆಯ ಕೆಲವೊಂದು ಕಾರ್ಯಕ್ರಮವನ್ನು ಕೈಕೊಂಡು ಅದು ಪ್ರಚಾರದಲ್ಲಿ ಬರುವಂತೆ ಪ್ರಯತ್ನಿಸತಕ್ಕದ್ದು. ಈ ಕಾರ್ಯಕ್ರಮದಲ್ಲಿ ತನ್ನ ಮತ್ತು ತನ್ನ ಕುಟುಂಬದವರಿಗೋಸ್ಕರ ತಾನು ಮಾಡತಕ್ಕ ಕಾರ್ಯಗಳೇ ಮಹತ್ವವಾದವುಗಳಿರುತ್ತವೆ. ಆದ್ದರಿಂದ ಶಿವಾನುಭವ ಸಂಘಗಳು ತಮ್ಮ ಸಭಾಸದರಿಗೆ ಯಾವ ಸುಧಾರಣೆಯ ಕಾರ್ಯಗಳು ಶಕ್ಯವೋ ಅಂಥವುಗಳನ್ನು ಅವು ಕೈಕೊಳ್ಳತಕ್ಕದ್ದು. ಈ ಕಾರ್ಯಗಳು ಅವರಿಗೆ ಸಿದ್ಧಿಸುತ್ತ ಹೋದ ಹಾಗೆ ಸಾರ್ವಜನಿಕ ಕಾರ್ಯಗಳನ್ನು ಮಾಡಲು ಅವಶ್ಯವಿರುವ ಯೋಗ್ಯತೆಯು ಅವರಿಗೆ ಪ್ರಾಪ್ತವಾಗುತ್ತ ಹೋಗುತ್ತದೆ. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ಕೆಲವೊಂದು ಶಿವಾನುಭವ ಸಂಘದ ಸಭಾಸದನಾಗುವೆನು. ಮತ್ತು ಅಲ್ಲಿ ಗೊತ್ತುಪಡಿಸಿದ ಕಾರ್ಯಕ್ರಮದಂತೆ ನಡೆಯಲು ನಾನು ಮನಃಪೂರ್ವಕವಾಗಿ ಪ್ರಯತ್ನಿಸುವೆನು.

ಶಿವಾನುಭವ ಸಂಘದ ಸಭಾಸದರು ಪರಸ್ಪರ, ಸಹಕಾರ ಪರಸ್ಪರ ಪ್ರೇಮ ಮತ್ತು ಪರಸ್ಪರ ಬಂಧುಭಾವದಿಂದ ವರ್ತಿಸುವುದು.

(೧೭) ಶಿವಾನುಭವ ಸಂಘಗಳ ಸಭಾಸದರು ಯಾವ ಪಂಗಡ, ಜಾತಿ, ಮತ, ಧರ್ಮದವರಿದ್ದರೂ ಕೂಡ ಅವರಲ್ಲಿ ಯಾವಾಗಲೂ ಪರಸ್ಪರ ಸಹಕಾರ, ಪರಸ್ಪರಪ್ರೇಮ, ಬಂಧು ಭಾವಗಳು ಇರತಕ್ಕದ್ದು. ಸಭಾಸದರಲ್ಲಿ ಮಠಾಧಿಕಾರಿಗಳು, ಅಧಿಕಾರಸ್ಥರು, ಶ್ರೀಮಂತರು, ಬಡವರು, ಸ್ಪೃಶ್ಯರು, ಅಸ್ಪೃಶ್ಯರು, ಹೀಗೆ ಅನೇಕರು ಇರಬಹುದು. ಆದರೆ ಅವರಲ್ಲಿ ಯಾರೂ ಶಿವಾನುಭವ ಸಂಘದವರು ಕೈಕೊಂಡ ಕಾರ್ಯಗಳಲ್ಲಿ ತಮ್ಮ ತಮ್ಮಲ್ಲಿ

ಯಾವ ತರದ ಉಚ್ಚ ನೀಚ ಭಾವವನ್ನು ಅಥವಾ ಭಿನ್ನತೆಯನ್ನು ಕಲ್ಪಿಸಕೂಡದು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ಶಿವಾನುಭವ ಸಂಘದ ಸಭಾಸದರೊಡನೆ ನಾನು ಯಾವಾಗಲೂ ಪರಸ್ಪರ ಸಹಕಾರ, ಪರಸ್ಪರ ಪ್ರೇಮ ಮತ್ತು ಬಂಧುಭಾವದಿಂದ ವರ್ತಿಸುವೆನು ಅವರಲ್ಲಿ ಯಾವತರದ ಉಚ್ಚ ನೀಚ ಭಾವವನ್ನು ಕಲ್ಪಿಸುವದಿಲ್ಲ.

ಶಿವಾನುಭವ ಸಂಘಗಳ ಸಭಾಸದರಲ್ಲಿ ಪರಸ್ಪರ ಲಗ್ನ, ಪರಸ್ಪರ ಊಟ ಉಪಚಾರಗಳಿಗೋಸ್ಕರ ಪ್ರೋತ್ಸಾಹಿಸುವುದು.

(೧೮) ವೀರಶೈವ ಸಮಾಜದಲ್ಲಿ ಅನೇಕ ಒಳಪಂಗಡಗಳಿವೆ. ಅವುಗಳಲ್ಲಿ ಪರಸ್ಪರ ಭೋಜನ ಮತ್ತು ಪರಸ್ಪರ ಲಗ್ನ ವ್ಯವಹಾರಾದಿಗಳು ನಿರಾತಂಕವಾಗಿ ನಡೆಯುವದಿಲ್ಲ. ಆದರೆ ಇದು ಶಿವಶರಣರ ವಿಚಾರಗಳಿಗೆ ಸಮ್ಮತವಾದುದಲ್ಲ. ಈ ಸ್ಥಿತಿಯನ್ನು ದೂರ ಮಾಡುವದು ಎಲ್ಲ ಶಿವಾನುಭವ ಸಂಘಗಳ ಮುಖ್ಯ ಕಾರ್ಯವಾಗಿದೆ.

ಆದರೆ ಇಂಥ ಕಾರ್ಯಗಳನ್ನು ಮಾಡುವಲ್ಲಿ ಆರಂಭದಲ್ಲಿ ಬಹು ಜಾಗ್ರತೆಯಿಂದ ವರ್ತಿಸುವದು ಅವಶ್ಯವಾಗಿದೆ. ಯಾಕಂದರೆ ಈ ಕಾರ್ಯಗಳು ವ್ಯಕ್ತಿಯ ಒಲವು ವತ್ತು ಅವನ ಮನಸ್ಸಿನ ಸಿದ್ಧತೆ ಇವುಗಳ ಮೇಲೆ ಅವಲಂಬಿಸಿರುತ್ತವೆ. ಬಹು ದಿವಸ ನೆಲೆಗೊಂಡ ರೂಢಿಗಳು ಬಲಾತ್ಕಾರದಿಂದ ಹೋಗಲಾರವು. ಒಂದು ವೇಳೆ ಬಲಾತ್ಕಾರದಿಂದ ಅವುಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾದರೆ ಸಮಾಜದಲ್ಲಿ ಕಲಹಗಳೆದ್ದು ವಿಪರೀತ ಪರಿಣಾಮಗಳಾಗುತ್ತವೆ. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ಶಿವಾನುಭವ ಸಂಘದ ವೀರಶೈವ ಸಭಾಸದರು ಬೇರೆ ಬೇರೆ ಪಂಗಡದವರಿದ್ದಲ್ಲಿ ಅವರಲ್ಲಿ ಪರಸ್ಪರ ಲಗ್ನ, ಪರಸ್ಪರ ಊಟೋಪಚಾರಗಳು ನಡೆಯುವಂತೆ ಪ್ರೋತ್ಸಾಹಿಸುವೆನು. ಒಂದು ವೇಳೆ ಅವರಲ್ಲಿ ಯಾರಾದರೂ ಈ ಕಾರ್ಯಗಳನ್ನು ಕೈಕೊಂಡರೆ ನಾನು ಅವರಿಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡುವೆನು.

ವಚನಶಾಸ್ತ್ರದ ತತ್ವಗಳನ್ನು ಪ್ರಸಾರಮಾಡುವ ಕಾರ್ಯಗಳಿಗೆ ಸಹಾಯ ಮಾಡುವದು.

(೧೯) ವಚನಶಾಸ್ತ್ರವು ಮಾನವೀ ಜನಾಂಗದ ಹಿತಕ್ಕೋಸ್ಕರ ಇರುತ್ತದೆ. ಆದ್ದರಿಂದ ಅದರ ತತ್ವಗಳನ್ನು ಬಹುಜನ ಸಮಾಜದಲ್ಲಿ ಪ್ರಸಾರ ಪಡಿಸುವದು ಅವಶ್ಯವದೆ. ಇದು ವ್ಯಾಖ್ಯಾನಗಳು, ಪ್ರವಚನಗಳು, ವೀರಶೈವರಲ್ಲಿ ಆಗಿಹೋದ ಶಿವಶರಣರ ಮತ್ತು ಮಹಾಪುರುಷರ ಜಯಂತಿಗಳು, ವಚನಗಾಯನ, ವಚನಸ್ಪರ್ಧೆಗಳು, ಪ್ರಹಸನಗಳು, ಶಿವಶರಣರಿಗೆ ಸಂಬಂಧಿಸಿದ ನಾಟಕಗಳು, ಅನೇಕತರದ ಪುಸ್ತಕಗಳ ಪ್ರಸಾರ, ವ್ಯಾಖ್ಯಾನಗಳು, ಅಧ್ಯಾಸಕೂಟಗಳು ಭಜನಾ ಸಂಘಗಳು, ಶಿವಶರಣರ ರಂಗಳಿಗಳ ಮತ್ತು ಲಾವಣಿಗಳ ಹಾಡುವಿಕೆ ಇವೇ ಮೊದಲಾದ ಪ್ರಯತ್ನಗಳ ಮೂಲಕ ಯಾವಾಗಲೂ ನಡೆಯುತ್ತಿರಬೇಕು. ಇಂಥ ಕಾರ್ಯಕ್ರಮಗಳನ್ನು ಶಿವಾನುಭವ ಸಂಘಗಳು ಅವಶ್ಯವಾಗಿ ಗ್ರಾಮಗಳಲ್ಲಿ ಆಗಿಂದಾಗ್ಗೆ ಏರ್ಪಡಿಸಬೇಕು. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ಶಿವಶರಣರ ತತ್ವಗಳನ್ನು ಜನತೆಯಲ್ಲಿ ಪ್ರಸಾರ ಮಾಡಲೂ ಹೀಗೆ ಪ್ರಸಾರ ಮಾಡುವ ಕಾರ್ಯಗಳಿಗೆ ನನಗೆ ಶಕ್ಯವಿದ್ದಷ್ಟರ ವರೆಗೆ ಸಹಾಯ ಮಾಡಲೂ ಪ್ರಯತ್ನಿಸುವೆನು.

ವೀರಶೈವ ಮಹಾಪುರುಷರನ್ನು ಪೂಜ್ಯ ಭಾವದಿಂದ ಕಾಣುವದು.

(೨೦) ವೀರಶೈವ ಸಮಾಜದಲ್ಲಿ ಅನೇಕ ಮಹಾಪುರುಷರು ಆಗಿಹೋಗಿದ್ದಾರೆ. ಅವರಲ್ಲಿ ಅನೇಕರು ಧರ್ಮಪ್ರವರ್ತಕರೂ, ಶಿವಾನುಭವಿಗಳೂ, ರಾಜಕೀಯ ಪುರುಷರೂ, ಧಾರ್ಮಿಕ ಪುರುಷರೂ, ಗ್ರಂಥಕಾರರೂ, ವಚನಕಾರರೂ, ಸಾಧುಗಳೂ ಇದ್ದಾರೆ. ಅವರು ರೇವಣಸಿದ್ಧ, ಪ್ರಭುದೇವ, ದೇವರದಾಸಿಮಯ್ಯ. ಏಕೋರಾಮಾರಾಧ್ಯ, ಶಂಕರದಾಸಿಮಯ್ಯ, ಪಂಡಿತಾರಾಧ್ಯ, ಮರುಳಾರಾಧ್ಯ, ರುದ್ರಮುನಿ, ಬಸವ, ಮಹಾದೇವಿಯಕ್ಕ, ಸಿದ್ಧರಾಮ, ಮಡಿವಾಳ ಮಾಚಿದೇವ, ಜೇಡರ ಬಸವ, ಹಡಪದಪ್ಪಣ್ಣ, ಜನ್ನಯ್ಯ, ಮಧುವರಸ, ಕಕ್ಕಯ್ಯ. ಹರಳಯ್ಯ ಹರಿಹರ, ಕಾಳವಾಂಕ, ಸಾರಂಗದೇವ, ತೋಂಟದಾರ್ಯ, ಷಡಕ್ಷರದೇವ, ಕೆಳದಿಯ ಬಸವರಾಜ, ಅಂಬಿಗರ ಚೌಡಯ್ಯ, ಇವರೇ ಮೊದಲಾದವರು ಇದ್ದಾರೆ. ಆದರೆ ಈಚೆಗೆ ಕೆಲವರು ಅವರನ್ನು ಹೆಳಿಯುವ ಪ್ರವೃತ್ತಿಯನ್ನು ತೋರಿಸುವದುಂಟು. ಇದು ಬಹುಶಃ ಅವರ ಚರಿತ್ರೆಗಳನ್ನು ತಿಳಿಯದ್ದರ ಮೂಲಕ ಇರುತ್ತದೆ. ಆದರೆ ಶಿವಾನುಭವ ಸಂಘಗಳು ಇಂಥ ಸ್ಥಿತಿಯನ್ನು ದೂರವಾಡಲು ಅವಶ್ಯವಾಗಿ ಪ್ರಯತ್ನಿಸತಕ್ಕದ್ದು. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ವೀರಶೈವ ಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ ವಾಙ್ಮಯಾತ್ಮಕ ರಾಜಕೀಯ ಮೊದಲಾದ ಪ್ರಯತ್ನಗಳನ್ನು ಮಾಡಿಹೋದ ಮಹಾಪುರುಷರ ಚರಿತ್ರೆಗಳನ್ನು ತಿಳಿದುಕೊಂಡು ಅವರನ್ನು ಅತ್ಯಂತ ಪೂಜ್ಯ ಭಾವದಿಂದಲೂ ಆದರದಿಂದಲೂ ಕಾಣುವೆನು.

ಶಿವಾನುಭವ ಸಂಘಗಳು ತಮ್ಮ ಸಭಾಸದರ ಔದ್ಯೋಗಿಕ ಮತ್ತು ಆರ್ಥಿಕ ಸುಧಾರಣೆಗಳಿಗೋಸ್ಕರ ಪರಸ್ಪರ ಸಹಾಯ ಮಾಡುವದು.

(೨೧) ಶಿವಾನುಭವ ಸಂಘಗಳ ಸಭಾಸದರು ಕಾಯಕದ ದೃಷ್ಟಿಯಿಂದ ಉಚ್ಚ ಸ್ಥಿತಿಯನ್ನು ಹೊಂದಲು ಪ್ರಯತ್ನಿಸುವದು ಅವಶ್ಯವು. ಇದು ವೈಯ್ಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳಿಂದ ಜರಗತಕ್ಕದ್ದು. ಸಾಮೂಹಿಕ ಪ್ರಯತ್ನಗಳನ್ನು ಮಾಡುವಲ್ಲಿ ಸಭಾಸದರು ಯಾವಾಗಲೂ ಪರಸ್ಪರ ಸಹಾಯ ಮಾಡತಕ್ಕದ್ದು. ಸಂಘಗಳಾದರೂ ಈ ವಿಷಯಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟು ಅವಶ್ಯಕ ಕಾರ್ಯಕ್ರಮಗಳನ್ನು ಕೈಕೊಳ್ಳತಕ್ಕದ್ದು. ಹೀಗೆ ಪ್ರಯತ್ನಿಸುವಲ್ಲಿ ಎಲ್ಲ ಕಡೆಯ ಶಿವಾನುಭವ ಸಂಘಗಳು ಪರಸ್ಪರ ಸಹಾಯ ಮಾಡತಕ್ಕದ್ದು. ಒಂದು ವೇಳೆ ಇತರ ಸಮಾಜದವರೊಡನೆ ಅವು ಪ್ರಯತ್ನ ಮಾಡುವದು ಅವಶ್ಯವಿದ್ದಲ್ಲಿ ಹಾಗೆ ಅವು ಪ್ರಯತ್ನಿಸಲೂ ಬೇಕು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ಶಿವಾನುಭವ ಸಂಘಗಳು ತಮ್ಮ ಸಭಾಸದರ ಔದ್ಯೋಗಿಕ ಮತ್ತು ಆರ್ಥಿಕ ಸುಧಾರಣೆಗೋಸ್ಕರ ಕೈಕೊಂಡ ಪ್ರಯತ್ನಗಳಿಗೆ ನಾನು ಸಹಾಯ ಮಾಡುವೆನು.

ವೀರಶೈವ ವಾಙ್ಮಯ ಮತ್ತು ಕಲೆಗಳಿಗೆ ಸಹಾಯ ಮಾಡುವದು.

(೨೨) ಪ್ರತಿಯೊಬ್ಬನು ತನ್ನ ಮತ್ತು ತನ್ನ ಕುಟುಂಬದ ಸ.ಧಾರಣೆಗಾಗಿ ಅವಶ್ಯಕ ಖರ್ಚನ್ನು ಮಾಡಲೇ ಬೇಕಾಗುತ್ತದೆ. ಆದರೆ ಇಂಥ ಖರ್ಚಿನಲ್ಲಿ ತನ್ನ ಮತ್ತು ತನ್ನ ಸಮಾಜದ ಸಂಸ್ಕೃತಿ ಪೋಷಣೆಗಾಗಿ ಅಂದರೆ ವಾಙ್ಮಯ, ಕಲೆ, ಇವೇ ಮೊದಲಾದವುಗಳ ಅಭಿವೃದ್ಧಿಗಾಗಿ ತನ್ನ ಉತ್ಪನ್ನದ ಕೆಲವು ಭಾಗ ಹಣವನ್ನು ಕಾದಿಡುವದು ಬಹು ಅವಶ್ಯವು. ಈ ಹಣದ ಉಪಯೋಗವನ್ನು ಸಭಾಸದರು ತಮ್ಮ ಮನೆಯಲ್ಲಿ ಪಸ್ತಕಾಲಯ ಮೊದಲಾದವುಗಳನ್ನು ಸ್ಥಾಪಿಸುವದಕ್ಕೋಸ್ಕರ ವಿನಿಯೋಗಿಸತಕ್ಕದ್ದು. ಆದರೆ ಸಂಘದ ಸಭಾಸದರ ಆರ್ಥಿಕ ಮೊದಲಾದ ಪರಿಸ್ಥಿತಿಗೋಸ್ಕರ ಇಂಥ ಪ್ರಯತ್ನಗಳು ಅವರಿಗೆ ಶಕ್ಯವಿಲ್ಲದೆ ಹೋದರೆ ಅಂಥವರಿಗೋಸ್ಕರ ಪುಸ್ತಕಾಲಯ ಮೊದಲಾದ ಸಾಮಾನ್ಯ ಏರ್ಪಾಡುಗಳನ್ನು ಮಾಡಿ ಅವುಗಳಿಗೋಸ್ಕರ ಹೀಗೆ ಕಾದಿಟ್ಟ ಹಣವನ್ನು ವಿನಿಯೋಗಿಸತಕ್ಕದ್ದು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ನನ್ನ ವಾರ್ಷಿಕ ಉತ್ಪನ್ನದಲ್ಲಿ ೧೦೦ರಲ್ಲಿ ೨ಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ನನ್ನ ಕುಟುಂಬದ ಜನರಲ್ಲಿಲ್ಲ ವಾಙ್ಮಯ ಪ್ರೀತಿ ವತ್ತು ಕಲೆಗಳ ಜ್ಞಾನ, ಇವುಗಳನ್ನು ಹೆಚ್ಚಿಸುವದಕ್ಕೋಸ್ಕರ ವೆಚ್ಚ ಮಾಡುವೆನು. ಮತ್ತು ಇಂಥ ಕಾರ್ಯಗಳಿಗೆ ಸಹಾಯಕಾರಿಯಾಗುವಂಥ ಎಲ್ಲ ಪ್ರಯತ್ನಗಳಿಗೂ ನಾನು ಶಕ್ಯವಿದ್ದಷ್ಟು ಸಹಾಯ ಮಾಡುವೆನು.

ಶಿವಾನುಭವ ಸಂಘಗಳಿಗೆ ಸಹಾಯ ಮಾಡುವದು.

(೨೩) ಸಭಾಸದರು ಶಿವಾನುಭವ ಸಂಘಗಳ ಕಾರ್ಯಗಳಿಗಾಗಿ ತಮ್ಮ ಉತ್ಪನ್ನದಲ್ಲಿ ಕೆಲವು ಭಾಗ ಹಣವನ್ನು ಕೊಡುವದು ಅವಶ್ಯವು. ಆದ್ದರಿಂದ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ನನ್ನ ವಾರ್ಷಿಕ ಉತ್ಪನ್ನದಲ್ಲಿ ೧೦೦ರಲ್ಲಿ ೧ಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ಶಿವಾನುಭವ ಸಂಘಕ್ಕೆ ಅರ್ಪಿಸುವೆನು.

ಶಿವಾನುಭವ ಸಂಘಗಳ ಅಧಿಕಾರ ಸ್ಥಾನಗಳನ್ನು ದೊರಕಿಸಲು ವಿಶೇಷ ಪ್ರಯತ್ನ ಮಾಡದೆ ಇರುವದು.

(೨೪) ಶಿವಾನುಭವ ಸಂಘಗಳಿಗೋಸ್ಕರ ಅಧ್ಯಕ್ಷ, ಕಾರ್ಯದರ್ಶಿ, ಹೀಗೆ ಕೆಲವು ಕಾರ್ಯಕರ್ತರನ್ನು ನೇಮಿಸುವ ವಾಡಿಕೆಯು ಈಗ ಇರುತ್ತದೆ. ಕೆಲವು ದಿವಸಗಳ ತರುವಾಯ ಈ ಸಂಘಗಳ ಮಹತ್ವವು ಬೆಳೆದ ಹಾಗೆ ಇಂಥ ಅಧಿಕಾರ ಸ್ಥಾನಗಳನ್ನು ಪಡೆಯಲು ಮೇಲಾಟಗಳು ಸಭಾಸದರಲ್ಲಿ ನಡೆಯಬಹುದು. ಹೀಗಾಗುವದು ಬಹು ಅನಿಷ್ಟವು ಆದ್ದರಿಂದ ಈ ಸ್ಥಿತಿಯುಂಟಾಗದಂತೆ ಮೊದಲಿನಿಂದಲೇ ಸಭಾಸದರು ಎಚ್ಚರ ಪಡುವದು ಅವಶ್ಯವು. ಆದ್ದರಿಂದ ಈ ಕೆಳಗಿನ ಸೂಚನೆಯು ಮಾಡಲ್ಪಟ್ಟಿದೆ. ಅದು ಯಾವದೆಂದರೆ:—

ನಾನು ಶಿವಾನುಭವಸಂಘದ ಅಧಿಕಾರ ಸ್ಥಾನಗಳನ್ನು ಪಡೆಯಲು ಯಾವ ತರದ ವಿಶೇಷ ಪ್ರಯತ್ನಗಳನ್ನು ಮಾಡುವದಿಲ್ಲ. ನಾನು ಯೋಗ್ಯತೆಯನ್ನು ನೋಡಿಯೇ ನನ್ನ ಮತವನ್ನು ಕೊಡುವೆನು. ಮತ್ತು ಸಂಘದವರು ನನ್ನನ್ನು ಯಾವ ಸ್ಥಾನಕ್ಕೆ ನೇಮಿಸುತ್ತಾರೋ ಅದಕ್ಕೆ ನಾನು ಒಪ್ಪಿಗೆ ಕೊಟ್ಟು, ಆ ಸ್ಥಾನವನ್ನು ಸ್ವೀಕರಿಸಿ ಮನಃಪೂರ್ವಕವಾಗಿ ಆ ಕಾರ್ಯ ಮಾಡುವೆನು.

ಶಿವದೀಕ್ಷೆ ಅರ್ಥಾತ್ ಲಿಂಗಧಾರಣ.

(ಲೇಖಕ:— ಶ್ರೀಯುತ ಬಸಪ್ಪ ಚನ್ನಪ್ಪ ಪಟ್ಟೇದ)

ಈ ಶಿರೋಲೇಖದಲ್ಲಿ ಕಾಣಿಸಿದ ವಿಷಯದ ಮೇಲೆ ಶ್ರೀಕಾನಕಾನಹಳ್ಳಿ ಬಸಪ್ಪ ಬೆಂಗಳೂರನಗರ ಅವರು ಶಿವಾನುಭವದ ಎಪ್ರೀಲ್ (೧೯೪೧)ಸಂಚಿಕೆಯಲ್ಲಿ ನಾನು ಮಾರ್ಚ ತಿಂಗಳಲ್ಲಿ ಅದೇ ಪತ್ರಿಕೆಯೊಳಗೆ ಪ್ರಸಿದ್ಧಿಸಿದ ಲೇಖನವನ್ನು ಆಮೂಲಾಗ್ರ ವಿರೋಧಿಸಿರುವರು. ಶ್ರೀಮಾನ್ ಕೀರ್ತನಕೇಸರಿ ಹುಲಕುಂಟೆಮಠದ ಶಿವಮೂರ್ತಿಶಾಸ್ತ್ರಿಗಳ "ಲಿಂಗಧಾರಣ ಮತ್ತು ಶಿವದೀಕ್ಷೆ" ಎಂಬ ಲೇಖನಕ್ಕೆ ಪ್ರತಿಯಾಗಿ ಶ್ರೀ ಜೀರಗೆಯವರು ಶಿವಾನುಭವದ ಜನವರಿ ಸಂಚಿಕೆಯಲ್ಲಿ ಪ್ರತಿಪಾದಿಸಿದ್ದೇ ನ್ಯಾಯವೂ ಯುಕ್ತವೂ ಆಗಿರುವದೆಂಬುದೇ ಅವರ ಆಶಯ.

ನನ್ನ ಅಭಿಪ್ರಾಯವನ್ನು ತಳ್ಳಿ ಹಾಕಿದರೆಂದು ನನಗೇನು ವಿಷಾದವೆನಿಸುವದಿಲ್ಲ. ಹೇಗೂ ಸತ್ಯವಾದುದೇ ಹೊರಬೀಳಲೆಂಬುದೇ ನನ್ನ ಅಪೇಕ್ಷೆ. ತಪ್ಪು ಯಾರಲ್ಲಿ ಸಂಭವಿಸುವದಿಲ್ಲ? ಅದು ಎಲ್ಲರ ಪಾಲಿಗೂ ಹೆಚ್ಚಗಲಿ ಕಡಿಮೆಯಾಗಲಿ ಬಂದೇ ಬರುವದುಂಟು ಆದರೆ ಹೀಗಿದ್ದರೂ ತನ್ನದೇ ಸರಿ ಎಂದು ಯಾರೂ ದುರಾಗ್ರಹಕ್ಕೆ ಬೀಳಬಾರದು. ಸದಸದ್ವಿವೇಕವನ್ನು ಸ್ಮರಿಸಿ ತಮ್ಮ ತಪ್ಪಿದ್ದರೆ ಸರಳತನದಿಂದ ಒಡಂಬಡಬೇಕು. ಅದೇ ದೊಡ್ಡತನದ ಲಕ್ಷಣ! ತಪ್ಪು ಒಪ್ಪಿಕೊಂಡರೆ ಕಡಿಮೆ ತನ ಬರುತ್ತದೆಂದು ತಿಳಿಯುವದು ದಡ್ಡತನ. ಶಿವಾನುಭವದಲ್ಲಿ ಕಾಲಿಟ್ಟವರಿಗಂತೂ ಅದು ತೀರ ನಿಂದ್ಯ. ಈ ಮಾತು ಮೊದಲು ಎಲ್ಲರೂ ಲಕ್ಷಿಸಬೇಕು. ಸತ್ಯವನ್ನು ಪ್ರೀತಿಸಬೇಕು. ಸಂಘಟನೆಯನ್ನು ಹೊಂದಬೇಕು.

೧ ಜನ್ಮಲಿಂಗಧಾರಣದ ನಂತರ ಶಿವದೀಕ್ಷೆಯು ಅವಶ್ಯವಾದುದೆಂಬುದಕ್ಕೆ ನಾನು ಹಿಂದಿನ ಲೇಖನದಲ್ಲಿ (೧) ಶೀಲಗಳ ಆಧಾರ (೨) ಈಗ ಬಳಕೆಯಲ್ಲಿರುವ ದಶಕರ್ಮ ಪದ್ಧತಿ, ಸ್ವಯಂಪುರೋಹಿತ ಎಂಬ ಸಂಸ್ಕಾರಬೋಧಕ ಪುಸ್ತಕಗಳ ಆಧಾರ (೩) ಮಾಹೇಶ್ವರರೆಂದಿನಿಸಿಕೊಳ್ಳುವವರಲ್ಲಿ ಜನ್ಮಲಿಂಗ ಧಾರಣವಲ್ಲದೆ ಶಿವದೀಕ್ಷೆಯೂ ಬಳಕೆಯಲ್ಲಿರುವದೆಂಬದರ ಆಧಾರಗಳನ್ನು ಮುಂದೆ ಮಾಡಿದ್ದು ಈ ವಿಚಾರದ

ಬಗ್ಗೆ ಕೇವಲ ಮೌನವನ್ನು ಧರಿಸಿ, ಬದಿಗಿರಿಸಿ, ಶ್ರೀ ಪಟ್ಟೇದ ಅವರು "ಭಕ್ತರು ಬೇರೆ, ಮಾಹೇಶ್ವರರು ಬೇರೆ, ಭಕ್ತರಿಗೆ ಲಿಂಗಧಾರಣೆ ಮತ್ತು ಮಾಹೇಶ್ವರರಿಗೆ ಶಿವದೀಕ್ಷೆ" ಎಂಬ ವಿಚಿತ್ರ ವಿಂಗಡಿಕೆಯನ್ನು ಮಾಡಿದ್ದಾರೆ, ಎಂಬ ವ್ಯರ್ಥವಾದ ಹುಯಿಲು ಶ್ರೀಮಾನ್ನರು ಎಬ್ಬಿಸಿದ್ದಾರೆ. ಹೀಗೆ ವಿಂಗಡಿಸುವವನು ನಾನಲ್ಲ ಎಂಬುದನ್ನು ಅದೇ ಎಪ್ರೀಲ ಸಂಚಿಕೆಯೊಳಗಿನ ನನ್ನ "ಲಿಂಗಾಯತ ಸಮಾಜ ರಚನೆ" ಎಂಬ ಲೇಖನವು ತಾನೇ ಹೇಳುತ್ತದೆ. ಭಕ್ತ, ಮಹೇಶ್ವರ ಇವು ನನ್ನ ಶಬ್ದಗಳಲ್ಲ. ಜನ್ಮಸಿದ್ಧ ಮೇಲು ಕೀಳುಗಳನ್ನು ಸ್ಥಾಪಿಸಿ ತಮ್ಮ ಶ್ರೇಷ್ಠತ್ವವನ್ನು ಬದುಕಿಸಿಕೊಳ್ಳಬೇಕೆಂದು ಯತ್ನಿಸುವ ಸ್ವಾರ್ಥಿ ಜನರು ರೂಢಿಯಲ್ಲಿ ಉಪಯೋಗಿಸುತ್ತಿರುವ ಶಬ್ದಗಳವು. ನಾನಾದರೂ ವೀರಶೈವರೆಲ್ಲರೂ ಸಮಾನಸ್ಥರೆಂದರೆನ್ನುವಪನೇ. ಹೀಗೆ ಅವರು ಒಂದು ಇದ್ದೂ ಇದ್ದು, ಒಬ್ಬರಿಗೆ ಜನ್ಮಲಿಂಗಧಾರಣವಷ್ಟೇ ಏಕೆ? ಇನ್ನೊಬ್ಬರಿಗೆ ಜನ್ಮಲಿಂಗ ಧಾರಣವಲ್ಲದೆ ಮತ್ತೆ ಶಿವದೀಕ್ಷೆ ಏಕೆ, ಎಂಬುದೇ ನನ್ನ ಕೇಳಿಕೆ. ಒಬ್ಬಂಗೆ ಶಿವದೀಕ್ಷೆಯ ಆವಶ್ಯಕತೆಯಿದ್ದುದಾದರೆ, ಇನ್ನೊಬ್ಬರಿಗೂ ಅದು ಬೇಕೇ ಬೇಕು, ಎಂದು ಹೇಳುವದೇ ನನ್ನ ಮುಖ್ಯೋದ್ದೇಶ. ಇದನ್ನು ಶ್ರೀ ಕಾನಕಾನಹಳ್ಳಿಯವರು ಹಾರಿಸಿಯೇ ಬಿಟ್ಟುದು ಸರಿಯಲ್ಲ.

೨ ಕೂಸಿಗೆ ಗರ್ಭದಲ್ಲಿರುವಾಗಲೇ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸ್ಕಾರ ಹ್ಯೇಯ ಸ್ಥಲಗಳ ಅರಿವು ಆಗಿರುತ್ತದೆಂದು ಶ್ರೀಮಾನರು ಬರೆದಿರುತ್ತಾರೆ. ಪಿಂಡಕ್ಕೆ ಹಿಂದಣ ಜನ್ಮದ ಸ್ಮರಣೆಯು ಬಂದು "ಈಗ ಈ ಪ್ರಪಂಚಕ್ಕೆ ಏಕೆ ಇಳಿದು ಬಂದೆನಪ್ಪಾ" ಎಂಬ ಸಂಸ್ಕಾರ ಹ್ಯೇಯ ಉಂಟಾಗಿರುತ್ತದೆಂದು ಹೇಳುತ್ತಾರೆ. (ಅದರೆ ಪ್ರಸೂತವಾಯುವಿನ ಪ್ರಬಲ ಹೊಡತದಿಂದ ಅದೆಲ್ಲ ಆಗಲೇ ಮಾಯವಾಗಿ ಬಿಡುವುದೆಂಬುದನ್ನು ಮಾತ್ರ ಅವರು ಹೇಳಿರುವದಿಲ್ಲ) ಎಂಟನೆಯ ತಿಂಗಳಲ್ಲಿ ತಾಯಿಯ ಮುಖಾಂತರವಾಗಿ ಗುರುಕರುಣ, ಲಿಂಗಧಾರಣಗಳೂ ಒದಗುತ್ತವೆ. ಹೀಗೆ ಐದು ಸ್ಥಲಗಳು ಗರ್ಭದಲ್ಲಿರುವಾಗಲೇ ಅದಕ್ಕೆ ಸಂಭವಿಸಿದ ಮೇಲೆ ಅದರ ಸುಪರಿಣಾಮವು ಮುಂದುವರಿಯುತ್ತ ಉಳಿದ ತೊಂಬತ್ತಾರು ಸ್ಥಳಗಳನ್ನು ಕೂಡ ಅಲ್ಲೇ ದಾಟಿ ಇಹಲೋಕಕ್ಕೆ ಬರುವುದೆಂದು, ಅದೇಕೆ ಊಹಿಸಬಾರದು? ಹಾಗೆ ಒಮ್ಮೆ ಊಹಿಸಿ ಬಿಟ್ಟರೆ ಮುಂದೆ ಈ ಲೋಕದಲ್ಲಿ ಮನಬಂದಂತೆ ಹರಿದಾಡಲಿಕ್ಕೆ ಅದಾವ ತೊಂದರೆಯೂ ಉಳಿಯುತ್ತಿದ್ದಿಲ್ಲವಲ್ಲ!

೩ "ಜನ್ಮಲಿಂಗಧಾರಣೆಗೆ ಸಾಮಾನ್ಯ ಮಹೇಶ್ವರರೇ ಸಾಕು ಆದರೆ ಶಿವದೀಕ್ಷೆಗೆ ವಿಶೇಷರೆಂದೆನಿಸುವ ಪಟ್ಟಚಂದ್ರಾಧಿಕಾರಿಗಳಲ್ಲದೆ ಸಾಗದು." ಎಂದು ಹಿಂದಿನ ಲೇಖದಲ್ಲಿ ನಾನು ಬರೆದುದು ನನ್ನ ಹೊಸ ಶೋಧನೇನೂ ಅಲ್ಲ. ಈಗ ವ್ಯವಹಾರದಲ್ಲಿ ರೂಢವಿರುವದನ್ನೇ ಬರೆದಿರುವೆನೆಂಬುದನ್ನು ಲಕ್ಷಿಸಬೇಕು. ಸಾಮಾನ್ಯರು ವಿಶೇಷರು ಯಾರು? ಎಂಬದನ್ನು ನನ್ನ "ಲಿಂಗಾಯತ ಸಮಾಜ ರಚನೆ"ಯ ಲೇಖದಲ್ಲಿ ನೋಡಬಹುದು. ಲಿಂಗಧಾರಿಗಳ ಕೂಟ್ಟಿಯಲ್ಲಿ ಹುಟ್ಟಿದ ಕೂಸಿಗೆ ಜನ್ಮಲಿಂಗಧಾರಣ, ಶಿವದೀಕ್ಷೆಗಳೆರಡೂ ಬೇಕು. ಆಲಿಂಗಿಗಳಿಗೆ ಶಿವದೀಕ್ಷೆಯೊಂದೇ ಸಾಕು. ಅದರಲ್ಲಿಯೇ ಎರಡೂ ಬರುತ್ತವೆ. ಜನ್ಮಲಿಂಗ ಧಾರಣೆಯಲ್ಲಿ ಶಿವದೀಕ್ಷೆಯ ಪ್ರಯೋಜಕತ್ವವು ದೊರೆಯುವದಿಲ್ಲಿಂದೂ ಅವೆಂಡರಲ್ಲಿಯೂ ತಾರತಮ್ಯವಿರುವುದೆಂದೂ ನನ್ನ ಸಾಧಾರಗ್ರಹಿಕೆ ಇರುವದರಿಂದ, ಆ ಒಗ್ಗೆ ಹಿಂದಿನ ಲೇಖದಲ್ಲಿ ವಿಸ್ತಾರವಾಗಿ ಬರೆದಿರುವೆನು.

೪ "ಲಿಂಗ ಮುಟ್ಟಲೊಡನೆ ಶಿವಕುಲವಪ್ಪದು ತಪ್ಪದು" ಎಂದು ಶರಣರು ಹೇಳಿದ್ದು ಸತ್ಯವು ಆದರೆ ಇದು ಜನ್ಮಲಿಂಗಧಾರಣೆಯಲ್ಲಿ ಶಿವದೀಕ್ಷೆಯೇ! ಯಾಕಂದರೆ ಸಿದ್ಧಾಂತ ಶಿಖಾಮಣಿಯ ಗುರುಕಾರುಣ್ಯ ಸ್ಥಲದೊಳಗೆ—

ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿ ಭಯಾನ್ವಿತಃ।
ಷಣ್ಮಾಸಾನ್ವತ್ಸರಂ ವಾಪಿ ಯಾವದೇಷಃ ಪ್ರಸೀದತಿ ॥

ಪ್ರಸನ್ನಂ ಪರಮಾಚಾರ್ಯಂ.....ಪ್ರಾರ್ಥಯೇತ್.....ರಕ್ಷಮಾಂ ಭವರೋಗಿಣಂ। ಎಂದು ಉಲ್ಲೇಖಿಸಿದ್ದಾರೆ. ಹೀಗೆ ಬೇಡಿಕೊಂಡ ಶಿಷ್ಯನ ಶಕ್ತಿಪಾತ ಲಕ್ಷಣವನ್ನು ಗುರುವು ಒಳಿತಾಗಿ ಪರೀಕ್ಷಿಸಿ ನೋಡಿ ಕೃಪೆ ಮಾಡುವನು, ಎಂದು ಹೇಳಿರುತ್ತದೆ. ಅದಕಾರಣ ಅವನು ಗರ್ಭಸ್ಥ ಶಿಶುವಲ್ಲ ವಯಸ್ಕನಾದವನೇ ಇರಬೇಕೆಂಬದು ಸ್ಪಷ್ಟವು. ಈ ರೀತಿ ಗುರು ಕರುಣೆಯಿಂದ ಲಿಂಗವಡೆದು ಅದು ಮುಟ್ಟಲೊಡನೆ (ಅಂತರ್ಬಾಹ್ಯದಲ್ಲಿ ವೇದ್ಯವಾದಾಗ) ಶಿವಕುಲವಪ್ಪದು ತಪ್ಪದು; ಎಂಬುದನ್ನೇ ಮೇಲಿನ ವಚನದಲ್ಲಿ ಘೋಷಿಸಲಾಗಿದೆ. ಬದನೆಕಾಯಿ ಧರಿಸಿದ ಭವಿ ಜನನ ಕಥೆಯಾದರೂ ಅಕ್ಷರಶಃ ಇದನ್ನೇ ಅನುಸರಿಸುತ್ತದೆ.

೫ "ಈ ಪಟ್ಟೇದವರು ಹೇಳುವಂತೆ ತಂದೆ ತಾಯಿಗಳು ಲಿಂಗ ಮಾರ್ಗವನ್ನು ಹಿಡಿಸುವವರಲ್ಲದಿದ್ದರೆ, ಅವರು ಲಿಂಗವಂತ ಪಥಕ್ಕೇ ಸಲ್ಲರು. ಅವರು ಲಿಂಗಾಯತರೇ ಅಲ್ಲ. ಅವರ ಮಾತು ನವಗೆ ಬೇಡವೇ ಬೇಡ" ಎಂದು ಬರೆದರೇನು ತೀರಲಿಲ್ಲ.. ಅಂತಹ ಜನ್ಮಲಿಂಗಧಾರಿ ಬಹುಜನ ಸಮಾಜವು ಇತ್ತಕಡೆಗೆ ಅವರಂತೆ ಅನ್ಯತ್ರಸಹ ಇದ್ದುದೇನೂ ಸುಳ್ಳಾಗಲಾರದು. ಅವರು ಜನ್ಮಲಿಂಗಧಾರಣವಾಗಿಯೂ ಇಂತಹ ಹೀನ ಸ್ಥಿತಿಯಲ್ಲಿ ಬಾಳಲಿಕ್ಕೆ ಕಾರಣವೇನೆಂಬುದನ್ನು ಲಕ್ಷಿಸುವದು ಉಚಿತವಲ್ಲವೇ? ಪಯಸ್ಕರಾದ ಮೇಲೆ ಶಿವದೀಕ್ಷೆ ಪಡೆಯದಿದ್ದುದರಿಂದಲೇ ಅವರ ಗತಿ ಹೀಗಾಗಿದೆ. ಇವರನ್ನಂತೂ ಬಿಡಿರಿ! ಹಾಯಸ್ಕೂಲು ಕಾಲೇಜುಗಳಲ್ಲಿ ಓದುತ್ತಿರುವ ಅನೇಕ ಪ್ರಬುದ್ಧರು, ಈಗ ಇಷ್ಟಲಿಂಗ ವಿಭೂತಿ ಮೊದಲಾದವನ್ನು ತಿರಸ್ಕರಿಸಿ ಅಂಗದಿಂದ ತೆಗೆದು ಹಾಕಿ ಮನಬಂದಂತೆ ನಡೆಯುತ್ತಿರುವರು. ಇದರ ಕಾರಣವೇನು? ಶಿವದೀಕ್ಷೆಯಿಲ್ಲದುದರ ದುಷ್ಪರಿಣಾಮವೇ ಅಲ್ಲವೇನಿದು? ಇಷ್ಟೊಂದು ಅಧೋಗತಿಗೆ ಸುಶಿಕ್ಷಿತರೂ ಅಶಿಕ್ಷಿತರೂ ಕೂಡೇ ಇಳಿಯುತ್ತಿರುವಾಗ ಕಣ್ಣಾರೆ ಕಂಡು ನೋಡದೆ, ಮತ್ತೂ ಶಿವದೀಕ್ಷೆಯನ್ನು ಅಲ್ಲಗಳೆದು ಜನ್ಮಲಿಂಗಧಾರಣವೊಂದನ್ನೇ ಎತ್ತಿ ಹಿಡಿದು, ಅದೊಂದರಿಂದಲೇ ಸಂತುಷ್ಟರಾಗಿ ಧನ್ಯತೆ ಪಡೆಯುವಂತಹ ವಿಚಾರವಂತರಿಗೆ, ಬೇರೆ ಅರಿಯದವರೇನು ಹೇಳುವದು?

೬ "ನೀನು ಧರಿಸಿದ ಲಿಂಗವು ದೇವರು. ಎಲ್ಲರೂ ಅವನಿಂದಲೇ ಹುಟ್ಟಿದ್ದಾರೆ. ನಮಗೆ ಸುಖದುಃಖವೆಲ್ಲವೂ ಅವನಿಂದಲೇ ಪ್ರಾಪ್ತಿಸುತ್ತವೆ; ಆದುದರಿಂದ ಅವನನ್ನು ಪೂಜಿಸಬೇಕು." ಈ ವಾಕ್ಯಗಳು ಹುಚ್ಚರ ಉಚ್ಚಾರಗಳೆಂದು ಶ್ರೀಮಾನ್ ಕಾನಕಾನಹಳ್ಳಿಯವರು ಭಾವಿಸಿದ್ದಾರೆ. ಅವರು ಕೆಳಗಿನ ವಿವರಣೆಯನ್ನು ಗಮನಿಸುವರೆಂದು ನಂಬಿರುವೆನು.

(ಅ) ಮಡಿಕೆಗೆ ಮಣ್ಣೇ ಪಿಂಡವು. (ಮೂಲ ಕಾರಣವು). ಆಭರಣಗಳಿಗೆ ಹೊನ್ನೇ ಪಿಂಡವು. ಅದರಂತೆ ಜಗತ್ತಿಗೆ ಅದರಲ್ಲಿರುವ ಸಕಲ ವಸ್ತುಗಳಿಗೆ ಅಂತರ್ಬಾಹ್ಯದಲ್ಲಿಯೂ ಪರಮಾತ್ಮನೇ - ದೇವರೇ - ಲಿಂಗವೇ ಪಿಂಡವು. "ಅಣೋರಣೀಯಾನ್ ಮಹತೋ ಮಹೀಯಾನ್" ಎಂಬುದು ಅದನ್ನೇ ಸಾರುತ್ತದೆ. ಮೊದಲು ಏನೂ ಅರಿಯದ ಬಾಲ

ಕಂಗೆ "ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು....." ಇತ್ಯಾದಿ, ಸೂಕ್ಷ್ಮನಿರಾಕಾರ ಸ್ವರೂಪ ಹೇಳುವದು ಸಾಧ್ಯವೇ? ಅದು ತಮ್ಮಂತಹ ಬಲಿತ ಜ್ಞಾನಿಗಳಿಗೆ! ಆ ಮಗುವಿಗೆ ಮೊದಲು ಆಸ್ತಿಕ್ಯ ಬುದ್ಧಿಯನ್ನು - ದೇವರ ಕಲ್ಪನೆಯನ್ನು - ಹುಟ್ಟಿಸಿರಿ, ಅವೇ ಜಗತ್ತಿನ ಆದಿಕಾರಣ (ಮೂಲ ಪಿಂಡ)ವೆಂದು ಹೇಳಲಿಕ್ಕೆ ಅವಕಾಶ ಮಾಡಿಕೊಟ್ಟಂತಾಗುವದಿಲ್ಲವೇ? ಲಿಂಗವು ದೇವರು ಎಂಬ ಭಾವನೆಯು ಅವನ್ನಲ್ಲಿ ಒಡಮೂಡಿದರೆ, ಅದು ಪಿಂಡಸ್ಥಲದ ಬೀಜರೂಪ ಭಾವನೆಯಾಗಲಿಲ್ಲವೇ? ಇದು ಯಾವ ಗ್ರಂಥದಲ್ಲಿ ಇಲ್ಲ, ಹೇಳಿರಿ ನೋಡುವಾ?

(ಬ) ಎಲ್ಲರೂ ಅವನಿಂದಲೇ ಹುಟ್ಟಿದ್ದಾರೆ. ನಮಗೆ ತೋರುವ ಜಗವು (ನಾವು ಸಹ)ಲಿಂಗದಿಂದಲೇ ಉದ್ಭವಿಸಿದ್ದೇವೆ. ಲಿಂಗದ ಹೊರತು ವಿಶ್ವದಲ್ಲಿ ಬೇರೊಂದಿಲ್ಲೆಂದು ತಿಳಿದರೆ, ಪಿಂಡಜ್ಞಾನವಾಗಲಿಲ್ಲವೇ? "ಕಾಳಿಯ ಕಂಕಾಳದಿಂದ ಮುನ್ನ" ಇದ್ದುದು ಲಿಂಗವೇ ಅಲ್ಲವೇ? ಮತ್ತೇನಾದರೂ ಉಂಟೋ! ಕಾಳಿಯ ಕಂಕಾಳವೂ ತೋರುವ ತೋರಿಕೆಯೆಲ್ಲವೂ ಲಿಂಗವೇ ಆಹುದೆಂಬುದನ್ನು ಅಂಗೀಕರಿಸುವದು ಬಿಟ್ಟ, ಪಿಂಡದ ನಿಜಜ್ಞಾನವು ಮತ್ತೆ ಬೇರೆ ಉಳಿಯಿತೇ? "ಲಿಂಗರೂಪಂ ಜಗತ್ಸರ್ವಂ" ಎಂಬುದೇನು ಹೇಳುತ್ತಿದೆ ವಿಚಾರಿಸಿರುವಿರಾ?

(ಕ) ನಮಗಾಗುವ ಸುಖದುಃಖಗಳೆಲ್ಲ ಅವನಿಂದಲೇ ಆಗುತ್ತವೆ. ಆದುದರಿಂದ ಅವನನ್ನು ಪೂಜಿಸಬೇಕು. ಇಲ್ಲಿ ಅವನಿಂದಲೇ ಅಂದರೆ ಲಿಂಗಸ್ವರೂಪದ ಸಟೆವಟೆ ತಿಳುವಳಿಕೆಯಿಂದಲೇ ಎಂದರಿಯಬೇಕು. ಅವನನ್ನು ಪೂಜಿಸಬೇಕು. ಅಂದರೆ ಲಿಂಗದ ನಿಜಸ್ವರೂಪದ ಜ್ಞಾನವನ್ನು ಪಡೆಯಬೇಕು ಎಂಬ ಭಾವ ಈ ವಾಕ್ಯದಲ್ಲಿ ಅದಾವ ದೋಷವದೆ? ನಮ್ಮ ಕರ್ಮಗಳು ಲಿಂಗಜ್ಞಾನದ ಅಭಾವದ ಮೂಲಕವಾಗಿಯೇ ಅಲ್ಲದ ಮಾರ್ಗದಲ್ಲಿ ನಡೆಯುವದರಿಂದ ದುಃಖವೂ, ಲಿಂಗದ ಸರಿಯಾದ ಮಾರ್ಗದಲ್ಲಿ ಸಾಗುವದರಿಂದ ಸುಖವೂ ಪ್ರಾಪ್ತವಾಗುವದೆಂದು ಹೇಳುವದು ಪ್ರಮಾದವೇ? ಅಜ್ಞಾನದಿಂದ ಸಂಸಾರವನ್ನು (ವಿಷಯಗಳನ್ನು) ಅತಿಕ್ರಮಿಸಿ ಹಿಂಬಾಲಿಸುವದೇ ನಮ್ಮ ದುಃಖಕ್ಕೆ ಕಾರಣವೆಂದು ತಿಳಿದರೆ, ಅದರಲ್ಲಿ ಹ್ಯೇಯ ಬುದ್ಧಿಯುಂಟಾಗುವದಿಲ್ಲವೆ? ಎಳೆಯರ ಬುದ್ಧಿಯ ಅಕಲನ ಮಾಡಿ ಅದಕ್ಕೆ ಅನುರೂಪವಾಗಿಯೇ

ಅವರಿಗೆ ಹೇಳುತ್ತ ಹೋಗುವದು ಸಯುಕ್ತಿಕವಲ್ಲವೇ? ತಮ್ಮಂತಹ ಬಲ್ಲವರು ಹೀಗೆ ಅರಿಯದವರಂತೆ ಮಾಡುವದು ಸರಿಯಲ್ಲ. ತಾವು ಸಂಸಾರ ಹ್ಯೇಯವನ್ನು ಕುರಿತು ಸವಿಸ್ತಾರವಾಗಿ ನಿರೂಪಿಸಿರುವದು ಪ್ರೌಢ ಬುದ್ಧಿಯವರಿಗೆ ಸರಿಹೋಗುವ ವಿಷಯ. ಮೊದಲು ಬಾಲಕರ ಮನದಲ್ಲಿ ಬೀಜರೂಪವಿಂದಲೇ ಬಿತ್ತಬೇಕಾಗುವದೆಂಬುದನ್ನು ಲಕ್ಷಿಸಿದರೆ, ನಾನು ಹೇಳಿದ್ದರಲ್ಲಿ ತುಸುವಾದರೂ ಅರ್ಥವುಂಟೆಂಬುದು ತಮಗೂ ಹೊಳೆದೀತು.

೭ "ಯೋಗ್ಯ ಗುರುವನ್ನೇ ಹಿಂಬಾಲಿಸುವದು ವಿಹಿತ" ಎಂದು ನಾನೇ ಅನ್ನುವದಿಲ್ಲ. ಕೆಳಗಿನ ಚಂದಿಮರಸನ ವಚನ ಹಾಗು ಸರ್ವಜ್ಞನ ವಚನಗಳನ್ನು ನೋಡಿರಿ.

(ಅ) ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹ ಮಾಡಿದ ಡೆನರ್ಪುದೋ? ಅಂಧಕನ ಕೈಯ ಅಂಧಕ ಹಿಡಿದಂತೆ; ಮುಂದೇನಪ್ಪುದೋ ಹೇಳು ಮರುಳೇ. ಬಹು ಮಾತಿನ ರಂಜನೆಯ ಮಾಡದಿರು. ನಿಮ್ಮುಲಿಗೆಯ ಜೆನ್ನರಾಮನೊಬ್ಬನೇ ಹುಸಿಯ ಹಸರದವನಲ್ಲ.

(ಬ) ಬಳಿಗುರುಡರ ಕೂಡಿ ಹಳ್ಳವನು ಬಿದ್ದಂತೆ।
ಒಳ್ಳೆಯಾ ಗುರುವಿನುಪದೇಶವಿಲ್ಲದಿರೆ।
ಎಲ್ಲೆಯದು ಮುಕ್ತಿ. —ಸರ್ವಜ್ಞ॥

೮ "ಲಿಂಗಧಾರಣವು ಲಿಂಗಮುದ್ರೆಯೆಂದು ನಾನು .....ಕೇಳಿಲ್ಲ" ನೀವು ಕೇಳಿಲಿಕ್ಕಿಲ್ಲ ಸರಿ! ಆದರೂ ಲಿಂಗ ಹಾಗು ಮುದ್ರೆ ಎಂಬೆರಡೂ ಶಬ್ದಗಳು ಸಮಾನಾರ್ಥದವೆಂಬುದೇನೂ ಸುಳ್ಳಲ್ಲ. ಪರಮಾತ್ಮನ ಚಿಹ್ನವೇ ಲಿಂಗ. ಲಿಂಗದ ಚಿಹ್ನವೇ ಮುದ್ರೆ. ಆದುದರಿಂದ ಲಿಂಗ,ಮುದ್ರೆ, ಲಿಂಗಮುದ್ರೆ ಇವುಗಳೆಲ್ಲ ಸಾಮಾನ್ಯವಾಗಿ ಒಂದೇ. ಮನುಷ್ಯನು ಪರಮಾತ್ಮನ ಸ್ವರೂಪವರಿತು ತದನುಸಾರ ಆಚರಿಸಿದರೆ, ಅವನು ಧರಿಸಿದ್ದು ಲಿಂಗವಾಗುವದು. ಪರಮಾತ್ಮನ ಸ್ವರೂಪಜ್ಞಾನವಿಲ್ಲದೆ ಅಜ್ಞಾನಸ್ಥಿತಿಯಲ್ಲಿ ಮನಸೋಕ್ತ ವರ್ತಿಸಿದರೆ, ಅವನು ಪಶುಸಮಾನನಾಗಿ ಆ ಧರಿಸಿದ ಲಿಂಗವೇ ಲಿಂಗಮುದ್ರೆಯಾಗುವದು. ಜಿಜ್ಞಾಸುತನದಲ್ಲಿ ಜ್ಞಾನಹೀನನಾದ ಬಾಲಕನು ಪಶುವೃತ್ತಿಯವನಾದುದರಿಂದ ಅವನು ಧರಿಸಿದ್ದು ಲಿಂಗಮುದ್ರೆಯೆಂಬುದು

ಸೂರ್ಯ ಪ್ರಕಾಶದಷ್ಟು ಸ್ವಚ್ಛವಾದದ್ದು. ಹೊಂದುವವರೆಗೆ ಅವನು ಲಿಂಗದೇವನ ಹೆಸರಿನಿಂದ ನಿಶ್ಚಯಿಸಿದ ಕನ್ಯೆಯೇ ಸರಿ. ಸತಿ ಸ್ವರೂಪಕ್ಕೆ ಎಂದೂ ಬರಲಾರನು.

೯ "ಮಗುವಿಗೆ ಚಿಕ್ಕ ವಯಸ್ಸಿನಲ್ಲಿ ಲಿಂಗಧಾರಣ ಮಾಡಿ ಅದು ಲಿಂಗವಂತ ತಾಯಿತಂದೆ ಬಂಧುಗಳ ಜೊತೆಯಲ್ಲಿ ಅನುಕರಣಮಾಡಿ, ಒಳ್ಳೆ ಶಿವಭಕ್ತಿ ಸಂಪನ್ನನೂ, ಪಟ್ಟಸ್ಥಲ ಆಚಾರಸ್ಥನೂ ಆಗುವನೆಂಬದರಲ್ಲಿ ಯಾವ ಸಂದೇಹವೂ ಇಲ್ಲ. ಈ ವಿಚಾರದ ಶ್ರೀಮಾನ್ ಜೀರಗೆಯವರು ಹೇಳಿರುವದು ಸತ್ಯವಾದುದು." ಎಂದು ಶ್ರೀ ಕಾನಕಾನಹಳ್ಳಿಯವರು ಬರೆದಿರುವರು. ಇಲ್ಲಿ ಮಾತ್ರ ಮಗುವಿಗೆ ಮನೆಯವರ ಸಹವಾಸದಿಂದ ಅನುಕರಣ ಮಾಡಿ ಒಳ್ಳೇ ಭಕ್ತಿ ಸಂಪನ್ನನೂ..... ಇತ್ಯಾದಿ ಮೇಲೆ ಬರೆದಂತೆ ಆಗುವನೆಂಬದರಲ್ಲಿ ಅವರಿಗೆ ಪ್ರಾಮಾಣಿಕ ಬುದ್ಧಿಯಿಂದ ತೋರುತ್ತದೆ. ಆದರೆ ಅದನ್ನೇ ನಾನು "ಹುಡುಗನ ಅನುಭವ" ಎಂದು ಬರೆದದ್ದನ್ನು "ಹುಡುಗರ ಜೊತೆಗೆ ಗೋಲಿ, ಗಜ್ಜಗ ಆಡುವದು..... ಇತ್ಯಾದಿ ರೀತಿಯಿಂದ ಮನದಣಿವಂತೆ ಜೇಷ್ಟಿಸುತ್ತಾರೆ. ಇದೊಂದು ಸೌಜನ್ಯದ ಮಾದರಿಯೇ!

೧೦ "ಅನುಭವಿಗಳಾದ ಮತಾಧಿಕಾರಿಗಳು ಸಿಗದಿದ್ದಲ್ಲಿ ತಮ್ಮಲ್ಲೇ ಅನುಭವಿಗಳಾದವರನ್ನು ಕರಕೊಂಡು ಕಾರ್ಯಗಳನ್ನು ನಡೆಸುವದು ಜಾಣತನವಲ್ಲವೇ?" ಎಂದು ಶ್ರೀ ಕಾನಕಾನಹಳ್ಳಿಯವರು ಬರೆದುದು ಬಹು ಯೋಗ್ಯವಾದುದೂ ಸಶಾಸ್ತ್ರವೂ ಸರಿ. ಆದರೆ ರೂಢಿಯು ಹಾಗಿಲ್ಲ. ಎಂತಹವರಿದ್ದರೂ ಅಯ್ಯನವರೆಂದೆನ್ನಿಸಿಕೊಳ್ಳುವ ಜಾತಿಯವರೇ ಆ ಕಾರ್ಯಗಳನ್ನು ಮಾಡುವದು ತಕ್ಕುದೆಂದು ಜನರ ಪರಂಪರಾಗತ ತಿಳವಳಿಕೆ. ಇದಕ್ಕೇನು ಗತಿ? ರೂಢಿತಪ್ಪಿಸಿ ನಡೆಯುವದು ಒಳ್ಳೊಳ್ಳೆ ಬಲ್ಲಿದರಿಂಗೇ ಅಸಾಧ್ಯವಾಗಿರುವಲ್ಲಿ ಸಾಮಾನ್ಯ ಜನತೆಗೆ ಅದು ಒಗ್ಗಬಹುದೇ ಎಂಬದೊಂದು ಕಠಿಣ ಸಮಸ್ಯೆಯಾಗಿದೆ. ಈಗ ಮಾಹೇಶ್ವರರೆಂದು ಹೇಳಿಕೊಳ್ಳುವ ಅಯ್ಯಗಳೂ ಅವರ ಮುಗದಾಣದಲ್ಲಿ ಸಿಕ್ಕ ಇತರರೂ ಒಪ್ಪಿಸುವುದಿರಬಹುದೇ?

೧೧ "ಲಿಂಗಧಾರಣ ಮಾಡುವವನು ದಡ್ಡನಿರಲಿ, ಜಾಣನಿರಲಿ, ಮೇಲ್ಕಂಡ ಕಾರ್ಯಗಳು ಸಾಂಗೋಪಾಂಗವಾಗಿ ನಡದೇ ನಡೆಯು

ಬೇಕು"— ಹೀಗೆನ್ನುವ ನಿಮ್ಮ ಮಾತು ಕೇಳಬೇಕೋ? "ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹ ಮಾಡಿದಡೆ..." ಎಂಬ ಚಂದಿಮರಸರೇ ಮೊದಲಾದ ಪೂರ್ವಿಗರ ಮಾತು ಕೇಳಬೇಕೋ? ನೀವು ಹೇಳಿದಂತೆ ಮಾಡಿ ಅಷ್ಟಕ್ಕೆ ಬಿಟ್ಟರೆ, ಅದರ ಸುಪರಿಣಾಮವು ಸಮಾಜದಲ್ಲಿ ತೋರುವದಿಲ್ಲೆಂದಮೇಲೆ ಅದನ್ನು ಹೇಗೆ ಅವಲಂಬಿಸಬೇಕು?

೧೨. "ಕೂಸಿನ ತಲೆಯ ಮೇಲೆ ಹಸ್ತವಿಡುವದು, ಕಿವಿಯಲ್ಲಿ ಪುಂತ್ರೋಪದೇಶವಾಡುವದು, ಮುಂತಾದ ವಿಷಯಗಳು ಇತ್ತ ಕಡೆಯ ಅನುಭವದಿಂದ ನೋಡಿದರೆ, ಕೇವಲ ಕಟ್ಟುಕಥೆಗಳಂತೆ ತೋರುತ್ತವೆ"— ಎಂದು ನಾನು ಬಾಯ್ಬಿಟ್ಟುದನ್ನು ತಾವು ಬರೆದು, ಒಳ್ಳೆ ಆಶ್ಚರ್ಯವ್ಯಕ್ತ ಗೊಳಿಸಿರುವಿರಿ. ಅದು ಬಹಳ ಶೋಚನೀಯವಾದ ಸಂಗತಿಯೆಂದು ನುಡಿದಿರುವಿರಿ. ನಿಮಗೆ ಈ ವಿಷಯದಲ್ಲಿ ಸಂದೇಹವಿಟ್ಟರೆ, ಕೃಪೆ ಮಾಡಿ ಇತ್ತ ಕಡೆಗೊಮ್ಮೆ ತಾವು ದಯಮಾಡಿಸಿದಲ್ಲಿ, ನಾನು ತಮ್ಮೊಡನೆ ತಿರುಗಾಡಿ ಪ್ರತ್ಯಕ್ಷ ತೋರಿಸಿ ಕೊಡಲಿಕ್ಕೆ ಸಿದ್ಧನಿರುವೆನು ಆಗ ತಾವು ಈ ಕೊರತೆಗಳನ್ನು ಹೊಗಲಾಡಿಸಲಿಕ್ಕೆ ನನಗೂ ಇತ್ತಣ ಉಳಿದ ಹಿರಿಯರಿಗೂ ನೆರವಾಗಬೇಕೆಂದು ಅಂಗಲಾಚಿ ಬಿನ್ನವಿಸುವೆನು.

ಈ ವೇರೆಗೆ ಶ್ರೀ ಕಾನಕಾನಹಳ್ಳಿಯವರ ಬರಹದ ವಿಷಯವಾಗಿ ನನ್ನ ನಿಜವಾದ ಸ್ಪಷ್ಟ ಮತವನ್ನು ಬೈಲಿಗರೆಸಿರುವೆನು. ಜನ್ಮ ಲಿಂಗ ಧಾರಣೆ ಹಾಗು ಶಿವದೀಕ್ಷೆ ಇವು ತತ್ವತಃ ಒಂದೇ ಆದರೂ "ಧರಿಸುವವರ" ವಯೋಮಾನದಿಂದ ಅವುಗಳಲ್ಲಿ ತಾರತಮ್ಯವು ಸಂಭವಿಸುತ್ತದೆ. ಉದಾಃ — ಚಿಕ್ಕದಿರುವಾಗ ಮಿಡಿ, ದೊಡ್ಡದಾದಾಗ ಕಾಯಿ, ಹಣ್ಣಾದಾಗ ಹಣ್ಣು ಎಂಬ ಹೆಸರುಗಳು ಒಂದೇ ವಸ್ತುವಿಗೆ, ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ಅವಸ್ಥೆಗಳಲ್ಲಿ, ಬೇರೆ ಬೇರೆ ಗುಣ ಧರ್ಮಗಳಿಂದ ಬರುತ್ತಿರುವದನ್ನು ನಾವು ನೆನೆಯಬೇಕು. ಆದುದರಿಂದ ವಿನಾಕಾರಣ ವಾದ ಬಲಿಸದೆ, ವಿತುಷ್ಟಕ್ಕೆಡೆಯಾಗದಂತೆ, ಪರಿಣಾಮದ ಕಡೆ ಲಕ್ಷಗೊಟ್ಟು, ವಿವೇಕವನ್ನು ಧರಿಸುವದು ವಿಹಿತ! ಪಿಂಡಸ್ಥಲ, ಪಿಂಡಜ್ಞಾನಸ್ಥಲ ಮುಂತಾದ ತಾತ್ವಿಕ ವಿಷಯದಲ್ಲಿ ಒಣ ವಾದ ವಿವಾದ ನಡಿಸುವದರಲ್ಲೇ ಮಗ್ನರಾಗಿರುವ ನಾವುಗಳು, ಅವುಗಳ ಅರಿವು ಹಿಡಿದು ಪ್ರತ್ಯಕ್ಷ ವರ್ತನ ಮಾಡುವದು, ಎಷ್ಟೊಂದು ಪ್ರಯೋಜನಕಾರಿಯೆಂದು ಹೇಳುವದೇ ಕಷ್ಟ! ಈಗ ನಮಗೆ ಅತ್ಯವಶ್ಯವಾಗಿ ಬೇಕಾದುದು ಸಂಘ

ಟನೆ. ಪ್ರತಿಷ್ಠೆ, ಮತ್ಸರ, ದುರಭಿಮಾನ ಮೊದಲಾದವನ್ನು ಮುಂದೆ ತರುವ ಕಾಲವಿದಲ್ಲ. ಕೊಟ್ಟು ಕುಟ್ಟುವದರಿಂದ ಹ.ಟ್ಟವದೇನು? ವಿದ್ಯೆಯನ್ನು ವಿವಾದದಲ್ಲಿ ಬಳಸುವದು ಶತಂಭಾವವನ್ನೂ, ಸವಿನಯಕ್ಕೆ ವಿನಿಯೋಗಿಸುವದು ಸೌಜನ್ಯವನ್ನೂ ಸೂಚಿಸ.ತ್ತವೆಂದು ಸುಭಾಷಿತ ಕಾರರು ಹೇಳುವದನ್ನು ಮರೆಯಕೂಡದು. ಇದೇ ವಿಚಾರದಿಂದ ಈ ವಾದವನ್ನು ನಾನು ಇಷ್ಟಕ್ಕೇ ಸಮಾಪ್ತಿಗೊಳಿಸಲಿಚ್ಛಿಸುತ್ತೇನೆ.

ದೀಕ್ಷಾವಾದ

(ಲೇಖಕರು:- ಶ್ರೀ. ಮಾ. ಸ್ಕಂ. ನಂಜಪ್ಪನವರು ಬೆಂಗಳೂರುನಗರ.)

ನವ್ಯ ಈ ಲಿಂಗಾಯತ ಸಮಾಜದಲ್ಲಿ ಪರಿಸ್ಥಿತಿ ಮತ್ತು ಸಹವಾಸ ದೋಷಗಳ ಫಲವಾಗಿ ಇತರ ದೇವತೆಗಳ ಪೂಜಾಪದ್ಧತಿ, ವೈದಿಕಮತಾನುಯಾಯಿಗಳ ವರ್ಣವ್ಯವಸ್ಥೆಯ ಅನುಕರಣ, ಬ್ರಾಹ್ಮಣಬಂಧುಗಳ ಆಚಾರ ವಿಚಾರ ನಡೆನುಡಿಗಳ ಅನುಸರಿಸುವಿಕೆ ಮುಂತಾದವುಗಳು ಅನಿವಾರ್ಯವಾಗಿ ಬೇರೂರುತ್ತಿರುವುದು ಸಾಲದೆಂದು ನವ್ಯಲ್ಲಿಯ ಕೆಲ ಸ್ವಾರ್ಥಿಗಳಾದ ಧರ್ಮಾಧಿಕಾರಿಗಳು ಈಗ ಬಳಕೆಗೆ ಬರುತ್ತಿರುವ ನವ್ಯ ದೀಕ್ಷಾಪದ್ಧತಿಯಲ್ಲಿಯೂ "ಭಕ್ತದೀಕ್ಷೆ ಮಾಹೇಶ್ವರದೀಕ್ಷೆ" ಮುಂತಾಗಿ ಭಿನ್ನಭೇದಾಚರಣೆಯ ವಿಧಿಗಳನ್ನು ಕಲ್ಪಿಸಿ ವೀರಶೈವರಲ್ಲಿಯೇ ಮೇಲು ಕೀಳುಗಳ ಕುಕಲ್ಪನೆಯನ್ನು ಬಿತ್ತತೊಡಗಿದರಲ್ಲದೆ ತವ್ಯ ನೂತನ ಸೃಷ್ಟಿಯಾದ ಮಾಹೇಶ್ವರ ದೀಕ್ಷಾವಿಧಿಯ "ಜೋಳಿಗೆ"ಯ ಅನುಗ್ರಹದಿಂದ ಸಮಾಜಕ್ಕೆ ಉಪದ್ರವಕಾರಿಯೂ, ಸ್ವಪ್ರತಿಷ್ಠಾಸ್ಥಾಪಕರದೂ ಆದ ದೊಡ್ಡ ದೊಂದು "ಭಿಕ್ಷುಕರ ತಂಡ"ವನ್ನೂ ನಿರ್ಮಿಸಿದ್ದಾರೆ. ಈಗ ಈ ಜೋಳಿಗೆಯ ಮಾಹೇಶ್ವರರ ಉಪಟಳವು ಸಹಿಸಲಸಾಧ್ಯವಾಗಿದೆ.

ಈ ಉಪಟಳವು ಸಾಲದೆಂದೋ ಏನೋ ಇತ್ತೀಚಿಗೆ ವೀರಶೈವರಲ್ಲಿ ನಡೆಯುವ "ಲಿಂಗಧಾರಣ ಸಂಸ್ಕಾರವೇಬೇರಿ, ವೀರಶೈವ ದೀಕ್ಷಾಸಂಸ್ಕಾರವೇ ಬೇರೆ" ಎಂಬ ವಾದವೊಂದು ತಲೆ ಎತ್ತಿಕೊಂಡಿದೆ. ಆ್ಯರೆ ಈ

ವಿವಾದವು ಈಗಲೇ ತಲೆಯೆತ್ತಿಕೊಂಡುದು ಒಂದು ರೀತಿಯಿಂದ ಒಳ್ಳೆಯದೇ ಆಗಿದೆ. ಏಕೆಂದರೆ ಇತ್ತೀಚೆಗೆ ನವ್ಯ ಸಮಾಜದ ಧರ್ಮಾಧಿಕಾರಿಗಳು ಕೆಲ ಸ್ವಾರ್ಥಿಗಳ ಮಹತ್ವಯತ್ನದ ಫಲವಾಗಿ— ಒಂದೇ ಸಂಸ್ಕಾರವನ್ನು "ಲಿಂಗಧಾರಣ—ವೀರಶೈವದೀಕ್ಷೆ" ಎಂದು ಎರಡಾಗಿ ವಿಭಾಗಿಸಿ ಈ ಎರಡು ಸಂಸ್ಕಾರಗಳಿಗೂ ವಿಪರೀತ ಭಿನ್ನಭೇದಗಳನ್ನು ಕಲ್ಪಿಸಿ ಒಂದು ಕೀಳು ಮತ್ತೊಂದು ಮೇಲು ಎಂಬುದಾಗಿಯೂ ಎರಡನ್ನೂ ಬೇರೆ ಬೇರೆಯಾಗಿಯೇ ಪಡೆಯಬೇಕೆಂದೂ ಬೋಧಿಸುತ್ತಿರುವುದಲ್ಲದೆ ಕಾರ್ಯತಃ ಆಚರಿಸುತ್ತಲೂ ಇದ್ದಾರೆ. ಈ ನಡೆವಳಿಕೆಯು ಎಷ್ಟನೆಯ ಇಸವಿಯಿಂದೀಚೆಗೆ ಪ್ರಾರಂಭವಾಯಿತೆಂಬುದನ್ನು ಶೋಧಿಸಬೇಕಾಗಿದೆ.

ಇಂತಹ ಸಮಯದಲ್ಲಿ "ಧಾರಣ-ದೀಕ್ಷೆಗಳು ಭಿನ್ನ ಸಂಸ್ಕಾರಗಳಲ್ಲವೆಂದೂ ಮೂಲತಃ ಇದು ಒಂದೇ ಸಂಸ್ಕಾರವೆಂಬುದನ್ನೂ" ಧಾರಣ ದೀಕ್ಷೆಗಳೆರಡೂ ಒಂದನ್ನು ಬಿಟ್ಟು ಮತ್ತೊಂದಿರದೆ ಒಂದರೊಡನೊಂದು ಅಭೇದ್ಯವಾಗಿ ಹಣೆದುಕೊಂಡಿವೆಯೆಂದೂ ಒಂದನ್ನುಬಿಟ್ಟರೆ ಮತ್ತೊಂದು ದೊರೆಯುವುದೇ ಇಲ್ಲವೆಂದೂ ನಿಜಸ್ಥಿತಿಯನ್ನು ಬಹಿರಂಗಪಡಿಸುವುದಕ್ಕಾಗಿ ಈ ವಿವಾದವು ಈಗ ಪ್ರಾರಂಭವಾಗಿರುವುದು ಸಕಾಲೋಚಿತವಾದುದಾಗಿಯೇ ಇದೆ.

ಈ ವಿವಾದವನ್ನು ಕುರಿತು ಈಗಾಗಲೇ ಶ್ರೀಗಳಾವ ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳು, ಜೀರಗೆ ಕ. ಬಸವಪ್ಪ ಬಿ. ಎ; ಅವರು, ಕಾನಕಾನಹಳ್ಳಿ ಬಸಪ್ಪನವರು, ವಂಟಮುರಿಯ ಬಸವಪ್ಪ ಚನ್ನಪ್ಪ ಪಟ್ಟೇದ ಅವರು, ಶ್ರೀಸಿದ್ಧವೀರದೇವರು, "ಓರ್ವ ವೀರಶೈವ"ರು ಇವರುಗಳು ಶಿವಾನುಭವ ಮತ್ತು ಶರಣಸಾಹಿತ್ಯ ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಕೆಲವರು ವಿದ್ವತ್ಪೂರ್ಣವಾಗಿಯೂ ಕೆಲವರು ವಿದ್ವತ್ತು ಮತ್ತು ಅನುಭವ ಪೂರ್ಣವಾಗಿಯೂ ಚರ್ಚೆಯನ್ನು ನಡೆಯಿಸಿದ್ದಾರೆ.

ಶ್ರೀ ಶಿವಮೂರ್ತಿಶಾಸ್ತ್ರಿಗಳವರೂ ಶ್ರೀ ಬಸವಪ್ಪ ಚನ್ನಪ್ಪ ಪಟ್ಟೇದ ಅವರೂ ಲಿಂಗಧಾರಣ ಹೊಂದಿದವರೂ ಪುನಃ ದೀಕ್ಷೆಹೊಂದಲೇಬೇಕೆಂದೂ ದೀಕ್ಷೆಹೊಂದುವವರು ಲಿಂಗಧಾರಿಗಳಾಗಿಯೇ ಇರಬೇಕೆಂದೂ ಇಲ್ಲದಿದ್ದರೆ ನಿಷ್ಪ್ರಯೋಜನವೆಂದೂ ವಾದಿಸಿದ್ದಾರೆ.

ಆದರೆ ಇವರ ವಾದದ ಹಿಂದೆಯೇ ಓದುಗರಲ್ಲಿ, ಈ ಎರಡೂ ಬೇರೆ ಬೇರೆಯೆ? ಒಂದೇ ಅಲ್ಲವೆ? ವೀರಶೈವ ದೀಕ್ಷೆಯು ಲಿಂಗಧಾರಣ ಸಹಿತವಾದ ಅಭಿನ್ನವಾದ ಏಕ ಮಾತ್ರ ಸಂಸ್ಕಾರವಲ್ಲವೆ? ಅಥವ ಲಿಂಗ ಧಾರಣವು ವೀರಶೈವ ದೀಕ್ಷಾಸಹಿತವಾದ ಪ್ರತ್ಯೇಕಿಸಲು ಸಾಧ್ಯವಲ್ಲದ ಸಮ್ಮಿಳಿತ ಸಂಸ್ಕಾರವಲ್ಲವೆ? ಎಂಬ ಪ್ರಶ್ನೆಗಳು ತಾವಾಗಿಯೇ ಉದ್ಭವಿಸುತ್ತವೆ.

ಹೀಗೆ ಉದ್ಭವಿಸುವ ಈ ಪ್ರಶ್ನೆಗಳ ಮೂಲಕ ಪರಿಶೀಲಿಸುವುದಾದರೆ ಶ್ರೀ ಶಾಸ್ತ್ರಿಗಳ ಮತ್ತು ಶ್ರೀ ಪಟ್ಟೇಯವರ ವಾದವು ತೇಲಿ ಹೋಗುತ್ತದೆ. ಹೇಗೆಂದರೆ ಶ್ರೀ ಶಾಸ್ತ್ರಿಗಳವರು ತಮ್ಮ ವಾದದ ಸಮರ್ಥನೆಗಾಗಿ:

"ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ವೈಶ್ಯನಾಗಲಿ ಅವಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ ಗುರುಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗವ ಧರಿಸಿ ಆಚಾರ ಸಂಪನ್ನ ಸತ್ಕ್ರಿಯನಾದ ಮಹಾತ್ಮನೇ ಮೂರು ಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ"

"ನೀರುಗಟ್ಟಿಗೊಂಡು ಮುತ್ತಪ್ಪುದಲ್ಲದೆ ಮುತ್ತು ನೀರಪ್ಪುದೇನಯ್ಯ? ..... ಹೀನ ಜಾತಿಯಲ್ಲಿ ಜನಿಸಿದ ನರನು ಗುರುವಿನ ಕಾರುಣ್ಯದಿಂದ ಶಿವಜಾತಾಭರಣನಾದ ಬಳಿಕ ಮರಳಿ ನರನಪ್ಪನೇನಯ್ಯ? ಅಖಂಡೇಶ್ವರಾ"

"ಪಟ್ಟವಕಟ್ಟಿದ ಬಳಿಕ ಲಕ್ಷಣವನರಸುವರೇನಯ್ಯ?"

ಮುಂತಾದ ವಚನಗಳನ್ನೂ—

"ಜನ್ಮನಾಜಾಯತೇ ಶೂದ್ರಃ ಕರ್ಮಣಾ ದ್ವಿಜಮುಚ್ಯತೇ।
ಇತೀವ ಜನ್ಮನಾ ಶೂದ್ರೋ ದೀಕ್ಷಯಾಶ್ಮಿವತಾಂ ವ್ರಜೇತ್॥
ಶಿವದೀಕ್ಷಾವಿಜಾತಸ್ಯ ಪೂರ್ವಜಾತಿರ್ನವಿದ್ಯತೇ।
ಇತ್ಯಾಗಮ ಪ್ರಮಾಣೇನ ನಿಶ್ಚಿತಾರ್ಥೋಯಮಾಪ್ತಿಕೈಃ॥
ಶಿವಸಂಸ್ಕಾರಯುಕ್ತೇಷು ಜಾತಿಭೇದೋ ನ ವಿದ್ಯತೇ।
ಕಾಷ್ಠೇಷು ವಹ್ನಿದಗ್ಧೇಷು ಯಥಾರೂಪಂ ನ ವಿದ್ಯತೇ॥"

ಮುಂತಾದ ಸಂಸ್ಕೃತ ಶ್ಲೋಕಗಳನ್ನೂ ಉದಾಹರಿಸಿದ್ದಾರೆಯಲ್ಲದೆ "ಮೇಲೆ ಉದಾಹರಿಸಿದ ಪ್ರಾಚೀನ ವಿದ್ವಾಂಸರ ವಚನಗಳು ವೀರಶೈವರು ಶಿವ

ದೀಕ್ಷೆಯಿಂದ ಆಣವಾದಿ ಮಲಗಳನ್ನು ಕಳೆದುಕೊಂಡು ಮೋಕ್ಷಾಧಿಕಾರಿಗಳಾಗುವರೆಂದೂ.....ಮುಂತಾಗಿ ವಿವರಣೆಯನ್ನೂ ಬರೆದಿದ್ದಾರೆ.

ಶ್ರೀ ಶಾಸ್ತ್ರಿಗಳವರು ಮೇಲಣ ವಚನ ಮತ್ತು ಶ್ಲೋಕಗಳಿಂದ "ವೀರಶೈವರು ಪುನಃ ಶಿವದೀಕ್ಷೆಯನ್ನು ಪಡೆದು ಮೋಕ್ಷಾಧಿಕಾರಿಗಳಾಗಬೇಕು." ಎಂಬುದಾಗಿ ಹೇಗೆ ಅರ್ಥಮಾಡಿದರೋ ನನಗಂತೂ ತಿಳಿಯಲಿಲ್ಲ.

ಮೇಲಣ ವಚನ ಮತ್ತು ಶ್ಲೋಕಗಳಿಂದ ವಿಪ್ರನೊದಲ್ಗೊಂಡು ಅಂತ್ಯಜ ಕಡೆಯಾಗಿ ಭವಿಗಳಾದ ಸಮಸ್ತರೂ ವೀರಶೈವ ದೀಕ್ಷೆಯನ್ನು ಹೊಂದಿದರೆ ನಿತ್ಯಮುಕ್ತಿಯ ಅಧಿಕಾರಿಗಳಾಗುವರೆಂದೂ ಇಂದು ವೀರಶೈವ ದೀಕ್ಷೆಯನ್ನು ಪಡೆದವರು ನಾಳೆ ವೀರಶೈವ ದೀಕ್ಷೆ ಪಡೆದವರೊಡನೆ ಯಾವ ವಿಧವಾದ ಭಿನ್ನಭೇದ ಮೇಲು ಕೀಳುಗಳನ್ನು ಎಣಿಸಬಾರದೆಂತಲೂ "ವೀರಶೈವ" ದೀಕ್ಷಿತರಾದವರೆಲ್ಲರೂ ಸಮಾನಸ್ಕಂದರೆಂತಲೂ ಒಬ್ಬರು ಮತ್ತೊಬ್ಬರನ್ನು ಶಿವಸ್ವರೂಪಿಗಳನ್ನಾಗಿ ಭಾವಿಸಬೇಕೆಂತಲೂ ಪೂರ್ವಾಶ್ರಮದ ಜಾತಿಭೇದಗಳು ನಾಶವಾಗಿ ಹೋಗುವುದರಿಂದ ಅವುಗಳನ್ನು ವೀರಶೈವದೀಕ್ಷಿತರಾದವರು ಮರೆತುಬಿಡಬೇಕೆಂದೂ ಅರ್ಥವಾಗುತ್ತದೆಯೇ ಹೊರ್ತು ಶ್ರೀ ಶಾಸ್ತ್ರಿಗಳವರು ಬರೆದಿರುವಂತೆ "ವೀರಶೈವರು ಪುನಃ ಶಿವದೀಕ್ಷೆಯನ್ನು ಪಡೆಯಬೇಕು" ಎಂದರ್ಥವಾಗುವುದಿಲ್ಲ.

ಬಸವಪ್ರಭು ರೇವಣಸಿದ್ಧಾದಿ ಗಣವರರೆಲ್ಲರೂ ಭವಿಗಳ ಭವಿತನವನ್ನು ಹಿಂಗಿಸಿ "ವೀರಶೈವ" ಧರ್ಮದ ವಿಸ್ತರಣದ ಮಹತ್ಕಾರ್ಯದಲ್ಲಿ ನಿರತರಾಗಿದ್ದು ಆ ಮಹತ್ಕಾರ್ಯಕ್ಕೆ ಪೋಷಕವಾಗುವಂತೆ ಸಿದ್ಧಾಂತಗೊಳಿಸಲ್ಪಟ್ಟಿರುವ ಮೇಲಣ ವಚನ ಮತ್ತು ಶ್ಲೋಕಗಳನ್ನು ಶ್ರೀ ಶಾಸ್ತ್ರಿಗಳವರು ಭವಿತನವನ್ನು ಕಳೆದುಕೊಂಡು ಶಿವಜೀವೈಕ್ಯಾನುಸಂಧಾನಿಗಳಾದ "ವೀರಶೈವರು ಪುನಃ ದೀಕ್ಷೆಯನ್ನು ಪಡೆಯಬೇಕು. ಎಂಬ ವಿಚಿತ್ರ ವಾದಕ್ಕೆ ಪೋಷಕವೆಂದು ಬಳಸಿಕೊಂಡಿರುವುದು ಆಶ್ಚರ್ಯಕರವೂ ವಿಷಾದಕರವೂ ಆಗಿದೆ.

ಶ್ರೀ ಶಾಸ್ತ್ರಿಗಳವರು ಇಷ್ಟಕ್ಕೆ ನಿಲ್ಲದೆ ದೀಕ್ಷೆಯನ್ನು "ದ್ವಿಜ"ರ ಉಪನಯನ ಕರ್ಮಕ್ಕೆ ಹೋಲಿಸಿರುವರಲ್ಲದೆ "ಮತ್ತೆ ಕೆಲವರು ಲಿಂಗಧಾರಣವೇ ಶಿವದೀಕ್ಷೆ ಎಂದು ಭ್ರಾಂತಿಪಟ್ಟಿದ್ದಾರೆ. ಇದು ಆಶ್ಚರ್ಯಕರ

ವಾದ ಸಂಗತಿಯೇ ಸರಿ.....!" ಎಂದು ಮುಂತಾಗಿಯೂ ಬರೆದಿದ್ದಾರೆ. ಲಿಂಗಧಾರಣವೆಂದರೂ ದೀಕ್ಷೆ ಎಂದರೂ ಅಭಿನ್ನವೆಂದು ತಿಳಿದಿರುವುದು ಆಶ್ಚರ್ಯಕರವೋ ಅಥವ " ಛವಿಗಳು " ವೀರಶೈವ ದೀಕ್ಷೆಯನ್ನು ಹೊಂದಿ ಪುನೀತರಾಗುವುದಕ್ಕಾಗಿ ಬೋಧಿಸಲ್ಪಟ್ಟಿರುವ ವಚನಗಳನ್ನೂ ಶ್ಲೋಕಗಳನ್ನೂ " ವೀರಶೈವರು ಪುನಃ ಶಿವದೀಕ್ಷೆಯನ್ನು ಪಡೆಯಬೇಕೆಂಬ ವಿಚಿತ್ರವಾದದ ಸಮರ್ಥನೆಗಾಗಿ ಶ್ರೀ ಶಾಸ್ತ್ರಿಗಳವರು ಬಳಸಿಕೊಂಡಿರುವುದು ಆಶ್ಚರ್ಯ ಮತ್ತು ಭ್ರಾಂತಿಕಾರಕವೋ ಎಂಬುದನ್ನು ಓದುಗರೂ ಅನುಭವಿಗಳೂ ನಿರ್ಣಯಿಸಬೇಕಾಗಿದೆ.

ಇನ್ನು ಶ್ರೀ ಬಸವಪ್ಪ ಪಟ್ಟೇದ ಅವರು : ಲಿಂಗಧಾರಣೆಯನ್ನು ಸ್ಥಿರ-ಚರವಸ್ತುವಾಹನಾದಿಗಳಿಗೆ ಒತ್ತುವಂತಹ " ಲಿಂಗಮುದ್ರೆ " ಎಂಬ ಸಂಸ್ಕಾರಕ್ಕೆ ಸಮಾನವೆಂದು ಹೋಲಿಸಿದ್ದಾರೆ.

ಶ್ರೀಯುತರು ಯಾವುದೋ ಯೋಚನೆಯಲ್ಲಿದ್ದು ಮರವೆಯಲ್ಲಿದ್ದಾಗ ಈ ಹೋಲಿಕೆಯನ್ನು ಮಾಡಿರಬಹುದೆಂದು ತೋರುತ್ತದೆ. ಏಕೆಂದರೆ ಸ್ಥಿರಚಿತ್ತದಲ್ಲಿದ್ದಾಗ ಅವರಿಗೂ ಸಹ ಹೀಗೆ ಹೋಲಿಸಲು ಮನಸ್ಸು ಬರುವುದಿಲ್ಲ. ಲಿಂಗಮುದ್ರೆಯನ್ನು ಒತ್ತುವುದಕ್ಕೂ ಲಿಂಗಧಾರಣ ಸಂಸ್ಕಾರಕ್ಕೂ ಸಮಾನತೆಯ ಕಲ್ಪನೆಯನ್ನಾದರೂ ಯೋಚಿಸಬಹುದೆ? ಶ್ರೀ ಪಟ್ಟೇದವರ ಲೇಖನದ ಮೂಲಕ ನೋಡುವುದಾದರೆ ಅವರಲ್ಲಿ ಧರ್ಮ ಮತ್ತು ಸಮಾಜದ ಮೇಲಣ ಅಭಿಮಾನವು ತುಂಬಿತುಳುಕುತ್ತಿದೆ. ಆದರೆ ಅವರು ಈ ಹೋಲಿಕೆಯನ್ನು ಏಕೆ ಮಾಡಿದರೋ ತಿಳಿಯದಾಗಿದೆ.

ವೀರಶೈವರ ಬಳಕೆಯ ಸಮಸ್ತ ವಸ್ತುವಾಹನಾದಿಗಳಿಗೂ " ಲಿಂಗಮುದ್ರೆ " ಇರಬೇಕೆಂಬ ರೂಢಿ ಇದ್ದರೂ ಮನೆಯಲ್ಲಿ ಜನಿಸುವ ಶಿಶುವಿಗೂ (ತಾಯಿಯು ಗರ್ಭದಲ್ಲಿದ್ದಾಗ) ಮತ್ತು ಮೊದಲು ಛವಿಗಳಾಗಿಮ್ದು ನಂತರ ವೀರಶೈವ ದೀಕ್ಷೆಯನ್ನು ಪಡೆಯುವವರಿಗೂ ದೀಕ್ಷಾಪೂರ್ವಕ ಗುರುವಿನಿಂದ ಅನುಗ್ರಹಿಸಲ್ಪಡುವ ಲಿಂಗಧಾರಣವನ್ನು ಲಿಂಗಮುದ್ರಾ ಸಂಸ್ಕಾರಕ್ಕೆ ಹೋಲಿಸಬಹುದೆ? ಹಾಗೆ ಹೋಲಿಸಬಹುದಾಗಿದ್ದರೆ ನಮ್ಮ ಪುರಾತನರೆಲ್ಲರೂ ಅದನ್ನು " ಲಿಂಗಮುದ್ರಾ " ಸಂಸ್ಕಾರವೆಂದೇ ಕರೆಯಬಹುದಾಗಿದ್ದಿತಲ್ಲದೆ ಜನರು ಅವರವರ ಶ್ರೀಮಂತಿಕೆಯನ್ನನುಸರಿಸಿ ಬೆಳ್ಳಿ, ಭಂಗಾರ, ತಾಮ್ರ, ಪಂಚಲೋಹ ಮುಂತಾದ

ಲೋಹಗಳ ತಗಡುಗಳಿಂದ ಲಿಂಗದ ಆಕಾರವನ್ನು ಕತ್ತರಿಸಿ ಶಿಶುಗಳ-ದೀಕ್ಷಿತರ-ಕೊರಳಿಗೋ ಕಟ್ಟಿಗೋ ಕಟ್ಟುವ ಪದ್ಧತಿಯನ್ನು ಏರ್ಪಡಿಸುತ್ತಿದ್ದರಲ್ಲವೆ? ಅಥವ ಪಶುಗಳಿಗೆ ಲೋಹವನ್ನು ಕೆಂಪಗೆ ಕಾಯಿಸಿ ಮುದ್ರೆಯನ್ನು ಒತ್ತುವ ಅಮಾನುಷ ಪದ್ಧತಿಯನ್ನೇ ಶಿಶುಗಳಿಗೂ - ಅನ್ವಯಿಸುವಂತೆ ವಿಧಿಸುತ್ತಿದ್ದರಲ್ಲವೆ?

ಆದರೆ ನಮ್ಮ ಪುರಾತನರು ಹಾಗೆ ಅಮಾನುಷ ರೀತಿಯ ಬರೆ ಎಳೆಯುವ ಅಥವ ಲಿಂಗಾಕಾರದ ಲೋಹದ ಬಿಲ್ಲೆಗಳನ್ನು ಕಟ್ಟುವ ಯಾವ ವಿಧಾನವನ್ನೂ ಪರಿಗ್ರಹಿಸದೆ ಗರ್ಭದಲ್ಲಿರುವ ಶಿಶುವಿಗಾಗಲಿ ವಯಸ್ಕರಿಗಾಗಲಿ ಗುರುವಿನಿಂದಲೇ ದೀಕ್ಷಾಪೂರ್ವಕ ವಿಶಿಷ್ಟ ಸಂಸ್ಕಾರದಿಂದ ಪರಿಶುದ್ಧವಾದ ಲಿಂಗವನ್ನು ನೆಲೆಕಲೆಗಳನ್ನರಿತು ಧಾರಣಮಾಡಿಸುವ ಸಾಂಪ್ರದಾಯವನ್ನೇಕೆ ಅನುಸರಿಸಿದರು? ಇದರಲ್ಲೊಂದು ವೈಶಿಷ್ಟ್ಯವಿರಲೇಬೇಕಲ್ಲವೆ? ಆ ವೈಶಿಷ್ಟ್ಯವು ಎಲ್ಲ ಮತಗಳ ಸಂಸ್ಕಾರಗಳಿಗಿಂತಲೂ ವಿಶೇಷಾರ್ಥದಿಂದ ಕೂಡಿದ ಆಧ್ಯಾತ್ಮಿಕ ವೈವಿಧ್ಯತೆಯಿಂದ ಕೂಡಿದ ಸಂಸ್ಕಾರವಾಗಿದೆಯಲ್ಲವೆ?

ಇನ್ನು ಶ್ರೀ ಪಟ್ಟೇಯವರು " ಜನ್ಮಲಿಂಗಧಾರಣವು ಅಲಿಂಗಿಸಂಪರ್ಕ ತಪ್ಪಿಸಿ ಶೀಲಪಾಲನೆ ಮಾಡಿಕೊಳ್ಳುವ ಉದ್ದೇಶದಿಂದ ತಂದೆ-ತಾಯಿಗಳು ಮಾಡಿದ ಯೋಜನೆ " ಎನ್ನುತ್ತಾರೆ ಇದನ್ನಾದರೂ ಒಪ್ಪಬಹುದೆ?

ಲಿಂಗಾಯತರು ತಮ್ಮ ಮಕ್ಕಳ ಶೀಲಪಾಲನೆಗಾಗಿ ಮಾತ್ರವಾದರೆ ಹುಟ್ಟುವುದಕ್ಕೆ ಮೊದಲೇ ಲಿಂಗನನ್ನು ಧರಿಸಿರಲೇಬೇಕೆ? ಹಾಗೆ ನೋಡಿದರೂ ಶಿಶುವು ತನ್ನ ತಂದೆ ತಾಯಿ ಬಂಧುಬಳಗದ ಸಹವಾಸ ಸಹಚರ್ಯೆಗಳ ಫಲವಾಗಿಯೇ ತಾನೂ ವೀರಶೈವರ ಮನೆಯ ಶಿಶುವಿನಂತೆ ಶೀಲಾಚಾರಗಳಿಂದ ಕೂಡಿರುತ್ತದೆಯೇ ಹೊರ್ತು ಸ್ವಯಂಪರಿಪೂರ್ಣ ಜ್ಞಾನದಿಂದ ಶೀಲಾಚಾರಗಳನ್ನು ಕಾಪಾಡಿಕೊಳ್ಳುತ್ತದೆಂದು ಯಾರೂ ಹೇಳುವಹಾಗಿಲ್ಲ.

ಆದರೆ ಶಿಶುವಿಗೆ ಸ್ವಯಂ ಪರಿಪೂರ್ಣ ಜ್ಞಾನವಿಲ್ಲದಿದ್ದರೂ ಬೀಜವೃಕ್ಷ ನ್ಯಾಯದಂತೆ ಕ್ರಮಕ್ರಮವಾಗಿ ಬೆಳೆಯುವ ಬಲಿಯುವ ಜ್ಞಾನವು ಇದ್ದೇ ಇರುತ್ತದೆ. ಆದುದರಿಂದ ಆ ಶಿಶುದೆಸೆಯಲ್ಲಿ ಗುರುವಿನಿಂದ ಅನು

ಗ್ರಹಿಸಲ್ಪಡುವ ಲಿಂಗದ ಜ್ಞಾನವೂ ಕ್ರಮಕ್ರಮವಾಗಿ ಬೆಳೆದು ಬಲಿಯುವ ಶಿಶುಬುದ್ಧಿಯ ಜೊತೆಯಲ್ಲಿಯೇ ಬೆಳೆಯುತ್ತದೆ. ಇದು ಸಾಧ್ಯವಿಲ್ಲವೆನ್ನುವದಾದರೆ ಶ್ರೀ ಪಟ್ಟಿಯವರೇ ಹೇಳುವಂತೆ ಶಿಶುವು ಶೀಲಾಚಾರಗಳನ್ನು ಹೆಚ್ಚಿಸಿಕೊಳ್ಳುವುದಾದರೂ ಹೇಗೆ ಸಾಧ್ಯ?

ಲಿಂಗಜ್ಞಾನದ ಬೆಳವಣಿಗೆಗಾಗಲಿ ಶೀಲಾಚಾರಗಳ ಬೆಳವಣಿಗೆಗಾಗಲಿ ಕ್ರಮಕ್ರಮವಾಗಿ ಬೆಳೆಯುವ ಬುದ್ಧಿ ಜ್ಞಾನಗಳ ಅವಶ್ಯಕತೆಯು ಬೇಕೇಬೇಕು. ಶಿಶುವಿನಲ್ಲಿ ಅದು ಇದ್ದೇ ಇರುತ್ತದೆ. ಹಾಗೆ ಇರುವುದನ್ನರಿತೇ ನಮ್ಮ ಆದ್ಯರು ಶಿಶುವು ಗರ್ಭದಲ್ಲಿರುವಾಗಲೇ ಲಿಂಗಧಾರಣ ಮಾಡುವ ವ್ಯವಸ್ಥೆ ಮಾಡಿರುವರಲ್ಲದೆ ಅದನ್ನು ಲಿಂಗ ಮುದ್ರಾ ಸಂಸ್ಕಾರವೆನ್ನದೆ "ಗರ್ಭಾಷ್ಟಯ ದೀಕ್ಷೆ" ಎಂದು ಸ್ಪಷ್ಟವಾಗಿ ಕರೆದಿದ್ದಾರೆ. ಇಂತಪ್ಪ ಲಿಂಗಧಾರಣವನ್ನು ಲಿಂಗ ಮುದ್ರೆ ಎನ್ನಬಹುದೆ?

ಶೀಲಾಚಾರಕ್ಕೆ ಮಾತ್ರವಾದರೆ ಶಿಶುವಿಗೆ ಲಿಂಗಧಾರಣವನ್ನೇ ಏಕೆ ಮಾಡಬೇಕು? ಬ್ರಾಹ್ಮಣಾದಿ ತ್ರೈವರ್ಣಿಕರು ತಮ್ಮ ಶಿಶುಗಳಿಗೆ-ಬಾಲಕರಿಗೆ-ಶೀಲಾಚಾರ ಪಾಲನೆಗಾಗಿ ಉಪನಯನಕ್ಕೆ ಪೂರ್ವಭಾವಿಯಾಗಿ ಉಪನಯನಕ್ಕೇ ಹೋಲುವಂತಹ ಯಾವದಾದರೂ ಸಂಸ್ಕಾರವನ್ನು ಮಾಡುತ್ತಾರೆಯೆ? ಇಲ್ಲವಾದರೂ ಆಯಾವರ್ಣದವರ ಶಿಶುಗಳು-ಬಾಲಕರು-ಆಯಾವರ್ಣದವರ ಶಿಲಾಚಾರಗಳಂತೆಯೇ ಇರುವುದಿಲ್ಲವೇ? ಹೀಗೆ ಇರುವುದಕ್ಕೆ ಶಿಶುವಿನ-ಬಾಲಕನ-ತಂದೆತಾಯಿ ಬಂಧುಬಳಗದವರ ಸಹವಾಸ ಸಹಚರ್ಯೆಗಳೇ ಕಾರಣವಲ್ಲವೇ? ಹೀಗಿರುವಾಗ ವೀರಶೈವರು ಮಾತ್ರ ಶೀಲಾಚಾರಪಾಲನೆಗಾಗಿ ಶಿಶುವಿಗೆ ಇನ್ನೂ ಮಾತೃಗರ್ಭದಲ್ಲಿದ್ದಾಗಲೇ ಲಿಂಗಧಾರಣೆ ಮಾಡಬೇಕೆಂದು ಏಕೆ ನಿರ್ಣಯಿಸಿದ್ದಾರೆ? ಸಮಾಜ ಶಾಸ್ತ್ರ, ದೇಹ ಶಾಸ್ತ್ರ, ಮನಶಾಸ್ತ್ರಾದಿಗಳನ್ನೆಲ್ಲಾ ಪರಿಶೀಲಿಸಿಯೇ ಧರ್ಮ ಸಂಸ್ಕೃತಿಗಳನ್ನು ಶಿಶುದೆಸೆಯಲ್ಲಿಯೇ ಮೈಗೂಡಿಸುವ ಈ ಮಹದ್ಯೋಜನೆಯನ್ನು ಕಂಡು ಹಿಡಿದು ಆಚರಣೆಯಲ್ಲಿ ತಂದಿರುವರಲ್ಲವೆ?

ವಚನಶಾಸ್ತ್ರಕಾರರೆಲ್ಲರೂ ಗರ್ಭಾಷ್ಟಮದೀಕ್ಷೆಯನ್ನೇ ಹೇಳಿದ್ದಾರೆಯಲ್ಲದೆ ಅದನ್ನು ಲಿಂಗಮುದ್ರೆಗೆ ಸಮಾನವೆಂಬ ತಾತ್ಪರ್ಯಭಾವದಿಂದ ಕಾಣದೆ "ಲಿಂಗಧಾರಣ" ವೆಂದೇ ಕರೆದಿದ್ದಾರೆ. ಉದಾಹರಣೆಗೆ ಈ ಕೆಳಗಣ ವಚನಗಳನ್ನು ನೋಡಬಹುದು.

(ಶಿವಾನುಭವ ಪತ್ರಿಕೆಯ ೧೫ನೆಯ ಸಂಪುಟದ ೬ನೇ ಸಂಚಿಕೆಯೊಡನೆ ಪ್ರಕಟವಾಗಿರುವ ಮಹಾನುಭಾವೆಯರಾದ ರೆವ್ಯೂವ್ಹೆಯರ ವಚನಗಳು:)

"ಖಂಡಿತವ್ರತದ ನಿರಂಗನ ವ್ರತವೆಂತುಟು ಎಂದರೆ ತನ್ನ ಸತಿಗೆ ಗರ್ಭ ತಲೆದೋರಿದಲ್ಲಿಯೇ ಮುಖವ ಕಾಂಬುದಕ್ಕೆ ಮುನ್ನವೇ ಲಿಂಗ ಧಾರಣ ಮಾಡಿ ನೋಡಿದ ಮತ್ತೆ ಗಣಸಾಕ್ಷಿಯಾಗಿ ವಿಭೂತಿಯ ಪಟ್ಟವ ಕಟ್ಟಿ ಇಪ್ಪುದೇ ವ್ರತಶೀಲನೇಮ ಹಾಗಲ್ಲದೆ ದಿಂಡೆಯತನದಲ್ಲಿ ಮುಕ್ತಳಿಗೆ ಸಂದೇಹದ ವ್ರತವ ಕಟ್ಟಬಹುದೇ ಬುದ್ಧಿಯಾದಂದಿಗಾಗಲಿ ಎಂಬವರ ಅಂಗಣವ ಮೆಟ್ಟಲಾಗದು.....ಈಡು ಮಾಡುವ ವ್ರತಭಂಗಿತನ ಕಂಡು ಅವನೊಡನೆ ನುಡಿದಡೆ ಕುಂಭೀನರಕ. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವೇ ಅವನ ಹಿಂಗಿರಬೇಕು."
"ತಾ ವ್ರತಿಯಾಗಿ ಮುಕ್ತಳೆಂದು ಮಾಡದಿರ್ದಡೆ ಆ ವ್ರತಕ್ಕೆ ತಾನೇ ಹೊರಗು. ತನ್ನಂಗಮನಭಾವ ಕರಣಂಗಳಲ್ಲಿ ಸಂಗದಲ್ಲಿ ಇದ್ದವರೆಲ್ಲಕ್ಕೂ ತನ್ನಂಗದ ವ್ರತವ ಮಾಡಬೇಕು. ಇದು ಸೀಮೆವಂತರ ಯುಕ್ತಿ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಾಚಾರದ ಗೊತ್ತು."

ಹೀಗಿದ್ದರೂ ಈ ವಿಚಾರವಾಗಿ ತರ್ಕಬದ್ಧವಾಗಿಯೂ ಅನುಭವಯುಕ್ತವಾಗಿಯೂ ಮೊದಲು ಚರ್ಚೆಯನ್ನಾರಂಭಿಸಿದ ಶ್ರೀ ಜೀರಿಗೆ ಕ. ಬಸವಪ್ಪ ಬಿ. ಎ. ಅವರ ಲೇಖನದ ಮೇಲೆ ಶ್ರೀ ಶಾಸ್ತ್ರಿಗಳೂ ಮತ್ತು ಶ್ರೀ ಪಟ್ಟೇದ ಅವರೂ ಕುಪಿತರಾಗಿ ಲೇಖನಗಳನ್ನು ಪ್ರಾರಂಭಿಸಿದಂತೆ ತೋರುತ್ತದೆ. ಅವರ ಲೇಖನಗಳಲ್ಲಿ ಕೋಪದ ಛಾಯೆಯು ಅಲ್ಲಲ್ಲಿ ಎದ್ದು ಕಾಣುತ್ತದೆ. ಧಾರ್ಮಿಕ - ತಾತ್ವಿಕ - ವಿಚಾರಗಳನ್ನು ಚರ್ಚಿಸುವಾಗ ಶಾಂತಮನಸ್ಸಿನಿಂದ ತತ್ವಗಳನ್ನು ಕುರಿತು ಚರ್ಚಿಸಬೇಕು. ಆ ಚರ್ಚೆಯು "ವಾದೇ ವಾದೇ ಜಾಯತೇ ತತ್ವಬೋಧಃ" ಎಂಬುಕ್ತಿಯನ್ನು ಅನ್ವರ್ಥಗೊಳಿಸಬೇಕು.

ಈ ವಿಷಯದಲ್ಲಿ ಶ್ರೀ ಕಾನಕಾನಹಳ್ಳಿ ಬಸಪ್ಪನವರ ಲೇಖನವು ಸಮುಂಜಸ ವಿಚಾರಗಳಿಂದ ಕೂಡಿದೆಯಲ್ಲದೆ ಶಿವಾನುಭವದಲ್ಲಿ 'ಓರ್ವ ವೀರಶೈವ' ಎಂಬವರ ಹೆಸರಿನಿಂದ ಪ್ರಕಟವಾಗಿರುವ ಲೇಖನವು ಈ

ಚರ್ಚೆಯನ್ನು ಕುರಿತು ಅತ್ಯಂತ ವಿಚಾರಪೂರಿತ ಮತ್ತು ಸಮಂಜಸ ಅಭಿಪ್ರಾಯಗಳನ್ನು ವಾಚಕರ ಮುಂದೆ ಇಟ್ಟಿದೆ.

ಇನ್ನು ಈಗ ನಡೆಯುತ್ತಿರುವ ದೀಕ್ಷೆಯ ವಿಚಾರ—

(೧) ಗರ್ಭಾಷ್ಟಮ ದೀಕ್ಷಾ ಕಾಲದಲ್ಲಿ ಅಥವಾ ಶಿಶುದೆಶೆಯಲ್ಲಿ ಶ್ರೀಗುರುವು ಜಲಾಧಿವಾಸ ಧಾನ್ಯಾದಿ ವಾಸಾದಿ ವಿಧಾನಗಳಿಂದ ಶುದ್ಧಗೊಳಿಸಿ ಶಿಲಾದೋಷವನ್ನು ಹೋಗಲಾಡಿಸಿ ಶಿವತತ್ವವನ್ನು ಆರೋಹಿಸಿ ಹಸ್ತ ಮಸ್ತಕ ಸಂಯೋಗ ಪೂರ್ವಕ ಧಾರಣೆ ಮಾಡಿದ ಲಿಂಗವನ್ನು, ಈಗ ರೂಢಿಯಲ್ಲಿ ಬರುತ್ತಿರುವ 'ಶಿವದೀಕ್ಷಾ ಸಂಸ್ಕಾರ' ವನ್ನು ಮಾಡುವ ಸಮಯದಲ್ಲಿ ಪುನಃ ಅದೇ ಲಿಂಗವನ್ನು ಧಾನ್ಯಾಧಿವಾಸ ಜಲಾಧಿವಾಸಾದಿ ಶುದ್ಧೀಕರಣ ವಿಧಿಗೊಳಪಡಿಸುತ್ತಾರೆ, ಇದು ಸರಿಯೆ? ಹೀಗೆ ಮಾಡುವುದರಿಂದ ಆ ಲಿಂಗವು ಮೊದಲನೆಯ ಬಾರಿ ಪಡೆದ ಸಂಸ್ಕಾರವೂ ಶ್ರೀಗುರುವಿನ ಹಸ್ತ ಮಸ್ತಕ ಸಂಯೋಗಾದಿ ಕಾರ್ಯವಿಧಿಗಳೂ ನಿಷ್ಪ್ರಯೋಜನವೆಂದರ್ಥವಾಗುವುದಲ್ಲವೆ? ಹಾಗೆ ನಿಷ್ಪ್ರಯೋಜನವೆನ್ನುವುದು ಯುಕ್ತವೇ? ನಮ್ಮ ಆದ್ಯರು ಅಂತಹ ನಿಷ್ಪ್ರಯೋಜನಕಾರಿಗಳಾದ ವಿಧಿವಿಧಾನಗಳನ್ನು ಆಚರಣೆಯಲ್ಲಿ ತಂದಿರುವರೆಂಬುದನ್ನು ಸಂಭವವಾಗಿ ನಂಬಲಾದೀತೆ?

(೨) ಈಗಿನ ಶಿವದೀಕ್ಷಾ ಮಹೋತ್ಸವಗಳಲ್ಲಿ ನಡೆಯುವ ಮತ್ತೊಂದು ಆಶ್ಚರ್ಯ ಪ್ರಸಂಗವೇನೆಂದರೆ:— ಕೆಲವೆಡೆಗಳಲ್ಲಿ ಅವು ಪ್ರಸಿದ್ಧ ಮಠಗಳಾಗಿರುತ್ತವೆ. ಹೆಸರು ವಾಸಿಯಾದ ಶಾಸ್ತ್ರಿಗಳ ತಂಡವು ಕಾರ್ಯ ನಿರ್ವಾಹಕ್ಕೆ ಕಂಕಣಬದ್ಧವಾಗಿ ನಿಂತಿರುತ್ತದೆ. ಅಂತಹ ಕಡೆಗಳಲ್ಲಿ ಶಿವದೀಕ್ಷೆಯನ್ನು ಹೊಂದಲು ಬಂದಿರುವ ಬಾಲಕ ಬಾಲಕಿಯರ ಲಿಂಗಗಳನ್ನೆಲ್ಲಾ ತೆಗೆದುಕೊಂಡು ರಾಶಿಯಾಗಿ ಸೇರಿಸಿ ಒಂದು ದೊಡ್ಡ ಕಟ್ಟಿಯಲ್ಲಿ ಅವುಗಳನ್ನೆಲ್ಲಾ ಜೋಡಿಸಿ ಒಟ್ಟಿಗೆ ಸಂಸ್ಕರಿಸಿ ಒಬ್ಬೊಬ್ಬರಿಗೆ ಒಂದೊಂದರಂತೆ ಧಾರಣೆ ಮಾಡಿ ಬಿಡುತ್ತಾರೆ. ಹೀಗೆ ಧಾರಣೆ ಮಾಡುವಾಗ ಮೊದಲು ಒಬ್ಬ ಬಾಲಕ ಅಥವಾ ಬಾಲಕಿಯದಾಗಿದ್ದ ಲಿಂಗವು ಈಗ ಬೇರೆ ಮತ್ತೊಬ್ಬರದಾಗಿ ಹೋಗುತ್ತದೆ. ಹೀಗೆ ಮಾಡುವುದು ಯುಕ್ತವೇ? ಒಬ್ಬರ ಲಿಂಗವನ್ನು ಮತ್ತೊಬ್ಬರಿಗೆ ಬದಲಾಯಿಸುವುದು ಅತ್ಯಂತ ನಿಷೇಧಾರ್ಹವಾದ ಮತ್ತು ಅಶಾಸ್ತ್ರೀಯವಾದ ಕಾರ್ಯ

ವಿಲ್ಲವೆ? ಇದನ್ನು ಪರ್ಯಾಲೋಚಿಸಿದರೆ ಈಗಿನ ದೀಕ್ಷಾ ಪದ್ಧತಿ ಕುರಿತ್ತು ಅನೇಕ ಸಂಶಯಾಸ್ಪದವಾದ ಪ್ರಶ್ನೆಗಳು ಉದ್ಭವಿಸುತ್ತವೆಯಲ್ಲವೆ?

(೩) ಈಗ ನಡೆಯುತ್ತಿರುವ ದೀಕ್ಷಾ ಸಂಸ್ಕಾರವು ಬುದ್ಧಿಯು ಬಂದು ಗುರುಗಳಿಂದ (ಸೆರೆ ಬಿಡಿಸಿಕೊಳ್ಳುವ) ಕ್ರಮವಾದ ಲಿಂಗ ಪೂಜಾವಿಧಾನವನ್ನಳವಡಿಸಿಕೊಂಡು ತ್ರಿಕಾಲ ಲಿಂಗಪೂಜೆಯನ್ನು ಮಾಡುತ್ತಿರುವ ಬಾಲಕ ಬಾಲಕಿಯರಿಗೂ ಇನ್ನು ಬುದ್ಧಿಯೇ ಬಾರದಿರುವ ಲಿಂಗಪೂಜೆಯ ವಿಧಾನವನ್ನು ಕ್ರಮ ಪ್ರಾಪ್ತವಾಗಿ ಅರಿಯದ ಹಸುಳೆಗಳಿಗೂ ಯಾವ ವ್ಯತ್ಯಾಸವೂ ಇಲ್ಲದೆ ಒಂದೇ ಬಗೆಯ ಸಂಸ್ಕಾರ ಕಾರ್ಯಗಳನ್ನು ಶಿವದೀಕ್ಷಾ ಕಾಲದಲ್ಲಿ ನೆರವೇರಿಸುತ್ತಾರೆ. ಇದು ಸರಿಯೆ? ಹೀಗೆ ಮಾಡುವುದರಲ್ಲಿ ಯಾವುದೋ ಒಂದೂ ಲೋಪವೋ ನ್ಯೂನತೆಯೋ ಅನುಕರಣವೋ ಇರುವಂತೆ ಭಾಸವಾಗುವುದಲ್ಲವೆ?

(೪) ಇನ್ನೂ ಮಾತೃಗರ್ಭದಲ್ಲಿರುವಾಗಲೇ ಶಿವದೀಕ್ಷೆಯಲ್ಲಿ ವೀರಶೈವ ದೀಕ್ಷೆಯನ್ನು ಪಡೆದಿರುವ ಶಿಸುವಿಗೆ ಅದು ಬೆಳೆದು ಬಲಿಯುವಾಗ ಮತ್ತೊಮ್ಮೆ ಗುರುವಿನಿಂದ ಕ್ರಮವಾದ ಲಿಂಗಪೂಜಾವಿಧಾನ ಮತ್ತು ವೀರಶೈವಾಚರಣೆಗಳನ್ನು ಬೋಧಿಸುವುದು ಯುಕ್ತವೇ ಹೊರತು ಈಗ ಭವಿಗಳನ್ನು ವೀರಶೈವರನ್ನಾಗಿಸುವಾಗ ನಡೆಸುವಂತೆ ವೀರಶೈವ ಬಾಲಕ ಬಾಲಕಿಯರಿಗೂ ಪುನಃ ನೂತನವಾಗಿ "ಶಿವದೀಕ್ಷೆ" ಎಂದು ಮಾಡಿಸಿ ಅವರಿಂದ ಭಿಕ್ಷಾಟನ ಲೀಲೆಯನ್ನು ಮಾಡಿಸುವ ಅನುಕರಣ ದಾಚರಣೆಯು ಅಪ್ರಕೃತವಲ್ಲವೆ?

(೫) ಈ ಎಲ್ಲ ಪ್ರಶ್ನೆಗಳನ್ನೂ ಪರಿಶೀಲಿಸುವುದರಿಂದ ವೀರಶೈವ ಬಾಲಕ ಬಾಲಕಿಯರಿಗೆ ಹಿಂದಿನಿಂದ ರೂಢಿಯಲ್ಲಿರುವ "ಸೆರೆಬಿಡಿಸುವ" ಪದ್ಧತಿಯೇ ಸರಿ ಮತ್ತು ಸಾಕೆಂದೂ ಈಗ ಎಂಟು ಮತ್ತು ಹದಿನಾರು ವರ್ಷಗಳಿಗೂ ಇನ್ನೂ ವೃದ್ಧರಿಗೂ ನಡೆಸಬೇಕೆಂದು ರೂಢಿಯಲ್ಲಿ ತರುತ್ತಿರುವ "ಶಿವದೀಕ್ಷೆ" ಎಂಬ ಕಾರ್ಯಕ್ರಮವು "ದ್ವಿಜ"ರ ಅನುಕರಣದಿಂದ ರೂಢಿಯಲ್ಲಿ ಬರುತ್ತಿದೆಯೆಂದೂ, ಈಗ ಮಠಗಳಲ್ಲಿ ಆಗಾಗ್ಗೆ ಸಾಮೂಹಿಕವಾಗಿ ನೆರವೇರುತ್ತಿರುವ "ದೀಕ್ಷಾಮಹೋತ್ಸವ" ಕಾರ್ಯವಿಧಾನವು ನಮ್ಮ ಪುರಾತನರು ಆಯಾ ಮಠಗಳಲ್ಲಿ ನೆರವೇರಿಸುತ್ತಿದ್ದ-ಭವಿಗಳನ್ನು ಭಕ್ತರನ್ನಾಗಿಸುವ-"ವೀರಶೈವ ದೀಕ್ಷಾಮಹೋತ್ಸವ"

ದ ಸಂಕೇತವಾಗಿದ್ದು ಕಾಲ ವ್ಯತ್ಯಾಸದಿಂದಲೂ ಶಿಳಿವಳಿಕೆಯು ವ್ಯತ್ಯಾಸ ದಿಂದಲೂ ಮಾರ್ಪಾಟನ್ನು ಹೊಂದಿ ಈಗ ಅದು "ವೀರಶೈವಂಗೆ ಪುನಃ ಶಿವದೀಕ್ಷೆ" ಕೊಡುವ ಪರಿಪಾಠಿಯಾಗಿ ಪರಿಣಮಿಸಿದೆಯೆಂದೂ ಕಂಡು ಬರುವುದಲ್ಲವೆ ?

ಮೇಲೆ ಕಂಡ ಈ ಪ್ರಶ್ನೆಗಳನ್ನು ಜಿಜ್ಞಾಸುಗಳೆಲ್ಲರೂ ಚೆನ್ನಾಗಿ ಪರ್ಯಾ ಲೋಚಿಸಬೇಕಾಗಿದೆಯಲ್ಲದೆ ಧರ್ಮಪರಿಪಾಲನೆಯ ಮುಖ್ಯಾಧಿಕಾರಿಗ ಳಾದ ನಮ್ಮ ಮತಾಧಿಪತಿಗಳೂ ಸಹ ಚೆನ್ನಾಗಿ ಪರ್ಯಾಲೋಚಿಸಿ ನಿಜಾಚ ರಣೆಯ ರೀತಿ ನೀತಿಗಳನ್ನು ಅಧಿಕಾರವಾಣಿಯಿಂದ ಪ್ರಸಿದ್ಧಿಸುವವರಾ ಗಬೇಕು.

ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಎಂಬ ಬಗೆ.

ಲೇ.— ಎನ್. ರಾಜೂಟಯ್ಯ ಕಾನಕಾನಹಳ್ಳಿ.

ಹಿಂದೆ ಶಿವಮೂರ್ತಿ ಶಾಸ್ತ್ರಿಗಳು ಶಿವದೀಕ್ಷೆಯ ವಿಷಯವಾಗಿ ಪ್ರಕ ಟಿಸಿದ್ದರು. ಅದಕ್ಕಾಗಿ ಶ್ರೀಮಾನ್ ಕ. ಬಿ. ಏ. ಬೆಂಗಳೂರು ಅವರು ಕೊಟ್ಟಿರುವ ಸಲಹೆಯು ಸರಿಯಾದುದೆಂದು ಕಂಡು ಬರುತ್ತದೆ. ಆದರೆ ಈಗಿನ ಆಲಸ್ಯ ಜನರಿಗೆ ಸರಿ ಬೀಳುವದಿಲ್ಲ. ಇದಕ್ಕೆ ಪ್ರಭುಗಳು ಒಂದು ಸನ್ನಿವೇಶದಲ್ಲಿ ಅಪ್ಪಣೇ ಕೊಡಿಸಿರುವುದನ್ನು ನೋಡುವ. "ನಡವಳಿಗಳೇ ನಾದಡಾಗಲಿ ನುಡಿವಳಿಯೊಳತಿ ಜಾಣರಾದಿರಿ ಪೊಡವಿಯಲಿ ನೀವ ಹುದು ಮಜಧಾಪನಿತ ನಸುನಗುತಾ ನಡೆಯಿರೈ ಶಿವಲಿಂಗ ಭಕ್ತಿಯ ಬೆಡಗನೇಕಾಂತದಲಿ ನಿಮಗೊಡಬಡಿಸಿ ಹೇಳುವೆನೆನುತ ಬಂದನು ಬಳಿಕ ಪ್ರಭುರಾಯ!" ನಂತರ ವೊಗ್ಗೆಯ ಮಾಯಿದೇವರು ಹೇಳಿರುವುದು. "ಸುಲಿಂಗವ ಸುಮ್ಮನೆ ಮನಂಗದಲ್ಲಿಧರಿಸಿರ್ಪದತ್ಯಧಿಕಂ ನಿರುತಂ ಶಿವಾ ಧವಾ." ಇದೂ ಅಲ್ಲದೆ ವೀರಶೈವಾಮೃತ ಮಹಾಪುರಾಣದಲ್ಲಿಯೂ

ಇನ್ನೂ ಅನೇಕ ಶಿವಶರಣರ ವಚನಗಳಲ್ಲಿಯೂ ಏಕೋತ್ತರಶತಸ್ಥಳಗ ಳಲ್ಲಿಯೂ ಇನ್ನೂ ವಿಶಾಲ ದೃಷ್ಟಿಯಿಂದ ನೋಡಿದರೆ ವೀರಶೈವರ ಜನನ ಕಾಲದಲ್ಲಿ ಲಿಂಗಧಾರಣ ಮಾಡುವುದು ಲಿಂಗಧಾರಿಗಳ ಮೊದಲನೆಯ ಕೆಲಸವಾಗಿರುವದರಿಂದ ಹೀಗೆ ಮಾಡದೆ ಹೋದರೆ ಅಯತ ಲಿಂಗಸಂ ಬಂಧವಿಲ್ಲದವರ ಮುಟ್ಟಲಾಗದೆಂದು ಅನೇಕಾಧಾರಗಳಿರುವಲ್ಲಿ ಲಿಂಗ ಧಾರಣವೇ ಮಾರ್ಗಕ್ರಿಯೆಯಾಗುತ್ತದಷ್ಟೇ. ಮಾರ್ಗವಿಲ್ಲದ ಪ್ರಯೋಗವು ಅಪ್ರಯೋಜಕವಾಗುತ್ತದೆ. ಮಾರ್ಗಕ್ರಿಯೆಯಿಂದಲೇ ಮೀರಿದ ಕ್ರಿಯೆಗೆ ಹೋಗಬೇಕಾಗಿರುವುದು. ಹೇಗೆಂದರೆ ನಿಜಗುಣ ಕೃತ ವಿವೇಕಚಿಂತಾ ಮಣಿಯಲ್ಲಿ ಸಾಮಾನ್ಯ, ವಿಶೇಷ, ನಿರಾಭಾರಿ ಎಂದು ಕ್ರಿಯಾಭೇದದಿಂ ದೆಂದು ಹೇಳಿರುವಲ್ಲಿ ಈಗಿನ ಜನರ ನಡವಳಿಯ ಸನ್ನಿವೇಶಕ್ಕೆ ತಕ್ಕ ಹಾಗೆ ಇದೆ. ಇದನ್ನೇ ನೋಡುವದಾದರೆ ಸಮಾಜವೆಲ್ಲವು ಒಂದು ಹದಕ್ಕೆ ಬಂದಾಗ ಲಿಂಗಧಾರಣೆಯೂ ಶಿವದೀಕ್ಷೆಯೂ ಒಂದೇ ಎಂದು ಹೇಳಲು ಯಾವ ಅಭ್ಯಂತರವೂ ಇರಲಾರದು. ಮತ್ತು ಷಟ್‌ಸ್ಥಳಗಳಲ್ಲಿ ಕ್ರಿಯಾಶಕ್ತಿಯೇ ಮೊದಲನೆಯದಾಗಿರುತ್ತದೆ. ಆದರೂ ಕ್ರಿಯಾಶಕ್ತಿ ಮೊದಲ್ಗೊಂಡು ಚಿತ್ ಶಕ್ತಿ ಕಡೆಯಾಗಿ ಒಂದಕ್ಕೊಂದು ಪ್ರಾಣಸ್ವರೂ ಪವಾಗಿರುತ್ತವೆಯೋ ಇದರಂತೆ ಲಿಂಗಧಾರಣವೆಂದರೂ ಶಿವದೀಕ್ಷೆಯೆಂ ದರೂ ಬೀಜ ವೃಕ್ಷಗಳ ಹಾಗೆ ಒಂದನ್ನೊಂದು ಒಳಗೊಂಡಿವೆಯೇ ವಿನಾ ಶಿವದೀಕ್ಷೆಯು ಬೇರೆಯಾಗಲಾರದು. ನಿ... ... ವಿವೇಕ ಚಿಂತಾಮ ಣಿಯ ೨ನೆಯ ಪ್ರಕರಣದಲ್ಲಿ ಸಪ್ತವಿಧದೀಕ್ಷೆಯ ಹೇಳಿರುವಲ್ಲಿ ಲಿಂಗಾ ಯತ ಲಿಂಗಸ್ವಾಯತವೆಂದು ಕಡೆಯ ಪರಿ. ಚನ್ನಬಸವೇಶ್ವರರು ಸಿದ್ಧ ರಾಮಯ್ಯಗಳಿಗೆ ೨೧ ದೀಕ್ಷೆಯನ್ನು ಬೋಧಿಸುವಾಗಲೂ ಲಿಂಗಧಾರಣ ವನ್ನೇ ಪ್ರಶಸ್ತಗೊಳಿಸಿರುವಾಗ ಲಿಂಗಧಾರಣ ಕ್ರಿಯೆಗಳೆ ದೀಕ್ಷೆಯ ತಿರುಳು. ದೀಕ್ಷೆಯು ಬೇರೆ ಉಳಿದಿರುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಜನ ನವಾದ ಕೂಡಲೇ ಲಿಂಗವ ಧರಿಸದೇ ಏಳೆಂಟು ವರುಷಗಳ ಮೇಲೆಯೆ ಲಿಂಗವ ಕಟ್ಟಬಹುದಾಗಿತ್ತು. ಅದು ಇಲ್ಲ. ಅಥವ ಜನ್ಮ ಲಿಂಗಧಾ ರಣವು ದೀಕ್ಷೆಯಾಗಲಾರದೆಂದು ಹೇಳಲಿಕ್ಕೆ ಬರುವುದೇ ? ಬಾರದು. ಅದು ಹೇಗೆಂದರೆ ವೀರಶೈವ ತತ್ವವೂ ಬಾಲ್ಯದಿಂದ ಕೂಡಿರುವಂತಾ ದ್ದಲ್ಲ. ಒಬ್ಬ ಮನುಷ್ಯನು ಪ್ರಾಪ್ತ ವಯಸ್ಕಳನ್ನು ನಿಶ್ಚಯಿಸಿ ತಾಲಿ ಕಟ್ಟಿದವಡನೆ ಸಾವೋಪಾಯ ದಂಡೋಪಾಯಗಳನ್ನು ತೋರಿ ಹೇಗೆ

ತನ್ನ ವಶವರ್ತಿ ಮಾಡಿಕೊಳ್ಳುವನೊ ಹಾಗೆ ಧರ್ಮಸರ್ಕಾರದ ಕಾನೂ
ನಿನಂತೆ ಗುರುವು ಲಿಂಗ ಕಟ್ಟಿದ ಬಳಿಕ ಅವರನ್ನು ದಾರಿಗೆ ತರಲು
ಸದಾ ಎಚ್ಚರಿಕೆಯಲ್ಲಿರಬೇಕು. ಈ ರೀತಿ ಇರದೆ ಭಕ್ತರ ಮನೆಗಳಲ್ಲಿ
ಬಿನ್ನಹವೆಂದರೆ ಮನೆಗೆ ಹೋಗುವುದು ಮೌನವಾಗಿ ಕುಳ್ಳುವದು ಲಿಂಗ
ಕಟ್ಟುವುದು ಪಾದೋದಕ ಪ್ರಸಾದಗಳನ್ನು ಎಲ್ಲರ ಕರೆದು ಕೊಡುವುದು
ನಂತರ ಊಟದ ರುಚಿಗಳನ್ನು ವರ್ಣಿಸುವುದು ದಕ್ಷಿಣೆಗೋಸ್ಕರ ಬಡ
ಬಗ್ಗರೆನ್ನದೆ ಕಿತ್ತಾಡುವುದು ಆ ನಂತರ ಯಾವಾಗಲಾದರು ತಮ್ಮ
ಮನಸ್ಸಿಗೆ ಬಂದಾಗ ಪುರೋಹಿತರು ನೋಡುವ ಪಂಚಾಂಗವನ್ನು ದಿನ
ವಾರ ತಿಥಿ ನಕ್ಷತ್ರಗಳನ್ನು ನೋಡಿ ಹವನ ಹೋಮಾದಿಗಳೊಡನೆ ದೀಕ್ಷೆಯ
ನಡೆಸುವೆವೆಂದು ಪೇಳುವುದು ಇವಕ್ಕೆಲ್ಲಾ ಶಿವಶರಣರ ವಚನಗಳಲ್ಲಿ
ಮಾನ್ಯವಿಧೆಯೆ? ದೀಕ್ಷೆಯಂದರೇನು ಸ್ಥೂಲಪಂಚಭೂತ ಕಾಯದ ಪ್ರಕೃತಿ
ಗುಣವ ನಷ್ಟವ ಮಾಡಿ ಇಷ್ಟಲಿಂಗವ ಪ್ರತಿಷ್ಠಿಸುವುದು. ಸೂಕ್ಷ್ಮ ಪಂಚ
ಭೂತ ಕಾಯದ ಪ್ರಕೃತಿ ಗುಣವ ನಷ್ಟವ ಮಾಡಿ ಪ್ರಾಣಲಿಂಗ ಪ್ರತಿಷ್ಠೆಯ
ಮಾಡುವುದು. ಕಾರಣ ಪಂಚಭೂತ ಕಾಯದ ಪ್ರಕೃತಿ ಗುಣವ ನಷ್ಟವ
ಮಾಡಿ ಭಾವಲಿಂಗ ಸಂಬಂಧವ ಮಾಡಿ ಇದಕ್ಕೆ ಅನುಮೋದಿಸುವ ಸ್ಥಳಕುಳ
ಭೇದವನ್ನು ವಿಚಾರಿಸಿ ವಿವರಿಸಿಕೊಡುವದು ಇದೇ ಶಿವಶರಣರು ಮಾಡುವ
ದೀಕ್ಷೆಯು ಎಂದು ಗೊತ್ತಾಗುತ್ತದೆ. ಇಂದಿನವರಿಗೂ ದೀಕ್ಷೆಯನ್ನು
ಹೊಂದಿರುವ ಭಕ್ತರುಗಳು ಒಂದು-ದೊಡ್ಡ ಗ್ರಾಮಕ್ಕೆ ಸರಾಸರಿ
೧೦೦ ಜನರಿರಬಹುದು. ಅವರೆಲ್ಲರಿಗೂ ಗುರುಗಳು ಹೇಳಿರುವುದೇನು
ಮಾಡಿರುವುದೇನು ಇದ್ದ ಲಿಂಗವ ತೆಗೆದು ತಿರುಗಿ ಕಟ್ಟುವವರು ಅಇದು
ಅಕ್ಷರಗಳನ್ನು ಕಿವಿಯಲ್ಲಿ ಬೋಧಿಸುವುದು ಹೀಗೆ ತಾನೆ ಕೆಲವು ದಿನ
ಗಳಿಂದ ದೀಕ್ಷೆಯು ನಡೆದಿರುವುದು. ಇದಕ್ಕೆ ದೀಕ್ಷೆ ಆಗಿರುವ ಕೆಲವು ಜನ
ರನ್ನು ವಿಮರ್ಶಿಸಿದರೆ ದೀಕ್ಷೆಯ ಪರಿಣಾಮ ಗೊತ್ತಾಗುವುದು. ಮುಂದೆ
ನೋಡೋಣ. ಬಸವಯ್ಯನವರ ಉದಾಹರಣೆಯು ಬಹಳ ಗರ್ಭೀಕೃತ
ವಾಗಿದೆ. ಲಿಂಗವ ಮಗುವಿಗೆ ಧರಿಸಿದ ಕೂಡ್ಲೆ ನಡೆಯಬೇಕಾದ ಕರ್ತ
ವ್ಯಗಳೆಲ್ಲವೂ ನಡದೇ ತೀರುವವು ನಿಜ. ಕೆಲವು ಲೇಖಕರ ಅಭಿಪ್ರಾ
ಯವೇನು ಜ್ಞಾನವಿರುವದಿಲ್ಲವೆಂದು ಜ್ಞಾನ ಅರಿವು ಬೇಕು ಸತ್ಯ.
ದಿನೇ ದಿನೇ ಅರಿವು ಉಂಟುಮಾಡಲು ಯಾರ ಕರ್ತವ್ಯ? ಯಾವಾಗ
ಲಿಂಗಧಾರಣ ಮಾಡುವರೋ ಆಗಲೇ ಗುರುಗಳು ತಂದೆ ತಾಯಿಗ

ಳಿಗೂ ಸಮಯಕ್ಕೆ ನೆರೆದಿರುವ ಬಂಧು ವರ್ಗದವರಿಗೂ ಹೀಗೆಯೇ ನಡೆ
ಯಬೇಕೆಂದು ನಿಶ್ಚಯಿಸಬೇಕಲ್ಲವೆ? ಮತ್ತು ಮಗುವಿನ ಲಿಂಗವನ್ನು
ತಾಯಿಯು ತನ್ನ ಲಿಂಗಪೂಜಾ ಕಾಲದಲ್ಲಿಯೇ ಅರ್ಪಣೋಪಚಾರ
ವನ್ನು ನಡಸೇಬೇಕೆಂದು ತಿಳಿಸಬೇಕಲ್ಲವೆ? ಈ ವಿಷಯಗಳನ್ನು ಕಣ್ಣು
ಗಳಿಂದ ನೋಡಿ ಕಿವಿಯಿಂದ ಕೇಳುತ್ತಿರುವ ಮಗುವು ದಿನೆ ದಿನೆ ತಿರು
ಗಾಡುವುದಾದರೆ ಲಿಂಗವನ್ನು ಒಂದು ಕಾಯಿತಿಯಲ್ಲಿ ಸೇರಿಸಿ ಕೊರಳಿಗೆ
ಹಾಕಿ ದೇವರು ಇಲ್ಲಿದ್ದಾನೆ ನೋಡಯ್ಯ ಎಂದು ತೋರಿಸುತ್ತಾ ಹೀಗೆಯೇ
ವಯಸ್ಸು ಬಂದ ಹಾಗೆಲ್ಲ ಅರುಹು ಆಚಾರಗಳನ್ನು ತಿಳಿಸುತ್ತಿರಬೇಕ
ಲ್ಲವೇ? ಇದಕ್ಕೆ ದೀಕ್ಷೆ ಶಿಕ್ಷೆ ಸ್ವಾನುಭವವೆಂದು ಹೇಳಬೇಕಾಗುತ್ತ
ದಷ್ಟೆ! ಗುರುಗಳಾಗಲೀ ತಂದೆತಾಯಿಗಳಾಗಲಿ ಹೀಗೆ ಮಾಡದೆ ಜನನ
ವಾದಾಗ ಕಟ್ಟಿದ ಲಿಂಗವು ಎಲ್ಲಿಯೋ ಹೋಗಿ ಬಿಡುತ್ತದೆ. ಅಲ್ಲಿಂದ
ಕೋಣೆಗೂಡುಗಳಲ್ಲಾಗಲಿ ಫೋಟೋಗಳಲ್ಲಿಯಾಗಲಿ ಅಥವಾ ಬೀದಿ
ದೇವರುಗಳನ್ನೇ ಆಗಲಿ 'ಇಗೋ ಅಪ್ಪಾ ದೇವರುಯೆಂದು' ನಾವೇ ತೋರಿ
ಸಹತ್ತುತ್ತೇವೆ. ಈ ರೀತಿ ಜ್ಞಾನದಲ್ಲಿ ಬೆಳೆದ ಹುಡುಗನಿಗೆ ಶಿವದೀಕ್ಷೆ
ಮಾಡುವದೆಂದರೆ ಕಟ್ಟುಬಣ್ಣದಂತೆಯೇ ಸರಿ. ಯಾಕಂದರೆ ಅತನಪಾ
ಲಿಗೆ ಅದು ಹೊಸತಾಗಿರುವದು. ಹಾದಿ ಬೀದಿ ದೇವರುಗಳ ಮೇಲೆಯೆ
ವಿಶ್ವಾಸವು ಹೆಚ್ಚಿ ದೀಕ್ಷೆಯೇತಕ್ಕೆಂದು ಲಿಂಗವಂತ ತತ್ವಗಳನ್ನೇ ಅಲ್ಲಗಳೆ
ಯುವನು. ಇಷ್ಟೆಲ್ಲವು ಶಿಕ್ಷಣವಿಲ್ಲದ ಕಾರಣ. ಈಗ ತಾನೆ ಕೆಲವು ಮಹ
ನೀಯರು ಶಿಕ್ಷಣ ಕಾರ್ಯವನ್ನು ಕೈಕೊಂಡಿರುವರು. ಅವರೆ ನಮಗೆ ಶರ
ಣರೆಂದು ನಂಬಿದ್ದೇವೆ. ಅದು ಇರಲಿ. ಶಿಕ್ಷಣವಿಲ್ಲದೆ ದೀಕ್ಷೆ ಎಂತು ಉಳಿ
ಯುವದು? ಯಾರೋ ಒಬ್ಬರು ಹೆಚ್ಚಿನ ದೀಕ್ಷೆಯಾಗಿದೆಯೆಂದು ಹೇಳಿ
ದರೆ ಅವರು ಆಚರಿಸುವುದು ಗುರುಮಾರ್ಗವೇ ಬೇರೆಮಾರ್ಗವೇ ಇಡೀ
ಅಯತಲಿಂಗಸಂಬಂದಿಗಳಿಗೂ ಗುರುಮಾರ್ಗವೇ ಬೇರೆ ಮಾರ್ಗವೇ
ಬೇರೆ ಇಲ್ಲವು. ಲಿಂಗವಂತ ಸಮಾಜಕ್ಕೆಲ್ಲ ಮೊದಲು ಸಾಮಾನ್ಯ ಕ್ರಿಯೆ
ಯೆಂತಲೂ ನಂತರ ಸ್ಥಳಕುಳ ವಿಚಾರದ ವಿಶೇಷ ಕ್ರಿಯೆಯು ಬೇಕಾಗಿ
ರುವದರಿಂದ ಸಾರಾಂಶ ಲಿಂಗಧಾರಣ ಪ್ರಾರಂಭಿಸಿಕ್ಕೊಂಡು ಲಿಂಗದುತ್ಪ
ತ್ತಿಯಂತಲೂ ಲಿಂಗೈಕ್ಯ ಕಡೆಯವರೆಗೂ ಶರಣರ ಅನುಭವ ಶಿಕ್ಷಣದಿಂ
ದಲೆ ಪರ್ಯವಸಾನವನ್ನು ಹೊಂದಬೇಕಾಗಿರುತ್ತದೆಯೇ ವಿನಾ ಬೇರೆ
ಇಲ್ಲವು. ಮತ್ತೆ ಗುರುವು ದಯಾಮಯನಾಗಿರುವದರಿಂದ ನಾವುಗಳು

ತ್ರಾಹಿ ತ್ರಾಹಿ ತಪ್ಪೆನ್ನದು ಕ್ಷಮೆ ನಿನ್ನದು ಎಂದು ಪ್ರಚಾರಕಾರ್ಯಕ್ಕಾಗಿ ಕಂಕಣಬದ್ಧರಾಗುವುದೇ ಪ್ರಯೋಜನವು. ಇದಕ್ಕೆ ಶಿವಶರಣರ

ವಚನ— ನುಡಿದಂತೆ ನಡೆವುದು. ನಡೆದಂತೆ ನುಡಿವುದು. ಹುಸಿಯ
ನುಡಿದು ತಪ್ಪುವ ಪ್ರಪಂಚಿಯನೊಲ್ಲ ನಮ್ಮ ಕೂಡಲ
ಸಂಗಮದೇವಾ.

ಈ ವಿಷಯವಾಗಿ ಕೆಲವು ಮಹನೀಯರು ಪತ್ರಿಕಾ ಮೂಲಕ ಸಲಹೆಗಳನ್ನು ಕೊಡುವುದು ನೋಡಿದರೆ ಸಕ್ಕರೆಯನ್ನು ಸವಿದರೆ ಹೇಗೆ ಬೇರೆ ರುಚಿ ಇರುವದಿಲ್ಲವೋ ಹಾಗೆಯೇ ಸರಿ.

ಆಡಿದರೇನು ಹಾಡಿದರೇನು ಓದಿದರೇನು
ತ್ರಿವಿಧದಾಸೋಹವಿಲ್ಲದನ್ನಕ್ಕರ? ಅಡದೆ ನವಿಲು
ಹಾಡದೆ ತಂತಿ ಓದದೆ ಗಿಳಿ? ಭಕ್ತಿಇಲ್ಲದವರನೊಲ್ಲ
ಕೂಡಲಸಂಗಮದೇವಾ.

ಬಸವೇಶ್ವರನಕಿಂತಲೂ ಮೊದಲಿನ ವೀರಶೈವ ಧರ್ಮ.

(ಲೇಖಕರು— ರಾ॥ ಬಾ॥ ಪಿ. ಜಿ. ಹಳಕಟ್ಟಿ ಬಿ ಏ. ಎಲ್. ಎಲ್. ಬಿ. ವಿಜಾಪುರ)

ಬ್ರಹ್ಮ, ವಿಷ್ಣು, ರುದ್ರ

(ಹಿಂದಿನಿಂದ ಮುಂದೆ ಸಾಗಿ ಮುಗಿದದ್ದು)

ಈ ಶಿರೋಲೇಖದ ಕೆಳಗೆ ಪರಮಾತ್ಮನ ಬಗ್ಗೆ ವೀರಶೈವರು ಬೇರೆ ಬೇರೆ ಕಾಲಗಳಲ್ಲಿ ಯಾವ ಯಾವ ಅಭಿಪ್ರಾಯಗಳನ್ನು ಹೊಂದಿದವರಾಗಿದ್ದರೆಂಬುದನ್ನು ಕುರಿತು ಹಿಂದಿನ ಸಂಚಿಕೆಗಳಲ್ಲಿ ನಾವು ವಿವೇಚಿಸುತ್ತ ಬಂದಿದೇನೆ. ಪರಮಾತ್ಮನು ಒಬ್ಬನೇ ಇದ್ದಾನೆಂಬ ವಿಚಾರಗಳು ಅತ್ಯಂತ ಪುರಾತನ ಧಾರ್ಮಿಕಗ್ರಂಥಗಳಾದ ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿರುತ್ತವೆ. ಅವುಗಳ ತರುವಾಯ ಪೌರಾಣಿಕ ಕಾಲವು ಬಂದೊದಗಿತು. ಆಗ ದೇವರ ಬಗ್ಗೆ ಅನೇಕ ಕಟ್ಟು ಕಥೆಗಳು ಜನರ ರಂಜನೆಗೋಸ್ಕರ ರಚಿಸಲ್ಪಟ್ಟವು. ಈ ಕಾಲದಲ್ಲಿ ಅಸಂಖ್ಯ ದೇವತೆಗಳು ಕಲ್ಪಿಸಲ್ಪಟ್ಟವು. ಇವುಗಳಲ್ಲಿ ಬ್ರಹ್ಮ, ವಿಷ್ಣು, ಶಿವ ಈ ದೇವರುಗಳು ಬಹಳ ಮಹತ್ವದ ಸ್ಥಾನವನ್ನು ಹೊಂದಿದವು. ಇವುಗಳ ಹೆಸರಿನಿಂದ ಅಸಂಖ್ಯ ದೇವಾಲಯುಗಳು ಉಚ್ಚ್ರಯಿಸಹತ್ತಿದವು. ಇವರೆಲ್ಲರಿಗೆ ಹೆಂಡಿರು, ಮಕ್ಕಳುಗಳು, ಅಣ್ಣ-ತಮ್ಮಂದಿರು ಸಹ ಇರುತ್ತಾರೆಂದು ತಿಳಿಯಲ್ಪಟ್ಟಿತು. ಸರಸ್ವತೀ, ಲಕ್ಷ್ಮೀ, ಪಾರ್ವತಿ, ಗಣಪತಿ, ಷಣ್ಮುಖ, ವೀರಭದ್ರ ಇವರೇ ಮೊದಲಾದವರು ಇವರು ಇರುತ್ತಾರೆ. ಇದರಿಂದ ಮುಂದೆ ಇವರ ಪೂಜೆಗಳೂ ಸಹ ಜನರಲ್ಲಿ ರೂಢವಾಗಹತ್ತಿದವು. ಈ ಸ್ಥಿತಿಯು ಮೂಲಕ ದೇವರ ವಿಷಯವಾಗಿ ಸಮಾಜದಲ್ಲಿ ಗೊಂದಲಗಳಿದ್ದವು. ಬರಬರುತ್ತ ವಿಷ್ಣುಭಕ್ತರೂ, ಶಿವಭಕ್ತರೂ ತಮ್ಮತಮ್ಮ ದೇವರ ಹೆಸರಿನಿಂದ ಪರಸ್ಪರ ದ್ವೇಷವನ್ನು ಸಹ ಮಾಡಹತ್ತಿದರು; ಇಷ್ಟೇ ಅಲ್ಲ, ಅವರು ಪರಸ್ಪರ ಹಿಂಸೆಯನ್ನು ಸಹ ಮಾಡತೊಡಗಿದರು. ಇದರಿಂದ ಹಿಂದೂ ಸಮಾಜದಲ್ಲಿ ಅತ್ಯಂತ ಅವ್ಯವಸ್ಥೆಯುಂಟಾ

ಯಿತು. ಮತ್ತು ಉಕ್ತನಿಷತ್ತುಗಳಲ್ಲಿ ದೇವರ ವಿಷಯವಾಗಿ ಕಂಡುಬರುವ ಉಚ್ಚ ಮತ್ತು ಶುದ್ಧ ವಿಚಾರಗಳನ್ನು ಬಹುಜನ ಸಮಾಜವು ಮರೆತು ಬಿಟ್ಟಿತು.

ಬಸವೇಶ್ವರನ ಪೂರ್ವದಲ್ಲಿ ಶಿವ ಮತ್ತು ವಿಷ್ಣು ಈ ದೇವತೆಗಳ ಹೆಸರಿನಿಂದ ಕಲಹಗಳು ವೀರಶೈವ ಸಮಾಜವನ್ನು ತಾಕದೆ ಬಿಡಲಿಲ್ಲ. ರೇವಣಸಿದ್ಧೇಶ್ವರ ಮತ್ತು ಶಂಕರದಾಸಿಮಯ್ಯ ಈ ಶಿವಶರಣರು ಶಿವೋಪಾಸಕರಾಗಿ ವಿಷ್ಣುದೇವಾಲಯಗಳನ್ನು ಕೆಡಿಸಿದ್ದು ಅವರ ಚರಿತ್ರೆಗಳಿಂದ ಕಂಡುಬರುತ್ತದೆ. ಈ ವಿಷಯವನ್ನು ಕುರಿತು ನಾವು ಸವಿಸ್ತರವಾಗಿ ಹಿಂದಿನ ಸಂಚಿಕೆಗಳಲ್ಲಿ ಅನೇಕ ಬಾರಿ ವಿವರಿಸಿದ್ದೇವೆ. ಆದರೆ ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪವು ಸ್ಥಾಪಿಸಲ್ಪಟ್ಟಿತು. ಈ ಮಂಟಪದಲ್ಲಿ ಸೇರ್ದಡೆಯಾವ ಶಿವಶರಣರು ಮಾತ್ರ ಈ ತಪ್ಪು ತಿಳುವಳಿಕೆಗಳನ್ನು ದೂರ ಮಾಡಿ, ದೇವರು ಒಬ್ಬನೇ ಇದ್ದಾನೆ, ಅವನು ಸಂಸಾರರಹಿತನೂ, ವಿಶ್ವವ್ಯಾಪಿಯೂ ಆಗಿದ್ದಾನೆ, ಎಂದು ಯಾವ ಉಪನಿಷದ್ವಾಕ್ಯಗಳು ಸಾರುತ್ತವೆಯೋ ಅವುಗಳಲ್ಲಿ ಅಡಕವಾಗಿರುವ ಶ್ರೇಷ್ಠ ತತ್ವಗಳನ್ನು ಜನರಲ್ಲಿ ಪ್ರಸಾರ ಮಾಡಿದರು. ಆದರೆ ಬಸವೇಶ್ವರನು ಪ್ರಬಲನಾಗಿ ಕಲ್ಯಾಣದಲ್ಲಿ ವಾಸಮಾಡಿದ್ದು ಕ್ರಿ. ಶಕೆ ೧೧೬೭ರಿಂದ ೧೧೬೭ರ ವರೆಗೆ ಅಂದರೆ ೫-೬ ವರ್ಷಗಳು ಮಾತ್ರ. ಮುಂದೆ ಮಧುವರಸ ಹರಳಯ್ಯಗಳು ವಧಿಸಲ್ಪಟ್ಟಿದ್ದರಿಂದ ವೀರಶೈವ ಸಮಾಜದಲ್ಲಿ ಒಂದು ಕ್ಷೋಭವು ಉತ್ಪನ್ನವಾಯಿತು. ಇದರಿಂದ ಅಗಿನ ಶಿವಶರಣರು ಕಲ್ಯಾಣದಲ್ಲಿ ನಿಲ್ಲುವದು ಅಶಕ್ಯವಾಯಿತು. ಆಗ ಅವರು ಆತ್ಮಸಂರಕ್ಷಣೆಗಾಗಿ ಉಳವಿಯ ಮಹಾ ಪರ್ವತ ಪ್ರದೇಶವನ್ನು ಆಶ್ರಯಿಸಬೇಕಾಯಿತು.

ಈ ಸ್ಥಿತಿಯುಂಟಾದರೂ ಕೂಡ, ಶಿವಾನುಭವ ಮಂಟಪದಲ್ಲಿ ಸ್ಥಿರಪಡಿಸಲ್ಪಟ್ಟ ವಿಚಾರಗಳನ್ನು ಬಸವೇಶ್ವರನ ತರುವಾಯ ಉತ್ಪನ್ನವಾದ ಅಸಂಖ್ಯ ವಚನಕಾರರೂ, ಶಿವಶರಣರೂ ಮತ್ತಿಷ್ಟು ಪ್ರಬಲವಾಗಿ ಪ್ರಸಾರಪಡಿಸಿದರು. ಈ ಸಂಗತಿಯು ಅವರ ಅಸಂಖ್ಯ ವಚನಗಳಿಂದ ಕಂಡುಬರುತ್ತದೆ.

ಪರಮಾತ್ಮನ ಬಗ್ಗೆ ಇಂಥ ಉಚ್ಚ ವಿಚಾರಗಳು ಶಿವಶರಣರ ಕಾಲದಲ್ಲಿ ಪ್ರಾದುರ್ಭವಿಸಿದ್ದರಿಂದ ಬ್ರಹ್ಮ, ವಿಷ್ಣು, ಶಿವ ಇವರ ಹೆಸರಿನಿಂದ

ದೇಶದಲ್ಲಿ ಕಲಹಗಳಾಗಲು ಅಥವಾ ಈ ದೇವತೆಗಳಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬದನ್ನು ಕುರಿತು ವಾದಗಳೇಳಲು ಕಾರಣವು ಉಳಿಯಲಿಲ್ಲ. ಈ ತೆಂದ ಭಿನ್ನತೆಗಳನ್ನು ಕಲ್ಪಿಸಕೂಡದೆಂದು ಅವರ ಅನೇಕ ಉಕ್ತಿಗಳು ಇರುತ್ತವೆ. ಅವುಗಳಲ್ಲಿ ಕೆಲವುಗಳನ್ನು ನಾವು ಹಿಂದಿನ ಸಂಚಿಕೆಯಲ್ಲಿ ಪ್ರಕಟ ಮಾಡಿದ್ದೇವೆ.

ಈ ಕಾಲದಲ್ಲಿ ಆಗಿ ಹೋದ ಶಿವಶರಣರ ಹೆಸರುಗಳನ್ನೂ ಮುದ್ರಿಕೆಗಳನ್ನೂ ನಾವು ಚನ್ನಾಗಿ ಪರೀಕ್ಷಿಸಬೇಕು ಅಂದರೆ ನಾವು ಮೇಲೆ ಹೇಳಿದ ಈ ವಿಷಯದ ಸತ್ಯತೆಯು ವಾಚಕರಿಗೆ ಪ್ರಕಟವಾಗದೆ ಇರದು. ರಾಮಚಂದ್ರನು ವಿಷ್ಣುವಿನ ಅವತಾರವೆಂದು ಜನರಲ್ಲಿ ಪ್ರಸಿದ್ಧನಾಗಿದ್ದಾನಷ್ಟೇ. ಆದ್ದರಿಂದ ಪೂರ್ಣ ಶಿವಭಕ್ತರು ಅವನನ್ನು ಪೂಜಿಸುವದಿಲ್ಲ. ಪೂಜಿಸುವ ಪದ್ಧತಿಯೂ ಅವರಲ್ಲಿಲ್ಲ. ಆದರೆ ಆತನ ಹೆಸರುಗಳುಳ್ಳ ಅನೇಕ ವಚನಕಾರರು ವೀರಶೈವರಲ್ಲಿ ಆಗಿ ಹೋಗಿದ್ದಾರೆ! ಹಾಗೆಯೇ ಈ ವಚನಕಾರರು ಗ್ರಹಣಮಾಡಿದ ಮುದ್ರಿಕೆಗಳಲ್ಲಿಯೂ ಕೂಡ ರಾಮನ ಹೆಸರುಗಳು ಕಂಡುಬರುತ್ತವೆ!! ಇದು ಲಕ್ಷಿಸತಕ್ಕ ಸಂಗತಿಯಾಗಿದೆ. ಈ ವಿಷಯವಾಗಿ ನಾವು ಕೆಳಗಿನ ಉದಾಹರಣೆಗಳನ್ನು ವಾಚಕರ ಲಕ್ಷಕ್ಕೆ ತರುತ್ತೇವೆ.

ದೇವರದಾಸಿಮಯ್ಯನು ಬಹು ಪ್ರಸಿದ್ಧ ವಚನಕಾರನು. ಅವನನ್ನು ಕುರಿತು ಬಸವೇಶ್ವರನು ಅತ್ಯಂತ ಭಕ್ತಿ ಭಾವದಿಂದ ತನ್ನ ವಚನಗಳಲ್ಲಿ ಉಲ್ಲೇಖಿಸುತ್ತಾನೆ. ಆದರೆ ಇವನ ಮುದ್ರಿಕೆಯು 'ರಾಮನಾಥ' ಎಂದು ಇದೆ. ಇದರಲ್ಲಿ ರಾಮ ಎಂಬ ಶಬ್ದವು ಬಂದಿರುತ್ತದೆ!

ರೆಮ್ಮಯ್ಯನ ಮುದ್ರಿಕೆಯು "ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ" ಎಂದಿದೆ.

ಏಕಾಂತದ ರಾಮಯ್ಯನು ವೀರಶೈವ ಶರಣರಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುತ್ತಾನೆ. ಇವನು ರಾಮನ ಹೆಸರನ್ನೇ ತನಗೆ ಇಟ್ಟುಕೊಂಡಿದ್ದಾನೆ. ಅಷ್ಟೇ ಅಲ್ಲ, ಅವನ ಮುದ್ರಿಕೆಯಾದ "ಏಕಾಂತ ರಾಮೇಶ್ವರಲಿಂಗ" ಇದರಲ್ಲಿಯೂ ಈ 'ರಾಮ' ಶಬ್ದವು ಬರುತ್ತದೆ.

ಮೇರಮಿಂಡದೇವನೆಂಬ ವಚನಕಾರನು "ಏಘಟದೂರ ರಾಮೇಶ್ವರಲಿಂಗ" ಎಂದು ತನ್ನ ಮುದ್ರಿಕೆಯನ್ನು ಇಟ್ಟುಕೊಂಡಿದ್ದಾನೆ.

ಮಾವಿನ ಚನ್ನಯ್ಯನ ವಚನಗಳಲ್ಲಿ "ಕಯ್ಯುಳಿಗತ್ತಿ ಅಡಿಗೂಟ ಕೆಡೆಯಾಗಬೇಡ. ಅಂ ನಿಜಾತ್ಮರಾಮನಾ" ಎಂಬ ಮುದ್ರಿಕೆಯು ಇದೆ. ಇದರಲ್ಲಿ ಅವನು ಪರಬ್ರಹ್ಮ ತತ್ವವನ್ನು ರಾಮ ಹೆಸರಿನಿಂದಲೇ ಸಂಬೋಧಿಸುತ್ತಾನೆ.

ತಳವಾರ ಕಾಮಿದೇವನು "ಕಾಮಹರಪ್ರಿಯ ರಾಮನಾಥಾ" ಎಂತಲೂ, ಬೇರೆ ಮೂವರು ವಚನಕಾರರು ಅನುಕ್ರಮವಾಗಿ "ಮಹಾಲಿಂಗ ಚನ್ನರಾಮ" ಎಂತಲೂ "ರಾಮೇಶ್ವರ ಲಿಂಗ" ಎಂತಲೂ "ಶಾಂತ ರಾಮಲಿಂಗ" ಎಂತಲೂ ತಮ್ಮ ಮುದ್ರಿಕೆಗಳನ್ನು ಇಟ್ಟುಕೊಂಡಿದ್ದಾರೆ.

ಚಂದಿಮರಸನೆಂಬ ವಚನಕಾರನು "ಸಿಮ್ಮಲಿಗೆಯ ಚನ್ನರಾಮ" ಎಂದು ಪರಮಾತ್ಮನನ್ನು ಕುರಿತು ಸಂಬೋಧಿಸುತ್ತಾನೆ. ಇವನು ಬಹು ಪ್ರಸಿದ್ಧನು.

ಗುಪ್ತಮಂಚಣ್ಣನೆಂಬ ಶಿವಶರಣನ ಮುದ್ರಿಕೆಯು ಒಂದು ವಿಶಿಷ್ಟ ತೆರನಾಗಿದೆ. ಅದು "ನಾರಾಯಣ ಪ್ರಿಯ ರಾಮನಾಥಾ" ಎಂದಿದೆ. ಅಂದರೆ ಪರಮಾತ್ಮನನ್ನು ಕುರಿತು ಹೇಳುವಲ್ಲಿ 'ನಾರಾಯಣ'ನಿಗೆ ಪ್ರಿಯವು ಎಂದು ಹೇಳಲು ಅವನಿಗೆ ಎಷ್ಟು ಮಾತ್ರವೂ ಸಂದೇಹವಿಲ್ಲ. ಅವನ ಒಂದು ವಚನವು ಹೀಗಿದೆಯೆಂಬುದನ್ನು ವಾಚಕರು ವಿಚಾರಮಾಡ ತಕ್ಕದ್ದು. ಅದು ಅವುದೆಂದರೆ:—

"ಜಗವೆಲ್ಲ ಗೋವಿನ ಹಂಗು. ನರಸುರಾದಿಗಳೆಲ್ಲ ಗೋವಿನ ಹಂಗು. ಸಕಲ ಜೀವಾಧಾರ, ಗೋಮಯ, ಗೋಕುಲಕ್ಕೊಡೆಯ, ಗೋ ಪ್ರಣಮಸ್ವರೂಪ ನಾರಾಯಣ ಪ್ರಿಯ ರಾಮನಾಥಾ"

ಎಂದು ಅವನು ಹೇಳುತ್ತಾನೆ. ಜಗತ್ತಿನಲ್ಲೆಲ್ಲ ಪರಮಾತ್ಮನು ತುಂಬಿಕೊಂಡಿದ್ದಾನೆಂದು ಅನೇಕ ವಚನಕಾರರು ಹೇಳುತ್ತಿರಷ್ಟೇ. ಅವರು ತಮ್ಮ ಸುತ್ತಲೂ ಗೋಚರಿಸುವ ಬನಗಳು, ಬಳ್ಳಿಗಳು, ಚಲಿಸುವ ಹವೆಯು, ಬಿತ್ತುವ ಬೀಜ, ಇವೂ ಕೂಡ ಪರಮಾತ್ಮನ ಕಳೆ ಎಂದು ಅವರು ವಿವರಿಸುತ್ತಾರೆ. ಅದೇ ಮೇರೆಗೆ ಈ ವಚನಕಾರನು ಗೋವಿನ ಮಹತ್ವವನ್ನು ಹೇಳುವಲ್ಲಿ ಈ ಗೋವಿಗೂ ನಾರಾಯಣನಿಗೂ ನಿಕಟ ಸಂಬಂಧವಿದೆ ಎಂದು ಹೇಳಿ, ಪರಮಾತ್ಮನನ್ನು ಕುರಿತು "ನಾರಾಯಣಪ್ರಿಯ ರಾಮನಾಥಾ" ಎಂದು ಸಂಬೋಧಿಸುತ್ತಾನೆ.

ವೀರಶೈವ ವಚನಕಾರರು ವಿಷ್ಣುವಿನ ಕಡುಹೆಗೆಗಳಾಗಿದ್ದರೆ ಮೇಲೆ ಹೇಳಿದ ರೀತಿಯಿಂದ ಅವರು ಪರಮಾತ್ಮನನ್ನಕುರಿತು ವಿಷ್ಣುವಿಗೆ ಸಂಬಂಧಿಸಿ ಹೇಳುತ್ತಿರಲಿಲ್ಲ.

ಈ ಸಂಗತಿಯು ಆಗಿನ ಶಿವಶರಣರಲ್ಲಿ ಮಾತ್ರವಲ್ಲ, ಸಾಮಾನ್ಯ ಜನರಲ್ಲಿಯೂ ಕೂಡ ಇದ್ದುದು ಕಂಡುಬರುತ್ತದೆ. ಹರಿಹರ ಕವಿಯು ವೀರಶೈವ ಕವಿಗಳಲ್ಲಿ ಅತ್ಯಂತ ಶ್ರೇಷ್ಠ ಸ್ಥಾನವನ್ನು ಹೊಂದಿದವನಾಗಿದ್ದಾನಷ್ಟೇ. ಆದರೆ ಅವನ ಹೆಸರನ್ನು ವಾಚಕರು ಪರೀಕ್ಷಿಸಬೇಕು. ಅದರಲ್ಲಿ ಹರಿ, ಹರ ಇವರಲ್ಲಿ ವಿಭೇದವನ್ನು ಕಲ್ಪಿಸಕೂಡದೆಂಬ ಭಾವವು ಪ್ರಕಟವಾಗುವದಿಲ್ಲವೇ? ಹಾಗೆಯೇ ಅವನ ಸೋದರಳಿಯನಾದ ರಾಘವಾಂಕನು' ಶ್ರೀರಾಮನ ಹೆಸರನ್ನೇ ಇಟ್ಟುಕೊಂಡಿದ್ದಾನೆ. ಈ ಉಭಯತರು ಹಿಂದುಗಡೆ ವೀರಶೈವ ಧರ್ಮವನ್ನು ಸ್ವೀಕರಿಸಿದರೆಂದು ಭಾವಿಸಿದರೂ ಕೂಡ, ಅವರು ಆ ಸಮಯದಲ್ಲಿ ವಿಷ್ಣುವಿಗೆ ಸಂಬಂಧಪಟ್ಟ ತಮ್ಮ ಹೆಸರನ್ನು ಬದಲು ಮಾಡಿ ಶಿವನಿಗೆ ಸಂಬಂಧಿಸಿದ ಬೇರೊಂದು ಹೆಸರನ್ನು ಇಟ್ಟುಕೊಂಡು ಪ್ರಸಿದ್ಧಿಗೆ ಬರಬಹುದಾಗಿತ್ತಲ್ಲವೇ? ಆದರೆ ವಿಷ್ಣುವಿನ ಹೆಸರುಗಳಲ್ಲಿ ಅಕ್ಷೇಪಾರ್ಹವಾದುದು ಆಗಿನ ಕಾಲದಲ್ಲಿಯು ವೀರಶೈವರಿಗೆ ತೋರಿರಲಿಕ್ಕಿಲ್ಲೆಂದು ಕಾಣುತ್ತದೆ. ಆದ್ದರಿಂದಲೇ ಅವರು ಇವುಗಳಲ್ಲಿ ಬದಲಾವಣೆ ಮಾಡಿಲ್ಲೆಂದು ಹೇಳಬೇಕಾಗುತ್ತದೆ. ಬಸವೇಶ್ವರನ ತಂದೆಯ ಹೆಸರು 'ಮಾದರಸ' ಎಂದು ಇದೆ ಇದು ವಿಷ್ಣುವಿನ ಹೆಸರಾದ 'ಮಾಧವ-ಅರಸ' ಎಂಬುದರ ಬೇರೊಂದು ರೂಪವದೆ.

ದೇವರ ವಿಷಯವಾಗಿ ಈ ತರದ ಉದಾರ ವಿಚಾರಗಳ ಪ್ರಭಾವವು ಬಹುಜನ ಸಮಾಜದ ಮೇಲೆ ಆಗ ಸ್ವಾಭಾವಿಕವಾಗಿ ಉಂಟಾಗದೆ ಇರದು. ಇದು ಬಸವೇಶ್ವರನ ಕಾಲದಲ್ಲಿ ಅಂದರೆ ೧೧, ೧೨, ೧೩ನೇ ಶತಮಾನಗಳಲ್ಲಿ ಕರ್ನಾಟಕದಲ್ಲಿ ರಚಿಸಲ್ಪಟ್ಟ ದೇವಾಲಯಗಳಲ್ಲಿ ಕೂಡ ಕಂಡುಬರುತ್ತದೆ. ಅವುಗಳಲ್ಲಿ ಹರಿಹರ ವಿಭೇದವನ್ನು ದೂರೀಕರಿಸಿದ ದೃಶ್ಯಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಉದಾಹರಣಾರ್ಥವಾಗಿ ಐಹೊಳೆ ಗ್ರಾಮದಲ್ಲಿ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಕೆಲವು ಕಡೆಗೆ ಒಂದೇ ಕಟ್ಟಡದಲ್ಲಿ ವಿಷ್ಣುವಿಗೆ ಸಂಬಂಧಿಸಿದ ಚಿತ್ರಗಳೂ ಅವುಗಳ ಮಗ್ಗುಲುಗಳಲ್ಲಿಯೇ ಶಿವನಿಗೆ ಸಂಬಂಧಿಸಿದ ಚಿತ್ರಗಳೂ ಇರುವದನ್ನು ನಾವು ನೋಡುತ್ತೇವೆ. ಮೈಸೂರು ಪ್ರಾಂತದಲ್ಲಿ ತುಂಗಭದ್ರೆಯ ತೀರ

ದಲ್ಲಿರುವ ಹರಿಹರ ಗ್ರಾಮದಲ್ಲಿರುವ ಪ್ರಸಿದ್ಧ ದೇವಾಲಯದಲ್ಲಿ ಇದೇ ಸಂಗತಿಯು ಹೊರಪಡುತ್ತದೆ. ಈ ಸಂಗತಿಗಳು ಏತರ ದ್ಯೋತಕವು? ಪರಮಾತ್ಮನು ಒಬ್ಬನೇ ಇದ್ದಾನೆ ಮತ್ತು ಇತರ ದೇವತೆಗಳೆಲ್ಲ ಅವನ ಅಂಶಗಳು ಇವೆ ಎಂಬ ವಿಚಾರಗಳು ಯಾವ ಕಾಲದಲ್ಲಿ ಪ್ರಚಾರ ಮಾಡಲ್ಪಟ್ಟವೋ ಆ ಕಾಲದಲ್ಲಿ ಈ ದೇವಾಲಯಗಳು ಸ್ಥಾಪಿಸಲ್ಪಟ್ಟಿರಬೇಕು. ೧೨ನೇ ೧೩ನೇ ಶತಮಾನಗಳಲ್ಲಿಯೇ ಅಸಂಖ್ಯ ವಚನಕಾರರು ದೇಶದಲ್ಲಿ ಉತ್ಪನ್ನರಾದರು ಆಗ ಅವರ ಉದಾರ ವಿಚಾರಗಳು ದೇಶಮಧ್ಯದಲ್ಲಿ ಪ್ರಸಾರ ಹೊಂದಿರಲಿಕ್ಕೆಬೇಕು. ಇವರು ಇದ್ದ ಕಾಲಕ್ಕೆ ಇಂಥ ದೇವಾಲಯಗಳು ಉದ್ಭವಿಸಿದ್ದು. ಅವುಗಳಲ್ಲಿ ಹರಿ-ಹರ ವಿಭೇದವನ್ನು ದೂರೀಕರಿಸಿರಬಹುದೆಂದು ತೋರುತ್ತದೆ.

'ವೀರಶೈವರ ಪೂರ್ವದ ಹೆಸರು ಯಾವುದು" ಎಂಬ ಶಿರೋಲೇಖದ ಕೆಳಗೆ ಶಿವಾನುಭವ ಸಂಪುಟ ೧೩, ೧೪ ಇವುಗಳಲ್ಲಿ ೮—೧೦ ಲೇಖಗಳು ಅನೇಕರ ಮಹನೀಯರಿಂದ ಬರೆಯಲ್ಪಟ್ಟಿವೆ. ಅವುಗಳಲ್ಲಿ ನಾವು ಬರೆದ ಕೆಲವು ಲೇಖಗಳಲ್ಲಿ 'ವೀರಶೈವ' ಎಂಬ ಹೆಸರು ಬಸವೇಶ್ವರನ ಕಾಲದಲ್ಲಿದ್ದಿಲ್ಲೆಂದು ಪ್ರಕಟಪಡಿಸಿದ್ದೇವೆ. ಯಾಕಂದರೆ ಆ ಕಾಲದ ವೀರಶೈವರ ಶಿಲಾಶಾಸನಗಳಲ್ಲಿ ಈ ಶಬ್ದವು ದೊರಕುವದಿಲ್ಲ ಮತ್ತ ಬಸವೇಶ್ವರನ ವಚನಗಳಲ್ಲಿ ಮತ್ತು ಹರಿಹರದೇವನ ಗ್ರಂಥಗಳಲ್ಲಿ ಸಹ ಈ ಶಬ್ದವು ಉಪಯೋಗಿಸಲ್ಪಟ್ಟಿಲ್ಲ. ಇವೇ ಈ ವಿಷಯವಾಗಿ ನಾವು ತೋರಿಸಿದ ಕಾರಣಗಳಲ್ಲಿ ಮಹತ್ವವಾದವುಗಳು ಹೀಗೆಊಹಿಸಲು ಐತಿಹಾಸಿಕ ಮತ್ತು ಧಾರ್ಮಿಕ ಕಾರಣಗಳೂ ಇವೆ ಎಂಬದು ಈ ಲೇಖವಲ್ಲಿ ಕಾಣಿಸಿದ ಸಂಗತಿಗಳಿಂದ ಕಂಡುಬರುವದು. ಆಗ ಉತ್ಪನ್ನರಾದ ಶಿವಶರಣರು ಪರಮಾತ್ಮನು ಒಬ್ಬನೇ ಇದ್ದಾನೆಂದು ಭಾವಿಸಿ ತ್ರಿಮೂರ್ತಿಗಳಲ್ಲೊಬ್ಬನಾದ ಶಿವನನ್ನು ನಿರಾಕರಿಸಿದ್ದರಿಂದ ಅವರು ವೀರಶೈವ ಎಂಬ ಶಬ್ದವನ್ನು ಉಪಯೋಗಿಸಿಕೊಂಡಿರುವದಿಲ್ಲ. ತಾವು ವೀರಶೈವ ಎಂಬ ಶಬ್ದ ಉಪಯೋಗಿಸುವಲ್ಲಿ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಭಕ್ತರು ಎಂಬ ಭಾವವು ಉಂಟಾಗುತ್ತದೆ. ಆದ್ದರಿಂದ ಯಾವ ಕಾಲದಲ್ಲಿ ಶಿವ-ವಿಷ್ಣು ಈ ದೇವತೆಗಳ ಶ್ರೇಷ್ಠತ್ವದ ಬಗ್ಗೆ ಕೋಲಾಹಲಗಳೆದ್ದವೋ ಆ ಕಾಲದಲ್ಲಿ ಇಂಥ ಶಬ್ದವು ಉತ್ಪನ್ನವಾಗಿರಬೇಕು. ಉದಾಹರಣಾರ್ಥವಾಗಿ ಚೋಳ ರಾಜರಲ್ಲಿ ಒಂದು ಕಾಲದಲ್ಲಿ ಈ ಸ್ಥಿತಿಯುಂಟಾಯಿತು. ಆದ್ದರಿಂದ ಅಲ್ಲಿ ವೀರವೈಷ್ಣವರು ವೀರಶೈವರು, ಎಂಬ ಪೆಸ

ರಿನ ಸಮಾಜಗಳು ಉತ್ಪನ್ನವಾದವು. ತಮಿಳು ದೇಶದಲ್ಲಿ "ವೀರಶೈವ"ರು ಎಂಬ ಹೆಸರಿನ ಒಂದು ಪಂಗಡವೂ ಇದೆ ಎಂದು ನಾವು ಕೇಳುತ್ತೇವೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಯಾವ ಕಾಲದಲ್ಲಿ ಶಿವ ಮತ್ತು ವಿಷ್ಣು ಈ ದೇವತೆಗಳ ವಿಷಯವಾಗಿ ಹೋರಾಟಗಳು ಎದ್ದವೋ ಆ ಕಾಲದಲ್ಲಿ ಈ ವೀರಶೈವ ಶಬ್ದವು ಉದ್ಭವಿಸಿರಬೇಕೆಂಬ ಅನುಮಾನವು ಉಂಟಾಗುತ್ತದೆ. ಆದ್ದರಿಂದ ಈ ಜಗಳಗಳನ್ನು ದೂರ ಮಾಡಿದ ಶಿವಶರಣರ ಕಾಲದಲ್ಲಿ ಇವರು ತಾವು 'ವೀರಶೈವ' ರೆಂದು ಹೇಳಿಕೊಳ್ಳುವ ಸಂಭವವಿಲ್ಲ. ಆಗ ಅವರು ತಾವು ಶಿವಭಕ್ತರು, ಲಿಂಗವಂತರು, ಲಿಂಗಾಯತರು ಎಂದು ಸಾಮಾನ್ಯ ಹೆಸರಿನಿಂದ ಕರೆದುಕೊಂಡಿರುವದು ಸ್ವಾಭಾವಿಕವಾಗಿದೆ. ಹಾಗೆಯೇ ಅವರು ತಮ್ಮನ್ನು ಕರೆಯಿಕೊಂಡೂ ಇದ್ದಾರೆ. ಈ ಕಾರಣದಿಂದಲೇ ಈ ಕಾಲದಲ್ಲಿ ಉಂಟಾದ ವಾಙ್ಮಯದಲ್ಲಿ, ಅಂದರೆ ಬಸವೇಶ್ವರನ ವಚನದಲ್ಲಿ ಮತ್ತು ಹರಿಹರನ ಕಾವ್ಯಗಳು ಉದ್ಭವಿಸಿದ ಕಾಲದಲ್ಲಿ ಈ ಶಬ್ದವು ಬಳಕೆಯಲ್ಲಿರಲಿಲ್ಲ.

ಆದರೆ ೧೪ನೇ ಶತಮಾನದಲ್ಲಿ ಉಂಟಾಗಿರುವ ವೀರಶೈವ ಗ್ರಂಥಗಳಲ್ಲಿ "ವೀರಶೈವ" ಎಂಬ ಹೆಸರು ಪ್ರಾದುರ್ಭವಿಸಹತ್ತುತ್ತದೆ ಭೀಮಕವಿಯ ಬಸವ ಪುರಾಣದಲ್ಲಿ ಈ ಶಬ್ದವು ಅನೇಕ ಬಾರಿ ಬಂದಿರುತ್ತದೆ. ಆದರೆ ಈ ಗ್ರಂಥವು ೧೪ನೇ ಶತಮಾನದ ಮಧ್ಯ ಭಾಗದಲ್ಲಿ ರಚಿತವಾದದ್ದಿರುತ್ತದೆ. ಈ ಕಾಲದಲ್ಲಿ ಪುನಃ ಶಿವ ಮತ್ತು ವಿಷ್ಣು ಈ ದೇವತೆಗಳ ಬಗ್ಗೆ ಪ್ರಾಂತದಲ್ಲಿ ವಾದಗಳು ಉದ್ಭವಿಸಿದ ಹಾಗೆ ತೋರುತ್ತದೆ. ಈ ಶತಮಾನದಲ್ಲಿಯೇ ಶ್ರೀ ಮಧ್ವಾಚಾರ್ಯರ ವೈಷ್ಣವ ಮತವು ಪ್ರಾದುರ್ಭವಿಸಿತು. ಈ ಮತದಲ್ಲಿ ವಿಷ್ಣುವಿಗೆ ಶ್ರೇಷ್ಠ ಸ್ಥಾನವು ಕೊಡಲ್ಪಟ್ಟು ಶಿವ ಮತ್ತು ಶಿವನಿಗೆ ಸಂಬಂಧಿಸಿದ ದೇವತೆಗಳಿಗೆ ಕಡಿಮೆಯ ಸ್ಥಾನವು ಕೊಡಲ್ಪಟ್ಟಿತು. ಇದರಿಂದ ಮೊದಲಿನಂತೆಯೇ ವಿವಾದಗಳು ಉತ್ಪನ್ನವಾಗಿ ವೀರಶೈವರು, ವೀರವೈಷ್ಣವರು ಎಂಬ ಪಂಗಡಗಳುದ್ಭವಿಸಿದವು.

ಇದಲ್ಲದೆ ಈ ೧೪ನೇ ಶತಮಾನದಿಂದೀಚೆಗೆ ಪುರಾತನ ಶಿವಶರಣರ ವಚನಗಳ ಅಭ್ಯಾಸವು ಕಡಿಮೆಯಾಗಹತ್ತಿತು. ಬಹುಶಃ ಅದು ನಿಂತು ಹೋಯಿತೆಂತಲೇ ಹೇಳಬೇಕಾಗುತ್ತದೆ. ಅವುಗಳ ಬದಲು ಸಂಸ್ಕೃತದ ಪ್ರಭಾವವು ಹೆಚ್ಚಹತ್ತಿತು. ಅದರಿಂದ ವಚನಗಳಲ್ಲಿರುವ ಉದಾರ ಮತ್ತು ಶ್ರೇಷ್ಠ ವಿಚಾರಗಳನ್ನು ಸಮಾಜದಲ್ಲಿ ಪರಿಶೀಲಿಸುವ ರೂಢಿಯು ತಪ್ಪಿ

ಹೋಗಹತ್ತಿತು. ಸಂಸ್ಕೃತ ಗ್ರಂಥಗಳೂ ಪುರಾಣಗಳೂ ಬರೆಯುಲ್ಪಡಹತ್ತಿದವು. ಮುಠಾಧಿಕಾರಿಗಳ ಪ್ರಾಬಲ್ಯವು ಹೆಚ್ಚಿತು. ಇವರು ಯಾವುಗಲೂ ಪುರಾಣ ಗ್ರಂಥಗಳನ್ನು ಪ್ರೀತಿಸುವವರು. ಮತ್ತು ಅಂಧ ಶ್ರದ್ಧೆಯನ್ನು ಜನರಲ್ಲಿ ಬೀರುವಂಥವರು. ಆದ್ದರಿಂದ ಅವರ ಕಾಲದಲ್ಲಿ ಶಿವಶರಣರ ಚರಿತ್ರೆಗಳಲ್ಲಿ ಅನೇಕ ಅದ್ಭುತ ಸಂಗತಿಗಳು ಸೇರಿಸಲ್ಪಡಹತ್ತಿದವು. ಈ ಚರಿತ್ರೆಗಳು ಕೇವಲ ವಾಙ್ಮಯ ದೃಷ್ಟಿಯಿಂದ ಮಹತ್ವದವಿರಬಹುದು. ಆದರೆ ಅವುಗಳಲ್ಲಿ ವಚನಕಾರರ ವಿಚಾರಗಳ ಹೊಳಹು ಮಾತ್ರ ಕಡಿಮೆಯಾಗಿ ಹೊಸಕಾಲದ ಶಿವ, ಪಾರ್ವತಿ, ವೀರಭದ್ರ ಮುಂತಾದ ದೇವತೆಗಳ ಪ್ರಭಾವವು ಹೆಚ್ಚಾಗಹತ್ತಿತು. ಹೀಗೆ ವಚನಕಾರರ ಉಕ್ತಿಗಳ ಮಹತ್ವವು ಕಡಿಮೆಯಾಗಹತ್ತಲು ಅವುಗಳಲ್ಲಿರುವ ವಿಚಾರಗಳ ತಿಳುವಳಿಕೆಯೂ ಕೂಡ ಸಮಾಜದಲ್ಲಿ ಹೊರಟು ಹೋಯಿತು. ಈ ಸ್ಥಿತಿಯಲ್ಲಿ 'ಶಿವ' ಎಂದರೆ ತ್ರಿಮೂರ್ತಿಗಳಲ್ಲಿ ಒಬ್ಬನಾಗಿರುವ ದೇವತೆ ಎಂಬ ಭಾವವು ಸ್ವಾಭಾವಿಕವಾಗಿ ಪುನಃ ಪ್ರಾದುರ್ಭವಿಸಿತು. ಆಗ ಶಿವನ ಪಂಚವಿಂಶತಿ ಲೀಲೆಗಳ ಮೇಲೆ ಗ್ರಂಥಗಳು ರಚಿಸಲ್ಪಡಹತ್ತಿದವು. ವೀರಶೈವ ಮಹಾಕವಿಯಾದ ವಿರೂಪಾಕ್ಷ ಪಂಡಿತನು ಬರೆದ ಚನ್ನಬಸವ ಪುರಾಣವು ಶಿವನ ೨೫ ಲೀಲೆಗಳ ವರ್ಣನೆಗಳಿಂದ ತುಂಬಿ ಹೋಗಿದೆ. ಆದ್ದರಿಂದ ಇಂಥ ಕಾಲದಲ್ಲಿ "ವೀರಶೈವ" ಈ ಹೆಸರಿಗೆ ಪ್ರಧಾನ್ಯವು ಉಂಟಾಗಹತ್ತಿತು. ಆದರೆ ಬಹುಜನ ಸಮಾಜವು ಮಾತ್ರ ತನ್ನ ಪೂರ್ವದ ಹೆಸರುಗಳಾದ, ಲಿಂಗಾಯತ, ಲಿಂಗವಂತ, ಈ ಶಬ್ದಗಳನ್ನು ಇನ್ನೂ ಬಿಟ್ಟಿಲ್ಲ.

ಈ ಪ್ರಕಾರ ನಾವು ಪರಮಾತ್ಮನ ಬಗ್ಗೆ ವೀರಶೈವ ಸಮಾಜದಲ್ಲಿ ಯಾವ ವಿಚಾರಗಳು ಉದ್ಭವಿಸಿದವು, ಅವುಗಳಲ್ಲಿ ಮಾರ್ಪಾಡುಗಳು ಯಾವ ಯಾವ ಕಾಲಗಳಲ್ಲಿ ಹೇಗೆ ಉಂಟಾದವು ಎಂಬುದರ ವಿಷಯವಾಗಿ ನಾವು ಒಂದು ಲೇಖ ಮಾಲೆಯನ್ನು ಪ್ರಾರಂಭಿಸಿದೆವು, ಈ ಮಾಲೆಯಲ್ಲಿ ಈಗಿನದೇ ಕಡೆಯ ಲೇಖವಾಗಿದೆ. ಇವುಗಳಲ್ಲಿ ನಾವು ಪ್ರಕಟಿಸಿದ ವಿಚಾರಗಳ ವಿಷಯವಾಗಿ ಭಿನ್ನಾಭಿಪ್ರಾಯಗಳಿರಬಹುದು, ಅವುಗಳನ್ನು ವಾಚಕರು ಅವಶ್ಯವಾಗಿ ಪ್ರಕಟ ಮಾಡಬೇಕೆಂದು ನಮ್ಮ ವಿನಂತಿ ಇದೆ.

ಪಾದೋದಕ.

(ಲೇಖಕರು— ಶ್ರೀ ಮಲ್ಲಿಕಾರ್ಜುನಪ್ಪ ಶರಬಸಪ್ಪ ಮಾವಿನ
ಮು. ಸವದತ್ತಿ, ಜಿ. ಬೆಳಗಾವ)

[ವೀರಶೈವರಲ್ಲಿ ಅಷ್ಟಾವರಣಗಳಿಗೆ ಸಂಬಂಧಿಸಿದ ಆಚಾರಗಳು ಅತ್ಯಂತ ಮಹತ್ವವಾದವುಗಳು. ಇವುಗಳ ಮರ್ಮವು ಜನರಿಗೆ ಗೊತ್ತಿಲ್ಲದ ಮೂಲಕ ಅವುಗಳ ವಿಷಯವಾಗಿ ತಪ್ಪು ಅಭಿಪ್ರಾಯಗಳು ರೂಢವಾಗಿರುತ್ತವೆ. ಇದರಿಂದ ಬಹುಜನರು ಅವುಗಳ ಆಚರಣೆಯಲ್ಲಿ ಶೈವ ಪದ್ಧತಿಗಳನ್ನು ಸಂಬಂಧಿಸುವದುಂಟು. ಆದರೆ ಶೈವಪದ್ಧತಿಗಳಿಗೂ ವೀರಶೈವಪದ್ಧತಿಗಳಿಗೂ ಮಹದಂತರವಿರುತ್ತದೆ. ಶೈವಪದ್ಧತಿಗಳಲ್ಲಿ ಬ್ರಾಹ್ಮಣರ ಮಾರ್ಗದ ಅನೇಕ ಆಚಾರಗಳು ಸೇರಿಕೊಂಡಿರುತ್ತವೆ. ಆದರೆ ವೀರಶೈವ ಪದ್ಧತಿಗಳಲ್ಲಿ ಶುದ್ಧ ತಾತ್ವಿಕ ವಿಚಾರಗಳ ಪ್ರಭಾವವು ಕಂಡು ಬರುತ್ತದೆ. ಅವು ಮನುಷ್ಯನ ಉಚ್ಚತರದ ಧ್ಯೇಯವನ್ನು ಸ್ಪಷ್ಟವಾಗಿ ಕಣ್ಣೆದುರಿಗೆ ತರುತ್ತವೆ. ಅಷ್ಟಾವರಣಗಳಲ್ಲಿ ಮುಖ್ಯವಾಗಿರುವ ಲಿಂಗ ಇದರ ಅರ್ಥದ ಬಗ್ಗೆ ತಪ್ಪು ಕಲ್ಪನೆಗಳು ಇರುವದರಿಂದ 'ಲಿಂಗಧಾರಣ' ಈ ವಿಷಯದ ಬಗ್ಗೆ ಎಷ್ಟು ಭಿನ್ನಾಭಿಪ್ರಾಯಗಳು ಉಂಟಾಗಿರುತ್ತವೆಂಬುದು ಶಿವಾನುಭವ ಪತ್ರಿಕೆಯಲ್ಲಿ ಬಂದ ಅನೇಕ ಲೇಖಗಳಿಂದ ವಾಚಕರಿಗೆ ಕಂಡುಬರದೆ ಇರಲಾರದು. ವೀರಶೈವರ ಪ್ರತಿಯೊಂದು ಆವರಣದ ಬಗ್ಗೆ ಇದೇ ಸ್ಥಿತಿಯು ಇರುತ್ತದೆ. ಪಾದೋದಕ ಇದರ ಬಗ್ಗೆಯೂ ಹೀಗೆಯೇ ವಿಪರೀತ ಕಲ್ಪನೆಗಳು ಜನರಲ್ಲಿ ಇರುತ್ತವೆ. ಈ ಆವರಣದ ಉದ್ದೇಶವು ಜನರಿಗೆ ತಿಳಿದಿರುವುದಿಲ್ಲ. ಅಷ್ಟಾವರಣಗಳು ಮತ್ತು ತಾನು ಇವುಗಳಲ್ಲಿ ಇರುವ ಸಾಮರಸ್ಯ ಭಾವವನ್ನು ಉಂಟುಮಾಡಲಿಕ್ಕೆ ಅದೊಂದು ವಿಶಿಷ್ಟ ತೆರದ ಆಚರಣೆಯಾಗಿದೆ. ಇದರ ಸ್ವರೂಪದ ಬಗ್ಗೆ ಶಿವಶರಣರಲ್ಲಿ ಇರುವ ಅಭಿಪ್ರಾಯಗಳನ್ನು ಅರಿಯುವದು ಬಹು ಅವಶ್ಯವು. ಆದ್ದರಿಂದ ಈ ವಿಷಯದ ಬಗ್ಗೆ ಬರೆದುಬಂದ ಕೆಲವೊಂದು ಪತ್ರವ್ಯವಹಾರವನ್ನು ನಾವು ಇಲ್ಲಿ ಕೊಟ್ಟಿರುತ್ತೇವೆ ಆದರ ವಿಷಯದ ಬಗ್ಗೆ ವಾಚಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಾಗಿದೆ— **ಸಂಪಾದಕ**]

ಕಾಶಿಯಲ್ಲಿ ಅಧ್ಯಯನ ಮಾಡಿ ಬಂದ ಹೂಲೀ ಹಿರೇಮಠದ ಶ್ರೀನೀಲಕಂಠ ಜಗದ್ಗುರುಮೂರ್ತಿಗಳವರು " ತತ್ವಪದಗಳು " ಎಂಬ ಹೆಸರಿನ ಪುಸ್ತಕವನ್ನು ಅಚ್ಚುಹಾಕಿದ್ದಾರೆ. ಅದರಲ್ಲಿ ಪಾದೋದಕದ ಸಂಬಂಧವಾಗಿ ೨ ಪದಗಳನ್ನು ಬರೆದಿದ್ದಾರೆ. ಅವುಗಳ ತಾತ್ಪರ್ಯವು:— ಜಂಗಮದ ಪಾದೋದಕವನ್ನು ಇಷ್ಟಲಿಂಗಕ್ಕೆ ಎರೆಯುವದು ಸರಿಯಾದದ್ದಲ್ಲ. ಜಂಗಮರು ಲಿಂಗಕ್ಕಿಂತ ಶ್ರೇಷ್ಠರೆಂದರೆ ಅವರು ತಾವೇಕೆ ಲಿಂಗಕಟ್ಟಿಕೊಂಡು ಅದನ್ನು ಪೂಜಿಸುತ್ತಾರೆ? ತಾವೇ ಕಟ್ಟಿಕೊಂಡು ಪೂಜಿಸುವ ಲಿಂಗಕ್ಕೆ ಪಾದೋದಕವನ್ನು ಹಾಕುವದು ಮಹಾಪಾಪವಲ್ಲವೇ? ಎಂದು ಬರೆದಿರುತ್ತಾರೆ. ಅವರು ಅಚ್ಚು ಹಾಕಿದ ಪದಗಳು ಯಾವವೆಂದರೆ:—

(೧)

ಲಿಂಗಕ್ಕೆ ಎರೆಯುವರೋ। ಪಾದೋದಕ।
ಲಿಂಗಕ್ಕೆ ಎರೆಯುವರೋ ॥ಪಲ್ಲ॥
ಲಿಂಗಕ್ಕೆ ಎರೆಯುತ ಜಂಗಮರೆಲ್ಲರು। ಲಿಂಗದ್ರೋಹ।
ಮಾಡಿ ಭಂಗಪೊಂದುತಲಿಹರೋ ॥೧॥
ಲಿಂಗವ ಪೂಜಿಸುತ। ಮುಕ್ತಿಯ ಬೇಡಿ।
ಅಂಗದೋಳ್ ಕಟ್ಟಿಹರೋ। ಜಂಗಮ
ದೈವತಲಿಂಗವೆಂದರಿಯದೆ। ಜಂಗಮ
ಪಾದದಿ ಲಿಂಗವಿಡುವರಯ್ಯೋ ॥೨॥
ಜಂಗಮ ಶ್ರೇಷ್ಠವೆಂದು। ಪಾದೋದಕ।
ಲಿಂಗಕ್ಕೆ ಎರೆವರೇ। ಜಂಗಮ
ಶ್ರೇಷ್ಠನೆಂದರೆ ತಾನು ಜಂಗಮ। ಲಿಂಗವ
ಕಟ್ಟುತ ಪೂಜಿಸುವನ್ಯಾಕೋ ॥೩॥
ಗುರು ಸನ್ಯಾಸಿಗಳೆಲ್ಲರು। ಅರಿಯದೆ ತಮ್ಮ
ಪರಶಿವಲಿಂಗವನ್ನು। ಚರಣ
ದುದಕದಿಂದ ಭರದಿಂದ ತೊಳೆಯುತ
ದುರಿತವ ಮಾಡುತ। ನರಕ ಪೊಂದುವರಯ್ಯೋ ॥೪॥
ಸಿದ್ಧಿಸೌಖ್ಯವನೀವ। ಶಿವಲಿಂಗಕ್ಕೆ
ಶುದ್ಧೋದಕದಿಂದ। ಸಿದ್ಧನಂಜೇ

ಶನು ಪೇಳುವ ರೀತಿಯಿಂ। ಶುದ್ಧ
ಪೂಜೆಯ ಮಾಡಿ। ಸಿದ್ಧಿ ಪೊಂದದೆ ಜನರು ॥೪॥

(೨)

ಪಾದೋದಕವನು। ಎರೆದರು ನೋಡೊ ॥ಪಲ್ಲ॥
ಭೇದವನು ಮಾಡುತಲಿ ಲಿಂಗದ ಮೇಲೆ ॥ಅ॥
ಲಿಂಗವ ಪೂಜಿಸಿ ಮುಕ್ತಿಯ ಬೇಡಿ।
ಇಂಗಿತವರಿಯದೆ ಮೂಢರು ತಮ್ಮ ॥೧॥
ಜಂಗಮ ಲಿಂಗದಿಂದಧಿಕನೆಂದರೆ ತಾ।
ಲಿಂಗವ ಪೂಜಿಸುವದು ತರವಿಹುದೇ ॥೨॥
ಲಿಂಗದ ಶ್ರೇಷ್ಠವಿದೆಂದರೆ ತನ್ನಯ।
ಅಂಗದ ಜಲವನು ಎರೆವುದು ಸರಿಯೆ ॥೩॥
ಪಾದೋದಕವನು ಪೇಯ ಪದಾರ್ಥಕೆ
ಶೋಧಿಸಿ ಹೋಲಿಸಿ ಪಾಪವ ಮಾಡಿ ॥೪॥
ಪಾದೋದಕವನು ಲಿಂಗಕ್ಕೆ ಅರ್ಪಿಸಿ।
ಸಾಧಿಸಿ ತತ್‌ಪ್ರಸಾದವ ಮಾಡಿ ॥೫॥
ಸಿದ್ಧನಂಜೇಶನ ತತ್ವವ ತಿಳಿಯದೆ।
ಶುದ್ಧ ಪಾಪದ ಕರ್ಮ ಮಾಡುತ ಜನರು ॥೬॥

ಆದರೆ ಲಿಂಗಾಯತ ಮತದ ಸಾಂಪ್ರದಾಯವು ಅನಾದಿ ಕಾಲದಿಂದ ಜಂಗಮರ ಪಾದೋದಕವನ್ನು ಲಿಂಗಕ್ಕೆ ಎರೆದು ಅದನ್ನು ಸೇವಿಸುವದು ಇರುತ್ತದೆ. ಇದು ಶಿವಾಗಮಗಳನುಮತವಾಗಿ ಮಹಾತ್ಮರಿಂದ ಹಾಕಿದ ಪದ್ಧತಿಯಾಗಿದೆ. ಇದು ಕೆಳಗೆ ಕಾಣಿಸಿದ ಪ್ರಮಾಣಗಳಿಂದ ವ್ಯಕ್ತವಾಗುತ್ತದೆ.

ಆಗಮಪ್ರಮಾಣ ॥ ಮತ್ಪಾದತೋ ಯೇ ದೇವಾನಾಂ
ವರ್ತತೇಚ್ಛಾಮಹೇಶ್ವರೀ ॥ ಪ್ರಮುಖಾನಾಂ ಪಾದ
ತೋಯೇಮದಿಚ್ಛಾವರ್ತತೇ ಸಿಶಂ ॥
ಚರಪಾದೋದ್ಭವಂ ತೀರ್ಥಂ ಲಿಂಗಮಜ್ಜನ
ಮುತ್ತಮಂ ಅಂಗುಲೀಭ್ಯಃಪಂಚಧಾರಾನಾಮಿ
ಕಾಗ್ರಗತಾತಥಾ। ಪ್ರಾಣೇಷ್ಟಭಾವಲಿಂಗಂಹಿ
ಸಂಸ್ನಾಪ್ಯ ಶಿವಮಂತ್ರತಃ। ಪಂಚಾಂಗುಲಿ ಶಿಖಾ

ಸ್ಪೃಷ್ಟ್ವಾಸ್ವೀಕುರ್ಯಾದ ಪ್ರಮಾದತಃ ॥
ಲಿಂಗಸ್ಥಾಪನ ಕಾಲೇ ತು ಪಾದತೋ ಯಂ ಶುಭಾವ
ಹಂ । ವಿನಾಪಾದಾಂಬುದೇವೇಶಿಪ್ರೇತ ಆಂಗವಿತಿಸ್ಮೃತಂ ॥
ಏಕ ಯೇವ ಶಿವಃ ಸಾಕ್ಷಾತ್ ಸರ್ವಾನುಗ್ರಹಕಾರಕಃ ।
ಗುರು ಜಂಗಮಲಿಂಗಾತ್ಮಾವರ್ತತೇಭುಕ್ತಿ ಮುಕ್ತಿದಃ

ವೀರಶೈವಾಚಾರಪ್ರದೀಪಿಕಾಯಾಂ ॥
ಚರಪಾದೋದ್ಭವಂ ತೀರ್ಥಂ ಗುರುಲಿಂಗಚರಾನ್ವಿತಂ ।
ತ್ರಿಧೋದಕವಿತಿಪ್ರೋಕ್ತಂ, ಪಂಚಾಂಗುಲಿಪರಿಗ್ರಹಂ ।
ಸ್ಪರ್ಶೋದಕಂ ಚತುರ್ಥಂಚ, ಸ್ವೇಷ್ಟಲಿಂಗೆಸಮರ್ಪಣಂ ।
ಪಂಚಮಂಚಾವಧಾನಂಚ, ಜಿವ್ಹಾಸ್ವೀಕಾರಮೇವಚ ।
ಷಷ್ಠಮಾವ್ಯಾಯನಂಜೈವ, ಲಿಂಗಮುದ್ಧೃತ್ಯಪೀಯತೆ ।
ಹಸ್ತೋದಕವಿತಿಜ್ಞೇಯಂ, ಸಪ್ತಮಂಪರಿಕೀರ್ತಿತಂ ।
ಪರಿಷಾನೋಷ್ಪವಾಖ್ಯಾತಂಸ್ಪರ್ಶಮಾತ್ರಸಮರ್ಪಿತಂ ।
ನವಮಂಪಾತ್ರಮುದ್ಧೃತ್ಯ ನಿರ್ವಾಮೇತಿಚಗೀಯತೆ ।
ದಶಮಂಖಂಡಿತಂಜೈವಸತ್ಯೋದಕವಿತಿಸ್ಮೃತಂ ।
ಏವಂದಶವಿಧಂಜ್ಞೇಯಂಪಾದೋದಕ ಸಲಕ್ಷಣಂ ।
ಉಚ್ಛಿಷ್ಟಂಕಲ್ಪ್ಯತೆತಸ್ಮಿನ್‌ಸಯಾತಿನರಕಾರ್ಣವಂ ।
ಗಂಗೇವಚಪವಿತ್ರಂತುನಿತ್ಯಕೈವಲ್ಯದಾಯಕಂ ।

ಜಂಗಮ ಪಾದೋದಕವನ್ನು ಲಿಂಗಕ್ಕೆ ಎರೆಯಬೇಕೆಂದೂ ಎರೆಯದಿದ್ದರೆ ಆ ಲಿಂಗವೇ ಶುದ್ಧವಲ್ಲವೆಂದೂ ಗುರುಲಿಂಗ ಜಂಗಮವೆಂದರೆ ಒಂದೇ ಎಂದೂ ಮೇಲೆ ಬರೆದ ಆಗಮಗಳು ಹೇಳುತ್ತವೆ.

ಶಿವಾನುಭವ ವಾಚಕರು ಈ ವಿಷಯವನ್ನು ಅವಲೋಕನ ಮಾಡಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸುವ ಉದ್ದಿಶ್ಯವಾಗಿ ನಾನು ಈ ಲೇಖನವನ್ನು ಬರೆದಿದ್ದೇನೆ.

---

(೨೯) ಆವಾವ ವ್ರತಕ್ಕೆ ಗುರುಲಿಂಗಜಂಗಮವೇ ಮೂಲ ಮಂತ್ರ. ತಾ ಕೊಂಬಲ್ಲಿ ಕೊಡುವಲ್ಲಿ, ಲಿಂಗಜಂಗಮದ ಮುಂದಿಟ್ಟುಕೊಂಬುದೇ ಶುದ್ಧ ಕ್ರಿ. ಹೀಗೆಯಲ್ಲದೆ, ಲಿಂಗಜಂಗಮ ಹೊರತೆಯಾಗಿ ಮತ್ತೊಂದ ಕೊಂಡೆನಾಯಿತ್ತಾದಡೆ, ಎನಗಲ್ಲದ ದ್ರವ್ಯ. ಎನಗಿದೇ ಭಾಷೆ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ಸಾಕ್ಷಿಯಾಗಿ.

(೩೦) ಎಲ್ಲ ವ್ರತಕ್ಕೆ ಜಂಗಮಪ್ರಸಾದವೇ ಪ್ರಾಣ. ಎಲ್ಲ ನೇಮಕ್ಕೂ ಜಂಗಮದ ದರ್ಶನವೇ ನೇಮ. ಎಲ್ಲ ಶೀಲಕ್ಕೂ ಜಂಗಮದ ವಾಟವೇ ಶೀಲ. ಇಂತೀ ವ್ರತನೇಮ-ಶೀಲಂಗಳೆಲ್ಲವು ಜಂಗಮದ ಮುಂದಿಟ್ಟು ಶುದ್ಧತೆಯಹ ಕಾರಣ ಆ ಜಂಗಮದಲ್ಲಿ ಅರ್ಥ ಪ್ರಾಣಾಭಿಮಾನ ಈ ಮೂರಕ್ಕೆ ಕಟ್ಟು ಮಾಡಿದೆನಾದಡೆ ಎನಗದೇ ದೇಹ. ಆ ಜಂಗಮದ ದರ್ಶನದಿಂದ ಸಕಲ ದ್ರವ್ಯ ಪವಿತ್ರ. ಆ ಜಂಗಮದ ಪಾದತೀರ್ಥದಿಂದ ಘನಲಿಂಗಕ್ಕೆ ಜೀವಕಳೆ. ಆ ಜಂಗಮದ ಪ್ರಸಾದದಿಂದ ಘನಲಿಂಗಕ್ಕೆ ತೃಪ್ತಿ. ಇಷ್ಟನೆಂತಲ್ಲಿ ಜಂಗಮಲಿಂಗಕ್ಕೆ ಸಂದೇಹವ ಮಾಡಿದಡೆ, ಎನಗೆ ಕುಂಭಿನೀಪಾತಕದಲ್ಲಿ ನಾಯಕನರಕ ತಪ್ಪದು. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ ಸಹಿತವಾಗಿ ಮುಳುಗುನೆನು.

(೩೧) ಭಾಜನಕ್ಕೆ ಸರ್ವಾಂಗವ ಮುಸುಕಿಟ್ಟಲ್ಲಿ ಸರ್ವ ವ್ಯಾಪಾರ ನಿರಸನವಾಗಿರಬೇಕು. ಸರ್ವರ ಸಂಗವಿಲ್ಲದೆ ಇರಬೇಕು. ಒಡೆಯರು ಭಕ್ತರಲ್ಲಿ ನಿಗರ್ವಿಯಾಗಿ, ಬಂದುನಿಂದುದ ಜಂಗನುಲಿಂಗದ ಮುಂದಿರಿಸಿ ಅವರು ಕೈಕೊಂಡು ವಿುಕ್ಕ ಪ್ರಸಾದವ ಲಿಂಗಕ್ಕೆ ಅರ್ಪಿತವ ಮಾಡಿ, ಗುರುಲಿಂಗಜಂಗಮದಲ್ಲಿ ಸಂದುಸಂಶಯವಿಲ್ಲದೆ ಆಚಾರವೇ ಪ್ರಾಣವಾಗಿ ನಿಂದುದು ರಾಮೇಶ್ವರಲಿಂಗದಂಗ.

(೩೨) ಬಸವಣ್ಣ, ಚನ್ನಬಸವಣ್ಣ, ಪ್ರಭು, ವೀರಮುಡಿವಳ, ನಿಜಗುಣ ಶಿವಯೋಗಿ, ಸಿದ್ಧರಾಮ, ಮೋಳಿಗಯ್ಯ, ಆಯ್ದಕ್ಕಿಯ ಮಾರಯ್ಯ, ಏಕಾಂತದ ರಾಮಯ್ಯ, ಅಜಗಣ್ಣ, ಶಕ್ತಿ ಭಕ್ತಿ ಮುಕ್ತಿ ಮಹಾದೇವಿಯಕ್ಕ, ಮುಂತಾದ ಏಳ್ನೂರೆಪ್ಪತ್ತು ಅಮರಗಣಂಗಳು ಕೊಟ್ಟ ವ್ರತ ಪ್ರಸಾದ. ಆ ಪ್ರಸಾದ ಎನಗೆ ಪ್ರಸನ್ನ. ನಿಮಗೆ ಮರ್ತ್ಯದ ಮಾನಹವ ಹಿಂಗುವನ್ನಕ್ಕ ಎನ್ನ ವ್ರತದಲ್ಲಿ, ಎನ್ನ ಆಚಾರದಲ್ಲಿ, ನಾ ಹಿಡಿದ ನೇಮದ ಭಾಷೆಯಲ್ಲಿ, ನಾ ತಪ್ಪಿದಡೆ, ತಪ್ಪು ಹೊತ್ತಲ್ಲಿ ನಿಮ್ಮ ಕೇಳಿದಡೆ, ನಾ ಸತ್ತಿಹೆನೆಂದು ಕೂಡಿದರೆ, ಮತ್ತೆ ಶಸ್ತ್ರ ಸಮಾಧಿ ನೀರು ನೇಣು ವಿಷ

ಔಷಧಿಯಿಂದ ಘಟವ ಬಿಟ್ಟಡೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. ಕ್ರಿಯೆ ಭಿನ್ನದೋರಿದಲ್ಲಿಯೇ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ಲ್ಲಿಯೇ ಲೀಯ್ಯ.

(೩೩) ಅರಸಿಗಾಚಾರ ಅನ ಸರಣೆಯಾಯಿತ್ತೆಂದು ಸದಾಚಾರಿ ಗಳೆಲ್ಲ ಬನ್ನಿ ಎಂದು, ಹೂಲಿಗೆ ಹಾವ ಕಟ್ಟಿಸಿಕೊಂಡು, ಸಾವ ತೆರ ನಂತೆ ದ್ರವ್ಯದ ಮುಖದಿಂದ ಸರ್ವರೂ ಕೂಡಿ ತಪ್ಪನೊಪ್ಪಕೊಳ್ಳಿ ಎಂದು ದೊಪ್ಪನೆ ಬೀಳುತ್ತ, ತನ್ನ ವ್ರತದ ದರ್ಪಗೆಟ್ಟ ಕಂಬಳಕ್ಕೆಳ್ಳಿ ಅಮಂಗಲವ ತಿಂಬವನಂತೆ, ದಂದುಗವ ನೋಡಾ. ಇವನ ಸಂಗವ ಮಾಡಿದವನು ಆಚಾರಕ್ಕಂಜೆ ಹೊರಗು. ಆಚಾರವೇ ಪ್ರಾಣವಾದ ರಾಮೇ ಶ್ವರಲಿಂಗವೇ ನೀನೇ ಬಲ್ಲೆ.

(೩೪) ಜಾಟು ಗುಂಡು ಬಂಧನ ಕಲಹಕೇತ ಯಾಚಕ ಪಗುಡಿ ಪರಿಹಾಸಕಂಗಳಿಂದ ಬೇಡಿ ತಂದು ಗುರುಲಿಂಗ ಜಂಗಮಕ್ಕೆ ಮಾಡಿ ಪೆನೆನಬಹುದೇ? ಮಾಡವ ತಾವಿನಲ್ಲಿ ಮಾಡಿಕೊಂಬವರಾರೆಂದು ತಾನರಿದ ಮೇಲೆ ಅಲ್ಲಿ ಬೇಡಬಹುದೇ? ತಾ ಭಕ್ತಿಯ ಮಾಡಿಹೆ ನೆಂದು ಕಾಡಬಹುದೇ? ತಾ ದಾಸೋಹಿಯಾದ ಮೇಲೆ ಅಲ್ಲಿಗೆ ತಾ ದಾಸನಾಗಿ ಸಲ್ಲೀಲೆಯಿಂ ಪ್ರಸಾದವ ಕೊಂಡು ಅಲ್ಲಿ ಇಲ್ಲಿ ಎಲ್ಲಿಯೂ ತಾನಾಗಿರದೇಕಲ್ಲದೆ ಇಲ್ಲಿ ಮಾಡಿಹೆನೆಂದು ಎಲ್ಲರ ಬೇಡುವ ಕಲ್ಲೆದೆಯ ವನೊಲ್ಲ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಸಲ್ಲದ ನೇಮ.

(೩೫) ಪಂಚಾಚಾರ ಶುದ್ಧವಾದ ಸದ್ಭಕ್ತಂಗೆ ಪಾದತೀರ್ಥ ಪ್ರಸಾ ದದಲ್ಲಿ ನಿರುತಂಗೆ ಆ ವ್ರತನೇಮವ ನಡಿಸುವ ಸದ್ಭೈವಂಗೆ ಆತನ ಸುಕಾಯಕದಿರವೆಂತೆಂದೊಡೆ ತಾ ದೃಷ್ಟದಲ್ಲಿ ಕಾಂಬುವ ಪ್ರಾಣಿಗಳ ಕೊಲ್ಲದೆ ಕೊಲ್ಲುವದಕ್ಕೊಡಂಬಡದೆ ತಾ ಮಾಡುವ ಕಾಯಕದಲ್ಲಿ ಅಧಮ ವಿಶೇಷ ವೆಂಬುದನರಿತು ನಡೆನುಡಿ ಸಿದ್ಧಾಂತವಾಗಿ ಲಿಂಗವನೊಡಗೂಡಿಪ್ಪ ಕಾಯಕದಿ ನಿರುತನಾಗಿ ಆ ಮುಖದಿಂದ ಬಂದ ದ್ರವ್ಯವ ಗುರುಲಿಂಗ ಜಂಗಮದ ಮುಂದಿಟ್ಟು ಆ ಪ್ರಸಾದವ ಕೊಂಡ ಸದ್ಭಕ್ತ ಆ ಪ್ರಸಾದವ ಕೊಂಡ ಗುರುವಿಂಗೆ ಇಹಸುಖ, ಲಿಂಗಕ್ಕೆ ಪರಸುಖ, ಜಂಗಮಕ್ಕೆ ಪರಮ ಸುಖ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕಾ ಭಾವಪ್ರಸಾದವೇ. ಪರಮಪದ.

(೩೬) ಅಸಿ ಮಸಿ ಕೃಷಿ ವಾಣಿಜ್ಯ ಮುಂತಾವ ಕಾಯಕವ ಮಾಡಿ, ಭಕ್ತರ ಪಡುಗ ಪಾದತ್ರಾಣ ಪಹರಿ ಬಾಗಿಲುವಾಡ ಬೊಕ್ಕಸ ಬೀಗ ಮುಂತಾದ ಊಳಿಗವ ಮಾಡಿಕೊಂಡು ವ್ರತಕ್ಕೆ ಊನವಿಲ್ಲದೆ ಮಾಡುವ ಕೃತ್ಯಕ್ಕೆ ಕಡೆಯಾಗದೆ ಈ ಭಕ್ತನ ಅಂಗಣವೇ ಅವಿಮುಕ್ತಕ್ಷೇತ್ರ. ಆತನ ಮನೆಯು ಆಚಾರವೇ ಪ್ರಾಣವಾಗಿಪ್ಪ ರಾಮೇ ಶ್ವರಲಿಂಗದಾಶ್ರಯ.

(೩೭) ಎನ್ನಂಗ ಸೀಮೆಯಲ್ಲಿವ್ವ ಗೋ ವತ್ಸ ಮೊದಲಾದ ಘಟ ಕ್ಕೆಲ್ಲಕ್ಕೂ ಶಿವಲಿಂಗ ಪೂಜೆ ಪಂಚಾಚಾರ ಶುದ್ಧ ನೇಮ ಭಾವ ತಪ್ಪದೆ ಪಾದೋದಕ ಪ್ರಸಾದವಿಲ್ಲದೆ ತೃಣ ಉದಕವ ಮುಟ್ಟಿಸಿದರೆ ಎನ್ನ ಸೀಮೆಗೆ ಎನ್ನ ವ್ರತಾಚಾರಕ್ಕೆ ನಾ ಕೊಂಡ ಗಮನಕ್ಕೆ ಮಾಡಿದಡೆ, ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗಕ್ಕೆ ದೂರ.

(೩೮) ದೃಷ್ಟದಲ್ಲಾಗಾಗ ಅರ್ಪಿಸಿಕೊಂಡಿಹೆನೆಂಬುದು ನಿನ್ನ ಚಿತ್ತದ ಕಲೆಯೋ, ಆ ವಸ್ತುವಿಗೆ ನೀ ತೃಪ್ತಿಯ ಮಾಡಿಹೆನೆಂಬ ನಿಶ್ಚಯವೋ? ವಿಷದ ಬುಡದಂತೆ ಅವೃತದ ಘಟ್ಟಿಯಂತೆ ನಿನ್ನ ಸರ್ವಾಂಗದಲ್ಲಿ ಭೇದಿ ಸಿದ ಲಿಂಗಕ್ಕೆ ಸಹಭೋಜನದ ಭಾವವ ನಿನ್ನ ನೀನೇ ತಿಳಿ ಆಚಾ ರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

(೩೯) ಲಿಂಗಕ್ಕೂ ತನುಗೂ ಸಹಭೋಜನವಾದಲ್ಲಿ ಇದಿರಿಟ್ಟ ಪದಾರ್ಥಂಗಳ ಲಿಂಗಕ್ಕೆ ತೋರಿ ತಾ ಕೊಂಬಲ್ಲಿ ದೃಷ್ಟವಾಯಿತ್ತು. ಸ್ಪಷ್ಟ ಸುಷುಪ್ತಿಗಳಲ್ಲಿ ಮಿಕ್ಕಾದೇಕಾಂತ ಸತಿಕೂಟಂಗಳಲ್ಲಿ ಅದಕ್ಕೆ ದೃಷ್ಟವಹ ಸಹಭೋಜನವಾವುದಯ್ಯ? ಯೋನಿಸ್ಪಷ್ಟ ಸುಷುಪ್ತಿ ಮುಂತಾದ ಭಾವದ ಸಹಭೋಜನವೆಲ್ಲಿದ್ದೀತು? ಆ ಭೋಜನದ ಸಹಭೋಜನದ ಸಂಬಂಧ ಎಲ್ಲಿದ್ದೀತು? ಅದು ಕಲ್ಲಿನೊಳಗಣ ನೀರು, ನೀರಿನೊಳಗಣ ತಿಲೆ. ಅದಾರಿಗೂ ಅಸಾಧ್ಯ ನೋಡಾ. ಅದು ಕಾಯದ ಹೊರಗಾದ ಸುಖದುಃಖದ ಹೊರಗಾದರ್ಪಿತ. ಇಂತೀ ಗೊತ್ತ ಮುಟ್ಟಿ ಸಹಭೋಜನದ ಲ್ಲರ್ಪಿಸಬಲ್ಲವಂಗೆ ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವು ಸಹ ಭಾಜನ ಭೋಜನವಾಗಿಪ್ಪನು.

(೪೦) ಕಾಮುಕಗೆ ದುರ್ಜನಗೆ ಕಪಟಿಗೆ ಹೇಮ ಚೋರಗೆ ಕಟುಕ ಸಮ್ಮೇಳಾರಗೆ ಆವ ಭಾವದ ವ್ರತವ ಮಾಡಲಿಕ್ಕೆ ಆದ ಭಾವಿಸಿ ನಡೆಯ

ಬಲ್ಲನೇ? ಕಾಗೆಗೆ ರಸಾನ್ನ ಮುಂದಿರಲಿಕ್ಕೆ ಹಂವ ಕೀಟಕಂಗೆ ಸರಿ
ವುದಲ್ಲದೆ ಮೇಲೆ ಅದು ಸವಿ ಸಾರವ ಬಲ್ಲುದೇ? ಇಂತಿವ ತಮ್ಮ
ಜಾತಿಯ ಲಕ್ಷಣವ ಕೊಂದರೂ ಬಿಡವಾಗಿ ವ್ರತಾಚಾರವ ಸಂಬಂಧಿ
ಸುವಲ್ಲಿ ಶರಣರೆಲ್ಲರೂ ಕೂಡಿ ಈ ಗುಣ ಅಲ್ಲ ಅಹುದಲ್ಲವೆಂದು ಹೇಳಿ
ಹೇಳಿ ಜಾತಿವರ್ಗದ ಗುಣವ ನಿಃಕರಿಸಿ ಬಿಡಿಸಿ ಆಚಾರವೆಂಬ ಸುಜ್ಞಾ
ನತೆಯ ಅರಸಿನ ಪಟ್ಟವಂ ಕಟ್ಟಿ ಶರಣರೆಲ್ಲರು ನಿಹಿತಾಚಾರದಲ್ಲಿ ಸಹ
ಭೋಜನವ ಮಾಡಿ ಇಂತೀ ಗುಣ ನಿಹಿತ ವ್ರತ ಅಜಾತನ ಒಲುಮೆ,
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗನ ಶೀಲದ ನೇಮ.

(೪೧) ತನ್ನ ತಾ ಬಂದುದ ಸೋಂಕಿಲ್ಲದುದ ವಿಚಾರಿಸಿ ತನ್ನ
ಗುರುವಿಂಗೆ ಬಂದುದ ಕೈಕೊಂಬುವುದು. ಬಾರದ ದ್ರವ್ಯಕ್ಕೆ ಭ್ರಮೆಯಿಲ್ಲದೆ
ಚಿತ್ತ ತೋರದಿರ್ಪುದು, ಭರಿತಾರ್ಪಣ. ಅರ್ಪಿತವ ಮುಟ್ಟಿ ಅನರ್ಪಿತವ
ಜಾಗ್ರತ್ ಸ್ವಪ್ನದಲ್ಲಿ ಮುಟ್ಟದಿರ್ಪುದು ಭರಿತಾರ್ಪಣ. ಲಿಂಗಕ್ಕೆ ಸಂದುದ
ನರಿಸದೆ ಸಲುವಪ್ಪನೇ ಅರ್ಪಿತವ ಮಾಡಿ ಮುಂದಣ ಸಂದೇಹವ
ಮರೆದು ಹಿಂದಣ ಸುಖವನರಿದು ಉಭಯದ ಖಂಡಿತವ ಖಂಡಿಸಿ
ನಿಂದುದು ಭರಿತಾರ್ಪಣ. ಹೀಗಲ್ಲದೆ ಭಾಷೆಗೂಳಿನ ಭಟರಂತೆ ಓಗರ
ಮೇಲೋಗರದಾಸೆಗೆ ವೇಷದ ದ್ರವ್ಯಕ್ಕಾಸೆ ಮಾಡಲಿಲ್ಲ. ಬಂದುದ
ಕೈಕೊಂಡು ಸಂದನಳಿದು ನಿಂದುದೇ ಭರಿತಾರ್ಪಣ. ಆಚಾರವೇ ಪ್ರಾಣ
ವಾದ ರಾಮೇಶ್ವರಲಿಂಗಕ್ಕೆ ಕ್ರಿಯಾಭಾವದ ಭೇದ.

(೪೨) ಬಂದುದ ಸಾಕೆನ್ನದೆ ಬಾರದುದ ತಾ ಎನ್ನದೆ, ಗಡಿಗೆ
ಬಟ್ಟಲು ನಮ್ಮೆಡೆಯಲ್ಲಿ ಒಡಗೂಡಿ ಸರಿ ಎನ್ನದೆ ಮಂತ್ರ ಭಿನ್ನವಾಗಿ
ಮತ್ತಾರಿಗೂ ಪಡಾರಿಸದೆ ಕೆಲಬಲದವರಿಂದ ಅವರಂಗೆ ನೇಮವೆಂದೆನಿಸದೆ
ಲಿಂಗಕ್ಕೆ ಬಂದುದ ಸಂದುದ ಅವಂದದಿಂದ ಸ್ವೀಕರಿಸಿ ನಿಂದುದೇ ಭರಿ
ತಾರ್ಪಣ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

(೪೩) ಒಂದು ವಿಶೇಷವೆಂದು ಹಿಡಿದು, ಮತ್ತೊಂದಧಮವ
ಮುಟ್ಟದಿರ್ದುದೇ ಭರಿತಾರ್ಪಣ. ಪರಸ್ತ್ರೀ ಪರಧನಂಗಳಲ್ಲಿ ದುರ್ವಿಕಾರ
ದುಶ್ಚರಿತ್ರದಲ್ಲೊಡಗೂಡದಿರ್ಪುದೇ ಭರಿತಾರ್ಪಣ. ಮರವೆಯಲ್ಲಿ ಬಂದ
ದ್ರವ್ಯವ ತಾನರಿದು ಮುಟ್ಟದಲ್ಲಿಯೇ ಭರಿತಾರ್ಪಣ. ತನ್ನ ವ್ರತನೇಮ
ನಿತ್ಯ ಕೃತ್ಯಕ್ಕೆ ಅಪರಾಧ ಬಂದಲ್ಲಿ ಸಕಲವ ನೇತಿಗಳೆದು ಆ ವ್ರತನೇಮ

ದಾಳಿದಪ್ಪದೆ ಸಲೆ ಸಂದುದು ಭರಿತಾರ್ಪಣ ಹೀಗಲ್ಲದೆ ಓಗರ ಮೇಲೋ
ಗರದ ತಾಗಿಗೆ ಭರಿತಾರ್ಪಣ ಉಂಟೆಂದು ನುಡಿವುದು ಸಹಜವೇ? ಆಚಾ
ರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ಭರಿತಾರ್ಪಣದ ಸಹಜಭಾವ.

(೪೪) ಭರಿತಾರ್ಪಣವೆಂದು ಸ್ಥಲವನಂಗೀಕರಿಸಿದಲ್ಲಿ ಭರಿತಾರ್ಪಣ
ಅಂಗಕ್ಕೋ ಲಿಂಗಕ್ಕೋ ಆತ್ಮಕ್ಕೋ ಸರ್ವೇಂದ್ರಿಯ ವಿಕಾರಕ್ಕೋ? ಹಿಡಿವ
ಬಿಡುವ ಕೊಡುವ ಕೊಂಬ ಸಡಗರಿಸುವ ಎಡೆಗಳಲ್ಲಿಯೋ? ಘೃತ ರಸಾನ್ನ
ಸಕಲ ಪದಾರ್ಥಂಗಳಲ್ಲಿ ಯಥೇಷ್ಟವಾಗಿ ಗ್ರಾಸಿಸುವ ಭರಿತವೋ? ಆತ್ಮನ
ಕ್ಷುಧೆಯ ಆಶಾಪಾಶವೋ? ಲಿಂಗಕ್ಕೆ ಸಂದುದನೆಲ್ಲವ ಒಂದೇ ಭಾವ
ದಲ್ಲಿ ಕೊಳಬೇಕೆಂಬ ಸಂದೇಹವೋ? ಇಂತೀ ಗುಣಂಗಳಲ್ಲಿ ಅಹುದಲ್ಲ
ವೆಂಬುದ ತಿಳಿದು ನೋಡಿಕೊಳ್ಳಿ, ಆಚಾರವೇ ಪ್ರಾಣವಾದ ರಾಮೇಶ್ವರ
ಲಿಂಗದಲ್ಲಿ.

(೪೫) ಲಿಂಗಗೂಡಿ ಭರಿತಾರ್ಪಣವ ಅಂಗೀಕರಿಸುವಲ್ಲಿ ಭರಿತ
ಲಿಂಗಕ್ಕೋ ತನಗೋ ಎಂಬುದ ತಿಳಿದು, ಲಿಂಗವೇ ತನ್ನಂಗವೆಂದೆಂಬಂ
ತಿತ್ತು. ಬಾರದೆಂಬುದ ಆರೈಕೆಯುಳಿದು ಸ್ವಯವಾಗಿ ನಿಂದುದು ನಿಜ
ಭರಿತಾರ್ಪಣ. ಹೀಗಲ್ಲದೆ ಸಕಲ ವಿಷಯದಲ್ಲಿ ಹರಿದಾಡುತ್ತ ಆವಿಷ
ತಾಮಸ ರಾಗದ್ವೇಷದಲ್ಲಿ ಬೇವುತ್ತ ಇಂತಿವನರಿಯದೆ ತಮಗೆ ಸಂದು
ದಲ್ಲದೆ ಮರೆದೂಂಟು ಬಂದಡೆ ಆ ಲಿಂಗ ಪ್ರಸಾದವನರಿಸಬಹುದೇ?
ನೇಮ ತಪ್ಪಿ ಸೋಂಕಿದಲ್ಲಿ ಕೊಳಬಹುದೇ? ಇಂತೀ ಅರ್ಪಿತದ ಸೋಂಕು
ಭರಿತಾರ್ಪಣದ ಪರಿಭಾವವ ನಿಮ್ಮ ನೀವೇ ತಿಳಿದು ನಿಶ್ಚೈಸಿಕೊಳಿ
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

(೪೬) ಸಂದೇಹವ ಹರಿದಂಗಲ್ಲದೆ ಸಹಭೋಜನ ಭಾಜನವಿಲ್ಲ.
ಸಂದಿತ್ತು ಸಲ್ಲದೆಂಬ ಸಂಕಲ್ಪವನಳಿದಂಗಲ್ಲದೆ ಭರಿತಾರ್ಪಣವಿಲ್ಲ. ನೇಮ
ತಪ್ಪಿದಲ್ಲಿ ಆತ್ಮನಾಶೆ ಬಿಟ್ಟವಂಗಲ್ಲದೆ ಸರ್ವವ್ರತದ ದೆಸೆ ಇಲ್ಲ. ಇಂತೀ
ಆಶೆಯ ಪಾಶದಿಂದ ತಾ ಹಿಡಿದ ವ್ರತದ ಭಾಷೆ ತಪ್ಪಿದ ಮೇಲೆ ಪ್ರಾಯ
ಶ್ಚಿತ್ತವೆಂಬುದಿಲ್ಲ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾಯಿ
ತ್ತಾದಡೂ ಇಹಪರಕ್ಕೆ ಹೊರಗೆಂದು ಡಂಗುರವಿಕ್ಕುವೆ.

(೪೭) ಪಂಚಾಚಾರವ ಧರಿಸಿದ ಶರೀರಕ್ಕೆ ಅಷ್ಟೋತ್ತರ ಶತವ್ಯಾಧಿ
ಬಂದಿತ್ತೆಂದು ಸಂಕಲ್ಪಿಸಬಹುದೇ? ಪಾದತೀರ್ಥ ಪ್ರಸಾದವೆಂದು ನೈಷ್ಠಿ

ಕದಲ್ಲಿ ಕೊಂಬ ಜಿಪ್ಪೆ ಔಷಧಿ ಕಷಾಯವೆಂದು ಕೊಂಡರೆ ಪಂಚಾಚಾರಕ್ಕೆ ದೂರ, ಪಾದೋದಕ ಪ್ರಸಾದವಿಲ್ಲ, ಇಹಪರಕ್ಕೆ ಸಲ್ಲ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ಅವರನೊಲ್ಲ.

(೪೮) ಭವಿಯಲಾದ ಪಾಕವ ತಂದು ಮನೆಯೊಳಗಿರಿಸಿಕೊಂಡು, ಭುಂಜಿಸುತ್ತ ಅವರ ಮನೆಯಲೊಲ್ಲೆನೆಂಬುದು ವ್ರತಕ್ಕೆ ಹಾನಿ, ಆಚಾರಕ್ಕೆ ದೂರ, ಪಂಚಾಚಾರ ಶುದ್ಧತೆಗೆ ಹೊರಗು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ಅವರ ಬಲ್ಲನಾಗಿ ಒಲ್ಲನು.

ಮಹೇಶ್ವರನ ಪ್ರಾಣಲಿಂಗಿ.

(೪೯) ಸತ್ಯ ಸದ್ಗುರು ಕರುಣಿಸಿಕೊಟ್ಟ ನಿತ್ಯ ನಿಃಕಳಂಕ ಲಿಂಗವ ಕರಮನಭಾವವೆಳಗಿರಿಸಿ ಅರ್ಚಿಸಿ ನಿತ್ಯ ಭೋಗವ ಪಡೆಯಲರಿಯದೆ ಗುರುಮಾರ್ಗಾಚಾರಕ್ಕೆ ಹೊರಗಾದ ಜಗದ ಜಡಕಲ್ಲು ಮಣ್ಣು ಪುರ ಕಂಡು ಕಾಷ್ಠ ಒರಳು ಒನಕೆ ಪಶು ತಿಥಿ ವಾರ ನಕ್ಷತ್ರ ಹುಣ್ಣಿಮೆ ಅಮಾವಾಸ್ಯೆ ತಂದೆ ತಾಯಿ ತಿಥಿ ಎಂದು ಪೂಜೆಯ ಮಾಡುವವರ ಹಸ್ತ ಭವಿ. ಆ ಹಸ್ತದಿಂದ ಮಾಡಿದ ಪಾಕ ಭವಿ. ಆ ಪಾಕವ ಶಿವ ಲಿಂಗಕ್ಕರ್ಪಿಸಲಾಗದು. ನಮ್ಮ ಕೂಡಲ ಚನ್ನಸಂಗನ ಶರಣರು ಭವಿ ಪಾಕವ ಮುಟ್ಟದೆ ಸನುಸ್ತ ಮತದಿಂದ ಅಯೋಗ್ಯವಾದ ಪದಾರ್ಥವ ನುಳಿದು ಯೋಗ್ಯಾಯೋಗ್ಯವಾದ ಪದಾರ್ಥವ ಕೊಂಡು ಪಾದೋದಕ ದಲ್ಲಿ ಪವಿತ್ರತೆಯಿಂದ ಸ್ವಪಾಕವ ಮಾಡಿ ಪರಶಿವಲಿಂಗವೆಂದರಿದು ಸುಖಿಸಿ ನಿಜೈಕ್ಯರಾದರು. ಇದನರಿಯದೆ ಆಡಂಬರದ ವೇಷವ ಧರಿಸಿ ಉದಕ ಹೊಯಿದು ಸ್ವಯ ಚರ ಪರ ಷಟ್‌ಸ್ಥಲವ ಬೊಗಳುವ ಕುನ್ನಿಗಳ ಕಂಡು ನಾಚಿತ್ತು ಕಾಣಾ ಎನ್ನ ಮನವು ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವೇ.

(೫೦) ಸರ್ವೇಂದ್ರಿಯಂಗಳೊಂದುಮುಖವ ಮಾಡಿ ಸರ್ವ ಮೋಹಂಗಳಲ್ಲಿ ನಿರ್ಮೋಹಿ ತಾನಾಗಿ, ಅಂಗದಿಚ್ಛೆಯ ಮರೆದು, ವ್ರತವೆಂಬಾಚಾರಲಿಂಗವ ಧರಿಸದೇಕಲ್ಲದೆ, ತನುವಿಗೆ ಬಂದಂತೆ ಮುಟ್ಟಿ, ಮನಸಿಗೆ ಬಂದಂತೆ ಹರಿದು, ನಾಸಿಲಿಪ್ಪಿಲ್ಲ ಶೀಲವಂತನಿದ್ದೇನೆಂದು ಕೋಲಾ

ಟಿಯಂತೆ ಕೂಗುತ್ತ ಕೊರಚುತ್ತ ಅಲ್ಲಿ ಬೊಬ್ಬಿಡುತ್ತ ಶೂಲವನೇರುವ ಕಳ್ಳನಂತೆ ಬಾಹ್ಯದಲ್ಲಿ ಬಾಯಾಲುವೆ. ಹೊರಗಣ ಕ್ರಿಯಾಶುದ್ಧವಾಗಿ, ಒಳಗಣ ಆತ್ಮಶುದ್ಧವಾಗಿಪ್ಪುದು ಪಂಚಾಚಾರ ನಿರುತ, ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ ಸರ್ವಾಂಗಭರಿತನು.

(೪೭) ಸಪ್ಪೆಯ ವ್ರತವೆಂಬುದ ನಾವರಿಯೆವು. ನೀವು ಹೇಳಿರಯ್ಯಾ? ಸರ್ವ ಫಲ ರಸ ಕ್ಷೀರ ತೈಲ ಮಧುರ ವಿದಳವ ಮುಂತಾದವಕ್ಕೆಲ್ಲಕ್ಕೂ ತಮ್ಮ ತಮ್ಮಲ್ಲಿ ರುಚಿ ಸಪ್ಪೆಯವೆನ್ನುವ ಒಂದೂ ಕಾಣೆ. ಇವ ನೀವೆ ಬಲ್ಲಿರಿ. ಸಪ್ಪೆ ಅವುದೆಂದರೆ ಸುಖ ದುಃಖಗಳೆಂಬುದನರಿಯದೆ ತನುವಾಡಿದಂತೆ ಆಡದೆ ಮನ ಹರಿದಂತೆ ಹರಿಯದೆ ಬಯಕೆ ಆರತು ಭ್ರಮೆ ಹಿಂಗಿ ಸರ್ವ ವಿಕಾರ ವಿಸರ್ಜನವಾಗಿ, ಹಿಂದಾದುದ ಮರೆದು ಮುಂದಕ್ಕೆ ಗತಿ ಎಂದು ಒಂದ ಕಾಣದೆ ಹಿಂದು ಮುಂದೆಂದು ಒಂದನರಿಯದೆ ಇದ್ದುದೇ ಸಪ್ಪೆ. ಇದು ಅಂತರಂಗ ವ್ರತ. ಲವಣವ ಬಿಟ್ಟುದು ಬಹಿರಂಗದ ಶೀಲ. ಇಂತೀ ಉಭಯ ವ್ರತವು ಏಕವಾದಲ್ಲಿ ಸರ್ವ ಸಪ್ಪೆ ಸಂದಿತ್ತು, ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗಕ್ಕೆ ಸಪ್ಪೇವ್ರತ ಅರ್ಪಿತವಾಯಿತ್ತು.

(೪೭) ಸ್ಥಾವರಕ್ಕೆ ಲಿಂಗಮುದ್ರೆ ಪಾಷಾಣಕ್ಕೆ ಲಿಂಗಮುದ್ರೆ ಗೋವಿಗೆ ಲಿಂಗಮುದ್ರೆ ಮತ್ತಾವಾವ ರೂಪಿನಲ್ಲಿ ಲಿಂಗಾಂಕಿತವ ಮಾಡಿದಡೂ ಪ್ರೇತಾಂಕಿತಭೇದ. ಅದೆಂತೆಂದಡೆ ತರು ಫಲವ ಹೊತ್ತಂತೆ ಸವಿಯನರಿಯದಾಗಿ ಮಾಡಿಕೊಂಡ ನೇಮಕ್ಕೆ ತಮ್ಮ ಭಾವದ ಶಂಕೆಯಿಲ್ಲದೆ ಧರಿಸಿಹವು. ಲಿಂಗವೆಂದರಿಯವು. ತಾನರಿದು ಆ ವ್ರತನೇಮ ಮಾಟನ ಮಾತುವಲ್ಲಿ ಶೀಲದ ತೊಡಿಗೆ ನೇಮದ ಖಂಡಿತ ಮಾಟದ ಕೂಟ ಇಂತಿವನರಿದು, ತನುನಿಂಗಾಚಾರ ಮನಕ್ಕೆ ವ್ರತ ಮಾಟಕ್ಕೆ ನೇಮ ಕೂಟಕ್ಕೆ ನಿಶ್ಚಯ ಇಂತೀ ಮರ್ತ್ಯದಾಟವುಳ್ಳನ್ನಕ್ಕ ಸದಾತ್ಮನಿಹಿತವಿರಬೇಕು ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವನರಿವುದಕ್ಕೆ.

(೪೩) ನಿತ್ಯ ಚಿಲುಮೆ ಕೃತ್ಯವೆಂದು ಮಾಡುವಲ್ಲಿ ಮಳಲಿನ ಮರೆಯ ನೀರ ಬಳಸದೆ ಉಂಡೆಮರನ ನೋಡಿ ಮರನಂ ಒಡೆಯದೆ ಜೀರ್ಣವಾದ ಕಾಷ್ಠವಂ ಒಲೆಗಿಕ್ಕದೆ ಧಾನ್ಯ, ಲತೆ, ಪರ್ಣ ಮೊದಲಾದ ಪಚ್ಚಪೈರು ಗೆಣಸುಗಳ ಹಳುಕಂ ಮುಟ್ಟದೆ ಲಿಂಗಾವಧಾ

ನದಲ್ಲಿ ಸ್ವಯಂಪಾಕವ ಮಾಡಿ ಸ್ವಾನುಭಾವದಿಂದ ಲಿಂಗಾರ್ಚನೆಯ ಮಾಡಿ, ಬೇಡದೆ ಕಾಡದೆ ಸ್ವೇಚ್ಛಾಪರನಾಗಿ ಆರೈದು ನಡೆವಲ್ಲಿ ನೀರು ನೆಲ ಬಹುಜಲ ಗ್ರಾಮ ಗಣಸಮೂಹ ಸಂಪದ ಸಮಯಕ್ಕೆ ಸಿಕ್ಕದೆ ತ್ರಿವಿಧಕ್ಕೊಳಗಲ್ಲದೆ ಇಂತೀ ನೇಮವ ತಾನಾಗಿ ತಾನೇ ನೇಮವಾಗಿ ಉಭಯಕ್ಕೆ ತೆರಪಿಲ್ಲದೆ ನಿಂದುದು ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ತಾನೆ.

(೫೪) ನಿಷ್ಪ ಜೀವನಮೆಯ ನೇಮಕ್ಕೆ ಶಿವಭಕ್ತರ ಸೀಮೆಯಲಿಲ್ಲದೆ ಇರಲಿಲ್ಲ. ಶಿವಭಕ್ತರು ಮುಟ್ಟಿ ತಂದ ದ್ರವ್ಯವನಲ್ಲದೆ ಒಪ್ಪಲಿಲ್ಲ. ಭಾಜನಕ್ಕೆ ತವ್ಯಾಯತದ ಜಲ, ಲಿಂಗಮುದ್ರೆಯ ವೃತ್ತಿಕೆ, ಮಠ ಕಲ್ಲು ಮುಂತಾದ ಮತ್ತಾವ ಗುಣಂಗಳಿಲ್ಲವೂ ಲಿಂಗಧಾರಣದ ಸೀಮೆಯಾಗಿ ಮತ್ತಾವ ಗುಣಂಗಳಿಂದ ಮನ ಮುಟ್ಟುವನ್ನಬರ ಚಿತ್ತ ಸುಯಿಧಾನಿಯಾಗಿ, ತನ್ನ ಆಯತದ ಸುಯಿಧಾನವ ಕುಟ್ಟುವಲ್ಲಿ ಒರಳು ಒನಕೆಯ ಶಬ್ದಂಗಳ ಭವಿಗಳು ಕೇಳದಂತೆ ಸ್ವಯಂಪಾಕವ ಮಾಡುವಲ್ಲಿ ಅಗ್ನಿಯಲ್ಲಿ ಕಾಷ್ಠದಲ್ಲಿ ಭೂಮಿಯಲ್ಲಿ ಸುಜಲದಲ್ಲಿ ಇಂಬಿಡುವಲ್ಲಿ ತೆಗವಕ್ಕೆ ಲಿಂಗ ಸುಯಿಧಾನಿಯಾಗಿ, ದಂತಧಾವನಂಗಳಲ್ಲಿ ಶುಚಿರ್ಭೂತನಾಗಿ, ಜಂಗಮಲಿಂಗದ ಮುಂದಿಟ್ಟು. ಅವರ ಸ್ವೀಕರಿಸುವನ್ನಕ್ಕ ನೇತ್ರ ತುಂಬಿ ನೋಡಿ ಅವರ ಕಾರುಣ್ಯವಂ ಪಡೆದು ಇಪ್ಪುದು ಭಕ್ತನ ವ್ರತ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ನೇಮ.

ಮಹೇಶ್ವರನ ಕರಣ.

(೫೫) ವ್ರತವನಾಶ್ರಯಿಸಿದ ಮತ್ತೆ ಹುಸಿ ಕೊಲೆ ಕಳವು ಪರದಾರವ ಮಾಡುವನ್ನಕ್ಕರ ವ್ರತಕ್ಕೆ ಸಲ್ಲ, ನೇಮಕ್ಕೆ ಸಲ್ಲ, ಆವಂಗವಿಚಾರವಿಲ್ಲ. ಅವ ರಾಜನೆಂದು ದ್ರವ್ಯದಾಸೆಗಾಗಿ ಅವನ ಮನೆಯ ಹೊಕ್ಕು ವಿಭೂತಿ ವೀಳೆಯ ಮೊದಲಾದ ಉಪಚಾರಕ್ಕೊಳಗಾದವ ಸತ್ತ ಕುಕ್ಕುರನ ಕೀಟಕವ ತಾ ತಿಂದಂತೆ. ಪಂಚಾಚಾರ ಶುದ್ಧತೆಗೆ ಹೊರಗು, ಆಚಾರವೇ ಪ್ರಾಣವಾಗಿಪ್ಪ ರಾಮೇಶ್ವರಲಿಂಗಕ್ಕೆ ಮುನ್ನವೇ ಹೊರಗು.

(೫೬) ವ್ರತವ ಹಿಡಿವಲ್ಲಿ ವ್ರತವ ಉಪದೇಶವ ಮಾಡುವಲ್ಲಿ ಹಿಡಿವಾತನ ಯುಕ್ತಿ ಎಂತೆಂದೊಡೆ ಮನ ವಚನ ಕಾಯ ತ್ರಿಕರಣ ಶುದ್ಧಾತ್ಮನಾಗಿ, ಸತಿಸುತಬಂಧುವರ್ಗಗಳಿಲ್ಲವು ಏಕತ್ರಯವಾಗಿ ನಡೆವುದ ನಡೆಯದೆಂಬುದ ಸ್ಥಿರಕಂಸಿ ಶೃತ ದೃಷ್ಟಾನುಮಾನ ಮೂರನೊಂದ್ಯ ಮಾಡಿ ವ್ಯತ್ಯಯವ ತೋರದೆ ವ್ರತವಸ್ತುವನಾಧರಿಸಬೇಕು. ವ್ರತ ದೀಕ್ಷೆಯ ಮಾಡುವ ಗುರುವಿನಿರವೆಂತೆಂದಡೆ ಅವನಾಗುಚೇಗವನರಿತು, ಈ ವ್ರತನೇಮ ನಿನಗಾಗಲೆಂದು ಇಹಪರದಲ್ಲುಭಯ ದೋಷ ಹಿಂಗೆಂದು ಸಂತೈಸುವುದು ಗುರುಸ್ಥಲ. ಅವನ ಗುಣಕ್ಕೆ ಹರುಷತನಾಗಿ ಗಣಸಮೂಹಮಂ ಗೂಡಿ ಗುರುಲಿಂಗಜಂಗಮ ಸಾಕ್ಷಿಯಾಗಿ ಮಾಡುವದೇ ವ್ರತ. ಹೀಗಲ್ಲದೆ ಮನಕ್ಕೆ ಬಂದಂತೆ ತನು ಹರಿದಾಡಿದಂತೆ ಊರೂರ ದಾರಿಗರಲ್ಲಿ ವ್ರತವ ಮಾಡಿಕೊಳ್ಳಿ ಎಂದು ಸಾರಲಿಲ್ಲ. ಇಂತೀ ಉಭಯವನರಿತು ವ್ರತಕ್ಕರ್ಹನಾಗಬೇಕು. ಇಂತೀ ಸರ್ವಗುಣ ಸಂಪನ್ನನಾದಲ್ಲಿ ಮಾಡಿಸಿಕೊಂಬವನು ತಾನೇ, ಮಾಡುವವನು ತಾನೇ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ತಾನೇ.

(೫೭) ಮಹಾವ್ರತಸ್ಥರು ವ್ರತಿಗಳ ಮನೆಗೆ ಹೋದಲ್ಲಿ ಕಂಡುದ ಬೇಡದೆ ಬಾಯಿಗೆ ಬಂದಂತೆ ನುಡಿಯದೆ ಕಾಮದೃಷ್ಟಿಯಲ್ಲಿ ಮತ್ತೇನುವ ನೋಡದೆ ಶಿವಲಿಂಗಪೂಜೆ ಶಿವಧ್ಯಾನ ಶಿವಕಥಾ ಪ್ರಸಂಗ ಶಿವಶರಣರ ಸಂಗ ತಮ್ಮ ಕ್ರಿಯಾನುಭಾವದ ವಿಚಾರ ಹೀಗಲ್ಲದೆ ಸರಸ ಸಮ್ಮೇಳ ಪಗುಡಿ ಪರಿಹಾಸಕ ಚದುರಂಗ ನೆತ್ತ ಪಗಡೆ ಜೂಜು ಶಿವ

ಭಕ್ತರಿಗುಂಟೆ? ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವ್ರತಿಗಳಿಗೇ ತೆರನಲ್ಲದಿಲ್ಲ.

(೫೮) ವ್ರತವ ಮಾಡಿಕೊಂಡಲ್ಲಿ ರತಿಗೆಡೆಗುಡದೆ ಕ್ಷೇತ್ರವಾಸಂಗಳ ಬೇಡದೆ ಪಡಿಯರ ಧಾನ್ಯವೆಂದು ಗುಡಿಗಳ ಹೊಕ್ಕು ಅಡುವೆಯೂಗದಿರ್ಪುದು. ಭಕ್ತ ಭಕ್ತನ ಬೇಡಿದಾಗಳೆ ಕೆಟ್ಟಿತ್ತು ವ್ರತ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ದೂರ.

(೫೯) ಸರ್ವ ಶೀಲದ ವ್ರತದಾಯತವೆಂತೆಂದಡೆ ತನ್ನ ವ್ರತವಿಲ್ಲದ ಗುರುವ ಪೂಜಿಸಲಾಗದು. ವ್ರತನಿಲ್ಲದ ಜಂಗಮದ ಪ್ರಸಾದವ ಕೊಳಲಾಗದು. ವ್ರತವಿಲ್ಲದವರ ಅಂಗಣವ ಮೆಟ್ಟಲಾಗದು. ಅದೆಂತೆಂದೊಡೆ ಗುರುವಿಂಗೆ ಗುರುವುಂಟಾಗಿ ಲಿಂಗಕ್ಕೆ ಉಭಯ ಸಂಬಂಧವುಂಟಾಗಿ ಆ ಜಂಗಮಕ್ಕು ಗುರುಲಿಂಗ ಉಭಯವುಂಟಾಗಿ ಜಂಗಮವಾದ ಕಾರಣ ಇಂತೀ ಗುರುಲಿಂಗ ಜಂಗಮಕ್ಕೂ ಪಂಚಾಚಾರ ಶುದ್ಧವಿರಬೇಕು. ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರ ಉಂಟೇ? ಇಂತೀ ಒಡೆಯನ ವ್ರತ ಮೊದಲು ಕಡೆಯಲ್ಲಿ ಭಕ್ತಂಗೆ ಇಂತೀ ಉಭಯದ ವ್ರತವ ಕೂಡಿದಲ್ಲಿ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ವ್ರತವಸ್ತುವು.

(೬೦) ವೇಷ ಎಲ್ಲಿರದು ಸೂಳೆಯಲ್ಲಿ, ಡೊಂಬನಲ್ಲಿ, ಭೈರೂಪನಲ್ಲಿರದೇ? ವೇಷವ ತೋರಿ ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೋ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ?

(೬೧) ಅಕ್ಕಮ್ಮಗಳ ವಚನ× ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು. ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು. ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ. ಅವ ಪ್ರಕಾರವಾದರೇನು? ಅಂವೇ ಮುಖ್ಯವಯ್ಯ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

× ಟೀಪು:— ಈ ವಚನದ ಆರಂಭದಲ್ಲಿ ಈ ಶಬಗಳು ಒಂದು ಗ್ರಂಥದಲ್ಲಿ ಬಂದಿವೆ. ಇದರ ಮೇಲಿಂದ ಈ ಮುದ್ರಿಕೆಯು ಪ್ರೀಯುಳದಿರಬಹುದೆಂದು ತೋರುತ್ತದೆ. ಕೇತಯ್ಯನದಾಗಲಿಕ್ಕಿಲ್ಲ.

(೬೨) ನೇಮವ ಮಾಡಿಕೊಂಡು ತನ್ನಯ ಸಂಸಾರದ ಕಾರ್ಯಾರ್ಥಕ್ಕಾಗಿ ಐದು, ಹತ್ತು, ಹದಿನೈದು ಎಂದು ನೀರಿ ಬಂದಡೆ ಕೃತ್ಯವಿಲ್ಲೆಂದು ಅವರಂಗಿಕ್ಕಿಹನೆಂದು ಭಕ್ತರ ಮನೆಯ ಹೊಕ್ಕು ಹೊಕ್ಕು ಬೇಡುವ ಭಕ್ತನ ಯುಕ್ತಿಯೇ? ಅರೊಡವೆಯ ಅಂಗೆ ಮಾಡಿ ತಾನು ದಾರಿಯಾದೆನೆಂಬ ಭೋಗಿಯ ನೋಡಾ. ವೇಶಿಯ ಪುತ್ರ ಪಿತೃಕವ ಮಾಡಿದಲ್ಲಿ ಅದೇತರ ಊಟ? ಅದೇತರ ಮಾಟ? ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಸಲ್ಲದ ನೇಮ.

ಮಹೇಶ್ವರನ ಐಕ್ಯ.

(೬೩) ತನುವಿಂಗೆ ಕ್ರಿ, ಆತ್ಮಂಗೆ ವ್ರತ, ವ್ರತಕ್ಕೆ ನಿಶ್ಚಯ ಕರಂಗೊಂಡು, ಬಾಹ್ಯದ ಕ್ರಿ ಅರಿವಿಂಗೆ, ಆಚರಣೆ ಭಾಷೆಗೆ ಒಸರಿಸದೆ ನಿಂದಾತನೇ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ತಾನೆ.

(೬೪) ಅಜ ಎಮ್ಮೆ ಹಾಲ ಬಿಟ್ಟಲ್ಲಿ ಹೇರಂಡವ ಬೆಳೆಯಲಿಲ್ಲ. ಬೆಳೆದಡೆ ಮನೆಗೆ ತರಲಿಲ್ಲ. ತರಲಿಲ್ಲದ ಮೇಲೆ ಅಡಲಿಲ್ಲ. ಅದು ದೇವರಿಗೆ ಹಿತವಲ್ಲ. ಅದು ರಾಕ್ಷಸರ ವಂಶಭೂತವಾದ ಕಾರಣ ಕಂಡುದ ಬಿಟ್ಟು ಕಾಣದದ ಅರಸಿಕೊಳಬೇಕು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ವ್ರತ ಮುಕ್ತನ ನೇಮ.

ಏಲೇಶ ಕೇತಯ್ಯನ ವಚನಗಳು.

ಪ್ರಸ್ತಾವನೆ.

ಈ ಗ್ರಂಥದಲ್ಲಿ ನಾವು ಏಲೇಶಕೇತಯ್ಯನ ೨೩ ವಚನಗಳನ್ನು ಪ್ರಸಿದ್ಧಿಸಿದ್ದೇವೆ. ಇವುಗಳು ಮಹೇಶ್ವರ ಸ್ಥಲವನ್ನೇ ಅನುವರ್ತಿಸಿರುತ್ತವೆ. ಈ ಸ್ಥಲದ ಮುಖ್ಯ ವೈಶಿಷ್ಟ್ಯವು ಕೈಕೊಂಡ ವ್ರತವನ್ನು ಏಕ ನಿಷ್ಠೆಯಿಂದ ಪಾಲಿಸುವದೇ ಇದ್ದು ಈ ವಚನಗಳು ಈ ಭಾವವನ್ನೇ ವ್ಯಕ್ತಪಡಿಸುತ್ತವೆ. ಇವುಗಳನ್ನು ನಾವು ಬೇರೆ ಬೇರೆ ವಚನಗಳ ಸಂಗ್ರಹ ಗ್ರಂಥಗಳೊಳಗಿಂದ ಆಯ್ದು ಇದರಲ್ಲಿ ಪ್ರಸಿದ್ಧಿಸಿದ್ದೇವೆ. ಇವುಗಳಿಗೂ ರೆಮ್ಮೆಯ ವಚನಗಳಿಗೂ ಬಹಳ ಸಾಮ್ಯವಿದೆ. ಉಭಯತರೂ ಭಕ್ತನು ತಾನು ಕೈಕೊಂಡ ಕಾರ್ಯಗಳನ್ನು ದೃಢಚಿತ್ತದಿಂದ ನಿರ್ವಹಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಉಭಯತರೂ ಮಹೇಶ್ವರ ಸ್ಥಲದವರು. ಆದ್ದರಿಂದ ಈ ವಚನಗಳೆಲ್ಲವೂ ಮಹೇಶ್ವರಸ್ಥಲದ ಭಾವವನ್ನು ವ್ಯಕ್ತಪಡಿಸುತ್ತಿದ್ದು ಅವುಗಳನ್ನು ನಾವು ಅದರ ಆರು ಸ್ಥಲಗಳಾಗಿ ವಿಂಗಡಿಸಿ ಆ ರೀತಿ ಕ್ರಮಗೊಳಿಸಿ ಇದರಲ್ಲಿ ಅಚ್ಚು ಹಾಕಿದ್ದೇವೆ.

ಈ ವಚನಕಾರನ ಚರಿತ್ರೆಯು "ಬಸವಪುರಾಣದ ಕಥಾಸಾಗರ" ಎಂಬ ಗ್ರಂಥದಲ್ಲಿ ಮಾತ್ರ ಉಪಲಬ್ಧವಿರುತ್ತದೆ. ಅದರಲ್ಲಿ ಹೇಳಲ್ಪಟ್ಟಿರುವದು ಏನೆಂದರೆ:—

"ಏಲೇಶ್ವರದ ಕೇತಯ್ಯನು ಒಬ್ಬ ರಾಜನು ಕೊಟ್ಟ ಲಿಂಗಮುದ್ರೆಯ ಭೂಮಿಯಲ್ಲಿ ಆರಂಬವ ಮಾಡಿಕೊಂಡು ವೀರಶೈವರ ಪಾಡುತ ವೀರಶೈವರ ನೋಡುತ ವೀರಶೈವರ ಗೀತವ ಕೇಳುತ ವೀರಶೈವಂಗೆ ನೀಡುತ ಅರವತ್ತುನಾಲ್ಕು ಶೀಲಕ್ಕೆ ಮುಖ್ಯವಾಗಿ ಜಂಗಮ ಪ್ರಸಾದವ ಕೊಂಬುತ ಶೈವಂಗೆ ತಲೆವಾಗ, ಶೈವರ ಕೂಡೆ ಮಾತನಾಡದೆ ಇರಲು, ಅವರು ನೆರೆದು ನಮ್ಮ ಜರೆಯುತ್ತ ಇದ್ದಾನೆ ಎಂದು ಸೂರ್ಯನ ಕತ್ತಲೆ ಮುತ್ತುವಂತೆ ಕೇತಯ್ಯಗಳ ಮುತ್ತಿಕೊಳಲು ಕೇತಯ್ಯನು ವೀರಶೈವ ವಧಿಕವೆಂದು ವಾದದಲ್ಲಿ ಗೆದ್ದು ಶಿವನ ತೃಪ್ತಿಯ ಪಡೆದನು."

ಏಲೇಶಕೇತಯ್ಯನ ಸ್ಥಳವು ಯಾದಗಿರಿಯ ಗ್ರಾಮಕ್ಕೆ ಸಮೀಪಕ್ಕಿರುವ ಏಳೇರಿ ಎಂಬುದಿದೆ. ಇಲ್ಲಿಯೇ ಕೇತಯ್ಯನು ವಾಸವಾಗಿ

ಕೊಂಡಿರಬಹುದೆಂದು ತೋರುತ್ತದೆ. ಈ ವಿಷಯಸಂಬಂಧವಾಗಿ ವಾಚಕರು 'ರೆಮ್ಮನ್ವೆಯ ವಚನಗಳು" ಇದರ ಪ್ರಸ್ತಾವನೆಯನ್ನೂ ನೋಡಬೇಕೆಂದು ನಮ್ಮ ಸೂಚನೆ ಇದೆ.

ವಿಜಾಪುರ
೯-೨-೧೯೪೧

ಫ. ಗು. ಹಳಕಟ್ಟಿ
ಸಂಪಾದಕ.

ಭಕ್ತ ಸ್ಥಲ.

(೧) ಅವ ಲಿಂಗವ ತೊಟ್ಟಡೇನು ? ಪಂಚಾಂಗಸಿಯರ ಸೋಂಕ. ಕರವಿರ್ದಡೇನು ? ಮುತ್ತೊಂದನಪಹರಿಸಿ ತೆಗೆಯು. ಕರ್ಣವಿರ್ದಡೇನು ? ಮತ್ತೊಂದು ಶಬ್ದವ ಕೇಳ. ಕಂಗಳಿದ್ದಡೇನು? ಲಿಂಗವಲ್ಲದುದ ನೋಡ. ನಾಸಿಕವಿದ್ದಡೇನು ? ಅರ್ಪಿತವಲ್ಲದುದ ವಾಸಿಸ. ಜಿಹ್ವೆ ಇರ್ದಡೇನು ? ಪ್ರಸಾದವಲ್ಲದುದ ಸ್ವೀಕರಿಸ. ಇಂತಿವರೆಲ್ಲರಲ್ಲಿ ಸರ್ವಾವಧಾನಿಯಾಗಿ ನಡೆ ನುಡಿ ಅರಿವು ಶುದ್ಧಾತ್ಮನು ಏಲೇಶ್ವರ ಲಿಂಗ.

ಭಾವ:— ವಚನಗಳಲ್ಲಿ 'ಅವಧಾನ', 'ಅವಧಾನಿ', 'ಸರ್ವಾವಧಾನಿ' ಎಂಬ ಶಬ್ದಗಳು ಪದೇ ಪದೇ ಬರುತ್ತವೆ. ಅವಧಾನವಂದರೆ ಮನಸ್ಸಿನ ಏಕಾಗ್ರತೆ. ಇದು ಅದರ ಸರಳಾರ್ಥವು. ಆದರೆ ಮನಸ್ಸಿನ ಏಕಾಗ್ರತೆ ಎಂದರೆ ಅವ ಕಾರ್ಯಗಳನ್ನ ಮಾಡದೆ, ಒಂದು ವಸ್ತುವನ್ನ ಧ್ಯಾನಿಸುತ್ತ ಸುಮ್ಮನೆ ಕುಳ್ಳಿರುವನು ಅಲ್ಲ. ಹೀಗೆ ನಡೆಯುವವನು ಸೋವಮಾರಿ ಎಂದು ವಚನಕಾರರು ಭಾವಿಸಿ ಇಂಥವನನ್ನು ಹಳಿಯುತ್ತಾರೆ. ಅವಧಾನದಲ್ಲಿ ಇಂದ್ರಿಯುಗಳ ಚಟುವಟಿಕೆ ಇರಬೇಕು. ಈ ಚಟುವಟಿಕೆಯ ರೀತಿಯನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ನೈತಿಕಾಚಾರವುಳ್ಳವನಾಗಿ ವರ್ತಿಸಿದಲ್ಲಿ ಇಂದ್ರಿಯುಗಳ ಯೋಗ್ಯ ಚಟುವಟಿಕೆ ಎಂದು ವಚನಕಾರನ ಅಭಿಪ್ರಾಯವಿದೆ. ಹೀಗೆ ವರ್ತಿಸುವವನು 'ಸರ್ವಾವಧಾನಿ' ಎಂದು ಇಲ್ಲಿ ಹೇಳುತ್ತಾನೆ. ಇಂಥವನ ಅರಿವು ಶುದ್ಧವಾಗುವದು. ಹೀಗೆ ಅದು ಶುದ್ಧವಾಗಲು ಅವನು ಪರಬ್ರಹ್ಮ ಸ್ವರೂಪನೇ ಆಗುವನು.

(೨) ಬಸವೇಶ್ವರನಿಂಗೆ ಸರ್ವಗುಣಶೀಲ. ಚನ್ನಬಸವೇಶ್ವರಂಗೆ ದಿವ್ಯಜ್ಞಾನಗುಣಶೀಲ. ಮಡಿವಾಳಯ್ಯಂಗೆ ವೀರಗುಣಶೀಲ. ಅಜಗಣ್ಣಯ್ಯಂಗೆ ಐಕ್ಯಗುಣಶೀಲ. ಸಿದ್ಧರಾಮಯ್ಯಂಗೆ ಯೋಗಗುಣಶೀಲ. ನಿಜಗುಣಂಗೆ ಆತ್ಮಗುಣಶೀಲ- ಚಂದಯ್ಯಂಗೆ ವೈರಾಗ್ಯಗುಣಶೀಲ. ಘಟ್ಟಿವಾಳಂಗೆ ತ್ರಿವಿಧ ಗುಣಶೀಲ. ಮೋಳಿಗಯ್ಯಂಗೆ ಭೇದಗುಣಶೀಲ. ಅಕ್ಕಗಳಿಗೆ ನಿರ್ವಾಣಗುಣಶೀಲ. ಮಿಕ್ಕಿದ ಪ್ರಮಥರಿಗೆಲ್ಲಕ್ಕು ಸ್ವತಂತ್ರ ಗುಣಶೀಲ. ಎನಗೆ ಏಲೇಶ್ವರ ಲಿಂಗವು ಕೊಟ್ಟದ್ದೊಂದೇ ವಿಶ್ವಾಸ ಶೀಲ.

ನೀರಿನಂತಿರುತ್ತಾನೆ. ಅವನಲ್ಲಿ ತನ್ನ ಕಾರ್ಯದ ಬಗ್ಗೆ ವಿಶ್ವಾಸವಿಲ್ಲ. ಇಂಥವನಿಗೆ ಅರಿವು ಉಂಟಾಗದು. ಆದರೆ ಅವನಿಗೊಂದು ಕುರುಹು ಅಂದರೆ ಧ್ಯೇಯವು ಬೇಕು. ಇದನ್ನು ತನ್ನೆದುರಿಗಿಟ್ಟುಕೊಂಡು ಆಚರಿಸಿದಲ್ಲಿ ಅವನಿಗೆ ಕಾರ್ಯಗಳು ಸಾಧ್ಯವಾಗುವವು.

(೫) ಎನ್ನ ನೇಮಕ್ಕೆ ತಪ್ಪದ ಗುರು. ಎನ್ನ ಶೀಲಕ್ಕೆ ತಪ್ಪದ ಲಿಂಗ. ಎನ್ನ ವ್ರತಾಚಾರಕ್ಕೆ ತಪ್ಪದ ಜಂಗಮ. ಎನ್ನ ಮನೋಮೂರ್ತಿ ಹೀಗಲ್ಲದೆ ಕ್ರಿಯೆಗೆ ನಿಲ್ಲದ ಗುರು ಆತ ಭವಭಾರಿ. ಆಚಾರಕ್ಕೆ ನಿಲ್ಲದ ಲಿಂಗ ಅದು ಪಾಷಾಣ. ವ್ರತಾಚಾರದ ದೆಸೆಯ ದೂಷಿಸುವ ಜಂಗಮ ವೇಷದ ಘಾತಕ. ಇಂತು ವ್ರತಕ್ಕೆ ಎನ್ನಾಚಾರಕ್ಕೆ ಎನ್ನ ಭಾವಕ್ಕೆ ಸಮಕ್ರಿಯಾವಂತನಾಗಿ ಸಮಶೀಲವಂತನಾಗಿ ಸಮಭಾವವಂತನಾಗಿ, ಸಮರಥ ಸತ್ಪಥನಾಗಿಪ್ಪಾತನೇ ಎನ್ನ ತ್ರಿವಿಧಕ್ಕೊಡೆಯ. ಈ ಗುಣಕ್ಕೊಡೆಯ ಈ ಗುಣಕೊಪ್ಪದೆ ತ್ರಿವಿಧದ ಕಷ್ಟಟಕ್ಕೆ ಮೆಚ್ಚಿ ಹೋರುವ ಎನ್ನ ವ್ರತಾಚಾರಕ್ಕನುಕೂಲವಾಗನವ ಏಲೇಶ್ವರಲಿಂಗವಾಯಿತ್ತಾದಡೂ ಇಹಪರಕ್ಕೆ ಹೊರಗೆಂದು ಡಂಗುರವಿಕ್ಕಿದೆ.

ಭಾವ:— ವಚನಕಾರನು ಇಲ್ಲಿ ಗುರುಲಿಂಗ ಜಂಗಮದ ಕಾರ್ಯಗಳನ್ನು ಒಂದು ವಿಧವಾಗಿ ವಿವರಿಸಿದ್ದಾನೆ. ಮನುಷ್ಯನ ಕ್ರಿಯೆಗಳಲ್ಲಿ ಅವನು ನೇಮ, ಶೀಲ, ವ್ರತ ಎಂದು ಮೂರು ವರ್ಗಗಳನ್ನು ಮಾಡಿದ್ದಾನೆ. ನೇಮವು ಸ್ಥೂಲವಾದುದು, ಅದಕ್ಕೂ ಸೂಕ್ಷ್ಮವಾದುದು ಶೀಲ, ಈ ಶೀಲಕ್ಕಿಂತಲೂ ಸೂಕ್ಷ್ಮವಾದುದು ವ್ರತ, ಹೀಗೆ ಅವನು ಭಾಗಗಳನ್ನು ಮಾಡಿದ್ದಾನೆ. ನೇಮವು ಗುರುವಿಗೆ ಸಂಬಂಧಿಸಿದ್ದು, ಶೀಲವು ಲಿಂಗಕ್ಕೆ ಸಂಬಂಧಿಸಿದ್ದು, ವ್ರತವು ಜಂಗಮಕ್ಕೆ ಸಂಬಂಧಿಸಿದ್ದು, ಎಂದು ಅವನು ಹೇಳುತ್ತಾನೆ. ಈ ವಿಧವನ್ನು ಅರಿತು ಆಚರಿಸಬೇಕೆಂದು ವಚನಕಾರನ ಅಭಿಪ್ರಾಯವು.

(೬) ತಾ ನೇಮವ ಮಾಡಿಕೊಂಡು, ಕೃಷಿಬೆವಸಾಯವಿಲ್ಲದೆ ಒಡೆಯರ ಕಟ್ಟಳೆಯಪ್ಪರವದಿಗೊಡಲೆಂದು(?) ಹಿಂಗಲ್ಲದೆ ಎನ್ನ ಒಡಲ ಹೊರೆದೆನೆಂದು ಹೋದ ತಾನಿನಲ್ಲಿ ಓಗರವನಿಕ್ಕುವ ಲಾಗಿನ ಶೀಲವಂತರ ಮನದ ಭೇದವ ನೀವೇ ಬಲ್ಲಿರಿ ಏಲೇಶ್ವರಲಿಂಗವೇ.

ಭಾವಃ— ಪ್ರತಿಯೊಬ್ಬನಿಗೆ ಕೆಲವೊಂದು ವಿಶಿಷ್ಟ ಗುಣವಿರುತ್ತದೆ. ಒಬ್ಬನು ಶ್ರದ್ಧೆಗೆ ಒಲಿದವನಿದ್ದರೆ, ಇನ್ನೊಬ್ಬನು ಯೌಗಿಕ ಗುಣಗಳುಳ್ಳವನಿರುತ್ತಾನೆ. ಮತ್ತೊಬ್ಬನು ವೈರಾಗ್ಯಕ್ಕೆ ಒಲಿದವನಿರುತ್ತಾನೆ. ಹೀಗೆ ಜನರು ಭಿನ್ನ ಭಿನ್ನ ಸ್ವಭಾವದವರಿರುತ್ತಾರೆ. ಆದರೂ ಅವರು ತಮ್ಮ ತಮ್ಮ ಪ್ರಭಾವವಲ್ಲಯೇ ಇದ್ದುಕೊಂಡು ಅದರಲ್ಲಿಯೇ ತಮ್ಮ ಹೆಚ್ಚಳವನ್ನು ಹೊಂದಬಹುದು. ಈ ತತ್ವಕ್ಕನುಸಾರವಾಗಿ ಷಟ್‌ಸ್ಥಲಶಾಸ್ತ್ರವ ಯೋಜನೆ ಇದೆ. ಆದರೆ ವಚನಕಾರನು ತನ್ನ ಈ ವಚನದಲ್ಲಿ ತಾನು ಹೆಚ್ಚಿನ ಸ್ಥಲದವನಲ್ಲ, ಆದರೆ ವಿಶ್ವಾಸ ಒಂದು ಮಾತ್ರ ತನ್ನಲ್ಲಿದೆ, ಅದರಿಂದಲೇ ತಾನು ಮೋಕ್ಷವನ್ನು ಹೊಂದುವೆನೆಂದು ಹೇಳುತ್ತಾನೆ.

(೩) ಜೇಡಿ ಮಾಡುವ ಭಕ್ತನಿರುಹೆಂತೆಂದಡೆ ಈಗಾಗಲೆಂಬ ಬಯಕೆ ಮರೆತು: ಸತಿಸುತರಿಗೆನ್ನದೆ ಇಂತೀ ಭಕ್ತಿಯೇ ಗತಿಯಾಗಿ ಸತ್ಯವೇ ಒಡಲಾಗಿ ನಿತ್ಯನಿತ್ಯವ ತಿಳಿದು ಮಾಡುವ ಸದ್ಭಕ್ತ ಬೇಡಿಕೆನೆಂಬ ಭಾವವಿಲ್ಲ. ಏಲೇಶ್ವರ ಲಿಂಗವ ಮುಟ್ಟುವ ಗೊತ್ತಿನ ಬಚ್ಚಿಟ್ಟ ಬಯಕೆ.

ಭಾವಃ— ಭಕ್ತನ ರೀತಿಯು ಸ್ವಾರ್ಥರಹಿತವಾಗಿರುತ್ತದೆ. ತನಗೋಸ್ಕರ ಮಾಡುವ ಭಾವವು ಅವನಲ್ಲಿಲ್ಲ. ಅವನಿಗೆ ಭಕ್ತಿಯೇ ಗತಿಯು, ಸತ್ಯವೇ ಅವನ ಶರೀರವು. ಸತ್ಯಸತ್ಯವಾವುದು ಎಂಬುದನ್ನು ಅವನು ತಿಳಿಯುತ್ತಾನೆ. ಯಾರನ್ನೂ ಅವನು ಯಾಚಿಸುವದಿಲ್ಲ. ಅವನು ಸ್ವತಂತ್ರನು.

ಮಹೇಶ್ವರ ಸ್ಥಲ.

(೪) ತಾವರೆಯ ಎಲೆಯ ಮೇಲಣ ನೀರಿನಂತೆ, ಎನ್ನಮನವ: ವ್ರತವ ನೆಮ್ಮದಿದೆ ನೋಡಾ! ಅಯ್ಯಾ ಎನ್ನ ಮನ ಸಂದೇಹದಿಂದ ಮಹಾವ್ರತಿಗಳ ಸಂಗ ಸುಸಂಗಕ್ಕೆ ಬಾರದಿದೆ ನೋಡಾ! ಎಲೆ ಅಯ್ಯಾ ಕ್ರಿಯೆಯನೊಲ್ಲದು, ಅರಿವನರಿಯದು. ಬರುದೊರೆ ಹೋಹ ಎನ್ನ ಮನಕ್ಕೊಂದು ಕುರುಹು ತೋರಾ ಏಲೇಶ್ವರಲಿಂಗಾ.

ಭಾವಃ— ನಿಷ್ಠೆ ಎಂದರೆ ಹಿಡಿದ ಕಾರ್ಯಗಳನ್ನ ಬಿಡದಿರುವದು. ಇದು ಮಹೇಶ್ವರನ ಲಕ್ಷಣವು. ಆದರೆ ಮನುಷ್ಯನು ತಾನು ಮಾಡುವ ಕಾರ್ಯದಲ್ಲಿ ಮನಸ್ಸು ಹಾಕುವದಿಲ್ಲ. ತಾವರೆಯ ಮೇಲಿನ

ಭಾವಃ— ನೇಮ ಮಾಡುವವನು ಕಾಯಕವನ್ನು ಆಚರಿಸಬೇಕು. ಅಂದರೆ ಸ್ವಾವಲಂಬಿಯಾಗಿರಬೇಕು. ಅವನು ಭಿಕ್ಷೆಯನ್ನು ಬೇಡಬಾರದು. ಶೀಲವಂತರೆನಿಸಿಕೊಳ್ಳುವವರೂ ಕೂಡ ಇಂಥವನಿಗೆ ಭಿಕ್ಷೆಯನ್ನು ಹಾಕಬಾರದು ಎಂಬ ಭಾವವು ಇದರಲ್ಲಡಿ. ಈ ವಚನವು ಕೆಲವೆಡೆಗಳಲ್ಲಿ ಅಶುದ್ಧವಾಗಿದೆ.

(೭) ಸತಿಸ.ತಪುರುಷರಿಗೆಲ್ಲಕ್ಕು ಬೇರೊಂದೊಡಲುಳ್ಳನ್ನಕ್ಕ ವ್ರತದ ಕ್ರಿ. ಭಾವಬೇಕಾದಲ್ಲಿ ಬೇರೊಬ್ಬಿಡೆಯರ ಕಟ್ಟಪಡೆ ಬೇಕು. ಸತ್ಪಥಕ್ಕೆ ಇದು ಹಾದಿ, ವ್ರತಸ್ಥಲದ ಭಕ್ತಿ ಯುಕ್ತಿ, ಏಲೇಶ್ವರಲಿಂಗವ ಮುಟ್ಟುವ ಗೊತ್ತು.

ಭಾವಃ— ವೀರಶೈವ ಧರ್ಮದ ಮೇರೆಗೆ ಸ್ತ್ರೀಪುರುಷರು ಸ್ವತಂತ್ರರು. ಆದ್ದರಿಂದ ಅವರ ವ್ರತಗಳು, ಕ್ರಿಯೆಗಳು ಮತ್ತು ಭಾವಗಳು ಬೇರೆ ಬೇರೆ ಇರಬಹುದು. ಈ ಸ್ಥಿತಿಯಲ್ಲಿ ಅವರು ತಮ್ಮ ತಮ್ಮ ವಿಚಾರಗಳಿಗನುಕೂಲರಾದ ಒಡೆಯರನ್ನು ಆರಿಸಿಕೊಂಡು ತಮ್ಮ ತಮ್ಮ ಕ್ರಿಯೆಗಳನ್ನು ಆಚರಿಸತಕ್ಕದ್ದು.

(೮) ಭಕ್ತರ ಆಶ್ರಯಕ್ಕೆ ಭಕ್ತರು ಹೋಹಲ್ಲಿ ಅವರ ನಿತ್ಯ ಕೃತ್ಯವ ವಿಚಾರಿಸಿ ತಮ್ಮ ನೇಮಕ್ಕೆ ಅವರ ಭಾವ ಒಂದಾವಲ್ಲಿ ತಮ್ಮ ಕೃತ್ಯದ ಒಡೆಯರು ಮುಂತಾಗಿ ಹೋಗಬೇಕು. ಹೀಗಲ್ಲದೆ ಭಕ್ತರ ಆಶ್ರಯಕ್ಕೆ ಒಡೆಯರ ಕಟ್ಟಪಡೆ ಉಂಟೆಂದು ತಮ್ಮ ಒಡೆಯರ ಬಿಟ್ಟು ತುಡುಗುಣಿ ತನದಲ್ಲಿ ತಿಂಬವಂಗೆ ವ್ರತ ಉಂಟೇ? ಇಂತೀ ಬಿಡುಮುಡಿಯ ಭಂಡರ ನೊಪ್ಪ ಏಲೇಶ್ವರಲಿಂಗ.

ಭಾವಃ— ಒಂದೇ ವಿಧದ ಭಾವ ಮತ್ತು ವಿಚಾರವುಳ್ಳವರು ಒಟ್ಟಾಗಿ ಸೇರಿಕೊಂಡು ತಮ್ಮ ಕೃತ್ಯಗಳನ್ನು ನಡಿಸಬೇಕೆಂದು ಈ ವಚನದ ಭಾವಾರ್ಥವಿದೆ. ಇಂಥ ಸಮಯದಲ್ಲಿ ಬರೇ ಭಕ್ತರಷ್ಟೇ ಅಲ್ಲ, ಅವರ ಒಡೆಯರೂ ಕೂಡ ಸೇರಿ ಕಾರ್ಯವಾಡತಕ್ಕದ್ದು.

(೯) ನಾನಾಪ್ರಭೇದ ವ್ರತದ ಸಂಧಿಸಿ ಭೇದಿಸುವಲ್ಲಿ ಬಾಹ್ಯ ಅಂತರಂಗ ಉಭಯ ಏಕವಾಗಿ ಜಾಗ್ರತ್ ಸ್ವಪ್ನ, ಸುಷುಪ್ತಿಗಳಲ್ಲಿ ಕೊಂಡ ವ್ರತಕ್ಕೆ ಭಿನ್ನಭಾವವಿಲ್ಲದೆ ಎಲ್ಲ ಎಚ್ಚರಿಕೆಯಲ್ಲಿ ಬಲ್ಲವನಾಗಿ ಅರಿದು ಬಿಟ್ಟು ಮರೆದೆನೆಂದು, ಮತ್ತರಿದು ನಡೆದಿಹೆನೆಂಬುದು ವ್ರತಕ್ಕೆ ಅದೇ

ಮರವೆ. ಇಲ್ಲವೆ ಜೇಡನ ಮುಂದಣ ನೆಯಿಗೆಯು ನೂಲೇ? ಲೋಹದ ಭಾಂಡವೇ? ಅದು ಕುಂಭದ ಘಟದಂತೆ, ವ್ರತ ತಪ್ಪಿದಲ್ಲಿಯೇ ತಪ್ಪಿನೊಪ್ಪವಿಲ್ಲ. ಏಲೇಶ್ವರ ಲಿಂಗವಾಯಿತ್ತಾದಡೂ ಧಿಕ್ಕರಿಸಿಬಿಡುವೆನು.

ಭಾವಃ— ಒಂದು ವ್ರತವನ್ನು ಕೈಕೊಂಡ ಬಳಿಕ ಅದರಂತೆಯೇ ನಡೆಯಬೇಕು. ಅದನ್ನು ಒಮ್ಮೆ ಹಿಡಿಯುವದೂ ಮತ್ತೊಮ್ಮೆ ಬಿಡುವದೂ ಮಾಡಕೂಡದು. ಅವರಲ್ಲಿ ನಿಶ್ಚಯ ಬೇಕೆಂಬ ಭಾವವಿದೆ.

(೧೦) ಒಡೆಯರು, ಭಕ್ತರು ತಾವೆಂದು ಅಡಿಮೆಟ್ಟಿ ಹೋಹಲ್ಲಿ ತಡೆಯಿತ್ತು ಶಕುನವೆಂಬ ಉಳಿದಡೆ ಕಾಗೆ ವಿಹಂಗ ಮಾರ್ಜಾಲ ಮನೆವಕ್ಕಿ ಗರ್ದಭ ಶೇಷ ಸಂದೇಹಿಗಳು ಮೊದಲಾದ ಸಂಕಲ್ಪಕ್ಕೊಳಗಾದಲ್ಲಿ ವ್ರತಕ್ಕೆ ಭಂಗ ಆಚಾರಕ್ಕೆ ದೂರ. ಅದೆಂತೆಂದಡೆ, ಅಂಗಕ್ಕೆ ಆಚಾರ ಸಂಬಂಧಿಸಿದಲ್ಲಿ ಮನಕ್ಕೆ ಅರಿವು, ಅರಿವಿಂಗೆ ವ್ರತವ ಮಾಡಿದಲ್ಲಿ ಬೇರೊಂದು ಪಂಹರಿಸುವ ನಿಮಿತ್ಯ ಉಂಟೇ? ಇಂತೀ ಸತ್ಕ್ರಿಯಂತಗೆ ಸತ್ಪ್ರಜೀವದ ಲಕ್ಷಣದಲ್ಲಿ ಚಿತ್ತ ಮೆಚ್ಚಿಹನ್ನಕ್ಕ ತನು ಆಚಾರ ಭ್ರಷ್ಟ ಏಲೇಶ್ವರಲಿಂಗಕ್ಕೆ ದೂರ.

ಭಾವಃ— ವ್ರತವನ್ನು ಕೈಕೊಂಡ ಬಳಿಕ ಅದನ್ನು ಮಾಡುವಲ್ಲಿ ಶಕುನ, ಅಪಶಕುನವೆಂದು ಭಾವಿಸಬಾರದು. ಹೀಗೆ ಸಂದೇಹ ಮಾಡಿದ್ದಾದರೆ ಅದು ವ್ರತಕ್ಕೆ ಭಂಗವು - ಅಂಗಕ್ಕೆ ಆಚಾರ ಮತ್ತು ಮನಕ್ಕೆ ಅರಿವು, ಅರಿವಿಗೆ ವ್ರತವು ಇರತಕ್ಕದ್ದು - ಹೀಗೆ ಜರಗಿದ ಕೂಡಲೆ ಯಾವ ಶಕುನವನ್ನೂ ನೋಡತಕ್ಕದ್ದಲ್ಲ.

(೧೧) ಹೆಂಡತಿ ಗಂಡನ ಒಡೆಯರೆಂದು ಕೂಡಿಕೊಳ್ಳುವ ಜಗಭಂಡೆಯು ನೋಡಾ. ಕೂಟಕ್ಕೆ ಪುರುಷನಾಗಿ ನೇಮಕ್ಕೆ ಮಡಿಯತನ ಉಂಟೆ? ಇಂತೀ ಜಾರಿಯ ನೇಮ, ಮೂತ್ರದ್ವಾರಕ್ಕೀಡು. ಇಂತೀ ದುರಾಚಾರಿಗಳು ಜಂಗಮವೆಂದು ಅವರೊಡನೆ ಕೂಡಿಕೊಂಡುಂಬ ಜಗಭಂಡರ ನೇಮ ಸುಸಂಗವಲ್ಲ ಏಲೇಶ್ವರಲಿಂಗಕ್ಕೆ.

ಭಾವಃ— ವ್ರತವನ್ನು ಮಾಡುವಲ್ಲಿ ಸದಾಚಾರವಿರಬೇಕು. ಸ್ತ್ರೀಯು ಸದಾಚಾರಿಯಾಗಿರಬೇಕು. ತನ್ನ ಗಂಡನ ಒಡೆಯರೆಂದು ಅವರೊಡನಿರುವದು ಜಾರತ್ವವು. ಮತ್ತ ಇಂಥ ಜಂಗಮರೂ ಭಂಡರು.

(೧೨) ಸರ್ವಾಂಗವಾದ ಮುಖ ಆತ್ಮವಾದ ಇಂತೀ ವ್ರತನೇಮದ ಕಟ್ಟಿನಲ್ಲಿ ಇಪ್ಪವನ ಇರವು ತನ್ನ ನೇಮಕ್ಕೆ ನೇಮದನನ್ನೀಕರಿಸಿದವ ನಲ್ಲಿ ಅಂಗ ಬಂಧವ ತೆಗದು ತೋರುವುದು. ಮುಖ ಬಂಧವ ತೆಗೆದು ನೋಡುವುದು. ಆತ್ಮ ಬಂಧನ ಬಿಟ್ಟು ಮಾತನಾಡುವುದು. ಇಂತೀ ಭಾಷೆಗೆ ಭಾಷೆ ಒಳಗಾದವನಲ್ಲ. ಇದು ನಿಹಿತದ ವ್ರತ ಏಲೇಶ್ವರ ಲಿಂಗಕ್ಕೆ.

ಭಾವಃ— ವಚನವು ಅಶುದ್ಧವದೆ. ಜನ್ನಾಗಿ ಅರ್ಥವಾಗುವದಿಲ್ಲ.

ಪ್ರಸಾದಿಸ್ಥಲ.

(೧೩) ವ್ರತಸ್ಥನಾಗಿದ್ದಾತ ಸಮೂಹಪ್ರಸಾದವ ಕೊಳಲಾಗದು. ಅವೆಂತೆಂದಡೆ ಬಾಲರು ಭ್ರಾಮಕರು, ಜೋರರು, ಕಟುಗರು, ಪರದಾರಿಗಳು, ಜಾರರು, ಪಗುಡೆ ಪರಿಹಾಸಕರು, ಅವರಲ್ಲಿ ಪ್ರಸಾದನಚ್ಚ ಮೆಚ್ಚುಂಟೆ? ಪ್ರಸಾದವ ಕೊಂಬಲ್ಲಿ ಸಮಶೀಲ ಸಂಪನ್ನರ, ಏಕಲಿಂಗ ನಿಷ್ಠಾವಂತರು, ಸರ್ವಾಂಗಲಿಂಗ ಪರಿಪೂರ್ಣರು, ಪರಮ ನಿರ್ವಾಣರು, ಇಂತಿವರೊಳಗಾದ ಸರ್ವಗುಣಸಂಪನ್ನಂಗೆ ಪ್ರಸಾದವಲ್ಲದೆ, ಕಾಗೆಯಂತೆ ಕರೆದು, ಕೋಳಿಯಂತೆ ಕೂಗಿ, ಡೊಂಬರಂತೆ ಕೂಡಿ, ಆಡಿ, ಬಾಗಿ ಹಿಂಗದಿರ್ದಡೆ ಕೊಂಡಾಡುವ ಲಾಗ ನೋಡಿಕೊಳ್ಳಿ. ನಿಮ್ಮ ಭಾವಕ್ಕೆ ದೃಷ್ಟ. ಸತ್ಯಕ್ಕೆ ಮರೆ ಇಲ್ಲ. ಭಕ್ತಿಗೆ ಇದಿರಿಡೆಯಿಲ್ಲ. ವ್ರತ ಕೆಟ್ಟವನಂಗೆ ಆಚಾರ ಭ್ರಷ್ಟಂಗೆ ಕಟ್ಟು ಮೆಟ್ಟು ಮಾಡಲಿಲ್ಲ. ಇದು ಕಟ್ಟಾಚಾರಿಯ ದೃಷ್ಟ ಏಲೇಶ್ವರ ಲಿಂಗ. ಸರ್ವಶೀಲವಂತನಾದ ಸಂಬಂಧದ ಸಂಪದದಂಗ.

ಭಾವಃ— ವೀರಶೈವರಲ್ಲಿ ಸಾಮೂಹಿಕ ಆರಾಧನೆ ಇಲ್ಲ. ಅವರ ಆರಾಧನೆಯು ವೈಯ್ಯಕ್ತಿಕವಾಗಿದೆ. ಸಮಶೀಲವಂತರು ಕೂಡಿ ಪ್ರಸಾದವನ್ನು ಸ್ವೀಕರಿಸಬಹುದು. ಆನರೆ ಸಾಮೂಹಿಕ ಆರಾಧನೆಯ ಕಾಲದಲ್ಲಿ ಮತಭ್ರಷ್ಟರು ಸೇರಿಕೊಳ್ಳಲು ಆಸ್ಪದವಿದ್ದಲ್ಲಿ ಇಂಥ ಆರಾಧನೆಗೆ ಮಹತ್ವವಿಲ್ಲ.

(೧೪) ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸನ್ನವಪ್ಪ ಪ್ರಸಾದಂಗಳನರಿದಡೆ ಆಯತ ಸ್ವಾಯತ ಸನ್ನಿಹಿತ. ಗುರುಭಕ್ತನಾದಲ್ಲಿ ವಿವರವ ತಿಳಿಯಬೇಕು ಲಿಂಗಭಕ್ತನಾದಲ್ಲಿ ಗುಣವನರಿಯಬೇಕು. ಜಂಗಮಭಕ್ತನಾದಲ್ಲಿ ಉಭಯವ ವಿವರಸಲಿಲ್ಲ. ಮಹಾಪ್ರಮಥರಲ್ಲಿ ಪ್ರಸನ್ನನಾಗಲಾಗಿ ಗುರು, ಲಿಂಗ, ಜಂಗಮ ಮೂರೊಂದಾಯಿತ್ತು. ಆ ತ್ರಿವಿಧ ಪ್ರಸಾದವನರಿತು ಗಣಪ್ರಸಾದವ ಕೊಂಬುವುದು. ಆ ಗುಣ ಸ್ಪಷ್ಟವಾಗಿ ಮಹಾಪ್ರಸಾದವಾಯಿತ್ತು. ಆ ಪ್ರಸಾದವ ಕೊಂಡು ಏಲೇಶ್ವರಲಿಂಗವು ಸರ್ವಶೀಲವಂತನಾದ.

ಭಾವಃ— ಗುರು, ಲಿಂಗ, ಜಂಗಮ ಪ್ರಸಾದದ ವಿವರವನ್ನು ಇಲ್ಲಿ ವಚನಕಾರನು ಹೇಳಿದ್ದಾನೆ. ಗುರುವನರಿದಲ್ಲಿ ಶುದ್ಧ ಪ್ರಸಾದವು. ಲಿಂಗವನರಿದಲ್ಲಿ ಸಿದ್ಧ ಪ್ರಸಾದವು. ಜಂಗಮವನರಿದಲ್ಲಿ ಪ್ರಸಿದ್ಧ ಪ್ರಸಾದವು. ಅವುಗಳಿಗೆ ಅನುಕ್ರಮವಾಗಿ ಆಯತ, ಸ್ವಾಯತ, ಸನ್ನಿಹಿತವೆಂತಲೂ ಹೆಸರುಗಳಿವೆ. ಆಯತನಾದವನು ನಿಜಸ್ಥಿತಿಯನ್ನರಿಯಬೇಕು. ಸ್ವಾಯತನಾದವನು ಗುಣಗಳನ್ನರಿಯಬೇಕು. ಸನ್ನಿಹಿತನಾದವನು ಒಳಹೊರಗೆಂದು ಭೇದವನ್ನು ದೂರವಾಡಬೇಕು. ಈ ಗುಣಗಳೆಲ್ಲವೂ ಕೂಡಿದಲ್ಲಿ ಗುರು, ಲಿಂಗ, ಜಂಗಮಗಳು ಒಂದಾಗುವವು - ಇದೇ ಮಹಾಪ್ರಸಾದವೆನಿಸಿಕೊಳ್ಳುತ್ತದೆ.

(೧೫) ಜಂಗಮದ ಮುಂದಿಟ್ಟು ಕೊಂಡಿಕಿನೆಂಬ ಸರ್ವಸಮಯಾಚಾರ ಸಂಪತ್ತಿನಿಂದವು ಮಜ್ಜನ ಭೋಜನ ಅಂದಣ ಛತ್ರಚಾಮರ ಕರಿ ತುರಗ ದರ್ಪಣ ಹಲ್ಲುಕಡ್ಡಿ ಪರಿಮಳಗಂಧ ತಾಂಬೂಲ ರತ್ನಾಭರಣ ಒಡೆಯುಂಗಾಯಿತ್ತೆಂದು ಆ ಒಡೆಯನ ವಾಚ್ಯಪ್ರಸಾದದಿಂದ ಮಹಾಪ್ರಸಾದವೆಂದು ಕೂಟಸ್ಥನಾಗಬೇಕು. ಇಂತೀ ಭಾವ ಸರ್ವಸಮಯಾಚಾರ. ಈ ವರ್ತನದಂಗ ನಿಂದಾತನ ಸಂಗ ಏಲೇಶ್ವರ ರಾಮೇಶ್ವರ ಲಿಂಗವು ಆ ಭಕ್ತನಂಗ.

ಭಾವಃ— ಗುರುಲಿಂಗ ಜಂಗಮದ ಅರ್ಪಣವು. ಅವರ ಭಾವದಲ್ಲಿದೆಯೇ ಹೊರ್ತು ಪ್ರತ್ಯಕ್ಷ ಕೊಟ್ಟುದಲ್ಲ.

(೧೬) ಓಗರ ಮೇಲೋಗರವನುಂಬನ್ನಕ್ಕ ಗಡಿತಡಿಯ ಕಾಯಿಸಿ ಮತ್ತೆ ಒಡೆಯರ ಕರೆ ಎಂದು, ಒಡೆಯರು ಬಂದಲ್ಲಿ ಒಡೆಯರ ಪಾದವೆಂದು ಅಡಿಯ ತೊಳೆದ ನೀರ ತಾ ಕುಡಿವುತ್ತ ಲಿಂಗಮಜ್ಜನವೆಂದೆರೆವುತ್ತ ಅವರು ಉಂಡು ಮಿಕ್ಕ ಓಗರವ ಪ್ರಸಾದವೆಂದು ಲಿಂಗಕ್ಕೆ ತೋರುತ್ತ ತಾವು ಭುಂಜಿಸುತ್ತ ಕೊಟ್ಟು ತಾ ಕೊಂಬುತ್ತ ಇಂತಿವರು

ತಮ್ಮ ವ್ರತವ ತಾವರಿಯದೆ ತಮ್ಮ ಭಾವವ ತಾವರಿಯದೆ ಸುರೆಯ ಕುಡಿದವರಂತೆ ಮರುಳು ಗ್ರಹ ಹೊಡೆದವರಂತೆ ಇಂತೀ ತ್ರಿವಿಧಗೂಡಿಹ ಭಕ್ತ ಅಸಗ ನೀರಡಿಸಿ ಸತ್ತಂತಾಯಿತ್ತು. ಆ ಗುಣ ಕಟ್ಟಣೆ ಏಲೇಶ್ವರ ಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು.

ಭಾವಃ— ಪಾದೋದಕ ಪ್ರಸಾದವು ಕೇವಲ ಬಾಹ್ಯ ಆಚರಣೆಯಲ್ಲಿರುವದಿಲ್ಲ. ಅದರಿಂದ ಅಂತರಂಗದ ಉನ್ನತಿಯಾಗಬೇಕು. ಅದರ ಈ ನಿಜಸ್ಥಿತಿಯನ್ನು ಅರಿತು ಆಚರಿಸಬೇಕು. ಇಲ್ಲದಿದ್ದರೆ ಅದು ಪರಮಾತ್ಮನನ್ನ ಮುಟ್ಟಲಾರದು.

(೧೭) ಗುರುಪ್ರಸಾದಿ ಆ ಗುರು ಪ್ರಸಾದವ ಲಿಂಗಕ್ಕರ್ಪಿಸಲಾಗದು. ಲಿಂಗಪ್ರಸಾದಿ ಆ ಪ್ರಸಾದವ ಜಂಗಮ ಪ್ರಸಾದದಲ್ಲಿ ಕೂಡಲಾಗದು. ಇಂತೀ ಪ್ರಸಾದವ ತಾ ಸ್ವೀಕರಿಸುವಲ್ಲಿ ತನ್ನ ದೃಷ್ಟವ ಇಷ್ಟಕ್ಕೆ ಅರ್ಪಿಸದೆ ಮುಟ್ಟಲಾಗದು. ಇಂತೀ ಭಾವ ಅಮೃತದಲ್ಲಿ ವಿಷ ಬೆರೆದಂತೆ ಅಮೃತವ ಚಲ್ಲ ಬಾರದು. ವಿಷವ ಮುಟ್ಟಬಾರದು. ಗೋವು ಮಾಣಿಕವ ನುಂಗಿದಂತೆ ಗೋವು ಕೊಲಬಾರದು. ಮಾಣಿಕವ ಬಿಡಬಾರದು. ಗೋವು ಸಾಯದೆ ಮಾಣಿಕ ಕೆಡದೆ ಬಾಹ ಹಾದಿಯ ಬಲ್ಲರೆ ಆತ ತ್ರಿವಿಧ ಪ್ರಸಾದಿ ಎಂಬ ಗುಣ ಏಲೇಶ್ವರಲಿಂಗಕ್ಕೂ ಅಸಾಧ್ಯ ನೋಡಾ.

ಭಾವಃ— ಇಲ್ಲಿ ಪ್ರಸಾದವನ್ನು ಗ್ರಹಿಸು ಮಾಡುವ ರೀತಿಯನ್ನು ಹೇಳುತ್ತಾನೆ. ಯಾವ ಪ್ರಸಾದವು ಯಾತಕ್ಕೆ ಸಂಬಂಧಿಸಿರುತ್ತದೋ ಅದಕ್ಕೆಯೇ ಅರ್ಪಿಸಬೇಕು. ಈ ಸಂಬಂಧವು ಇಷ್ಟಲಿಂಗದ ಮುಖಾಂತರವೇ ಜರಗುವದು. ಪ್ರಸಾದದ ಮೂಲಕ ಕೆಡಕಾದದ್ದು ಆವುದೋ ಅದು ಅದನ್ನು ಗ್ರಹಿಸುವವನನ್ನು ಮುಟ್ಟುವದಿಲ್ಲ. ಆದರೆ ಉತ್ತಮವಾದುದು ಆವುದೋ ಅದು ಮಾತ್ರ ಪರಿಣಾಮಕಾರಿಯಾಗುತ್ತದೆ. ಈ ರೀತಿಯನ್ನು ಅರಿತಲ್ಲಿ ಅವನು ಪ್ರಸಾದಿಯು. ಇದು ಪರಮಾತ್ಮನಿಗೂ ಕೂಡ ಅಸಾಧ್ಯವೆಂದು ವಚನಕಾರನು ಹೇಳುತ್ತಾನೆ.

(೧೮) ತನುಶೀಲ ಗುರುಭಕ್ತಿ, ಮನಶೀಲ ಲಿಂಗಭಕ್ತಿ, ಧನಶೀಲ ಜಂಗಮಭಕ್ತಿ ತ್ರಿವಿಧಶೀಲ ಮಹಾಭಕ್ತಿ, ಅಂಗಮನ ಭಾವ ಕರಣಂಗಳಲ್ಲಿ ವ್ರತದಂಗವೇ ಪ್ರಾಣವೆಂದಿಪ್ಪುದು ಫಲಭಕ್ತಿ. ಇಂತೀ ಭೇದ ಭಾವಂಗಳಲ್ಲಿ ಅಣುಮಾತ್ರ ತಪ್ಪದೆ ಕ್ಷಣಮಾತ್ರ ಸೈರಿಸೆನೆಂಬುದು ನಿಶ್ಚಯಭಕ್ತಿ.

ಇಂತೀ ವರ್ತಕ ಶುದ್ಧ ಸಪ್ಪಕ್ತಂಗೆ ಮರ್ತ್ಯ ಕೈಲಾಸವೆಂಬುದು ಗೊತ್ತಿಲ್ಲ. ಆತ ವ್ರತಲಕ್ಷಣಮೂರ್ತಿ ಏಲೇಶ್ವರಲಿಂಗವು ತಾನೆ.

ಭಾವಃ— ಗುರು ಲಿಂಗ ಜಂಗಮ ಭೇದವನ್ನು ಬೇರೊಂದು ವಿಧವಾಗಿ ಇಲ್ಲಿ ವಚನಕಾರನು ಹೇಳಿದ್ದಾನೆ. ತನು, ಮನ, ಧನದ ಅರ್ಪಣವೇ ಗುರುಲಿಂಗ ಜಂಗಮವೆನಿಸಿಕೊಳ್ಳುತ್ತದೆ.

ಪ್ರಾಣಲಿಂಗಿ ಸ್ಥಲ.

(೧೯) ಜಲ ನೆಲ ಶಿಲೆ ತಾ ಮಾಡುವ ಹೊಲ ಮುಂತಾಗಿ ಸರ್ವವೆಲ್ಲವು ಲಿಂಗಾಯತ ಸಂಬಂಧವಾಗಿ, ಭವಿಸಂಗೆ, ಭವಿ ನಿರೀಕ್ಷಣೆ, ಭವಿ ಉಪೇಕ್ಷೆ. ಭವಿದ್ರವ್ಯಂಗಳನೊಲ್ಲದೆ ಶಿವನಂತಲ್ಲಿ, ಶಿವನ ಪೂಜೆಯ ಮಾಡುವಲ್ಲಿ, ಶಿವಮೂರ್ತಿ ಧ್ಯಾನದಿಂದ ಶಿಷ್ಟಲಿಂಗಾರ್ಚನೆಯ ಮಾಡುವಲ್ಲಿ, ಶಿವಪ್ರಸಾದವ ತಂದು ಒಡೆಯನಗಿತ್ತು, ಆ ಪ್ರಸಾದವ ಏಲೇಶ್ವರ ಲಿಂಗಕ್ಕೆ ಕೊಟ್ಟ ಆ ವ್ರತಭಾವಿಗೆ ನಮೋ ನಮೋ ಎನುತಿರ್ದೆ.

ಭಾವಃ— ಇಲ್ಲಿ ಲಿಂಗಾಯತ ಶಬ್ದವನ್ನು ವಚನಕಾರನು ಉಪಯೋಗಿಸಿದ್ದಾನೆ. ಆಯತ, ಸ್ವಾಯತ, ಸನ್ನಿಹಿತ ಎಂಬ ಶಬ್ದಗಳ ಮೂಲಕ ಲಿಂಗದ ಸಂಬಂಧವನ್ನು ವಚನಕಾರರು ಹೇಳುವದುಂಟು. ಇವು ಲಿಂಗಾಯತ, ಲಿಂಗಸ್ವಾಯತ, ಲಿಂಗಸನ್ನಿಹಿತ ಈ ಶಬ್ದಗಳೇ ಇರುತ್ತವೆ. ಶಿವಮೂರ್ತಿ ಧ್ಯಾನದ ವಿಧವನ್ನು ವಚನಕಾರನು ಹೇಳಿದ್ದಾನೆ.

ಶರಣಸ್ಥಲ.

(೨೦) ಉಂಡವರ ನೋಡಿ ತಮ್ಮ ಬಂಧುಬಳಗವ ನೋಡಿ, ಅವರು ಜಂಗಮವೆಂದು ತನ್ನ ಕಟ್ಟಣೆಯವರೆಂದು ಮಾಡುವ ಅಂದಣಿಗರು ಜಗಭಂಡರು ವ್ರತದಂಗದ ಸಂಗವಲ್ಲ ಏಲೇಶ್ವರಲಿಂಗಕ್ಕೆ ದೂರ.

ಭಾವಃ— ಜಂಗಮರು ತಮ್ಮ ಸಂಬಂಧಿಕರೆಂದು ಭಾವಿಸಿ ಅವರನ್ನು ಮನ್ನಿಸಕೂಡದು. ಅವರ ನಡೆನುಡಿಯನ್ನು ಪರೀಕ್ಷಿಸಿ ಜಂಗಮವೆಂದು ಭಾವಿಸಬೇಕು.

(೨೧) ಕೂಪಭಾಜನ ಚಿಲುಮೆಪರ್ಣ ಫಲ ಸರ್ವಮಯ ಸಮಯ ಸುಯಿಧಾನ ಸಂಗ್ರಹಂಗಳಲ್ಲಿ ಲಿಂಗಮುಖವಾಗಿ, ತಂದ ಮತ್ತೆ ವ್ಯಸ್ತ ಯಲ್ಲಿ ಲಿಂಗದಾಹ್ಯ ಕಂಡನೆಂದು ಅವನೆ ಲಿಂಗವ ಕಟ್ಟಬಹುದೇ? ಅಲ್ಲ. ಆ ಲಿಂಗದ್ರವ್ಯವ ಸೂಸಬಹುದೇ? ಲಿಂಗಾಂಗಿಗಳು ನೀವೇ ಉಭಯದ ಸಂದ ತಿಳಿದುನೋಡಿ ಕಟ್ಟಿದ ಘಟ ತಪ್ಪದಂತೆ, ಲಿಂಗದ್ರವ್ಯವ ಸೂಸದಂತೆ, ಸಂದೇಹದ ಸಂಬಂಧದಲ್ಲಿ ಸಾಯದಂತೆ, ಲಿಂಗದ್ರವ್ಯವ ಕೆಡದಂತೆ ಸುಸಂಗವ ತಿಳಿದು ನೋಡಿ ಏಲೇಶ್ವರಲಿಂಗದಲ್ಲಿ ವ್ರತವ ನಂಗೀಕರಿಸಬಲ್ಲಡೆ.

ಭಾವಃ— ವಚನವು ಶುದ್ಧವಿಲ್ಲ. ಅರ್ಥವು ಅಸ್ಪಷ್ಟವಾಗಿದೆ.

(೨೨) ತಂದೆಯ ಮಗ ಕರೆದು ಮಗನ ತಂದೆ ಕರೆದು ಭಾವನ ವೈದುನ ಕರೆದು ವೈದುನನ ಭಾವ ಕರೆದು ತಮ್ಮ ಬಂಧುಗಳ ಜಂಗಮವೆಂದು ಕೂಡಿಕೊಂಡುಂಬ ಜಗಭಂಡರ ನೇಮ ಸುಸಂಗವಲ್ಲ ಏಲೇಶ್ವರ ಲಿಂಗಕ್ಕೆ.

ಭಾವಃ— ತಂದೆ, ಮಗ, ಭಾವ, ವೈದುನ, ಬಂಧುಗಳು ಜಂಗಮವೆಂದು ಭಾವಿಸಿ ಅದಕ್ಕೋಸ್ಕರ ಮಾತ್ರ ಅವರನ್ನು ಮನ್ನಿಸಬಾರದು. ಅವರ ಶೀಲ ಆಚಾರಗಳನ್ನು ನೋಡಬೇಕೆಂದು ವಚನಕಾರನ ಅಭಿಪ್ರಾಯ.

ಐಕ್ಯಸ್ಥಲ.

(೨೩) ಕ್ರಿ ನಿಃಕ್ರಿ ಎಂಬು ಭಯವಾವುದು? ತನ್ನನರಿದಲ್ಲಿಯೇ ಕ್ರಿ, ತನ್ನ ಮರೆದಲ್ಲಿ ನಿಃಕ್ರಿ. ತಾನೆಂಬುದುಳ್ಳನ್ನಕ್ಕ ಸರ್ವಕ್ರಿ ಸಂಭ್ರಮವೇಕು. ತಾನೆಂಬುದು ತೊರದಲ್ಲಿ, ಕ್ರಿ ಎಂಬುದೇನೂ ಇಲ್ಲ ಇಂತೀ ಭಾವವ ತಿಳಿದು ನಿಂದು ನೀವೆ ನೋಡಿಕೊಳ್ಳಿ. ಇದಕ್ಕೆ ಸಂದೇಹವಿಲ್ಲ. ಏಲೇಶ್ವರಲಿಂಗವೇ ಸಾಕ್ಷಿ.

ಭಾವಃ— ಮನುಷ್ಯನು ತನ್ನನ್ನ ತಾನೇ ತಿಳಿದು ಆಚರಿಸತಕ್ಕದ್ದು. ಮೊದಲು ಕ್ರಿಯಂಟಾಗುತ್ತದೆ. ಆಮೇಲೆ ನಿಃಕ್ರಿಯು ಒದಗುತ್ತದೆ. ಅಂತಲ್ಲಿಯೇ ಕ್ರಿ, ಮರೆತಲ್ಲಿಯೇ ನಿಃಕ್ರಿ. ತಾನು ಎಂಬುದು ಇರುವಹರೆಗೆ ಕ್ರಿಯೆಯು. ಅದು ಮರೆತಿದ್ದರೆ ಕ್ರಿಯೆಯು ಉಳಿಯುವದಿಲ್ಲ.

ಲಿಂಗದ ಮರ್ಮವನ್ನು ಹೆಚ್ಚಿಗೆ ತಿಳಿದು ಆಚರಿಸುವವನು ಲಿಂಗಸ್ಥಯುತ, ಇದಕ್ಕೂ ಹೆಚ್ಚಿಗೆ ತಿಳಿದವನು ಲಿಂಗ ಸನ್ನಿಹಿತನು, ಎಂದು ಇವರು ಹೇಳಲ್ಪಡುತ್ತಾರೆ. ಇವುಗಳ ಮುಂದಿನ ತರಗತಿಗಳು ಕಳಾಗ್ರಾಹಕ, ಮನೋಮಂಗ್ನತೆ, ಘನಸಾಮರಸ್ಯ ಎಂದಿವೆ. ಇವಾದರೂ ಲಿಂಗದ ಮುಂದಿನ ವಿಕಾಸಾವಸ್ಥೆಯನ್ನು ಸೂಚಿಸುತ್ತವೆ. ಶರಣನು ತನ್ನ ಕಟ್ಟ ಕಡೆಯ ಪೂರ್ಣಸ್ಥಿತಿಯಲ್ಲಿ ಘನಸಾಮರಸ್ಯನೆಂದು ಹೇಳಲ್ಪಡುತ್ತಾನೆ. ಈ ಪ್ರಕಾರ ಶರಣನ ತರಗತಿಗಳಿರುತ್ತವೆ.

(೮೩) ಷಡ್ವಿಧ ಐಕ್ಯಃ— ಇವು ಆಚಾರ ತೃಪ್ತಿ, ಗೌರವ ತೃಪ್ತಿ, ಲಿಂಗತೃಪ್ತಿ, ಜರತೃಪ್ತಿ, ಪ್ರಸಾದತೃಪ್ತಿ, ನಿರ್ಭಾವತೃಪ್ತಿ ಎಂದು ಆರು ಇರುತ್ತವೆ. ತೃಪ್ತಿ ಎಂದರೆ ಆಯಾ ಸ್ಥಲಗಳಲ್ಲಿ ಉಂಟಾದ ಅನುಭವಗಳು ಕಾರಣ ಶರೀರದಲ್ಲಿ ಒಟ್ಟಾಗೂಡಿದ ಒಂದು ಸ್ಥಿತಿಯು. ಇದು ಅನುಭವವು. ಈ ಅನುಭವವು ಆಗಲು ಮನುಷ್ಯನಲ್ಲಿ ಒಂದು ವಿಧದ ಆನಂದ, ಅಥವಾ ಪ್ರಕಾಶವು ಉಂಟಾಗುತ್ತದೆ. ಇದು ಮನುಷ್ಯನಲ್ಲಿ ಆದ ವಿಕಾಸತೆಯು ಇರುತ್ತದೆ. ಕಡೆಯ ಈ ವಿಕಾಸವು ಮನುಷ್ಯನಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಆಗ ಅದು ಅವನ ರೀತಿ, ನಡತೆ, ಶೀಲ, ಅರಿವು, ಆಚರಣೆ, ತಿಳಿವಳಿಕೆ, ಮನಸ್ಸು ಇವುಗಳ ಮೇಲೆಲ್ಲ ಒಂದು ಬೆಳಕನ್ನು ಬೀರುತ್ತದೆ. ಇದು ಸ್ವಾನುಭವವು. ಈ ಅನುಭವದಿಂದ ಮನುಷ್ಯನ ಕಾರ್ಯಗಳು ಜಗತ್ತಿನಲ್ಲಿ ಸರಾಗವಾಗಿ, ಯಾವ ತಡೆಗಳಿಲ್ಲದೆ, ಸ್ವಾಭಾವಿಕವಾಗಿ, ಶಾಂತವಾಗಿ, ಹರಿಯುತ್ತ ಹೋಗುತ್ತವೆ. ಇದು ಕಾರಣ ಶರೀರದ ಪೂರ್ಣಾವಸ್ಥೆ ಎಂದು ಹೇಳಬಹುದು. ಇದಕ್ಕೆ ಷಟ್‌ಸ್ಥಲ ಶಾಸ್ತ್ರಜ್ಞರು, ಜ್ಞಾನಲಿಂಗ, ತೃಪ್ತಿಲಿಂಗ, ಭಾವಲಿಂಗ ಎಂದು ಕರೆಯುವದುಂಟು. ಈ ತೃಪ್ತಿಲಿಂಗವು ಆಯಾ ಆರು ಸ್ಥಲಗಳ ಸಂಬಂಧದ ಪರಿಣಾಮಕ ಸೂಕ್ಷ್ಮ ಶರೀರದಲ್ಲಿ ಪ್ರವಹಿಸಹತ್ತಲು ಅದು ಅನುಕ್ರಮವಾಗಿ ಆಚಾರ ತೃಪ್ತಿ, ಗೌರವ ತೃಪ್ತಿ, ಲಿಂಗತೃಪ್ತಿ, ಜರತೃಪ್ತಿ, ಪ್ರಸಾದತೃಪ್ತಿ ಮತ್ತು ಕಡೆಗೆ ನಿರ್ಭಾವ ತೃಪ್ತಿ ಎಂದು ಹೇಳಲ್ಪಡುತ್ತದೆ. ಈ ಸ್ಥಲಗಳು ಸೂಕ್ಷ್ಮ ಶರೀರದಲ್ಲಿ ಐಕ್ಯಸ್ಥಲದ ಆರು ತರಗತಿಗಳು ಇರುತ್ತವೆ.

(೮೪) ಮೂವತ್ತಾರು ಅಂಗಸ್ಥಲಗಳು [೩೬ ವಿಧ]ಃ— ಇವುಗಳ ವ್ಯಾಖ್ಯೆಗಳು ಹಿಂದೆ ನಂ॥ ೭೮ ರಿಂದ ೮೩ ರವರೆಗೆ ಹೇಳಲ್ಪಟ್ಟಿವೆ.

ಆದರೆ ಇವುಗಳನ್ನು ಅನ್ನುವ ಸೌಕರ್ಯಕ್ಕೋಸ್ಕರ ಭಕ್ತನೊಳಗಣ ಭಕ್ತ, ಭಕ್ತನೊಳಗಣ ಮಹೇಶ್ವರ, ಎಂದು ಆರಂಭವಾಗಿ ಭಕ್ತನೊಳಗಣ ಐಕ್ಯ ಈ ವರೆಗೆ ೬ ಪ್ರಕಾರವಾಗಿ ಹೇಳುವದುಂಟು. ಇವುಗಳಮುಂದೆ ಮಹೇಶನೊಳಗಣ ಮಹೇಶ, ಆ ಮೇಲೆ ಮಹೇಶನೊಳಗಣ ಭಕ್ತ, ಎಂದು ಮೊದಲಾಗಿ, ಮಹೇಶನೊಳಗಣ ಷಡ್ವಿಧಗಳಿವೆ. ಆ ಮೇಲೆ ಪ್ರಸಾದಿಯೊಳಗಣ ಪ್ರಸಾದಿ, ಆ ಮೇಲೆ ಪ್ರಸಾದಿಯೊಳಗಣ ಭಕ್ತ, ಈ ಪ್ರಕಾರ ಪ್ರಸಾದಿ ಸ್ಥಲದೊಳಗಣ ಷಡ್ವಿಧಗಳು, ಹೀಗೆಯೇ ಮುಂದಿನ ಸ್ಥಲಗಳಿಗಿನ ಷಡ್ವಿಧಗಳನ್ನು ಹೇಳುತ್ತ ಕಡೆಗೆ ಅರನೆಯದಾದ ಐಕ್ಯನೊಳಗಣ ಐಕ್ಯ, ಆ ಮೇಲೆ ಐಕ್ಯನೊಳಗಣ ಭಕ್ತ, ಹೀಗೆ ಇವತ್ತ ಷಡ್ವಿಧಗಳನ್ನ ಹೇಳುವರು. ಆ ಮೇಲೆ ಕಡೆಗೆ ಐಕ್ಯನೊಳಗಣ ಶರಣ ಈ ಸ್ಥಿತಿಗೆ ಬರುತ್ತಾನೆ. ಇದು ಸೂಕ್ಷ್ಮಶರೀರದ ಪೂರ್ಣತೆಯು. ಈ ಸ್ಥಿತಿಯ ಮುಂದೆ ಈತನು ಕಾರಣ ಶರೀರದಲ್ಲಿ ಹೋಗುತ್ತಾನೆ. ಈ ಕಾರಣ ಶರೀರದಲ್ಲಿ ಅವನಿಗೆ ೫೬ ಅನುಭವಗಳು ಉಂಟಾಗುತ್ತವೆ. ಈ ಪ್ರಕಾರ ೩೬ ಅಂಗಸ್ಥಳಗಳ ೨ನೇ ವಿಧಗಳಿರುತ್ತವೆ.

ಹಿಂದೆ ನಾವು ವಿವರಿಸಿದ ಮೂವತ್ತಾರು ಅಂಗಸ್ಥಲಗಳು (೧ನೇ ವಿಧ) — ನಂಬರು ೨೬, ಇವರಲ್ಲಿಯ ಅನೇಕ ವಿಶಿಷ್ಟ ಶಬ್ದಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳುವದು ದುಸ್ತರವು. ಆದ್ದರಿಂದ ಈ ೨ನೇ ವಿಧದೊಳಗಿನ ಶಬ್ದಗಳನ್ನು ಉಪಯೋಗಿಸುವ ವಾಡಿಕೆಯುಂಟು. ಆದರೆ ಈ ಎರಡೂ ವಿಧಗಳ ಅರ್ಥದಲ್ಲಿ ಭಿನ್ನತೆಯು ಇರುವದಿಲ್ಲ.

(೨ಬ) ಅಂಗಸ್ಥಲಗಳು ೩೬, ಲಿಂಗಸ್ಥಲಗಳು ೩೬, ಇವುಗಳ ಸಮ್ಮೇಳನ:— ಭಕ್ತ, ಮಹೇಶ್ವರ, ಪ್ರಸಾದಿ ಮೊದಲಾದ ೬ ಸ್ಥಲಗಳಿಗನುಸಾರವಾಗಿ ಷಟ್‌ಚಕ್ರಗಳಿರುತ್ತವಷ್ಟೇ. ಹಾಗೆಯೇ ಆ ಪ್ರತಿಯೊಂದು ಚಕ್ರದಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ ಮೊದಲಾದ ಲಿಂಗಗಳಿರುತ್ತವೆ. ಅವು ಪರಸ್ಪರ ಮಿಶ್ರ ಆಗಿ ೩೬ ಆಗುವವು. ಆಗ ಈ ಮೂವತ್ತಾರು ಸ್ಥಲಗಳಲ್ಲಿ ಶ್ರದ್ಧಾದಿ ಭಕ್ತಿಗಳೂ, ಆಚಾರಾದಿ ಲಿಂಗಗಳೂ ಕೂಡ ಮಿಶ್ರ ಆಗಿ ೩೬, ಆಗುತ್ತವೆ. ಉದಾ— ಭಕ್ತಿಯು, ಶ್ರದ್ಧಾಭಕ್ತಿಯೊಳಗಣ ನಿಷ್ಠೆ, ಶ್ರದ್ಧಾ ಭಕ್ತಿಯೊಳಗಣ ಅವಧಾನ ಹೀಗೆ ಒಂದೊಂದು ಭಕ್ತಿಯಲ್ಲಿ ಆರಾರಾಗಿ, ಒಟ್ಟು ೩೬ ಭಕ್ತಿಗಳಾಗುತ್ತವೆ. ಈ ೩೬ ಭಕ್ತಿಗಳು ಮಿಶ್ರಲಿಂಗಗಳೊಡನೆ ಅನುಕ್ರಮವಾಗಿ ಸಂಬಂಧಿಸುತ್ತವೆ. ಈ

ಮಿಶ್ರಲಿಂಗಗಳೂ ೩೬ ಇರುತ್ತವೆ. ಇವು ಕೂಡುವ ವಿಧವು ಹೇಗೆಂದರೆ, ಶ್ರದ್ಧಾ ಭಕ್ತಿಯೊಳಗಣ ಶ್ರದ್ಧಾಭಕ್ತಿಯು ಆಚಾರಲಿಂಗದೊಳಗಣ ಆಚಾರಲಿಂಗದೊಳಗೆ ಕೂಡುತ್ತದೆ. ಹೀಗೆ ಕೂಡುತ್ತ ಕಡೆಗೆ ಶ್ರದ್ಧಾ ಭಕ್ತಿಯೊಳಗಣ ಸಾವಧಾನ ಭಕ್ತಿಯು ಆಚಾರಲಿಂಗದೊಳಗಣ ಮಹಾಲಿಂಗದೊಳಗೆ ಕೂಡುತ್ತದೆ. ಈ ಪ್ರಕಾರ ೩೬ ಅಂಗಗಳು ೩೬ ಭಕ್ತಿಗಳ ಮೂಲಕ ೩೬ ಲಿಂಗಗಳಲ್ಲಿ ಬೆರೆಯುತ್ತವೆ. ಈ ೩೬ ಲಿಂಗಗಳ ಪ್ರಕಾಶವು ೩೬ ಭಕ್ತಿಗಳ ಪ್ರಕಾಶದಲ್ಲಿ ಬೆರೆಯಲು ಈ ಪ್ರಕಾಶವು ಸರ್ವಾಂಗವನ್ನು ವೇಧಿಸುತ್ತದೆ. ಹೀಗೆ ವೇಧಿಸಲು ಆದು ತನುತ್ರಯಗಳನ್ನೂ ಆರು ಇಂದ್ರಿಯಗಳನ್ನೂ ೩೬ ತತ್ವಗಳನ್ನೂ ವ್ಯಾಪಿಸುತ್ತದೆ. ಹೀಗೆ ವ್ಯಾಪಿಸಲು ಆ ಅಂಗಗಳೆಲ್ಲ ಐಕ್ಯಸ್ಥಿತಿಯನ್ನು ಹೊಂದುತ್ತವೆ. ಅಂದರೆ ಅಂಗಗಳೆಲ್ಲ ಪರಿಪೂರ್ಣತೆಯನ್ನು ಹೊಂದುತ್ತವೆ

(೨ಟ) ಷಡ್ಲಿಂಗ ಸಾಧನೆ (೧ನೇ ವಿಧ):— ಲಿಂಗ ಸಾಧನೆಯಲ್ಲಿ ೬ ತರಗತಿಗಳಿವೆ. ಈ ತರಗತಿಗಳು ಷಟ್‌ಸ್ಥಲಕ್ಕೆ ಅನುಸಾರವಾಗಿ ಇವೆ. ಅವು ಮೋಹೀ, ಭಕ್ತ, ವೀರ, ಪ್ರಾಣೀ, ಪ್ರಸಾದೀ, ತೃಪ್ತಿ ಎಂದಿರುತ್ತವೆ. ಲಿಂಗದಲ್ಲಿ ಮೂಡಲು ಮೋಹಿಸತಕ್ಕದ್ದು. ಇದು ಮೋಹೀ ಸ್ಥಿತಿಯು. ಆ ಮೇಲೆ ಅದರಲ್ಲಿ ವಿಶ್ವಾಸವುಳ್ಳವನಾಗತಕ್ಕದ್ದು. ಆಗ ಭಕ್ತನೆನಿಸಿಕೊಳ್ಳುವನು. ಈ ವಿಶ್ವಾಸದಿಂದ ದೃಢಭಾವವು ಅವನಲ್ಲಿ ನೆಲೆಗೊಳ್ಳುವದು. ಆಗ ಅವನು ವೀರನೆನಿಸಿಕೊಳ್ಳುವನು. ಈ ದೃಢಭಾವದಿಂದ ಲಿಂಗದ ಶಕ್ತಿಯೇ ಅವನ ಪ್ರಾಣವಾಗುವದು. ಆಗ ಅವನು ಪ್ರಾಣೀ ಎಂದೆನಿಸಿಕೊಳ್ಳುವನು. ಆಮೇಲೆ ಅವನು ಲಿಂಗದ ಪ್ರಸಾದದಲ್ಲಿಯೇ ತಲ್ಲೀನನನಾಗುವನು. ಆಗ ಅವನು ಪ್ರಸಾದಿ ಎನಿಸಿಕೊಳ್ಳುವನು. ಹೀಗೆ ತಲ್ಲೀನನನಾಗಿ ಅದರಲ್ಲಿಯೇ ಆನಂದಬಡುವನು. ಆಗ ಅವನು ತೃಪ್ತಿಸ್ಥಿತಿಗೆ ಬರುವನು. ಇದು ಕಡೆಯದು. ಹೀಗೆ ಆಚಾರಲಿಂಗದಲ್ಲಿ ಆಚಾರಲಿಂಗ ಮೋಹೀ, ಆಚಾರಲಿಂಗ ಭಕ್ತ ಎಂದು ಮೊದಲಾಗಿ ಕಡೆಗೆ ಆಚಾರಲಿಂಗತೃಪ್ತಿ ಹೀಗೆ ೬ ವಿಭೇದಗಳಾಗುವವು. ಮುಂದೆ ಹಾಗೆಯೇ ಗುರುಲಿಂಗ ಮೋಹೀ, ಗುರುಲಿಂಗ ಭಕ್ತ, ಗುರುಲಿಂಗವೀರ ಮೊದಲಾಗಿ ಗುರುಲಿಂಗದ ಆರು ವಿಭೇದಗಳು, ಕಡೆಗೆ ಮಹಾಲಿಂಗ ಮೋಹೀ, ಮಹಾಲಿಂಗ ಭಕ್ತ ಮೊದಲಾಗಿ ಆರು ಮಹಾಲಿಂಗದ ವಿಭೇದಗಳು, ಹೀಗೆ ಒಟ್ಟು ೩೬ ವಿಧಗಳಾಗುತ್ತವೆ. ಕಡೆಗೆ ಮಹಾಲಿಂಗ ತೃಪ್ತಿಯು ಉಂಟಾಗುತ್ತದೆ.

(೮೭) ಷಡ್ವಿಂಗ ಸಾಧನೆ (ತೀಸೇ ವಿಧಃ— ಕೆಲವು ವಚನಕಾರರು ಮೇಲಿನ ತಗಲತಿಗಳನ್ನೇ ಶಬ್ದಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ಹೇಳುವದುಂಟು. ಅವು ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ, ಪ್ರಾಣೀ ಎಂದಿರುತ್ತವೆ. ಅಂದರೆ ಮೊದಲು ಮೋಹಿಸತಕ್ಕದ್ದು. ಹೀಗೆ ಮೋಹಿಸಿದ ಬಳಿಕ ಅವನು ಆ ಲಿಂಗದಲ್ಲಿ ಭಕ್ತಿಭಾವಪೂರಿತನಾಗುವನು. ಆಗ ಅವನು ಭಕ್ತನಾಗುವನು. ಆಮೇಲೆ ಅವನಲ್ಲಿ ಲಿಂಗವ ಆಚರಣೆಯು ತಲೆದೋರುವದು. ಇದು ಪೂಜಕ ಸ್ಥಿತಿಯು. ಆಮೇಲೆ ವಿಶ್ವಾಸವು ಬಲಿತಲ್ಲಿ ಎಂಥ ಎಡರುಗಳು ಬಂದರೂ ಅವುಗಳನ್ನು ಎದುರಿಸಲು ಸಿದ್ಧನಾಗುವನು. ಇದು ವೀರ ಸ್ಥಿತಿಯು. ಆಗ ಅವನು ಲಿಂಗಪ ಅನುಭವವನ್ನು ಹೊಂದಿ ಅದರ ಸುಪರಿಣಾಮದಲ್ಲಿ ಆನಂದಿಸಹತ್ತುವನು. ಇದು ಪ್ರಸಾದಿಯ ಸ್ಥಿತಿಯು. ಆಮೇಲೆ ಅವನು ಆ ಲಿಂಗವೇ ಪ್ರಾಣವಾಗಿ ವ್ಯವಹರಿಸುತ್ತಾನೆ. ಆಗ ಅವನು ಲಿಂಗ ಪ್ರಾಣಿ ಎಂದೆನಿಸಿಕೊಳ್ಳುವನು. ಇದು ಕಡೆಯ ಸ್ಥಿತಿಯು. ಕೆಲವು ವಚನಸಕಾರರು ಹೀಗೆ ಷಡ್ವಿಂಗ ಸಾಧನೆಯ ವಿವರಗಳನ್ನು ಬೇರೆ ಶಬ್ದಗಳಿಂದ ಹೇಳುತ್ತಾರೆ. ಇವು ಕೂಡ ಮೊದಲಿನಂತೆಯೇ ೩೬ ವಿಧವಾಗಿರುವವು.

(೮೮) ೨೧೬ ಸ್ಥಲಗಳು:— ೩೬ ಸ್ಥಲಗಳ ತರುವಾಯ ಮತ್ತೊಂದು ಸ್ಥಿತಿಯು ತಲೆದೋರುತ್ತದೆ ಈ ೩೬ ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಪುನಃ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ೬ ವಿಭಾಗಗಳಾಗಿ ಒಟ್ಟು ೨೧೬ (೩೬×೬) ಸ್ಥಲಗಳಾಗುತ್ತವೆ. ಮನುಷ್ಯನ ಪ್ರಗತಿಯಲ್ಲಿ ಇವು ಕಡೆಯ ಸ್ಥಲಗಳು. ಇವು ಕಾರಣಶರೀರಕ್ಕೆ ಸಂಬಂಧಪಡುತ್ತವೆ. ಇದು ಕಾರಣಶರೀರದ ಪಕ್ವ ಸ್ಥಿತಿಯು. ಉದಾಃ— ಭಕ್ತಾದಿ ಸ್ಥಲಗಳು ಮೊದಲು ಸ್ಥೂಲಶರೀರಕ್ಕೆ ಸಂಬಂಧಿಸುತ್ತವೆ. ಆಗ ಒಟ್ಟು ಸ್ಥಲಗಳು ೩೬ಾಗುವವು. ಮುಂದೆ ಭಕ್ತನೊಳಗಣ ಭಕ್ತಸ್ಥಲವು ಉಂಟಾಗುತ್ತದೆ. ಭಕ್ತನೊಳಗಣ ಭಕ್ತಸ್ಥಲವು ಸೂಕ್ಷ್ಮಶರೀರಕ್ಕೆ ಸಂಬಂಧಿಸುತ್ತವೆ. ಇದೇ ರೀತಿ ಉಳಿದ ಸ್ಥಲಗಳೊಡನೆ ಭಕ್ತಸ್ಥಲಗಳು ೩೬ ಆಗುತ್ತವೆ. ಇದರಮುಂದೆ ಭಕ್ತನೊಳಗಣ ಭಕ್ತನೊಳಗಣ ಭಕ್ತಸ್ಥಲವು ಉಂಟಾಗುತ್ತದೆ. ಇದು ಕಾರಣಶರೀರಕ್ಕೆ ಸಂಬಂಧಿಸಿದುದು. ಆಗ ಇದೇರೀತಿ ಒಟ್ಟು ಸ್ಥಲಗಳು ೨೧೬ ಆಗುತ್ತವೆ. ಹೀಗೆ ಸ್ಥೂಲಶರೀರಕ್ಕೆ ೬ ಸ್ಥಲಗಳು, ಸೂಕ್ಷ್ಮಶರೀರಕ್ಕೆ ೩೬ ಸ್ಥಲಗಳು, ಮತ್ತು ಕಾರಣಶರೀರಕ್ಕೆ ೨೧೬ಸ್ಥಲಗಳು ಸಂಬಂಧಿಸುತ್ತವೆ.

ಈ ವಿಷಯವನ್ನು ವಿವೇಚಿಸಿದಲ್ಲಿ ತೋರುವದೇನೆಂದರೆ. ಭಕ್ತನೊಳಗಣ ಭಕ್ತಸ್ಥಲವು ಸೂಕ್ಷ್ಮಶರೀರಕ್ಕೆ ಸಂಬಂಧಪಡುತ್ತದೆ. ಹೀಗೆ ಆದು ಸಂಬಂಧಪಡಲು ಆದರ ಆಯವಿಧ ಪರಿಣಾಮಗಳು ಕಾರಣ ಶರೀರವನ್ನು ಪ್ರವೇಶಿಸುವಲ್ಲಿ ಅವು ಪುನಃ ಆರುಸ್ಥಲಗಳಿಗೆ ಸಂಬಂಧಪಡುವದರಿಂದ ಈ ಒಂದು ಭಕ್ತಸ್ಥಲಕ್ಕೆ ಕಾರಣ ಶರೀರದಲ್ಲಿ ೩೬ ಸ್ಥಲಗಳಾಗುತ್ತವೆ. ಇವರಿಂದ ಅಲ್ಲಿ ಭಕ್ತನ ಭಕ್ತನ ಭಕ್ತ ಭಕ್ತನ ಭಕ್ತನ ಮಹೇಶ, ಭಕ್ತನ ಭಕ್ತನ ಪ್ರಸಾದಿ, ಭಕ್ತನ ಭಕ್ತನ ಪ್ರಾಣಲಿಂಗಿ ಭಕ್ತನ ಭಕ್ತನ ಶರಣ, ಭಕ್ತನ ಭಕ್ತನ ಐಕ್ಯ ಎಂದು ಆಗುವವು. ಆಮೇಲೆ ಭಕ್ತನ ಮಹೇಶನ ಭಕ್ತ, ಭಕ್ತನ ಮಹೇಶನ ಮಹೇಶ, ಹೀಗೆ ೬ ವಿಧಗಳಾಗುವವು. ಹೀಗೆ ಎಲ್ಲ ಸ್ಥಲಗಳಲ್ಲಿ ಕೂಡಿ, ಭಕ್ತಸ್ಥಲದಲ್ಲಿ ಒಟ್ಟು ೩೬ ವಿಧಗಳಾಗುವವು. ಹೀಗೆ ಆದದ್ದೇ ಭಕ್ತಸ್ಥಲದ ಪೂರ್ಣತೆಯ ಸ್ಥಿತಿಯು. ಆಗ ಆದು ಕಾರಣಶರೀರವನ್ನು ಪ್ರವೇಶಿಸುವದು. ಅದರಂತೆಯೇ ಮಹೇಶ್ವರ ಸ್ಥಲದಲ್ಲಿ ೩೬, ಪ್ರಾಣಲಿಂಗಿ ಸ್ಥಲದಲ್ಲಿ ೩೬, ಶರಣಸ್ಥಲದಲ್ಲಿ ೩೬, ಐಕ್ಯಸ್ಥಲದಲ್ಲಿ ೩೬ ಆಗುತ್ತವೆ. ಇವೆಲ್ಲವು ಕೂಡಿ ೨೧೬ ಆಗುತ್ತವೆ. ಆಗ ಎಲ್ಲ ಸ್ಥಲಗಳ ಪೂರ್ಣತೆಯು ಉಂಟಾಗುತ್ತದೆ. ಇದರಿಂದ ಮನುಷ್ಯನ ಸರ್ವಾವಯವಗಳಲ್ಲಿ, ಶಕ್ತಿಗಳಲ್ಲಿ, ಇಂದ್ರಿಯಗಳಲ್ಲಿ, ಎಲ್ಲ ಸ್ಥಲಗಳ ವಿಕಾಸವು ಉಂಟಾಗುತ್ತದೆ. ಇದೇ ಅವನ ಪೂರ್ಣತೆಯು.

ಕ್ರಿಯೆಯು ಮೊದಲು ಸ್ಥೂಲ ಸೂಕ್ಷ್ಮ ಶರೀರಗಳಲ್ಲಿ ಬೇರೆ ಬೇರೆ ಸ್ವರೂಪದ್ವಾಗಿ ಗೋಚರವಾಗುತ್ತದೆ. ಆದರೆ ಕಡೆಗೆ ಈ ಕ್ರಿಯೆಯ ಪರಿಣಾಮಗಳು ಕಾರಣ ಶರೀರದಲ್ಲಿ ಒಡಮೂಡುತ್ತವೆ. ಆಗ ಕಾರಣ ಶರೀರವು ಈ ಅನುಭವಗಳನ್ನು ಕಾದಿಡುತ್ತದೆ. ಆದು ಅನುಭವಗಳನು ಸಂಗ್ರಹಿಸುವ ಒಂದು ಕೊಟ್ಟಡಿ ಎಂದು ತಿಳಿಯಬೇಕು. ಜಗತ್ತಿನಲ್ಲಿ ಮನುಷ್ಯನು ಮಾಡುವ ಪ್ರತಿಯೊಂದು ಕಾರ್ಯದ ಪರಿಣಾಮವು ಈ ಕೊಟ್ಟಡಿಯಲ್ಲಿ ಸಂಗ್ರಹಿಸಲ್ಪಡುತ್ತಿದೆ. ಮತ್ತು ಹೀಗೆ ಸಂಗ್ರಹವಾದ ಅನುಭವವನ್ನು ಮನುಷ್ಯನು ತನಗೆ ಅವಶ್ಯ ಬಿದ್ದಾಗ್ಗೆ ಹೊರಪಡಿಸಿಕೊಂಡು ಅದನ್ನು ಉಪಯೋಗಿಸುತ್ತಾನೆ. ಆದ್ದರಿಂದ ಈ ಸಂಗ್ರಹವು ಯಾವಾಗಲೂ ಒಳ್ಳೇ ವಿಷಯಗಳಿಂದ ತುಂಬಿರಬೇಕು. ಇಂಥ ಸಂಗ್ರಹ ಮಾಡುವ ರೀತಿಯನ್ನು ಷಟ್‌ಸ್ಥಲ ಶಾಸ್ತ್ರವು ಹೇಳುತ್ತಿದೆ. ಈ ರೀತಿಯಂತೆ ನಡೆದರೆ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳ ವ್ಯಾಪಾರಗಳು ಸರಾಗವಾಗಿ ನಡೆಯುತ್ತವೆ.

ಹೀಗೆ ಸರಾಗವಾಗಿ ನಡಿದರೆ ಆರು ಸ್ಥಲಗಳ ಮೂಲಕ ಅನು ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಮನುಷ್ಯನಲ್ಲಿ ಪ್ರಕಟವಾಗುತ್ತವೆ.

ಭಾವಲಿಂಗಕ್ಕೆ ಜ್ಞಾನಲಿಂಗ, ಸುಜ್ಞಾನಲಿಂಗ, ತೃಪ್ತಿಲಿಂಗ ಎಂಬ ಬೇರೆ ಹೆಸರುಗಳೂ ಉಂಟು.

ಕಾರಣ ಶರೀರದಲ್ಲಿ ಕ್ರಿಯಾದಿಗಳಿಲ್ಲ. ಈ ಕ್ರಿಯೆಗಳು ಸ್ಥೂಲ, ಸೂಕ್ಷ್ಮ ಶರೀರಗಳಲ್ಲಿ ಮಾತ್ರ ಗೋಚರವಾಗುತ್ತವೆ. ಆದರೆ ಇವುಗಳ ಪರಿಣಾಮಗಳು ಕಾರಣ ಶರೀರದಲ್ಲಿ ಮಾತ್ರ ಕಾದಿಡಲ್ಪಡುತ್ತವೆ. ಈ ಪರಿಣಾಮಗಳಿಗೆ ತೃಪ್ತಿಗಳೆಂತಲೂ ವಚನಕಾರರು ಹೇಳುತ್ತಾರೆ ಈ ತೃಪ್ತಿರೂಪಾದ ೨೧೬ ಸ್ಥಲಗಳ ವ್ಯಾಖ್ಯೆಗಳನ್ನು ಹೇಳಲಿಕ್ಕೆ ಬರಲಾರದು. ಆದ್ದರಿಂದ ವಚನಕಾರರು ಅವುಗಳ ನಿರ್ದೇಶವನ್ನು ಮಾತ್ರ ತಮ್ಮ ವಚನಗಳಲ್ಲಿ ಮಾತುತ್ತಾರೆ. ಯಾಕಂದರೆ ಈ ೨೧೬ ಸ್ಥಲಗಳು ಅನುಭವದಿಂದ ಮಾತ್ರ ತಿಳಿಯತಕ್ಕವುಗಳು.

ಮನುಷ್ಯನು ಜಗತ್ತಿನಲ್ಲಿ ಪ್ರತಿಕ್ಷಣ ನಾನಾವಿಧ ಅಸಂಖ್ಯ ಪದಾರ್ಥಗಳಿಗೆ ಸಂಬಂಧಪಡುತ್ತಾನೆ. ಅದರಂತೆ ಅವುಗಳ ಅವನ ಅನುಭವಗಳು ಅಸಂಖ್ಯಾತವಾಗಿರುತ್ತವೆ. ಅವೆಲ್ಲವೂ ಕಾರಣಶರೀರದಲ್ಲಿ ಒಡಮೂಡುತ್ತವೆ. ಆದರೆ ಈ ಕ್ರಿಯೆಗಳೆಲ್ಲವು ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಸ್ಥೂಲಶರೀರದಲ್ಲಿ ೬ ವರ್ಗಗಳಲ್ಲಿ ಮಾತ್ರ ಬೀಳುತ್ತವೆ. ಮುಂದೆ ಇವುಗಳು ಸೂಕ್ಷ್ಮ ಶರೀರದಲ್ಲಿ ೩೬ ವರ್ಗಗಳಲ್ಲಿ ಬೀಳುತ್ತವೆ. ಮತ್ತು ಕಾರಣ ಶರೀರದಲ್ಲಿ ೨೧೬ ವರ್ಗಗಳಲ್ಲಿ ಬೀಳುತ್ತವೆ.

ಹೀಗೆ ಮನುಷ್ಯಪ್ರಾಣಿಯ ಕ್ರಿಯೆಗಳು ಮುಖ್ಯವಾಗಿ ಆರು ವಿಧವಾಗಿದ್ದರೂ ವ್ಯಕ್ತಿಯು ಸ್ವಭಾವತಃ ಒಂದೇ ಸ್ಥಲದ ಗುಣಗಳನ್ನು ವಿಶೇಷವಾಗಿ ಹೊಂದಿರುವದು ಕಂಡುಬರುತ್ತದೆ. ಉದಾ:— ಒಬ್ಬನು ಭಕ್ತಸ್ಥಲದವನಿರಬಹುದು, ಇನ್ನೊಬ್ಬನು ಮಹೇಶ್ವರ ಸ್ಥಲದವನಿರಬಹುದು, ಮಗದೊಬ್ಬನು ಪ್ರಾಣಲಿಂಗಿಸ್ಥಲದವನಿರಬಹುದು. ಹೀಗಿರುವದು ಅವರವರ ಸ್ವಭಾವದ ಹುಟ್ಟುಗುಣ. ಆದರೂ ಅವರವರ ಸ್ವಭಾವದ ಪೂರ್ಣ ವಿಕಾಸವು ಉಳಿದ ಸ್ಥಲಗಳ ಪರಿಚಯದ ಮೇಲೆ ಅವಲಂಬಿಸುತ್ತದೆ. ಆದ್ದರಿಂದ ಭಕ್ತಸ್ಥಲದವನು ಶರಣಸ್ಥಲದ ಅರಿವನ್ನು ಹೊಂದಲೇಬೇಕು.

ಅವನು ಭಕ್ತಸ್ಥಲದಲ್ಲಿಯೇ ಯಾವಾಗಲೂ ಉಳಿಯುವಾರದು. ಹಾಗೆಯೇ ಶರಣಸ್ಥಲಕ್ಕೆ ಸ್ವಾಭಾವಿಕವಾಗಿ ಒಲವುಳ್ಳವನು ಬೇರೊಬ್ಬನಿರಬಹುದು. ಆದರೆ ಅವನು ಅದೇ ಒಂದು ಸ್ಥಲದಲ್ಲಿಯೇ ಇರಕೂಡದು. ಅದು ಪ್ರಗತಿಯಲ್ಲ. ಅವನು ಭಕ್ತಸ್ಥಲದಲ್ಲಿಯೂ ಕೂಡ ಇರಬೇಕು. ಈ ತರದ ಆಚರಣೆಯಿಂದಲೇ ಮನುಷ್ಯನ ಸ್ಥೂಲ, ಸೂಕ್ಷ್ಮ ಕಾರಣ ಶರೀರಗಳೆಲ್ಲವು ಪೂರ್ಣತೆಯನ್ನು ಹೊಂದುತ್ತವೆ. ಈ ಪೂರ್ಣತೆಯು ೧, ೨, ೩, ೬, ೩೬, ಈ ಸ್ಥಲಗಳ ಆಚರಣೆಯಿಂದ ಉಂಟಾಗುತ್ತಿದೆ. ಇವುಗಳಲ್ಲಿ ಮೊದಲಿನ ೩ ತಾತ್ವಿಕವಾದವು. ಉಳಿದವು ಕ್ರಿಯಾಯುಕ್ತವಾದವು. ಆದ್ದರಿಂದ ವಚನಕಾರರು ೬ ಮತ್ತು ೩೬ ಸ್ಥಲಗಳ ಮೂಲಕ ತಮ್ಮ ಶಾಸ್ತ್ರವನ್ನು ಬೋಧಿಸುತ್ತಾರೆ. ಇವುಗಳಿಗೆ ವಿಂದಿನದಾದ ೨೧೬ ಸ್ಥಲಗಳ ಜ್ಞಾನವನ್ನು ಮನುಷ್ಯನು ತನ್ನ ಅನುಭವದಿಂದಲೇ ಹೊಂದಬೇಕು. ಆದರಿಂದ ಅವರು ಅವುಗಳನ್ನು ವಿವರಿಸಲಾರರು. ಯಾಕಂದರೆ ೩೬ ಸ್ಥಲಗಳ ಪೂರ್ಣಜ್ಞಾನ ಮತ್ತು ಕ್ರಿಯೆಗಳಿಂದ ೨೧೬ ಸ್ಥಲಗಳ ಅನುಭವವು ಅವನಿಗೆ ಸ್ವಾನುಭವದಿಂದ ಕೂಡಲೇ ಉಂಟಾಗುತ್ತದೆ.

(೮೯) ಸರ್ವಾಂಗಲಿಂಗಿಸ್ಥಲಃ— ಇದು ಮನುಷ್ಯನ ಪರಿಪೂರ್ಣ ಸ್ಥಿತಿಯನ್ನು ತೋರಿಸುತ್ತದೆ. ಮನುಷ್ಯನು ಬೇರೆ ಬೇರೆ ಸ್ಥಲಗಳಲ್ಲಿದ್ದು ಕೊಂಡು ತನ್ನ ಶಕ್ತಿಯನ್ನು ವಿಕಾಸಪಡಿಸತಕ್ಕದ್ದಷ್ಟೇ. ಶಕ್ತಿಯ ವಿಕಾಸ ಮಾಡುವದೆಂದರೆ ಲಿಂಗದ ಗುಣಗಳನ್ನು ಒರಮಾಡಿಕೊಳ್ಳುವದೇ ಇರುತ್ತದೆ. ಈ ವಿಕಾಸವು ಅವನ ಮನ, ಇಂದ್ರಿಯ, ಪ್ರಾಣ, ಕರಣಗಳು, ಅರಿವು, ಚೈತನ್ಯ, ಇವುಗಳಲ್ಲೆಲ್ಲ ಉಂಟಾಗಬೇಕು. ಆಗ ಅವನಲ್ಲಿ ಲಿಂಗದ ಗುಣಗಳು ಉಂಟಾಗುತ್ತವೆ. ಇವು ಉಂಟಾದ ಕೂಡಲೆ ಅವನ ಕ್ರಿಯೆಗಳೆಲ್ಲ ಉಚ್ಚ ಸ್ಥಿತಿಯನ್ನು ಹೊಂದುತ್ತವೆ. ಆಗ ಅವನಿಗೆ ತಾನು, ಜಗತ್ತು, ಪರಮಾತ್ಮ, ಇವುಗಳಲ್ಲಿ ಅವ ತರದ ಭೇದಗಳು ಗೋಚರವಾಗುವದಿಲ್ಲ. ಜಗತ್ತೆಲ್ಲ ಲಿಂಗಮಯನಾಗಿ ತೋರಹತ್ತುತ್ತದೆ. ಈ ಸ್ಥಿತಿಯನ್ನು ಹೊಂದಿದಲ್ಲಿ ಅವನು ಜಗತ್ತಿನಲ್ಲಿ ಇದ್ದೂ ಇಲ್ಲದ ಹಾಗೆ ಇರುತ್ತಾನೆ. ಅವನು ನೀರಿನಲ್ಲಿರುವ ತಾವರೆಯಂತೆ ಅಂದರೆ ನೀರಿನಲ್ಲಿ ಇದ್ದರೂ ಕೂಡ ತಾವರೆಗೆ ಆ ನೀರು ಹೇಗೆ ಅಂಟಿಕೊಳ್ಳುವದಿಲ್ಲವೋ ಹಾಗೆ ಅವನು ಇರುವನು. ಈ ಸ್ಥಿತಿಯು ಅವನಿಗೆ ಪ್ರಾಪ್ತವಾಗಲು ಅವನು ಸರ್ವಾಂಗಲಿಂಗಿಸ್ಥಲವನ್ನು ಹೊಂದಿದವನೆಂದು ವಚನಕಾರರು ಹೇಳುವದುಂಟು.

(೯೦) ಷಟ್‌ಸ್ಥಲಶಾಸ್ತ್ರ:— ವಚನಕಾರರು ಮನುಷ್ಯನ ಗುಣಗಳು, ಇಂದ್ರಿಯಗಳು, ಕ್ರಿಯೆ ಮೊದಲಾದವುಗಳೆಲ್ಲೆಲ್ಲ ಆರು ವಿಭಾಗಗಳನ್ನ ಮಾಡುವದುಂಟು. ಈ ಪ್ರಕಾರ ಮಾಡಿ ಅನುಕ್ರಮವಾಗಿ ಅವುಗಳ ವಿಕಾಸವನ್ನು ಕುರಿತು ವಿವೇಚಿಸುತ್ತಾರೆ. ಹೀಗೆ ಮಾಡಿದ ವಿವೇಚನೆಗೆ ಷಟ್‌ಸ್ಥಲ ಶಾಸ್ತ್ರವೆಂಬ ಹೆಸರು. ಈ ಶಾಸ್ತ್ರದಲ್ಲಿ ಆರು ವಿಭಾಗಗಳಿವೆ. ಒಂದೊಂದು ವಿಭಾಗಕ್ಕೆ ಸ್ಥಲವೆಂಬ ಹೆಸರು. ಈ ಆರು ಸ್ಥಲಗಳಿಗೆಲ್ಲ ಆರು ವಿಶಿಷ್ಟ ಹೆಸರುಗಳಿವೆ. ಅವು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಇರುತ್ತವೆ. ಇವೇ ಷಟ್‌ಸ್ಥಲಗಳೆಂದೆನಿಸಿಕೊಳ್ಳುತ್ತವೆ.

(೯೧) ನಿರಾಮಯ ಷಟ್‌ಸ್ಥಲ:- ಮನುಷ್ಯನು ಆರಂಭದಲ್ಲಿ ಮೇಲೆ ನಂ. ೯೦ ಇದರಲ್ಲಿ ಹೇಳಿದ ಮೇರೆಗೆ ಆರು ಸ್ಥಲಗಳ ಜ್ಞಾನವನ್ನು ಮಾಡಿಕೊಂಡು ಐಕ್ಯಸ್ಥಲವನ್ನು ಹೊಂದಬೇಕು. ಈ ಸ್ಥಲವನ್ನು ಹೊಂದಿದ ಬಳಿಕ ಅವನು ಶೂನ್ಯಸ್ಥಲವನ್ನು ಹೊಂದುವನು. ಈ ಶೂನ್ಯ ಸ್ಥಲದಲ್ಲಿ ಕೆಲವು ತರಗತಿಗಳಿವೆ. ಅವು ಮುಖ್ಯವಾಗಿ ಮೂರು ಇವೆ ಅವುಗಳಲ್ಲಿ ಮೊದಲನೆಯದು ನಿರಾಮಯ ಎಂಬುದಿದೆ. ಇಲ್ಲಿ ಷಟ್‌ಸ್ಥಲಗಳು ನಿರಾಮಯ ಸ್ವರೂಪವನ್ನು ಹೊಂದುತ್ತವೆ. ಆದ್ದರಿಂದ ಅವುಗಳು ನಿರಾಮಯ ಷಟ್‌ಸ್ಥಲವೆಂದು ಹೇಳಲ್ಪಡುತ್ತವೆ.

(೯೨) ನಿರಂಜನ ಷಟ್‌ಸ್ಥಲ:— ನಿರಾಮಯವಾದ ಬಳಿಕ ನಿರಂಜನವೆಂಬುದಿದೆ. ಇಲ್ಲಿ ಷಟ್‌ಸ್ಥಲವು ನಿರಂಜನಷಟ್‌ಸ್ಥಲವೆಂದೆನಿಸಿಕೊಳ್ಳುತ್ತಿದೆ.

(೯೩) ನಿರಂಜನಾತೀತ ಷಟ್‌ಸ್ಥಲ:— ಯಾವ ಷಟ್‌ಸ್ಥಲವು ಮೇಲೆ ಹೇಳಿದ ನಿರಂಜನಕ್ಕತೀತವಾಗಿರುತ್ತದೆಯೋ ಅದೇ ನಿರಂಜನಾತೀತ ಷಟ್‌ಸ್ಥಲವೆಂದು ಹೇಳಲ್ಪಡುತ್ತಿದೆ.

ಇವರ ತರುವಾಯ ಬಯಲು ಅಥವಾ ನಿರವಯ ಎಂಬ ಸ್ಥಿತಿಯು ಪ್ರಾಪ್ತವಾಗುತ್ತದೆ. ನೀರು ನೀರು ಬೆರೆದಂತೆ ಮನುಷ್ಯನು ಪರಮಾತ್ಮನಲ್ಲಿ ಅಗ ಬೆರೆದು ಹೋಗುತ್ತಾನೆ. ಅದೇ ಮನುಷ್ಯನ ಅಂತಿಮ ಸ್ಥಿತಿಯು.

(೯೪) ನಿವೃತ್ತಿ— ಮನುಷ್ಯನಿಗೆ ಸಂಪೂರ್ಣ ವಿಕಾಸಾವಸ್ಥೆಯು ಪ್ರಾಪ್ತವಾದ ಬಳಿಕ ಅವನ ಗುಣಗಳು, ಶಕ್ತಿಗಳು, ಚೈತನ್ಯಗಳು ಇವೇ

ಹಸ್ತವ ಮುಗಿವುತ-ವಿಸ್ತರಿಸಿದ ಶರಣರ।
ಚಿತ್ತಜ ವೈರಿ ಬಸವೇಶ ನುಡಿಗೇಳಿ।
ಕರ್ತು ಹರಳಯ್ಯ ನುಡಿದನು ॥೭೧॥

ಪೃಥಡನವತಾರದ - ಒಡೆಯ ಬಸವಣ್ಣ ನಿಮ್ಮ।
ಅಡಿಗೊಂದು ಜೋಡು ಚರಣವ ತಂದೆನು।
ಪಡೆವೆನು ಫಲವ ಎನುತಲಿ ॥೭೨॥

ಸಾಕು ಶರಣರಿಗೇಕೆ-ಇಷ್ಟೊಂದು ನುಡಿಗಳು।
ನಾಲ್ಕು ಯುಗದಲ್ಲಿ ತಿರುಗಿದರೆ ಇಂದಿನ ದಿನಕೆ।
ಬೇಕೆಮಗೆ ನಿನ್ನ ಕರುಣವು ॥೭೩॥

ಮುಂದಣ ಕಥನಕೆ-ಇಂದಿನ ದರುಶನವು।
ವಂದನೆಯ ಕೊಳ್ಳಿ ಇದರಿಂದ ನಾನೊಮ್ಮೆ।
ನಂದಿಶಂಕರಗೆ ಶರಣೆಂಬೆ ॥೭೪॥

ಶರಣು ಶರಣಾರ್ಥಿ-ಶರಣು ನಿಮ್ಮಡಿಗಳಿಗೆ।
ಕರುಣ ನಮ್ಮಲ್ಲಿರಬೇಕು ಹರಳಯ್ಯ।
ನಿರುಪಮ ಚಿತ್ಪ್ರಿಯ ಬಸವಯ್ಯ ॥೭೫॥

ಚಂದದಿಂದಲಿ-ಚಮ್ಮಾವುಗೆಯ ತಕ್ಕೊಂಡು।
ಆನಂದದಿಂದಲಿ ನಡೆದಾಡೆ ನೀಲಮ್ಮ।
ಮುಂದೆ ಹರಳಯ್ಯನ ಕಳುಹಲು ॥೭೬॥

ಶರಣಬಸವೇಶನು-ಕರುಣೆ ನೀಲಮ್ಮನು।
ಹರುಷದಿ ಹರಳಯ್ಯನ ಕಳುಹುವ ಸಮಯದಿ।
ವಿರಚಿಸುವೆ ಮುಂದೆ ಕಥನವ ॥೭೭॥

ಒಂದನೆ ಪ್ರಥಮದ-ಸಂಧಿ ಇಲ್ಲಿಗೆ ಮುಗಿಯೆ।
ಚಂದ್ರಶೇಖರನ ಶರಣರಿಗೆ ಮತ್ತಿನ್ನು।
ಮುಂದೆ ಮೈಯ್ಯಿಕ್ಕಿ ನಮಿಸುವೆನು ॥೭೮॥

---

೨ ನೆಯ ಸಂಧಿ.

ಮುಂದಣ ಕಥೆಯನಾ-ನಂದದಿ ಕೇಳ್ವುದು ।
ಇಂದು ಶರಣರ ಕಥನವ ಮದುವೆಯಾ ।
ನಂದದಿ ಕೇಳೀ ಶರಣರು ॥೧॥
ಪಟ್ಟಾವಳಿ ಸೀರೆಯಲ್ಲಿ-ಕಟ್ಟಿ ಚಮ್ಮಾವುಗೆಯ ।
ಕೊಟ್ಟು ಕಳುಹುವ ಸಮಯದಿ ಮಧುವರಸ ।
ನೆಟ್ಟನೆ ತಾನು ನಡೆತಂದ ॥೨॥
ಹನ್ನೆರಡು ಸಾವಿರ-ಜೆನ್ನಿಕರಣಿಕಂಗೆ ।
ಮಾನ್ಯ ಗಜಸಿಂಹ ಮಧುವರಸ ಊಟಕೆ ॥
ತನ್ನರಮನೆಗೆ ಬರುತಿರ್ದ ॥೩॥
ಬರುತ ಕಂಡನು ಶಿವ-ಶರಣ ಹೆರಳಯ್ಯನ ।
ಇರವ ದಿಟ್ಟಿಸಿ ನೋಡುತಲಿ ತಾ ತನ್ನ ॥
ಚರರ ಕೆಯ್ಯಿಂದ ನಿಲಿಸಿದ ॥೪॥
ಎಲ್ಲಿಗೆ ಹೋಗಿದ್ದೆ-ಹಳ್ಳಯ್ಯನೀನುಸುರು ।
ಬಲ್ಲಿದ ಧೊರೆತನದಿ ಕೇಳಲು ಬಸವಣ್ಣ ।
ನಲ್ಲಿಗೆ ಹೋಗಿಯೆ ಬಂದೆನು ॥೫॥
ಬಸವನಲ್ಲಿಗೆ ಹೋಗಿ-ಬರುವ ಕಾರಣವೇನು ।
ಕೃಷಿಯವ (?) ಹೇಳು ಎನುತಲಿ ॥
ಬೆಸಗೊಂಡ ನಿಂತೆಂದು ನುಡಿದನು ॥೬॥
ನಮ್ಮ ಕಾಯಕವನು-ಹಮ್ಮೈಸಿ ಕೊಂಡೊಯ್ದೆ ।
ಧರ್ಮಸ್ವರೂಪ ಬಸವಣ್ಣ ಮೆಟ್ಟಿದೆ ॥
ಚಮ್ಮಾವುಗೆಯ ಕಳುಹಿದನೆನೆ ॥೭॥
ತಂದುದ ಕಳುಹುವ-ಇಂದಿನ ಮತವಲ್ಲ ।
ಎಂದ ಆ ಹಾರುವ ಮಧುವರಸ ತಾನಾಗ ॥
ನಿಂದು ಮೆಟ್ಟುವೆನೆನುತಲಿ ॥೮॥
ನಿನಗೆ ಮೆಟ್ಟಿಸಲೆನ್ನ-ಮನಕೆ ನಿರ್ಮಳವಿಲ್ಲ ।
ಘನ ಮಹಾ ಶರಣ ಬಸವಣ್ಣಗೆ ತಂದುದ ॥
ಅನುಕೂಲವಲ್ಲ ಭವಿ ನೀನು ॥೯॥

ಆರಾದೊಡೇನು ಕಾರಣವುಳ್ಳ ಕಾಯಕ ।
ಮಾರುಕೊಂಡವರು ಚರಣವ ಮೆಟ್ಟಲು ॥
ಬಾರದೆ ಹೇಳು ಹರಳಯ್ಯ ॥೧೦॥
ಕರುಣ ಸಾಗರ ಶಿವ-ಶರಣ ಬಸವಗೆ ತಂದ ।
ಚರಣಕ್ಕೆ ಬದ್ಧಭವಿ ನೀನು ಮೆಟ್ಟಿದರೆ ॥
ಹರಣ ಉಳಿಯದು ಮಧುವಯ್ಯ ॥೧೧॥
ಎಂದ ಮಾತಿಗೆ ಕೋಪ-ದಿಂದಲಿ ಮಧುವರಸ ।
ಬಂದುದು ಬರಲಿ ಎನುತಲೆ ಕೋಪದಿ ॥
ತಂದವನ ಕೈಸೆಳೆ ಕೊಂಡ ॥೧೨॥
ಶಿವನೆ ಬಲ್ಲನು ಬದ್ಧ-ಭವಿಗೆ ನಾ ಮನ ಒಪ್ಪೆ ।
ಇವ ನಾನು ಕೊಟ್ಟವನಲ್ಲ ಹರಳಯ್ಯ ॥
ಅವಧಾನಿ ಮನೆಗೆ ನಡೆದನು ॥೧೩॥
ತರಳ ಮಧುವರಸನು-ದುರುಳತನದಿ ಮೆಟ್ಟ ।
ಜೆರಳು ಸರ್ವಾಂಗವಳಿಯಲು ಆದ ಕೇಳಿ ।
ಹರಹರಾ ಎಂದ ಬಸವಣ್ಣ ॥೧೪॥
ಕರುಣಿ ಬಸವೇಶನ-ತರುಣಿ ಆಡಿದಳೊಂದು ॥
ಹರಣದ ಹದನನರಿಯರು ಶರಣರು ॥
ತಂದ ಚರಣದ ಫಲವನದನುಣ್ಣೆ ॥೧೫॥
ಇತ್ತ ಚಿತೆಯುರಿಯಿಂದೆ-ಮತ್ತೆ ಚರ್ಮವ ಸುಲಿಯೆ ।
ಹೆತ್ತ ತಾಯಿ ಕಡು ಮರುಗಿದಳು ಮಗನಿಗೆ ।
ಎತ್ತಣ ವಿಧಿಯೋ ಎನುತಲಿ ॥೧೬॥
ಅಂದಾರು ತಿಂಗಳು-ಅಂದವಳಿದಿರಲು ।
ಮುಂದೆ ಪವಾಡ ಮೆರೆಯಲು ಆ ದಿನಕೆ ।
ತಂದಿಟ್ಟರೊಂದು ಕಥನವಾ ॥೧೭॥
ಮಜ್ಜನ ಮಾಡೆಂದು-ಅಜ್ಜಿ ಹೇಳಿದಳೊಂದು ॥
ಹೆಜ್ಜೆಯನಿಟ್ಟು ನಡೆದನು ಮಧುವರಸ ।
ಮಜ್ಜನ ಮಾಡಲನುವಾದ ॥೧೮॥

ತನ್ನ ರಾಣಿಯರೀರ್ವರು-ಎಣ್ಣೆಯ ಸೂಡಲು ।
ಪಣ್ಣಾಗಿ ನಖವ ಅಲುಗುತಲಿ ಮಧುಪರಸ ।
ಎಣ್ಣೆ ಮಜ್ಜನಕೆ ಅನುವಾದ ॥೧೯॥

ಕೊಪ್ಪರಿಗೆ ಅಗ್ಗಣಿ-ಯುಕ್ಕುತ ಕಾಯ್ದಿರೆ ।
ಮುತ್ತವಾನೀರು ಬೆರೆಯಲು ।
ಮನೆಯಲಿನೀರಿಲ್ಲದಿರಲು ಆಗ ॥೨೦॥

ಓಡುತಳಿವುತ-ಗೌಡಿ ಬೇಗನೆಬಂದು ।
ಸಿವುಡನು ಬೇಗದೆ ಕೊಡನ ತಕ್ಕೊಂಡು ।
ಗೌಡಿ ಬೇಗನೆ ನಡೆದಳು ॥೨೧॥

ಬಾಗಿಲು ಗಾವುಲು-ನಾಗಭೂಷಣ ಶಿವನು ।
ಆಗಿನದೊಂದು ಕಥನವ ಕತ್ತಲೆ ಮುಂಜು ।
ಆಗ ಬೇಗದಲಿ ಮುಸುಕಿತ್ತು ॥೨೨॥

ಬಂಗೊಡನೊಯ್ದರಿ-ತಂವರು ಕಿವಿಮೂಗ ।
ಉರದ ಸಂಗಯ್ಯನನೀಗ ಉದಕದ ।
ಹರಿವ ತೋರೆಂದು ನಮಿಸಿದಳು ॥೨೩॥

ಸಣ್ಣ ಮುಳೆಯುದರಲು-ಕಣ್ಣೆ ಕಾವಳಗೈದು ।
ಹೆಣ್ಣು ಬೇಗದಲಿ ನಡೆದಳು ಬಚ್ಚಲ ಉದಕ ।
ಎಣ್ಣೆಗಳಂತೆ ತಿಳಿದಿರೆ ॥೨೪॥

ಹೊತ್ತು ಹೋಯಿತ್ತೆಂದು-ತೊತ್ತು ಬೇಗನೆ ಬಂದು ।
ಮತ್ತೆ ಹರಳಯ್ಯನ ಮನೆಯಲ್ಲಿ ಬಾಗಿಲ ಬಳಿಯ ।
ಬಚ್ಚಲುದಕವನು ಮೊಗೆದಳು ॥೨೫॥

ಧಡಧಡಿಸಿ ನಡೆದಳು-ಕೊಡನ ಬೇಗನೆ ಹೊತ್ತು ।
ಒಡೆಯ ಕೋಪಿಸುವನೆನುತಲಿ ಕೊಪ್ಪರಿಗೆಯೊಳು ।
ಕೆಡಹಿದಳು ತಂದ ಉದಕವ ॥೨೬॥

ರಂಭೆಯರಿಬ್ಬರು-ತಂಬಿಗೆಯ ತಕ್ಕೊಂಡು ।
ತುಂಬಿ ಉದಕವನೆರೆಯಲು ಅವನ ಭವ ।
ಹಿಂಗಿತು ಪದವ ನಡಿಸುವೆ ॥೨೭॥

ಅತಿ ಚೋದ್ಯವಾಯಿತು-ಅತಿ ಚಿತ್ರವಾಯಿತು ।
ಮಿತ್ರರಿಬ್ಬರ ಮುಖ ನೋಡಿ ಎನ್ನಂಗ ।
ಸುಚಿತ್ತ ಪರಿಯೆಂತು ॥೨೮॥

ಕರೆಯಿರೊ ಗೌಡಿಯ-ಒರಸಿಕೊಂಡನು ಮುಖವ ।
ತಂಸಿದಿರೆಲ್ಲಿ ಉದಕವ ಎಂದೆನುತ ।
ಹರುಷದಿಂದವನು ಬೆಸಗೊಂಡ ॥೨೯॥

ಕಂಸಿದಿರು ಗೌಡಿಯ-ಧೊರೆಯ ಕಟ್ಟಿದಿರಿಗೆ ।
ಕರ ಪಾದ ನಡುಗೆ ನಯನದಿಯಗ್ಗಣಿ ಬಾಯ ।
ಬಿಂವುತ ಬಿಕ್ಕಿ ಬೆದರುತ ॥೩೦॥

ಎಲ್ಲಿ ತಂದುದಕವ-ಕೊಲ್ಲೆ ಬಡಿಯೆ ನಿನ್ನ ।
ಎಲ್ಲವ ಹೇಳು ಎಂದೆನುತ ಗೌಡಿಗೆ ।
ಗಲ್ಲವ ಪಿಡಿದು ಬೆಸಗೊಂಡ ॥೩೧॥

ಕಲ್ಯಾಣದೊಳಗುಳ್ಳ-ಎಲ್ಲ ಪುರಾತರಿಗೆ ।
ಒಲ್ಲಿದರವರು ಶರಣರು ಹರಳೈಗಳು ।
ಅಲ್ಲಿ ಉದಕವ ಮೊಗೆದೆನು ॥೩೨॥

ಅರ್ಚನೆವಂತರು-ನಿಚ್ಚ ಲಿಂಗೈಕ್ಯರು ।
ಸುಚಿತ್ತವುಳ್ಳ ಶರಣರು ಹರಳೈಗಳ ।
ಬಚ್ಚಲ ಉದಕವ ಮೊಗೆದೆನು ॥೩೩॥

ಪಟ್ಟಾವಳಿ ಸೀರೆಯ-ಕೊಟ್ಟನು ಗೌಡಿಗೆ ।
ಕೆಟ್ಟಂಗವೆನ್ನ ಉಳುಹಿದೆ ನಾ ನಿನ್ನ ।
ಹೊಟ್ಟಲಿ ಬಂದ ಶಿಸುವೆಂದ ॥೩೪॥

ನೇವುರ ಅಂದುಗೆ-ಪಾಯ್ವಟ್ಟ ಪದಕವು ।
ಗವುಳಿ ಸರದ ಹಿರಿಯೋಲೆಯಾಭರಣವು ।
ತಾಯಿ ನಿನಗೆಂದು ಕೊಡಿಸಿದ ॥೩೫॥

ಶರಣ ಪತಿಗಳಿಗೆಲ್ಲ-ಪರಿಣತನಾಯಕ ।
ಹರನವತಾರ ನಿಜಭಕ್ತ ಹರಳಯ್ಯಗೆ ।
ಶರಣು ಮಾಡುವೆನು ಚರಣಕೆ ॥೩೬॥

ತೊಡುವ ತೊಡಿಗೆಯನು-ಮುಡದಿಯಾಭರಣವ ।
ಮುಡುಪಗಟ್ಟಿಸಿ ಉಡುಗೊರೆಯ ಹರಳಯ್ಯಗೆ ।
ಕ.ಡಬೇಕು ನಾವು ಅವಂಗೆ ॥೩೭॥

ಕಟ್ಟಿದರೇನು-ಕೊಟ್ಟು ಕಳುಹಿದರೇನು ।
ಮುಟ್ಟುವರಲ್ಲ ಪರಸೊಮ್ಮನೆಂದಳು ತಾ ।
ಕೊಟ್ಟಳುತ್ತರವ ಮಹಾದೇವಿ ॥೩೮॥

ಒಡವೆ ವಸ್ತುಗಳನು-ಕಡಗ ಕಂಠ ಮಾಲೆ ।
ಎಡೆ ನೀಲ ಪಚ್ಚೆ ರತ್ನವ ಕೊಟ್ಟರೆ ।
ಹಿಡಿವರಲ್ಲ ಪರಸೊಮ್ಮ ॥೩೯॥

ಪೊಡವಿ ಮೊಲ್ಲುಡಿಸಲು-ಹೆಡೆಫಣಿಯುಡುಗಲು ।
ಪಡುವಲ ರವಿಯುದಯಿಸಲು ಭಕ್ತರು ।
ಹಿಡಿವರಲ್ಲ ಪರಸೊಮ್ಮ ॥೪೦॥

ಅಡಿಗಡಿಗೆ ವಂದಿಸುವೆ-ನಡೆವೆ ನಾನಲ್ಲಿಗೆ ।
ಕುಡುವೆನು ನನ್ನ ಮಗಳನು ಎಂದೆನುತ ।
ನುಡಿದನು ಮಧುವರಸ ಮುದದಿಂದ ॥೪೧॥

ಅಂಗದ ಮೇಲೆ ಶಿವ-ಲಿಂಗವಿಲ್ಲದವರ ।
ಅಂಗಣ ಹೊಗಲುಗುಡರಯ್ಯ ಎಂದೆನುತ ।
ಹಿಂಗದೆ ಮಧುವರಸಗೆ ನುಡಿದಳು ॥೪೨॥

ಅಂಗದ ಮೇಲೆ ಶಿವ-ಲಿಂಗವು ನಿನಗಿಲ್ಲ ।
ಗಂಗೆಯ ತಂದ ಪರಿ ಹೇಗೆ ಎನುತಲಿ ।
ಹಿಂಗದೆ ಮಧುವರಸ ಬೆಸಗೊಂಡ ॥೪೩॥

ಅಂಗದ ಭವವೆಲ್ಲ-ಹಿಂಗಿತು ನಿನ್ನಿಂದ ।
ಲಿಂಗವ ಕೊಡು ತನಗೆಂದು ಮಹಾದೇವಿಯ ॥
ಅಂಘ್ರಿಯ ಹಿಡಿದು ನಮಿಸಿದ ॥೪೪॥

ಕಟ್ಟಿದರಿ ಲಿಂಗವ-ನೆಟ್ಟನೆ ನಿಮ್ಮವರು ।
ಕೆಟ್ಟನು ತಮ್ಮ ಕುಲಕೆಂದು ವಿಪ್ರರು ।
ಮುಟ್ಟರು ನಿನ್ನ ಮಧುವರಸ ॥೪೫॥

ನುಡುವೆ ಹಾರುವ ಕುಲವ-ಕೆಡುವೆ ನಾನೀ ಕ್ಷಣ ।
ಕೊಡು ನನಗಿಷ್ಟಲಿಂಗವನು ಮಹಾದೇವಿ ॥
ಅಡಿಗಳಿಗಾಗ ವಂದಿಸಿದ ॥೪೬॥

ಬಂಧು ಬಳಗವ ಬಿಟ್ಟು-ಇಂದು ಧರಿಸಿ ಲಿಂಗವ ।
ನಿಂದಿಸುವರು ಜನರೆಲ್ಲ ನಿಮ್ಮಯ ।
ತಂದೆ ತಾಯಿಗರುಹೆಂದು ॥೪೭॥

ನಡೆಪೋಗು ಅಲ್ಲಿಗೆ-ಜಡೆಯ ಜಂಗಮಲಿಂಗ ।
ಕೊಡುವರು ಲಿಂಗವನವರು ಎಂದೆನುತ ।
ನುಡಿದಳುತ್ತರವ ಮಹಾದೇವಿ ॥೪೮॥

ಅಂಗ ಶೋಭನ ಗವಿ-ಲಿಂಗ ಶೋಭನ ಗವಿ ।
ಜಂಗಮವಿರುವ ಮಠಕಾಗಿ ಮಹಾದೇವಿ ।
ಹಿಂಗದೆ ಮಧುವರಸನೊಡಗೊಂಡು ॥೪೯॥

ಮದಗಜಗಮನೆಯರು-ಮದಕೋಕಿಲ ಧ್ವನಿಯವರು ।
ಮದ ಜೀವರುಳ್ಳ ಸ್ತ್ರೀಯರು ನೆರೆದರು ।
ಒದಗಿ ಮಧುವರಸನೊಡಗೂಡಿ ॥೫೦॥

ಈಶ ಲಾವಣ್ಯ ವಿ-ಶೇಷದ ಶೃಂಗಾರ ।
ಈಶನ ಶರಣರಂವಂತೆ ನಡೆದರು ।
ಈ ಶಿವಭಕ್ತರೊಡಗೂಡಿ ॥೫೧॥

ಬಂದಳು ಮಹಾದೇವಿ-ನಿಂದು ಮಹತ್ತಿಗೆ ।
ವಂದನೆ ಮಾಡಿ ನುಡಿದಳು ಮಧುವರಸಗೆ ।
ಇಂದು ದೀಕ್ಷೆಯ ಕೊಡು ಸ್ವಾಮಿ ॥೫೨॥

ಎಂದ ಮಾತನು ಕೇಳಿ-ಇಂದುಧರನ ರೂಪು ।
ಸಂದ ಪ್ರಮಥರ ಬೆಸಗೊಂಡ ಮಹಾದೇವಿ ।
ಸಂದ ದೀಕ್ಷೆಯ ಪರಿಯೆಂತು ॥೫೩॥

ವಿಪ್ರ ಕುಲದಲಿವ-ತಪ್ಪದೆ ತಾ ಬಂದು ।
ತಪ್ಪು ರಕ್ಷೆಗಳ ಕತದಿಂದ ಇವನಂಗವು ।
ಪಳಿದು ಬಹಳ ಬಳಲಿದ ॥೫೪॥

ಸೆಪ್ಪನೆ ಕರಮುಗಿದು-ಸಾಷ್ಟಾಂಗವೆರಗಿದ ।
ಋಷ್ಟಾಂಗಧರನೆ ಕೃಪೆಯಾಗು ಇಂದೆನಗೆ ।
ಇಷ್ಟಲಿಂಗವ ಕೊಡು ಸ್ವಾಮಿ ॥೫೫॥

ಅಂದವಾಯಿತು ನೀ-ನಿಂದು ನುಡಿದ ನುಡಿ ।
ಚಂದ್ರಶೇಖರ ನಸುನಗುತ ಮತ್ತೆಂದ ॥
ತಂದಿರಿಸಿ ಪುಷ್ಪಫಲಗಳನು ॥೫೬॥

ನಿಂಬೆ ನೇರಿಲೆ ದಾ-ಳಿಂಬ ರುದ್ರಾಕ್ಷಿಯು ।
ತುಂಬಿದ ಮಾವು ನಾರಂಗಡಿಕೆಗೊನೆ ।
ಸಂಭ್ರಮದಿಂದೆ ಅನುವಾಡಿ ॥೫೭॥

ಹತ್ತು ಸಾವಿರ ಮಲ್ಲಿ-ತೆತ್ತಿಸಿ ವಿಸ್ತರದಿ ।
ಮತ್ತೆ ಮಲಕಿನ ಮಕರಗಳು ತೋರಣದಿ ।
ಕೆತ್ತಿ ಗುರುರಾಯ ಅನುವಾದ ॥೫೮॥

ಪಟ್ಟು ಪಟ್ಟಾವಳಿ-ಕಟ್ಟುವಣ್ಣದ ಸೀರೆ ।
ಕಟ್ಟಿದರಲ್ಲಿ ಎಸೆದವು ಕೈಲಾಸದ ।
ದೃಷ್ಟ ಸಿಂಹಾಸನದಂತೆ ॥೫೯॥

ಮುತ್ತಿನ ಗುಚ್ಛವು-ತೆತ್ತಿಸಿದ ಗದ್ದುಗೆಗೆ ।
ಮತ್ತೆ ನವರತ್ನ ಎಡೆಯೆಡೆಗೆ ಇಕ್ಕಿದ ।
ಮುತ್ತಿನ ಗದ್ದುಗೆಯನುವಾಗೆ ॥೬೦॥

ಇಕ್ಷು ಮಾದಲ ನಿಂಬೆ-ದ್ರಾಕ್ಷೆ ದಾಳಿಂಬವು ।
ಈಕ್ಷಿಸುವರಿಗೆ ಅನುವಾಗಿ ಮೇಲ್ಕಟ್ಟು ।
ಅಕ್ಷಮೂರನ ಕೃಪೆಯಿಂದ ॥೬೧॥

ಸಾಧಿಸಿ ಸುವರ್ಣಾದಿ-ವೇಧಿಸಿದ ಗದ್ದುಗೆಗೆ ।
ಮೂದೇವರೊಡೆಯ ಪ್ರಭುವೆಂಬ ಗುರುವೆಸೆದು ।
ಸಾಧುಸಜ್ಜನರ ಸಮಯದಲಿ ॥೬೨॥

ಪಾದಾರ್ಚನೆಯ ಮಾಡಿ-ಪಾದೋದಕವ ಕೊಂಡು ।
ಪಾದಪೂಜೆಗಳ ಅನುಮಾಡಿ ಶುದ್ಧ ಕ್ರ ।
ಸಾದವ ಲಿಂಗಕೆಡೆಮಾಡಿ ॥೬೩॥

R. N. B. 2554

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಜುಲೈ-ಅಗಷ್ಟ ೧೯೪೧. [ಸಂಚಿಕೆ ೧೦-೧೧

ವಿಷಯಾನುಕ್ರಮಣಿಕೆ.

	ವಿಷಯಂಗಳು.	ಲೇಖಕರು.	ಪುಟ.
೧	ಲಿಂಗಧಾರಣ ಅಥಾತ್ ಶಿವದೀಕ್ಷೆ	ಶ್ರೀ. ಬ. ಚೆ. ಪಟ್ಟೇದ	೪೧೯
೨	ಸ್ವರವಚನ ಮತ್ತು ಮಂತ್ರಗೋಪ್ಯ	ಹಡಪದಪ್ಪಣ್ಣ	೪೨೭
೩	ಪಾದೋದಕ	ರಾ। ಬ। ಪಿ. ಜಿ. ಹಳಕಟ್ಟಿ	೪೩೨
೪	ಜಗತ್ತಿನ ಬಗ್ಗೆ ವೀರಶೈವ ಧರ್ಮ ದಲ್ಲಿರುವ ವಿಚಾರಗಳು	ಶ್ರೀ ಕುಮಾರಸ್ವಾಮಿ ಬಿ. ಏ. ಇವರ ಲೇಖನದ ಅನುವಾದ	೪೪೫
೫	ಬಸವೇಶ್ವರನ ಚರಿತ್ರೆ	ರಾ। ಬ। ಪಿ. ಜಿ. ಹಳಕಟ್ಟಿ	೪೫೩
೬	ಸ್ಫುಟವಿಷಯಗಳು	—	೪೬೩
೭	ಅವಧೂತ-ಗೀತೆ	ಗುರುಬಸವಕವಿ	೧-೮
೮	ಷಟ್ಸ್ಥಲ ಏಕೋತ್ತರಶತಸ್ಥಲ	—	೧-೨೪
೯	ಹರಿಹರನ ರಗಳೆ ಭಾಗ ೮	—	೪೧೪೮
೧೦	ಸಂಕೀರ್ಣ ವಚನಗಳು ಭಾಗ ೩	—	೫೬
೧೧	ಶಿವಾನುಭವ ಶಬ್ದಕೋಶ	ರಾ। ಬ। ಪಿ. ಜಿ. ಹಳಕಟ್ಟಿ	೨೭-೪೪
೧೨	ಹರಳಯ್ಯನ ಚರಿತ್ರೆ (ಪ್ರಸ್ತಾವನೆ)	—	೧೭-೨೫
೧೩	,,	—	

ಇದನ್ನು ವಿಜಾಪುರದಲ್ಲಿ ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ ಉಪಲೇಬುರಜ ಓಣಿಯಲ್ಲಿರುವ ತಮ್ಮ ೧೬೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

ಶಿವಾನುಭವ.

ವರ್ಷ ೧೫ | ಜುಲೈ – ಆಗಷ್ಟ ೧೯೪೧. | ಸಂಚಿಕೆ ೧೦-೧೧

ಲಿಂಗಧಾರಣ ಅಥವಾ ಶಿವದೀಕ್ಷೆ.

(ಲೇಖಕಃ- ಶ್ರೀಯುತ ಬಸವಪ್ಪ ಚನ್ನಪ್ಪ ಪಟ್ಟೇದ ಮಂಟಪಮುರಿ.)

ಬೆಂಗಳೂರು ನಗರ ಶ್ರೀಮಾನ್ ಜೀರಗೆ ಕ. ಬಸಪ್ಪನವರು ಬಿ. ಏ. ಅವರು ಕೀ. ಕೇ. ಬಿ. ಶಿವಮೂರ್ತಿಶಾಸ್ತ್ರಿಗಳ 'ಲಿಂಗಧಾರಣ ಮತ್ತು ಶಿವ ದೀಕ್ಷೆ' ಎಂಬ ಲೇಖನದ ಮೇಲೆ, ತಲೆಬರಹದಲ್ಲಿ ಮೇಲೆ ಕಾಣಿಸಿದ ಹೆಸರಿನ ಒಂದು ಟೀಕಾತ್ಮಕ ಲೇಖನವನ್ನು ಬರೆದು, ವಾದಕ್ಕೆ ಆರಂಭ ಮಾಡಿದರು. ಅಂದಿನಿಂದ ಇದು ವರೆಗೆ ಅನೇಕರು ಬರೆಬರೆದು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಸಿದ್ಧಿಸಿದರು. ಆದರೂ ಅದು ಮುಗಿಯದೆ ಹಾಗೇ ಹನುಮನ ಬಾಲದಂತೆ ಬೆಳೆಯುತ್ತಲೇ ಇರುವದು. ಶ್ರೀ ಜೀರಿಗೆಯವರ ಬರಹಕ್ಕೆ ನಾನು ಕೊಟ್ಟ ಉತ್ತರವನ್ನು ಜರಿದು, ಶ್ರೀ ಕಾನ ಕಾನಹಳ್ಳಿ ಬಸಪ್ಪನವರು ಪ್ರತ್ಯುತ್ತರವೆಂದು ಬರೆದು, ಶ್ರೀ. ಜೀರಿಗೆಯವರ ಅಭಿಪ್ರಾಯವನ್ನೇ ಸಮರ್ಥಿಸಲು ಯತ್ನಿಸಿದರು. ಪುನಃ ನಾನು ಅದಕ್ಕೂ ಒಂದು ಮಾರುತ್ತರವನ್ನು ಪ್ರಸಿದ್ಧಿಸಿದೆನು. ಅದರಲ್ಲಿ "ಇನ್ನು ನಾನು ಈ ವಿಷಯದಲ್ಲಿ ವಿವಾದವನ್ನು ಬೆಳಿಸಲಿಚ್ಛಿಸುವದಿಲ್ಲ" ಎಂದು ನಿಶ್ಚಯಿಸಿಕೊಂಡಿದ್ದರೂ, ಈಗ ಪುನಃ ಕೈಹಾಕುವ ಪ್ರಸಂಗಬಂದುದಕ್ಕೆ ವಿಷಾದಿಸುತ್ತೇನೆ. ಶ್ರೀ ಮಾ. ನಂ. ನಂಜಪ್ಪನವರು ಬೆಂಗಳೂರ ಅವರು ಶಿವಾನುಭವದ ಮೇ ಜೂನ ತಿಂಗಳ ಸಂಚಿಕೆಯಲ್ಲಿ ಪುನಃ ಸುಮ್ಮ ಸುಮ್ಮನೆ ಚರ್ವಿತಚರ್ವಣಾತ್ಮಕವಾದ ಅರ್ಥವಿಲ್ಲದ ಒಂದು ಲೇಖನವನ್ನು ಪ್ರಸಿದ್ಧಿ

ಸಿರುವರು. ಅದರಲ್ಲಿ ಶ್ರೀ. ಪಟ್ಟೀದ ಅವರು ಲಿಂಗಧಾರಣವನ್ನು ಲಿಂಗ ಮುದ್ರೆಗೆ ಹೋಲಿಸಿದ್ದಾರೆ, ಎಂಬದಾಗಿ ಪ್ರತಿಧ್ವನಿಗೊಟ್ಟಿದ್ದಾರೆ. ಶ್ರೀ ಕಾನ ಕಾನಹಳ್ಳಿ ಒಸಪ್ಪನವರು ಶಿ. ಭ. ದ ಎಪ್ರೀಲ ಸಂಚಿಕೆಯಲ್ಲಿ ಲಿಂಗ ಮುದ್ರೆ ಎಂದುದಕ್ಕೆ ಟೀಕೆ ಮಾಡಿದುದಕ್ಕಿಂತಲೂ ಹೆಚ್ಚಿಗೇನೂ ಇಲ್ಲ. ಅದೇ ವೇ-ಜೂನಗಳ ಜೋಡು ಸಂಚಿಕೆಯಲ್ಲಿ ನಾನು ಅದಕ್ಕೆ ಉತ್ತರವನ್ನು ಕೊಟ್ಟದ್ದು ಪ್ರಸಿದ್ಧವಾಗಿದೆ. ಅದನ್ನು ಸಮಾಧಾನದಿಂದ ಓದಿ ನೋಡಬೇಕು. ಹೀಗೆ ಒಮ್ಮೆ ಹಾಡಿದುದನ್ನೇ ಪುನಃ ಪುನಃ ಅವರ ಗುಂಪಿನ ಬೇರೆ ಬೇರೆ ಜನರು ಹಾಡುತ್ತ ಹೋಗಿ, ದೊಡ್ಡ ಗಲಾಟೆ ಎಬ್ಬಿಸಬೇಕೆಂದು ಸಂಕಲ್ಪಿಸಿಕೊಂಡಿದ್ದರೆ, ನಾನೇನು ಅದಕ್ಕೆ ಹೆದರುವವನಲ್ಲ; ಅದೊಂದು ನಿಮ್ಮ ಭ್ರಮೆಮಾತ್ರ. ಶಿಶುಲಿಂಗಧಾರಣವನ್ನು "ಲಿಂಗಮುದ್ರೆ" ಎಂದು ನಾನು ಒಮ್ಮೆಯಲ್ಲ, ಎರಡುಬಾರೆಯಲ್ಲ, ನೂರಾರು ಸಾರೆ ಸಹ ಕೈಯೆತ್ತಿ ಸಾರಿಸಾರಿ ಹೇಳಲಿಕ್ಕೆ ಸಿದ್ಧನಿದ್ದೇನೆ. ಶ್ರೀ ಜೀರಗೆಯವರ ಬೆಂಗಳೂರ ಗುಂಪಿನವರು ಕೆಳಗೆ ಕಾಣಿಸಿದ ತೋಂಟದ ಸಿದ್ಧೇಶ್ವರ ವಚನವನ್ನು ಲಕ್ಷಿಸಬೇಕು:—

"ಆಚಾರವಿಲ್ಲದ ಗುರು ಭೂತಪ್ರಾಣಿ, ಆಚಾರವಿಲ್ಲದ ಲಿಂಗ ಶಿಲೆ,
ಆಚಾರವಿಲ್ಲದ ಜಂಗಮ ಮಾನವ, ಆಚಾರವಿಲ್ಲದ ಪಾದೋದಕ ನೀರು
ಆಚಾರವಿಲ್ಲದ ಪ್ರಸಾದ ಎಂಜಲು, ಆಚಾರವಿಲ್ಲದ ಭಕ್ತ ನಿಷ್ಕರ್ಮಿ,
.....ಮನಕ್ಕೆ ಬಂದಂತೆ ವರ್ತಿಸುವ ಪಾಪಿಗಳನೆನಗೊಮ್ಮೆ ತೋರದಿರಯ್ಯ ಮಹಾಲಿಂಗಗುರು ತೋಂಟದಸಿದ್ಧೇಶ್ವರಪ್ರಭುವೇ"

ಇದರಲ್ಲಿ ಆಚಾರವಿಲ್ಲದ (ಶಿವಭಕ್ತಿ ಶಿವಮಾರ್ಗದ ನಿಜಾಚರಣೆಯಿಲ್ಲದ ಪ್ರಾಣಿ ಧರಿಸಿದ) ಲಿಂಗವು ಶಿಲೆ, ಎಂದು ಸ್ಪಷ್ಟವಾಗಿ ನುಡಿದಿದ್ದಾರೆ. ಶಿಲೆಯಾದ ಮೇಲೆ ಅದು ಅತನು ಧರಿಸಿದ ಲಿಂಗವಾಯಿತೋ ಲಿಂಗ ರೂಪ ಮುದ್ರೆಯಾಯಿತೋ! ನೀವೇ ಹೇಳಿರಿ. ಶಾಂತಮನದಿಂದ ಆಲೋಚಿಸಿ ನೋಡಿರಿ. ವಿಕಾರವಶವಾಗಬೇಡಿರಿ. ಒಣ ಅಭಿಮಾನಕ್ಕೆ ಬೀಳಬೇಡಿರಿ. ಕೂಸಿಗೆ ಶಿವಭಕ್ತಿ ಶಿವಮಾರ್ಗದ ನಿಜಾಚರಣೆಯ ಅರುಹು ಇರುವದೇ? ಅದು ಹಾಗೆ ನಡೆಯಬಲ್ಲುದೇ? ಇಲ್ಲವೇ ಇಲ್ಲ! ಆದಕಾರಣ ಆ ಲಿಂಗವು ಲಿಂಗಮುದ್ರೆಯೇ ಸರಿ! ಅದನ್ನು ನೀವು ಬೇಕಾದರೆ ಕಾಸಿ ಒತ್ತಿರಿ, ಚಿನ್ನಬೆಳ್ಳಿಗಳ ತಗಡಿನಿಂದ ಮಾಡಿಸಿ ಮೈಗೆ ಹಚ್ಚಿರಿ, ಇಲ್ಲವೆ ಲಾಂಛನ ರೂಪದಿಂದ ಕಟ್ಟಿಕೊಳ್ಳಿರಿ. ತಕ್ಕಮಟ್ಟಿಗೆ ದೊಡ್ಡವ

ನಾಗಿ, ಶಿವದೀಕ್ಷೆಯನ್ನು ಪಡೆದು, ಗುರುಹಿರಿಯರಿಂದ ಶಿವಮಾರ್ಗದ ಶಿಕ್ಷಣಹೊಂದಿ, ಶಿವಭಕ್ತಿ ಶಿವಾಚಾರಯುಕ್ತನಾಗಿ, ಅಂತರ್ಬಾಹ್ಯ ಲಿಂಗ ಪೂಜಕನಾದಾಗಲೇ ಆ ಲಿಂಗವು ಲಾಂಛನ ಸ್ವರೂಪವನ್ನು ಮೀರಿ (ಮುದ್ರಾತ್ವವನ್ನು ದಾಂಟಿ) ನಿಜವಾದ ಲಿಂಗವಾಗುವುದು. ಶ್ರೀಬಸವಣ್ಣನವರೇನು ಸಾಮಾನ್ಯರೇ! ಅವರೇ ತಮ್ಮ ವಚನಗಳಲ್ಲಿ:—

"ಎನ್ನ ಮನವು ಅತ್ತಿಕಾಯಯ್ಯ, ವಿಚಾರಿಸಿ ನೋಡಿದರೆ ಹುರುಳಿಲ್ಲವಯ್ಯ, ಪ್ರಪಂಚದ ಡಂಭಕನಲ್ಲಿ ಎನ್ನನೋಡು
ರೂಪವ ಮಾಡಿ ನೀನಿರಿಸಿದಿರಯ್ಯ, ಡಂಭಕ ನಾನಯ್ಯ,
ಕೂಡಲಸಂಗಮದೇವಾ"

ಇತ್ಯಾದಿಯಾಗಿ ತಮ್ಮನ್ನು ಹಳಿದುಕೊಂಡಿರುವಾಗ, ಆ ಶಿವಮಾರ್ಗವು ಅದೆಷ್ಟು ಗಡುಚಾದುದೆಂಬುದನ್ನು ಗಮನಿಸಿದರೆ, ಬರೇ ಜನ್ಮಲಿಂಗ ಧಾರಣಹೊಂದಿ ಅನುಕರಣಮಾತ್ರದಿಂದಲೇ ಅದನ್ನು ಸಾಧಿಸಬಹುದೇ? ಶಕ್ಯವಿಲ್ಲ.

ಲಿಂಗಧಾರಣ ಶಿವದೀಕ್ಷೆಗಳು ತತ್ವತಃ ಒಂದೇ ಆದರೂ ವ್ಯಾವಹಾರಿಕರೀತಿಯಿಂದ ಅವುಗಳಲ್ಲಿ ಭೇದವುಂಟು. ಹಾಗೆ ಇರುವದೇ ಯೋಗ್ಯ. ಇದಕ್ಕೊಂದು ದೃಷ್ಟಾಂತ:—ಚಿಕ್ಕಂದಿನಲ್ಲಿ ಬಾಲಕನು ಶಾಲೆಗೆ ಹೋದಾಗ ಆ ಗುರುವು ಒಮ್ಮೆ ಮಾತ್ರ ಅವನಿಗೆ ಪಾಠ ಹೇಳಿ ಮುಂದೆ ಬಿಟ್ಟುಬಿಟ್ಟರೆ, ಅಷ್ಟರಿಂದಲೇ ಅದು ಹುಡುಗನಿಗೆ ಬರುವದೇ? ತಿರುತಿರುಗಿ ಅನೇಕಬಾರೆ ಅದನ್ನು ಹೇಳಿಹೇಳಿ ಅದನ್ನು ನುಡಿಸಿನುಡಿಸಿ ಪಾಠಮಾಡಿಸುವದಿಲ್ಲವೇ? ಅದೇನು ನಿರರ್ಥಕ ಉದ್ಯೋಗವೇ? ಅದು ವಿಷಯ ದೃಢತೆಗೆ ಅವಶ್ಯವಾದುದಲ್ಲವೇ? ಅದರಂತೆ ಒಮ್ಮೆ ಮಾಡಿದ ಜನ್ಮ ಲಿಂಗಧಾರಣವು ನಿಷ್ಫಲವಾಗದಂತೆ ಶಿವದೀಕ್ಷಾ ರೂಪದಿಂದ ಸುಬುದ್ಧಾವಸ್ಥೆಯಲ್ಲಿ ಮತ್ತೆ ಮಾಡಿದರೆ ಏನುತಪ್ಪು! ಸಾಧಕನು ತನ್ನ ಸಾಧನವನ್ನು ಪುನಃ ಪುನಃ ನಡಿಸಿ ಕೃತಾರ್ಥನಾಗುವದನ್ನು ಯಾರು ತಾನೇ ಅರಿಯರು? ಇದಲ್ಲದೆ ಶಿವದೀಕ್ಷೆಯೊಳಗಿನ ಎಲ್ಲ ವಿಧಾನಗಳು ಜನ್ಮಲಿಂಗಧಾರಣದಲ್ಲಿ ಬರುವದಿಲ್ಲ. ಸ್ಥೂಲವಾನದಿಂದಲೇ ತೀರ ಸದ್ವಾಮುದ್ರಾ ರೀತಿಯಿಂದ ಅದು ಜರಗುತ್ತದೆ. ಆ ಅಜ್ಞಾನಸ್ಥಿತಿಯಲ್ಲಿ ಸೂಕ್ಷ್ಮತೆಯಿಂದ ಪ್ರಯೋಜನವೇನು? ಹೊಳೆಯಲ್ಲಿ ಹುಡಿಸಿ ತೊಳೆದಂತಲ್ಲವೇ? ಆದಕಾರಣ ತಿಳಿವಳಿಕೆ ಬಂದನಂತರ ಸಾಂಗೋಪಾಂಗವಿಧಾ

ನದಿಂದ, ಬಾಲಕನಿಗೆ ಪ್ರತ್ಯಕ್ಷ ಕಾಣುವಂತೆ ಶಿವದೀಕ್ಷಾ ಸಮೇತವಾಗಿ ಲಿಂಗಧಾರಣ ಮಾಡುವದು ಯುಕ್ತವೇ ಆಗುವದು. ಅದು ಲಿಂಗಧರಿಸಿದವನಿಗೇ ಲಿಂಗಕಟ್ಟಿದಂತಲ್ಲ, ಉಂಡವನಿಗೆ ಉಣಿಸಿದಂತಲ್ಲ ಮೊದಲು ಧರಿಸಿದ ಜನ್ಮಲಿಂಗವು ಕಳಚಿಬೀಳುತ್ತಿದ್ದರೆ, ಅದನ್ನೇ ತಕ್ಕೊಂಡು ಮತ್ತೆ ಒತ್ತಿ ಸಿಕ್ಕಿಸಬಾರದೇ? ಮೊದಲು ಉಂಡದ್ದು ದಕ್ಕದೆ ಮುರಳಿದರೆ ಮತ್ತೊಮ್ಮೆ ಉಣಬಡಿಸಬೇಡವೇ? ಹುಡುಗನ ಮನಸ್ಸಿನ ಮೇಲೆ ಯೋಗ್ಯ ಪರಿಣಾಮವಾಗಲೆಂದು, ಅವನ ಮುಂದೆಯೇ ಮತ್ತೆ ಜಲಾಧಿವಾಸ ಧಾನ್ಯಾಧಿವಾಸ, ಪುಸ್ತಕ ಚಿತ್ತುಲಾಕರ್ಷಣ, ಇಷ್ಟವ್ಯೂರ್ತಿಯಲ್ಲಿ ಆ ಚಿತ್ತುಲಾ ಪ್ರತಿಷ್ಠಾಪನ ಮುಂತಾದವುಗಳು ಜರಗಿದರೆ, ಅವನಿಗೆ ಲಿಂಗದಲ್ಲಿ ಹೆಚ್ಚುಶ್ರದ್ಧೆಯು ಒಡಮೂಡಿ ಅವನ ಆಚರಣೆಗೆ ಸಹಕಾರಿಯಾಗುವದಿಲ್ಲವೇ?

ಶ್ರೀ ಜೀರಗೆ ಕ. ಬಸಪ್ಪನವರು ವಿವರಿಸಿದಂತೆ ಜನ್ಮಲಿಂಗ ಸಂಸ್ಕಾರವು ಇತ್ತ ನಡೆಯುವದಿಲ್ಲೆಂದು ನಾನು ಬರೆದುದಕ್ಕೆ, ಶ್ರೀ ಕಾನಕಾನಹಳ್ಳಿ ಬಸಪ್ಪನವರು ಅತ್ಯಂತ ಆಶ್ಚರ್ಯ ವ್ಯಕ್ತಪಡಿಸಿದ್ದರು. ಅವರು ಈಗ ಹುಬ್ಬಳ್ಳಿಯ ಶ್ರೀ ಸಿದ್ಧವೀರದೇವರು ಶರಣಸಾಹಿತ್ಯದ ಜಾನವರಿ-ಫೇಬ್ರುವರಿ ಅಂಕದಲ್ಲಿ ಬರೆದುದನ್ನಾದರೂ ಆಲಿಸಬೇಕು. ಅವರುಃ— "ಲಿಂಗಧಾರಿಗಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಆಗಲೇ ಮೂರು ದೀಕ್ಷೆಗಳನ್ನು ಮಾಡುವರೆಂಬುದು ಸಹಜವಾದುದೂ ಅಲ್ಲ; ಆಚರಣೆಯಲ್ಲಿಯೂ ಇಲ್ಲ." ಎಂದು ತಮ್ಮ ಸಾಕ್ಷ್ಯವನ್ನು ಹೇಳಿರುವರು. ಇತ್ತಕಡೆ ಕಾನಕಾನಹಳ್ಳಿ ಶ್ರೀ. ಬಸಪ್ಪನವರು ಒಮ್ಮೆ ಬಂದರೆ, ನಾನು ಪ್ರತ್ಯಕ್ಷ ಮನಗಾಣಿಸಿಕೊಡುತ್ತೇನೆಂದು ಬಿನ್ನವಿಸಿಕೊಂಡಿದ್ದೆನಷ್ಟೇ. ಹಾಗೆ ಬರಲಿಕ್ಕೇನೂ ಅವರಿಗೆ ಆಗದು. ಆಕಾರಣ ಅವರ ಹಾಗು ಶ್ರೀ ಜೀರಗೆಯವರ ಅವಗಾಹನೆಗಾಗಿ ಕೆಳಗೆ ನಮ್ಮ ಮನೆಯಲ್ಲೇ ಹೊಸದಾಗಿ ನಡೆದ ಜನ್ಮಲಿಂಗಧಾರಣವನ್ನು ವಿವರಿಸಿದ್ದೇನೆ:— ಆಷಾಢ ವ॥ ೨ ಭಾನುವಾರ ದಿನ ನನ್ನ ಸೊಸೆಯು ಮಗುವನ್ನು ಹೆತ್ತಳು. ಲಿಂಗಧಾರಣೆಗೆ ಮಠದಯ್ಯನವರೂ ಮಠಪತ್ತಿಯೂ ಬಂದರು. ಅಯ್ಯನವರು ಹನ್ನೆರಡು ವರ್ಷದವರು ಮಾತ್ರ. ಮನೆಯಲ್ಲಿ ಗಂಡಸೆಂದರೆ ನಾನೊಬ್ಬನೇ. ಆದುದರಿಂದ ನಾನೇ ಮುಂದಾಗಿ ಅಯ್ಯನವರ ಪಾದಪೂಜೆ ಮಾಡಿ ಕರುಣತೀರ್ಥವನ್ನು ಮಾಡಿದೆನು. ಅತ್ತ ಮಠಪತ್ತಿಯು ತನ್ನ ಕೈಯಲ್ಲಿ ಲಿಂಗವನ್ನು

ತಕ್ಕೊಂಡು ಅದರ ಮೇಲೆ ಪಂಚಾಮೃತ ಸುರುವಿ ರುದ್ರೋದಕದಿಂದ ತೊಳೆದು ವಿಭೂತಿ ಪೂಸಿ, ಹೂ ಪತ್ರಿ ಮೇಲಿಟ್ಟು, ಊದಿನಕಡ್ಡಿಯಿಂದ ಬೆಳಗಿದನು. ಲಿಂಗಸಂಸ್ಕಾರವು ಮುಗಿಯಿತು. ಧರಿಸಲಿಕ್ಕೆ ಅದು ಸಿದ್ಧವಾಯಿತು. ಇದೆಲ್ಲಳ-೫ ನಿಮಿಷಗಳಲ್ಲೇ. ಕೂಡಲೆ ಅಯ್ಯನವರ ಗದ್ದುಗೆಯಿಂದ ಕೂಸಿನವರೆಗೆ ನೂಲು (ಸೂತ್ರ) ಸಂಬಂಧಿಸ ಹಚ್ಚಿ, ಮಠಪತ್ತಿಯು ತನ್ನ ಬಲಕೈಯೊಳಗಿನ ಲಿಂಗವನ್ನೂ ವಿಭೂತಿಯನ್ನೂ ಬೇರೊಬ್ಬ ಹೆಣ್ಣುಮಗಳ ಬಲಕೈಯಲ್ಲಿ ಕೊಟ್ಟು " ಕೂಸಿಗೆ ವಿಭೂತಿ ಹಚ್ಚಿ ಲಿಂಗವನ್ನು ಧರಿಸು " ಎಂದು ಹೇಳಿದನು. ಆಕೆ ಅದರಂತೆ ಮಾಡಿದ ಮೇಲೆ ಸ್ವಾಮಿಗಳ ತೀರ್ಥಪ್ರಸಾದವನ್ನು ಕೂಸಿಗೆ ಕೊಡಿಸಿ ವಿಧಾನ ಮುಗಿಸಿದರು. ಲಿಂಗಕ್ಕೂ ಮಠದಯ್ಯನವರಿಗೂ ಯತ್ಕಿಂಚಿತ್ತೂ ಸಂಬಂಧವಿಲ್ಲ. ಆ ದುರ್ದೈವಿ ಪ್ರಾಣಿಯು ಅದನ್ನು ಕಣ್ಣಿನಿಂದ ಸಹ ನೋಡಲಿಲ್ಲ. ತರುವಾಯ ಭೋಜನ ಮಾಡಿ ದಕ್ಷಿಣೆ ಹಾಗು ಹಕ್ಕಿನ ರೊಕ್ಕ ತಕ್ಕೊಂಡು ಹೊರಟು ಹೋದರು. ಇದು ಅಕ್ಷರಶಃ ನಿಜ. ಇದಾಲ್ಲೇನೂ ಅಂತರವಿಲ್ಲ.

ಇದು ವಂಟಮುರಿ ಊರೊಳಗಿನ ಲಿಂಗಧಾರಣೆ. ಇದು ಪ್ರಸಿದ್ಧ ಲಿಂಗಾಯತ ದೇಸಾಯಿಯರ ಸ್ಥಳ. ಊರಲ್ಲಿ ೧೦೦-೧೨೫ ಲಿಂಗಾಯತರ ಮನೆಗಳಿವೆ. ಶ್ರೀ ಸಂಪಾದನ ಮಹಾಸ್ವಾಮಿಯವರ ಸಿಂಹಾಸನವಪದೆ (ಇದು ಹಿಂದೆ ಹಾಗಲವಾಡಿಯಿಂದ ಇಲ್ಲಿಗೆ ಬಂದಿರುವದಂತೆ) ಇದಲ್ಲದೆ ಪಟ್ಟದ ದೇವರಮಠ, ಚರಂತಿಯಪ್ಪನವರ ಮಠ, ವಿರಕ್ತಮಠ, ಶಾಸ್ತ್ರಿ ಪುರಾಣಿಕ ಪುರೋಹಿತರ ಬೇರೆ ಬೇರೆ ಮಠಗಳು; ಹೀಗೆ ೨೭ ಮಠಗಳೆಂದು ಹೇಳುತ್ತಾರೆ. ದೈವ, ಸೆಟ್ಟಿ, ಪಟ್ಟಣಶೆಟ್ಟಿ, ವೀರಶೈವ ಸಂಘ, ಸಹ ಉಂಟು. ಜನರಾದರೂ ತಕ್ಕಮಟ್ಟಿಗೆ ಬಲ್ಲವರಿದ್ದಾರೆ. ಆದಾಗ್ಯೂ ನನ್ನ ಮನೆಯಲ್ಲೇ ಈ ರೀತಿ! ಇದಕ್ಕೇನನ್ನಬೇಕು. ಇದಕ್ಕೆ ತಕ್ಕ ಕಾರಣವಾದರೂ ಇಲ್ಲದೆ ಇಲ್ಲ. ಆದು ಇರಲಿ. ಸಾಧಾರಣವಾಗಿ ಇತ್ತಕಡೆಗೆಲ್ಲ ತುಸು ಹೆಚ್ಚು ಕಡಿಮೆ ಇದೇ ಸ್ಥಿತಿಯುಂಟಿನ್ನಲಿಕ್ಕೆ ಅಡ್ಡಿಇಲ್ಲ. ಬಹಳವಾದರೆ ಅಲ್ಲಿ ಲಿಂಗವು ಮಠದಯ್ಯನವರ ಹಸ್ತದಿಂದ ಪುನೀತವಾಗಿ ದೊರೆಯುತ್ತಿರಬಹುದು ಇಷ್ಟೇ! ಲಿಂಗಧಾರಣದ ವಿಧಿವಿಧಾನಗಳೆಲ್ಲವೂ ಗ್ರಂಥಗಳಲ್ಲಿಯೇ. ಅದನ್ನು ಹೊರಗೆ ತರುವವರಾರು! ಇಂತಹ ಸ್ಥಿತಿಯಲ್ಲಿ ಶ್ರೀಮಾನ್ ಜೀರಗೆಯವರೇ ಆದಿಯಾದ ಬೆಂಗಳೂರ ಗುಂಪಿನವರು ವರ್ಣಿಸುವದು ಕಟ್ಟು ಕಥೆ ಯಾಕೆ ಅನ್ನಬಾರದು?

ಇರಲಿ. ನಾನು ಬೆಂಗಳೂರ ಈ ಮಂಡಲಿಗೆ ಒಂದು ಬಿನ್ನಹವನ್ನು ಮಾಡಿಕೊಳ್ಳುವೆನು — ಗ್ರಂಥಗಳಲ್ಲಿ ವರ್ಣಿತವಾದದ್ದು ಬೇಡ. ಪ್ರತ್ಯಕ್ಷ ನಿಮ್ಮೂರಲ್ಲಿ ಅದೂ ಬಡವರ ಮನೆಯಲ್ಲಿ ನಡೆಯುವ ಒಂದು ಜನ್ಮ ಲಿಂಗ ಧಾರಣವನ್ನು ಇದ್ದಕ್ಕಿದ್ದಂತೆಯೇ ಬರೆದು ಪ್ರಸಿದ್ಧಿಸಬೇಕು. ವ್ಯಾಖ್ಯಾನ ಕೊಡುವದಾದರೆ, ಲೇಖ ಬರೆಯುವದಾದರೆ, ನಮ್ಮ ಕಡೆಯವಂತಾದರೂ ಗ್ರಂಥಗಳನ್ನು ನೋಡಿ. ಒಳ್ಳೇ ಅರ್ಥಟಿಯಿಂದ ಸಾಂಗವಾಗಿ ಹೇಳುವವರು ತುಂಬಿರುವರು. ಹಾಗೆ ನೀವೇನೂ ಕೈಯಿಂದ ಹಾಕದೆ ನಿಜಸ್ಥಿತಿಯನ್ನು ಮಾತ್ರ ಪ್ರಸಿದ್ಧಿಸಬೇಕೆಂದು ಅಂಗಲಾಚಿ ಬೇಡಿಕೊಳ್ಳುವೆನು.

ಲಿಂಗಧಾರಣೆ ಶಿವದೀಕ್ಷೆಗಳು ತಾತ್ವಿಕ ದೃಷ್ಟಿಯಿಂದ ಒಂದೇ ಎಂಬ ಮಾತು ಎಲ್ಲರಿಗೂ ಒಪ್ಪಿಗೆಯದೆ. ಲಿಂಗಧಾರಣವಾದ ಮೇಲೆ ಸಾವಧಾನದಿಂದ ಆ ಜನ್ಮವಾಗಿ ಶಿವಭಕ್ತಿ ಶಿವಮಾರ್ಗಗಳನ್ನು ಪಡೆಯಬೇಕೆಂಬ ಬಗ್ಗೆಯೂ ಸಕಲರಲ್ಲಿ ಏಕ್ಯವುತ್ಯವದೆ. ಆದರೆ ಈಗ ಬಂದಿರುವ ಮತ ಭೇದವಿಷ್ಟೆ — ಒಂದು ಪಕ್ಷದವರು ಶಿವದೀಕ್ಷೆಯ ಮಾರ್ಗವಾಗಿ ಶಿವಭಕ್ತಿ ಶಿವಾಚಾರ ಶಿಕ್ಷಣವನ್ನು ಆರಂಭಿಸಬೇಕೆನ್ನುತ್ತಾರೆ. ಮತೊಂದು ಪಕ್ಷದವರು ಶಿವದೀಕ್ಷೆ ಮಾಡದೆ ಬರೇ ಜನ್ಮ ಲಿಂಗಧಾರಣದ ಮೇಲೆಯೇ ಮನೆಯಗುರು ಹಿರಿಯರ ಆಪ್ತಬಂಧುಗಳ ಅನುಕರಣ ಸಹಾಯದಿಂದ ವೀರಶೈವಾಚಾರದ ಶಿಕ್ಷಣ ಪಡೆಯಬೇಕೆನ್ನುತ್ತಾರೆ. ಒಟ್ಟಿಗೆ ಶಿಶು ದೊಡ್ಡದಾಗಿ ಶಿವಾಚಾರಸಂಪನ್ನವಾಗಲಿಕ್ಕೆ ಅದಕ್ಕೆ ಶಿಕ್ಷಣವು ಬೇಕೇಬೇಕೆಂಬುದು ಎಲ್ಲರಿಗೂ ಮಾನ್ಯವದೆ. ಕೆಳಗಿನ ಉತ್ತರಣೆಗಳ ಕಡೆಗೆ ಚಿತ್ತೈಸಿರಿ.

೧. ಹುಬ್ಬಳ್ಳಿಯ ಶ್ರೀ ಸಿದ್ಧವೀರದೇವರು. (ಶರಣ ಸಾಹಿತ್ಯ ಜನವರಿ ಫೇಬ್ರುವರಿಯ ಸಂಚಿಕೆ ಪುಟ ೩೯-೪೦) ಲಿಂಗಧಾರಣೆಗೂ ಶಿವದೀಕ್ಷೆಗೂ ಅಂತರವಿಲ್ಲೆಂದು ಶ್ರೀಮಾನ್ ಜೀರಗೆಯವರು ಹೇಳುವದು ಸತ್ಯವು..... ಜನ್ಮಲಿಂಗಧಾರಣೆ ಹಾಗು ಶಿವದೀಕ್ಷೆ ಇವು ತತ್ವತಃ ಒಂದೇ ಇದ್ದರೂ ಧರಿಸುವವರ ವಯೋಮಾನದಿಂದ ಅವುಗಳಲ್ಲಿ ತಾರತಮ್ಯವು ಸಂಭವಿಸುತ್ತದೆ..... ರೂಢಿಯಿಂದಲೂ ಬಾಲ್ಯದ ಅನಿವಾರ್ಯದಿಂದಲೂ ಸಾಮಾಜಿಕ ನಿಯಮಕ್ಕಾಗಿ ಭಿನ್ನವಾಗಿ ಒಪ್ಪಲೇಬೇಕು.

ಶ್ರೀಮಾನ್ ಜೀರಗೆ ಕ. ಬಸಪ್ಪನವರು — ತಂದೆತಾಯಿಗಳು ಲಿಂಗಧಾರಿಗಳಾದುದರಿಂದ... ... ಶಿಶುವು ಉತ್ತಮ ಲಿಂಗಾಂಗಿಯೂ ಷಟ್‌ಸ್ಥಲ ಸಂಪನ್ನನೂ ಆಗಿ ಪರಿಣಮಿಸುತ್ತದೆ. (ಉದ್ದವಾಗಿರುವದರಿಂದ ಬರೇ ದಿಗ್ದರ್ಶನ ಮಾಡಿರುತ್ತದೆ. ಶಿವಾನುಭವದ ಜನವರಿ ಸಂಚಿಕೆಯ ಪುಟ ೧೪೭, ೧೪೮ ರಲ್ಲಿ ನೋಡಬೇಕು.)

ಶ್ರೀ ಕಾನಕಾನಹಳ್ಳಿ ಬಸಪ್ಪನವರು — ಮಗುವಿಗೆ ಚಿಕ್ಕ ವಯಸ್ಸಿನಲ್ಲಿ ಲಿಂಗಧಾರಣ ಮಾಡಿ ಅದು ಲಿಂಗವಂತ ತಾಯಿತಂದೆಗಳ ಬಂಧುಗಳ ಜೊತೆಯಲ್ಲಿ ಬಳೆದು ಶಿವಮಾರ್ಗವನ್ನು ಜಿನ್ನಾಗಿ ಅನುಕರುಣ ಮಾಡಿದರೆ, ಮುಂದಕ್ಕೆ ಒಳ್ಳೇ ಭಕ್ತಿ ಸಂಪನ್ನನೂ ಷಟ್‌ಸ್ಥಲಾಚಾರ ಸಂಪನ್ನನೂ ಆಗುವದರಲ್ಲಿ ಯಾವ ಸಂದೇಹವೂ ಇಲ್ಲ (ಶಿವಾನುಭವದ ಏಪ್ರೀಲ ಸಂಚಿಕೆ ಪುಟ ೩೩೦. ಶ್ರೀ ಜೀರಗೆಯವರ ಮತವೂ ಹೀಗೇ)

ಶ್ರೀ. ಮಾ. ನ. ನಂಜಪ್ಪನವರು — ಮಾತೃಗರ್ಭದಲ್ಲಿರುವಾಗಲೇ ಶಿವದೀಕ್ಷೆಯಲ್ಲಿ ವೀರಶೈವ ದೀಕ್ಷೆಯನ್ನು ಪಡೆದಿರುವ ಶಿಶುವಿಗೆ ಅದು ಬೆಳೆದು ಬಲಿಯುವಾಗ ಮತ್ತೊಮ್ಮೆ ಗುರುವಿನಿಂದ ಕ್ರಮವಾದ ಲಿಂಗಪೂಜಾ ವಿಧಾನ ಮತ್ತು ವೀರಶೈವಾಚರಣೆಗಳನ್ನ ಬೋಧಿಸುವದೇ ನ್ಯಾಯವು. (ಶಿ. ಭ. ಮೇ–ಜೂನ ಸಂಚಿಕೆ ಶಿ. ಭ. ಪು. ೩೦೧.)

ಶ್ರೀ ಎನ್. ರಾಜೂಟಯ್ಯ ಕಾನಕಾನಹಳ್ಳಿ — ಗುರುವು ಲಿಂಗ ಕಟ್ಟಿದ ಒಳಿಕ ಅವರನ್ನು ದಾರಿಗೆ ತರಲು, ಸದಾ ಎಚ್ಚರಿಕೆಯಲ್ಲಿರಬೇಕು....ಯಾವಾಗ ಲಿಂಗಧಾರಣ ಮಾಡುವರೋ ಆಗಲೇ ಗುರುಗಳು ತಂದೆತಾಯಿಗಳಿಗೂ ಸಮಯಕ್ಕೆ ನೆರೆದಿರುವ ಬಂಧುವರ್ಗದವರಿಗೂ ಹೀಗೆಯೇ ನಡೆಯಬೇಕೆಂದು ನಿಷ್ಟಯಿಸಬೇಕು ...ಶಿಕ್ಷಣವಿಲ್ಲದೆ ದೀಕ್ಷೆ ಎಂತು ಉಳಿಯುವದು. (ಶಿ. ಭ. ಮೆ.-ಜೂನ ಸಂಚಿಕೆ ಪುಟ ೩೦೪, ೩೦೫)

ಹೀಗೆ ಉಭಯ ಪಕ್ಷದವರು ಪ್ರತಿವಾದನೆ ಮಾಡುವ ಪಕ್ಷದಲ್ಲಿ ವಿನಾಕಾರಣ ವಾದ ಬೆಳಿಸುವದೇಕೆ? ಯೋಗ್ಯವಿದ್ದುದನ್ನು ಸುಮ್ಮನೆ ಅನುಸರಿಸಬೇಕು. ಜನ್ಮಲಿಂಗಧಾರಣದ ನಂತರ ಶಿವದೀಕ್ಷೆಯಾದರೆ ಆ ಬಾಲಕನಿಗೆ ಶಿವಾಚಾರ ಸಂಪನ್ನನಾಗಲಿಕ್ಕೆ ಹೆಚ್ಚಿಗೆ ಅನುವಾದೀತೇ ಹೊರತು, ಘಾತವೇನೂ ಆಗುವದಿಲ್ಲವಲ್ಲ! ನಮ್ಮ ೬೪ ಶೀಲಗಳಲ್ಲಿ ಇವೆ

ರಡನ್ನೂ ಭಿನ್ನ ಭಿನ್ನ ಶೀಲಗಳಾಗಿಯೇ ಹೇಳಿದ್ದಾರೆ. ಅದರಂತೆ ಅನು ಸರಿಸುವದೇ ಸೂಕ್ತವಲ್ಲವೇ? ಸಮಾಜಕ್ಕೆ ಕ್ಷೇಮವಲ್ಲವೇ? ಕೆಳಗಿನ ವಚನಗಳನ್ನು ನಾವೆಲ್ಲರೂ ಗಮನಿಸಬೇಕಾಗಿದೆ. "ಲಿಂಗಭಕ್ತನು ಮತ್ತೊಬ್ಬ ಲಿಂಗಭಕ್ತನಿಗೆ ಬುದ್ಧಿಯ ಹೇಳುವಲ್ಲಿ ಮುಚ್ಚರಿಸುವವರ ಮೆಚ್ಚ ಕೂಡಲಸಂಗಮದೇವ"

ನಾನು ಹಿಂದಿನ "ಶ. ಭ. ಎಪ್ರೆಲಿನ" ಲೇಖನದಲ್ಲಿ ಬರೆದ ಕೆಳಗಿನ ಉತ್ತರಗಳನ್ನು ತಕ್ಕೊಂಡು ಶ್ರೀಮಾನ್ ನಂಜಪ್ಪನವರು ಟೀಕಿಸಿ ಶ್ರಮ ಪಟ್ಟಿರುವರು.-

"ಜನ್ಮಲಿಂಗಧಾರಣವು, ಅಲಿಂಗಿ ಸಂಪರ್ಕ ತಪ್ಪಿಸಿ ಶೀಲಪಾಲನೆ ಮಾಡಿಕೊಳ್ಳುವ ಉದ್ದೇಶದಿಂದ, ತಂದೆ ತಾಯಿಗಳು ಮಾಡಿದ ಯೋಜನೆ" (ಪು. ೨೯೭) ಇದರ ಅರ್ಥವನ್ನೇ ವಿಪರೀತವಾಗಿ ಕಲ್ಪಿಸಿಕೊಂಡು ಆ ಪ್ರವಾಹದಲ್ಲಿ ಎತ್ತೆತ್ತೋ ತೇಲಾಡುತ್ತ ಹರಿದುಹೋಗಿದ್ದಾರೆ. ಆಗ ಅವರ ಚಿತ್ತವು ಎಲ್ಲಿತ್ತೆಂಬುದನ್ನು ದೇವರೇ ಬಲ್ಲ. ಮತ್ತೊಮ್ಮೆ ನನ್ನ ವಾಕ್ಯವನ್ನು ದಯವಿಟ್ಟು ಓದಿ ನೋಡಿರಿ ಸ್ವಾಮಿ. ಜನ್ಮಲಿಂಗಧಾರಣವು ಅಲಿಂಗಿ (ಕೂಸಿನ) ಸಂಪರ್ಕ ತಪ್ಪಿಸಿ (ತಮ್ಮ) ಶೀಲ (ಒಳ್ಳೆ ಶೀಲ) ಪಾಲನೆ ಮಾಡಿಕೊಳ್ಳುವ ಉದ್ದೇಶದಿಂದ ತಾಯಿ ತಂದೆಗಳು ಮಾಡಿದ ಯೋಜನೆ ಎಂದು ಇರುವ ಅರ್ಥವನ್ನು ತಿರುವಿ, "ತಮ್ಮ ಮಕ್ಕಳ ಶೀಲಪಾಲನೆ ಇಲ್ಲವೆ ಶೀಲಾಚಾರ" ಎಂದು ಭಾವಿಸಿಕೊಂಡು, ಅದರ ಮೇಲೆ ಸುದೀರ್ಘವಾದ ಟೀಕೆಯನ್ನು ಬರೆದುದು ನ್ಯಾಯವೇ?

ಹಡಪದಪ್ಪಣ್ಣಗಳ ಸ್ವರವಚನ

ನಾ ನೀನೆನಬೇಡ । ನೋನ ಮುಗ್ಧರೆನಬೇಡ । ಮಾನವರ ಬೇಡ ಬೇಡ । ಮನುಜರೊಳು ನುಡಿಯಬೇಡ । ಆದು ನಾನು ತಾನಾದುದೆ ಮಹಾ ಘನವು ॥ ಪಲ್ಲ ॥

ಕಂಡೆನೆಂದು ನುಡಿಯಬೇಡ ಕಾಣೆನೆಂದು ನೋಡಬೇಡ । ಉಂಡೆನೆಂದು ಉಲಿಯಬೇಡ ಉಣ್ಣೆನೆಂದು ಸುಮ್ಮನಿರಬೇಡ । ಅಂಡಾಯವ ಮಾಡಿ ಭಂಡುಮಾಡಿಕೊಳಬೇಡ । ಚಂಡ ವಿಕ್ರಮ ಬಸವಪ್ರಿಯ ಕೂಡಲ ಚನ್ನಬಸವನ ಶರಣ ॥ ೧ ॥

ಕತ್ತಲೆ ಬೆಳಗೆನ್ನಬೇಡ ಸತ್ಯ ತಾನೆನ್ನಬೇಡ । ಚಿತ್ತವ ಸುಯಿ ಧಾನವ ಮಾಡಿ । ಮೊತ್ತದ ಹೆಣ್ಣು ಹೊನ್ನು ಮಣ್ಣಗೆದ್ದರೆ । ನಿರ್ಮುಕ್ತ ಬಸವಪ್ರಿಯ ಕೂಡಲ ಚನ್ನಬಸವನೊಳು ॥ ೨ ॥

ವಂದನೆಗೆ ನಿಲ್ಲಬೇಡ ನಿಂದೆಗಂಜಿ ಓಡಬೇಡ । ಹಿಂದುಮುಂದು ಹಾರಬೇಡ ಸಂದೇಹಗೊಳಬೇಡ । ದ್ವಂದ್ವ ಬುದ್ಧಿಯ ಕಳೆದುಳಿದು ನಿಂದರೆ । ನಿರ್ಬಂಧ ಬಸವಪ್ರಿಯ ಕೂಡಲ ಚನ್ನಬಸವನೊಳು ॥ ೩ ॥

ಕೂಡಬೇಡ ಕಂಡವರ ಬೇಡಬೇಡ ನರರುಗಳ । ಆಡಬೇಡ ಅನೃತವ ನೋಡಬೇಡ । ಪರಸ್ತ್ರೀಯರ ಗಾಢ ಗಂಭೀರಲಿಂಗ । ಗೂಡಾದ ಬಸವಪ್ರಿಯ ಕೂಡಲ ಚನ್ನಬಸವಣ್ಣನೊಳು ॥ ೪ ॥

ಕಟ್ಟಬೇಕು ಕರಣವ ಮೆಟ್ಟಬೇಕು ಮದವ । ಸುಟ್ಟುರುಹಬೇಕು ಸಪ್ತ ವ್ಯಸನಗಳ । ತೊಟ್ಟಿಲ ಮುರಿದು ಕಣ್ಣಿಯ ಹರಿದು ಆ । ಬಟ್ಟಬಯಲ ಬೆರೆದರೆ ಬಸವಪ್ರಿಯ ಕೂಡಲಚನ್ನಬಸವಣ್ಣ ತಾನೆ ॥ ೫ ॥

ಸಂಜೆ ಮುಂಜಾವೆನ್ನಬೇಡ ಅಂಜಬೇಡ ಅಳುಕಬೇಡ । ಉಂಬರೆ ಉಂಬಲಿಗಂಜಿ ಎನಬೇಡ । ಇಂದಿಗೆ ನಾಳಿಗೆಂದು ಸಂದೇಹಗೊಳಬೇಡ । ಅಂದೊಂದಾದ ಲಿಂಗೈಕ್ಯ ಬಸವ ಪ್ರಿಯ ಕೂಡಲ ಚನ್ನಬಸವನೊಳು ॥ ೬ ॥

ಕಟ್ಟಬೇಡ ಹಣ ಕೊನ್ನ ಮೆಟ್ಟಬೇಡ ಭೂಮಿಯನು । ದಿಟ್ಟಿಸಿ ನೋಡಬೇಡ ಹೆಸ್ಸೆಂಬುದ । ಬಿಟ್ಟು ಇವ ಮೂರು ತೊಟ್ಟಕೊಯಿದರೆ । ನೆಟ್ಟನೆ ಮುಂದೆ ನಿಲ್ವ ಬಸವ ಪ್ರಿಯ ಕೂಡಲಚನ್ನಬಸವ ತಾನೆ ॥ ೬ ॥

ಅಡಿ ಓಡಲಿಬೇಡ ಕೂಡಿ ಆಗಲಬೇಡ । ನೀಡಿ ಮಾಡಿದೆನೆಂದು ಹಮ್ಮು ನುಡಿಯಬೇಡ । ಗಾಡಿ ನೋಡಿಯ ಬಿಟ್ಟ ಗನ್ನಗತುಕ ಹದಿರು ಪದುರ । ನಡದಿದ್ದರೆ ಬಸವಪ್ರಿಯ ಕೂಡಲ ಚನ್ನಬಸವ ತಾನೆ ॥ ೭ ॥

ಆಶನ ವ್ಯಸನವನು ನಿಲಿಸಿ । ಹಸಿವು ತೃಷೆ ಹುಸಿಕಳವನೆ ಬಿಟ್ಟು । ಎಸೆವ ಲಕ್ಷ್ಮನದ ಮುಸುಕನುಗಿದರೆ । ಬಸವಪ್ರಿಯ ಕೂಡಲಚನ್ನಬಸವಣ್ಣ ತಾನೆ ॥ ೮ ॥

ಪಂಚೀಕೃತಿಗಳ ಸಂಚವ ನಿಲಿಸಿ । ಪಂಚವಿಂಶತಿ ತತ್ವವನರಿದು । ಪಂಚೇಂದ್ರಿಯಂಗಳ ಸಂಚಕೆ ಹರಿಯದೆ । ನಿರ್ವಂಚಕನಾಗಿ ನಿಂದರೆ । ಬಸವಪ್ರಿಯ ಕೂಡಲಚನ್ನಬಸವಣ್ಣನ ಶರಣ ॥ ೧೦ ॥

ಷಡಾಧಾರದ ಚಕ್ರದ ಗಡಣೆಯನಂದು । ಷಡಕ್ಷರವನೇಕಾಕ್ಷರವ ಮಾಡಿ । ಒಡನಿಹ ಲಿಂಗ ಒಂದೆಂಬುದನರಿದರೆ ; ದೃಢ ಭಕ್ತರೊಳಧಿಕ ಬಸವಪ್ರಿಯ ಕೂಡಲ ಚನ್ನಬಸವಣ್ಣನ ಶರಣ ॥ ೧೧ ॥

ಆಶೆ ರೋಷವೆಂಬ ದ್ವೇಷವ ಬಿಟ್ಟು । ದೋಷ ದುರಿತವೆಂಬ ಕ್ಲೇಶವ ಹರಿದು । ಸಾಸಿರ ಮುಖದೊಳು ಸೂಸುವ ಮನವ ನಿಲಿಸಿ । ನಿರಾಶಕನಾಗಿ ನಿಂದರೆ ಬಸವಪ್ರಿಯ ಕೂಡಲ ಚನ್ನಬಸವಣ್ಣನ ಶರಣ ॥ ೧೨ ॥

ಕರಿದೈದು ಬಿಳಿದೈದು ಭಾಸುರವೈದು । ಈ ಹದಿನೈದು ಬಗೆಯ ಕರಣವ ಸುಟ್ಟು । ಸುರತದ ಸುಗ್ಗಿ ಕಾಲ ಕಾಮಾದಿಗಳಿರವ ಗೆದ್ದರೆ । ಬಸವಪ್ರಿಯ ಕೂಡಲಚನ್ನಬಸವನ ಶರಣ ॥ ೧೩ ॥

ಆಟಕೋಟಲೆ ಎಂಬ ರಾಟಳ ಮುರಿದು । ನೋಟನುಡಿಗಳೆಂಬ ಸೂತ್ರವ ಹರಿದು । ಸಪ್ತ ವ್ಯಸನ ಮದವೆಂಟ ನೋಟ ಬೇಟದೊಳಾಲಿಂಗದೊಳು ಬೆರೆದಳಿ । ಬಸವಪ್ರಿಯ ಕೂಡಲಚನ್ನಬಸವ ತಾನೆ ॥ ೧೪ ॥

ಅಂಗ ಗುಣಗಳನೆಲ್ಲವ ಅನಲಂಗಿಕ್ಕಿ । ಲಿಂಗ ಗುಣವನೆ ಗಟ್ಟಿವಾಡಿ ಕಂಗಳು ಲಿಂಗ ಕರಸ್ಥಲ ಜಂಗಮವೆಂಬ । ಇಂಗಿತವನರಿದರೆ ಬಸವಪ್ರಿಯ ಕೂಡಲಚನ್ನಬಸವಣ್ಣನ ಶರಣ ॥ ೧೫ ॥

ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ । ಸತ್ಯಶರಣ ಐಕ್ಯರೆಂಬ ಇತ್ತತ್ತ । ಗೊತ್ತು ಬಿಟ್ಟು ನಿರ್ವಯಲ ಲಿಂಗದೊಳು ನಿ । ರ್ಮುಕ್ತನಾಗಿ ನಿಂದರೆ ಬಸವಪ್ರಿಯ ಕೂಡಲಚನ್ನಬಸವಣ್ಣನ ಶರಣ ॥ ೧೬ ॥

ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ । ಪ್ರಸಾದ ಲಿಂಗ ಇರವರಿದು । ವಹಾಲಿಂಗದೊಳು ಬೆರೆದುರೆ ಹರನ ಕೂಡಿದರೆ । ಬಸವಪ್ರಿಯ ಕೂಡಲ ಚನ್ನಬಸವಣ್ಣನ ಶರಣ ॥ ೧೭ ॥

ಈಡ ಪಿಂಗಳ ಸುಷುಮ್ನ ನಾಳದೆ । ಗಾಢಾಗಮ್ಯಗಳನರಿದು । ನೋಡೆ ಬ್ರಹ್ಮರಂಧ್ರವ ತಟಹಾಯಿದು । ಕೂಡೆ ಪಶ್ಚಿಮದೊಳು ಬೆರೆದರೆ ಬಸವಪ್ರಿಯ ಕೂಡಲ ಚನ್ನಬಸವ ತಾನೆ ॥ ೧೮ ॥

ಆಗುತಿವೆ ಉದಯ ಮಧ್ಯಾನ್ಹ ಅಸ್ತಮಯ । ಹೋಗುತಿವೆ ದಿನ ವಾರ ಮಾಸ ಸಂವತ್ಸರ । ಸಾಗುತಿವೆ ಆಯುಷ್ಯ ಭವಿಷ್ಯ ಇವಸೊಳು । ಬೇಗ ತಿಳಿದು ನೀಗಿ ನಿಷ್ಪತ್ತಿಯಾದರೆ । ಬಸವಪ್ರಿಯ ಕೂಡಲ ಚನ್ನಬಸವಣ್ಣನ ಶರಣ ॥ ೧೯ ॥

ಒಳಗು ಹೊರಗೆಂಬೆರಡು ಬಟ್ಟೆಗಳೊಳು । ಸುಳಿದು ಸೂಸುವ ಬೆಳಗನೆ ಕಂಡು । ತಳುವಿಲ್ಲದೆ ತಾಮುಸವನೆ ನೂಕಿ । ಆ ಬೆಳಗಿನೊಳು ಬೆರೆದರೆ ಬಸವಪ್ರಿಯ ಕೂಡಲಚನ್ನಬಸವ ತಾನೆ ॥ ೨೦ ॥

ಇಂದು ನಾಳೆ ಎಂಬ ಸಂದೇಹವ ಬಿಟ್ಟು । ನಿಂದು ನಿಜಾನಂದದಿಂದ ನೋಡಿ । ಹಿಂದುಮುಂದು ಕುಂದುಹೆಚ್ಚು । ದಂದುಗ ಧಾವತಿಯ ಕೊಂದು ನಿಂದರೆ । ಬಸವಪ್ರಿಯ ಕೂಡಲಚನ್ನ ಬಸವನ ಶರಣ ॥ ೨೧ ॥

ಕರಕನಿಷ್ಠೆದ ಕಬ್ಬಿನಕೆ ವರಸರುಷ ಮುಟ್ಟಲು ಚಿನ್ನವಾಗದೆ । ಗುರುಕಾರುಣ್ಯವ ಪಡೆದವರು ಎಮ್ಮ ಶರಣರೊಳು ಬೆರೆದರೆ । ಬಸವಪ್ರಿಯ ಕೂಡಲ ಚನ್ನಬಸವ ತಾನೆ ॥ ೨೨ ॥

ಅವಿರಳ ಲಿಂಗವ ಕಂಡೆಹೆನೆಂದು ಅವರಿವರಿಗೆ ಏನ ಕೇಳುವಿರಿ । [illegible] ಭವರಹಿತ ಗುರುಲಿಂಗ ಜಂಗಮದೊಳು । ವೇಧಿಸಿತು ಪ್ಪಲ್ಲಿಯೆ । ಬಸವಪ್ರಿಯ ಕೂಡಲ

ಕೇಡೆ ತುಂಬೆಯ ಬಿಡದೆ ನಾಗಿಲುಗಳು । ಲೀಲೆಯಿಂ ಸೂಕ್ಷ್ಮತನುತಿದೆ । ಈ ರೂಢಿಯೊಳಗೆಮ್ಮ ಶರಣರಿನಲ್ಲಿ । ತೃಪ್ತಿಯು ಬೆಳಗು ಹೇಳುವಪ್ರಿಯ ಕೂಡಲಚನ್ನಬಸವ ತಾನೆ ॥ ೨೪ ॥

ಹಾಲ ಸಾಗರದೊಳೋಲಾಡುತಿರ್ದ್ದ । ಚಿಲಿಮೆಯ ನೀರಿಗೆ ಹರಿಯ ಬೇಡ । ಮೇಲುಗಿರಿ ಶಿಖರದ ಪಟ್ಟಿವುದಲಿ ಲೋಲಾಡುತಿರೆ । ಬಸವಪ್ರಿಯ ಕೂಡಲ ಚನ್ನಬಸವಣ್ಣಾ ತಾನೆ ॥ ೨೫ ॥

ಮೂರು ಮಡಿಗೆ ಒಂಬತ್ತು ದ್ವಾರ । ಬೇರೆ ಅರು ಸ್ಥಾನಗಳಿರುತಿಪ್ಪವು । ಈರಾರು ಇಪ್ಪತ್ತೈದ ವಿೂರಿ ತೋರುವ ಘನವೊಂದು । ಬಸವಪ್ರಿಯ ಕೂಡಲಚನ್ನಬಸವಣ್ಣನರಿದರೆ ॥ ೨೬ ॥

ಈಯನುವನರಿದು ಲಿಂಗವ ನೋಡಿ ಕೂಡೆಹನೆಂದರೆ । ಮನವನೆಲ್ಲವನಿರಿಸಿ ಇರಬೇಕು । ಈ ಘನಪರಾಕ್ರಮವುಳ್ಳ ಭಕ್ತರ ತನುವೆ ಲಿಂಗ । ಬಸವಪ್ರಿಯ ಕೂಡಲ ಚನ್ನಬಸವಣ್ಣನೊಳು ॥ ೨೭ ॥

ಅಂಗ ಲಿಂಗ ಸಂಬಂಧವಾದ ಬಳಿಕ ಮನ । ಹಿಂಗದಿಪ್ಪುದು ತನುವನು ಬಿಟ್ಟು । ಸಂಗ ಸುಖ ಶರಣರ ಗೋಷ್ಠಿಯೊಳು ಇಪ್ಪಾತ । ಮಂಗಳಾತ್ಮಕ ಬಸವಪ್ರಿಯ ಕೂಡಲ ಚನ್ನಬಸವಣ್ಣನ ಶರಣ ॥ ೨೮ ॥

ಜಪ ತಪ ನೇಮ ನಿತ್ಯದಿಂದ । ನಿಶ್ಚಿಂತರೂಪನ ಕಂಡಿಹೆನೆಂಬಿರಿ । ಆ ಪರಾತ್ಪರದೊಳಗಾಡುವ ಶರಣರ ಪಾದನಖದೊಳು ಬೆರೆಯೆ । ಬಸವಪ್ರಿಯ ಕೂಡಲ ಚನ್ನಬಸವನಹನು ॥ ೨೯ ॥

ಹಡಪದಪ್ಪಣ್ಣಗಳ ಮುಂತ್ರಗೋಪ್ಯ.

ಆತ್ಮಕೇಳಾನಂದ ಜ್ಯೋತಿರ್ಲಿಂಗದೊಳು । ನಿತ್ಯಮುಕ್ತನಾದ ನಿಜ ಶರಣನನುವ ॥ ಪಲ್ಲ ॥

ನಾದ ಬ್ರಹ್ಮದಿಂದ ನಮಃ ಶಿ । ವಾಯುವೆಂಬ ಪಂಚಾಕ್ಷರಿ ಉದಯ । ಪಂಚಾಕರಣೆ ಮನಕ್ಕೆ ರೂಪು । ಶಕ್ತಿರೂಪಾಗಿ ಚಿತ್ತ ಸಂಚಲಿಸಲಿಕೆ । ದೊಳು ಬೆರೆದರಿ । ಬಸವಪ್ರಿ ಶವೆಲ್ಲವು ॥ ೧ ॥

ಅಂಗ ಗುಣಗಳನೆಲ್ಲವ ಅನಲಂಗಿ ರು । ಇದರ ಭೇದಾದಿಭೇದವನರಿ ಕಂಗಳು ಲಿಂಗ ಕರಸ್ಥಲ ಜಂಗಮವೆಂಬ ನಾದಿಯೆಂದರೆ ನಿರೂಪು । ಅಂತ್ಯವೆಂ ಕೂಡಲಚನ್ನಬಸವಣ್ಣನ ಶರಣ ॥ ೨ ॥

ಅಂಗ ಭವಿಯಾಗಿ ಬಂದ ಬದ್ಧ ಮಲಕಾಯಕ್ಕೆ । ಲಿಂಗಬರಲು ನಿತ್ಯವೆಂದು ಕಂಡೆ । ಜಂಗಮದ ಶೇಷ ಪಾದಾಂಬುವೆ ಜೈತನ್ಯ । ಹಿಂಗದೆ ಲಿಂಗೈಕ್ಯನಾದೆ ನಾನು ॥ ೩ ॥

ಕಡೆನಡುವಿಲ್ಲದ ಘನವು । ಹಿಡಿಹಿನಲಿ ಬಂದಿರಲು । ಮೃಡ ತನ್ನ ಲೀಲೆಗೆ ಮೂಂಡಾದನು । ಬಿಡದೆ ನೋಡುತ್ತ ನೋಡಲಾಗಿ । ಎಡೆವಿಡದೆ ಒಡನಿಹ ಘನವೆಂದರಿದೆನು ॥ ೪ ॥

ದ್ವಿದಳ ವಲಯದ ಕೆಳಗೆ ಷೋಡಶದಳ । ನಡುವಂತ್ಯದಲ್ಲಿ ನಾದ ಬ್ರಹ್ಮ । ಆ ನಾದಬ್ರಹ್ಮ ತಾನೋಂಕಾರ ಒಂದಾಗೆ । ಅನಾದಿ ಅಂಗವ ಕಂಡು ಸ.ಖಿಯಾದೆನು ॥ ೫ ॥

ಆಧಾರಒಡಿಯಾಣ ಜಾಲೇಂದ್ರದಿಂಮೇಲೆ । ಸ್ವಾಧಿಷ್ಠದನುವ ಜೇವಡೆದನು । ವೇಧಿಸಿ ಮಣಿಪೂರಕಗ್ನಿಸರವನೆ ಹೂಡಿ । ವೈದ್ಯರುಗಳನೆಲ್ಲ ವೇಧಿಸುತಿದ್ದೆನು ॥ ೬ ॥

ಆನಂದದಿಂದನಾಹತದ ಮೇಲಣ ಕಾಲ । ಜ್ಞಾನಾಗ್ನಿಯಿಂದದಂ ಕಡಿದು ಬಿಸುಟು । ಮೇಲೆ ವಿಶುದ್ಧಿಯ ಸ್ಥಾನದಲ್ಲಿಯೆ ನಿಂದು । ಭಾನುವಿನ ಬೆಳಗಿನೊಳಗೋಲಾಡಿದೆ ॥ ೭ ॥

ಶತಕೋಟಿ ಸೋಮ ಸೂರ್ಯ ಬೆಳಗಿನೊಳಗೆ । ಪಥವಿಡಿದು ಬರಲು ಆಜ್ಞೆಯ ಕಂಡೆನು । ಸತಿಯಿಲ್ಲ ಪತಿಯಿಲ್ಲವೆಂದೆನುತ ನಿಂದಿರಲು । ಬೇರೊಂದು ಪಥವಿರಲು ಕಂಡು ನಾ ಬೆರಗಾದೆನು ॥ ೮ ॥

ಚಂದ್ರಕಾಂತದ ಶಿಲೆಯಂತಿಪ್ಪ ದೇಹದೊಳು ಇ । ನ್ನೊಂದು ಕಾಳಿಕೆಯ ಕಳೆಯಲುಂಟೆ । ಸಂದು ಸಂಶಯವಳಿದು । ಹಿಂದು ಮುಂದನೆ ಹರಿದು ನಿಂದ ನಿಜೈಕ್ಯಂಗೆ ಒಂದುವಿಲ್ಲ ॥ ೯ ॥

ಆಧಾರವನೊತ್ತಿ ಊರ್ಧ್ವ ಮುಖವನೆ ಮಾಡಿ । ಮೇದಿನಿಯಪ್ಪ ಅಗ್ನಿದಗ್ಧವಮಾಡಿ । ಶೋಧಿಸಿ ಕರ್ಪೂರದಂತಿಪ್ಪ ದೇಹದೊಳು । ವೇಧಿಸಿತು ಗುರುಕರುಣವೆಂಬ ಜ್ಯೋತಿ ॥ ೧೦ ॥

ಸ್ಥೂಲ ತನುವಿಲಿ ಇಪ್ಪ ನವ ಬಾಗಿಲುಗಳು । ಲೀಲೆಯಿಂ ಸೂಕ್ಷ್ಮತನುವಿನಲಿ ಪ್ರಾಣವು । ಮೇಲೆ ಕಾರಣ ತನುವಿನಲ್ಲಿ । ತೃಪ್ತಿಯ ಬೆಳಗು ಹೇಳುವರಿನ್ನಾರಿಂಗಳವಲ್ಲವು ॥ ೧೧ ॥

ನವ ಬಾಗಿಲಂಗಳಿಗೆ ನವಲಿಂಗ ಕಾವಿಲು। ಕವಿವ ತಮುಂಧಕ್ಕೆ ದಿವಾ
ಕರನು। ಅವರೊಳಗಿಹ ಪಡುಸ್ಥಲ ಬ್ರಹ್ಮವ ನೋಡೆ। ಅವಿರಳವಾಗಿ ತೋ
ರಿದ ಘನವು ॥ ೧೨ ॥

ತ್ರಿವಿಧ ಅಂಗತ್ರಯಕೆ ತ್ರಿವಿಧ ಲಿಂಗತ್ರಯ। ತ್ರಿವಿಧ ಸಂಗತ್ರಯ ಏಕ
ವಾಗೆ। ತ್ರಿವಿಧವನರಿದು ತ್ರಿವಿಧವರ್ಪಿತವಾಡೆ। ಅವನಿಯೊಳಾತಂಗೆ ಎಣೆ
ಇಲ್ಲವು ॥ ೧೩ ॥

ನಾಹಮ್ಮು ಕೋಹಮ್ಮು ಸೋಹಮ್ಮು। ಎಂಬ ಭ್ರಮೆಯಳಿದು। ತಾನು ತಾನಾದ ನಿಜ ಶರಣನು। ನಾನು ನೀನೆಂಬ್ಹ ಅನುಸರ್ಧಾನವನು ವಿೂರಿ ತಾನಾದ। ತ್ರಿಕೂಟದಲ್ಲಿಯೆ ಬೆರೆದನು ॥ ೧೪ ॥

ನಡೆಗೆಟ್ಟು ನುಡಿಗೆಟ್ಟು ಒಡಲು ಹಾಳಾಯಿತು। ಅಡಿ ಮುಡಿ ಮಧ್ಯ
ವದಕಿಲ್ಲವು। ಕಡೆಗಣ್ಣ ಕೆಂಪಾಗಿ ನಡುಗಣ್ಣ ಬಿಳಿದಾಗಿ + ಒಡನಿಪ್ಪ
ಕಾಳಕೆ ಬೆಂದು ಕಡ್ಲಿಂಡಿಯಾಯಿತು ॥ ೧೫ ॥

ಕಾಯಕರಣಾದಿಗಳ ಹೇಳಿಹೆನೆಂದರೆ। ಭಾವಿಸಲು ಕೋಟಾನು
ಕೋಟಿಯುಂಟು। ಆವುದರೊಳಿಲ್ಲದ ಪರಬ್ರಹ್ಮವನೆ ತಂದು। ದೇವ
ತಾನಾಗಿ ನುಡಿವುತಿರ್ದೆನು ॥ ೧೬ ॥

ಶರಣರ ಪರಿಯೆಂತಿಹುದೆಂದರೆ। ಕರಿಗಳನೆಲ್ಲ ಒಂದು ಹುಲಿ ನುಂಗಿ
ತು। ತರುಗಂಪರಂಗಳನು ರವಿಕಿರಣ ನುಂಗಿತು। ತರುಮರಾದಿಯನೆಲ್ಲ
ಉರಿ ನುಂಗಿತು. ॥ ೧೭ ॥

ಬಣ್ಣಗಳನುಟ್ಟು ಬಹ ಹೆಣ್ಣುಗಳನೆ ಕಂಡು । ಕಣ್ಣುಗೆಡಿಸಿ ಕಾಡಿ
ಕೊಲುತಿರ್ದೆನು। ಇವು ನಮ್ಮುಸೊಮ್ಮು ಎಂದು। ಅವ ಧ್ಯಾನಿಸಿಕೊಂಡಿಪ್ಪ
ಅಣ್ಣಗಳೆಲ್ಲರು ಅಳುತಿರ್ದರು ॥ ೧೮ ॥

ಪೂರ್ವ ಪಶ್ಚಿಮ ದಕ್ಷಿಣ ಉತ್ತರಭಾಗದಲಿ। ಮೇರುವಿನ ತುದಿಯ
ಲಿ। ಘನಕೆಘನ ಪಾರವೇಧಿಸಿ ನೋಡಿ ಪಶ್ಚಿಮ ನಾಳದೊಳು। ಆರೈದು
ನೋಡೆ ಅಮೃತವಿಪ್ಪದು ॥ ೧೯ ॥

ಅಮೃತವಾರೋಗಣೆಯ ಯುವತಿಯರ ಸಹಿತುಂಡು। ಭವವ ದಾಂ
ಟಿ ಧಾಗ್ಯನಾಗಿ ನಿಂದು । ಭುವನಕ್ಕೆ ತಾನಾಗಿ ತಾನಿಲ್ಲದವನಾಗಿ । ಶಿವ
ನೊಳಗೆ ಬೆರೆದು ಬೇರಿಲ್ಲ ಶರಣ ॥ ೨೦ ॥

ಒಂದಾದುದನಂದರೆ ಎರಡೆಂಬುದ ಬಲ್ಲ । ಎರಡರಿಂದ ಮುಂದೆ
ಮೂರಪ್ಪುದು। ಮೂರರಿಂದ ನಾಲ್ಕರ ಭೇದವನು। ಮೂರೆರಡನಿಳುಹಿ
ನಿಂದಾತ ಬಲ್ಲ ॥ ೨೧ ॥

ನಾನೆಂಬುದೆ ಅರು ನೀನೆಂಬುದೆ ಏಳು । ತಾನು ಶುದ್ಧಾತ್ಮನೆಂ
ಬುದೆ ಎಂಟವು । ಆ ನಾದ ಸಂಭ್ರಮದ ಶೃಂಗಾರ ಒಂಭತ್ತು । ಜ್ಞಾನ
ಪರತತ್ವವೆಂಬುದೆ ಹತ್ತುವು ॥ ೨೨ ॥

ಹೆಸ್ನೊಂದು ಎಂದರೆ ತನ್ನನೆ ನುಂಗಿತ್ತು। ಉನ್ಮನಿಯ ಸ್ಥಾನದಲಿ
ನಿನ್ನ ಬೆಳಗು। ಕನ್ನಡಿಯೊಳಗಣ ಪ್ರತಿಬಿಂಬದಂತೆ। ಭಿನ್ನವಿಲ್ಲದೆ ಸೂಕ್ಷ್ಮ
ವ ಬೆರೆಯಿತು ॥ ೨೩ ॥

ನಿತ್ಯವೆಂದರಿದಂಗೆ ತತ್ವವೆಂಬುದು ಹುಸಿಯು । ಎತ್ತ ನೋಡಿದರೆ
ತಾನಲ್ಲದನ್ಯವಿಲ್ಲ । ವ್ಯರ್ಥವಪ್ಪ ದೇಹ ನಿತ್ಯವಾದುದ ಕಂಡು। ಕರ್ತೃ ತಾ
ನಾಗಿ ಬೆರಗಾದನಣ್ಣ ॥ ೨೪ ॥

ನೀರು ನೀರನೆ ಕೂಡಿ ಮೇರೆದಪ್ಪಿದವೊಲು। ನೀರು ಬಲಿದು ಆಲಿ
ಯಾದ ತೆರದಿ। ಆಲಿ ತಾ ಕರಗಿ ನೀರಾದಂತೆ ಲಿಂಗೈಕ್ಯ। ಒರಂತೆ ಒಂ
ದಾದ ನಿಜ ಶರಣನು ॥ ೨೫ ॥

ಆರೈದು ನೋಡೆ ಸುರಾಳ ನಿರಾಳದಲಿ। ಭೇರಿನಾದದ ರಭಸ ನಿಲ
ಬಾರದು। ಊರಡಗಿ ಉಲುಹಿತಗಿ ಭೇರಿನಾದವು ನಿಂದು। ಭೂರಿದೈವಂಗ
ಳಿಗೆ ಪತಿಯಾದನು ॥ ೨೬ ॥

ಬಯಲ ಲಿಂಗವ ಒಂದು ನೆವಕೆ ರೂಢನೆ ತೊಟ್ಟು। ಭುವನದೊಳು
ತನ್ನ ಲೀಲೆಯನೆ ನಟಿಸಿ। ಭವ ರಹಿತ ಬಸವಪ್ರಿಯ ಕೂಡಲಚನ್ನಬಸವ
ನೊಳು। ಅವಿರತವಾಗಿ ತಾ ಬೆರೆದ ಶರಣ ॥ ೨೭ ॥

ಪಾದೋದಕ.

(ಲೇಖಕ— ರಾ। ಬ। ಷ. ಗು. ಹಳಕಟ್ಟಿ ಬಿ. ಏ. ಎಲ್. ಎಲ್. ಬಿ.)

ಶಿವಾನುಭವ ಪತ್ರಿಕೆಯ ಹೋದ ತಿಂಗಳಿನ ಸಂಚಿಕೆಯಲ್ಲಿ ವೀರಶೈವ ಸಮಾಜದಲ್ಲಿಯ ಒಬ್ಬ ಪ್ರಮುಖ ಮಠಾಧಿಕಾರಿಗಳು ಪಾದೋದಕವನ್ನು ಕುರಿತು ಆಕ್ಷೇಪಿಸಿದನ್ನು ಶ್ರೀಯುತ ಮಲ್ಲಿಕಾರ್ಜುನಪ್ಪ ಮಾವಿನಿ ಇವರು ಒಂದು ಲೇಖ ಮೂಲಕ ಪ್ರಕಟಿಮಾಡಿದ ವಿಷಯವು ವಾಚಕರ ಸ್ಮರಣೆಯಲ್ಲಿರಬಹುದು. ಈ ತರದ ಆಕ್ಷೇಪಗಳು ಒಂದು ವೇಳೆ ಹಿಂದಿನ ಕಾಲದಲ್ಲಿ ಎತ್ತಲ್ಪಟ್ಟಿದ್ದರೆ ಸಮಾಜದಲ್ಲಿ ಕ್ಷೋಭವು ಉತ್ಪನ್ನವಾಗದೆ ಇರುತ್ತಿದ್ದಿಲ್ಲ. ಆದರಲ್ಲಿ ವೀರಶೈವ ಮಠಾಧೀಶರಂತೂ ಇಂಥ ಸಂಗತಿಯನ್ನು ತೀವ್ರವಾಗಿ ನಿಷೇಧಿಸದೆ ಇರುತ್ತಿದ್ದಿಲ್ಲ. ವೀರಶೈವರಲ್ಲಿ ಪಾದೋದಕದ ಮಹತ್ವವು ಇಷ್ಟು ನಿಗಿಲಾದದ್ದದೆ. ಹೀಗೆ ಪಾದೋದಕ ದೂಷಣೆಮಾಡುವದು ಮಹತ್ಪಾಪವೆಂದು ಶಿವಶರಣರ ಉಕ್ತಿಗಳಿವೆ. ಆದರೆ ಈಜೆಗೆ ವಚನಶಾಸ್ತ್ರದ ಅಭ್ಯಾಸವು ನಿಂತುಹೋಗಿರುತ್ತದೆ. ಷಟ್ ಸ್ಥಲ ಮತ್ತು ಅಷ್ಟಾವರಣ ಇವುಗಳ ಮರ್ಮವನ್ನು ತಿಳಿದವರು ಅತ್ಯಂತ ವಿರಳರಾಗಿದ್ದಾರೆ. ಆದ್ದರಿಂದ ವೀರಶೈವರ ವಿಧಿಗಳನ್ನು ದೂಷಿಸುವವರು ಈಜೆಗೆ ಅನೇಕರು ಉತ್ಪನ್ನರಾಗಹತ್ತಿದ್ದಾರೆ. ಅವರಲ್ಲಿ ಮಠಾಧೀಶ್ವರರು ಪ್ರಮುಖ ಭಾಗವಹಿಸುತ್ತಿರುವದು ಸಮಾಜದ ದುರ್ದೈವವಾಗಿದೆ.

ವಚನಶಾಸ್ತ್ರದ ಆಳವಾದ ಅಭ್ಯಾಸವು ವೀರಶೈವ ಸಮಾಜದಲ್ಲಿ ಈಗಲೂ ಇರುವದಿಲ್ಲ. ಇದರಿಂದ ವೀರಶೈವ ಆಚರಣೆಗಳಲ್ಲಿ ಅಡಕವಾಗಿರುವ ಗೂಢತತ್ವಗಳ ಅರಿವು ಇದ್ದವರು ಬಹು ಸ್ವಲ್ಪ ಜನರು. ಹಳೇ ಸಾಂಪ್ರದಾಯದ ಮಠಾಧೀಶ್ವರರೂ ಭಕ್ತರೂ ಈ ಆಚರಣೆಗಳನ್ನು ಅಂಧತೆಯಿಂದ ಆಚರಿಸುತ್ತಬಂದಿದ್ದಾರೆ. ಆದರೆ ಈಬಗ್ಗೆ ಚಿಕಿತ್ಸಾಬುದ್ಧಿಯುಳ್ಳವರು ಸಮಾಜದಲ್ಲಿ ಉಂಟಾಗುತ್ತಲಿದ್ದಾರೆ. ಇದು ಸಮಾಜದ ಪ್ರಗತಿಯೆಂತಲೇ ನಾವು ಭಾವಿಸಬೇಕು. ಆದರೆ ಈ ಆಕ್ಷೇಪಕರು ಇಂಥ ಆಚರಣೆಗಳ ಉದ್ದೇಶಗಳೇನೆಂಬದನ್ನು ಮೊದಲು ತಿಳಿಯಲು ಪ್ರಯತ್ನಿಸಬೇಕು. ಅವರು ಏನನ್ನೂ ತಿಳಿದುಕೊಳ್ಳದೆ ಅವುಗಳನ್ನು ದೂರುವದು

ಯುಕ್ತವಾದುದಲ್ಲ. ಈ ವಿಷಯದ ಹೊಣೆಗಾರಿಕೆಯು ಮಠಾಧಿಕಾರಿಗಳ ಮತ್ತು ಸುಶಿಕ್ಷಿತರ ಮೇಲೆ ವಿಶೇಷವಾಗಿರುತ್ತದೆ.

ಪಾದೋದಕವೆಂದರೆ ಒಬ್ಬ ಪೂಜ್ಯ ಮನುಷ್ಯನ ಪಾದವನ್ನು ತೊಳೆದ ನೀರು ಎಂದು ಸಾಮಾನ್ಯವಾಗಿ ಹಿಂದೂ ಜನರಲ್ಲಿ ಭಾವಿಸಲ್ಪಟ್ಟಿರುತ್ತದೆ. ದೇವಾಲಯಗಳಲ್ಲಿರುವ ದೇವರ ಮೇಲೆ ಹಾಕಿದ ನೀರು ಹೇಗೆ ತೀರ್ಥವೆಂದು ತಿಳಿದು ಅದು ಭಕ್ತಜನರಿಂದ ಗ್ರಹಿಸಲ್ಪಡುತ್ತದೆಯೋ ಅದರಂತೆಯೇ ಸ್ವಾಮಿಗಳ ಪಾದದಿಂದಾದ ತೀರ್ಥವು ಪೂಜ್ಯವಾದುದೆಂದು ಭಾವಿಸಲ್ಪಟ್ಟು ಅದು ಜನರಿಂದ ಸೇವಿಸಲ್ಪಡುತ್ತದೆ. ಹೂಲಿಯ ಹಿರೇಮಠದ ಶ್ರೀಚರಮೂರ್ತಿಗಳವರು ಪಾದೋದಕದ ಬಗ್ಗೆ ಇಂಥ ತಿಳುವಳಿಕೆಯನ್ನು ಮಾಡಿಕೊಂಡು ತಮ್ಮ ಪದಗಳನ್ನು ರಚಿಸಿದಂತೆ ತೋರುತ್ತದೆ. ಆದರೆ ವೀರಶೈವರಲ್ಲಿರುವ ಪಾದೋದಕದ ಅರ್ಥವನ್ನು ಅವರು ತಿಳಿದುಕೊಂಡಂತೆ ತೋರುವದಿಲ್ಲ. ಅದರಲ್ಲಿ ಒಂದು ವಿಶೇಷತರದ ಅರ್ಥವಿದೆ. ಅದರಂತೆಯೇ ಅಷ್ಟಾವರಣಗಳೆಲ್ಲವುಗಳಿಗೂ ವಿಶೇಷಾರ್ಥಗಳಿವೆ. ಆವುಗಳನ್ನು ತಿಳಿಯದಹೊರತು ಅಷ್ಟಾವರಣಗಳ ಆಚರಣೆಯು ವೀರಶೈವನಿಗೆ ಪ್ರಾಪ್ತವಾಗಲಾರದು.

ಅಷ್ಟಾವರಣಗಳ ಸಾಧನೆಯು ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಲ್ಲಿಲ್ಲ ನಡೆಯುತಕ್ಕದ್ದು. ಅವುಗಳ ವಿವರಣೆಯು ವಚನಶಾಸ್ತ್ರಸಾರ ಭಾಗ ೩ ಪೂರ್ವಾರ್ಧ ಈ ಗ್ರಂಥದ ಪುಟ ೭೮ ರಿಂದ ೮೩ ವರೆಗೆ ಇರುವ ವಚನಗಳಲ್ಲಿ ಬಂದಿರುತ್ತದೆ. ಅದರಲ್ಲಿಯ ವಚನಗಳನ್ನು ವಾಚಕರು ಅವಶ್ಯವಾಗಿ ಅವಲೋಕಿಸತಕ್ಕದ್ದು. ಆ ರೀತಿಯಾಗಿ ಅಷ್ಟಾವರಣಗಳನ್ನು ನಡಿಸಿದ್ದಾದರೆ ಭಕ್ತನಲ್ಲಿ ಷಡ್ ಲಿಂಗಗಳು ಪ್ರಜ್ವಲಿಸಹತ್ತುವವು. ಮತ್ತು ಅವನಲ್ಲಿ ಲಿಂಗದ ವಿಕಾಸವು ಉಂಟಾಗುವದು. ಮತ್ತು ಕಡೆಗೆ ಭಕ್ತನು ಲಿಂಗಾಂಗ ಸಾಮರಸ್ಯವನ್ನು ಹೊಂದುವನು. ಈ ರೀತಿಯಾಗಿ ವೀರಶೈವರ ಅಷ್ಟಾವರಣಗಳ ರಚನೆ ಇದೆ.

ಈ ಅಷ್ಟಾವರಣಗಳಿಗೆ ಮೂಲವಾದವುಗಳು ಗುರು ಲಿಂಗ ಜಂಗಮ ಇವುಗಳೇ ಇರುತ್ತವೆ. ಇವುಗಳ ಮರ್ಮವನ್ನು ಭಕ್ತನು ಮೊದಲು ತಿಳಿದುಕೊಳ್ಳಬೇಕು. ಇವುಗಳು ಕೇವಲ ಬಾಹ್ಯಸ್ಥಿತಿಯಲ್ಲಿ ನಮಗೆ ತೋರುವ ವ್ಯಕ್ತಿಗಳು ಅಥವಾ ಆಕೃತಿಗಳು ಇರುವದಿಲ್ಲ. ಅವುಗಳು ಕೇವಲ ಬಾಹ್ಯ

ಆವರಣಗಳು. ಆದರೆ ಈ ಬಾಹ್ಯ ಆವರಣಗಳೆಲ್ಲವು ಅಂತರಂಗಕ್ಕೆ ಸಂ
ಬಂಧಪಡಲು ಅವುಗಳಿಗೆ ಅಂತರಷ್ಟಾವರಣಗಳೆನ್ನುವರು. ಗುರುವು
ಸ್ಥೂಲಶರೀರಕ್ಕೆ, ಲಿಂಗವು ಸೂಕ್ಷ್ಮಶರೀರಕ್ಕೆ, ಮತ್ತು ಜಂಗಮವು ಕಾರ
ಣಶರೀರಕ್ಕೆ, ಸಂಬಂಧಪಡುತ್ತವೆ. ಈ ಮೂರರ ಮೂಲಕ ಮನುಷ್ಯನಿ
ಗಿರುವ ತ್ರಿವಿಧ ಶರೀರಗಳು ವಿಕಾಸ ಹೊಂದುತ್ತ ಹೋಗುತ್ತವೆ. ಈ ಪ್ರ
ಕಾರ ಅವುಗಳಲ್ಲಿ ವಿಕಾಸವು ಉಂಟಾಗಲು ಅವು ಪರಸ್ಪರ ಸಾಮರಸ್ಯ
ವನ್ನು ಹೊಂದುವ ಪರಿಸ್ಥಿತಿಯು ಒದಗುವದು. ಈ ಸ್ಥಿತಿಯೇ ಅತ್ಯಂತ
ಶ್ರೇಷ್ಠವಾದದ್ದು. ಗುರು ಲಿಂಗ ಜಂಗಮ ಇವುಗಳ ಸಂಬಂಧ ಮತ್ತು
ಭಕ್ತನಲ್ಲಿ ಅವುಗಳ ಸಾಮರಸ್ಯ ಇವುಗಳನ್ನು ತೋರಿಸುವದೇ ಪಾದೋದಕ
ವಿಧಿಯ ಮುಖ್ಯ ಉದ್ದೇಶವಿರುತ್ತದೆ.

ಪಾದೋದಕವನ್ನು ಸಿದ್ಧಪಡಿಸುವಲ್ಲಿ ಮೇಲ್ನೋಡ ಎಲ್ಲ ವಿಷಯ
ಗಳು ಭಕ್ತನ ಮನಸ್ಸಿನಲ್ಲಿ ಬಿಂಬಿಸುವಂತೆ ಅದರ ರಚನೆ ಇರುತ್ತದೆ.
ಇದರ ತಿಳುವಳಿಕೆಯು ಇಲ್ಲದ ಮೂಲಕ ಇಂಥ ಪ್ರಮಾದಗಳು ವೀರ
ಶೈವ ಸಮಾಜದಲ್ಲಿಯ ಮಹನೀಯರಿಂದ ಉಂಟಾಗಹತ್ತಿರುತ್ತವೆ. ಇದು
ವಚನಶಾಸ್ತ್ರವನ್ನು ಅರಿಯದ್ದರ ಪರಿಣಾಮವಾಗಿದೆ.

ಪಾದೋದಕಕ್ಕೆ ಗುರು ಲಿಂಗ ಜಂಗಮದ ಸಂಬಂಧವಿದ್ದು ಅದನ್ನು
ಮೊದಲು ಅರಿಯುವದು ಅವಶ್ಯವು. ಇದು ವಚನಶಾಸ್ತ್ರಸಾರ ಭಾಗ
೩ ಪೂರ್ವಾರ್ಧ ಪುಟ ೨೦೨ ರಿಂದ ೨೨೨ ರ ವರೆಗೆ ವಿವೇಚಿಸಲ್ಪಟ್ಟಿರು
ತ್ತದೆ. ಅದರಲ್ಲಿಯ ವಚನಗಳನ್ನು ವಾಚಕರು ಅವಶ್ಯವಾಗಿ ನೋಡ
ಬೇಕು. ಆದರೆ ಇಲ್ಲಿ ನಾವು ಕೆಲವು ವಚನಗಳ ಆವಶ್ಯಕ ಭಾಗಗ
ಗಳನ್ನು ಮಾತ್ರ ಆಯ್ದು ಉದಹರಿಸಿದ್ದೇವೆ. ಅವುಗಳಿಂದ ಗುರು ಲಿಂಗ
ಜಂಗಮದ ಪರಸ್ಪರ ಸಂಬಂಧವು ವಾಚಕರಿಗೆ ತಿಳಿಯದೆ ಇರಲಾರದೆಂದು
ನಾವು ಭಾವಿಸಿದ್ದೇವೆ.

೧ ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ (ಪುಟ ೨೦೪
ವಚನ ೭೪)

೨ ಗುರುವೆಂದಡೆ ತನು, ಲಿಂಗವೆಂದಡೆ ಆತ್ಮ, ಜಂಗಮವೆಂದಡೆ
ಆತ್ಮನ ಅರಿವು (ಪುಟ ೨೦೪ ವಚನ ೭೪)

೩ ಕಾಯವಿದ್ದು ಕಾಂಬುವುದು ಗುರುಸ್ಥಲ, ಜೀವವಿದ್ದು ಕಾಂಬು
ವುದು ಲಿಂಗಸ್ಥಲ, ಭಾವವಿಲ್ಲ ಕಾಂಬುದು ಜಂಗಮಸ್ಥಲ.
(ಪುಟ ೨೦೪ ವಚನ ೭೯)

೪ ತನುವಿಡಿದು ಕಾಂಬುದು ಗುರುವಿನ ಭೇದ, ಮನವಿಡಿದು ಕಾಂ
ಬುದು ಲಿಂಗದ ಭೇದ, ಜ್ಞಾನವಿಡಿದು ಕಾಂಬುದು ಜಂಗ
ಮದ ಭೇದ. (ಪುಟ ೨೦೪ ವಚನ ೭೦)

೫ ಗುರುವೇ ಆಂಗ, ಲಿಂಗವೇ ಮನ, ಜಂಗಮವೇ ಪ್ರಾಣವಯ್ಯ.
ನಾದವೇ ಗುರು, ಬಿಂದುವೇ ಲಿಂಗ, ಕಳೆಯೇ ಜಂಗಮ
ವಯ್ಯ. (ಪುಟ ೨೦೯ ವಚನ ೮೧)

ಈ ಪ್ರಕಾರ ಮನುಷ್ಯನ ಮೂರೂ ಶರೀರಗಳಲ್ಲಿ ಗುರು ಲಿಂಗ
ಜಂಗಮಗಳು ಬೇರೆ ಬೇರೆ ಪರಿಣಾಮಗಳನ್ನು ಮಾಡುತ್ತವೆ. ಈ ಆವರ
ಣಗಳ ಆಚರಣೆಯ ಮೂಲಕ ಈ ಶರೀರಗಳು ಉತ್ಕೃಷ್ಟತೆಯನ್ನು ಹೊಂದು
ತ್ತಲೇ ಇರುತ್ತವೆ. ಈ ಪ್ರಕಾರ ಅವು ವಿಕಾಸ ಹೊಂದುವಲ್ಲಿ ಅವು
ಪರಸ್ಪರವಾಗಿಯೂ ಪರಿಣಾಮ ಮಾಡುತ್ತವೆ. ಈ ಬಗ್ಗೆ ವಚನಕಾರರು
ಹೇಳುವದೇನೆಂದರೆ—

೧ ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು.
ಆಚಾರವೇ ಲಿಂಗವೆಂದು ಅರುಹಿದನಯ್ಯ ಬಸವಣ್ಣನು.
ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯ ಬಸವಣ್ಣನು. ಆ
ಅರಿವೆ ಜಂಗಮವೆಂದರುಹಿದನಯ್ಯ ಬಸವಣ್ಣನು. (ಪುಟ೨೦೪
ವಚನ ೭೩)

೨ ಮೃದು ರುಚಿ ರೂಪು ಕೂಡಿ ಸಕ್ಕರೆಯಾಯಿತ್ತು. ಗುರು
ಲಿಂಗ ಜಂಗಮ ಕೂಡಿ ವಸ್ತುವಾಯಿತ್ತು. ಮೃದುವಿನಂತೆ
ಗುರು, ರುಚಿಯಂತೆ ಲಿಂಗ, ರೂಪಿನಂತೆ ಜಂಗಮ. (ಪುಟ
೨೧೦ ವಚನ ೮೮)

೩ ತನ್ನ ತಾನರಿದಡೆ ತನ್ನರಿವೇ ಗುರು, ತಾನೇ ಲಿಂಗ, ತನ್ನ
ನಿಷ್ಪತ್ತಿಯೇ ಜಂಗಮ. (ಪುಟ ೨೧೦ ವಚನ ೮೯)

೪ ಪೂಜಿಸಿ ಕಾಂಬುವದು ಗುರುವಿನ ಭೇದ, ಧ್ಯಾನಿಸಿ ಕಾಂಬುವದು ಲಿಂಗದ ಭೇದ, ಉಭಯದಲ್ಲಿ ನಿಂದು ವಿಚಾರಿಸಿ ಕಾಂಬುವದು ಜಂಗಮದ ಭೇದ. (ಪುಟ ೨೧೨ ವಚನ ೯೭)

ಮೇಲ್ಕಂಡ ವಚನಗಳಿಂದ ಅಷ್ಟಾವರಣಗಳಲ್ಲಿ ಗುರು ಲಿಂಗ ಜಂಗಮಗಳಿಗಿರುವ ಮಹತ್ವದ ಸ್ಥಾನವು ಮತ್ತು ಅವುಗಳ ಕ್ರಿಯೆಗಳು ವಾಚಕರಿಗೆ ಗೊತ್ತಾಗಬಹುದು. ಅಲ್ಲದೆ ಅವುಗಳಲ್ಲಿ ಪರಸ್ಪರ ಸಂಬಂಧವೂ ಉಂಟು. ಈ ಸಂಬಂಧವನ್ನು ಅರಿತುಕೊಂಡು ಆ ರೀತಿ ಭಕ್ತನು ಆಚರಿಸುತ್ತ ಕಡೆಗೆ ಅವನಲ್ಲಿ ಆ ಮೂರೂ ಒಂದಾಗಬೇಕು. ಅವು ಒಂದಾದಲ್ಲಿಯೇ ಅಷ್ಟಾವರಣಗಳ ಆಚರಣೆಯು ಮನುಷ್ಯನಲ್ಲಿ ಪೂರ್ಣವಾಗುತ್ತದೆ. ಈ ವಿಷಯವಾಗಿ ವಾಚಕರು ಈ ಕೆಳಗಿನ ವಚನಗಳನ್ನು ಲಕ್ಷಿಸತಕ್ಕದ್ದು.

೧ ಗುರುಪೂಜೆಯವಮಾಡುವಲ್ಲಿ ಗುರುಪೂಜೆಯಲ್ಲಿಯೇ ಮುಕ್ತರು. ಲಿಂಗಪೂಜೆಯ ಮಾಡುವಲ್ಲಿ ಲಿಂಗಪೂಜೆಯಲ್ಲಿಯೇ ಮುಕ್ತರು. ಜಂಗಮ ಪೂಜೆಯ ಮಾಡುವಲ್ಲಿ ಜಂಗಮ ಪೂಜೆಯಲ್ಲಿಯೇ ಮುಕ್ತರು. ಈ ಮೂರೊಂದಾದಲ್ಲಿ ಬೇರೊಂದಂಗವಿಲ್ಲ. (ಪು.೨೧೭ ವ. ೧೨೨)

೨ ತ್ರಿವಿಧಕ್ಕೆ ರೀತಿಯಾಗಿ ತ್ರಿವಿಧದ ನಿಜವ ತಿಳಿದು ತ್ರಿವಿಧವನವಗ್ರಹಿಸಿ ತ್ರಿವಿಧಪದವ ಬೀರಿ, ತ್ರಿವಿಧ ನಿರ್ಣಯದಲ್ಲಿ ನಿಷ್ಪತ್ತಿಯಾದಲ್ಲಿ ಕೂಡಲಚನ್ನಸಂಗ ನಿಮ್ಮ ಶರಣ-(ಪುಟ ೨೨೦ ವ. ೧೨೯)

ಈ ಪ್ರಕಾರ ಗುರು ಲಿಂಗ ಜಂಗಮ ಮತ್ತು ಭಕ್ತ ಇವುಗಳ ಸಂಬಂಧವಿದ್ದು ಅವುಗಳಲ್ಲಿ ಇರತಕ್ಕ ಸಾಮರಸ್ಯವನ್ನು ಸೂಚಿಸುವ ಆವರಣವು ಪಾದೋದಕವಾಗಿವೆ. ಈ ಪಾದೋದಕದ ವಿಧಿಯಲ್ಲಿ ಮೇಲ್ಕಂಡ ಎಲ್ಲ ತತ್ವಗಳು ಅಡಕವಾಗಿರುತ್ತವೆ. ಈ ಸಂಗತಿಯನ್ನು ಅರಿತು ಆಚರಿಸಬೇಕು. ಆದರೆ ಈ ವಿಧವನ್ನು ತಿಳಿಯದೆ ಆಚರಿಸಿದ್ದಾದರೆ ಅದು ಪಾದೋದಕವೆಂದು ಎಣಿಸಲ್ಪಡಲಾರದು. ಬ್ರಾಹ್ಮಣರಲ್ಲಿ ಪಾದೋದಕ ಅರ್ಥವು ಇದಕ್ಕೆ ತೀರ ಭಿನ್ನವಾಗಿರುತ್ತದೆ. ವೀರಶೈವರಲ್ಲಿ ಗುರು ಲಿಂಗ ಜಂಗಮದ ಯಾವ ಕಲ್ಪನೆಯು ಇದೆಯೋ ಅದು ಅವರಲ್ಲಿಲ್ಲ. ಆದ್ದರಿಂದ ಅವರು ಸ್ಥೂಲ

ರೀತಿಯಿಂದ ತಮ್ಮ ಗುರುಗಳನ್ನು ಕುರಿತು ಆಚರಿಸಿ ಅವರ ಪಾದೋದಕವನ್ನು ಸ್ವೀಕರಿಸುತ್ತಾರೆ. ಅವರಲ್ಲಿ ಲಿಂಗಕ್ಕೆ ಪಾದೋದಕವು ಸಂಬಂಧಪಡುವದಿಲ್ಲ. ಆದರೆ ವೀರಶೈವರಲ್ಲಿ ಅಷ್ಟಾವರಣಗಳಲ್ಲಿ ಒಂದಾದ ಇಷ್ಟಲಿಂಗದ ವಿಚಾರವು ಒಂದು ವಿಶಿಷ್ಟ ತೆರನಾಗಿರುತ್ತದೆ. ಅದಿಲ್ಲದ ಕೊರ್ತು ಅವರ ಪಾದೋದಕ ಕ್ರಿಯೆಯು ನಡಿಯಲಾರದು. ಇದರಂತೆ ಭಕ್ತ ಜಂಗಮರ ಮತ್ತು ಗುರುವಿನ ಕಲ್ಪನೆಗಳಾದರೂ ವಿಶೇಷತರವಾಗಿವೆ. ಅವು ಪರಸ್ಪರ ಸಂಬಂಧಪಡುತ್ತವೆ. ಅವುಗಳ ಕ್ರಿಯೆಗಳೆಲ್ಲವೂ ಭಕ್ತನಲ್ಲಿ ಸಮರಸವಾಗಬೇಕು. ಇದರಿಂದ ಪರಮಾತ್ಮನ ಕಳೆಯು ಅವನಲ್ಲಿ ಸೇರ್ಪಡೆಯಾಗುತ್ತ ಹೋಗುತ್ತದೆ. ಈ ಎಲ್ಲ ವಿಚಾರಗಳು ಪಾದೋದಕದ ವಿಧಿಯಲ್ಲಿ ಅಡಕವಾಗಿವೆ.

ಅದುದರಿಂದ ಪಾದೋದಕವೆಂದರೆ ಪರಮಾತ್ಮನ ಚಿದ್ರೂಪು ಎಂದು ತಿಳಿಯಲ್ಪಟ್ಟಿದೆ. ಅದರಲ್ಲಿ ಚೈತನ್ಯವಿದೆ. ಸಿದ್ಧರಾಮೇಶ್ವರನು ತನ್ನ ಒಂದು ವಚನದಲ್ಲಿ ಹೇಳಿರುವದೇನಂದರೆ—

ಪಾದೋದಕವೆಂಬುದು ಪರಮಾತ್ಮನ ಚಿದ್ರೂಪು ನೋಡಾ. ಪಾದೋದಕವೆಂಬುದು ಮೋಕ್ಷದ ಮಾರ್ಗ ನೋಡಾ. ಪಾದೋದಕವೆಂಬುದು ಪಾಪದ ಕೇಡು ನೋಡಾ. ಪಾದೋದಕವೆಂಬುದು ಪ್ರಮಥರ ಇರವು ನೋಡಾ. ಪಾದೋದಕವೆಂಬುದು ಕಪಿಲಸಿದ್ಧ ಮಲ್ಲಿಕಾರ್ಜುನನ ಮಹಿಮೆ ನೋಡಾ.

ಕಾಡಸಿದ್ಧೇಶ್ವರರು ವೀರಶೈವ ಸಮಾಜದಲ್ಲಿ ಆಗಿಹೋದ ಮಹಾ ಮಹಿಮರು. ಅವರ ವಚನ ಗ್ರಂಥವು ಬಹು ಪ್ರಸಿದ್ಧವಾಗಿದೆ. ಅವರು ಪಾದೋದಕವು ಶರಣನ ಸರ್ವಾಂಗವನೊಳಕೊಂಡು ಥಳಥಳಿಸಿಹೊಳೆವ ಚಿದ್ರಸವೆಂದು ಹೇಳುತ್ತಾರೆ. ಅದನ್ನು ಸ್ವೀಕರಿಸಲು ಶ್ರೇಷ್ಠ ವರ್ತನೆಯುಳ್ಳವರೇ ಯೋಗ್ಯರೆಂದು ಅವರು ಹೇಳುತ್ತಾರೆ. ಅವರು ನುಡಿದಿರುವದೇನಂದರೆ—

ಪಾದೋದಕ ಪಾದೋದಕವೆಂದುಕೊಂಬಿರಿ. ಎಲ್ಲರಿಗೆಲ್ಲಿಯದೊ ಪಾದೋದಕ? ಈ ಭೇದವ ಬಲ್ಲರೆ ಹೇಳಿ, ಅರಿಯದಿದ್ದರೆ ಕೇಳಿ. ಪಾದೋದಕವೆಂಬುದು ಪಾತಾಳಾದಿ ಪರಲೋಕಾಂತ್ಯವಾದ ಅಖಿಳ ಕೋಟಿ

ಬ್ರಹ್ಮಾಂಡಗಳ ಗರ್ಭೀಕರಿಸಿ ಕೊಂಡಿರ್ದ ಪರಿಪೂರ್ಣತತ್ವವು. ಪಾದೋದಕವೆಂಬುದು ಶರಣನ ಸರ್ವಾಂಗವನೆಳಕೊಂಡು ಥಳಥಳಿಸಿ ಹೊಳೆವ ಚೆಲ್ವಿಕೆಯು. ಇಂತಪ್ಪ ಪಾದೋದಕದ ಭೇದವ ಬಲ್ಲವರು ನಿಜಗುಣ ಸ್ವಾಮಿಗಳು ಅಜಗಣ್ಣತಂದೆಗಳು ನಿಜಮುಂಚಣ್ಣ ಮೊದಲಾದ ಅಸಂಖ್ಯಾತ ಮಹಾ ಪ್ರಮಥಗಣಂಗಳು ಬಲ್ಲರಲ್ಲರೆ. ಸತ್ತು ಹೋಗುವ ಹೇಸಿ ಮೂಳ ಕತ್ತೆಗಳೆತ್ತ ಬಲ್ಲರು? ಇಂತಪ್ಪ ಪರಾಪರ ನಾಮವನುಳ್ಳ ಪರಂಜ್ಯೋತಿ ಸ್ವರೂಪವಾದ ಪರತತ್ವ ಪಾದೋದಕವನರಿದು ಕೂಡಬಲ್ಲರೆ ಗುರುಲಿಂಗ ಜಂಗಮವೆಂದೆನಬಹುದು. ಇಂತೀ ವಿಚಾರವ ತಿಳಿದು ಕೊಳಬಲ್ಲರೆ ಸತ್ಯ ಸಚ್ಚಕ್ತರೆಂದೆನಬಹುದು. ಇಂತಪ್ಪ ಭೇದವನರಿಯದೆ ಮತಿ ಭ್ರಷ್ಟ ಮರುಳು ಮಾನವರು ಅಣವಾದಿ ಕರ್ಮಕಾಂತ್ಯವಾದ ಮಲತ್ರಯದ ಬಲೆಯಲ್ಲಿ ಸಿಲ್ಕಿ ದೇಹಾದಿ ಮನಾಂತ್ಯವಾದ ಅರುವತ್ತಾರುಕೋಟಿ ಕರಣಾದಿ ಗಣಂಗಳು ಮೊದಲಾದ ಸಕಲ ಸಂಸಾರ ವಿಷಯ ಲಂಪಟದಲ್ಲಿ ಮಗ್ನರಾಗಿ ಮಂದಮತಿ ಅಧಮ ಜಂಗಮನ ಕಾಲವನು ತ್ರಿಕಾಲದಲ್ಲಿ ಜಲದಿಂದ ತೊಳೆದು ಪಾದೋದಕವೆಂದು ಬಟ್ಟಬಟ್ಟಲ ತುಂಬ ನೀರ ಕುಡಿದು ತಮ್ಮ ದೇಹದ ಪ್ರಾಣಾಗ್ನಿಯ ತೃಪ್ತಿಯನಡಗಿಸಿಕೊಂಡು ಗಳಿಗೆ ತಾಸಿನ ಮೇಲೆ ಮೂತ್ರವ ಮಾಡಿ ವಿಸರ್ಜಿಸಿ ಮಡಿ ವೈಲಿಗೆಂದು ನುಡಿವ ಮಲದೇಹಿಗಳ ಮೇಗಣ ತುಟಿ ತನಕ ಕೊಯಿದು ಇಟ್ಟಂಗಿಯಲೊರಸಿ ಕಟವಾಯ ಸೀಳಿ ಕನ್ನಡಿಯ ತೋರಿ ಮೇಲು ಮುಂದಾಗಿ ಅಟ್ಟಿಂದ ಕಾಣಾ ನಿಮ್ಮ ಶರಣ ಕಾಡಿನೊಳಗಾದ ಶಂಕರ ಪ್ರಿಯ ಚನ್ನ ಕದಂಬ ಲಿಂಗ ನಿರ್ಣಾಯ ಪ್ರಭುವೇ.—

ವಚನಶಾಸ್ತ್ರದಲ್ಲಿ ಮೂರು ವಿಧದ ಪಾದೋದಕಗಳಿರುತ್ತವೆ. (೧) ದೀಕ್ಷಾ ಪಾದೋದಕ. ಇದಕ್ಕೆ ಗುರು ಪಾದೋದಕ ಮತ್ತು ಧೂಳ ಪಾದೋದಕ ಎಂಬ ಬೇರೆ ಎರಡು ಹೆಸರ.ಗಳು ಇರುತ್ತವೆ. (೨)ಶಿಕ್ಷಾ ಪಾದೋದಕ. ಇದಕ್ಕೆ ಕ್ರಿಯಾ ಪಾದೋದಕವೆಂಬ ಇನ್ನೊಂದು ಹೆಸರಿದೆ. (೩) ಜ್ಞಾನ ಪಾದೋದಕ. ವಚನಗ್ರಂಥಗಳಲ್ಲಿ ಈ ಮೂರು ವಿಧ ಪಾದೋದಕಗಳು ತಾತ್ವಿಕ ದೃಷ್ಟಿಯಿಂದ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿರುತ್ತವೆ.

ಕಷ್ಟಾವರಣಗಳಲ್ಲಿ ಪಾದೋದಕವು ಇದ್ದು ಇದರ ವಿಧಿಯಲ್ಲಿ ಮೇಲ್ಕಂಡ ಮೂರೂ ಪಾದೋದಕಗಳು ಸಮಾವೇಶವಾಗುವಂತೆ ಅದರ

ರಚನೆ ಇರುತ್ತದೆ. ಧರ್ಮ ಶಾಸ್ತ್ರಕಾರರು ತತ್ವಗಳನ್ನು ನಿರೂಪಿಸುವದಲ್ಲದೆ ಅವುಗಳ ನೆನಪು ಉಳಿಯುವದಕ್ಕೋಸ್ಕರ ನಿತ್ಯಾಚರಣೆಯಲ್ಲಿ ಅವುಗಳ ಬಗ್ಗೆ ಕೆಲವು ವಿಧಿಗಳನ್ನು ಕಲ್ಪಿಸುತ್ತಾರೆ. ಇವು ಪೂಜಾ ಅರ್ಚನಾದಿಗಳೇ ಇರುತ್ತವೆ. ಇವುಗಳನ್ನು ಆಚರಿಸುವಲ್ಲಿ ಅವುಗಳಿಗೆ ಸಂಬಂಧಿಸಿದ ಆಯಾ ತತ್ವಗಳ ಜ್ಞಾನವು ಪೂರ್ಣಕಲ್ಲಿರತಕ್ಕದ್ದು. ಹೀಗಿಲ್ಲದಿದ್ದರೆ ಅಂಥ ವಿಧಿಗಳ ಆಚರಣೆಯಿಂದ ಅವನ ಮನಸ್ಸಿನ ಮೇಲೆ ಆವ ಪರಿಣಾಮವೂ ಉಂಟಾಗಲಾರವು. ಪಾದೋದಕದ ವಿಷಯವು ಹೀಗೆಯೇ ಇರುತ್ತದೆ.

ದೀಕ್ಷಾ ಪಾದೋದಕವು ಬಾಹ್ಯ ಶರೀರಕ್ಕೆ, ಶಿಕ್ಷಾ ಪಾದೋದಕವು ಮನಸ್ಸಿಗೆ ಅಥವಾ ಸೂಕ್ಷ್ಮಶರೀರಕ್ಕೆ, ಮತ್ತು ಜ್ಞಾನ ಪಾದೋದಕವು ಜ್ಞಾನಕ್ಕೆ ಅಥವಾ ಕಾರಣಶರೀರಕ್ಕೆ, ಸಂಬಂಧಪಡುತ್ತವೆ. ಈ ಪ್ರಕಾರ ನಾವು ಇವುಗಳ ವಿಷಯವಾಗಿ ಸ್ಥೂಲವಾಗಿ ಹೇಳಬಹುದು. ಈ ಬಗ್ಗೆ ಸಿದ್ಧರಾಮೇಶ್ವರನ ವಚನವಿದ್ದು ಅವನು ಅದರಲ್ಲಿ ಹೇಳಿರುವದೇನಂದರೆ—

ಗುರುಪಾದೋದಕದಿಂದ ಸ್ಥೂಲ ದೇಹ ಶುದ್ಧಿ. ಕ್ರಿಯಾ ಪಾದೋದಕದಿಂದ ಸೂಕ್ಷ್ಮ ದೇಹ ಶುದ್ಧಿ. ಜ್ಞಾನ ಪಾದೋದಕದಿಂದ ಕಾರಣ ದೇಹ ಶುದ್ಧಿ. ಗುರು ಪಾದೋದಕದಲ್ಲಿ ಇಷ್ಟಲಿಂಗ ಸಂಬಂಧ. ಕ್ರಿಯಾ ಪಾದೋದಕದಿಂದ ಪ್ರಾಣಲಿಂಗ ಸಂಬಂಧ. ಜ್ಞಾನ ಪಾದೋದಕದಿಂದ ಭಾವಲಿಂಗ ಸಂಬಂಧ. ಅದು ಕಾರಣ ಪಾದೋದಕವೇ ಪ್ರತ್ಯಕ್ಷ ಪರ ಬ್ರಹ್ಮ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಈ ಮೂರು ಪಾದೋದಕಗಳ ತತ್ವಗಳು ಮೇಲೆ ಕಾಣಿಸಿದಂತೆ ಇದ್ದು ಅವುಗಳನ್ನು ಆಚರಿಸುವಲ್ಲಿ ಅವುಗಳಿಗನುಗುಣವಾದ ಭಾವಗಳು ಪೂಜಕನಲ್ಲಿ ಇರತಕ್ಕದ್ದು. ಇದರಿಂದ ಅವನಲ್ಲಿ ಇಷ್ಟ ಪ್ರಾಣ ಭಾವ ಲಿಂಗಗಳು ಸಂಬಂಧಪಡುತ್ತವೆ. ಪಾದೋದಕ ವಿಧಿಯಲ್ಲಿ ಈ ಎಲ್ಲಿ ವಿಷಯಗಳು ಅಡಕವಾಗಿರುತ್ತವೆ. ಈ ತತ್ವಗಳನ್ನು ತಿಳಿದು ಅವನು ಪಾದೋದಕವನ್ನು ಗ್ರಹಿಸತಕ್ಕದ್ದು. ಪಾದೋದಕ ವಿಧಿಯ ಸಂಬಂಧವಾಗಿ ಅನೇಕ ವಚನಗಳು ಉಪಲಬ್ಧವಿವೆ. ಅವುಗಳಲ್ಲಿ ಸಂಕ್ಷಿಪ್ತವಾಗಿರುವ ಒಂದನ್ನು ಮಾದರಿಗಾಗಿ ನಾವು ಇಲ್ಲಿ ಉದಹರಿಸುತ್ತೇವೆ. ಅದು ಯಾವದೆಂದರೆ—

ಗುರು ಪಾದೋದಕವೆಂದು ಕ್ರಿಯಾ ಪಾದೋದಕವೆಂದು ಜ್ಞಾನ ಪಾದೋದಕವೆಂದು ಮೂರು ತೆರನುಂಟು. ಗುರು ಪಾದೋದಕವೆಂದರೆ ಆಯ್ಯಗಳ ಪಾದಗಳ ಎರಡಂಗುಲಿಗಳಲ್ಲಿ ಪಾದಗಳಿರಡರ ಮೂಲಾಂಗುಲಿ ಹಿಮ್ಮುಡಿಗಳ ಅಗ್ರದಲ್ಲಿ ತನ್ನ ಪಂಚಾಂಗುಲಿಯಿಂದ ಉದಕವನೆದ್ದಿ ಮಂತ್ರದಿಂದಿಳುಹುವುದೇ ಗುರು ಪಾದೋದಕ. ಕ್ರಿಯಾ ಪಾದೋದಕವೆಂದರೆ ಪಾದದ್ವಯದ ಅಂಗುಲಿಗಳಲ್ಲಿ ಶಿವಶಕ್ತಿಯ ಪ್ರಣಮವ ಬರೆದು ಭಸ್ಮವ ಧರಿಸಿ ನೇತ್ರದಳಗಳ ಅರ್ಪಣಂಗೈದು ತನ್ನ ತರ್ಜನಿಯ ಮೂರು ಮೇಳೆ ಮೂಲ ಶಕ್ತಿ ಪ್ರಣಮ ಸಹಿತ ಪಂಚಾಕ್ಷರೀ ಮಂತ್ರದಿಂ ಗುರು ಪಾದೋದಕವನೆದ್ದಿ ಎಳೆಯುವದೇ ಕ್ರಿಯಾ ಪಾದೋದಕವು. ಜ್ಞಾನ ಪಾದೋದಕವೆಂದರೆ ದಶಾಂಗುಲಿಗಳಲ್ಲಿ ದಶ ಪ್ರಣಮ ಮಂತ್ರದಿಂದ ಸಹಿತ ಭಸ್ಮದಿಂ ಲಿಖಿಸಿ ಷೋಡಶೋಪಚಾರದಿಂ ಪೂಜೆಯ ಮಾಡಿ ಎರಡಂಗುಲಿ ಮಧ್ಯ ಮೂರು ಸ್ಥಾನಂಗಳಲ್ಲಿ ಪಂಚಾಕ್ಷರೀ ತ್ರಯದಿಂದ ಎರೆಯುವದೇ ಜ್ಞಾನ ಪಾದೋದಕ. ಇಂತಪ್ಪ ಪಾದೋದಕ ತ್ರಯಂಗಳ ಸೇವಿಸಿ ಸುಖಿಸಬಲ್ಲಡೆ, ಅತನೇ ಪರತತ್ವ ವಸ್ತು, ಕಪಿಲಸಿದ್ಧಮಲ್ಲಿ ಕಾರ್ಜುನದೇವ ನೋಡಾ.

ಈ ಬಗ್ಗೆ ಚನ್ನಬಸವೇಶ್ವರನ ಉಕ್ತಿಯೊಂದಿದ್ದು ಅದು ಬಹು ವಿಸ್ತಾರವಾಗಿರುತ್ತದೆ. ಅದರಲ್ಲಿ ಪಾದೋದಕದ ವಿಭೇದಗಳು ಹೇಗೆ ಉಂಟಾಗುತ್ತವೆಂಬದು ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿರುತ್ತದೆ. ವಿಸ್ತಾರ ಭಯಕ್ಕಾಗಿ ನಾವು ಅದನ್ನು ಇಲ್ಲಿ ಉದಹರಿಸಿಲ್ಲ. ಈ ಪಾದೋದಕಗಳೆಲ್ಲ ಮಂತ್ರಾಕ್ಷರಗಳಿಂದಲೇ ಸಿದ್ಧವಾಗುತ್ತವೆ. ಈ ಮಂತ್ರಾಕ್ಷರಗಳು ಗುರು ಲಿಂಗ ಜಂಗಮಗಳಿಗೆ ಸಂಬಂಧಪಡುತ್ತವೆ. ಹೀಗೆ ಸಿದ್ಧವಾದ ಪಾದೋದಕವನ್ನು ಗುರು ಶಿಷ್ಯರೀರ್ವರೂ ಸ್ವೀಕರಿಸುವರು. ಹೀಗೆ ಸ್ವೀಕರಿಸಿದಲ್ಲಿ ಭಕ್ತ ಗುರು ಲಿಂಗ ಜಂಗಮ ಇವರಲ್ಲಿ ಸಾಮರಸ್ಯವು ಉಂಟಾಗುತ್ತದೆ. ಪಾದೋದಕವು ಮಂತ್ರದಿಂದ ತಯಾರಿಸಲ್ಪಟ್ಟಿರುವದರಿಂದ ಅದು ಪರಮಾತ್ಮನ ಕಳೆಯಿಂದ ಕೂಡಿಕೊಂಡಿದೆಂಬ ಭಾವನೆಯು ಇವರಲ್ಲಿ ಪೂರ್ಣವಾಗಿರುತ್ತದೆ. ಇಂಥ ಭಾವನೆಯಿಂದಲೇ ಈ ಆಚಾರವನ್ನು ಭಕ್ತನು ನಿರ್ವಹಿಸತಕ್ಕದ್ದು. ಅಯಾ ಸಮಾಜಗಳು ಆಚರಿಸುವ ಆಚರಣೆಗಳಲ್ಲೆಲ್ಲ ಒಂದು ಭಾವನೆಯು ಕಂಡುಬರುತ್ತದೆ. ಪೂಜಾದಿ ವಿಧಿಗಳು ಯಾವಾಗಲೂ ಭಾವನಾಪೂರ್ಣವಾದವುಗಳು. ಆದರೆ ಭಾವನೆಗೆ ಕೆಲವೊಂದು ತತ್ವವು

ತಳಹದಿಯಾಗಿರುತ್ತದೆ. ಆ ತಿಳುವಳಿಕೆಯನ್ನು ಭಕ್ತನು ಉಂಟು ಮಾಡಿಕೊಳ್ಳತಕ್ಕದ್ದು. ಹಾಗೆ ನಂಬುಗೆಯಿಂದ ಅವನು ಆಚರಿಸಿದಲ್ಲಿ ಆ ವಿಧಿಯು ಪರಿಣಾಮವು ಮನಸ್ಸಿನ ಮೇಲೆ ಆಗುತ್ತದೆ. ಹಾಗಿಲ್ಲದಿದ್ದರೆ ಅಂಥ ಪೂಜಾದಿ ಕಾರ್ಯಗಳು ವ್ಯರ್ಥವಾಗುವವು.

ಪಾದೋದಕದ ವಿಧಿಯಲ್ಲಿ ತಾನು, ಜಂಗಮ, ಗುರು, ಲಿಂಗ ಇವುಗಳ ಸಾಮರಸ್ಯಭಾವವು ಉಂಟಾಗುತ್ತದೆ. ದೀಕ್ಷಾ ಮತ್ತು ಶಿಕ್ಷಾ ಪಾದೋದಕದೊಡನೆ ಉಂಟಾದ ಜ್ಞಾನ ಪಾದೋದಕವನ್ನು ಸೇವಿಸಲು ಅದರ ಪರಿಣಾಮವೇನೆಂಬುವನ್ನು ಒಬ್ಬ ವಚನಕಾರನು ಕೆಳಗೆ ಬರೆದಂತೆ ವಿವರಿಸಿದ್ದಾನೆ. ಅದು ಹೇಗೆಂದರೆ—

ನಿತ್ಯನಂದ ನಿಜದಾಕಾರದ ಪರಮ ನಿರ್ಮಲ ಲಿಂಗ ತೇಜದೊಳಗೆ ಮನವಳಿದು, ಲೀಯ್ಯವಾದ ಮತ್ತೆ, ತಾನೆಂಬುದಿಲ್ಲ. ಅನಾದಿ ದಿವ್ಯವ ಮೀರಿನಿಂದ ಪರಮಾನಂದ ಜ್ಞಾನ ಪಾದೋದಕ ರೂಪು ತಾನೆಯಲ್ಲದೆ ಅನ್ಯವಿಲ್ಲ. ಇದು ಕಾರಣ ಅರಿವುದೆಲ್ಲ ಅರುಹಿಸಿಕೊಂಬುದೆಲ್ಲ ಅರಿವು ಅರುಹಿಸಿಕೊಂಬುದು ಈ ಉಭಯ ಒಂದಾದ ನಿಲವೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೆಂಬೆನು.

ಪಾದೋದಕವನ್ನು ಸಿದ್ಧವಾಡುವಲ್ಲಿ ಲಿಂಗದ ಕಳೆಯು ಅದರಲ್ಲಿ ಬರಮಾಡಿಕೊಳ್ಳುವದು ಅವಶ್ಯವು. ಈ ಉದ್ದೇಶದಿಂದ ಪಾದೋದಕವನ್ನು ಲಿಂಗಕ್ಕೆ ಸಂಬಂಧಿಸುತ್ತಾರೆ. ಅಂದರೆ ಅದರ ಮೇಲೆ ಎರೆಯುವದುಂಟು. ಗುರು ಲಿಂಗ ಜಂಗಮದಲ್ಲಿ ವಿಭೇದವಿಲ್ಲ. ಅವುಗಳ ಸಾಮರಸ್ಯದಿಂದಲೇ ವಸ್ತುವು. ಈ ಬಗೆಯ ಸಾಮರಸ್ಯವು ಪಾದೋದಕದಲ್ಲಿ ಜರಗುತ್ತದೆ. ಇಲ್ಲಿ ಉಚ್ಚ ನೀಚ ಭಾವವಿಲ್ಲ. ಉಳಿದ ಸಮಾಜದವರಲ್ಲಿ ಪಾದೋದಕದ ವಿಚಾರಗಳು ತೀರ ಭಿನ್ನವಾಗಿರುತ್ತವೆ. ಮೇಲ್ಕಂಡ ವಿಚಾರಗಳು ಅವರಲ್ಲಿ ಯತ್ಕಿಂಚಿತ್ತಾದರೂ ಇರುವದಿಲ್ಲ. ಪಾದೋದಕ ಕೊಡವವನು ಸ್ವೀಕರಿಸುವವನು ಇವರಲ್ಲಿ ಹೆಚ್ಚು ಕಡಿಮೆ ಭಾಗವು ಅವರಲ್ಲಿರುವದರಿಂದ ಅವರ ಕ್ರಿಯೆಗಳು ಬೇರೆ ಇವೆ. ಆದರೆ ವೀರಶೈವರಲ್ಲಿರುವ ಪಾದೋದಕ ವಿಷಯವು ಅವರಿಗಿಂತಲೂ ತೀರಭಿನ್ನವಾಗಿದೆ. ಗುರು ಲಿಂಗ ಜಂಗಮವನ್ನು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಸಂಬಂಧಿಸಿಕೊಂಡು ಆಚರಿಸತಕ್ಕ ಆಚರಣೆಯು ಇದಾಗಿದೆ. ಈ ಸಂಬಂಧವು ಅವರಲ್ಲಿ ಮಂತ್ರ, ವಿಭೂತಿ, ರುದ್ರಾಕ್ಷಿ ಇವು

ಗಳ ಮೂಲಕ ಆಗುವದು. ಹೀಗೆ ಆದೊಡನೆಯೇ ಅದು ಪಾದೋದ ಕ-ಪ್ರಸಾದವೆನಿಸಿಕೊಳ್ಳುತ್ತದೆ. ಈ ತರದ ಪಾದೋದಕ-ಪ್ರಸಾದಗಳನ್ನು ವೀರಶೈವರು ಸ್ವೀಕರಿಸತಕ್ಕದ್ದು. ವೀರಶೈವರಲ್ಲಿ ೮ ಆವರಣಗಳಿರುತ್ತವೆ. ಇವುಗಳಿಗೆ ಸಂಬಂಧಿಸಿದ ಕ್ರಿಯೆಗಳ ಹೊರ್ತು ಬೇರೆ ಕ್ರಿಯೆಗಳು ವೀರಶೈವರಿಗೆ ಇಲ್ಲ. ಯಜ್ಞ ಯಾಗಾದಿಗಳು, ನಾನಾ ದೇವತೆಗಳ ಪೂಜೆಗಳು, ಅನೇಕ ಬಗೆಯ ನಿತ್ಯನೇಮಗಳು, ವ್ರತಗಳು ಅವರಲ್ಲಿಲ್ಲ. ಆದರೆ ಅವರ ಪೂಜೆಗಳು, ನಿತ್ಯನೇಮಗಳು. ಜಪತಪಗಳು ಅಷ್ಟಾವರಣಗಳಿಗೆ ಸಂಬಂಧಪಡುತ್ತವೆ. ಈ ಅಷ್ಟಾವರಣಗಳಿಗೆ ಸಂಬಂಧಿಸಿಯೇ ಅವರ ಶಿವಯೋಗಾಚರಣೆಯು ಇದೆ. ಇಂಥ ಆಚರಣೆಯಿಂದ ಭಕ್ತನಲ್ಲಿ ಇಷ್ಟ ಪ್ರಾಣ ಭಾವ ಲಿಂಗಗಳು ಅಳವಡುವವು. ಮತ್ತು ಕಡೆಗೆ ಅವನು ಪರಮಾತ್ಮನಲ್ಲಿ ಸಾಮರಸ್ಯವನ್ನು ಹೊಂದುವನು. ಈ ವಿಷಯವನ್ನು ಕುರಿತು ಪ್ರಭುದೇವರು ಅನ್ನುವದೇನಂದರೆ—

ಅಂಗ ವಿಕಾರ ಆಚಾರದೊಳಡಗಿ, ಆಚಾರ ಕ್ರಿಯೆಗಳು ಗುರುವಿನೊಳಡಗಿ, ಗುರುವೆನ್ನಂಗದೊಳಡಗಿ, ಅಂಗ ಲಿಂಗಸಂತೃಪ್ತಿಯೊಳಡಗಿ, ಲಿಂಗನಿಷ್ಠೆ ಅಂಗದಾಚರಣೆಯ ಆಚಾರವಾವರಿಸಿ, ಆಚಾರದ ನಿಲವ ಗುರುಮೂರ್ತಿಯಾವರಿಸಿ, ಗುರುಮೂರ್ತಿಯ ಸರ್ವಾಂಗವಾವರಿಸಿ, ಸರ್ವಾಂಗವ ಲಿಂಗನಿಷ್ಠೆಯಾವರಿಸಿ, ಲಿಂಗ ನಿಷ್ಠೆ ಸಾವಧಾನವಾವರಿಸಿ, ಸಾವಧಾನವ ಸುವಿಚಾರವಾವರಿಸಿ ಸುವಿಚಾರವ ಮಹಾಜ್ಞಾನವಾವರಿಸಿ, ಮಹಾಜ್ಞಾನದೊಳಗೆ ಪರಮಾನಂದ ನಿಜ ನಿಂದು, ಆ ನಿಜದೊಳಗೆ ಪರಮಾವ್ಯಕ್ತ ತುಂಬಿ ಮೊದಲು ಕಟ್ಟಿಯನೊಡೆದು ನಡುವಣ ಕಟ್ಟಿಯನಾಂತು ನಿಂದು, ನಡುವಣ ಕಟ್ಟಿಯೂ ಮೊದಲಣ ಕಟ್ಟಿಯೂ ಎರಡೂ ಕೂಡಿ ಬಂದು, ಕಡೆಯ ಕಟ್ಟಿಯನಾಂತುದು. ಈ ಮೂರು ಕಟ್ಟಿಯೊಡೆದ ಮಹಾ ಜಲವನು ಪರಮ ಪದವಾಂತುದು. ಆ ಪದದಲ್ಲಿ ನಾನೆರಗಿ ಪಾದೋದಕವ ಕೊಂಡು ಎನ್ನ ನಾನರಿಯದಾದೆ ಕಾಣಾ ಗುಹೇಶ್ವರಾ.

ಈ ವಚನವು ಅತ್ಯಂತಗರ್ಭಿತಾರ್ಥವುಳ್ಳದ್ದಾಗಿದೆ. ಇದರಲ್ಲಿ ಗುರು ಲಿಂಗ ಜಂಗಮ ಮತ್ತು ಪಾದೋದಕ ಇವುಗಳಲ್ಲಿರುವ ಸಂಬಂಧವು ತೋರಿಸಲ್ಪಟ್ಟಿದೆ. ಆ ರೀತಿಯಂತೆ ಆಚರಿಸಿದಲ್ಲಿ ಪರಮ ಪದವು ದೊರೆಯುತ್ತದೆಂದು ಅಲ್ಲಮ ಪ್ರಭುವು ಇಲ್ಲಿ ಹೇಳಿದ್ದಾನೆ.

ಜಗತ್ತಿನ ಬಗ್ಗೆ ವೀರಶೈವ ಧರ್ಮದಲ್ಲಿರುವ ವಿಚಾರಗಳು.

[ಶ್ರೀ ಕುಮಾರಸ್ವಾಮಿಗಳು ಬಿ. ಏ. ನವಕಲ್ಯಾಣಮಠ ಧಾರವಾಡ ಇವರು 'ಪ್ರಬುದ್ಧ ಭಾರತ' ಎಂಬ ಮಾಸಪತ್ರಿಕೆಯಲ್ಲಿ ಮೇಲ್ಕಂಡ ವಿಷಯದ ಬಗ್ಗೆ ಬರೆದ ಅನುವಾದವು ಇದು ಇರುತ್ತದೆ. —ಸಂಪಾದಕ.]

ವೀರಶೈವವು ಆಗಮಾಂತ ಧರ್ಮಗಳಲ್ಲಿ ಒಂದಾಗಿದೆಂದು ಎಣಿಸಲ್ಪಟ್ಟಿರುತ್ತದೆ. ೧೨ನೇ ಶತಮಾನದಲ್ಲಿ ವೀರಶೈವ ಧರ್ಮೋದ್ಧಾರದ ಬಗ್ಗೆ ಒಂದು ಮಹತ್ವದ ಚಳವಳಿಯು ಕರ್ನಾಟಕದಲ್ಲಿ ಉದ್ಭವಿಸಿತು. ಇದನ್ನು ಪುರಸ್ಕರಿಸಿದ ಮಹಾಪುರುಷನು ಬಸವೇಶ್ವರನೇ ಇದ್ದಾನೆ. ಇವನು ೧೧೫೭ರಿಂದ ೧೧೬೭ರ ವರೆಗೆ ಕಲ್ಯಾಣ ಪಟ್ಟಣದಲ್ಲಿ ರಾಜ್ಯಭಾರಮಾಡಿದ ಜೈನ ಅರಸನಾದ ಬಿಜ್ಜಳನಿಗೆ ಪ್ರಧಾನಿಯಾಗಿದ್ದನು. ಈ ಕಲ್ಯಾಣ ಪಟ್ಟಣವು ನಿಜಾಮ ಇಲಾಖೆಯಲ್ಲಿ ಕಲಬುರ್ಗಿಯಿಂದ ೬೦ ಮೈಲು ದೂರ ಇರುತ್ತದೆ. ಶ್ರೀ ಬಸವೇಶ್ವರನು ಅತ್ಯಂತ ಆಕರ್ಷಕ ಪುರುಷನಾಗಿದ್ದರಿಂದ ಅರಸನಿಂದ ಹಿಡಿದು ಒಕ್ಕಲಿಗನ ವರೆಗೂ ನಾನಾ ಪಂಗಡಗಳ ಜನರು ಅವನಿಗೆ ಸಮೀಪವರ್ತಿಗಳಾದರು. ಅವರಲ್ಲಿ ಸುಮಾರು ೩೦೦ ಜನರು ಬಸವೇಶ್ವರನಿದ್ದೆಡೆಗೆ ಮಿಲಿತಂಗಿ ಧರ್ಮಚರ್ಚೆಗಳನ್ನು ನಡಿಸುತ್ತ ಶಿವಾನುಭವವನ್ನು ಕುರಿತು ಅನೇಕ ತರದ ವಚನಗಳನ್ನು ರಚಿಸಿದ್ದಾರೆ. ಇವುಗಳು ಅತ್ಯಂತ ಸುಂದರವಾದವುಗಳೂ ಸ್ಫೂರ್ತಿದಾಯಕವೂ ಇದ್ದು ಶಿವೈಕ್ಯ ಸ್ಥಿತಿಯನ್ನು ಹೊಂದುವ ವಿಷಯವಾಗಿ ಅವು ಬಹು ಗೂಢವಾದ ವಿಚಾರಗಳನ್ನು ವ್ಯಕ್ತಪಡಿಸುತ್ತವೆ. ಈ ವಚನಕಾರರಲ್ಲಿ ಸುಮಾರು ೬೦ ಜನ ಸ್ತ್ರೀಯರಿರುವದು ಬಹು ಮಹತ್ವವಾದುದು. ಇವರಲ್ಲಿ ಉನ್ನತಸ್ಥಾನವನ್ನು ಹೊಂದಿದವಳು ಅಕ್ಕಮಹಾದೇವಿಯಾಗಿದ್ದಳು. ಹೀಗೆ ಪ್ರಸಿದ್ಧಿಗೆ ಬಂದಂಥವಂಗೆ ಶಿವಶರಣರೆಂಬ ಹೆಸರು ಇದೆ. ಅವರು ರಚಿಸಿದ ವಚನಗಳು ಉಪನಿಷದ್ವಾಕ್ಯಗಳಿಗೆ ಸಮಾನವಾದವುಗಳೆಂಬ ಅಭಿಪ್ರಾಯವನ್ನು ದಿವಂಗತ ಮಹಾಮಹೋಪಾಧ್ಯಾಯ ಆರ್. ನರಸಿಂಹಾಚಾರ್ಯ ಇವರು ಪ್ರಕಟಪಡಿಸಿರುತ್ತಾರೆ. ಈ ಶಿವಶರಣರಿಗೆ ದೇವರ ಬಗ್ಗೆ ಅತ್ಯುತ್ಕಟೇಚ್ಛೆ ಉತ್ಪನ್ನವಾಗಲು ಅವರ

ಹೃದಯದೊಳಗಿಂದ ಸ್ವಾಭಾವಿಕವಾಗಿ ಹೊರಹೊರಟ ವಿಚಾರಗಳೇ ಇಂಥ ವಚನಗಳ ರೂಪವಾಗಿ ಹೇಳಲ್ಪಟ್ಟಿರುತ್ತವೆ. ಅವು ಇಷ್ಟು ಸ್ಫೂರ್ತಿಯುಳ್ಳವುಗಳಾಗಿವೆ. ಅವುಗಳಲ್ಲಿ ಪರಮಾತ್ಮನ ಬಗ್ಗೆ ಮಹತ್ತರವಾದ ವಿಚಾರಗಳು ತುಂಬಿಕೊಂಡಿರುತ್ತವೆ. ನಿಜಾಂತಃಕರಣದಿಂದ ಹೊರಹೊರಡುವ ಭಾವಗಳು ಅವುಗಳಲ್ಲಿ ಮೂಡಿಕೊಂಡಿರುತ್ತವೆ.

ವೀರಶೈವ ಧರ್ಮವು ಈ ಪ್ರಕಾರ ಆಗಮಾಂತಕ್ಕೆ ಹೊಂದಿದ್ದಾದರೂ ಅದರಲ್ಲಿ ಶ್ರೀ ಬಸವೇಶ್ವರನೂ ಅವನ ಜೋಡಿಗರೂ ಅನೇಕ ಮಾರ್ಪಾಡುಗಳನ್ನು ಮಾಡಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಕರ್ನಾಟಕದ ವೀರಶೈವ ಧರ್ಮಕ್ಕೆ 'ಲಿಂಗಾಯತ ಧರ್ಮ' ಎಂಬ ಹೆಸರು ಪ್ರಾಪ್ತವಾಗಿರುತ್ತದೆ. ಈ ಧರ್ಮವನ್ನು ಕುರಿತು ನಾವು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತೇವೆ.

ಜಗತ್ತು ಎಂಬುದಕ್ಕೆ ಅಸ್ತಿತ್ವವಿದ್ದು ಅದರ ಸ್ವರೂಪವನ್ನು ಕುರಿತು ವಿಚಾರಮಾಡುವ ಶಾಸ್ತ್ರಕ್ಕೆ ತತ್ವಜ್ಞಾನವೆಂಬ ಹೆಸರು ಎಂದು ರಾಬರ್ಟ್ ಆರ್ಡ್ ಎಂಬವರ ಅಭಿಪ್ರಾಯವಿದೆ. ಆದರೆ ನಮಗೆ ತೋರುವ ಜಗತ್ತು ದ್ವೈವಿಧ್ಯವಾಗಿ ಇರುತ್ತದೆಂದು ನಮ್ಮ ದೃಷ್ಟಿಗೆ ಕಾಣಬರುತ್ತದೆ. ದೃಶ್ಯ ಜಗತ್ತು ಒಂದು, ಮತ್ತು ಅದಕ್ಕೆ ಮೇಲ್ತರದ್ದಾಗಿದ್ದುಕೊಂಡು ಇಂದ್ರಿಯಗಳಿಗೆ ಅಗೋಚರವಾದ ಜಗತ್ತು ಇನ್ನೊಂದು, ಹೀಗಿರುವದು ಕಂಡುಬರುತ್ತದೆ. ಆದರೆ ಇವುಗಳೊಳಗೆ ಪರಸ್ಪರ ಸಂಬಂಧ ಇರುವದೆಂಬದನ್ನು ಸಾಮಾನ್ಯ ಜನರು ಅರಿಯರು. ಆದರೆ ಆಳವಾಗಿ ವಿಚಾರ ಮಾಡಿದಲ್ಲಿ ಕೆಲವೊಂದು ನಿಕಟ ಸಂಬಂಧವು ಅವುಗಳಲ್ಲಿದೆ, ಎಂದು ಭಾಸವಾಗದೆ ಇರದು. ಈ ಎರಡೂ ಜಗತ್ತುಗಳು ಪರಸ್ಪರ ವಿರೋಧಿಗಳಾಗಿರದೆ ಅವುಗಳಲ್ಲಿ ನಿಜವಾಗಿ ಪರಸ್ಪರತೆಯು ಇರುತ್ತವೆ.

ಮೇಲೆ ಹೇಳಿದ ಎರಡು ವಿಧ ನಿರ್ಮಾಣಗಳನ್ನು ನಿರ್ದೇಶಿಸುವಂಥ ಶಬ್ದವು ಅವಶ್ಯವಿದ್ದು ಅದು ಮಹತ್ ಅಥವಾ ಬೃಹತ್ ಎಂದಿದೆಂದು ಹಿಂದೀ ತತ್ವಜ್ಞರು ಭಾವಿಸಿದ್ದಾರೆ. ಜಗತ್ತಿನಲ್ಲೆಲ್ಲ ಇರುವ ಶಕ್ತಿಯು ಪ್ರಾಣಿಜೈತನ್ಯದಲ್ಲಿ ಮತ್ತು ಈ ಜೈತನ್ಯವು ವಸ್ತುವಿನಲ್ಲಿ ತೋರಲು ವಸ್ತುಗಳಲ್ಲಿರುವ ದ್ವೈವಿಧ್ಯವು ದೂರಾಗುತ್ತದೆ. ಅವುಗಳಲ್ಲಿ ಪರಸ್ಪರತೆಯುಂಟೆಂದು ನಾವು ಭಾವಿಸದೆ ಇದ್ದಲ್ಲಿ ಅವು ಪರಸ್ಪರ ವಿರೋಧವಾಗುವವೆಂದು ತಿಳಿಯಬೇಕಾಗುತ್ತದೆ.

ಈ ಮಹತ್ ಎಂಬುದು ಮೂಲದಲ್ಲಿ ಒಂದೇ ಒಂದು ಇದ್ದು, ಅದು ಸೃಷ್ಟಿಯಲ್ಲಿ ತೋರಿದಾಗ ಅನೇಕ ಬಗೆಯಾಗಿ ಮುಖ್ಯವಾಗಿ ಬೇರೆ ಬೇರೆ ಅಂತಸ್ತುಗಳಾಗಿ ರೂಪುಗೊಳ್ಳುತ್ತದೆ. ಈ ಅಂತಸ್ತುಗಳು ಕೆಳಗಿಳಿಯುತ್ತಲೂ ಮುಂಪೆ ಅವುಗಳು ಮೇಲಿನ ಮಟ್ಟಕ್ಕೇರುತ್ತಲೂ ಹೋಗುತ್ತವೆ. ಈ ಎರಡು ತುದಿಗಳ ಮಧ್ಯದಲ್ಲಿ ಸೃಷ್ಟಿಯ ವಸ್ತುಗಳು ಅನೇಕ ರೂಪಗಳಾಗಿ ವ್ಯವಹರಿಸುತ್ತವೆ ಇದರಲ್ಲಿ ಜೈತನ್ಯವು ಮೇಲಿನದು ವಸ್ತು ದೃಶ್ಯವಾದುದು ಕೆಳಗಿನದು ಎಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಇವುಗಳಿಗೆಲ್ಲ ಮೂಲವಾದುದು ಸತ್ಯವಸ್ತುವೆಂಬುದು ಇರುತ್ತದೆ. ಇದಕ್ಕೆ ವೀರಶೈವ ತತ್ವಜ್ಞಾನಿಗಳು ಮಹಾಲಿಂಗ ಎಂದು ಕರೆದಿದ್ದಾರೆ. ಇದಕ್ಕೆ ಶೈವರು ಶಿವ ಎಂತಲೂ, ಉಪನಿಷತ್ಕಾರರು ಬ್ರಹ್ಮನ್ ಎಂತಲೂ ಕರೆದಿದ್ದಾರೆ.

ಈ ಮಹಾಲಿಂಗದಲ್ಲಿ ಎರಡು ವಿಭಾಗಗಳನ್ನು ಮಾಡಬಹುದು. ಒಂದಕ್ಕೆ ಸ್ಥಿರ, ಶಿವ, ಅಥವಾ ಲಿಂಗವೆಂಬ ಹೆಸರು ಇದೆ. ಎರಡನೆಯದಕ್ಕೆ ಚರ, ಶಕ್ತಿ, ಅಥವಾ ಜಂಗಮ ಎಂಬ ಹೆಸರಿದೆ. ಚರ ಅಥವಾ ಶಕ್ತಿಗೆ ಪರಮಾತ್ಮನ ಪ್ರಗತಿಪರವಾದ ಚಿತ್ ಎಂಬ ಹೆಸರೂ ಇದೆ. ಇದಕ್ಕೆ ಶಿವ ಲಿಂಗವೆಂದೂ ಹೇಳುವದುಂಟು, ಈ ಚಿತ್ತ ಸಮುದ್ರದಲ್ಲಿಯ ವಡಬಾಗ್ನಿಯಂತೆ, ಜಂದ್ರನಲ್ಲಿಯ ಅಮೃತವಂತೆ, ಹೂವಿನೊಳಗಿನ ಗಂಧದಂತೆ, ಕಸ್ತೂರಿಯಲ್ಲಿಯ ಸ್ನೇಹದಂತೆ, ಅಡಗಿರುತ್ತದೆಂದು ಬಸವೇಶ್ವರನು ತನ್ನ ಒಂದು ವಚನದಲ್ಲಿ ಹೇಳಿದ್ದಾನೆ.

ಈ ಪ್ರಕಾರ ಜಗತ್ತಿನಲ್ಲಿ ಶಿವಶಕ್ತಿಗಳು ಕೂಡಿರುತ್ತವೆಂದು ವೀರಶೈವರು ಭಾವಿಸುತ್ತಿದ್ದು ಇವಕ್ಕೆ "ಶಕ್ತಿ ವಿಶಿಷ್ಟಾದ್ವೈತ"ವೆಂಬ ಹೆಸರು ಇದೆ. ಈ ಶಕ್ತಿಯ ಅಸ್ತಿತ್ವವನ್ನು ಪಾಶ್ಚಿಮಾತ್ಯ ತತ್ವಜ್ಞಾನಿಗಳು ಒಪ್ಪುತ್ತಲಿದ್ದರೂ ಅದರ ಸ್ವರೂಪವನ್ನು ಕುರಿತು ಅವುದನ್ನೂ ಹೇಳಲಿಕ್ಕೆ ಅವರಿಗೆ ಶಕ್ಯವಾಗಿಲ್ಲ. ಈ ಶಕ್ತಿಯ ಪರಿಣಾಮಗಳು ಜಗತ್ತಿನಲ್ಲಿ ತೋರುತ್ತವೆ. ಅದರ ಪ್ರಭಾವದ ಮೂಲಕವಾಗಿಯೇ ಶರಣನಾವನು ಉಚ್ಚಸ್ಥಿತಿಯನ್ನು ಹೊಂದಲಪೇಕ್ಷಿಸುತ್ತಾನೆ. ಪಾಶ್ಚಿಮಾತ್ಯ ತತ್ವವೇತ್ತಿಗಳು ಇದರ ವಿಷಯವಾಗಿ ಅನೇಕ ತರದ ಅಭಿಪ್ರಾಯಗಳುಳ್ಳವರಿದ್ದಾರೆ. ಶೊಪೆನಹೋರಮತ್ತು ಹೆಸ್ರಿ ಬೆರ್ಗಸನ್ನನು ಇವರು ಇವರಲ್ಲಿ ಮುಖ್ಯರಾಗಿದ್ದಾರೆ. ಬರ್ಗಸನ್ನನು

ಈ ಶಕ್ತಿಯು ಒಂದು "ಚೈತನ್ಯಯುಕ್ತ ಪ್ರವಾಹ" ಎಂದು ಹೇಳಿದ್ದಾನೆ. ಇದು ಜಗತ್ತಿನಲ್ಲೆಲ್ಲ ಆವರಿಸಿದೆ. ಮತ್ತು ಜಗತ್ತಿನ ದೃಶ್ಯ ವಸ್ತುಗಳು ಅದಂ ಚಲನವಲನೆಯ ಪರಿಣಾಮಗಳಾಗಿವೆ. ಆದರೆ ಶರಣನ ವಿಚಾರಗಳು ಇದಕ್ಕೆ ತೀರ ಬೇರೆ ಇವೆ. ಶರಣನು ಇಂಥ ವಿಚಾರಗಳನ್ನು ಪರಮಾತ್ಮನಿಗೆ ಸಂಬಂಧಪಡಿಸುತ್ತಾನೆ. ಅಂದರೆ ಪರಮಾತ್ಮನಲ್ಲಿಗೆ ಹೋಗಬೇಕೆಂಬ ಲನಲವಿಕೆಯೇ ಈ ಚೈತನ್ಯಕ್ಕೆ ಕಾರಣವೆಂದು ಅವನು ಭಾವಿಸುತ್ತಾನೆ. ಮನುಷ್ಯನಲ್ಲಿ ಪ್ರೇರಣೆ ಎಂಬುದು ಇರುತ್ತದಷ್ಟೇ. ಇದು ಮನುಷ್ಯನಲ್ಲಿಯೇ ಉತ್ಪನ್ನವಾಗುತ್ತದೆಂದು ಬರ್ಗಸನ್ನನು ಹೇಳುತ್ತಾನೆ. ಆದರೆ ಇದು ಚಿತ್ ಶಕ್ತಿಯ ಪರಿಣಾಮವೆಂದು ಶರಣನು ತಿಳಿಯುತ್ತಾನೆ. ಈ ತಿಳುವಳಿಕೆಗೆ ಶಾಪೆನ ಹೋರನ ವಿಚಾರಗಳು ಸಮೀಪವಾಗಿವೆ. ಶಾಪೆನ ಹೋರನು ಇಚ್ಛೆಗೆ ಮಹತ್ವದ ಸ್ಥಾನವನ್ನು ಕೊಟ್ಟಿರುತ್ತಾನೆ. ಇದರಿಂದಲೇ ಕಲ್ಪನೆಗಳ ಉಗಮವು. ಆದರೆ ಅವನಿಗೆ ಹಿಂದೂ ಧರ್ಮ ಶಾಸ್ತ್ರದಲ್ಲಿ ಉಪಯೋಗಿಸಲ್ಪಡುವ ಮಹತ್ ಅಥವಾ ಬೃಹತ್ ಇದರ ತಿಳುವಳಿಕೆಯು ಇರುವದಿಲ್ಲ. ಈ ಮಹತ್ ಇದರಿಂದಲೇ ಇಂದ್ರಿಯಾತೀತವಾದ ಅರಿವು ಇದೆ ಎಂಬ ವಿಚಾರಗಳು ಅವನಲ್ಲಿ ಇರುವದಿಲ್ಲ

ಶರಣನು ಈ ಶಕ್ತಿ ಅಥವಾ ಇಚ್ಛೆ ಇವಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟಿರುವದೇನೋ ನಿಜವು. ಆದರೆ ಅವನು ಅದನ್ನು ಶಿವನಿಗೆ ಸಂಬಂಧಿಸುತ್ತಾನೆ. ಆದ್ದರಿಂದ ಶಿವ ಮತ್ತ ಶಕ್ತಿ, ಲಿಂಗ ಮತ್ತು ಜಂಗಮ ಮತ್ತು ನಿಜ ಮತ್ತು ಇಚ್ಛೆ ಇವುಗಳು ನಿಕಟ ಸಂಬಂಧವುಳ್ಳವುಗಳಿರುತ್ತವೆಂದು ಅವನು ಭಾವಿಸುತ್ತಾನೆ. ಈ ಸಂಬಂಧವು ಎಂದಿಗೂ ಅಗಲಲಾರದಂಥಾದ್ದು. ಈ ಅಭಿಪ್ರಾಯವನ್ನು ಅವನು ಅತ್ಯುತ್ತಮ ರೀತಿಯಿಂದ ಪ್ರತಿಪಾದಿಸುವದುಂಟು. ಶಿವ-ಶಕ್ತಿ ಇವುಗಳು ಜಗತ್ತಿಗೆ ವೀರಿದವುಗಳೆಂತಲೂ, ಅವು ಪರವಸ್ತುಗಳೆಂತಲೂ ಅವನು ಹೇಳುತ್ತಾನೆ. ಇವುಗಳಲ್ಲಿ ಲಿಂಗ ಜಂಗಮಗಳು ದೃಶ್ಯ ಜಗತ್ತಿಗೆ ಸಂಬಂಧಪಡುತ್ತವೆ. ಆದರೂ ದೃಶ್ಯವಾದವುಗಳೆಲ್ಲ ಅದೃಶ್ಯದೊಳಗಿಂದಲೇ ಹೊರಟಿರುತ್ತವೆ.

ಈ ಶಕ್ತಿಯಲ್ಲಿ ಹುಟ್ಟಿಸುವ, ರಕ್ಷಿಸುವ ಮತ್ತು ನಾಶ ಮಾಡುವ ಗುಣಗಳಿರುತ್ತವೆ. ಆದರೆ ಶಿವತತ್ವವು ಇವುಗಳಿಗೆ ವೀರಿದಂಥಾದ್ದು

ಅದು ಪ್ರಕಾಶಮಯವಾದುದು. ನಿಶ್ಚಲವಾದುದು. ಅದರ ಬೆಳಗು ಜಗತ್ತಿನಲ್ಲೆಲ್ಲ ಪಸರಿಸಿರುತ್ತದೆ. ಅದನ್ನ ಮನುಷ್ಯನು ತನ್ನ ಇಂದ್ರಿಯಗಳಿಂದ ಕಾಣಲಾರನು. ಅದು ಪೂರ್ಣ ಸ್ವತಂತ್ರತೆಯ ಆನಂದವೆಂದು ನಾವು ಹೇಳಬಹುದು. ಇದೇ ಮಹಾಲಿಂಗವು. ಇದು ಪರಿಪೂರ್ಣವಾದದ್ದು. ಇಚ್ಛಾಶಕ್ತಿ ಎಂಬುದು ಅದರ ಬೆಳಗಿನಲ್ಲಿಯೇ ಸಂಚಲಿಸುತ್ತದೆ. ಆದ್ದರಿಂದ ಅದು ಪರಮಾತ್ಮಲ್ಲಿಂದಲೇ ಉಗಮ ಹೊಂದಿತೆಂದು ತಿಳಿಯಬೇಕಾಗುವದು. ಜಗತ್ತಿನಲ್ಲಿ ಪದಾರ್ಥ ಮತ್ತು ಶಕ್ತಿ ಎಂಬವುಗಳು ಇರುವವಷ್ಟೇ. ಅವು ಪರಮಾತ್ಮನ ಇಚ್ಛಾಶಕ್ತಿಯ ಮೂಲಕವಾಗಿ ತೋರುತ್ತವೆ. ಈ ಶಕ್ತಿಯ ಮೂಲಕವೇ ಜೀವರಾಶಿಗಳಲ್ಲಿ ಅನೇಕ ತರಗತಿಗಳುಂಟಾಗಿರುತ್ತವೆ.

ಈ ಮಹಾಲಿಂಗದ ಮೂಲಕ ದೃಶ್ಯ ಜಗತ್ತು, ಚೈತನ್ಯ ಮತ್ತು ಮಾನಸಿಕ ವ್ಯಾಪಾರಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತವೆ. ಹೀಗೆ ಭಾವಿಸುವದು ವೀರಶೈವ ಧರ್ಮದ ವೈಶಿಷ್ಟ್ಯವಾಗಿದೆ. ಪದಾರ್ಥವು ಕೂಡ ಲಿಂಗಮಯವೆಂದು ಈ ಧರ್ಮದಲ್ಲಿಯ ತತ್ವನೇತ್ತಿಗಳು ಹೇಳುತ್ತಾರೆ. ಗ್ರೀಸ ದೇಶದ ಪ್ರಸಿದ್ಧ ತತ್ವಜ್ಞಾನಿಯಾದ ಪ್ಲೇಟೋನು ಇಂದ್ರಿಯಗಳಿಗೆ ಅತೀತವಾದುದರಲ್ಲಿ ಸುಖವಿದೆ ಎಂದು ತಿಳಿದಿದ್ದಾನೆ. ಕ್ರೈಸ್ತರ ಬಾಯಬಲಿನಲ್ಲಿ ಯಾವಾಗಲೂ ಸ್ಪೈತ ಧಾವವಿದೆ. ಅದು ಪದಾರ್ಥ ಮತ್ತು ದೈವೀಶಕ್ತಿ ಇವುಗಳನ್ನು ಯಾವಾಗಲೂ ವಿಂಗಡಿಸುತ್ತದೆ. ಇವುಗಳಲ್ಲಿ ಯಾವುದು ದೈವೀಶಕ್ತಿಯೋ ಅದು ನಿಜವು. ಆದರೆ ದೃಶ್ಯ ಪದಾರ್ಥವು ನಿಜವಲ್ಲೆಂದು ಅದು ಹೇಳುತ್ತದೆ. ವೇದಾಂತ ಮತ್ತು ಸಾಂಖ್ಯ ಶಾಸ್ತ್ರಗಳು ಅಜ್ಞಾನವನ್ನು ತಿರಸ್ಕರಿಸಿ ಜಗತ್ತಿಗೆ ಯಾವದು ವಿೂರಿದ್ದೋ ಅದನ್ನೇ ಸ್ವೀಕರಿಸಿವೆ. ಆದರೂ ಅವುಗಳು ಪದಾರ್ಥ ಮತ್ತು ಪರವಸ್ತು ಇವುಗಳಲ್ಲಿ ಭಿನ್ನತೆಯನ್ನು ಕಲ್ಪಿಸುತ್ತವೆ. ಆಗಮಗಳು ಸಹ ಮನುಷ್ಯನು ಶಿವತತ್ವವನ್ನೆ ಸಾಧಿಸಬೇಕೆಂದು ಹೇಳುತ್ತವೆ. ಆದರೆ ಜಗತ್ತಿನಲ್ಲಿ ಅವುಗಳಲ್ಲಿ ಭಿನ್ನತೆ ಇವೆ ಎಂದು ಅವು ತಿಳಿದಿವೆ. ಆದರೆ ವೀರಶೈವ ತತ್ವ ಜ್ಞಾನಿಗಳು ಇಂಥ ಭಿನ್ನತೆಯನ್ನು ಕಲ್ಪಿಸಿರುವದಿಲ್ಲ. ಶಿವ-ಶಕ್ತಿ ಇವು ಯಾವಾಗಲೂ ಕೂಡಿಯೇ ಇರುವದರಿಂದ ಪದಾರ್ಥ ಮತ್ತು ದೈವೀಶಕ್ತಿ ಇವುಗಳಲ್ಲಿ ಅವರು ಯಾವ ತರದ ಭೇದವನ್ನು ಮಾಡುವದಿಲ್ಲ. ಆದ್ದರಿಂದ ಮನುಷ್ಯನು ತನ್ನ ಆಯುಷ್ಯವನ್ನು

ಲಿಂಗಮಯವಾಗಿ ಮಾಡುವ ಧ್ಯೇಯವನ್ನು ಇಟ್ಟುಕೊಳ್ಳಬೇಕೆಂದು ವೀರಶೈವ ಧರ್ಮವು ಯಾವಾಗಲೂ ಹೇಳುತ್ತದೆ.

ಪದಾರ್ಥ ಮತ್ತು ದೈವೀಶಕ್ತಿ ಇವುಗಳನ್ನು ಅನುಕ್ರಮವಾಗಿ ಅಂಗ ಮತ್ತು ಲಿಂಗ ಎಂದು ಹೇಳಬಹುದು. ಇವುಗಳಲ್ಲಿ ಶಿವಶರಣರು ಯಾವ ಭೇದವನ್ನು ಎಣಿಸುವದಿಲ್ಲ. ಇದರಿಂದ ಮನುಷ್ಯನ ಕಾರ್ಯಗಳಿಗೆ ಹೊಸ ಸ್ವರೂಪವು ಉಂಟಾಗುತ್ತದೆ. ಶರೀರವು ಪ್ರಗತಿಪರವಾಗಿದ್ದು ಅದಕ್ಕೆ ಲಿಂಗದ ಸಂಬಂಧವು ಉಂಟಾದಲ್ಲಿ ಈ ಶರೀರವು ಸಹ ಪರಮಾತ್ಮನ ಪ್ರಭಾವವುಳ್ಳದ್ದಾಗುತ್ತದೆ. ಹಾಗೆಯೇ ಮನುಷ್ಯನ ದೇಹ ಮತ್ತು ಅವನ ಮನಸ್ಸು ಇವುಗಳಲ್ಲಿಯೂ ಭಿನ್ನತೆಯನ್ನು ಕಲ್ಪಿಸಕೂಡದು.

ವೀರಶೈವರಲ್ಲಿ ಚಿತ್‌ಶಕ್ತಿಯೊಂದು ನಿತ್ಯವಾದುದು. ಅದರಿಂದ ಪ್ರಕಟವಾಗುವ ಶಕ್ತಿಯು ಮನುಷ್ಯನ ಶರೀರವನ್ನು ವ್ಯಾಪಿಸಲು, ಮನುಷ್ಯನ ಸಂಸಾರದ ಮೇಲಿರುವ ಲೋಲುಪತೆಯು ಹೋಗಿಬಿಡುತ್ತದೆ. ಒಟ್ಟಿನ ನಿಜವಸ್ತುವಾಗಿರುವದು ಲಿಂಗವು. ಮತ್ತು ಅದಕ್ಕೆ ಆಧಾರವಾಗಿರುವದು ಶರೀರವು. ಈ ಶರೀರದ ಕ್ರಿಯೆಗಳು ಉತ್ಕೃಷ್ಟತೆಯನ್ನು ಹೊಂದುತ್ತ ಹೋಗತಕ್ಕದ್ದು.

ಮೇಲ್ಕಂಡ ವಿಧಾನಗಳನ್ನು ನಾವು ನಂಬಿದಲ್ಲಿ ಇಹ ಮತ್ತು ಪರ ಎಂಬವುಗಳಲ್ಲಿ ಭಿನ್ನತೆಯು ಉಳಿಯುವದಿಲ್ಲ. ಇದರಿಂದ ಪರಮಾತ್ಮನಿರುವ ಸ್ಥಾನವು ಬೇರೆ ಎಲ್ಲಿಯೂ ಇರದೆ, ಅದು ತನ್ನಲ್ಲಿಯೇ ಇದೆ ಎಂದು ತಿಳಿಯಬೇಕಾಗುತ್ತದೆ. ಆದ್ದರಿಂದ ಪರಮಾತ್ಮನನ್ನು ಕಂಡು ಹಿಡಿಯಬೇಕಾದರೆ ಇಹವನ್ನು ಬಿಟ್ಟು ಇದಕ್ಕೆ ವಿರೋಧವಾದ್ದರಲ್ಲಿ ಹುಡುಕಲಿಕ್ಕೆ ಹೋಗಬಾರದು. ಅದನ್ನು ವಸ್ತುವಿನಲ್ಲಿಯೇ ಅಂದರೆ ತನ್ನಲ್ಲಿಯೇ ಕಾಣಬೇಕು. ಈ ಪ್ರಕಾರ ಬಸವೇಶ್ವರನು ತನ್ನ ಕೆಲವು ವಚನಗಳಲ್ಲಿ ಹೇಳಿದ್ದಾನೆ. ಇಹ, ಪರ ಇವೆರಡನ್ನು ವಿಂಗಡಿಸುವವನು ಸಂಸಾರದಿಂದ ದೂರಾಗಲಾರನೆಂತಲೂ, ಇಹವೆಂಬುದು ಕರ್ತಾರನ ಟಂಕಸಾಲೆ ಎಂತಲೂ, ಇಲ್ಲಿ ಸಲ್ಲುವವನು ಪರದಲ್ಲಿಯೂ ಸಲ್ಲುವನೆಂತಲೂ ಅವನ ವಚನಗಳಿವೆ. ಈ ರೀತಿ ವ್ಯವಹರಿಸಿದಲ್ಲಿ ಮನುಷ್ಯನಲ್ಲಿ ಪೂರ್ಣತ್ವವು ಒದಗುತ್ತದೆ. ಈ ತತ್ವವನ್ನು ಲಿಂಗಾಯತರು ಸ್ವೀಕರಿಸಿರುವದರಿಂದ ಮನುಷ್ಯನು ಇಲ್ಲಿ ಮಾಡುವ ಪ್ರತಿಯೊಂದು ಕಾ

ರ್ಯದಲ್ಲಿ ನಿಜತ್ವವು ಉಂಟಾಗುತ್ತದೆ. ಮತ್ತು ಅದು ಗರ್ಭಿತಾರ್ಥವುಳ್ಳದ್ದಾಗುತ್ತದೆ. ಜಗತ್ತಿನಲ್ಲಿ ಅರ್ಥವಿಲ್ಲದ್ದು ಯಾವದೂ ಇಲ್ಲ. ಪ್ರತಿಯೊಂದಕ್ಕೆ ಉದ್ದೇಶವು ಇದ್ದೇ ಇದೆ. ಪದಾರ್ಥಗಳ ಚಲನವಲನೆಯಲ್ಲೆಲ್ಲ ಕೂಡ ಆನಂದವೆಂಬುದಿದೆ. ಈ ತೆರದ ವಿಚಾರಗಳು ಲಿಂಗಾಯತರಲ್ಲಿರುವ ಮೇಲ್ಕಂಡ ತತ್ವಗಳ ಮೂಲಕ ನಿಷ್ಪನ್ನವಾಗುತ್ತವೆ.

ವೀರಶೈವ ಧರ್ಮದ ಪ್ರಕಾರ ಜಗತ್ತಿನಲ್ಲಿ ಯಾವುದು ಸತ್ಯವಾದುದೋ ಅದರಲ್ಲಿ ಅಂತಃಪ್ರೇರಣೆ ಇದ್ದು ಈ ಪ್ರೇರಣೆಯಿಂದಲೇ ಜಗತ್ತು ನಿರ್ಮಾಣವಾಗುತ್ತದೆ. ಈ ಜಗತ್ತು ಇಂಥ ಸತ್ಯವಸ್ತುವಿನೊಳಗಿಂದಲೇ ಪ್ರಕಟವಾಗುತ್ತದೆ. ಇದು ಮಾಯೆಯುಳ್ಳದ್ದಲ್ಲ. ಅದು ಅದರೊಳಗಿನ ನಿಜವಾದ ಚಲನೆಯಮೂಲಕ ಉಂಟಾದದ್ದು ಇದೆ. ಈ ಸಂಗತಿಯಮೂಲಕ ಶಂಕರನ ತತ್ವಜ್ಞಾನದಿಂದ ವೀರಶೈವ ಮತವು ಭಿನ್ನವಾಗಿದೆ. ಹಾಗೆಯೇ ಚೈತನ್ಯ ಮತ್ತು ರಾಮಾನುಜ ಇವರು ದೇವರ ವಿಷಯವಾಗಿ ವಿವರಿಸುವ ಅಭಿಪ್ರಾಯಗಳು ಬೇರೆ ಇರುವ ಮೂಲಕ ಆ ಮತಗಳಾದರೂ ವೀರಶೈವ ಮತದಿಂದ ಭಿನ್ನವಾಗಿರುತ್ತವೆ. ವೈಷ್ಣವ ಧರ್ಮಗಳು ಅಂತರಂಗ ಲೀಲೆ ಮತ್ತು ಬಹಿರಂಗ ಲೀಲೆ ಎಂದು ಲೀಲೆಯಲ್ಲಿ ಭೇದವಾಡುತ್ತವೆ. ಆದರೆ ಶಿವಶರಣರು ಹೀಗೆ ಭೇದ ಮಾಡದೆ ಲೀಲೆಯು ನಿಜವಾದುದೆಂದು ಭಾವಿಸಿರುತ್ತಾರೆ. ಲೀಲೆ ಅಥವಾ ಶಕ್ತಿಯಲ್ಲಿ ಸತ್ಯವಿದೆ, ಅದರಲ್ಲಿ ಹುಟ್ಟಿಸುವ ಸಾಮರ್ಥ್ಯವಿದೆ, ಮತ್ತು ಸಹಜವಾದ ಮೇಳನವಿದೆ. ಶಕ್ತಿಯಲ್ಲಿ ಬದಲಾವಣೆಗಳು ಆಗಬಹುದು. ಆದರೆ ಯಾವ ತರದ ಬದಲಾವಣೆಗಳಾದರೂ ಕೂಡ ಅವುಗಳಲ್ಲಿ ಯಾವಾಗಲೂ ಒಂದು ತರದ ಮೇಳಣವಿರುತ್ತದೆ.

ಆಯುಷ್ಯದಲ್ಲಿ ಮಾಡತಕ್ಕ ಕ್ರಿಯೆಗಳಲ್ಲಿ ಪಾರಮಾರ್ಥ ಶಕ್ತಿಯನ್ನು ಬೆಳಿಸಿ ಅದನ್ನು ನಿರ್ವಹಿಸುವ ಧೋರಣವು ವೀರಶೈವನದಾಗಿದೆ. ವೀರಶೈವ ಧರ್ಮದ ವೈಶಿಷ್ಟ್ಯವು ಇದೇ ಇದೆ. ಇತರ ಹಿಂದೂ ಧರ್ಮಗಳಲ್ಲಿ ಈ ವಿಷಯಕ್ಕೆ ಸಾಕಷ್ಟು ಲಕ್ಷವು ಪೂರೈಸಲ್ಪಟ್ಟಿರುವದಿಲ್ಲ. ಆಗಮ ಮತ್ತು ತಂತ್ರಗಳಲ್ಲಿ ಈ ಧೋರಣದಿಂದ ಕೆಲವು ಪ್ರಯತ್ನಗಳು ಆಗಿವೆ. ಆದರೆ ಅವುಗಳೂ ಕೂಡ ಜಗತ್ತಿನಲ್ಲಿ ಆಗತಕ್ಕ ಕಾರ್ಯಗಳ ಬಗ್ಗೆ ಲಕ್ಷವನ್ನು ಅಷ್ಟು ಪೂರೈಸಲ್ಲ. ವೀರಶೈವ

ಧರ್ಮದಲ್ಲಿ ಮಾತ್ರ ಜಗತ್ತಿನ ಕಾರ್ಯಗಳನ್ನು ಇಷ್ಟಲಿಂಗದ ದ್ವಾರಾ ಹ್ಯಾಗೆ ಲಿಂಗಮಯವಾಗಿ ಮಾಡಬೇಕೆಂದು ಹೆಚ್ಚಿಗೆ ವಿವೇಚಿಸಲ್ಪಟ್ಟಿರುತ್ತದೆ. ಇದಕ್ಕೆ ಷಟ್‌ಸ್ಥಲ ಶಾಸ್ತ್ರವೆಂಬ ಹೆಸರು. ಈ ಶಾಸ್ತ್ರದಂತೆ ವರ್ತಿಸಿದಲ್ಲಿ ಮನುಷ್ಯನ ಶಕ್ತಿಗಳೆಲ್ಲವೂ ಲಿಂಗಮಯವಾಗುತ್ತವೆ. ಆದ್ದರಿಂದ ಶರಣನು ಮೋಕ್ಷವನ್ನು ಸಹ ಹೊಂದುವದನ್ನು ಅಪೇಕ್ಷಿಸುವದಿಲ್ಲ. ಅವನು ತನ್ನ ಕ್ರಿಯೆಗಳನ್ನು ಲಿಂಗಮಯವಾಗಿ ಹೇಗೆ ಮಾಡಬೇಕೆಂಬುದನ್ನು ಅಪೇಕ್ಷಿಸುತ್ತಾನೆ. ಇದರಿಂದ ಅವನು ಪರಮಾತ್ಮನನ್ನು ತೊರೆದವನೆಂದು ಭಾವಿಸಕೂಡದು. ಯಾಕಂದರೆ ಪರಮಾತ್ಮನ ಶಕ್ತಿಯನ್ನು ಅವನು ಪೂರ್ಣವಾಗಿ ಅರಿತವನಾಗಿರುತ್ತಾನೆ. ಇದನ್ನು ಅರಿತುಕೊಂಡು ತನ್ನ ಕಾರ್ಯಗಳನ್ನು ಲಿಂಗಮಯವಾಗಿ ಮಾಡುವದು ಅವನ ಮುಖ್ಯ ಉದ್ದೇಶವಾಗಿರುತ್ತದೆ. ಇದರಿಂದಲೇ ಅವನಲ್ಲಿ ಶಾಂತಿಯು ನೆಲೆಗೊಳ್ಳುತ್ತದೆ. ಅವನು ಜಗತ್ತಿನಲ್ಲಿ ವ್ಯವಹರಿಸಿಯೂ ಕೂಡ ಅವನು ಲಿಂಗದ ಬೆಳಕಿನಲ್ಲಿರುತ್ತಾನೆ. ಇದಕ್ಕೆ ಸರ್ವಾಂಗಲಿಂಗಸ್ಥಲವೆಂಬ ಹೆಸರಿದೆ. ವೀರಶೈವ ಧರ್ಮದ ವೈಶಿಷ್ಟ್ಯವು ಇಂಥ ವಿಚಾರಗಳಲ್ಲಿಯೇ ತೋರಿಬರುತ್ತದೆ.

ಬಸವೇಶ್ವರನ ಚರಿತ್ರೆ.

(ಲೇಖಕ:— ರಾವಬಹಾದ್ದೂರ ಪಿ. ಜಿ. ಹಳಕಟ್ಟಿ,
ಬಿ, ಏ. ಎಲ್. ಎಲ್. ಬಿ. ವಿಜಾಪುರ.)

(ಲೇಖಾಂಕ:— ೧)

ಬಸವೇಶ್ವರನ ಚರಿತ್ರೆಯನ್ನು ಬರೆಯುವದಕ್ಕೋಸ್ಕರ ಬಹು ಜನರು ಅನೇಕ ಸಾರೆ ನಮಗೆ ಸೂಚಿಸುತ್ತಾ ಇದ್ದಾರೆ. ಆದರೆ ಈ ಕಾರ್ಯವು ಬಹಳ ಬಿಕ್ಕಟ್ಟಿನದೆಂದು ನಮಗೆ ತೋರಿದ್ದರಿಂದ ಈ ಸಾಹಸವನ್ನು ನಾವು ಕೈಕೊಂಡಿರುವದಿಲ್ಲ. ಯಾಕಂದರೆ ಬಸವೇಶ್ವರನ ವಿಷಯವಾಗಿ ನಂಬಲರ್ಹವಾದ ಸಂಗತಿಗಳು ಸಾಕಷ್ಟು ಪ್ರಮಾಣದಿಂದ ದೊರೆಯುವದಿಲ್ಲ. ಅವನ ಚರಿತ್ರೆಗಳುಳ್ಳ ಗ್ರಂಥಗಳು ಅನೇಕವಿರುತ್ತವೆಂಬದು ನಿಜವು. ಆದರೆ ಅವುಗಳಲ್ಲಿ ನಿರ್ದೇಶಿಸಲ್ಪಟ್ಟ ಸಂಗತಿಗಳು ಎಷ್ಟರಮಟ್ಟಿಗೆ ನಂಬಲರ್ಹವಾದವುಗಳೆಂಬದನ್ನು ಕಂಡುಹಿಡಿಯುವದು ಬಹಳ ದುಸ್ತರವಿರುತ್ತದೆ. ಆದರೆ ಈಚೀಜೆಗೆ ಅವನ ಕಾಲಕ್ಕಿನ ವಾಙ್ಮಯವು ಪ್ರಸಿದ್ಧವಾಗುತ್ತ ಇದೆ. ಅನೇಕ ಮಹತ್ವದ ಶಿಲಾಶಾಸನಗಳೂ ಪ್ರಕಾಶಕ್ಕೆ ಬಂದಿರುತ್ತವೆ. ಅಲ್ಲದೆ ಅನೇಕ ಸ್ಥಾನಿಕ ಐತಿಹ್ಯಗಳೂ ವೀರಶೈವ ಕ್ಷೇತ್ರಗಳ ವರ್ಣನೆಗಳೂ ಹೊರಪಟ್ಟಿರುತ್ತವೆ. ಇವುಗಳ ಸಹಾಯದಿಂದ ಅವನ ಚರಿತೆಯಲ್ಲಿಯ ನಿಜಾಂಶಗಳನ್ನು ಕಂಡು ಹಿಡಿಯುವದು ಕೆಲಮಟ್ಟಿಗೆ ಶಕ್ಯವಾಗಿರುವದರಿಂದ ಈ ವಿಷಯವನ್ನು ಕುರಿತು ಈ ಲೇಖದಲ್ಲಿ ಚರ್ಚಿಸಲು ಅಪೇಕ್ಷಿಸಿದ್ದೇವೆ.

ಬಸವೇಶ್ವರನ ಚರಿತ್ರೆಯನ್ನು ಮೊದಲಿನ ಕಾಲದಲ್ಲಿ ಅನೇಕ ವೀರಶೈವ ಕವಿಗಳು ಬರೆದಿರುವರು. ಅವರಲ್ಲಿ ಹರಿಹರನು ಮೊದಲನೆಯವನೆಂದು ಹೇಳಬಹುದು. ಅವನು ಬರೆದ 'ಬಸವರಾಜ ರಗಳೆಯು' ಬಹು ಪ್ರಸಿದ್ಧವಾಗಿರುತ್ತದೆ. ಪಾಲ್ಕುರಿಕೆ ಸೋಮನಾರಾಧ್ಯನು ಬಸವೇಶ್ವರನ ಚರಿತ್ರೆಯನ್ನು ಆಂಧ್ರಭಾಷೆಯಲ್ಲಿ ಬರೆದನು. ಆಮೇಲೆ ಇದನ್ನು ಅನುಸರಿಸಿ ಭೀಮಕವಿಯು ಕನ್ನಡದಲ್ಲಿ ಬಸವಪುರಾಣವನ್ನು ಬರೆದನು. ಆದರೆ ಈ ಮೂವರು ಮಹಾ ಕವಿಗಳಲ್ಲಿ ಯಾರೂ ಬಸವನ ಸಮಕಾ

ಲೀನರಲ್ಲ. ಸೋವಯಾರಾಧ್ಯನು ಆಂಧ್ರದೇಶದವನು. ಹಾಗೆಯೇ ಭೀಮ ಕವಿಯಾದರೂ ಆಂಧ್ರದೇಶಕ್ಕೆ ಸಮೀಪವರ್ತಿಯಾದ ಪ್ರಾಂತದವನು. ಇವರು ಬಸವೇಶ್ವರನಿದ್ದ ಪ್ರಾಂತದಿಂದ ಬಹು ದೂರದಲ್ಲಿದ್ದು ಕೇವಲ ಜನರ ಹೇಳಿಕೆಗಳ ಮೇಲಿಂದ ಅವನ ಚರಿತ್ರೆಯನ್ನು ಬರೆದಿರಬೇಕೆಂದು ತೋರುತ್ತದೆ. ಹರಿಹರನ ಸ್ಥಿತಿಯಾದರೂ ಹೀಗೆಯೇ ಇರುತ್ತದೆ. ಅವನು ದಕ್ಷಿಣ ದೇಶದಲ್ಲಿ ಹೆಚ್ಚಾಗಿ ಇದ್ದವನು. ಅವನು ತನ್ನ ಒಂದು ರಗಳೆಯಲ್ಲಿ ಕೂಡಲಸಂಗಮದೇವ ಸ್ಥಾನವು ಬಾಗೇವಾಡಿ ಗ್ರಾಮದಿಂದ ಪೂರ್ವಕ್ಕೆ ಇರುತ್ತದೆಂದು ಬರೆದಿದ್ದಾನೆ. ಇದರ ಮೇಲಿಂದ ಅವನು ಬಾಗೇವಾಡಿಯನ್ನಾಗಲಿ ಇಲ್ಲವೆ ಕೂಡಲಸಂಗಮಸ್ಥಾನವನ್ನಾಗಲಿ ಪ್ರತ್ಯಕ್ಷ ನೋಡದಂತೆ ಕಾಣುವದಿಲ್ಲ. ಯಾಕಂದರೆ ಬಾಗೇವಾಡಿಯ ದಕ್ಷಿಣ ದಿಕ್ಕಿಗೆ ಕೂಡಲಸಂಗಮ ದೇವಾಲಯವು ಇರುತ್ತದೆ. ಅದು ಪೂರ್ವಕ್ಕೆ ಇರುವದಿಲ್ಲ. ಆದರೂ ಹರಿಹರನ ಕಾಲವು ಬಸವೇಶ್ವರನಿಗೆ ಸಮೀಪವಾಗಿರುವದರಿಂದ ಅವನ ಕಾಲದಲ್ಲಿ ಅನೇಕ ದಂತಕಥೆಗಳು ಬಸವೇಶ್ವರನ ಬಗ್ಗೆ ಉತ್ಪನ್ನವಾಗಿದ್ದರೂ ಕೂಡ ಅವನು ಯಾವಾಗಲೂ ತಾನು ನಿರೂಪಿಸುವ ವಿಷಯಗಳನ್ನು ಅತಿಶಯೋಕ್ತಿಯನ್ನು ಮಾಡಿ ಹೇಳುವದಿಲ್ಲ. ಆದ್ದರಿಂದ ಅವನ ವಿವರಣೆಗಳಿಗೆ ನಾವು ಮಹತ್ವವನ್ನು ಕೊಡಬೇಕಾಗುತ್ತದೆ. ಮುಂದೆ ೧೫ನೇ ೧೬ನೇ ಶತಮಾನಗಳಲ್ಲಿ ಅನೇಕ ವೀರಶೈವ ಗ್ರಂಥಗಳು ವಿದ್ವಜ್ಜನರಿಂದ ಬರೆಯಲ್ಪಟ್ಟವು. ಆಗ ಬಸವೇಶ್ವರನ ಕಾಲದ ಗ್ರಂಥಗಳನ್ನು ಸಂಗ್ರಹಿಸುವ ಪ್ರಯತ್ನಗಳೂ ನಡೆದವು. ಆದರೆ ಆ ಕಾಲಕ್ಕೆ ರಚಿಸಲ್ಪಟ್ಟ ಗ್ರಂಥಗಳಲ್ಲಿ ಸಹ ಬಸವೇಶ್ವರನ ಬಗ್ಗೆ ವಿವರಣೆಗಳು ಹೆಚ್ಚಾಗಿ ಕಂಡುಬರುವದಿಲ್ಲ. ಅವನ ಸ್ತೋತ್ರಗಳುಳ್ಳ ಪದ್ಯಗಳು ಮಾತ್ರ ಹೇರಳವಾಗಿ ದೊರೆಯುತ್ತವೆ. ಅವುಗಳಲ್ಲಿ ಐತಿಹಾಸಿಕ ಕಥಾಭಾಗಗಳು ಅತ್ಯಲ್ಪವಾಗಿರುತ್ತವೆ. ಈ ಗ್ರಂಥಗಳಲ್ಲದೆ ಕಾಲಜ್ಞಾನವೆಂಬ ಹೆಸರಿನ ಅನೇಕ ಗ್ರಂಥಗಳು ಬೇರೆ ಬೇರೆ ಕಾಲಗಳಲ್ಲಿ ಬರೆಯಲ್ಪಟ್ಟಿರುತ್ತವೆ. ಅವುಗಳಲ್ಲಿ ಹಿಂದಿನ ಕಾಲದಲ್ಲಿ ಆಗಿಹೋದ ಐತಿಹಾಸಿಕ ವಿಷಯಗಳು ಕಂಡುಬರುತ್ತವೆ. ಅವುಗಳಲ್ಲಿ ಬಸವೇಶ್ವರನ ವಿವರಣೆಗಳಿರುತ್ತವೆ. ಆದರೆ ಅವುಗಳಲ್ಲೆಲ್ಲ ದಂತಕಥೆಗಳೇ ಹೆಚ್ಚಾಗಿ ತುಂಬಿರುತ್ತವೆ. ಇದಲ್ಲದೆ ವೀರಶೈವ ಸಮಾಜದಲ್ಲಿ ಕಾಲಕಾಲಕ್ಕೆ ಉತ್ಪನ್ನರಾದ ಶಿವಶರಣರ ಚರಿತ್ರೆಗಳನ್ನು ಸಂಗ್ರಹಿಸುವ ಪದ್ಧತಿಯು ಹಿಂದುಗಡೆ ಉಂಟಾದದ್ದು ಕಂಡು

ಬರುತ್ತದೆ. ಅವುಗಳಲ್ಲಿ ಆಗಿಂದಾಗ್ಗೆ ಐತಿಹಾಸಿಕ ಮತ್ತು ಚಂತ್ರಾತ್ಮಕ ವಿಷಯಗಳಿರುತ್ತವೆ. ಶರಣ ಲೀಲಾಮೃತ ಮತ್ತು ಭೈರವೇಶ್ವರ ನೊದಲಾದ ಪುರಾಣಾಂತರ್ಗತ ಕಥೆಗಳು ಈ ವರ್ಗದಲ್ಲಿ ಬರುತ್ತವೆ. ಅವು ಬಹುತರವಾಗಿ ಗದ್ಯ, ಸಾಂಗತ್ಯ ಅಥವಾ ಜೌದದನಗಳಲ್ಲಿ ಬರೆಯಲ್ಪಟ್ಟಿರುತ್ತವೆ. ಆದರೆ ಬಸವೇಶ್ವರನ ಬಗ್ಗೆ ಈ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟ ವಿಷಯಗಳಲ್ಲಿ ಏಕ ವಾಕ್ಯತೆಯು ಇರುವದಿಲ್ಲ. ವೀರಶೈವ ಗ್ರಂಥಗಳ ಪರಿಸ್ಥಿತಿಯು ಹೀಗೆ ಇರುವದು ಕಂಡುಬರುತ್ತದೆ. ಇದು ನಿಜವಾಗಿ ಅತ್ಯಂತ ಕ್ಲೇಶದಾಯಕವಾಗಿರುತ್ತದೆ.

ಬಸವೇಶ್ವರನ ವಿಷಯವಾಗಿ ಇತರ ಧರ್ಮೀಯರು ಅವರಲ್ಲಿ ಮುಖ್ಯವಾಗಿ ಜೈನರು ಕೆಲವು ಗ್ರಂಥಗಳನ್ನು ಬರೆದಿರುತ್ತಾರೆ. ಆದರೆ ಅವೆಲ್ಲವುಗಳು ಈ ಮಹಾಪುರುಷನ ಬಗ್ಗೆ ದ್ವೇಷಬುದ್ಧಿಯಿಂದ ಬರೆದವುಗಳಿದ್ದದ್ದು ಅವುಗಳನ್ನು ನೋಡಿದ ಕೂಡಲೇ ಗೊತ್ತಾಗುತ್ತದೆ. ನಂಬಲರ್ಹವಾದವುಗಳಲ್ಲದ ಅನೇಕ ಸಂಗತಿಗಳು ಅವುಗಳಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ಇದಲ್ಲದೆ ಅವುಗಳನ್ನು ಬರೆದವರಾರೂ ಬಸವೇಶ್ವರನಿಗೆ ಸಮಕಾಲೀನರಲ್ಲ.

ಹಿಂದುಸ್ತಾನದಲ್ಲಿ ಈ ವರೆಗೆ ಅನೇಕ ಧರ್ಮಸ್ಥಾಪಕರೂ, ಧರ್ಮಪ್ರಸಾರಕರೂ ಆಗಿಹೋಗಿದ್ದಾರೆ. ಆದರೆ ನಿಜಾಂಶಗಳುಳ್ಳ ಅವರ ಚರಿತ್ರೆಗಳು ಕೆಲಮಟ್ಟಿಗಾದರೂ ಉಪಲಬ್ಧವಿವೆ. ಆದ್ದರಿಂದ ಆ ಮಹಾನುಭಾವರ ವಿಷಯವಾಗಿ ಅವರ ಭಾವನವು ಇಡೀ ದೇಶದಲ್ಲಿ ಉಂಟಾಗಲು ಕಾರಣವಾಗಿರುತ್ತದೆ. ಅಂಥ ಮಹಾಪುರುಷರಲ್ಲಿ ಬಸವೇಶ್ವರನು ಒಬ್ಬನಾಗಿದ್ದಾನೆ. ಅವನು ಸಮಾಜದಲ್ಲಿ ಒಂದು ಮಹತ್ವದ ಧಾರ್ಮಿಕ ಕ್ರಾಂತಿಯನ್ನು ಮಾಡಿದವನೂ, ಸಮಾಜಸುಧಾರಕನೂ ಆಗಿದ್ದಾನೆ. ಯಾವ ಸುಧಾರಣೆಗಳು ಸಾಂಪ್ರತಕಾಲದಲ್ಲಿ ದುಸ್ತರವಾದುವೆಂದು ಭಾವಿಸಲ್ಪಟ್ಟಿರುತ್ತವೆಯೋ ಅಂಥವುಗಳನ್ನು ಸಹ ಅವನು ವ್ಯವಹಾರದಲ್ಲಿ ತಂದವನಾಗಿದ್ದಾನೆ. ಚಿಕ್ಕಂದಿನಿಂದ ಮರಣಕೊಂದುವವರೆಗೂ ಅವನು ಕಷ್ಟ ಭೋಗಿಸಿರುತ್ತಾನೆ. ಸ್ವಬಾಂಧವರು, ರಾಜರು, ಇತರ ಸಮಾಜದವರು ಕೊಟ್ಟ ಅನೇಕ ತೊಂದರೆಗಳಿಗೆ ಅವನು ಈಡಾಗಿದ್ದಾನೆ ಆದರೂ ಅವನು ದೇಶದಲ್ಲಿ ಒಂದು ಮಹತ್ವದ ಕ್ರಾಂತಿಯನ್ನುಂಟು ಮಾಡಲು ಸಮರ್ಥನಾದನು. ಇಂಥವನ ಪೂರ್ಣ ಚರಿತ್ರೆಯು ಗೊತ್ತಾಗದೆ ಇದ್ದದ್ದು

ವೀರಶೈವರಿಗಷ್ಟೇಅಲ್ಲ, ಕರ್ನಾಟಕಕ್ಕೂ ಹಿಂದುಸ್ತಾನಕ್ಕೂ ದುರ್ದೈವದ ಸಂಗತಿಯಾಗಿದೆ.

ಅವನ ಚರಿತ್ರೆಯು ಉಪಲಬ್ಧವಾಗದಿರಲಿಕ್ಕೆ ಕೆಲವು ಕಾರಣಗಳಿವೆ. ಅವನ ಚಳವಳಿಯಿಂದ ಸಮಾಜದಲ್ಲಿ ಒಂದು ಕ್ಷೋಭವು ಎದ್ದಿತು ಅವನು ಧರ್ಮಬಾಹಿರನೆಂದು ಮೊದಲು ಎಣಿಸಲ್ಪಟ್ಟನು ಹೀಗೆ ಎಣಿಸಲ್ಪಟ್ಟವನ ಚರಿತ್ರೆಯನ್ನು ಆಗಿನವರು ಬರೆಯುವವರಾರು? ಆರಂಭ ಕಾಲದಲ್ಲಿ ಬಸವೇಶ್ವರನಿಗೆ ಸಹಾಯವಾದವರು ಪ್ರಮುಖ ಸಮಾಜದವರಲ್ಲ. ಅವನಿಗೆ ಸಹಾಯಮಾಡಿದವರು ಒಬ್ಬ ಅಗಸ, ಒಬ್ಬ ಕಿನ್ನರೀಬಾರಿಸುವವ, ಒಬ್ಬ ಮುದ್ದಲಿಗ, ಒಬ್ಬ ಒಡ್ಡರ ನಾಯಕ, ಒಬ್ಬ ನಾಪಿತ, ಹೊಲೆಯ, ಢೋರ, ಕಟ್ಟಿಗೆಯನ್ನು ಮಾರಿ ಉಪಜೀವಿಸುವವನೊಬ್ಬ. ದೇಶತ್ಯಾಗ ಮಾಡಿದ ಒಬ್ಬ ಸ್ತ್ರೀಯಳು ಇಂಥವರೇ ಇದ್ದಾರೆ. ಕ್ರೈಸ್ತನಿಗೆ ಮೊದಲು ಅನುಯಾಯಿಗಳಾದವರು ಇಂಥವರೇ. ಮಹಮ್ಮದ, ಬುದ್ಧ ಇವರ ಸ್ಥಿತಿಯಾದರೂ ಹೀಗೆಯೇ ಇದೆ. ಮೇಲಿನ ತರಗತಿಯ ಸಮಾಜದವರು ಇಂಥ ಮಹಾತ್ಮರನ್ನು ಆರಂಭದಲ್ಲಿ ಪೀಡಿಸುತ್ತಾರೆ. ಈ ಸ್ಥಿತಿಯಲ್ಲಿ ಇವರ ಚರಿತ್ರೆಗಳನ್ನು ಸಮಕಾಲೀನರು ಹೇಗೆ ಬರದಿಡಬೇಕು? ಮೇಲ್ತರಗತಿಯವರು ಬರೆಯುವ ಸಂಭವವಿಲ್ಲ ಕೆಳಗಿನವರು ಪೀಡಿಸಲ್ಪಟ್ಟವರು, ವಿಪನ್ನಸ್ಥಿತಿಯಲ್ಲಿದ್ದವರು. ಆದ್ದರಿಂದ ಇಂಥ ಮಹಾನುಭಾವರ ಚರಿತ್ರೆಗಳನ್ನು ಬರೆದಿಡುವ ಕಾಲವು ಮುಂದೆ ನೂರಿನ್ನೂರು ವರ್ಷಗಳ ಮೇಲೆ ಬರುತ್ತದೆ. ಆದರೆ ಈ ಅವಧಿಯಲ್ಲಿ ಅವರ ಬಗ್ಗೆ ಅನೇಕ ದಂತಕಥೆಗಳು ಉತ್ಪನ್ನವಾಗುತ್ತವೆ. ಭಾವಿಕ ಜನರು ಅಂಥವುಗಳನ್ನು ಸಂಗ್ರಹಿಸಿ ಈ ಮಹಾನುಭಾವರ ಚರಿತ್ರೆಗಳನ್ನು ಹಿಂದುಗಡೆ ಒರೆದಿಡುತ್ತಾರೆ. ಇದೇ ಸ್ಥಿತಿಯು ಬಸವೇಶ್ವರನ ಚರಿತ್ರೆಯದಾಗಿದೆ.

ಬಸವೇಶ್ವರನು ಕಷ್ಟದಿಂದಲೇ ತನ್ನ ಜೀವಿತಕ್ರಮವನ್ನು ಪ್ರಾರಂಭಿಸಿದನು. ಆದರೆ ಅವನು ತನ್ನ ತತ್ವವನ್ನು ಬಿಡಲು ಒಪ್ಪಲಿಲ್ಲ. ತನ್ನ ಮನೆ ಮಾರು ದೇಶಕೋಶಗಳನ್ನು ತೊರೆದನು. ಆದರೆ ಮುಂದೆ ಅವನು ಒಂದು ಮಹತ್ವದ ರಾಜ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದನು. ಆದರೆ ಅವನು ಅಲ್ಲಿ ಇದ್ದದ್ದು ೫-೬ ವರ್ಷ ಮಾತ್ರ. ಇಷ್ಟರಲ್ಲಿಯೇ ದೇಶದಲ್ಲಿ ಒಂದು ಮಹತ್ತಾದ ಕ್ರಾಂತಿಯುಂಟಾಯಿತು. ಆ ಕ್ರಾಂತಿಯ ಮೂಲಕ ರಾಜನನ್ನು ಮೊದಲ್ಗೊಂಡು ಆಗಿನ ಎಲ್ಲ ಪ್ರಮುಖ ಸಮಾಜದವರು ಬಸ

ವೇಶ್ವರನ ಅನುಯಾಯಿಗಳನ್ನು ಸಂಪೂರ್ಣ ನಾಶಮಾಡುವ ಪ್ರಯತ್ನ ಆ ದೇಶದಲ್ಲಿ ತೊಡಗಿದರು. ಆಗ ಇವರು ಅರಣ್ಯವನ್ನು ಸೇರಬೇಕಾಯಿತು. ಆ ಅರಣ್ಯದಲ್ಲಿ ಅವರು ನಾಶವಾದರು. ಆದರೆ ಅಷ್ಟರಲ್ಲಿ ಬಸವೇಶ್ವರನು ಸಮಾಜದಲ್ಲಿ ಬಿತ್ತಿದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯ ಬೀಜಗಳು ಆ ಅರಣ್ಯ ಪ್ರದೇಶದಲ್ಲಿ ನಾಶಹೊಂದಲಿಲ್ಲ. ಅವು ಮುಂದೆ ಮೊಳೆತು ಮರವಾಗಿ ಬೆಳೆದು ಎಲ್ಲ ಕಡೆಗೂ ಪಸರಿಸಿದವು. ಹೀಗೆ ದೇಶದಲ್ಲಿ ಮೊದಲು ಕ್ರಾಂತಿಯುಂಟಾಗಿ ಎಲ್ಲೆಲ್ಲಿಯೂ ಅವ್ಯವಸ್ಥೆಯಾಗಿರಲು ಇದಕ್ಕೆ ಕಾರಣನಾದವನ ಚರಿತ್ರೆಯನ್ನು ಆಗಿನವರು ಬರೆದಿಡುವವರಾರು? ಇದರಿಂದ ಬಸವೇಶ್ವರನ ಚರಿತ್ರೆಯು ಆಗ ಬರೆಯಲ್ಪಟ್ಟಂತೆ ತೋರುವದಿಲ್ಲ. ಆದರೆ ಮುಂದೆ ಒಂದೆರಡು ತಲಾಂತರಗಳು ಸಂದಿ ಹೋದಬಳಿಕ ಅವನ ಚರಿತ್ರೆಗಳು ಬರೆಯಲ್ಪಡಹತ್ತಿದವು. ಅಷ್ಟರಲ್ಲಿ ಅವನ ವಿಷಯವಾಗಿ ಅನೇಕ ಕಾಲ್ಪನಿಕ ಕಥೆಗಳು ಉತ್ಪನ್ನವಾಗಿದ್ದವು. ಮತ್ತು ಅವುಗಳಲ್ಲಿ ಅವನ ಚರಿತ್ರೆಯ ನಿಜಾಂಶಗಳು ಅಡಗಿಹೋಗಿದ್ದವು. ಮುಂದೆ ಕೆಲವು ಕಾಲದ ಮೇಲೆ ಮತಾಧಿಕಾರಿಗಳು ಈ ಶಿವಶರಣರ ಬಗ್ಗೆ ಪುರಾಣಗಳನ್ನು ಬರೆಯಹತ್ತಿದರು. ಈ ಪುರಾಣಕರ್ತರು ತಮ್ಮ ಪುರಾಣಗಳ ಮೂಲಕ ಜಂಗಮರ ಮಹತ್ವವನ್ನು ಮತ್ತು ಅವರ ಬಗ್ಗೆ ಅಂಧಶ್ರದ್ಧೆಯನ್ನು ಅಜ್ಞಜನರಲ್ಲಿ ಹೆಚ್ಚಿಸುವ ಉದ್ದಿಶ್ಯವುಳ್ಳವರಾದ್ದರಿಂದ ನಾನಾಬಗೆಯ ಕಟ್ಟು ಕಥೆಗಳನ್ನು ಅವರು ಇವುಗಳಲ್ಲಿ ಸೇರಿಸಿದರು. ಈ ಪ್ರಕಾರ ಮಿತ್ರರೂ, ಶತ್ರುಗಳೂ ಎಲ್ಲರೂ ಕೂಡಿ ಬಸವೇಶ್ವರನು ಮಾಡಿದ ಮಹತ್ಕಾರ್ಯಗಳನ್ನು ಯಾರೂ ಅರಿಯದಂತೆ ಮಾಡಿಬಿಟ್ಟಿದ್ದಾರೆ! ಈತರದ ಪರಿಸ್ಥಿತಿಯು ಹಿಂದುಸ್ತಾನದಲ್ಲಿ ಆಗಿಹೋದ ಒಬ್ಬ ಮಹಾಪುರುಷನ ಚರಿತ್ರೆಯ ಬಗ್ಗೆ ಉಂಟಾಗಿರುವದು ಅತ್ಯಂತ ಖೇದಜನಕವಾಗಿದೆ.

ಈ ಸ್ಥಿತಿಯಲ್ಲಿ ಬಸವೇಶ್ವರನ ಚರಿತ್ರೆಯನ್ನು ಯಾವುದಾದರು ಒಂದು ಗ್ರಂಥವನ್ನು ಅವಲಂಬಿಸಿ ಬರೆಯಲಿಕ್ಕೆ ಬರಲಾರದು. ಅವನ ಬಗ್ಗೆ ಹೇಳಿದ ಪ್ರತಿಯೊಂದು ವಿಷಯವನ್ನು ನಾವು ಶೋಧಿಸಬೇಕಾಗಿದೆ. ಈಗ ಯಾವದನ್ನೂ ನಾವು ನಂಬಲಿಕ್ಕೆ ಬರದಂತೆ ಆಗಿದೆ. ಆದರೂ ನಾವು ನಿರಾಶರಾಗುವ ಕಾರಣವಿಲ್ಲ. ಯಾಕಂದರೆ ಅವನ ವಿಷಯವಾಗಿ ಬರೆಯಲ್ಪಟ್ಟ ಗ್ರಂಥಗಳನ್ನು ನಾವು ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ ಅವುಗಳಲ್ಲಿ

ನಿಜೇತಿಹಾಸದ ಕಣಗಳಿವೆ ಎಂಬದು ತಿಳಿದುಬರುತ್ತದೆ. ಆದರೆ ಈ ಕಣಗಳು ನಿಜವಲ್ಲದ ಸಂಗತಿಗಳಿಂದ ಮುಚ್ಚಿಹೋಗಿರುತ್ತವೆ. ಹೀಗೆ ಅವು ಮರೆಯಾಗಿದ್ದರೂ ಅವುಗಳ ಹೊಳಪು ಹೋಗಲಾರದು. ಇಂಥ ಕಣಗಳನ್ನು ನಾವು ಆಯ್ದುಕೊಳ್ಳಬೇಕು. ಅವುಗಳನ್ನು ಆಯ್ದು ಸರಿಗೊಳಿಸಿ ಪೋಣಿಸುವ ಪ್ರಯತ್ನ ಮಾಡಿದಲ್ಲಿ ಬಸವೇಶ್ವರನ ಚರಿತ್ರೆಯನ್ನು ಬರೆಯುವದು ಶಕ್ಯವಾಗುತ್ತದೆ.

ಹೀಗೆ ಸಿದ್ಧಪಡಿಸಿದ ಚರಿತ್ರೆಯು ಸಣ್ಣದಾಗಬಹುದು. ಆದರೆ ಅದರ ಮಹತ್ವವು ಕಡಿಮೆಯಾಗಲಾರದು. ಈಗ ಸಾಮಾನ್ಯವಾಗಿ ಜನರು ಮಹಾಪುರುಷರ ಜೀವಿತದಲ್ಲಿ ಆಗಿಹೋಗಿರುವ ಸಣ್ಣ ದೊಡ್ಡ ಸಂಗತಿಗಳನ್ನೆಲ್ಲ ತಿಳಿಯಲು ಅಪೇಕ್ಷಿಸುತ್ತಾರೆ. ಆದರೆ ಈ ರೀತಿಯಾಗಿ ಹಿಂದುಸ್ತಾನದಲ್ಲಿಯ ಧಾರ್ಮಿಕ ಪುರುಷರ ಚರಿತ್ರೆಗಳನ್ನು ಬರೆಯುಲಿಕ್ಕೆ ಬರಲಾರದು. ಈಗಿನವರಂತೆ ಅವರು ತಮ್ಮಾದನ್ನು ಎಂದೂ ಹೇಳಿಕೊಂಡಿಲ್ಲ. ಈ ಪರಿಸ್ಥಿತಿಯು ಬಸವೇಶ್ವರನ ಚರಿತ್ರೆಯಲ್ಲಿಯೂ ಕಂಡುಬರುತ್ತದೆ. ಈ ಸ್ಥಿತಿಯಲ್ಲಿ ಅವನ ಚರಿತ್ರೆಯಲ್ಲಿ ಅವನು ಆಗಿನ ಕಾಲದಲ್ಲಿ ಯಾವ ಧೋರಣದಿಂದ ನಡೆದನು, ಯಾವ ಕಾರ್ಯಗಳನ್ನು ಕೈಕೊಂಡನು, ಯಾವ ಬಗೆಯ ಕ್ರಾಂತಿಯನ್ನು ಮಾಡಿದನು, ಇವುಗಳನ್ನು ಸಾಮಾನ್ಯವಾಗಿ ತಿಳಿಯಲು ಶಕ್ಯವಿರುತ್ತದೆ. ಈ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡು ನಾವು ಅವನ ಚರಿತ್ರೆಯನ್ನು ಸಂಶೋಧಿಸಬೇಕಾಗಿರುತ್ತದೆ.

ಬಸವೇಶ್ವರನ ಚರಿತ್ರೆಗಳಲ್ಲಿ ಆವ ಸಂಗತಿಗಳು ನಂಬಲು ಅರ್ಹವಾದುವು ಎಂಬುದನ್ನು ಕಂಡುಹಿಡಿಯಲಿಕ್ಕೆ ಏನಾದರೂ ಸಾಧನಗಳಿವೆಯೇ ಹೇಗೆ ಎಂದು ಅನೇಕರು ಪ್ರಶ್ನೆಮಾಡಬಹುದು. ಅವರಿಗೆ ಇಂಥ ಸಾಧನಗಳು ಈಜಿಗೆ ಉಪಲಬ್ಧವಾಗಹತ್ತಿವೆ ಎಂದು ನಾವು ಹೇಳಬಹುದಾಗಿದೆ. ಅವು ಯಾವವೆಂದರೆ:—

(೧) ಶಿಲಾಶಾಸನಗಳು:— ದೇಶದ ಮತ್ತು ವ್ಯಕ್ತಿಯ ನಿಜಸ್ಥಿತಿಯನ್ನು ತಿಳಿಯಲಿಕ್ಕೆ ಇವು ಅತ್ಯುತ್ತಮ ಸಾಧನಗಳಾಗಿವೆ. ಇವು ಐತಿಹಾಸಿಕ ಸಂಗತಿಗಳು ಜರಗಿದ ಕಾಲಕ್ಕೆ ಬರೆದವುಗಳಿರುತ್ತವೆ. ಜನ ಸಾಮಾನ್ಯರೆಲ್ಲರು ನೋಡುವಂಥ ಸ್ಥಳದಲ್ಲಿ ಅಂದರೆ ದೇವಾಲಯ ಮೊದಲಾದ ಸಾರ್ವಜನಿಕ ಸ್ಥಲಗಳಲ್ಲಿ ಅವು ಇಡಲ್ಪಟ್ಟಿರುತ್ತವೆ. ಆದ್ದರಿಂದ ಅವುಗಳಲ್ಲಿ ಸುಳ್ಳು ಸಂಗತಿಗಳನ್ನು ಅವುಗಳ ಲೇಖಕರು ಬರೆಯುವದು ಶಕ್ಯವಿಲ್ಲ. ಈಚೀಚಿಗೆ ಬಸವೇಶ್ವರನ ಕಾಲದಲ್ಲಾದ ಅನೇಕ ಶಿಲಾಶಾಸನಗಳು ಉಪಲಬ್ಧವಾಗಹತ್ತಿರುತ್ತವೆ. ಅವುಗಳ ಸಹಾಯದಿಂದ ಬಸವೇಶ್ವರನ ಚರಿತ್ರೆಯಲ್ಲಿ ನಂಬಲರ್ಹವಾದ ಸಂಗತಿಗಳಾವವೆಂಬದನ್ನು ನಾವು ಕಂಡು ಹಿಡಿಯಬಹುದಾಗಿದೆ.

(೨) ವಚನವಾಙ್ಮಯವು-ಬಸವೇಶ್ವರನಿದ್ದ ಕಾಲಕ್ಕೆಯೇ ಈ ವಾಙ್ಮಯವು ಉಚ್ಚಸ್ಥಿತಿಗೆ ಬಂದಿದೆ. ಅವನ ಕಾಲಕ್ಕಿದ್ದ ಶಿವಶರಣರೇ ಅವುಗಳನ್ನು ರಚಿಸಿದ್ದಾರೆ. ಅವುಗಳನ್ನು ನಾವು ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿದಲ್ಲಿ ನಿಜವಾದ ಅನೇಕ ಸಂಗತಿಗಳು ಅವುಗಳೊಳಗಿಂದ ಹೊರಬೀಳುವಂತೆ ಇವೆ. ನಮ್ಮ ದೇಶದಲ್ಲಿ ಆಗಿಹೋದ ಮಹಾನುಭಾವರು ಆತ್ಮಚರಿತ್ರೆಯನ್ನು ಬರೆಯಲು ಅಪೇಕ್ಷಿಸದಿದ್ದರೂ ಅವರು ಅಕಸ್ಮಾತ್ತಾಗಿ ತಮ್ಮ ಬಾಯಿಂದ ತಮ್ಮ ಚರಿತ್ರೆಯ ಮೇಲೆ ಪ್ರಕಾಶವನ್ನು ಕೆಡಹುವಂತಹ ವಾಕ್ಯಗಳನ್ನು ಆಡುವದುಂಟು. ಅಂಥ ಉಕ್ತಿಗಳು ಆ ಮಹಾನುಭಾವರ ಚರಿತ್ರೆಯ ಮೇಲೆ ವಿಶೇಷ ಪ್ರಕಾಶವನ್ನು ಹರಹುತ್ತಿವೆ.

(೩) ಹರಿಹರನ ರಗಳೆಗಳು-ಹರಿಹರನ ಕಾಲವು ಬಸವೇಶ್ವರನಿಗೆ ಸಮೀಪವಾಗಿರುತ್ತದೆ. ಅವನು ಶಿವಶರಣರ ಅನೇಕ ಚರಿತ್ರೆಗಳನ್ನು ಬರೆದಿರುತ್ತಾನೆ. ಅವುಗಳಿಂದ ಬಸವೇಶ್ವರ ಮೊದಲಾದ ಶಿವಶರಣರ ಚರಿತ್ರೆಗಳ ಮೇಲೆ ಮಹತ್ವದ ಪ್ರಕಾಶವು ಬೀಳುವಂತಿದೆ.

(೪) ಸ್ಥಾನಿಕ ಐತಿಹ್ಯಗಳು ಮತ್ತು ಕುರುಹುಗಳು-ಶಿವಶರಣರು ಯಾವ ಪ್ರಾಂತದಲ್ಲಿ ಅಥವಾ ಗ್ರಾಮದಲ್ಲಿ ಇದ್ದರೆಂಬದನ್ನು ನಾವು ಕಂಡು ಹಿಡಿದು ಆ ಸ್ಥಾನಗಳನ್ನು ನಾವು ನಿರೀಕ್ಷಿಸಬೇಕು. ಅಂದರೆ ಅಲ್ಲಿ ಇರುವ ದೇವಾಲಯಗಳು, ಆ ದೇವಾಲಯಗಳಲ್ಲಿರುವ ಕುರುಹುಗಳು ಇವೇ ಮೊದಲಾದವುಗಳನ್ನು ಪರೀಕ್ಷಿಸಬೇಕು. ಇವುಗಳು ಪುರಾತನ ಕಾಲದ ಪರಿಸ್ಥಿತಿಯ ಮೇಲೆ ಚನ್ನಾಗಿ ಬೆಳಕನ್ನು ಕೆಡಹುತ್ತವೆ.

(೫) ಮಹಾತ್ಮರ ಚರಿತ್ರೆಗಳಲ್ಲಿ ಕೆಲವೊಂದು ಸಂಗತಿಯು ಬಹು ಪುರಾತನಕಾಲದಿಂದ ಈ ವರೆಗೆ ಒಂದೇ ವಿಧವಾಗಿ ನಿರೂಪಿಸಲ್ಪಟ್ಟಿದ್ದು ಕಂಡುಬರುತ್ತದೆ. ಅಂಥವುಗಳನ್ನು ನಾವು ಕೂಡಲೆ ಅವಿಶ್ವಸಿಸಬಾರದು.

ಅವುಗಳ ಬಗ್ಗೆ ಭಿನ್ನ ಮತ್ತು ವಿರುದ್ಧವಾದ ಸಂಗತಿಗಳು ಇದ್ದರೆ ಮಾತ್ರ ಅವುಗಳ ಸತ್ಯತೆಯ ಬಗ್ಗೆ ನಾವು ಅವಶ್ಯವಾಗಿ ಪರೀಕ್ಷಿಸಬೇಕು. ಆದರೆ ಕೆಲವೊಂದು ವಿಷಯದ ಬಗ್ಗೆ ಶಿವಶರಣರ ಕಾಲದಿಂದ ಈ ವರೆಗೆ ಎಲ್ಲ ಗ್ರಂಥಕಾರರ ವಿವರಣೆಗಳು ಮತ್ತು ದಂತಕಥೆಗಳು ಒಂದೇ ವಿಧವಾಗಿದ್ದು ಅವುಗಳನ್ನು ಸಮರ್ಥಿಸಲು ಸ್ಥಾನಿಕ ಕುರುಹುಗಳೂ ಜನರಲ್ಲಿ ಪ್ರವಾದಗಳೂ ಇದ್ದಾದರೆ ನಾವು ಅವುಗಳಿಗೆ ಮಹತ್ವಕೊಡಬೇಕು. ವಿರುದ್ಧ ಆಧಾರಗಳು ದೊರೆಯುವ ವರೆಗಾದರೂ ನಾವು ಅವುಗಳನ್ನು ನಂಬಬೇಕು.

ಈ ಎಲ್ಲ ಸಂಗತಿಗಳನ್ನು ನಾವು ನಿರೀಕ್ಷಿಸಿದಲ್ಲಿ ಒಬ್ಬ ವ್ಯಕ್ತಿಯ ಚರಿತ್ರೆಯಲ್ಲಿ ಅನೇಕ ಅದ್ಭುತ ಸಂಗತಿಗಳು ಇದ್ದರೂ ಕೂಡ ಅವುಗಳಲ್ಲಿ ನಿಜವಾದ ಸಂಗತಿಗಳಾವವು ಎಂಬುದನ್ನು ಕಂಡುಹಿಡಿಯಲು ಶಕ್ಯವಾಗುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ಬಸವೇಶ್ವರನ ಚರಿತ್ರೆಯನ್ನು ಈಗಿನ ಮತ್ತು ಮುಂದಿನ ಲೇಖಾಂಕಗಳಲ್ಲಿ ನಿರೂಪಿಸಲು ಪ್ರಯತ್ನಿಸುತ್ತೇವೆ.

ಈಚೆಗೆ ಬಸವೇಶ್ವರನ ಬಗ್ಗೆ ಇಡೀ ಪ್ರಾಂತದಲ್ಲಿ ಆದರ ಭಾವವು ಉತ್ಪನ್ನವಾಗಹತ್ತಿರುತ್ತದೆ. ಆದ್ದರಿಂದ ಅವನ ಚರಿತ್ರೆಯು ಆವುದೆಂಬದನ್ನು ತಿಳಿಯಲು ಬಹುಜನರ ಅಪೇಕ್ಷಿಸುತ್ತಾರೆ. ಆದರೆ ಒಂಭತ್ತು ನೂರು ವರ್ಷಗಳ ತರುವಾಯ ಅವನ ಆಯುಷ್ಯಕ್ರಮದಲ್ಲಿ ಜರಗಿದ ಪ್ರತಿಯೊಂದು ಸಂಗತಿಯನ್ನು ಕಂಡುಹಿಡಿದು ವರ್ಣಿಸುವದು ಅಶಕ್ಯವೇ ಸರಿ. ಆದರೂ ಅವನು ಮಾಡಿದ ಮುಖ್ಯ ಕಾರ್ಯಗಳಾವವು, ಅವುಗಳನ್ನು ಅವನು ಹೇಗೆ ಜರಿಗಿಸಿದನು, ಇವುಗಳ ಬಗ್ಗೆ ಏಕಮತವಿರುವದು ಅವಶ್ಯವು. ಇಂಥ ಸಂಗತಿಗಳನ್ನು ಕುರಿತು ನಾವು ಈ ಲೇಖಮಾಲೆಯಲ್ಲಿ ಪ್ರಸ್ತಾಪಿಸುತ್ತೇವೆ.

ಬಸವೇಶ್ವರನು ಐತಿಹಾಸಿಕ ಪುರುಷನು.

ಬಸವೇಶ್ವರನ ಚರಿತ್ರೆಯಲ್ಲಿ ನಾವು ಸಿದ್ಧಪಡಿಸತಕ್ಕ ಮೊದಲನೆಯ ವಿಷಯವು ಅವನು ಐತಿಹಾಸಿಕ ಪುರುಷನೋ ಹೇಗೆಂಬುದಿದೆ. ಆ ಪ್ರಶ್ನೆಯು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಬಹುದು. ಆದರೆ ಅವನು ಐತಿಹಾಸಿಕ ಪುರುಷನಿರದೆ ಕಾಲ್ಪನಿಕ ಪುರುಷನೆಂಬ ತಿಳುವಳಿಕೆಯು ಮೊದಲಿಗೆ ರೂಢವಾಗಿದ್ದಿತು. ಈ ತರದ ಸಂಶಯವನ್ನು ಗತಿಸಿದ

ಫ್ಲೀಟಸಾಹೇಬರವರೇ ವಹಿಸಿದ್ದಾರೆ. ಅವರು ಪ್ರಸಿದ್ಧ ಇತಿಹಾಸ ಸಂಶೋಧಕರು. ಅವರು ಕರ್ನಾಟಕದಲ್ಲಿರುವ ವರೆಗೆ ಬಸವೇಶ್ವರನ ಉಲ್ಲೇಖವಿದ್ದ ಒಂದಾದರೂ ಶಿಲಾಶಾಸನವು ಅವರಿಗೆ ದೊರೆಯಲಿಲ್ಲ. ಉತ್ತರಕ್ಕೆ ಸೊಲ್ಲಾಪೂರ ಜಿಲ್ಲೆಯಿಂದ ದಕ್ಷಿಣಕ್ಕೆ ಶಿವಮೊಗ್ಗೆ ಜಿಲ್ಲೆಯ ವರೆಗೆ ಬಿಜ್ಜಳನ ಉಲ್ಲೇಖವಿದ್ದ ಅಸಂಖ್ಯ ಶಿಲಾಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ಅವನ ಕೈಕೆಳಗಿರುವ ಅನೇಕ ದಂಡಾಧಿಪತಿಗಳ, ಮಂತ್ರಿಗಳ ಮತ್ತು ಮಹಾಮಂಡಲೇಶ್ವರರ ಉಲ್ಲೇಖಗಳಿರುತ್ತವೆ. ಬಹು ಪ್ರಸಿದ್ಧರಾದ ಕೇಶಿರಾಜ, ಬರ್ಮದೇವ ದಂಡನಾಯಕರು, ದಂಡನಾಯಕ ಸಿದ್ದಯ್ಯ, "ಮಹಾಪ್ರಧಾನ ಸೇನಾಧಿಪತಿ ದಂಡನಾಯಕ ಮೈಲಾರಯ್ಯ" ಸಚಿವನಾದ ಬಲದೇವ, ಇವರೇ ಮೊದಲಾದವರ ಹೆಸರುಗಳು ಅವುಗಳಲ್ಲಿ ಬಂದಿರುತ್ತವೆ. ಆದರೆ ಇಂಥವರ ಹೆಸರುಗಳೊಡನೆ ಪ್ರಧಾನ ಮತ್ತು ದಂಡನಾಯಕನೆಂದೆನಿಸಿಕೊಂಡ ಬಸವೇಶ್ವರನ ಹೆಸರು ಬಂದಿರುವದಿಲ್ಲ. ಈ ಸಂಗತಿಯು ಬಸವೇಶ್ವರನ ಅಸ್ತಿತ್ವದ ಬಗ್ಗೆ ಫ್ಲೀಟ ಸಾಹೇಬರಲ್ಲಿ ಸಂಶಯವನ್ನುಂಟುಮಾಡಿರುತ್ತದೆ. ಮುಂದೆ ಅಬ್ಬಲೂರಿನಲ್ಲಿರುವ ಏಕಾಂತದ ರಾಮಯ್ಯನ ಶಿಲಾಶಾಸನವು ಉಪಲಬ್ಧವಾಯಿತು. ಆಗ ಅವರು ವೀರಶೈವ ಧಾರ್ಮಿಕ ಚಳವಳಿಯನ್ನು ಮೊದಲು ಪ್ರಾರಂಭಿಸಿದವನು ಏಕಾಂತರಾಮಯ್ಯನೆಂದು ಭಾವಿಸಿದರು. ಮುಂದೆ ಅವರು ನಿವೃತ್ತರಾದ ಬಳಿಕ ಮನಗೂಳಿಯ ಶಿಲಾಶಾಸನವು. ಅವರ ದೃಷ್ಟಿಪಥಕ್ಕೆ ಬಿದ್ದಿತು. ಅದರಲ್ಲಿ ಉಲ್ಲೇಖಿಸಲ್ಪಟ್ಟ ಬಸವನೇ ವೀರಶೈವ ಧರ್ಮೋದ್ಧಾರ ಮಾಡಿದ ಬಸವನೆಂದು ಭಾವಿಸಿದರು. ಆದರೆ ಈ ಮನಗೂಳಿಯ ಬಸವನು ಕಾಳಾಮುಖನಾಗಿದ್ದನೆಂಬುದೂ ಅದರಲ್ಲಿ ಉಲ್ಲೇಖಿಸಲ್ಪಟ್ಟ ಅವನ ಮಾತಾಪಿತರುಗಳು ತೀರ ಬೇರೆ ಇರುವರೆಂಬುದೂ ಅವರ ಲಕ್ಷಕ್ಕೆ ಬಂದಿರಲಿಲ್ಲ. ಈ ಎಲ್ಲ ಸಂಗತಿಗಳು ಬಸವೇಶ್ವರನ ಅಸ್ತಿತ್ವದ ಬಗ್ಗೆ ಸಂಶಯವನ್ನುಂಟು ಮಾಡಲು ಕಾರಣವಾದವು.

ಆದರೆ ಈಚೆಗೆ ಉಪಲಬ್ಧವಾಗಿರುವ ಶಿಲಾಲೇಖಗಳ ಮೂಲಕ ಬಸವೇಶ್ವರನ ಅಸ್ತಿತ್ವದ ಬಗ್ಗೆ ಸಂದೇಹಕ್ಕೆ ಎಡೆ ಇಲ್ಲದಂತಾಗಿರುತ್ತದೆ. ಜೌಡದಾನಪುರದ ಶಿಲಾಶಾಸನದಲ್ಲಿ "ಸಂಗಮೇಶನ ಪುತ್ರಂ ಬಸವಯ್ಯ" ಎಂದು ಸ್ಪಷ್ಟವಾದ ಉಲ್ಲೇಖವಿದೆ. ಮುಂದೆ ಅರ್ಜುನವಾಡದ ಶಿಲಾಲೇಖದಲ್ಲಿ "ಸಂಗನಬಸವ" ಎಂದು ಅವನ ಉಲ್ಲೇಖವು ದೊರೆತಿರು

ತ್ತವೆ. ಈ ಎರಡೂ ಶಾಸನಗಳು ಶಿವಾನುಭವ ಪತ್ರಿಕೆಯ ಹಿಂದಿನ ಸಂಚಿಕೆಗಳಲ್ಲಿ ಸವಿಸ್ತಾರವಾಗಿ ಚರ್ಚಿಸಲ್ಪಟ್ಟಿರುತ್ತವೆ. ಇವಲ್ಲದೆ ಇನ್ನೂ ಕೆಲವು ಶಿಲಾಶಾಸನಗಳಲ್ಲಿ ಬಸವೇಶ್ವರನ ಹೆಸರು ಉಪಲಬ್ಧವಿರುತ್ತದೆ. ಇಲಂನೇ ಇಸ್ವಿಯ ಮರಡಿಪುರ ಶಾಸನದಲ್ಲಿ ''ದಾಸವರ್ಯ, ಕುಂಬಾರ ಗುಂಡ, ಭೋಗದೇವ, ಕೇಶರಾಜ, ಸಂಗನಬಸವಯ್ಯ. ಸೊನ್ನಲಿಗೆಯ ರಾಮಯ್ಯ'' ಎಂದು ಉಲ್ಲೇಖಗಳಿರುತ್ತವೆ. ಚಿತ್ರಕಲ್‌ದುರ್ಗ ಜಿಲ್ಲೆಯಲ್ಲಿ ಕಲ್ಲೇದೇವರಪುರ ಎಂಬ ಗ್ರಾಮದಲ್ಲಿಯ ಯಾದವರಾಜರ ಶಿಲಾಶಾಸನದಲ್ಲಿ ಚಿಕ್ಕ, ಕಕ್ಕ, ಬಸವರಾಜ ಈ ಮೊದಲಾದ ''ಮರ್ತ್ಯಲೋಕದ ಮಹಾಗಣಾಚಾರ'' ಎಂದು ಇವರೆಲ್ಲರು ಹೇಳಲ್ಪಟ್ಟಿದ್ದಾರೆ. ಹಿರಿಸಿಕೆರೆ ಹಿರಿಯೂರು ಶಾಸನದಲ್ಲಿ ''ಬಸವಯ್ಯ ಸಿಂಧು ಬಲ್ಲಾಳ ಧರೆ ಕೊಂಡಾಡುವ ದಾಸಿಮಯ್ಯ'' ಎಂದು ಈ ಶರಣರು ಉಲ್ಲೇಖಿಸಲ್ಪಟ್ಟಿದ್ದಾರೆ. ಈ ಶಾಸನಗಳು ದೊರೆತಿರುವದರಿಂದ ಬಸವೇಶ್ವರನು ಐತಿಹಾಸಿಕ ಪುರುಷನೆಂಬುದರ ಬಗ್ಗೆ ಇವ ಸಂಶಯವೂ ಈಗ ಉಳಿದಿರುವದಿಲ್ಲ. ಬಸವೇಶ್ವರನಿಗೆ ಸಂಬಂಧಿಸಿದ ಮೇಲೆ ಕಾಣಿಸಿದ ಶಿಲಾಲೇಖನಗಳು ವಿಜಾಪುರ, ಧಾರವಾಡ, ಚಿತ್ರಕಲ್‌ದುರ್ಗ, ಹಾಸನ, ಈಪ್ರಕಾರ ದೂರ ದೂರ ಪ್ರದೇಶಗಳಲ್ಲಿ ಉಪಲಬ್ಧವಾದವುಗಳಿರುತ್ತವೆ. ಇದರ ಮೇಲಿಂದ ಬಸವೇಶ್ವರನ ಪ್ರಖ್ಯಾತಿಯು ಕರ್ನಾಟಕದ ಬಹು ಭಾಗದಲ್ಲಿ ಹಬ್ಬಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಶಿಲಾಶಾಸನಗಳಲ್ಲಿ ಅವನು ಒಳ್ಳೇ ಮಹತ್ಪಿಕ ಪುರುಷನೆಂದು ಭಾವಿಸಲ್ಪಟ್ಟಿದ್ದು ಅವುಗಳಲ್ಲಿರುವ ವರ್ಣನೆಗಳಿಂದ ಕಂಡುಬರುತ್ತದೆ. ಆದ್ದರಿಂದ ಬಸವೇಶ್ವರನು ೧೨ನೇ ಶತಮಾನದಲ್ಲಿ ನಿಜವಾಗಿ ಪ್ರಸಿದ್ಧಿಗೆ ಬಂದನೆಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಆದರೆ ಕರ್ನಾಟಕದಲ್ಲಿರುವ ಶಿಲಾಶಾಸನಗಳು ಇನ್ನೂ ಪೂರ್ಣವಾಗಿ ಶೋಧಿಸಲ್ಪಟ್ಟಿಲ್ಲ. ಒಂದುವೇಳೆ ಶೋಧಿಸಿದ್ದಾದರೆ ಬಸವೇಶ್ವರನ ಚರಿತ್ರೆಯ ಮೇಲೆ ಮಹತ್ವದ ಪ್ರಕಾಶವನ್ನು ಕೆಡಹುವಂಥ ಶಾಸನಗಳು ನಮಗೆ ಇನ್ನೂ ಹೆಚ್ಚಿಗೆ ದೊರೆಯಬಹುದೆಂದು ಭಾವಿಸುತ್ತೇವೆ.

(ಮುಂದುವರಿಯುವದು.)

ಸ್ಫುಟ ವಿಷಯಗಳು.

ಪ್ರಕೃತ ಸಂಚಿಕೆಯಲ್ಲಿಯ ಲೇಖಗಳು ಮತ್ತು ಗ್ರಂಥಗಳು:

ಈ ಸಂಚಿಕೆಯಲ್ಲಿಯ ಪುಟಗಳು ೧೨೮ ಇದ್ದು, ಈ ವರ್ಷಾಂತ್ಯದಲ್ಲಿ ಈವರೆಗೆ ಕಡಿಮೆಯಾದ ಪುಟಗಳೆಲ್ಲವನ್ನು ನಾವು ಪೂರ್ತಿಮಾಡುವೆವೆಂದು ವಾಚಕರಿಗೆ ಭರವಸೆಯನ್ನು ಕೊಡುತ್ತಾ ಇದ್ದೇವೆ. ನಮ್ಮ ಪ್ರೆಸ್ಸಿನ ಸಹಾಯವಿಲ್ಲದೆ ಶಿವಾನುಭವ ಪತ್ರಿಕೆಯನ್ನು ನಡಿಸುವದು ಅಶಕ್ಯವಾಗಿರುತ್ತದೆಂದು ಹೇಳಲು ವಿಷಾದಿಸುತ್ತೇವೆ. ಆದ್ದರಿಂದ ಅದರ ಹಿತ ಹಿತಗಳನ್ನ ನಾವು ಲಕ್ಷಿಸುವದು ಬಹು ಅವಶ್ಯವಾಗಿರುತ್ತದೆ. ಒಂದು ವೇಳೆ ಪತ್ರಿಕೆಗೆ ಚಂದಾದಾರರ ಪೂರ್ಣ ಸಹಾಯವಿದ್ದಿದ್ದಾದರೆ ಈ ನಕಿಂತಲೂ ನಾವು ಎಷ್ಟೋ ಪಾಲು ಹೆಚ್ಚಾಗಿ ಕಾರ್ಯಗಳನ್ನು ಮಾಡಬಹುದಾಗಿತ್ತು ಆದರೆ ವೀರಶೈವ ಸಮಾಜದ ಸದ್ಯದ ಪರಿಸ್ಥಿತಿಯ ಮೂಲಕ ಇದು ಅಶಕ್ಯವಾಗಿದ್ದು, ವಾಙ್ಮಯ ಕಾರ್ಯವು ಮುಂದವಾಗಿ ಸಾಗಬೇಕಾಗಿರುತ್ತವೆ ಈಗಿನ ಸಂಚಿಕೆಯಲ್ಲಿ ಬಂದ ವಿಷಯಗಳನ್ನ ಕುರಿತು ಕೆಲವು ವಿವರಣೆಗಳನ್ನ ನಾವು ಇಲ್ಲಿ ವಾಚಕರಿದುರಿಗೆ ಇಡಲು ಆಪೇಕ್ಷಿಸಿದ್ದೇವೆ.

ಸಟೀಕ ಏಕೋತ್ತರ ಶತಸ್ಥಲ:— ಈ ಪತ್ರಿಕೆಯಲ್ಲಿ ಇದೊಂದು ಹೊಸ ಗ್ರಂಥವನ್ನು ಪ್ರಾರಂಭಿಸಿದ್ದೇವೆ. ಏಕೋತ್ತರಶತಸ್ಥಲವು ಷಟ್‌ಸ್ಥಲಶಾಸ್ತ್ರದ ಒಂದು ಮಹತ್ವದ ಭಾಗವಾಗಿದೆ. ಕನ್ನಡ ಭಾಷೆಯಲ್ಲಿ ಈ ವಿಷಯದ ಮೇಲೆ ನಮಗೆ ದೊರಕಿರುವ ಗ್ರಂಥಗಳಲ್ಲಿ ಈಗಿನದು ಬಹಳ ಮಹತ್ವದ್ದಾಗಿದೆ. ವಿಜಯನಗರದ ರಾಜನಾದ ದೇವರಾಯನ ಓಲಗದಲ್ಲಿದ್ದ ಜಕ್ಕಣಾರ್ಯನು ರಚಿಸಿದ ಏಕೋತ್ತರಶತಸ್ಥಲವು ಪ್ರಸಿದ್ಧವಾಗಿದೆ. ವಚನಶಾಸ್ತ್ರಸಾರ ಭಾಗ ೨ ಇದರಲ್ಲಿರುವ ಏಕೋತ್ತರಶತಸ್ಥಲವು ಈ ಗ್ರಂಥವನ್ನ ಅನುಸರಿಸಿರುತ್ತದೆ. ಆದರೆ ಈಗ ನಾವು ಪ್ರಕಟಿಸಿರುವ ಗ್ರಂಥದಲ್ಲಿ ಈ ವಿಷಯದ ವಿವೇಚನೆಯು ಜಕ್ಕಣಾರ್ಯನ ಗ್ರಂಥಕ್ಕಿಂತಲೂ ಹೆಚ್ಚು ವಿಸ್ತಾರವಾಗಿ ಮಾಡಲ್ಪಟ್ಟಿರುತ್ತದೆ. ಶಿವಾನುಭವ ಗ್ರಂಥಮಾಲೆಯಲ್ಲಿ 'ಸಿದ್ಧಲಿಂಗೇಶ್ವರ ಏಕೋತ್ತರಶತಸ್ಥಲ' ಎಂಬ

ಮಹತ್ವದ ಗ್ರಂಥವಿದೆ. ಅದರಲ್ಲಿರುವ ಸೂತ್ರ ಮತ್ತು ಪದಗಳ ಮೇಲೆಯೇ ವಿಸ್ತೃತ ಟೀಕೆಯು ಈ ಗ್ರಂಥದಲ್ಲಿ ಮಾಡಲ್ಪಟ್ಟಿರುತ್ತದೆ. ವಾಚಕರು ಇದರಲ್ಲಿಯ ನಿರೂಪಣೆಗಳನ್ನು ಓದಿದಲ್ಲಿ ಇದು ಒಂದು ಮೇಲ್ತರದ ಗ್ರಂಥವೆಂದು ಅವರಿಗೆ ಮನವಂಕೆಯಾಗದೆ ಇರದು.

ಅವಧೂತ ಗೀತೆ— ೧೫ನೆಯ ಶತಮಾನದ ಮಧ್ಯಕಾಲದಲ್ಲಿ ವಿಜಯನಗರದ ದೇವರಾಯನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಗುರು ಬಸವ ಕವಿಯಿಂದ ಇದು ರಚಿತವಾಗಿದೆ. ಇವನು ಶಿವಯೋಗಾಂಗ ವಿಭೂಷಣ, ಸದ್ಗುರುರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಷ್ಟಕ, ವೃತ್ತ, ವೃಷಭ ಗೀತೆ, ಅವಧೂತಗೀತೆ ಮತ್ತು ಮನೋವಿಜಯ ಎಂಬ ಕಾವ್ಯಗಳನ್ನು ರಚಿಸಿದ್ದಾನೆ. ಇವೆಲ್ಲವು ಕನ್ನಡ ಭಾಷೆಯಲ್ಲಿ ಉಚ್ಚ ಪ್ರತಿಯ ಗ್ರಂಥಗಳು. ಇವುಗಳಲ್ಲಿ ಮನೋ ವಿಜಯ ಕಾವ್ಯವು ಈ ಮೊದಲೇ ಪ್ರಸಿದ್ಧವಾಗಿದೆ. ಉಳಿದ ೫ ಕಾವ್ಯಗಳನ್ನ ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸುತ್ತಾ ಹೋಗುವೆವು. ಈ ಸಂಚಿಕೆಯಲ್ಲಿ ನಾವು 'ಅವಧೂತಗೀತೆ' ಎಂಬುದನ್ನು ಪ್ರಾರಂಭಿಸಿದ್ದೇವೆ. ಇದು ಚೌಪದಿಯಲ್ಲಿ ಬರೆಯಲ್ಪಟ್ಟಿರುತ್ತದೆ. ಇದು ಒಂದು ಪ್ರೌಢ ಗ್ರಂಥವೆಂಬದು ವಾಚಕರಿಗೆ ಗೊತ್ತಾಗದೆ ಇರದು.

ಹಡಪದಪ್ಪಣ್ಣನ ಕೆಲವು ಕೃತಿಗಳು— ಹಡಪದಪ್ಪಣ್ಣನು ಬಸವೇಶ್ವರನ ಸಮಕಾಲೀನನು. ಅವನು ಸ್ವರವಚನ ಮತ್ತು ಮಂತ್ರಗೋಪ್ಯ ಎಂದು ಹಾಡಿನ ರೂಪದಲ್ಲಿ ವೀರಶೈವ ತತ್ವಗಳನ್ನು ನಿರೂಪಿಸಿದ್ದಾನೆ. ಇವೆರಡರಲ್ಲಿಯೂ "ಬಸವಪ್ರಿಯ ಕೂಡಲಚನ್ನಸಂಗಮದೇವಾ" ಎಂಬ ಅವನ ಮುದ್ರಿಕೆಯು ಇವೆ. ಸಾಧುಗಳು ಮತ್ತು ವಚನಕಾರರು ಎರಡನೆಯವರ ಮುದ್ರಿಕೆಗಳನ್ನು ತಮ್ಮ ಕೃತಿಗಳಲ್ಲಿ ಉಪಯೋಗಿಸುವದು ಕಂಡು ಬರುವದಿಲ್ಲ. ಆದ್ದರಿಂದ ಈ ಎರಡೂ ಹಾಡಗಳು ಹಡಪದಪ್ಪಣ್ಣನು ರಚಿಸಿದವುಗಳೇ ಇರಬೇಕೆಂದು ನಾವು ಅನುಮಾನ ಮಾಡುತ್ತೇವೆ.

ಹರಳಯ್ಯನ ತ್ರಿವಿಧಿ— ಈ ಗ್ರಂಥವು ಈ ಸಂಚಿಕೆಯಲ್ಲಿ ಪೂರ್ಣವಾಗಿ ಮುಗಿದಿರುತ್ತದೆ.

ಹರಿಹರನ ರಗಳೆಗಳು:— ಇದರಲ್ಲಿ 'ವೀರಭದ್ರನ ರಗಳೆಯು' ಪ್ರಾರಂಭವಾಗಿದೆ. ಇದು ವೀರರಸ ಪ್ರಧಾನವಾದದ್ದು. ಹರಿಹರನು

ವಿಗಿಲಾದ ವರ್ಣನಾ ಶಕ್ತಿಯುಳ್ಳವನು. ಅವನ ರಗಳೆಗಳಲ್ಲಿ ಭಕ್ತಿರಸ, ಶೃಂಗಾರರಸ, ಕರುಣರಸ ಇವುಗಳನ್ನು ನಾವು ಹೇರಳವಾಗಿ ಕಾಣಬಹುದು. ಅವುಗಳಂತೆಯೇ ಅವನು ವೀರರಸವನ್ನು ಕೂಡ ಅತ್ಯುತ್ತಮವಾಗಿ ವರ್ಣಿಸಬಲ್ಲನೆಂಬದು ಈಗಿನ ರಗಳೆಯಿಂದ ಚನ್ನಾಗಿ ತಿಳಿದು ಬರುವಂತಿದೆ.

ಸೊಡ್ಡಳಬಾಚರಸನ ವಚನಗಳು— ನಮಗೆ ದೊರೆದ ಚಿಕ್ಕ ಚಿಕ್ಕ ವಚನಗಳನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸುತ್ತಾ ಇದ್ದೇವೆ. ಸೊಡ್ಡಳ ಬಾಚರಸನು ಬಿಜ್ಜಳನ ಒಬ್ಬ ಸೈನ್ಯಾಧಿಕಾರಿಯಾಗಿದ್ದನು. ಅವನು ಬಸವನ ಸಮಕಾಲೀನನು. ಅವನ ವಚನಗಳನ್ನು ಈ ಪತ್ರಿಕೆಯಲ್ಲಿ ಪ್ರಸಿದ್ಧಿಸಲು ಪ್ರಾರಂಭಿಸಿರುತ್ತೇವೆ. ಅವು ಹೆಚ್ಚಿನ ತರಗತಿಯ ವಿರುತ್ತವೆಂಬುದು ವಾಚಕರಿಗೆ ಗೊತ್ತಾಗದೆ ಇರದು. ಶಕ್ಯವಿದ್ವಷ್ಟರ ಮಟ್ಟಿಗೆ ಅವನ ವಚನಗಳನ್ನು ಪಟ್ಟಸ್ಥಲಕ್ಕನುಸರಿಸಿ ಜೋಡಣೆಯನ್ನು ಮಾಡಿ ಇಲ್ಲಿ ಪ್ರಸಿದ್ಧಿಸಿದ್ದೇವೆ.

ಶಿವಾನುಭವ ಶಬ್ದಕೋಶ:— ಈ ಗ್ರಂಥವನ್ನು ನಾವು ಆರಂಭಿಸುವ ಪೂರ್ವದಲ್ಲಿ ಇದೊಂದು ಚಿಕ್ಕ ಕೈಪಿಡಿಯಾಗಬಹುದೆಂದು ಎಣಿಸಿದ್ದೆವು. ಆದರೆ ಈ ಕಾರ್ಯವನ್ನು ಕೈಕೊಂಡಬಳಿಕ ಶಿವಾನುಭವ ಶಬ್ದಗಳು ಬೇರೆ ಬೇರೆ ಸಂದರ್ಭಗಳಲ್ಲಿ ಭಿನ್ನ ಭಿನ್ನ ಅರ್ಥಗಳುಳ್ಳವುಗಳಿರುವೆಂಬದು ನಮಗೆ ತೋರಿಬರಹತ್ತಿತು. ಆದ್ದರಿಂದ ಆ ಸಂದರ್ಭಗಳನ್ನೆಲ್ಲ ವಿವೇಚಿಸಿ ಶಬ್ದಗಳ ಅರ್ಥವನ್ನು ನಿರೂಪಿಸುವ ಪ್ರಸಂಗವು ನಮಗೆ ಬಂದೊದಗಿದೆ. ಇದರಿಂದ ನಾವು ಇಡೀ ವೀರಶೈವ ಸಿದ್ಧಾಂತವನ್ನೇ ಇಲ್ಲಿ ವಿವೇಚಿಸುವ ಭಾರವು ನಮ್ಮ ಮೇಲೆ ಬಂದು ಬಿದ್ದಿದೆ. ಆದರೆ ಈ ಕಾರ್ಯವನ್ನು ನಾವು ಆದಷ್ಟು ಸಂಕ್ಷಿಪ್ತವಾಗಿ ಮಾಡಬೇಕಾಗಿರುತ್ತದೆ. ಶಕ್ಯವಿದ್ವಷ್ಟರ ಮಟ್ಟಿಗೆ ಅರ್ಥವು ಅಸ್ಪಷ್ಟವಾಗದಂತೆ ಸಂದರ್ಭಕ್ಕನುಸರಿಸಿ ಆಯಾ ಶಬ್ದಗಳ ಅರ್ಥನಿರೂಪಣೆ ಮಾಡಬೇಕಾಗಿದೆ. ಈ ವಿಷಯವು ಎಲ್ಲಿಯವರೆಗೆ ಮುಂದುವರಿಯುವದೆಂಬುದು ನಮಗೆ ಈಗ ಹೇಳದಂತಾಗಿದೆ. ಆದರೂ ಗ್ರಂಥವನ್ನು ವಿಸ್ತಾರಪಡಿಸದೆ ಸ್ವಲ್ಪದರಲ್ಲಿಯೇ ಮುಗಿಸಲು ಪ್ರಯತ್ನಿಸುವೆವು.

ಲೇಖಗಳು:— ಮೇಲ್ಕಂಡ ಗ್ರಂಥಗಳಲ್ಲದೆ ಕೆಲವು ಮಹನೀಯರಿಂದ ಬರೆಯಲ್ಪಟ್ಟ ಮಹತ್ವದ ಲೇಖಗಳೂ ಇದರಲ್ಲಿ ಬಂದಿವೆ. ಲಿಂಗ

ಧಾರಣ ಮತ್ತು ಪಾದೋದಕ ಈ ವಿಷಯಗಳು ಚರ್ಚೆಗಳಿಗೆ ಸ್ಥಾನವಾಗಿ ನಿರೂಪಿಸಲ್ಪಟ್ಟಿರುತ್ತವೆ. ವೀರಶೈವ ಮತತತ್ವಗಳ ನಿರೂಪಣೆಯನ್ನು ಇಂಥ ಚರ್ಚೆಗಳ ಮೂಲಕ ನಡಿಸಲು ಒಂದು ಉತ್ತಮ ಸಾಧನವಾಗಿರುತ್ತದೆ. ಈ ವರೆಗೆ ಇಂಥ ವಿಷಯಗಳ ಚರ್ಚೆಗಳು ಅತ್ಯುಚ್ಚರೀತಿಯಿಂದ ಪತ್ರಿಕೆಯಲ್ಲಿ ನಡೆಯುತ್ತ ಬಂದಿದ್ದು ಸಮಾಧಾನಕರವಾಗಿದೆ. ಇನ್ನುಮುಂದೆ ನಿರೂಪಣೆಯಲ್ಲಿ ಹೊಸ ವಿಷಯಗಳು ಬಾರದೆ ಇದ್ದಲ್ಲಿ ಈ ಚರ್ಚೆಗಳನ್ನು ಅಲ್ಲಿಯೇ ನಿಲ್ಲಿಸುವದು ಯೋಗ್ಯವೆಂದು ನನಗೆ ತೋರಹತ್ತಿದೆ.

ಬಸವೇಶ್ವರನ ಚರಿತ್ರೆಯನ್ನು ಚರ್ಚಿಸುವ ಕೊಸ ವಿಷಯವನ್ನು ನಾವು ಈಗ ಕೈಕೊಂಡಿದ್ದೇವೆ. ಅದರಲ್ಲಿ ಬರುವ ವಿಷಯಗಳನ್ನು ವಾಚಕರು ಅವಗಾಹನೆಗೆ ತಂದುಕೊಂಡು ಈ ಮಹತ್ವದ ವಿಷಯದ ಸಂಶೋಧನೆಯ ಕಾರ್ಯವನ್ನು ವಾಚಕರು ಮುಂದುವರಿಸ ವರೆಂದು ನಾವು ಬಿನ್ನವಿಸಿಕೊಳ್ಳುತ್ತೇವೆ.

ಮೇಲ್ಕಂಡ ನಿರೂಪಣೆಗಳಿಂದ ಶಿವಾನುಭವ ಪತ್ರಿಕೆಯು ತಾನು ಕೈಕೊಂಡ ಕಾರ್ಯವನ್ನು ಎಂದಿನಂತೆ ತನ್ನ ಧ್ಯೇಯವನ್ನು ಬಿಡದೆ ಮುಂದುವರಿಸುತ್ತಿದೆ ಎಂಬುದು ವಾಚಕರ ಲಕ್ಷಕ್ಕೆ ಬರದೆ ಇರಲಾರದೆಂದು ನಾವು ಭಾವಿಸಿದ್ದೇವೆ.

ಶ್ರೀಸಿದ್ಧರಾಮೇಶ್ವರನ ಜಯಂತಿ ದಿನವು – ವೀರಶೈವ ಶಿವಶರಣರಲ್ಲಿ ಶ್ರೀ ಸಿದ್ಧರಾಮೇಶ್ವರನು ಬಹು ಉನ್ನತ ಸ್ಥಾನವನ್ನು ಹೊಂದಿದ್ದಾನೆ. ಅವನು ಬಸವೇಶ್ವರನ ಸಮಕಾಲೀನನಾಗಿ ಶಿವಾನುಭವ ಮಂಟಪದಲ್ಲಿ ನಡೆಯುತಿದ್ದ ಶಿವಾನುಭವ ಗೋಷ್ಠಿಗಳಲ್ಲಿ ಭಾಗವಹಿಸಿ ಶಿವಶರಣರ ಅತ್ಯಂತ ಆದರಕ್ಕೆ ಪಾತ್ರನಾಗಿದ್ದನು. ಅವನು ಸೊಲ್ಲಾಪುರ ಪಟ್ಟಣವನ್ನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡು ಮುಂದೆ ಬಸವೇಶ್ವರ ಚನ್ನಬಸವೇಶ್ವರರ ತರುವಾಯ ಜಗದ್ಗುರುವೆಂದೆನಿಸಿಕೊಂಡನು. ಹರಿಹರನು ತನ್ನ ರಗಳೆಯಲ್ಲಿ ಈತನನ್ನು 'ಜಗದ್ಗುರು' ಎಂದು ಕರೆದಿದ್ದಾನೆ. ಇವನ ಉಲ್ಲೇಖವಿರುವ ಕೆಲವು ಶಿಲಾಶಾಸನಗಳು ಹಾವೇರಿ ತಾಲೂಕು ಮತ್ತು ಶಿವಮೊಗ್ಗಾ ಜಿಲ್ಲೆಗಳಲ್ಲಿ ಈಚೆಗೆ ಉಪಲಬ್ಧವಾಗಿದ್ದು ಅವು ಶಿವಾನುಭವ ಪತ್ರಿಕೆಯಲ್ಲಿ ಈ ಮೊದಲಿಗೆ ಪ್ರಸಿದ್ಧವಾಗಿವೆ. ಸಿದ್ಧರಾಮೇಶ್ವರನ ದೇವಸ್ಥಾನಗಳು ಗೋಡಿಕೆರೆ, ಯಳನಡು, ಭಟ್ಟರಹಳ್ಳಿ, ತಮ್ಮಡಿಹಳ್ಳಿ, ಸುಂಟರಮಳೆ, ಹಾವೇನಹಳ್ಳಿ, ಸಿದ್ಧಾಮದೇವರಹಳ್ಳಿ, ಮಾದಿಹಳ್ಳಿ,

ಸುಂಕದಹಳ್ಳಿ, ಅರಸಿಕೆರೆ ಈ ಮೊದಲಾದ ಕಡೆಯಲ್ಲಿ ಇರುತ್ತವೆ. ಈ ಗ್ರಾಮಗಳು ತುಮಕೂರ ಜಿಲ್ಲೆಯಲ್ಲಿದ್ದು ಸಿದ್ಧರಾಮೇಶ್ವರನು ಈ ಭಾಗದಲ್ಲಿ ಕೆಲಕಾಲ ವಾಸಿಸಿದ್ದನೆಂದು ತೋರುತ್ತದೆ. ಈಚೆಗೆ ಈ ಭಾಗದ ಮಹಾಜನರು ಈತನ ಜಯಂತಿಯನ್ನು ಆಚರಿಸಬೇಕೆಂದು ಅಪೇಕ್ಷಿಸುತ್ತಿರುವುದು ಅಭಿನಂದನೀಯವಾಗಿದೆ. ತಿಪ್ಟೂರಿನ ಶ್ರೀಯುತ ಎಸ್. ಆರ್. ಮಲ್ಲಪ್ಪ ಇವರು ಸಿದ್ಧರಾಮೇಶ್ವರನ ಜನ್ಮ ದಿನವನ್ನು ತಮಗೆ ತಿಳಿಸಬೇಕೆಂದು ನನಗೆ ಅಪೇಕ್ಷಿಸಿದರು. ಆದರೆ ಈ ಉಲ್ಲೇಖವು ಯಾವ ಗ್ರಂಥದಲ್ಲಿಯೂ ಉಪಲಬ್ಧವಿರುವದಿಲ್ಲ. ಆದರೆ ಸಿದ್ಧರಾಮೇಶ್ವರನ ಜಾತ್ರೆಯು ಸೊಲ್ಲಾಪುರ ಪಟ್ಟಣದಲ್ಲಿ ಮಕರಸಂಕ್ರಾತಿಯ ದಿನಗಳಲ್ಲಿ ಬಹು ವೈಭವದಿಂದ ನಡೆಯುತ್ತಿರುವದರಿಂದ ಅದೇ ಸಮಯದಲ್ಲಿ ಈ ಜಯಂತಿ ದಿನವನ್ನ ಆಚರಿಸಲು ಇವರಿಗೆ ತಿಳಿಸಿದ್ದೇವೆ. ಸಿದ್ಧರಾಮೇಶ್ವರನ ಜಾತ್ರೆಯಲ್ಲಿ ನಡೆಯುವ ಪದ್ಧತಿಗಳನ್ನು ನಿರೀಕ್ಷಿಸಿದಲ್ಲಿ ಸಿದ್ಧರಾಮೇಶ್ವರನಿಗೆ ಸಂಬಂಧಿಸಿದ ಉತ್ಸವಗಳೊಡನೆ ಮಲ್ಲಿಕಾರ್ಜುನ ಉತ್ಸವಗಳೂ ಸೇರ್ಪಡೆಯಾಗಿದ್ದು ಕಂಡುಬರುತ್ತದೆ. ಬಹುಶಃ ಈ ಕಾಲದಲ್ಲಿಯೇ ಸಿದ್ಧರಾಮೇಶ್ವರನ ದೀಕ್ಷಾ ಸಮಾರಂಭವೂ ನಡೆದಿರಬಹುದು. ವೀರಶೈವರಲ್ಲಿ ದೀಕ್ಷೆಯು ಮಹತ್ವದ ಪ್ರಸಂಗವಿರುವದರಿಂದ ಈ ತಿಥಿಯನ್ನು ಅಂದರೆ ಮಕರಸಂಕ್ರಾಂತಿಯ ಹಿಂದಿನ ದಿನವನ್ನು ಸಿದ್ಧರಾಮೇಶ್ವರನ ಜಯಂತಿಗೋಸ್ಕರ ಗೊತ್ತುಪಡಿಸಿಕೊಳ್ಳಬೇಕೆಂದು ನಾವು ಶ್ರೀಯುತ ಎಸ್. ಆರ್. ಮಲ್ಲಪ್ಪ ಇವರಿಗೆ ಸೂಚಿಸಿದ್ದೇವೆ. ಈ ವಿಷಯವಾಗಿ ಯಾರಿಗಾದರೂ ಸೂಚನೆಗಳನ್ನು ಮಾಡತಕ್ಕದ್ದಿದ್ದಲ್ಲಿ ಅವರು ಅವುಗಳನ್ನು ಅವಶ್ಯವಾಗಿ ಮಾಡಬೇಕೆಂದು ನಮ್ಮ ವಿನಂತಿ ಇದೆ.

ಪುಸ್ತಕ ಪರೀಕ್ಷೆ:– ಈ ಬಗ್ಗೆ ಅನೇಕ ಮಹತ್ವದ ಗ್ರಂಥಗಳು ಈಚೆಗೆ ಪ್ರಕಟವಾಗಹತ್ತಿರುವದು ಬಹು ಸಮಾಧಾನಕರವಾಗಿರುತ್ತದೆ. ಮೈಸೂರ ವಿಶ್ವವಿದ್ಯಾಲಯದ ವತಿಯಿಂದ ಕೆಲವು ಉದ್ಗ್ರಂಥಗಳು ಅಲ್ಲದೆ ಪ್ರಚಾರ ಪುಸ್ತಕಮಾಲೆ ಎಂಬ ಹೆಸರಿನ ಕೆಳಗೆ ಉಪಯುಕ್ತವಾದ ಚಿಕ್ಕ ಚಿಕ್ಕ ಪುಸ್ತಕಗಳು ಪ್ರಕಟವಾಗಹತ್ತಿರುತ್ತವೆ. ಅವುಗಳನ್ನು ನಾವು ಇಲ್ಲಿ ವಿವರಿಸುತ್ತೇವೆ.

೧. **ಹಿಂದೂ ದರ್ಶನಸಾರಃ**—ಇದು ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರಿಂದ ರಚಿಸಲ್ಪಟ್ಟ

ಮೈಸೂರು ವಿಶ್ವವಿದ್ಯಾಲಯದ ಗ್ರಂಥಮಾಲೆಯ ೧೪ನೆಯ ಗ್ರಂಥವಾಗಿರುತ್ತದೆ. ಇದರಲ್ಲಿ ಹಿಂದುಸ್ತಾನದಲ್ಲಿ ಉದ್ಭವಿಸಿದ ಮುಖ್ಯ ಧರ್ಮಗಳ ವಿವರಣೆಯು ಇರುತ್ತದೆ. ಬೌದ್ಧ, ಸಾಂಖ್ಯ, ಜೈನ, ಯೋಗ, ಲೌಕಿಕ ಮೀಮಾಂಸಾ, ಅದ್ವೈತ ದರ್ಶನಗಳು ಇದರಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ಇವುಗಳಲ್ಲಿರುವ ಸಾಮಾನ್ಯ ತತ್ವಗಳು ಸರಳಭಾಷೆಯಲ್ಲಿ ಬಹು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತವೆ. ಹಿಂದೂಧರ್ಮದ ಸಾಮಾನ್ಯ ತತ್ವಗಳ ಜ್ಞಾನವು ನಮ್ಮಲ್ಲಿ ಬಹುಶಃ ಇರುವದಿಲ್ಲೆಂದು ಹೇಳಿದರೆ ಸಲ್ಲುವದು. ಈ ಸ್ಥಿತಿಯು ಶೋಚನೀಯವಾಗಿರುತ್ತದೆ. ಈ ವಿಷಯವನ್ನು ತಿಳಿಯಲು ಪೇಕ್ಷಿಸುವವರಿಗೆ ಈ ಗ್ರಂಥವು ಬಹು ಉಪಯುಕ್ತವಾಗಿದೆ.

೨. **ಹದಿಬದೆಯ ಧರ್ಮ**ಃ— ಸಂಚಿಯ ಹೊನ್ನಮ್ಮನು ರಚಿಸಿದ ಈ ಕಾವ್ಯವು ಮೈಸೂರ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುತ್ತದೆ. ಇದರ ಸಂಪಾದಕಿಯರು ಶ್ರೀಮತಿ ಡಿ. ಚಂಪಾಬಾಯಿಯವರು. ಇದರಲ್ಲಿ ಟಿಪ್ಪಣಿಗಳು, ಶಬ್ದಕೋಶ ಮತ್ತು ವಿಸ್ತೃತವಾದ ಪೀಠಿಕೆ ಇವುಗಳಿವೆ. ಇವುಗಳೆಲ್ಲ ವಾಚಕರಿಗೆ ಬಹು ಉಪಯುಕ್ತವಾಗಿವೆ. ಮನೆತನದಲ್ಲಿ ಯಾವರೀತಿಯಾಗಿ ಇರಬೇಕೆಂಬುದನ್ನು ಕುರಿತು ಉಪಯುಕ್ತ ಸೂಚನೆಗಳುಳ್ಳದ್ದಾದ ಈ ಗ್ರಂಥವು ಕನ್ನಡ ವಾಙ್ಮಯದಲ್ಲಿ ಉನ್ನತ ಸ್ಥಾನವನ್ನು ಹೊಂದಿರುತ್ತದೆ ಈ ಗ್ರಂಥವು ಪ್ರತಿಯೊಬ್ಬ ಕುಟುಂಬಸ್ತನಲ್ಲಿ ಇರುವದು ಅವಶ್ಯವು.

೩. **ಸಂಪ್ರೋದ್ಯಾನಃ**— ಇದು ಮೈಸೂರ ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯಲ್ಲಿಯ ಗ್ರಂಥವಾಗಿದೆ. ಇದು ಶ್ರೀಯುತ ಬಿ. ಸೀತಾರಾಮಶಾಸ್ತ್ರಿ ಇವರಿಂದ ರಚಿತವಾಗಿದೆ. ಇದರಲ್ಲಿ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ವಿನೋದಪರ ಗೋಷ್ಠಿಗಳು ಸಮಾವೇಶ ಮಾಡಲ್ಪಟ್ಟಿವೆ. ಶಿಕ್ಷಕರಿಗೆ ಅತಿ ಉಪಯುಕ್ತವಾದ ಗ್ರಂಥವು.

೪. **ಸಾರ್ವಜನಿಕ ವೆಚ್ಚಃ**— ಈ ಗ್ರಂಥವು ಶ್ರೀಯುತ ಎಮ್. ಎಚ್. ಗೋಪಾಲ ಇವರಿಂದ ರಚಿತವಾಗಿ ಮೈಸೂರ ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯೊಳಗಿನದಾಗಿದೆ. ಇದರಲ್ಲಿ ಸಾರ್ವಜನಿಕ ಸಂಸ್ಥೆಗಳ ವರಮಾನವನ್ನು ಈ ಸಂಸ್ಥೆಗಳು ಹೇಗೆ ವೆಚ್ಚಮಾಡುತ್ತವೆ ಮತ್ತು ಮಾಡಬೇಕು ಎಂಬ ವಿಷಯಗಳು ಹೇಳಲ್ಪಟ್ಟಿವೆ. ನಾಗ

ರಿಕ ಶಿಕ್ಷಣದಲ್ಲಿ ಇಂಥ ವಿಷಯಗಳು ಬಹು ಆವಶ್ಯಕವಾದವುಗಳು. ಜನ ಸಾಮಾನ್ಯರಲ್ಲಿ ಈ ವಿಷಯದ ತಿಳುವಳಿಕೆಯು ತೀರಕಡಿಮೆ. ಗ್ರಾಮೋದ್ಧಾರ ಕಾರ್ಯವನ್ನು ಕೈಕೊಂಡವರು ಈ ಗ್ರಂಥವನ್ನು ಎಲ್ಲ ಕಡೆಗೂ ಪ್ರಚಾರ ಮಾಡುವದರಿಂದ ಜನತೆಗೆ ಉಪಯೋಗವಾಗದಿರದು.

೫. **ರಾಘವಾಂಕ ಕವಿಯ ಸಿದ್ಧರಾಮ ಚಾರಿತ್ರ್ಯಃ**— ಇದರ ಸಂಪಾದಕರು ದಿವಂಗತ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು ಮತ್ತು ಶ್ರೀಯುತ ಡಿ. ಎಲ್. ನರಸಿಂಹಾಚಾರ್ಯ ಇವರು ಇರುತ್ತಾರೆ. ಈ ಗ್ರಂಥವು ಶಿವಮೊಗ್ಗೆಯ ಕರ್ನಾಟಕ ಸಂಘದ ಪರವಾಗಿ ಪ್ರಸಿದ್ಧವಾಗಿದ್ದು ಈ ಕಾರ್ಯವನ್ನು ಅವರು ಈ ಮೇರೆಗೆ ನೆರವೇರಿಸಿದ್ದಕ್ಕೋಸ್ಕರ ಸಂಘದವರನ್ನು ನಾವು ಅಭಿನಂದಿಸುತ್ತೇವೆ. ಇದು ವಿಸ್ತೃತವಾದ ಮುನ್ನುಡಿ ಮತ್ತು ಟಿಪ್ಪಣಿಗಳಿಂದ ಕೂಡಿದ್ದಾಗಿದೆ. ರಾಘವಾಂಕ ಮಹಾಕವಿಯು ರಚಿಸಿದ ಈ ಷಟ್‌ಪದಿ ಗ್ರಂಥದಲ್ಲಿ ಅಲ್ಲಲ್ಲಿ ಮತತತ್ವಗಳ ನಿರೂಪಣೆಯಲ್ಲದೆ ಗಂಭೀರವಾದ ಭಕ್ತಿಗೌರವಗಳಿಂದ ಕೂಡಿದ ಅನೇಕ ವಿಷಯಗಳಿರುತ್ತವೆ. ಈ ಗ್ರಂಥವು ಶುದ್ಧವಾಗಿಯೂ ಸುಂದರವಾಗಿಯೂ ಅಚ್ಚು ಹಾಕಿದ್ದಾಗಿದೆ. ಇದು ಸಂಗ್ರಾಹ್ಯ ಗ್ರಂಥವಾಗಿದೆ. ಇದರ ಬೆಲೆ ೧ ರೂ. ೮ ಆಣೆ.

೬. **ನಿರಂಜನಶತಕಃ**— ವೀರಶೈವ ವಾಙ್ಮಯದಲ್ಲಿ ಅನೇಕ ಶತಕಗಳಿವೆ. ಅವುಗಳಲ್ಲಿ ಶ್ರೀ. ವಿರಕ್ತತೋಂಟದಾರ್ಯನು ರಚಿಸಿದ ಶತಕಗಳು ಮಹತ್ವವಾದವುಗಳು. ಈಗಿನ ನಿರಂಜನ ಶತಕವು ಈ ಕವಿಯೇ ರಚಿಸಿದ್ದಾನೆ ಇದಕ್ಕೆ ವಿದ್ಯಾವಾಚಸ್ಪತಿ ಶ್ರೀಶಂಭುಲಿಂಗಶಿವಾಚಾರ್ಯರು ಮು. ವಿಜಾಪುರ ಹಿರೇಮಠ ಇವರು ಟೀಕೆಯನ್ನು ಬರೆದಿದ್ದಾರೆ. ಮತ್ತು ವಿಜಾಪುರದ ಶ್ರೀಯುತ ರಾಜೋಟಪ್ಪ ಹೇರಲಗಿ ಇವರು ಇದನ್ನು ಪ್ರಕಾಶಗೊಳಿಸಿದ್ದಾರೆ. ಮರಿತೋಂಟದಾರ್ಯನು ಕೆಳದಿ ಬಸವಪ್ಪನಾಯಕನಿಗೆ ಸಮಕಾಲೀನನು. ಇವನು ಸಿದ್ಧೇಶ್ವರ ಪುರಾಣ, ಪಾಲ್ಕುರಿಕೆಯ ಸೋಮೇಶ್ವರ ಪುರಾಣ, ಕರ್ನಾಟಕ ಶಬ್ದಮಂಜರಿ, ಇವೇ ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ. ನಿರಂಜನ ಶತಕದಲ್ಲಿ ವೀರಶೈವ ಧರ್ಮದ ಮುಖ್ಯ ತತ್ವಗಳು ಬಹು ಸ್ಪಷ್ಟವಾಗಿ ವಿವೇಚಿಸಲ್ಪಟ್ಟಿರುತ್ತವೆ. ಇದರ ಬೆಲೆ ೮-೮-೦.

೭. **ಶಂಕರವಾಸಿಮಯ್ಯ ಪುರಾಣಃ**— ಇದರ ಸಂಪಾದಕರು ಶ್ರೀಯುತ ವೀರಭದ್ರಪ್ಪ ಬಸವಪ್ಪ ಹಾಲಭಾವಿ ಬಿ. ಎ. ಎಲ್. ಎಲ್. ಬಿ. ನಿವೃತ್ತ ಮೊದಲನೇ ವರ್ಗ ನ್ಯಾಯಾಧೀಶರು ಇದ್ದು ಅವರು ಇದನ್ನು ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿಸಂಸ್ಥೆಯ ಸಮಿತಿಯವರಿಗೆ ಅರ್ಪಿಸಿದ್ದಾರೆ. ಈ ಪುರಾಣವನ್ನು ಭಾವಿಸಿಪಟ್ಟದಿಯಲ್ಲಿ ಮಲ್ಲಿಕಾರ್ಜುನ ಎಂಬ ಹೆಸರಿನ ಕವಿಯು ರಚಿಸಿದ್ದಾನೆ. ಈತನ ಕಾಲವು ದಿವಂಗತ ಆರ್. ನರಸಿಂಹಾಚಾರ್ಯರು ೧೬೭೭ ಎಂದು ಅಭಿಪ್ರಾಯಪಟ್ಟಿದ್ದಾರೆ. ವೀರಶೈವ ಮತೋದ್ಧಾರ ಕಾರ್ಯದಲ್ಲಿ ಶಂಕರದಾಸಿಮಯ್ಯನು ಪ್ರಮುಖನಾಗಿದ್ದು ಅತನು ಕ್ರಿ. ಶ. ೧೦೧೫ ರಿಂದ ೧೫೪೦ ರವರೆಗೆ ಆಳಿದ ಚಾಲುಕ್ಯ ಜಯಸಿಂಹನ ಕಾಲದಲ್ಲಿದ್ದನು. ಈತನ ಮೂಲ ಗ್ರಾಮವು ಹುನಗುಂದ ತಾಲೂಕಿನ ಮೇರೆಯಲ್ಲಿ ಕೃಷ್ಣಾತೀರದಲ್ಲಿರುವ ನವಿಲೆ ಎಂಬುದಿರುತ್ತದೆಂದು ಸಂಪಾದಕರು ಶಾಸನಗಳ ಆಧಾರದಿಂದ ಬಹು ಪರಿಶ್ರಮಪೂರ್ವಕವಾಗಿ ಕಂಡುಹಿಡಿದಿದ್ದಾರೆ. ಈ ಪುರಾಣದಲ್ಲಿ ಉಲ್ಲೇಖವಾಗಿದ್ದ ಜಡೆಯಶಂಕರ ದೇವಾಲಯವು ಇಲ್ಲಿಯೇ ಇರುತ್ತದೆ. ಗ್ರಂಥವು ಶುದ್ಧವಾಗಿಯೂ ಸುಂದರವಾಗಿಯೂ ಅಚ್ಚುಹಾಕಲ್ಪಟ್ಟಿದೆ. ಇದಕ್ಕೆ ವಿಸ್ತೃತವಾದ ಪ್ರಸ್ತಾವನೆ, ಕಥಾಸಾರ, ಮತ್ತು ಕಠಿಣ ಶಬ್ದಗಳ ಕೋಶ ಇವುಗಳಿದ್ದು ಇದರಿಂದ ಈ ಗ್ರಂಥದ ಉಪಯುಕ್ತತೆಯು ಹೆಚ್ಚಿರುತ್ತದೆ. ಈ ಗ್ರಂಥದಲ್ಲಿ ವೀರಶೈವ ಮತತತ್ವದ ನಿರೂಪಣೆಯು ಇದ್ದು ಸುಂದರವಾದ ಚಿತ್ರಗಳು ಸೇರಿಸಲ್ಪಟ್ಟಿವೆ. ವೀರಶೈವರಿಗೆ ಸಂಗ್ರಾಹ್ಯವಾದ ಗ್ರಂಥವಾಗಿದೆ. ಇಂಥ ಗ್ರಂಥವನ್ನು ಶ್ರೀಯುತ ಹಾಲಭಾವಿಯವರು ಪ್ರಕಟಿಸಿದ್ದಕ್ಕೆ ನಾವು ಅವರನ್ನು ಅಭಿನಂದಿಸುತ್ತೇವೆ.

ಶಿವಾನುಭವ ಸಂಘಗಳುಃ— ಈಚೆಗೆ ಈ ಸಂಘಗಳು ಕರ್ನಾಟಕದಲ್ಲೆಲ್ಲ ಕ್ರಮೇಣ ಪ್ರಸಾರವಾಗುತ್ತ ನಡೆದಿರುವದು ಶುಭಚಿನ್ಹವಾಗಿದೆ. ಇವುಗಳ ಸಭಾಸದರು ಆಚರಿಸಬಹುದಾದ ಕಾರ್ಯಗಳನ್ನು ಕುರಿತು ನಾವು ಹಿಂದಿನ ಸಂಚಿಕೆಯಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದೇವೆ. ಅವುಗಳ ಉಪಯುಕ್ತತೆಯನ್ನು ಕುರಿತು ಅನೇಕ ಮಹನೀಯರು ನಮಗೆ ಪತ್ರಗಳನ್ನು ಬರೆದಿರುತ್ತಾರೆ. ಕೆಲವರು ಅವು ಬಹು ಗಡುಚಾದವುಗಳೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಯಾವನು ನಾಗರಿಕ ವರ್ತನೆಯುಳ್ಳವನಿರುವನೋ ಅವನಿಗೆ ಅವು ದಿನದ ನಿತ್ಯಕ್ರಮಗಳಾಗಿಯೇ

ಪರಿಣಮಿಸುತ್ತವೆ. ಶಿವಾನುಭವ ಸಂಘಗಳ ಉದ್ದೇಶಗಳು ಕುಟುಂಬ ಸುಧಾರಣ ಮತ್ತು ಆತ್ಮಸುಧಾರಣ ಇವುಗಳೇ ಇರುತ್ತವೆ. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು ಮೊದಲು ಕುಟುಂಬದ ಉತ್ಕೃಷ್ಟಸ್ಥಿತಿಯ ಮೇಲೆ ಅವಲಂಬಿಸಿರುತ್ತವೆ. ಅನೇಕರು ಶಿವಾನುಭವ ಸಂಘಗಳ ಸಂಘಟನೆಯ ಕಾರ್ಯದಲ್ಲಿ ಕಾಂಗ್ರೆಸ್ಸಿನ ಕಾರ್ಯ ಪದ್ಧತಿಗಳನ್ನು ಅನುಸರಿಸುವ ಅಭಿಪ್ರಾಯವುಳ್ಳವರಿರುವದು ಕಂಡುಬಂದಿದೆ. ಆದರೆ ಇದು ತಪ್ಪುಮಾರ್ಗವಾಗಿರುತ್ತದೆ. ರಾಜಕೀಯ ಚಳವಳಿಗಳ ಪದ್ಧತಿಗಳು ಸಾಮಾಜಿಕ ಸುಧಾರಣೆಯ ಪದ್ಧತಿಗಳಿಗೆ ಅನ್ವಯಿಸಲಾರವು. ದೇಶದ ಪ್ರಕೃತ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಮೊದಲಾದ ರಾಜಕೀಯ ಸಂಸ್ಥೆಗಳು ಅನೇಕವಿಧವಾಗಿ ಜನಸಮುದಾಯವನ್ನು ತಮ್ಮ ತಮ್ಮ ಕಡೆಗೆ ಎಳೆದುಕೊಂಡು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು, ಸರಕಾರದಿಂದ ಹಕ್ಕುಗಳನ್ನು ಸಂಪಾದಿಸಿಕೊಳ್ಳುವದರಲ್ಲಿ ತೊಡಗಿರುತ್ತವೆ. ಈ ದೃಷ್ಟಿಯಿಂದ ಇವುಗಳ ಕಾರ್ಯಪದ್ಧತಿಗಳು ನಿರ್ಮಿಸಲ್ಪಟ್ಟಿರುತ್ತವೆ. ಆದರೆ ಸಾಮಾಜಿಕ ಕಾರ್ಯಗಳು ಈ ರೀತಿಯಾಗಿ ನೆರವೇರಲಾರವು. ಶಿವಾನುಭವ ಸಂಘಗಳ ಬಗ್ಗೆ ಅನೇಕರು ಅಲ್ಲಲ್ಲಿ ಪ್ರಯತ್ನಿಸುವದು ಕಂಡುಬರುತ್ತದೆ ಅವರು ಕಾಂಗ್ರೆಸ್ಸಿನ ಮಾದರಿಯನ್ನು ತೆಗೆದುಕೊಂಡು ತಮ್ಮಲ್ಲಿ ಅಧಿಕಾರ ಸ್ಥಾನಗಳನ್ನು ಏರ್ಪಡಿಸಿ ಕಾಂಗ್ರೆಸ್ಸು ಹೇಗೆ ಸರಕಾರದ ಮೇಲೆ ಒತ್ತಾಯ ಮಾಡುತ್ತದೋ ಹಾಗೆ ಜನ ಸಮುದಾಯದ ಮೇಲೆ ಒಂದು ಬಗೆಯ ವರ್ಚಸ್ಸು ಉಂಟುಮಾಡುವ ಅಭಿಪ್ರಾಯವು ಇವರದಿದ್ದ ಹಾಗೆ ಕಂಡುಬರುತ್ತದೆ. ಆದರೆ ಇಂಥ ಧೋರಣದಿಂದ ಕಾರ್ಯಗಳಾಗವು. ವಾಙ್ಮಯ ಪ್ರಸಾರ, ಸಮಾಜ ಸಂಸ್ಕರಣ, ಧಾರ್ಮಿಕ ಸುಧಾರಣೆ ಇವುಗಳಿಗೋಸ್ಕರ ನಿಷ್ಕಲಂಕ ಪ್ರೀತಿಯು ಬೇಕು. ಒಂದೇ ಸವನೆ ಶ್ರಮಪಡಬೇಕು. ಆದರೆ ಈ ಕಾರ್ಯದಲ್ಲಿ ಪ್ರಯತ್ನಿಸುವವರು ತಮ್ಮನ್ನು ಮೊದಲು ಸುಧಾರಿಸಿಕೊಳ್ಳಬೇಕು, ಆಮೇಲೆ ತಮ್ಮ ಕುಟುಂಬದ ಜನರನ್ನು ಸುಧಾರಿಸಬೇಕು. ಆವರಲ್ಲೆಲ್ಲ ಉಚ್ಚತರದ ಪದ್ಧತಿಗಳು ನೆಲೆಗೊಳ್ಳಬೇಕು. ಈ ದೃಷ್ಟಿಯಿಂದ ಕಾರ್ಯಮಾಡುವದರಿಂದ ಸ್ಥಿರತರವಾದ ಪರಿಣಾಮಗಳುಂಟಾಗುವವು. ಇದು ಸಾಧ್ಯವಾಗಲು ವ್ಯಕ್ತಿಗಳ ನಿಸ್ವಾರ್ಥಬುದ್ಧಿ ಉಚ್ಚ ವರ್ತನೆ ಮತ್ತು ಮನಸ್ಸಿನ ಉತ್ಕೃಷ್ಟತೆ ಇವು ಅವಶ್ಯವು. ಈ ಪ್ರಕಾರ ದುಡಿಯುವವರು ಗ್ರಾಮಾ

ತರಗಳಲ್ಲಿ ಉಂಟಾಗಬೇಕು. ಮತ್ತು ಅವರು ತಮ್ಮ ಮತ್ತು ತಮ್ಮ ಸುತ್ತಲಿನ ಗ್ರಾಮಗಳಲ್ಲಿ ಪ್ರಯತ್ನಿಸಬೇಕು. ಈ ರೀತಿಯಾಗಿ ಸ್ಥಾಪಿಸಲ್ಪಟ್ಟ ಶಿವಾನುಭವ ಸಂಘಗಳು ದೇಶದಲ್ಲಿ ಹೆಚ್ಚಾಗಬೇಕು. ಅಂದರೆ ಮಾತ್ರ ಶಿವಾನುಭವ ಸಂಘಗಳಿಂದ ಉಪಯುಕ್ತ ಕಾರ್ಯಗಳಾಗುವವು.

ವೀರಶೈವ ಸಂಸ್ಕೃತಿ ಪ್ರಕಾಶಕ ಸಮಿತಿಗದಗ:— ಈ ಸಮಿತಿಯವರು ವೀರಶೈವ ಸಾಹಿತ್ಯ ಪರೀಕ್ಷೆಗಳನ್ನು ಪ್ರತಿವರ್ಷ ಡಿಶಂಬರ ಹಾಗೂ ಜೂನ ತಿಂಗಳುಗಳಲ್ಲಿ ಏರ್ಪಡಿಸಬೇಕೆಂದು ನಿರ್ಧರಿಸುವದಾಗಿ ನಮಗೆ ತಿಳಿಯುತ್ತದೆ. ಇದು ಸ್ತುತ್ಯಉಪಕ್ರಮವು. ಇದರಲ್ಲಿ ಅವರು ಮೂರು ತರಗತಿಗಳನ್ನು ಮಾಡಲು ಯೋಚಿಸಿದ್ದಾರೆ. ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಬಿರುದುಗಳನ್ನು ಕೊಡಲೂ ಅಪೇಕ್ಷಿಸಿದ್ದಾರೆ. ಈ ತರದ ಪ್ರಯತ್ನಗಳಿಂದ ವೀರಶೈವ ಧರ್ಮದ ತತ್ವಗಳ ಅಭ್ಯಾಸವು ಎಲ್ಲ ಕಡೆಗೆ ನಡೆಯಲಿಕ್ಕೆ ಉತ್ತೇಜನವು ಉಂಟಾಗುವದು. ಎಲ್ಲ ಕಡೆಯ ಪಾಠಶಾಲೆಗಳು ಈ ಪ್ರಯತ್ನವನ್ನು ಅವಶ್ಯವಾಗಿ ಪುರಸ್ಕರಿಸತಕ್ಕದ್ದು. ಈಪ್ರಕಾರ ಪಾಠಶಾಲೆಗಳಷ್ಟೇ ಅಲ್ಲ, ಇವಿಲ್ಲದ ಬೇರೆ ಗ್ರಾಮದವರೂ ಕೂಡ ನೇಮಿಸಲ್ಪಟ್ಟ ಗ್ರಂಥಗಳ ಅಭ್ಯಾಸವು ತಮ್ಮಲ್ಲಿ ನಡೆಯುವ ಏರ್ಪಾಡು ಮಾಡತಕ್ಕದ್ದು. ಇದರಿಂದ ಸಮಾಜದಲ್ಲಿ ನಿಜವಾದ ಧರ್ಮ ಜಾಗ್ರತಿಯು ಉತ್ಪನ್ನವಾಗದೆ ಇರದು.

ಕವಿ ಗುರುಬಸವಕೃತ.

ಅವಧೂತಗೀತೆ.

(ಚೌಪದಿ)

ಸೃಷ್ಟಿ ಸಮಸ್ತ ಜಗಂ ನಿಜರೂಪ
ಭಕ್ತಮನೋಮಂದಿರ ಚಿದ್ದೀಪ
ನಿತ್ಯಂ ಗುರುಬಸವೇಶ ಪರಾಪ
ಕೂರ್ತೆನ್ನೊಳು ನೆಲಸಿರು ನಿರ್ಲೇಪ

ಗುರು ಬಸವೇಶ ಸಮಗ್ರ ಪರೇಶ
ಶರಣ ಮನಸ್ಸರಸಿರುಹನಿವಾಸ
ಪರಮ ನಿರಂತರ ಸುಖಪರಿತೋಷ
ವರತರ ಸಲಹೆನ್ನನು ಭವನಾಶ ॥೨॥

ಸಹಜ ಸಮುಗ್ರದ್ವಯ ಸುಖತುಷ್ಟಿ
ವಿಹಿತ ಷಡಂಗ ಶಿವಾಂಗಿಕ ಶಿಷ್ಟಿ
ಗಹನಕಡರಿ ಪರಸಮರಸ ಪುಷ್ಟಿ
ಯೆಹಗಿರಲಹಗನುಭವಗುರುದೃಷ್ಟಿ ॥೩॥

ವಡಬ ಜಡಂ ಗುಣಮಹಿಸಂತಾನ
ಸುಡುವ ವಿಷಂ ಪೀಯೂಷ ಸಮಾನ
ಪೊಡೆವ ಸಿಡಿಲ್ಮಂಜುಳ ವರಗಾನ
ಮೃಡಗುರು ಕರುಣ ಕಟಾಕ್ಷದ ಭಾನ ॥೪॥

ಕಚಟ ತಪೋಚ್ಚಾರಣೆಯನು ಮಾಡೆ
ವಿಚಲಿಸಲಹುದೆ ಸಮಗ್ರವ ಕೂಡೆ
ಉಚಿತ ರಹಸ್ಯವನಲ್ಲದನಾಡೆ
ಪ್ರಚುರವೆನಿಸಿ ಗಾದೆಗಳೊಳಗಾಡೆ ॥೫॥

ನೀ ಪರಮಾತ್ಮನಖಂಡಿತನಾಗಿ
ವ್ಯಾಪಿಸುತಿಹೆ ಮಿಥ್ಯಾಸುಖಕಾಗಿ
ಯೈ ಪರಮ ಸುಧಾಂಬುಧಿ ತೃಷೆಗಾಗಿ
ಕೂಪೋದಕ ಪೀರ್ದುದು ಗಡ ಪೋಗಿ ॥೬॥

ಕರುಣಾಲಯ ಸಜ್ಜನ ಗಡ ತನಗೆ
ಕಿರಣೋದಕ ಬಳಿಸಲು ಗಡ ಮನೆಗೆ
ಸ್ಮರಶಾಸ್ತ್ರಾನುಗ್ರಹ ಗಡ ಮುನಿಗೆ
ಸುರಧನುವಾಯುಧ ಗಡ ರಣವೊನೆಗೆ ॥೭॥

ನಿನ್ನಾಯತ ನಿನಗನುಗುಣವಾಗಿ
ದುರ್ನೀತಿಯ ಬಿಡದಿಹೆ ನುಗ್ಗಾಗಿ
ಬನ್ನ ಬಟ್ಟು ಜೀವಿಸುವಂತಾಗಿ
ಮನ್ನಿಸುವನೆ ಯಮುರಾಟ್ ನಿನಗಾಗಿ ॥೮॥

ತಳುವದೆ ಸಲೆಸಂಸೃತಿಯನು ಪಳಿಯೆ
ಹೊಳೆವುದು ತನುಸಂಸೃತಿಯುದನಳಿಯೆ
ಉಳಿದ ಮನಸಂಸೃತಿಯುದ ಕಳೆಯೆ
ಬೆಳಗುತಿಹನು ಪರಮನು ಸಂದಳಿಯೆ ॥೯॥

ಉಗ್ಗರಿಸುತಲಾಹುತಿಗೊಳುವಂತೆ
ನುಗ್ಗಾಗಿಯು ಬಿಡೆ ವಿಷಯವ ಮುಂತೆ
ಹಿಗ್ಗುವೆ ನೀ ತೋರಿಕೆಗೋರಂತೆ
ತಗ್ಗುವೆ ತತ್‌ಕ್ಷಣದೊಳಗಂತಂತೆ ॥೧೦॥

ನೀನೊರ್ವನು ಹಲಬರ ಹೋರಾಟ
ಜ್ಞಾನೋತ್ತರಮಾರ್ಗಕೆ ಜಂಜಾಟ
ವಾನರಕೊದಗಿದ ತೊನಜೆಯ ಕಾಟ
ತಾನದರಿಂ ದಿನದಿನ ಕುಚ್ಚಾಟ ॥೧೧॥

ಅದಕಿದು ನೀಚವಿದಕ್ಕದು ನೀಚ
ತುದಿಗೈದಿಸಲದಕದು ಸಂಕೋಚ
ಪದನಿದು ತಿಳಿ ಸಂಸೃತಿನಾರಾಚ
ವಿಧಿ ಗಹಗಹಿಸಲು ಸುಖವೆ ವಿಮೋಚ ॥೧೨॥

ಆಯುವಿಹುದು ಕಾಲಾಖ್ಯವ ತಾಳಿ
ಹಾಯೆನುತಿಹೆ ತಿಥಿವಾರವ ಕೇಳಿ
ದಾಯಗೆಡಲು ತಿಳಿಯದೆ ಮತಿಹೂಳಿ
ವಾಯಕೆ ಸುಖಸುತ್ತಿಹೆ ಕಾಕೋಳಿ ॥೩॥

ಶುನಿಮುಸ್ತಕ ಮಕ್ಷುಕ ರತಿಯಾಗಿ
ವಿನಯದಿ ಪಿಡಿಯಲದುಂ ಕನಸಾಗಿ
ತನು ಸಂಸೃತಿಗುಪಮಾನಮುದಾಗಿ
ಕನಲದಿರದಕೆ ಜಡಾತ್ಮಕನಾಗಿ ॥೧೪॥

ಕನಸಿನೊಳಗೆ ಸಂಸಾರದ ಸಂಗ
ಕನಸಿಂದೆಚ್ಚರೆ ಬಿಡುಗದರಂಗ
ನೆನೆದಡೆ ಭವಸಾಗರದುತ್ತುಂಗ
ತನುಪೂರ್ವಕವಾದೊಡೆ ಸುಖಭಂಗ ॥೧೫॥

ತೋರಿಕೆ ಮಾತ್ರವೆನಿಪ ಸಂಸೃತಿಯ
ಮೀರದೆ ಬಹು ಕಂಟಕ ಸಂದಣಿಯ
ಹೆರುಹತನುಕರಣೇಂದ್ರಿಯವಳಿಯ
ನೆಂದವಂ ಸುಖದಿಂದಿರಲರಿಯ ॥೧೬॥

ಎಹಗಹುದೈ ವೈಭವ ಈಷಣದ
ಕುಹಕದನಾರ್ಭಲ್ಲರು ಸಿರಿಗರದ
ಅಹಹ ವೃಥಾ ಮೋಹಿಸಿ ಸಂಶಯದ
ಬಿಹಿಗೆಳತಟಗೊಳುವರೆ ಕೃತ್ರಿಮದ ॥೧೭॥

ಭವಣೆಯ ಮೇಲೆ ಬಳಾರಿಯ ತೂಳ
ಹವಣಿಸಿದಂತೆ ಶರೀರದ ಮೇಳ
ತವೆ ಸಂಸೃತಿ ಬಹು ಕರ್ಮದ ಕೋಳ
ಶಿವಶಿವ ತನುವಾಯಿತಿಂತುರಿದೇಳ ॥೧೮॥

ಅನವರತಂ ಗುರುಚರಣವ ಕೂರ್ತೞ
ನೆನೆಯದಿರಲು ಕಾಲಂಗವ ತುತ್ತು
ತನುಕರ್ಮವ ತನುವಿಂಗುಣಲಿತ್ತು
ತನಗೆ ದಿನಂಗಳಿವುದು ತಾ ಹೊತ್ತು ೧೯

ತಟತಟ ತನುತಾಪದಿನುದರಾರ್ಥಂ
ಕಟಪಟ ವಚನ ವೃಥಾ ವಾದಾರ್ಥಂ
ಚಿಟಪಟ ಮನಸಿನಿಸುಂ ಲೋಭಾರ್ಥಂ
ದಿಟದಿಟ ಮುಕ್ತಿಗೆಮೊಹಗದು ಸ್ವಾರ್ಥಂ ॥೨॥
ಅನೃತವಹ ಗೃಹದೊಳು ತಪದಾಟ
ಮನಕನುಗುಣವಾಗದು ಹಾರಾಟ
ತನಗಿನಿತರ ತಾತ್ಪರ್ಯದ ಮಾಟ
ಇನಿಸಾದೊಡೆ ನೆಲೆಯುಂ ಬಿಟ್ಟಾಟ ॥೨॥
ತಟತಟಯಹ ಲಾಲಸೆಯನು ಸೂಡಿ
ಪಟಪಟನೈದಿ ಪರರ ತಾ ಬೇಡಿ
ದಿಟರುಸಿಗಳ ಮನದೊಳಗೆಡೆಮಾಡಿ
ಕಟ ಮನುಜರು ಬಳಲ್ವರು ಸುಖಕಾಡಿ ॥೨॥
ಸಿಡಿಲೆರಗಿದ ಪರಿಯಂತಾರ್ಭಡಿಸಿ
ಕೊಡಹುತ ಗಾದೆಗಳಂ ಗಡಬಡಿಸಿ
ನುಡಿನಡೆಯೊಳು ಮದಮತ್ಸರ ಜನಿಸಿ
ಘುಡುಘುಡಿಸುವನಜ್ಞನು ಭವವೆರಸಿ ॥೩೦॥
ಮನವಿದು ತನುವಿನುಪಾಧಿಕವಾಗಿ
ತನುವಿಷಯೇಂದ್ರಿಯಗಳಿಗತಿ ಬೀಗಿ
ದಿನದಿನ ವಿಷಯೋಪಾಧಿಕವಾಗಿ
ತನಗೆ ಭವಂಗರವವು ತಾವು ಕೂಗಿ ॥೩೧॥
ಮನಕನುಗುಣವಾಗದು ನೆನೆದಂತೆ
ತನುವಿಷಯದ ಬಗೆಗಳು ತಾವು ಸಂತೆ
ತನಗಿದರಿಂ ಸುಖವಿರದೋರಂತೆ
ಜನನಲಯಸ್ಥಿತಿಗಳು ತಾವು ಮುಂತೆ ॥೩೨॥
ಅವತರಿಸಿಯೆ ಹಸುತೃಷೆ ಸಮವಾಗಿ
ತವೆ ಸತಿ ಸುತರನುರಾಗಕೆ ಬೀಗಿ
ಭವಣಿಬಡುವನಿಹಪರಗಳೆಗಾಗಿ
ಭವಬಡುವರು ಮನುಜರು ಸುಖಕಾಗಿ ॥೩೩॥

ತಟತಟ ತಾನೆನಿಸುವ ಸಂಸಾರ
ಘಟಿಸಿ ವಿಜೃಂಭಿಸುತಿಹ ಭವಭಾರ
ದಿಟಪುಸಿಗಳ ಮಧ್ಯದ ಕುವಿಚಾರ
ನಟಿಸಿದನವಗೆ ತನು ನೆರೆ ನಿರ್ಧಾರ ॥೧೦॥
ಹಸುಗಳೆಯದೆ ಸೊಣಗನು ಮತಿಗೆಟ್ಟು
ಮುಸುರೆಯ ಮಡಿಕೆಯೊಳಗೆ ಮೊಗವಿಟ್ಟು
ದೆಸೆಗಾಣದೆ ಬಾಧೆಗೆ ತನುಗೊಟ್ಟು
ಪೆಸರ್ಗೊಳಲಿದು ಸಂಸಾರದ ಗುಟ್ಟು ॥೧೧॥
ಎನಿತರುವಿರಲಹವೆನುತಿಹ ಖಳನು
ಮನುಜನೆಯವ ಸಾಕ್ಷಾನ್ನರಖರನು
ಜನರೊಳಗವನೊರ್ವನೆ ಪಾತಕನು
ತನುಭೇದದೊಲನ್ನವ ತಿನುತಿಹನು ॥೧೨॥
ತನು ಸವೆಸವೆದು ಮನಃಕವಲಿರಿದು
ದಿನಪರಿಯದ ಕೋಟಲೆಯೊಳಗೊಡದು
ಜಿನುಗುತ್ತಿಹನಜ್ಞನು ಕುದಿಕುದಿದು
ಕನಸಿನ ತೋರಿಕೆಯುಂ ನೆನೆನೆನೆದು ॥೧೩॥
ಮನುಜನ ಮತಿಯೊಳಗಿಲ್ಲ ವಿರಕ್ತಿ
ಇನಿತುಳ್ಳೊಡೆ ಹೊರಗಿಹುದದು ಹತ್ತಿ
ಜಿನುಗುತಿಹುದು ಮನದೊಳು ದುರ್ವೃತ್ತಿ
ಜನಿಸುತಿಹುದು ಪರದೊಳು ದುಃಕೀರ್ತಿ ॥೧೪॥
ಪರಿಮಳ ಕಾವ್ಯರಸಂ ರುಚಿಗಾನ
ಸುರುಚಿರಲಾಸ್ಯಸುಪುಷ್ಪವಿಧಾನ
ಪರಿಕಿಸಲಿವರನು ಸಂಗದಿ ದಿನ
ಪರಿಹಕದಿನ ಭಕದಿಂದವನೂನ ॥೧೫॥
ಜಡ ಭೌತಿಕ ದೇಹೇಂದ್ರಿಯದಾಟ
ಬಿಡೆ ಸಂಸಾರವಿಷಯದೊಳಗೂಟ
ಷಡರಿವಿಕಾರ ಗುಣಂಗಳ ನೋಟ
ತಡೆಯದೆ ನಿರಯಾವಧಿ ನಿಟ್ಟೋಟ ॥೧೬॥

ಆಸುರದಿಂ ಭವಭವದೊಳು ಬಂದು
ಹೇಸಲು ಬೇಕದರಿಂ ನೀನೊಂದು ॥೪೦॥

ಸಾವಿರ ಶತದೋಷಂಗಳೊಳಡಿದು
ಭಾವಿಸಲೊಂದು ಮಹಾಗುಣವಿಹುದು
ಆವವನೇಹಗಾಚರಿಸುವನೊಲಿದು
ತಾ ವಿಹರಿಸುತಿಪ್ಪುದು ತನು ಮಣಿದು ॥೪೧॥

ಹಸು ತೃಷೆ ಸಂಸಾರಿಕ ವೇಷವನು
ಬಿಸುಡುತ ದಿಗ್ವಿಜಯವ ಮಾಡಿದನು
ವಿಷಮ ಭವಾಟವಿಯೊಳಗಾಗಿರನು
ವಸವಾಗಿರುತಿರುವಾತ್ಮನೊಳತನು ॥೪೨॥

ಪರಮಾಣುಕತನದಿಂ ತನು ಮುನ್ನ
ಬೆರಸಿಹ ಕಥದಿಂದಲು ಕೇಳನ್ನ
ಹೊರೆಯದಿರಲು ವಿಷಯಗಳಿಂತೆನ್ನ
ವರ ಮುಕುತಿಯನೀವುದು ದಿಟ ಜೆನ್ನ ॥೪೩॥

ಇದರಿಂದೀ ತನುವನು ಲಾಲಸದಿಂ
ಸದೆಬಡೆಯುದೆ ಗುರುಮತಸಯ್ಯಮದಿಂ ॥
ಪದುಳದಿ ಸಲಕದಿರಲು ಸಂತಸದಿಂ ।
ತುದಿಗೀವುದು ನಿನಗಾತ್ಮನ ಭರದಿಂ ॥೪೪॥

ತನು ತಾನ ತನುವಹುದು ಗುರುವಿಂದ
ಜನಿವೃತಿಗಳು ಕೇಳ್ವೊಗುವವನಿಂದ
ತನಗೆ ಚಿದದ್ವಯ ಸುಖವದರಿಂದ
ನೆನೆ ಗುರುಬಸವೇಶನನೆಲೆ ಕಂದ ॥೪೫॥

ತಲೆಗರಸಿಕ್ಷಿತಬಲು ಹೊರೆ ಬಂದು
ಗೆಲವಾವುದು ತಾಂ ಚರಿಸಲಿಕಿಂದು
ಸಲೆ ಕೃತ ದುಃಕೃತಚಿಂತೆಗೆ ಸಂದು
ಫಲವಾವುದು ನಿರ್ಗುಣ ನಿನಗೊಂದು ॥೪೬॥

ಎಲೆಯುಲುಗಲು ತರತರಂಸುವ ನರನು
ಗೆಲುವನದೆಂತು ಮಹಾ ಸಮರವನು
ನಿಲಹಿಡಿಯದೆ ಮನಸಿಗೆ ಬೆದರಿಹನು
ಸುಲಭದಿತ ಪವನದೆಂತಾನುವನು ॥೩೪॥

ಎಲೆಲೆ ಮನಸ್ಥಿರಕಂಪರವಾಗಿ
ಅಲುಗಲದೆಂಬಂಧನವಹುದಾಗಿ
ಹಲವೆಣಿಕೆಯ ಮಾಡುವೆ ಸುಖಕಾಗಿ
ಸಲೆ ಗುರುವಚನದ ಬಲುಹುಂಟಾಗಿ ॥೩೫॥

ಮನವಿದು ನೆನೆದಂತಾಚರಿಸುವನು
ತನು ತಾನೆಂದುಳುಮೆಯ ಮರೆದವನು
ತನಗಿತರವ ಕಲ್ಪಿಸಿ ಬರಿದಹನು
ಜನಿಮೃತಿಗಳಿಗಂಗವ ಕೊಟ್ಟವನು ॥೩೬॥

ಅದುಕಾರಣ ವಿಷಯೇಂದ್ರಿಯಗಳನು
ಬೆದರಿಸಿ ಗುರುಚರಣದ ಸಂಗನನು
ಮುದವದಿರದೆ ಮಾಡುತ ಭವಗಳನು
ಸದೆಬಡೆದಮಲಾತ್ಮನ ಕೂಡಿದನು ॥೩೭॥

ಮನವಿದು ಸಯ್ಯಮದಿಂ ಪೀಯೂಷ
ಬಿನಯುವ ಮಾಡಲದೆಂ ಭವನಾಶ
ತನಗೊದವಿದ ಮನದಿಂದುದ್ವೇಶ
ಜನಿಸದಿರಲು ತನಗತಿ ಪರಿತೋಷ ॥೩೮॥

ಕ್ಷಿತಿಯೊಳಗತಿ ಮತದಿಂ ಮಿಗೆ ಕೂಡೆ
ಹಿತವಂತರನರಯುತ್ತಿಹ ಪೀಡೆ
ವೃತಭಾವನೆ ಮನದಿಂದೆದ್ದೊಡೆ
ಹಿತವರಹಾ ಸರ್ವರುಮಂ ಕೂಡೆ ॥೩೯॥

ಬೇಸರದೆ ನುಡಿವಂವದಿಯೆಂದು
ಈಸಾಡುವೆ ಸಂಸಾರದೊಳೆಂದು

ತ್ಯಾಗಾಂಗದ ಫಲದಿಂ ನಿರಯವನು
ನೀಗಿ ನಿಜಾನ್ವಯಸಹಗುರುಪರನು
ಯಾಗಸಹಸ್ರೋತ್ತರ ಪದವಿಯನು
ಭೋಗಿಸಿ ತಾಂ ನಿಜಸುಖಿಯಾಗಿಹನು ॥೪೭॥

ಅವರವರಿಗೆ ತನು ತಕ್ಕಂತಾಗಿ
ವಿವರಿಸಿ ಕರ್ಮವದಕೆ ಸಮುವಾಗಿ
ತವೆ ಸುಖದುಃಖ ತನಗೆ ನೆಲೆಯಾಗಿ
ಭವಬಿಡದಾತ್ಮವಿವೇಕವ ನೀಗಿ ॥೪೮॥

ಸಮಗುರುಪದಚಿಂತನದೊಳು ನಿರುತ
ಬೆದರುವನೆ ಕರಣಾಖ್ಯಕೆ ನಿರತ
ಪದುಳದಿ ಮುದವದಿರದ ನಿಶ್ಚಲಿತ
ಮದಗಜದಂತಿರಬೇಕವಧೂತ ॥೪೯॥

ಇಹಪರದೊಳಗಿಹದಿಂ ಪರವಧಿಕ
ಇಹ ತಾಂ ಪರಕೋಸುಗ ಸಂಗ್ರಹಿಕ
ವಿಹಿತವಿದಿಹ ಪರಗಳ ಮಾಮುಸಕ
ಗ್ರಹಿಸದಿರಲು ಭವಭಯಕವ ನಿಲುಕ ॥೫೦॥

ಕಳನೊಳು ಮನೆಗಟ್ಟಿಹ ಪಟುಭಟನು
ಹೊಳೆಹಿಲ್ಲದ ಚಿತ್ತವನುಳ್ಳವನು
ನೆಲನೆಲ್ಲವ ಸಂಚರಿಸಿದನವನು
ಸುಲಭದಿ ಶಿವನೊಲವಿಂಗೊಳಗಹನು ॥೫೧॥

ತವೆ ತನುಸಿದ್ಧಿ ತನಗೆ ಬೇಕೆಂದು
ಹವಣಿಸಲೇಕೌಷಧಿಗಳನಿಂದು
ಶಿವಶಿವಯೆಂದುಚ್ಚರಿಸಲಿಕೆಂದು
ಭವಭವದೊಳು ತನುವಿರುತಿಹುದೊಂದು ॥೫೨॥

ಪಡರಿ ವಿಕಾರ ಗುಣಭ್ರಮೆಗಳನು
ಕೊಡಹುತ ದಿಗ್ವಿಜಯವ ಮಾಡಿದನು
ಕಡೆಗೆ ಮುಮುಕ್ಷುವೆನಿಸಿ ಮುಕುತಿಯನು
ಪಡೆದು ಪರಮಾತ್ಮನೊಳಗೆ ಸುಖಿಯಹನು ॥೫೩॥

ಸಟೀಕ ಏಕೋತ್ತರ ಶತಸ್ಥಲ.

ಏಕೋತ್ತರ ಶತಸ್ಥಲ – ಏಕ ಒಂದೇ, ಉತ್ತರ ಮೇಲಾದ, ಶತಸ್ಥಲ ನೂರು ಸ್ಥಲವು, ಪ್ರಥಮದಲ್ಲಿ ಪಿಂಡಸ್ಥಲ.

(೧) ಪಿಂಡಸ್ಥಲ.

ಸಚ್ಚಿದಾನಂದಬ್ರಹ್ಮವನಿಸಿಕೊಂಬ ನಿಃಕಲ ಪರಶಿವನ ಸ್ವಯಂ ಪ್ರಕಾಶಮಯವಪ್ಪ ಮೂಲ ಚೈತನ್ಯವಾದಡೆ, ಆ ಪರಶಿವನ ಸೃಷ್ಟಿಗೆ ಕಾರಣವಾದ ಮಾಯಾ ಶಕ್ತಿಯ ಶುದ್ಧ ಸಾತ್ವಿಕಗುಣವೊಂದರೊಡನೆ ಕೂಡಿ ಸರ್ವಾತ್ಮಕಪ್ರೇರಕನಾದಂತಹ ಈಶ್ವರವೆಂದು, ಮತ್ತಂ, ಸತ್ವರಜಂ ಗಳೆರಡರ ಮಿಶ್ರದೊಡನೆ ಕೂಡಿ ಭೋಕ್ತೃ ಸಂಬಂಧಿಯಾದಾತ ನೆಂದು ಬಿಂಬ ಪ್ರತಿಬಿಂಬಗಳ ಹಾಗೆ ಎರಡು ಸ್ವರೂಪವಾಗಿ ಕಲ್ಪಿಸಲ್ಪಟ್ಟಿತ್ತು. ಆದಾಗಿ ಶಿವಾಂಶಿಕನಾದಾತ್ಮನು ಸೃಷ್ಟಿಕಾಲದಲ್ಲಿ ಶಿವಾಜ್ಞೆಯಿಂದ ತೊಟ್ಟಂಥ ದೇಹವೆಂಬ ಮೋಹಭ್ರಾಂತಿಯಿಂದ ತಾನಾರೆಂಬುದನು ಮರೆದು ಸಂಸಾರದಲ್ಲಿ ಜೀವಿಸುತ್ತ ಜೀವಾತ್ಮನೆನಿಸಿ ಶಿವನ ಮಾಯಾ ಸೂತ್ರವಿಡಿದು ಜನ್ಮಾಂತರವನೆಯ್ದಿ ಬರುವಲ್ಲಿ ಆ ಮಾಯಾ ಜನ್ಮಂಗಳಲ್ಲಿ ಮಾಡಲ್ಪಟ್ಟ ಸಮಸ್ತ ಪುಣ್ಯಾಂಗಳೊಬ್ಬಳಿಯಿಂದ ಪಾಪಕ್ಷಯವಾಗಿ ಶ್ರೀಂತಃಕರಣ ಶುದ್ಧವನೆಯ್ದಿ ತನ್ನ ಮುನ್ನಿನ ಶಿವಸಂಸ್ಕಾರವನೊಳಕೊಂಡು ಪುಟವಿಕ್ಕಿದ ಸುವರ್ಣದಂತೆ ಕಡೆಗಂಡು ಬಂದು ನಿಂದುದೀಗ ಪಿಂಡಸ್ಥಲ.

ನಿಶ್ಶೂನ್ಯದಲ್ಲಿ ಅಬ್ಜತೇಜದಿಂದೊಪ್ಪುವ ಅನಾದಿ ಚಿತ್ಸ್ವರೂಪನು ನಿರಂಜನದಲ್ಲಿ ವಿಪ್ಪ ಲಿಂಗದ ಹಾಗಿರುವ ಶೂನ್ಯಕಳಾರೂಪನು, ಶೂನ್ಯ ತತ್ವದಲ್ಲಿ ಮೌಕ್ತಿಕ ಪ್ರಕಾಶಯುಕ್ತವಾದ ಓಂಕಾರದಿಂದೊಪ್ಪುವ ಮೂಲ ಚಿತ್‌ಸ್ವರೂಪನು. ನಾದಬ್ರಹ್ಮದಲ್ಲಿ ವಿದ್ಯುತ್ಪ್ರಭೆಯುಕ್ತವಾದ ಳಕಾರಸ್ವರೂಪಿನಿಂದೊಪ್ಪುವ ಚಿದ್ಯಕ್ತಿ ಸ್ವರೂಪನು. ಶಿವತತ್ವದಲ್ಲಿ ಜ್ಯೋತಿ ಪ್ರಕಾಶಯುಕ್ತವಾದ ಪ್ರಣವದಿಂದೊಪ್ಪುವ ಪರಶಕ್ತಿಸ್ವರೂಪನು. ಸದಾಶಿವ ತತ್ವದಲ್ಲಿ ರಾತ್ಮಪ್ರಕಾಶಯುಕ್ತವಾದ ಷಕಾರ ಸ್ವರೂಪಿನಿಂದಿರುವ

ತಾವಾವಾಚರಣೆಯಲ್ಲಿರ್ದಡೂ ಅನಾದಿ ಶಿವತತ್ವಜ್ಞಾನ ಸಂಧಾನವ
ನಂದು ಶಿವತತ್ವಭೋಗವನನುಭವಿಸಿ ಪೂರ್ವಾಚರಣೆವಿಡಿದೆಯ್ದಿ ಆ ಶಿವ
ತತ್ವದಲ್ಲಿ ಎರಕವಾಗಿರುವದೇ ವಿಹಂಗಜ್ಞಾನವೆನಿಸುವುದು. ಪಿಪೀಲಿಕನು
ಆವುದಾನೊಂದು ಫಲವಾದ ತರುವಿನ ಮೂಲವ ಮೂಸಿ ನೋಡಿ ಮೇಲೆ
ಹಣ್ಣಿದೆ ಎಂಬುದ ಬಲ್ಲದು. ಆ ಹಣ್ಣಿಗೈದುವಲ್ಲಿ ತನಗೆ ಶತ್ರುವಾಗಿ,
ಹಲ್ಲಿ ಓತಿ ಮೊದಲಾದ ಪ್ರಾಣಿಗಳ ಕಂಟಕವುಂಟು. ಅದನು ಜಯಿಸಿ
ದಾಂಟಿಕೊಂಡು ಹೋದಲ್ಲಿ ಆ ಹಣ್ಣಿರಸವ ಸೇವಿಸಿ ಸುಖದಲ್ಲಿರುವ
ಹಾಗೆ ಶಿವಶಾಸ್ತ್ರ ಸಮ್ಮತಿಯ ನೆಲೆವಿಡಿದು ಎಯ್ದಿದಡೆ ಮುಕ್ತಿಯಹು
ದೆಂಬ ಶ್ರುತಜ್ಞಾನವ ಬಲ್ಲವನು. ಅದು ಕಾರಣವಾಗಿ ಜ್ಞಾನ ಕ್ರಿಯಾ
ಚಾರ ಮಾರ್ಗವಿಡಿದು ಗವಿಸುವಲ್ಲಿ ಕಲಿ ಕಾಲ ಕಾಮ ಮಾಯಾದಿಗಳ
ಭೀತಿ ಬಂದು ತಟ್ಟಿದರೂ ಅದಕ್ಕುಸಿಲ್ಕದೆ ನೆಲೆಗಳಿವವನಾಗಿ ಆ ಮುಕ್ತಿ
ಫಲರಸವ ಸೇವಿಸಿ ಶಿವಾಗಮಾವಸ್ಥೆ ಜ್ಞಾನಾಚರಣೆಯಿಂದೆ ತಪ್ಪದೆ ಅನು
ಭವಿಸುವಂತಹದೇ ಪಿಪೀಲಿಕ ಜ್ಞಾನವೆನಿಸುವುದು. ತ್ರಿವಿಧಾಂಗ ತ್ರಿವಿ
ಧಲಿಂಗದಾಚರಣೆ ಆದಿಗತಿ, ಷಡ್ವಿಧಾಂಗ ಷಡ್ವಿಧಲಿಂಗದಾಚರಣೆಯೇ
ಮಧ್ಯಗತಿ, ನೂರೊಂದು ಸ್ಥಳ ಕುಳಂಗಳಾಚರಣೆ ತೀವ್ರಗತಿ, ಇಂತಿವೆ
ಲ್ಲವನು ಒಳಕೊಂಡಿರುವಂತಹದೇ ಚಿತ್ಪಿಂಡ ಸ್ಥಲವೆನಿಸುವುದು.

ಮೂಲ-- ಬಿಂದು ಬಿನ್ನಾಣದೊಳಗಂದವಿಟ್ಟಿಹ ಕಳಾನಂದಪಿಂಡೋ
ದಯದ ಜ್ಞಾನನಿರುತ.

ಟೀಕು— ಬಿಂದು ಮಾಂಸ ಬಿಂದು ಪ್ರವೇಷ್ಟಿತವಾದ ಶರೀರವು
ಬಿನ್ನಾಣದ ಆ ದೇಹಕ್ಕೆ ಚೈತನ್ಯ ಸ್ವರೂಪವಾದಂತಹ ಆತ್ಮನು ಒಳಗೆ
ದೇಹಾತ್ಮರುಗಳ ಮಧ್ಯದಲ್ಲಿ ಅಂದವಿಟ್ಟಿಹ ಒಪ್ಪವಿಟ್ಟಿರ್ದಂತಹ ಕಳಾ
ನಂದ ಅಖಂಡ ಶಿವ ಕಳಾನಂದ ಚೈತನ್ಯಸ್ವರೂಪವಾದಂಥ ಪಿಂಡ,
ಪಿಂಡನಾಮಪರ್ಯಾಯವನುಳ್ಳ ಪರಬ್ರಹ್ಮವು ಜ್ಞಾನೋದಯಕ್ಕೆ ಮೊದಲೆ
ಆ ಪರಬ್ರಹ್ಮವು ಪಿಂಡದಲ್ಲಿ ಪಿಂಡವಾಗಿಹುದು. ಬಿಂದು ಬಿನ್ನಾಣದೊ
ಳಗೆ ಪ್ರಕಾಶ ದ್ವಾರದಲ್ಲಿ ಅಂದವಿಟ್ಟಿಹ ಒಪ್ಪವಿಟ್ಟಿರ್ದಂತಹ ಕಳಾನಂದ
ಜ್ಞಾನದಲ್ಲಿ ಸುಖಿಸುವಂತಹ ಪಿಂಡ ಚಿತ್ಪಿಂಡದಲ್ಲಿ ಜ್ಞಾನೋದಯದ ಸನ್ಯ
ಜ್ಞಾನ ಉತ್ಪತ್ಯವಾಗುವಂಥ ನಿರುತ ನಿಶ್ಚಯವೆಂಬುದರ್ಥ. ಅಂತುವ
ಲ್ಲದೆ ವೇದಪ್ರಸಿದ್ಧ ಶಾಸ್ತ್ರಪ್ರಸಿದ್ಧ ಪುರಾಣ ಪ್ರಸಿದ್ಧವು.

ಶಾಂತ್ಯತೀತೋತ್ತರೆ ಎಂಬ ಕಲಾರೂಪನು. ಉಭಯಲಿಂಗವೇ ತನು,
ಉತ್ತರ ಲಿಂಗವೇ ತಾನು, ಇಂತೀ ಅನಾದಿ ಭಕ್ತನ ಸ್ವರೂಪು ಅದು
ಹೇಗಯ್ಯ ಎಂದಡೆ, ಆದ್ಯರು ವೇದ್ಯರು ಸಾಧ್ಯರು, ಆದಿಪಿಂಡ ಮಧ್ಯ
ಪಿಂಡ ಅಂತ್ಯಪಿಂಡ, ಮರ್ಕಟಜ್ಞಾನ ವಿಹಂಗಜ್ಞಾನ ಪಿಪೀಲಿಕ
ಜ್ಞಾನ, ಆದಿಗತಿ ಮಧ್ಯಗತಿ ತೀವ್ರಗತಿ. ಆದ್ಯರು ಎಂದರೆ ಬಸವಣ್ಣ,
ಚನ್ನಬಸವಣ್ಣ, ಪ್ರಭುಸ್ವಾಮಿಗಳು, ಮಡಿವಾಳಯ್ಯ, ಮೋಳಿಗೆಮಾರಯ್ಯ,
ಹಡಪದಪ್ಪಣ್ಣ, ಸೊಡ್ಡಳ ಬಾಚರಸರು, ಮರುಳುಶಂಕರ ಸ್ವಾಮಿಗಳು
ಸಿದ್ಧರಾಮಯ್ಯ ಕಿನ್ನರಯ್ಯಗಳು ಮೊದಲಾದ ಎಲ್ಲ ಶಿವಗಣಂಗಳೇ
ಆದ್ಯಗಣಂಗಳೆನಿಸುವರು. ವೇದ್ಯರು ಎಂದರೆ ಕೋವಿ ಶಾಂತಯ್ಯ, ಕೋಲ
ಶಾಂತಯ್ಯ, ಕುದುರೆ ಶಾಂತಯ್ಯ, ಮಂಚದ ಶಾಂತಯ್ಯ ಮೊದಲಾದ
ನೂರೊಂದು ವಿರಕ್ತರೆಲ್ಲ ವೇದ್ಯಗಣಂಗಳೆನಿಸುವರು. ಸಾಧ್ಯರು ಎಂದರೆ
ತೋಂಟದ ಸಿದ್ಧೇಶ್ವರ ಸ್ವಾಮಿಗಳು, ಮರುಳು ಸ್ವಾಮಿಗಳು, ಸ್ವತಂತ್ರ
ಸ್ವಾಮಿಗಳು, ಗುಮ್ಮಳಾಪುರದ ಸ್ವಾಮಿಗಳು, ಚೆನ್ನಂಜೇ ಸ್ವಾಮಿಗಳು,
ಮೊದಲಾದ ನೂತನ ಪುರಾತರೇ ಸಾಧ್ಯ ಗಣಂಗಳೆನಿಸುವರು. ಆದಿ
ಪಿಂಡ ಬಸವಾದಿ ಪ್ರಮಥರಿಗೆ ಸಂಬಂಧವಾದಂತಹದು. ಮಧ್ಯ ಪಿಂಡ
ನೂರೊಂದು ವಿರಕ್ತರಿಗೆ ಸಂಬಂಧವಾದಂತಹದು. ಅಂತ್ಯ ಪಿಂಡ ನೂತನ
ಪುರಾತರಿಗೆ ಸಂಬಂಧವಾದಂತಹದು. ಮರ್ಕಟನು ಆವುದಾನೊಂದು
ಮರದ ಶಾಖೆಯಿಂದ ಮತ್ತೊಂದು ಶಾಖೆಗೆ ಲಂಘಿಸುವಲ್ಲಿ ಲಾಗತಪ್ಪಿ
ಬೀಳಲು ಏನಾರು ಕೈಯಲ್ಲಿ ಸೊಪ್ಪು ಹಿಡಿದುಕೊಂಡು ಬಿದ್ದದ್ದಾ
ಯಿತ್ತೇ. ಅದರ ಕುಲಕೋಟಿಗಳೆಲ್ಲ ನೆರೆದು ಮುತ್ತಿ ನೋಡಿ ಆ ಎಲೆಯ
ಕುರುಹ ನೋಡಿ ಕೂಡಿಕೊಂಬುವು. ಆ ಎಲೆಯ ಕುರುಹು ಏನು ಇಲ್ಲದೆ
ಇದ್ದಲ್ಲಿ ಕುಲದಿಂದ ಹೊರಯಿಕೆ ಹಾಕಿ ಬಿಡುವವು. ಹಾಗೆ ಶೀಲ
ವ್ರತಾಚಾರ ಸಮೇತರಾದ ಸದ್ಭಕ್ತ ಶರಣ ಜನಂಗಳನೆ ಅಂಗೀಕರಿಸಿ
ತಮ್ಮ ಕಬಳಿಕೆಗೆ ಯೋಗ್ಯನ ಮಾಡಿಕೊಂಬರು. ಅದರಲ್ಲಿ ಏನು ಕಿಂಚಿತ್ತು
ಕೊರತೆ ಕಂಡಲ್ಲಿ ಅನುಸರಣೆ ಇನಿತುಂ ನೋಡದೆ ಕಳೆದು ಬಿಡುವಂ
ತಹದೆ ಮರ್ಕಟಜ್ಞಾನವೆನಿಸುವುದು. ವಿಹಂಗನು ಇದ್ದೆಡೆಯಲ್ಲಿ ಹನ್ನೆ
ರಡು ಯೋಜನಾಂತರ ಭೂಮಿಯಲ್ಲಿರ್ದ ಫಲರಸವನರಿವುತಿರ್ಪುದು.
ಅಂತಲ್ಲದೆ ಆ ಫಲವಿದ್ದ ದಿಕ್ಕಿಗೆ ರಕ್ಕೆ ಎಳಸುವುದು. ಆ ರಕ್ಕೆ ಎಳಸಿ
ದಲ್ಲಿ ಹೋಗಿ ಸೇವಿಸಿ ಬೇಗ ಬಂದು ತನ್ನೆಡೆಯಲ್ಲಿ ತಪ್ಪದಿರುವ ಹಾಗೆ

ಮೂಲ-ಕಾರಮೇಘದೊಳು ವಿಂಜಡಗಿ ತೋರದ ತೆರದಿ ನೀರೊ
ಳಡಕಂಗೆಯ್ದು ಕಿಚ್ಚಿನಂತೆ ಬೀರುತ್ತಿಹ ಷಳರಸದೊಳಿಪ್ಪ ನವರುಚಿಯಂತೆ
ನಾರಣದ ಮುಸ್ತಕದ ಮುತ್ತಿನಂತೆ.

ಟೀಕು - ಕಾರಮೇಘದೊಳು ವಿಂಜಡಗಿ ತೋರದ ತೆರದಿ ಕಪ್ಪಿನ
ನೋಡದಲ್ಲಿ ವಿದ್ಯುಲ್ಲತೆಯ ಪ್ರಕಾಶವು ಅಡಗಿರ್ದು ಕುರುಹುಗಾಣಿಸಿಕೊ
ಳ್ಳದೆ ಇರುವ ಹಾಗೆ ಅಭ್ರಚ್ಛಾಯಮಾತ್ರವಾದ ಪಿಂಡದ ಮಧ್ಯದಲ್ಲಿ
ಚಿಚ್ಛಾಯ ಮಾತ್ರವಾದ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು
ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿ ಒಪ್ಪುತ್ತಿಹುದು.
ನೀರೊಳಡಕಂಗೆಯ್ದು ಕಿಚ್ಚಿನಂತೆ ಒಂದಾನೊಂದು ಸಮುದ್ರದ ಮಧ್ಯ
ದಲ್ಲಿ ವಡಬಾಗ್ನಿ ಅಡಗಿರ್ದು ಉದಕದಾಪ್ಯಾಯನದೋರಿ ಆ ಸಮುದ್ರ
ವನು ಪೀರದೆ ಆ ಸಮುದ್ರದ ಶೈತ್ಯದಲ್ಲಿ ತಾನು ನಂದದೆ ಆ ಸಮುದ್ರದ
ತದ್ರೂಪ ತದಾಕಾರವಾಗಿರುವ ಹಾಗೆ ಜಲಬುದ್ಬುದಾಕಾರಮಯವಪ್ಪ
ಪಿಂಡದ ಮಧ್ಯದಲ್ಲಿ ಮಹಾಜ್ಞಾನಾಗ್ನಿ ಸ್ವರೂಪವಾದ ಪರಬ್ರಹ್ಮವು ಅಡ
ಗಿರ್ದು ಜ್ಞಾನದಾಪ್ಯಾಯನ ತಲೆದೋರಿ ಆ ಪಿಂಡವನು ದಹಿಸದೆ ಆ
ಪಿಂಡದ ಮರವೆಯಲ್ಲಿ ತಾನು ನಂದದೆ ಜ್ಞಾನೋದಯಕ್ಕೆ ಮೊದಲೆ ಆ
ಪಿಂಡದ ತದ್ರೂಪ ತದಾಕಾರವಾಗಿ ಒಪ್ಪುತ್ತಿಹುದು. ಬೀರುತಿಹ ಷಳ
ರಸದೊಳಿಪ್ಪ ನವರುಚಿಯಂತೆ ಬೀರುತಿಹ ದಿಗ್ದಿಸೆಗಳಲ್ಲಿ ಸದ್ವಾಸನೆಯ
ತೀಡುತ್ತಿರ್ಪಂಥ ಆವುದಾನೊಂದು ಮಾವಿನಹಣ್ಣು. ನೀರಿಲಹಣ್ಣು ಹಲ
ಸಿನಹಣ್ಣಿನಲ್ಲಿ ನವೀನವಾದ ಮಾಧುರ್ಯವು ಅಡಗಿರುವ ಹಾಗೆ ಆ ವಸ್ತು
ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡವಾಗಿಹುದೆಂಬರ್ಥ. ಅಂತು
ಮಲ್ಲದೆ ಆವುದಾನೊಂದು ಮಾವಿನಹಣ್ಣು ನರಸದ ಮಧ್ಯದಲ್ಲಿ ನೂತ
ನವಾದ ಪರಿಮಳವು ಆ ವಾಟಯನು ಹೊದ್ದದೆ ಆತ್ಮಕ್ಕನುಹೊದ್ದದೆ,
ಅದರ ಮಧ್ಯದಲ್ಲಿ ಅಡಗಿರುವ ಹಾಗೆ ದೇಹಾತ್ಮರುಗಳ ಮಧ್ಯದಲ್ಲಿ
ಅಖಂಡ ಚಿದ್ರೂಪ ಚಿತ್‌ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋ
ದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ವಾರಣದ ಮುಸ್ತ
ಕದ ಮುತ್ತಿನಂತೆ ಮದಕರಿಯ ಶಿರಸ್ಸಿನ ಮಧ್ಯದಲ್ಲಿ ಜಲ, ಆ ಜಲದ
ಮಧ್ಯದಲ್ಲಿ ಸೈಕತ ಆ ಸೈಕತದ ಮಧ್ಯದಲ್ಲಿ ಸೂಕ್ತಿ, ಆ ಸೂಕ್ತಿ ಮಧ್ಯ
ದಲ್ಲಿ ಮೌಕ್ತಿಕವು ಅಡಗಿರ್ದು ಕುರುಹುಗಾಣಿಸಿಕೊಳ್ಳದೆ ಇರುವ ಹಾಗೆ
ಅಷ್ಟತನುಯುಕ್ತವಾದ ಶರೀರಕ್ಕೆ ಶಿರಃಪ್ರಧಾನವಾದ ಆತ್ಮನ ಮಧ್ಯ

ದಲ್ಲಿ ಮನೋಜಲ, ಆ ಮನೋಜಲ ಮಧ್ಯದಲ್ಲಿ ತತ್ವವಿಪರಿತಜ್ಞಾನ ಆ
ತತ್ವವಿಪರಿತಜ್ಞಾನದ ಮಧ್ಯದಲ್ಲಿ ಚಿಚ್ಛಕ್ತಿ ಆ ಚಿಚ್ಛಕ್ತಿಯ ಮಧ್ಯದಲ್ಲಿ
ನಿಜನೋಕ್ಷ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ
ಮೊದಲೆ ಪಿಂಡದಲ್ಲಿ ಪಿಂಡಸ್ಥಲವಾಗಿಹುದು.

ಮೂಲ — ಶಶಿಕಾಂತದೊಳಗುದಕವೊಸರಡಗಿ ನಿಂದಂತೆ ಹಸುಳೆ
ಯೊಳಗಣ ಸ್ವಪ್ನ ತೋರವಂತೆ ನಸುನನೆಯೊಳಡಗಿರ್ದ ನವಸುಗಂಧದ
ತೆರದಿ ಉಸಿರೊಳಡಗಿರ್ದ ಚೈತನ್ಯದಂತೆ.

ಟೀಕುಃ — ಶಶಿಕಾಂತದೊಳಗುದಕ ಒಸರಡಿಗಿ ನಿಂದಂತೆ ಚಂದ್ರ
ಕಾಂತ ಶಿಲೆಯ ಮಧ್ಯದಲ್ಲಿ ಉದಕದ ಸಂಚಲವಡಗಿರ್ದು ಪೌರ್ಣಮಿಯ
ಚಂದ್ರನು ಉದಯವಾದಲ್ಲಿ ಕಲ್ಲುಗಳು ಕರಗಿ ಪ್ರದೇಶ ನೀರಾಗಿ ಹಳ್ಳ
ಹೊಳೆಗಳಾಗಿ ಜರಿಸುವದಲ್ಲದೆ ಆ ಪೌರ್ಣಮೆ ಚಂದ್ರ ಉದಯವಾಗದೆ
ಇದ್ದಲ್ಲಿ ಆದರ ಮಧ್ಯದಲ್ಲಿಯೇ ಅಡಗಿರುವ ಹಾಗೆ ಸಂಸಾರ ವಿಷಯ
ರಸದ ಸೀತಳಕೃತವಾದ ಪಿಂಡದ ಮಧ್ಯದಲ್ಲಿ ಚಿತ್ಪಿರಣಾವರಣವನುಳ್ಳ ಪರ
ಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥ
ವಾಗಿಹುದು. ಹಸುಳೆಯೊಳಗಣ ಸ್ವಪ್ನದೋರದಂತೆ ಒಂದಾನೊಂದು
ಸಣ್ಣ ಮಗುವು ನೋಡಿದ ಸ್ವಪ್ನದ ಮಯಾದೆಯು ಹಾಗೆ ಆ ವಸ್ತುವು
ಪಿಂಡದಲ್ಲಿ ಪಿಂಡಸ್ಥವಾಗಿರ್ದಿತ್ತೆಂಬುದು ಅರ್ಥ. ಅ ತುಮುಲ್ಲದೆ, ಆವು
ದಾನೊಂದು ಚಿಕ್ಕ ಶಿಸುವು ಸುಖ ದುಃಖ ಸ್ವರೂಪವಾದಾತ್ಮ ಸ್ವಪ್ನವ
ಕಂಡು, ತನ್ನಲ್ಲಿ ತಾನೇ ಗಕಗಹಿಸಿ ನಗುವುದಲ್ಲದೆ ಇದಿರಾಗಿ ಮತ್ತೊ
ಬ್ಬರ ಕೂಡೆ ಉಸಿರುತೇ, ಉಸಿರಲರಿಯದೆಂಬುವ ಹಾಗೆ ಜ್ಞಾನ ವಿಹೀನ
ವಾದಾತ್ಮನ ಮಧ್ಯದಲ್ಲಿ ನಿಜಸುಷುಪ್ತಿ ಸ್ವರೂಪವಾದ ಪರಬ್ರಹ್ಮವು ಅಡ
ಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು.
ನಸುನನೆಯೊಳಡಗಿರ್ದ ನವ ಸುಗಂಧದ ತೆರದಿ ಆವುದಾನೊಂದು ಕೊನೆ
ಸರ್ಜಕದ ಮಧ್ಯದಲ್ಲಿ ನೂತನವಾದ ದ್ರವ್ಯವು ಅಡಗಿರ್ದು ಏನಾರು
ಆ ಸರ್ಜಕ ವಿಕಸನವಾದಲ್ಲಿ ಆ ಪರಿಮಳ ತೀವಿ ಪಸರಿಸಿ ತೋರುವದ
ಲ್ಲದೆ ಇಲ್ಲದಲ್ಲಿ ಅದರ ಮಧ್ಯದಲ್ಲಿಯೇ ಅಡಗಿರುವ ಹಾಗೆ ಕಷ ಮಲ
ಯುಕ್ತವಾದ ಪಿಂಡದ ಮಧ್ಯದಲ್ಲಿ ಸ್ವಾನುಭಾವ ಸದ್ವಾಸನಾ ಸ್ವರೂಪ
ವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ
ಪಿಂಡಸ್ಥವಾಗಿಹುದು. ತತ್ಪ ಸಂಕೋಚಮಯವಪ್ಪ ಪಿಂಡದ ಮಧ್ಯದಲ್ಲಿ

ಸದ್ವಾಸನಾ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ಉಸಿರೊಳಡಗಿರ್ದ ಚೈತನ್ಯ ದಂತೆ ಪ್ರಾಣವಾಯುವಿನ ಮಧ್ಯದಲ್ಲಿ ಪ್ರಾಣಚೈತನ್ಯವು ಅಡಗಿರ್ದು ಕುರು ಹುಗಾಣಿಸಿಕೊಳ್ಳದೆ ಇರುವ ಹಾಗೆ ದಶವಾಯುಗಳಿಂದ ಬದ್ಧೀಕೃತ ವಾದ ಪಿಂಡದ ಮಧ್ಯದಲ್ಲಿ ಚಿತ್‌ಪ್ರಾಣ ಪ್ರಾಣಚೈತನ್ಯ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದ ಮಧ್ಯದಲ್ಲಿ ಪಿಂಡಸ್ಥವಾಗಿಹುದು.

ಮೂಲ— ಕ್ಷೀರದೊಳು ಘೃತವಡಗಿ ನೀರು. ಮುತ್ತಿನೊಳಡಗಿ ಅರೈದು ನೋಡೆ ಬೀಜದೊಳು ವೃಕ್ಷ ಸಾರಿರ್ದು ಮೊಳೆದೋರದಂತಿಪ್ಪ ಮಹಾ ಘನವನಾರು ಛೇದಿಸಿ ಕಾಣಲರಿದು ನೋಡಾ.

ಟೀಕು— ಕ್ಷೀರದೊಳು ಘೃತವಡಗಿ ದುಗ್ಧದೊಳಗಣ ಆಜ್ಯದ ಹಾಗೆ ಆ ವಸ್ತುವು ಪಿಂಡದ ಮಧ್ಯದಲ್ಲಿ ಪಿಂಡಸ್ಥವಾಗಿಹುದೆಂಬುದು ಅರ್ಥ. ಅಂತುಮಲ್ಲದೆ ಒಂದಾನೊಂದು ಹಾಲಿನ ಮಧ್ಯದಲ್ಲಿ ತುಪ್ಪವು ಅಡಗಿರ್ದು ಏನಾರು ಕರೆದು ಕಾಸಿ ಹೆಪ್ಪನಿಕ್ಕಿ ದಧಿಯನು ಮಾಡಿದಲ್ಲಿ ಆ ದಧಿಯನು ಸೋಸಿ ಮಥನವ ಮಾಡಿದಲ್ಲಿ ನವನೀತವು ಬರುವುದು. ಆ ನವನೀತವನು ವಸ್ತ್ರಿಯ ಮೇಲೆ ಮಡಿಗಿದಲ್ಲಿ ಆಜ್ಯವಾಗುವುದು. ಈ ಆವ ಕ್ರಿಗಳು ಇಲ್ಲದಲ್ಲಿ ಆದರ ಮಧ್ಯದಲ್ಲಿಯೇ ಅಡಗಿರುವ ಹಾಗೆ ಗರ್ಭಾವಸ್ಥೆ, ಜನ್ಮಾವಸ್ಥೆ, ಬಾಲ್ಯಾವಸ್ಥೆ, ಯೌವನಾವಸ್ಥೆ, ಕಾಮ್ಯಾವಸ್ಥೆ, ವೃದ್ಧಾವಸ್ಥೆ, ಮರಣಾವಸ್ಥೆ ಇಂತೀ ಸಪ್ತಾವಸ್ಥೆ ಸಂಯುಕ್ತವಾದ ಪಿಂಡದ ಮಧ್ಯದಲ್ಲಿ ಘೃತಕಾಠಿಣ್ಯಸ್ವರೂಪವಾದ ಪಿಂಡದ ಮಧ್ಯದಲ್ಲಿ ಸಚ್ಚಿದಾನಂದವನ್ಮೂರ್ತಿಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೇ ಪಿಂಡದಲ್ಲಿ ಪಿಂಡಸ್ಥವಾಗಿಹುದು. ನೀರು ಮುತ್ತಿನೊಳಡಗಿ ಕಟ್ಟಾಡಿ ಮುತ್ತಿನ ಮಧ್ಯದಲ್ಲಿ ಸುಪ್ಪಾಣಿಯು ಅಡಗಿರ್ದು ಕುರುಹು ಗಾಣಿಸಿಕೊಳ್ಳದೆ ಇರುವ ಹಾಗೆ ಮೋಕ್ಷಸ್ವರೂಪವಾದ ಪಿಂಡದ ಮಧ್ಯ ದಲ್ಲಿ ಚಿಜ್ಜಲಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ಅರೈದು ನೋಡೆ ಪರೀಕ್ಷೆ ಮಾಡಿ ನೋಡೆ ಬೀಜದೊಳು ಬಿತ್ತಿನಲ್ಲಿ ವೃಕ್ಷ ತರುವು ಸಾರಿರ್ದು ಸೇರಿರ್ದು ಸಂಬಂಧವಾಗಿರ್ದು ಮೊಳೆದೋರದಂತಿಪ್ಪ ಅಂಕುರಗಾಣಿಸಿಕೊಳ್ಳದೆ ಇಹುದೆಂಬುದು ಅರ್ಥ. ಅಂತುಮಲ್ಲದೆ, ಒಂದಾನೊಂದು ಭೂಮಿಯನು

ಹಸನುಮಾಡಿ ಪಾತಿಯನು ಕಟ್ಟಿ ಬೀಜವನು ಬಿತ್ತಿ ಉದಕವನು ಎರೆದು ಕಾಪಾಡಿದಲ್ಲಿ ಕೆಳಯಿಂಕೆ ದೇರೂರಿ ಮೇಲಕ್ಕೆ ಅಂಕುರದೋರಿ ಎಲೆ ಯಿಕ್ಕಿ ಕೊನರ್ತು, ಚಿಗುರ್ತು, ತಳರ್ತು, ಪಲ್ಲವಿಸಿ, ಶಾಖೋಪಶಾಖೆಗ ಳಾಗಿ ಹೂತು, ಕಾತು, ಹಣ್ಣಾಗುವದಲ್ಲದೆ ಆ ಭೂಮಿಯನು ಹಸನವ ಮಾಡದೆ ಪಾತಿಯನು ಕಟ್ಟದೆ ಬೀಜವನು ಬಿತ್ತದೆ ಉದಕವನು ಎರೆ ಯದೆ ಕಾಪಾಡದೆ ಇರ್ದಲ್ಲಿ ಅದರ ಮಧ್ಯದಲ್ಲಿಯೇ ಅಡಗಿರುವ ಹಾಗೆ ಸಕಲ ತತ್ವಕಾರಣವಾದ ಸ್ವರೂಪವಾದ ಆತ್ಮನ ಮಧ್ಯದಲ್ಲಿ ಸರ್ವಾ ಚಾರಸಂಪತ್ತಿನ ಶಾಖೋಪಶಾಖೆಯನುಳ್ಳ ಚಿದ್ಬ್ರಹ್ಮವ್ಯಕ್ತಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡ ಸ್ಥವಾಗಿಹುದು. ಮಹಾಘನವನು ಮೋಕ್ಷಾಧಿಕ್ಯವಾದ ಚಿದ್ಘನ ಲಿಂಗ ವನು ಅರಯಿದೋ ಹಂಮೆಂದುಭಯವನಳಿದ ಮಹಾನುಭಾವಿಯೇ ತಿಳಿದು ಬಲ್ಲನಲ್ಲದೆ ಉಳಿದಾದ ದ್ವೈತಾದ್ವೈತಿಗಳಾರು ಷಟ್ಸಮಯಾದಿಗ ಳಾರು ಷಟ್‌ಶೈವಾದಿಗಳಾರು ಕವಿ ಗಮಕಿ ವಾದಿ ವಾಗ್ಮಿಗಳೆಂಬ ಚತುರಾ ಶ್ರಮಿಗಳಾರು ಛೇದಿಸಿಕಾಣಲು ಅರಿದು ನಿರೀಕ್ಷಣೆಯ ಮಾಡಲು ಅರಿದು ನೋಡಾ. ಆ ಪರಬ್ರಹ್ಮವು ಅಸಾಧ್ಯನಾಗಿರ್ಪುದು ಕುಡಾ.

ಮೂಲ— ಪಾಷಾಣದೊಳಗಗ್ನಿ ಸೂಸದೆ ಬೆಡಂಗು ಪ್ರತಿಭಾಸೆ ದೋರದ ಜಲದ ನಿಲವಿನಂತೆ ನೀಸರೊಳಡಗಿರ್ದ ಮರೀಚಿನಂದದೊಳು ಲೀಲಾಶಿಸುವ ಪಿಂಡ ಮೈದೋರದಿಹುದು.

ಟೀಕು— ಪಾಷಾಣದೊಳಗಗ್ನಿ ಸೂಸದೆ ಬೆಡಂಗು ಒಂದಾ ನೊಂದು ಕಲ್ಲಿನ ಮಧ್ಯದಲ್ಲಿ ಬೆಂಕಿಯು ಅಡಗಿರ್ದು ಏನಾರು ದೂಡಿ ಚಕಮಕಿಗಳಿಂದ ಮಥನವ ಮಾಡಿದಲ್ಲಿ ಸ್ಫುರಿಸಿ ಪೊರಪೊಣ್ಮಿ ಕಾಣಿ ಸುವುದಲ್ಲದೆ ಈ ಯಾವ ಕ್ರಿಗಳು ಇಲ್ಲದಿದ್ದಲ್ಲಿ ಅದರ ಮಧ್ಯದಲ್ಲಿಯೇ ಅಡಗಿರುವ ಹಾಗೆ ಜಡ ಪಾಷಾಣಸ್ವರೂಪವಾದ ಪಿಂಡದ ಮಧ್ಯದಲ್ಲಿ ಚಿದಗ್ನಿ ಸ್ವರೂಪವಾದ ಪರಬ್ರಹ್ಮವು ಅಡಗಿಹುದೆಂಬ ಅರ್ಥ. ಅಂತು ಮಲ್ಲದೆ ಕಲುಹೃದಯಮುಪ್ಪ ಪಿಂಡದ ಮಧ್ಯದಲ್ಲಿ ಚಿತ್‌ಶಿಖಿ ಸ್ವರೂಪ ವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ಪ್ರತಿಭಾಸೆದೋರದ ಒಂದಾನೊಂದು ಚರ್ಮತಂತಿ ಗಳಿಂದೆ ಬಿಗಿದು ಬಾರಿಸಲ್ಕಕ್ಕ ಪೊಲ್ಲಕೀ ಮೃದಂಗಗಳನು ಆರಾರು ಆತ್ಮ ರುಗಳು ಬಾರಿಸಿದಲ್ಲಿ ಶಬ್ದ ಹುಟ್ಟುವುದಲ್ಲದೆ ಇಲ್ಲದೆ ಇಪ್ಪದಲ್ಲಿ ಆದರ ಮಧ್ಯ

ದಲ್ಲಿಯೇ ಅಡಗಿರುವ ಹಾಗೆ ಚರ್ಮದೇಹವಪ್ಪ ಪಿಂಡದ ಮಧ್ಯದಲ್ಲಿ ಪ್ರಣವನಾದ ಘೋಷಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ಜಲದ ನಿಲವಿನಂತೆ ಶಬ್ದಜಾಲವಿಲ್ಲದ ಗಂಭೀರೋದಕ ಘಾತಕವನು ಅರಿಯಾರು ಆತ್ಮರುಗಳು ಕಾಣುವುದಕ್ಕೆ ಅದೀತೇ ಅಗದೆಂಬ ಹಾಗೆ ಜಲಬುದ್ಬುದಾಕಾರಮಯವಪ್ಪ ಪಿಂಡದ ಮಧ್ಯದಲ್ಲಿ ನಿರಾಘೂಟ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ನೀಸರದೊಳಡಗಿರ್ದ ಮರೀಚನಂದದೊಳು ಸೂರ್ಯಾತಪದ ಮಧ್ಯದಲ್ಲಿ ಮರೀಚಿಕಾ ಜಲವು ಅಡಗಿರ್ದು ಕುರುಹುಗಾಣಿಸಿಕೊಳ್ಳದೆ ಇರುವ ಹಾಗೆ ಜ್ಞಾನಾತ್ಮನಪ್ಪ ಇನನ ಮಧ್ಯದಲ್ಲಿ ಚಿಚ್ಛಾಯಮಾತ್ರ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ವಿಲಾಸಿಸುವ ಹಾಗೆ ವಿನೋದಿಸುವಂತಹ ಪಿಂಡ ಪಿಂಡತ್ರಮಯಪರ್ಯಾಯವನುಳ್ಳ ಪರಬ್ರಹ್ಮವು ಮೈದೋರದೆ ಜ್ಞಾನೋದಯಕ್ಕೆ ಮೊದಲೆ ಕುರುಹುಗಾಣಿಸಿಕೊಳ್ಳದೆ ಇಹುದು. ಪಿಂಡದಲ್ಲಿ ಪಿಂಡಸ್ಥವಾಗಿಹುದು.

ಮೂಲ— ರೂಪು ರೂಪಿನೊಳಗಡಗಿ ರೂಪಿಸವೆ ನಿಂದ ನಿಜರೂಪ ನಿಶ್ಚಲವಾಗಿ ಸಂಚಲಿಸದೆ ತಾ ಪರಾತ್ಪರವಾಗಿ ನಿಂದ ನಿಜಪದವು ಚಿದ್ರೂಪ ಕೂಡಲಚೆನ್ನಸಂಗಯ್ಯನು.

ಟೀಕು— ರೂಪು ರೂಪಿನೊಳಡಗಿ ರೂಪಿಸದೆ ಮಯೂರನು ಸಿಖಂಡಿ ಪಕ್ಷಿಯು ನವಿಲುವಕ್ಕಿಯು ಹೇಗಿದ್ದಿತ್ತು ಹಾಗೆ ಆ ವಸ್ತುವು ಪಿಂಡದಲ್ಲಿ ಪಿಂಡಸ್ಥವಾಗಿಹುದು ಎಂಬುದು ಅರ್ಥ. ಅಂತುಮಲ್ಲದೆ ಒಂದಾನೊಂದು ನವಿಲುವಕ್ಕಿಯುತ್ಪತ್ತಿಯನಿಕ್ಕಿ, ಮೊಟ್ಟೆಯೊಡೆದು ಮರಿ ಬಲಿದು ರಕ್ಕೆಯನಿಕ್ಕಿದಲ್ಲಿ ಕಾಣಿಸುವುದಲ್ಲದೆ ಆ ತತ್ತಿಯನಿಕ್ಕದೆ ಮೊಟ್ಟೆ ಪಡೆಯದೆ ಮರಿಬಲಿಯದೆ ರಕ್ಕೆಯನಿಕ್ಕದೆ ಇದ್ದಲ್ಲಿ ಆ ನವಿಲುವಕ್ಕಿಯು ಪೊಗೆಯು ಆ ಚಿತ್ರದ ರಂಜನೆಯು ಅದರ ಮಧ್ಯದಲ್ಲಿ ಅಡಗಿರುವ ಹಾಗೆ ಪಡುವರ್ಣ ಯುಕ್ತವಾದ ಪಿಂಡದ ಮಧ್ಯದಲ್ಲಿ ವಿಚಿತ್ರಪದ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮೊದಲೆ ಪಿಂಡದಲ್ಲಿ ಪಿಂಡಸ್ಥವಾಗಿಹುದು. ನಿಂದ ಪಿಂಡದಲ್ಲಿ ಪಿಂಡಸ್ಥವಾಗಿ ನೆಲೆಸಿದ ನಿಜರೂಪು ಆ ಪರಬ್ರಹ್ಮದ ನಿಜಸ್ವರೂಪು ನಿಶ್ಚಲವಾಗಿ ಸ್ಥಿರಕರವಾಗಿ

ಸಂಚಲಿಸದೆ ಜ್ಞಾನದನೆನಹುದೋರದೆ ಆ ಪರಬ್ರಹ್ಮವು ತಾನು ಪರಾತ್ಪರವಾಗಿ ಸುಖದುಃಖ ಪುಣ್ಯಪಾಪ ಸ್ವರ್ಗನರಕ ಬಂಧಮೋಕ್ಷದ್ವಂದ್ವ ಕರ್ಮಂಗಳಿಗೆ ಅನ್ಯೋನ್ಯವಾಗಿ ನಿಂದ ನೆಲಸಿದೆ ನಿಜಪದವು. ಸ್ವಯಂಭು ಜ್ಞಾನ ಸ್ವರೂಪವಾದ ನಿಃಕಲಲಿಂಗದ ಚಿದ್ಬನಲಿಂಗದ ಪದವು ಚಿದ್ರೂಪಜ್ಞಾನ ಸ್ವರೂಪವಾದಂಥ ಕೂಡಲಭಕ್ತರ ದೇಹದಲ್ಲಿ ಕೂಡುವ ಕೂಟದಲ್ಲಿ ವಿಯೋಗವಿಲ್ಲದಿದ್ದಂಥ ಚನ್ನ ಕಾಯ ಕಾಂತಿ ಲಾವಣ್ಯವನುಳ್ಳಂಥ ಸಂಗಯ್ಯನು ಅಂಗವನ ಪ್ರಾಣಂಗಳಲ್ಲಿ ಹೆರೆ ಹಿಂಗದೆ ಇರ್ದಂಥ ಎಲೆ ಪರಶಿವಲಿಂಗವೇ.

ಸೂತ್ರ—'ಯತ್ತೇನ ಭಾವಸೂತ್ರೇ ಶಿವ ಸಿದ್ಧಾಂತ ತಂತ್ರೆ ಷಟ್ಸ್ಥಲ ನಿರ್ಣಯೇ' ಎಂದು ಸುರುಚಿರಪಿಂಡಾದಿ ಜ್ಞಾನ ಶೂನ್ಯಾಂತಮಾದ ಸರ್ವಾಡಂಬರ ಸಂಪತ್ತಿನಾಚರಣೆಯನು ಸೂಚಿಸಿ ಕೊಡುತಿರ್ದಂತಪದೇಶಂತಪ್ಪ ಹೀಗಾದಂಥ ಮಹತು ಪೂಜ್ಯವೆತ್ತಂಥ ಪಿಂಡಸ್ಥಲವು. "ಸ್ಥಲೇನ ಅಂಗಮುಚ್ಯತೆ, ಸ್ಥಲೇನ ಲಿಂಗಮುಚ್ಯತೆ" ಎಂದು ಪಿಂಡನಾಮಪರ್ಯಾಯವನುಳ್ಳ ಪರಬ್ರಹ್ಮವು ತನ್ನ ಲೀಲೆಯಿಂ ತನ್ನ ಚಿದಂಗ ಸೃಷ್ಟಿಯವಾಡಿ ನಟಿಸಬೇಕೆಂಬ ಅವಹೇಳನೆಯಿಂದೆ ತನ್ನಿಳಡಗಿದ ತನ್ನಲ್ಲಿ ಅಂತರ್ಗತವಾದ ಸಕಳ ನಿಃಕಳಾತ್ಮಕ ತತ್ವಂಗಳನು ಸಾಕಾರವಾದ ಅಂಗಸ್ಥಲವು ೪, ನಿರಾಕಾರವಾದ ಲಿಂಗಸ್ಥಲವು ೫, ಸಾಕಾರವಾದ ಅಂಗತತ್ವ ೨೫, ನಿರಾಕಾರವಾದ ಲಿಂಗತತ್ವ ೧೧, ಸಾಕಾರವಾದ ದೇಹವು ನಿರಾಕಾರವಾದ ಆತ್ಮನು ಸಾಕಾರವಾದ ಮಹೇಶ್ವರ ತತ್ವವು ನಿರಾಕಾರವಾದ ಸದಾಶಿವ ತತ್ವವು ಸಾಕಾರವಾದ ಸದಾಶಿವತತ್ವ ನಿರಾಕಾರವಾದ ಪರತತ್ವವು ಆ ಪೃಥ್ವಿ ಅಪ್ಪು ತೇಜ ವಾಯು ಚಂದ್ರ ಸೂರ್ಯರೇ ಸಾಕಾರವಾದಂತಹವು, ವಾಯು, ಆಕಾಶ, ಆತ್ಮ ಇವು ನಿರಾಕಾರವಾದಂತಹವು, ಹೀಗೆ ಸಗುಣ ನಿರ್ಗುಣ ಸ್ವರೂಪವಾದ ಆತ್ಮ ತತ್ವಂಗಳನು ಉಂಟುಮಾಡಿ ಉಳ್ಳಮಾಡಿ ತೋರಬೇಕೆಂದು ತಮ್ಮ ಚಿತ್ತಿನ ಚಿದಂಗ ಭೂತರಾದ ಜ್ಞಾನಿಗಳಿಗೆ ಅರುಹಿಕೊಡಬೇಕೆಂದು ನಿಶ್ಚಯಿಸಲು ಜ್ಞಾನದ ನೆನಹುದೋರಲು ಅಲ್ಲಿ ಪಿಂಡದಲ್ಲಿ ಪಿಂಡಸ್ಥವಾದ ವಸ್ತುವಿನಲ್ಲಿ ಜ್ಞಾನೋದಯವಾಯಿತ್ತಾಗಿ ಸಮ್ಯಜ್ಞಾನ ಉದಯವಾಯಿತ್ತಾಗಿ ಮುಂದೆ ಹುರಿಸ್ಸರದಲ್ಲಿ ಪಿಂಡಜ್ಞಾನಸ್ಥಲವಾದುದು, ಪಿಂಡಜ್ಞಾನಸ್ಥಲವೆಂದು ಹೇಳಲಾಯಿತ್ತು.

---

(೨) ಪಿಂಡಜ್ಞಾನ ಸ್ಥಲ.

ಮೂಲ— ಜ್ಞಾನ ನೇತ್ರ ಮುಸುಕ ತೆರೆದು ತಾನು ತನ್ನ ನಿಜವ ನೋಡಿ ತಿಳಿದ ಮಹಿಮನು.

ಟೀಕು— ಜ್ಞಾನ ನೇತ್ರ ಮುಸುಕ ಶಿವಾಂಶಿಕನಾದಾತ್ಮನ ಮೂಲ ಜ್ಞಾನ ದೃಷ್ಟಿಯನು ಮುಸುಕಿಕೊಂಡಿರ್ದ ಅಜ್ಞಾನಮಯಾತ್ಮನಪ್ಪನು ಸ್ವಾನುಭಾವದುದಯದಿಂದ ಸ್ವಾತ್ಮ ಜ್ಞಾನದುತ್ಪತ್ಯದಿಂದ ತೆರೆದು ಒಂದಾನೊಂದು ನೀರಮೇಲಣ ಪಾಂಸೆಯನು ಕಲಂಕಿ ನೂಕಿ ಹೇರ್ಪಡಿರುವ ಹಾಗೆ ಸುಜ್ಞಾನ ದೃಷ್ಟಿಯನು ಪ್ರಭಾವಿಸಿದನು. ತಾನು ಅಜ್ಞಾನ ಕಲಾತ್ಮನು ತನ್ನ ನಿಜವ ನೋಡಿ ತನ್ನ ನಿಜ ಸ್ವರೂಪವಾದ ವಸ್ತುವೇ ತಾನೆಂದು ನಿರೀಕ್ಷಿಸಿ ತಿಳಿದ ಚಿತ್ತೇ ಅಂಗ, ಚಿಚ್ಛಕ್ತಿ ಲಿಂಗವೇ ಪ್ರಾಣವೆಂದು ಅರಿದವನು ಮಹಿಮನು ಮಹಾತ್ಮನು.

ಮೂಲ— ಚಿತ್ತ ಬಿಂದು ಪ್ರಕೃತಿ ಹಿಂಗಿ ನಿತ್ಯಾನಿತ್ಯ ವಿವೇಕದಿಂದಲತ್ತ ನಿಲಿಕಿ ನೋಡಿ ಕಂಡ ಸಕಲದಳಿವನು, ತತ್ವದಲ್ಲಿ ವಿವೇಕಿಯಾಗಿ ನಿಶ್ಚಲದ ನಿಜಾಂತರಂಗ ನಿಶ್ಚಯವನೆಯ್ದಿ ಸುಖದ ಮುಖವನರಿದನು.

ಟೀಕು— ಚಿತ್ತ ಮನಸ್ಸು ಬಿಂದು ದೇಹ ಪ್ರಕೃತಿ ಮಾಯೆ ಹಿಂಗಿ ಮನವಳಿದು ಉನ್ಮನಿಯ ತತ್ವಸ್ವರೂಪನಾಗಿ ದೇಹವಳಿದು, ಅಚಾರಂಗವಾಗಿ ಮಾಯೆಯಳಿದು ನಿರ್ಮಾಯಿಯಾಗಿ ಅನಿತ್ಯಜಗತ್ತೋರಿಕೆ ಮಾಯಾ ಪ್ರಪಂಚೆಲ್ಲವು ಅನಿತ್ಯವಾದವು. ನಿತ್ಯವಾದಂತಹದೇ ಶಿವ ತತ್ವವು ಎಂದು ವಿವೇಕದಿಂದೆ ಅತ್ತ ನಿಲಿಕಿ ಪರಬ್ರಹ್ಮದತ್ತ ನಿಲಿಕಿ ಮಹಾಜ್ಞಾನದಿಂದ ಎಟಕಿ ಸಕಲದಳಿವನು ಅನಂತ ತತ್ವ ಭುವನ ಬ್ರಹ್ಮಾಂಡಾದಿಗಳೆಲ್ಲವು ಅಳಿದುಳಿದು ಹೋಗುವಲ್ಲಿ ನೋಡಿ ಕಂಡು ತನ್ನ ನಿಜಸ್ವರೂಪವಾದ ವಸ್ತುವೇ ತಾನೆಂದು ಮಹಾ ಜ್ಞಾನ ದೃಷ್ಟಿಯಿಂದ ನಿರೀಕ್ಷಿಸಿ ಕಂಡು ಆ ತತ್ವದಲ್ಲಿ ನಿಃಕಲ ಪರಶಿವತತ್ವದಲ್ಲಿ ವಿವೇಕಿಯಾಗಿ ವಿಚಾರ ಪರವುಳ್ಳವನಾಗಿ ನಿಶ್ಚಲದ ಚಲಿಸಬಾರದ ನಿಜಾಂತರಂಗ ತನ್ನಂತರಂಗದಲ್ಲಿ ನಿಶ್ಚಯವನೆಯ್ದಿ ನಿರ್ಧಾರವುಳ್ಳಾತನಾಗಿ ಸುಖದ ನಿಃಕಲ ಲಿಂಗವು ಮುಖವ ಚಿತ್ತುವನರಿದನು, ಚಿತ್ತೇ ಅಂಗ ಚಿಚ್ಛಕ್ತಿಲಿಂಗವೇ ಪ್ರಾಣವೆಂದು ಅರಿದನು ತಿಳಿದನು.

ಮೂಲ— ಜ್ಞಾನಮುಕುರದೊಳಗೆ ನೋಡಿ ತಾನು ತನ್ನ ಕುರುಹುವಿಡಿದು ತಾನು ತನಗೆ ಅನ್ಯವಿಲ್ಲವೆಂಬ ಭೇದವ, ತಾನೆಯರಿದು ಮಾಯಾ ಮಿಥ್ಯವಂ ನಿವೃತ್ತಿಮಾಡಿ ಶಿವಧ್ಯಾನದಲ್ಲಿ ಮನವನಿತ್ತ ಸೌಖ್ಯ ಶರಣನು.

ಟೀಕು— ಜ್ಞಾನ ಮುಕುರದೊಳಗೆ ಸುಜ್ಞಾನವೆಂಬ ಕೈಪಿಡಿಯಲ್ಲಿ ನೋಡಿ ತನ್ನ ಪೂರ್ವಾಪರವನು ನಿರೀಕ್ಷಣೆಯ ಮಾಡಿ ತಾನು ಅಜ್ಞಾನ ಕಲಾತ್ಮನು ತನ್ನ ಕುರುಹಿಡಿದು ತನ್ನ ನಿಜಸ್ವರೂಪವಾದ ವಸ್ತುವಿನ ಲಕ್ಷಣವನು ಗ್ರಹಿಸಿ ತಾನು ಆ ಜ್ಞಾನ ಕಲಾತ್ಮನು ತನಗೆ ಆ ವಸ್ತುವಿಗೆ ಅನ್ಯವಿಲ್ಲವೆಂಬ ಭೇದವ ಸ್ವರೂಪವನು ತಾನೆಯರಿದು ತನ್ನ ಸ್ವಾತ್ಮಜ್ಞಾನದಿಂದ ತಾನೇ ತಿಳಿದು ಮಾಯಾ ಮಿಥ್ಯವಂ ಅವಿದ್ಯಾ ಹುಸಿಯನು ನಿವೃತ್ತಿ ಮಾಡಿ, ಇದಂ ನೇತಿ ಇದಂ ನೇತಿ, ಎಂದು ತಿರಸ್ಕಾರವ ಮಾಡಿ ಶಿವಧ್ಯಾನದಲ್ಲಿ ಬ್ರಹ್ಮಜ್ಞಾನದಲ್ಲಿ ಮನವನಿತ್ತ ಮಾನಸವನು ಆರೋಪಿಸಿದಂಥ ಸತ್ಯ ಶರಣನು ಪಾರಮಾರ್ಥವಾದ ಸುಖಸ್ವರೂಪವಾದಂಥ ಶಿವಶರಣನು.

ಮೂಲ— ಹಿಂದೆ ಹರಿದು ಹರಿದ ಹಿಂದನೊಂದು ಮಾಡಿ ಬೆರಸದಾನಂದದಿಂದಲೆಯ್ದಿ ಮನೋಭಾನಿಯಾಗಿ, ಬಿಂದುನಾದ ಕಳಾತ್ರಯದ ಸಂದನಳಿದು ಚಿತ್‌ಸ್ವರೂಪನು ಬಿಂದುವಿನೊಳು ನಿಂದು ನೆರೆದ ಸತ್ಯ ಶರಣನು.

ಟೀಕು:— ಹಿಂದೆ ಹರಿದು ಪೂರ್ವದ ಜಾತಿ ವರ್ಣ ಕುಲ ಗೋತ್ರ ನಾಮ ಸೀಮೆಗಳನು ಸುಜ್ಞಾನದಿಂದ ಭೇದಿಸಿ ಹರಿದು ಅವನು ನಷ್ಟವ ಮಾಡಿದ ಮೇಲೆ ಹಿಂದನೊಂದುಮಾಡಿ ಆ ಜಾತಿ ವರ್ಣ ಕುಲ ಗೋತ್ರ ನಾಮ ಸೀಮೆಗಳನು ಏಕವ ಮಾಡಿ ಬೆರಸದ ಕೂಡಿ ಸಮರಸವಾಗದ ಆನಂದದಿಂದ ಆಹ್ಲಾದದಿಂದ ಎಯ್ದಿ ಪರಬ್ರಹ್ಮದಲ್ಲಿ ಸ್ಥಾಪಿಸಿ ಮನೋಭಾವಿಯಾಗಿ ಮನದಲ್ಲಿ ನೆನೆಸು ಅರಿವಿನಲ್ಲಿ ಭಾವಿಸಲ್ಕಕ್ಕಾತನಾಗಿ ಭಾವದಲ್ಲಿ ಭಾವಿಸಲ್ಕಕ್ಕಾತನಾಗಿ ಬಿಂದುನಾದ ಕಳಾತ್ರಯದ ದೇಹ ಪ್ರಾಣ ಆತ್ಮ ಸೂರರ ಸಂದನಳಿದು ಆ ತನುತ್ರಯಂಗಳ ಭಿನ್ನ ಪ್ರಕೃತಿಯನು ಗಳತವ ಮಾಡಿ ಎಂಬುದೀಗ ಚಿತ್‌ಸ್ವರೂಪ ಜ್ಞಾನಸ್ವರೂಪವಾದಂಥ

ಬಿಂದುವಿನೊಳು ಚಿದ್ಬಿಂದಾತ್ಮಕವಾದ ವಸ್ತುವಿನಲ್ಲಿ ನಿಂದು ಚಿತ್ತೇ ಅಂಗ ಚಿದ್ಘನಲಿಂಗನೇ ಪ್ರಾಣವಾಗಿ ನೆಲಸಿದ ಮೆರೆದ ಮಹಾಜ್ಞಾನದಿಂದ ರಾಜಿಸಿದ ವಿಡಂಬಿಸಿದ ಸೌಖ್ಯ ಶರಣನು ಮಹಾ ಜ್ಞಾನದ ಸುಖಸ್ವರೂಪವಾದ ಶಿವಶರಣನು.

ಮೂಲ— ಶಕ್ತಿಯೊಳು ಶಿವಾತ್ಮವಡಗಿ ಶಕ್ತಿರಹಿತನೆಂಬ ಬೆಡಗ ಶಕ್ತಿಮುಖದೊಳರಿದು ಶಕ್ತಿ ಸಂಗ ಭಂಗವಿ । ರಕ್ತಿಯಿಂದ ಗೆಲಿದು ಪರಮಭಕ್ತಿ ಸುಖವ ಕಂಡ ಸುಖಿಯ ಚಿತ್ತದರಿವು ಜಗವನುಂಗಿಯುಗುಳದಿರ್ಮದು.

ಟೀಕು— ಶಕ್ತಿಯೊಳು ಚಿತ್ಯಕ್ತಿ ಸ್ವರೂಪವಾದ ಶ್ರೀಗುರುವಿನಲ್ಲಿ ಶಿವಾತ್ಮ ಅಡಗಿ ಶಿವಾಂಶಿಕವಾದ ಜ್ಞಾನ ಕಲಾತ್ಮನು ಆ ಆ ಶ್ರೀಗುರುವಿನ ಭಕ್ತಿಯಲ್ಲಿ ಅಂತರ್ಗತವಾಗಿ ಶಕ್ತಿ ರಹಿತನೆಂಬ ಅಜ್ಞಾನ ತನ್ನೋರೂಪಿಣಿಯಾದ ಅವಿದ್ಯಾ ಶಕ್ತಿಯು ಇಲ್ಲವೆಯಾದಾತ್ಮನೆಂಬ ಜೆಡಗು ಕುಶಲಗತಿಯ ಬಣ್ಣಿತಿಯನು ಶಕ್ತಿ ಮುಖದೊಳರಿದು ಚಿತ್ಯಕ್ತಿಸ್ವರೂಪವಾದ ಶ್ರೀಗುರು ದೇವನ ವಕ್ತ್ರದಿಂದ ತಿಳಿದು ಶಕ್ತಿ ಸಂಗ ಭಂಗವ ಅಜ್ಞಾನತನತನೋರೂಪಿಣಿಯಾದ ಅವಿದ್ಯಾಶಕ್ತಿಯ ಸಂಗ ತತ್ಸಂಗದ ಭಂಗವ ಭವ ಭಂಗದ ಕೊರತೆಯನು ವಿರಕ್ತಿಯಿಂದೆ ಗೆಲಿದು ಪರಮ ನಿರಾಗತಿಯಿಂದ ಜಯಿಸಿ ಪರಶಕ್ತಿ ಸುಖವ್ಯಕಂಡಾ ಮಹಾಜ್ಞಾನ ಶಕ್ತಿಯ ಸೌಖ್ಯವನು ಮೂಲ ಜ್ಞಾನಸೃಷ್ಟಿಯಿಂದ ನಿರೀಕ್ಷಣೆ ಮಾಡಿದಂಥ ಸುಖಿಯ ಪರಬ್ರಹ್ಮ ಪರಿಣಾಮಿಯ ಚಿತ್ತದರಿವು ಮನದ ಸುಜ್ಞಾನವು ಜಗವನುಂಗಿ ಅನಂತ ತತ್ವಭುವ ಬ್ರಹ್ಮಾಂಡಾದಿಗಳನು ಒಳಕೊಂಡು ಉಗುಳದಿರ್ಮದು ಸೇವ್ಯ ಸೇವಕತ್ವ ಕರ್ತೃಭೃತ್ಯತ್ವ ಒಡೆಯ ಬಂಟತ್ವವಿಲ್ಲದೆ ಹೋದಿತ್ತೆಂದು ಉದ್ಗಾರಿಸದೆ ಇರ್ಮುದು.

ಮೂಲ— ಆದಿ ಮಧ್ಯ ಅಂತ್ಯವೆಂಬ ಭೇದವಾಕ್ಯದೊಳಗೆ ಪುಗದನಾದಿ ಸಂಸಿದ್ಧವಾಗಿ ತನ್ನ ತಾನೆ ಕಂಡು। ಅಭೇದ್ಯ ಪದವನೆಯ್ದಿ ಕೂಡಲ ಚನ್ನಸಂಗಯ್ಯನಲ್ಲಿ ಭೇದವಿಲ್ಲದಿಪ್ಪ ದಿವ್ಯಜ್ಞಾನಿ ನೋಡಾ.

ಟೀಕು— ಆದಿ ಮಧ್ಯ ಅಂತ್ಯವೆಂಬ ಪಶುಪದಾರ್ಥ ಪಾಶುಪದಾರ್ಥ ಪಶಿಪದಾರ್ಥ ಜೀವನು ಮಾಯೆ ಶಿವನು ಆದಿಯಲ್ಲಿ ಉಂಟು ಮಧ್ಯದಲ್ಲಿ ಉಂಟು ಅಂತ್ಯದಲ್ಲಿ ಉಂಟೆಂಬ ಭೇದವಾಕ್ಯದೊಳಗೆ ಭಿನ್ನಾ

ಗಮದ ವಚನ್ಸಿನಲ್ಲಿ ಪೊಗದ ಪ್ರವೇಶವಾಗದ ಅನಾದಿ ಸಂಸಿದ್ಧವಾಗಿ ಅನಾದಿ ವಸ್ತುವಿನಲ್ಲಿ ಸಂಸಿದ್ಧವಾಗಿ ಎಂಬುದು ಅರ್ಥ. ಅಂತುಮಲ್ಲದೆ ಎಲ್ಲಕ್ಕು ಮೊದಲಿಗನಾದ ವಸ್ತುವೇ ತನುಮನಾತ್ಮನಲ್ಲಿ ಪ್ರಸಿದ್ಧವಾಗಿ ತನ್ನ ತಾನೆ ಕಂಡು ತನ್ನ ನಿಜಸ್ವರೂಪವಾದ ವಸ್ತುವೇ ತಾನೆಂದು ನಿರೀಕ್ಷಿಸಿ ಅಭೇದ್ಯ ಪದವನೆಯ್ದಿ ದ್ವೈತಾದ್ವೈತ ಹತಕರ್ಮಯೋಗಿಗಳಿಗೆ ಭೇದಿಸಬಾರದಿರ್ದಂಥ ಚಿದ್ಘನಲಿಂಗಪದ ಸ್ವರೂಪವಾದ ಮೋಕ್ಷ ಪದದಲ್ಲಿ ಕೂಡಿ ಕೂಡಲ ಚನ್ನಸಂಗನಲ್ಲಿ ಪರಶಿವಲಿಂಗದಲ್ಲಿ ಭೇದವಿಲ್ಲದಿಪ್ಪ ಲಿಂಗಕ್ಕು ತನಗು ಇಂಬು ಇಲ್ಲದಿರ್ದಂಥ ದಿವ್ಯಜ್ಞಾನಿ ನೋಡಾ ಸಮ್ಯಜ್ಞಾನಿ ಕಂಡಾ.

ಸೂತ್ರ— ಉಚ್ಯತೆ ಎಂದು ಹಿಂದಣದರ್ಥವನು ಮುಂದಣ ಸ್ಥಲಕ್ಕೆ ಕೊರೆದ ಮಣಿಗಣ ಸೂತ್ರದ ಹಾಗೆ ಪಟ್ಟುಗೊಂಡೆಯ ಕತ್ತರಿಸಿದ ಹಾಗೆ ಬಸವನ ಬಾಲದ ಹಾಗೆ ಮುತ್ತು ಪವಣಿಗೆಯ ಮಾಡಿದ ಹಾಗೆ ಸೂತ್ರ ಹರಿಕಿಲ್ಲದೆ ಸೂಚಿಸಿ ಕೊಡಲ್ಪಟ್ಟಿಂಥಾದ್ದೇ ಇಂತು ಈ ಪ್ರಕಾರ ದೆಸೆಯಿಂದೆ ಪಿಂಡ ಜ್ಞಾನೋದಯವಾದ ಪಿಂಡದಲ್ಲಿ ಸಮ್ಯ ಜ್ಞಾನ ಉತ್ಪತ್ತವಾದ ಮಹಾಂತನು ಮಹಿಮನು ನಿತ್ಯಾನಿತ್ಯ ವಸ್ತುವಿವೇಕವನರಿದು ಜಗತ್ತೋರಿಕೆ ಮಾಯಾ ಪ್ರಪಂಚೆಲ್ಲವು ಅನಿತ್ಯವಾದಂತಹವು ನಿತ್ಯವಾದಂತಹದೇ ಶಿವತತ್ವವೆಂಬ ವಿಚಾರವನು ತಿಳಿದು ಅನಿತ್ಯವಾದ ಅಪ್ರಸಿದ್ಧವಾದ ಅಶಾಶ್ವತವಾದ ಸಂಸಾರ ಧರೆ ದಾರಾ ಧರಿತ್ರಿಯೆಂಬ ಸಂಸೃತಿಯ ಹೊನ್ನು ಹೆಣ್ಣು ಮಣ್ಣೆಂಬ ಸಂಸೃತಿಯ ಅಷ್ಟಭೋಗಮಲತ್ರಯವೆಂಬ ಸಂಸೃತಿಯ ಪಂಚವಿಷಯಾಂಗಳೆಂಬ ಸಂಸೃತಿಯ ಪುತ್ರ ಮಿತ್ರ ಕಳತ್ರವೆಂಬ ಸಂಸೃತಿಯ ಎಂಬುದೀಗ ಧ್ಯೇಯ ಜಿಗುಪ್ಸೆಯು ಉಪಾಯಮಂ ಉಪಮಾನಿಕೆಯನು ತಂತ್ರಭಾಗೆಯನು ತೊಲಗಿ ಹೋಗುವಂಥ ಹರಿತವನು ಕಂಡು ನೋಡಿ ತಾನು ಜ್ಞಾನ ಕಲಾತ್ಮನು ತಾನು ನಿರಸನ ಮಾಡುತ್ತಿರಲು ಇದಂ ನೆಲೆಯಿದಂ ನೆಲೆಯೆಂದು ತಿರಸ್ಕಾರವ ಮಾಡುತ್ತಿರಲು ಮುಂದೆ ಪುರಸ್ಸರದಲ್ಲಿ ಸಂಸಾರ ಹೇಯ ಸ್ಥಲವಾದುದು, ಸಂಸಾರ ಹೇಯಸ್ಥಲವೆಂದು ಹೇಳಲಾದುದು.

ಸಂಸಾರ ಹೇಯಸ್ಥಲ

ಮೂಲ— ಏಪೆ ಸಂಸಾರ ಮಾಯಾ ಮಯದ ಭಯ ತನುವ ನಾವರಿಸಿ ನುಂಗುತಿದೆ ನಾನಾ ಭವದ ದುಃಖಧಾವತಿಗೆ ಹೇವರಿಸಿ ಪೊರೆ ಹೊಕ್ಕೆ ಮದನಾರಿ ಕಾಯಿ ಕಾರುಣ್ಯನಿಧಿಯೇ.

ಟೀಕು— ಸಂಸಾರ ಹೊನ್ನು ಹೆಣ್ಣು ಮಣ್ಣೆಂಬ ಸಂಸೃತಿಯ ಮಾಯೆ ಅವಿದ್ಯೆಯ ಆ ಮಾಯೆಯ ಹೆಚ್ಚಿದ ರೋಗದ ಭಯ ಅದರ ಭೀತಿಯು ತನುವನು ಅಂಗವನು ಅವರಿಸಿ ಆಪೋಷಣಂಗೊಂಡು ನುಂಗುತಿದೆ ಹೇಳನಂಗೆಯ್ವುತಿದೆ. ಏವೆ? ಇನ್ನೇನು ಜಪವ ಮಾಡಲೋ ತಪವ ಮಾಡಲೋ ಧ್ಯಾನವ ಮಾಡಲೋ ಮೌನವ ಮಾಡಲೋ ಕೃತೋಪವಾಸವ ಮಾಡಲೋ ಎಂದು ಚಿಂತಿಸುತ್ತಿಹನು. ಜ್ಞಾನ ಕಲಾತ್ಮನು ನಾನಾ ಭವದ ಹಲವು ಜನ್ಮದ ದುಃಖ ದುಗುಡವು ಧಾವತಿಗೆ ಓಡಾಟದ ದಂದುಗಕ್ಕೆ ಹೇವರಿಸಿ ಜಿಗುಪ್ಸಿತನಾಗಿ ಮದನಾರಿ ಮನ್ಮಥ ಸಂಸಾರಿಯಾದಂಥ ಎಲೆ ಪರಮೇಶ್ವರನೇ ಮರೆಹೊಕ್ಕೆ, ಆಪ್ಪದಗೊಂ ಡೆನು, ಶರಣಾಗತನಾದೆನು. ಕಾರುಣ್ಯ ನಿಧಿಯೇ ಘೃಣಾಶೀಲನಾದ ಎಲೆ ಪರಮೇಶ್ವರನೇ ದಯಕ್ಕೆ ಸ್ಥಾನವಾದ ಎಲೆ ಪರಮೇಶ್ವರನೇ ಕಾಯಿ ಅಂತರಂಗದಲ್ಲಿ ಜ್ಞಾನೋದಯವನ್ನಿತ್ತು ಬಹಿರಂಗದಲ್ಲಿ ಗುರುವಾಗಿ ಬಂದು ವೇಧಾ ಮಂತ್ರ ಕ್ರಿಯೆಗಳೆಂಬ ದೀಕ್ಷಾತ್ರಯವನು ಕರುಣಿಸಿ ನಿನ್ನ ಪಾದೋದಕ ಪ್ರಸಾದವನು ಕೊಟ್ಟು ಸಂರಕ್ಷಣೆಯ ಮಾಡು.

ಮೂಲ— ಶುಕ್ಲ ಶೋಣಿತ ಬದ್ಧಮಲದಿಂದಲಾದಂಗೆ। ಪ್ರಕೃತಿ ಕಾಯಕೆ ಸತ್ಯ ಮಾಯಾಮಲತ್ರಯದ। ಸಕಲ ಪ್ರಪಂಚು ಮೋಹಾನು ಬಂಧನವೆ ವ್ಯಾಪ್ತಿಯಾಗಿ ನಿವ್ಮಾ ॥ ಸಕೃತ ಚಿಂತನೆ ಮಾಡಲೀಯದಿ ದನೆ ತೋರಿ। ವಿಕಳನೆನಿಸದೆ ಕರುಣದಿಂ ಬಂದು ಭಕ್ತದೇ। ಹಿಕ ದೇವನೆಂಬುದುಂಟೆದ ನೋಡಿ ಪರಿಹರಿಸು ಮಾಯಾವಿಡಂಬನವನು.

ಟೀಕು—ಶುಕ್ಲ ಶೋಣಿತ ತಂದೆಯ ವೀರ್ಯವು ತಾಯಿಯ ರಕ್ತವು ಬದ್ಧ ಈರ್ವರ ಶರೀರದಲ್ಲಿ ಗಟ್ಟಿಕೊಂಡು ಹುಟ್ಟಿದಂಥ ಮಲದಿಂದ ಕಲ್ಮಷ ದಿಂದ ಆದ ಆಗುವ 'ಪ್ರಾದುರ್ಭಾವೆ' ಎಂಬ ಧಾತುವಿನಿಂದೆ ಪ್ರಾದುರ್ಭವಿಸಿದ ಅಂಗಶರೀರವು ಪ್ರಕೃತಿ ಕಾಯಕ್ಕೆ ಪ್ರಪಂಚಿನ ಶರೀರಕ್ಕೆಂಬುದು

ಅರ್ಥ. ಅಂತುಮಲ್ಲದೆ ಶುಕ್ರ ಶೋಣಿತ ಆತ್ಮಕಂಗವಿಂದ ಅಂಗಕ್ಕೆ ಮಾಯಾ ಮಲತ್ರಯದ ಅವಿದ್ಯಾ ಮಲ ಮೂರನು ಸಕಲ ಪ್ರಪಂಚು ಅದರಿಂದಾದ ಹೊನ್ನು ಪ್ರಪಂಚ, ಹೆಣ್ಣು ಪ್ರಪಂಚ, ಮಣ್ಣು ಪ್ರಪಂಚ, ಇಂದಿಗೆ ನಾಳೆಗೆ ಳಿದರೂ ತೀರಬಾರದೆ ಇರ್ದ ಸಂಸೃತಿಯು. ಮೋಹ ಮಮಕಾರವು ಅನು ಬೆಂಬಳಿಯು ಬಂಧದ ಬಂಧನವೇ ಕಟ್ಟಿನ ಕಟ್ಟಳಿಯೇ ಪ್ರಾಪ್ತಿಯಾಗಿ ಆತ್ಮನಿಗೆ ವಿಧಿಯಾಗಿ ದೊರವಣವಾಗಿ ದೊರ ಕೊಂಡಿತ್ತಾಗಿ ನಮ್ಮ ಎಲೆ ಪರಶಿವಲಿಂಗವೇ ನಿಮ್ಮ ಸಕೃತ್ ಕಿಂಚಿತ್ತು ಹೊತ್ತು ಒಂದೆಪ್ಪೊತ್ತು ಚಿಂತನೆಯ ಮಾಡಲೀಯದು. ಶಿವಲಿಂಗ ಧ್ಯಾನದೊಳು ಸ್ಮರಿಸಲೀಸದು. ಇದನೆ ತೋರಿ ನೋಡುವ ಕಣ್ಣಿಗೆ ಹೆಣ್ಣು ತೋರಿ ನೆನೆವ ಮನಕ್ಕೆ ಹೊನ್ನು ತೋರಿ ಪೂಜಿಸುವ ಕೈಗೆ ಮಣ್ಣನು ಕಾಣಿಸಿ ವಿಕಳನೆನಿಸದೆ ಅದರಲ್ಲಿಯೇ ಹುಚ್ಚಾತ್ಮ ನೆನಿಸದೆ ಪುರುಳಾತ್ಮನೆನಿಸದೆ ಕರುಣದಿಂದೆ ಕೃಪೆಯಿಂದೆ ಬಂದು ಅಂತ ರಂಗದಲ್ಲಿ ಜ್ಞಾನೋದಯವಿತ್ತು ಬಹಿರಂಗದಲ್ಲಿ ಗುರುವಾಗಿ ಬಂದು ಭಕ್ತದೇಹಿಕ ದೇವನೆಂಬುದುಂಟು, ಭಕ್ತ ದೇಹಿಕ ದೇವಾನಾಂ ದೇಹಿಕ ಭಕ್ತನಾಂ, ಎಂದು ಶ್ರುತಿವಾಕ್ಯವುಂಟು. ಅದ ಆ ಶ್ರುತಿ ವಾಕ್ಯವನು ನೋಡಿ ನಿನ್ನ ಘೃಣಾ ದೃಷ್ಟಿಯಿಂದೆ ನಿರೀಕ್ಷಿಸಿ ಮಾಯಾ ವಿಡಂಬನ ವನ್ನ ಎಲ್ಲರನು ತನ್ನ ದಿನದಲ್ಲಿ ಮಡಿಗಿಕೊಂಡು ಉಲ್ಲಂಘಿಸಿ ಬಿಡುವ ಉದ್ದಂಡ ವೃತ್ತಿಯನುಳ್ಳ ಅವಿದ್ಯೆಯ ವಿಶೇಷವಾದ ಹೆಚ್ಚುಗಾರಿಕೆಯನ್ನು ಪರಿಹರಿಸು ನಷ್ಟವ ಮಾಡು.

ಮೂಲ— ಆಸೆಯಾವಿಷದ ಸಂಸಾರ ತಾವಸದ ವಾರಾಶಿ ಯೊಳಗಾಳುತ್ತೇಳುತ್ತಲದಕೆ ಕಡೆಗಾಣ। ದಾಸತ್ರಳಲುತ್ತೊಡಲ ಹೊರೆವ ಮಾಯಾ ಭ್ರಮೆಯ ಕ್ಲೇಶ ದಂಡಲೆ ತನವನು॥ ಗಾಸಿ ಮಾಡಿ ಹಿತೇಷಣತ್ರಯದ ಮೋಹಿನಿಯ ಪಾಶ ಪಾಡಿಯೊಳು ಸಿಲ್ಕಿದ ಶಿಶುವಿಗ ಭಯಕರದಾಶೆ ದೋರೆಳದುಕೋ ನಿನ್ಮತ್ತ ದುರಿತಾರಿ ಪಾಶ ನಿಮ್ಮುಕ್ತ ಶಿವನೇ.

ಟೀಕು— ಆಶೆಯ ಧರೆ ದಾರ ದ್ರವ್ಯದ ಮೇಲಣ ವಾಂಛೆಯು ಹೊನ್ನಾಗಬೇಕು ಹೆಣ್ಣಾಗಬೇಕು ಮಣ್ಣಾಗಬೇಕೆಂಬ ಅಪೇಕ್ಷೆಯು ಅನು ಷದ ಹೊನ್ನಿರ್ದು ಹೊನ್ನು ಹೆಣ್ಣಿರ್ದು ಹೆಣ್ಣು ಮಣ್ಣಿರ್ದು ಮಣ್ಣು

ತೆಯಾಗಿ ದಾಸನಿಗೆ ದಾಸತೆಯಾಗಿ ಜಂಗಮನಿಗೆ ತುಂಡಶೀಲವಂತೆ
ಯಾಗಿ ಹೀಗೆ ಆಯಾಯ ಮತಾಂತರಕ್ಕೆ ತಕ್ಕ ಪಡುದರುಶನ ಸ್ವರೂ
ಪಿಣಿಯಾಗಿರ್ಪಳು ಎಂಬುದೀಗ ಭಾವಿತ ಭಾವದೊಳು ಸಿದ್ಧಾಸನ ಪದ್ಮಾ
ಸನ ಪರ್ಯಂಕಾಸನ ಅರ್ಧ ಚಂದ್ರಾಸನಂಗಳಲ್ಲಿ ಕುಳಿತು ಹೃದಯ ಕಂಠ
ಭ್ರೂಮಧ್ಯ ಸ್ಥಾನಂಗಳಲ್ಲಿ ವಸ್ತುವನು ಕುರುಹಿಟ್ಟು ಕಂಡು ಕೂಡಬೇ
ಕೆಂದು ಬಗೆವ ಭಿನ್ನ ಯೋಗಿಗಳ ಅಂತರಂಗದಲ್ಲಿ ಎಂಬುದೀಗ ನಿಂದು
ತನ್ನ ದುಶ್ಚರಿತ್ರವೆಂಬ ಚರಣವನೂ ಅದಸ್ಯ ಮಾಡಿ ತುಳಿದು ನೆಲಸಿ
ಭ್ರಮೆಯಂ ಹೊನ್ನಾಗಬೇಕು, ಹೆಣ್ಣಾಗಬೇಕು, ಮಣ್ಣಾಗಬೇಕೆಂಬ
ಭ್ರಮೆಯಂ ಭ್ರಾಂತನೆ ಬೀರುತ್ತ, ಉಂಟು ಮಾಡುತ್ತ, ಬಿತ್ತರಿಸುತ್ತ,
ಅವಳೋಕಿಸುತ್ತ, ಎಲವೋ ನಿನ್ನ ಜನನ ಮರಣಂಗಳಲ್ಲಿ ತಂದು ಕಾಲ
ಕಾಮ ಮಾಯಾದಿಗಳ ಕೈಯಲ್ಲಿ ಕೊಟ್ಟು ಸಂಹರಿಸಿದರೆ ಬಿಡಿಸಿಕೊಂಬು
ವಂತಿದ್ದರೆಲವೋ ಎಂದು ತನ್ನಜ್ಞಾನ ಮಾಯ ಧೂರ್ತದೃಷ್ಟಿಯಿಂದೆ
ನಿರೀಕ್ಷಿಸುತ್ತ ಸಂಸಾರ ಸಂಸೃತಿಯು ಸರ್ವತೋಮುಖವೆನ್ನ ಅನುಗ್ರಹಿ
ಸಿರ್ಪುದು. ಮಗಳು ಅಕ್ಕ ತಂಗಿಯು ಮಿಗೆ ಸೊಸೆ ನಾದಿನಿಯು ಜಗದ ವನಿ
ತೆಯರು ಜನನಿ ಮುಂತಾದವರು ಜಗಕೊಬ್ಬಳೆಸೆ ಎಂದು ಅಕ್ಕನಾಗಿ
ತಂಗಿಯಾಗಿ ಸೊಸೆಯಾಗಿ ಸಹೋದರಿಯಾಗಿ ಎಲ್ಲ ಕಡೆಯಲ್ಲಿ ವಕ್ರವಾಗಿ
ನನ್ನನು ಹಿಡಿದಿರ್ಪುದು. ಅವ ಕಡೆಗೆ ಅವ ದಿಕ್ಕಿನಲ್ಲಿ ಅಡಿಯಿಡಲು ಹಜ್ಜೆ
ಯಿಡಲು ಅಂತುಮಿಲ್ಲದೆ ಕ್ರಿಯಾಪಾದ, ಜ್ಞಾನಪಾದ, ಯೋಗಪಾದ
ಚರ್ಯಾಪಾದಂಗಳಿಂದೆ ಅಡಿಯಿಟ್ಟು ಚರಿಪೆನೆಂದರು ತೆರುಹುಗುಡದು
ತೆರಪುಗೊಡದೀ ಮಾಯಾ ಪ್ರಪಂಚು ಇಂಬುಗೊಡದೀ ಪ್ರಕೃತಿಯು
ಅಯಿ ಮಹಾದೇವ, ದೇವರ ದೇವ, ದೇವಶಿಖಾಮಣಿ, ದೇವ ಚೂಡಾ
ಮಣಿ, ಪರಮೈವ ಸೇಶ್ಯಾಭುಜಂಗ, ಜೋಳಿಯರರಸ, ಎಲ್ಲ ದೇವರಿಗೆ ವಲ್ಲ
ಭನಾದಂಥ ಎಲೆ ಪರಮೇಶ್ವರನೇ, ನಿನ್ನವ ಲಿಂಗವ ನೆನೆಯಲೀಯದು
ಸ್ಮರಿಸಲೀಸದ್ದು, ಇನ್ನೇವೆ ಇನ್ನೇನ ಜಪವ ಮಾಡಲೋ ತಪವ ಮಾಡಲೋ
ವೃತೋಪವಾಸ ಮಾಡಲೋ ಎಂದು ಚಿಂತಿಸುತ್ತಿಹನು ಜ್ಞಾನಕಲಾ
ತ್ಮನು. ಈ ಧಾವತಿಯ ಈ ಓಡಾಟವನು ಪರಿಹರಿಪುದೇನು ನಷ್ಟವ
ಮಾಡುವುದೇನು ನಿನಗೇನು ಕಷ್ಟವೆ? ಕಾಲನ ಕೊಂದೆ, ಕಾಮನ ಕೊಂದೆ,
ತ್ರಿಪುರ ಸಂಹಾರವ ಮಾಡಿದೆ, ಒಕ್ಕು ಮಿಕ್ಕ ದೈತ್ಯರ ಸಂಹರಿಸಿದೆ, ನಿನ್ನಂ
ಶೀಭೂತನಾದ ಜ್ಞಾನ ಕಲಾತ್ಮ ಎನ್ನನು ಸುತ್ತಿ ಮುತ್ತಿ ಆವರಿಸಿದ

ಅನ್ನಾಚ್ಛಾದನವಿರ್ದು ಅನ್ನಾಚ್ಛಾದನವಾಗಬೇಕೆಂಬ ಅಂತಿಕಾಂಕ್ಷೆಯು
ಸಂಸಾರ ಸಂಸೃತಿಯ ತಾಮಸದ ತಮುಂಧದ ದುರಾಶೆಯೊಳಗೆ ಸಮು
ದ್ರದಲ್ಲಿ ಅಳುತ್ತೇಳುತ್ತ ತೇಲುತ್ತ ಮುಳುಗುತ್ತ ಜನನವಾಗಿ ಮರಣಕ್ಕೆ
ಬರುತ್ತ ಮರಣವಾಗಿ ಜನನಕ್ಕೆ ಬರುತ್ತ ಅದಕ್ಕೆ ಆ ಸಂಸಾರವೆಂಬ
ಸಮುದ್ರಕ್ಕೆ ಕಪೆನಾಣದೆ ಪಾರವಗಾಣದೆ ಅಸತ್ತು ಆತ್ಮ ಸತ್ವಗುಂದಿ
ಅಳಲುತ್ತ ಅಯಸಂಬಡುತ್ತ ಒಡಲ ಕೊರೆವ ತ್ರಿ ತತ್ವಯುಕ್ತವಾದ
ಘಟ ರಕ್ಷಣೆಯ ಮಾಡುವ ಮಾಯಾ ಭ್ರಮೆಯ ಅವಿದ್ಯಾ ಸಂದೀ
ಹದ ಕ್ಲೇಶದ ಪಂಚಕ್ಲೇಶದ ದ್ವೇಷ ಅಂಡಲೆ ಅಟ್ಟುಳಿಯು ಅಲೆ
ದಾಟವು ಎಮ್ಮೊಡಿಕೆಯು ತನುವನು ಅಂಗವನು ಗಾಸಿ ಮಾಡಿ ಗಾರು
ಮಾಡಿ ಹಿತ ಆತ್ಮನಿಗೆ ಸಖವಾದ ಈಷಣತ್ರಯದ ಅರ್ಥೇಷಣ
ಪುತ್ರೇಷಣ ದಾರೇಷಣವೆಂಬ ಮೂರರ ಮೋಹಿನಿಯ ಜಗನ್ಮೋಹಿನಿಯ ಪ
ಮಾಯೆಯ ಪಾಶ ಅಷ್ಟಪಾಶ ನವಪಾಶ ಮಾಯಾಪಾಶ ಪ್ರಪಂಚ
ಪಾಶ ಕ್ಲೇಶಪಾಶ ಆಶಾ ಪಾಶಂಗಳ ಎಂಬುದೀಗ ಪಾಡಿಯೊಳು ಹಸ್ತ
ದಲ್ಲಿ ಶಿಲುಕಿದ ವಶಗತವಾದ ಶಿಶುವಿಗೆ ಜ್ಞಾನವಿಹೀನವಾದ ಆತ್ಮನಿಗೆ
ಅಭಯಕರದ ಅಭಯ ಹಸ್ತದ ಆಶೆ ದೋರಿ ನಿಜಾಪೇಕ್ಷೆಯನು ಕಾಣಿಸಿ
ನಿಮ್ಮತ್ತ ಎಲೆ ಪರಶಿವಲಿಂಗವೇ ನಿಮ್ಮ ದಿಕ್ಕಿಗೆ ಎಳೆದುಕೋ ಅಭಿಮು
ಖಾಸ್ಪದವ ಮಾಡಿಕೋ ದುರಿತಾರಿ ಅಷ್ಟೋತ್ತರ ಶತವ್ಯಾಧಿಗಳಿಗೆ ವೈರಿ
ಯಾದಂಥ ಪಾಶ ಅಷ್ಟಪಾಶ ನವಪಾಶ ಮಲಪಾಶ ಮಾಯಾ ಪಾಶಂ
ಗಳನು ನಿರ್ಮುಕ್ತ ಶಿವನೇ ನೆರೆ ಬಿಡಲ್ಪಟ್ಟಂಥ ಎಲೇ ಪರಮೇಶ್ವರನೇ.

ಮೂಲ – ಆವಾವ ಮುಖ ಮುಖದೊಳಲ್ಲಿಗಲ್ಲಿಗೆ ತಾನೆ। ಭಾವಿ ತಾ
ಭಾವದೊಳು ನಿಮ್ಮ ಭ್ರಮೆಯಂ ಬೀರು। ತಾವಳೋಕಿಸುತ್ತವಗ್ರಹಿಸಿಸ್ಪ
ಸಂಸಾರ ಸರ್ವತೋಮುಖವೆನ್ನನೂ ॥ ಆವ ಕಡೆಗಡಿಯಿಡಲು ತೆರಹುಗು
ಡದೈ ಮಹಾದೇವ ನಿಮ್ಮುವ ನೆನೆಯಲೀಯದಿನ್ನೇವೆನೀ। ದಾವತ್ತಿಯ ಪರಿ
ಹರಿಪುದೇನರಿದು ಮದನಾರಿ ಮಾಯಾರಿ ದುರಿತಾರಿ ಗುರುವೇ.

ಟೀಕು— ಆವಾವ ಮುಖದೊಳು ನೂರೊಂದು ಕುಲ ಹದಿನೆಂಟು
ಜಾತಿಯ ವಕ್ತ್ರವಕ್ತ್ರದಲ್ಲಿ ಅಲ್ಲಿಗಲ್ಲಿಗೆ ತಾನು ಆಯಾಯ ಸ್ಥಾನಕ್ಕೆ ತಾನೇ
ಎಳ್ಳಿಗೆ ಎಣ್ಣೆಯಾಗಿ ಮುಳ್ಳಿಗೆ ಮೊನೆಯಾಗಿ ಊರಿಗೆ ದಾರಿಯಾಗಿ
ಯತಿಗೆ ಪರಾಕ್ರಮಿಯಾಗಿ ವ್ರತಿಗೆ ಕಂಥಣಿಯಾಗಿ ಜೋಗಿಗೆ ಜೋಗು

ಮಾಯಾ ಪಾಶವನು ನಿರಹರಣವ ಮಾಡುವುದು ಇದೇನು ನಿನಗೆ ಆಶ್ಚರ್ಯವೇ ಜೋದ್ಯವೇ ಮದನಾರಿ, 'ಮದನೊ ಮನ್ಮಥೊ ಮಾರೊ ಪ್ರದ್ಯುಮ್ನೊ ವಿಸ ಕೇತನಃ ಕಂದರ್ಪ ದರ್ಪಕೋನಂಗಃ ಕಾಮಃ ಪಂಚ ಶರಃ ಸ್ಮರಃ' ಎಂದು ಮನ್ಮಥನಿಗೆ ಶತ್ರುವಾದಂಥ ಎಂಬುದೀಗ ಮಾಯಾಂಧಕೃಷ್ಣಾಂಗಿಗೆ ಹಗೆಯಾದಂಥ ದುಃಖಾರಿ ಅಷ್ಟೋತ್ತರಶತವ್ಯಾಧಿಗಳಿಗೆ ವೈರಿಯಾದಂಥ ಗುರುವೇ, ಸ್ವಯಂ ಜ್ಯೋತಿ ಸ್ವರೂಪವಾದಂಥ ಆಚಾರ್ಯನೇ.

ಮೂಲ — ಹುಟ್ಟಿ ಹೊಂದುವ ಹೊಂದಿ ಹುಟ್ಟುತ್ತಿಹ ಭವ ಮಾಲೆಯಟ್ಟುಳಿಯ ಕ್ಲೇಶ ನಾನಾ ಕರ್ಮ ರೋಗ, ಭಯ, ಕಷ್ಟ, ವ್ಯಸನಂಗಳಂ ಬೇವ ದುಷ್ಕೃತದ ತಾಮಸ ತವಕ ಮಾಯೆ ಮನವಾ। ಮೆಟ್ಟಿಕೂಗಿಡೆ ಕೊಲುತಲಿದೆ ಇದರ ದೆಸೆಯಿಂದೆ ಕೆಟ್ಟೆ ಶಿವಧೋ ಶಿವನೇ ದಂದುಗದ ದಾಳಿಯುರಿಯಟ್ಟುತ್ತಿದೆ ನಿಲಲಾರೆ ನಿಮ್ಮಡಿಯ ಮರೆಯೊಳಿಂಬಿಟ್ಟು ರಕ್ಷಿಸು ಮಣೆಯೇ ರಕ್ಷಿಸುವುದು.

ಟೀಕು — ಹುಟ್ಟಿ ಉತ್ಪತ್ಯವಾಗಿ ಹೊಂದುವ ಲಯವ ಹೊಂದುವ ಹೊಂದಿ ಲಯವ ಹೊಂದಿ ಹೊಂದಿ ಹುಟ್ಟುತ್ತಿಹ ವರ್ತ್ತೆ ಉತ್ಪತ್ಯವಾಗುತ್ತಿರ್ದಂಥ ಭವವಾಲೆ, ಅಂಡಜ ೨೧ ಲಕ್ಷ ಉದ್ಭಿಜ ೨೧ ಲಕ್ಷ ಸ್ವೇದಜ ೨೧ ಲಕ್ಷ ಜರಾಯುಜ ೨೧ ಲಕ್ಷ ಇಂತೀ ಎಂಬತ್ತುನಾಲ್ಕು ಲಕ್ಷಯೋನಿಯ ವಸುಧೆಯಲ್ಲಿ ಮರುದ್ಗತ ಪತ್ರವುಸಕ ತಾಲವೃಂತ ಕಾಲಾಲನ ಚಕ್ರಬಡಿಸಿದನಪ್ಪ ಅಂಮಾಲಿ ಕಂತುಕ ಸಾಣಿ ಬಾರು ರಾಟಾಳದ ಘಟದೋಪಾದಿಯಲ್ಲಿ ಹುಟ್ಟಿ ಹುಟ್ಟಿ ಬರುವ ಜನ್ಮ ಸರವಾಲೆಯು ಅಟ್ಟುಳಿಯು ಎದ್ದೊಡಿಕೆಯು ಕ್ಲೇಶವ ದ್ವೇಷದ ಪಂಚಕ್ಲೇಶದ ನಾನಾ ಕರ್ಮಫಲವು ಪಾಕಕ್ರಿಯು ಸಮಸ್ತ ಷಟ್‌ಕೃಷಿ ವ್ಯಾಪಾರವು ರೋಗ ಅದರಿಂದ ಬಂದು ತಟ್ಟುವಂಥ ವ್ಯಾಧಿಯು ಭಯ ಅದರಿಂದ ಬರುವ ಭೀತಿಯು ಕಷ್ಟ ಕೆಟ್ಟುಂಥ ವ್ಯಸನಂಗಳಿಂ ಸಪ್ತ ವ್ಯಸನಂಗಳಿಂದ ಬೇವ ದಹನವಾಗುವ ದುಷ್ಕೃತದ ಪಾಪರೂಪವಾದ ಸುಕೃತವಲ್ಲದಿರ್ದಂಥ ತಾಮಸ ತಮಂಧವು ತವಕ ತ್ವರಿತವು ಮಾಯೆ ಅವಿದ್ಯೆಯು ಮನವ ಮಾನಸವ ಮೆಟ್ಟಿ ದುಶ್ಚರಿತ್ರವೆಂಬ ಚಣದಿಂದ ಅದಸ್ಸವಾಡಿ ತುಳಿದು ಎಂಬುದೀಗ ಕೂಗಿಡೆ ಶಿವಧೋ, ಎಂದು ಮೊರೆಯಿಟ್ಟಡೂ ಕೊಲುತಲಿದೆ ಬಿಡದೆ ಸಂಹರಿಸುತ್ತಿದೆ. ಇದರ ದೆಶೆಯಿಂದೆ ಈ ಮಾಯಾ ಪ್ರಪಂಚಿನ

ದಿಕ್ಕಿನಿಂದೆ ಕೆಟ್ಟೆ ಶಿವತತ್ವ ಕೆಟ್ಟು ಜೀವನಾದೆನು. ಶಿವಧೋ ಶಿವನೇ ಶಿವತಿವ ಧೋ ಎನ್ನ ಮೊರೆಯನು ಲಾಲಿಸು. ದಂದುಗ ಧಾವತಿಯ ದಾಳಿ ಸೂರೆಯು ಎರೆಯಟ್ಟುತ್ತಿದೆ, ಎರೆಯಟ್ಟು ಎಬ್ಬಟ್ಟು 'ಅನುಧಾವನೆ' ಎಂಬು ಆತ್ಮನ ಬೆನ್ನಟ್ಟುತ್ತಿದೆ ನಿಲಲಾರೆ ಈ ಮಾಯಾಪ್ರಪಂಚಿನ ದಿಕ್ಕಿಗೆ ಎದೆಗೊಟ್ಟು ನಿಲಲಮ್ಮೆನು ನೆಲಸಲಮ್ಮೆನು. ವೈರಿಸಲಮ್ಮೆನು ನಿಮ್ಮಡಿಯ ಮರೆಯೊಳು ನಿಮ್ಮ ಪಾದಕಮಲ ಸ್ವರೂಪವಾದ ಇಷ್ಟಲಿಂಗದ ಜವನಿಕೆಯಲ್ಲಿ ಇಂಬಿಟ್ಟು ಎಡೆಯಿಟ್ಟು ರಕ್ಷಿಸುವಲ್ಲಿ ಮಣೆಯೆ ಸುರಮಣಿ ಸ್ವರೂಪವಾದ ರಕ್ಷಣ ಕರ್ತುವಾದ ಮೇಲೆ ಪರಮೇಶ್ವರನೇ ರಕ್ಷಿಸುವುದು. ಅಂತರಂಗದಲ್ಲಿ ಜ್ಞಾನೋದಯವಿತ್ತು ಬಹಿರಂಗದಲ್ಲಿ ಗುರುವಾಗಿ ಬಂದು ಮಾಯಾಪ್ರಪಂಚೆಲ್ಲವನು ನಿರಹರಣವ ಮಾಡು ನಿನ್ನ ಪಾದೋದಕ ಪ್ರಸಾದವನು ಕೊಟ್ಟು ಸಲಹುವದು.

ಮೂಲ — ಭವಪಾಶಬಂಧದಿಂ ಬಿಗಿದು ಕವಿಲೆಯ ಹುಲಿಯು। ಗವಿಯೊಳಗೆ ಕಟ್ಟಿದಂತಾದೆ ಸಂಸಾರವೆಂ। ಬವಿಚಾರಸರ್ವ ಸರ್ವ ಗ್ರಾಸಗೊಂಡುದಿದನೊಮ್ಮೆ ನೋಡಿ ಪರಿಹರಿಸಿ ನಿಮ್ಮಾ। ಶ್ರೀಪಾದದೊಳು ಮನ ಮಗ್ನವಾಗಿ ಮು। ತ್ತವಿಕಲ್ಪ ಸಮಸುಖಾನಂದದೊಳಗೆಂದಿಹೆನೋ। ಭವರಹಿತ ಪರಮೇಶ ಪಾಲಿಸೈ ಮದ್ಗುರುವೆ ಉಳಿವುಮೇಶ್ವರಲಿಂಗವೇ.

ಟೀಕು-ಭವಪಾಶ ಜನ್ಮಪಾಶ ನೇಣಿನ ಬಂಧದಿಂ ಕಟ್ಟಿನಿಂದೆ ಬಿಗಿದು ಬಂಧಿಸಿ ಕವಿಲೆಯ ಜೀವನ ಹುಲಿಯ ಕಾಲವ್ಯಾಳ್ಪನ ಗವಿಯೊಳಗೆ ದೇಹವೆಂಬ ಗುಹೆಯುಳ್ಳಿ ಕಟ್ಟಿದಂತಾದೆ. ಆಶಾಪಾಶಗಳೇ ಬದ್ದೆ "ಗುಹಿ ಸಾಕಾವಲಂಬಿನಾ ಪುತ್ರದ್ವಾರದ್ವಯೋಶ್ವಾನ ಭಾದ್ಯ ತಲಿ ನಹಷನೆ" ಎಂದು ಆಶೆಯೆಂಬ ಪಾಶದಲ್ಲಿ ಬಂಧಿಸಿದ ಹಾಗೆ ಪರಾಧೀನವನುಳ್ಳ ಜೀವನಾದೆನು ಎಂಬುದರ್ಥ. ಅಂತುಮಲ್ಲದೆ ಒಬ್ಬಾನೊಬ್ಬ ಹಲಾಯುಧನು ತನ್ನ ಕ್ಷೇತ್ರವನು ಮೆಯಿಬಂದ ತುಂಡು ಪಶುವನು ಹಿಡಿದುಕೊಂಡು ಹೋಗಿ ಹುಲಿಯ ಗವಿಯೊಳಗೆ ಗೂಟವ ನಡಿಸಿ ಕಣ್ಣಿ ಹಚ್ಚಿ ಹುಲ್ಲು ಹಾಕಿ ನೀರು ಹೊಯ್ದು ಹೋಗುವನ.. ಹೋದಲ್ಲಿ ಹುಲಿಯ ಪೈಗಾವಲು ತಾಗುವದು. ತಾಗಿದಲ್ಲಿ ಭಯವಾವರಿಸುವುದು. ಆವರಿಸಿದಲ್ಲಿ ಆ ಹುಲಿ ಬಂದು ಆವಾಗ ಮುಂದು ಹೋದೀತೋ, ಎನ್ನೊಡೆಯ ಬಂದು ಆವಾಗ ಕೊರಳ ಕಣ್ಣಿಯ ಕಳಚಿ ತೆಗೆದುಕೊಂಡು ಹೋದಾನೋ, ಎಂದು ಆ ಹುಲ್ಲನು ಮೇಯದೆ ನೀರನು ಕುಡಿಯದೆ ಚಿಂತಿಸುವ ಗೋವಿನೋ

ಪಾದಿಯಲ್ಲಿ ಕಾಲವ್ಯಾಘ್ರಂಗಾಶ್ರಯವಾದ ದೇಹವೆಂಬ ಗುಹೆಯಲ್ಲಿರ್ದ ಜೀವನೆಂಬ ಪಶುವಿನ ಅದೃಢವೆಂಬ ಕಂತವನು ದುರ್ಭಾವವೆಂಬ ಸ್ತಂಭಕ್ಕೆ ಮಾಯಾಪಾಶದಿಂ ತೊಡರ್ಚಿ ಕೃಣವಿಷಯವನು ಮೆಯಿಗೊಟ್ಟು ಸಂಸಾರ ವಿಷಯ ಜಲವನು ನೋಹಿಸಿದಲ್ಲಿ ಆ ಕಾಲವ್ಯಾಘ್ರನ ದುರ್ವಾಸನಾ ಭಯವು ತಾಗುವದು. ತಾಗಿದಲ್ಲಿ ಆ ದೇಹವೆಂಬ ಗುಹೆಯಲ್ಲಿರ್ದ ಕಾಲವ್ಯಾಘ್ರನು ಆವಾಗ ಬಂದು ಮುರಿದು ಹೋದೀತೋ ಎನಗೊಡೆಯನಾದ ಶ್ರೀಗುರು ಮೂರ್ತಿಯು ಆವಾಗ ಬಂದು ಈ ಮಾಯಾಪಾಶವನು ಬಿಡುಗಡೆಯ ಮಾಡಿ ತನ್ನತ್ತ ತೆಗೆದುಕೊಂಡು ಹೋದಾನೋ ಎಂದು ಚಿಂತಿಸುತ್ತಿಹನು ಆ ಜ್ಞಾನಕಲಾತ್ಮನು ಎಂಬುದೀಗ 'ಸಂಸಾರ ಸರ್ಪದಷ್ಟಾನಾಂ ತ್ರೈಲೋಕ್ಯಂ ಸಚರಾಚರಂ। ಚಂದ್ರಶೇಖರ ಪಾದಾಬ್ಜ ಸ್ಮರಣಂ ಪರಮೌಷಧಂ' ಎಂದು ಸಂಸಾರವೆಂಬ ಸಂಸೃತಿಯೆಂಬ ಅವಿಚಾರಸರ್ಪ ವಿಚಾರಹೀನವಾದ ಪನ್ನಗನೆಂಬುದು ಅರ್ಥ. ಹೀಂತು ಮಲ್ಲದೆ ಒಂದಾನೊಂದು ವಿಚಾರಸರ್ಪನು ತನ್ನ ಸೋಂಕಿದಲ್ಲಿ ತುಳಿದಲ್ಲಿ ಬಂದು ಕಚ್ಚುವದು. ಆ ವಿಚಾರ ಸರ್ಪನೇ ತನ್ನ ತಟ್ಟದೆ ಮುಟ್ಟದೆ ತುಳಿಯದೆ ಇದ್ದಲ್ಲಿ ನೆಗೆನೆಗೆದು ಬಂದು ಕಚ್ಚುವದು ಹಾಗೆ ಹೊನ್ನಾಗಬೇಕು, ಹೆಣ್ಣಾಗಬೇಕು, ಮಣ್ಣಾಗಬೇಕೆಂದು ದೆಸೆದೆಸೆ ತಿರುಗಿದರೂ ಪ್ರಾಪ್ತಿಯಾಗದು, ಒಲ್ಲೆನೆಂದು ಉಲ್ಲಂಘಿಸಿ ಬಿಡುವಂತವರುಗಳಿಗೆ ಬಂದು ಬಂದು ತೋರಿ ಕಾಡುತ್ತಿರ್ದ ಕಾರಣ, ಆದು ವಿಚಾರಹೀನವಾದ ಪನ್ನಗನು ಸರ್ವಗ್ರಾಸಗೊಂಡು ಸಮಸ್ತಂಗವನು ಹಿಡಿದುಕೊಂಡು ಇದನು ಈ ಮಾಯಾಪ್ರಪಂಚವನು ಒಮ್ಮೆ ಒಂದು ವೇಳೆ ನೋಡಿ ನಿನ್ನ ಕೃಪಾ ದೃಷ್ಟಿಯಿಂದ ನಿರೀಕ್ಷಿಸಿ ಪರಿಹರಿಸು ನಿರಹರಣವ ಮಾಡು. ನಿಮ್ಮ ನಿಮ್ಮ ಸಂಬಂಧವಾದ ಅವಿರಳ ಅಭಿನ್ನ ಸ್ವರೂಪವಾದ ಶ್ರೀಪಾದ ಐಶ್ವರ್ಯೋಪಲಕ್ಷಿತವಾದ ಚರಣಕಮಲ ಸ್ವರೂಪವಾದ ಇಷ್ಟಲಿಂಗದೊಳು ಆ ಇಷ್ಟಲಿಂಗದ ಸಕ್ರಿಯಾಚರಣೆಯಲ್ಲಿ ಮನ ಮಗ್ನನಾಗಿ ಹಲವ ನೆನೆದು ಹಲವ ಭಾವಿಸಿ ಹಲವು ಕಡೆಯಲ್ಲಿ ಚರಿಸುವಂತ ಮಾನಸವು ಅಂತರ್ಗತ ಒದಗಿ ಮತ್ತೆ ಮರಳಿ ಅವಿಕಲ್ಪ, ಸಂಕಲ್ಪ, ವಿಕಲ್ಪ ಹೀನವಾದ ಸಮಸುಖಾನಂದದೊಳಗೆ. ಅಂಗದ ಸುಖವೇ ಲಿಂಗದ ಸುಖ, ಲಿಂಗದ ಸುಖವೇ ಅಂಗದ ಸುಖವೆಂಬ ಲಿಂಗಾಂಗ ಸಮರಸದಲ್ಲಾದ ಸೌಖ್ಯದಲ್ಲಿ ಎಂದಿಹೆನೋ, ಅವಕಾಲಕ್ಕೆ ಇರುವೆನೋ, ಭವರಹಿತ ಜನ್ಮ

ಸಂಸಾರದ ಭವಣೆಯು ವಿಲಕ್ಷಣವಾದ ಪರಮೇಶ ಪ್ರಕೃತಿ ಶಕ್ತಿಗೆ ಒಡೆಯನಾದ ಪರಶಕ್ತಿಗೆ ಒಡೆಯನಾದ ಐಸದ್ಗುರುವೇ ಎಲೆ ಶ್ರೀಗುರು ಸ್ವಾಮಿಯೇ ಉಳಿಯುಮೇಶ್ವರ ಅನಂತ ತತ್ವ ಭುವನ ಬ್ರಹ್ಮಾಂಡಾದಿಗಳು ಅಳಿದಳಿದು ಹೋಗುವಲ್ಲಿ ಉಳುಮೆ ಸ್ವರೂಪವಾದ ಉಮೇಶ್ವರ ಪಾರ್ವತೀ ರಮಣ ನಾದಂಥ ಲಿಂಗವೇ, ಉತ್ಪತ್ತಿ ಸ್ಥಿತಿ ಪ್ರಳಯಕ್ಕಾಧಾರವಾದ ಪರಮ ಲಿಂಗವೇ, ಪಾಲಿಸು ರಕ್ಷಿಸು.

ಸೂತ್ರ — ಇಂತು "ಭವ ಸೂತ್ರೆ ಶಿವ ಸಿದ್ಧಾಂತ ತಂತ್ರೆ ಷಟ್ ಸ್ಥಲ ನಿರ್ಣಯೆ" ಎಂದು ಸುರುಚಿರ ಪಿಂಡಾದಿ ಜ್ಞಾನ ಶೂನ್ಯಾಂತವಾದ ಸರ್ವಾಚಾರ ಸಂಪತ್ತಿನಾಚರಣೆಯನು ಸೂಚಿಸಿ ಕೊಡುವಂತಹದೆ ಇಂತು ಈ ಪ್ರಕಾರದ ದೆಶೆಯಿಂದೆ ಸಂಸಾರ ಸಂಸೃತಿಯು ಹೇಯಮುಂ ಜಿಗುಪ್ಸೆಯನು ನಿರಸನಮುಂ ಮಾಡಿ 'ಇದಂ ನೇತಿ, ಇದಂ ನೇತಿ' ಎಂದು ತಿರಸ್ಕಾರವ ಮಾಡಿ ತನ್ನಿಜವ ತಾ ನೋಡಿಹೆನೆಂದಡೆ ತನ್ನ ಸ್ವರೂಪವನು ನಿರೀಕ್ಷಿಸಿಹೆನೆಂದರೆ ತನ್ನ ನಿಜ ಸ್ವರೂಪವಾದ ವಸ್ತುವನು ನಿರೀಕ್ಷಿಸಿಹೆನೆಂದರೆ ಇದಿರಿಟ್ಟಿಲ್ಲದೆ ಅಂತರಂಗದ ಜ್ಞಾನ ಗುರುವನೇ ಬಹಿರಂಗದಲ್ಲಿ ಕ್ರಿಯಾ ಘನ ಗುರುವಾಗಿ ಅಭಿಮುಖಾಸ್ಪದವಾಗಿ ಮಾಡಿಗಿ ಕೊಂಡಲ್ಲದೆ ತನ್ನ ಕಾಣಬಾರದು, ತನ್ನ ಸ್ವರೂಪವನು ನೋಡಬಾರದು. ಅಪೆಂತೆಂದೊಡೆ ಆದು ಹೇಗಯ್ಯ ಎಂದು ಮೋಕ್ಷ ಸ್ವರೂಪರಾಗಿ ಒಪ್ಪಲ್ಪಟ್ಟ ಸದ್ಭಕ್ತ ಶರಣ ಜನಂಗಳು ಬೆಸಗೊಂಡು ಕೇಳಿದಲ್ಲಿ ಮುಂದೆ ತ್ರಿವಿಧ ಲಿಂಗಾನುಭಾವಿಗಳಾದ ಜ್ಞಾನಿಗಳಿಗೆ ಅನ್ಯೋಪದೇಶವಾಗಿ ನಿರೂಪಿಸುತ್ತಿಹರು. ತನ್ನ ಮುಖವ ತನ್ನ ವಕ್ತ್ರವನು ತಾ ನೋಡಿಹೆನೆಂಬವನು ತಾ ನಿರೀಕ್ಷಿಸಿಹೆನೆಂಬವನು ಇದಿರ ಸಮ್ಮುಖವಾಗಿ ಕನ್ನಡಿ ಕೈಪಿಡಿಯನು ಹಿಡಿದಲ್ಲದೆ ಗ್ರಹಿಸಿದಲ್ಲದೆ ತನ್ನ ಕಾಣೆನೆಂದು ತನ್ನ ಸ್ವರೂಪವನು ನೋಡೆನೆಂದು ಕನ್ನಡಿಯನು ಉಂಟು ಮಾಡಿಕೊಂಡು ಸಂತೆ ಪೇಟೆಗೆ ಹೋಗಿ ಕಾಸ ವೀಸಾದಿಗಳನು ಕೊಟ್ಟು ಕನ್ನಡಿಯ ಕೈಪಿಡಿಯನು ಉಂಟು ಮಾಡಿಕೊಂಡು ಆಗು ಮಾಡಿಕೊಂಡು ನೋಡುವವನಂತೆ ತನ್ನ ಕಂಡು ಕಲೆ ರೂಪು ರೇಜೆ ಲಾವಣ್ಯವನು ನಿರೀಕ್ಷಿಸುವವನ ಹಾಗೆ ತನ್ನಿದಿರೆ ತನ್ನಿಟ್ಟದಿರನಲ್ಲಿ ಸಮ್ಮುಖವಾಗಿ ಗುರುವನುಂಟು ಮಾಡಿಕೊಂಡು ಅಂತರಂಗದ ಜ್ಞಾನ ಗುರುವನೆ ಬಹಿರಂಗದಲ್ಲಿ ಕ್ರಿಯಾಗುರುವಾಗಿ ಆಗು ಮಾಡಿಕೊಂಡು ಉಪಾವಸ್ಥೆಯ ಮಾಡು

ತ್ತಿರಲು "ಗುರುದೇವೋ ಮಹಾದೇವೋ ಗುರುದೇವೋ ಸದಾಶಿವಃ ಗುರು ದೇವೋ ಪರಂ ನಾಸ್ತಿ ತಸ್ಮೈ ಶ್ರೀ ಗುರವೆ ನಮಃ" ಎಂದು ಗುರು ಸ್ತೋತ್ರವ ಮಾಡುತ್ತಿರಲು ಮುಂದೆ ಪುರಸ್ಸರದಲ್ಲಿ ಗುರುಕರುಣ ಸ್ಥಲ ವಾದುದು. ಸ್ವಯಂ ಜ್ಯೋತಿ ಸ್ವರೂಪವಾದ ಆಚಾರ್ಯನು ವೇಧಾ ಮಂತ್ರ ಕ್ರಿಗಳಿಂದ ದಯಮಾಡಿದಂತಾದೇ ಗುರುಕರುಣಸ್ಥಲ, ಅಂತಪ್ಪ ಗುರುಕರುಣಸ್ಥಲವೆಂದು ಹೇಳಲಾಯಿತ್ತು.

---

(೪) ಗುರುಕರುಣಸ್ಥಲ.

ಮೂಲ— ನಾನಾ ಭವ ಭಯ ಸಂಸಾರಜ್ಞಾನ ಜಡವ ಪರಿ ಹರಿಸಿ। ಜ್ಞಾನನುಗ್ರಹ ಜನ್ಮ ಜನಿತನನು ಮಾಡಿದುದೆನ್ನಯ ಕರುಣಾ.

ಟೀಕು—ನಾನಾ ಭವಭಯಸಂಸಾರದ ಎಳ ಲಕ್ಷ ಯೋನಿ ಮುಖ ದಲ್ಲಿ ಹುಟ್ಟಿ ಹುಟ್ಟಿ ಬರುವ ಜನ್ಮ ಸಂಸಾರದೊಡನೆ ಕೂಡಿದ ಭೀತಿಯ ದೇಹ ಸಂಸಾರವೆಂಬುದು ಅರ್ಥ. ಅಂತು ಮಲ್ಲದೆ ದೂರ್ವಾ ಪಿಪೀಲಿಕಾ ಪಕ್ಷಿ "ಜಲಂತು ಜಲಜಂತುಭಿಃ ಚತು:ಸಮಾನವಾದೆಹ। ಸಪ್ತಜನ್ಮ ಪ್ರಕೀರ್ತಿತ:" ಎಂದು ಏಳು ಜನ್ಮದಲ್ಲಿ ಹುಟ್ಟಿ ಬರುವ ಜನ್ಮ ಭೀತಿಯೊಡನೆ ಕೂಡಿದ ಹೊನ್ನು ಹೆಣ್ಣು ಮಣ್ಣೆಂಬ ಸಂಸೃತಿಯು ಅಜ್ಞಾನ ಜಡವ ಪರಿಹರಿಸಿ ಮರವೆ ಜಾಡ್ಯವು ಮರವೆ ಜಾಡ್ಯವನು ತನುತ್ರಯಂ ಗಳು ಆ ತನುತ್ರಯಂಗಳ ಪ್ರಕೃತಿಯನು ನಷ್ಟವ ಮಾಡಿ ಅಲ್ಲಿ ತ್ರಿವಿಧ ಲಿಂಗಸಂಬಂಧವ ಮಾಡಿ ಕೊಟ್ಟನು. ಜ್ಞಾನಾನುಗ್ರಹ ಮಹಾಜ್ಞಾನ ಸಂಬಂಧವಾದ ತ್ರಿವಿಧಾನುಗ್ರಹದಿಂದೆ ಜನ್ಮ ಜನಿತನನು ಮಾಡಿದುದು. ಭವವಳಿದು ನಿರ್ಭವಾತ್ಮಕನು ಮಾಡಿದಂಥದು ಏನು ಎಂದರೆ ಎನ್ನಯ ಗುರು ಕರುಣ ಎನ್ನ ಸಂಬಂಧವಾದ ಶ್ರೀಗುರುನಾಥನ ಕೃಪೆಯು.

ಮೂಲ— ಕರ್ಮಜಾತ ಜನಿತೇಂದ್ರಿಯವ ದುಷ್ಕರ್ಮಂಗಳ ಪೂರ್ವಾಶ್ರಯವ ನಿರ್ಮೂಲನಂಗೆಯ್ದು ಶಿವಜ್ಞಾನದ ಮರ್ಮವ ತೋರಿದ ಗುರು ಶರಣು.

ಟೀಕು—ಕರ್ಮ ಪುಣ್ಯ ಪಾಪವೆಂಬ ಕರ್ಮದ ಸಂಚಿತ ಪ್ರಾರಬ್ಧ ಆಗಾಮಿ ಎಂಬ ಕೃತ್ಯವು ಜಾತ ಜನಿತ ಶುಕ್ರ ಶೋಣಿತ ಆತ್ಮಸಂಗ ದಿಂದೆ ದೇಹವೆತ್ತಿ ಹುಟ್ಟುವಲ್ಲಿ ಉದಯವಾದ ಇಂದ್ರಿಯದ ಜ್ಞಾನ

ಕರ್ಮೇಂದ್ರಿಯದ ದುಃಕರ್ಮಂಗಳ ಕೆಟ್ಟಂತೆ ವಿಷಯ ಕೃತ್ಯಂಗಳ ಪೂರ್ವಾ ಶ್ರಯವ ಅವರ ಮೊದಲಾದರವೇನಯ್ಯಾ ಎಂಬಲ್ಲಿ ಭವದಲ್ಲಿ ಗಮನ ನೋಟದಲ್ಲಿ ಕಾಮ ಶಬ್ದದಲ್ಲಿ ವಿರೋಧ ಇವೀಗ ಅವರ ಗುಣವು ನಿರ್ಮೂಲನಂಗೆಯ್ದು ಅವ ನಷ್ಟವ ಮಾಡಿ ಮೂಲ ನಾಶವ ಮಾಡಿ ಅವ ಸಿನೆ ಬಂಜಿನೆಯಾಗಿ ಶಿವಜ್ಞಾನದ ಬ್ರಹ್ಮಜ್ಞಾನದ ಮರ್ಮವ ತೋರಿದ ಭಾವಕ್ಕೆ ಗುರುವಾಗಿ ನೋಟಕ್ಕೆ ಜಂಗಮವಾಗಿ ಶಬ್ದಕ್ಕೆ ಮಂತ್ರವಾಗಿ ಸರ್ವಾಚಾರ ಸಂಪತ್ತಿನಾಚರಣೆ ಸ್ವರೂಪವಾದ ಸಕೀಲ ವನು ಅರುಹಿ ಕೊಟ್ಟಂಥ ಗುರುಶರಣು ಅಂತಪ್ಪ ಶ್ರೀಗುರುಮೂರ್ತಿ ಗೊಂದು ಪೇಳೆ ನಮಸ್ಕಾರವು.

ಮೂಲ— ಕರಕಮಲವ ಶಿರದೊಳು ಕರುಣದೊಳಿಟ್ಟು ದುರಿತ ದುಷ್ಕೃತ ಲಿಪಿಯನೆ ತೊಡೆದು। ನರಜನ್ಮದ ಪೂರ್ವಾಶ್ರಯ ದೋಷವ ಪರಿಹರಿಸಿದುದೆನ್ನಯ ಗುರುಕರುಣ.

ಟೀಕು— ಕರಕಮಲವ ಆ ಶ್ರೀಗುರುಮೂರ್ತಿಯು ತನ್ನ ಕರ ಕಮಲವನು ಶಿರದೊಳು ಆ ಶಿಷ್ಯನ ಮಸ್ತಕದಲ್ಲಿ ಕರುಣದೊಳು ಕೃಪೆ ಯಿಂದೆ ಇಟ್ಟು ಶಿಷ್ಯನ ಮಸ್ತಕ ಹಸ್ತವಿನ್ಯಸ್ತ ಸದ್ಗುರುವೇ ಎಂದು ಆ ಶಿಷ್ಯನ ಕಾರಣತನು ತಮೋಗುಣ ರುದ್ರನ ಲಯೋಧರ್ಮ ಕಾರ್ಮಿಕ ಮಲ ಸುಷುಪ್ತಾವಸ್ಥೆಯನು ವೇಧಾದೀಕ್ಷೆಯಿಂದೆ ಆತ್ಮನ ವರ್ತನೆಯ ನಷ್ಟವ ಮಾಡಿ ಚಿದಾತ್ಮ ಸ್ವರೂಪವನೆಯ್ದಿಸಿ ಅಲ್ಲಿ ಭಾವಲಿಂಗ ಕಳೆಯ ಪ್ರತಿಷ್ಠೆಯ ಮಾಡಿಕೊಟ್ಟನು. ದುರಿತ ಅಷ್ಟೋತ್ತರ ಶತವ್ಯಾಧಿಗಳ ದುಃ ಕೃತಪಾಪರೂಪವಾದ ಸುಕೃತವಲ್ಲದಿದ್ದಂಥ ಲಿಪಿಯನೆ ತೊಡೆದು 'ಆಯುಃ ಕರ್ಮಂ ಚ ವಿತ್ತಂ ಚ ವಿದ್ಯಾನಿಧನಮೇವ ಚ ಪಂಚೈತಾನಿ ಲಿಖಿತಾನಿ ಗರ್ಭಸ್ಥಿತಸ್ಯ ದೇಹಿನಾಂ' ಎಂದು ಇ ತರ ಪಂಚ ಲಿಖಿತವಿಗಳನೆ ಪಂಚಾ ಕ್ಷರಿ ಮಂತ್ರದಿಂದಟ್ಟಿಸಿ ಎಂಬುದು ಅರ್ಥ. ಅಂತಮಲ್ಲದೆ ಸೂಕ್ಷ್ಮತನು ಸತ್ವಗುಣ ವಿಷ್ಣುವಿನ ದುರ್ಭೋಗ ಸ್ಥಿತಿ ವಾಯಾ ಆ ಸ್ವಪ್ನಾವಸ್ಥೆಯನು ಆನಹತ ಕರ್ಣದ್ವಾರದಲ್ಲಿ ಪಂಚಾಕ್ಷರೀ ಮಂತ್ರವನುಪದೇಶಿಸಿ ಪ್ರಾಣನ ಪ್ರಕೃತಿಯ ನಷ್ಟವ ಮಾಡಿ ಚಿತ್ಪ್ರಾಣ ಸ್ವರೂಪವನೆಯ್ದಿಸಿ ಅಲ್ಲಿ ಚಿಲ್ಲಿಂ ಗವ ಕಳೆಯನು ಪ್ರತಿಷ್ಠೆಯ ಮಾಡಿಕೊಟ್ಟನು. ನರಜನ್ಮದ ಮಾನವ ಭವದ ಪೂರ್ವಾಶ್ರಯ ದೋಷವ ಮೊದಲ ಜಾತಿ ವರ್ಣ ಕುಲ ಗೋತ್ರ ನಾವು ಸೀಮೆಗಳಲ್ಲಿರ್ದು ಮಾಡುವ ಪಾಪವನು ಪರಿಹರಿಸಿದುದು ನಿರಹಂ

ರಣವ ಮಾಡಿದಂಥಾದ್ದು ಎನ್ನಯ ಗುರುಕರುಣ ಎನ್ನ ಸಂಬಂಧವಾದಂಥ ಶ್ರೀಗುರುನಾಥನ ಕೃಪೆ ಎಂಬುದು ಅರ್ಥ. ಅಂತುಮಲ್ಲದೆ ಪೂರ್ವ ಇಂದ್ರಿಯಂಗಳು ಆಶ್ರಯ ವಿಷಯಂಗಳು ದೋಷವ ಪಾಪವನು ಪರಿಹರಿಸಿದುದು ಛೇದನವ ಮಾಡಿದಂತಾದುದು ಎನ್ನಯ ಗುರುಕರುಣ ಎನ್ನ ಸಂಬಂಧವಾದಂಥ ಶ್ರೀಗುರುನಾಥನ ದಯವು.

ಮೂಲ— ಅಂಗದೊಳಗೆ ಲಿಂಗವನಿರಿಸಿ ಸರ್ವಾಂಗವ ಲಿಂಗಸ್ಥಲವೆನಿಸಿ ಮಂಗಳ ಮಯ ಪರಮ ಜ್ಞಾನದ ನಿಜದಂಗವ ತೋರಿದ ಗುರು ಶರಣು.

ಟೀಕು:— ಅಂಗದೊಳಗೆ ಆಚಾರಂಗದಲ್ಲಿ ಲಿಂಗದ ಇಷ್ಟಲಿಂಗವನು ಇರಿಸಿ ಸ್ಥಾಪ್ಯವ ಮಾಡಿ ಎಂಬುದು ಅರ್ಥ. ಅಂತುಮಲ್ಲದೆ ಸ್ಥೂಲ ತನು ರಜೋಗುಣ ಬ್ರಹ್ಮನುತ್ಪತ್ತಿ ಆಣವ ಮಲ ಜಾಗ್ರಾವಸ್ಥೆಯನು ನಷ್ಟವ ಮಾಡಿ ಪವಿತ್ರ ಭೂಮಿಯಲ್ಲಿ ಪುರುಷ ಪ್ರಮಾಣವ ಶೋಧಿಸಿ ನವರತ್ನ ಪಂಚಲೋಹ ಮಂತ್ರ ತಗಡನು ನಿಕ್ಷೇಪವವಾಡಿ ಭೂಶುದ್ಧಿಯಾದ ನಂತರದೊಳ್ ಅಂತದರ ಮೇಲೆ ಆಚಾರ್ಯನ ಗರ್ದುಗೆಯಂ ನಿರ್ಮಿಸಿ ವೃಷಭ ಮಲಗುವನಿತು ಭೂ ಸಮ್ಮಾರ್ಜನಂಗೆಯ್ದು ಪಂಚವರ್ಣಗೆಯ ಬಣ್ಣದ ಶುಭ್ರ ವಸ್ತ್ರ ವರ್ಣದ ಪ್ರಭಾವಳಿ ತಳಿರು ಇಕ್ಷುದಂಡ ರಂಭಾಸ್ತಂಭ ಝಲ್ಲರಿ ವಲ್ಲರಿ ಪುಷ್ಪ ರುದ್ರ ನೇತ್ರ ಮೂಲ್ಯಾದಿಗಳಿಂದ ದೀಕ್ಷಾಮಂಟಪವಂ ರಚಿಸಿ ಅಂತದರೊಳ್ ಪುನರಪಿಯಾಗಿ ಷಡುಸಮ್ಮಾರ್ಜನಂಗೆಯ್ದು ರಂಗವಲ್ಲಿಯ ರಚಿಸಿ ಕಲಶಚತುಷ್ಟಯವ ನಾಲ್ಕು ದಿಕ್ಕಿನೊಳಿರಿಸಿ ಬಳಿಕ ಗುರುಕಳಸ ಮಧ್ಯಸ್ಥಾಪನಂ ಮಾಡಿ ವಿಳಸ ವಸ್ತ್ರ ಪಂಚರತ್ನ ಕನಕ ಪಂಚ ಪಲ್ಲವಗಳಿರಿಸಿ ನಾಲ್ವಾಚಾರ್ಯ ಸಹವಾಗಿ ಗಣಸಾಕ್ಷಿಯಾಗಿ ಕ್ರಿಯಾದೀಕ್ಷೆಯಿಂದೆ ಅಂಗದ ವರ್ತನೆಯ ನಷ್ಟವ ಮಾಡಿ ಆಚಾರಂಗ ಸ್ವರೂಪನೆಯ್ದಿಸಿ ಅಲ್ಲಿ ಇಷ್ಟ ಲಿಂಗದ ಕಳೆಯನು ಪ್ರತಿಷ್ಠೆಯ ಮಾಡಿಕೊಟ್ಟನು ಎಂಬುದೀಗ ಸರ್ವಾಂಗವ ತನುತ್ರಯ ಷಡಿಂದ್ರಿಯ ಮೂವತ್ತಾರು ಪ್ರತ್ಯೇಕ ತತ್ವಗಳೆಲ್ಲವು ಲಿಂಗಸ್ಥಲವೆನಿಸಿ ತ್ರಿವಿಧ ಷಡ್ವಿಧ ನವವಿಧ ಮೂವತ್ತಾರು ಇನ್ನೂರು ಹದಿನಾರು ಪರಿಪೂರ್ಣಲಿಂಗಸ್ಥಲವೆಂದೆನಿಸಿ ಅಂತುಮಲ್ಲದೆ ತ್ರಿವಿಧಾಂಗದಲ್ಲಿ ತ್ರಿವಿಧ ಲಿಂಗಸ್ಥಲ ಷಡ್ವಿಧಾಂಗದಲ್ಲಿ ಷಡ್ವಿಧ ಲಿಂಗಸ್ಥಲ ೩೬ ಅಂಗದಲ್ಲಿ ೩೬ ಲಿಂಗಸ್ಥಲ ಇನ್ನೂರುಹದಿನಾರಂಗದಲ್ಲಿ ಇನ್ನೂರು ಹದಿನಾರು ಲಿಂಗಸ್ಥಲ ಪರಿಪೂರ್ಣಾಂಗದಲ್ಲಿ ಪರಿ

ಹರನಾ ತ್ರಿಶೂಲದಿಂದಿರಿನೆತ್ತಿ ನೆಗೆಪುತಂ
ಒಳಹೊಕ್ಕು ಬರುತಿರಲು ನಾರಾಯಣಂ ಕಂಡು
ಇಳಿಪುವೇಂ ಪಾತ್ರೆಯನೆನುತ್ತಂ ಮನಂಗೊಂಡು
ತನ್ನ ಶಿರದರುಣಜಲಮುಂ ಪಾತ್ರೆಯೊಳ್ಕರೆಯೆ
ತನ್ನಿಂದ ನೂರ್ಮಡಿಸಿ ಪಾತ್ರೆ ಬೆಳದತಿ ಮೆರೆಯೆ
ಅಂಗದೋಳ್ಸಾರವರತಡಿಗೆರಗೆ ನೋಡುತಂ
ಅಂಗಜಹರಂ ಕರುಣದಿಂದೆ ಪಿಡಿದೆತ್ತುತಂ
ನಡೆದನೆಂದೀ ಪುರಾಣಂ ನೆರೆದು ಸಾರುತಿರೆ
ಒಡೆಯನೀಶ್ವರನೆಂದು ಸೊಡವರ್ಗಿಡಿದು ತೋರುತಿರೆ
ಅದರಿಂದ ಪಂಪಾವಿರೂಪಾಕ್ಷನೇ ಘನಂ
ಮದನಹರನೆಮ್ಮಯ ವಿರೂಪಾಕ್ಷನೇ ಘನಂ

ಮತ್ತಂ ವಿಚಾರಿಪೊಡೆ ಹರಿ ಸಹಸ್ರಾಬ್ಜದಿಂ
ದತ್ತಿತ್ತ ಜಲಿಸದರ್ಚಿಸುತಮಿರೆ ಸತ್ಯದಿಂ
ದೊಂದು ಹೂ ಕುಂದಿದಡೆ ತನ್ನ ನಯನಾಬ್ಜಮಂ
ತಂದಿಕ್ಕಿ ಹೋದ ಹೂವಿಂಗೆ ಹೊಸ ಕಮಳಮುಂ
ಚಕ್ರಮುಂ ಹರನಿತ್ತನಂದಿಂದ ಮೊದಲಾಗಿ
ಚಕ್ರಧರನಾದನೀ ಭೂತಳಕೆ ಪೆಸರಾಗಿ
ಇಂತೆಮ್ಮ ಪಂಪಾ ವಿರೂಪಾಕ್ಷನೇ ಘನಂ
ಅಂತ್ಯಕಾಲದಿ ರುದ್ರಭೂಮಿಗೊಯ್ಯೆಂದೆಂಬ
ಭ್ರಾಂತೇಕೆ ರುದ್ರಗಣಂಗಳಿಗಿಕ್ಕಿ ಮುನ್ನೆಂಬ
ಪಿತೃಕೃತ್ಯದಲಿ ವಿಶ್ವೇದೇವ ಮೊದಲೆಂತೆಂಬ
ಪಿತೃತೃಪ್ತಿ ರುದ್ರಪಾದದತ್ತಮೆಂತೆಂಬ
ಉಪನಯನ ವೈವಾಹಕಂ ನಂದಿಮುಖವೆಂಬ
ಸುಪಥವದು ಸರ್ವಕ್ಕೆ ಶಾಶ್ವತಂ ಶಿವನೆಂಬ
ಇಂತು ಸರ್ವೋರ್ವಿಯೊಳು ಶಿವ ಸಮಯವೇ ಘನಂ
ಇಂತು ತ್ರಿಪುರಾಂತಕನ ಸಾಮರ್ಥ್ಯವೇ ಘನಂ

ದೇವಾಲಯದೊಳು ಹರಿ ಪರಿವಾರವಾಗಿರ್ಪ
ನಾನಾರ್ಥದಿಂ ಹರನ ಕಿಂಕರಂ ತಾನಪ್ಪ
ಆಪನಿಯೋಳ್ದಳಿ ದಿವ್ಯ ಉಳಿದ ದೇವರೊಳಿಲ್ಲ

ರಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರೂಪಾಕ್ಷ
ಲಾಲಿಸು ವಿರೂಪಾಕ್ಷ ಪಾಲಿಸು ವಿರೂಪಾಕ್ಷ
ದಯೆಗೆಯ್ ವಿರೂಪಾಕ್ಷ ಭಯಹರ ವಿರೂಪಾಕ್ಷ
ಜಯಜಯ ವಿರೂಪಾಕ್ಷ ಜಯತು ಜಯ ನಮಸ್ತೇನ್ನಮಃ

ಕಂದಃ—

ಅವನ ಸತಿ ಜಗ ಪಾವನ।
ಅವನ ವಾಹನದಿ ಜಗವು ಜೀವಿಸುತಿರ್ಪುದು।
ಅವನ ಕಣ್ಣಿಂ ಕಾಂಬುದು।
ದೇವ ವಿರೂಪಾಕ್ಷಗಲ್ಲದಿತರರ್ಗುಂಟೇ।

ನೀರಭದ್ರ ದೇವರ ರಗಳೆ

ಕಂದಃ—

ಪಿರಿದುಂ ಬಗೆಯದೆ ದಕ್ಷಾ
ಧ್ವರಮಂ ನಿರ್ಧೂಮಧಾಮಮಂ ಮಾಡಿ ಸುಧಾ
ಕರಧರನ ವಿರೂಪಾಕ್ಷನ
ಚರಣವನೈತಂದು ವೀರಭದ್ರಂಕಂಡಂ

ರಗಳೆ

ಶ್ರೀರಜತಗಿರಿಯೊಳುಪ್ಪವ ಸಭಾನಿಳಯದೊಳು
ನಾರಾರಿ ಹಂಪೆಯ ವಿರೂಪಾಕ್ಷನೊಪ್ಪದೊಳು
ಭೂತೇಶನಪ್ರತಿಮರೂಪನೊಪ್ಪುತ್ತಿರ್ದ
ನಾತನೊಡ್ಡೋಲಗವನೇನೆಂಬೆನೆಸೆದಿರ್ದ

ಲಕ್ಷ್ಮೀಸರಸ್ವತಿಗಳಂದೊಸೆದು ಚಾಮರವನಿಕ್ಕೆ
ಸುಕರದಿಂದ್ರಾಣಿ ನಲಿದು ಸೀಗುರಿಯಿಕ್ಕೆ
ರಂಭೆಯೂರ್ವಶಿತಿಲೋತ್ತಮೆಮಂಜುಘೋಷೆಯರು
ಶಂಭುವಿನ ಕೆಲಬಲದೊಳುಪ್ಪವತಿನೀರೆಯರು
ತರದಿಂದೀ ವಾರವನಿತೆಯರ್ಕುಳಿರಲು

ಶಿವನಮಯವೇ ಶರಣು ಪರಸಮಯಿಗಳಿಗೆಲ್ಲ
ಎಲ್ಲ ದೇವರ್ಗೆ ತಂತಮ್ಮ ಶಿರದೊಳು ಪೂಜೆ
ಇಲ್ಲಿ ಮದನಾರಿಗರರಿ ಲಿಂಗದೊಳು ಪೂಜೆ
ಇಂತುಂ ವಿರೂಪಾಕ್ಷನೆ ದೇವರೊಳ್ ಘನಂ
ಎಂತುಂ ಮಹಾದೇವ ವೇದದೋಳ್ ಘನಂ

ಮಾತೆ ಪಾರ್ವತಿ ತಂದೆ ಶಿವನಲ್ಲದಿನ್ನಿಲ್ಲ
ನತಕ್ಕೆ ಬರಿದೆ ಗಳಹಲ್ಬೇಡ ಮತ್ತಿಲ್ಲ
ಅದಕೆ ಕರುಸೆಲ್ಲರ್ಗೆ ಲಿಂಗಾಂಕಿತಂ ನೋಡ
ಅದಕೆ ಕುರುಹೆಲ್ಲರ್ಗೆ ಶಕ್ತ್ಯಾಯಂತಿಕಂ ನೋಡ
ಹಲವು ಮಾತೇಕೆ ವಶವೆ ಶಿವನುನ್ನತಂ
ಎಲೆಲೆ ವೇದಾಗಮಪ್ರತತಿಗತ್ಯರ್ಜಿತಂ
ವೇದದೊಳು ಶಾಸ್ತ್ರದೊಳು ನಾದಮಯನೇ ಘನಂ
ವಾದದೊಳು ವಚನದೊಳು ವೇದಮಯನೇ ಘನಂ
ಆಗಮ ಪುರಾಣದೊಳು ನಾಗಕಟಕನೇ ಘನಂ
ಚಾಗದೊಳು ಚರಿತದೊಳು ಚಂದ್ರಧರನೇ ಘನಂ
ಮಂತ್ರದೊಳು ತಂತ್ರದೊಳು ಮಂತ್ರಮಯನೇ ಘನಂ
ಯಂತ್ರದೊಳು ಯಾಗದೊಳು ಸ್ವತಂತ್ರನೇ ಘನಂ
ಅಂತಿಂತುವೆಂತುವುಂ ವಿರೂಪಾಕ್ಷನೆ ಘನಂ
ಕಂತುಹರನೆಮ್ಮಯ ವಿರೂಪಾಕ್ಷನೆ ಘನಂ

ಎಂದಿಂತು ಪೇಳ್ದಪೇಂ ಮಹಿಮಾವಲಂಬಮುಂ
ಇಂದುಧರ ನಿಮ್ಮ ಘನಸಂದೋಹಸಾಮರ್ಥ್ಯಮುಂ
ಹರಿ ಬೊಮ್ಮರರಸಿ ಕಾಣರು ದೇವ ಎನ್ನಳವೆ
ನೆರೆದ ವೇದಪ್ರಕರವರಯವೆನಲೆನ್ನಳವೆ
ಸ್ತುತಿಯಿಸುವ ನೆಪದಿಂದ ನಿಂದಿಸಿದನೆನಬೇಡ
ಮತಿಯು ಪವಣಿಂಗೆಯಾಂ ಮಹಿಮನೆಂದೆನಬೇಡ
ಅದಱಿನ್ನಯ ತಪ್ಪನೊಪ್ಪವಿಡುವುದು ತಂದೆ
ಆದಿಯ ಪುರಾತನರ ತೊತ್ತೆಂಬುದೆಲೆ ತಂದೆ
ದೇವ ದೇವರ ಗತಿಯೆ ದೇವ ದೇವರ ಮತಿಯೆ
ದೇವ ದೇವರ ಮತಿಯೆ ದೇವ ದೇವರ ಪತಿಯೆ

ಸುರನಾರಿಯರ್ಘಮುಚಿತಾಸನದೊಳೊಪ್ಪಿರಲು
ಕರಿವದನನುಂ ತಾರಕಾರಿಯುಂ ಬಂದಿರಲು
ಸರಸಿಜಭವಂ ಸರಸಿಜೋದರಂ ಬಂದಿರಲು
ಕೆಲಬಲದೊಳೊಪ್ಪದಿಂ ಅಮರಗಣನಾಯಕರು
ಫಲಿಗಳಪ್ರತಿಮರತಿರಥರುಗ್ರನಾಯಕರು
ಸಚರಾಚರವನಳಿವ ಮಾಡುವಾ ನಾಯಕರು
ಅಚಲರಭವರ್ತಮತಮಗೆ ಮುಖ್ಯರತಿಶಯರು
ಕಂತುಹರನಾಪ್ತಪರಿವಾರವೆಂದೆನಿಪರ್ಕ
ಸಂತತಂ ಪರಮಂಗೆ ಪರಮ ಬಂಧುಗಳಪ್ಪ
ನೆನೆವ ಮನವೀವ ಕೈನಿಡಿವ ಕೈದುಗಳೆನಿಪ
ತನಿನೇಹದಿಂ ನೆರೆವ ಕಡು ಬಾಕುಳಿಗಳೆನಿಪ
ಪುರವಂ ಕ್ಷಣಾರ್ಧದೊಳ್ಸುಟ್ಟ ಶರಣರ್ಕೆಲರು
ರರಭರೂಪಾಗಿ ತಲೆದಂದ ಶರಣರ್ಕೆಲರು
ಲೀಲೆಯಿಂ ಮನಸಿಜನನುರುಪಿದರ್ಕೆಲರಲ್ಲಿ
ಕಾಲನಂ ಕೋಪದಿಂ ಸುಟ್ಟವರ್ಕೆಲರಲ್ಲಿ
ಸಿಡಿಲ ಬಳಗಮನೊಂದುಗೂಡಿ ಗಡಣಿಸಿದಂತೆ
ಮೃಡನತಿಬಲಂ ಬೇರೆ ಬೇರೆ ರೂಪಾದಂತೆ
ಕೆಲರೆ ಸಾಲೋಕ್ಯದರ್ಕೆಲರೆ ಸಾಮೀಪ್ಯದರ್
ಕೆಲರೆ ಸಾರೂಪ್ಯದರ್ಕೆಲರೆ ಸಾಯುಜ್ಯದರ್
ಹೊಗಳಲೆನ್ನಳವೆ ಗುರು ವಿರುಪಾಕ್ಷನಣುಗರಂ
ಒಗೆಗಗೋಚರವೆನಿಪ ಶಿವಲಿಂಗಸೊಬಗರಂ
ಇಂತೆನೆವ ನಂದೀಶ್ವರಾದಿ ಗಣತತಿ ಬಂದು
ಕಂತುಹರನಿಕ್ಕೆಲದೊಳೆಸೆಯೆ ನಲವಿಂ ನಿಂದು
ಭೃಗುವು ದೂರ್ವಾಸದಧೀಚಿಕಶ್ಯಪರೆಂಬ
ವಿಗೆ ಭಗೀರಥ ಜಹ್ನು ಜಮದಗ್ನಿ ಶುಕರೆಂಬ
ಜೈಮಿನಿವಶಿಷ್ಯವಾರ್ಕಂಡೇಯರೆಂದೆಂಬ
ರೋಮಜನು ಜಾಬಾಲ ಗಾರ್ಗ್ಯ ಗೌತಮರೆಂಬ
ತರದಳೊಪ್ಪುವ ರಾಜರುಷಿ ದೇವರುಷಿಗಳಿಂ
ಪರಮ ಕಾರಣಿಕರೆನಿಪಾ ಬ್ರಹ್ಮರುಷಿಗಳಿಂ

ಸುರಪ ಶಿಖಿಯಮ ನೈಋತಾಪ್ಪತಿಗಳೆಂಬರಿಂ
ನರವಾಹನೀಶಾನರೆಂಬ ದಿಕ್ಪಾಲರಿಂ
ಇರೆ ಸುರರು ದನುಜ ವಿದ್ಯಾಧರರ ವೀಥಿಗಳು
ನೆರೆದ ಗಂಧರ್ವರ ಫಣೀಶ್ವರರ ಪಂಙ್ತಿಗಳು
ಮೆರೆಯಲಜಕೋಟಿ ಪಂಕಜನಾಭ ಕೋಟಿಗಳು
ತುರುಗಿ ರವಿಕೋಟಿಗಳು ಶೀತಾಂಶುಕೋಟಿಗಳು
ಎಸೆಪುತಿರೆ ಸಾಲಿಟ್ಟ ಮುಕುಟಂಗಳೊಂದು ದೆಸೆ
ಒಸೆದೊಸೆದು ಕೈಮುಗಿವ ಯಕ್ಷತತಿಯೊಂದು ದೆಸೆ
ಕಿವಿಗುಡುವದೆಮಗೆಂಬ ನಾದಂಗಳೊಂದು ದೆಸೆ
ತವಕದಿಂ ತುತಿಯಿಸುವ ವೇದಂಗಳೊಂದು ದೆಸೆ
ಧರೆ ಜಲಂ ಸಪ್ತಾರ್ಚಿ ವಾಯುವಾಕಾಶದಿಂ
ಖರಕಿರಣ ಹಿಮಕಿರಣ ಆತ್ಮಸಂತಾನದಿಂ
ಬೆಸವೇಳ್ವುದಂ ಬಯಸುವಣಿವಾದಿ ನಿಕರದಿಂ
ಬೆಸಸು ಬೆಸಸೆಮಗೆಂದೆಂಬ ಸಾಮರ್ಥ್ಯಮೊತ್ತದಿಂ
ಪವಣಿಸುವಡರಿದೆನುತಿರ್ಪ ಶಾಸ್ತ್ರಂಗಳಿಂ
ತಮ ತಮಗೆ ಹೊಗಳುತೊಪ್ಪುವ ಪುರಾಣಂಗಳಿಂ
ಮನಂದಿಂ ನಿಂದಿರ್ಪ ತರ್ಕಸಂದೋಹದಿಂ
ಧ್ಯಾನಿಸುತ್ತಿರ್ಪ ಸಕಲಾಗಮವ್ಯೂಹದಿಂ
ಹತ್ತಿ ಸಾರ್ದೋಲಗಿಪ ಚೆಲ್ವುಗಳ ಮೊತ್ತದಿಂ
ಮುತ್ತಿ ಬಂದೋಲಗಿಪ ಸಂಪನ್ನಿಕಾಯದಿಂ
ತರತರಂಗೊಂಡಿರ್ಪ ಪುಣ್ಯ ಸಂತಾನದಿಂ
ನೆರೆನೆರೆದು ಬರುತಿರ್ಪ ಬಯಕೆಗಳ ಮೊತ್ತದಿಂ
ನಲಿದು ಬಂದೋಲಗಿಪ ಸಕಲ ಸುಖನಿಕರದಿಂ
ಸಲೆ ಕೈಮುಗಿಯುತಿರ್ಪ ವೀರಗಣನಿವಹದಿಂ
ಕಡೆ ಕಡೆಯೊಳೋಲಗಿಪ ಜಸವೆಣ್ಗಳಿಕ್ಕೆಯಿಂ
ಬಿಡದೆ ತೋಳ್ಗಳನೋಲಗಿರ್ಪ ಜಯತತಿಗಳಿಂ
ಚರಣಮುಂ ಪಿಡಿದಿರ್ಪ ಮಂಗಳದ ಪಂಙ್ತಿಯಿಂ
ಹರವರಿಯೊಳುರಿವ ತೇಜಂಗಳಿಕ್ಕೆಯಿಂ
ಕಡೆಗಂಗಳಂ ಬಯಸುತಿರ್ಪ ಕಾರುಣ್ಯದಿಂ

ಮೃಡನ ವರವಂ ಪಾರ್ದು ನಿಂದಿರ್ಪ ಭಾಗ್ಯದಿಂ
ಎನಗೆ ತನಗೆನುತಿರ್ಪ ಭೋಗಂಗಳೊಗ್ಗಿನಿಂ
ತನತನಗೆ ನಲಿವ ಗಣಪದವಿಗಳಗುರ್ವಿನಿಂ
ನಿರ್ವಿಕಾರದೊಳಿರ್ಪ ಶಾಂತಿಗಳ ಕೊರ್ವಿನಿಂ
ಶರ್ವನಂ ಬಯಸುತಿರುತಿರ್ಪ ಮುಂಗಳದಗುರ್ವಿನಿಂ
ಬೆಳಗನುಗುಳುತ್ತಿರ್ದ ಕಾಂತಿಗಳ ಬಳಗದಿಂ
ತಿಳಿಯಲೆಂದಿರ್ದವಿಳ ವಿದ್ಯಾಸಮೂಹದಿಂ
ಸಾರೆ ಬಂದೋಲಗಿಸಲೆಂದಿರ್ದ ನೃತ್ಯದಿಂ
ಕಾರುಣ್ಯವುಂ ಬಯಸಿ ನಿಂದಿರ್ದ ಸತ್ಯದಿಂ
ಇಂತು ಸಕಲೈಶ್ವರ್ಯದುನ್ನತವನೊಳಕೊಂಡ
ನಂತಂತೆ ಹೊಗಳಲಾರದ ಘನವನೊಳಕೊಂಡ
ದೆಂತೆಂತು ಉಪಮೆಗಗ್ಗಳವಾದುದಾಸ್ಥಾನ
ವಂತಂತೆ ಮೆರೆದುದು ವಿರೂಪಾಕ್ಷನಾಸ್ಥಾನ
ವಾ ಸಮಯದೊಳು ದಂಡಧರರೆಂಬ ಭಟರಲ್ಲಿ
ವಾಸವನೆ ನುಡಿ ಬೇಡ ಸಂತವಿರು ನೀನಿಲ್ಲಿ
ಕಾಯ್ವನುಡುಗಿನ್ನಿ ಹೆರೆಸಾರ್ಕಾಲ ಕೌಣಪನೆ
ಸೈಪಿನೊಳಿರಬ್ದಿಪತಿ ಸುಳಿಯದಿರ್ಮಾರುತನೆ
ತೆರಹುಗುಡು ಗಂಧರ್ವರಾಜ ಕಿನ್ನರಪತಿಗೆ
ಬರಿದೆ ಗಳಪದಿರುಎಲವೋ ಬೊಮ್ಮನಿನ್ನತಿಗೆ
ಬಿನ್ನವಿಸು ಮನ್ನಹೆಯ ವನಜಾಕ್ಷ ಕೈಮುಗಿದು
ನಿನ್ನ ಹೆಡೆಗಳನುಡುಗಿ ನಿಲ್ಲಹಿಪ ಹೆರೆ ತೆಗೆದು
ಕಳಕಳವಿದೇಕೆ ಮಾಣ್ಮಾಣು ಹೋ ಹೋ ಎನುತೆ
ಅಳವಲ್ಲ ಸಂತೈಸಬಾರದಾಹಾ ಎನುತೆ
ಇವನಾವ ಬೊಮ್ಮಾಂಡದಬ್ಜಜಂ ಹೇಳಿಂದು
ಇವನಾವ ಬೊಮ್ಮಾಂಡದದ್ವೀದರನುಮೆಂದು
ಅವಾವ ಸ್ವರ್ಗಂಗಳಿಂದ್ರರ್ಕಳವರೆಂದು
ಅವಾವ ಲೋಕದವರೀ ಮಹಾ ನೃಪರೆಂದು-
ಇಂತು ಪಡಿಯರ್ತವ್ಯೋಳ್ನುಡಿವ ಸಮಯದೊಳು
ಮುಂತೆ ತುಂಬುರನಾರದರ್ಮಧ್ಯ ರಂಗದೊಳು

ನವವೀಣೆಯಂ ಬಹುಸುಗತಿ ಸುಸ್ವರಂಬಡೆಯೆ
ವಿವಿಧ ರಾಗಂಗಳನ್ನ ಶಕ್ತಿಗಳ್ತಡೆಯೆ
ಕೆಯ್ಯ ಮನವಾದ ತೆರದಿಂ ಬಾರಿಸುತ್ತಮಿರೆ
ಸುಯ್ಗಳಂ ಮುರಿದೋಲಗಂ ನಾಡೆ ಕೇಳುತಿರೆ
ಇಂತು ತುಂಬುರನಾರದರ್ವಿರೂಪಾಕ್ಷನಂ
ಸಂತಸದೊಳೋಲಾಡಿಸುತ್ತ ವಿಷಮಾಕ್ಷನಂ
ಕೇಳಿದ ನಂತರಂ ಕಿನ್ನರರ್ಸರ್ವಿಗೂಡಿ
ಮೇಳೈಸುತಾರೈದಿ ಸಭೆಗೆ ಹರುಷಂ ಮೂಡೆ
ಮನದೊಳಗೆ ಕಾಂತಿಯಂ ಸರಿಗೆದೆಗವಂದದಿಂ
ಕೊನೆ ಮಿಂಚಿನೋಳ್ಮಾಂತಿಲತೆ ಹುಟ್ಟಿದಂದದಿಂ
ಬೋಳೈಸಿ ರಾಗಂಗಳಂ ಕರೆವ ಮಾಳ್ಕೆಯಿಂ
ಮೇಳೈಸಿ ನೆರೆದ ಸಭೆ ಕರುವಿಟ್ಟ ಮಾಳ್ಕೆಯಿಂ
ಕಿವಿಯೊಡ್ಡಿ ಕೇಳುತಿರೆ ಚಿತ್ತಮುಂ ಮಿಗೆ ಸಲಿಸಿ
ಕಿವಿಯ ಬಳಸಂದುವಿಂದ್ರಿಯಚಯಂ ತಲ್ಲಣಿಸಿ
ಸಭೆಯೊಂದೆ ಮನವಾದ ಮಾಳ್ಕೆಯಿಂ ಕೇಳುತಿರೆ
ಅಭವನಂ ಸುಖದ ಮರಹಲ್ಲಲ್ಲಿ ನೆರೆವುತಿರೆ
ಅಂತು ಮುನ್ನಿನ ಪರಿಯೊಳಿರ್ದುದಾ ದೇವಸಭೆ
ಅಂತಿರ್ದುದಾಗಳೆವೆ ಮಿಡುಕದಾ ಪರಮ ಸಭೆ
ಇಂತು ಸಭೆಯಂ ಸುಖದ ಸೈವೆರಗಿನೊಳಗಿಟ್ಟ
ಸಂತಸದಿ ನಾದರಸದೊಳ್ಚಿತ್ತಮುಂ ಸಲಿಸಿ
ರಾಗದಿಂ ಕಿನ್ನರರ್ಪಾಡಿ ತಂದುಂ ಮೆರೆಯೆ
ರಾಗಂಗಳಂದಮೃತನಾದಂಗಳಂ ಕರೆಯೆ
ತನತನಗೆಸೆವ ಮುಧ್ಯಮಾದಿ ಭೂಪಾಳಂಗ
ಳನು ರಾಗದೋಡೆ ದೇಶಾಕ್ಷಿ ಪಲಮಂಜರಿಗ
ಳಾದಿಯಾಗಿರ್ದ ಬಹು ರಾಗಂಗಳಲ್ಲಲ್ಲಿ
ನಾದದಿಂ ಕೇಳಿಸಿ ಹರಂ ಸುಖದೊಳಿರಲಲ್ಲಿ
ನಾದದುನ್ಮತ್ತವಾದುದು ದೇವ ಸಭೆಯೆಲ್ಲ
ನಾದಮೂರ್ತಿ ಎನಿಸಿದನಂದು ಗಿರಿಜೆಯ ನಲ್ಲ
ಏನೆಂಬೆನೋಲಗಂ ಜೊಮ್ಮಿನೊಳಗಿರ್ದಂತೆ

ಜೀನ ಸರಿ ಮುಳಿಗೆ ನಾಡೆ ನಾಂದಿರ್ದಂತೆ
ರಾಗರಸದೊಳಗೆ ಮುಳುಗಿರ್ದುದೊಡ್ಡೋಲಗಂ
ರಾಗದಿಂದಿರ್ದನಭವಂ ಸುಖದ ಮೂಲಿಗಂ

ಇರಲಿತ್ತ ಹಂಸೆ ಚಕ್ರಂ ಸುಖದೊಳೊಲಿದಿರ್ಪ
ಸರಸಿಗೆ ಬಕಂ ನೋಡಲೆಂದು ಮೆಲ್ಲನೆ ಬರ್ಪ
ತೆರದಿಂದೆ ಬಂದು ದಕ್ಷಂ ಸಭೆಯ ನಡುವೆ ನಿಲೆ
ಕರೆಗೊರಲನವನನೀಕ್ಷಿಸದೆ ಸುಖದಿಂದೆ ನಿಲೆ
ಮರೆದು ಕೇಳುತ್ತಮಿರೆ ಮುನ್ನಿಸನಳಿಯನೆಂದು
ಪೊರಮಟ್ಟನಲ್ಲಿಂದೆ ಮುಳಿದು ನಿಂದಿಸುತಂದು
ಪರಮಾಣು ಮೇರುವಿನ ಹೆಂಪಿಂಗೆ ಮುಳಿವಂತೆ
ಸರಸಿ ಸಾಗರದ ಗಾಂಭೀರ್ಯಕ್ಕೆ ಮುಳಿವಂತೆ
ತರಗೆಲೆ ದವಾನಲನ ಕಾಯ್ಪಿಂಗೆ ಮುಳಿವಂತೆ
ಗರುಕೆ ಕಲ್ಪದ್ರುಮದ ಸಂಪದಕೆ ಮುಳಿವಂತೆ
ಇರದೆ ಮಿಂಚುಂಬುಳು ದಿನೇಶಂಗೆ ಮುಳಿವಂತೆ
ಪುರಹರಂಗಕಟಕಟ ದಕ್ಷ ಮುಳಿಯುತ್ತಿಂತೆ
ಬರುತೆಂದನೆನ್ನನಪಮಾನಂಗೆಡಿಸಿದಂತವನ
ನಿರದೆ ಭಂಗಿಸುವೆ ನಾನೈದೆ ಹೆರೆಸೂಡಿದನ
ನೆಂದು ತನ್ನಾಶ್ರಮಕೆ ಗಳಗಳನೆ ನಡೆತಂದು
ನೊಂದು ನುಡಿದಂ ವಿಶ್ವಕರ್ಮಂಗೆ ನೀನೊಂದು
ಯಾಗಮಂಟಪವನೆತ್ತೆಂದು ಪೇಳ್ದನಿತಕ್ಕೆ

ಬೇಗದಿಂ ನೆಗೆದುದಾಗಳೆ ಭೂಮಿವಳೆಯಕ್ಕೆ
ಭೂಮಿಗೆ ವಿಚಿತ್ರವಾದುದು ಮಂಟಪಂ ನೋಡ
ಹೋಮಕುಂಡಂ ಸುಡುವ ಮುಳ್ಳೆಳ್ಳುಗಳ್ಕೊಡೆ
ನಡುವೆ ಯೂಪಸ್ತಂಭವಿಂಬಿನಿಂ ಮೆರೆವುತಿರೆ
ಕೊಡದಿಂದ ತಮ ತಮಗೆ ನವಘೃತವನಡುಕುತಿರೆ
ಕರೆಸಿದಂ ಪೆಣ್ಮಕ್ಕಳಳಿಯಂದಿರಂ ಕೂಡೆ
ಬರಿಸಿದಂ ಹರಿಯಜಪುರಂದರರುಮಂ ಕೂಡೆ
ಧಿಗಧೀಶರಂ ತ್ರಿದಶರಂ ದಿವ್ಯ ಮುನಿಗಳಂ

ಸೊಡ್ಡಳ ಬಾಚರಸನ ವಚನಗಳು.

ಸೊಡ್ಡಳ ಬಾಚರಸನ ವಚನಗಳು.

೧ ಭಕ್ತಸ್ಥಲ.

(೧) ಒಂದು ಇಂದ್ರಿಯ ಮೊದಲಾದುದಕ್ಕೆ ಕಡೆ ಇಲ್ಲ. ಕುಂಜರನು ಸ್ಪರ್ಶನೇಂದ್ರಿಯದ ಬಳಿಸಂದು, ಫಣಿ ರಾಗರಸದಿಂದ, ಭ್ರಮರ ಸೌರಭ್ಯದಿಂದ, ಮತ್ಸ್ಯ ರುಚಿಯಿಂದ, ಪತಂಗ ರೂಪಿಂದ, ಒಂದೊಂದು ವಿಷಯದಲ್ಲಿ ಒಂದೊಂದು ಪ್ರಾಣಿಗಳು ನೊಂದು ಬಂಧನಕ್ಕೆ ಬಂದುದನರಿಯೆಯಾ ? ಪಂಚೇಂದ್ರಿಯದ ಬೆಂಬಳಿಯಲ್ಲಿ ಹರಿವ ಮನುಜರ ಕೊಂದು ಕೂಗದೇ ಮಾಯೆ ದೇವರಾಯ ಸೊಡ್ಡಳ ನೋಡೆ ?

ಭಾವಃ— ವಚನಕಾರರು ಇಂದ್ರಿಯಗಳನ್ನು ಅಂಕಿತದಲ್ಲಿಟ್ಟುಕೊಳ್ಳಬೇಕೆಂದು ಯಾವಾಗಲೂ ಬೋಧಿಸುವದುಂಟು. ಈ ವಚನದಲ್ಲಿ ವಚನಕಾರನು ಆನೆ, ಸರ್ಪ, ಭ್ರಮರ, ಮೀನು, ಪಾತರಗಿತ್ತಿ ಇವುಗಳ ಉದಾಹರಣೆಗಳನ್ನು ಕೊಟ್ಟು ಅವುಗಳ ಒಂದೊಂದು ಇಂದ್ರಿಯದ ಮೂಲಕ ಹೇಗೆ ನಾಶಕ್ಕೆ ಒಳಗಾಗುತ್ತವೆಂಬದನ್ನು ವಿವರಿಸಿ, ಮನುಷ್ಯನು ಈ ಎಲ್ಲ ಇಂದ್ರಿಯಗಳ ವಿಕಾರಕ್ಕೆ ಒಳಗಾಗುವದರಿಂದ ಅವನು ಕ್ಲೇಶವನ್ನು ಹೊಂದಲು ತೀವ್ರ ಪಾತ್ರನಾಗುತ್ತಾನೆಂದು ಅರುಹಿದ್ದಾನೆ.

(೨) ಬಂಟತನವ ಮಾಡಬೇಕೆಂದು, ಬಟ್ಟೆಯ ಬಡಿಯಬೇಕೆಂದು, ಕೊಟ್ಟುದ ಬೇಡಬೇಕೆಂದು, ಮುಂಜಾವದಲೇಳುವರು ಹಲಬರು. ಕೆಲಬರು ಆಹಾರವನುಣಬೇಕೆಂದು, ವ್ಯವಹಾರವ ಮಾಡಬೇಕೆಂದು, ಆ ಹೆಣ್ಣ ತರಬೇಕೆಂದು, ಈ ಹೆಣ್ಣ ಕೊಡಬೇಕೆಂದು, ಮುಂದು ಜಾವದ ಲೇಳುವರು ಹಲಬರು ಕೆಲಬರು. ತಂದೆ ಸೊಡ್ಡಳಂಗೆ ತೊತ್ತು ಸೇವೆಯ ಮಾಡಬೇಕೆಂದು ಕಣ್ಣ ತೆರೆವುತ್ತಲೇಳುವರು ಅಲ್ಲಿಗಲ್ಲಿಗೊಬ್ಬರು.

ಭಾವ.— ಮುಂಜಾವಿನಲ್ಲಿ ಏಳುವಾಗ್ಲೆ ಪರಮಾತ್ಮನ ಧ್ಯಾನ ದಲ್ಲಿರಬೇಕೆಂದು ವಚನಕಾರನು ಹೇಳುತ್ತಾನೆ.

(೩) ಸಂಸಾರ ಹೇಯ, ಸೊಣಗಂಗೆ ಕಂಡವ ಜಿಲ್ಲುವ ತೆರನಂತೆ. ಸಂಸಾರಿಗೆ ಸಂಸಾರವ ಜಿಲ್ಲದೆ ತೋರುವನೇ ಭಕ್ತಿಪಥಂಗಳ? ತೋರುವನೇ ಭಕ್ತಿಪಥಂಗಳ? ॥ಶ್ಲೋಕ॥ ಅಕೃತಂ ಕರ್ಣಪೂರಂ ಚ ಶ್ರುತಂ ಧರ್ಮಮರೋಚಕಂ ಎಂದುದಾಗಿ, ಸೊಡ್ಡಳದೇವ ತಾನೊಲ್ಲದವರ ಭವದುಃಖ ಡೋಗಿಯಲುಡಿಸುವನು.

ಭಾವ.— ಸಂಸಾರದಲ್ಲಿ ಸಿಲ್ಕದೆ ಇರುವದು ಮನುಷ್ಯನ ಇಚ್ಛಾ ಶಕ್ತಿಯ ಬಲದ ಮೇಲೆ ಅವಲಂಬಿಸಿರುತ್ತದೆ. ಹಾಗೆ ಅವನು ವರ್ತಿಸಬೇಕು. ಇಲ್ಲದೆ ಹೋದರೆ ಪರಮಾತ್ಮನು ಅವನಿಗೆ ಸಹಾಯವಾಗಲಾರನು.

(೪) ಹೆಂದಿಯಾಗದೆ, ಸೊಣಗನಾಗದೆ, ಮೃಗನಾಗದೆ, ಪಕ್ಷಿಯಾಗದೆ, ಕುರಿಯಾಗದೆ, ಕತ್ತೆಯಾಗದೆ, ಚಂದವಾಯಿತ್ತು, ಚಂದವಾಯಿತ್ತು. ಮಾನವನಾಗಿ ಹುಟ್ಟಿ ಚಂದವಾಯಿತ್ತು, ಚಂದವಾಯಿತ್ತು. ಚಂದವಾದ ದೇಹ ವಿಸ್ತಂದವಾಗದ ಮುನ್ನ ತಂದೆ ಸೊಡ್ಡಳಂಗೆ ಶರಣೆಂದು ಬದುಕಿದೆನಯ್ಯಾ.

ಭಾವಃ— ಮಾನವ ಜನ್ಮವು ಶ್ರೇಷ್ಠವಾದದ್ದು. ಇದು ನಾಶವಾಗದ ಮುನ್ನ ಪರಮಾತ್ಮನಿಗೆ ಶರಣು ಹೋಗಿ ಬದುಕಬೇಕೆಂದು ವಚನಕಾರನು ಹೇಳುತ್ತಾನೆ.

(೫) ತನುವಿಕಾರ, ಮನವಿಕಾರ, ಜನನ ಸ್ಥಿತಿ ಮರಣ ಕಾರಣ. ಹೊನ್ನ ತೋರಿದೆ ಜಗದ ಕಣ್ಣು ಮೊದಲಿಂಗೆ. ಹೆಣ್ಣ ತೋರಿದೆ ಜಗದ ಕಣ್ಣು ಮೊದಲಿಂಗೆ. ಮಣ್ಣು ತೋರಿದೆ ಜಗದ ಕಣ್ಣು ಮೊದಲಿಂಗೆ. ತನು ತಪ್ಪಿಸಿ ಸಂಸಾರಕ್ಕೊಪ್ಪಿಸಿ, ನುಣ್ಣನೆ ಹೋದನು ದೇವರಾಯ ಸೊಡ್ಡಳಾ.

ಭಾವ.— ಮನುಷ್ಯನಿಗೆ ಬರುವ ತೊಂದರೆಗಳು ಅವನ ಪರೀಕ್ಷಾರ್ಥವಾಗಿರುತ್ತವೆ. ಪರಮಾತ್ಮನು ಅಂಥ ಕಾಲದಲ್ಲಿ ಅವನನ್ನು ಬಿಟ್ಟಹೋದಂತೆ ಭಾಸವಾಗುತ್ತದೆ. ಆದರೆ ಇದೆಲ್ಲವೂ ಅವನಲ್ಲಿರುವ ಗುಣಗಳನ್ನು ವಿಕಾಸಗೊಳಿಸಲಿಕ್ಕೆ ಮಾತ್ರ ಇರುತ್ತದೆ.

(೬) ಪಾಪಿ ನಾನೊಂದು ಪಾಪವ ಮಾಡಿದೆ. ಆ ಪಾಪವೆನಗೆ ಸತಿಸುತರಾಗಿ ಕಾಡುತ್ತಿದೆ. ಪಾಪವನೆ ಬಿತ್ತಿ, ಕೋಪವನೆ ಬೆಳೆದು, ಈ ಪರಿಯಲ್ಲಿ ದಿನಂಗಳು ಆದವಲ್ಲಾ! ಎನಗಿನ್ನೇನ ಪರಿ ಹೇಳಾ ದೇವರಾಯ ಸೊಡ್ಡಳಾ?

ಭಾವ.—ಸಂಕಟಗಳು ಬಂದರೂ ಕೂಡ, ಪರಮಾತ್ಮನಲ್ಲಿ ಇಂತಕ್ಕ ಭಕ್ತಿ ಭಾವವನ್ನು ತೊರೆಯತಕ್ಕದ್ದಲ್ಲ. ಅವನನ್ನೇ ಶರಣ ಹೋಗತಕ್ಕದ್ದು.

(೭) ಅಣ್ಣೆನಂಬಣ್ಣಗಳ ಅಣ್ಣಿಸುವುದು ಹೊನ್ನು. ಅಣ್ಣೆನೆಂಬಣ್ಣಗಳ ಅಣ್ಣಿಸುವುದು ಹೆಣ್ಣು. ಅಣ್ಣೆನೆಂಬಣ್ಣಗಳ ಅಣ್ಣಿಸುವುದು ಮಣ್ಣು. ಹೊನ್ನ ಕಂಡ ಬಳಿಕ ಅಣ್ಣಂದಣ್ಣಗಳುಂಟೆ? ಹೆಣ್ಣು ಕಂಡ ಬಳಿಕ ಅಣ್ಣಂದಣ್ಣಗಳುಂಟೆ? ಮಣ್ಣ ಕಂಡಬಳಿಕ ಅಣ್ಣಂದಣ್ಣಗಳುಂಟೆ? ಹೆಣ್ಣು, ಹಿರಣ್ಯ, ಭೂಮಿ ಎಂಬ ಹುಡಿಯ ಜಗದ ಕಣ್ಣ ಮೇಲೆ ಹೊಯ್ದು ನಿನ್ನ ನೆನೆವುದಕ್ಕೆ ತೆರವುಗುಡದಿದೆಯಲಾ ಸೊಡ್ಡಳಗರಳಗಳಧರಾ.

ಭಾವಃ— ಇಲ್ಲಿ ಹೆಣ್ಣು, ಮಣ್ಣು, ಹೊನ್ನು ಇವುಗಳು ಮನುಷ್ಯನ ಮನಸ್ಸಿನಲ್ಲಿ ಹೇಗೆ ವಿಕಾರ ಮಾಡುತ್ತವೆಂಬದನ್ನು ವಿವರಿಸಿ ಅವುಗಳಿಗೊಳಗಾಗಬಾರದೆಂದು ವಚನಕಾರನು ಬೋಧಿಸುತ್ತಾನೆ.

(೮) ಭಕ್ತ ಭಕ್ತನೆಂದು ಯುಕ್ತಿಗೆಟ್ಟು ನುಡಿವಿರಿ. ಭಕ್ತಸ್ಥಲವೆಲ್ಲರಿಗೆಲ್ಲಿಯದೋ? ಹಾಗದಾಸೆ, ಹಣವಿನಾಸೆಯುಳ್ಳನ್ನಕ್ಕ ಭಕ್ತನೇ? ಆಥರ್ಪ್ರಾಣ ಅಭಿಮಾನ ವಂಚನೆಯುಳ್ಳನ್ನಕ್ಕ ಭಕ್ತನೇ? ಹೊನ್ನು ಹೆಣ್ಣು ಮಣ್ಣು ಹಣೆದವಾಡದನ್ನಕ್ಕ ಭಕ್ತನೇ? ಭಕ್ತರಿಗೆ ನಾವು ಹೇಳಿದರೆ ದುಗುಡ ದುಮ್ಮಾನ. ನೀನೊಮ್ಮೆ ಹೇಳಾ ಪ್ರಳಯಕಾಲ ಸೊಡ್ಡಳಾ.

ಭಾವಃ— ಭಕ್ತನು ಆಶಾರಹಿತನಾಗಿರಬೇಕು.

(೯) ಜವನಿದ್ದಾನೆ. ಜವನ ಪಟ್ಟಣವಿದೆ. ಪಾಮರ ಹೂಮರನಿದೆ. ತೋಮರನಿದೆ ನೋಡಯ್ಯಾ. ಆವ ಕಾರ್ಯವಾದಡೂ ದೇವ ಕಾರ್ಯವ ಮಾಡುವುದು. ಸಾವಕಾರ್ಯ ತಪ್ಪದು. ನೀನು ಕೆಡಬೇಡ ಕಂಡಾ. ಬೇಗ ನಂಬಿ ಪೂಜಿಸು ಸೊಡ್ಡಳ ದೇವನ ಮರುಳೇ.

ಭಾವಃ— ಮರಣಕ್ಕೆ ಭೀತನಾಗಬಾರದು. ದೇವಕಾರ್ಯ ಮಾಡುತ್ತ ಹೋದಲ್ಲಿ ಸುಖಿಯಾಗುವನು. ಸೃಷ್ಟಿಯಲ್ಲಿ ಸುಂದರವಾದ ವಸ್ತುಗಳು ಅನೇಕವಿವೆ. ಅವುಗಳನ್ನು ಉಪಯೋಗಿಸುತ್ತ ಸುಖದಿಂದ ಬಾಳಬೇಕು.

(೧೦) ಅರಿಬಿರುದ ನುಡಿವರು ಕೇಳಿರೇ! ಕೆರಳಿಕೆಯ ನುಡಿವರು. ನೆರೆದ ಮಂದಿಯ ಕಂಡುಬ್ಬವರು ಕೊಬ್ಬವರು. ನಿರುತದ ಕಾಳಗವೆಂದಡೆ ಬಿರುದ ಬಿಸಾಡುವರು. ಅರಿಭಕ್ತಿಯ ಮಾಡಿ ನೆರೆ ಭಕ್ತನೆಂದರೆ ಎಂತು ವೆಚ್ಚುವನಯ್ಯ ನಮ್ಮ ದೇವರಾಯ ಸೊಡ್ಡಳಾ?

ಭಾವಃ— ಜಗತ್ತಿನಲ್ಲಿ ತೋರಿಕೆಯ ಭಕ್ತರೇ ಹೆಚ್ಚಾಗಿದ್ದಾರೆ. ಪ್ರಸಂಗಬಂದಲ್ಲಿ ಅವರು ಗಂಡಾಂತರಗಳನ್ನು ಎದುರಿಸಲಾರರು. ಇವರಿಗೆ ಮೋಕ್ಷವಿಲ್ಲ.

(೧೧) ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ. ರುದ್ರಪದವಿಯನೊಲ್ಲೆ. ಉಳಿದ ದೇವತೆಗಳ ಪದವಿಯನೊಲ್ಲೆ. ಎಲ್ಲಕ್ಕೂ ಒಡೆಯನಾದ ಶಿವನ ಪ್ರಮಥಗಣಂಗಳ ತಿಪ್ಪೆಯ ಮೇಲಣ ಹುಳುವಾಗಿ ಹುಟ್ಟುವ ಪದವಿಯ ಕರುಣಿಸು ಮಹಾಮಹಿಮ ಸೊಡ್ಡಳಾ.

ಭಾವಃ— ಮನುಷ್ಯನು ಶ್ರೇಷ್ಠ ಅಧಿಕಾರಗಳನ್ನು ಹೊಂದಲು ಯಾವಾಗಲೂ ಅಪೇಕ್ಷಿಸುತ್ತಾನೆ. ಆದರೆ ಅವನು ಮೊದಲು ಸೇವಕನಾಗಿ ದುಡಿಯಲು ಸಿದ್ಧನಿರಬೇಕು. ಈ ವೃತ್ತಿಯಿಂದಲೇ ಅವನು ಸುಖವನ್ನು ಪಡೆಯುವನು.

(೧೨) ಪಚನದ ರಚನೆಯ ನುಡಿವ ಬರುಬಾಯ ಭುಂಜಕರು ಭಕ್ತರಪ್ಪರೇ? ಮಾಡುವ ದಾಸೋಹ ಕೈಂಕರ್ಯವುಳ್ಳ ಭಕ್ತಂಗೆ ಅವ ಗುಣಂಗಳು ಹೊದ್ದಲಮ್ಮವಯ್ಯಾ! ಕಾಮಸಂಗಮುಂ ಬಿಟ್ಟು, ಕ್ರೋಧದ ಕೆಚ್ಚು ಮುರಿದು, ಲೋಭಲಂಪಟಮುಂ ಕೆದರಿ, ಮೋಹದ ಮುಳ್ಳಿನ ಮೊಸೆಯ ಮೆಟ್ಟಿ, ಮದದಚ್ಚನಳಿದು, ಮತ್ಸರಸರ್ಪನ ಸಮತೆಯ ಗಾರುಡದಿಂದ ಗಾರುಪಡಿಸಿ, ಕರಣಾದಿ ಗುಣಂಗಳಿಚ್ಛೆಗೆ ಹರಿಯದೆ, ಇಪ್ಪ ಭಕ್ತನ ಕಾಯವೇ ಕೈಲಾಸವಯ್ಯಾ! ಮಾತಿಂಗೆ ಮಾತ ಕೊಟ್ಟು, ಕೆಲವಾಡಿ, ತಾನಾಡಿತ್ತೇ ನಿಜವೆಂಬ ವಾಗ್ಜಾಲರು ಭಕ್ತರಪ್ಪರೇ? ಅವರು ಪಜೀವಿಗಳು. ಹೇಮದಿಚ್ಛೆಗೆ ನುಡಿವ, ಕಾಮರತಿಗೆಳಸುವ, ಮೋಹದ ಬಲೆಯಲ್ಲಿ ಬೀಳುವ, ಕೋಪದುರಿಯ ಹೊದೆವ, ಮತ್ಸರಿಸಿ, ನರಕದಲ್ಲಿ ಕಿವವರು ಭಕ್ತರಪ್ಪರೇ? ಆದಿಯಲ್ಲಿ ನಮ್ಮವರು ಹೊನ್ನು ಹೆಣ್ಣು ಮಣ್ಣು ಬಿಟ್ಟು ನಡೆದರೇ? ಇಲ್ಲವಾಗಿ ಅವ ಬಿಡದೊತ್ತಿ ತಲೆಯೆತ್ತಗುಡದೆ ಅರ್ಥ ಪ್ರಾಣಾಭಿಮಾನದೊಡ್ಡುವಿಡಿದು, ನುಡಿಯುಡಗಿ ಗುರುಲಿಂಗ ಜಂಗಮಕ್ಕೆ

ದಾಸೋಹಮಂ ಮಾಡಿ ಡಿಂಗರಿಂಗರಾದರು. ಹೀಂಗಲ್ಲದೆ ಮಾತಿನ ಭಂಡದ ಹಸರವನಿಕ್ಕಿ ಮತ್ಸರಿಸಿ ಮುಕ್ತರಾದವರುಂಟೇ? ಇದು ಕಾರಣ ದಾಸೋಹ ಕುಳವನರಿಯದ ಕಲಕೇತಗೋಷ್ಠಿಯ ಭಂಡರನು ನಮ್ಮ ಮಹಾಮಹಿಮ ಸೊಡ್ಡಳನಿರಿದಿಂದು ಸುಟ್ಟು ಕುರಿಯ ಬಸುರಲ್ಲಿಕ್ಕದೆ ಮಾಣ್ಬನೇ?

ಭಾವಃ— ದಾಸೋಹಭಾವದಿಂದಿರಬೇಕೆಂದು ವಚನಕಾರನು ಇಲ್ಲಿ ಬೋಧಿಸುತ್ತಾನೆ. ಮನುಷ್ಯನು ಅರಿಷಡ್ವರ್ಗವನ್ನು ತ್ಯಜಿಸಬೇಕು. ಆದರೆ ಹೊನ್ನು, ಹೆಣ್ಣು, ಮಣ್ಣನ್ನು ಬಿಡಬೇಕೆಂದು ಇದರ ಅರ್ಥವಲ್ಲ. ಯಾಕಂದರೆ ಹಾಗೆ ಹಿಂದಿನ ಶರಣರು ಆಚರಿಸಿಲ್ಲ. ಆದರೆ ಅವುಗಳ ಬಲೆಗೆ ಸಿಲ್ಕದೆ, ದಾಸೋಹಭಾವದಿಂದ ಇದ್ದರೆ, ಮನುಷ್ಯನು ಸುಖ ಹೊಂದುತ್ತಾನೆಂದು ವಚನಕಾರನ ಭಾವವು.

(೧೩) ಶಿವಾ ಎಂದು ಓದದವನ ಓದು ಗಿಳಿಯೋದು. ಶಿವ, ನಿಮ್ಮನಾರಾಧಿಸದವನ ಮನೆ ಕೆಮ್ಮನೆ. ಶಿವ ನಿಮ್ಮ ನೋಡದವನ ಕಣ್ಣು ಹೀಲಿಯ ಕಣ್ಣು. ಶಿವ ನಿಮ್ಮ ಹಾಡದವನ ಬಾಯಿ ಕನ್ನದ ಬಾಯಿ. ಶಿವ ನಿಮ್ಮ ಹೊಗಳದವನ ನಾಲಿಗೆ ಭವಿಯ ನಾಲಿಗೆ, ಬಚ್ಚಲ ತಂಪಿನ ಜಾಗಿನಲ್ಲಿ ಹುಟ್ಟಿದ ಜಗುಣಿಯಯ್ಯಾ. ಶಿವ ನಿಮಗೆ ರಗದ ಕರ್ಮ ಶೂಲದ ಮೇಲಣ ಹೆಣನು. ಶಿವ ನಿಮ್ಮ ನೆನೆಯದವನ ದೇಹ ಸಂದೇಹ. ಶಿವ ನಿಮ್ಮ ಭಕ್ತನಲ್ಲದವನ ಭೋಗವು, ವಿದ್ಯೆಯು, ಕುಲವು, ಶ್ರೀಯು, ಸಾಹಸವು, ಯಶಸ್ಸು, ವಿಮಾನದ ಮೇಲಣ ಶವದ ತೋರಿಕೆಯಯ್ಯಾ. ಅವನೇತಕ್ಕೆ ಬಾತೆ? ಇದು ಕಾರಣ ಭವರೋಗ ನರಕಕ್ಕಾರದೆ ಶರಣು ಹೊಕ್ಕೆನಯ್ಯಾ ಸೊಡ್ಡಳಾ.

ಭಾವ:— ಪರಮಾತ್ಮನಲ್ಲಿ ಭಕ್ತಿಯುಳ್ಳವನಾಗಿರಬೇಕೆಂದು ವಚನಕಾರನು ಇಲ್ಲಿ ಬೋಧಿಸುತ್ತಾನೆ.

(೧೪) ಸಮುದ್ರ ಘನವೆಂಬೆನೇ? ಧರೆಯ ಮೇಲಡಗಿತ್ತು. ಆ ಧರೆ ಘನವೆಂಬೆನೇ? ಅನಂತನ ಫಣಾಮಣಿಯ ಮೇಲಡಗಿತ್ತು. ಅನಂತನು ಘನವೆಂಬೆನೇ? ದೇವಿಯರ ಅಂಗುಲಿಯ ಮುದ್ರೆಯಾಯಿತ್ತು. ಅಂತಹ ದೇವಿಯರ ಘನವೆಂಬೆನೇ? ದೇವರ ಅರ್ಧಾಂಗದಲ್ಲಿ ಅಡಗಿದಳು. ಅಂತಹ ದೇವರ ಘನವೆಂಬೆನೇ? ನಮ್ಮ ಪುರಾತನರ ಅಟ್ಟುಗೆಲಸ

ಬಿಟ್ಟಗೆಲಸಕ್ಕೆ ನಡೆದನು. ಇದು ಕಾರಣ ಮಹಾಮಹಿಮ ಸೊಡ್ಡಳನ ಸದ್ಭಕ್ತರಿಂದಧಿಕರಾರೂ ಇಲ್ಲ.

ಭಾವಃ— ನಿಜಭಕ್ತನಾದವನಿಗೆ ಭಯವಿಲ್ಲ. ಅವನು ಸ್ವತಂತ್ರನು. ಪರಮಾತ್ಮನು ಸಹ ಅವನನ್ನು ಹಿಮ್ಮೆಟ್ಟಿಸಲಾರನು. ಅವನು ಶ್ರೇಷ್ಠನೆಂದು ವಚನಕಾರನು ಹೇಳುತ್ತಾನೆ.

(೧೫) ಅಂಗದ ಮೇಲೆ ಲಿಂಗವ ಬಿಜಯಂಗೈಸಿಕೊಂಡು ಲಿಂಗವಿಲ್ಲದ ಅಂಗನೆಯನಪ್ಪಿದರೆ ಸುರಾಭಾಂಡವನಪ್ಪಿದಂತೆ ಕೇಳಿರಣ್ಣಾ. ಲಿಂಗ ಸಾಹಿತ್ಯವಾಗಿರ್ದು ಲಿಂಗವಿಲ್ಲದ ಸತಿಯರ ಕೂಡಿಕೊಂಡಿಹ ಪರಿ ಎಂತೋ? ಲಿಂಗವುಳ್ಳಾತನು ಲಿಂಗವಿಲ್ಲದ ತನುವಿನೊಡನೆ ಸಂಯೋಗವ ಮಾಡಿದಡೆ ಎಂತಕ್ಕುಂ? ಹಾಲಗಡಿಗೆಯ ಹಂದಿ ಮುಟ್ಟಿದಂತಕ್ಕುಂ. ಅದೆಂತೆಂದಡೆ— "ಲಿಂಗೇನ ಸಹ ದೇಹಶ್ಚ ಲಿಂಗಬಾಹ್ಯ ತು ಯಾ ಸತೀ। ಸಹಶಕ್ತಿಸಂಯೋಗೆ ಚ। ಕಿಂ ಫಲಂ ಕಿಂ ಶ್ರುತಂ ಭವೆತ್॥ ಕಿಂ ಭಾಂಡಂ ಕ್ಷೀರ ಭಾಂಡಾನಾಂ ಸೂಕರೈಸ್ಸಹ ವರ್ತತೆ॥" ಎಂದುದಾಗಿ ಲಿಂಗ ವುಳ್ಳ ಲಿಂಗಾರ್ಚಕರು, ಲಿಂಗೈಕ್ಯರು, ಲಿಂಗವಿಲ್ಲದೆ ಭವಿಯಾಗಿದ್ದ ಸತಿಯರ ಆಲಿಂಗನ ಚುಂಬನಾದಿಗಳ ಮಾಡಿದಡೆ ಗುರುಕಾರುಣ್ಯ ಉಂಟೆಂದು ಸಾಧಾರಣ ಪಕ್ಷದಲ್ಲಿ ಮಾಡಿಕೊಂಡಿದ್ದರೆ ಮಾಡಿದ ಲಿಂಗಾರ್ಚನೆ ನಿಷ್ಫಲ. ಶತಜನ್ಮ ಪರಿಯಂತರ ಹೊಲೆಯರ ಬಸುರಲಿಕ್ಕದೆ ಮಾಬನೇ ನಮ್ಮ ದೇವರಾಯ ಸೊಡ್ಡಳಾ?

ಭಾವಃ— ಲಿಂಗವಿಲ್ಲದ ಸತಿಯರೊಡನೆ ಇರಕೂಡದೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

(೧೬) ಗಂಡನುಳ್ಳ ಹೆಂಡಿರ ಕಂಡು ಅಳುಪದಿರಾ ಮನವೇ. ಬಂದ ಬಸುರನು ಉಂಡಮೊಲೆಯನು ಕಂಡು ಮರುಗದಿರಾ ಮನವೇ. ಉದ್ದಂಡತನದಲಿ ನಡೆದ ಭಂಡರನು ಹುಳುಗೊಂಡದಲ್ಲಿಕ್ಕದೆ ಬಿಡುವನೇ ನಮ್ಮ ದೇವರಾಯಸೊಡ್ಡಳಾ?

ಭಾವಃ— ವ್ಯಭಿಚಾರ ಮಾಡಬಾರದೆಂದು ವಚನಕಾರನಲ್ಲಿ ಇಲ್ಲಿ ಹೇಳಿದ್ದಾನೆ.

ಮೊದಲಾದವುಗಳು ಯಾವುದರಿಂದ ಪ್ರಕಟವಾಗಿರುತ್ತವೆಯೋ ಅವುಗಳಲ್ಲಿ ಲಯವಾಗುವವು. ಲಯವಾಗುವ ಈ ಕ್ರಿಯೆಗೆ ಪ್ರವೃತ್ತಿ ಎಂಬ ಹೆಸರು ಇದೆ. ಮನುಷ್ಯನಲ್ಲಿ ಚಕ್ರಗಳು, ಶಕ್ತಿಗಳು, ತತ್ವಗಳು, ಭಕ್ತಿಗಳು, ಲಿಂಗಗಳು, ಅಂಗಗಳು, ಕಲೆಗಳು, ನಾದಗಳು, ಮಹಾಭೂತಗಳು, ಇವೇ ಮೊದಲಾದವುಗಳು ಇವೆ. ನಿವೃತ್ತಿಯಲ್ಲಿ ಇವೆಲ್ಲವೂ ಅಡಗಿಹೋಗುತ್ತವೆ. ಆಗ ಯಾವವು ಸ್ಥೂಲರೂಪವಾಗಿವೆಯೋ ಅವುಗಳಿಗೆ ಸಂಬಂಧಿಸಿದ ಸೂಕ್ಷ್ಮರೂಪಗಳಲ್ಲಿ ಅಡಗುತ್ತ ಅಡಗುತ್ತ ಕಡೆಗೆ ಪರಮಾತ್ಮನಲ್ಲಿ ಲಯವಾಗಿ ಹೋಗುತ್ತವೆ. ಇದು ನಿವೃತ್ತಿ ಎಂದೆನಿಸಿಕೊಳ್ಳಿಪ್ಪಡುತ್ತದೆ. ಅಂತ್ಯದಲ್ಲಿ ಲಿಂಗಗಳು, ಅಂಗಗಳು, ಶಕ್ತಿಗಳು, ಕಲೆಗಳು, ಮಹಾ ಭೂತಗಳು, ಪ್ರಣವಗಳು, ಬ್ರಹ್ಮ ವಿಷ್ಣು ರುದ್ರ ಮೊದಲಾದ ಪಂಚ ಬ್ರಹ್ಮರುಗಳು ಇವುಗಳೆಲ್ಲವು ಸಹ ಕ್ರಮೇಣ ಶೂನ್ಯದಲ್ಲಿ ಲಯವಾಗುವವು.

(೧೫) ಸಕೀಲಗಳುಃ— ಸ್ಥಲಗಳ ಸಂಬಂಧವನ್ನು ಯಾವುದರಿಂದ ತಿಳಿಯುತಕ್ಕದ್ದೋ ಅದು ಸಕೀಲವೆನಿಸುವದು. ಸಕೀಲಗಳು ಅನೇಕವಿವೆ. ಅವುಗಳ ಮೂಲಕ ಸ್ಥಲಗಳ ಸಂಬಂಧವನ್ನು ಅರಿತುಕೊಂಡು ಆಚರಿಸಬೇಕು. ಹೇಗೆ ಎರಡು ವಸ್ತುಗಳನ್ನು ಕೂಡಿಸಲು ಒಂದು ಕೀಲವು ಸಹಾಯಕಾರಿಯೋ ಹಾಗೆ ಈ ಸಕೀಲಗಳು ಸ್ಥಳಗಳ ಸಂಬಂಧವನ್ನು ಅರಿಯಲು ಸಹಾಯಕಾರಿಗಳು. ಸಕೀಲಗಳು ಅನೇಕ ವಿಧವಾಗಿವೆ. ಅವುಗಳಲ್ಲಿ ಷಡ್ವಿಧಸಕೀಲಗಳು, ಅಷ್ಟವಿಧ ಸಕೀಲಗಳು, ೧೦ಲವಿಧ ಸಕೀಲಗಳು, ೨೧೬ ಸಕೀಲಗಳು ಮಹತ್ವವಾದವುಗಳು. ಮನುಷ್ಯನಿಗೆ ಆರಂಭದ ದಿಶೆಯಲ್ಲಿ ಕೆಲವು ವಿಷಯಗಳ ಅವಶ್ಯಕತೆಯು ಇರುತ್ತದೆ. ಆಗ ಅವನಿಗೆ ಆರು ವಿಧ ಸಕೀಲಗಳು ಸಾಕು. ಮುಂದೆ ಅವನಿಗೆ ಎಂಟು ವಿಧ ಸಕೀಲಗಳು ಬೇಕು. ಅವು ಚಕ್ರ, ಅಂಗ, ಲಿಂಗ, ಶಕ್ತಿ, ಹಸ್ತ, ಮುಖ ಪದಾರ್ಥ ಪ್ರಸಾದ ಇವುಗಳು ಬೇಕಾಗುತ್ತವೆ. ಅವುಗಳ ಅರ್ಥವನ್ನು ಅವನು ತಿಳಿದುಕೊಂಡು, ಅವುಗಳಿಗೆ ಯಾವ ಸ್ಥಳಗಳ ಸಂಬಂಧವಿರತಕ್ಕದ್ದೋ ಅವುಗಳನ್ನು ಸಹ ಅರಿತುಕೊಂಡು ಹಾಗೆ ಆಚರಿಸಬೇಕು. ಮುಂದೆ ಅವನಲ್ಲಿ ಪ್ರಗತಿಯುಂಟಾಗಲು ಪ್ರತಿಯೊಂದು ಸ್ಥಲಕ್ಕೆ ೧೦ರಂತೆ ಆರು ಸ್ಥಲಗಳಲ್ಲಿ ಒಟ್ಟು ೧೦೦ ವಿಷಯಗಳು ಬೇಕಾಗುವವು. ಇವುಗಳ ಮರ್ಮವನು ಅವನು ಅರಿಯಬೇಕು. ಇವು ಆಗ ಆಕೃತಿ, ಪ್ರಣವ,

ಚಕ್ರ, ಅಂಗ, ವರ್ಣ, ತತ್ವ, ಹಸ್ತ, ಲಿಂಗ, ಮುಖ, ಶಕ್ತಿ, ಭಕ್ತಿ, ಪದಾರ್ಥ, ಪ್ರಸಾದ, ಕಲೆ, ಸಾದಾಖ್ಯ, ಲಕ್ಷಣ, ಸಂಜ್ಞೆ ವೇದ ಇವುಗಳಿರುತ್ತವೆ. ಮುಂಬೆ ಇವುಗಳಷ್ಟೇ ಅಲ್ಲ ಹೆಚ್ಚಿನ ವಿಷಯಗಳ ಜ್ಞಾನವು ಬೇಕಾಗುತ್ತದೆ. ಇವುಗಳು ಪ್ರತಿಯೊಂದು ಸ್ಥಲಕ್ಕೆ ೬೭ರಂತೆ ಒಟ್ಟು ೨೧೬ ಆಗುವವು. ಈ ೨೧೬ರಲ್ಲಿ ಬೇರೆ ಕೆಲವರು ಇನ್ನೊಂದು ವಿಧ ವಿಚಾರಕ್ಕನುಸರಿಸಿ ತರಗತಿಗಳನ್ನು ಮಾಡುತ್ತಾರೆ. ಆಗ ಪ್ರತಿಯೊಂದಕ್ಕೆ ೨೪ ವಿಷಯಗಳನ್ನು ಸೂಚಿಸಿ, ಒಟ್ಟು ೨೧೬ ವಿಧ ಸಕೀಲಗಳನ್ನು ಮಾಡುವದುಂಟು. ಈ ೨೧೬ ಸಕೀಲಗಳು ಯೌಗಿಕ ಸ್ವರೂಪದವಿರುತ್ತವೆ. ಇವುಗಳ ೯ ಸ್ಥಲಗಳಲ್ಲಿ ೬ ಷಟ್‌ಚಕ್ರಗಳು ಮತ್ತು ಅವುಗಳ ಮೇಲಿನ ೩ ಚಕ್ರಗಳು ಹೀಗೆ ೯ ಚಕ್ರಗಳನ್ನು ಭಾವಿಸಿ ಅವುಗಳಿಗನುಸಾರವಾಗಿ ೯ ಸ್ಥಲಗಳನ್ನು ಮಾಡುತ್ತಾರೆ. ಹೀಗೆ ಸಕೀಲಗಳೆದ್ದು ಅವುಗಳ ಜ್ಞಾನವನ್ನು ಭಕ್ತನು ಮಾಡಿಕೊಂಡು ವರ್ತಿಸತಕ್ಕದ್ದು. ಇದು ಸಕೀಲ ಜ್ಞಾನವು.

(೬೬) ಏಕೋತ್ತರ ಶತಸ್ಥಲಃ— ಇವು ೧೦೧ ಸ್ಥಲಗಳಿರುತ್ತವೆ. ಇವುಗಳಲ್ಲಿ ಅಂಗಸ್ಥಲಗಳು ೪೪ ಮತ್ತು ಲಿಂಗಸ್ಥಲಗಳು ೫೭ ಹೀಗೆ ೧೦೧ ಇವೆ. ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿ ಆಚರಿಸಬೇಕೆಂಬುದರ ವಿವರಣೆ ಇರುತ್ತದೆ. ಲಿಂಗಸ್ಥಲಗಳಲ್ಲಿ ಈ ಆಚರಣೆಗಳಿಂದ ಮನುಷ್ಯನ ಮೇಲೆ ಯಾವ ಪರಿಣಾಮಗಳಾಗುವವೆಂಬದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಮಾಡಿದ ವಿವರಣೆಗಳಿರುತ್ತವೆ.

ಅಂಗಸ್ಥಲಗಳಲ್ಲಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಎಂದು ಆರು ಮುಖ್ಯ ವಿಭಾಗಗಳಿರುತ್ತವೆ. ಈ ಪ್ರತಿಯೊಂದರಲ್ಲಿಯೂ ಪುನಃ ಬೇರೆ ಬೇರೆ ವಿಭಾಗಗಳಿದ್ದು, ಅವುಗಳಿಗನುಸಾರವಾಗಿ ಸ್ಥಲಗಳು ವಿವೇಚಿಸಲ್ಪಟ್ಟಿರುತ್ತವೆ. ಈ ಪ್ರಕಾರ ಭಕ್ತ ಸ್ಥಲದಲ್ಲಿ ೧೫, ಮಹೇಶ್ವರ ಸ್ಥಲದಲ್ಲಿ ೯, ಪ್ರಸಾದಿ ಸ್ಥಲದಲ್ಲಿ ೭, ಪ್ರಾಣಲಿಂಗಿ ಸ್ಥಲದಲ್ಲಿ ೫, ಶರಣ ಸ್ಥಲದಲ್ಲಿ ೪, ಐಕ್ಯ ಸ್ಥಲದಲ್ಲಿ ೪ ಹೀಗೆ ಒಟ್ಟು ೪೪ ಸ್ಥಲಗಳಿವೆ.

ಲಿಂಗಸ್ಥಲಗಳಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಮುಖ್ಯ ಆರು ವಿಭಾ

ಗಗಳಿವೆ. ಈ ಪ್ರತಿಯೊಂದರಲ್ಲಿಯೂ ಬೇರೆ ಬೇರೆ ವಿಭಾಗಗಳಿವೆ. ಅವು ಹೇಗಂದರೆ, ಆಚಾರಲಿಂಗದಲ್ಲಿ ೯, ಗುರುಲಿಂಗದಲ್ಲಿ ೯, ಶಿವಲಿಂಗದಲ್ಲಿ ೯, ಜಂಗಮಲಿಂಗದಲ್ಲಿ ೧೩, ಪ್ರಸಾದಲಿಂಗದಲ್ಲಿ ೯, ಮಹಾಲಿಂಗದಲ್ಲಿ ೯ ಹೀಗೆ ೫೭ ಸ್ಥಲಗಳು ಹೇಳಲ್ಪಡುತ್ತವೆ.

ಇವುಗಳ ವ್ಯಾಖ್ಯೆಗಳು ಕೆಳಗೆ ಕೊಡಲ್ಪಟ್ಟಿವೆ. ಆದರೆ ಹಿಂದೆ ವಿವರಿಸಲ್ಪಟ್ಟ ವಿಷಯಗಳ ವ್ಯಾಖ್ಯೆಗಳು ಕೊಡಲ್ಪಟ್ಟಿಲ್ಲ.

(೬೭) ಏಕೋತ್ತರ ಭಕ್ತಸ್ಥಲಃ— ಇವು ೧೫ ಇವೆ. ಅವು ಯಾವವೆಂದರೆಃ- ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರತ್ಯೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿ ಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಿಸ್ಥಲ, ಉಭಯಸ್ಥಲ, ತ್ರಿವಿಧ ಸಂಪತ್ತು ಸ್ಥಲ, ಚತುರ್ವಿಧಸಾಂಯ ಸ್ಥಲ, ಎಂದಿರುತ್ತವೆ.

(ಅ) ಪಿಂಡಸ್ಥಲಃ— ಬೀಜದೊಳಗಿನ ವೃಕ್ಷದಂತೆ ನಿರಾಕಾರದಲಿದ್ದುಕೊಂಡು ಪ್ರಕಟವಾಗದೆ ಇರುವ ಸ್ಥಿತಿಯು ಪಿಂಡಸ್ಥಲವು.

(ಆ) ಪಿಂಡಜ್ಞಾನಸ್ಥಲಃ— ನಿರಾಕಾರದಲ್ಲಿ ಪ್ರಕಟಗೊಳ್ಳದೆ ಇರುವಾಗ್ಗೆ, ಮನುಷ್ಯನಲ್ಲಿ ತಾನು ತೋರಬೇಕೆಂಬ ಜ್ಞಾನವು ಪಿಂಡದಲ್ಲಿ ಉಂಟಾಗಲು ಅದು ಪಿಂಡಜ್ಞಾನಸ್ಥಲವು.

(ಇ) ಉಭಯ ಸ್ಥಲಃ— ಮನುಷ್ಯನಿಗೆ ದೇಹ ಪ್ರಾಣಗಳೆರಡು ಇವೆ. ಈ ಎರಡರಲ್ಲಿ ಅನುಕ್ರಮವಾಗಿ ಲಿಂಗ, ಜಂಗಮಗಳನ್ನು ಸಂಬಂಧಿಸುವದು ಉಭಯಸ್ಥಲ. ಲಿಂಗಸಂಬಂಧವು ಆಚಾರದ ಮೂಲಕ ಮತ್ತು ಜಂಗಮ ಸಂಬಂಧವು ಅನುಭಾವದ ಮೂಲಕ ಉಂಟಾಗುವವು.

(ಈ) ತ್ರಿವಿಧ ಸಂಪತ್ತು ಸ್ಥಲಃ- ತನುವಿನಲ್ಲಿ ಗುರು, ಪ್ರಾಣದಲ್ಲಿ ಲಿಂಗ, ಅರಿವಿನಲ್ಲಿ ಜಂಗಮ, ಹೀಗೆ ಸಂಬಂಧಿಸುವದು ತ್ರಿವಿಧ ಸಂಪತ್ತು ಸ್ಥಲ.

(ಉ) ಚತುರ್ವಿಧ ಸಾರಾಯಸ್ಥಲಃ— ಗುರು, ಲಿಂಗ, ಜಂಗಮ, ಪ್ರಸಾದ ಇವು ನಾಲ್ಕು ಸಂಬಂಧಿಸಿದ್ದೇ ಚತುರ್ವಿಧಸಾರಾಯ ಸ್ಥಲವು. ಅಂಗದಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಅರಿವಿನಲ್ಲಿ ಜಂಗಮಭಕ್ತಿ, ಪರಿಣಾಮದಲ್ಲಿ ಪ್ರಸಾದ ಭಕ್ತಿ ಇವುಗಳು ಇರತಕ್ಕದ್ದು.

(ಊ) ಉಪಾಧಿ ಮಾಟಸ್ಥಲಃ- ಸಕಲರ ಹಿತಕ್ಕಾಗಿ ಮಾಡಿದ್ದೇ ಉಪಾಧಿಮಾಟಸ್ಥಲವು

(೨) ನಿರುಪಾಧಿ ಮಾಟಸ್ಥಲಃ – ಯಾವ ಬಗೆಯ ಉದ್ದೇಶವಿರದೆ ಕೇವಲ ದಾಸೋಹಭಾವದಿಂದ ಮಾಡುವದು ನಿರುಪಾಧಿ ಮಾಟಸ್ಥಲವು.

(೨) ಸಹಜ ಮಾಟಸ್ಥಲಃ— ಸಾಮರಸ್ಯಭಾವದಿಂದ ಮಾಡುವದು ಸಹಜ ಮಾಟಸ್ಥಲವು. ಇಲ್ಲಿ ತಾನು, ತಾನು ಮಾಡುವ ಕ್ರಿಯೆ. ಮತ್ತು ಮಾಡಿಸಿಕೊಂಬ ವಸ್ತು, ಇವುಗಳಲ್ಲೆಲ್ಲ ಸಾಮರಸ್ಯ ಭಾವವು ಉಂಟಾಗಬೇಕು.

(೯೪) ಏಕೋತ್ತರ ಮಹೇಶಸ್ಥಲಃ— ಇವು ೯ ಇವೆ. ಅವು ಯಾವವೆಂದರೆ, ಮಹೇಶ್ವರ ಸ್ಥಲ, ಲಿಂಗ ನಿಷ್ಠಾಸ್ಥಲ, ಪೂರ್ವಾಶ್ರಯ ನಿರಸನ ಸ್ಥಲ, ವಾಗದ್ವೈತ ನಿರಸನಸ್ಥಲ, ಆಹ್ವಾನ ನಿರಸನಸ್ಥಲ, ಅಷ್ಟ ತನುಮೂರ್ತಿ ನಿರಸನಸ್ಥಲ, ಸರ್ವಗತ ನಿರಸನಸ್ಥಲ, ಶಿವಜಗನ್ಮಯ ಸ್ಥಲ, ಭಕ್ತದೇಹಿಕಲಿಂಗಸ್ಥಲ, ಎಂದಿರುತ್ತವೆ.

(ಅ) ಪೂರ್ವಾಶ್ರಯ ನಿರಸನಸ್ಥಲಃ— ಲಿಂಗಧಾರಣವಾದ ಬಳಿಕ ಲಿಂಗಿಗಳಲ್ಲಿ ಜಾತಿಭೇದವನ್ನು ಎಣಿಸದಿರುವದು ಪೂರ್ವಾಶ್ರಯ ನಿರಸನಸ್ಥಲ.

(ಆ) ವಾಗದ್ವೈತನಿರಸನಸ್ಥಲಃ— ವ್ಯವಹಾರದಲ್ಲಿ ಅದ್ವೈತ ಭಾವದಿಂದ ಆಚರಿಸದೆ ಇರುವದು ವಾಗದ್ವೈತ ನಿರಸನಸ್ಥಲವು. ಕಾರ್ಯಗಳಲ್ಲಿ ದ್ವೈತವಿದೆ. ದ್ವೈತವಿದ್ದರೂ ಕೂಡ ಸಮರಸಾಚರಣೆಯುಳ್ಳದ್ದು.

(ಇ) ಆಹ್ವಾನ ನಿರಸನಸ್ಥಲಃ— ಲಿಂಗಾಂಗಿಗಳು ಸಮರಸಾಚಾರವುಳ್ಳವರು. ಆದ್ದರಿಂದ ಅವರ ಕ್ರಿಯೆಗಳಲ್ಲಿ ಆಹ್ವಾನ ವಿಸರ್ಜನೆಗಳಿಲ್ಲ. ಇದು ಆಹ್ವಾನ ನಿರಸನಸ್ಥಲ.

(ಈ) ಅಷ್ಟತನುಮೂರ್ತಿನಿರಸನಸ್ಥಲಃ— ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಇವು ಅಷ್ಟ ತನುಮೂರ್ತಿಗಳು. ಇವುಗಳಲ್ಲಿ ಆರನ್ನೂ ದೇವರೆಂದು ಪೂಜಿಸದೆ ಇರುವದು ಅಷ್ಟತನುಮೂರ್ತಿನಿರಸನಸ್ಥಲ.

(ಉ) ಸರ್ವಗತ ನಿರಸನಸ್ಥಲಃ – ದೃಶ್ಯವಾಗಿರುವ ಜಗತ್ತು ಪರಮಾತ್ಮನಲ್ಲವೆಂದು ತಿಳಿಯುವದು ಸರ್ವಗತ ನಿರಸನಸ್ಥಲ.

(ಊ) ಶಿವಜಗನ್ಮಯಸ್ಥಲಃ – ಪರಮಾತ್ಮನು ವಿಶ್ವವ್ಯಾಪಿಯೆಂದು ತಿಳಿಯುವದು ಶಿವಜಗನ್ಮಯ ಸ್ಥಲ.

(೨) ಭಕ್ತದೇಹಿಕ ಲಿಂಗಸ್ಥಲಃ— ಪರಮಾತ್ಮನು ಒಳ್ಳೆಯದರಲ್ಲಿ ಇರುತ್ತಾನೆಂದು ಭಾವಿಸಿ ವರ್ತಿಸುವದು ಭಕ್ತದೇಹಿಕಲಿಂಗಸ್ಥಲ.

(೯೯) ಏಕೋತ್ತರ ಪ್ರಸಾದಿ ಸ್ಥಲಃ— ಇವು ಆರು ಇವೆ. ಅವು ಯಾವವೆಂದರೆ:- ಗುರು ಮಹಾತ್ಮೆಸ್ಥಲ, ಲಿಂಗ ಮಹಾತ್ಮೆಸ್ಥಲ, ಜಂಗಮ ಮಹಾತ್ಮೆಸ್ಥಲ, ಭಕ್ತ ಮಹಾತ್ಮೆಸ್ಥಲ, ಶರಣ ಮಹಾತ್ಮೆಸ್ಥಲ, ಪ್ರಸಾದ ಮಹಾತ್ಮೆಸ್ಥಲ ಎಂದು ಇವೆ. ಆಚರಣೆ, ಮನಸ್ಸು, ಅರಿವು ಇವುಗಳಲ್ಲಿ ಶುದ್ಧತೆಯನ್ನುಂಟುಮಾಡಿಕೊಳ್ಳಬೇಕು. ಮತ್ತು ಸದ್ವರ್ತನೆಯಿಂದ ಪರಮಾನಂದದಲಿದ್ದು ಅರ್ಪಣ ಭಾವಯುಕ್ತನಾಗಿ ಆಚರಿಸುವದು ಈ ಸ್ಥಲದ ಮತ್ತು ಅದರ ಉಪಾಂಗಗಳ ಲಕ್ಷಣವು.

(೧೦೦) ಏಕೋತ್ತರ ಪ್ರಾಣಲಿಂಗಿ ಸ್ಥಲಃ— ಇವು ೫ ಇವೆ. ಅವು ಯಾವವೆಂದರೆ— ಪ್ರಾಣಲಿಂಗಿ ಸ್ಥಲ, ಪ್ರಾಣಲಿಂಗಾರ್ಚನೆಯ ಸ್ಥಲ, ಶಿವಯೋಗ ಸಮಾಧಿ ಸ್ಥಲ, ಲಿಂಗನಿಜ ಸ್ಥಲ ಮತ್ತು ಅಂಗಲಿಂಗಸ್ಥಲಗಳು ಇರುತ್ತವೆ.

(ಅ) ಲಿಂಗನಿಜಸ್ಥಲ— ಮನಸ್ಸಿನಲ್ಲಿ ಲಿಂಗವು ದೃಢವಾಗಲು ಅದು ಮನೋಮೂರ್ತಿಯಾಗಿ ನಿಲ್ಲುವದು. ಅದೇ ಲಿಂಗನಿಜಸ್ಥಲ.

(ಆ) ಅಂಗಲಿಂಗಸ್ಥಲ— ಲಿಂಗವು ಮನುಷ್ಯನಲ್ಲಿ ನೆಲೆಗೊಳ್ಳಲು ಅವನ ಸರ್ವಾಂಗವು ಮತ್ತು ಅವನ ಕರಣಗಳು ಲಿಂಗಮಯವಾಗುವವು. ಇದು ಅಂಗಲಿಂಗಸ್ಥಲವು. ಇಲ್ಲಿ ಅತ್ಯಂತವಾದ ಪಾರಮಾರ್ಥಿಕ ಆನಂದವಿದೆ.

(೧೦೧) ಏಕೋತ್ತರ ಶರಣಸ್ಥಲ— ಇವು ನಾಲ್ಕು ಇವೆ. ಅವು ಯಾವವೆಂದರೆ— ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನೆಯ ಸ್ಥಲ.

(ಅ) ತಾಮಸ ನಿರಸನಸ್ಥಲ— ತಾಮಸಭಾವದಿಂದಲೂ ಅಹಂಕಾರದಿಂದಲೂ ವರ್ತಿಸದೆ ಇರುವದು ತಾಮಸನಿರಸನಸ್ಥಲ.

(ಅ) ನಿರ್ದೇಶ ಸ್ಥಲ— ನಿಜವನರಿದು ಸಂಶಯ ರಹಿತನಾಗಿ, ಸುಜ್ಞಾನಿಯಾಗಿ ವರ್ತಿಸುವದು ನಿರ್ದೇಶಸ್ಥಲ.

(ಇ) ಶೀಲಸಂಪಾದನೆಯ ಸ್ಥಲ— ಆಚಾರದ ಅತಿರೇಕಗಳಿಗೆ ಒಳಗಾಗದೆ ಲಿಂಗಾಂಗಿಗಳಿಗೆ ಯೋಗ್ಯವಾದ ಆಚಾರಗಳನ್ನು ಅನುವರ್ತಿಸುವದು ಶೀಲಸಂಪಾದನೆಯ ಸ್ಥಲ.

(೧೦೨) ಏಕೋತ್ತರ ಐಕ್ಯಸ್ಥಲ— ಇವು ನಾಲ್ಕು ಇರುತ್ತವೆ. ಅವು ಐಕ್ಯಸ್ಥಲ, ಸರ್ವಾಚಾರ ಸಂಪತ್ತುಸ್ಥಲ, ಏಕಭಾಜನಸ್ಥಲ ಮತ್ತು ಸಹ ಭೋಜನ ಸ್ಥಲ, ಎಂದು ಇವೆ.

(ಅ) ಏಕಭಾಜನಸ್ಥಲ— ಲಿಂಗವೂ ತಾನೂ ಕೂಡಿಕೊಂಡು ಸಾಮರಸ್ಯತ್ವದಿಂದ ಆಚರಿಸುವದು ಏಕಭಾಜನ ಸ್ಥಲವು.

(ಆ) ಸಹಭೋಜನಸ್ಥಲ— ಪರಮಾತ್ಮನಿಗೆ ತಾನು ಭೋಗಿಸುವ ದನ್ನೆಲ್ಲ ಅರ್ಪಿಸಿ ಸಮಭೋಗಿಯಾಗಿರುವದು ಸಹಭೋಜನಸ್ಥಲ.

(೧೦೩) ಏಕೋತ್ತರ ಆಚಾರಲಿಂಗಸ್ಥಲ— ಇದರಲ್ಲಿ ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಎಂಬ ಮೂರು ವಿಭೇದಗಳಿವೆ. ಗುರುಲಿಂಗದಲ್ಲಿ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಎಂದು, ಶಿವಲಿಂಗದಲ್ಲಿ ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು, ಮತ್ತು ಜಂಗಮಲಿಂಗದಲ್ಲಿ ಸ್ವಯ, ಚರ, ಪರ ಎಂದು ಹೀಗೆ ಒಟ್ಟು ೯ ವಿಭಾಗಗಳಿವೆ.

(ಅ) ಗುರುಲಿಂಗ ತ್ರಿವಿಧ— ಇವು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಎಂದು ಇವೆ. ದೀಕ್ಷೆಯಿಂದ ಉಪದೇಶವನ್ನು ಹೊಂದಿದಲ್ಲಿ ದೀಕ್ಷಾಗುರುವು. ಉಪದೇಶಕ್ಕೆ ಅನುಗುಣವಾಗಿ ಬೋಧೆಯನ್ನು ಅಭ್ಯಾಸಿಸಲು ಶಿಕ್ಷಾಗುರುವು. ಮುಂದೆ ಅದನ್ನು ಮನನವಾಡಿಕೊಂಡಲ್ಲಿ ಜ್ಞಾನಗುರುವು.

(ಆ) ಶಿವಲಿಂಗ ತ್ರಿವಿಧ— ಇವು ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು ಇವೆ. ಬಾಹ್ಯದಲ್ಲಿ ಮಾಡುವ ಸತ್‌ಕೃತ್ಯಗಳು ಕ್ರಿಯಾಲಿಂಗ. ಅವು ಮುಂದೆ ಭಾವಭರಿತವಾದಲ್ಲಿ ಭಾವಲಿಂಗ. ಭಾವ ಭರಿತನಾಗಿ ಜ್ಞಾನವಳವಡಲು ಜ್ಞಾನಲಿಂಗ.

(ಇ) ಜಂಗಮಲಿಂಗ ತ್ರಿವಿಧ— ಇವು ಸ್ವಯ, ಚರ, ಪರ ಎಂದು ಇವೆ. ಕ್ರಿಯೆಗಳ ಪರಿಣಾಮಗಳು ತನ್ನಲ್ಲಿ ನಿಶ್ಚಲವಾಗಿ ಉಳಿದರೆ

ಸ್ವಯವು. ಅವು ಭಕ್ತಿ ಕಾರಣವಾಗಿ ಜಗತ್ತಿನಲ್ಲಿ ಜನಹಿತಕ್ಕೋಸ್ಕರ ಉಪಯೋಗಿಸಲ್ಪಟ್ಟಲ್ಲಿ ಚರವು. ಹೀಗೆ ವ್ಯಪಹರಿಸಿ ಚಿದಾತ್ಮನಲ್ಲಿ ಬೆರೆದಲ್ಲಿ ಅದು ಪರವು. ಇದು ಜಂಗಮದ ಉತ್ಕೃಷ್ಟ ಸ್ಥಿತಿಯು.

ಗುರುಲಿಂಗ, ಶಿವಲಿಂಗ, ಜಂಗಮಲಿಂಗಗಳನ್ನು ಹೀಗೆ ಸಾಧಿಸಿದಲ್ಲಿ ಅವೆಲ್ಲವೂ ಆಚಾರಲಿಂಗದಲ್ಲಿ ಅಡಗುವವು. ಇದು ಆಚಾರಲಿಂಗದ ಪೂರ್ಣತೆಯು.

(೧೦೪) ಏಕೋತ್ತರ ಗುರುಲಿಂಗಸ್ಥಲ— ಇದರಲ್ಲಿ ಆಗಮಲಿಂಗ, ಕಾಯಲಿಂಗ, ಆಚಾರಲಿಂಗ ಎಂಬ ಮೂರು ಭಾಗಗಳಿವೆ. ಆಗಮಲಿಂಗದಲ್ಲಿ ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಮೂರು ವಿಭಾಗಗಳಿವೆ. ಕಾಯಲಿಂಗದಲ್ಲಿ ಸಕಾಯ, ಅಕಾಯ, ಪರಕಾಯ ವೆಂಬ ಮೂರು ವಿಭಾಗಗಳಿವೆ. ಆಚಾರಲಿಂಗದಲ್ಲಿ ಧರ್ಮಾಚಾರ, ಭಾವಾಚಾರ ಜ್ಞಾನಾಚಾರ ಎಂದು ವಿಭೇದಗಳಿವೆ. ಹೀಗೆ ಇಲ್ಲಿ ಒಟ್ಟು ೯ ಮುಖ್ಯ ಭಾಗಗಳಿವೆ.

(ಅ) ಆಗಮಲಿಂಗ ತ್ರಿವಿಧ— ಇವು ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಇವೆ. ಸತ್‌ಕ್ರಿಯೆಯೇ ಕ್ರಿಯಾಗಮವು. ಸತ್‌ಕ್ರಿಯೆಯಲ್ಲಿ ನಿಷ್ಠೆ ನಿಬ್ಬೆರಿಸಿದರೆ, ಅದು ಭಾವಾಗಮವು. ಲಿಂಗದ ಮಹಾಜ್ಞಾನದ ಪ್ರಕಾಶದಲ್ಲಿ ಆಜಂಸುವದೇ ಜ್ಞಾನಾಗಮವು.

(ಬ) ಕಾಯಲಿಂಗ ತ್ರಿವಿಧ— ಇವು ಸಕಾಯ, ಅಕಾಯ, ಪರಕಾಯವೆಂದು ಇವೆ. ಸ್ಥೂಲಕ್ರಿಯೆಗಳನ್ನು ಲಿಂಗದೊಡನೆ ಬೆರಿಸಿ ವರ್ತಿಸಿದಲ್ಲಿ ಸಕಾಯವು. ಇಂಥ ಲಿಂಗ ಕಾಯದಿಂದ ನಿರ್ದೇಹಸ್ಥಿತಿಯುಂಟಾಗಲು ಅದು ಅಕಾಯವು. ದೇಹದ ನಿರ್ದೇಹ ಸ್ಥಿತಿಯನ್ನು ಸಹ ದಾಟಿದಲ್ಲಿ ಅವನು ಸಕಾಯನೂ ಅಲ್ಲ, ಅಕಾಯನೂ ಅಲ್ಲ. ಅವನು ಪರಕಾಯನು.

(ಕ) ಆಚಾರಲಿಂಗ ತ್ರಿವಿಧ— ಇವು ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ ಎಂದು ಇವೆ. ನೀತಿಯಂತೆ ನಡೆಯುವದು ಧರ್ಮಾಚಾರವು. ನೀತಿಯು ಮನಸ್ಸಿನಲ್ಲಿ ದೃಢಪಟ್ಟಲ್ಲಿ ಭಾವಾಚಾರವು. ಹೀಗೆ ದೃಢಪಟ್ಟು ಮಹಾಜ್ಞಾನದಲ್ಲಿ ವರ್ತಿಸಿದ್ದಾದರೆ ಜ್ಞಾನಾ

ಚಾರವು. ಇವು ಗುರುಲಿಂಗದ ಆಚಾರಲಿಂಗದಲ್ಲಿಯ ಮೂರು ತರಗ
ಗಳು.

ಹೀಗೆ ಆಗಮುಲಿಂಗ, ಕಾಯುಲಿಂಗ, ಆಚಾರಲಿಂಗ ಇವುಗಳನ್ನು ಸಾಧಿಸಿದಲ್ಲಿ ಅವೆಲ್ಲವೂ ಗುರುಲಿಂಗದಲ್ಲಿ ಅಡಗುವವು. ಇದು ಗುರು ಲಿಂಗದ ಪೂರ್ಣತೆಯು.

(೧೦೫) ಏಕೋತ್ತರ ಶಿವಲಿಂಗಸ್ಥಲಃ— ಇದರಲ್ಲಿ ಅನುಗ್ರಹ ಲಿಂಗ, ಅರ್ಪಿತಲಿಂಗ, ಮತ್ತು ತನುಗುಣಲಿಂಗ ಎಂದು ಮೂರು ಮುಖ್ಯ ವಿಭಾಗಗಳಿವೆ. ಇವುಗಳಲ್ಲಿ ಅನುಗ್ರಹ ಲಿಂಗದಲ್ಲಿ ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂತಲೂ ಅರ್ಪಿತ ಲಿಂಗದಲ್ಲಿ ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತಗಳೆಂತಲೂ ತನುಗುಣಲಿಂಗದಲ್ಲಿ ಶಿಷ್ಯ, ಶುಶ್ರೂಷಾ, ಸೇವ್ಯ ಎಂತಲೂ ಹೀಗೆ ಒಟ್ಟು ೯ ಭಾಗಗಳಿವೆ.

(ಅ) ಅನುಗ್ರಹಲಿಂಗ ತ್ರಿವಿಧಃ- ಇವು ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂದು ಇವೆ. ಅನುಗ್ರಹವು ಕಾಯವನ್ನು ಲಿಂಗಕ್ಕೆ ಅರ್ಪಿಸುವದು. ಇಲ್ಲಿ ಅಂಗ ವಿಕಾರಗಳು ದೂರಾಗುವವು. ಇಂದ್ರಿಯಗಳನ್ನು ಲಿಂಗಕ್ಕೆ ಅರ್ಪಿಸುವದು ಇಂದ್ರಿಯಾನುಗ್ರಹವು. ಇದರಿಂದ ಲಿಂಗ ಚೈತನ್ಯವು ಒದಗುವದು. ಅಂಗವನ್ನು ಪ್ರಾಣಕ್ಕೆ ಸಂಬಂಧಿಸುವದು ಪ್ರಾಣಾನುಗ್ರಹವು. ಇದರಿಂದ ಬಾಹ್ಯಾಭ್ಯಂತರವೆಲ್ಲ ಲಿಂಗುಮಯವಾಗುವದು.

(ಬ) ಅರ್ಪಿತಲಿಂಗ ತ್ರಿವಿಧಃ— ಇವು ಕಾಯಾರ್ಪಿತ ಕರಣಾರ್ಪಿತ ಭಾವಾರ್ಪಿತಗಳಾಗಿರುವವು. ಕಾಯದಲ್ಲಿ ಅರ್ಪಿತವಾದುದು ಕಾಯಾರ್ಪಿತವು. ಅಂತರ್ಮುಖದಲ್ಲಿ ಅಂದರೆ ಕರಣಗಳ ಮೂಲಕ ಅರ್ಪಿತವಾದುದು ಕರಣಾರ್ಪಿತವು. ಭಾವದಲ್ಲಿ ಅರ್ಪಿತವಾದುದು ಭಾವಾರ್ಪಿತವು. ಇದು ಇದ್ದೂ ಇಲ್ಲದಂಥ ಸ್ಥಿತಿಯು.

(ಕ) ತನುಗುಣಲಿಂಗ ತ್ರಿವಿಧಃ— ಇವು ಶಿಷ್ಯ, ಶುಶ್ರೂಷಾ, ಸೇವ್ಯ ಎಂದು ಇವೆ. ಗುರುವಿನಲ್ಲಿ ಶಿಷ್ಯತ್ವವನ್ನು ಅಂಗೀಕರಿಸುವದು ಶಿಷ್ಯವು. ಅವನ ಶುಶ್ರೂಷೆಯಲ್ಲಿದ್ದು ಲಿಂಗತತ್ವವನ್ನು ದೃಢಪಡಿಸುವದು ಶುಶ್ರೂಷೆಯು. ಶಿಷ್ಯ ಮತ್ತು ಗುರು ಇವರ ಏಕರೂಪತೆಯು

ಪ್ರಸ್ತಾವನೆ.

ಸ್ಪೃಶ್ಯಾಸ್ಪೃಶ್ಯ ಭಾವವು ವೀರಶೈವ ಧರ್ಮದಲ್ಲಿರುವದಿಲ್ಲ. ವೀರಶೈವ ಸಮಾಜದಲ್ಲಿ ಆಗಿಹೋಗಿರುವ ತತ್ವಜ್ಞಾನಿಗಳೂ, ಶರಣರೂ, ಸಾಧುಗಳೂ, ವಚನಕಾರರೂ ಅಸ್ಪೃಶ್ಯತೆಯನ್ನು ಎಲ್ಲಿಯೂ ಒಪ್ಪಿರುವದಿಲ್ಲ. ಅವರಲ್ಲಿ ಮುಖ್ಯವಾಗಿ ವಚನಕಾರರು ಬಹು ಸ್ಪಷ್ಟ ಶಬ್ದಗಳಿಂದ ಇದನ್ನು ಖಂಡಿಸಿದ್ದಾರೆ. ಈ ಬಗ್ಗೆ ಅವರ ಉಕ್ತಿಗಳು ಅಸಂಖ್ಯವಾಗಿರುತ್ತವೆ. ವೀರಶೈವ ಧರ್ಮವು ಪಂಚಸೂತಕಗಳನ್ನು ಎಣಿಸುವದಿಲ್ಲ. ಜನನಸೂತಕ, ಪ್ರೇತಸೂತಕ, ಉಚ್ಛಿಷ್ಟಸೂತಕ, ರಜಸೂತಕ, ಜಾತಿ ಸೂತಕ ಇವುಗಳೇ ಈ ಪಂಚಸೂತಕಗಳಾಗಿದ್ದು ಇವುಗಳಲ್ಲಿ ಜಾತಿ ಸೂತಕವಿರುವದರಿಂದ ವೀರಶೈವರು ಇದನ್ನು ಮನ್ನಿಸಿರುವದಿಲ್ಲ. ಯಾರು ವೀರಶೈವ ಧರ್ಮದ ತತ್ವಗಳನ್ನು ಒಪ್ಪಿ ಅವುಗಳಂತೆ ಆಚರಿಸುತ್ತಾರೋ ಅವರು ಯಾವ ಕಾಯಕವನ್ನು ಮಾಡುತ್ತಿದ್ದರೂ ಕೂಡ ಅವರಲ್ಲಿ ಯಾವತೆರದ ಭೇದವನ್ನು ಎಣಿಸಕೂಡದೆಂದು ವೀರಶೈವ ಮತವಿರುವದರಿಂದ ಅಸ್ಪೃಶ್ಯತೆಯನ್ನು ವೀರಶೈವ ಶಿವಶರಣರು ಎಂದಿನಿಂದಲೂ ನಿಷೇಧಿಸುತ್ತ ಬಂದಿರುತ್ತಾರೆ ಮತ್ತು ಅವರು ಹಾಗೆ ಒಂದು ಕಾಲದಲ್ಲಿ ನಡೆದೂ ತೋರಿಸಿರುತ್ತಾರೆ. ಇದು ಮುಂದೆ ಹೇಳಿದ ಸಂಗತಿಗಳಿಂದ ಗೊತ್ತಾಗುವದು.

ಯಾವನು ವೀರಶೈವ ಧರ್ಮದ ತತ್ವಗಳನ್ನು ತಿಳಿದುಕೊಂಡು ಅವುಗಳಂತೆ ಆಚರಿಸುತ್ತಾನೋ ಅವನು ಲಿಂಗಧಾರಣೆಗೆ ಯೋಗ್ಯನಾಗುತ್ತಾನೆ. ಲಿಂಗಧಾರಣೆಯು ವೀರಶೈವಾಚಾರಣೆಯಂತೆ ನಡಿಯಲು ಒಪ್ಪಿಗೆ ಕೊಟ್ಟದ್ದರ ಒಂದು ಕುರುಹೆಂದು ಹೇಳಬಹುದು. ಹೀಗೆ ಒಪ್ಪಿಕೊಂಡು ಷಟ್‌ಸ್ಥಲಶಾಸ್ತ್ರದ ತತ್ವಗಳನ್ನು ಅರಿತು ಆಚರಿಸಿದಲ್ಲಿ ಅಂಥ ಭಕ್ತನ ಅಂಗ ಮನ ಪ್ರಾಣಗಳಲ್ಲಿ ಲಿಂಗದ ಕಳೆಯು ದೃಢಪಡುತ್ತ ಹೋಗುತ್ತದೆ. ಅಂಥವನು ಪರಮಾತ್ಮನ ವಾಸ ಭೂಮಿ ಎಂದು ವಚನಕಾರರ ಅಭಿಪ್ರಾಯವಿದೆ. ಆದ್ದರಿಂದ ಭಕ್ತನ ಶರೀರವು ದೇವಾಲಯದಂತೆ ಪವಿತ್ರವಾದುದೆಂದು ಅವರ ಉಕ್ತಿಗಳಿವೆ. ಇಂಥ ಪವಿತ್ರ ಸ್ಥಾನದಲ್ಲಿ ಯಾವ ತೆರದ ಉಚ್ಚನೀಚ ಭಾವವನ್ನು ಕಲ್ಪಿಸಕೂಡದು. ಅಲ್ಲಿ ಜಾತಿಭೇದದ

ಕಲ್ಪನೆಗಳು ಎಷ್ಟುಮಾತ್ರವೂ ಇರಕೂಡದು. ಈ ತತ್ವಕ್ಕನುಸರಿಸಿ ವೀರಶೈವ ಧರ್ಮದಲ್ಲಿ ಅಸ್ಪೃಶ್ಯತ್ವವಿರುವದಿಲ್ಲ.

ವಚನಕಾರರ ಈ ತತ್ವಗಳು ವೀರಶೈವ ಸಮಾಜದಲ್ಲಿ ರೂಢವಿರುವವರೆಗೆ ಅದು ದೇಶದಲ್ಲಿ ಪ್ರಸಾರವಾಗುತ್ತಲೇ ನಡೆಯಿತು. ಇದರಿಂದ ಅಸ್ಪೃಶ್ಯ ವೊದಲ್ಗೊಂಡು ಎಲ್ಲ ಸಮಾಜಗಳು ಅದರಲ್ಲಿ ಸೇರ್ಪಡೆಯಾದವು. ಈ ಸ್ಥಿತಿಯು ಕ್ರಿ. ಶ. ೧೧೦೦ ರಿಂದ ೧೩೦೦ ಇಸ್ವಿಯವರೆಗೆ ಅಂದರೆ ಸುಮಾರು ೨೦೦ ವರ್ಷಗಳ ವರೆಗೆ ನಡೆಯಿತು. ಈ ಕಾಲದಲ್ಲಿ ಅಸಂಖ್ಯ ವಚನಕಾರರು ದೇಶದಲ್ಲಿ ಉದ್ಭವಿಸಿದರು. ಅವರೆಲ್ಲರೂ ಅಸ್ಪೃಶ್ಯತ್ವವನ್ನು ನಿಷೇಧಿಸಿದ್ದಾರೆ. ಅವರು ಹೀಗೆ ನಿಷೇಧಿಸಿದ್ದಲ್ಲದೆ, ಅದರಂತೆ ಅವರು ಆಚರಿಸಿಯೂ ಇದ್ದಾರೆ. ಇದರಿಂದ ಆಗಿನ ಅಸ್ಪೃಶ್ಯ ಸಮಾಜಗಳಲ್ಲಿ ಅನೇಕ ಸಾಧುಗಳೂ ಸತ್ಪುರುಷರೂ ಆಗಿಹೋದರು. ಅಂಥವರಲ್ಲಿ ಕೆಲವರನ್ನು ಮಾತ್ರ ನಾವು ಇಲ್ಲಿ ನಿರ್ದೇಶಿಸುತ್ತೇವೆ.

ಅಸ್ಪೃಶ್ಯ ಸಮಾಜದಲ್ಲಿ ಆಗಿಹೋದ ಮಹಾಪುರುಷರಲ್ಲಿ ಮಾದರ ಚನ್ನಯ್ಯನು ಉಚ್ಚ ಸ್ಥಾನವನ್ನು ಹೊಂದಿರುತ್ತಾನೆ. ಅವನು ಬಸವೇಶ್ವರನಕಿಂತಲೂ ಮೊದಲಿನವನು. ಬಸವೇಶ್ವರನು ತನ್ನ ವಚನಗಳಲ್ಲಿ ಅವನ ವಿಷಯವಾಗಿ ಆಗಿಂದಾಗ್ಗೆ ಉಲ್ಲೇಖಿಸುತ್ತಾನೆ. ಚನ್ನಯ್ಯನ ಕೆಲವು ವಚನಗಳೂ ಇರುತ್ತವೆ. ಅವನು ಮೊದಲು ಕರ್ನಾಟಕದಲ್ಲಿ ವಾಸವಾಗಿದ್ದು ಮುಂದೆ ದಕ್ಷಿಣದಲ್ಲಿ ಜೋಳದೇಶಕ್ಕೆ ಹೋದನೆಂದು ತೋರುತ್ತದೆ. ಅಲ್ಲಿ ಅವನು ಹುಲ್ಲು ಮಾಡಿ ಜೋಳ ರಾಜನಲ್ಲಿ ಅದನ್ನು ಹಾಕಿ ಅದರಿಂದ ಬಂದ ಹಣದಿಂದ ತನ್ನ ಉಭಜೀವನವನ್ನು ಸಾಗಿಸುತ್ತಿದ್ದನು. ಅವನು ಗುಪ್ತಭಕ್ತಿಯುಳ್ಳವನಾಗಿ ತಾನು ದುಡಿದದ್ದನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿ ಪ್ರಸಾದರೂಪಾಗಿ ಅನ್ನಗ್ರಹಣ ಮಾಡುತ್ತಿದ್ದನು. ಪರಮಾತ್ಮನು ಅವನ ಭಕ್ತಿಗೆ ಮೆಚ್ಚಿ ಅವನೊಡನೆಯೇ ಅನ್ನ ಸೇವನೆ ಮಾಡುತ್ತಿದ್ದನು. ಜೋಳರಾಜನಿಗೆ ಈ ಸಂಗತಿಯು ತಿಳಿಯಲು ಅವನು ಚನ್ನಯ್ಯನನ್ನು ಕಂಡು ಅವನನ್ನು ಸತ್ಕರಿಸಿ ಮನ್ನಿಸಿದನೆಂದು ಇವನ ಚರಿತ್ರೆ ಇದೆ. ಮಹಾಕವಿಯಾದ ಹರಿಹರನು ಇವನ ವಿಷಯವಾಗಿ ಒಂದು ಬಹು ಸುಂದರವಾದ ರಗಳೆಯನ್ನು ರಚಿಸಿದ್ದಾನೆ. (ಹರಿಹರನ ರಗಳೆಗಳು ಭಾಗ೧ ನೋಡಿರಿ.)

ಶ್ವಪಚಯ್ಯನೆಂಬವನು ಇನ್ನೊಬ್ಬ ಅಸ್ಪೃಶ್ಯ ಮಹಾಪುರುಷನಿದ್ದಾನೆ. ಅವನಿದ್ದ ಭತ್ತೀಸಪುರ ಎಂಬ ಗ್ರಾಮದಲ್ಲಿ ಸಾಮವೇದಿ ಎಂಬ ಒಬ್ಬ ಪ್ರಸಿದ್ಧ ಬ್ರಾಹ್ಮಣ ಪಂಡಿತನಿದ್ದು ಅವನು ತನ್ನ ಯೋಗಾಭ್ಯಾಸದ ಬಲದಿಂದ ಆಕಾಶ ಗಮನ ಮಾಡುವ ಸಾಮರ್ಥ್ಯವನ್ನು ಹೊಂದಿದವನಾಗಿದ್ದನು. ಅವನು ಒಂದು ದಿವಸ ಆಕಾಶ ಮಾರ್ಗದಿಂದ ಹೋಗುತ್ತಿರಲು ಕೆಳಗೆ ಶ್ವಪಚನು ಒಂದು ತಲೆಬುರುಡೆಯಲ್ಲಿ ತನ್ನ ಆಹಾರವನ್ನಿಟ್ಟುಕೊಂಡು ಭುಂಜಿಸುತ್ತಾ ಇದ್ದನು. ಆಗ ಶ್ವಪಚನು ಆಕಾಶ ಮಾರ್ಗದಿಂದ ಹೋಗುತ್ತಿದ್ದ ಸಾಮವೇದಿಯ ದೃಷ್ಟಿಯು ಪರಮಾತ್ಮನಿಗೆ ಅರ್ಪಣವಾದ ತನ್ನ ಆಹಾರದಲ್ಲಿ ಬೀಳಬಾರದೆಂದು ಅದನ್ನು ಕೆರಹದಿಂದ ಮುಚ್ಚಿದನು. ಸಾಮವೇದಿಯು ಅದನ್ನು ನೋಡಿ ಬೆರಗಾಗಿ ಗಗನದಿಂದ ಕೆಳಗಿಳಿದು ಹೀಗೇಕೆ ವರ್ತಿಸಿದೆ ಎಂದು ಶ್ವಪಚಯ್ಯನನ್ನು ಕೇಳಲು ಅವನು ಅದಕ್ಕೆ, ಸಾಮವೇದಿಯು ಒಬ್ಬ ಭವಿ ಎಂದು ಭಾವಿಸಿ ಉತ್ತರವನ್ನು ಕೊಡದಿರಲು ಸಾಮವೇದಿಯು ತನ್ನ ಗ್ರಾಮಕ್ಕೆ ಹೊರಟು ಹೋದನು. ಆದರೆ ಪರಮಾತ್ಮನು ಸಾಮವೇದಿಯ ಕನಸಿನಲ್ಲಿ ಬಂದು ಶ್ವಪಚನೆಂದರೆ ಸಾಮಾನ್ಯನಲ್ಲ, ಅವನು ನಾನೆಂದೇ ಭಾವಿಸಿ ಅವನನ್ನು ಪುನಃ ಕಾಣು ಎಂದು ತಿಳಿಸಿ, ಹಾಗೆಯೇ ಅವನು ಶ್ವಪಚನ ಕನಸಿನಲ್ಲಿ ಬಂದು ಸಾಮವೇದಿಗೆ ಉಪದೇಶವನ್ನು ಮಾಡಿ ಅವನ ಭವಿತನವನ್ನು ಕಳೆ ಎಂದು ಹೇಳಿದನು. ಆಗ ಸಾಮವೇದಿಯು ಮರುದಿನ ಶ್ವಪಚಯ್ಯನನ್ನು ಕಂಡು ಅವನಿಂದ ಬೋಧೆಯನ್ನು ಹೊಂದಿ ಶಿವದೀಕ್ಷೆಯನ್ನು ಪಡೆದನು. ಆಗ ಭತ್ತೀಸಪುರದಲ್ಲಿದ್ದ ಸಾಮವೇದಿಯೂ ಅವನ ಶಿಷ್ಯರೂ ದೀಕ್ಷೆಯನ್ನು ಹೊಂದಿದರು. ಈ ಯಾವತ್ತು ವಿಷಯಗಳನ್ನು ಹರಿಹರನು ತನ್ನ ರಗಳೆಯಲ್ಲಿ ಬಹು ಸುಂದರವಾಗಿ ವರ್ಣಿಸಿದ್ದಾನೆ. (ಹರಿಹರನ ರಗಳೆಗಳು ಭಾಗ ೫ ನೋಡಿರಿ.)

ಭೋಗಣ್ಣನೆಂಬ ಇನ್ನೊಬ್ಬ ಶಿವಶರಣನು ಕಲಬುರ್ಗಿ ಜಿಲ್ಲೆಯಲ್ಲಿರುವ ಕೆಂಭಾವಿಯಲ್ಲಿದ್ದನು. ಇವನು ಬ್ರಾಹ್ಮಣ ಕುಲದವನು. ಒಂದು ದಿನ ಒಬ್ಬ ಅಸ್ಪೃಶ್ಯನು ಹೆಗಲ ಮೇಲೆ ಮಿಣಿ, ಕೈಯ್ಯಲ್ಲಿ ಸಂಬಳಿಗೋಲು ಹಿಡಿದುಕೊಂಡು ಅವನ ಗೃಹವನ್ನು ಪ್ರವೇಶಿಸಲು, ಅವನು ಕೇವಲ ಶಿವಭಕ್ತನೆಂಬುದನ್ನು ಭೋಗಯ್ಯನು ತಿಳಿದು ಅವನನ್ನು ಉಪಚರಿಸಿದನು. ಆಗ ಆ ಗ್ರಾಮದ ವಿಪ್ರರು ಅವನ ವಿಷಯವಾಗಿ ತಮ್ಮ

ರಾಜನಲ್ಲಿ ದೂರು ಹೇಳಲು, ರಾಜನು ಗ್ರಾಮವನ್ನು ಬಿಟ್ಟು ಹೊರ ಹೊರಡಲು ಭೋಗಯ್ಯನಿಗೆ ಆಜ್ಞಾಪಿಸಿದನು. ಆಗ ಅವನು ಪುರ ವನ್ನು ಬಿಟ್ಟು ಹೋಗಲು ಅಲ್ಲಿಯ ದೇವಾಲಯಗಳಲ್ಲಿದ್ದ ಎಲ್ಲ ಲಿಂಗ ಗಳು ಅವನ ಬೆನ್ನುಹತ್ತಿ ಹೋದವು. ಮರುದಿನ ಬ್ರಾಹ್ಮಣರು ಪೂಜೆ ಗೋಸ್ಕರ ದೇವಾಲಯಗಳನ್ನು ಪ್ರವೇಶಿಸಲು ಅಲ್ಲಿ ಬರೇ ಪೀಠಗಳಿದ್ದ ದ್ದನ್ನು ಕಂಡು ಬೆರಗಾಗಿ, ಇದು ಭೋಗಯ್ಯನ ಮಹಿಮೆ ಎಂದು ತಿಳಿದು ಅವನನ್ನು ಮನ್ನಿಸಿ ಪಟ್ಟಣಕ್ಕೆ ಬರಮಾಡಿಕೊಂಡು ಅವನನ್ನು ಹೆಚ್ಚಾಗಿ ಮನ್ನಿಸುವವರಾದರು.

ಮೇಲೆ ಹೇಳಿದ ಮೂವರೂ ಅಸ್ಪೃಶ್ಯ ಶಿವಶರಣರು ಬಸವೇಶ್ವರನ ಕಿಂತಲೂ ಹಿಂದಿನವರು. ಆದರೆ ಬಸವೇಶ್ವರನ ಕಾಲಕ್ಕೂ ಅನೇಕ ಅಸ್ಪೃಶ್ಯ ಮಹಿಮರೂ ಉದ್ಭವಿಸಿ ಅವನಿಂದ ಮನ್ನಣೆಯನ್ನು ಹೊಂದಿ ದ್ದಾರೆ. ಅವರಲ್ಲಿ ಕಕ್ಕಯ್ಯ, ಶಿವನಾಗಮಯ್ಯ ಮತ್ತು ಹರಳಯ್ಯ ಇವರು ಮುಖ್ಯರಾಗಿದ್ದಾರೆ. ಕಕ್ಕಯ್ಯನು ಘೋರರವನು. ಶಿವನು ಶಿವಾನು ಭವ ಮಂಟಪದಲ್ಲಿ ಸೇವಕನಾಗಿ ಅಲ್ಲಿಯ ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧನಾದನು. ಅವರೆಲ್ಲರು ಅವನ ಪ್ರಸಾದವನ್ನು ಸ್ವೀಕರಿಸುವವರಾ ಗಿದ್ದರು. ಆ ಕಾಲದಲ್ಲಿ ಎಲ್ಲರೂ ಶುಚಿರ್ಭೂತರಾಗಿ ಶಿವಶರಣರ ಮತ ದಂತೆ ಆಚರಿಸುವವರಾದ್ದರಿಂದ ಸ್ಪೃಶ್ಯಾಸ್ಪೃಶ್ಯ ಭೇದಗಳು ಅಥವಾ ಜಾತಿ ವಿಷಯಕ ವಿಚಾರಗಳು ಶಿವಾನುಭವ ಮಂಟಪದಲ್ಲಿ ತಲೆದೋರಲಿಲ್ಲ.

ಶಿವನಾಗಮಯ್ಯನೆಂಬ ಇನ್ನೊಬ್ಬ ಅಸ್ಪೃಶ್ಯ ಶಿವಶರಣನು ಬಸ ವೇಶ್ವರನಲ್ಲಿ ಇರುತ್ತಿರಲು, ಅವನ ಮಹತ್ವವನ್ನು ತೋರಿಸುವ ಅಪೇಕ್ಷೆ ಯಿಂದ ಬಸವೇಶ್ವರನು ಅವನ ಕಯ್ಯನ್ನು ಹಿಡಿದು ಮೆಲ್ಲನೆ ಒತ್ತುತ್ತಿ ರಲು ಅದರೊಳಗಿಂದ ಹಾಲು ಸುರಿಯಹತ್ತಿತು.

ಈ ಯಾವತ್ತೂ ಕಥೆಗಳ ಮುಖ್ಯ ಭಾವವು ಆಚಾರವಂತರಾದ ಅಸ್ಪೃಶ್ಯ ಶಿವಭಕ್ತರು ಉಳಿದ ಯಾವ ಭಕ್ತರಿಗಿಂತಲೂ ಕಡಿಮೆಯವ ರಲ್ಲ, ಅವರಲ್ಲಿ ಯಾವ ತರದ ಭೇದಭಾವವನ್ನು ಕಲ್ಪಿಸಕೂಡದು, ಇಷ್ಟೇ ಅಲ್ಲ, ಅವರೊಡನೆ ಅನ್ನ ಗ್ರಹಣ ಮೊದಲಾದ ಎಲ್ಲ ತರದ ಬಳಿಕೆ ಯನ್ನು ಸಹ ಮಾಡಲು ಸಂಕೋಚವಿರಕೂಡದು ಎಂಬುದು ವ್ಯಕ್ತ ವಾಗುತ್ತದೆ.

ಈಗಿನ ಪುಸ್ತಕದಲ್ಲಿ ಹರಳಯ್ಯ ಮಧುವರಸರ ಕಥೆಯು ನಿರೂಪಿಸ ಲ್ಪಟ್ಟಿರುತ್ತದೆ. ಈ ಉಭಯತರಲ್ಲಿ ಮಧುವರಸನು ಜಾತಿಯಿಂದ ಬ್ರಾಹ್ಮಣ ನಿದ್ದು ಬಿಜ್ಜಳನ ಕಾಲದಲ್ಲಿ ಒಂದು ಶ್ರೇಷ್ಠತರದ ಅಧಿಕಾರ ಸ್ಥಾನವನ್ನು ಪಡೆ ದಿದ್ದನು. ಹರಳಯ್ಯನು ಮಜ್ಜಿಗೆಯನ್ನು ಮಾಡುವ ಕಾಯಕವನ್ನು ಮಾಡು ತ್ತಿದ್ದು ಬಸವೇಶ್ವರನು ಅವನ ಭಕ್ತಿಗೆ ಮೆಚ್ಚಿದವನಾಗಿದ್ದನು. ಒಂದು ದಿನ ಬಸವೇಶ್ವರನು ರಾಜಮಾರ್ಗದಿಂದ ಹೋಗುತ್ತಿರಲು ಅವನು ತನ್ನ ಇದಿರಿಗೆ ಹರಳಯ್ಯನನ್ನು ಕಂಡು ಅವನಿಗೆ "ಶರಣು" ಎಂದು ನಮಸ್ಕಾರ ಮಾಡಿ ಮುಂದೆಸಾಗಿದನು. ಹರಳಯ್ಯನು ರಾಜನ ಮಂತ್ರಿಯಿಂದ ಹೀಗೆ ಶರಣೆಂದು ಹೇಳಿಸಿಕೊಂಡದ್ದು ತನ್ನ ಮಹತ್ವಾಪವೆಂದು ಭಾವಿಸಿ ಇದನ್ನು ದೂರ ಮಾಡುವದಕ್ಕೋಸ್ಕರ ಬಹು ಶ್ರಮಪಟ್ಟು ಅವನಿಗೊಂದು ಮಜ್ಜಿಗೆಯ ಜೋಡನ್ನು ಸಿದ್ಧಪಡಿಸಿ ಶಿವಾನುಭವ ಮಂಟಪಕ್ಕೆ ಹೋಗಿ ಬಸವೇಶ್ವರನಿಗೆ ಒಪ್ಪಿಸಿದನು. ಆಗ ಬಸವೇಶ್ವರನು ಒಬ್ಬ ಶಿವಾನುಭವಿಯ ಕೈಯ್ಯಿಂದಾದ ಜೋಡನ್ನು ಹೀಗೆ ತಾನು ಮೆಟ್ಟುವದು ಉಚಿತವಾದುದಲ್ಲವೆಂದು ತಿಳಿದು ಅವುಗಳನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಮುಂದೆ ಹರಳಯ್ಯನು ಅಲ್ಲಿಂದ ತೆರಳಿ ರಾಜಮಾರ್ಗದಿಂದ ಬರುತ್ತಿರಲು ದಾರಿಯಲ್ಲಿ ಮಧು ವರಸನು ಅವನನ್ನು ಕಂಡು ಅವನ ಕೈಯ್ಯಲ್ಲಿದ್ದ ಆ ಸುಂದರವಾದ ಜೋಡನ್ನು ಬಲಾತ್ಕಾರದಿಂದ ಕಸೆದುಕೊಂಡು ಹೋದನು. ಹೀಗೆ ಒಬ್ಬ ಶಿವಶರಣನ ಮನಸ್ಸಿಗೆ ಒಪ್ಪಿಗೆ ಇರದಂಥ ಕಾರ್ಯವನ್ನು ಮಧುವರ ಸನು ಮಾಡಲಾಗಿ ಅವನಿಗೆ ಕುಷ್ಠರೋಗವು ಉಂಟಾಗಿ ಅದರಿಂದ ಅವನು ಬಹಳ ತಾಪವನ್ನು ಹೊಂದಹತ್ತಿದನು. ಒಂದುದಿನ ಅವನ ಸ್ನಾನದ ನೀರು ಬಹಳ ಕುದಿಯುತ್ತಿರಲು ಅದರಲ್ಲಿ ಸುರಿಯುವದಕ್ಕೋಸ್ಕರ ಬಾವಿಯಿಂದ ನೀರನ್ನು ಬೇಗನೆ ತರಲು ದಾಸಿಯೊಬ್ಬಳನ್ನು ಮನೆಯವರು ಕಳುಹಿಸಲು ಅವಳು ದಾರಿಯಲ್ಲಿ ಬಿರುಗಾಳಿ ಬಿಟ್ಟು ಮಳೆ ಚಿನ್ನು ತೋರಿದ್ದರಿಂದ ದೂರ ದಲ್ಲಿದ್ದ ಬಾವಿಗೆ ಹೋಗದೆ ನೆರೆಯಲ್ಲಿದ್ದ ಹರಳಯ್ಯನ ಬಚ್ಚಲ ಗುಂಡಿಯಲ್ಲಿ ನಿಂತಿದ್ದ ನೀರನ್ನೇ ತಂದು ಆ ಬಿಸಿನೀರಲ್ಲಿ ಹಾಕಿಬಿಟ್ಟಳು. ಆ ನೀರಿ ನಿಂದ ಮಧುವರಸನು ಸ್ನಾನ ಮಾಡಲು ಅವನ ಮೈಯ್ಯಲ್ಲಿದ್ದ ಬೇಗೆ ಎಲ್ಲವು ಹೊರಟು ಹೋಗಿ ಅವನ ಕುಷ್ಠರೋಗವು ವಾಸಿಯಾಯಿತು. ಹೀಗೇಕಾಯಿತೆಂಬುದು ಮಧುವರಸನಿಗೆ ತಿಳಿಯಲಾಗಿ ಹರಳಯ್ಯನ ಗೋಸ್ಕರ ಅತ್ಯಂತ ಭಕ್ತಿಭಾವವನ್ನು ಅವನು ವಹಿಸಿದವನಾಗಿ ವೀರ

ಶೈವ ದೀಕ್ಷೆಯನ್ನು ಹೊಂದಿದನು. ಇಷ್ಟೇಅಲ್ಲ, ಅವನ ಮಗನಿಗೆ ತನ್ನ ಮಗಳನ್ನು ಸಹ ಕೊಟ್ಟು ಲಗ್ನ ಮಾಡಿದನು- ಹೀಗೆ ಮಧುವರಸನು ಲಗ್ನ ಮಾಡಿದ್ದಕ್ಕೋಸ್ಕರ ಕಲ್ಯಾಣ ಪಟ್ಟಣದಲ್ಲಿಯ ದ್ವಿಜರು ಬಿಜ್ಜಳರಾಯನಲ್ಲಿಗೆ ಹೋಗಿ ದೂರಲಾಗಿ, ಬಿಜ್ಜಳನು ಬಸವೇಶ್ವರನನ್ನು ಕರಿಸಿ ಹೀಗೆ ಶಿವಶರಣರು ನಡೆಯಬಹುದೇ ಎಂದು ಕೇಳಲಾಗಿ ಬಸವೇಶ್ವರನು ಶಿವಶರಣರಲ್ಲಿ ಕುಲಸೂತಕವನ್ನು ಎಣಿಸಕೂಡದ್ದೆಂದು ನುಡಿದನು. ಆದರೆ ಬಿಜ್ಜಳನು ಇವನ್ನು ಮನ್ನಿಸದೆ, ಹರಳಯ್ಯ - ಮಧುವರಸರನ್ನು ಕರಿಸಿ ಅವರಿಬ್ಬರನ್ನು ಶೂಲದ ಮೇಲೆ ಕುಳ್ಳಿರಿಸಿ ವಧಿಸಿದನು.

ಬಿಜ್ಜಳನ ಈ ವರ್ತನೆಯನ್ನು ಕಂಡು ಕಲ್ಯಾಣದಲ್ಲಿದ್ದ ಶಿವಶರಣರೆಲ್ಲರೂ ಸಂತಾಪಿಸಿದರು. ಬಸವೇಶ್ವರನು ಇನ್ನು ಮುಂದೆ ಕಲ್ಯಾಣದಲ್ಲಿ ಇರಲಾಗದೆಂದು ಅಲ್ಲಿಂದ ಅವನು ತನ್ನ ಹೆಂಡತಿ ನೀಲಾಂಬಿಕೆಯೊಡನೆ ಕೂಡಿಕೊಂಡು ಕಪ್ಪಡಿ ಸಂಗಮೇಶ್ವರನಲ್ಲಿಗೆ ಬಂದನು. ಮತ್ತು ಆ ಸ್ಥಳದಲ್ಲಿಯೇ ಅವನು ಐಕ್ಯ ಹೊಂದಿದನು.

ಮಧುವರಸ ಹರಳಯ್ಯನವರ ಈ ಕಥೆಯು ತ್ರಿಪದಿಯಲ್ಲಿ ರಚಿಸಲ್ಪಟ್ಟಿದ್ದು ಅದನ್ನು ನಾವು ಇಲ್ಲಿ ಪ್ರಸಿದ್ಧಿಸಿದ್ದೇವೆ. ಅದು ಬಹು ಸುಲಭ ಭಾಷೆಯಲ್ಲಿ ರಚಿಸಲ್ಪಟ್ಟಿರುತ್ತದೆ. ಇದರ ಮೂಲ ಗ್ರಂಥವನ್ನು ಇಂಡೀ ತಾಲೂಕು ಉಮ್ಮರ್ಜಿ ಗ್ರಾಮದಲ್ಲಿರುವ ಶ್ರೀ. ದುಂಡನಗೌಡ ರಾಮನಗೌಡ ಪಾಟೀಲ ಶಾಳಾ ಮಾಸ್ತರ ಇವರು ನಮಗೆ ತಂದು ಕೊಟ್ಟರು. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಈಚೆಗೆ ಹರಳಯ್ಯನವರ ಕವಿತಾ ಬದ್ಧ ಚರಿತ್ರೆಯನ್ನು ಬಹಳ ಜನರು ಬೇಡಹತ್ತಿದ್ದಾರೆ. ಆದ್ದರಿಂದ ಇದನ್ನು ಈಗ ಸ್ವತಂತ್ರ ಗ್ರಂಥವಾಗಿ ಮುದ್ರಿಸಿದ್ದೇವೆ. ನಮ್ಮ ಹತ್ತಿರದಲ್ಲಿ ಹರಳಯ್ಯನ ಇನ್ನೊಂದು ಹಸ್ತಲಿಖಿತ ವಿಸ್ತಾರವಾದ ಗ್ರಂಥವೊಂದಿದೆ. ಅದನ್ನು ಮುಂದೆ ನಾವು ಸಮಯಾನುಸಾರ ಸ್ವತಂತ್ರವಾಗಿ ಮುದ್ರಿಸುವೆವು. ಆದರೆ ಎಲ್ಲ ವಿಷಯಗಳನ್ನು ಸ್ವಲ್ಪದರಲ್ಲಿ ಕ್ರೋಡೀಕರಿಸಿ ಈಗಿನ ಈ ಗ್ರಂಥವು ಬರೆಯಲ್ಪಟ್ಟಿದ್ದರಿಂದ ಇದು ಓದುಗರಿಗೆ ಹೆಚ್ಚಿಗೆ ಉಪಯೋಗವಾಗಬಹುದೆಂದು ಎಣಿಸಿ ಇದನ್ನು ಈಗ ಪ್ರಸಿದ್ಧಿಸಿದ್ದೇವೆ. ಮೂಲ ಪ್ರತಿಯು ಅನೇಕ ಹಸ್ತ ದೋಷಗಳುಳ್ಳದ್ದಾಗಿದೆ. ಬೇರೆ ಪ್ರತಿಗಳು ನಮಗೆ ದೊರೆಯದ್ದರಿಂದ ಅವುಗಳನ್ನೆಲ್ಲ ತಿಪ್ಪಲಿಕ್ಕೆ ನಮಗೆ ಸಾಧ್ಯ

ವಾಗಿರುವದಿಲ್ಲ. ಈ ಕಾವ್ಯವು ಸಾಮಾನ್ಯ ಜನರಿಗೆ ಸಹ ತಿಳಿಯಬೇಕೆಂದು ಕವಿಯ ಉದ್ದೇಶವಿರುವದರಿಂದ ಪದಗಳನ್ನು ಅವನು ಜನರಾಡುವ ಭಾಷೆಯಲ್ಲಿಯೇ ರಚಿಸಲು ಪ್ರಯತ್ನಿಸಿದ್ದಾನೆ. ಛಂದಶ್ಶಾಸ್ತ್ರದ ನಿಯಮಗಳನ್ನು ಅವನು ಅನುಸರಿಸಿರುವದಿಲ್ಲ. ಆದರೂ ಅನ್ನುವವರು ಪದಗಳನ್ನು ಸರಿಯಾಗಿ ಹೊಂದಿಸಿಕೊಂಡು ಅವನ್ನು ಚನ್ನಾಗಿ ಅನ್ನಬಹುದಾಗಿದೆ.

ವಿಜಾಪುರ.
ತಾ. ೧೫-೮-೪೧

ಫ. ಗು. ಹಳಕಟ್ಟಿ
ಸಂಪಾದಕ.

ಜಂಗಮದ ಪಾದದ-ಉಂಗುಷ್ಠ ತೀರ್ಥವ ।
ಲಿಂಗಜಂಗಮಕೆ ಎಡೆಯಾಗಿ ಕಳೆದುಂಬಿ ।
ಮಂಗಳಾರತಿಯ ಬೆಳಗಿದರು ॥೬೪॥

ಚಂದ್ರಕಾಂತದ ಲಿಂಗ-ತಂದಭಿಷೇಕವ ಮಾಡಿ ।
ಗಂಧಪುಷ್ಪಗಳಿಡೆಯಾಗಿ ಅಕ್ಷತೆಯ ।
ಇಂದುಧರನಿಗೆ ಎಡೆಯಾಗಿ ॥೬೫॥

ಮಿಂದು ಮಡಿಯನುಟ್ಟು-ಹೊಂದಿ ಭಸಿತವಿಟ್ಟು ।
ಬಂದು ಶ್ರೀಗುರುವಿಗೆಂಗಿದ ಮಧುವಯ್ಯ ।
ವಂದೆ ಕುಳ್ಳಿರ್ದ ಶುಭದಿಂದ ॥೬೬॥

ಧೃಡಭಕ್ತನ ಮನೆಯ ಮಡದಿ ಮಕ್ಕಳು ಸಹ ।
ಒಡೆಯಗೆ ಶರಣೆಂದು ಕುಳಿತು ಗುರುವಿನ ।
ಅಡಿಗೆ ವಂದಿಸಿ ಕರ ಮುಗಿದು ॥೬೭॥

ಗುರುರಾಯ ತನ್ನಯ-ಪರಮ ಸಂತೋಷದಿ ।
ಉರದಲ್ಲಿ ಲಿಂಗವ ಧರಿಸಿದ ಶರಣರ ।
ಹರುಷವೆ ಮೇರೆ ಮಿಗಿಲಾಗಿ ॥೬೮॥

ಲಿಂಗವ ಧರಿಸಿದ-ಮಂಗಳಾತ್ಮಕ ಗುರು ।
ಅಂಗದ ಪಾಪಕ್ಷಯವೆಂದು ಪ್ರಭುರಾಯ ।
ಸಂಗಮೇಶ್ವರನಮಿಗೆ ಕೊಟ್ಟು ॥೬೯॥

ಕರ್ಣ ಮಂತ್ರವ ತುಂಬಿ-ಜೀರ್ಣಿಸಿ ಪೂರ್ವವ ।
ನಿರ್ಣಯ ಕರವ ಶಿರದಲ್ಲಿ ಇಟ್ಟಾಗ ।
ಪರ್ಣದುದಕವ ತಳೆದನು ॥೭೦॥

ನಿತ್ಯನಾಗಯ್ಯ ಮಗನೆ-ಭಕ್ತವತ್ಸಲನಾಗು ।
ಅತ್ಯಂತ ಭಾಗ್ಯ ನಿನಗೆಂದು ನೊಸಲಿಗೆ ।
ಕರ್ತೃ ಭಸಿತವನಿಟ್ಟು ಹರಿಸಿ ॥೭೧॥

ಗುರುವೆ ದೀಕ್ಷಾ ಗುರುವೆ-ಗುರುವೆ ಮೋಕ್ಷಾ ಗುರುವೆ ।
ಗುರುವೆ ಎನ್ನಯ ಪುರತರುವೆ ಮಧುವಯ್ಯ ।
ಹರುಷದಿ ಸಾಷ್ಟಾಂಗವೆರಗಿದ ॥೭೨॥

ಗಿಡಿಬಿಡಿ-ತಮ್ಮಟ-ಹಾಡುವ ನಿಸ್ಸಾಳ ಭೇರಿ।
ಸೊಡವಿಯಲ್ಲದುರೆ ನಡುಗುತ ಮುಧುವಯ್ಯ।
ಸೊಡೆವಟ್ಟ ತನ್ನ ಗುರುವಿಗೆ ॥೭೩॥

ಹೆಚ್ಚಾಗೆ ಮಗ ನಿನ-ಗಚ್ಚ ಪದವಾಗಲಿ।
ಕಿಚ್ಚುಗಣ್ಣನ ಕರುಣದಲಿ ಬಾಳೆಂದು।
ಜೆಚ್ಚಂತೆ ಹರಸಿ ಕಳುಹಿದ ॥೭೪॥

ಪತ್ತಿರಡು ಸಾವಿರ-ಸತ್ತಿಗೆ ನೆರೆದವು।
ಮುತ್ತಿನಾರತಿ ತೆರೆಹಾಯಿಸಿ ರತ್ನಿಯ।
ಒತ್ತಿನ ಸಿರಿಯ ಪೊಗಳುವರಿ ॥೭೫॥

ಚಿನ್ನದ ಅಡಸಿನ-ರನ್ನ ರತ್ನಗಳಿಟ್ಟು।
ಜಿನ್ನ ಮುತ್ತಿನ ಸರವಿಟ್ಟು ದಂಡಿಗೆ।
ಹನ್ನೆರಡು ಸಾವಿರ ನೆರೆದವು ॥೭೬॥

ಪಟ್ಟಾಳಿ ಸೀರಿಲಿ-ಕಟ್ಟಿ ಗುಡಿ ತೋರಣ।
ಕಟ್ಟಳೆಯಿಲ್ಲ ಕಡೆಯಿಲ್ಲ ಕಲ್ಯಾಣ।
ಪಟ್ಟಣವೆಲ್ಲ ಬೆರಗಾಗೆ ॥೭೭॥

ಹೊನ್ನ ಕಳಸವಿಟ್ಟು-ಚಿನ್ನದ ಹರಿವಾಣದಲಿ।
ಕನ್ನೆ ವೆಣ್ಣಗಳು ನೆರೆವೆಲ್ಲ ಹೊತ್ತರು।
ಹನ್ನೆರಡು ನೂರು ಕಳಸವ ॥೭೮॥

ಹೆಂಡಿರು ಮಕ್ಕಳು-ಹಿಂಡು ಹರಿವಾಣದಲಿ।
ಮಂಡಲ ಪತಿಯ ಭಸಿತವನು ಇಟ್ಟು ನಡೆ।
ಗೊಂಡನು ಹರಳಯ್ಯನ ಮತಕಾಗಿ ॥೭೯॥

ಉತ್ತಮಾಂಗದ ಮೇಲೆ-ಹೊತ್ತು ಚವ್ಮಾವುಗೆಯ।
ಸತ್ಯ ಹರಳಯ್ಯಗೆ ಶರಣೆಂದು ನಡೆದರು।
ಈ ತೆರನ ಸಭೆ ಅರಿವಂತೆ ॥೮೦॥

ತರಳನಾತಗೆಮರುಳು-ಗೊಂಡನವನುಯೆಂದು।
ದುರುಳ ವಿಪ್ರರು ನುಡಿದರು ಮಧುವಯ್ಯ।
ಕರುಳನೆ ತೆಗೆವೆನೆನುತಿರ್ದ ॥೮೧॥

ಆಂತೆನಬಾರದು-ಇಂತೆನಬಾರದು।
ಎಂತೆನಬಾರದೆನುತಲಿ ವಿಪ್ರರು।
ಕೊಂತಗೊಂಡಂತೆ ನಡೆದರು ॥೮೨॥

ಆರೈದೆಲ್ಲಿಯ ರಭಸ-ಭೋರ್ಗರೆವ ಕಹಳೆ।
ಭೂರಿ ಶಿತ್ತಿರಿ ಮೆರೆದವು ಎತ್ತಣದೆಂದು।
ಮಾರಾರಿ ಶರಣ ಬೆಸಗೊಂಡ ॥೮೩॥

ಮಧುವರಸಯ್ಯನು-ಮುದದಿ ಲಿಂಗವ ಕಟ್ಟಿ।
ಸದಮಲದಿಂದೆ ಒರುತಿಹನು ನಿಮ್ಮಯ ಪಾದಕೆ।
ವಂದಿಸಲೆನುತಲಿ ॥೮೪॥

ಆಡಿ ತಪ್ಪುವನಲ್ಲ-ರೂಢಿಯೊಳು ಸಂಗಯ್ಯ।
ಹೂಡಿದನೊಂದು ಕಥನವ ಕಲ್ಯಾಣಕೆ।
ಕೇಡಿನ ಬೀಜ ಬರುತಿದೆ ॥೮೫॥

ಭವದೂರ ಹರಳಯ್ಯ-ಭವಕೆ ಚಿಂತಾಮಣಿಯು।
ಭವ ಭಾರಿಗಳಿಗೆ ಅರಿ ನೀನು ಹರಳೈ ತಂದೆ।
ನಿವದಿಂದ ನಿಮಗೆ ನಮಿಸುವೆನು ॥೮೬॥

ಅಪರಾಧಿ ನಾನಯ್ಯ-ಅಪರಂಪರನು ನೀನು।
ತ್ರಿಪುರ ಸಂಹರನ ಕರುಣದಲಿ ಹರಳೈ ತಂದೆ।
ಕೃಪೆ ಮಾಡು ಮಗನಿಗೆ ದಯದಿ ॥೮೭॥

ಬಂದ ಕಾರಣವೇನು-ಇಂದು ನೀವು ಇಲ್ಲಿಗೆ।
ಕುಂದು ಕುಲದವರ ಮನೆಗಾಗಿ ವಿಪ್ರರು।
ಹೊಂದರು ಇಲ್ಲಿ ಹೊಲೆಯೆಂದು ॥೮೮॥

ತಪ್ಪ ತಲೆಯಲಿ ಹೊತ್ತು-ಭೂಪ್ಪನನಾ ಬಂಡೆ।
ತಪ್ಪ ಬೆನ್ನಿಗೆ ಅಭಿಸಂದುವಾದಂತೆ।
ಹೆತ್ತವರ ಹಂಗ ಮೆರೆದೆನು ॥೮೯॥

ಏಳೇಳು ಮಧುವಯ್ಯ-ಭಾಳಲೋಚನ ನಿಮ್ಮ।
ಕೊಳುಗೊಂಡನೆ ಉರದಲ್ಲಿ ಶಿವಭಕ್ತರ।
ಆಳು ನಾನಯ್ಯ ಶರಣಾರ್ಥಿ ॥೯೦॥

ಎಂದ ಹರಳೈಯ್ಯಗೆ-ನಿಂದು ಮಧುವರಸಯ್ಯ।
ಇಂದು ನಾ ನಿಮ್ಮ ಶರಣರ ಶಿಸುವೆಂದು॥
ಮುಂದೆ ಮೈಯ್ಯಿಕ್ಕಿ ನಮಿಸಿದ ॥೯೧॥

ಸೃಷ್ಟಿಗೆ ಸಂಗಯ್ಯ-ಕಟ್ಟಾಳು ಹರಳಯ್ಯ।
ಮುಟ್ಟಿ ನಾ ನಿಮ್ಮ ಚರಣಕ್ಕೆ ಮಧುವರಸ।
ಸಾಷ್ಟಾಂಗವೆರಗಿ ನಮಿಸುವೆ ॥೯೨॥

ತಂದೆನು ಮಗಳನು-ಇಂದು ನಿಮ್ಮಲ್ಲಿಗೆ।
ಸಂದುದು ಎಂದು ಭಸಿತವನಿಟ್ಟರೆ।
ಇಂದು ನಿಮ್ಮಡಿಗೆ ಎರಗುವೆ ॥೯೩॥

ಅಸಮಯವ ನಡೆಯಿದು-ಹೊಸ ಪಂಯು ಲೋಕಕೆ।
ವಿಸಮಯ ಬಹುದು ನಮಗೆಲ್ಲ ಬಿಜ್ಜಳ।
ಮನಗೆ ಕಲ್ಯಾಣ ಕೆಡುವುದು ॥೯೪॥

ಭದ್ರಾವತಾರದ-ರುದ್ರಮೂರ್ತಿ ನೀನು।
ಚಿದ್ರೂಪ ಶಿವನ ಶರಣನೆ ಹರಳೈ ತಂದೆ॥
ಇದ್ದಹರು ನಿಮಗೆ ಸರಿಯಹರೆ ॥೯೫॥

ಬೇಡ ಮಧುವರಸಯ್ಯ-ಕಾಡಾದಿರೆಮ್ಮನು।
ನಾಡು ಬಿಜ್ಜಳನದು ಜಗವೆಲ್ಲ ನೆಚ್ಚರು।
ಮಾಡುವ ಕೆಲಸ ನಿನಗಲ್ಲ ॥೯೬॥

ನೇನಿಸಿ ತಂದೆನು-ನೇಮದಿಂದಲಿ ಮಗಳ।
ಸ್ವಾಮಿ ಕಪ್ಪಡಿಯ ಪುರದಯ್ಯನಾಣೆಂದು।
ನೀ ಒಂದು ಮಾತ ನುಡಿದರೆ ॥೯೭॥

ನೆಟ್ಟನೆ ಶಿವಯೆನುತ-ಕಟ್ಟಿದರು ಕಂಕಣವ।
ಇಟ್ಟರು ಭಸಿತ ನೊಸಲಿಗೆ ಶರಣ ನೀ।
ನೆಟ್ಟಿಂದು ಜೋಡು ಚರಣವ ॥೯೮॥

ಹಿಂದಿನ ಪಾಪವು-ಹೊಂದಿದ ಫಲದಿಂದೆ।
ಅಂದವಳಿಯಿತು ಭಯಗೊಂಡು ತಪ್ಪನು।
ನಿಮ್ಮಿಂದ ಉದಕದಲಿ ಕಳಿದೆನು. ॥೯೯॥

ಮನ್ನಿಸಿ ತಂದೆನು-ನಿಮ್ಮಪಾದಕೆ ಮಗಳ।
ಚನ್ನ ಕಪ್ಪಡಿಯ ಪುರದಯ್ಯನಾಣೆಂದು।
ಇನ್ನೊಂದು ಮಾತ ನುಡಿದರೆ ॥೧೦೦॥

ಸಾಸಿರ ಗಣಂಗಳ-ಲೇಸಿನ ಮಗ ನಾನು।
ದೇಶದೊಳೊಂದು ಹೊಸ ಪರಿಯಾಗಲಿ ಎಂದು।
ಬಸವಣ್ಣನಾಣೆಂದು ನುಡಿದರೆ ॥೧೦೧॥

ಇನ್ನೇನು ಶಿವಾ ಎನುತ-ಸನ್ನೆಯ ಮದುವೆ ಇದು।
ಪನ್ನಗಧರನ ಕಡೆಯಾಟ ಆಗಲಿಯೆಂದು।
ಚನ್ನಾಗಲೆಂದು ಅರುಹಿದ ॥೧೦೨॥

ಒಂದಡಿಕೆ ಒಂದೆಲೆ-ತಂದು ಹರಿವಾಣದಲಿ।
ತಂದು ಕನ್ನಿಕೆ ಕರದಲಿ ಇಟ್ಟರು।
ಇಂದು ಈ ಹೆಣ್ಣು ನಿಮಗೆಂದು ॥೧೦೩॥

ಉಚ್ಚಹ ಕೇಳುತ-ಹೆಚ್ಚಿದ ಮಧುವಯ್ಯ।
ಅಚ್ಚ ಮಹೇಶರಡಿಗಳಿಗೆ ಮಧುವರಸ।
ಬೆಚ್ಚಂತೆ ಪಾದಕೆರಗಿದ ॥೧೦೪॥

ನಂದಿ ಕಲ್ಯಾಣಕೆ.ಬಂದ ಪ್ರಮಥರಿಂಗೆಲ್ಲ।
ತಂದು ವೀಳೆಯ ನಡಿಸಿದರು ಮಧುವಯ್ಯ।
ಬಂದುದು ನಮಗೆ ಕಡೆಯಾಟ ॥೧೦೫॥

ಸೇಸೆಯನಿಕ್ಕಿದರು-ಏನೊಂದು ನಾಮವ
ಏನೊಂದು ಪರಿಯ ನೆನೆವುತಲಿ ಪದಮುಕ್ಕಳಿಗೆ।
ಪ್ರಸಾದವಿತ್ತರು ಕೈಗೂಡಿ ॥೧೦೬॥

ಶರಣಯ್ಯ ಶರಣಾರ್ಥಿ-ಶರಣು ಜಂಗಮಲಿಂಗ
ಶರಣು ನಿಮ್ಮಡಿಗೆ ಶರಣಾರ್ಥಿ ಎಂದೆನುತ।
ಶರಣನ ಕಥೆ ಇದ ಕೇಳಿ ॥೧೦೭॥

ಸದಮಲ ಶರಣರ-ಪಾದವ ನೆನೆದು ನಾ।
ಮುದದಿಂದೆ ಪದನ ನಡಿಸುವೆ ಇಲ್ಲಿಗೆ।
ಪದಿದೆರಡು ಸಂಧಿ ಶರಣಾರ್ಥಿ ॥೧೦೮॥

೩ ನೆಯ ಸಂಧಿ.

ಸಂಗನ ಶರಣರ-ಅಂಘ್ರಿಯ ನೆನೆದು ।
ನಾ ಹಿಂಗದೆ ಪದನ ನಡಿಸುನೆ ಕರಣರ ।
ಮಂಗಳುತ್ಸವ ಹೊಗಳುವೆ ॥೧॥

ಎಲ್ಲೆಲ್ಲಿ ನೋಡಿದೊ-ಡಲ್ಲಿ ಮದುವೆಯ ಸುದ್ದಿ ।
ಅಲ್ಲದವರಿವೆಗೆ ಮಗಳನು ಕೊಟ್ಟರು ।
ಕಲ್ಯಾಣ ಕೆಡುವುವೆನುತಲಿ ॥೨॥

ಪಟ್ಟಣದೊಳಗೆಲ್ಲ-ಹುಟ್ಟಿತು ಮದುವೆ ಸುದ್ದಿ ।
ಕೆಟ್ಟ ಕುಲದವರ ಮನೆಗಾಗಿ ವಿಪ್ರರು ।
ಕೊಟ್ಟರು ತಮ್ಮ ಮಗಳನು ॥೩॥

ಅಪರಾಧ ನಡೆಯಿತು-ವಿಪರೀತ ಬಂದಿದೆ ।
ತಪಸಿಗಳ ತಂಡ ಇರುವಲ್ಲಿ ಮಧುವರಸ ।
ಶ್ವಪಚರಿಂಗೆ ಹೆಣ್ಣ ಕೊಡಬಹುದೆ ॥೪॥

ಪಂಡ ಕಲ್ಯಾಣವು-ಮಿಂಚುಳ್ಳಿಚ್ಚಿನ ಧರ್ಮ ।
ಕೆಂಜ ಹಾರುವರು ಹೊಲಿಗೂಡಿದರೆಂದು ।
ಮಂಚಿ ಬೆಜ್ಜಳಗರುಹಿದನು ॥೫॥

ನೋಡಿರಲೆ ಜೀಯ್ಯ-ಕೇಡು ಪಟ್ಟಣದೊಳು ।
ಪೋಡಿ ಹಾರುವರು ಹೊಲಿಗೂಡಿ ಕೊಡುಕೊಳೆಯ ।
ಮಾಡಿದರಿಲ್ಲಿ ಇದ ಕೇಳಿ ॥೬॥

ಕರೆಯಿರೋ ಬಸವನ-ಅರಿಯ ಕೇಳಿದೆವೆಂದು ।
ಪುರಕೆ ಹೊಸತಹ ನುಡಿಗಳ ನಾವಿಲ್ಲಿ
ಇರಬಹುದೆ ನೇಮಿಮುನಿಗಳೀ ॥೭॥

ಅಣ್ಣಿಗಳ ಬಾಗಿಲ-ಬಣ್ಣದ ಚಾವಡಿ ।
ಹೆಣ್ಣಿನೋಲಗದ ಒಳಯಿಕೆ ಬಿಜ್ಜಳ ।
ಬಸವಣ್ಣನ ಬೇಗ ಕರಸಿವ ॥೮॥

ಅಕುಲಜರ ಮನೆಗೆ-ಉತ್ತಮ ಶೈವರು ।
ಹೆತ್ತ ಹೆಣ್ಣುಗಳ ಕೊಡಬಹುದೆ ನಿಮ್ಮಲ್ಲಿ ।
ಮತ್ತೆ ನಾಸಿಕಕೆ ಕರವಿಟ್ಟ ॥೯॥

ಅವರು ಕೊಡಬಹುದು-ಇವರು ಕೊಳಬಹುದು ।
ಶಿವನಿಪ್ಪನಲ್ಲಿ ನೆಲೆಯಾಗಿ ಭೂಪತಿ ।
ಹವಣಗಾಣದಲೆ ನುಡಿವರೆ ॥೧೦॥

ಇಂತು ನಡೆವರಿಗೆ-ಏಂತು ದೀಕ್ಷೆಗಳೆಂತು ।
ಮಂತ್ರಿಯನರಸು ಬೆಸಗೊಂಡ ಕೋಪದಲಿ ।
ಮಂಥಣಿ ಶೂಲಕೆಳಸುವೆ ॥೧೧॥

ನಡೆ ನಿಮ್ಮ ಮತಕಾಗಿ-ಹಿಡಿತಸ್ನಿವರನು ।
ಕಡುಗಲಿ ಚರರು ಹರಿದರು ಹರಳಯ್ಯಗಳ ।
ಹಿಡಿತಂದರು ಪದ ನಡಿಸುವೆ ॥೧೨॥

ನುಡಿಯ ವಿೂರಿದನಿವ-ಕಡೆಗಾಲ ಬಿಜ್ಜಳಗೆ ।
ಕಡು ಬೇಗ ಜನ್ನಣ್ಣಗರುಹೆಂದ ಕಪ್ಪಡಿಯ ।
ಮೃಡನ ಜಿಹ್ವೆಯಲಿಯಡಗುವೆ ॥೧೩॥

ಲೋಲ ಕರ್ಮದ ಗಂಡ-ಲೋಲ ಬಸವಣ್ಣನು ।
ಸಾಲೋಕ್ಯ ಪದಕೆ ನಡೆವುತಲಿ ಅಪ್ಪಣ್ಣ ।
ಕೇಳು ನೀಲಲೋಚನೆಗರುಹೆಂದ ॥೧೪॥

ಅಮ್ಮಾಜಿ ನೀ ಕೇಳು-ನಮ್ಮದಣ್ಣಾಯಕರು ।
ಉಮ್ಮಳದಿಂದ ತೆಳಿದರು ಕಪ್ಪಡಿಗೆ ।
ನಿಮ್ಮ ಬೇಗದಲಿ ಬರಹೇಳಿ ॥೧೫॥

ರಂಗವೋಲೆಯ ನಿಕ್ಕಿ-ಆಂಗನೆ ನೀಲಮ್ಮ ।
ಗಂಗೆವಾಳುಕರ ನೆನೆವುತ ನಡೆಗೊಂಡು ।
ಶೃಂಗಾರ ರಂಗನೆ ಪತಿವ್ರತೆ ॥೧೬॥

ನಡೆಗೊಂಡು ಬೇಗದಿ ತಡವಿಲ್ಲದಾಕ್ಷಣ ।
ಒಡೆಯ ಕಪ್ಪಡಿಯ ಶಿವನೆಡೆಗೆ ತಾ ಬಂದು ।
ನುಡಿದಳೊಂದು ಮುದದಿಂದ ॥೧೭॥

೩ ನೆಯ ಸಂಧಿ.

ಸಂಗನ ಶರಣರ-ಅಂಘ್ರಿಯ ನೆನೆದು ।
ನಾ ಹಿಂಗದೆ ಪದನ ನಡಿಸುವೆ ಶರಣರ ।
ಮಂಗಳುತ್ಸವ ಹೊಗಳುವೆ ॥೧॥

ಎಲ್ಲೆಲ್ಲಿ ನೋಡಿದೊ-ಡಲ್ಲಿ ಮದುವೆಯ ಸುದ್ದಿ ।
ಅಲ್ಲದವರಿಡೆಗೆ ಮಗಳನು ಕೊಟ್ಟರು ।
ಕಲ್ಯಾಣ ಕೆಡುವುದೆನುತಲಿ ॥೨॥

ಪಟ್ಟಣದೊಳಗೆಲ್ಲ-ಹುಟ್ಟಿತು ಮದುವೆ ಸುದ್ದಿ ।
ಕೆಟ್ಟ ಕುಲದವರ ಮನೆಗಾಗಿ ವಿಪ್ರರು ।
ಕೊಟ್ಟರು ತಮ್ಮ ಮಗಳನು ॥೩॥

ಅಪರಾಧ ನಡೆಯಿತು-ವಿಪರೀತ ಬಂದಿದೆ ।
ತಪಸಿಗಳ ತಂಡ ಇರುವಲ್ಲಿ ಮಧುವರಸ ।
ಶ್ವಪಚರಿಗೆ ಹೆಣ್ಣ ಕೊಡಬಹುದೆ ॥೪॥

ಪಂಚ ಕಲ್ಯಾಣವು-ವಿಂಚುಳ್ಳಿಟ್ಟಿನ ಧರ್ಮ ।
ಕೆಂಚ ಹಾರುವರು ಹೊಲೆಗೂಡಿದರೆಂದು ।
ಮಂಚಿ ಬೆಜ್ಜಳಗರುಹಿದನು ॥೫॥

ನೋಡಿರಿಲೆ ಜೀಯ್ಯ-ಕೇಡು ಪಟ್ಟಣದೊಳು ।
ಜೋಡಿ ಹಾರುವರು ಹೊಲೆಗೂಡಿ ಕೊಡುಕೊಳೆಯ ।
ಮಾಡಿದರಿಲ್ಲಿ ಇದ ಕೇಳಿ ॥೬॥

ಕರೆಯಿರೋ ಬಸವನ-ಅರಿಯ ಕೇಳಿದೆವೆಂದು ।
ಪುರಕೆ ಹೊಸತಹ ನುಡಿಗಳ ನಾವಿಲ್ಲಿ
ಇರಬಹುದೆ ನೇಮಿಮುನಿಗಳೇ ॥೭॥

ಅಣ್ಣಗಳ ಬಾಗಿಲ-ಬಣ್ಣದ ಚಾವಡಿ ।
ಹೆಣ್ಣಿನೋಲಗದ ಒಳಯಿಕೆ ಬಿಜ್ಜಳ ।
ಬಸವಣ್ಣನ ಬೇಗ ಕರಸಿದ ॥೮॥

ಅಕುಲಜರ ಮನೆಗೆ-ಉತ್ತಮ ಶೈವರು ।
ಹೆತ್ತ ಹೆಣ್ಣುಗಳ ಕೊಡಬಹುದೆ ನಿಮ್ಮಲ್ಲಿ ।
ಮತ್ತೆ ನಾಸಿಕಕೆ ಕರವಿಟ್ಟ ॥೯॥

ಅವರು ಕೊಡಬಹುದು-ಇವರು ಕೊಳಬಹುದು ।
ಶಿವನಿಪ್ಪನಲ್ಲಿ ನೆಲೆಯಾಗಿ ಭೂಪತಿ ।
ಹವಣಗಾಣದಲೆ ನುಡಿವರೆ ॥೧೦॥

ಇಂತು ನಡೆವರಿಗೆ-ಏಂತು ದೀಕ್ಷೆಗಳೆಂತು ।
ಮಂತ್ರಿಯನರಸು ಬೆಸಗೊಂಡ ಕೋಪದಲಿ ।
ಮಂಥಣಿ ಶೂಲಕೆಳಸುವೆ ॥೧೧॥

ನಡೆ ನಿಮ್ಮ ಮಠಕಾಗಿ-ಹಿಡಿತನ್ನಿವರನು ।
ಕಡುಗಲಿ ಚರರು ಹರಿದರು ಹರಳಯ್ಯಗಳ ।
ಹಿಡಿತಂದರು ಪದ ನಡಿಸುವೆ ॥೧೨॥

ನುಡಿಯ ವಿೂರಿದನಿವ-ಕಡೆಗಾಲ ಬಿಜ್ಜಳಗೆ ।
ಕಡು ಬೇಗ ಚನ್ನಣ್ಣಗರುಹೆಂದ ಕಪ್ಪಡಿಯ ।
ಮೃಡನ ಜಿಹ್ವೆಯಲಿಯಡಗುವೆ ॥೧೩॥

ಲೋಲ ಕರ್ಮದ ಗಂಡ-ಲೋಲ ಬಸವಣ್ಣನು ।
ಸಾಲೋಕ್ಯ ಪದಕೆ ನಡೆವುತಲಿ ಅಪ್ಪಣ್ಣ ।
ಕೇಳು ನೀಲಲೋಚನೆಗರುಹೆಂದ ॥೧೪॥

ಅಮ್ಮಾಜಿ ನೀ ಕೇಳು-ನಮ್ಮ ದಣ್ಣಾಯಕರು ।
ಉಮ್ಮಳದಿಂದ ತೆಳಿದರು ಕಪ್ಪಡಿಗೆ ।
ನಿಮ್ಮ ಬೇಗದಲಿ ಬರಹೇಳಿ ॥೧೫॥

ರಂಗವೋಲೆಯ ನಿಕ್ಕಿ-ಅಂಗನೆ ನೀಲಮ್ಮ ।
ಗಂಗೆವಾಳುಕರ ನೆನೆವುತ ನಡೆಗೊಂಡು ।
ಶೃಂಗಾರ ರಂಗನೆ ಪತಿವ್ರತೆ ॥೧೬॥

ನಡೆಗೊಂಡು ಬೇಗದಿ ತಡವಿಲ್ಲದಾಕ್ಷಣ ।
ಒಡೆಯ ಕಪ್ಪಡಿಯ ಶಿವನೆಡೆಗೆ ತಾ ಬಂದು ।
ನುಡಿದಳೊಂದು ಮುದದಿಂದ ॥೧೭॥

ಬಂದ ಕಾರಣವೇ-ಇಂದು ದಣ್ಣಾಯಕರು ।
ಎಂದು ಅಪ್ಪಣ್ಣಗೆ ಬೆಸಗೊಳೆ ಕಪ್ಪಡಿಯ ।
ಇಂದುಧರನೊಳು ಪಥನಿದು ॥೧೮॥

ಹರ ಹರ ಎನುತಲಿ-ಬರೆದಳು ಪಂಚಾಕ್ಷರಿ ।
ಪಿರಿದು ಸಂಗಯ್ಯ ನಮಗೀತ ಎನುತಲಿ ।
ಉರದ ಲಿಂಗಯ್ಯಗೆ ನಮಿಸಿದಳು ॥೧೯॥

ಸೋಜಿಗವ ಕಂಡೆನು-ಮೂಜಗದೊಳಗೊಂದು ।
ರಾಜಮಂತ್ರಿ ಬಸವೇಶಗೆ ನೀಲಮ್ಮ ।
ಓಜೆಯಲಿ ಕರವ ಮುಗಿದಳು ॥೨೦॥

ಅಚ್ಚರಿ ಕಂಡೆನು-ಖೇಚರ ಭೂಚರಕೆ ।
ಬಾಚಿರಾಜಯ್ಯ ಮಡಿವಾಳ ಮೋಳಿಗೆ ತಂದೆ ।
ಸಚರಾಚರಕೆಲ್ಲ ಹೊಸಪರಿಯು ॥೨೧॥

ಅರಿದು ನೀಲಮ್ಮನು-ಗರುವ ಗಂಭೀರ ತಾಯಿ ।
ಉರದ ಲಿಂಗವ ಕರದೆಡೆಗೆ ತಾ ಬಂದು ।
ಪುರಕೆ ಕೊಂಡೊಯ್ದು ನಲವಿಂದ ॥೨೨॥

ಉಭಯವ ಕಂಡನು-ಅಭಯವನಿತ್ತನು ।
ಪ್ರಭುದೇವರೆಂಬ ಸ್ವಯಂಜ್ಯೋತಿ ಕಪ್ಪಡಿಯ ।
ಅಭವನಿದ್ದೆಡೆಗೆ ನಡೆತಂದು ॥೨೩॥

ಹನ್ನೊಂದು ವಚನವ-ಚನ್ನಾಗಿ ಹೇಳಿದ ।
ಪನ್ನಗಧರನ ನುಡಿಗಳ ಅಲ್ಲೊಂದು ।
ಇನ್ನಾರಿಗರ್ಥ ತಿಳಿಯದು ॥೨೪॥

ಮೋಳಿಗಯ್ಯಗಳನು-ಹೇಳಲಿನ್ನಳವಲ್ಲ ।
ಧಾಳಲೋಚನನ ಭಜಕನ ಕರುಣವು ।
ಲೀಲೆಯಿಂದೆಮಗೆ ಇರಬೇಕು ॥೨೫॥

ನಮ್ಮ ಚನ್ನಣ್ಣನು-ನಿಮ್ಮ ಕೆಯ್ಯೊಳಗಿರಲಿ ।
ಬ್ರಹ್ಮಾಂಡಗಳಿಗೆ ಬಳಿಬಂದ ಆತನ ಮೇಲೆ ।
ನಿಮ್ಮ ಕರುಣವಿರಲೆಂದ ॥೨೬॥

ಮುಂದಣ ಕಥನಕೆ-ಒಂದು ಪರುಷ ನುಡಿ ।
ಇಂಗೆಮಗೆ ನೀವು ಕುಡಬೇಕು ಕಪ್ಪಡಿಯ ।
ಇಂದುಧರನೊಳಗಾದ ಬಸವಣ್ಣ ॥೨೭॥

ಜ್ಯೋತಿ ಜ್ಯೋತಿ ಬೆಳಗ-ಜ್ಯೋತಿ ತಾ ನುಂಗಿತು ।
ಜ್ಯೋತಿ ಕರ್ಪೂರದ ಇರವನು ಸಂಗಮನೊಳು ।
ನುತನು ಬಸವನಡಗಿದ ॥೨೮॥

R. N. B. 2554

ಶ್ರೀ

ಶಿವಾನುಭವ

ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ರೂ ೩—೬—೦

ಸಂಪುಟ ೧೫] ಸಪ್ಟಂಬರ ೧೯೪೧. [ಸಂಚಿಕೆ ೧೨

ವಿಷಯಾನುಕ್ರಮಣಿಕೆ.

	ವಿಷಯಗಳು.	ಲೇಖಕರು.	ಪುಟ.
೧	ಶಿವಾನುಭವ ಮತ್ತು ಅದರ ಪ್ರಸಾರ	ಶ್ರೀ ಬಸವಲಿಂಗಸ್ವಾಮಿಗಳವರ ಪ್ರವಚನ	೪೭೩
೨	ಧಾರಣ ದೀಕ್ಷೆ	ಶ್ರೀ ಗುರಮೂರ್ತಿದೇವರು ಶ್ರೀ ಮನ್ನಿಡುವಾಮಡಿ	೪೮೦ ೪೮೯
೩	ಪಾದೋದಕ	,,	೪೯೫
೪	ಶಿವದೀಕ್ಷೆ ಅರ್ಥಾತ್ ಲಿಂಗಧಾರಣ	ಜೀರಗೆ ಕ. ಬಸವಪ್ಪ ಬೆಂಗಳೂರನಗರ	೪೯೫
೫	ಲಿಂಗವಂತರಿನಲೀನ ಫಲ?	ಶ್ರೀ ಮಾ. ನಂ. ನಂಜಪ್ಪ	೪೧೧
೬	ಲಿಂಗಧಾರಣ ಅರ್ಥಾತ್ ಶಿವದೀಕ್ಷೆ	ಶ್ರೀ ಎಸ್. ರಾಜೋಟಿಹ್ಯಾ ಕಾನಕಾನಹಳ್ಳಿ	೪೧೩
೭	ವೀರಶೈವರಲ್ಲಿ ಸಂಘಟನೆ	ಶ್ರೀ ಶಿವಮೂರ್ತಿ	೪೨೨
೮	ಜೀವಾನುಭವವೂ ಶಿವಾನುಭವವೂ	ಶ್ರೀ. ಬ. ಚೆ. ಪಟ್ಟೇದ ಪಂಟಿಮುರಿ	೪೨೬
೯	ಬಸವೇಶ್ವರನ ಚರಿತ್ರೆ	ರಾ। ಬ। ಫ. ಜಿ. ಹಳಕಟ್ಟಿ	೪೩೫
೧೦	ಸ್ಫುಟವಿಷಯಗಳು	ಸಂಪಾದಕರು	೪೪೫
೧೧	ಅವಧೂತ ಗೀತೆ	ಗುರುಬಸವಕವಿ	೪೫೬
೧೨	ಸಟೀಕ ಏಕೋತ್ತರಶತಸ್ಥಲ	—	೪೫-೪೭

ಇದನ್ನು ವಿಜಾಪುರದಲ್ಲಿ ರಾ। ಬ। ಫ. ಗು. ಹಳಕಟ್ಟಿ ಇವರು ತಮ್ಮ

ಶಿವಾನುಭವ.

ವರ್ಷ ೦೫	ಸೆಪ್ಟೆಂಬರ ೧೯೪೧.	ಸಂಚಿಕೆ ೦೨

ಶಿವಾನುಭವ ಮತ್ತು ಅದರ ಪ್ರಸಾರ.

ನವಲಗುಂದದ ಗವೀಮಠದ ಪ್ರಣವ ಸ್ವರೂಪಿಗಳಾದ ಶ್ರೀ ಬಸವಲಿಂಗ ಸ್ವಾಮಿಗಳು, ಬಾಗಲಕೋಟೆಯಲ್ಲಿ ಮಾಡಿದ ಪ್ರವಚನದ ಅನುವಾದ— ವ್ಹಿ. ಸಿ. ಬ್ಯಾಹಟ್ಟಿ ಬಿ. ಏ. (ಬಿ. ಟಿ.)

ನವಲಗುಂದದ ಗವೀಮಠದ ಪ್ರಣವಸ್ವರೂಪಿಗಳಾದ ಶ್ರೀ. ಬಸವಲಿಂಗ ಸ್ವಾಮಿಗಳು ಬಾಗಿಲುಕೋಟೆಯ ತಮ್ಮ ಮುಕ್ಕಾಮಿನಲ್ಲಿ ಪ್ರವಚನರೂಪದಿಂದ ಇದೇ ಶ್ರಾವಣ ಕೃಷ್ಣಪಕ್ಷದ ಪೂರ್ವಾರ್ಧದ ಏಳು ದಿನಗಳಲ್ಲಿ ಭಕ್ತಮಹಾಜನಗಳಿಗೆ ಅಪ್ಪಣೆಕೊಡಿಸಿದ್ದರ ಸಿಂಹಾವಲೋಕನವು ಕೆಳಗಿನಂತಿದೆ.

ವೀರಶೈವ ಧರ್ಮ ಹಾಗು ಅದರ ತತ್ವಗಳು ಬಹು ವಿಶಾಲ ಮತ್ತು ಉದಾತ್ತವಿದ್ದು ಪರಧರ್ಮದವರೂ ಕೂಡ ಅನುಕರಣೀಯ ವೆಂದು ಒಪ್ಪಿಕೊಳ್ಳುವಷ್ಟು ಸರ್ವವ್ಯಾಪಿಸ್ವರೂಪದವೂ ಮೋಕ್ಷವೆಂಬ ನಿರತಿಶಯ ಧ್ಯೇಯವನ್ನು ಸಾವಕಾಶವಾಗಿಯಾದರೂ ನಿಸ್ಸಂದೇಹವಾಗಿ ತಪ್ಪದೇ ಸಾಧಿಸುವಂಥವುಗಳಾಗಿಯೂ ಇರುತ್ತವೆ. ನಮ್ಮೀ ಧರ್ಮವು ಪಟ್ಟಸ್ಥಾತ್ಮಕವಿದ್ದು ಪ್ರತಿ ಒಬ್ಬ ವೀರಶೈವನು, ಪುರುಷನಾಗಲಿ, ಸ್ತ್ರೀಯಾಗಲಿ, ಯಾವ ಅಭ್ಯಂತರವೂ ಇಲ್ಲದೆ ಅಷ್ಟಾವರಣಯುಕ್ತನಾಗಿ ಪಂಚ ಆಚಾರಗಳನ್ನು ಪಾಲಿಸುತ್ತ ಗುರುಲಿಂಗಜಂಗಮದಲ್ಲಿ ಭಕ್ತಿಯನ್ನು ವಹಿಸಿ

ತದ್ವಾರಾ ಜ್ಞಾನ ವೈರಾಗ್ಯ ಸಂಪನ್ನನಾಗಿ ಕಡೇ ಮೆಟ್ಟಿಲಾದ ಕೇವಲ ಶಿವಾನಂದಮಯ ಮೋಕ್ಷರೂಪ ಐಕ್ಯಸ್ಥಲವನ್ನು ಅಳವಡಿಸಿಕೊಂಡು ಜೀವನ್ಮುಕ್ತ ಸ್ಥಿತಿಯನ್ನು ಅನುಭವಿಸಬಹುದು. ದೀಕ್ಷಾಬದ್ಧರಾದ ಲಿಂಗಾಂಗಿಗಳಲ್ಲಿ ಉಚ್ಚನೀಚವೆಂಬ ಯಾವ ಭೇದಭಾವವೂ ಇರುವ ದಿಲ್ಲ. ಇಂಥ ಎಲ್ಲ ವೀರಶೈವರೂ ಪರಸ್ಪರಾದರಾತಿಥ್ಯದಿಂದ ನಡೆದು ಸಹಭೋಜನ ಮುಂತಾದ ಪ್ರೇಮವನ್ನು ಬೆಳೆಯಿಸುವಂಥ ಆಚಾರವನ್ನು ನಿಸ್ಸಂದೇಹವಾಗಿ ಪಾಲಿಸಲಭ್ಯಂತರವಿಲ್ಲ. ಯಾವ ಸಮತಾವಾದವು ರಶಿಯಾ ದೇಶದಲ್ಲಿ ಈಹೊತ್ತು ಪಸಂಸುತ್ತಿದ್ದು ಅನ್ಯ ದೇಶಗಳಿಂದ ಅನುಕರಣೀಯವಾಗಿದೆಯೋ ಅಂಥ ಸಮಾನ ಆಚಾರವಿಚಾರಗಳನ್ನೊಳಕೊಂಡ ವೀರಶೈವ ಧರ್ಮದ ತತ್ವಗಳನ್ನು ಮಹಾನುಭಾವನಾದ ಭಕ್ತ ಶ್ರೇಷ್ಠ ಬಸವಣ್ಣನು ೧೨ನೇಶತಮಾನದಲ್ಲಿ ಆಚರಣೆಯಲ್ಲಿ ತಂದು ಪ್ರಚಾರ ಮಾಡಿದನು. ಇಂಥ ಉದಾತ್ತ ತತ್ವಗಳನ್ನೊಳಕೊಂಡ ವೀರಶೈವಧರ್ಮದ ಅನುಯಾಯಿಗಳಾದ ನಾವು ವಿಶೇಷ ಅಭಿಮಾನಪಡಬೇಕಾದ ಸಂಗತಿಯಾಗಿದೆ.

ನಮ್ಮ ಧರ್ಮಕ್ಕೆ ಬಸವಾದಿ ಪ್ರಮಥರ ಕಾಲಕ್ಕೆ ವಿಶೇಷ ಕಳೆ ಬಂದು ಅದು ಬಹು ಘನತೆಗೇರಿತ್ತು; ಆ ಕಾಲದ ಶರಣ ಶರಣಿಯರು ತಾವು ನಿಷ್ಠೆಯಿಂದ ಗುರುಲಿಂಗಜಂಗಮ ಭಕ್ತಿಯನ್ನಾಚರಿಸಿ ತಾವು ಪಡೆದ ಶಿವಾನಂದಮಯ ಸಾಕ್ಷಾತ್ಕಾರದ ಅನುಭವವನ್ನು ಸಮಸ್ತ ಮಾನವರ, ವಿಶೇಷವಾಗಿ ವೀರಶೈವರ ಉದ್ಧಾರಾರ್ಥವಾಗಿ ತಮ್ಮ ತಿಳಿಗನ್ನಡದ ವಚನ ವಾಙ್ಮಯದಿಂದ ಹಾಡಿ ಆನಂದಪಟ್ಟಿದ್ದಾರೆ. ಈ ವಚನಗಳ ವಿಸ್ತಾರವು ೧೮ ಕೋಟಿಯಷ್ಟು ಇದ್ದು ಇದು ವೀರಶೈವ ಧರ್ಮಕ್ಕೆ ಶಾಸ್ತ್ರರೂಪವಾಗಿ ಅದರ ತತ್ವ, ಪರಂಪರೆ ಆಚಾರ ವಿಚಾರ ಮತ್ತು ಅನುಭವವನ್ನು ತಿಳಿದು ಕೊಳ್ಳಲು ಮುಖದಂತಿದೆ. ಇಂಥ ಮಹತ್ತರವಾದ ವಚನ ಗ್ರಂಥಗಳು ಇತ್ತಿತ್ತಲಾಗಿ ರಾ॥ ಬ॥ ಹಳಕಟ್ಟಿಯವರ ಪರಿಶ್ರಮದಿಂದ ಅಚ್ಚಾಗಿದ್ದು ಯೋಗ್ಯ ಬೆಲೆಗೆ ದೊರೆಯಲನುವಾಗಿವೆ. ಆದ್ದರಿಂದ ವೀರಶೈವ ಧರ್ಮಕ್ಕೆ ಹೃದಯ ಮತ್ತು ಮುಖವಾಗಿರುವ ಈ ವಚನಾಮೃತ ಶಾಸ್ತ್ರಗ್ರಂಥಗಳನ್ನು ಪ್ರತಿ ಒಬ್ಬ ವೀರಶೈವನು ಕೊಂಡು ತಾನು ಉಪಯೋಗಿಸುವದಲ್ಲದೆ ತನ್ನ ಕುಟುಂಬದವರು ನೆರೆಹೊರೆಯವರು ಸಹ ಉಪಯೋಗಿಸಿಕೊಂಡು ಅಂದರೆ ಓದಿ ತಿಳಿದು ಅದರಂತೆ ಆಚರಿಸಿ ಶಿವಾನುಭವಿಗಳಾಗಬೇಕು. ಈ ವಚನ

ಶಾಸ್ತ್ರವನ್ನು ಪ್ರತಿ ಒಂದು ಕುಟುಂಬದವರು ಬಾಲಬಾಲಕಿಯರು ಸಹ ನಿತ್ಯದಲ್ಲಿ ಪಾರಾಯಣ ಮಾಡುವದವಶ್ಯ. ಹಾಗೆ ಮಾಡಿದಲ್ಲಿ ಶಿವಾನುಭವದ ಪರಂಪರೆಯು ಅವಿಚ್ಛಿನ್ನವಾಗಿ ನಡೆದು ಉತ್ತರೋತ್ತರ ವೃದ್ಧಿಗೊಳ್ಳುವದು. ಇದರಿಂದ ಧರ್ಮಾಚರಣೆ ಮತ್ತು ಧರ್ಮ ತತ್ವಗಳ ಸಂಸ್ಕಾರವು ಪ್ರತಿ ಒಬ್ಬ ವೀರಶೈವನ ಬಾಲ್ಯದಿಂದ ಆರಂಭವಾಗಿ ಬುದ್ಧಿಯಿಂದ ಮನಸ್ಸಿಗೆ, ಮನಸ್ಸಿನಿಂದ ರಕ್ತದೊಳಗೂ ಅಳವಟ್ಟು ಅಂಗವೆಲ್ಲ ಮಂತ್ರಮಯವಾಗಿ ಲಿಂಗದಲ್ಲಿ ಸಾಮರಸ್ಯವಾಗಲು ಅನುಕೂಲವಾಗುವದು.

ನಮ್ಮ ಧರ್ಮದ ಗುರಿಯಾದ ಅಂಗಗುಣಗಳನ್ನು ಲಿಂಗಗುಣಗಳನ್ನಾಗಿ ಪಾರ್ಪಡಿಸುವ ಲಿಂಗಾಂಗ ಸಾಮರಸ್ಯವನ್ನು ಪಡಿಯಲಿಕ್ಕೆ ಸುಲಭವಾಗಬೇಕೆಂದು ಊರೂರಿಗೆ ಬಸವಾದಿ ಪ್ರಮಥರ ಕಾಲಕ್ಕೆ ಇದ್ದಂತೆ ಈಗಲಾದರೂ ಶಿವಾನುಭವ ಸಂಘಗಳು ಏರ್ಪಡುವದವಶ್ಯವು. ಆದ್ದರಿಂದ ಸದಾಚಾರಿಗಳೂ ಧರ್ಮ ತತ್ವಾಭಿಮಾನಿಗಳೂ ಶಿವಾನುಭವ ಸಂಘಗಳನ್ನು ಸ್ಥಾಪಿಸಿ ನಿತ್ಯದಲ್ಲಿಯೂ ಒಂದು ಶುದ್ಧ ಸ್ಥಾನದಲ್ಲಿ ಕಲೆತು ವಿಚನ ಗ್ರಂಥಗಳನ್ನು ಓದಿ ಪರಿಶೀಲಿಸಿ ಧರ್ಮದ ಆಚಾರ, ತತ್ವ ಹಾಗು ಅನುಭವಗಳನ್ನು ಚರ್ಚಿಸಿ ತಿಳಕೊಂಡು ಅದರಂತೆ ಆಚರಿಸಬೇಕು. ಹೀಗಾದಲ್ಲಿ ತೀವ್ರವೇ ಬಸವಾದಿ ಪ್ರಮಥರ ಕಾಲದ ಧರ್ಮದ ಹೆಚ್ಚಳಿಕೆಯೂ ವೈಭವವೂ ಪುನಃ ನೆಲೆಗೊಂಡು ವೀರಶೈವರ ವ್ಯವಹಾರವೆಲ್ಲ ಸುಖಮಯವೂ ಪುಣ್ಯಾವರ್ಧಕವೂ ಆಗುವದೆಂಬಲ್ಲಿ ಸಂದೇಹವಿಲ್ಲ. ಹೀಗಾಗುವದರಿಂದ ಧರ್ಮದ ನಿಜತತ್ವಗಳು ಎಲ್ಲರಿಗೂ ತಿಳಿದು ಸಮಾಜದಲ್ಲಿ ಸದ್ಯಕ್ಕೆ ಕಂಡು ಬರುವ ಅನೈಕ್ಯತೆಯೂ ದ್ವೇಷಾಸೂಯ ಭಾವನೆಗಳೂ ಮಾಯವಾಗಿ ಎಲ್ಲ ಲಿಂಗಾಂಗಿಗಳೂ ಒಂದೇ ಧರ್ಮದವರು, ಒಂದೇ ಆಚರಣೆಯುಳ್ಳವರು, ಒಂದೇ ಗುರುಲಿಂಗ ಜಂಗಮ ಭಕ್ತಿಯಿಂದ ಲಿಂಗಾಂಗ ಸಾಮರಸ್ಯರೂಪ ಶಿವಸಾಕ್ಷಾತ್ಕಾರದ ಅನುಭವ ಸುಖ ಪಡೆಯುವ ಧ್ಯೇಯವುಳ್ಳವರು ಎಂಬದು ತಿಳಿದು ಪರಸ್ಪರರಲ್ಲಿ ಪ್ರೇಮಾದರ ಐಕ್ಯತೆಯುಂಟಾಗುವದು. ಹೀಗೆ ನಿಜವಾದ ವೀರಶೈವ ಧರ್ಮದ ತತ್ವಗಳು ತಿಳಿಯುವದರಿಂದ ಪರಧರ್ಮಿಯನೂ ಕೂಡ ಈ ಹೊತ್ತು ಶಿವಲಿಂಗ ದೀಕ್ಷಾಬದ್ಧನಾದರೆ ಆತನು ಯಾವದೇ ಕಾಯಕವನ್ನು ಮಾಡಲಿ ಉಳಿದ ಪರಂಪರೆಯಿಂದ ಲಿಂಗಾಂಗಿಗಳಾಗಿದ್ದವರೊ

ಡನೆ ಸಹ ಭೋಜನ ಮಾಡಲಿಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಹೇಳಲಿಕ್ಕೆ ಬರುವಂತಿದ್ದಾಗ್ಗೆ ಅನುವಂಶಿಕವಾಗಿ ಲಿಂಗಾಂಗಿಗಳಾಗಿದ್ದ ಬೇರೆ ಬೇರೆ ಪಂಗಡದವರು ಅಥವಾ ಕಾಯಕದವರು ಪ್ರೇಮಾದರಾತಿಥ್ಯ ದಿಂದ ಸಹಭೋಜನ ಮಾಡಲಿಕ್ಕೆ ಅಡ್ಡಿ ಇಲ್ಲವೆಂದು ಹೇಳುವದನವ ಶ್ಯಕ. ನಿಜಸ್ಥಿತಿಯು ಹೀಗಿದ್ದು ವೀರಶೈವರಲ್ಲಿ ವರ್ಣಗಳುಂಟು. ಮೇಲು ಕೀಳೆಂಬ ತಾರತಮ್ಯವುಂಟು ಎಂದು ಹೇಳುವದು ಶುದ್ಧ ತಪ್ಪು. ಮತ್ತು ಧರ್ಮ ತತ್ವಗಳಿಗೆ ವಿರುದ್ಧವಾವದ್ದು. ಈ ಸಂಗತಿಯನ್ನು ಬಸವಾದಿ ಪ್ರಮಥರು ತಮ್ಮ ನಡೆನುಡಿಗಳಿಂದ ನಿರ್ಣಯಿಸಿ ಕೊಟ್ಟಿದ್ದಾರೆ. ಅಂಥ ಮಹಾನುಭಾವಿಗಳ ಶ್ರೇಷ್ಠಾಚರಣೆಯನ್ನು ನಿರ್ವಿವಾದವಾಗಿ ಧೈರ್ಯ ದಿಂದ ಆಚರಿಸಲಡ್ಡಿ ಇಲ್ಲ. ಇಂಥ ನಿಜವಾದ ತತ್ವದ ಆಚರಣೆಯು ಸರ್ವ ಲಿಂಗಾಂಗಿಗಳಲ್ಲಿ ಪರಸ್ಪರ ಪ್ರೇಮಾದರಗಳನ್ನು ವೃದ್ಧಿಗೊಳಿಸಿ ಏಕ್ಯತೆಯುಂಟು ಮಾಡುವದೆಂಬ ಮಾತು ಎಲ್ಲರ ಲಕ್ಷಕ್ಕೆ ಬರುವಂತಿದೆ.

ಇನ್ನು ವೀರಶೈವರು ತಮ್ಮ ಪಾರಮಾರ್ಥಿಕ ಧ್ಯೇಯವಾದ ಲಿಂಗಾಂಗ ಸಾಮರಸ್ಯ ಅಥವಾ ಶಿವಜೀವೈಕ್ಯದ ಅನುಭವ ಸುಖವನ್ನು ಪಡೆಯಲಿಕ್ಕೆ ಸಾಧನವಾದ ಇಷ್ಟಲಿಂಗ, ಮಂತ್ರ ಭಕ್ತಿ ಮತ್ತು ನಿಜವಾದ ವೈರಾಗ್ಯಾಚರಣೆಗಳನ್ನು ಪ್ರತಿ ಒಬ್ಬ ವೀರಶೈವನು ತಿಳಿದುಕೊಳ್ಳುವದು ಬಹು ಮಹತ್ವದ್ದಾಗಿದೆ. ಶೈವನು ಪ್ರಾಣ ಪ್ರತಿಷ್ಠೆ ಮಾಡಲ್ಪಟ್ಟ ಸ್ಥಾವರ ಲಿಂಗವನ್ನು ಶಿವಾಲಯ ಮುಂತಾದ ಶುದ್ಧ ಸ್ಥಾನಗಳಲ್ಲಿ ಪೂಜಿಸಿದರೆ ವೀರಶೈವನು ಭಕ್ತಿಯಿಂದ ತನ್ನ ಗುರುವನ್ನಾಶ್ರಯಿಸಿ ಅತನಿಗೆ ತನ್ನ ತನುವನ್ನು ಸೇವಾರೂಪದಿಂದ ಒಪ್ಪಿಸಿ ಅತನ ಕರುಣೆಯನ್ನು ಪಡೆದು ದರಿಂದ ಅತನು ಪಶ್ಚಿಮ ಚಕ್ರದಲ್ಲಿದ್ದಂಥಾ ಚಿತ್ಕಲೆಯನ್ನು ಅಂತಃಕರು ಣದಿಂದ ಭಕ್ತನ ಕರಸ್ಥಲಕ್ಕೆ ಇಷ್ಟಲಿಂಗ ರೂಪದಿಂದ ಕೊಟ್ಟು ಆ ಲಿಂಗವನ್ನು ಅನಿಮಿಷ ದೃಷ್ಟಿಯಿಂದ ಭಕ್ತಿ ಪುರಸ್ಸರವಾಗಿ ನಿರೀಕ್ಷಿಸುತ್ತ ಪ್ರಾಣ ಭಾವಲಿಂಗಗಳನ್ನು ಭಾವಿಸಿ ಪೂಜಿಸಿದರೆ ಮನಸ್ಸು ಸ್ಥಿರಗೊಂಡು ಪ್ರಸನ್ನವಾಗಿ ಭಾವ ನಿರ್ಭಾವವಾಗಿ ನಿಂದು ಶಿವಾನಂದಾತ್ಮಕ ಅನುಭ ವದ ಸಾಕ್ಷಾತ್ಕಾರವಾಗುವದೆಂದು ತಿಳಿದು ಭಕ್ತನ ಮಸ್ತಕದ ಮೇಲೆ ಆಶೀರ್ವಾದ ರೂಪ ತನ್ನ ಹಸ್ತವನ್ನಿಟ್ಟು ದಯಾಪೂರ್ಣ ದೃಷ್ಟಿಯಿಂದ ಅನುಗ್ರಹಿಸುವನು. ಈ ಇಷ್ಟಲಿಂಗದಲ್ಲಿ ಇಷ್ಟೊಂದು ಮಹತ್ವವಿರುವದ ರಿಂದ ಅದನ್ನು ಸದಾನಿತ್ಯದಲ್ಲಿಯೂ ಅವಿರಣಪರ್ಯಂತರ ಅಂಗದ ಮೇಲೆ

ಧರಿಸಿ ಅದನ್ನು ತನ್ನ ಪ್ರಾಣ ಭಾವಗಳಲ್ಲಿಯೂ ಭಾವಿಸಿ ಭಯಭಕ್ತಿ ಯಿಂದ ಅರ್ಚಿಸಿ ಭಜಿಸಿ ಮತ್ತು ನಿರೀಕ್ಷಿಸಿ ಅಂಗವನ್ನು ಮರೆತು ಅದರಲ್ಲಿ ಏಕರೂಪತೆಯನ್ನು ತಳೆಯುವದೇ ಲಿಂಗಾಂಗಿಯ ಆಜೀವದ ಆಚರ ಣೆಯು. ಇಂಥ ಲಿಂಗಾಚಾರದಿಂದ ಬಸವಾದಿ ಪ್ರಮಥರು ಪಡೆದ ಶಿವಾ ನುಭವವನ್ನು ತಮ್ಮ ವಚನಗಳಿಂದ ಬಹು ಸ್ವಾರಸ್ಯವಾಗಿ ಹಾಡಿಕೊಂ ಡಿದ್ದಾರೆ ಆದ್ದರಿಂದ ಶರಣರ ವಚನಗಳು ಸರ್ವ ವೀರಶೈವರಿಗೂ ತಮ್ಮ ಆಚಾರವನ್ನು ತಿದ್ದಿಕೊಳ್ಳಲಿಕ್ಕೆ ಮಾರ್ಗದರ್ಶಕವಾಗಿವೆ. ಅವು ಧರ್ಮಾ ಚರಣೆಯನ್ನು ಅನುಭವ ಗಮ್ಯವಾಗಿ ತಿಳಿಸುವದರಿಂದ ಸರ್ವರಿಗೂ ಅಗಮ ಗಳಂತೆ ಮಾನ್ಯವು. ಇಂಥ ಲಿಂಗಾಚಾರದಿಂದ ಅಂಗಗುಣಗಳನ್ನು ಭಕ್ತಿ ಭಾವನೆಗಳಿಂದ ಲಿಂಗ ಗುಣಗಳನ್ನಾಗಿ ಮಾರ್ಪಡಿಸಿ ಲಿಂಗದಲ್ಲಿ ಸಾಮ ರಸ್ಯ ಹೊಂದುವದೇ ವೀರಶೈವನ ವಿಶಿಷ್ಟತನ. ಈ ವಿಶಿಷ್ಟ ರೀತಿಯಿಂದ ಇತ್ತೀಚೆಗೂ ಕೂಡ ಅನೇಕ ಶಿವಶರಣರು ಶಿವಾನಂದ ರೂಪ ಅನುಭ ವವನ್ನು ಪಡೆದು ಕೃತಾರ್ಥರಾಗಿದ್ದಾರೆ. ಇಂಥವರಲ್ಲಿ ಆಥಣಿ ಶಿವಯೋ ಗಿಗಳು, ಬಾಲಲೀಲಾ ಮಹಂತ ಸ್ವಾಮಿಗಳು, ನಾಲ್ವತವಾಡದ ಶಿವ ಶರಣರು ಮುಂತಾದವರನ್ನು ಗಣನೆ ಮಾಡಬಹುದು.

ಇಂಥ ಸಾಧನ ಮಾರ್ಗದಲ್ಲಿ ಭಕ್ತಿ ರೂಪ ನಿಷ್ಠೆ ಬಲಿತು ಲಿಂಗ ಸಕೀಲದ ಜ್ಞಾನವಾಗಿ ನಶ್ವರ ವಿಷಯಗಳನ್ನು ಭೋಗಿಸಬೇಕೆಂಬ ಅಂಗ ದಿಚ್ಛೆಯಡಗಿ ಲಿಂಗಾರ್ಪಣ ಬುದ್ಧಿಯಿಂದ ಗುರು ಲಿಂಗ ಜಂಗಮದ ದಾಸೋಹವನ್ನು ಅವಲಂಬಿಸಿ ನಡೆಯುವದವಶ್ಯ. ಅಂಗದಿಚ್ಛೆ ಹರಿದು ಲಿಂಗದಿಚ್ಛೆ ಅಥವಾ ಬುದ್ಧಿಯಾಗಲಿಕ್ಕೆ ಮಾಂಸಪಿಂಡವನ್ನು ಮಂತ್ರ ಪಿಂಡವನ್ನಾಗಿ ಮಾರ್ಪಡಿಸಬೇಕು. ಇದಕ್ಕೆ ಗುರುವು ಪ್ರತಿ ಒಬ್ಬ ಭಕ್ತ ನಿಗೆ ಪಂಚಾಕ್ಷರಿ ಮಂತ್ರವನ್ನುಪದೇಶ ಮಾಡಿ ಅದರ ಧ್ಯಾನದಿಂದ ವಾಚ್ಯರೂಪ ಮಂತ್ರ ಧ್ಯಾನಿಸಿ ವಾಚ್ಯರೂಪ ಲಿಂಗಮಯವಾಗುವ ರೀತಿಯನ್ನು ಹೇಳಿಕೊಡುವನು ಈ ಮಂತ್ರಯೋಗದಿಂದ ಲಿಂಗಾಂಗ ಸಾಮರಸ್ಯವಳ ಪಡಲಿಕ್ಕೆ ವಿಶೇಷ ಸಹಾಯವಾಗುವದು. ಈ ಮಂತ್ರ ಧ್ಯಾನದಿಂದ ಪ್ರಾಣದ ಚಂಚಲಾತ್ಮಕ ಹಂದಾಟವು ನಿಂತು ಮನಸ್ಸು ಸ್ಥಿರಗೊಂಡು ಪ್ರಸನ್ನವಾಗುವದು. ಆದರಿಂದ ಭಾವವು ಲಿಂಗಮಯವಾಗಿ ಭಕ್ತನು ಶಿವಾ ನುಭವರೂಪ ಸುಖವನ್ನು ಪಡೆಯುವನು. ಇಂಥ ಶಿವಾನುಭವ ಸುಖವು ನಿರಾತಂಕವಾಗಿಯೂ ಧಾರಾಳವಾಗಿಯೂ ದೊರೆಯಲಿಕ್ಕೆ ಅಂತಃಕ

ರಣದ ಹಂಬಲ ರೂಪ ಭಕ್ತಿಯು ಬೇಕು. ಈ ಹಂಬಲಿಕೆಯು ಭಾವನಾರೂಪ ಭಕ್ತಿಯು ಪ್ರವೃತ್ತಿರೂಪ ಇಚ್ಛಾ ಶಕ್ತಿಯಿಂದುಂಟಾದ ಸಂಸಾರವನ್ನುಡುಗಿಸಿ ನಿವೃತ್ತಿರೂಪ ಜ್ಞಾನ ಶಕ್ತಿಯಿಂದ ಶಿವಾನಂದನು ಭವರೂಪ ಸಾಮರಸ್ಯ ಅಥವಾ ಐಕ್ಯತೆಯನ್ನುಂಟುಮಾಡುವದು. ಆದ್ದರಿಂದ ಇಷ್ಟೊಂದು ಸಾಮರ್ಥ್ಯವುಳ್ಳ ಗುರುಲಿಂಗ ಜಂಗಮ ಭಕ್ತಿಯನ್ನು ಪ್ರತಿ ಒಬ್ಬ ವೀರಶೈವನು ಪ್ರಯತ್ನ ಪೂರ್ವಕವಾಗಿ ಸಾಧಿಸತಕ್ಕದ್ದು. ಈ ವಿಧವಾದ ಭಕ್ತಿಗೆ ಪ್ರತಿಯೊಂದು ಧರ್ಮದಲ್ಲಿಯೂ ಪ್ರಾಶಸ್ತ್ಯವಿದ್ದು ಅದರಿಂದ ಇಷ್ಟಾರ್ಥ ಸಿದ್ಧಿಸುವದೆಂದು ಘಂಟಾಘೋಷವಾಗಿ ಸಾರಲ್ಪಟ್ಟಿದೆ. ಇಂಥ ಭಕ್ತಿ ಸಾಧನೆಗೆ ನಶ್ವರ ವಿಷಯಗಳಿಗೆ ಅನವಶ್ಯಕ ಪ್ರಾಮುಖ್ಯತೆಯನ್ನು ಕೊಡದಂಥಾ ವೈರಾಗ್ಯ ಬುದ್ಧಿಯ ಸಹಾಯ ಬೇಕಾಗುವದು. ಅಂದರೆ ನಿಷ್ಕಾಮ ಬುದ್ಧಿಯಿಂದ ಗುರುಲಿಂಗ ಜಂಗಮ ದಾಸೋಹಕ್ಕೆ ಉಪಯೋಗವಾಗುವದೆಂದು ತನು ಮನ, ಧನ, ಮತ್ತು ಇನ್ನಿತರ ವಿಷಯಗಳಿಗೆ ಮಹತ್ವವಲ್ಲದೆ ಹೆಚ್ಚಿನ ಗೌರವವು ಅವುಗಳಿಗಿಲ್ಲವೆಂದು ವೈರಾಗ್ಯ ಬುದ್ಧಿಯನ್ನು ವೀರಶೈವನಾದವನು ಪ್ರಯತ್ನ ಪಟ್ಟು ಸಾಧಿಸಿಕೊಳ್ಳುವದವಶ್ಯ. ಅಂದರೆ ಸಂಸಾರವನ್ನು ತ್ಯಾಗಮಾಡಿ ಅರಣ್ಯವಾಸಿಯಾಗಿ ಶರೀರವನ್ನು ಕಷ್ಟಕ್ಕೀಡುಮಾಡದೇ ಅದರಲ್ಲಿಯೇ ಇದ್ದುಕೊಂಡು ಉಂಡು ಉಪವಾಸಿಯಂತೆ ಬಳಸಿ ಬ್ರಹ್ಮಚಾರಿಯಂತೆ ಅವಶ್ಯವಿದ್ದದ್ದನ್ನು ಲಿಂಗಾರ್ಪಣದಿಂದ ಗುರುಲಿಂಗ ಜಂಗಮ ದಾಸೋಹಕ್ಕೆಂದು ಮಾತ್ರ ವಿಷಯಗಳನ್ನುಪಯೋಗಿಸುವ ಕೌಶಲ್ಯನೇ ನಿಜವಾದ ವೈರಾಗ್ಯದ ಲಕ್ಷಣ. ಇಂಥ ನಿಜವಾದ ನಿಷ್ಕಾಮ ಕ್ರಿಯಾತ್ಮಕ ವೈರಾಗ್ಯ ಬುದ್ಧಿಗೆ ವೀರಶೈವ ಧರ್ಮದಲ್ಲಿ ವಿಶೇಷ ಗೌರವ ಸ್ಥಾನ ಕೊಡಲ್ಪಟ್ಟಿದೆ. ಈ ಪ್ರಕಾರ ವೀರಶೈವರು ಭಕ್ತಿ, ಜ್ಞಾನ, ವೈರಾಗ್ಯ ಸಂಪನ್ನರಾಗಿ ತಮ್ಮ ನಿತ್ಯ ವ್ಯವಹಾರವನ್ನು ಶಿವಾನುಭವ ಸುಖವನ್ನು ಪಡೆಯಲಿಕ್ಕೆ ಅನುಕೂಲವಾಗುವಂತೆ ಶನೈದಮೆಯುಕ್ತರಾಗಿ ಸಾಗಿಸಿ ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕೆಂಬ ತಮ್ಮ ಏಕಮೇವ ಗುರಿಯನ್ನು ಮರೆಯತಕ್ಕದ್ದಲ್ಲ. ಆ ಮೇರೆಗೆ ಪ್ರತಿಯೊಬ್ಬನಿಗೂ ಸದ್ಬುದ್ಧಿಯನ್ನು ಪರಶಿವನು ಅನುಗ್ರಹ ಪೂರ್ವಕ ದಯಪಾಲಿಸಲೆಂದು ಆತನಲ್ಲಿ ಅನನ್ಯ ಪ್ರಾರ್ಥನೆ. ಹೀಗೆ ಶ್ರೀಗಳವರು ಅಪ್ಪಣೆ ಕೊಡಿಸಿ ಏಳು ದಿನಗಳ ವರೆಗೆ ತಮ್ಮ ಪ್ರವಚನವನ್ನು ಶ್ರುತಿ ಸ್ಮೃತಿ ಆಗಮೋಕ್ತಿಗಳಿಂದಲೂ ವಿಶೇಷವಾಗಿ ಬಸವಾದಿ ಪ್ರಮಥರ ಅನುಭವದ ವಚನಗಳಿಂದಲೂ ಸಮರ್ಥಿಸಲ್ಪಟ್ಟ ಉದಾ

ಹರಣೆಗಳಿಂದ ನೆರೆದ ಭಕ್ತರಿಗೆಲ್ಲ ಹೃದಯಂಗಮವಾಗುವಂತೆ ಸಾದ್ಯಂತವಾಗಿ ತಿಳಿಸಿ ಅವರ ಭಕ್ತ್ಯಾದರಗಳಿಗೆ ಪಾತ್ರರಾದರು. ಅಂತ್ಯದಲ್ಲಿ ಕೂಡಿದ ಭಕ್ತಶ್ರೋತೃಗಳು ಕೆಳಗಿನಂತೆ ಉದ್ಗಾರ ತೆಗೆದು ಶ್ಲಾಘನೆ ರೂಪ ಗುರುದಕ್ಷಿಣೆಯನ್ನು ಅರ್ಪಿಸಿದರು.

ಯಾವ ಸಮಾಜದಲ್ಲಿ ಇಂಥ ಬ್ರಹ್ಮಚರ್ಯರೂಪ ಐಶ್ವರ್ಯವುಳ್ಳವರೂ, ಲಿಂಗಾನುಷ್ಠಾನ ರೂಪ ತಪೋಬಲವುಳ್ಳವರೂ, ಅಧ್ಯಾತ್ಮ ವಿದ್ಯಾ ವಿನಯ ರೂಪ ಜ್ಞಾನಶಕ್ತಿವುಳ್ಳವರೂ ಆದ ನಿರಂಜನ ಮೂರ್ತಿಗಳಿದ್ದು ತಮ್ಮ ಎಲ್ಲ ವಿದದ ಶಕ್ತಿಯನ್ನು ಸಮಾಜ ಸೇವೆಯಲ್ಲಿ ಉಪಯೋಗಿಸುವದೇ ತಮ್ಮ ಆಜೀವ ಕರ್ತವ್ಯವೆಂದು ತಿಳಿದು ಭಕ್ತರ ಹಿತಾರ್ಥಕ್ಕಾಗಿ ತಾವು ಅನುಭವಿಸುತ್ತಿರುವ ಲಿಂಗಾಂಗ ಸಾಮರಸ್ಯದ ಆನಂದವನ್ನು ಸರ್ವರಿಗೂ ಉಂಟುಮಾಡಿಕೊಡಬೇಕೆಂಬ ಸದ್ಭೇತುವಿನಿಂದ ಶಿವಾನುಭವವನ್ನು ತಿಳಿಸುವದರಲ್ಲಿ ಮಗ್ನರಾಗಿರುವರೋ ಅಂಥ ಸಮಾಜವು ಮತ್ತು ಆದರಲ್ಲಿಯ ವ್ಯಕ್ತಿಗಳು ಧನ್ಯರು. ಈ ಕಾರ್ಯವನ್ನು ರಾ. ಬ. ಪಿ. ಜಿ. ಹಳಕಟ್ಟಿಯವರು ಕೈಕೊಂಡಿದ್ದು ಇದರಂತೆ ಇನ್ನಿತರ ಮಹಾನುಭಾವಿಗಳು ಭಕ್ತೋದ್ಧಾರವೆಂಬ ಸಮಾಜ ಸೇವೆಯಲ್ಲಿ ನಿರತರಾದದ್ದಾದರೆ ಕ್ಷೇಪ್ರದಲ್ಲಿಯೇ ಬಸವಾದಿ ಪ್ರಮಥರ ಪುಣ್ಯಕಾಲವು ಪುನರಾವೃತ್ತಿಗೈದು ವೀರಶೈವ ಸಮಾಜವು ಘನತೆಗೇರುವದರಲ್ಲಿ ಸಂದೇಹವಿಲ್ಲ.

ಧಾರಣ ದೀಕ್ಷೆ.

(ಆತ್ಮನಿರ್ಣಯ)

ಲೇಖಕರು:–ಶ್ರೀಗುರುಮೂರ್ತಿದೇವರು ಶ್ರೀಜಗದ್ಗುರು ಶ್ರೀಮನ್ನಿಡುವಾಮಡಿ
ಶ್ರೀಶೈಲ ಸಂಸ್ಥಾನ ಮುಕ್ಕಾವು ಕೃಷ್ಣಗಿರಿ ಜಿ. ಸೇಲಮ

ಲಿಂಗಧಾರಣ, ಶಿವದೀಕ್ಷೆ ಈ ಎರಡೂ ಬೇರೆ ಬೇರೆಯೆ ? ಒಂದೆ ? ಎಂಬ ವಾದದ ಹುಯಿಲೆದ್ದು ಹಲವರ ಮನಸ್ಸನ್ನು ಕದಲಿಸಿ ಕಲ್ಲೋಲ ಗೊಳಿಸಿದೆ. ಉಭಯ ಕಕ್ಷಿಗಾರರು " ಫಲಬೇಕು ಶರಣಂಗೆ " ಎಂಬ ಬಸವಣ್ಣನವರ ಮಾತನ್ನು ಇದರಲ್ಲಿ ಬಳಸಿ ಬಲವಂತರಾಗಬೇಕೆಂದು ಬಯಸುತ್ತಲಿದ್ದಾರೆ. ಆದರೆ ತತ್ವಜಿಜ್ಞಾಸೆಯಲ್ಲಿ ಬರೀ ಫಲವಿದ್ದರೆ ಸಾಲದು ಅನುಭವವೂ ಅನುಭವದ ಸೋಲೂ ಅತ್ಯವಶ್ಯವಾದುದು. ಇಲ್ಲಿಯವರೆಗೂ ಹಲವರು ಬರೆದಿರುವ ಚರ್ಚಿಸಿರುವ ಲೇಖಗಳಲ್ಲಿ ಶ್ರೀಸಿದ್ಧವೀರದೇವರು ಬರೆದಿರುವುದು ಹೆಚ್ಚು ವಿದ್ವತ್ತು ಮತ್ತು ಅನುಭವಪೂರ್ಣವಾಗಿದೆಯೆಂದು ನನ್ನ ಸಂಪೂರ್ಣ ಭಾವನೆ. ಈ ವಿಷಯದಲ್ಲಿ ನನಗೆ ಹೊಳೆದ ಎರಡು ವಿಷಯಗಳನ್ನು ಮಾತ್ರ ಈ ಪ್ರಸಂಗದಲ್ಲಿ ಎತ್ತಿ ಬರೆಯುವದು ಸಮುಂಜಸವೆಂದು ತಿಳಿದು ತೊಡಗುತ್ತೇನೆ. ಆದರೆ ಈ ವಾದದಲ್ಲಿ ಹೀಗೇ ಆಗಬೇಕೆಂದು ಫಲವಿಲ್ಲ. ಆಚರಣೆ, ಅನುಭವ, ಆರ್ಷೋಕ್ತಿಗಳಿಂದ ಯಾವುದು ಸಿದ್ಧವಾಗುತ್ತದೆಯೋ ಅದೇ ನನಗೆ ಆದರಣೀಯವಾದುದು.

"ಗರ್ಭಾಷ್ಟಮೇ ಕೃತಾದೀಕ್ಷಾಮುಖ್ಯಾ ಸಾ ಷೋಡಶಾವಧಿ।
ಗೌಣೀ, ತದೂರ್ಧ್ವಮಧಮಾ, ವೀರಶೈವಾನ್ವವಾಯಿನಾಂ"॥

ಈ ಶ್ಲೋಕವನ್ನು ಉಭಯ ಪಾರ್ಟಿಯವರೂ ಒಪ್ಪಿಕೊಳ್ಳುವಂತೆ ತೋರುತ್ತದೆ. ಈ ಆರ್ಷೋಕ್ತಿಯನ್ನು ಆರ್ಜಿಸಿ ಬರೆಯುವಾಗ ಒಂದು ಪ್ರಶ್ನೆ ಮುಂದೆ ಬಂದು ನಿಲ್ಲುತ್ತದೆ. ಏನಂದರೆ ಧಾರಣ ದೀಕ್ಷೆಗಳು ಒಂದೇ ಎಂದು ವಾದಿಸುವವರು 'ಗರ್ಭಾಷ್ಟಮ' ದೀಕ್ಷೆಯೊಂದೇ ಸಾಕೆಂದು ಹೇಳುತ್ತಾರೆ. ಇದೇ ನಿಜವಿರುವ ಪಕ್ಷದಲ್ಲಿ ಈ ಪದ್ಯದಲ್ಲಿ ವೀರಶೈವಂಗೆ ಎಂಟ

ರಿಂದ ಹದಿನಾರರ ವರೆಗೆ .ಮಾಡುವ ದೀಕ್ಷೆ ಗೌಣವೆಂತಲೂ ಅನಂತರ ಮಾಡಿದರೆ ಅಧಮವೆಂತಲೂ ಏಕೆ ಉದಹರಿಸಬೇಕು? ಪ್ರಾಚೀನರು ಗರ್ಭಾಷ್ಟಮ ಲಿಂಗಧಾರಣೆಯೇ ಶಿವದೀಕ್ಷೆ ಎಂದು ಒಪ್ಪುವದಿದ್ದರೆ ಮುಂದಿನ ಅವಧಿಗಳನ್ನು ಹೇಳುವುದು ಅನಾವಶ್ಯಕವೂ ಅಪ್ರಸ್ತುತವೂ ಅಲ್ಲವೆ? ಈ ಶ್ಲೋಕವನ್ನು ವಾದಿಗಳು ಉದಹರಿಸಿರುವುದು ಸಮುಂಜಸವಾಗಿಲ್ಲ. ಅಲ್ಲದೆ ಇದರ ಅರ್ಥವನ್ನೂ ಅಭಿಪ್ರಾಯವನ್ನೂ ಸರಿಯಾಗಿ ಗ್ರಹಿಸಿಕೊಂಡಿಲ್ಲ. ಇದರಲ್ಲಿ ಲಿಂಗಧಾರಣ ಶಿವದೀಕ್ಷೆಗಳು ಬೇರೆ ಬೇರೆ (ಈ ವಿಭಾಗವು ತಾತ್ವಿಕವೊ ಸಾಮಾಜಿಕವೊ ಆ ವಿಚಾರ ಬೇರೆ) ಎಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. "ಗರ್ಭಾಷ್ಟಮ" ಪದಕ್ಕೆ ವಾದಿಗಳು ಹೇಳುವ ಅರ್ಥವು ಇದರಲ್ಲಿ ಇಲ್ಲವೇ ಇಲ್ಲ. 'ಷೋಡಶಾವಧಿ' ಎಂಬ ಪದಕ್ಕೆ ವರ್ಷವೆಂದು ಅರ್ಥ ಮಾಡಿದಲ್ಲಿ (ಮಾಡಬೇಕು. ಏಕೆಂದರೆ ಷೋಡಶಮಾಸ ಗರ್ಭಾಧಾರಣ ಅಸಂಗತವಾದುದು) 'ಅಷ್ಟಮೇ' ಅನ್ನುವಲ್ಲಿಯೂ ವರ್ಷವೆಂತಲೇ ಅರ್ಥ ಮಾಡಬೇಕು. ಅಂದಮೇಲೆ " ಗರ್ಭಾಷ್ಟಮೇ " ಎಂಬ ಪದಕ್ಕೆ ಗರ್ಭ ವೊದಲ್ಗೊಂಡು ಎಂಟನೆಯ ವರ್ಷದಲ್ಲಿ ಮಾಡಿದ ದೀಕ್ಷೆಯು ಮುಖ್ಯವೆಂದು ಹೇಳುವುದೇ ಈ ಶ್ಲೋಕದ ಸತ್ಯಾಭಿಪ್ರಾಯವು. ಮಗು ಹುಟ್ಟಿದ ಎಂಟನೆಯ ವರ್ಷದಲ್ಲಿ ಮಾಡಿದ ದೀಕ್ಷೆಯು ಮುಖ್ಯವೆಂದು ಹೇಳುವಲ್ಲಿ ಹುಟ್ಟಿದೊಡನೆ ಕಟ್ಟುವುದು ಲಿಂಗಧಾರಣೆಯಂತಲೂ ಅದು ಗೌಣವೆಂತಲೂ ಅರ್ಥವಾಗುತ್ತದೆ. ಈ ಶ್ಲೋಕದಲ್ಲಿರುವ 'ಗರ್ಭಾಷ್ಟಮ' ಪದವನ್ನು ಪಂಚಮಿ ತತ್ಪುರುಷದೊಡನೆ ವಿಗ್ರಹ ಮಾಡಬೇಕು. ವಾದಿಗಳು ಹೇಳುವಂತೆ ಷಷ್ಠೀ ತತ್ಪುರುಷ ಮಾಡಿ ಅಷ್ಟಮೇವಾಸೇ ಎಂದು ಅರ್ಥ ಮಾಡಿದರೆ 'ಷೋಡಶಾವಧಿ' 'ತದೂರ್ಧ್ವ' ಎಂಬ ಪದಗಳಲ್ಲಿ ಮುಗ್ಗರಿಸಬೇಕಾಗುತ್ತದೆ. ಇದಲ್ಲದೆ ಗರ್ಭವು ಹದಿನಾರನೆ ತಿಂಗಳಿರುವುದು ತೀರ ಅಸಂಭವ. ಒಂದುವೇಳೆ ವಾದಿಗಳು ಎಂಟನೆಯ ತಿಂಗಳಲ್ಲಿ ತಪ್ಪಿದರೆ ೧೬ ನೆಯ ತಿಂಗಳಲ್ಲಿ ಮಾಡಬೇಕೆಂದು ಅರ್ಥಮಾಡುವದಾದರೆ ಹುಟ್ಟಿದ ಮಗುವು ಅಲ್ಲಿಯವರೆಗೂ ಏನಾಗಿರಬೇಕು? ಇತ್ಯಾದಿ ಪ್ರಶ್ನೆಗಳು ಈ ಶ್ಲೋಕದಿಂದ ಎದ್ದು ನಿಲ್ಲುತ್ತವೆ. ಇವಕ್ಕೆಲ್ಲ ವಾದಿಗಳ ಉತ್ತರವೇನು?

ವಾದಿಗಳು ಗರ್ಭದ ಎಂಟನೆಯ ತಿಂಗಳಲ್ಲಿಯೆ ಮಾಡುವ ಲಿಂಗಧಾರಣೆ (ದೀಕ್ಷೆ)ಯೆ ಸಾಕು. ಮರಳಿ ಎಂಟನೆಯ ವರುಷದಲ್ಲಿ ಮಾಡುವ ಶಿವದೀಕ್ಷೆಯು ಬೇಕಿಲ್ಲವೆಂದು ವಾದಿಸುತ್ತಾರೆ. ಇದಕ್ಕೆ ಯಾವ ಆಧಾ

ರವೂ ಇಲ್ಲ. ಅಲ್ಲದೆ ಹೀಗೆ ಹೇಳುವದರಿಂದ ವೀರಶೈವ ಮತತತ್ವ ನೃಷ್ಟ್ಯಕ್ಕೆ ಕೊಡಲಿಯನ್ನಿಕ್ಕಿದಂತೆಯೆ. ಸರಿ. ಗರ್ಭಸ್ಥ ಶಿಶುವಿಗಾಗಲಿ, ಅದೇ ಜನಿಸಿದ ಮಗುವಿಗಾಗಲಿ ಗುರುವು ದೀಕ್ಷೆಯನ್ನು ಮಾಡಬೇಕಾದರೆ ಮಂತ್ರ ದೀಕ್ಷೆಯನ್ನು ಮಾಡಲು ಸಾಧ್ಯನೇ ಇಲ್ಲ. ಮತ್ತು ಆ ಮಗುವಿನ ದೃಷ್ಟಿಯಲ್ಲಿ ದೃಷ್ಟಿಯನ್ನು, ಮನಸ್ಸಿನಲ್ಲಿ ಮನಸ್ಸನ್ನು, ಭಾವದಲ್ಲಿ ಭಾವವನ್ನು ಬೆರೆಸುವದಕ್ಕೂ ಶಿಷ್ಯನ ಶಿವಕಲೆಯನ್ನು ಒಹಿಷ್ಕರಿಸುವದಕ್ಕೂ ಶಿಷ್ಯನಲ್ಲಿ ಶಕ್ತಿಯಿರುವದಿಲ್ಲ. ಗುರುವಿಗೆ ಸಾಧ್ಯನಿಲ್ಲ. ಒಂದುವೇಳೆ ಹೇಗಾದರೂ ಆಗಲಿ ಮಾಡಿಯೇ ಬಿಡಬೇಕು. ಹೀಗಾಗಿ ಆ ಮಗುವಿನ ತಾಯ್ತಂದೆಗಳು ಮಂತ್ರವನ್ನು ಹೇಳಕೊಡುತ್ತಾರೆ. ಜ್ಞಾನವನ್ನು ಹುಟ್ಟಿಸುತ್ತಾರೆ. ಶಿವಕಲೆಯನ್ನು ಆಹ್ವಾನಿಸುತ್ತಾರೆ. ಎಂದು ವಾದಿಸುವದಾದರೆ ಈ ವಾದದಲ್ಲಿ ಎಷ್ಟೂ ಹುರುಳಿಲ್ಲ. ಏಕೆಂದರೆ ವಾದಿಗಳ ಅಭಿಪ್ರಾಯದಂತೆ ಆ ಮಗುವಿನ ತಾಯ್ತಂದೆಗಳಿಗಾದರೂ ದೀಕ್ಷೆಯಾದದ್ದು ಶಿಶುಭಾವದ ಅಜ್ಞಾನಾವಸ್ಥೆಯಲ್ಲಿಯೇ ಅಲ್ಲವೆ ? ಅವರಿಗಾದರೂ ಮಂತ್ರಜ್ಞಾನವಿರಲು ಹೇಗೆ ಸಾಧ್ಯವಿದೆ? ಅವರ ತಾಯ್ತಂದೆಗಳಿಂದ ಎಂದು ಹೇಳುವದಾದರೆ ಅದಕ್ಕೂ ಇದೇ ಉತ್ತರ. ಅಲ್ಲದೆ ವಾದಿಗಳ ಅಭಿಪ್ರಾಯದಂತೆ ಗರ್ಭಸ್ಥ ಶಿಶುವಿಗೆ ಮಾಡುವ ಸಂಸ್ಕಾರವೊಂದನ್ನೇ ದೀಕ್ಷೆಯೆನ್ನಾಗಿ ಇಟುಕೊಂಡರೆ ಇನ್ನು ಎರಡು ಮೂರು ತಲೆಗಳು ಕಳೆಯುವದರೊಳಗಾಗಿ ವೀರಶೈವ ತತ್ವವೆಲ್ಲ ಯಾರಿಗೂ ತಿಳಿಯದೆ ಸಂಪೂರ್ಣವಾಗಿ ನಾಶವಾಗಿ ಹೋಗುವಲ್ಲಿ ಯಾವ ಅಭ್ಯಂತರವಿಲ್ಲ. ಎಲ್ಲರೂ ಗರ್ಭದಲ್ಲಿಯೆ ಇರುವಾಗಲೇ ದೀಕ್ಷೆಯನ್ನು ಪಡೆಯುವದಾದರೆ ಯಾರಿಗೂ ತತ್ವ ತಿಳಿಯುವ ಹಾಗಿಲ್ಲ. ಯಾರು ಯಾರಿಗೂ ಹೇಳಿಕೊಡುವಷ್ಟಿಲ್ಲ. ವಯಸ್ಸಾದ ಮೇಲೆ ಶಾಸ್ತ್ರವನ್ನೋದಿ ತಿಳಿದುಕೊಳ್ಳಬಹುದೆಂದು ಹೇಳುವದಾದರೆ 'ಗುರು' ತತ್ವವಿದ್ದು ಪ್ರಯೋಜನವೇನು ? ಆದ್ದರಿಂದ ಧಾರಣ–ದೀಕ್ಷೆಗಳು ತತ್ವತಃ ಒಂದೇ ಆಗಿದ್ದರೂ ಅಧಿಕಾರಿ ಅಶಕ್ತನಾಗಿರುವದರಿಂದ ಸಾಮಾಜಿಕ ಆಚಾರಾಭಿವೃದ್ಧಿಗೆ ಭಂಗವಾಗುವದರಿಂದ ಸಾಮಾಜಿಕ ವ್ಯವಸ್ಥೆಗಾಗಿ ಎರಡಾಗಿ ವಿಭಾಗಿಸಬೇಕು. ಅದರಂತೆ ಪೂರ್ವಜರು ಪೂರ್ಣ ಯೋಚನೆ ಮಾಡಿ ವಿಭಾಗಿಸಿದ್ದಾರೆ. ಹಾಗಿದ್ದರಿ ಜನ್ಮಲಿಂಗಧಾರಣೆ ಪ್ರಯೋಜನವೇನಂದರೆ ಭವಿತನವನ್ನು ಕಳೆಯುವದೇ ಪ್ರಯೋಜನ. ಈ ವಿಷಯದಲ್ಲಿ ಗಾರುಡ ಪುರಾಣವೂ ಪ್ರಮಾಣಾರ್ಹವಾಗಿದೆ. ಅದರಲ್ಲಿ ಹೀಗೆ ಉಕ್ತವಾಗಿದೆ.

"ವಂಶಾವಳೀ ಪ್ರಯಾತಾನಾಂ ಲಿಂಗಧಾರಣಶಾಲಿನಾಂ।
ಜ್ಞಾನಿನಾಂ ಶಿವಭಕ್ತಾನಾಂ ಶೂದ್ರತ್ವಂ ನೈವ ವಿದ್ಯತೇ ॥
ನಮಃಕೇ ಚವರ್ಕೇ ಪಂಚ ಬ್ರಹ್ಮಮಂತ್ರಾದಿ ವೈದಿಕೇ।
ತೇಷಾಮೇವಾಧಿಕಾರೋಸ್ತಿ ಶಿವದೀಕ್ಷಾ ಪ್ರಭಾವತಃ ॥

ಮೊದಲನೆಯ ಶ್ಲೋಕದಲ್ಲಿ ಲಿಂಗಧಾರಣೆಯಿಂದ ಭವಿತನವು ಮಾತ್ರ ನಷ್ಟವಾಗುವದೆಂದೂ ಎರಡನೇಯ ಶ್ಲೋಕದಲ್ಲಿ ಆ ಲಿಂಗಧಾರಿಗಳಿಗೇನೆ ಶಿವದೀಕ್ಷೆ ಮಾಡುವದರಿಂದ ಮಂತ್ರ ಪಠಣಾಧಿಕಾರವು ಪ್ರಾಪ್ತವಾಗುವದೆಂದೂ ಹೇಳಿದೆ. ಇದರಿಂದಲೂ ಶಿವದೀಕ್ಷೆಯು ಲಿಂಗಧಾರಣವಾದ ನಂತರ ಮಾಡಬೇಕೆಂದು ತಿಳಿದುಬರುತ್ತದೆ.

ತಾತ್ವಿಕ ದೃಷ್ಟಿಯಿಂದಲೊ ಸಾಮಾಜಿಕ ದೃಷ್ಟಿಯಿಂದಲೊ ಜನ್ಮ ಲಿಂಗಧಾರಣವು ಬೇರೆ ಕೌಮಾರ ಶಿವದೀಕ್ಷೆಯು ಬೇರೆ, ಎಂಬುದನ್ನು ಸಿದ್ಧಾಂತ ಶಿಖಾಮಣಿಯು ಈ ಶ್ಲೋಕಗಳಿಂದ ತಿಳಿಯಬಹುದಾಗಿದೆ.

ಪದ್ಮ ಪರಿಚ್ಛೇದದ ಗುರುಕಾರುಣ್ಯ ಸ್ಥಲದಲ್ಲಿ:—

"ಲಿಂಗಾಂಗ ಸ್ಥಲಭೇದಜ್ಞಂ ಶ್ರೀಗುರುಂ ಶಿವವಾದಿನಂ।
ಸೇವೇತ ಪರಮಾಚಾರ್ಯಂ ಶಿಷ್ಯೋಭಕ್ತಿಭಯಾನ್ವಿತಃ ॥೭॥
ಷಣ್ಮಾಸಾನ್ ವತ್ಸರಂ ವಾಪಿ ಯಾವದೇಷಃ ಪ್ರಸೀದತಿ।
ಪ್ರಸನ್ನಂ ಪರಮಾಚಾರ್ಯಂ ಭಕ್ತ್ಯಾಮುಕ್ತಿ ಪ್ರದರ್ಶಕಂ ॥೮॥
ಪ್ರಾರ್ಥಯೇದಗ್ರತಶ್ಶಿಷ್ಯಃ ಪ್ರಾಂಜಲಿರ್ವಿನಯಾನ್ವಿತಃ।
ಭೋ ಕಲ್ಯಾಣ ಮಹಾಭಾಗ ಶಿವಜ್ಞಾನ ಮಹೋದಧೇ ॥೯॥
ಆಚಾರ್ಯವರ್ಯ ಸಂಪ್ರಾಪ್ತಂ ರಕ್ಷ ಮಾಂ ಭವರೋಗಿಣಂ।
ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋಗುರುಃ ॥೧೦॥
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ।

ಮೇಲ್ಕಂಡ ಶ್ಲೋಕಗಳಲ್ಲಿ ಹೇಳಿದ ಶಿಷ್ಯನ (ದೀಕ್ಷೆಗೆ ಸನ್ನದ್ಧನಾದ ವಟುವಿನ) ಪ್ರಾರ್ಥನೆಗಳು, 'ಅಪ್ಪ' ಅನ್ನಲು ಬಾರದ ಜನನ ಶಿಶುವಿಗೆ ಬರಲು ಎಂದಿಗೂ ಸಾಧ್ಯವಿಲ್ಲ. ಅಲ್ಲದೆ ಶಿಷ್ಯನ ಶಕ್ತಿಪಾತವನ್ನು ನೋಡಿ ಶಿವದೀಕ್ಷೆಯನ್ನು ಮಾಡಬೇಕೆಂದು ಸ್ಪಷ್ಟವಾಗಿ ವಿಧಿಸುತ್ತದೆ. ಆ ಪ್ರಾರ್ಥನೆಯ ಶಕ್ತಿಯು ಮತ್ತು ಆ ಶಕ್ತಿಪಾತ ಚಿನ್ಹೆಯು ಶಿಷ್ಯನಲ್ಲಿ ಯಾವಾಗ ಮೈದೋರುತ್ತದೆ ಎಂಬುದನ್ನು ವಾದಿಗಳು ಸರಿಯಾಗಿ ವಿಚಾರಿಸಿ

ನೋಡಬೇಕು. ಆ ಶಕ್ತಿ ಬರುವವರೆಗೂ ವೀರಶೈವ ಮಕ್ಕಳಿಗೆ ಲಿಂಗ ಧಾರಣ ಮಾಡದಿದ್ದರೆ ಅವೇನಾಗಿರಬೇಕು ?

ವೀರಶೈವರಿಗೆ ಜನ್ಮಲಿಂಗಧಾರಣವು ದ್ವೈತಾವಸ್ಥೆ. ಶಿವದೀಕ್ಷೆಯು ಅದ್ವೈತಾವಸ್ಥೆ. ಜನನ ಕಾಲದಲ್ಲಿಯೇ ಅದ್ವೈತಾವಸ್ಥೆಯನ್ನು ತಂದು ಕೊಡುವ ಶಿವದೀಕ್ಷೆಯನ್ನು ಮಾಡಿ ಆ ಮಗುವನ್ನು ಅದ್ವೈತಿಯನ್ನಾಗಿ ಮಾಡಿಬಿಟ್ಟರೆ ಇನ್ನು ದ್ವೈತಾವಸ್ಥೆ ಯಾವಾಗ ಬರಬೇಕು ? ವೀರಶೈವರಿಗೆ ದ್ವೈತಾವಸ್ಥೆಯೇ ಇಲ್ಲವೆ ? ಇದ್ದರೆ ಯಾವಾಗ ? ಇಲ್ಲವೆಂದರೆ ಈ ಮತಕ್ಕೆ ದ್ವೈತಾದ್ವೈತವೇಕೆ ಹೆಸರೇಕೆ ?

ಮೇಲೆ ಉದಹರಿಸಿದ ಶ್ಲೋಕಗಳಲ್ಲಿ ದೀಕ್ಷೆಗೆ ಸನ್ನದ್ಧನಾದ ಶಿಷ್ಯನು ಗುರುವನ್ನು ಅರುತಿಂಗಳಾಗಲಿ ವರ್ಷವಾಗಲಿ ಅಥವಾ ಗುರುವು ಪ್ರಸನ್ನನಾಗುವವರೆಗಾಗಲಿ ಸೇವಿಸಬೇಕೆಂದು ಅವಕಾಶವನ್ನು ವಿಧಿಸಿದೆ. ಈ ಅವಧಿಯು ಜನನದ ಶಿಶುವಿಗೊ ? ಕೌಮಾರಾವಸ್ಥೆಯ ವಟುವಿಗೊ ? ಒಂದು ಪಕ್ಷವಾದಿಗಳು ಜನನದ ಶಿಶುವಿಗೇನೆ ಎಂದು ಹೇಳಿದರೂ (ಹೇಳಲು ಸಾಧ್ಯವಿಲ್ಲ) ಆ ಆರು ಮಾಸವಾಗಲಿ ವರ್ಷವಾಗಲಿ ಮಗು ಏನಾಗಿರಬೇಕು ? ಒಂದು ಸಮಯ ಗುರು ಐದಾರು ವರುಷಗಳ ವರೆಗೆ ಪ್ರಸನ್ನನಾಗದಿದ್ದರೆ ಲಿಂಗಧಾರಣವಿಲ್ಲದ ಆ ಶಿಷ್ಯನ ಗತಿಯೇನು ? ಈ ಕಾರಣಗಳಿಂದ ಸಿದ್ಧಾಂತಶಿಖಾಮಣಿಯೂ ಸಹ ಜನ್ಮಲಿಂಗಧಾರಣವನ್ನು ಒಪ್ಪಿಕೊಂಡಿದೆಯೆಂದೇ ಸಿದ್ಧವಾಗುತ್ತದೆ. ಅಲ್ಲದೆ ಜನನಕಾಲದಲ್ಲಿ ಸಾಧಾರಣವಾಗಿ ಲಿಂಗಧಾರಣವನ್ನು ಮಾಡಿ ನಂತರ ಏಳೆಂಟು ವರುಷಗಳು ಕಳೆದನಂತರ ವಿವೇಕ ಸಂಪನ್ನನಾದ ಶುದ್ಧ ಮನಸ್ಕನಾದ ಜಿಜ್ಞಾಸುವಾದ ತಕ್ಕ ವಯೋಮಾನವುಳ್ಳ ಶಿಷ್ಯನಿಗೆ ಶಿವದೀಕ್ಷೆಯನ್ನು ಮಾಡುವದು ವಿಹಿತವೂ ಪ್ರಯೋಜನಕಾರಿಯೂ ಆಗಿದೆ. ಸಾಮಾನ್ಯವಾಗಿ ಸಾಂಸಾರಿಕ ವಿವಾಹಕ್ಕೇನೆ ತಕ್ಕ ವಯಸ್ಸು ಬೇಕಾಗುವಾಗ— ಶರಣ ಸತಿಯು ಲಿಂಗಪತಿಯೊಡನೆ ತಾತ್ವಿಕ ವಿವಾಹವಾಗಬೇಕಾದರೆ ತಕ್ಕ ವಯಸ್ಸು ಬೇಡವೆ ? ತಕ್ಕ ಜ್ಞಾನ ಬೇಡವೆ ? ಗುರುಶಿಷ್ಯರ ದೃಷ್ಟಿ-ಮನ-ಭಾವಗಳು ಒಂದಾಗಿ ಬೆರೆಯಬೇಕಾದರೆ ಮಗುವು ರುಜುವಾಗಿ ಕುಳಿತುಕೊಳ್ಳಲಿಕ್ಕಾದರೂ ಬರಬೇಡವೆ ? ಇವೆಲ್ಲ ಅನಿವಾರ್ಯಗಳಿಂದ ಶಾಸ್ತ್ರಗಳು ಅನುಭವಿಗಳು ಲಿಂಗಧಾರಣ ಶಿವದೀಕ್ಷೆಯೆಂಬುದಾಗಿ ವಿಭಾಗಿಸಿದ್ದಾರೆ. ಸಾಂಸಾರಿಕ ವಿವಾಹದಲ್ಲಿ ಮಾಂಗಲ್ಯಧಾರಣವಾದರೂ ಸನು

ಯವರಿತು ನಿಷೇಕಪ್ರಸ್ತವನ್ನು ಮಾಡುವಂತೆ ವೀರಶೈವ ಶರಣಸತಿಯರಿಗೆ ಜನನಕಾಲದಲ್ಲಿ ಲಿಂಗಧಾರಣವಾದರೂ ಸಮಯಶಕ್ತಿಸಾತವನ್ನರಿತು ಶಿವದೀಕ್ಷೆಯನ್ನು ಅಂದರೆ ಲಿಂಗಾಂಗ ಸಾಮರಸ್ಯರೂಪ ನಿಷೇಕ ಪ್ರಸ್ತವನ್ನು ಮಾಡುವ ಅನುಭವಪೂರ್ವಕವಾದ ಆಚರಣೆಯು ರೂಢಿಯಲ್ಲಿ ಬಂದಿದೆ.

ಈ ವಿಷಯದಲ್ಲಿ ಆಸ್ಥಾನವಿದ್ವಾನ್‌ರಾಗಿದ್ದ "ಕೈ. ಪಿ. ಆರ್. ಕರಿಬಸವ ಶಾಸ್ತ್ರಿಗಳವರು ೧೯೦೪ನೆಯ ಸಾಲಿನಲ್ಲಿ ನಡೆದ ವೀರಶೈವ ಮತ ಸಂವರ್ಧಿನೀ ಸಭೆಯ ಅಧ್ಯಕ್ಷಸ್ಥಾನದಿಂದ ಈ ರೀತಿ ಹೇಳಿದ್ದಾರೆ.

".....ವೀರಶೈವರಿಗೆ ಹುಟ್ಟಿದ ಕೂಡಲೆ ಸೂಕ್ಷ್ಮವಾಗಿ ಲಿಂಗಧಾರಣರೂಪವಾದ ಶಿವದೀಕ್ಷೆಯಾಗುವದರಿಂದ ಜನ್ಮಸಿದ್ಧವಾದ ಶೂದ್ರತ್ವವೆ ಇರುವದಿಲ್ಲ. ಜಾತಕರ್ಮದಲ್ಲಿ ಮಾಡಿದ ಶಿವಸಂಸ್ಕಾರವು ಶಿಶುವಿಗೆ ಗೋಚರವಾಗದುದರಿಂದ ಗರ್ಭಾಷ್ಟಮ ಮೊದಲ್ಗೊಂಡು ೧೬ ವರ್ಷ ವಯಸ್ಸಿನೊಳಗಾಗಿ ತಿರುಗಿ ಆ ಸಂಸ್ಕಾರವನ್ನು ಪ್ರತ್ಯಕ್ಷವಾಗುವಂತೆ ಗುರುವಾದವನು ವೇಧಾ, ಕ್ರಿಯಾ, ಮನು ದೀಕ್ಷೆಯೆಂದು ಮೂರು ವಿಧವಾಗಿ ವಿಸ್ತರಿಸಿ ಆ ವಟುವಿಗೆ ಈಗ ನಾನು ಸ್ಥೂಲಾದಿ ತ್ರಿವಿಧ ತನುಗಳಲ್ಲಿಯೂ ಶುದ್ಧನಾಡೆಸೆಂಬ ಜ್ಞಾನವನ್ನುಂಟು ಮಾಡಿ ತದಾರಭ್ಯ ಲಿಂಗಾರ್ಚನ, ಶ್ರೀರುದ್ರಾಧ್ಯಯನ, ಆಗಮಪಠಣ ಮೊದಲಾದವುಗಳನ್ನು ನಡೆಸುವಂತೆ ಮಾಡುವನು....."

—ನಮ್ಮ ನಿರ್ಣಯ —

ವೀರಶೈವ ವಟುಗಳಿಗೆ ಮೇಲ್ಕಂಡ ಕೆಲವು ಮುಖ್ಯವಾದ ಅನಿವಾರ್ಯಗಳಿಂದ ಗರ್ಭದ ಎಂಟನೆಯ ತಿಂಗಳಲ್ಲಿಯೆ ಆಗಲಿ ಜನನಕಾಲದಲ್ಲಿಯೆ ಆಗಲಿ ಅದ್ಯಂತವಾದ ಶಿವದೀಕ್ಷೆಯನ್ನು ಮಾಡಲು ಸಾಧ್ಯವಿಲ್ಲ. ಮಾಡಿದರೂ ಪ್ರಯೋಜನವಿಲ್ಲ. ಪ್ರಯೋಜನಕ್ಕೆ ಬದಲು ತತ್ವ ವಿನಾಶವನ್ನು ಆಹ್ವಾನಿಸಿದಂತೆಯೆ ಸರಿ. ಲಿಂಗಧಾರಣ ಶಿವದೀಕ್ಷೆಗಳನ್ನು ಪ್ರಯೋಜನವನ್ನರಿತು ಬೇರೆ ಬೇರೆ ಕಾಲಗಳಲ್ಲಿ ಮಾಡಿದಾಗ್ಲೂ ಅವೆರಡು ತಾತ್ವಿಕ ದೃಷ್ಟಿಯಿಂದ ಬೇರೆಬೇರೆಯಲ್ಲ. ವಾದಿಗಳು ಜನನಕಾಲದಲ್ಲಿಯೇ ಸಂಪೂರ್ಣವಾಗಿ ಮಾಡಿಬಿಡಬೇಕೆಂದು ಛಲದಿಂದ ವಾದಿಸುವದು ಸಮಂಜಸವಾಗಿಲ್ಲ. ಪ್ರತಿವಾದಿಗಳು ಅವೆರಡು ತಾತ್ವಿಕ ದೃಷ್ಟಿಯಿಂದಲೂ ಬೇರೆ ಬೇರೆ ಎಂದು ವಾದಿಸಿದರೆ ಇದೂ ಅಸಮಂಜಸವಾದುದು. ವಿದ್ಯೆಯು

ಒಂದಾಗಿದ್ದರೂ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢವೆಂದು ವಿಂಗಡಿಸಿ ವಯಸ್ಸು ಬುದ್ಧಿಗಳಿಗೆ ತಕ್ಕಂತೆ ಹೇಗೆ ಬೋಧಿಸುತ್ತಾರೆಯೋ ಹಾಗೆ ಲಿಂಗಧಾರಣ ಶಿವದೀಕ್ಷೆಗಳು ತತ್ವತಃ ಒಂದೇ ಆಗಿದ್ದರೂ ಅಧಿಕಾರಿಗಳ (ಜನನ ಶಿಸುಗಳ) ಇಂದ್ರಿಯ ಮತ್ತು ಬುದ್ಧಿಯ ದೌರ್ಬಲ್ಯದಿಂದ ಎರಡಾಗಿ ವಿಭಾಗಿಸಿ ಎರಡು ಕಾಲಗಳಲ್ಲಿ ಜರಗಿಸುತ್ತ ಬಂದಿರುವುದು ನ್ಯಾಯಬದ್ಧವೂ ತರ್ಕೋದ್ಧಾರಕವೂ ಅನುಭವಸಿದ್ಧವೂ ಆಗಿದೆ. ಈ ನಮ್ಮ ನಿರ್ಣಯವನ್ನು ಸಮಾಜದ ನ್ಯಾಯವಾದಿಗಳು ನಿರ್ಮಲಾಂತಃಕರಣದಿಂದ ನೋಡಿ ವಿಚಾರಿಸಿ ಇದು ನಿಜವೆಂದು ಒಪ್ಪುವದಾದರೆ ತಂತಮ್ಮ ಒಪ್ಪಿಗೆಗಳನ್ನು ಇದೇ ಪತ್ರಿಕೆಯಲ್ಲಿ ಪ್ರಕಟಗೊಳಿಸಬೇಕು.

ಇನ್ನೊಂದು ವಿಷಯ. ಶಿವಾನುಭವದ ಮೇ—ಜೂನ ಸಂಕಲಿತ ಸಂಚಿಕೆಯಲ್ಲಿ ಬೆಂಗಳೂರು ನಗರದ ಶ್ರೀ. ಮಾ. ನಂ. ನಂಜಪ್ಪನವರು "ದೀಕ್ಷಾವಾದ" ಎಂಬ ತಲೆ ಹೆಸರಿನಲ್ಲಿ ಒಂದು ಲೇಖವನ್ನು ಪ್ರಕಟಿಸಿದ್ದಾರೆ. ಅದನ್ನು ಓದಲು ಪ್ರಾರಂಭಿಸಿದೊಡನೆ ಇದೇನು ದೀಕ್ಷಾವಾದವೊ ಇಲ್ಲವೆ ಅಯ್ಯನವರ ಮೇಲಿನ "ದ್ವೇಷವಾದವೊ" ಎನ್ನುವಂತಿದೆ. ಇವರು ಯಾವ ಹೆಸರಿನಲ್ಲಿ ಲೇಖನ ಬರೆದರೂ ಅದರಲ್ಲಿ ಯಾವುದೋ ಒಂದು ನೆಪ ಹುಡುಕಿ ಅಯ್ಯನವರನ್ನೂ ಮಠಾಧಿಪತಿಗಳನ್ನೂ ಮನಸ್ವಿಯಾಗಿ ಬೈಯುವುದೇ ಒಂದು ಕಾರ್ಯಕವನ್ನಾಗಿ ಕೈಕೊಂಡಂತೆ ಕಾಣುತ್ತದೆ. ಇವರ ಲೇಖನವೆಂದರೆ ಜಂಗಮರನ್ನು ನಿಂದಿಸಿ ನುಡಿಯುವ ಸಾಧನ. ಮಾನ-ಮರ್ಮಗಳನ್ನಿರಿಯುವ ಕೂರಲಗು. ಇದು ಬಸವಣ್ಣನವರ ತತ್ವಕ್ಕೂ ತಮ್ಮ ಭೃತ್ಯಾಚಾರಕ್ಕೂ ತೀರ ವಿರೋಧವೆಂಬುದನ್ನೇ ಇವರು ಮೊದಲು ತಿಳಿದುಕೊಂಡಿಲ್ಲ. ತಾವೇ ತಮ್ಮ ಆಚರಣೆಯಲ್ಲಿ ತಪ್ಪಿ ಇನ್ನೊಬ್ಬರಿಗೆ ಆಚಾರವನ್ನು ಬಿರುಸಾಗಿ ಬೋಧ ಹೊರಟರೆ ಹೇಗೆ? ಇವರಿಗೆ ಸಾಮಾಜಿಕೋನ್ನತಿಯ ಪ್ರೇಮವಿರಬಹುದು. ಆದರೆ ಅದು ಕಾಳ್ಕಿಚ್ಚಿನಂತಹದು. ಸಮಾಜವನ್ನು ಸುಧಾರಿಸುವ ಸದಾಶೆಯಿದ್ದರೆ ಈ ರೀತಿ ಎಂದಿಗೂ ಮಾಡಬಾರದು. ಹೀಗೆ ಮಾಡಿದರೆ ಸಮಾಜದಲ್ಲಿ ಇನ್ನಿಷ್ಟೂ ರೊಚ್ಚೆದ್ದು "ಬೈದರೆ ಬೈಗಳು ಕೈನೀಲೆ" ಎಂಬಂತೆ ಪರಸ್ಪರ ದ್ವೇಷ ಮೂಡಲಿಸಿ ಮಾಡಿ ಕೋಲಾ

ಹಲವಾಗುತ್ತದೆಯೇ ಹೊರ್ತು ಸುಧಾರಣೆ, ಶಾಂತಿ, ಸಮಾಧಾನಗಳು ನೆಲಿಸುವದಿಲ್ಲ. ಇದು ಸಮಾಜ ಸುಧಾರಣೆಯ ಲಕ್ಷಣವೂ ಅಲ್ಲ.

ಹನ್ನೆರಡನೆಯ ಶತಮಾನದಲ್ಲಿ ಪ್ರಭುವಿನಂತಹ ಮಹಾ ಜಂಗಮವು ಮೂರ್ತಿಯಿದ್ದರೂ ವಿಶೇಷವಾಗಿ ಸಾಮಾಜಿಕ ಸುಧಾರಣೆಗಳನ್ನು ಸದವಿನಯದಿಂದ ಬಸವಣ್ಣನೇ ಮಾಡಲಿಲ್ಲವೇ? ಆಗ ಅತನೂ ಸಹ ನಾನು ಸಮಾಜ ಸುಧಾರಕನೆಂಬ ಹೆಮ್ಮೆಯಿಂದ ಜಂಗಮರನ್ನು ಇವರಂತೆ ಮನಸ್ವಿಯಾಗಿ ಬೈಯುತ್ತ ಕುಳಿತನೇ? ಈಗ ಭಕ್ತರಲ್ಲಿ ಕೆಲವರು ಜಂಗಮ ವೇಷವನ್ನು ಹಾಕಿಕೊಂಡು ಜಂಗಮರಕಿಂತಲೂ ಹೆಚ್ಚಾಗಿ ನಾಚಿಕೆಯಿಲ್ಲದೆ ಜೋಳಿಗೆಯನ್ನು ಒಡ್ಡುತ್ತಿರುವರು. ಇದಕ್ಕೆ ನಂಜಪ್ಪನವರ ಉತ್ತರವೇನು? ಈಗಿನ ಭಕ್ತರು ತಮ್ಮ ಆಚರಣೆಯಿಂದ ತಪ್ಪಿರುವಂತೆ ಜಂಗಮರೂ ತಪ್ಪಿರಬಹುದು. ಭಕ್ತಸ್ಥಲವು ಸರಿಯಾಗಿದ್ದರಲ್ಲವೆ ಮಹೇಶ್ವರ ಸ್ಥಲವು ಸರಿಯಾಗಿರುವುದು. ತಳಪಾಯವೂ ಶುದ್ಧಿಯಿದ್ದರಲ್ಲವೆ ಮೇಲಿನ ಮಹಡಿ ಭದ್ರವಾಗಿರುವುದು. ಹೀಗಿದ್ದರೂ ಭಕ್ತರನ್ನು ಬಿಟ್ಟು ಬರೀ ಜಂಗಮರನ್ನೇ ಬೈಯ್ಯುವದರಲ್ಲಿ ನಂಜಪ್ಪನವರ ಉದ್ದೇಶವೇನು? ಇನ್ನು ಈಗಾಗಲೇ ಮಾಹೇಶ್ವರರು ಎಷ್ಟೋ ಜನ ಕೆಲವು ಕಾರಣಗಳಿಂದ ತಮ್ಮ ವೃತ್ತಿಯನ್ನು ಸಂಪೂರ್ಣ ಬಿಟ್ಟು ಬಿಟ್ಟು ಸ್ವತಂತ್ರ ಉದ್ಯೋಗಗಳನ್ನು ಮಾಡತೊಡಗಿದ್ದಾರೆ. ಹನ್ನೆರಡನೆ ಶತಮಾನದಲ್ಲಿ ಜಂಗಮರು ಯಾವ ಯಾವ ಕಾಯಕವನ್ನು ತೊಟ್ಟಿದ್ದರು? ಜಂಗಮರನ್ನೆಲ್ಲ ಮನೆಯಲ್ಲಿರಿಸಿಕೊಂಡು ಅವರಿಗೆಲ್ಲ ಬಸವಣ್ಣನು ಪ್ರಸಾದವನ್ನು ಒದಗಿಸುವದರಲ್ಲಿ ಆತನ ಉದ್ದೇಶವೇನು? ಒಂದು ದೃಷ್ಟಿಯಿಂದ ನೋಡಿದರೆ ಬಸವಣ್ಣನ ಕಾಲದಲ್ಲಿಯೆ ಕೆಲ ಜಂಗಮರಿಗೆ ಸೋಮಾರಿತನ ಬಂದಿತೆಂದು ಹೇಳಲು ಯಾವ ಆಭ್ಯಂತರವಿದೆ? ಈ ದೋಷವು ರೇವಣಸಿದ್ಧರ ಕಾಲದಲ್ಲಿ ಇದ್ದಂತೆ ತೋರುವದಿಲ್ಲ.

ಬಸವಣ್ಣನು ಮಂತ್ರಿಯಾದಂತೆ ಪ್ರಭುವು ಮಂತ್ರಿಯಾಗಲಿಲ್ಲ. ಶರಣರು ನೂಲಿಯ ಚೋಳಯ್ಯನ ಆಯ್ದಕ್ಕಿಯ ಮುಂತಾದ ಕಾಯಕಗಳನ್ನು ಹಿಡಿದಂತೆ ಜಂಗಮರು ಹಿಡಿಯಲಿಲ್ಲ. ಆದರೂ ಶರಣರಿಗೆ ಅಸೂಯೆ ಇರಲಿಲ್ಲ. ಇದ್ದರೂ ಮನಸ್ವಿಯಾಗಿ ಬೈಯಲಿಲ್ಲ. "ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೇ?" ಎಂದು ಸಾರಿ ಅವರನ್ನು ಮೇಲ್ಪಂಕ್ತಿಯಲ್ಲಿಯೇ ಮನ್ನಿಸುತ್ತ ಬಂದರು. ಆದರೆ ಇಂದು ಕೆಲವು ಭಕ್ತರು

ಮೇಲೆನಿಸದಿದ್ದರೆ ಹೋಗಲಿ ಕೇಳೆನಿಸತೊಡಗಿದ್ದಾರೆ. "ಎನಗಿಂತ ಕಿರಿಯರಿಲ್ಲ. ಸದುವಿನಯವೆ ಸಕಲ ಜಪತಪಂಗಳು. ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ" ಇತ್ಯಾದಿ ಭೃತ್ಯಾಚಾರದ ಹಿತೋಕ್ತಿಗಳನ್ನು ಮರೆತು ಬಿಟ್ಟು ಜಂಗಮರೆಂದರೆ ಬಾಯಕೈಯಗಳೆರಡನ್ನೂ ಹಂಬಿಟ್ಟು ಬೈಯಲು ಬರೆಯಲು ತೊಡಗಿದ್ದಾರೆ. ಹಲಕೆಲವು ಭಕ್ತರಿಗೆ ತಾವು ಪ್ರಸಾದ ವಿಕ್ರಯದ ಶ್ರೇಷ್ಠ ಕಾಯಕ ತೊಟ್ಟಂತೆ ಮಠಾಧಿಕಾರಿಗಳೂ ತೊಡಲಿಲ್ಲವೆಂಬ ಕೋಪವೋ ಏನೋ? ಯಾವ ದೃಷ್ಟಿಯಿಂದೆ ಆಗಲಿ ಇದು ಸಮಾಜ ಗೌರವಕ್ಕೆ ಭೂಷಣವಾದುದಲ್ಲ. ಸಮಾಜ ಸುಧಾರಣೆಗೆ ಒತ್ತಟಕ್ಕೆ ಮಾರ್ಗವಲ್ಲ.

ವಿಚಾರಿಸಿದರೆ ಭಕ್ತರೆನಿಸಿಕೊಂಬವರಲ್ಲಿಯಾದರೂ ಯಾವ ಸುಧಾರಣೆಯಿದೆ; ಸದಾಚಾರವಿದೆ. ಬಸವಣ್ಣನು ಹೇಳುವ ಎಲ್ಲ ಗುಣಗಳೂ ಇವರಲ್ಲಿವೆಯೇ? ಭಕ್ತಸ್ಥಲದಲ್ಲಿ ಉಕ್ತವಾದ ಎಲ್ಲ ಆಚರಣೆಗಳನ್ನೂ ಇವರು ಆಚರಿಸುತ್ತಾರೆಯೆ? ಸುಮ್ಮನೆ ಪರರ ನಿಂದಿಸಿ ನುಡಿದು ಬರದು ಏಕೆ ಪಾಪಕ್ಕೆ ಪ್ರಾಯಶ್ಚಿತ್ತಕ್ಕೆ ತುತ್ತಾಗುವರೊ ತೊತ್ತಾಗುವರೊ ತಿಳಿಯದು. ನೀವು ನಿಂದಿಸುತ್ತ ನೀತಿ ಹೇಳಲು ಬರುವದಾದರೆ ಪರರ ಚಿಂತೆ ನಿಮಗೇಕೆ? ಪರರ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ಮನವ ಸಂತೈಸಿಕೊಳ್ಳಿ.

ಹೀಗೆ ಹೇಳಿದ ಮಾತ್ರಕ್ಕೆ ನೀವು ಜಂಗಮರಿಗೆ ಹಿತವಾದವನ್ನು ಹೇಳಬಾರದೆಂದಲ್ಲ. ಸಮಾಜವನ್ನು ಸುಧಾರಿಸಬಾರದೆಂದಲ್ಲ. ಆ ಕಾರ್ಯಕ್ಕೆ ತೊಡಗುವದಕ್ಕಿಂತ ಮೊದಲು ನೀವು ಶಾಂತರಾಗಿ ಸಮಾಧಾನ ಚಿತ್ತರಾಗಿ ಬೈಗಳನ್ನು ಬಿಟ್ಟು ಗೇಲಿಯಾಡುವದನ್ನು ತೊರೆದು ಬಂಧುಭಾವದಿಂದ ವಿನಯದ ಹಿತೋಕ್ತಿಗಳಿಂದ ಜಂಗಮರ ಮತ್ತಾಧಿಕಾರಿಗಳ ದೋಷಗಳನ್ನು ತಿದ್ದುವ ಹೆದ್ದಾರಿಯನ್ನು ಕೈಕೊಳ್ಳಿ. ಇದರಿಂದ ಸಮಾಜಕ್ಕೆ ಹಿತವಾದೀತು! ಜಂಗಮರ ಏಳ್ಗೆಯಾದೀತು. ಯಾವುದೇ ಒಂದು ತತ್ವವಾಗಲಿ ಸಾಮಾನ್ಯ ನೇಮವಾಗಲಿ ಅದನ್ನು ಆಚರಿಸುವ ಜನಾಂಗವು ಹೆಚ್ಚು ಹೆಚ್ಚಿದಂತೆ ಕಾಲ ಗತಿಸಿದಂತೆ ಅದು ಮಲಿನ ಹೊಂದುವದು ಸಹಜವಾಗಿದೆ ಎಂಬ ವಿಚಾರವನ್ನು ನಿವ:ಗೆ ಬೇರೆ ತಿಳಿಸಬೇಕಾಗಿಲ್ಲ. ಇದಕ್ಕೆ ಇಂದಿನ ಕಾಂಗ್ರೆಸ ಒಂದರ ಉದಾ

ಹರಣೆ ಸಾಕು. ತಪ್ಪುವದು ಜನಾಂಗದ ಸ್ವಭಾವ. ಅದನ್ನು ವಾತ್ಸಲ್ಯದಿಂದ ತಿದ್ದುವದು ದೊಡ್ಡವರ ಲಕ್ಷಣ. ದ್ವೇಷದಿಂದ ವಿಷ ಕಾರುವುದು ದಡ್ಡತನದ ಅವಲಕ್ಷಣ. ಆದ್ದರಿಂದ ಇನ್ನು ಮುಂದೆಯಾದರೂ ಇವರು ತಮ್ಮ "ತನುವಿನ ಕೋಪ ತಮ್ಮ ಹಿರಿಯತನದ ಕೇಡು." ಎಂಬ ಬಸವಣ್ಣನವರ ಹಿತೋಕ್ತಿಯನ್ನು ಮನಸ್ಸಿಗೆ ತಂದುಕೊಂಡು ಕೈಬರವಣಿಗೆಯನ್ನು ಸ್ನೇಹ ಬದ್ಧವಾಗಿಯೂ ಗೌರವಯುಕ್ತವಾಗಿಯೂ ವಿಚಾರಪೂರ್ಣವಾಗಿಯೂ ಮಾರ್ಪಡಿಸಿಕೊಳ್ಳಬೇಕೆಂದು ಇವರಿಗೆ ಸ್ನೇಹದಿಂದ ವಾತ್ಸಲ್ಯದಿಂದ ವಿಶ್ವಾಸದಿಂದ ಸೂಚಿಸಿ ವಿರಮಿಸುತ್ತೇನೆ.

ಪಾದೋದಕ.

ಲೆ.—ಶ್ರೀ ಗುರುಮೂರ್ತಿದೇವರು, ಜಗದ್ಗುರು ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ.

"ಶಿವಾನುಭವ"ದ ಮೇ-ಜೂನ್ ಸಂಕಲಿತ ಸಂಚಿಕೆಯಲ್ಲಿ ಪ್ರಕಟವಾದ ಶ್ರೀಯುತ ಮು. ಕ. ಮಾಮನಿಯವರ ಇದೇ ತಲೆ ಹೆಸರಿನ ಲೇಖನವನ್ನು ಓದಿ ವಿಷಾದಹರ್ಷಗಳೆರಡೂ ಏಕಕಾಲಕ್ಕೆ ಉತ್ಪನ್ನವಾದವು. ಶ್ರೀ ಹೂಲಿಯವರ ವಿಚಾರದಲ್ಲಿ ವಿಷಾದ. ಮಾಮನಿಯವರ ನಂಬುಗೆಯಲ್ಲಿ ಹರ್ಷ. ಲೇಖನದ ಆರಂಭದಲ್ಲಿ ಶ್ರೀಮಾನ ಸಂಪಾದಕರು ವಾಚಕರ ಅಭಿಪ್ರಾಯಗಳನ್ನು ಕೋರಿದ್ದರಿಂದ ನನಗೆ ತಿಳಿದುದನ್ನು ತೋರಲು ಮುಂದುವರಿದಿದ್ದೇನೆ. "ಗಚ್ಛತ: ಸ್ಖಲನಂ ವಾಪಿ ಭವತ್ಯೇವ ಪ್ರಮಾದತಃ" ಎಂಬ ನೇಮಕ್ಕೆ ಒಳಗಾಗಿದ್ದರೆ ಕ್ಷಮಿಸಬೇಕು.

ಲಿಂಗವಂತರಿಗೆ ಅಂಗದಂತಿರುವ ಅಷ್ಟಾವರಣದಲ್ಲಿ ಕೊನೆಗೆ ಬರುವ ಪಾದೋದಕ ಪ್ರಸಾದಗಳೆರಡು ಹೆಚ್ಚು ಮಹತ್ವದ ಹೊದಿಕೆಗಳು. ಲಿಂಗವಂತರು ತಮ್ಮ ಜೀವನದಲ್ಲಿ ಸಾಧಿಸಬೇಕಾದ ಸಿದ್ಧಿಗಳು ಅವೆರಡೆ. ಲಿಂಗಪೂಜೆಯನ್ನಾಗಲಿ, ಗುರುಜಂಗಮಾರಾಧನೆಯನ್ನಾಗಲಿ ಮಾಡುವದು ಅವೆರಡರ ಲಾಭಕ್ಕಾಗಿಯೆ. "ಪ್ರಸಾದೇ ಸರ್ವ ದುಃಖಾನಾಂ ಹಾನಿರಸ್ಯೋಪ ಜಾಯತೇ" ಎಂಬ ಗೀತೋಕ್ತಿಯನ್ನು ಪ್ರತ್ಯಕ್ಷನಾಗಿ ಪ್ರತಿ

ದಿನವು ಪ್ರಕೃತಿಯಲ್ಲಿ (ಕಾರ್ಯದಲ್ಲಿ) ಇಳಿಸಿಕೊಂಡವರು ಲಿಂಗವಂತರು. ಅವರಿಗಿದರ ಸಿದ್ಧಿಯಿಂದ ಲಿಂಗವಂತನಿಗೆ ಭವದ ಕಾಟವಿಲ್ಲ. ಬಂಧನದ ಭಯವಿಲ್ಲ. ತಾಪತ್ರಯಗಳ ತಿಕ್ಕಾಟವಿಲ್ಲ. ರೋಗದ ರೊಚ್ಚಿಲ್ಲ. ಮೋಹದ ಮುಂಜಿಲ್ಲ. ಲಿಂಗವಂತರ ಮತತತ್ವ ಭವನಕ್ಕೆ ಇವೆರಡೂ ಹೊಂಗಳಸಗಳು ಲಿಂಗಾಂಗ ಸಾಮರಸ್ಯದ ರಹಸ್ಯವು ಇವುಗಳಲ್ಲಿಯೇ ಅಡಗಿದೆ.

ಕೆಲವು ಲಿಂಗವಂತರು ಕಾಶಿಯಲ್ಲಿ ಅಭ್ಯಾಸ ಮಾಡಿ ತಮ್ಮ ಮನೆಯ ತತ್ವವನ್ನೂ ನಾಡಿನ ಸಂಸ್ಕೃತಿ ಸಾಹಿತ್ಯಗಳನ್ನೂ ಮರೆತು ಶೈವ ತತ್ವಕ್ಕೆ ವಾರು ಹೋಗಿ ಬರಿ ಸಂಸ್ಕೃತಕ್ಕೆ ಮರಳಾಗಿ ಮನಬಂದಂತೆ ಮಾತಾಡಹತ್ತುತ್ತಾರೆ. ಅವರಲ್ಲಿ ಶ್ರೀ ಹೂಲಿಯವರೂ ಒಬ್ಬರು. ಇವರು ಪಾದೋದಕದ ವಿಷಯದಲ್ಲಿ ಬರೆದ ಪದ್ಯಗಳನ್ನು ನೋಡಿದರೆ ಇವರಿಗೆ ಲಿಂಗವಂತಿಕೆಯ ತತ್ವದ ಗಂಧವೇ ಸೋಂಕಿಲ್ಲವೆಂದು ಸ್ಪಷ್ಟವಾಗುತ್ತದೆ.

—ಶೈವ ವೀರಶೈವರಲ್ಲಿರುವ ವ್ಯತ್ಯಾಸ—

ಶೈವಾದಿಗಳು ಯಾವನ್ನು ಕೀಳೆಂದು ಭಾವಿಸುತ್ತಾರೆಯೊ ಅವನ್ನು ವೀರಶೈವರು ಮೇಲೆಂದು ಭಾವಿಸುತ್ತಾರೆ. ಸದ್ಯದ ಉದಾಹರಣೆಗಾಗಿ ಪಾದ, ಜಲ, ಅನ್ನ ಇವು ಕೀಳೆಂದು ಅವರ ಕಲ್ಪನೆ. ಅವರ ಆ ಕಲ್ಪನೆಗೆ ಯಾವ ಆಧಾರವೂ ಇಲ್ಲ. "ಪದ್ಭ್ಯಾಂಶೂದ್ರೋ ಅಜಾಯತ" ಎಂಬ ಪುರುಷ ಸೂಕ್ತವನ್ನು ಉನ್ನತ ಮಾಡಿ ಉಚ್ಚರಿಸಿ ಶೂದ್ರರನ್ನು ಕೀಳೆಂದೆನಿಸಿ ಮುಟ್ಟಬಾರದೆಂದು ಭೇದವನ್ನು ಬಗೆದರು. ಆದರೆ ಅದೇ ಪುರುಷಸೂಕ್ತದಲ್ಲಿಯೇ "ಪದ್ಭ್ಯಾಂ ಭೂಮಿಃ" ಪಾದದಿಂದ ಭೂಮಿಯೂ ಹುಟ್ಟಿದೆ. ಎಂದು ಹೇಳಿದೆ. ಇದನ್ನು ಏಕೆ ಮುಟ್ಟುವರೋ ತಿಳಿಯದಾಗಿದೆ. ಬೇಕಾದ್ದು ಬೆಲ್ಲ, ಬೇಡಾದ್ದು ಬೇವು. ಅನ್ನ ನೀರುಗಳಲ್ಲಿಯಂತೂ ಅವರಿಗೆ ಇನ್ನೂ ಹೇಳಲಾರದ ಅಶ್ರದ್ಧೆ. "ಅನ್ನಂ ಬ್ರಹ್ಮೇತಿ ವಾಜ್ಯಂ" ಎಂಬ ಶ್ರುತಿ ಇದ್ದರೂ ಅದನ್ನು ಅವರು ಲೆಕ್ಕಿಸುವದಿಲ್ಲ. ತಮ್ಮ ಹಸಿವು ಹಿಂಗುವಷ್ಟು ಊಟ ಮಾಡಿ ಉಳಿದುದನ್ನು (ಇನ್ನೊಬ್ಬರು ಉಣ್ಣುವಷ್ಟಿದ್ದರೂ ಪರವಾ ಇಲ್ಲ.) ಎತ್ತಿ ಬಿಸುಕಿ ಬಿಡುತ್ತಾರೆ. ಅನ್ನ ಬ್ರಹ್ಮವನ್ನೇ ಇಷ್ಟು ತಿರಸ್ಕರಿಸಿದ ಮೇಲೆ ಮುನ್ನ ಬ್ರಹ್ಮವಾವುದುಂಟು ?

ವೀರಶೈವರಿಗೆ ಮಾತ್ರ ಅವುಗಳ ವಿಚಾರದಲ್ಲಿ ಹೆಚ್ಚು ಶ್ರದ್ಧೆಯುಂಟು. ಕರ್ಮೇಂದ್ರಿಯಗಳಿಲ್ಲದವನ ಜ್ಞಾನೇಂದ್ರಿಯಗಳು ಏನೂ ಮಾಡಲಾರವು.

ಕರ್ಮೇಂದ್ರಿಯಗಳಲ್ಲಿ ಹಸ್ತಪಾದಗಳಷ್ಟು ಕಾರ್ಯ ಮತ್ತಿನ್ದಿರಿಂದಾಗದು. ಅದರಲ್ಲಿ ಸತ್ಕಾರ್ಯಗಳನ್ನೇ ಮಾಡಿದ ಸತ್ಪುರುಷರ ಹಸ್ತಪಾದಗಳಲ್ಲಿ ವಿಶಿಷ್ಟವಾದ ತೇಜಸ್ಸು ಉಕ್ಕುತ್ತಿರುತ್ತದೆ. ಆದ್ದರಿಂದ ನಮ್ಮ ಮತ ಸಿದ್ಧಾಂತದಲ್ಲಿ ಪಾದಾದಿಗಳಿಗೆ ಕೆಚ್ಚು ಮಹತ್ವ ಬಂದಿದೆ. ಅಲ್ಲದೆ ಆಗಮ, ವಚನ, ಕೈವಲ್ಯ, ಕಾವ್ಯ ಪುರಾಣಾದಿ ಮತಗ್ರಂಥಗಳಲ್ಲಿ ಬೇಕಾದಷ್ಟು ಪಾದದ ಮೇಲ್ಮೆಯ ಬಣ್ಣನೆಯಿದೆ. ಅವನ್ನೆಲ್ಲ ಇಲ್ಲಿ ಎತಿ ಬರೆಯಲು ಅವಕಾಶವಿಲ್ಲ. ಅಪಾರವಾದ ಮಹತ್ವಪೂರ್ಣವಾದ ಪಾದದ ಉದಕದಲ್ಲಿಯೂ ಇದರಿಂದಾಗುವ ಪ್ರಸಾದದಲ್ಲಿಯೂ ಲಿಂಗವಂತರಿಗೆ ಮೀರಿದ ಭಕ್ತಿ; ವಿಶ್ವಾಸ. ಏಕೆಂದರೆ ಜೀವನಕ್ಕೂ ಮೋಕ್ಷಕ್ಕೂ ಅವೇ ಕಾರಣವಾಗಿವೆ.

ಇನ್ನು ಶ್ರೀ ಹೂಲಿ ಹಿರೇಮಠದ ಚರಮೂರ್ತಿಗಳವರ ಪದ್ಯಗಳನ್ನು ಕೊಂಚ ವಿಮರ್ಶಿಸೋಣ.

೧ ಜಂಗಮ ಶ್ರೇಷ್ಠವೆಂದು । ಪಾದೋದಕ
ಲಿಂಗಕ್ಕೆ ಎರೆವರೆ ?
ಜಂಗಮ ಶ್ರೇಷ್ಠನೆಂದರೆ ತಾನು
ಲಿಂಗವ ಕಟ್ಟುತ ಪೂಜಿಸುವನ್ಯಾಕೊ ॥೨॥

ಶ್ರೀ ಹೂಲಿಯವರು ಈ ಪದ್ಯದಲ್ಲಿ ಜಂಗಮವು ಲಿಂಗಕ್ಕಿಂತ ಶ್ರೇಷ್ಠವಲ್ಲೆಂದು ಹೇಳಹೊರಟಿದ್ದಾರೆ. ಇವರ ಈ ಅಜ್ಞಾನಕ್ಕೆ ಅಳಬೇಕೋ ನಗಬೇಕೋ ತಿಳಿಯದು. ಇವರು ಗುರುಗಳಾಗಿಯೂ ಈ ವಿಚಾರವನ್ನು ತಿಳಿಯದಿರುವುದು ಹೆಚ್ಚು ಹಾಸ್ಯಾಸ್ಪದವೂ ಲಜ್ಜಾಸ್ಪದವೂ ಆಗಿದೆ. ಇನ್ನಾದರೂ ಜಂಗಮವು (ಚರಲಿಂಗ) ವು ಅಧಿಕವೆಂದು ತಿಳಿದುಕೊಳ್ಳಲಿ ಎಂದು ಸಿದ್ಧಾಂತ ಶಿಖಾಮಣಿಯ ಸಿದ್ಧಾಂತೋಕ್ತಿಗಳನ್ನು ಇಲ್ಲಿ ಉದ್ಧರಿಸುತ್ತೇನೆ.

ಲಿಂಗಂಚ ದ್ವಿವಿಧಂ ಪ್ರೋಕ್ತಂ ಜಂಗಮಾ ಜಂಗಮಾತ್ಮನಾ ।
ಅಜಂಗಮೇಯಥಾಭಕ್ತಿರ್ಜಂಗಮೇಚ ತಥಾ ಸ್ಮೃತಾ ॥
ಅಜಂಗಮಂತು ಯಲ್ಲಿಂಗಂ ವೃಷ್ಟ್ಯಾದಿ ವಿನಿರ್ಮಿತಂ ।
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಂ ॥
ಆಚರೇ ಮಂತ್ರ ಸಂಸ್ಕಾರಾಲ್ಲಿಂಗೇ ವಸತಿ ಶಂಕರಃ ।

ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ ॥

—ಸಿದ್ಧಾಂತ ಶಿಖಾಮಣಿ.

ಮದ್ರೂಪಂ ಜಂಗಮಂ ದೇವಿ ಮಮ ಪ್ರಾಣಂ ಮಮಾಧಿಕಂ ।
ಮದ್ಭುರುಂಚ ಮದಂಗಂಚ ಮನ್ನಾಥ ಚರಲಿಂಗಕಂ ॥

—ಪರಮರಹಸ್ಯ.

ಈ ಜಂಗಮಾಧಿಕ್ಯಕ್ಕೆ ಶ್ರೀಹೂಲಿಯವರ ಉತ್ತರವೇನು? ಇನ್ನೊಂದು ಇವರ ಪ್ರಶ್ನೆಯಿದೆ. "ಜಂಗಮ ಶ್ರೇಷ್ಠವಾದರೆ ಲಿಂಗವ ಪೂಜಿಸುವನ್ಯಾಕೋ" ಎಂದು. ಇದಕ್ಕೆ ಉತ್ತರ ಹೇಳುವದೇನೂ ಕಷ್ಟವಲ್ಲ. ನಮ್ಮಲ್ಲಿ ಅಂಗ ಲಿಂಗಗಳು ಬೇರೆಬೇರೆಯಲ್ಲ. ಲಿಂಗವನ್ನು ಎದುರಿಟ್ಟು ಪೂಜಿಸುವ ದಿಲ್ಲ ಆತ್ಮ ಸ್ವರೂಪವೆಂದೇ ಪೂಜಿಸುವುದು. ತನ್ನ ಸ್ವರೂಪವನ್ನು ತಾನು ಪೂಜಿಸುವುದುಂಟೋ ಎಂದು ಕೇಳಬಹುದು. ಅವಶ್ಯವಾಗಿ ಪೂಜಿಸಬಹುದು. ಶಿವನು ಹಿಮಗಿರಿಯಲ್ಲಿ ತಪಸ್ಸು ಮಾಡಿದ್ದು ಯಾರನ್ನು ಕುರಿತು? ಎಂದು ಪ್ರಶ್ನೆ ಮಾಡಿದರೆ ಶ್ರೀ ಹೂಲಿಯವರು ಏನೆಂದು ಉತ್ತರಿಸುವರು. ತಮ್ಮನ್ನು ತಾವೇ ಪೂಜಿಸುವಲ್ಲಿ ಫಲವೇನು? ಎಂದು ಕೇಳಬಹುದು. ಕನ್ನಡಿಯಲ್ಲಿ ತಮ್ಮ ಮುಖವನ್ನು ತಾವೇ ನೋಡಿ ಕೊಳ್ಳುವಲ್ಲಿ ಯಾವ ಫಲವಿದೆಯೋ ಆ ಫಲ ತಮ್ಮ ಸ್ವರೂಪಾದ ಲಿಂಗ ಪೂಜೆಯಲ್ಲಿದೆ. ಆದ್ದರಿಂದ ಜಂಗಮರು ತಮ್ಮ ಸ್ವರೂಪಾದ ಲಿಂಗ ವನ್ನು ಪೂಜಿಸುವಲ್ಲಿ ಯಾವ ದೋಷವಿಲ್ಲ.

೨ ಗುರು ಸನ್ಯಾಸಿಗಳೆಲ್ಲರು । ಅರಿಯದೆ ತಮ್ಮ
ಪರಶಿವಲಿಂಗವನ್ನು ಚರಣ
ದುದಕದಿಂದ ಭರದಿಂದ ತೊಳೆಯುತ
ದುರಿತವ ಮಾಡುತ । ನರಕ ಪೊಂದುವರಯ್ಯಾ ॥೩॥

ಇದರಲ್ಲಿ ಲಿಂಗದ ಮೇಲೆ ಜಂಗಮ ಪಾದೋದಕವನ್ನು ಎರೆಯ ಕೂಡದೆಂದು ಮರುಳುತನದಿಂದ ಮುರುಕುಗೊಂಡು ಹಾಡಿದ್ದಾರೆ. ತಾವೇ ಆಗಮಾದಿಗಳನ್ನು ಅರಿಯದೆ ಅನುಭವಿಗಳ ಆಚರಣೆಯನ್ನು ಅಳವಡಿಸಿ ಕೊಳ್ಳದೆ ಏನೇನೋ ಆಡಿ ಹಾಡಿ ತಾವೇ ದುರಿತವನ್ನು ಮಾಡಹೊರಟಿರುವರೆಂಬದನ್ನು ತಾವೇ ತಿಳಿದುಕೊಂಡಿಲ್ಲ. ತಮ್ಮ ತಪ್ಪನ್ನು ತಾವರಿಯದವರು ಇನ್ನೊಬ್ಬರಿಗೆ ಇನ್ನೇನು ಹೇಳಬಲ್ಲರು. ಜಂಗಮಲಿಂಗವು ಅಧಿಕವೆಂದ ಮೇಲೆ ಸ್ಥಾವರ ಲಿಂಗದ ಮೇಲೆ ಏಕೆ ಎರೆಯಕೂಡದು?

ಆ ಲಿಂಗಕ್ಕೆ ಪರಶಿವ ಸ್ವರೂಪವು ಬರುವುದು ಎಲ್ಲಿಂದ? ಇದಲ್ಲದೆ ಶ್ರೀ ಹೂಲಿಯವರು ಲಿಂಗಕ್ಕೆ ಧರಿಸುವ ಭಸ್ಮವು ಯಾತರಿಂದ ಶುದ್ಧಿಯಾಗುತ್ತದೆ? ಅನ್ನವು ಪ್ರಸಾದವಾಗಿ ಲಿಂಗಕ್ಕೆ ನೈವೇದ್ಯವಾಗಬೇಕಾದರೆ ಏತರಿಂದ? ಒಂದು ವೇಳೆ ಪಾದೋದಕವನ್ನು ಇಷ್ಟಲಿಂಗಕ್ಕೆ ಎರೆಯದೆ ತೆಗೆದುಕೊಂಡರೆ ಒಳಗಿರುವ ಶ್ರೇಷ್ಠವಾದ ಪ್ರಾಣಲಿಂಗ ಭಾವಲಿಂಗಗಳ ಮೇಲೆಯಾದರೂ ಎರೆದಂತಾಗುವದಿಲ್ಲವೆ? ಅವುಗಳಿಗೂ ಎರೆಯ ಕೂಡದೆಂದು ಇವರು ಹೇಳುವದಾದರೆ ಪಾದೋದಕದ ಅವಶ್ಯಕತೆಯೇನು? ಅಷ್ಟಾವರಣದಲ್ಲಿ ಏಕೆ ಸೇರಿಸಿದರು? ಶ್ರೀ ಹೂಲಿಯವರು ದುರಾಲೋಚನೆಯನ್ನು ಬಿಟ್ಟು ದೂರಾಲೋಚನೆಯನ್ನು ಮಾಡಿದರೆ ಇದೆಲ್ಲ ಅವರಿಗೇನೆ ಅರ್ಥವಾಗುತ್ತದೆ. ಶೈವ ತತ್ವಗಳಿಂದ ಸುತ್ತು ಕಟ್ಟಲ್ಪಟ್ಟ ಅವರ ಬುದ್ಧಿಯು, ಅವನ್ನು ಕಳಚಿಬಿಟ್ಟು ವೀರಶೈವರ ಆಗಮೋಕ್ತ ತತ್ವಗಳಿಗೆ ಶರಣು ಬಂದರೆ ಆಗ ಅವರ ಮನಸ್ಸಿ ಅವರಿಗೆ ಬುದ್ಧಿವಾದವನ್ನು ಹೇಳುತ್ತದೆ.

ಇಷ್ಟಲಿಂಗದ ಮೇಲೆ ಎರೆಯದೆ ತೆಗೆದುಕೊಳ್ಳಬಹುದೆಂದು ಅವರನುಡಿ ನಡೆಗಳಿಂದ ವ್ಯಕ್ತವಾಗುತ್ತದೆ. ಹೀಗೆ ಮಾಡಿದರೆ ನಾನು ಹಿಂದೆ ಹೇಳಿದಂತೆ ಪ್ರಾಣಲಿಂಗ ಭಾವಲಿಂಗಗಳ ಮೇಲೆ ಎರೆಯಬಹುದೆಂದು ಅವರೇ ಒಪ್ಪಿದಂತಾಗುವದು. ಸೂಕ್ಷ್ಮ ಕಾರಣ ಲಿಂಗಗಳ ಮೇಲೆ ಎರದ ಮೇಲೆ ಸ್ಥೂಲ ಲಿಂಗದ ಮೇಲೆ ಏಕೆ ಎರೆಯಕೂಡದು. ಅವಶ್ಯವಾಗಿ ಎರೆಯಬಹುದು. ಈ ವಿಷಯದಲ್ಲಿ ಆಗಮಾದಿಗಳೂ ಸಹ ಉಪಪ್ರಮಾಣಗಳಾಗಿವೆ. ಶ್ರೀಯುತ ಮಾಮನಿಯವರೇ ಕೆಲವನ್ನು ತಮ್ಮ ಲೇಖನದಲ್ಲಿ ಉದಹರಿಸಿದ್ದರೂ ಪುನಃ ಶ್ರೀ ಹೂಲಿಯವರಿಗೆ ಪಂಶ್ರಮವಿಲ್ಲದೆ ಅವಗಾಹನೆಯಾಗಲೆಂದು ಬೇರೆ ಕೆಲವನ್ನು ಇಲ್ಲಿ ಎತ್ತಿ ಬರೆಯುತ್ತೇನೆ.

ಜಂಗಮಸ್ಯ ಪ್ರಸಾದಾನ್ನಂ ನೈವೇದ್ಯಾರ್ಥಂ ಪ್ರಕಲ್ಪಯೇತ್ ।
ಪಾದಾಂಬುಜ ಜಲಸ್ನಾನಂ ವಿಶೇಷೋಹಿ ಮಮೋಚ್ಯತೇ ॥
ಪಾದಾಂಬುನಾ ಲಿಂಗಮೂರ್ತಿಂ ಸ್ನಾಪ್ಯ ಕುರ್ವೀತ ಭೋಜನಂ॥

—ವೀರಾಗಮ

ಪಾದೋದಕಂ ಪಾಪಹರಂ ಸರ್ವಪಾವನ ಪಾವನಂ ।
ಅಭಿಷಿಚ್ಯ ಮಹಾದೇವಂ ಸಮರ್ಚ್ಯ ರಸಸಂಗತಿಂ

—ರಹಸ್ಯಾಗಮ

ಪಾದಾಭಿಷೇಕ ಸಲಿಲೈರ್ಲಿಂಗಮಜ್ಜನ ಮುತ್ತಮಂ।
ತತ್ಪ್ರಸಾದಂಚ ನೈವೇದ್ಯಂ ತಥಾ ಮುಕ್ತಿ ಫಲ ಪ್ರದಂ॥
—ಪಾರಮೇಶ್ವರಾಗಮ

ಪಾದತೀರ್ಥಾಭಿಷೇಕೇನ ಯಥಾತುಷ್ಯಾಮಿ ಪಾರ್ವತಿ।
ನ ತಥಾಜಪಹೋಮಾದ್ಯೈಃ ವ್ರತೇನ ತಪಸಾಪಿವಾ॥
—ವಾತುಲಾಗಮ
ಇತ್ಯಾದಿ—

೩ ಲಿಂಗದ ಶ್ರೇಷ್ಠವಿದೆಂದರೆ ತನ್ನಯ।
ಅಂಗದ ಜಲವನು ಎತಿವುದು ಸರಿಯೇ?॥ ೩॥ (ಪದ್ಯ ೨)
"……ಜಂಗಮ ಪಾದದಿ ಲಿಂಗ ವಿಡುವರಯ್ಯೊ॥೧॥ (ಪದ್ಯ ೧)

ಈ ಎರಡು ನುಡಿಗಳಲ್ಲಿ ತೋರುವ ಪ್ರಶ್ನೆ-ವಿಷಾದಗಳೆರಡು ಅಜ್ಞಾನದ ಪರಮಾವಧಿಯನ್ನು ಪ್ರತ್ಯಕ್ಷಗೊಳಿಸುತ್ತವೆ. ಲಿಂಗದ ಮೇಲೆ ಎರೆಯುವ ಪಾದೋದಕವು ಅಂಗದ ಜಲವೆಂದು ಹೇಳುತ್ತಾರೆ. ತ್ರಿವಿಧ ದೀಕ್ಷೆಯಾದನಂತರ ಅಂಗವು ಅಂಗವಾಗಿಯೆ ಉಳಿಯುತ್ತದೆಯೊ? ಲಿಂಗವಾಗುತ್ತದೆಯೊ? ಕಟ್ಟಿಗೆಯನ್ನು ಒಳಹೊರಗು ಅಗ್ನಿ ಆವರಿಸಿ ಸುಟ್ಟರು ವಾಗ ಅದು ಕಟ್ಟಿಗೆಯೊ ಕೆಂಡವೊ? ತಾವು ಮಾಡುವ ದೀಕ್ಷೆಯ ಮರ್ಮವು ತಮಗೆ ತಿಳಿಯದಿದ್ದ ಮೇಲೆ ಇವರು ಶಿಷ್ಯರಿಗೆ ಎಷ್ಟರ ಮಟ್ಟಿಗೆ ತತ್ವವನ್ನು ತಿಳಿಸಬಲ್ಲರು? ತಾವು ಗುರುಗಳೆಂದು ಹೇಳಿಸಿಕೊಳ್ಳುವುದಾದರೂ ಹೇಗೆ?

ಇನ್ನು ಜಂಗಮ ಪಾದದಲ್ಲಿ ಲಿಂಗವಿಡುವುದು ದೋಷವೆಂದು ಅಂತ ದೃಷ್ಟಿಯಿಲ್ಲದೆ ಹೇಳಿದ್ದಾರೆ. ಶಿಷ್ಯನು ಜಂಗಮಪಾದದಲ್ಲಿ ಮಸ್ತಕವನ್ನಿಟ್ಟು ನಮಸ್ಕಾರ ಮಾಡಬಹುದಾದರೆ ಲಿಂಗವನ್ನು ಇಡುವಲ್ಲಿ ತಪ್ಪೇನು? ಶಿಷ್ಯನಾರು? ಲಿಂಗವಾವುದು? ಲಿಂಗಕಳೆಯು ಎಲ್ಲಿಂದ ಬಂದಿದೆ? ತಾವು ಶಿಷ್ಯರಿಗೆ ಲಿಂಗವನ್ನು ಕೊಡುವಾಗ ಏನೆಂದು ಬೋಧಿಸುವರು? ಅಂಗವೇ ಲಿಂಗವಾಗಿ ಲಿಂಗದೇಹಿಯಾಗಿರುವದಿಲ್ಲವೆ? ಲಿಂಗದೇಹವನ್ನಿಟ್ಟರೆ ಲಿಂಗವನ್ನಿಟ್ಟಂತೆಯಲ್ಲವೆ?

ಒಟ್ಟಿನಲ್ಲಿ ಶ್ರೀ ಹೂಲಿಯವರು ತತ್ವಕ್ಕೆ ವಿರುದ್ಧವಾಗಿ ಪದ್ಯಗಳನ್ನು ಕಟ್ಟುವದರಲ್ಲಿ ದ್ವೇಷಭಾವವೂ ಸಾಲದೆ ಅಜ್ಞಾನವೂ ಕಾರಣವಾಗಿವೆ. ಅವರು ಕಾಶಿಯಲ್ಲಿ ಓದಿದ್ದು ಶೈವತತ್ವವೋ ತರ್ಕವೋ ಇರಬಹುದೇ

ಹೊರತು ಭಾವನಾಮಯವಾದ ಲಿಂಗವಂತ ತತ್ವವನ್ನಲ್ಲ. ಲಿಂಗವಂತ ತತ್ವಕ್ಕೆ ಬರೀ ಬುದ್ಧಿಸಾಲದು. ಭಾವನೆಯೂ ಬೇಕು. ಆದ್ದರಿಂದ ಶ್ರೀ ಹೂಲಿಯವರು ಶಿವಶರಣರ ವಚನಗಳನ್ನೂ (ಆಗದಿದ್ದರೆ) ಸಿದ್ಧಾಂತ ಶಿಖಾಮಣಿಯನ್ನೂ ಆಗಮಗಳನ್ನೂ ಆಮೂಲಾಗ್ರವಾಗಿ ಓದಬೇಕು. ನಿರ್ಮಲಾಂತಃಕರಣದಿಂದ ಅವುಗಳಲ್ಲಿರುವ ತತ್ವವನ್ನು ಗ್ರಹಿಸಬೇಕು. ತತ್ವ ತಿಳಿಯದೆ ತತ್ವಪದಗಳನ್ನು ಕಟ್ಟಕೂಡದು. ಕಂಠವಿಲ್ಲದೆ ಗಾನ ಮಾಡಿದಂತೆ ಅಪಸ್ವರವೂ ಅಭಾಸವೂ ಆಗುತ್ತದೆ. ಶ್ರೀ ಹೂಲಿಯವರು ಸ್ವತಃ ಗುರುಗಳಾಗಿ ಮತತತ್ವವನ್ನು ತಿಳಿಯದೆ ಇದ್ದುದು ತುಂಬಾ ವಿಷಾದಕರವಾದುದು. ಸಮಾಜ ಘಾತಕವಾದುದು. ಅವರು ಜಾಗ್ರತೆ ತಮ್ಮ ಕೊರತೆಯನ್ನು ಕೊನೆಗಾಣಿಸುವರೆಂದು ಹೃತ್ಪೂರ್ವಕ ಕೋರುತ್ತೇನೆ.

ಶಿವದೀಕ್ಷೆ ಅಥವಾ ಲಿಂಗಧಾರಣೆ

(ಲೇಖಕಃ- ಜೀರಗೆ ಕ. ಬಸವಪ್ಪ, ಬಿ. ಎ., ಬೆಂಗಳೂರುನಗರ)

ಶಿವದೀಕ್ಷೆ ಅಥವಾ ಲಿಂಗಧಾರಣೆಯ ವಿಚಾರದಲ್ಲಿ ಶಿವಾನುಭವ ಪತ್ರಿಕೆಯಲ್ಲಿ ಈಗಾಗಲೇ ಸಾಕಾದಷ್ಟು ಚರ್ಚೆ ನಡೆದಿದೆ. ಈ ಚರ್ಚೆಯನ್ನು ಮೊಟ್ಟಮೊದಲು ಪ್ರಾರಂಭಿಸಿದವರು ಶ್ರೀಮಾನ್ ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳು. ಅವರ ಲೇಖನಕ್ಕೆ ಉತ್ತರರೂಪವಾಗಿ ಈ ಲೇಖಕನು ಕೆಲವು ವಿಚಾರಗಳನ್ನು ವಿವೇಚಿಸಿದನು. ಅದಕ್ಕೆ ಉತ್ತರವಾಗಿ ಹಲವರು ಮಾರುತ್ತರ ಪ್ರತ್ಯುತ್ತರಗಳನ್ನು ಕೊಟ್ಟಿರುವರು. ಈ ಚರ್ಚೆಯು ಊಹಿಸಿದಷ್ಟು ಹೆಚ್ಚಿನ ಮಟ್ಟದಲ್ಲಿ ಮುಂದುವರಿಸಲ್ಪಡದಿದ್ದರೂ ಕೆಲವು ಗಣನೀಯವಾದ ಅಂಶಗಳು ಈ ಚರ್ಚೆಯಿಂದ ಬೆಳಕಿಗೆ ಬಂದಿವೆ. ಸಾರ್ವಜನಿಕರು ಈ ಅಂಶಗಳನ್ನು ಜೀರ್ಣಿಸಿಕೊಂಡು ಲೋಚಿಸಿ ಸಮಾಜದಲ್ಲಿ ರೂಢ ಮೂಲವಾಗಿರುವ ಕೆಲವು ಕುಂದುಕೊರತೆಗಳನ್ನು ನಿವಾರಣೆ ಮಾಡಿ ವೀರಶೈವ ಸಂಸ್ಕೃತಿ, ನಾಮಗೌರವ ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸುವರೆಂದು ನಾನು ನಂಬಿರುತ್ತೇನೆ.

ಈ ಚರ್ಚೆಯಿಂದ ಬೆಳಕಿಗೆ ಬಂದ ಅಂಶಗಳಾವುವೆಂಬುದನ್ನು ವಿವಂಸುವುದಕ್ಕೆ ಮೊದಲು ಚರ್ಚೆಯನ್ನು ನಡೆಯಿಸುವ ವಿಚಾರದಲ್ಲಿ ಒಂದು ಎಚ್ಚರಿಕೆಯನ್ನು ಇಲ್ಲಿ ವಿನಯದಿಂದ ಬಿನ್ನೈಸಿಕೊಳ್ಳುತ್ತೇನೆ. ಚರ್ಚೆಗಳಿಂದ ಹಿತವೂ ಉಂಟು; ಅಹಿತವೂ ಉಂಟು. ಕ್ಷೀರ ಸಮುದ್ರವನ್ನು ಮಥಿಸಿದ ಸುರಾಸುರರು ಅಮೃತವನ್ನು ಸಂಪಾದಿಸಿದುದರ ಜೊತೆಗೆ ವಿಷವನ್ನೂ ಸಂಪಾದಿಸಿದರು. ಈ ರೀತಿ ಮಥನದಿಂದ ಹುಟ್ಟಿದ ವಿಷದಿಂದ ಜಗತ್ತಿನಲ್ಲಿ ಒಂದು ಕೋಲಾಹಲವೇ ಎದ್ದಿತು. ಈ ವಿಷವನ್ನ ಪರಿಹರಿಸಲು ಪಂಚಮುಖ ಪರಮೇಶ್ವರನೇ ಬರಬೇಕಾಯಿತು. ಈ ರೀತಿಯಲ್ಲಿ ಮಥನದಿಂದ ಹಿತವಿದ್ದರೂ ಅಹಿತವು ಹಿಂದೆಯೇ ಇರುವುದು. ಆದುದರಿಂದ ಚರ್ಚೆಗಳನ್ನು ಬಹು ಎಚ್ಚರಿಕೆಯಿಂದ ನಡೆಯಿಸುವ ಕ್ರಮವನ್ನು ಎಲ್ಲರೂ ಅನುಸರಿಸಬೇಕು. ಚರ್ಚೆಗಳನ್ನು ಯಾವಾಗಲೂ ಸಂಶೋಧನಾತ್ಮಕ ದೃಷ್ಟಿಯಿಂದಲೂ, ಧರ್ಮದ, ಸಮಾಜಿನ ಜನತೆಯ ಮತ್ತು ದೇಶದ ಹಿತಸಾಧನೆಯ ದೃಷ್ಟಿಯಿಂದಲೂ ನಡೆಯಿಸಬೇಕೇ ಹೊರತು ಪಕ್ಷಸಾಧನೆಯ ದೃಷ್ಟಿಯಿಂದಾಗಲಿ, ವೈಯಕ್ತಿಕ ದ್ವೇಷಾಸೂಯೆಗಳ ದೃಷ್ಟಿಯಿಂದಾಗಲಿ ನಡೆಯಿಸಬಾರದು. ಅಲ್ಲದೆ ಚರ್ಚೆಗಳಲ್ಲಿ ಭಾಗಿಗಳಾಗತಕ್ಕವರು ಒಳ್ಳೆಯ ಆಟಗಾರರಂತೆ (*Sportsmen*) ವರ್ತಿಸಬೇಕು. ಚರ್ಚೆಗಳಲ್ಲಿ ಕೆಲವು ಸೋಲುಗಳು ಮುಖ್ಯವಲ್ಲ. ನಾಡುನುಡಿ ಸಮಾಜಗಳ ಹಿತವೇ ಮುಖ್ಯ. ಕೊರತೆಗಳಿದ್ದರೆ ಅವುಗಳನ್ನು ತಿದ್ದಿಕೊಳ್ಳಬೇಕು. ಪ್ರಯೋಜನಾಂಗಳಿದ್ದರೆ ಅವುಗಳನ್ನು ಅನುಕರಣಮಾಡಬೇಕು ಈ ವಿಚಾರ ಇಷ್ಟಕ್ಕೆ ಸಾಕು.

ಇನ್ನು ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ವಿಚಾರದಲ್ಲಿ ಇದುವರೆಗೂ ನಡೆದ ಚರ್ಚೆಯಿಂದ ಹೊರಬಿದ್ದ ಕೆಲವು ಗಣನೀಯವಾದ ಅಂಶಗಳಾವುವೆಂಬುದನ್ನು ವಿವೇಚಿಸಿ ನೋಡೋಣಃ-

೧ ಲಿಂಗಧಾರಣ ಮತ್ತು ಶಿವದೀಕ್ಷೆಗಳು ಭಿನ್ನವಾದವುಗಳೇ ಅಥವಾ ಅಭಿನ್ನವಾದವುಗಳೇ ಎಂಬ ವಿಚಾರ.

"ಲಿಂಗಧಾರಣ ಶಿವದೀಕ್ಷೆಗಳು ತತ್ವತಃ ಒಂದೇ ಆಗಿವೆಯೆಂದು" ಚರ್ಚೆಯಲ್ಲಿ ಭಾಗ ವಹಿಸಿದವರೆಲ್ಲರೂ ಒಪ್ಪಿಕೊಂಡಿರುತ್ತಾರೆ. ಆದರೆ ವ್ಯವಹಾರಿಕ ರೀತಿಯಿಂದ ಅವುಗಳಲ್ಲಿ ಭೇದವುಂಟೆಂದು ಕೆಲವರು, ಭೇದವಿಲ್ಲೆಂದು ಕೆಲವರು ಸಮರ್ಥಿಸಿದ್ದಾರೆ. ಈ ರೀತಿ ಭಿನ್ನಾಭಿಪ್ರಾಯಗಳು ಉಂಟಾಗಲಿಕ್ಕೆ ಆಯಾ ಪ್ರಾಂತ್ಯಗಳಲ್ಲಿರತಕ್ಕ ರೂಢಿಯು ಆಚರಣೆಗಳೇ ಮುಖ್ಯ ಕಾರಣವಾಗಿವೆಯೇ ಹೊರತು ಹಿಂದಿನ ಶಿವಶರಣರ ನಡೆನುಡಿಗಳು ಕಾರಣವಾಗಿಲ್ಲ. ರಾವ್‌ಬಹದ್ದೂರ್ ಹಳಕಟ್ಟಿಯವರು ತಮ್ಮ ಈಚಿನ ಜೂಲೈ ಅಗಷ್ಟು ಶಿವಾನುಭವದಲ್ಲಿ ಈ ರೀತಿ ನುಡಿದಿರುತ್ತಾರೆಃ- "ಈಜೆಗೆ ವಚನಶಾಸ್ತ್ರದ ಅಭ್ಯಾಸವು ನಿಂತು ಹೋಗಿರುತ್ತವೆ. ಷಟ್ಸ್ಥಲ ಮತ್ತು ಅಷ್ಟಾವರಣ ಇವುಗಳ ಮರ್ಮವನ್ನು ತಿಳಿದವರು ಅತ್ಯಂತ ವಿರಳರಾಗಿದ್ದಾರೆ. ಅದ್ದರಿಂದ ವೀರಶೈವರ ವಿಧಿಗಳನ್ನು ದೂಷಿಸುವವರು ಈಜೆಗೆ ಅನೇಕರು ಉತ್ಪನ್ನರಾಗಹತ್ತಿದ್ದಾರೆ. ಅವರಲ್ಲಿ, ಮಠಾಧೀಶ್ವರರು ಪ್ರಮುಖ ಭಾಗ ವಹಿಸುತ್ತಿರುವುದು ಸಮಾಜದ ದುರ್ದೈವವಾಗಿದೆ." ಶ್ರೀಮಾನ್ ಹಳಕಟ್ಟಿಯವರ ಈ ಮಾತುಗಳು ಸತ್ಯವನ್ನೇ ನುಡಿಯುತ್ತವೆ. ನಾವು ಇತ್ತೀಜೆಗೆ ಶರಣರ ಉದಾತ್ತ ಹಾಗೂ ಉದಾರ ಮಾರ್ಗವನ್ನು ನಿರಾಕರಿಸಿರುತ್ತೇವೆ. ನೆರೆಹೊರೆಯ ಧರ್ಮಗಳ ಕೆಲವು ಪದ್ಧತಿಗಳನ್ನು ಅನುಕರಣ ಮಾಡಿಕೊಂಡು ಶರಣರ ನಿರಾಳ ಮಾರ್ಗವನ್ನು ತೊರೆದಿದ್ದೇವೆ. ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ ಎಂಬುದು ಕ್ರಿಶ್ಚಿಯನರ *Baptism* ಎಂಬ ಮತಾಂತರ ಕ್ರಿಯೆಗೆ ಸರಿಸಮಾನವಾದುದು. ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ಮುಖ್ಯ ಧ್ಯೇಯವು ಮತಾಂತರಗೊಳಿಸುವುದೇ. ಈ ಕಾರಣದಿಂದಲೇ ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಕ್ರಿಯೆಯು ಶಿವಶರಣರ ಕಾಲದಿಂದಲೂ ಎರಡು ಮುಖ್ಯ ಸನ್ನಿವೇಶಗಳಲ್ಲಿ ಆಚರಿಸಲ್ಪಡುತ್ತ ಬಂದಿದೆ. ಲಿಂಗಧಾರಿಗಳಾದವರ ಹೊಟ್ಟೆಯಲ್ಲಿ ಮಕ್ಕಳು ಜನಿಸಿದಾಗ ಒದಗತಕ್ಕುದು ಒಂದು ಸನ್ನಿವೇಶ. ಅಲಿಂಗಿಗಳು ಎಂದರೆ ಭವಿಗಳು ವೀರಶೈವ ಧರ್ಮವನ್ನು ಸ್ವೀಕಾರ ಮಾಡಬೇಕೆಂದು ಅಪೇಕ್ಷಿಸಿ ಬಂದಾಗ ಒದಗತಕ್ಕುದು ಮತ್ತೊಂದು ಸನ್ನಿವೇಶ. ಈ ಎರಡು ಸನ್ನಿವೇಶಗಳಲ್ಲಿಯೂ ನಡೆಯತಕ್ಕ ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಕಾರ್ಯಕ್ರಮವು ಒಂದೇ ಆಗಿರುತ್ತದೆ. ಈ ವಿಚಾರದಲ್ಲಿ ನಾನು ನನ್ನ ಹಿಂದಿನ ಲೇಖನದಲ್ಲಿ ಕೆಲವು ಆಧಾರಗಳನ್ನು ಕೊಟ್ಟು ವಿಮರ್ಶಿಸಿದ್ದೇನೆ. ಈ ಲೇಖನದಲ್ಲಿ ಇನ್ನೂ ಹೆಚ್ಚಿನ ಆಧಾರಗಳನ್ನು ವಾಚಕರ ಮುಂದಿಡಲು ಬಯಸುತ್ತೇನೆ.

ಜನನವಾದ ಮಗುವಿಗೆ ಮಾಡತಕ್ಕ ಲಿಂಗಧಾರಣ ಕಾರ್ಯಕ್ರಮವು ದೀಕ್ಷೆಯೆಂದೇ ಕರೆಯಲ್ಪಡುತ್ತದೆಯೆಂದು "ಮುಂಬೈ ಗೆಜೆಟಿಯರ್"

(*Bombay Gazetter*) ಗ್ರಂಥದಲ್ಲಿ ಹೇಳಲಾಗಿದೆ. ಆ ಗೆಜೆಟಿಯರಿನ ಮಾತುಗಳನ್ನೇ ನಾನಿಲ್ಲಿ ಉದ್ಧರಿಸುತ್ತೇನೆ. "*The ceremony performed at the time of tying on the child's neck or arm is also called Diksha*" (ಪುಟ. ೨೭೩): ಅರ್ಥಃ "ಮಗುವಿನ ಕೊರಳಿಗೆ ಅಥವಾ ತೋಳಿಗೆ ಲಿಂಗವನ್ನು ಧರಿಸತಕ್ಕ ಸಮುಯದಲ್ಲಿ ನಡೆಯತಕ್ಕ ವಿಧಿಯು ದೀಕ್ಷೆಯೆಂಬ ಹೆಸರಿನಿಂದಲೂ ಸಹ ಕರೆಯಲ್ಪಡುವದು".

ಇನ್ನು ಭವಿಗಳನ್ನು ಲಿಂಗವಂತಮತಕ್ಕೆ ಸೇರಿಸಿಕೊಳ್ಳುವ ಕಾರ್ಯಕ್ರಮದ ವಿಚಾರದಲ್ಲಿ ಶ್ರೀಯುತ ಎಡ್ಗಾರ್ ಥರ್ಸ್ಟನ್ (*Mr. Edgar Thurston*) ರವರು "*Castes and Tribes of Southern India*" (ದಕ್ಷಿಣ ಭಾರತದ ಜಾತಿಗಳು ಮತ್ತು ಕುಲಗಳು") ಎಂಬ ಗ್ರಂಥದಲ್ಲಿ ಈ ರೀತಿ ಹೇಳಿದ್ದಾರೆಃ— "*The term Diksha is sometimes used to express the conversion ceremony used in the case of new comer*" IV ನೆಯ ವಾಲೂಂ. *K—M* (ಪುಟ ೨೭೫); ಅರ್ಥಃ "ದೀಕ್ಷೆ ಎಂಬ ಪದವು ಕೆಲವು ಸಂದರ್ಭಗಳಲ್ಲಿ ಹೊಸಬರ (ಭವಿಗಳ) ಮತಾಂತರ ಕ್ರಿಯೆಗೆ ಅನ್ವಯಿಸಿ ಉಪಯೋಗಿಸಲ್ಪಡುತ್ತದೆ."

ಇನ್ನು ಶಿವಶರಣರು ಈ ಎರಡು ಸನ್ನಿವೇಶಗಳಲ್ಲಿ ನಡೆಯತಕ್ಕ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ವಿಚಾರದಲ್ಲಿ ನುಡಿದಿರುವುದೇನೆಂಬುದನ್ನು ನೋಡೋಣ. ಭವಿಗಳನ್ನು ಭಕ್ತರನ್ನಾಗಿ ಮತಾಂತರಗೊಳಿಸಲು ನಡೆಯತಕ್ಕ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ವಿಚಾರದಲ್ಲಿ ಶಿವಶರಣರು ಹಾಡಿದ ವಚನಗಳು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಾದವುಗಳಾಗಿವೆ. ಆದುದರಿಂದ ಅವುಗಳನ್ನು ಮತ್ತೆ ಇಲ್ಲಿ ಹೇಳಿ ವಾಚಕರಿಗೆ ಶ್ರಮಕೊಡುವದು ನನಗೆ ಇಷ್ಟವಿಲ್ಲ. ಆದರೆ ಹುಟ್ಟಿದ ಮಕ್ಕಳಿಗೆ ಮಾಡತಕ್ಕ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ವಿಚಾರದಲ್ಲಿ ಶಿವಶರಣರು ಹಾಡಿರತಕ್ಕ ವಚನಗಳು ಬಹು ಜನರ ದೃಷ್ಟಪಥಕ್ಕೆ ಬಂದಿಲ್ಲವಾದುದರಿಂದಲೂ ಮತ್ತು ಅವುಗಳ ಈ ಸನ್ನಿವೇಶದಲ್ಲಿ ಮುಖ್ಯವಾಗಿರುವುದರಿಂದಲೂ ಅವುಗಳಲ್ಲಿ ಕೆಲವು ಮುಖ್ಯನಾದವುಗಳನ್ನು ಇಲ್ಲಿ, ಉದ್ಧರಿಸಿ ಬರೆಯುತ್ತೇನೆ.

"ಖಂಡಿತ ವ್ರತದ ನಿರಂಗನ ವ್ರತ
ವೆಂತುಂಟು ಎಂದರೆ, ತನ್ನ ಸತಿಗೆ ಗರ್ಭ
ತಲೆ ದೋರಿದಲ್ಲಿಯೇ ಮುಖವ ಕಾಂಬು
ದಕ್ಕೆ ಮುನ್ನವೇ ಲಿಂಗಧಾರಣ ಮಾಡಿ,
ನೋಡಿದ ಮತ್ತೆ ಗಣಸಾಕ್ಷಿಯಾಗಿ ವೀ
ಭೂತಿಯ ಪಟ್ಟವಕಟ್ಟಿ ಇಪ್ಪುದೇ
ವ್ರತಕೀಲನೇಮ. ಹಾಗಲ್ಲದೆ,
ದಿಂಡೆಯತನದಲ್ಲಿ ಮಕ್ಕಳಿಗೆ ಸಂ
ದೇಹ ವ್ರತವ ಕಟ್ಟಿಬಹುದೇ?
ಬುದ್ಧಿಯಾದಂದಿಂಗಾಗಲಿ ಎಂಬ
ವರ ಅಂಗಣವ ಮೆಟ್ಟಲಾಗದು. ಅದೆಂ
ತೆಂದರೆ, ವ್ರತದಂಗದಲ್ಲಿ ಬೆಳೆದಗರ್ಭ
ವನು... ... ಎಂಬವನ
ವ್ರತ ಅಂದೇ ಬಿಟ್ಟಿತ್ತು ಅದೆಂತೆಂ
ದಡೆ ತನ್ನ ಅಂಗದಲ್ಲಿ ಇದ ಲಿಂಗ
ದೇಹಿಯ ಮುಂದಕ್ಕೆ ಭವಿ ಸಂಗಕ್ಕೆ
ಈಡು ಮಾಡುವ ವ್ರತ ಭಂಗಿತನ ಕಂಡು
ಅವನೊಡನೆ ನುಡಿದಡೆ ಕುಂಭೀನರಕ.
ಆಚಾರವೇ ಪ್ರಾಣವಾದ ರಾಮೇಶ್ವರಲಿಂ
ಗವೇ ಅವನ ಹಿಂಗಿರಬೇಕ.."

ಇದು ಶಿವಶರಣೆ ರೆಮ್ಮವ್ವೆಯ ವಚನ. ಈ ವಚನದಲ್ಲಿ "ಹುಟ್ಟಿದ ಶಿಶುವಿಗೆ ಬುದ್ಧಿಯಿರುವುದಿಲ್ಲವೆಂಬ ಭ್ರಾಂತಿಯಿಂದ ಬುದ್ಧಿ ಬಂದ ಮೇಲೆ ಲಿಂಗ ಧಾರಣೆಯನ್ನು ಮಾಡಬೇಕೆಂದು" ಹೇಳುವುದು ತಪ್ಪೆಂದು ರೆಮ್ಮವ್ವೆಯು ಸ್ಪಷ್ಟವಾಗಿ ನುಡಿದಿರುತ್ತಾಳೆ. ರೆಮ್ಮವ್ವೆಯ ಈ ವಚನವು ಪ್ರಕೃತದ ಚರ್ಚೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲತಕ್ಕುದಾಗಿದೆ.

"ಲಿಂಗಪ್ರಾಣಿಯು ಲಿಂಗವಂತನ ಉದರ
ದಲ್ಲಿ ಒಂದು ಲಿಂಗ ಪಿಂಡ ನಿಂದು ಉ
ದಿಸಿದಡೆ, ಅಕ್ಷಣವೇ ಲಿಂಗಸ್ಥಾಯ
ತವಮಾಡಿ, ಆ ಶಿಶುವ ತನ್ನ ಶಿಸುನೆಂ

ದು ಮುಖವ ನೋಡುವುದು ಸದಾಚಾರ
ವಲ್ಲದೆ, ಬಂಯ ವಿಭೂತಿಯ ಪಟ್ಟೆ
ಪಕಟ್ಟೆ ಗುರುಕಾರುಣ್ಯವಾಯಿತ್ತೆಂ
ದು ಅನುಸರಣೆಯಲ್ಲಿ ಅಡಿಕೊಂ
ಬುವುದು ತ್ರಮವಲ್ಲ. ಅದೇನು ಕಾರ
ಣವೆಂದಡೆ, ತಾ ಲಿಂಗ ವೇದಿಯಾದು
ದಕ್ಕೆ ಕುರುಹು. ಲಿಂಗವುಳ್ಳವರ
ತನ್ನವರೆಂದನ ಬೇಕಲ್ಲದೆ ಲಿಂಗ
ವಿಲ್ಲದವರ ತನ್ನವರೆಂದರೆ ತನ್ನ
ಸದಾಚಾರಕ್ಕೆ ದ್ರೋಹಬಹುದು ಸಮ
ಯಾಚಾರಕ್ಕೆ ಸಲ್ಲದು. ಇದು ಕಾರಣ
ಲಿಂಗ ಸ್ವಾಯತವಾಗಿಪ್ಪುದೇ ಪಥ
ವಯ್ಯಾ ನಾಗಪ್ರಿಯ ಚನ್ನರಾಮೇಶ್ವರಂ"

ಈ ವಚನದಲ್ಲಿ ಶಿಶು ಹುಟ್ಟಿದಾಗಲೇ ಲಿಂಗ ಸ್ವಾಯತ ಕ್ರಮ ವನ್ನು ನಡೆಯಿಸಬೇಕೆಂದು ಒತ್ತಿ ಹೇಳಲಾಗಿದೆ. "ಲಿಂಗಸ್ವಾಯತ" ಕ್ರಮವು ಶಿವದೀಕ್ಷೆಯ ಮುಖ್ಯ ಆಚರಣೆಯಾಗಿದೆ.

"ಶಿವಭಕ್ತರಲ್ಲಿ ಗರ್ಭೋತ್ಪತ್ತಿ
ವಾದ ಶಿಶ.ವಿಂಗೆ ಪಾದೋದಕದಿಂದೆ
ಜಳಕವ ಮಾಡಿಸುವುದು. ವಿಭೂತಿ
ಯ ಪಟ್ಟವಂ ಕಟ್ಟಿ, ಕೊರಳಲ್ಲಿ
ಲಿಂಗ ಸಾಹಿತ್ಯವ ಮಾಡಿ, ಪ್ರಸಾದದ
ಎಣ್ಣೆ ಬೆಣ್ಣೆ ಹಾಲು ತುಪ್ಪವನೆರೆದು,
ಸಲಹುವುದೇ ಆಚಾರ. ಅದಕ್ಕೆ
ಇರುಳು ಗಾಳಿ ಭೂತ ಸೋಂಕಿತೆಂ
ದು ಕಾಣಿಕೆಯ ಬೆಸಗೊಂಡು ಲೌಕಿ
ಕಾಚಾರವ ಮಾಡುವ ಭಕ್ತಂಗೆ ಗುರುವಿಲ್ಲ,
ಲಿಂಗವಿಲ್ಲ, ಜಂಗಮವಿಲ್ಲ, ಪಾದೋದ
ಕವಿಲ್ಲ, ಪ್ರಸಾದವಿಲ್ಲ. ಪ್ರಸಾದವಿಲ್ಲ
ದವಂಗೆ ಮುಕ್ತಿ ಇಲ್ಲ. ಇದನರಿದು

ಅಷ್ಟಾವರಣ ಪಂಚಾಚಾರದಲ್ಲಿ
ನಚ್ಚುಮನಚ್ಚು ಅಜ್ಞೆಪ್ತಿದಂತಿಲ್ಲ
ದವರ ಮೆಚ್ಚುವರೆ ನಮ್ಮ ಕೂಡಲ ಚನ್ನ
ಸಂಗಯ್ಯನ ಶರಣರು ?"

ಇದು ಷಟ್ಸ್ಥಲ ಚಕ್ರವರ್ತಿ ಶ್ರೀ ಚನ್ನಬಸವಣ್ಣನವರ ವಚನ. ಈ ವಚನದಲ್ಲಿ "ಲಿಂಗಸಾಹಿತ್ಯ" ಎಂಬ ಪದವನ್ನು ಎಲ್ಲರೂ ಗಮನಿಸಬೇಕು. "ಲಿಂಗಸಾಹಿತ್ಯ" ಎಂಬುದು ಸಾಮಾನ್ಯವಾದ ಪದವಲ್ಲ. ಅದು ವೀರಶೈವರ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯ ಕ್ರಿಯಾಚರಣೆಯನ್ನು ಸೂಚಿಸತಕ್ಕ ಪರಿಪೂರ್ಣವಾದ ಪದ. ಇಂಥ ಲಿಂಗಸಾಹಿತ್ಯವನ್ನು ಹುಟ್ಟಿದ ಶಿಶುವಿಗೆ ಅನುಗ್ರಹಿಸಿ ಅಷ್ಟಾವರಣ ಪಂಚಾಚಾರಗಳನ್ನು ಪರಿಪಾಲಿಸಬೇಕೆಂದು ಶ್ರೀ ಚನ್ನಬಸವಣ್ಣನವರು ಈ ವಚನದಲ್ಲಿ ಘಂಟಾಘೋಷವಾಗಿ ಹೇಳಿದ್ದಾರೆ.

ಈ ರೀತಿಯಲ್ಲಿ ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಕ್ರಿಯಾಚರಣೆಯು ಲಿಂಗಧಾರಿಗಳ ಹೊಟ್ಟೆಯಲ್ಲಿ ಮಕ್ಕಳು ಜನಿಸಿದಾಗ ಒದಗತಕ್ಕ ಸನ್ನಿವೇಶ ಮತ್ತು ಭವಿಗಳು ಲಿಂಗವಂತ ಮತ ಸ್ವೀಕಾರ ಮಾಡಿ ಬಯಸಿ ಬಂದಾಗ ಒದಗತಕ್ಕ ಸನ್ನಿವೇಶ— ಈ ಎರಡು ಸನ್ನಿವೇಶಗಳಲ್ಲಿ ಆಚರಿಸಲ್ಪಡುತ್ತ ಬಂದಿದೆ. ಈ ಪದ್ಧತಿಯೇ ಶಿವಶರಣರ ನಡೆನುಡಿಗಳಿಗನುಸಾರವಾದ ಪದ್ಧತಿಯಾಗಿದೆ. ಇದನ್ನು ಬಿಟ್ಟು ಲಿಂಗಧಾರಿಗಳ ಹೊಟ್ಟೆಯಲ್ಲಿ ಹುಟ್ಟಿ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯನ್ನು ಹೊಂದಿದವರಿಗೇ ಮತ್ತೊಮ್ಮೆ ಶಿವದೀಕ್ಷೆಯನ್ನು ಮಾಡಲಿಕ್ಕೆ ಹೋಗುವುದು ಅರ್ಥವಿಲ್ಲದ ವ್ಯರ್ಥ ಕಾರ್ಯವಾಗಿದೆ. ಶಿವಶರಣರ ಲಿಂಗಮಾರ್ಗಕ್ಕೆ ಇದು ತೀರ ವಿರುದ್ಧವಾದುದಾಗಿದೆ. ಶಿವಶರಣರ ನಡೆನುಡಿಗಳಿಗೆ ನಾವು ಇತ್ತೀಚೆಗೆ ಅಪಾರ್ಥಗಳನ್ನು ಕಲ್ಪಿಸಹತ್ತಿದ್ದೇವೆ.

"ಕೇಡಿಲ್ಲದ ಗುರುವಿಂಗೆ ಕೇಡ ಕಟ್ಟುವ
ರಯ್ಯಾ. ಕೇಡಿಲ್ಲದ ಲಿಂಗಕ್ಕೆ ಕೇಡ
ಕಟ್ಟುವರಯ್ಯ. ಕೇಡಿಲ್ಲದ ಜಂಗಮ
ಕ್ಕೆ ಕೇಡ ನುಡಿವರಯ್ಯ.
ಕೇಡಿಲ್ಲದ ಮಂತ್ರಕ್ಕೆ ಕೇಡ ಕಟ್ಟುವ
ವರಯ್ಯ.....ಅದು ಕೆಡುವುದೂ

ಅಲ್ಲ ಅಳವುದೂ ಅಲ್ಲ. ನಿಮ್ಮ ಸಂಕ
ಲ್ಪವಿಕಲ್ಪವೆಂಬ ಸಂದೇಹವೇ ನಿಮ್ಮ
ಕೆಡಿಸುತ್ತ ಅಳಿಸುತ್ತ ನಿಮ್ಮ ಕಾದು
ತ್ತಿಪ್ಪವು ಕಾಡಿರಯ್ಯಾ ಮಹಾ
ಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ"

ಎಂದು ಶ್ರೀತೋಂಟದ ಸಿದ್ಧಲಿಂಗ ಯತಿಗಳೂ—

"ಅಂಗದ ಮೇಲೆ ಲಿಂಗ ಉಳ್ಳವರ ಕಂಡು
ಮುರಳ ಮಾನವರೆಂದರೆ ನಾಯಕ ನರಕ
ತಪ್ಪದಯ್ಯಾ — — —"

ಎಂದು ಉರುಲಿಂಗ ಪೆದ್ದಿಗಳೂ—

"ಎಂತವನಾದಡೇನು ಲಿಂಗ ಮುಟ್ಟಿ
ದವನೇ ಕೀಳು ಜಾತಿ. ಶಿವ ಕುಲವ
ಹುದು ತಪ್ಪದು ಲಿಂಗವ ಮುಟ್ಟಿ
ಲೊಡನೆ. ಕಬ್ಬುನ ಹೊನ್ನಹುದು
ತಪ್ಪದು ಪರುಷ ಮುಟ್ಟಿ ಲೊಡನೆ
ಕೂಡಲ ಸಂಗಮದೇವನೊಲ್ಲ ಸರ್ವ
ಸಂದೇಹಿಗಳ."

ಎಂದು ಬಸವಣ್ಣನವರೂ—

"ಶ್ರೀಗುರುವು ಪೂರ್ವಾಶ್ರವ ಕಳೆದು
ಪುನರ್ಜಾತನ ಮಾಡಿದ ಬಳಿಕ, ಪಂಚಭೂ
ತ ಕಾಯವ ಕಳೆದು ಪ್ರಸಾದ ಕಾಯವಾ
ಡಿದ ಬಳಿಕ, ವಾಯು ಪ್ರಾಣಿಯ ಕಳೆದು
ಲಿಂಗ ಪ್ರಾಣಿಯ ಮಾಡಿದ ಬಳಿಕ, ಎಲ್ಲಿ
ಯ ಕುಲ ಸೂತಕ, ಎಲ್ಲಿಯು ಫಲಸೂತ
ಕ, ಎಲ್ಲಿಯತನು ಸೂತಕ, ಎಲ್ಲಿಯ
ಮನ ಸೂತಕ, ಎಲ್ಲಿಯ ನೆನಹುಸೂತಕ,
ಎಲ್ಲಿಯ ಧಾವ ಸೂತಕ? ಇವನೆಂದೂ
ಹಿಡಿಯಲಾಗದು. ಕುಲಸೂತಕವುಳ್ಳ
ನ್ನಕ್ಕರ ಭಕ್ತನಲ್ಲ; ಫಲಸೂತಕವು

ನ್ನಕ್ಕ ಮಹೇಶ್ವರನಲ್ಲ. ತನುಸೂತ
ಕ ವುಳ್ಳನ್ನಕ್ಕ ಪ್ರಸಾದಿಯಲ್ಲ. ಮನ
ಸೂತಕವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ
ನೆನಹು ಸೂತಕ ವುಳ್ಳನ್ನಕ್ಕ ಶರಣನಲ್ಲ
ಭಾವ ಸೂತಕ ವುಳ್ಳನ್ನಕ್ಕ ಲಿಂಗೈಕ್ಯನಲ್ಲ.
ಇಂತೀ ಸೂತಕವ ಮುಂದುಗೊಂಡಿಪ್ಪ
ವರಮುಖವ ನೋಡಲಾಗದು ಗುಹೇಶ್ವರಾ"

ಎಂದು ಅಲ್ಲಮ ಪ್ರಭುದೇವರೂ ನುಡಿದಿರುವುದು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ಈ ರೀತಿ ಎಲ್ಲ ಸನ್ನಿವೇಶಗಳನ್ನು ವಿಚಾರ ಮಾಡಿ ನೋಡಿದರೆ ಲಿಂಗಧಾರಿಗಳ ಹೊಟ್ಟೆಯಲ್ಲಿ ಹುಟ್ಟಿ ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆಯನ್ನು ಪಡೆದವಂಗೇ ಮತ್ತೊಮ್ಮೆ ಶಿವದೀಕ್ಷೆಯು ಹೆಸರಿನಲ್ಲಿ ಲಿಂಗಧಾರಣೆ ಮಾಡಲಿಕ್ಕೆ ಹೋಗುವ ಪದ್ಧತಿಯು ಶಿವಶರಣರ ಮಾರ್ಗವಲ್ಲವೆಂದೂ ಅದರೆ ಅದು ಕೇವಲ ಪರಮತೀಯರ ಆಚರಣೆಯ ಅನುಕರಣವೆಂದೂ ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ಶ್ರೀಮಾನ್ ಎಡ್ಗಾರ್ ಥರ್ಸ್ಟನ್ (*Mr. Edgar Thurston*)ರವರನ್ನು ಮತ್ತೊಮ್ಮೆ ಉದಹರಿಸಬೇಕಾಗುತ್ತದೆ. ಅವರು "*Castes and Tribes of Southern India*" ("ದಕ್ಷಿಣ ಭಾರತದ ಜಾತಿಗಳು ಮತ್ತು ಕುಲಗಳು") ಎಂಬ ಗ್ರಂಥದಲ್ಲಿ ಈ ರೀತಿಯಲ್ಲಿ ಹೇಳಿದ್ದಾರೆ:—"*The rite (Diksha in the eighth year)is evidently,in imitation of the Brahman practice of imparting the Gayatri Mantram at the time of the Upanayana or thread tying cermony*" (IV ನೆಯ ವಾಲ್ಯೂಂ: *K—M.* ಪುಟ ೨೭೨.);ಅರ್ಥಃ "(ಎಂಟನೆಯ ವರ್ಷದಲ್ಲಿ ಮಾಡತಕ್ಕ) (ದೀಕ್ಷಾ)ವಿಧಿಯು ಉಪನಯನ ಕಾಲದಲ್ಲಿ ಎಂದರೆ ಜನ್ನಿವಾರವನ್ನು ಧರಿಸಿಕೊಳ್ಳುವ ಕಾಲದಲ್ಲಿ ಗಾಯತ್ರಿ ಮಂತ್ರವನ್ನು ಉಪದೇಶಮಾಡುವ ಬ್ರಾಹ್ಮಣ ಪದ್ಧತಿಯ ಅನುಕರಣವೆಂದು ಸ್ಪಷ್ಟವಾಗಿ ಕಂಡುಬರುತ್ತದೆ."

ಈ ಎಲ್ಲ ಕಾರಣಗಳಿಂದ ಮೇಲೆ ವಿವರಿಸಿದ ಎರಡು ಸನ್ನಿವೇಶಗಳಲ್ಲಿ ನಡೆಯತಕ್ಕ ಶಿವದೀಕ್ಷೆ ಮತ್ತು ಲಿಂಗಧಾರಣೆಗಳು ಭಿನ್ನವಾದವುಗಳಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದುದರಿಂದ ಶಿವ

ದೀಕ್ಷೆಯ ಹೆಸರಿನಲ್ಲಿ ಆಡಂಬರದಿಂದ ಮಾಡುವ ಕ್ರಿಯಾಚರಣೆಯನ್ನು ಮತಾಂತರಕ್ಕಾಗಿ ಉಪಯೋಗಿಸಿಕೊಂಡು ಲಿಂಗಧಾರಣದ ಹೆಸರಿನಲ್ಲಿ ಸೂಕ್ಷ್ಮವಾಗಿ ಮಾಡುವ ಶಿವದೀಕ್ಷೆಯನ್ನು ವೀರಶೈವ ತಂದೆತಾಯಿಗಳ ಹೊಟ್ಟೆಯಲ್ಲಿ ಹುಟ್ಟಿದ ಶಿಶುಗಳ ದೀಕ್ಷೆಗಾಗಿ ಉಪಯೋಗಿಸಿಕೊಳ್ಳುವುದೇ ಶಾಸ್ತ್ರ ಸಮ್ಮತವಾದುದೆಂದು ಧಾರಾಳವಾಗಿ ಹೇಳಬಹುದಾಗಿದೆ.

೨ ವೀರಶೈವರ ಹೊಟ್ಟೆಯಲ್ಲಿ ಹುಟ್ಟಿದ ಶಿಶುಗಳಿಗೆ ಮಾಡತಕ್ಕ ಲಿಂಗದಾರಣ ಅರ್ಥಾತ್ ಶಿವದೀಕ್ಷೆಯ ಕ್ರಿಯೆಯು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಆಚರಿಸಲ್ಪಡುತ್ತದೆಯೆಂಬ ವಿಚಾರಃ-

ಹುಟ್ಟಿದ ಶಿಶುಗಳಿಗೆ ಮಾಡತಕ್ಕ ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಕ್ರಿಯೆಯು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಆಚರಿಸಲ್ಪಡುತ್ತದೆಯೆಂಬುದು ಈ ಚರ್ಚೆಯಿಂದ ಕಂಡು ಬರುತ್ತದೆ. ನನ್ನ ಹಿಂದಿನ ಲೇಖನದಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಣ ಪ್ರಾಂತಗಳಲ್ಲಿ ನಡೆಯುವ ಶಿಶುವಿನ ಲಿಂಗಧಾರಣ ಕ್ರಮವು ವೀರಶೈವ ದೀಕ್ಷೆಯ ಮೂರು ಮುಖ್ಯ ಪ್ರಭೇದಗಳಾದ ವೇಧಾ, ಮಂತ್ರ ಮತ್ತು ಕ್ರಿಯಾ ಎಂಬ ತ್ರಿವಿಧ ದೀಕ್ಷೆಗಳಿಗೆ ಅನುಸಾರವಾಗಿದೆಯೆಂಬುದನ್ನು ನಾನು ಜನವರಿ ತಿಂಗಳ ಶಿವಾನುಭವದಲ್ಲಿ (ಪುಟಗಳು ೧೪೫-೧೪೭) ವಿಶದೀಕರಿಸಿದ್ದೇನೆ. ಈ ಕ್ರಮವು ಆಚರಣೆಯಲ್ಲಿಲ್ಲದ ಅಥವಾ ಆಚರಣೆಯಲ್ಲಿದ್ದು ಈಜೆಗೆ ತಪ್ಪಿ ಹೋಗಿರುವ ಪ್ರಾಂತಗಳವಂಗೆ ಈ ಕ್ರಮವು "ಕಟ್ಟು ಕಥೆ" ಯಂತೆ ಕಾಣುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕೆಲವು ಪ್ರಾಂತಗಳಲ್ಲಿ ಅಯ್ಯನವರುಗಳು "ಲಿಂಗವನ್ನೂ ವಿಭೂತಿಯನ್ನೂ ಬೇರೊಬ್ಬ ಹೆಣ್ಣು ಮಗಳ ಕೈಯಲ್ಲಿ ಕೊಟ್ಟು 'ಕೂಸಿಗೆ ವಿಭೂತಿ ಹಚ್ಚಿ ಲಿಂಗವನ್ನು ಧರಿಸು' ಎಂದು" ಹೇಳುವರೆಂದೂ "ಲಿಂಗಕ್ಕೂ ಮಠದಯ್ಯನವರಿಗೂ ಯತ್ಕಿಂಚಿತ್ತೂ ಸಂಬಂಧವಿಲ್ಲ" ವೆಂದೂ ಇದು ವರೆಗೆ ನಡೆದ ಚರ್ಚೆಯಿಂದ ಗೊತ್ತಾಗುತ್ತದೆ. ಈ ಸಂಗತಿಯನ್ನು ಕೇಳಿ ನನಗೆ ಬಹಳ ನೋವುಂಟಾಗಿದೆ. ಈ ಪದ್ಧತಿಯು ನಿಜವಾಗಿದ್ದ ಪಕ್ಷದಲ್ಲಿ ಅದು ಬಹಳ ಅನ್ಯಾಯವಾದ ಪದ್ಧತಿ. ಹಸ್ತಮಸ್ತಕಸಂಯೋಗ ಮಾಡಿ ಪಂಚಾಕ್ಷರಿಯನ್ನು ಕಿವಿಯಲ್ಲಿ ಉಪದೇಶಿಸಿ ಲಿಂಗವನ್ನು ಗುರುವೇ ಧರಿಸಬೇಕಲ್ಲದೆ ಬೇರೊಬ್ಬರ ಕೈಯಲ್ಲಿ ಕೊಟ್ಟು ಕಟ್ಟಿಸುವುದು ವೀರಶೈವ ಆಚರಣೆಗೆ ತೀರ ವಿರುದ್ಧವಾದುದು. ಇಂಥ ಆಚರಣೆಗಳಿಂದ ಅಯ್ಯನವರ ಗುಂಪಿಗೆ ಯಾವ ಕೀರ್ತಿಯೂ ಬರಲಾರದು. "ಭೋಜನಮಾಡಿ ದಕ್ಷಿಣೆ ಹಾಗು ಹಕ್ಕಿನ ರೊಕ್ಕ ತಕ್ಕೊಂಡು ಹೊರಟು ಹೋಗು"ವುದಷ್ಟೇ ಅಯ್ಯನವರ ಕೆಲಸವಲ್ಲ. ಇನ್ನು ಮೇಲಾದರೂ ಅಯ್ಯನವರುಗಳು ಶಿವ ಶರಣರ ವಚನಗಳನ್ನು ಅಭ್ಯಾಸಿಸಿ ಇಂಥ ಕೆಟ್ಟ ಪದ್ಧತಿಗಳನ್ನು ಬಿಟ್ಟು ಉತ್ತಮ ಶೀಲಗಳನ್ನು ಅನುಸರಿಸಿ ಶಿವಾಚಾರವನ್ನು ಉತ್ತಮಗೊಳಿಸಲು ಪ್ರಯತ್ನಿಸಬೇಕೆಂದು ನಾನು ಅಯ್ಯನವರುಗಳನ್ನು ಈ ಮೂಲಕ ಬೇಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ನೈಜಾಂಪ್ರಾಂತದ ಶ್ರೀಮಾನ್ ಸೈಯದ್ ಸಿರಾಜ್‌ಉಲ್‌ಹಸ್ಸನ್ (*Mr. Syed Siraj Ul-Hassan*) ರವರು "*Castes and Tribes of H. E. H. the Nizams, Dominions*" ("ನಿಜಾಮ ಪ್ರಾಂತದ ಜಾತಿಗಳು ಮತ್ತು ಕುಲಗಳು") ಎಂಬ ಗ್ರಂಥದಲ್ಲಿ ವೀರಶೈವ ಶಿಶುಗಳ ಲಿಂಗಧಾರಣೆಯ ವಿಚಾರದಲ್ಲಿ ಬರೆದಿರುವ ಅಂಶಗಳು ಗಮನಾರ್ಹವಾದವುಗಳಾಗಿವೆ. ಶ್ರೀಮಾನ್ ಹಸ್ಸನ್‌ರವರು ನಿಜಾಮ ಪ್ರಾಂತದ ಬೇರೆ ಬೇರೆ ಜಾತಿ ಮತ್ತು ಕುಲಗಳ ಆಚಾರ ವಿಚಾರಗಳನ್ನು ವರ್ಣಿಸುತ್ತ ವೀರಶೈವರ ಆಚಾರ ವಿಚಾರಗಳನ್ನೂ ಸಹ ತಮ್ಮ ಕಾಲದಲ್ಲಿದ್ದಂತೆ (ಈ ಗ್ರಂಥವು ಮುದ್ರಣವಾಗಿರುವದು ೧೯೨೦ ನೆಯ ಇಸವಿಯಲ್ಲಿ) ವರ್ಣಿಸಿರುತ್ತಾರೆ. ಆ ವರ್ಣನೆಯಲ್ಲಿ ಶಿಶುಗಳ ಲಿಂಗಧಾರಣೆಯ ವರ್ಣನೆಯೂ ಬರುತ್ತದೆ. ಶ್ರೀಮಾನ್‌ಹಸ್ಸನ್‌ರವರ ಮಾತುಗಳನ್ನೇ ಇಲ್ಲಿ ಉದ್ಧರಿಸಿ ಬರೆಯುತ್ತೇನೆ.

"Child-Birth: When a child is born, a Mathadipati Jangam is sent for. A Spot of ground is purified by the sprinkling of cow's urine over it, and smeared afterwards with cowdung. It is then decked with designs traced in five colours, and over it five metal vessels are arranged in a quincunx, the middle one being placed on a heap of wheat or jawari. The vessels are filled with water and covered with mango leaves. A fine-spun cotton thread is wound round them. The Guru is seated, facing the east, on a white blanket

spread before the vessels. The mother and child are purified by the sprinkling of water, in which the Jangam's feet have been washed. After the Guru has been duly worshipped by the father, the child is brought out, and the Gurujangam binds the lingam on its person, besmears it with vibhuti (ashes), puts a garland of rudraksha (Elaescarpus Gani trees) round its neck,breathes into its ear the mystic mantram of "om! Namah Shivaya," and presents the child to the God Siva in the person of a Jangama priest who is his representative. Lastly tirtha (water in which guru's feet have been washed), and prasad (the leavings of the guru) are given to the chield; These effect its conversion to the Lingayit sect"(ಪುಟಗಳು ೩೯೭—೩೯೮) ಅರ್ಥಃ "ಒಂದು ಮಗು ಹುಟ್ಟಿತೆಂದರೆ ಮಠಾಧಿಪತಿ ಜಂಗಮನಿಗೆ ಹೇಳಿಕಳು ಹಿಸಲಾಗುವುದು. ನೆಲದ ಒಂದು ಪ್ರದೇಶವನ್ನು ಗೋಮೂತ್ರದಿಂದ ಚುಮುಕಿಸಿ ಅದನ್ನು ಗೋಮಯದಿಂದ ಸಾರಿಸಿ ಶುದ್ಧಿಮಾಡಲಾಗುವದು ಆ ಮೇಲೆ ಆ ಪ್ರದೇಶವನ್ನು ಐದು ವಿಧದ ಬಣ್ಣಗಳಿಂದ ಕೂಡಿದ ರಂಗವಲ್ಲಿಯಿಂದ ಅಲಂಕರಿಸಿ ಅದರ ಮೇಲೆ ಐದು ಲೋಹದ ಕಲಶ ಗಳನ್ನು ಷಡ್ಪ್ರಾಕನಾಗಿ ಇಡಲಾಗುವದು. ಮಧ್ಯದ ಕಲಶವನ್ನು ಜವೆ ಗೋದಿಯ ಕಾಳಿನ ಮೇಲೆ ಇಡಲಾಗುವದು. ಆ ಮೇಲೆ ಆ ಕಲಶಗ ಳಿಗೆ ಉದಕವನ್ನು ತುಂಬಿ ಅವುಗಳನ್ನು ಮಾವಿನ ಎಲೆಗಳಿಂದ ಮುಚ್ಚ ಲಾಗುವದು. ಅನಂತರ ಅವುಗಳಿಗೆ ನಯವಾಗಿ ಹೊಸೆದ ಹತ್ತಿಯ ನೂಲನ್ನೂ ಸುತ್ತಲಾಗುವದು. ಈ ರೀತಿ ಸಜ್ಜುಗೊಳಿಸಲಾದ (ಪಂಚ) ಕಲಶಗಳ ಮುಂದುಗಡೆ ಹರಡಿದ ಒಂದು ಬಿಳಿಯ ಕಂಬಳಿಯ ಮೇಲೆ ಗುರುವು ಪೂರ್ವಮುಖನಾಗಿ ಕುಳಿತುಕೊಳ್ಳುವನು. ಅನಂತರ ಜಂಗ ಮದ ಪಾದೋದಕದಿಂದ ತಾಯಿಯನ್ನೂ ಮತ್ತು ಮಗುವನ್ನೂ ಸಂಪ್ರೋ ಕ್ಷಿಸಿ ಅವರನ್ನೂ ಶುದ್ಧಿಗೊಳಿಸಲಾಗುವುದು. ಆ ಮೇಲೆ ಮಗುವಿನ ತಂದೆಯು ಗುರುವನ್ನು ಕ್ರಮದಿಂದ ಪೂಜಿಸುವನು. ಅದಾದ ಮೇಲೆ ಮಗುವನ್ನು ಕರೆತರಲಾಗುವದು. ಆಗ ಗುರುವು ಮಗುವಿಗೆ ಲಿಂಗ ವನ್ನು ಧರಿಸಿ, ವಿಭೂತಿಯನ್ನು ಪೂಸಿ, ಅದರ ಕೊರಳೊಳಗೆ ರುದ್ರಾಕ್ಷ

ಮಾಲೆಯನ್ನು ಹಾಕಿ, "ಓಂನಮಃಶಿವಾಯ" ಎಂಬ ಮೂಲಮಂತ್ರ ವನ್ನು ಅದರ ಕಿವಿಯಲ್ಲಿ ಉಪದೇಶಮಾಡುವನು ಅನಂತರ ಮಗುವನ್ನು ಸಾಕ್ಷಾತ್ ಶಿವನ ಸ್ವರೂಪವೇ ಆದ ಜಂಗಮಕ್ಕೆ ಅರ್ಪಿಸಲಾಗುವದು. ಕೊನೆಯಲ್ಲಿ ಮಗುವಿಗೆ (ಗುರುವಿನ ಪಾದವನ್ನು ತೊಳೆದ) ಪಾದ ತೀರ್ಥವನ್ನೂ ಮತ್ತು (ಗುರುವು ಒಕ್ಕು ಉಳಿಕೆ) ಪ್ರಸಾದವನ್ನೂ ಕೊಡ ಲಾಗುವದು. ಈ ಕ್ರಿಯಾಚರಣೆಗಳ ಮೂಲಕ ಮಗುವು ಲಿಂಗಾಯತ ಮತವನ್ನು ಸ್ವೀಕರಿಸುತ್ತದೆ." ಈ ರೀತಿ ವರ್ಣಿತವಾದ ನೈಜಾಮ್ ಪ್ರಾಂತದ ಆಚರಣೆಯು ಬಹುಮಟ್ಟಿಗೆ ಬೆಂಗಳೂರು ಪ್ರಾಂತದ ಆಚ ರಣೆಯಂತೆಯೇ ಇದೆ ಅಂದ ಮೇಲೆ ಬೆಂಗಳೂರ ಪ್ರಾಂತದ ಆಚರ ಣೆಯು "ಕಟ್ಟುಕಥೆ"ಯಾಗುವದೆಂತು ?

೩ ಲಿಂಗಧಾರಣವು ಲಿಂಗಮುದ್ರೆ ಎಂಬ ವಿಚಾರಃ—

ಈ ವಿಚಾರವು ಮೂಲಚರ್ಚೆಯಲ್ಲಿಲ್ಲ. ಆದರೆ ಶಿವಕಥೆಯಲ್ಲಿ ಒಂದು ಉಪಕಥೆ. ಬೆಳೆಯುವಂತೆ ಮೂಲಚರ್ಚೆಯಲ್ಲಿ ಇದೊಂದು ಉಪಚರ್ಚೆ ಬೆಳೆದಿದೆ. ಈ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಿ ನನ್ನೀ ಲೇಖನವನ್ನು ಮುಗಿಸುತ್ತೇನೆ.

ವೀರಶೈವರ ಇಷ್ಟಲಿಂಗದ ಯೋಜನೆಯು ಅರ್ಥಪೂರ್ಣವಾದುದು. ಭಾವಗರ್ಭಿತವಾದುದು: ಪ್ರತಿಯೊಬ್ಬ ಮಾನವನ ಸುಖಶಾಂತಿಗೆ ಅವ ಶ್ಯಕವಾದುದು ಶಿವಶರಣರು ಇಷ್ಟ ಲಿಂಗವನ್ನು ಯಾವುದೋ ಒಂದು ಅರ್ಥವಿಲ್ಲದ ಜಡ ವಸ್ತುವಿನಂತೆ ಪರಿಗಣಿಸಿರುವುದಿಲ್ಲ. ಇಷ್ಟ ಲಿಂಗವು ಇಡಿಯ ವಿಶ್ವ ಅಥವಾ ಬ್ರಹ್ಮಾಂಡವನ್ನು ಒಳಗೊಂಡಿರತಕ್ಕ ನಿರಾಕಾರ ಪರವಸ್ತುವಿನ ಸಾಕಾರ ರೂಪವೆಂದು ಅವರು ಪರಿಗಣಿಸಿರುತ್ತಾರೆ. "ಗುಹೇ ಶ್ವರನೆಂಬ ಲಿಂಗ ನಿರಾಕಾರ ಬಯಲು ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮೆ ಕೇಳಲಮ್ಮೆ" ಇದೀಗ ಲಿಂಗದ ನಿಜವಾದ ನಿಲು ಕಡೆ. "ಲೀಯತೇ ಗಮ್ಯತೇ ಯತ್ರ ಜಗದೇತಚ್ಚರಾಚರಂ। ತದೇವ ಲಿಂಗ ಮಿತ್ಯಾಹುರ್ಲಿಂಗತತ್ತ್ವವಿಶಾರದಾಃ" ಎಂದರೆ ಯಾವ ಪರಬ್ರಹ್ಮದಲ್ಲಿ ಸಕಲಚರಾಚರಾತ್ಮಕವಾದ ಜಗತ್ತು ಲೀನವಾಗುತ್ತದೆಯೋ (ಲೀಯತೇ) ಮತ್ತು ಯಾವ ಪರವಸ್ತುವಿನಲ್ಲಿ ಸಕಲ ಚರಾಚರಾತ್ಮಕವಾದ ಜಗತ್ತು ಗತವಾಗುತ್ತದೆಯೋ (ಗಮ್ಯತೇ) ಅಂಥ ಪರಬ್ರಹ್ಮವೇ ಲಿಂಗವು ಎಂದ ಮೇಲೆ ಇಷ್ಟ ಲಿಂಗವು ಮೂರ್ತಿಯಲ್ಲ. ವಿಗ್ರಹವಲ್ಲ. ಆದರೆ ಧ್ಯಾನ

ಪೂಜೆಗಳಿಗೆ ನಿಲುಕತಕ್ಕ ಸಾಕಾರ ಪರವಸ್ತು. ಮೂರ್ತಿ ಪೂಜೆಗೂ ಇಷ್ಟ ಲಿಂಗ ಪೂಜೆಗೂ ಇರತಕ್ಕ ಈ ವ್ಯತ್ಯಾಸವು ವೀರಶೈವ ಮತದ ಒಂದು ವೈಶಿಷ್ಟ್ಯ. ಇನ್ನು ಶಿವಶರಣರು ಇಷ್ಟ ಲಿಂಗವನ್ನು ಪರವಸ್ತುವಿನ ಸಾಕಾರ ರೂಪವೆಂದು ಅಷ್ಟಕ್ಕೇ ನಿಲ್ಲಲಿಲ್ಲ. ಅವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಇಷ್ಟ ಲಿಂಗ ಪೂಜೆಯು ಲಿಂಗ ಯೋಗವೆಂದು ಪರಿಗಣಿಸಿರುತ್ತಾರೆ. ಬಸವಣ್ಣನವರ ಮಾತಿನಲ್ಲಿ—

"ಲಿಂಗವ ಪೂಜಿಸಿ ಫಲವೇನಯ್ಯ ?
ಸಮರತಿ ಸಮಕಳೆ ಸಮಸುಖವ
ನರಿಯದನ್ನಕ್ಕ ಲಿಂಗವ ಪೂಜಿ
ಸಿ ಫಲವೇನಯ್ಯ ? ಕೂಡಲ
ಸಂಗಮದೇವರ ಪೂಜಿಸಿ ನದಿಯೊ
ಳಗೆ ನದಿ ಬೆರಿಸಿದಂತಾಗದನ್ನಕ್ಕ "

ಈ ರೀತಿ ಶಿವಶರಣರು ಏರ್ಪಡಿಸಿದ ಯೋಗಕ್ಕೆ ಲಿಂಗ ಯೋಗ, ಶಿವಯೋಗ, ಲಿಂಗಾನುಸಂಧಾನ ಮುಂತಾದ ಹೆಸರುಗಳಿವೆ. ಕಪ್ಪು ಕಂಫೆಯಿಂದ ರಾರಾಜಿಸುವ ಇಷ್ಟ ಲಿಂಗವನ್ನು ಕರಸ್ಥಲಕ್ಕೆ ತಂದು ಅದನ್ನು ದಿಟ್ಟಿಸಿ ನೋಡಿ ಯೋಗವನ್ನು ನಡೆಯಿಸಬೇಕೆಂದು ಅವರು ಯೋಗದ ಗುಟ್ಟನ್ನು ಕಟ್ಟು ಮಾಡಿದ್ದಾರೆ. "— — — ಹಲವುಕಡೆಗೆ-

ಹೋಹಮನವ ನೆನಹಿನ ಹಸ್ತದಿಂ
ದಲಿ ಹಿಡಿದು ಇಷ್ಟಲಿಂಗದಲ್ಲಿ ಗಟ್ಟಿ
ಗೊಳಿಸಿ ಕೃತನಿಶ್ಚಯದಿಂ ದೃಢವಿ
ಡಿದು ಅನಿಷ್ಟ ಪರಿಹರಿಸಬಲ್ಲಡೆ
ಅತನೇ ಶಿವಲಿಂಗಾರ್ಚಕನು
— — — "

ಈ ರೀತಿ ಧ್ಯಾನ ಪೂಜೆಲಕ್ಷ್ಯಗಳಿಗೆ ನಿಲುಕತಕ್ಕ ಇಷ್ಟ ಲಿಂಗವು ಲಿಂಗ ಮುದ್ರೆಯಾಗುವುದೆಂತು ?

ಅಲ್ಲದೆ ಶ್ರೀ ಜನ್ನಬಸವಣ್ಣನವರು ತಮ್ಮದೊಂದು ವಚನದಲ್ಲಿ ಉದಾಹರಣೆಯನ್ನು ಕೊಡಬೇಕಾದ ಒಂದು ಸಂದರ್ಭದಲ್ಲಿ "ಬೀದಿಯ ಬಸವಂಗೆ ದೇಗುಲದ ಪಶುವಿಂಗೆ ಹುಟ್ಟಿದ ಕರುವುಗಳು ಬಸವಬಸವ

ಗಳಪ್ಪವೇ ಲಿಂಗಮುದ್ರೆಯ ನೊತ್ತದನ್ನಕ್ಕರ ?" ಎಂದು ಹೇಳಿ "ಲಿಂಗ ಮುದ್ರೆ"ಯ ಅರ್ಥ ವಿವರಣೆ (*definition*) ಯನ್ನು ಮಾಡಿರುತ್ತಾರೆ. ಇಷ್ಟಲಿಂಗವು ಈ ಅರ್ಥ ವಿವರಣೆಗೆ ಒಳಪಡುವುದಿಲ್ಲ. ಎಂದ ಮೇಲೆ ಇಷ್ಟ ಲಿಂಗವು ಲಿಂಗಮುದ್ರೆಯಾಗುವುದೆಂತು ?

ಮತ್ತು "*Mysore Tribes and castes*" ("ಮೈಸೂರು ಸಂಸ್ಥಾನದ ಜಾತಿಗಳು ಮತ್ತು ಕುಲಗಳು") ಎಂಬ ಗ್ರಂಥದಲ್ಲಿ ವೀರಶೈವ ಮತ್ತು ವೀರವೈಷ್ಣವ ಮತಗಳನ್ನು ಹೋಲಿಕೆ ಮಾಡುವಾಗ ಅವುಗಳ ಧರ್ಮಾಚರಣೆಯಲ್ಲಿರತಕ್ಕ ಪರಸ್ಪರ ವ್ಯತ್ಯಾಸಗಳನ್ನು ವಿವರಿಸುವ ಸಂದರ್ಭವೊಂದು ಬರುತ್ತದೆ. ಆ ಸಂದರ್ಭದಲ್ಲಿ ಎರಡು ಮತಗಳವರು ಮಗು ಹುಟ್ಟಿದಾಗ ನಡೆಯಿಸುವ ಕ್ರಿಯಾಚರಣೆಯನ್ನು ಈ ಮುಂದೆ ಕಂಡಂತೆ ವರ್ಣಿಸಲಾಗಿದೆ-

"ViraSaiva Tenets	ViraVaishnava Tenets
13. As soon as a child is born, a Linga is tied round his neck and Sivapancha Kshari mantram is whispered in his or her ear.	As soon as a child is born a flower resembling chakra is pressed into his or her arms and Narayana Ashta Kshari matram is whispered into the ear."

IV ನೆಯ ವಾಲ್ಯೂಂ ಪುಟಗಳು ೧೧೦—೧೧೧

ಅರ್ಥಃ—

ವೀರಶೈವ ಪದ್ಧತಿಗಳು	ವೀರವೈಷ್ಣವ ಪದ್ಧತಿಗಳು
ಮಗು ಹುಟ್ಟಿದ	ಮಗು ಹುಟ್ಟಿದ
ಕೂಡಲೆ ಮಗುವಿನ	ಕೂಡಲೆ ಮಗುವಿ
ಕೊರಳಿಗೆ ಲಿಂಗವ	ನಕ್ಕೈಮೇಲೆ ಚಕ್ರ
ನ್ನು ಕಟ್ಟಲಾಗುವು	ದ ಆಕಾರದ ಒಂದು
ದು ಮತ್ತು ಮಗು	ಹುಷ್ಪ ಮುದ್ರೆಯ
ವಿನ ಕಿವಿಯಲ್ಲಿ	ನ್ನು ಒತ್ತಲಾಗು

ಶಿವಪಂಚಾಕ್ಷರಿ ವುದು ಮತ್ತು ಮಗು
ಮಂತ್ರವನ್ನು ಉ ವಿನ ಕಿವಿಯಲ್ಲಿ
ಪದೇಶಿಸಲಾಗುವುದು. ನಾರಾಯಣ-
ಅಷ್ಟಾಕ್ಷರಿ ಮಂತ್ರವನ್ನು
ಉಪದೇಶಿಸಲಾಗುವುದು."

ಈ ರೀತಿ ವೀರಶೈವ ಪದ್ಧತಿಯ ಮೇರೆಗೆ ಇಷ್ಟ ಲಿಂಗವನ್ನು ಮಗು ವಿನ ಕೊರಳಿಗೆ ಕಟ್ಟಲಾಗುವುದು (*fixed*) ವೀರವೈಷ್ಣವ ಪದ್ಧತಿಯ ಮೇರೆಗೆ ಚಕ್ರದ ಆಕಾರದ ಪುಷ್ಪ ಮುದ್ರೆಯನ್ನು ಮಗುವಿನ ಕೈ ಮೇಲೆ ಒತ್ತಲಾಗುವುದು (*pressed*) ಎಂದ ಮೇಲೆ ವೀರಶೈವರು ಹುಟ್ಟಿದ ಮಗುವಿಗೆ ಕಟ್ಟತಕ್ಕ - ಲಿಂಗವು ಲಿಂಗಮುದ್ರೆಯಾಗುವುದೆಂತು ?

ಕೊನೆಯ ಮಾತು

ಈ ರೀತಿಯಲ್ಲಿ ಲಿಂಗಧಾರಣ ಅರ್ಥಾತ್ ಶಿವದೀಕ್ಷೆಯ ವಿಚಾರ ದಲ್ಲಿ ಚರ್ಚೆ ನಡೆದು ಅನೇಕ ಗಣನೀಯವಾದ ಅಂಶಗಳು ಹೊರಬಿದ್ದಿವೆ. ವೀರಶೈವ ಬಂಧುಗಳು ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಮಾಜದಲ್ಲಿ ಬೇರೂರಿರುವ ಲೋಪದೋಷಗಳನ್ನು ಪರಿಹರಿಸಿ ಶಿವಶ ರಣರ ಶಿವಾಚಾರವು ಮತ್ತೆ ಜಗತ್ತಿನಲ್ಲಿ ಪ್ರಜ್ವಲಿಸುವಂತೆ ಮಾಡಬೇ ಕೆಂದು ಬೇಡಿಕೊಳ್ಳುವೆನಲ್ಲದೆ ರಾವ್‌ಬಹದ್ದೂರ್ ಹಳಕಟ್ಟಿಯವರ ಅವಿ ಶ್ರಾಂತ ಶ್ರಮದಿಂದ ಬೆಳಕಿಗೆ ಬಂದಿರುವ ಪುರಾತನರ "ಎರಡೆಂಭತ್ತು ಕೋಟಿ" ವಚನಗಳನ್ನು ಇನ್ನು ಮುಂದಾದರೂ ಎಲ್ಲ ವೀರಶೈವರೂ ಸಾವಧಾನದಿಂದ ಅಭ್ಯಾಸ ಮಾಡಿ ಅವುಗಳಲ್ಲಿ ಅಡಗಿರುವ ಸತ್ಯವಾದ ಸಹಜವಾದ ಮತ್ತು ಗಹನವಾದ ವಿಚಾರಗಳನ್ನು ಆಚರಣೆಗೆ ತರಬೇ ಕೆಂದು ಸಹ ನಾನು ಸಕಲ ವೀರಶೈವ ಬಂಧುಗಳನ್ನೂ ಈ ಮೂಲಕ ಭಕ್ತಿಯಿಂದ ಬೇಡಿಕೊಳ್ಳುತ್ತೇನೆ.

ಲಿಂಗವಂತರೇನಲೇನು ಫಲ?

ಲಿಂಗವಂತರೆನ । ಲೇನು ಫಲ ?-ಇದು ।
ಲಿಂಗದ ಬೀಡೆನ । ಲೇನು ಫಲ ? ॥ಪ॥

ಲಿಂಗಭಕ್ತತತಿ । ಯುನ್ನತಿಗೋಸುಗ ।
ಅಂಗವ ಸವೆಸದೊ । ಡೇನು ಫಲ ? ॥ಅ. ಪ.॥

ಬಾಂದಳ ಮಧ್ಯದೆ ಕಂಗೊಳಿಸುವವೊಲು ।
ಸಾಂದ್ರದೆ ತುಂಗವೃ । ಷಧ್ವಜವೇರಿಸಿ ॥
ವೃಂದವೆರಸಿ ಉಘೇ । ಚಾಂಗುಭಲಾ ಎಂದಾ-।
ನಂದದೆ ಕುಣಿಯದೊಡೇನು ಫಲ? ॥೧॥

ಅವನತಿಯೊಳಗಿಹ । ಶಿವಸಮಯವನಿದ ।
ಜವದೊಳೆಚ್ಚರಿಸದೊ । ಡೇನು ಫಲ? ॥
ತವಕದೆ ಭವಿಗಳ । ಭವಗೆಡಿಸುತೆ ಶಿವ ।
ಕವಚವ ತೊಡಿಸದೊ । ಡೇನು ಫಲ?

ಶರಣರ ದಿವ್ಯ ಸಂ । ದೇಶವ ಜಗದೊಳು ।
ಹರಡದೆ ಬದುಕಿದೊ । ಡೇನು ಫಲ? ॥
ಧರೆಯ ದುರ್ವಾದಿಗ । ಳನು ನಿಗ್ರಹಿಸುತೆ ।
ಹರಮತ ಬೆಳೆಸದೊ ॥ ಡೇನು ಫಲ?

ಸತ್ಯಕೆ ಬಾಗಿ ಅ-।ಸತ್ಯಕೆ ಬೀಗುತೆ ।
ಧೂರ್ತರ ತಿದ್ದದೊ । ಡೇನು ಫಲ? ॥
ಸ್ವಾರ್ಥಸಾಧಕರ । ಬೈಲಿಗೆಳೆದು ನಿ-।
ಸ್ವಾರ್ಥವನರುಪದೊ । ಡೇನು ಫಲ?

ನಾನೆ ಹೆಚ್ಚು ನೀ । ಕಡಿಮೆ ಎಂದೆಂಬುವ ।
ಹೀನತನವು ಇರ । ಲೇನು ಫಲ? ॥

ಜ್ಞಾನವಿಲ್ಲದ ಈ । ಕೇಳು ಮೇಲುಗಳ ।
ಧ್ಯಾನವ ಬಿಡದೊಡೆ । ಏನು ಫಲ ? ॥೫॥

ಮಂಗಳ ದೀಕ್ಷೆಯ । ಬೇಡುವಂಗೆ ಮಹ ।
ಲಿಂಗವ ನೀಯದೊ । ಡೇನು ಫಲ ? ॥
ಸಂಗನಬಸವನ । ಲಿಂಗವೆಂದಂಯುತೆ ।
ಪಿಂಗದೆ ನೆನೆಯದೊ । ಡೇನು ಫಲ? ॥೪॥

ಸಕಲಜೀವ ಆ । ತ್ಮಂಗೆ ಲೇಸ ಅಕ-।
ಳಂಕದೆ ಬಯಸದೊ । ಡೇನು ಫಲ ? ॥
ಅಖಿಲ ಕನ್ನಡ ದೊ । ಳಿಹ ತತ್ವವನಿದ ।
ನಿಖಿಳಕುಹರದೊ । ಡೇನು ಫಲ? ॥೩॥

ಮಾ ನಂ ಜಂಡ ಸು । ತನ ಬಿನ್ನಪವಿದ ।
ನಾನಂದದೆ ಪಾಡದೊ । ಡೇನು ಫಲ ? ॥
ಚಿನುಮಯಲಿಂಗದ । ಬೀಡಹನಾಡಿನ ।
ಘನತೆಯುಗಳಿಪುದೆ । ಪರಮಫಲ ॥೪॥

—ಮೂ. ನಂ. ನಂಜಪ್ಪ
ಬೆಂಗಳೂರುನಗರ.

ಲಿಂಗಧಾರಣ ಅರ್ಥಾತ್ ಶಿವದೀಕ್ಷೆ

ಲೇಖಕರು. ಶ್ರೀ ಎನ್. ರಾಚೋಟಯ್ಯ ಕಾರ್ಯದರ್ಶಿ ಶಿವಾನುಭವ ಸಂಸ್ಥೆ,
ಕಾನಕಾನಹಳ್ಳಿ. ಜಿ। ಬೆಂಗಳೂರು.

ಕಿ. ಕೇ. ಬಿ. ಶಿವಮೂರ್ತಿಶಾಸ್ತ್ರಿಗಳು ೧೯೪೦ನೇ ಇಸ್ವಿಯ ಅಗಷ್ಟು ತಿಂಗಳು ತಮ್ಮ ಶರಣಸಾಹಿತ್ಯ ಸಂಚಿಕೆಯಲ್ಲಿ 'ಲಿಂಗಧಾರಣ ಮತ್ತು ಶಿವದೀಕ್ಷೆ' ಯೆಂಬ ಲೇಖನವನ್ನು ಹೊರಡಿಸಿದ್ದುದು ಸರಿಯಷ್ಟೆ. ಆದ ಕ್ಕಾಗಿ ಬೆಂಗಳೂರು ಶ್ರೀ ಕ. ಬಸಪ್ಪ ಬಿ. ಎ. ಯವರು, ಕಾನಕಾನ ಹಳ್ಳಿ ಬಸಪ್ಪನವರು, ಶ್ರೀಮಾನ್ ನಂಜಪ್ಪನವರು, ಶ್ರೀಯುತ ಪಟ್ಟೇದ ವಂಟಮುರಿಯವರು ತಮ್ಮ ತಮ್ಮ ಲೇಖನಗಳಿಂದ ಅನುಭವ ಸೂತ್ರ ವನ್ನು ಬೀರುತ್ತಿರುವರು. ಆದರೆ ಕೆಲವು ಲೇಖಗಳಲ್ಲಿ ಅನುಭವಸೂತ್ರ ವಿದ್ದರೂ ಜೀವಭಾವದ ವಿಷಯಗಳು ಕಂಡು ಬರುತ್ತವೆ. ಏನೆಂದರೆ ಒಬ್ಬರನ್ನೊಬ್ಬರು ಖಂಡನೆ ಮಾಡುವದರಿಂದ ಬರುವ ಆದಾಯವು ಆವುದು ಏನು ಇಲ್ಲ. ಹೀಗಿರುವಲ್ಲಿ ಶ್ರೀ ವಂಟಮುರಿಯವರು ಶಿವಾ ನುಭವ ಅಗಷ್ಟ ೧೦-೧೧ನೆ ಸಂಚಿಕೆಯಲ್ಲಿ ಕ್ರೂರವಾದ ಶಬ್ದಗಳನ್ನು ಉಪಯೋಗಿಸಿರುವರು. ಅದು ಏನೆಂದರೆ ನಾನು ಹೆದರುವನಲ್ಲ, ನಮ್ಮಲ್ಲಿ ಅನೇಕ ಮಠಗಳಿವೆ, ಪುರಾಣ ಪ್ರಸಿದ್ಧರಿದ್ದಾರೆ, ಎಂತಲೂ ಇನ್ನೂ ಅನೇಕ ವೀರಾವೇಶದಿಂದ ಕೈಯೆತ್ತಿ ಹೊರಟಿದ್ದಾರೆ. ಇವರಿಗೇನು ತಮ್ಮ ಹೊಲವನ್ನು ತಾವು ಹಸನು ಮಾಡಿಕೊಳ್ಳಲು ಅವಕಾಶವಿದೆಯೋ ಇಲ್ಲವೋ ತಿಳಿಯದು. ಇಷ್ಟೇಕೆ? ಕ್ರೂರ ವೃಗಗಳಿಗೆ ಅವಕಾಶವನ್ನು ಕಲ್ಪಿಸಿ ಗೊಂದಲವನ್ನೇ ಎಬ್ಬಿಸಿ ಮತ್ತೊಬ್ಬರನ್ನೆಪಳಿಯುವ ಹವ್ಯಾಸ ದಲ್ಲಿ ನಿಂತಿದ್ದಾರೆಯೊ ತಿಳಿಯದು. ಇವರು ಹೇಳುವ ಕೆಲವಂಶಗಳು ನಿಜವಿದ್ದರೂ ಅವರ ಶಬ್ದದೋಷಗಳು ಅವಂಗೆ ತಿಳಿಯಲಿಲ್ಲವು. ಇದಕ್ಕೆ ಬಸವೇಶ್ವರರ ವಚನವನ್ನು ನೋಡಿರಿ

ಗಳಿಯೋದಿ ಫಲವೇನು? ಬೆಕ್ಕು ಬಾಹುದ ಪೇಳಲರಿಯದು.
ಜಗವನೆಲ್ಲವ ಕಾಂಬುವ ಕಣ್ಣು ತಾ ತನ್ನ ಕಾಣಲರಿಯದು. ಇದಿರ ಗುಣವ
ಬಲ್ಲೆವೆಂಬರು. ತನ್ನ ಗುಣವನರಿಯರು ಕೂಡಲಸಂಗಮದೇವ.

ಈ ರೀತಿ ಇರುವಲ್ಲಿ ನಮ್ಮಗಳಿಗೆ ಎಷ್ಟು ಎಷ್ಟೇಕೆ ಇರಬೇಕಾದುದೋ ಗೊತ್ತಿಲ್ಲವು. ವಂಟಮುರಿಯವರು ಹೇಳುವುದನ್ನು ನೋಡಿದರೆ ಘನತೆಯನ್ನು ಹೊಂದಿದ ಮಠಗಳೂ ವಿದ್ವಾಂಸರೂ ಅನುಭವಿಗಳೂ ಆಚಾರವಂತರೂ ಇನ್ನೆಲ್ಲೂ ಇಲ್ಲವೆಂತಲೇ ಗೊತ್ತಾಗುತ್ತದೆ. ಇಂತ ಹವ್ಯಾಸಂಗಗಳಿಗೆ ಮನಗೊಡದೆ ಅಹಂಕಾರ ತ್ರಯಗಳನ್ನು ಮನನ ಮಾಡಿಕ್ಕೊಂಡು ಮೇಲಿನ ವಚನವನ್ನು ಮನದಲ್ಲಿಡುವರೆಂದು ನಂಬಿದ್ದೇನೆ.

ತಮ್ಮ ಮನೆಯಲ್ಲಾದ ಲಿಂಗಧಾರಣೆಯನ್ನು ವಿವರಿಸಿಕ್ಕೊಂಡಿದ್ದಾರೆ. ಹೇಗೆಂದರೇ ನನ್ನ ಸೊಸೆ ಮಗುವನ್ನು ಹೆತ್ತಳು. ಲಿಂಗಧಾರಣಕ್ಕೆ ಮತ್ತಯ್ಯನವರು ಮಕಪತ್ತಿಗಳು ಬಂದರು. ಇವರಿಗೆ ೧೨ ವರುಷ ವಯಸ್ಸಿಂತಲೂ ಇನ್ನಾರೂ ಗಂಡಸುಲ್ಲದ್ದರಿಂದ ನಾನೇ ಪಾದಪೂಜೆಯನ್ನು ನಡೆಸಿ ಕರುಣ ತೀರ್ಥವನ್ನು ಮಾಡಿದೆನು ಎಂದು ಭೋಜನದಕ್ಷಿಣೆ ನಡೆಸಿದ ವರವಿಗೂ ತಿಳಿಸಿರುವರು ಇದರಲ್ಲಿ ಗುರುಗಳಿಗೂ ಲಿಂಗಕ್ಕೂ ಯತ್ಕಂಚಿತ್ತೂ ಸಂಬಂಧವಿಲ್ಲವೆಂದು ಹೇಳಿ ಈ ಕಾರ್ಯವಾದರೂ ನಾಲ್ಕು ಐದು ನಿಮಿಷಗಳಲ್ಲೇ ಆಗಿರುವುದೆಂದು ತಿಳಿಸಿರುತ್ತಾರೆ. ಇದು ವಂಟಮುರಿ ಊರೊಳಗಿನ ಲಿಂಗಧಾರಣೆಯಂತೆ ಇದು ಲಿಂಗಾಂಗಿಗಳ ಪ್ರಸಿದ್ಧಸ್ಥಾನವೆಂದು ಅವರು ಹೇಳಿಕ್ಕೊಳ್ಳುವಾಗ ನಮಗೂ ಸಂತೋಷಕರವಲ್ಲವೇ? ಇಂಥ ಸ್ಥಾನದಲ್ಲಿ ವಿವೇಕಿಗಳಿಲ್ಲದೆ ಇರಬಹುದೇ? ಇರದೇಕು. ಇದ್ದರೆ ಶಿಶುವಿನ ಜನನಕಾಲದಲ್ಲಿ ದೀಕ್ಷತ್ರಯಗಳು ಲೋಪವಾಗುತಿದ್ದವೇ? ಇಲ್ಲ. ಇವರು ಸಾಕ್ಷಿಕೊಟ್ಟಿರುವ ಸಿದ್ಧೇಶ್ವರ ವಚನವನ್ನು ತಾವೇ ಇನ್ನೊಂದು ಸಲ ಮನನ ಮಾಡಲಿ.

ಆಚಾರವಿಲ್ಲದ ಗುರು ಭೂತಪ್ರಾಣಿ...ಆ...ವೆಂದರೆ ಸ್ಥೂಲಪಂಚಭೂತ ಸೂಕ್ಷ್ಮಪಂಚಭೂತ ಕಾರಣಪಂಚಭೂತ ಪ್ರಕೃತಿ ಗುಣಗಳನಷ್ಟವ ಮಾಡದೆ ಮಲತ್ರಯಗಳಲ್ಲಿ ಸಿಲುಕಿರುವವರು ಎಂದಲ್ಲವೆ. ಲಿಂಗಧಾರಣಕ್ಕೊಸ್ಕರ ಇವರು ಕರತಂದ ಗುರುಗಳು ಆಚಾರವುಳ್ಳವರಾಗಿದ್ದರೋ ಇಲ್ಲವೋ? ಇಲ್ಲವೆಂದೇ ಇವರ ಅಭಿಪ್ರಾಯವು. ಏಕಂದರೆ ಗುರುಗಳಿಗು ಲಿಂಗಕ್ಕು ಸಂಬಂಧವಿಲ್ಲವೆಂತ ಹೇಳುವಾಗ ಅಂತಪ್ಪ ಅಯ್ಯನವರನ್ನು ಕರೆತಂದುದು ಏತಕ್ಕೆ? ಕ್ರಿಯಾದೀಕ್ಷೆಯಿಂದ ಶಿಶುವಿಗೆ ಲಿಂಗಧಾರಣವು ನಡೆಯುವದಕ್ಕಲ್ಲವೇ? ಅಲ್ಲದ ಮೇಲೆ ಸಿದ್ಧೇಶ್ವರ ವಚನವ ನೋಡಿರಿ. "ಕೊಟ್ಟಾತ ಗುರುವೇ ಕೊಂಡಾತ ಶಿಷ್ಯನೇ ಅಲ್ಲ ಕಾಣಿರಯ್ಯ"

ಎಂಬ ನುಡಿಯನ್ನು ಮರೆತಿರಬಹುದು. ಮತ್ತೇನಂದರೆ. ಲಿಂಗವನ್ನೇನೋ ಶೀಲಸಂಪಾದನೆಗೋಸ್ಕರ ತಂದೆತಾಯಿಗಳು ಮಾಡಿದ ಯೋಜನೆಯಾಗಿದ್ದರೆ ಅಜ್ಞ ಶಿಶುವಿಗೆ ಗುರುಗಳು ವಕ್ತ್ರವನ್ನು ಕವುಚಿ ಏನು ಯೋಗಕ್ಷೇಮವನ್ನು ಮಾತನಾಡುವರೋ? ಏನು ತಿಳಿಯದ ಕೂಸಿನೊಡನೆ ಗುರುಗಳು ಪಿಟಗುಟ್ಟುತ್ತ ಮಾತನಾಡುವದೆಂದರೆ ಎಂತಾ ಸೋಜಿಗ! ಯಾಕೆ ಹಾಗೆ ಮಾಡುವುದು? ರುದ್ರಾಕ್ಷಿಯನ್ನು ತಗಲಾಕುವದೇಕೆ? ಲಿಂಗಕ್ಕೆ ಸಂಬಂಧವಿಲ್ಲದ ಗುರುವು ಎಲ್ಲಿಯಾದರು ಉಂಟೇ? ಸಂಬಂಧವಿಲ್ಲದ ಬಳಿಕ ಅವ ಗುರುವೇ? ಅಂಥವನ ಕಾಲ ತೊಳೆದು ಪಾದೋದಕವೆಂದು ಮಗುವಿಗೆ ರುಚಿ ನೋಡಿಸುವರೇನೋ? ಇದು ಅಲ್ಲದೆ ಸೂತ್ರವನ್ನು ಏಕೆ ಕೊಡುವುದು? ಮತ್ತು ಲಿಂಗರೂಪ ಶಿಲೆಯನ್ನ ಮಗುವು ಹೊತ್ತುಕೊಂಡಿರುವುದೆ? ವಂಟಮುರಿಯವರ ಅಭಿಪ್ರಾಯಗಳ ಮೇಲೆ ನೋಡುವುದಾದರೆ ಹುಡುಗರ ಆಟದಂತೆಯೆ ಸರಿ. ಅಂದರೆ ಹುಡುಗರು ಮಣ್ಣು ಮುದ್ದೆಗಳನ್ನೆ ಭೋಜ್ಯಪದಾರ್ಥಗಳೆಂದು ಭಾವಿಸುವರು ಆಟದಲ್ಲಿ ದೊಡ್ಡವಂಥ ಮೇಲೂ ಮಣ್ಣುಸಾಮಗ್ರಿಗಳನ್ನೆ ಭೋಜ್ಯವೆಂದು ಭಾವಿಸುವದಿಲ್ಲ. ಇದರಂತೆ ಏನಾದರೂ ವಂಟಮುರಿಯವರು ಶಿಶುಜನನಕಾಲದಲ್ಲಿ ಉಪಯೋಗಿಸುವ ಅಷ್ಟಾವರಣಗಳನ್ನು ಬದಲು ಮಾಡುವರೇ? ಉದಾಸೀನದಿಂದ ತಾವೇ ದೀಕ್ಷತ್ರಯಗಳನ್ನು ಲೋಪ ಮಾಡಿಕೊಂಡು ರೂಢಿಯೊಳು ತನ್ನಂತೆಯೇ ಭಾವಿಸಿ ಜನನಕಾಲದಲ್ಲಿಯದು ದೀಕ್ಷೆಯಲ್ಲ. ಶಿವದೀಕ್ಷೆಯಾಗಬೇಕೆಂದು ಹೇಳುವಾಗ, ದೀಕ್ಷೆ ಯೆಂಬುವ ಕ್ರಿಯಾಸಂಬಂದ ಲಿಂಗವು ಅಂಗದ ಮೇಲೆ ಗುರುವು ಉಂಟು ಮಾಡಿದ ಬಳಿಕ ಕ್ಷೆ ಎಂಬ ಜ್ಞಾನ ಉಂಟಾಗಬೇಕಲ್ಲದೆ ಬೇರೆ ಇಲ್ಲವು. ಬೇರೆ ಕಾಲವನ್ನನುಸರಿಸಿ ನಡೆಯುವದಾದರೆ ಮೊದಲಿನ ಅಷ್ಟಾವರಣಗಳೆಲ್ಲವು ನಾಶ ಹೊಂದುವವು ತಿಳಿದು ನೋಡಿರಿ ಅಲ್ಲದೆ ಮಾನವರಲ್ಲಿ ಹುಟ್ಟಿದಂದಿನಿಂದ ಸಾಯುವ ವರವಿಗು ಸ್ವಲ್ಪ ಹೆಚ್ಚು ಕಡಿಮೆ ಮುರವೆಯು ಇದ್ದೇ ತೀರುತ್ತದೆ. ಅರುವನ್ನು ಕೊಡುವದಕ್ಕೋಸ್ಕರ ಪದೆ ಪದೆ ದೀಕ್ಷೆಯು ನಡೆಯುತ್ತಿರಬೇಕಲ್ಲವೇ? ಇದು ಭ್ರಾಂತು. ಲಿಂಗನಂತರ ಆಚರಣೆಗೆ ಕಾಲಕ್ಲುಪ್ತಿಗಳಿಲ್ಲ. ಚಕ್ರಗಳ ದಾಂಟಿ ಶಿಶುವು ಹೊರಗೆ ಬಂದಾಗಲೆ ಭವಿತನವ ಕಳೆದು ಭಕ್ತನ ಮಾಡುವ ಉದ್ದಿಶ್ಯದಿಂದ ದೀಕ್ಷೆಯನ್ನು ನಡೆಸಿ ಮುರೆವೆಗೆಲ್ಲಿ ಅವಕಾಶವಾಗುವದೊ ಎಂದು ಗುರುವು ಎಚ್ಚರಿಕೆಯಿಂದ ಕಾಯ್ದು

ಅಡವಿಯಲ್ಲಿರ್ದ-ಗೋವು ಮನೆಯಲ್ಲಿರ್ದ ಕರುವಿಂಗೆ ಚಿಂತಿಸಿ ಬಂದು ಹಾಲ ನೀಡಿ ನೋಹವ ಮಾಡುವದಲ್ಲದೆ ಕರುವೆತ್ತ ಬಲ್ಲು ದಯ್ಯ? ನಾನು ಕರ್ಮದೇಹವಿತಿದು ಈ ಪರಿಛದಲ್ಲಿ ತೊಳಲುತ್ತಿರಲು ನೀನು ದಯಹುಟ್ಟಿ ಎನ್ನ ಮರವೆಯ ಸಂಸಾರವ ತೊಲಗಿಸಿ ಕರುಣದಿಂದ ಸಲುಹಬೇಕೆಂಬ ಚಿಂತೆ ನಿನಗಲ್ಲದೆ ನಾನೇನು ಬಲ್ಲೆನಯ್ಯ ಅಖಂಡೇಶ್ವರಾ.

ಇಂತಪ್ಪ ವಚನಗಳನ್ನು ನೋಡಬೇಕಾಗಿದೆ ವಿವೇಕಿಗಳ ಸನ್ನಿವೇಶಕ್ಕೆ ಸರಿಯಾಗಿಯು ಇರುವ ಪುರಾತನರ ನುಡಿಯನ್ನು ನೋಡುವ. "ಛಕ್ತಿಯುಳ್ಳವ ಛಕ್ತಿಯ ಮಾಡುವಲ್ಲಿ ಗುರುವಿನಲ್ಲಿ ಗುಣವನರಸಬೇಕು ಲಿಂಗದಲ್ಲಿ ಲಕ್ಷಣವನರಸಬೇಕು ಜಂಗಮದಲ್ಲಿ ವಿರಕ್ತಿಯನರಸಬೇಕು. ಹಿಡಿದಾರಾಧಿಸುವ ವಸ್ತ್ರಶುದ್ಧಿ ಇಲ್ಲದಿದ್ದರೆ, ಛಕ್ತನ ಚಿತ್ತಶುದ್ಧಿ ಇಲ್ಲ. ಹೊನ್ನು ಹೆಣ್ಣು ಮಣ್ಣಿಗೆ ಇಚ್ಚಿಸುವಾತ ಗುರುವಲ್ಲ ಪ್ರಾಣೇಂದ್ರಿಯ ಸುಖೋಪಛೋಗಗಳಲ್ಲಿ ಮುಳುಗಿದಾತ ಜಂಗಮವಲ್ಲ. ಇವರ ದೇವರೆಂದು ಪೂಜಿಸುವಾತ ಛಕ್ತನಲ್ಲಾ..." ಇಂತು ಹೇಳಿರುವಾಗ ಸಹಜ ಗುರುವನ್ನು ಹೊಂದಿ ಅಷ್ಟಾ ದೀಕ್ಷೆಯೊಡನೆ. ತ್ರಿವಿಧ ದೀಕ್ಷೆಯನ್ನು ಸಾಂಗಿಕವಾಗಿ ಏಕೆ ನಡೆಸಬಾರದಾಗಿತ್ತು?' ಬಲ್ಲವರಾಗಿದ್ದು ಗ್ರಂಥಗಳಲ್ಲಿಯ ವಿಧಿವಿಧಾನಗಳನ್ನ ಆಚರಣೆಗೆ ತರುವವರಾರೆಂದು ತಿಳಿಸಿದರೆ ಇನ್ನಾರನ್ನು ತರಬೇಕು? ಛಕ್ತರಿಗೆ ಪೃಥ್ವಿ ಅಂಗವಾಗಿರುವದರಿಂದ ಇದರ ಪೂರ್ವಾಶ್ರಯವನ್ನು ಕಳೆಯಬೇಕು. ಅಂದರೆ ಶಮಾದಿಷಟ್ಪಸಂಪತ್ತುಳ್ಳವರಾಗಬೇಕೆಂಬುದೇ ನನ್ನ ಆಶೆ.

ಅಂಗವೆಂಬ ಭೂಮಿಯ ಮೇಲೆ ಲಿಂಗವೆಂಬ ಬೀಜವ ಗುರುವು ಬಿತ್ತುವುದೇ ದೀಕ್ಷೆ. ಗುರುವಿನಿಂದ ಶಿಕ್ಷಣವೆಂಬ ಉಪಚಾರವು ಎಷ್ಟರ ಮಟ್ಟಿಗೆ ನಡೆಯುವದೋ ಅಷ್ಟರ ಮಟ್ಟಿಗೆ ಹಲ್ಲವಿಸುವುದು, ಉದಾಸೀನವಾದರೆ ಅನೇಕ ಕೋಟಿಲೆಗಳಿಂದ ಕೆಡಿಪುದು. ಈ ಎಚ್ಚರಿಕೆ ಇಲ್ಲದ್ದರಿಂದಲೆ ಇಂದಿನ ವರಿವಿಗೂ ಅನೇಕ ಶೈವಸಂಸರ್ಗಗಳಲ್ಲಿ ತೊಡಕಿ ಅಜ್ಞ ಜನರ ಸಹವಾಸದಿಂದಲೂ ಲಿಂಗವಂತರು ಕೆಟ್ಟಿರುವರು. ಇದಕ್ಕೆ ಶೈವ ವೀರಶೈವಗಳೆರಡೂ ವಿಶ್ರವಾಗಿ ಹೋರಾಡುತ್ತಿರುವದೇ ಸಾಕ್ಷಿ. ಮತ್ತು ಅಯ್ಯನವರು ಹಕ್ಕಿನ ರೊಕ್ಕವನ್ನು ತೆಗೆದುಕೊಂಡದ್ದು ಏನಾಯಿ

ದುಕೊಂಡಂತೆ ಆಯಿತ್ತು. ಶಕ್ತನಾದ ಕರ್ತನನ್ನು ಹವಣಿಸಿಕೊಳ್ಳಿ ಎಂದು ನೋಡಿಕೊಳ್ಳುವೆನು. ಶ್ರೀ ವಂಟಮುರಿ ಇವರ ಲಿಂಗಧಾರಣ ಸಮಾರಂಭವನ್ನು ನೋಡಿದರೆ ತಿಳಿಯುವದೇನಂದರೆ ಬೆಳೆ ನಾಶವಾಗುವದೊಂದು, ದುಡ್ಡು ಕಳಕೊಳ್ಳುವದೊಂದು, ಇಷ್ಟು ಅನಾದಾಯವಾಗುವದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ ಶಿವಶಿವಾ! ಬಸವಾದಿ ಪ್ರಮಥರು ಹಾಕಿರುವ ತಳಹದಿಯ ಗುರುತು ಸ್ವಲ್ಪ ಸ್ವಲ್ಪ ಕಾಣುತ್ತಿದ್ದರೂ ಅದನ್ನು ಕಂಡು ಅದರ ಮೇಲೆ ಕಟ್ಟಡವನ್ನು ಕಟ್ಟಲಾರದೇ ಹುಡುಕಾಡುತ್ತಿರುವೆವು ಇದು ನಮ್ಮ ದುರಾದೃಷ್ಟವಲ್ಲವೆ? ಇವರು ಬೆಂಗಳೂರು ಗುಂಪೆಂದು ಹೇಳುವದಾದರೆ ಇವರ ಪಾಲಿಗೆ ಇರಲಿ ಅದು ನನಗೆ ಲಿಂಗವಂತರ ಒಂದೇ ಗುಂಪೇ ಹೊರತು ಬೆಂಗಳೂರು ಗುಂಪೆಂತಾಗಲಿ ವಂಟಮುರಿ ಗುಂಪೆಂತಾಗಲಿ ನನಗೇನು ಅಭಿಪ್ರಾಯವಿಲ್ಲ. ಅಲ್ಲದೇ ತಾವು ಆಡಿದ್ದೇ ಸರಿ ಎಂದು ವಾದಿಸಬಾರದು ನಾನು ಹಾಗೆ ಖಂಡಿಸುವದಾಗಿದ್ದರೆ ಅನೇಕ ರೀತಿ ಖಂಡಿಸಬಹುದಾಗಿತ್ತು. ವಿವೇಕಿಗಳಾದವರು ತಮ್ಮತಮ್ಮ ಅನುಷ್ಠಾನಗಳಲ್ಲಿ ಕಂಡು ಬರುವ ತಪ್ಪುಗಳನ್ನು ತಿದ್ದುಕೊಳ್ಳುವರೆಂತಲೂ ನಂಬಿರುವದಲ್ಲದೆ ನಮ್ಮಲ್ಲಿಯ ಲಿಂಗಧಾರಣ ಕ್ರಮವನ್ನು ಶ್ರೀಯುತ ಪಟ್ಟೇದ ಅವರ ಅವಗಾಹನೆಗಾಗಿ ತಿಳಿಸುತ್ತೇನೆ ಅಂದರೆ ಬಡವರ ಲಿಂಗಧಾರಣ ಬಲ್ಲಿದರಲ್ಲಿಯ ಲಿಂಗಧಾರಣವೆಂದು ನಮ್ಮಲ್ಲಿಲ್ಲ.

ಕಾನಕಾನಹಳ್ಳಿಯಲ್ಲಿ ಇರುವ ಲಿಂಗಾಯತರ ಶ್ರೇಣಿಯಲ್ಲಿ ಮುನಿವೀರಪ್ಪಯಂಬುವವರು ಶಿವಾನುಭವ ಸಂಘದ ಒಬ್ಬ ಸಭಾಸದರು. ಅವರ ಮನೆಯಲ್ಲಿ ಜನನವಾಗಿ ಆ ದಿವಸವೇ ಸ್ನಾನಮಾಡಿಸಿದರು. ಮಗು ಬಾಣಂತಿ ಆರೋಗ್ಯವಿರುವದನ್ನು ನೋಡಿ ಬಹಳ ಸಂತೋಷದಿಂದ ಜಂಗಮಮೂರ್ತಿಯನ್ನು ಕರೆತರುವದಕ್ಕೆ ಸಾಣೆ ಕಾರಣೆಗಳಿಂದಲೂ ತಳಿರು ತೋರಣಗಳಿಂದಲೂ ಬಾಳಿಕಂಬಗಳಿಂದಲೂ ಮನೆಯನ್ನು ಅಲಂಕರಿಸಿದರು. ನಂತರ ಭಕ್ತಮಹೇಶ್ವರರಿಗೆಲ್ಲ ನಮ್ಮ ಮನೆಯಲ್ಲಿ ಲಿಂಗಧಾರಣ ನಡೆಯುತ್ತದೆ. ತಾವುಗಳೆಲ್ಲರೂ ದಯಮಾಡಿಸಬೇಕೆಂದು ತಿಳಿಸಿದರು. ಒಡನೆಯೆ ದೇಗುಲಮಠಕ್ಕೆ ಹೋಗಿ ನಿರಂಜನ ಜಂಗಮ ಮೂರ್ತಿಗಳಾದ ಮಹಲಿಂಗ ಸ್ವಾಮಿಗಳನ್ನು ಬಿನ್ನವಿಸಿ ಕರೆತಂದು ಪಾದಕ್ಕೆ ಅಗ್ಗಣಿಯನ್ನು ಕೊಟ್ಟು ಗದ್ದುಗೆಯ ಮೇಲೆ ಕುಳಿ

ರಿಸಿದರು. ನಂತರ ಆಯ್ಯನವರಿಂದ ಕಲಶಸ್ಥಾಪನೆ ಮಾಡಲಾಯಿತು. ಈ ಕೆಳಗಡೆ ಕಾಡಿಸಿರುವರೀತಿ, ಕವಳಿಪತ್ರಗಳಿಂದ ಧಾನ್ಯದ ಮೇಲೆ,

	ವಾಂ ಓಂ ಹ್ರೀಂವಾಂ ತತ್ಪುರಾಘಾಯ ನಮಃ	ಹಸರು ವಸ್ತ್ರ ಪುತ್ತರ ಮುಖ
ತ್ರೀಂ ಓಂಹ್ರೀಂ ಶ್ರೀಂ ಅಘೋರಾಯ ನಮಃ ಪಶ್ಚಿಮ ದಿಕ್ಕು ಕೆಂಪು ವಸ್ತ್ರ	ಯಾಂ ಓಂಹಾಂಯಾಂ ಈಶಾನಾಯನಮಃ ನೀಲಿವಸ್ತ್ರ	ನಾಂ ಓಂಹ್ರಾಂನಾಂ ಸದ್ಯೋಜಾತಾಯನಮಃ ಹಳದೀವಸ್ತ್ರ ಪೂರ್ವಮುಖ
	ಮಾಂ ಓಂಹ್ರೀಂವಾಂ ವಾಮದೇವಾಯ ನಮಃ ಬಿಳಿವಸ್ತ್ರಂ ದಕ್ಷಿಣ ದಿಕ್ಕು	

ಜಂಗಮದ ಸನ್ನಿಧಿಯಲ್ಲಿ ಈ ರೀತಿ ಆಯ್ಯನವರು ಮಾಡಿ ಕಲಶ ಪೂಜೆಯನ್ನು ನಡೆಸಿದರು.

ಸದ್ಯೋಜಾತ ಕಲಶಕ್ಕೆ

ಆಚಾರಲಿಂಗ ಪ್ರಾರಂಭದಿಂದ ೫ ಪೂಜೆ ನಡೆಸಿದರು.

ವಾಮದೇವ ಕಲಶಕ್ಕೆ

ಗುರುಲಿಂಗ ಪ್ರಾರಂಭಿಸಿ ೫ ಪೂಜೆ ನಡೆಸಿದರು.

ಅಘೋರ ಕಲಶಕ್ಕೆ

ಶಿವಲಿಂಗ ಪ್ರಾರಂಭಿಸಿ ೫ ಪೂಜೆ ನಡೆಸಿದರು.

ತತ್ಪುರುಷ ಕಲಶಕ್ಕೆ

ಜಂಗಮಲಿಂಗವ ಮುಂದುವರಿಸಿ ೫ ಪೂಜೆ ನಡೆಸಿದರು.

ಈಶಾನ್ಯ ಕಲಶಕ್ಕೆ

ಇನ್ನೂ ಅನೇಕ ಕ್ರಮದಿಂದ ಪೂಜೆಯು ನಡೆದನಂತರ ಧಾನ್ಯಾಧಿವಾಸ ಜಲಾಧಿವಾಸಗಳಿಂದ ನುತ್ತು ಲಿಂಗಕ್ಕೆ ಸಂಸ್ಕಾರ ಅರ್ಘ್ಯೋಪಾದ್ಯಾಚಮನಗಳಿಂದ ಅಭಿಷೇಕವನ್ನು ಪೂರೈಸಿದ ನಂತರ ಪಂಚಾಮೃತಗಳಿಂದ ಅಭಿಷೇಕವನ್ನು ಮಾಡಿದರು. ನಂತರ ಜಂಗಮಪಾದೋದಕವನ್ನು ಮಾಡಿಕೊಂಡು ಇದರಿಂದ ಲಿಂಗವನ್ನು ಶುದ್ಧೀಕರಿಸಿ ಶೋಡಶೋಪಚಾರಗಳಿಂದ ಪೂಜೆಯನ್ನು ನಡೆಸಿ ಅದನ್ನು ಧಾರಣಕ್ಕೆಲನುಕೂಲವಾಗುವ ಹಾಗೆ ವಸ್ತ್ರದಿಂದ ಮಾಡಿ ಒಂದು ಕಟ್ಟಿಯಲ್ಲಿರತಕ್ಕ ಹಕ್ಕಿಯಲ್ಲಿ ಷಟ್‌ಚಕ್ರವನ್ನು ನಿರ್ಮಿಸಿ ಶಿರುವಿಗೆ ಹೆಸರು ಏನು ಇಡಬೇಕೆಂಬುದನ್ನು ಮೊಪಲೇ ತಿಳಿದುಕೊಂಡು ಕಟ್ಟಿಯಲ್ಲಿ ಬರೆದು ಲಿಂಗವನ್ನು ಅದರಲ್ಲಿಟ್ಟು ಕಲಶಗಳ ಸಮೀಪದಲ್ಲಿಡುವರು. ಆನಂತರ ಜಂಗಮಕ್ಕು ಕಲಶಗಳಿಗೂ ಸಂಬಂದಪಟ್ಟಿರುವ ಸೂತ್ರವನ್ನು ಮಗುವನ್ನು ಎತ್ತುಕೊಂಡಿರುವವರ ಕೈಗೆ ಸೂತ್ರವನ್ನು ಕೊಟ್ಟು ಸೂತ್ರದ ಮೂಲಕ ಆಯ್ಯನವರು ವಿಭೂತಿಯನ್ನು ಮಗುವಿಗೆ ಧರಿಸಿ ಮಂತ್ರವನ್ನು ಹೇಳುತ್ತ ಜಂಗಮದ ಬಳಿಗೆ ಕರತರುವರು. ನಂತರ ಷಡುಸಮ್ಯಾರ್ಜನೆಗಳಿಂದ ಸಂಸ್ಕರಿಸಿ ಶುದ್ಧೋದಕವನ್ನು ಪ್ರೋಕ್ಷಿಸಿ ವಿಭೂತಿಧಾರಣವಾದನಂತರ ಇದಕ್ಕೆ ಶರಣರ ವಚನ "ವಿಭೂತಿಯನೆನ್ನೆ ಲಲಾಟದಲ್ಲಿ ಪಟ್ಟವ ಕಟ್ಟಲು ಬ್ರಹ್ಮನುತ್ಪತ್ತಿ ಅಂಡ ಒಡೆಯಿತ್ತು ನೋಡಾ..." ಇದನ್ನು ನೋಡಿದರೆ ಎಷ್ಟು ಪ್ರಕಾಶ ಉಂಟಾಗುತ್ತದೆಂಬುದನ್ನು ತೋರಿಸುತ್ತದೆ. ಭಸ್ಮಧಾರಣೆ ಮಾಡುವರು. ಕೊರಳಿಗೆ ರುದ್ರಾಕ್ಷಿ ಸಂಬಂದಿಸುವರು. ಆನಂತರ ಗಣಸಾಕ್ಷಿಯಾಗಿ ಲಿಂಗಧಾರಣ ಮಾಡಿದರು. ನಂತರ ಕರ್ಣದೊಳಗೆ ಮಂತ್ರೋಪದೇಶವು ನಡೆಯಿತು. ಈ ವಿಷಯದಲ್ಲಿ ಸಿದ್ಧರಾಮೇಶ್ವರನ ವಚನವನ್ನು ಉದಹರಿಸುವೆನು. "ಪರುಷನೊಂಕಿಯೂ ಪಾಷಾಣ ಶುದ್ಧವಾಗದಿದ್ದರೆ ಆ ಪರುಷದ ಗೊಡವೆ ಏತಕಯ್ಯ?.....ಗರುಡನಿರ್ದು ಸರ್ಪನ ಭಯ ಹಿಂಗದಿದ್ದರೆ ಆ ಗರುಡನ ಗೊಡವೆ ಏತಕಯ್ಯ?.....ನೀವು ಸೊಂಕಿಯೂ ಭವ ಹಿಂಗದಿದ್ದರೆ ನಿಮಗೆ ಕುಂದಯ್ಯ" ದೀಕ್ಷಾವಾದದಲ್ಲಿರುವವರು ಇದನ್ನು ಚನ್ನಾಗಿ ಮನನ ಮಾಡುವರೆಂದು ನಂಬಿದ್ದೇನೆ.

ಮಂತ್ರೋಪದೇಶವಾದ ನಂತರ ಜಂಗಮಮೂರ್ತಿಗಳು ಮಗುವಿಗೆ ಹಸ್ತಮಸ್ತಕ ಸಂಯೋಗ ಮಾಡಿದರು. ಆ ಮೇಲೆ ನಾಮಕರಣ ಮಾಡಲಾಯಿತು. ಜಂಗಮದ ಪಾದಪೂಜೆಯೂ ಸಹ ನಡೆಯಿತು.

ಪಾದಪೂಜೆಯಲ್ಲಿ ನಡೆದ ಪಾದಸ್ತೋತ್ರ ಒಂದು ಮಂತ್ರವನ್ನು ಒಂದು ಮಂಗಳವನ್ನು ತೋರಿಸಿರುವೆನು.

"ಶರಣಜನರ ಸದುಹೃದಯನಳಿನದೋಳು. ಪಂಶೋಭಿಸ ತ್ತಿಹುದು ನಿನ್ನಾಪಾದ." ಇತ್ಯಾದಿ ನಿಜಗುಣ ಕೃತ॥ ಪದ.

ಮಗುಬಾಣಂತಿಯಂದಿಯಾಗಿ ಸರ್ವರಿಗೂ ಪಾದೋದಕ ಪ್ರಸಾದಗಳು ನಡೆದವು. ಇಷ್ಟಾದನಂತರ ಗಣಾರಾಧನೆಯು ನಡೆಯಲ್ಪಟ್ಟ ಅರ್ಪಣಗಳು ನಡೆಯುತಿದ್ದಂತೆಯೆ ಶಿವಶರಣರ ವಚನಗಳು ನಡೆದವು ತಾಂಬೂಲ ವಗೈರೆಗಳು ಇಷ್ಟೆಲ್ಲ ನಡೆಯುವದರೊಳಗಾಗಿ ೬ ಘಂಟೆಗೆ ಪ್ರಾರಂಭವಾಗಿದ್ದು ಮಧ್ಯಾನ್ನ ೧ ಘಂಟೆಯಾಯಿತು. ನಾಲ್ಕು ಐದು ನಿಮಿಷಗಳಲ್ಲಿ ಮಾಡುವದು ನಮ್ಮಿಂದಾಗದು. ಇದು ಸತ್ಯವಾದವಿಷಯವು. ಇವೇ ನಮ್ಮಲ್ಲಿಯ ಒಡವರ ಲಿಂಗಧಾರಣೆ, ನಮ್ಮಲ್ಲಿ ಎಲ್ಲ ಕಡೆಯೂ ಹೀಗೆಯೆ ನಡೆಯುವದು. ಇದರಲ್ಲೇನು ಸಂದೇಹವಿಲ್ಲಾ ನಮ್ಮ ಕಡೆ ಒಕ್ಕಕ್ಕೋಸ್ಕರ ಬಡಿದಾಡುವ ಗುರು ಜಂಗಮವಿಲ್ಲ.

ಪೂಜಾಕಾಲದಲ್ಲಿ ಮಂಗಳ.

ನಾನೆತ್ತುವೆನು ಕರ್ಪೂರಾರತಿ ಚಿತ್ತಜಾರಿಗೇ ಏನೇನು ಇಲ್ಲದ
ಸ್ವಾನುಭಾವದ ಜ್ಯೋತಿರೂಪಗೇ.....ನಾ... ॥೫॥
ಬಯಲಿನೊಳಗೆ ಬಯಲು ಜ್ಯೋತಿ ಜಳಕು ತೋರ್ಪಗೇ
ಸ್ವಯಕೆ ಸ್ವಯವಾಗಿ ಹೊಳೆವ ನಿಜಪ್ರಕಾಶಗೆ ನಾ ॥೧॥
ಕೋಟಿಗಿಡಿಗಳನ್ನು ಅಡಗಿ ದಾಂಟಿ ತೋರ್ಪಗೇ ॥ ಘನ
ಅಟ ಅಡಗಿ ನೀಟಿನಿಂದಿಹ ಸ್ಫಟಿಕರೂಪಗೇ ನಾ ॥೨॥
ಗುಟ್ಟು ತೋರಿದ ಗುಪಿತ ಯೋಗದ ಗುರುನಿರ್ವಾಣೇಶಗೇ ॥
ಗುರುನಿಟಲಜ್ಯೋತಿ ಶಂಭುಲಿಂಗನಾಗಿ ಹೊಳೆವಗೆ... ನಾ ॥೩॥

ಮಂತ್ರ.

ಓಂ ನಮಃ ಶಿವಾಯ ಎಂಬೊ ಒಂದೆ ಮಂತ್ರವೆ ಸಾಕು. ಹಲವು ಮಂತ್ರವನೋದಿ ಫಲವೇನು ಆತ್ಮ..ಪ..... ಓಂ...

ತನ್ನೊಳಗೆ ತಾ ತಿಳಿದು ಕಲ್ಮಷಂಗಳ ಕಳೆದು ಪನ್ನಂಗಧರನ ಪೂಜೆಯ ಮಾಡಲು ಜನ್ನವಾಹೇಶ್ವರನ ಪಾದತೀರ್ಥದೊಳಿರಲೂ

ಹರಹರಾ ಎಂತೆಂಬ ಹರಶಬ್ದ ಮನದಲ್ಲಿ ಕರಮುಟ್ಟಿ ಮಜ್ಜನವ ಮಾಡುತ್ತಿರಲೂ ಪರಧನಕೆ ಪರಸತಿಗೆ ಆಶೆ ಮಾಡಲುಬೇಡ ಪರಮಾತ್ಮನೆಂತೆಂಬೊ ಪ್ರಥಮ ಮಂತ್ರವೆ ಸಾಕು ॥೨॥

ಕಂಗಳು ಮೂರುಳ್ಳ ಕರುಣಸಾಗರನೆಂಬೊ. ಈ ಮಂಗಳ ಮಂತ್ರವು ಮನಕೆ ಸಾಕು. ಭಂಗ ಬೀಳುವದೇಕೊ ಭ್ರಷ್ಟನುಂತ್ರವ ಕಲಿತು ಈ ಲಿಂಗದೊಳಗಿರ್ಪ ನಿಜವೊಂದೆ ಸಾಕು ॥೩॥

ಆಶೆಭೂತಗಳೆಲ್ಲ ತಲ್ಲಣೆಯ ಮಾಡಲು ಈ ಭಸಿತ ಫಣೆಯೊಳಗಿರ್ಪ ಭಾಗ್ಯವೊಂದೆ ಸಾಕು. ಈ ಮಹೀಮನಂಗಳ ನೆಚ್ಚಿ ಮುಂದನಾಗಿರಬೇಡ. ಆಸಮ ಶಿವಪಂಚಾಕ್ಷರಿಯ ಜಪ ಒಂದೆ ಸಾಕು ॥೪॥

ಈ ವೇಳೆಯಲಿ ಈ ಮಂತ್ರವನು ಪಠಿಸುತಿರೆ ತ್ರೈಮೂರ್ತಿಗಳು ಬಂದು ಮುಂದೆ ನಿಂತಿರುತಿರಲು ತ್ರಿಜಗಜಗಸಂಗಮೇಶ್ವರನ ಭಜಿಸುತಿರೆ ಇನ್ನೇಕೋ ಈ ಮನಕೆ ಇಷ್ಟು ಮಂತ್ರಗಳು ॥೫॥

ಇಲ್ಲಿ ಲಿಂಗಧಾರಣ ನಡೆಸಿರುವ ಮುನಿವೀರಪ್ಪನೆಂಬುವರ ಮನೆಯಲ್ಲಿ ನಾಲ್ಕು ಐದು ಸಣ್ಣ ಮಕ್ಕಳು ಇವೆ ತೊಂದರೆ ಉಂಟಾದರೆ ನಾಲ್ಕಾರು ಜನರ ಜಂಗಮರ ಕೂಡಿಸಿ ತೃಪ್ತಿ ಪಡಿಸುವದು ಇದರಲ್ಲಿಯೇ ಕಷ್ಟನಿವಾರಣೆ ಇವರು ವಸ್ತ್ರಕಾಯಕದವರು.

ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ. ನೀ ಸಾಕ್ಷಿ ಎನ್ನ ಮನ ಸಾಕ್ಷಿ ಎನಗಿದೇ ದಿವ್ಯ ಕೂಡಲಸಂಗಮದೇವ.

ವೀರಶೈವರಲ್ಲಿ ಸಂಘಟನೆ.

(ಬರೆದವರು- ಶಿವಮೂರ್ತಿ)

ಇತ್ತೀಚಿಗೆ ದಿನಮಾನಗಳು ಬಹು ಉಗ್ರಸ್ವರೂಪವಲ್ಲಿ ತಲೆದೋರುತ್ತಿವೆ. ಯಾವಾಗ ಎಂಥ ಆಘಾತಗಳು ನಮ್ಮ ಸಮಾಜದ ಮೇಲೆ ಬಂದೊದಗಬಹುದೋ ನೇಮವಿಲ್ಲ. ಸಂಕಟ ಬಂದಾಗ ಸಾಹಸಪಡುವದಕ್ಕಿಂತಲೂ ಮುಂಚಿತವಾಗಿ ಜಾಗ್ರತೆಯಾಗಿದ್ದರೆ ಹೆಚ್ಚು ಕ್ಷೇಮ. ಅದಕ್ಕಾಗಿ ನಾವು ಹಳ್ಳಿ ಪಳ್ಳಿಗಳಲ್ಲಿ, ತಾಲೂಕ ಜಿಲ್ಲೆಗಳಲ್ಲಿ. ಕರ್ನಾಟಕ ಹಾಗೂ ಇತರ ಪ್ರಾಂತಗಳಲ್ಲಿ ನಮ್ಮ ಬಾಂಧವರೊಡನೆ ಸಂಘಟನೆಯಿಂದ ಒಂದೇ ಮಾದರಿಯ ಕ್ರಮಬದ್ಧತೆ ಸಂಸ್ಕೃತಿಗಳನ್ನು ನೆಲೆಗೊಳಿಸುವದು ಅತ್ಯಾವಶ್ಯಕವಾಗಿದೆ. ವೀರಶೈವರು ಒಕ್ಕೂಟ್ಟಿನಿಂದ ಶಾಲೆ ಕಾಲೇಜಗಳನ್ನು ಸ್ಥಾಪಿಸಬಹುದು; ಪುರಾಣ ಕೀರ್ತನಗಳನ್ನು ಏರ್ಪಡಿಸಬಹುದು; ಜಾತ್ರೆ ಉತ್ಸವ ಸಮಾರಂಭಗಳನ್ನು ನೆರವೇರಿಸಬಹುದು. ಸಾಹಿತ್ಯ ಪ್ರವಚನಗಳನ್ನು ಸಾಂಗಗೊಳಿಸಬಹುದು. ಕೂಡಿಕೊಂಡು ಧಾರ್ಮಿಕ ಸಾಮಾಜಿಕ ರಾಜಕೀಯ ವಿಷಯಗಳನ್ನು ಚರ್ಚಿಸಬಹುದು ಈ ಮೇರೆಗೆ ಒಂದಿಲ್ಲೊಂದು ರೀತಿಯಿಂದ ನಮ್ಮೊಳಗೆ ಸಂಘಟನೆಯನ್ನು ಬೆಳೆಯಿಸಲು ಬೇಕಾದಷ್ಟು ಅವಕಾಶವಿದೆ. ನಾವು ಸಂಘಟನೆಯನ್ನು ಯಾವ ರೀತಿಯಾಗಿ ಮಾಡಬೇಕೆಂಬ ಬಗ್ಗೆ ನನ್ನ ಸ್ಪಷ್ಟವಾದ ಅಭಿಪ್ರಾಯಗಳನ್ನು ವಾಚಕರ ಅವಗಾಹನೆಗಾಗಿ ಇದರಡಿಯಲ್ಲಿ ಮಂಡಿಸಿದ್ದೇನೆ.

ಯುದ್ಧವು ಈಗ ಯುರೋಪಖಂಡವನ್ನು ಬಿಟ್ಟು ಏಶಿಯಾದಲ್ಲಿ ಅಡಿಯಿಡಲಾರಂಭಿಸಿದೆ. ಹಿಂದುಸ್ಥಾನವನ್ನು ಮುಟ್ಟಲಿಕ್ಕೆ ಅದಕ್ಕೆ ಬಹು ದಿನಗಳು ಹತ್ತಲಿಕ್ಕಿಲ್ಲ. ಪರಚಕ್ರಗಳ ದಾಳಿಗೆ ಎದುರಾಗಿ ನಿಲ್ಲುವ ದುರ್ಧರ ಪ್ರಸಂಗವು ನಮಗೆ ಬಂದರೂ ಬರಬಹುದು. ನಮ್ಮ ದೇಶದ ಆವಾಂತರ ವೈರಿಗಳು ಕೂಡ ಆ ಸಂಧಿಯನ್ನು ಸಾಧಿಸಿ ನಮ್ಮ ಸೊತ್ತನ್ನು ಹರಣ ಮಾಡಲು ಮುಂದುವರಿಯಲೂ ಬಹುದು. ಆಗ ನಾವು ಹೇಡಿಗಳಂತೆ

ಬಾರದು ಅದಕ್ಕಾಗಿ ನಾವು ಶಾರೀರಿಕ ಬಲವನ್ನು ಹೆಚ್ಚಿಸಿಕೊಂಡು ಸರಕಾರದಿಂದ ಸೈನಿಕ ಶಿಕ್ಷಣದ ಕಲೆಯನ್ನು ಅಂತರ್ಗತಮಾಡಿಕೊಂಡು ಹೊರ ಒಳ ಹೋರಾಟಕ್ಕೆ ಎದೆಗೊಟ್ಟು ನಿಲ್ಲಬೇಕಾಗುವದು. ಆದಕಾರಣ ನಮ್ಮ ಶಾರೀರಿಕ ಬಲವನ್ನು ಬೆಳಿಸಲಿಕ್ಕೆ ತಾಲೀಮು, ಆಶನ, ಸೂರ್ಯನಮಸ್ಕಾರ ಲಾಠಿ, ಲೇಝಿಮು, ಕುಸ್ತಿ, ಕವಾಯಿತು ಮುಂತಾದ ಅಂಗಸಾಧನೆಯ ಸಂಘಗಳನ್ನು ಊರೂರಲ್ಲಿ ಸ್ಥಾಪಿಸುವಂತೆ ಸುಶಿಕ್ಷಿತರು ಪ್ರಯತ್ನಿಸಬೇಕು. ಮತ್ತು ಆಯಾಯ ಸಂಘಗಳಿಳಗೆ ಶರ್ಯತ್ತುಗಳನ್ನಿಟ್ಟು ಶರೀರ ಬಲಕ್ಕೆ ಪ್ರೋತ್ಸಾಹಕೊಡಬೇಕು. ಇಂಥ ಶಾರೀರಿಕ ಕಸರತ್ತುಗಳನ್ನು ಬಸವ ಜಯಂತಿ, ಜಾತ್ರೆ ಮೊದಲಾದ ಸಮಾರಂಭಗಳಲ್ಲಿ ನೆರವೇರಿಸುವದು ವಿಹಿತ. ಇಂಥ ಕಾರ್ಯಗಳನ್ನು ಮಾಡಹತ್ತಿದರೆ ಪರಸ್ಪರ ಸಂಘಟನೆಯು ಹೆಚ್ಚುವದು.

ಇದಲ್ಲದೆ ವೀರಶೈವರಲ್ಲಿ ಸಂಘಟನೆಯನ್ನು ಬೆಳಿಯಿಸಲು ಇನ್ನೊಂದು ಸಾಧನವುಂಟು. ನಮ್ಮಲ್ಲಿ ಕುಲಕೋಟಿ ಶಿವಶರಣರಿದ್ದಾರೆ. ಉದಾಹರಣಾರ್ಥ ಮೊಚ್ಚಿಗರ ಹರಳಯ್ಯ, ಘೋರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಕುರುಬರ ಅಮುಗಿಸಿದ್ದಯ್ಯ, ಹಡಪದ ಅಪ್ಪಣ್ಣ, ಮೇದಾರ ಕೇತಯ್ಯ, ನುಲಿಯ ಚಂದಯ್ಯ, ಜೇಡರ ದಾಸಿಮಯ್ಯ, ಸೂಜಿ ಕಾಯಕದ ಶಂಕರ ದಾಸಿಮಯ್ಯ, ಬಸವೇಶ್ವರ, ಪ್ರಭುದೇವ, ಅಕ್ಕ ಮಹಾದೇವಿ, ನಾಗವ್ವ. ನೀಲವ್ವ, ಲಕ್ಕವ್ವ, ಮಹಾದೇವಮ್ಮ ಮೊದಲಾದ ಶರಣ ಶರಣೆಯರು ಕನ್ನಡ ನಾಡಿನ ಜೀವಜ್ಯೋತಿಗಳಾಗಿದ್ದಾರೆ. ವೀರಶೈವರು ಎಲ್ಲ ಶರಣ ಶರಣೆಯರ ಜಯಂತಿಗಳನ್ನು ಕಾಲಕಾಲಕ್ಕೆ ನೆರವೇರಿಸಿ ತಮ್ಮ ಒಳಪಂಗಡಗಳನ್ನು ಬದಿಗೊತ್ತಿ ವರ್ಗಣಿ ಕೂಡಿಸಿ ಪ್ರಸ್ಥ (ಸಹಪಂಕ್ತಿ) ಪುರಾಣ, ಕೀರ್ತನ, ವಚನಪಠಣ. ಸಂಗೀತ ಮುಂತಾದ ಕಾರ್ಯಗಳನ್ನು ನೆರವೇರಿಸಬೇಕು. ತಿಂಗಳಿಗೊಬ್ಬರ ಜಯಂತಿಯನ್ನು ಮಾಡಿ ಬೇರೆ ಬೇರೆ ಕಾರ್ಯಕ್ರಮಗಳನ್ನಿಟ್ಟು ಒಕ್ಕೂಟ್ಟಿನಿಂದ ಕೆಲಸ ಸಾಗಿಸಿ ಪರಸ್ಪರ ಪ್ರೇಮೈಕ್ಯತೆಗಳನ್ನು ಹೆಚ್ಚಿಸಿಕೊಳ್ಳಬೇಕು. ಇಂಥ ಸಭೆ ಮೆರವಣಿಗೆಗಳಲ್ಲಿ ವಿಶೇಷವಾಗಿ ಸುಶಿಕ್ಷಿತರು ಹೆಚ್ಚು ಭಾಗ ವಹಿಸಬೇಕು. ಅಶಿಕ್ಷಿತರು ಸುಶಿಕ್ಷಿತರ ಅನುಕರಣವನ್ನು ಅನಾಯಾಸವಾಗಿ ಮಾಡುವರು ಇದಲ್ಲದೆ ಇಂಥ ಪ್ರಸಂಗಗಳಲ್ಲಿ ಆಯಾಯ ಶರಣ ಶರಣೆಯರ ಭಾವ ಚಿತ್ರ, ಚಿಕ್ಕಕಥೆ, ಪ್ರಹಸನ ಮುಂತಾದವುಗಳನ್ನು ಅಲ್ಪ

ಬೆಲೆಗೆ ಪ್ರಸಾರ ಮಾಡಬೇಕು. ಎಲ್ಲ ಒಳಪಂಗಡಗಳ ಸದಸ್ಯರದೊಂದು ಸಂಘವೊಂದನ್ನು ಊರಲ್ಲಿ ಸ್ಥಾಪಿಸಿಕೊಂಡು ಅಯಾಯ ಶರಣ ಶರಣೆಯರ ಜಯಂತಿಯ ಮೂಲಕ ಸಾಂಸ್ಕೃತಿಕವಾದ ಸಂಘಟನೆಯನ್ನು ನೆಲೆಗೊಳಿಸಬೇಕು.

ಇದೇ ಮೇರೆಗೆ ವೀರಶೈವ ಸುಶಿಕ್ಷಿತರು ನಗರಗಳಲ್ಲಿ ಸಂಘಟನೆಯಿಂದ ಕೆಲಸ ಮಾಡಲು ಬೇಕಾದಷ್ಟು ಅವಕಾಶವಿದೆ. ನಮ್ಮವರಲ್ಲಿ ಯೋಗ್ಯ ಸಂಘಟನೆಯಿದ್ದರೆ ಎಲ್ಲ ಸಂಸ್ಥೆಗಳಲ್ಲಿ ಅತ್ಯುತ್ತಮ ರೀತಿಯಿಂದ ಕಾರ್ಯ ಮಾಡಬಹುದಾಗಿದೆ ನಮ್ಮಲ್ಲಿ ಸಂಘಟನೆಯನ್ನು ಬೆಳೆಯಿಸಲಿಕ್ಕೆ ನಮ್ಮ ಸಾಹಿತ್ಯ, ಇತಿಹಾಸ, ಮತಗಳ ಉತ್ಪತ್ತಿ, ಶರಣರ ವಚನ ವಿವೇಚನೆ, ಶರಣರ ಜೀವನ ಚರಿತ್ರೆ, ಗ್ರಂಥಗಳ ಅಧ್ಯಾಸ ಹಾಗೂ ಪ್ರವಚನ, ಗ್ರಂಥ ಸಂಗ್ರಹ, ಗ್ರಂಥ ಪ್ರಕಟನೆ, ಧಾರ್ಮಿಕ, ಸಾಮಾಜಿಕ, ರಾಜಕೀಯ ವಿಷಯಗಳ ಬಗ್ಗೆ ಚರ್ಚೆ ಈ ಮುಂತಾದ ಕಾರ್ಯಗಳು ಅವಶ್ಯವಾದವುಗಳು ಇಂಥ ಕಾರ್ಯಗಳನ್ನು ಆದಿತ್ಯವಾರಕ್ಕೊಮ್ಮೆ ೧ ತಾಸಿನವರೆಗಾದರೂ ಸುಶಿಕ್ಷಿತರು ಕೂಡಿಕೊಂಡು ಒಂದು ಸಾರ್ವಜನಿಕ ಸ್ಥಳದಲ್ಲಿ ಕ್ರಮ ಬದ್ಧರೀತಿಯಿಂದ ತಪ್ಪದೆ ನಡೆಯಿಸುತ್ತ ಹೋದರೆ ಪರಸ್ಪರರಲ್ಲಿ ಬೇರೂರಿದ ವೈಮನಸ್ಸು ವಿಪರೀತ ಗ್ರಹಿಕೆಗಳೆಲ್ಲ ಬಯಲಾಗಿ ಕಾರ್ಯಕಲಾಪಗಳು ಸುಸೂತ್ರವಾಗಿ ಸಾಂಗವಾಗುವವು. ಕ್ಲಬ್ಬುಗಳನ್ನು ಸ್ಥಾಪಿಸಿ ಚಹಾಪಾರ್ಟಿ, ಇಸ್ಪೀಟು, ಕೇರಂಬೋರ್ಡಗಳನ್ನು ಪ್ರಚಾರದಲ್ಲಿ ತರುವದಕ್ಕಿಂತಲೂ ಮೇಲ್ಕಂಡ ಉಪಯುಕ್ತ ವಿಷಯಗಳನ್ನು ಬಳಿಕೆಯಲ್ಲಿ ತಂದದ್ದಾದರೆ ನಮ್ಮಲ್ಲಿ ಒಳ್ಳೆ ಬಂಧುರವಾದ ಸಂಘಟನೆಯು ನೆಲೆಗೊಳ್ಳುವದರಲ್ಲಿ ಸಂದೇಹವಿಲ್ಲ.

ವೀರಶೈವರಲ್ಲಿ ಸಂಘಟನೆಗಳು ಚಿರಕಾಲ ಬಾಳಬೇಕಾಗಿದ್ದರೆ ಅವರು ತಮ್ಮಲ್ಲಿರುವ ಕೆಲವು ದೋಷಗಳನ್ನು ಬಿಟ್ಟು ಬಿಡುವದು ವಿಹಿತವಾಗಿದೆ. ಉದಾಹರಣಾರ್ಥವಾಗಿ ಸ್ವಾರ್ಥಪರಾಯಣತೆಯು ಮೊದಲನೆಯ ದೋಷವು. ಎಷ್ಟೋ ಜನರು ತಾವು ಸಮಾಜದ ಕೆಲಸ ಮಾಡುತ್ತೇವೆಂದು ಹೇಳಿ ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕೆಸುತ್ತಾರೆ. ಅದು ಜನತೆಗೆ ಗೊತ್ತಾದ ಕೂಡಲೆ ಅವರ ಬಗ್ಗೆ ಜನರ ಸಹಾಯ ಸಹಾನುಭೂ

ಪ್ರಸಂಗ ಬರುತ್ತದೆ. ಕಾರಣ ಸಂಘಟನೆಯಲ್ಲಿ ಕೆಲಸ ಮಾಡುವವರು ನಿಸ್ವಾರ್ಥಿಗಳಿರಬೇಕು. ಇಲ್ಲವೆ ಪಗಾರ ತೆಗೆದುಕೊಂಡು ಕೆಲಸ ಮಾಡುವವರನ್ನು ನೇಮಿಸಬೇಕು. ಇದೇ ಮೇರೆಗೆ ನಮ್ಮವರಲ್ಲಿ ಹಠವಾದಿತನವು ಇನ್ನೊಂದು ದೋಷವಿದೆ. ತಾನೇ ದೊಡ್ಡವನು, ತಾನು ಮಾಡಿದ್ದೇ ಸರಿ, ಆಡಿದ್ದೇ ವೇದವಾಕ್ಯ, ಉಳಿದವರು ಹೇಳಿದ್ದು ನಿರರ್ಥಕವೆಂಬ ಅರಣ್ಯ ಪಂಡಿತರು ಉಳಿದವರೊಡನೆ ಮಾದ ಕೂಡಿ ರಾಜಿಯಾಗದೆ ಮೂರುಪಾಲು ಹೊಡೆದಾಡಿ ಬಹುದಿನಗಳಿಂದ ನಡೆಯುತ್ತ ಬಂದ ಸಂಘ ಸಂಸ್ಥೆಗಳನ್ನು ಗೊತ್ತಿಗೆ ಹಚ್ಚಿಬಿಡುವರು ಅಂಥ ಹಠವಾದಿಗಳಿಗೆ ಸಂಘಟನೆಯ ಜಾಲಕತ್ವವನ್ನು ಎಂದಿಗೂ ಕೊಡಲಾಗದು ನಮ್ಮವರಲ್ಲಿ ಅಸಹಿಷ್ಣುತೆಯು ಬೇರೊಂದು ದೋಷವಿದೆ. ನಮ್ಮಲ್ಲಿ ಎಷ್ಟೋ ಜನರಿಗೆ ತಾವೂ ಸ್ವತಃ ಕೆಲಸ ಮಾಡುವದಿಲ್ಲ, ಮಾಡುವವರಿಗೂ ಸೇರುವದಿಲ್ಲ. ಮಾಡುವವರಿಗೆ ತೊಡರುಗಾಲು ಬಡಿದು ಕೆಡವಿದರೇ ಅವರಿಗೆ ಸಮಾಧಾನ. ಅವರ ವಿರುದ್ಧ ಅಲ್ಲದ ಸಲ್ಲದ ನಿಂದೆಗಳನ್ನಾಡಿ ಅವಮಾನಗೊಳಿಸಿ ನಡೆಯುವ ಕಾರ್ಯಗಳಿಗೆ ಇತಿಶ್ರೀ ಮಾಡಿಬಿಡುವರು ಆದ್ದರಿಂದ ಕಂಡರೆ ಸೇರದ ಕೋಡಿ ಜನಗಳಿಗೆ ಸಂಘದಲ್ಲಿ ಆಸ್ಪದವಿರಬಾರದು. ಅನಿಯಮಿತತನವು ನಮ್ಮಲ್ಲಿ ಕಂಡು ಬರುವ ನಾಲ್ಕನೆಯ ದೋಷವು. ಯಾವದಾದರೂ ಸಭೆ ಅಥವಾ ಕಮೀಟಿಯನ್ನು ಕರೆದರೆ ಕೆಲವು ಮಹನೀಯರಂತೂ ಅದನ್ನು ತಪ್ಪಿಸಿಯೇ ಬಿಡುವರು ಕೆಲವರು ತಡಮಾಡಿ ಬಂದು ಕುರ್ಚಿ ಸಿಕ್ಕುವದೋ ಹೇಗೆಂದು ಟಕ ಮಕ ನೋಡುತ್ತ ನಿಲ್ಲುವರು. ನಿಯಮಿತ ವೇಳೆಗೆ ಬಂದು ಕೆಲಸ ಮಾಡಬೇಕೆಂಬ ಜಾಣರು ಬಹು ವಿರಳ. ಅಂಥ ಸುಬುದ್ಧಿಯು ನಮ್ಮ ಜನಗಳಿಗೆ ಬಂದರೆ ಸಾಕು. ಅಂದೇ ನಮ್ಮ ಸಮಾಜದ ದೈವವು ತೆರೆಯಿತೆನ್ನಬೇಕು. ಪಾಪ! ಆ ಜನಗಳು ಎಷ್ಟೋ ಸಂಭಾವಿತರಿರಬಹುದು. ಆದರೆ ವೇಳೆಗೆ ಸರಿಯಾಗಿ ಸಭೆಗೆ ಬರಲಿಕ್ಕೆ ಅವರಿಗೆ ಆಗದಿದ್ದರೆ ಅವರ ಸಂಭಾವಿತಗಿರಿಯನ್ನು ತೆಗೆದುಕೊಂಡೇನು ಮಾಡಬೇಕು? ಇಂಥ ಮುಗ್ಧ ಲಗೇಡಿಗಳಿಂದ ಸಮಾಜದ ಯಾವ ಸಂಘಟನಾಕಾರ್ಯಗಳೂ ನಡೆಯಲಾರವು. ನಮ್ಮವರ ಮತ್ತೊಂದು ದೋಷವೆಂದರೆ ನಿಯಮ ಬಾಹ್ಯತ್ವ ಯಾವದೇ ಸಂಘವು ಸುಸಂಘಟಿತವಾಗಿ ನಡೆಯಬೇಕಾದರೆ ಕೆಲವು ನಿಯಮ ಉಪನಿಯಮಗಳು ಅವಶ್ಯವಾಗಿ ಬೇಕು. ಮೊದಲು ನಿಯಮವನ್ನು ಮಾಡದೆ ಎಂದಿಗೂ ಯಾವ ಸಂಘವನ್ನು ಸ್ಥಾಪನೆ ಮಾಡ

ಬಾರದು. ಕಂಡಕಂಡವರು ಸಂಘಗಳಲ್ಲಿ ಸೇರಿ ತಮ್ಮ ಅಭಿಪ್ರಾಯವನ್ನೇ ನಡೆಯಿಸಹತ್ತಿದರೆ ಕಾರ್ಯಗಳು ಸುಸೂತ್ರವಾಗಿ ನಡೆಯುವ ಸಂಭವವಾದರೂ ಹೇಗೆ? ಆದ್ದರಿಂದ ಒಂದು ಸಂಘಕ್ಕೆ ಒಳಪಟ್ಟ ಜನಗಳು ಕೆಲವು ವಿಶಿಷ್ಟವಾದ ನಿಯಮಗಳಿಗೆ ಬದ್ಧರಾಗಿ ನಡೆಯಲೇಬೇಕು. ನಿಯಮಗಳಿಗೆ ವಿರೋಧವಾಗಿ ನಡೆಯುವವರನ್ನು ಸಂಘದಲ್ಲಿ ಎಂದಿಗೂ ಸೇರಿಸಿಕೊಳ್ಳಬಾರದು. ಈ ಪ್ರಕಾರ ಮೇಲ್ನುಡಿಸಿದ ದೋಷಗಳನ್ನು ಹೋಗಲಾಡಿಸಿದರೆ ಮಾತ್ರ ನಮ್ಮಲ್ಲಿ ಸಂಘಟನೆಯು ಕ್ರಮಬದ್ಧವಾಗಿ ಸಾಗುವದೆಂಬದನ್ನು ಎಲ್ಲರೂ ಲಕ್ಷಿಸತಕ್ಕದ್ದು.

ಜೀವಾನುಭವವೂ ಶಿವಾನುಭವವೂ.

(ಲೇಖಕ:– ಬಸವಪ್ಪ ಚಿನ್ನಪ್ಪ ಪಟ್ಟೇದ, ವಂಟಮುರಿ.)

ಜೀವ, ಜಗತ್ತು, ಶಿವ ಈ ಮೂರು ವಸ್ತುಗಳು ಯಾವಾಗಲೂ ತತ್ವಶಾಸ್ತ್ರಜ್ಞರ ಕಣ್ಣು ಮುಂದಿರುತ್ತವೆ. ಮನುಷ್ಯನೇ ಮುಖ್ಯವಾಗಿ ಜೀವನೆನಿಸುವನು. ಈ ಜೀವವನ್ನು ಶಿವನಲ್ಲಿ ಪರಿವರ್ತಿಸುವದೇ ನಮ್ಮ ಜನ್ಮದ ಗುರಿಯೆಂದು ಭಾರತೀಯರು ನಂಬಿರುವರು. ವೀರಶೈವರಂತೂ ಕೇವಲ ಅದೊಂದನ್ನೇ ಪ್ರಾಮುಖ್ಯವಾಗಿ ಮಾಡಿಟ್ಟುಕೊಂಡಿರುವರು.

ಮನುಷ್ಯನು ಜನ್ಮಿಸಿದ ಕೂಡಲೆ ಈ ಸೃಷ್ಟಿಯೆನ್ನು ನೋಡುತ್ತಾನೆ. ಅದು ಅವನಿಗೆ ಒಳ್ಳೇ ಮನೋಹರವಾಗಿ ತೋರುತ್ತದೆ. ಅದರೊಳಗಿನ ಪದಾರ್ಥಗಳು ತನ್ನ ಪೋಷಣೆಗೂ ಆನಂದಕ್ಕೂ ಅತ್ಯವಶ್ಯವಾದುವೆಂಬುದನ್ನು ಅವನು ಚಿಕ್ಕಂದಿನಿಂದಲೇ ಅರಿತುಕೊಳ್ಳಹತ್ತುವನು. ಅವನ ವಯಸ್ಸು ಹೆಚ್ಚಿ, ಬುದ್ಧಿ ಹಾಗು ಜ್ಞಾನೇಂದ್ರಿಯಗಳು ಬಲಪಡುತ್ತ ನಡೆದಂತೆ ಅವನು ಹೆಚ್ಚೆಚ್ಚು ವಿಷಯಗಳಲ್ಲಿ ಪ್ರವೇಶಿಸುತ್ತಲೂ

ಮಣ್ಣು ಇತ್ಯಾದಿ ಜಗದೊಳಗಿನ ಸರ್ವಪದಾರ್ಥಗಳನ್ನೂ ಸಂಗ್ರಹಿಸಿ, ತಾನು ಅವುಗಳ ಸುಖಪಡೆಯಬೇಕೆಂದು ಬಯಸುವನು ಈ ವಿಧವಾಗಿ ಪ್ರಪಂಚದಲ್ಲಿ ಕೇವಲ ಬೆರೆದುಹೋಗುವನು. ಅವನಿಗೆ ತನ್ನ, ಮತ್ತು ತನ್ನ ಸುಖದ ಮುಂದೆ ಬೇರೊಂದರ ಎಚ್ಚರವೇ ಉಳಿಯದಂತಾಗುವದು. ಆಗ ದೇಹವೇ ತಾನೆಂದು ಅಹಂಕರಿಸಿ ಅನ್ಯಾಯದಿಂದ ನಡೆಯಲು ಕೂಡ ಹಿಂಜರಿಯುವದಿಲ್ಲ. ಹೀಗೆ ತೀರ ಸ್ವಾರ್ಥಪರಾಯಣನಾಗುವನು. ತನಗೋಸ್ಕರ ಅದಷ್ಟು ಹೆಚ್ಚು ವಿಷಯಗಳನ್ನು ಸಂಗ್ರಹಿಸುವದೇ ಅವನ ಮುಖ್ಯ ಕರ್ತವ್ಯವಾಗಿ ಬಿಡುತ್ತದೆ. ಹೀಗೆ ವಿಷಯೋನ್ಮುಖವಾಗಿ ನಡೆಯುವ ಪ್ರವೃತ್ತಿಯೇ ಜೀವಾನುಭವವೆನ್ನಬಹುದು.

ಪ್ರವೃತ್ತಿವಿಡಿದು ನಡೆಯುವಾಗ ಮನುಷ್ಯನಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ತಮೋಗುಣಗಳು ತಲೆದೋರಿ ಸ್ಥಿರಪಡುತ್ತವೆ. ಇವು ಮಿತವಾಗಿ ವಾಸಿಸಿ, ವಿವೇಕದಿಂದ ಉಪಯೋಗಿಸಲ್ಪಟ್ಟರೇನು ಕೆಡಕಲ್ಲ! ಆದರೆ ಜೀವನು ಅತ್ಯಾಶೆಗೊಳಗಾಗಿ ಸ್ವಾರ್ಥಲೋಲುಪನಾಗಿ ಅವುಗಳ ದುರುಪಯೋಗವನ್ನು ಮಾಡುತ್ತಾನೆ. ನ್ಯಾಯಾನ್ಯಾಯಗಳನ್ನು ಲೆಕ್ಕಿಸದೆ, ಅನ್ಯರನ್ನು ಗೋಳಾಡಿಸಲಿಕ್ಕೆ ಹಿಂದುಮುಂದೆ ನೋಡುವದಿಲ್ಲ. ಮನವನ್ನೂ ಇಂದ್ರಿಯಗಳನ್ನೂ ತನ್ನ ವಶದಲ್ಲಿಟ್ಟುಕೊಳ್ಳಲಿಕ್ಕೆ ಅಸಮರ್ಥನಾಗಿ ತಾನೇ ಅವುಗಳ ಆಧೀನನಾಗಿ ಸೂತ್ರಗೊಂಬೆಯಂತೆ ಬೆಂಬಳಿಸಹತ್ತುವನು. ಆಗ ಈ ಕಾಮಾದಿಗಳು ಷಡ್ವೈರಿಗಳಂತೆ ಪರಿಣಮಿಸುವವು. ಜೀವನ ಉದ್ಧಾರಕ್ಕೆ ಅಂದರೆ ಶಿವನಲ್ಲಿ ಬೆರೆಯಲಿಕ್ಕೆ ಇವು ಕಂಟಕಗಳಾಗುವವು. ಆದುದರಿಂದ ಇವುಗಳಿಗೆ ಭವ ಗುಣಗಳೆಂದೂ ಹೆಸರು. ಇವನ್ನು ಅವಲಂಬಿಸುವವನೇ "ಭವಿ" ಎಂದು ಲಿಂಗಾಯತರು ಹೇಳುವರು. ಅಕ್ಕಮಹಾದೇವಿಯವರು:— "ಶೀಲ ಶೀಲವೆಂದು ಎಂತೆಂಬಿರಯ್ಯ? ಶೀಲದ ನೆಲೆಯ ಬಲ್ಲರೆ ಹೇಳಿರೋ? ಅರಿಯದಿದ್ದರೆ ಕೇಳಿರೋ! ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಆವಿಷ ಇಂತೀ ಏಳು ಭವಿಗಳನ್ನು ತಮ್ಮೊಳಿಟ್ಟುಕೊಂಡು ಲಿಂಗನಿಲ್ಲದವರ ಭವಿಯೆಂಬರು. ತಮ್ಮ ಅಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನ್ನರಿಯದೆ ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯ ಪ್ರಸಾದಿಗಳೆಂದು ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನವೆರೆವ ಹೆಗಲುಗಳ್ಳರಿಂಗೆ ಮೆಚ್ಚುವನೇ ಚೆನ್ನಮಲ್ಲಿಕಾರ್ಜುನ?" ಎಂದು ಹೇಳಿದ್ದಾರೆ.

ಈ ಪ್ರಕಾರ ಸಂಸಾರ ಮಗ್ನನಾಗಿ ಜೀವನು ವರ್ತಿಸುತ್ತಿರಲು ಅವನಿಗೆ ಲೋಕಾನುಭವವು ಬರಹತ್ತುವದು. ತನಗೆ ಪ್ರಾಣದಂತಿರುವ ತಂದೆ-ತಾಯಿ, ಬಂಧು-ಬಳಗ, ಹೆಂಡಿರು-ಮಕ್ಕಳು, ಇಷ್ಟ-ಮಿತ್ರರು, ಮೊದಲಾದವರ ವಿಯೋಗವಾಗುವದನ್ನು ಕಾಣುವನು. ಅದರಂತೆ ಯಾವ ಪದಾರ್ಥವಾದರೂ ಸ್ಥಿರವಾಗಿರದೆ ಕೆಲಕಾಲದ ತರುವಾಯ ವಿನಾಶ ಹೊಂದುವದೆಂದು ಮನಗಾಣುವನು. ಮೊದಲು ಅವುಗಳನ್ನು ಪಡೆಯಲಿಕ್ಕೆ ತನಗೆ ಅತ್ಯಂತ ಕಷ್ಟವಾಗಿದ್ದು ಹೀಗೆ ಒಮ್ಮಿಂದೊಮ್ಮೆ ಇಲ್ಲವಾಗುವದನ್ನು ನೋಡಿ, ಅವನು ಮರುಗಹತ್ತುವನು. ಆಗ ವಿಷಯಗಳಿಂದುಂಟಾಗುವ ಸುಖವು ಅಶಾಶ್ವತವೆಂದೂ ಅವನ್ನು ಹೆಚ್ಚಾಗಿ ಮೋಹಿಸುವದು ದುಃಖಕ್ಕೆ ಕಾರಣವೆಂದೂ ಅವನ ತಿಳುವಳಿಕೆಯಾಗುವದು. ಇದರಿಂದ ವಿಷಯ ಸಂಗ್ರಹದ ಅವನ ಆಶೆಯು ಹಿಮ್ಮೆಟ್ಟುವದು. ವಿಷಯಗಳು ಸುಖದ ನಿಜವಾದ ಕಾರಣವಲ್ಲೆಂದು ಅವನು ಅರಿಯುವನು. ಆಗ ಸತ್ಯ ಮತ್ತು ಶಾಸ್ವತ ಸುಖವನ್ನು ಪಡೆಯಲಿಕ್ಕೆ ಅವನು ಪ್ರಯತ್ನಿಸುವನು. ಅದು ಜಗತ್ತಿನಲ್ಲಿರದೆ, ಅದರ ಹೊರಗೆಯೇ ಇರುವದೆಂದು ನಿಶ್ಚಯಿಸುವನು. ಮತ್ತು ಅದರ ಶೋಧಕ್ಕೆ ತೊಡಗುವನು. ಇದು ಅವನ ಮೊದಲಿನ ಪ್ರವೃತ್ತಿ ಮಾರ್ಗದ ತೀರ ವಿರುದ್ಧ ವಿರುವದರಿಂದ ಇದು ನಿವೃತ್ತಿಮಾರ್ಗವೆಂದು ಹೇಳಬಹುದು.

ನಿವೃತ್ತಿ ಮಾರ್ಗದಲ್ಲಿ ಚರಿಸಿ ಪ್ರಗತಿ ಹೊಂದಿದವರನ್ನು ಲೋಕದಲ್ಲಿ ಜ್ಞಾನಿ, ಸತ್ಪುರಷ, ಮಹಾತ್ಮರೆಂದು ಕರೆಯುವದುಂಟು. ಇವರಿಗೆ ವೀರಶೈವರು ಶರಣರೆಂದು ಸಂಬೋಧಿಸುವರು. ಇಂತಹ ಮಹನೀಯರು ವಿರಲವಾಗಿರುವರೆಂದು ಬೇರೆ ಹೇಳುವ ಕಾರಣವೇ ಇಲ್ಲ. ಇವರು ಶಾಂತರೂ, ಧೀರರೂ, ವೀರರೂ ಆಗಿ, ಯಾವದಕ್ಕೂ ಹೆದರದೆ ಬೆದರದೆ ಎಲ್ಲವನ್ನೂ ಆನಂದದಿಂದಲೇ ಸಹಿಸುತ್ತಿರುವರು. ಲೋಕಾನುಭವದಿಂದ ದೂರಿರುವರು. ಮನಸನ್ನು ಆಳುವ ಶಕ್ತಿಯು ಅವರಲ್ಲಿ ಅಳವಟ್ಟಿರುವದು. ವ್ಯಕ್ತಿಸ್ವಾರ್ಥವನ್ನು ಅವರು ಎಂದೋ ಹೊಡೆದು ಹಾಕಿಬಿಟ್ಟಿರುವರು. ಪರಹಿತವೇ ತಮ್ಮ ಕರ್ತವ್ಯವೆಂದು ಪೂರಾ ಮನಗಂಡಿರುವರು. ಅದರಲ್ಲಿಯೇ ತಮ್ಮ ಹಾಗು ಜಗತ್ತಿನ ನಿಜವಾದ ಕಲ್ಯಾಣವಿರುವದೆಂದು ದೃಢವಾಗಿ ನಂಬಿರುವರು. ನಿವೃತ್ತಿಯ ಕಡೆಗೆ ತಿರುಗಿದ

ಅವರಂಗೆ ಮೊರೆಯಿಟ್ಟು ತನ್ನನ್ನು ಬೋಧಿಸಿ ಉದ್ಧರಿಸಬೇಕೆಂದು, ವಿನಯದಿಂದ ಬೇಡಿಕೊಳ್ಳುವನು. ಅವರ ಮಾರ್ಗವೇ ಶಿವಮಾರ್ಗವು. ಅವರ ಅನುಭವವೇ ಶಿವಾನುಭವವು. ಶಿವಾನುಭವವನ್ನು ಮಾತ್ರ ಬಹು ಪ್ರಯಾಸದಿಂದ ಪಡೆಯಬೇಕಾಗುತ್ತದೆ.

ಜೀವಾನುಭವವು ದೇಹರಕ್ಷಣೆಗೆ ಅವಶ್ಯವಾದದ್ದು. ಆದರೆ ಶಿವಾನುಭವವು ಆತ್ಮೋದ್ಧಾರಕ್ಕೆ ಪ್ರಯೋಜನಕಾರಿಯು. ಇವೆರಡೂ ಮನುಷ್ಯನಿಗೆ ಬೇಕಾಗಿದ್ದರೂ ಮೊದಲನೆಯದು ಎರಡನೆಯದರ ಸಾಧನವಾಗಿರುವದೇ ಯೋಗ್ಯವು. ಇದಕ್ಕೆ ವಿಪರೀತವಾಗಿ ಜೀವಾನುಭವವೇ ಅಳತೆಗೆಟ್ಟು ಬೆಳೆದು, ಶಿವಾನುಭವದ ನೆನಪು ಸಹ ಆಗದಂತೆ ಸಂಪೂರ್ಣವಾಗಿ ಪರೆಯಿಸಿ, ತಾನೇ ಜೀವನದ ಸಾಧ್ಯವಾಗಿ ನಿಂತಿರುವದೇ ಹೆಚ್ಚಾಗಿ ನಮಗೆ ತೋರುತ್ತದೆ. ಇದು ಇಷ್ಟವಲ್ಲ. ವಿಷಯ ಪ್ರವೃತ್ತಿಯು ಇಷ್ಟಕ್ಕಷ್ಟೇ — ದೇಹರಕ್ಷಣೆಯ ಮಟ್ಟಿಗೆ ಮಾತ್ರ — ಇರಬೇಕು. ಶಿವಾನುಭವವೇ ನಮ್ಮ ಪ್ರಾಪ್ತವ್ಯವು. ಆದುದರಿಂದ ಇವೆರಡನ್ನೂ ಬಹು ಜಾಣ್ಮೆಯಿಂದ ಬೆರಿಸಿ ನಡೆಯುವದೇ ಮನುಷ್ಯನ ಕರ್ತವ್ಯವು. ಇದಕ್ಕೆ ವೀರಶೈವಮತವೇ ಅತ್ಯಂತ ಸುಕರವಾದುದು. ಅದರ ತತ್ವಗಳು ಜಗತ್ತಿಗೇ ಮಾನ್ಯವಾಗುವಂತಹವಿರುವವು. ಕಳೆದ ದಿಶಂಬರ ತಿಂಗಳಿನಲ್ಲಿ ಮದ್ರಾಸದೊಳಗೆ ಕೂಡಿದ ಅಖಿಲಭಾರತ ತತ್ವಶಾಸ್ತ್ರಜ್ಞರ ಸಭೆಯ ಮುಂದೆ, ಧಾರವಾಡದ ನವಕಲ್ಯಾಣ ಮಠದ ಶ್ರೀಕುಮಾರ ಸ್ವಾಮಿಗಳು, ನಮ್ಮ ಶಕ್ತಿವಿಶಿಷ್ಟಾದ್ವೈತ (ಲಿಂಗ) ತತ್ವವನ್ನು ಇಟ್ಟು, ಅನೇಕ ದೃಷ್ಟಾಂತಗಳೊಂದಿಗೆ ಪಾಶ್ಚಾತ್ಯ ಪೌರ್ವಾತ್ಯ ತತ್ವಗಳಿಗೆ ಹೋಲಿಸಿ ವಿಸ್ತರಿಸಿ, ಆ ಪರಿಷತ್ತನ್ನೆಲ್ಲ ಆನಂದಸಾಗರದಲ್ಲಿ ಮುಳುಗಿಸಿದ್ದೇ ಇದಕ್ಕೆ ಬಲವಾದ ದೃಷ್ಟಾಂತವಾಗಿದೆ. ಇಂತಹ ಮತತತ್ವಗಳನ್ನು ಅರಿದು ಆಚರಿಸದಿರುವ ವೀರಶೈವರು ಹತಭಾಗ್ಯರಲ್ಲವೇ? ಶ್ರೀ ದಿವಾಕರ ರಂಗನಾಥರಾಯರಾದರೂ ತಮ್ಮ ವಚನಶಾಸ್ತ್ರರಹಸ್ಯದಲ್ಲಿ ಇದೇ ಉದ್ಗಾರವನ್ನು ಹೊರಡಿಸಿಲ್ಲವೇ? ಹೀಗೆಯೇ ಅನೇಕ ಪರಸಮಯ ಪಂಡಿತರು ಮುಗ್ಧರಾಗಿ ಹೊಗಳುತ್ತಿಲ್ಲವೇ? ರಾ. ಬ. ಹಳಕಟ್ಟಿಯವರು ಇತ್ತಿತ್ತಲಾಗಿ ಅಲ್ಲಲ್ಲಿಗೆ ಶಿವಾನುಭವ ಸಂಘಗಳು ಸ್ಥಾಪಿತವಾಗಿ ನಮ್ಮ ಮತತತ್ವಗಳು ನಮಗೆ ಗೊತ್ತಾಗಿ ಆಪ್ರಕಾರ ನಡೆದು ನಾವು ಉದ್ಧಾರವಾಗಬೇಕೆಂಬ ಪವಿತ್ರ ಪುಣ್ಯಾಕಾಂಕ್ಷೆಯನ್ನು ತಳೆದಿರುವರಲ್ಲವೇ? ಅದಕ್ಕೆ

ಪ್ರತಿಯೊಬ್ಬ ವೀರಶೈವನು ಮನಃಪೂರ್ವಕವಾಗಿ ಸಹಾಯ ಮಾಡುವದು ಅವನ ಪರಮ ಕರ್ತವ್ಯವು! ಇತ್ತ ಸಮಾಜವು ಗಮನಿಸಬೇಕಾಗಿ ಪ್ರಾರ್ಥನೆ.

ಶಿವಾನುಭವ ಸಂಘಗಳು ಎಲ್ಲ ಕಡೆಯಲ್ಲಿ-ಪ್ರತಿಯೊಂದು ಊರಲ್ಲಿ ಸಹ ಆಗುವದು ಅತ್ಯಾವಶ್ಯಕವದೆ. ಅದರಿಂದ ನಮ್ಮ ಧರ್ಮದ ಸರ್ವೋತ್ಕೃಷ್ಟವಾದ ತತ್ವಗಳು ನನಗೆ ತಿಳಿಯುವವು. ಅವುಗಳಂತೆ ಆಚರಿಸಿದರೆ, ನಮ್ಮಲ್ಲಿ ಸಂಘಟನೆಯುಂಟಾಗಿ ಈಗ ಬಳಿಸಿಕೊಂಡು ಗೋಳಾಡಿಸುತ್ತಿರುವ ದುರ್ದೆಸೆಯು ಅಳಿದುಹೋಗಿ, ನಿಜವಾದ ಸುಖವನ್ನೂ ಉನ್ನತಿಯನ್ನೂ ಹೊಂದುವೆವು. ಆಕಾರಣ 'ಶಿವಾನುಭವ ಸಂಘ'ಗಳು ನಮ್ಮ ಸಮಾಜದ ಪ್ರಗತಿಗೆ ಪಂಚಪ್ರಾಣವಾಗಿವೆ. ಇವನ್ನು ಸರ್ವತ್ರ ರಚಿಸಿ, ಸರಿಯಾಗಿ ನಡಿಸಿಕೊಂಡು ಹೋಗಿ, ಅವುಗಳ ಮಧುರ ಫಲವನ್ನು ಸವಿದು ತಣಿದು ಕುಣಿದಾಡುವಾ, ಹೀಗ್ಹಾಗಬೇಕಾದರೆ ಒಂದು ಸಂಗತಿಯ ಅನುಕೂಲತೆಯು ಒಳಿತಾಗಿ ಉಂಟಾಗುವದು ಅತ್ಯಾವಶ್ಯವದೆ. ಅದೇನಂದರೆ— ಎಲ್ಲೆಡೆಯಲ್ಲಿಯೂ ಬಲ್ಲ ಹಾಗು ಸರಳವೃತ್ತಿಯ ಬೋಧಕರು ಬೇಕು! ಅದರ ಕೊರತೆಯು ಸದ್ಯಕ್ಕೆ ಬಹಳವಾಗಿದೆ. ಅಂತಿಂತಹ ಸ್ವಾರ್ಥಿಗಳು ಸೇರಿಕೊಂಡು ಅವುಗಳ ಗುರಿಯನ್ನೇ ತಪ್ಪಿಸಿ, ಪುನಃ ಮೊದಲಿನಂತೆ ತಪ್ಪುದಾರಿಯನ್ನೇ ಹಿಡಿಸಬಾರದೆಂಬ ಬಗ್ಗೆ ಬಹು ಎಚ್ಚರಪಡಬೇಕಾಗಿದೆ. ಹಳ್ಳಿಗಳಲ್ಲಂತೂ ಇರಲಿ, ದೊಡ್ಡ ಊರಗಳಲ್ಲಿಯೂ ಕೂಡ ಇವರು ದುರ್ಲಭವಾಗಿರುವರು. ಪೇಟೆಯ ಊರುಗಳಲ್ಲಿ ಬಹುಶಃ ಎಲ್ಲ ಕಡೆಗೆ ಮಠಗಳಿರುವವು. ಅವನ್ನು ಶಿವಾನುಭವದ ಅಸ್ತಿತ್ವಕ್ಕಾಗಿಯೇ ಅಲ್ಲಲ್ಲಿ ನಮ್ಮ ಪೂರ್ವಜರು ಬಹು ದೂರದೃಷ್ಟಿಯಿಂದುಂಟುಮಾಡಿದ್ದಾರೆ. ಅಲ್ಲಿಯ ಸ್ವಾಮಿಗಳು ತಾವು ನುರಿತ ಶಿವಾನುಭವಿಗಳಾಗಿ, ಅದರಂತೆ ಶಿವಭಕ್ತರೆಲ್ಲರಿಗೂ ಬೋಧಿಸಿ ಅವರ ಉದ್ಧಾರಮಾಡುವದೇ ಅವರ ಕರ್ತವ್ಯವು. ಮಠದಲ್ಲಿ ದಿನಾಲು ಶಿವಾನುಭವ ಸಾಗುವ ಏರ್ಪಾಡಿರುವದೇ ಆ ಸ್ಥಾನದ ಪಾವಿತ್ರ್ಯವು. ಆದರೆ ಈಗ ಆ ಮಠಗಳ ಗತಿ ಏನಾಗಿರುವದೆಂಬದನ್ನು ಹೇಳುವ ಅವಶ್ಯವಿಲ್ಲ. ಷಟ್‌ಸ್ಥಲಜ್ಞಾನಜ್ಯೋತಿಯೆಂಬ ತೇಜಸ್ವಿ ನಂದಾದೀಪವನ್ನು ಅಖಂಡವಾಗಿ ಉರಿಸುತ್ತ ಪರಿಶೋಭಿಸುವ ಮಠಗಳಲ್ಲಿ ಈಗ ಅಜ್ಞಾನಾಂಧಕಾರವು ಗಾಢವಾಗಿ ಮುಸುಕಿ

ಆಪವಾದವಾಗಿದ್ದಾರೆ. ಅವರು ಅಂತಃಕರಣ ಪೂರ್ವಕ ಮುಂದೆಬಂದು ಪ್ರಶಂಸನೀಯ ಕೆಲಸ ಮಾಡುತ್ತಿರುವದು ಅವರಿಗೆ ಬಹು ಭೂಷಣವು. ಅಂತಹ ಮೂರ್ತಿಗಳನ್ನ ಎಷ್ಟು ಸ್ತುತಿಸಿದರೂ ತೀರದು. ಆದರೂ ಸಾಮಾನ್ಯವಾಗಿ ಹೇಳುವದಾದರೆ ಮಠಗಳು ತಮ್ಮ ಪವಿತ್ರ ಕರ್ತವ್ಯದಿಂದ ಚ್ಯುತವಾಗಿರುತ್ತವೆಂದು ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ವಿರಕ್ತಮಠಗಳಿಗೂ ಕೂಡ ಇದು ಅನ್ವಯಿಸುತ್ತದೆ. ಇಲ್ಲಿಯ ಸ್ವಾಮಿಗಳಿಗೆ "ನಿರಂಜನ ಪ್ರಣವ ಸ್ವರೂಪಿ' ಎಂದು ವಿಶೇಷಣವನ್ನು ಹಚ್ಚದಿದ್ದರೆ ತೀರಿತು. ಇವರಿಗೆ ಬಹು ಸಿಟ್ಟುಬರುತ್ತದೆ. ಆದರೆ ಹಾಗೆಂದರೇ ನಂಬುದು ಮಾತ್ರ ಅದೆಷ್ಟು ಜನರಿಗೆ ಗೊತ್ತಿರುವದೋ ಶ್ರೀಪ್ರಭುವೇ ಬಲ್ಲನು! ಇವುಗಳ ಗತಿಯೇ ಹೀಗಾದ ಮೇಲೆ ಗುರುವರ್ಗದ ಅಂದರೆ ಹಟ್ಟಿಚರಮೂರ್ತಿಗಳ ಮಠಗಳನ್ನು ಕುರಿತು ಬರೆಯುವದರಲ್ಲಿ ಅರ್ಥವಿಲ್ಲ. ಇಂತಹ ಸ್ಥಿತಿಯಲ್ಲಿ ಅವರಿವರೆನ್ನದೆ, ಶಿವಾನುಭವದ ಪರಿಚಯವುಳ್ಳ ಬೇಕಾದ ಗೃಹಸ್ಥರು ಮುಂದೆ ಬಂದು, ಅವನ್ನು ಯೋಗ್ಯಮಾರ್ಗದಿಂದ ನಡಿಸಿಕೊಂಡು ಹೋಗುವದು ಅತ್ಯವಶ್ಯವದೆ. ತಮ್ಮ ತಮ್ಮ ಬುದ್ಧಿ ಪ್ರವೃತ್ತಿಗಳಿಗನುಸರಿಸಿ ಬೇಕಾದ ಕಾಯಕವನ್ನು ಮಾಡಲಿಕ್ಕೆ, ವೀರಶೈವರಲ್ಲಿ ಎಲ್ಲರಿಂಗೂ ಗಂಡಸರಿಗೂ ಹೆಂಗಸರಿಗೂ ಕೂಡ ಸಮಾನಾಧಿಕಾರವಿದೆ. ಧರ್ಮದಲ್ಲಿರುವ ವಿಷಮತೆಯನ್ನು ತೆಗೆದುಹಾಕಿ ಸಮತ್ವವನ್ನು ಸ್ಥಾಪಿಸುವದೇ ನಮ್ಮ ಮತದ ವೈಶಿಷ್ಟ್ಯವಾಗಿದೆ. ಶ್ರೀ ಬಸವ ಮಹಾತ್ಮನು ಸಾಧಿಸಿದ ಮಹತ್ಕಾರ್ಯವು ಇದೇ! ಆದ್ದರಿಂದ ಯಾರಿದ್ದರೂ ಕೂಡ ಶಿವಾನುಭವ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ಧರ್ಮಬೋಧೆಯ ಕಾರ್ಯಗಳು ಇಡೀ ದೇಶದಲ್ಲಿ ನಡೆಯುವಂತಾಬೇಕು.

ಶಿವಾನುಭವ ಸಂಘಗಳು ಅತಿ ಪವಿತ್ರವಾದ ಸಂಸ್ಥೆಗಳು. ಅಲ್ಲಿ ನಿಜಸ್ಥಿತಿಯನ್ನೇ ಯಾವಾಗಲೂ ಪ್ರತಿಪಾದಿಸುತ್ತಿರಬೇಕು. ತಾತ್ವಿಕ ರೀತಿಯಿಂದ ಇದ್ದದ್ದಕ್ಕಿದ್ದ ಹಾಗೆ ಬಿಚ್ಚಿಡುವದು ಬಹು ಅಗತ್ಯವಾದದ್ದು. ವ್ಯಕ್ತಿಯ ಪ್ರಸ್ತಾಪವೆತ್ತದೆ, ಸಾಮಾನ್ಯವಾಗಿ ನಿಜಸಂಗತಿಯನ್ನು ಒತ್ತಿ ನಿರೂಪಣ ಮಾಡಲೇಬೇಕು. ಆದರಿಂದ ಯಾರ ಮನವಾದರೂ ನೊಂದೀತೆಂದು ಸಂದೇಹಕ್ಕಾಗಲಿ, ದಾಕ್ಷಿಣ್ಯಕ್ಕಾಗಲಿ ಒಳಪಡಬಾರದು. ಪಕ್ಷಪಾತ ಮಾಡಬಾರದು. ಹಾಗೆ ಮಾಡುವದರಿಂದ ತಮ್ಮ ಮೇಲೆ ಜನ

ಕ್ಷೋಭೆಯಾದೀತೆಂದು ಹಿಂಜರಿಯುವಾರದು. ಈಗ ನಮ್ಮಲ್ಲಿ ಸಾಮಾನ್ಯ-ವಿಶೇಷ-ನಿರಾಧಾರ ಈ ಮೂರೂ ವರ್ಗಗಳಲ್ಲಿಯೂ ಕುಂದುಕೊರತೆಗಳು ಸಂಪೂರ್ಣ ತುಂಬಿ ಹೋಗಿವೆ. ಅವು ತಿಳಿಯದೆ ಉಂಟಾಗಿರಲಿ, ಬುದ್ಧ್ಯಾ ಸೇರಿರಲಿ, ಅವನ್ನು ಬೈಲಿಗೆಳೆದು ನಿರ್ನಾಮವಾಗುವಂತೆ ಮಾಡಲೇಬೇಕು. ಅವನ್ನು ಒತ್ತಿ ಹಾಗೇ ಇಟ್ಟರೆ ಇದ್ದ ಸ್ಥಿತಿಯೇ ಸ್ಥಿರವಾಗಿ ಮುಂದೆಯೂ ಉಳಿದುಬಿಡುವದು. ಅದರಿಂದ ಜೀವಾನುಭವವೇ ಅಂದರೆ ಭವಿಷ್ಯವೇ ಮತ್ತಿಷ್ಟು ಬಲಿತು ನಮ್ಮ ಉದ್ಧಾರವು ಕೈಗೂಡದು. ಹೀಗಾದರೆ ಶಿವಾನುಭವ ಸಂಘಗಳ ಪ್ರಯೋಜನವೇನು? ನಮ್ಮ ಸಮಾಜದ ಸಂಘಟನೆಯಾಗಿ ಸುದಿನಗಳನ್ನು ಉದಯಿಸುವದೆಂತು? ಬೋಧಕರು ಸ್ವತಃ ತಮ್ಮಲ್ಲಿ ಹಾಗು ತಮ್ಮ ವರ್ಗದವರಲ್ಲಿ ಇರುವ ದೋಷಗಳನ್ನು ಮುಚ್ಚಿಟ್ಟು, ತಿರುಗಿ ಅವೇ ಯೋಗ್ಯವೆಂದು ಬಣ್ಣಿಸುವ ಪ್ರಯತ್ನಕ್ಕೆ ಎಂದೆಂದೂ ಬೀಳಕೂಡದು. ಎಷ್ಟೋ ಕಡೆ ಹೀಗಾಗುವದು ಕಂಡುಬರಹತ್ತಿದುದರಿಂದಲೇ ಈ ಬಗ್ಗೆ ವಿಶೇಷ ವಿಸ್ತರಿಸಬೇಕಾಯಿತು. ಈ ವಿಷಯದಲ್ಲಿ ಶ್ರೀ ಬಸವಣ್ಣನವರು 'ತಂದೆ ಮಕ್ಕಳಿಗೆ ಮುನಿವಲ್ಲಿ ಅವರ ಗುಣಕ್ಕೆ ಮುನಿವನಲ್ಲದೆ ಅವರ ದೇಹಕ್ಕೆ ಮುನಿಯ. ಒಬ್ಬ ಲಿಂಗಭಕ್ತನು ಮತ್ತೊಬ್ಬ ಲಿಂಗಭಕ್ತನಿಗೆ ಬುದ್ಧಿಯ ಹೇಳುವಲ್ಲಿ ಅವನ ಆಚಾರಕ್ಕೆ ಮುನಿವನಲ್ಲದೆ ಲಾಂಛನಕ್ಕಲ್ಲ.' ಎಂದೂ 'ಅಪ್ಪಯನಕ್ಕೆ ನೀಡುವೆ ಲಾಂಛನಕ್ಕೆ ಶರಣೆಂಬೆ. ತಕ್ಕ ಆಚಾರವಿಲ್ಲದಿದ್ದರೆ ಕೂಡಲಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆ' ಎಂದೂ ಹೇಳಿದ್ದಾರೆ. ಅದರಂತೆ ಶ್ರೀ ಪ್ರಭುದೇವರಾದರೂ 'ಜಂಗಮ ಘನವೆಂಬೆನೆ? ಜಂಗಮ ಬೇಡಿದಾಗಳೆ ಕಿರಿದಾಯಿತ್ತು! ತನು ಬತ್ತಲೆ ಇದ್ದಡೇನಯ್ಯ ಮನ ಶುಚಿಯಾಗದನ್ನಕ್ಕರ! ಮುಂಡೆ ಬೋಳಾದಡೇನು ಭಾವ ಶುದ್ಧವಾಗದನ್ನಕ್ಕರ! ಇಂತೀ ಅಶಿಯ ವೇಷದ ಭಾಷೆಗೆ ಗುಹೇಶ್ವರ ಸಾಕ್ಷಿಯಾಗಿ ಛೀ ಎಂಬೆನು ಕಾಣಾ!' ಎಂದು ಗದ್ದರಿಸಿ ಬಿಟ್ಟಿರುವರು.

"ನ ಬ್ರೂಯಾತ್ ಸತ್ಯಮಪ್ರಿಯಂ" ಎಂದು ಹೇಳಿದ್ದು ಕೇವಲ ಲೌಕಿಕ ಹಾಗು ಸ್ವಾರ್ಥಪರ ವಿಚಾರವು. ಸತ್ಯ ಒಂದನ್ನೇ ಅನುಸರಿಸಿ ನಡೆಯುವ ನ್ಯಾಯನಿಷ್ಠುರ, ದಾಕ್ಷಿಣ್ಯ ಪರನಲ್ಲದ ಶರಣನು ಆರಾರಿಗೂ ಅಂಜುವನಲ್ಲೆಂಬುದನ್ನು ಶಿವಾನುಭವ ಬೋಧಕರು ನೆನೆಯು

ಬೇಕು. ಇದು ವರೆಗೆ ಬಾಯಿ ಮುಚ್ಚಿಕೊಂಡು ಅಸತ್ಯ ಅನಾಚಾರಗಳಿಗೆ 'ಬ್ರ' ಎಂದು ಮಾತಾಡದೆ ಸುಮ್ಮನಿದ್ದುದರ ಪರಿಣಾಮವನ್ನೇ ಈಗ ನಾವು ಭೋಗಿಸುತ್ತೇವೆಂದನ್ನು ಎಲ್ಲರೂ ಲಕ್ಷ್ಯಕ್ಕೆ ತರಬೇಕು. 'ತಾ ಶಿವಭಕ್ತನಾಗಿ ಬಂಧುಗಳ ಭವಿತನದಲ್ಲಿರಿಸಬಾರದಯ್ಯ! ಮಾತಿಸಿಂದಾಗಲಿ, ಮನದಿಂದಾಗಲಿ, ಭೀತಿಯಿಂದಾಗಲಿ, ಶಿವಭಕ್ತಿಯಲ್ಲಿ ಪೂರಯಿಸುವದಯ್ಯ. ಕಪಿಲಸಿದ್ಧಮಲ್ಲಿಕಾರ್ಜುನಾ' ಎಂದು ಸಿದ್ಧರಾಮೇಶ್ವರದೇವರು ಆಗ್ರಹಪಡುತ್ತಾರೆ. ಸಾರಾಂಶವೇನೆಂದರೆ— 'ಕಂಡದ್ದನಾಡಿದರೆ ಕೆಂಡದಂತಾಗುವರು' ಎಂಬ ಭೀತಿಯನ್ನು ತಿಲಮಾತ್ರವೂ ಮನಸ್ಸಿನಲ್ಲಿ ತಾರದೆ, ಸತ್ಯವಾದದನ್ನೇ ಸ್ಪಷ್ಟವಾಗಿ, ಶಿವಾನುಭವ ನಡೆದಾಗ ವಿವರಿಸುವ ದಿಟ್ಟತನವನ್ನು ಬೋಧಕರು ಅವಶ್ಯವಾಗಿ ವಹಿಸಬೇಕು. ಅದನ್ನು ಎಲ್ಲರೂ ನಿರ್ವಿಕಾರ ನಿರ್ಮಾತ್ಸರ್ಯದಿಂದ ಆಲಿಸಿ, ಹಾಗೆ ಆಚರಣೆಯಲ್ಲಿ ತರಲು ಪ್ರಯತ್ನಿಸಬೇಕು. ಇವೇ ನಿಜವಾದ ಉದ್ಧಾರ ಮಾರ್ಗವು.

ದೇಹವನ್ನು ಪ್ರೀತಿಸಿ ರಕ್ಷಿಸಿಕೊಂಡು ಹೋಗಲಿಕ್ಕೆ ಯಾರೂ ಬೇಡೆನ್ನುವದಿಲ್ಲ. ಆದರೆ ಅದಕ್ಕೂ ಮಹತ್ವದ್ದಿಂದರೆ ಶಿವಾನುಭವಿಯಾಗಿ ಅದರಂತೆ ವರ್ತಿಸುವದು. ಇದನ್ನು ಪಡೆಯದೆ ಹೋದರೆ ನಾವು ಹೊಂದಿದ ಈ ನರಜನ್ಮವು ವ್ಯರ್ಥವಾಗುವದು. 'ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ । ದುಃಖೋದಧೇಃ ಪಾರಂ ಗಂತುಂ ತರಯಾವನ್ನ ಭಿದ್ಯತೇ' ಮತ್ತು 'ಕಾ ತವ ಕಾಂತಾ ಕಸ್ತೇ ಪುತ್ರಃ। ಸಂಸಾರೋಯಮತೀವ ವಿಚಿತ್ರಃ ಕಸ್ಯ ತ್ವಂ ವಾ ಕುತ ಆಯಾತ ಸ್ತತ್ವಂ ಚಿಂತಯ ತದಿದಂ ಭ್ರಾತಾ' ಎಂದು ಎಚ್ಚರಿಸಿದ ಸಂಗತಿಯನ್ನು ಪ್ರತಿಯೊಬ್ಬನು ಲಕ್ಷದಲ್ಲಿಡಬೇಕು. ಈ ಮನುಜ ಜನ್ಮದಲ್ಲಿ ಮಾತ್ರ ಜ್ಞಾನವಿರುವದರಿಂದ ಇದಕ್ಕೆ ಇಷ್ಟೊಂದು ಮಹತ್ವವು ಬಂದಿದೆ. ಅದೇ ನಮ್ಮ ಅಭಿಮಾನಕ್ಕೆ ಆಸ್ಪದವಾಗಿದೆ. ಈ ಜನ್ಮದ ಹೊರತು ಉದ್ಧಾರಕ್ಕೆ ಮಾರ್ಗವಿಲ್ಲ. ಆದುದರಿಂದಲೇ ಈ ಜನ್ಮದ ಸಂಪೂರ್ಣ ಉಪಯೋಗವನ್ನು ಹೊಂದಬೇಕು. ಶಿವಾನುಭವಿಯಾಗಿ ಶಿವಸುಖವನ್ನು ಪಡೆಯದೆ ಇದ್ದರೆ ಜನ್ಮವೇ ವ್ಯರ್ಥ! ಇದನ್ನು ಸ್ಮರಿಸದೆ ಪಶುತುಲ್ಯವಾಗಿ ಬರೇ 'ಆಹಾರ ನಿದ್ರಾ ಭಯ ಮೈಥುನಂ' ಗಳಲ್ಲಿಯೇ ಕಾಲಕಳೆದು ಸಾವುದುಚಿತವೇ? ಜೀವಾನುಭವವೂ

ದೇಕು. ಆದರೆ ಎಷ್ಟರಮಟ್ಟಿಗೆ? ಜೀವಧಾರಣದ ಮಟ್ಟಿಗೆ! ಅಷ್ಟು ಇದ್ದರೆ ಸಂತುಷ್ಟನಾಗಬೇಕು. ಹೆಚ್ಚಿಗೆ ದೊರೆದರೆ, ಅದನ್ನು ಮೋಹಿಸಿ ಮುಚ್ಚಿಕೊಂಡು ಕೂಡ್ರುವದು ಸರಿಯಲ್ಲ. ಅದರ ಉಪಯೋಗವು ತನಗಾಗದೆ ಅಲ್ಲೇ ಉಳಿಯುವದು. ತಾನು ಸತತೋದ್ಯೋಗಿಯಾಗಿ ದುಡಿಯಬೇಕು. ತನ್ನ ಚರಿತಾರ್ಥ ಸಾಗಿಸಿ ಉಳಿದುದನ್ನು ಸತ್ಪಾತ್ರದಲ್ಲಿ ಪರಹಿತಕ್ಕೆ ಸವಿಸಬೇಕು. ಅದೆಲ್ಲ ಹಾಳಾಯಿತೆಂದು ಚಿಂತಿಸಕೂಡದು. ದುಡಿಯುವವನಿಗೆ ಎಂದೂ ಕಡಿಮೆ ಬೀಳುವದಿಲ್ಲ. ಕೂಳಿಲ್ಲದೆ ಬಾಯ್ಬಿಡುವ ಹೊತ್ತು ಒದಗಲಾರದು. ಅದು ದುಡಿಯಲಾರದ ಕೈಲಾಗದ ಹೇಡಿಗಳಿಗೆ ಬರಬಹುದು. "ಇತ್ತೊಡೆ ಬರ್ಪುದೇ ಬಡತನಂ ಕುಡದಿರ್ದೊಡೆ ಲಕ್ಷ್ಮಿ ನಿಲ್ವುದೇ?" ಎಂಬ ಸುಭಾಷಿತವನ್ನು ಯಾವಾಗಲೂ ಗಮನಿಸಬೇಕು. ಹೊತ್ತು ಏರುವದೂ ಇಳಿಯುವದೂ ತಪ್ಪದೆ ಉಂಟಾಗುವಂತೆ ಈ ಲೋಕಲ್ಲಿ ಏರಿಳಿತಗಳು, ಎಲ್ಲ ವಿಷಯಗಳಲ್ಲಿಯೂ ಇದ್ದೇ ಇರುವವು. ಅವೆಂದೂ ಯಾರನ್ನೂ ಬಿಟ್ಟಿಲ್ಲ. ಅವಕ್ಕೆ ಅಂಜಿ ಕರ್ತವ್ಯಕರಾಜ್ಮುಖರು ಆಗುವದು ಇಷ್ಟವಾದುದಲ್ಲ. ಒಟ್ಟಿಗೆ ಹೇಳುವದೇನೆಂದರೆ ಅತ್ಯಾಶೆಗೆ ಬೀಳದೆ, ತನ್ನ ಗುರಿ ತಪ್ಪದೆ, ಮಾನವ ಜನ್ಮವು ಸಫಲವಾಗುವಂತೆ ವರ್ತಿಸುವದೇ ವಿಹಿತವೂ ಯೋಗ್ಯವೂ ಆಗಿರುವದು.

ಬಸವೇಶ್ವರನ ಚರಿತ್ರೆ.

ಲೇಖಾಂಕ ೨

(ಲೇಖಕರು– ರಾ॥ ಬಿ॥ ಪ ಜಿ. ಹಳಕಟ್ಟಿ ಬಿ. ಏ. ಎಲ್. ಎಲ್. ಬಿ. ವಿಜಾಪುರ.)

ನಾವು ಹಿಂದಿನ ಲೇಖದಲ್ಲಿ ಬಸವೇಶ್ವರನಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಸಾಮಾನ್ಯವಾಗಿ ಉಲ್ಲೇಖಿಸಿದೆವು. ಆದರೆ ಮುಂದೆ ನಾವು ಅವನ ಚರಿತ್ರೆಯಲ್ಲಿ ಸಂಭವಿಸಿದ ಮಹತ್ವದ ಸಂಗತಿಗಳನ್ನು ಕುರಿತು ಕ್ರಮೇಣ ಚರ್ಚಿಸುತ್ತ ಹೋಗಬೇಕೆಂದು ಎಣಿಸಿದ್ದೇವೆ. ಅವುಗಳನ್ನು ವಾಚಕರು ವಿಚಾರಮಾಡಬೇಕೆಂದು ನಮ್ರವಿನಂತಿ ಇದೆ.

ಬಸವೇಶ್ವರನ ಜನ್ಮಸ್ಥಳವು ಬಾಗೇವಾಡಿಯು.

ವಿಜಾಪುರ ಜಿಲ್ಲೆಯಲ್ಲಿರುವ ಬಾಗೇವಾಡಿಯೇ ಬಸವನ ಜನ್ಮಸ್ಥಳವೆಂದು ಈಗ ಭಾವಿಸಲ್ಪಟ್ಟಿರುತ್ತದೆ. ಆದರೆ ಫ್ಲೀಟ ಸಾಹೇಬರು ಈ ಸ್ಥಳವು ಬಸವನ ಹುಟ್ಟು ಗ್ರಾಮವಾಗಿರಲಿಕ್ಕಿಲ್ಲೆಂದು ಭಾವಿಸಿ ಹಾಗೆ 'ಎಪಿಗ್ರಾಫಿಕಾ ಇಂಡಿಕಾ' ಎಂಬ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಅವರಷ್ಟೇ ಅಲ್ಲ, ಒಬ್ಬ ಸುಶಿಕ್ಷಿತ ವೀರಶೈವರು ಸಹ ಬಾಗೇವಾಡಿಯು ಬಸವನ ಜನ್ಮಸ್ಥಳವಲ್ಲವೆಂದು ಒಂದು ಸುದೀರ್ಘವಾದ ಲೇಖನವನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿದ್ದು ನಮ್ಮ ವಾಚಕರ ಸ್ಮರಣೆಯಲ್ಲಿರಬಹುದು. ಆದು ಸಂಪುಟ ೧೩, ಪುಟ ೫೫೧ ಇದರಲ್ಲಿರುತ್ತದೆ. ಮುಂದೆ ಅದಕ್ಕೆ ಉತ್ತರವಾಗಿ ನಾವು ಅದೇ ಸಂಪುಟದಲ್ಲಿ ಒಂದು ಲೇಖನವನ್ನು ಬರೆದಿದ್ದೇವೆ. ಆದರೆ ಇಂಥ ಚರ್ಚೆಗಳು ನಿರುಪಯೋಗವಾದವುಗಳೆಂದು ಯಾರೂ ಭಾವಿಸಕೂಡದು. ಇದರಿಂದ ನಿಜಸ್ಥಿತಿಯು ದೃಷ್ಟಿಪಡುವದಲ್ಲದೆ, ಹೊಸ ಶೋಧಗಳೂ ಕೂಡ ಹೊರಪಡಬಹುದು.

ವೀರಶೈವ ಪುರಾತನ ಕವಿಯಾದ ಹರಿಹರನು ತನ್ನ ಬಸವರಾಜರಗಳೆಯಲ್ಲಿ ಬಸವನು ಜನಿಸಿದ್ದು 'ಆಗ್ರಹಾರ ಬಾಗವಾಡಿ' ಎಂದು ಬರೆಸಿದ್ದನ್ನು ನಾವು ಅವಶ್ಯವಾಗಿ ಲಕ್ಷಿಸಬೇಕು. ಬಸವ ಪುರಾಣವ ಕರ್ತೃವಾದ ಭೀಮಕವಿಯೂ ಸಹ ಬಸವನು ಇಂಗುಳೇಶ್ವರ-ಬಾಗವಾಡಿಯಲ್ಲಿ ಜನಿಸಿದನೆಂದು ಬರೆದಿದ್ದಾನೆ. ಇಂಗುಳೇಶ್ವರವು ಬಾಗೇವಾ

ಡಿಯ ಉತ್ತರಕ್ಕೆ ೪ ಮೈಲುಗಳ ಅಂತರದಲ್ಲಿ ವಿಜಾಪುರ ಜಿಲ್ಲೆಯಲ್ಲಿರುತ್ತದೆ. ಉತ್ತರ ಕರ್ನಾಟಕದಲ್ಲಿ ಈಗ ಬೆಲ್ಲದ ಬಾಗೇವಾಡಿ, ಹಿರೇ ಬಾಗೇವಾಡಿ, ಬಸವನ ಬಾಗೇವಾಡಿ ಎಂದು ಮೂರು ಬಾಗೇವಾಡಿಗಳು ಪ್ರಸಿದ್ಧವಿರುತ್ತವೆ. ಛೀಮ ಕವಿಯ ಕಾಲದಲ್ಲಿ ಸಹ ಒಂದಕ್ಕಿಂತಲೂ ಹೆಚ್ಚು ಬಾಗೇವಾಡಿಗಳು ಇದ್ದುದರಿಂದಲೇ ಅವನು ಇಂಗುಳೇಶ್ವರ-ಬಾಗವಾಡಿ ಎಂದು ಬಸವೇಶ್ವರನು ಜನಿಸಿದ ಬಾಗೇವಾಡಿಯನ್ನು ಕರೆದಿರಬಹುದೆಂದು ತೋರುತ್ತದೆ. ವಿಜಾಪುರ ಜಿಲ್ಲೆಯಲ್ಲಿಯ ಈ ಬಾಗೇವಾಡಿಯಲ್ಲಿ ಈಗಲೂ ಪ್ರಚಲಿತವಿರುವ ಸ್ಥಾನಿಕ ಐತಿಹ್ಯಗಳು ಬಸವನು ಅಲ್ಲಿಯೇ ಹುಟ್ಟಿರಬೇಕೆಂಬುದನ್ನು ನಿರ್ದೇಶಿಸುತ್ತವೆ. ಆದ್ದರಿಂದ ಈ ಗ್ರಾಮವನ್ನು 'ಬಸವನ ಬಾಗೇವಾಡಿ' ಎಂಬ ಹೆಸರಿನಿಂದ ಇಡೀ ಜಿಲ್ಲೆಯಲ್ಲೆಲ್ಲ ಕರೆಯುವದುಂಟು. ಇಲ್ಲಿರುವ ಶಿಲಾಶಾಸನಗಳು ಇದು ಪುರಾತನ ಗ್ರಾಮವೆಂಬುದನ್ನು ತೋರಿಸುತ್ತವೆ. ಅವು ದೇವಗಿರಿಯ ಯಾದವ ರಾಜರ ಕಾಲದವು ಇರುತ್ತವೆ. ಇಲ್ಲಿ ಬಸವನ ಗುಡಿಯೂ ಒಂದು ಇದ್ದು ಅದರ ಪಶ್ಚಿಮ ಭಾಗದ ಕಟ್ಟಡದ ರಚನೆಯು ಪುರಾತನ ಕಾಲದ್ದೆಂದು ತೋರುತ್ತದೆ. ಅದು ಶಿವಾಲಯವಾಗಿರುತ್ತದೆ. ಆದರೆ ಅದರ ಪೂರ್ವ ಭಾಗವು ಮಾತ್ರ ಈಚೆಗೆ ನಿರ್ಮಿಸಿದ್ದೆಂದು ಕಂಡುಬರುತ್ತದೆ. ಬೆಳಗಾವಿ ಜಿಲ್ಲೆಯ ಈಗಿನ ತಾಲೂಕಿನ ಸ್ಥಳವಾದ ಹುಕ್ಕೇರಿಯಿಂದ ಪಶ್ಚಿಮಕ್ಕೆ ೪ ಮೈಲು ದೂರ ಅರ್ಜುನವಾಡವೆಂಬ ಗ್ರಾಮದಲ್ಲಿ ದೊರೆದ ಶಿಲಾಶಾಸನದಲ್ಲಿ ಬಸವೇಶ್ವರನ ಉಲ್ಲೇಖವಿರುವದರಿಂದ ಅವರ ಮಹತ್ವವು ಈಗ ಹೆಚ್ಚಿದೆ. ಅವರಲ್ಲಿ "ಶ್ರೀ ಮತ್ತರಪವಾಡಿ ಮಧ್ಯ ಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜ" ಎಂದು ಬಸವನು ಉಲ್ಲೇಖಿಸಲ್ಪಟ್ಟಿದ್ದಾನೆ. ತರದವಾಡಿ ಎಂದರೆ ಈಗಿನ ವಿಜಾಪುರ ಜಿಲ್ಲೆಯ ಉತ್ತರ ಮತ್ತು ಪಶ್ಚಿಮಭಾಗವು. ಇದರ ಮಧ್ಯದಲ್ಲಿಯೇ ಈಗಿನ ಬಾಗೇವಾಡಿ ಗ್ರಾಮವು ಇರುತ್ತದೆ. ಈ ಶಿಲಾಶಾಸನದಿಂದ ವಿಜಾಪುರ ಜಿಲ್ಲೆಯ ಬಾಗೇವಾಡಿಯೇ ಬಸವನ ಸ್ಥಳವೆಂಬುದು ಸ್ಪಷ್ಟವಾಗುತ್ತದೆ.

ಕೆಲವು ವರ್ಷಗಳ ಹಿಂದೆ ಅನೇಕರು ಬಾಗೇವಾಡಿ ಗ್ರಾಮದ ಈಗಿನ ಸ್ಥಿತಿಯನ್ನು ನೋಡಿ ಇಂಥ ಗ್ರಾಮದಲ್ಲಿ ಮತ್ತು ಇಂಥ ಗ್ರಾಮವಿದ್ದ ಪ್ರದೇಶದಲ್ಲಿ ಇಂಥ ಮಹಾಪುರುಷನು ಹೇಗೆ ಜನಿಸಿದ ಎಂದು ಆಶ್ಚರ್ಯಪಡುತ್ತಿದ್ದರು. ಆದರೆ ಈಗ ಆ ಆಶ್ಚರ್ಯವು ಕಡಿಮೆಯಾಗಿದೆ. ಏಕೆಂದರೆ ಈಗ ಬಾಗೇವಾಡಿಯು ಒಂದು ಸಾಧಾರಣ ಗ್ರಾಮವಾಗಿದ್ದರೂ ಅದು ಒಂದು ಕಾಲದಲ್ಲಿ ಒಂದು ಮಹಾನಗರವಾಗಿತ್ತು. ಅದು ಚಾಲುಕ್ಯರ ಮಾಂಡಲಿಕರಾಗಿ ಬಹು ದಿವಸ ರಾಜ್ಯವಾಳಿದ್ದು ಈ ತರ್ದವಾಡಿನಾಡಿನಲ್ಲಿಯೇ. ತರ್ದವಾಡಿ ಗ್ರಾಮವು ಈಗ ಭೀಮಾತೀರದಲ್ಲಿದ್ದು ಅಲ್ಲಿಂದ ೨೫ ಮೈಲು ದೂರದ ಮೇಲೆ ಮಂಗಳವಾಡಗ್ರಾಮವಿದೆ ರೇವಣಸಿದ್ಧನು ಪ್ರಸಿದ್ಧಿಗೆ ಬಂದದ್ದು ಇಲ್ಲಿಯೇ. ಕಲ್ಯಾಣ ಪಟ್ಟಣವು ಈ ಭಾಗದಿಂದ ಸರಳ ರೇಷೆಯಿಂದ ೭೦—೮೦ ಮೈಲು ಮಾತ್ರ ದೂರವಿದೆ. ಆದ್ದರಿಂದ ಈ ರಾಜಧಾನಿಯಲ್ಲಿ ನಡೆಯುತ್ತಿದ್ದ ಎಲ್ಲತರದ ಚಟುವಟಿಕೆಗಳ, ಕ್ರಾಂತಿಗಳ ಮತ್ತು ಆಂದೋಲನಗಳ ಪರಿಣಾಮಗಳು ಈ ಭಾಗದಲ್ಲಿ ವಾಸಿಸುವವರ ಮೇಲೆ ಆಗಿರಲಿಕ್ಕೇಬೇಕೆಂದು ನಾವು ಊಹಿಸಬಹುದಾಗಿದೆ. ಈ ಊಹೆಯಲ್ಲಿ ತಥ್ಯಾಂಶವಿದೆಂಬದು ಇಲ್ಲಿ ಆಗಿಹೋದ ಮಹಾಪುರುಷರ ಸಂಖ್ಯೆಯಿಂದ ನಾವು ಮನಗಾಣಬಹುದಾಗಿದೆ. ಶಿವ ಶರಣರ ಮತ್ತು ವಚನಕಾರರ ಸ್ಥಾನಗಳಾವವೆಂಬುದನ್ನು ಕುರಿತು ನಾವು ಶಿವಾನುಭವ ಪತ್ರಿಕೆಯಲ್ಲಿ ಹಿಂದೆ ೨—೩ ಲೇಖಗಳನ್ನು ಬರೆದಿದ್ದೇವೆ. ಅವರಲ್ಲಿ ಬಹು ಜನರು ಈ 'ತರ್ದವಾಡಿ' ನಾಡಿನವರೆಂಬುದು ವಾಚಕರಿಗೆ ಸ್ಪಷ್ಟವಾಗುವಂತೆ ಇದೆ. ಈ ಎಲ್ಲ ವಿಷಯಗಳನ್ನು ನಾವು ವಿಚಾರ

ತ್ತದೆ. ಈಗಿನ ಕಾಲದಲ್ಲಿ ವಿಜಾಪುರ ಜಿಲ್ಲೆಯು ಈ ಭಾಗವು ಮತ್ತು ಇದರ ನೆರೆಯಲ್ಲಿದ್ದ ಕಲಬುರ್ಗಿ ಜಿಲ್ಲೆಯು ಅತ್ಯಂತ ಹಿಂದುಳಿದವುಗಳೆಂದು ಜನರಿಂಗೆ ಕಂಡುಬರುವದರಿಂದ ಅವು ಯಾವಾಗಲೂ ಇದೇ ಸ್ಥಿತಿಯಲ್ಲಿಯೇ ಇದ್ದಿರಬೇಕೆಂದು ಭಾವಿಸಿ ಹೀಗೆ ಅನೇಕರು ಬರೆಯುವದುಂಟು. ಆದರೆ ಅವರ ಈ ತಿಳುವಳಿಕೆಯು ತಪ್ಪಾದದ್ದಿರುತ್ತದೆ. ೧೨ನೆಯ ಮತ್ತು ೧೩ನೆಯ ಶತಮಾನಗಳಲ್ಲಿ ಈ ಭಾಗಗಳು ಕಲೆ ವಾಙ್ಮಯ ಮತ್ತು ಧಾರ್ಮಿಕ ಜಾಗ್ರತೆಯಲ್ಲಿ ಬಹು ಮುಂದುವರಿದವುಗಳಾಗಿದ್ದವು. ಬಾಗೇವಾಡಿಗೆ ನೆರೆಗ್ರಾಮವಾದ ಇಂಗುಳೇಶ್ವರವು ಚಂದ್ರಪ್ರಭ ಪುರಾಣವನ್ನು ಬರೆದ ಅರ್ಗಳನು ಪ್ರಸಿದ್ಧಿಗೆ ಬಂದ ಸ್ಥಳವು. ಈಗಲೂ ಅಲ್ಲಿ ಪುರಾತನ ಕಾಲದ ಅನೇಕ ಅವಶೇಷಗಳಿವೆ. ಕರ್ನಾಟಕದ ಮಹಾ ಕವಿಯಾದ ಅಭಿನವಪಂಪನು ವಿಜಯಪುರದವನು. ಈ ವಿಜಯಪುರವು ಬಾಗೇವಾಡಿಯಿಂದ ೨೬ ಮೈಲು ಮಾತ್ರ ದೂರವದೆ. ಬಾಗೇವಾಡಿಯಿಂದ ಪಶ್ಚಿಮಕ್ಕೆ ೬ ಮೈಲು ದೂರವಿರುವ ಮುತ್ತಿಗೆಯಲ್ಲಿ ಲಕುಲೀಶನು ಬಂದು ವಾಸವಾಗಿದ್ದನೆಂದು ಅಲ್ಲಿಯ ಶಿಲಾಶಾಸನದಿಂದ ತಿಳಿದು ಬರುತ್ತದೆ. ಅದು ಪಾಶುಪತರ ಮುಖ್ಯ ಸ್ಥಾನವಾಗಿತ್ತು. ಬಿಜ್ಜಳನು ಚಾಲುಕ್ಯರ ಮಾಂಡಲಿಕನಾಗಿ ಬಹು ದಿವಸ ರಾಜ್ಯವಾಳಿದ್ದು ಈ ತರ್ದವಾಡಿನಾಡಿನಲ್ಲಿಯೇ. ತರ್ದವಾಡಿ ಗ್ರಾಮವು ಈಗ ಭೀಮಾತೀರದಲ್ಲಿದ್ದು ಅಲ್ಲಿಂದ ೨೫ ಮೈಲು ದೂರದ ಮೇಲೆ ಮಂಗಳವಾಡಗ್ರಾಮವಿದೆ ರೇವಣಸಿದ್ಧನು ಪ್ರಸಿದ್ಧಿಗೆ ಬಂದದ್ದು ಇಲ್ಲಿಯೇ. ಕಲ್ಯಾಣ ಪಟ್ಟಣವು ಈ ಭಾಗದಿಂದ ಸರಳ ರೇಷೆಯಿಂದ ೭೦—೮೦ ಮೈಲು ಮಾತ್ರ ದೂರವಿದೆ. ಆದ್ದರಿಂದ ಈ ರಾಜಧಾನಿಯಲ್ಲಿ ನಡೆಯುತ್ತಿದ್ದ ಎಲ್ಲತರದ ಚಟುವಟಿಕೆಗಳ, ಕ್ರಾಂತಿಗಳ ಮತ್ತು ಆಂದೋಲನಗಳ ಪರಿಣಾಮಗಳು ಈ ಭಾಗದಲ್ಲಿ ವಾಸಿಸುವವರ ಮೇಲೆ ಆಗಿರಲಿಕ್ಕೇಬೇಕೆಂದು ನಾವು ಊಹಿಸಬಹುದಾಗಿದೆ. ಈ ಊಹೆಯಲ್ಲಿ ತಥ್ಯಾಂಶವಿದೆಂಬದು ಇಲ್ಲಿ ಆಗಿಹೋದ ಮಹಾಪುರುಷರ ಸಂಖ್ಯೆಯಿಂದ ನಾವು ಮನಗಾಣಬಹುದಾಗಿದೆ. ಶಿವ ಶರಣರ ಮತ್ತು ವಚನಕಾರರ ಸ್ಥಾನಗಳಾವವೆಂಬುದನ್ನು ಕುರಿತು ನಾವು ಶಿವಾನುಭವ ಪತ್ರಿಕೆಯಲ್ಲಿ ಹಿಂದೆ ೨—೩ ಲೇಖಗಳನ್ನು ಬರೆದಿದ್ದೇವೆ. ಅವರಲ್ಲಿ ಬಹು ಜನರು ಈ 'ತರ್ದವಾಡಿ' ನಾಡಿನವರೆಂಬುದು ವಾಚಕರಿಗೆ ಸ್ಪಷ್ಟವಾಗುವಂತೆ ಇದೆ. ಈ ಎಲ್ಲ ವಿಷಯಗಳನ್ನು ನಾವು ವಿಚಾರ

ಮಾಡಿದಲ್ಲಿ ವಿಜಾಪುರ ಜಿಲ್ಲೆಯಲ್ಲಿಯ ಬಾಗೇವಾಡಿಯೇ ಬಸವೇಶ್ವರನ ಜನ್ಮಸ್ಥಳವಾಗಿರಬೇಕೆಂದು ತಿಳಿಯಬೇಕಾಗುತ್ತದೆ.

ಬಸವ ಪುರಾಣದಲ್ಲಿ 'ಮುಂಡಿಗೆಯ ಮಾದಿರಾಜ' ಎಂದು ಬರೆದಿರುವದರಿಂದ ಅವನು ಮೈಸೂರು ಜಿಲ್ಲಾ ಮುಂಡ್ಯಗ್ರಾಮದವನೆಂದು ಒಬ್ಬ ಮಹಾನುಭಾವರು ಭಾವಿಸಿದ್ದಾರೆ! ಮತ್ತು ಈಚೆಗೆ ಉಂಟಾಗಿರುವ 'ನಂದೀ ಆಗಮ' ಎಂಬ ಹೆಸರಿನ ಗ್ರಂಥದಲ್ಲಿ ಬಸವನು 'ನೀಲಗಿರಿ' ಎಂಬಲ್ಲಿ ಹುಟ್ಟಿದನೆಂದು ಅದರ ಗ್ರಂಥಕಾರನು ಬರೆದಿದ್ದಾನೆ. ಬಸವನು ತಮ್ಮ ಪ್ರಾಂತದವನೆಂದು ತೋರಿಸಲು ಹೀಗೆ ಅನೇಕರು ಪ್ರಯತ್ನ ಬಟ್ಟಂತೆ ನಮಗೆ ತೋರುತ್ತದೆ. ಆದರೆ ನಿಜಸ್ಥಿತಿಯು ಹೀಗಿರುವದಿಲ್ಲೆಂಬದು ನಾವು ಮೇಲೆ ತೋರಿಸಿದ ಕಾರಣಗಳಿಂದ ವಾಚಕರಿಗೆ ದೃಢಪಡುವದೆಂದು ಭಾವಿಸಿದ್ದೇವೆ. ವೀರಶೈವರಲ್ಲಿರುವ ಸುಶಿಕ್ಷಿತರೇ ಈ ಬಗ್ಗೆ ಅನೇಕ ತರದ ವಿಧಾನಗಳನ್ನು ಮಾಡುತ್ತ ಬಂದಿರುವದರಿಂದ ನಾವು ಈ ವಿಷಯವನ್ನು ಕುರಿತು ವಿಸ್ತಾರವಾಗಿ ಪ್ರಸ್ತಾಪಿಸಬೇಕಾಗಿ ಬಂದಿರುತ್ತದೆ.

ಬಸವನ ತಂದೆಯು ಮಾದಿರಾಜನು.

ಬಸವನ ತಂದೆಯ ಹೆಸರು ಮಾದಿರಾಜ, ಮಾದರಸ ಎಂದಿದ್ದು ಈ ವಿಷಯವಾಗಿ ಯಾವ ಗ್ರಂಥದಲ್ಲಿಯೂ ಮತಭೇದವಿದ್ದಹಾಗೆ ತೋರುವದಿಲ್ಲ. ಬಹಳ ಹಿಂದಿನವರಾದ ಹರಿಹರ ಮತ್ತು ಭೀಮಕವಿಗಳು ಇದೇ ಹೆಸರನ್ನೇ ತಮ್ಮ ಗ್ರಂಥಗಳಲ್ಲಿ ಉಪಯೋಗಿಸಿದ್ದಾರೆ. ಅರ್ಜುನವಾಡ ಶಿಲಾಶಾಸನದಲ್ಲಿ ಸಹ ಬಸವನು 'ಮಾದಿಂಜನ ತನೂಜ'ನೆಂದು ಹೇಳಲ್ಪಟ್ಟಿದ್ದಾನೆ. ಈ ಹೆಸರಿನ ಅಂತ್ಯದಲ್ಲಿರುವ 'ರಾಜ' ಅಥವಾ 'ಅರಸ' ಈ ಶಬ್ದಗಳ ಮೇಲಿಂದ ಬಸವನ ತಂದೆಯು ಆಗಿನ ಅಡಳಿತೆಯಲ್ಲಿ ಕೆಲವೊಂದು ಅಧಿಕಾರವನ್ನು ಹೊಂದಿದವನಾಗಿದ್ದನೆಂದು ತೋರುತ್ತದೆ. ಹರಿಹರನು ತನ್ನ ರಗಳೆಯಲ್ಲಿ "ಶ್ರೀಮತ್ತರದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜ" ಎಂದು ಹೇಳಿದ್ದರಿಂದ ಮಾದಿರಾಜನು ಬಾಗೇವಾಡಿ ಗ್ರಾಮದ ಮುಖ್ಯಸ್ಥನಾಗಿದ್ದನೆಂದು ನಾವು ಎಣಿಸಬೇಕಾಗುತ್ತದೆ. ಅಲ್ಲದೆ ಅವನು ಬಾಗವಾಡಿಯು ಒಂದು ಅಗ್ರಹಾರವೆಂದು ವರ್ಣಿಸಿದ್ದಾನೆ ಪಂಡಿತರಾದ ಬ್ರಾಹ್ಮಣರು ಹೆಚ್ಚಾಗಿ

ನಿರಂತರವಾಗಿ ನಡೆಯುತ್ತದೋ ಆ ಗ್ರಾಮವು ಅಗ್ರಹಾರವೆಂದು ಹೇಳಲ್ಪಡುತ್ತದೆ. ಮಾದಿರಾಜನು ಇಂಥ ಗ್ರಾಮದ ಮುಖ್ಯಸ್ಥನಲ್ಲದೆ ರಾಜಕೀಯ ಪುರುಷನಾಗಿಯೂ ಇದ್ದನೆಂದು ನಾವು ಊಹಿಸಬಹುದಾಗಿದೆ.

ಬಸವನ ತಾಯಿಯು ಮಾದಲಾಂಬಿಕೆಯು.

ಬಸವನ ತಾಯಿಯ ಹೆಸರು ಮಾದಲಾಂಬಿಕೆ. ಈ ಬಗ್ಗೆ ಯಾವ ಮತಭೇದವು ಇರುವದಿಲ್ಲ. ಅವಳ ಹುಟ್ಟು ಗ್ರಾಮವು ಮಾತ್ರ ಯಾವುದೆಂಬುದು ನಮಗೆ ತಿಳಿದುಬಂದಿಲ್ಲ. ಆದರೆ ಅವಳು ಉಚ್ಚಮನಸಿತನದವಳಾಗಿದ್ದಳೆಂಬುದನ್ನು ನಾವು ಕೆಳಗೆ ಕಾಣಿಸಿದ ಸಂಗತಿಗಳಿಂದ ಊಹಿಸಬಹುದಾಗಿದೆ. ಅವಳ ಒಡಹುಟ್ಟಿದವರು ಬಿಜ್ಜಳ ರಾಜ್ಯದಲ್ಲಿ ಉಚ್ಚಸ್ಥಾನವನ್ನು ಹೊಂದಿದವರಾಗಿದ್ದರು. ಬಿದ್ದಣ್ಣ ಮಂತ್ರಿ ಮತ್ತು ಬಲದೇವ ಮಂತ್ರಿ ಈ ಉಭಯತರು ಅಣ್ಣತಮ್ಮಂದಿರೆಂದು ಅನೇಕ ಶಿವಶರಣರ ಚರಿತ್ರೆಗಳಿಂದ ತಿಳಿದುಬರುತ್ತದೆ. ಈ ಉಭಯತರೂ ಮಾದಲಾಂಬಿಕೆಗೆ ಸಹೋದರರಾಗಿದ್ದರು. ಬಲದೇವನು ಬಸವನ ಸೋದರಮಾವನೆಂದು ಅನೇಕ ಕಡೆಗೆ ಉಲ್ಲೇಖಿಸಲ್ಪಟ್ಟಿದೆ. ಆದರೆ ಇವರೀರ್ವರೂ ಬಿಜ್ಜಳನ ಆಡಳಿತೆಯಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸೈನ್ಯಾಧಿಕಾರಿಗಳಾಗಿದ್ದರು. ಈ ಬಗ್ಗೆ ಉಲ್ಲೇಖಗಳು ಅನೇಕ ಶಿಲಾಶಾಸನಗಳಲ್ಲಿ ಬಂದಿರುತ್ತವೆ. ಲೇಖ ವಿಸ್ತಾರ ಭಯಕ್ಕಾಗಿ ನಾವು ಅವುಗಳನ್ನೆಲ್ಲ ಇಲ್ಲಿ ಉದಹರಿಸಿಲ್ಲ. ಯಾವ ಮನೆತನದಲ್ಲಿ ಇಂಥ ಶ್ರೇಷ್ಠ ಅಧಿಕಾರಿಗಳು ಉಗಮಿಸಿರುತ್ತಾರೋ ಆ ಮನೆತನವು ಉತ್ತಮತರಗತಿಯಾಗಿತ್ತೆಂದು ಊಹಿಸಲಿಕ್ಕೆ ಯಾವ ಪ್ರತ್ಯವಾಯವು ಇರುವದಿಲ್ಲ. ಇಂಥ ಮನೆತನದಲ್ಲಿ ಮಾದಲಾಂಬಿಕೆಯು ಹುಟ್ಟಿದ್ದಾಳೆ. ಆದ್ದರಿಂದ ಅವಳು ಹೆಚ್ಚಿನ ತರಗತಿಯ ಮನೆತನಕ್ಕೆ ಹೊಂದಿದವಳಾದ್ದರಿಂದ ಯೋಗ್ಯತೆಯುಳ್ಳ ಮಾದರಸನಿಗೆ ಕೊಡಲ್ಪಟ್ಟಿರಬೇಕು. ಈ ಬಿದ್ದಣ್ಣ, ಬಲದೇವರುಗಳು ಯಾವ ಗ್ರಾಮದವರೆಂಬದು ನಮಗೆ ಇನ್ನೂ ತಿಳಿದುಬಂದಿಲ್ಲ. ಅದು ತಿಳಿದದ್ದಾದರೆ ಆ ಗ್ರಾಮವೇ ಮಾದಲಾಂಬಿಕೆಯ ಗ್ರಾಮವಾಗಿರಬೇಕೆಂದು ನಾವು ಊಹಿಸಬೇಕಾಗುತ್ತದೆ.

ಇಂಥ ಶ್ರೇಷ್ಠ ಮನೆತನದಲ್ಲಿ ಜನಿಸಿದ ಬಸವನು ಬ್ರಾಹ್ಮಣ್ಯವನ್ನು

ಏಳುವದು ಸ್ವಭಾವಿಕವಾಗಿರುತ್ತದೆ. ಸಾಮಾನ್ಯ ಜನರು ಹೀಗೆ ವರ್ತಿಸಿದಲ್ಲಿ ಸಮಾಜವು ಅವರನ್ನು ನಿರಾಕರಿಸುವದುಂಟು. ಮತ್ತು ಜಾತಿ ಭ್ರಷ್ಟರೆಂದು ಅವರು ಹಳಿಯಲ್ಪಟ್ಟ ದೂರೀಕರಿಸಲ್ಪಡುವದುಂಟು. ಆದರೆ ಸಮಾಜದಲ್ಲಿ ಪ್ರಮುಖರಾದವರು ಹಾಗೆ ವರ್ತಿಸಿದಲ್ಲಿ ಮತ್ತು ಇದರಲ್ಲಿ ಅವರು ಕೆಲವೊಂದು ತತ್ವವನ್ನು ಅಂಗೀಕರಿಸಿದಲ್ಲಿ ಸಮಾಜದಲ್ಲಿ ಒಂದು ಮಹತ್ವದ ಕ್ರಾಂತಿಯುಂಟಾಗದು ಇರದು.

ಮಾದರಸನು ಯಾವ ಮತದವನು ?

ಮಾದರಸನು ಆರಾಧ್ಯ ಬ್ರಾಹ್ಮಣನಾಗಿದ್ದನೆಂದು ನಿಜಾಪುರ, ಧಾರವಾಡ, ಬೆಳಗಾವ ಮೊದಲಾವ ಗ್ಯಾಜೀಟಿಯರುಗಳಲ್ಲಿ ಉಲ್ಲೇಖಗಳಿವೆ. ಫ್ಲೀಟ ಸಾಹೇಬರ ವೃತ್ತಾಂತವನ್ನವಲಂಬಿಸಿ ಇವುಗಳ ಸಂಪಾದಕರು ಹೀಗೆ ಈ ಗ್ಯಾಜಿಟಿಯರುಗಳಲ್ಲಿ ಬರೆದಿರಬಹುದೆಂದು ನಮಗೆ ತೋರುತ್ತದೆ. ಇವುಗಳನ್ನೇ ತಮ್ಮ ಆಧಾರವಾಗಿಟ್ಟುಕೊಂಡು ಈಚೆಗಿನ ನಮ್ಮ ಕೆಲವು ಕನ್ನಡ ಗ್ರಂಥಕಾರರು ತಮ್ಮ ಗ್ರಂಥಗಳಲ್ಲಿ ಹಾಗೆಯೇ ಅನೇಕ ಕಡೆ ಬರೆದಿದ್ದಾರೆ ಆದರೆ ಮಾದರಸನು ಆರಾಧ್ಯ ಬ್ರಾಹ್ಮಣನೆಂದು ವೀರಶೈವರ ಯಾವ ಗ್ರಂಥದಲ್ಲಿಯೂ ಹೇಳಲ್ಪಟ್ಟಿಲ್ಲ. ಆರಾಧ್ಯ ಬ್ರಾಹ್ಮಣರಿಂಗೆ ಲಿಂಗ ಯಜ್ಞೋಪವೀತಗಳಿರಡೂ ಇಂಟು. ಮಾದರಸನು ಲಿಂಗಧಾರಿಯಾಗಿದ್ದನೆಂದು ಎಲ್ಲಿಯೂ ಹೇಳಲ್ಪಟ್ಟಿಲ್ಲ. ಹರಿಹರ ಕವಿಯು ಅವನು 'ವಿಪ್ರ' ಎಂದು ಹೇಳಿದ್ದಾನೆ. ಭೀಮಕವಿಯ ಬಸವ ಪುರಾಣದಲ್ಲಿ ಲಿಂಗಧಾರಣದ ವಿಷಯವಾಗಿ ಮಾದರಸ-ಬಸವ ಇವರ ಮಧ್ಯದಲ್ಲಿ ನಡೆದ ವಾಗ್ವಾದವಿದೆ ಅದರಿಂದ ಮಾದರಸನು ಸ್ಮಾರ್ತಬ್ರಾಹ್ಮಣನಾಗಿದ್ದನೆಂದು ತೋರುತ್ತದೆ. ಹರಿಹರ ಕವಿಯು ಮಾದರಸನು "ಅಗ್ರೇಶ್ವರಂ ಕಮ್ಮೆ ಕುಲದಿಂದೆ ಮೆರೆದಿರ್ಪ" ಎಂದು ತನ್ನ ರಗಳೆಯಲ್ಲಿ ಬರೆದಿದ್ದಾನೆ. 'ಕಮ್ಮೆಕುಲ' ಎಂದರೆ ಕಣ್ವ ಶಾಖೆಯವರೆಂದು ಶ್ರೀಮಾನ್ ರಾಜಪುರೋಹಿತರು ಅಭಿಪ್ರಾಯಪಡುತ್ತಾರೆ. ಇದು ನಿಜವಿದ್ದರೂ ಇರಬಹುದು. ಯಾಕಂದರೆ ಈ ಶಾಖೆಯವರ ಸಂಖ್ಯೆಯು ವಿಜಾಪುರ ಜಿಲ್ಲೆಯಲ್ಲಿ ದಟ್ಟವಾಗಿ ಇದೆ. ನಂದೀ ಆಗಮದಲ್ಲಿ ಮಾದಿರಾಜನು- "ಬ್ರಾಹ್ಮಣ ಪ್ರಥಮ ಶಾಖೆ, ಶ್ರೀ ವತ್ಸ ಗೋತ್ರಜನು, ಮೇಲೆ ಸ್ಮಾರ್ತನು, ಮಾದಿರಾಜನು ಬಾಳೆ ಮಾದಣ್ಣಾಖ್ಯ" ಎಂದು ಹೇಳಲ್ಪಟ್ಟಿದೆ. ಪಟ್ಟದೆ ಮಾದಿ

ಬಸವನ ಅಣ್ಣನು ದೇವರಾಜನು.

ಮಾದಿರಾಜನಿಗೆ ಬಸವನೊಬ್ಬನೇ ಮಗನಿದ್ದನೆಂದು ಈ ವರೆಗೆ ತಿಳಿವಳಿಕೆ ಇತ್ತು. ಆದರೆ ಅರ್ಜುನವಾಡದ ಶಿಲಾಶಾಸನದಿಂದ ಅವನಿಗೆ ದೇವರಾಜನೆಂಬ ಇನ್ನೊಬ್ಬ ಮಗನಿದ್ದನೆಂದು ತಿಳಿಯುತ್ತದೆ. ಇವನು ಬಸವನ ಅಣ್ಣನು. ಬಸವನ ಚರಿತ್ರೆಯ ಮೇಲೆ ಮಹತ್ವದ ಪ್ರಕಾಶವನ್ನು ಕೆಡಹತಕ್ಕ ಸಂಗತಿಯು ಇದಾಗಿರುತ್ತದೆ. ಬಸವನ ಚರಿತ್ರೆಯಲ್ಲಿ ಯಾವ ಸಂಗತಿಗಳು ಘಟಿಸಿದವೆಂದು ನಾವು ಈ ವರೆಗೆ ತಿಳಿಯುತ್ತ ಬಂದೆವೋ ಅವು ಸತ್ಯವಾದವುಗಳಲ್ಲೆಂದು ತಿಳಿಯುವ ಪ್ರಸಂಗವು ಇದರಿಂದ ಉಂಟಾಗಿರುತ್ತದೆ. ಇವಾವೆಂಬುದನ್ನು ನಾವು ಮುಂದೆ ಉಲ್ಲೇಖಿಸುವೆವು. ನಂದೀ ಆಗಮದಲ್ಲಿ ಮಾದಿರಾಜನಿಗೆ ಸತ್ಯಪ್ಪ, ಅಪ್ಪಣ್ಣ ಎಂಬಿಬ್ಬರು ಮಕ್ಕಳಿದ್ದರೆಂದು ಹೇಳಲ್ಪಟ್ಟಿದೆ. ಹೆಚ್ಚಿನ ಆಧಾರಗಳು ದೊರೆಯದ ಹೊರ್ತು ಇದನ್ನು ನಂಬಲಿಕ್ಕೆ ಬರಲಾರದು. ಆದರೆ ನಮಗೆ ಒಂದು ಮಹತ್ವದ ಶಿಲಾಶಾಸನದ ಆಧಾರವಿರುವದರಿಂದ ಬಸವನಿಗೆ ದೇವರಾಜನೆಂಬ ಅಣ್ಣನಿದ್ದನೆಂಬುದನ್ನು ನಾವು ನಂಬಬೇಕಾಗಿದೆ. ಈ ದೇವರಾಜನ ಮಗನ ಹೆಸರೂ ಕೂಡ ಈ ಶಿಲಾಶಾಸನದಲ್ಲಿ ಹೇಳಲ್ಪಟ್ಟಿದೆ. ಆದರೆ ಆ ಭಾಗವು ಕಡಿದುಹೋದದ್ದರಿಂದ ಆ ಹೆಸರಾವುದೆಂಬದನ್ನು ತಿಳಿಯಲಿಕ್ಕೆ ನಮಗೆ ಶಕ್ಯವಿಲ್ಲ. ಈ ದೇವರಾಜನ ಮಗನ ಮಗನ ಹೆಸರು ಸಹ ಈ ಶಿಲಾಶಾಸನದಲ್ಲಿದೆ. ಅದು ಕಲಿದೇವನೆಂದಿದೆ. ಈ ಕಲಿದೇವನ ಮಗ ಹಾಲಬಸವಿದೇವನೆಂಬವನಿದ್ದು ಅವನಿಗೋಸ್ಕರ ದೇವಗಿರಿಯ ಯಾದವರಾಜನ ಅಮಾತ್ಯನು ಈ ಶಾಸನವನ್ನು ಮಾಡಿಕೊಟ್ಟಿದ್ದಾನೆ. ಈ ಶಾಸನದ ಸಮಗ್ರ ವೃತ್ತಾಂತವು ಶಿವಾನುಭವ ಪತ್ರಿಕೆ ಸಂಪುಟ ೩ ಸಂಚಿಕೆ ೯ ಪುಟ ೪೩೩ ಇದರಲ್ಲಿ ಬಂದಿದೆ. ಅದನ್ನು ವಾಚಕರು ಅವಶ್ಯವಾಗಿ ನೋಡಬೇಕು. ಬಸವನ ಅಣ್ಣನ ಈ ವಂಶಾವಳಿಯಲ್ಲಿ ಬಂದ ಈ ಯಾವತ್ತರೂ ಅತ್ಯಂತ ಆದರಪೂರ್ವಕವಾಗಿ ಶಿಲಾಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದ್ದಾರೆ. ಬಸವನ ಅಣ್ಣನು 'ದೇವರಾಜ ಮುನಿಪ' ಎಂದು ಹೇಳಲ್ಪಟ್ಟಿದ್ದಾನೆ. ಇವನು 'ಮುನಿಪ' ಎಂದು ಹೇಳಲ್ಪಟ್ಟಿದ್ದರಿಂದ ಇವನು ಆಗಿನ ಸಮಾಜದಲ್ಲಿ ಪೂಜ್ಯನಾಗಿದ್ದನೆಂದು ತೋರುತ್ತದೆ. ಇದೇ ಪ್ರಕಾರ ಉಳಿದವ

ತನ್ನನ್ನೂ ಜಂಗಮರನ್ನೂ ಭಕ್ತಿಭಾವದಿಂದ ಕಾಣುವವನಾಗಿದ್ದನೆಂದು ಬಹು ಆದರಪೂರ್ವಕವಾಗಿ ಹೇಳಲ್ಪಟ್ಟಿದ್ದಾನೆ. ಅವನ ಅಣ್ಣನ ಈ ಎಲ್ಲ ವಂಶದವರು ವೃಷಭಧ್ವಜವನ್ನು ಹೊಂದಿದವರಾಗಿದ್ದರೆಂದು ಈ ಶಾಸನದಲ್ಲಿ ಹೇಳಿದೆ. ಇದು ಬಸವನಿಗೆ ಸಂಬಂಧಿಸಿದ್ದಂತೆ ತೋರುತ್ತದೆ. ಯಾದವ ರಾಜನ ಮಹಾ ಪ್ರಧಾನನು ನಾಗರಸನು ಲಕ್ಷ್ಮೇಶ್ವರಂಕ್ಕೆ ಬಂದಕಾಲದಲ್ಲಿ ಅವನು ಹಾಲಬಸವಿದೇವನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವನಿಗೆ ಒಂದು ಉಂಬಳಿಯನ್ನಿತ್ತಿದ್ದಾನೆ. ಅರ್ಜುನವಾಡವು. ಈಗ ಹುಕ್ಕೇರಿಯ ಸಮೀಪದಲ್ಲಿ ಒಂದು ಅತ್ಯಂತ ಚಿಕ್ಕ ಗ್ರಾಮವಾಗಿರುತ್ತದೆ. ಆದರೆ ಈ ಸ್ಥಳಕ್ಕೆ ಆಗ ಕವಿಲಾಸಪುರ (ಕೈಲಾಸಪುರ) ವೆಂಬ ಅಭಿದಾನವಿದ್ದು ಅದರ ಮೇರೆಯ ಗ್ರಾಮಗಳೂ ಹೊಳೆಹಳ್ಳಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಅವೆಲ್ಲವೂ ಈ ಅರ್ಜುನವಾಡ ಗ್ರಾಮದ ಸುತ್ತಲೂ ಇವೆ. ಇದರ ಮೇಲಿಂದ ಇದು ಆಗ ೧೪—೨೫ಮೈಲು ಚಚ್ಚೌಕು ಪ್ರದೇಶವನ್ನು ಆವರಿಸಿತ್ತೆಂದು ತೋರುತ್ತದೆ. ಇದು ಆಗ ವ್ಯಾಪಾರೀ ಪಟ್ಟಣವಾದದ್ದರಿಂದ ಅದರಲ್ಲಿಯ ವರ್ತಕರ ಮೇಲಿನ ಹಕ್ಕು ಬಾಬುಗಳು ಹಾಲಬಸವಿದೇವಗೆ ಈ ಶಾಸನದ ಮೂಲಕ ಕೊಡಲ್ಪಟ್ಟಿವೆ. ಶಿಲಾಶಾಸನದ ಕಾಲವು ಬಸವನು ಕಾಲವಾದ ಬಳಿಕ ೮೦—೯೦ ವರ್ಷಗಳಾಗಿರಬೇಕು. ಅಲ್ಲದೆ ಹಾಲಬಸವಿದೇವನು ಬಸವೇಶ್ವರನ ಅಣ್ಣನ ಮೊಮ್ಮಗನ ಮಗನು. ಬಹಳ ಸಮೀಪದವನು. ಇದರಿಂದ ಬಸವನ ನೆನಪು ಜನರಲ್ಲಿ ಇದ್ದಾಗಲೇ ಈ ಶಾಸನವು ಲಿಖಿಸಲ್ಪಟ್ಟಿರಬೇಕೆಂದು ನಾವು ಊಹಿಸಬಹುದು. ಇದರಲ್ಲಿ ಸವದತ್ತಿ ರಟ್ಟರ ಮತ್ತು ಯಾದವ ರಾಜರ ಮಾಂಡಲಿಕರ ಬಗ್ಗೆಯೂ ಕೆಲವು ಉಲ್ಲೇಖಗಳು ಬಂದಿವೆ. ಅವೆಲ್ಲವೂ ನಿಜವಾಗಿ ಘಟಿಸಿದ ಸಂಗತಿಗಳು. ಇದರಿಂದ ಈ ಶಾಸನವನ್ನು ನಂಬಲಿಕ್ಕೆ ಯೋಗ್ಯವಾದುದೆಂದು ನಾವು ಭಾವಿಸಬೇಕಾಗುತ್ತದೆ. ಇದರಲ್ಲಿ ಬಸವನಿಗೆ ದೇವರಾಜ ಮುನಿಪ ಎಂಬ ಹೆಸರಿನ 'ಅಗ್ರಜ'ನಿದ್ದನೆಂದು ಹೇಳಿರುವದರಿಂದ ಈ ಸಂಗತಿಯನ್ನು ನಾವು ನಂಬಬೇಕಾಗಿರುತ್ತದೆ. ದೇವರಾಜನಾಗಲಿ ಅಥವಾ ಅವನ ವಂಶದಲ್ಲಿ ಯಾರೊಬ್ಬರಾಗಲಿ ಅವುದೋ ಒಂದು ಕಾರಣದ ಮೂಲಕ ತಮ್ಮ ಮೂಲ ಗ್ರಾಮವಾದ ಬಾಗೇವಾಡಿಯನ್ನು ಬಿಟ್ಟು ಈಗಿನ ಹುಕ್ಕೇರಿಗೆ ಸಮೀಪವರ್ತಿಯಾದ ಈ ಕವಿಲಾಸಪುರಕ್ಕೆ ಬಂದಿರಬಹುದೆಂದು

[ಟೀಪು:— ಅರ್ಜುನವಾಡ ಶಿಲಾಶಾಸನವು ಆ ಗ್ರಾಮದಲ್ಲಿಯ ಒಂದು ಮುರುಕದೇವಾಲಯಕ್ಕೆ ಹೊಂದಿ ಬೈಲು ಪ್ರದೇಶದಲ್ಲಿತ್ತು. ಅದು ಮಹತ್ವದ ಶಿಲಾಶಾಸನವಾಗಿರುವದರಿಂದ ಸುರಕ್ಷಿತೆಗೋಸ್ಕರ ಅದನ್ನು ಹುಕ್ಕೇರಿ ತಾಲೂಕು ಕಚೇರಿಯಲ್ಲಿ ತಂದಿರಸಲಿಕ್ಕೆ ನಾವು ಆಗಿನ ಕಲೆಕ್ಟರರಿಗೆ ತಿಳಿಸಿದೆವು. ಆ ಪ್ರಕಾರ ಅದು ಈ ಸ್ಥಳದಲ್ಲಿ ತಂದಿಡಲ್ಪಟ್ಟಿರುತ್ತದೆಂದು ಅವರು ನಮಗೆ ತಿಳಿಸಿದ್ದಾರೆ. ಆದ್ದರಿಂದ ಈ ಶಾಸನವು ಅರ್ಜುನವಾಡದಲ್ಲಿರದೆ ಅದನ್ನು ಹುಕ್ಕೇರಿ ಮಾಮಲೇದಾರರ ಕಚೇರಿಯಲ್ಲಿ ಈಗ ಕಾಣಬಹುದು.]

ಬಸವನ ಅಕ್ಕನು ನಾಗಲಾಂಬಿಕೆಯು.

ಬಸವನಿಗೆ ದೇವರಾಜನೆಂಬ ಅಣ್ಣನಿದ್ದಂತೆ ನಾಗಲಾಂಬಿಕೆ ಎಂಬ ಹೆಸರಿನ ಅಕ್ಕನೂ ಇದ್ದಂತೆ ತೋರುತ್ತದೆ. ನಾಗಲಾಂಬಿಕೆಯ ಹೆಸರು ಬಹುತರವಾಗಿ ಎಲ್ಲ ಶಿವಶರಣರ ಚರಿತ್ರೆಗಳಲ್ಲಿ ಬರುವದುಂಟು. ಆದ್ದರಿಂದ ಅವಳು ಬಸವನ ಅಕ್ಕನೆಂದು ನಾವು ನಂಬಬೇಕಾಗುತ್ತದೆ. ಅಲ್ಲದೆ ಅವಳು ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಚನ್ನಬಸವನ ತಾಯಿಯು. ಈ ವಿಷಯವಾಗಿಯೂ ಯಾವ ಸಂದೇಹವಿರುವದಿಲ್ಲ. ಇಂಥ ಸ್ತ್ರೀಯಳ ವಿಷಯವಾಗಿ ಪೂರ್ಣವಾಗಿ ಅಸ್ತಿತ್ವದಲ್ಲಿಲ್ಲದ ವಿಷಯಗಳು ಪ್ರಚಲಿತವಾಗುವ ಸಂಭವವಿಲ್ಲ. ವೀರಶೈವರಲ್ಲಿ ಅತ್ಯಂತ ಪ್ರಸಿದ್ಧಿಗೆ ಬಂದ ಸ್ತ್ರೀಯರಲ್ಲಿ ನಾಗಲಾಂಬಿಕೆಯು ಉಚ್ಚಸ್ಥಾನವನ್ನು ಹೊಂದಿದ್ದಾಳೆ. ಬಸವನೊಡನೆ ಕಷ್ಟಪಟ್ಟ ಸ್ತ್ರೀಯಳು ಅವಳಾಗಿದ್ದಾಳೆ. ಬಸವನಿಗೆ ತನ್ನ ಮನೆಯನ್ನು ತೊರೆದು ಹೋಗುವ ಪ್ರಸಂಗವು ಬರಲು ಅವನಿಗೆ ಆಗ ಜೊತೆಯಾಗಿದ್ದವಳು ಅಕ್ಕನಾಗಲಾಂಬಿಕೆಯು. ಆಗ ಬಸವನು ಎಂಥ ಮನೋ ಧೈರ್ಯವನ್ನು ತೋರಿಸಿದನೋ ಹಾಗೆಯೇ ಮಿಗಿಲಾದ ಧೈರ್ಯವನ್ನು ನಾಗಲಾಂಬಿಕೆಯೂ ತೋರಿಸಿದ್ದಾಳೆ. ಶಿವಾನುಭವ ಮಂಟಪದಲ್ಲಿ ಆಕೆಗೆ ಹೆಚ್ಚಿನ ಸ್ಥಾನವು ಉಂಟಾಗಿತ್ತು. ಆಕೆಯ ಕೆಲವು ವಚನಗಳೂ ನಮಗೆ ಉಪಲಬ್ಧವಿವೆ. ಆದರೆ ನಮಗೆ ದೊರೆದವುಗಳು ಕೆಲವು ಮಾತ್ರ. ಶೋಧಮಾಡಿದಲ್ಲಿ ಇನ್ನೂ ಹೆಚ್ಚಿಗೆ ದೊರೆಯಬಹುದು. ಮುಂದೆ ಬಿಜ್ಜಳನ ವಧವಾಗಲು ಚನ್ನಬಸವ, ಮಡಿವಾಳಮಾಚಿದೇವ, ಕಿನ್ನರೀಬ್ರಹ್ಮಯ್ಯಗಳು ಸೈನ್ಯವನ್ನು ಸಂಗ್ರಹಿಸಿ ಬಿಜ್ಜಳನ ದಂಡಿನೊಡನೆ ಕಾದಾಡುತ್ತ ಕಾಡನ್ನು ಪ್ರವೇಶಿಸಲು ಇಂಥ ಘೋರಪ್ರಸಂಗದಲ್ಲಿ ನಾಗಲಾಂಬಿಕೆಯು ಕಲ್ಯಾಣ

ದಲ್ಲಿಯೇ ಚನ್ನಬಸವನೊಡನೆ ಉಳಿದು ಮುಂದೆ ಅವನ ಸೈನ್ಯದೊಡನೆ ಸಾಗಿಬಂದಳು. ಕಾತರವಳ್ಳಿಯಲ್ಲಿ ಕಾಳಗವಾಗಲು ಅಲ್ಲಿ ಮೂರ್ಛೆ ಹೊಂದಿದ ರಾಯಮುರಾರಿಯು ಘಾತಿಸಲ್ಪಡುವವನಾಗಿದ್ದನು. ಆದರೆ ಅದಕ್ಕೆ ಅಡ್ಡಬಂದವಳು ನಾಗಲಾಂಬಿಕೆ ಎಂದು ಹೇಳಲ್ಪಡುತ್ತದೆ. ಮುಂದೆ ಅವಳು ಉಳವಿಯಲ್ಲಿಯೇ ಸಮಾಧಿಸ್ಥಳಾದಂತೆ ತೋರುತ್ತದೆ. ಉಳವಿಯಲ್ಲಿಯೂ ಕಲ್ಯಾಣದಲ್ಲಿಯೂ ಅವಳ ಹೆಸರಿನ ಗವಿಗಳಿವೆ. ಬಸವನಂತೆಯೇ ಅವಳು ಕ್ರಾಂತಿಕಾರಕಳು. ಹೇಗೆ ಮಹಮ್ಮದ ಪೈಗಂಬರನಿಗೆ ಅವನ ಹೆಂಡತಿಯು ಸಹಾಯಕಳಾಗಿ ಉಳಿದಳೋ ಹಾಗೆಯೇ ಬಸವನಿಗೆ ಅವನ ಅಕ್ಕನು ಕಡೆಯವರೆಗೂ ಸಹಾಯಕಳಾಗಿ ಉಳಿದಳು. ಹೀಗೆ ಅಕ್ಕನಾಗಲಾಂಬಿಕೆಯ ಉಜ್ವಲ ಚರಿತ್ರೆ ಇದೆ.

(ಮುಂದೆ ಸಾಗುವದು.)

ಸ್ಫುಟ ವಿಚಾರಗಳು.

(೧) **ಶಿವಾನುಭವ ಪತ್ರಿಕೆ**:— ಶಿವಾನುಭವ ಪತ್ರಿಕೆಯು ಪ್ರಕೃತ ಸಂಚಿಕೆಗೆ ಅದರ ೧೫ ವರ್ಷಗಳು ಮುಗಿದವು. ಅದರ ಮುಂದಿನ ಸಂಚಿಕೆಯಿಂದ ಅದರ ೧೬ನೇ ವರ್ಷವು ಪ್ರಾರಂಭವಾಗುವದು. ಹೋದ ವರುಷದಲ್ಲಿ ಇದರಲ್ಲಿ ಕೆಲವು ಮಹತ್ವದ ಹೊಸಗ್ರಂಥಗಳು ಸಾರಂಭಿಲ್ಪಟ್ಟಿರುತ್ತವೆ. ಅನೇಕ ಐತಿಹಾಸಿಕ ವಿಷಯಗಳೂ ವಿವೇಚಿಸಲ್ಪಟ್ಟಿವೆ. ಪುರಾತನ ಗ್ರಂಥಪ್ರಕಟನ, ವಾಙ್ಮಯ ಸಂಶೋಧನ, ವೀರಶೈವ ಸಂಸ್ಕೃತಿಯ ಪ್ರಸಾರ ಇವುಗಳ ಬಗ್ಗೆ ಪ್ರಯತ್ನಿಸುವದೇ ಶಿವಾನುಭವ ಪತ್ರಿಕೆಯ ಮುಖ್ಯ ಕಾರ್ಯವಾಗಿದೆ. ಈ ಕಾರ್ಯವನ್ನು ಈ ಪತ್ರಿಕೆಯು ತನಗೆ ಶಕ್ಯವಿದ್ದಷ್ಟರ ಮಟ್ಟಿಗೆ ಹೋದ ೧೫ವರ್ಷಗಳಿಂದಲೂ ಎಡೆಬಿಡದೆ ನಡೆಯಿಸುತ್ತಬಂದಿದೆ. ಇಂಥ ಪತ್ರಿಕೆಗೆ ನಮ್ಮ ವಾಚಕರು ತಮ್ಮ ಸಹಾಯವನ್ನು ನೀಡಬೇಕೆಂದು ನಾವು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇವೆ. ಈ ವರ್ಷದ ಮಧ್ಯದಲ್ಲಿ ಅಚ್ಚುಕೂಟದ ವಿಶೇಷ ಕಾರ್ಯಗಳ ಮೂಲಕ ಒಂದೆರಡು ಸಂಚಿಕೆಗಳು ತಡೆಯಲ್ಪಟ್ಟವು. ಅದರೂ ಅದರ ಅಪೂರ್ತಿಯಾದ ಪುಟಗಳು ವರ್ಷಾಂತ್ಯದಲ್ಲಿ ಪೂರ್ತಿಗೊಳಿಸಲ್ಪಟ್ಟಿವೆ. ಪತ್ರಿಕೆಗೆ ಹುರುಬರಕ ಕಾಗದಗಳನ್ನು ಉಪಯೋಗಿಸಬೇಕಾಗಿ ಬಂದಿದೆ. ಕಾಗದದ ಮಿತಿಮೀರಿದ ಬೆಲೆಯ ಮೂಲಕ ಹೀಗೆ ಮಾಡುವದು ಅಪರಿಹಾರ್ಯವಾದ್ದರಿಂದ ಇದಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇದರಲ್ಲಿಯ ಲೇಖಗಳೂ ಗ್ರಂಥಗಳೂ ಬಹು ದಿವಸ ಕಾದಿಡಲು ಯೋಗ್ಯವಾದವುಗಳಿರುವದರಿಂದ ನುಣುಪುಕಾಗದವನ್ನು ಉಪಯೋಗಿಸಬೇಕೆಂದು ಅನೇಕರು ಸೂಚಿಸುತ್ತಿದ್ದರೂ ನಮಗೆ ಪತ್ರಿಕೆಯ ಚಂದಾದಾರರ ಸಂಖ್ಯೆಯ ಮೂಲಕ ಹೀಗೆ ಮಾಡುವದು ಅಶಕ್ಯವಾಗಿರುತ್ತದೆ. ಹಾಗೆಯೇ ಸಂಚಿಕೆಗಳ ಪ್ರತಿಗಳನ್ನು ಹೆಚ್ಚಿಗೆ ಅಚ್ಚು ಹಾಕುವದೂ ನಮಗೆ ಶಕ್ಯವಿರುವದಿಲ್ಲ. ಅನೇಕರು ಕಳೆದು ಹೋದ ತಮ್ಮ ಸಂಚಿಕೆಗಳಿಗೆ ಪ್ರತಿಯಾಗಿ ನಮ್ಮಲ್ಲಿಯ ಶಿಲ್ಕಿನ ಸಂಚಿಕೆಗಳನ್ನು ಅಪೇಕ್ಷಿಸುತ್ತಾರೆ. ಆದರೆ ಮೇಲಿನ ಕಾರಣಗಳ ಸಲುವಾಗಿ ಅವರ ಅಭಿಲಾಷೆ

ವರು ನಮ್ಮನ್ನು ಕ್ಷಮಿಸಬೇಕೆಂದು ನಾವು ಅವರಿಗೆ ವಿನಂತಿ
ಾಡಿಕೊಳ್ಳುತ್ತೇವೆ. ವೀರಶೈವ ಸಂಸ್ಕೃತಿಯು ವಿಷಯವಾಗಿ ಪ್ರೇಮವನ್ನು
ಂದಿದ ವೀರಶೈವರ ಸಂಖ್ಯೆಯು ಇನ್ನೂ ಹೆಚ್ಚಿದಲ್ಲಿ ನಮ್ಮ ವಾಙ್ಮಯ
ರ್ಯಗಳು ಇನ್ನೂ ಹೆಚ್ಚಾಗಿ ಮುಂದುವರಿಸಬಹುದಾಗಿದೆ. ಆ
ದಿನವು ಬೇಗನೆ ಪ್ರಾಪ್ತವಾಗಲೆಂದು ನಾವು ಹಾರೈಸುತ್ತೇವೆ.

(೨) ಬಸವನ ಚರಿತ್ರೆ:— ಈಚೆಗೆ ನಾವು ವೀರಶೈವೇತಿಹಾಸದ
ಯದ ಬಗ್ಗೆ ಮಹತ್ವಕೊಡುತ್ತ ಬಂದಿದ್ದೇವೆಂಬದು ನಮ್ಮ ವಾಚ್ಯ
ನಿದರ್ಶನಕ್ಕೆ ಬಂದಿರಬಹುದು. ಹೋದ ಸಂಚಿಕೆಯಿಂದ ಬಸ
ಚರಿತ್ರೆಯನ್ನು ಕುರಿತು ನಾವು ಪ್ರಸ್ತಾಪಿಸಹತ್ತಿದ್ದೇವೆ. ಪ್ರಕೃತ
ಯಲ್ಲಿ ಇದು ಅತ್ಯಂತಮಹತ್ವದ ವಿಷಯವಾಗಿದೆ. ಆದರೆ ಬಸ
ಚರಿತ್ರೆಯನ್ನು ವಿಸ್ತಾರವಾಗಿ ಬರೆಯುವದು ಇನ್ನೂ ಶಕ್ಯವಿರುವ
ಆದರೂ ಅನೇಕ ಗ್ರಂಥಗಳೂ ಶಿಲಾಶಾಸನಗಳೂ ಈಚೆಗೆ ನಮಗೆ
ಲಭ್ಯವಾಗಹತ್ತಿದ್ದರಿಂದ ಅವನ ಚರಿತ್ರೆಯ ಮೇಲೆ ಪ್ರಕಾಶವು ಕೆಲ
ಗೆ ಬೀಳತೊಡಗಿದೆ. ಹೀಗೆ ಬಹಿರಂಗವಾದ ವಿಷಯಗಳನ್ನು ಕೂಡಲೆ
ಪಿಸಿ ಜನರೆದುರಿಗೆ ಇಡುವದು ನಮ್ಮ ಕರ್ತವ್ಯವೆಂದು ನಮಗೆ
ರಿಂದ ಈ ವಿಷಯವನ್ನು ಕುರಿತು ನಾವು ಒಂದು ಲೇಖಮಾ
ನ್ನು ಪ್ರಾರಂಭಿಸಿದ್ದೇವೆ. ಆದರೆ ಪ್ರಕಾಶಕ್ಕೆ ಬಂದ ಕೆಲವು ವಿಶಿಷ್ಟ
ಗಳ ಬಗ್ಗೆ ಚರ್ಚೆಗಳು ಆಂಟಾಗಬೇಕೆಂಬ ಉದ್ದಿಶ್ಯವನ್ನಿಟ್ಟು
ದು ನಾವು ಈ ಮಾಲೆಯಲ್ಲಿ ಲೇಖಗಳನ್ನು ಬರೆಯುತ್ತಲಿದ್ದೇವೆ.
ಳ ಮಾದರಿಯನ್ನು ಈ ತಿಂಗಳ ಸಂಚಿಕೆಯಲ್ಲಿ ವಾಚಕರು ಕಾಣ
ದು. ಇದೇ ರೀತಿಯಾಗಿ ಬಸವನ ವೃತ್ತಾಂತವನ್ನು ನಾವು
ದುವರಿಸುತ್ತ ಹೋಗುವೆವು. ಇದು ಉಳವಿಯ ಕದನದ ವರೆಗೂ
ದುವರಿಸಲ್ಪಡುವದು. ಈ ವಿಷಯವು ಕರ್ನಾಟಕ ಇತಿಹಾಸದಲ್ಲಿ
ಅಪರಿಚಿತವಾಗಿದೆ. ಇದರಲ್ಲಿ ವಾಚಕರಿಗೆ ಅನೇಕ ಬಗೆಯ
ಗಳೂ, ಸಂದೇಹಗಳೂ ತೋರಬಹುದು. ಅವುಗಳನ್ನು ಅವರು
ಮೂಲಕ ಅವಶ್ಯವಾಗಿ ನಮಗೆ ತಿಳಿಸುತ್ತಿರಬೇಕು. ಅವುಗಳನ್ನು
ಅತ್ಯಾನಂದದಿಂದ ಪತ್ರಿಕೆಯಲ್ಲಿ ಪ್ರಕಟಿಸುವೆವು. ಈ ರೀತಿಯ
ಘಟಿತ ಪ್ರಯತ್ನದಿಂದಲೇ ವೀರಶೈವರ ಉಜ್ವಲ ಇತಿಹಾಸವು
ೀಕ್ಷಬಹುದೆಂದು

(೩) ಷಟ್‌ಸ್ಥಲ ಶಾಸ್ತ್ರ:— ಹಿಂದುಸ್ತಾನದಲ್ಲಿ ಷಟ್‌ಸ್ಥಲಶಾಸ್ತ್ರ
ವೆಂಬುದೊಂದು ಇದೆ ಎಂಬುದು ಸಹ ದೇಶದಲ್ಲಿಯ ವಿದ್ವಜ್ಜನರಿಗೆ ಗೊತ್ತಿರು
ವದಿಲ್ಲ. ಇದು ಇಷ್ಟು ಅಪರಿಚಿತವಾಗಿರುತ್ತದೆ. ಕರ್ನಾಟಕದಲ್ಲಿ ಸಹ
ವೀರಶೈವರ ಬಗ್ಗೆ ಅತ್ಯಂತ ಸ್ಥೂಲತರ ವಿಷಯಗಳು ಮಾತ್ರ ಜನತೆಯ ಪರಿ
ಚಯಕ್ಕೆ ಬಂದಿವೆ. ಆದರೆ ಅದರ ಅಂತರಂಗದ ವಿಷಯಗಳ ತಿಳು
ವಳಿಕೆಯು ಸಮಾಜದಲ್ಲಿ ಇನ್ನೂ ಉಂಟಾಗಿಲ್ಲ. ವಚನಶಾಸ್ತ್ರ ಸಾರ
ಭಾಗ ೨ ಮತ್ತು ಭಾಗ ೩ (ಪೂರ್ವಾರ್ಧ) ಇವುಗಳನ್ನು ಅವಲೋ
ಕಿಸಿದಲ್ಲಿ ನಾವು ಹೇಳುವ ಈ ಸಂಗತಿಯ ನಿಜತ್ವವು ವಾಚಕರಿಗೆ ಗೊತ್ತಾ
ಗದೆ ಇರದು. ಈ ಗ್ರಂಥಗಳಲ್ಲಿ ಮತ್ತು ಈ ವರೆಗೆ ಪ್ರಕಟವಾದ
ವಚನಗಳಲ್ಲಿ ಅರ್ಥವಾಗದ ಅನೇಕ ವಿಷಯಗಳಿರುತ್ತವೆ. ಇವು ಎಷ್ಟು
ಸುಲಭ ಭಾಷೆಯಲ್ಲಿ ಬರೆಯಲ್ಪಟ್ಟಿದ್ದರೂ ಕೂಡ, ಅವುಗಳ ಭಾವವು,
ಜನರಿಗೆ ತಿಳಿಯದಂತೆ ಆಗಿದೆ. ಉದಾಹರಣಾರ್ಥವಾಗಿ ಲಿಂಗಧಾರಣ
ಮತ್ತು ದೀಕ್ಷೆ ಈ ವಿಷಯಗಳ ಸಂಬಂಧವಾಗಿ ಶಿವಾನುಭವ ಪತ್ರಿಕೆ
ಯಲ್ಲಿ ಅನೇಕ ಲೇಖಗಳು ಬಂದಿವೆ. ಇಂಥ ಸಾಮಾನ್ಯ ವಿಷಯಗಳ
ಬಗ್ಗೆ ಸಹ ಮತಭೇದಗಳಾಗುತ್ತವೆ. ಪಾದೋದಕ ಈ ವಿಷಯದ
ಬಗ್ಗೆಯೂ ಇದೇ ಸ್ಥಿತಿಯು ಇದೆ. ವಚನಶಾಸ್ತ್ರದ ಅಭ್ಯಾಸವು ನಿಂತು
ಹೋದದ್ದರಿಂದಲೇ ಈ ಬಗೆಯ ಪರಿಸ್ಥಿತಿಯೊದಗಿರುತ್ತದೆ. ಇದರಿಂದ
ವೀರಶೈವ ಮತಕ್ಕೆ ಸಂಬಂಧ ಪಡದೆ ಇದ್ದ ತತ್ವಗಳೂ, ಆಚಾರಗಳೂ.
ನಡೆವಳಿಗಳೂ ಅನೇಕ ಶತಮಾನಗಳಿಂದ ಸಮಾಜದಲ್ಲಿ ರೂಢಿಯಲ್ಲಿ
ಬಂದಿರುತ್ತವೆ. ಈ ದುಃಸ್ಥಿತಿಯನ್ನು ಹೋಗಲಾಡಿಸುವ ಪ್ರಯತ್ನವನ್ನು
ವೀರಶೈವರು ಈ ಕಾಲಕ್ಕೆ ಅವಶ್ಯವಾಗಿ ಮಾಡಬೇಕಾಗಿರುತ್ತದೆ. ಈ
ಉದ್ದೇಶವನ್ನಿಟ್ಟುಕೊಂಡು ನಾವು ಅಷ್ಟಾವರಣ, ಷಟ್‌ಸ್ಥಲ ಇಂಥ
ವಿಷಯಗಳ ಚರ್ಚೆಗಳಿಗೆ ಶಿವಾನುಭವ ಪತ್ರಿಕೆಯಲ್ಲಿ ಆಗಿಂದಾಗ್ಗೆ
ಇಂಬುಗೊಡುತ್ತ ಬಂದಿದ್ದೇವೆ. ಈ ಧೋರಣವನ್ನು ನಾವು ಮುಂದಾ
ದರೂ ಮುಂದುವರಿಸಬೇಕೆಂದು ಸಂಕಲ್ಪಿಸಿದ್ದೇವೆ. ಇದರಲ್ಲಿ ವಾಚ
ಕರೂ ವಿದ್ವಜ್ಜನರೂ ನಮ್ಮೊಡನೆ ಸಹಕರಿಸಬೇಕೆಂದು ನಮ್ಮ ವಿನಂತಿ ಇದೆ.

(೪) ಶಿವಾನುಭವ ಸಂಘಗಳು:— ಮೇಲೆ ಹೇಳಿದ ಕಾರ್ಯಕ್ರಮ
ಗಳನ್ನು ನೆರವೇರಿಸುವ ಉದ್ದಿಶ್ಯವಾಗಿ ಎಲ್ಲ ಕಡೆಗೂ ಶಿವಾನುಭವ ಸಂಘ

ಕರ್ನಾಟಕ ಪತ್ರಿಕೆಯಿಂದ ನಮಗೆ ಬಹಳ ಸಹಾಯವಾಯಿತು. ಅದರ ಮೂಲಕ ಸುಮಾರು ೧೦೦ ಸಂಸ್ಥೆಗಳು ಏರ್ಪಡಿಸಲ್ಪಟ್ಟವು. ಇವುಗಳಲ್ಲಿ ನೇಕ ಸಂಸ್ಥೆಗಳು ಜಾಗ್ರತೆಯಿಂದ ಈಗಲೂ ಕಾರ್ಯವಾಡುತ್ತಲಿವೆ. ಇವುಗಳಲ್ಲಿ ಸ್ತ್ರೀಸಮಾಜಗಳೂ ಕೆಲವು ಉಂಟು. ಈ ಸ್ತ್ರೀಸಮಾಜಗಳೇ ಹೆಚ್ಚಿಗೆ ತತ್ಪರತೆಯಿಂದ ಕಾರ್ಯವಾಡುತ್ತಿರುವದು ತೋರಿಬರುತ್ತದೆ. ಸ್ತ್ರೀಯರಲ್ಲಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಒಲವು ಯಾವಾಗಲೂ ಹೆಚ್ಚಿದ್ದರ ಚಿನ್ಹವಿದಾಗಿದೆ. ಇಂಥ ಪ್ರಯತ್ನಗಳೇ ಸಮಾಜದ ಭಾವೀ ಸುಸ್ಥಿರತೆಗೆ ತಳಹದಿಯಾಗಿವೆ. ಇದರಿಂದ ಸಮಾಜಕ್ಕೆ ಸುಸಂಘಟಿತ ಸ್ಥಿತಿಯು ಪ್ರಾಪ್ತವಾಗದೆ ಇರದು. ಈ ಬಗೆಯ ಪ್ರಯತ್ನಗಳು ಬಸವೇಶ್ವರನ ಶಿವಾನುಭವ ಮಂಟಪದ ಮತ್ತ ಗ್ರಾಮಾಂತರಗಳಲ್ಲಿರುವ ಪೂರ್ವದ ಮಠಗಳು ಇವುಗಳ ಕಾರ್ಯವನ್ನು ಹೋಲುತ್ತವೆ. ಇದಲ್ಲದೆ ಇವುಗಳ ಮೂಲಕ ಸಮಾಜದಲ್ಲಿ ನಿಜವಾದ ಕಾರ್ಯಕರ್ತರಾರೆಂಬುದೂ ತಿಳಿಯುತ್ತದೆ. ಈ ಕಾಲದಲ್ಲಿ ಕಾರ್ಯಾಡಂಬರಕ್ಕಾಗಿ ಮುಂದುವರಿಯುವವರ ಸಂಖ್ಯೆಯು ಬಹಳ ಹೆಚ್ಚು ಪರಿಷತ್ತುಗಳಲ್ಲಿ ಇಂಥವರೇ ಹೆಚ್ಚಾಗಿರುವದುಂಟು. ಅಪರೆ ಸಭೆಗಳು ಮುಗಿದ ಬಳಿಕ ಅವರು ಆವ ಕಾರ್ಯವನ್ನೂ ತಮ್ಮ ಗ್ರಾಮಗಳಲ್ಲಿ ಕೈಕೊಳ್ಳುವದಿಲ್ಲ. ಈ ಕಾಲಕ್ಕೆ ಹ್ಯಪಟವಾಗಿ ಪ್ರಯತ್ನಿಸುವವರ ಸಂಖ್ಯೆಯು ಸಮಾಜದಲ್ಲಿ ಹೆಚ್ಚಾಗಬೇಕಾಗಿದೆ ಇಂಥವರಾರೆಂಬುದನ್ನು ತಿಳಿಯಲು ಚನ್ನಾಗಿ ನಡೆದ ವಾನುಭವ ಸಂಘಗಳು ಬಹಳ ಸಹಾಯಕಾರಿಯಾದವುಗಳು

ಶಿವಾನುಭವ ಸಂಘಗಳ ಕಾರ್ಯವಾಡುವಲ್ಲಿ ಅವುಗಳ ಸಭಾಸದರಲ್ಲಿ ಯಾರು ಹೆಚ್ಚಿಗೆ ತಿಳಿದವರಿರುವರೋ ಅವರು ಅರಿಯದವರಿಗೆ ತಮಗೆ ತಿಳಿದದ್ದನ್ನು ತಿಳಿಸಿ ಹೇಳಬೇಕು ಮತ್ತು ಚರ್ಚೆ ಮಾಡಬೇಕು. ಇದು ಪುರಾತನ ಶಿವಶರಣರ ಪದ್ಧತಿಯಾಗಿದೆ. ಶಿವಶರಣರು ಇದನ್ನು ವಾನುಭವ ಗೋಷ್ಠಿ' ಎಂದು ಕರೆದಿದ್ದಾರೆ. 'ಶೂನ್ಯಸಂಪಾದನೆ' ಎಂಬ ಥವು ಇಂಥ 'ಗೋಷ್ಠಿ'ಗಳಿಂದ ತುಂಬಿಹೋಗಿದೆ. ಹೀಗೆ ಹೆಚ್ಚಿಗೆ ತಿಳಿದವರು ಅಜ್ಞರನ್ನು ಎಚ್ಚರಿಸುವದಲ್ಲದೆ ತಾವು ತಿಳಿದದ್ದನ್ನು ಪತ್ರಿಕೆಗಳ ಮುಖಾಂತರವೂ ಪ್ರಕಟಿಸಬೇಕು. ಸ್ವೋನ್ನತಿಯನ್ನುಂಟುಮಾಡಿಕೊಳ್ಳಲು ಆಧುನಿಕ ಕಾಲದಲ್ಲಿ ನವಾಗೊದಗಿದ ಹೊಸತಾದ ಸಾಧನವು

ಳ್ಳಬೇಕು. ಇದರಿಂದ ಸಮಾಜದಲ್ಲಿ ಶಿವಾನುಭವದ ಉಚ್ಚ ವಿಚಾರಗಳನ್ನು ಪ್ರಸಾರ ಮಾಡಲಿಕ್ಕೆ ಬಹಳ ಅನುಕೂಲವಾಗುತ್ತದೆ.

(ಖ) **ಎಂಜನೀಯರಿಂಗ ಕಾಲೇಜದ ವೀರಶೈವ ವಿದ್ಯಾರ್ಥಿಗಳು:—** ಇಲ್ಲಿಯ ಒಬ್ಬ ವೀರಶೈವ ವಿದ್ಯಾರ್ಥಿಗಳು ನಮಗೆ ಬರೆದಿರುವದೇನೆಂದರೆ ನಮ್ಮ ವಸತಿಗೃಹದಲ್ಲಿ ಮುಸಲ್ಮಾನ ಬ್ರಾಹ್ಮಣ ಮೊದಲಾದ ಅನೇಕ ಸಮಾಜಗಳ ವಿದ್ಯಾರ್ಥಿಗಳಿದ್ದಾರೆ. ಅವರೆಲ್ಲರೂ ವಾರದಲ್ಲಿ ಒಂದು ದಿವಸ ನೆರೆದು ತಮ್ಮ ತಮ್ಮ ಸಮಾಜಗಳಲ್ಲಿ ಆಗಿ ಹೋದ ಮಹಾನುಭಾವರ ಭಕ್ತಿ ಪರ ಉಕ್ತಿಗಳನ್ನು ಇಲ್ಲವೆ ಪದಗಳನ್ನು ಅಂದು ಎಲ್ಲರೂ ಕೂಡಿ ಪ್ರಾರ್ಥನೆ ಮಾಡುತ್ತಾರೆ. ಇಲ್ಲಿ ಕೆಲವು ವೀರಶೈವ ವಿದ್ಯಾರ್ಥಿಗಳಿದ್ದಾರೆ. ನಮ್ಮ ಧಾರ್ಮಿಕ ಉಕ್ತಿಗಳನ್ನು ಹೇಳಲು ನಮ್ಮ ಸಂಗಡಿಗರು ಬಯಸಿದಾಗ್ಗೆ ನಾವು ಮೌನದಿಂದಿರಬೇಕಾಗಿ ಬಂದಿದೆ. ಆದರೆ ಉಚ್ಚ ವಿಚಾರಗಳುಳ್ಳ ಮತ್ತು ಭಕ್ತಿ ಭಾವದಿಂದ ತುಂಬಿದ ಉಕ್ತಿಗಳು ನಮ್ಮಲ್ಲಿ ಅನೇಕ ವಿರುತ್ತವೆಂಬುದನ್ನು ನಾವು ಕೇಳಿದ್ದೇವೆ. ಅವುಗಳಾವವೆಂಬುದನ್ನು ನಮಗೆ ತಿಳಿಸಬೇಕು. ಅದರೆ ಅವು ಇಂಗ್ಲಿಷದಲ್ಲಿ ಇರಬೇಕು ಎಂದು ನಮಗೆ ಬರೆದಿದ್ದಾರೆ. ಉಚ್ಚ ಶಿಕ್ಷಣಹೊಂದುತ್ತಿರುವ ನಮ್ಮ ವೀರಶೈವ ವಿದ್ಯಾರ್ಥಿಗಳ ಪರಿಸ್ಥಿತಿಯು ಹೇಗಿರುತ್ತದೆಂಬದನ್ನು ವೀರಶೈವ ಸಮಾಜದವರು ಲಕ್ಷಿಸತಕ್ಕ ಸಂಗತಿಯು ಇದಾಗಿದೆ. ಜಗತ್ತಿನಲ್ಲಿಯ ಯಾವ ಧರ್ಮವಾದರೂ ಕೂಡ ಅದರಲ್ಲಿಯ ವಿಚಾರಗಳನ್ನು ಸರಿಗಟ್ಟುವಂಥ ವಚನ ವಾಙ್ಮಯವು ಈಗ ಪ್ರಕಟವಾಗಿದೆ. ಅದರಲ್ಲಿ ಭಕ್ತಿರಸಪೂರಿತವಾದ ಉಚ್ಚವಿಚಾರಗಳುಳ್ಳ ವಚನಗಳು ಬೇಕಾದಷ್ಟು ಇವೆ. ಅವುಗಳಲ್ಲಿ ಬೇಕಾದವುಗಳನ್ನು ಆಯ್ದು ಬೇರೆ ಯಾವ ಸಮಾಜದವರನ್ನೂ ಕೂಡ ಬೆರಗುಗೊಳಿಸಬಹುದಾಗಿದೆ. ಅದರೆ ಅವುಗಳ ಅರಿವು ನಮ್ಮ ವಿದ್ಯಾವಂತರಿಗೆ ಇನ್ನೂ ಇರುವದಿಲ್ಲೆಂದು ತೋರುತ್ತದೆ. ಒಂದು ವೇಳೆ ಅವುಗಳು ಗೊತ್ತಿದ್ದರೂ ಅವುಗಳನ್ನು ಅವರು ಓದಲು ಬಯಸುವದಿಲ್ಲ. ಇದು ಬಹುಶೋಚನೀಯವಾದದ್ದು. ನಮ್ಮ ಶಿಕ್ಷಣ ಕ್ರಮದಲ್ಲಿ ಧಾರ್ಮಿಕ ವಿಷಯವು ಸೇರ್ಪಡೆಯಾಗಿಲ್ಲ. ಹೀಗಿದ್ದರೂ ನಿತ್ಯದ ಪಾಠ ಕ್ರಮವು ತೀರಿದ ಬಳಿಕ ವಿದ್ಯಾರ್ಥಿಗಳಿಗೆ ಈ ವಿಷಯದ ಜ್ಞಾನ ಮಾಡಿಕೊಡಲು ಶಿಕ್ಷಕರಿಗೆ ಯಾವ ಆತಂಕವು ಇರುವದಿಲ್ಲೆಂದು ಸರಕಾರ

ವರು ಮಾಡಿಕೊಳ್ಳುವದಿಲ್ಲ. ವೀರಶೈವ ಸಮಾಜದವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡಿಸುತ್ತಲಿದ್ದಾರೆ. ಅವುಗಳಲ್ಲಿ ವೀರಶೈವ ಶಿಕ್ಷಕರು ಅನೇಕರು ಇದ್ದಾರೆ. ಅವರು ವಾರಕ್ಕೊಂದಾವರ್ತಿಯಾದರೂ ಒಂದು ಬಿಡುವಿನ ದಿವಸ ಸಭೆ ಸೇರಿಸಿ ವೀರಶೈವ ಸಂಸ್ಕೃತಿಯ ಜ್ಞಾನವನ್ನು ತಮ್ಮ ಶಾಲೆಗಳಲ್ಲಿಯ ವೀರಶೈವ ವಿದ್ಯಾರ್ಥಿಗಳಿಗೆ ಏಕೆ ಮಾಡಿ ಕೊಡಬಾರದು? ಅವರು ಆರ್ಯಸಮಾಜ, ಕ್ರಿಶ್ಚಿಯನ್ನ ಮೊದಲಾದವರ ಅನುಕರಣವನ್ನೇಕೆ ಮಾಡಬಾರದು? ಹಾಗೆಯೇ ನಮ್ಮಲ್ಲಿ ಅನೇಕ ವಸತಿಗೃಹಗಳಿವೆ. ಅವುಗಳಲ್ಲಿ ನಿತ್ಯ ಧಾರ್ಮಿಕ ಪಾಠವನ್ನು ಹೇಳುವ ಕ್ರಮವನ್ನೇಕೆ ಇಡಬಾರದು? ಕೆಲವು ವಸತಿಗೃಹಗಳಲ್ಲಿ ವಿದ್ಯಾರ್ಥಿಗಳು ಯಾಂತ್ರಿಕ ರೀತಿಯಿಂದ ಪೂಜಾದಿಕಾರ್ಯಗಳನ್ನು ನೆರವೇರಿಸುವದುಂಟು. ಆದರೆ ವೀರಶೈವ ಧರ್ಮವು ಬೌದ್ಧಿಕ ಮತ್ತು ಮಾನಸಿಕ ಸುಧಾರಣೆಗೆ ಮಹತ್ವ ಕೊಡುತ್ತಲಿದೆ. ಈಗಿನ ಬೌದ್ಧಿಕ ಮತ್ತು ವೈಚಾರಿಕ ಯುಗದಲ್ಲಿ ನಾವು ಇದೇ ಮಾರ್ಗವನ್ನು ಅನುಸರಿಸಬೇಕು. ನಾವು ಮೇಲ್ಕಂಡ ವಿದ್ಯಾರ್ಥಿಗಳಿಗೆ ವಚನಶಾಸ್ತ್ರಸಾರ ಭಾಗ ೧ ಇದರಲ್ಲಿರುವ ಅನೇಕ ಸ್ತೋತ್ರ ರೂಪವಾದ ಭಕ್ತಿಯ ವಚನಗಳನ್ನಾಯ್ದು ತಮ್ಮ ಶ್ರೋತೃಗಳಿಗೆ ಬೋಧಿಸಬೇಕೆಂದು ಸೂಚಿಸಿದ್ದೇವೆ.

(೬) ಶಿವಾನುಭವ ಸಂಘಗಳ ಕಾರ್ಯಗಳಿಗೆ ಆತಂಕಗಳು:- ಕೆಲವು ವಸತಿಗೃಹಗಳಲ್ಲಿ ವೀರಶೈವೇತರ ಅಧಿಕಾರಿಗಳಿಂದ ಶಿವಾನುಭವ ಮಂಟಪದ ಕಾರ್ಯಗಳಿಗೆ ಆತಂಕಗಳು ಬಂದಿರುವದು ನಮ್ಮ ತಿಳುವಳಿಕೆಗೆ ಬಂದಿದೆ. ಆದರೆ ಈ ಸಂಘಗಳು ಅಥವಾ ಮಂಟಪಗಳು ಕೇವಲ ಸಾಂಸ್ಕೃತಿಕವಾಗಿವೆ. ಕೆಲವುಗಳಲ್ಲಿ ಬ್ರಾಹ್ಮಣರೂ, ಮುಸಲ್ಮಾನರೂ ಸಹ ಧಾಗವಹಿಸಿರುವರೆಂದು ನಾವು ನಮ್ಮ ವಾಚಕರಿಗೆ ತಿಳಿಸಿದಲ್ಲಿ ಅವರು ವಿಸ್ಮಯಹೊಂದಬಹುದು. ಆದರೆ ನಿಜಸ್ಥಿತಿಯು ಹೀಗೆಯೇ ಇದೆ. ಯಾರು ತಮ್ಮ ಸಂಸ್ಕೃತಿಯನ್ನು ತಿಳಿಯಲು ಅಪೇಕ್ಷಿಸುತ್ತಾರೋ ಅವರೇ ಈ ಸಂಘಗಳ ಸಭಾಸದರು. ಭಗವದ್ಗೀತೆ, ಸಾಧುಗಳ ಅಭಂಗಗಳು, ದಾಸರ ಪದಗಳು, ಬಾಯಬಲ್ಲ, ಕುರಾನ ಇಂಥವುಗಳನ್ನು ತಾವಾಗಲಿ ಅಥವಾತಮ್ಮ ಮಿತ್ರರೊಡನಾಗಲಿ ಯಾರಾದರೂ ಓದಿದರೆ, ಅದನ್ನು ಪ್ರತಿಬಂಧಿಸುವದು ಎಲ್ಲಾದರೂ ಉಂಟೇ? ಇವುಗಳಂತೆಯೇ ಶಿವಶರಣರ ಉಕ್ತಿಗಳ ಸ್ವರೂಪು ಇದೆ. ಇದಕ್ಕೆ ಆತಂಕ ಬಂದಲ್ಲಿ ಅದು

ತಪ್ಪು ತಿಳುವಳಿಕೆಯ ಮೂಲಕ ಆಗಿರಬಹುದು. ಹಾಗಿದ್ದಲ್ಲಿ ಅದನ್ನು ಅವರಿಗೆ ತಿಳಿಸಿ ದೂರವಾಡತಕ್ಕದ್ದು. ಆದರೆ ಯಾರಾದರೂ ಬುದ್ಧಿಪುರಸ್ಸರ ಹೀಗೆ ಮಾಡಿದಲ್ಲಿ ಅದಕ್ಕೆ ಪ್ರತೀಕಾರ ಮಾಡುವ ಹಕ್ಕು ಪ್ರತಿಯೊಬ್ಬನಿಗೆ ಇದೆ.

(೭) ಹಸ್ತಲಿಖಿತ ಗ್ರಂಥಗಳ ಸಹಾಯಃ—ಈಚೆಗೆ ಕೆಲಮಹನೀಯರು ನಮ್ಮ ಗ್ರಂಥ ಪ್ರಕಟನಾ ಕಾರ್ಯದಲ್ಲಿ ಉಪಯೋಗ ಬೀಳಬಹುದಾದ ಹಸ್ತಲಿಖಿತ ಗ್ರಂಥಗಳನ್ನು ಕಳಿಸುತ್ತಿದ್ದದ್ದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಶ್ರೀಮುರುಘೇಂದ್ರದೇವ ಮು. ಬೆಂಗಳೂರು ಸರ್ವಭೂಷಣಮಠ ಇವರು 'ಪುರಾತನರ ವಚನ ಸಂಗ್ರಹ' ಎಂಬ ಗ್ರಂಥವನ್ನು ಶೋಧಿಸಿ ನಮ್ಮ ಕಡೆಗೆ ಕಳಿಸಿಕೊಟ್ಟಿದ್ದಾರೆ. ಶ್ರೀಚನ್ನಬಸವಸ್ವಾಮಿಗಳು ಬೆಲವಂತರ ತಾ॥ ಕಲಘಟಗಿ ಇವರು ಗುರು ಬಸವಕವಿಯ್ದ ಷಟ್‌ಕಾವ್ಯ, ಪಾಲ್ಕುರಿಕೆ ಸೋಮಾರಾಧ್ಯರ ಗಣಸಹಸ್ರ ಇವುಗಳನ್ನು ಕಳಿಸಿದ್ದಾರೆ ಇವುಗಳಲ್ಲಿ ಮೊದಲನೆಯ ಗ್ರಂಥದ ಸಹಾಯದಿಂದಲೇ ನಾವು ಈಗ ಅವಧೂತಗೀತ, ಮುಂದೆ ವೃಷಭಗೀತ ಈ ಮೊದಲಾದಕಾವ್ಯಗಳನ್ನ ಪ್ರಚ್ಚಹಾಕದೇಕೆಂದಿದ್ದೇವೆ. ಶಿವಶರಣರ ಚರಿತ್ರೆಗಳನ್ನು ಕಂಡುಹಿಡಿಯಲು ಅವರು ಕಳಿಸಿದ ಗಣಸಹಸ್ರವು ಉಪಯುಕ್ತ ಗ್ರಂಥವಾಗಿದೆ. ಅದು ಬೇಗನೆ ಪ್ರಸಿದ್ಧಿಸಲ್ಪಡುವದು. ಇವರು ಕಳುಹಿಸಿದ ಶಂಕರದಾಸಿಮಯ್ಯನ ಪುರಾಣವು ಶ್ರೀ. ವೀರಭದ್ರಪ್ಪ ಹಾಲಭಾವಿ ಬಿ. ಎ. ಎಲ್. ಎಲ್. ಬಿ. ನಿವೃತ್ತ ೧ನೇ ವರ್ಗ ಸಬಜಜ್ಜ ಇವರಿಂದ ಬಹಳ ಸಹಾಯವಾಗಿದೆ. ಮೈಸೂರಿನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ ಇವರು ಶಿವಾನುಭವ ಪತ್ರಿಕೆಯಲ್ಲಿ ಪ್ರಚ್ಚುಹಾಕಲು ತ್ರಿಭುವನತಾತವಿರಚಿತ ಶ್ರೀಗುರು ರಗಳೆಯನ್ನು ಕಳಿಸಿದ್ದಾರೆ. ಬದಾಮಿ ಮಾಮಲೇದಾರ ಕಚೇರಿಯಲ್ಲಿ ಕಾರಕೂನರಾದ ಶ್ರೀಯುತ ಲಿಂಗನಗೌಡ ಪಾಟೀಲ ಇವರು ತಮ್ಮಲ್ಲಿದ್ದ ತಾಡವೋಲೆಯ ಗ್ರಂಥಗಳನ್ನು ನಮ್ಮ ಕಡೆಗೆ ಕಳಿಸಿ ಕೊಟ್ಟಿದ್ದಾರೆ. ಈ ಪ್ರಕಾರ ನಮಗೆ ಸಹಾಯವನ್ನು ಮಾಡುತ್ತಿರುವ ಈ ಮಹನೀಯರೆಲ್ಲರಿಗೆ ನಾವು ಬಹಳ ಆಭಾರಿಯಾಗಿದ್ದೇವೆ.

(೮) ಗ್ರಂಥಗಳನ್ನು ಉಚಿತವಾಗಿ ಬೇಡುವವರಿಗೆ ಸೂಚನೆ:- ಈಚೆಗೆ ಬಹು ಜನರು ವಿಶೇಷವಾಗಿ ಲೈಬ್ರರಿಗಳ ಚಾಲಕರೂ, ಮುಕ್ತಾಧಿಕಾರಿಗಳೂ ಶಿವಾನುಭವ ಗ್ರಂಥಗಳನ್ನು ತಮಗೆ ಪುಕ್ಕಟೆಯಾಗಿ ಕಳಿಸ

ಕೊಡಲು ನಮಗೆ ಬಹಳ ಒತ್ತಾಯಪಡಿಸುವದುಂಟು ಆದರೆ ಈವರೆಗೆ ನಮಗೆ ಈ ಕಾರ್ಯದಲ್ಲಿ ಸಹಾಯ ಮಾಡಿದವರ ಸಂಖ್ಯೆಯು ಅತ್ಯಲ್ಪವಾಗಿದೆ. ಅದು ಇಲ್ಲವೆಂದರೂ ನಡ್ಡುವದು. ಅಲ್ಲದೆ ವೀರಶೈವ ಸಮಾಜದಲ್ಲಿ ಧಾರ್ಮಿಕ ಗ್ರಂಥಗಳನ್ನು ಪರಿಶೀಲಿಸುವವರ ಸಂಖ್ಯೆಯು ಬಹಳ ಕಡಿಮೆ. ಅದರಿಂದ ಗ್ರಂಥಗಳು ಅಲ್ಪಪ್ರಮಾಣದಿಂದ ಖರ್ಚಾಗುತ್ತವೆ. ಕೆಲವರು ಗ್ರಂಥಗಳ ಬೆಲೆ ಇಳಿಸಿದಲ್ಲಿ ಹೆಚ್ಚು ಖರ್ಚಾಗುವದೆಂದು ಅಭಿಪ್ರಾಯಪಟ್ಟಿದ್ದರಿಂದ ಹಾಗೆ ೨ ವರ್ಷಗಳ ವರೆಗೆ ಪ್ರಯತ್ನ ಮಾಡಿ ನೋಡಿತು. ಆದರೂ ಕೂಡ ಅವುಗಳ ಗ್ರಾಹಕರು ಹೆಚ್ಚಾಗಲಿಲ್ಲ. ಮೂಲ ಗ್ರಂಥಗಳನ್ನು ಓದಿ ತಿಳಿದುಕೊಳ್ಳುವ ಶಕ್ತಿ ಇದ್ದವರ ಸಂಖ್ಯೆಯು ನಮ್ಮ ಸಮಾಜದಲ್ಲಿ ಬಹು ಕಡಿಮೆ ಇರುವದರಿಂದ ಈ ಸ್ಥಿತಿಯು ಹುಟ್ಟಾಗುವದು ಸ್ವಾಭಾವಿಕವದೆ. ಈ ಎಲ್ಲ ಸಂಗತಿಗಳನ್ನು ಗ್ರಂಥಗಳನ್ನು ಕೊಳ್ಳಲು ಬೇಡುವವರು ಲಕ್ಷಿಸಬೇಕೆಂದು ನಮ್ಮ ಸವಿನಯ ವಿನಂತಿ ಇದೆ.

(೯) **ಶಿವಾನುಭವ ಪತ್ರಿಕೆಗೆ ಸಹಾಯ:** – ವೀರಶೈವ ಸಮಾಜದಲ್ಲಿ ಕೆಲ ಮಹನೀಯರು ನಮ್ಮ ಕಾರ್ಯದಲ್ಲಿ ವಿಶೇಷ ಸಹಾನುಭೂತಿಯುಳ್ಳವರಾಗಿ ನಮಗೆ ಸಹಾಯ ಮಾಡುತ್ತಲಿದ್ದಾರೆ. ಇವರಲ್ಲಿ ಲಕ್ಷ್ಮೇಶ್ವರದಲ್ಲಿಯ ಮು. ರಾ. ರಾ. ದೊಡ್ಡಬಸಪ್ಪ ಬಸೆಟ್ಟಿಪ್ಪ ತಟ್ಟಿ ಈ ಮಹನೀಯರು ಇದ್ದಾರೆ. ಶಿವಾನುಭವ ಪತ್ರಿಕೆಯ ಸಹಾಯಕ್ಕೋಸ್ಕರ ಕೆಲವು ವರ್ಷಗಳ ಹಿಂದೆ ಅವರು ೪೦ ರೂಪಾಯಿಗಳನ್ನು ಕಳಿಸಿದ್ದರು. ಅವರು ಈ ತಿಂಗಳು ಪುನಃ ೬೦ ರೂಪಾಯಿಗಳನ್ನು ನಮ್ಮ ಕಡೆಗೆ ಕಳಿಸಿದ್ದಾರೆ. ನಾವು ಅವರ ಉಪಕಾರವನ್ನು ಬಹಳವಾಗಿ ಸ್ಮರಿಸುತ್ತೇವೆ ಅವರ ಅನುಕರಣವನ್ನು ನಮ್ಮ ಶ್ರೀಮಂತರು ಮಾಡಿದ್ದಾದರೆ ಶಿವಾನುಭವ ಪತ್ರಿಕೆಯ ಕಾರ್ಯಗಳನ್ನು ಭರದಿಂದ ಮುಂದುವರಿಸಲು ನಮಗೆ ಬಹಳ ಅನುಕೂಲವಾಗುವದು.

ಶರೀರವಿದುಂ ಭವರುಜೆ ನೀನರಿಯೆ
ವರ ವೈದ್ಯವ ಬಯಸುವೆ ನರಗುರಿಯೆ
ಪರಮೌಷಧಿ ಭಸಿತವ ನೀ ಮರೆಯೆ
ಹರನೊಲವಿಲ್ಲದಂ ನೀನುರಿಯೆ ॥೪೪॥

ವಿಧಿಕೃತ ದುಃಕೃತವೆಂಬಿವ ಸುಟ್ಟು
ಸದಸದ್ವಸ್ತುವಿವೇಕವ ತೊಟ್ಟು
ಸದಮಲಗುರುವಚನವ ಬೈಚಿಟ್ಟು
ಬೆದರನು ತಾಂ ಮನಸಿಗೆ ಕಂಗೆಟ್ಟು ॥೪೫॥

ಪ್ರಕಟಿಸಿ ವಿಧಿಲಿಖಿತವನೊಡೆದುಳಿದು
ಸಕುಟಿಲ ಸಂಸಾರವ ಸದೆಬಡಿದು
ಪ್ರಕೃತಿವಿಕಾರಂಗಳ ಕೊಡಹಿದುದು
ಸ್ಪಕಳಿತವೆನಿಪವಧೂತತ್ವವಿದು ॥೪೬॥

ನಾನಾ ವಿಧವವಧೂತನ ಚಿನ್ಹ
ಏನೆಂದರಿಯಲುಬಾರದು ತನ್ನ
ಜ್ಞಾನೋತ್ತರ ವಿವರಣೆಯೊಳಭಿನ್ನ
ಸಾನಂದವೆ ತಾನಾಗಿಹ ಚೆನ್ನ ॥೪೭॥

ಅಧಿಕರೊಳತ್ಯಧಿಕನು ಅವಧೂತ
ಸದಸಿಕೊಳನು ಯಮುಗಿಮ ನಿಂದಾತ
ಬೆದರನು ಹಸುತೃಷೆಗಳಗತಿನೀತಾ
ಮದಲಾಲಸಗತ ಶಿವಕರಜಾತ ॥೪೮॥

ಕಟಪಟಮೃಷ್ಟಕ ಟಂಕಟದೇಹ
ದಿಟಪುಟವಿಹಪರಸುಖ ನಿರ್ಮೋಹ
ಪಟುತರ ಗುರುಸಂಯಮಸಂದೋಹ
ಮಟಮಟಿಸದೆ ಮಾಸದ ಸನ್ನಾಹ ॥೪೯॥

ಜಡೆಮುಡಿಮುಂಡನಚಿನ್ಹಗಳಿಂದ
ಮೃಡ ತಾಂ ಗುರುರೂಪಾದುದರಿಂದ

ಫಾಳದೊಳಮಳವಿಭೂತಿಯ ಧಾನ
ನಾಲಗೆಯೊಳು ನಾಮಾಮೃತಪಾನ
ಮೇಲುಶಿಖರದೊಳಗಭವನ ಧ್ಯಾನ
ಮೂಲಾಧಾರಬಲಾದ್ಭವಹೀನ ॥೬॥

ಅವರವರೊಳಗಿಹನವರವರಂತೆ
ವಿವರಿಸಿ ನೋಡಲು ತಾಂ ತನ್ನಂತೆ
ರವಿಗಗಣಾಂಗಣದೊಳು ನಡೆವಂತೆ
ಭವವಿರಹಿತನಾದನು ಓರಂತೆ ॥೮॥

ಭಸಿತಕರಂಡಕಮಂಡಲುದಂಡ
ಪಸರಿಸದಜಿನಹಂಕ್ಷರತಂಡ
ಸ್ವಸನಮನೋಜಯನಾಗಿಹ ಕಂಡ
ಮಸುಳಿಸದಿಹ ಸದ್ಗುರುವಿಂಡ ॥೯॥

ಅತಿ ಪಟುವತಿ ಹಟವತಿ ದಿಟನುದಿತ
ಕೃತಿಹಿತಮತಿಸಾತ್ವಿಕ ಗುಣನಿರುತ
ಮತಿಮಥನಾಗ್ನಿಕಳಾಪ್ರಭೆಭರಿತ
ತೃತಿವಿಘಟನತಾಂತ್ರಿ ಜಗದ್ವಿನುತ ॥೭॥

ಅಕಪಟದಿಂದವಧೂತನೆ ಮುಖ್ಯ
ಅಕಪಟವೆನೆ ಸಾಕ್ಷಾನ್ನಿಜದಾಖ್ಯ
ಸಕಲಿತ ನಿಜವೆಂದೆನೆ ಪರಮೈಕ್ಯ
ವಿಕಸಿತದೈಕ್ಯಮೆನಲು ತತ್ಸೌಖ್ಯ ॥೮॥

ನಟಭಟರಂತೆ ವಿನೋದವ ಮಾಡಿ
ನಟಿಸುವ ತಾಂ ಲೌಕಿಕರೊಡಗೂಡಿ
ಸಟೆ ಜನವನು ಸೋಂಕಲು ನಡುವಾಡಿ
ಮಠದೊಳಗಿಹನಭವಾತ್ಮನ ಕೂಡಿ ॥೯॥

ಶಿರದೊಳಗಿರದಡಸಿದ ಶಿವಲಿಂಗ
ಉರದೊಳು ಬೆಳಗುವ ಮಂತ್ರದ ಸಂಗ

ಒಡಲೂಟವನಳಿದಿಹನನುವಿಂದ
ಒಡವೆರದಿಹ ಪರಮನೊಳೊಲವಿಂದ ॥೬೦॥

ನಸುಭಸಿತೋಧ್ವೂಳನವನು ಮಾಡಿ
ಕೃಸ ಗಾತ್ರವ ಸಂಯಮದೊಳು ಕೂಡಿ
ಶ್ವಸನನನಂಬರದೊಳಗೆಡೆಮಾಡಿ
ಹಸನಾಗಿಹನಮಲಾತ್ಮನ ಕೂಡಿ ॥೬೧॥

ಸ್ಥಾವರಜಂಗಮದೊಳಗೇನೊಂದ
ದೆವಸಗೊಳಿಸನಲಾತಂ ನಿಂದ
ಜೀವೇಶ್ವರ ಸಂದಳಿದುದರಿಂದ
ಧಾವಾತೀತನೆನಿಪನದರಿಂದ ॥೬೨॥

ಆರುನೆಲೆ ಕರುವಾಡದೊಳಿಹನೊಲಿದು
ಗಿರಿಗುಹೆವನದೊಳಿಹ ಸುಖದಳೆದು
ಹರುಷವಿಷಾದಂಗಳನತಿಗಳೆದು
ಚರಿಸುವನಭವಂಘ್ರಿಯ ದೃಢವಿಡಿದು ॥೬೩॥

ಉರು ಬಿಮರುನ್ಮುಖದಿಂ ದಂಡವನು
ಕೊರೆದು ಸಿಳೀಮುಖದಿಂತಗ್ನಿಯನು
ತರುಬುತಲಾಕಾಶಕೆ ಪಾಯಿಸಿದನು
ತೆರಹುಗುಡುತ ಗುರುಶರಣೆನುತಿಹನು ॥೬೪॥

ಉಚ್ಚಳಿಸಿಯೆ ಮರುತನನಂಬರದ
ಮುಚ್ಚಳವಂ ಪಡಿಲಿಸಿ ಮಣಿಸರದ
ನಿಚ್ಚಣಿಗೆಯನಡರಿಯೆ ಕಂಧರದ
ಜೆಚ್ಚರದಿಂ ಗುರುವಿಹ ವರಕರದ ॥೬೫॥

ಚತುರ್ದಳಕಾಂಚನಮಂ ನೆರೆ ಬಿಡದೆ
ಪಿತೃಪತಿಗೆ ನಿಜದೇಹವ ಕುಡದೆ
ಪ್ರತಿಬಿಂಬದ ಪರಿಯಂತುಸುರಿಡದೆ
ಕ್ಷಿತಿಯೊಳು ಚರಿಸುತ್ತಿಹನನುಗೆಡದೆ ॥೬೬॥

ಹಂದುದ ಗಂಟಿಕ್ಕಿದಡನು ತಿರುಗಿ
ಕಿಂದಲ್ಲದೆ ಹಿಂದಾಗದು ನಲುಗಿ
ಮರಮರದರಿಯಲು ಬುದ್ಧಿಯೊದಗಿ
ನೆರೆ ಸುಖವಿಲ್ಲ ವಿಮರುಶನಕೂದಗಿ ॥೨೦॥

ಮಣಿಮಂತ್ರೌಷಧಿಗಳ ಬಲವಲ್ಲ
ವಣಿಜತೆ ಕೃಷಿಯಾಚಕ ತನಗಿಲ್ಲ
ತೃಣಕೆಣೆಯವಗೆ ವಿಭೂತಿಗಳಿಲ್ಲ
ತ್ರಿಣಯಳಖಂಡಿತನೆಂಬುದ ಬಲ್ಲ ॥೨೧॥

ಇವನನನೆಂದೆನ್ನನ ನಿಲುಕಡೆಯ
ಹವಣಿಸಿ ಸಮ್ಯಕ್ಖಂಡಿತ ಸಿರಿಯ
ಶಿವನೊಲವಿಂದನುಭವಿಸುವ ಶಕಿಯ
ಭವನದೊಳಹನಮೃತದ ಹರವರಿಯ ॥೨೨॥

ಭವಹರ ನಿನ್ನ ಸಮಾರಾಧಿಸುತ
ಭವಿಯಹನೆಂತದು ಹೋಗಲಿ ಪುರತ
ಶಿವಶಿವ ತಚ್ಚರಣದೊಳನವರತ
ವಿವಸನದಿಂ ಧನ್ಯನೊ ಗತದುಂತ ॥೨೩॥

ಎನಿತೆಸೆಯಲು ಸರವದುಗುರಿ ನಡೆದು
ಜನಿಸುಗುದೆಂತು ಸುಖಂ ಕರ ಜಡಿದು
ನೆನಹೆಭವನ ಮುಟ್ಟೆದು ಹರಿಹರಿದು
ತನಗಮೃತಂ ಭವಿಸುವುದೆಂತೊಸೆದು ॥೨೪॥

ಗುರಿಗೈದದ ಸರಮಂ ಪರುಷತಿಯ
ತರುಬದ ಮಾನಸವಂ ಭವವಿಧಿಯ
ಹರಿಯದ ಸಂಗತಿಯಂನಿಜ ಸುಧೆಯ
ಸುರಿಯದ ನಾಲಗೆಯಂ ಸುಡು ನಿಡೆಯ ॥೨೫॥

ಅರಿವೆನಲುಳುಮೆಯದೆಂ ನಿರ್ಗುಣದ
ಕುರುಹೆನಿಸಿಹ ಕಥದಿಂ ಕೇಳ್ದಿದದ

ಶರಿರದೊಳವಭಾಸಿತ ಭಸಿತಾಂಗ
ಗುರುಮುತವಿದರಿಂದವೆ ಶುಭದಂಗ ॥೨೬॥

ಪ್ರಭೆ ಮುಸುಕಿದ ಮಸ್ತಕದಿಂ ಮೇಲೆ
ನಭಸಿ ವಿಯದ್ಗಂಗಾಜಲತಲೆ
ವಿಬುಧವಿಶಿಷ್ಟಕದಂಬಕಸೋಲೆ
ವಿಭವವದಂ ಶರಣಾಂಗದು ಲೀಲೆ ॥೨೭॥

ಹರನೊಲವಿನ ಕರುಣಾವೃತಸಿಂಧು
ತೆರೆ ಮುಸಗುತ ತನ್ನೊಳಗಿರಲಂದು
ಹೊರೆಯಿಲ್ಲದೆ ಸರ್ವರು ಜಯಯೆಂದು
ಧರವಸದಿಂ ಭಜಿಸುವಂದಿರ್ವಂದು ॥೨೮॥

ಜಗಜಗಿಸುವ ತೇಜಸ್ತಂಭವನು
ಬಗೆವಾಡುತ ನೆರೆ ಕಂಡ ವನಜನು
ಹಗಲಿರುಳಿನ ಹಂಗಳಿದುಳಿದಿಹನು
ಗಗನಾಂತರನಾಗಿಹ ಸುಖಕರನು ॥೨೯॥

ಶಿವಪೂಜೆಯುನಾಗಳು ಮುದದಿಂದ
ಹವಣಿಸುತಿಹುದನುಭವದೊಲವಿಂದ
ನೆವವಿಲ್ಲದೆ ಪೇಳಿದೆನೆಲೆ ಕಂದ
ತವೆ ಸುವಿಗಳು ಕೇಳ್ದಾವದರಿಂದ ॥೩೦॥

ಮಿಗೆ ಮಾನಸಪೂಜನದಿಂ ಮಗನೆ
ಜಗದೊಳಗಾವು ಬಾಳ್ವೆವು ಭಲಭಲನೆ
ದಿಗಲಡದೆಂ ಶಿವಪೂಜೆಯ ಸಸಿನೆ
ಸೊಗಸಳಿಯದೆ ಮಾಡುವುದೊಡನೊಡನೆ ॥೩೧॥

ಮನದೊಳು ಶಿವಪೂಜನಮಂ ಬಿಟ್ಟು
ಮನುಜನ ಹೋ ತನ್ನಿಂ ತಾಂ ಕೆಟ್ಟು
ತನುಭವಿಯವ ಜಗದೊಳು ಕರಕಟ್ಟು
ಜನಿವೃತಿಗಳಿಗಂಗವಮುಂ ಕೊಟ್ಟು ॥೩೨॥

ಅರಿವುಳ್ಳವನನುಗೆಡಿಸಿಹ ಪರದ
ಸೆರೆಯಾಗಲು ಬಲುಹಿಂ ಗುರುಪದದ ॥೪೬॥

ಕಡನರಿವಿಂ ಕಲ್ಮಶದಿಭದೊಡಲು
ಸಿಡಿಯುವೆ ಬಹು ವ್ಯಸನಕೆ ತನುಗೊಡಲು
ಒದೆವುದೆ ಭವಲಿಖಿತಂ ರುಜೆ ಬರಲು
ತಡೆಯದೆ ಸುಖ ಬಹುದೇ ನಿಜಗೊಳಲು ॥೪೭॥

ಇತರೇತರ ಕುಳಕದಿ ಭವ ಸೃಷ್ಟಿ
ಸ್ಥಿತಿಲಯಗಳ ತೋರುವುದದು ಪುಷ್ಟಿ
ಮತಿಗೆಡದಭವನೊಳಗೆ ಮನಮುಟ್ಟಿ
ಪ್ರತಿ ವಿರಹಿತನಹನೇ ಜಗಜಟ್ಟಿ ॥೪೮॥

ನಿರುಪಾಧಿಕ ಸೇವಕರುಗಳಾಗಿ
ಕರಪದಗಾವಾಕ್ಕುಗಳಿರಲಾಗಿ
ತರಹರ ವಿಮಳಕ್ಷಮರುಗಳಾಗಿ
ಶರಿರದೊಳಿರಬಹುದೇ ತನು ಬೀಗಿ ॥೪೯॥

ಹಲವಂಗದ ಕೋಟಲೆಯನು ವಾಡಿ
ತೊಲಗದೆ ವಾಗಾದಿಗಳಿವೆ ನೋಡಿ
ಗೆಲಬಹುದಲ್ಲದಿವಂ ಹೋಗಾಡಿ
ನಿಲಬಹುದೇ ತನುವಂ ತಾ ಕೂಡಿ ॥೫೦॥

ಶಿವನೊಲವ ಹರಿವಿಭೇದವನಿಗು
ನೆವವಂ ಬಿಡು ಚಿಂತೆಗೆ ಹೊರಗಾಗು
ತವಕಿಸದಿರು ಗುರುಮತದೊಳು ಬೀಗು
ಭವಹರಿದಿದರಿಂದವೆ ಸುಖಿಯಾಗು ॥೫೧॥

ತನಗಿಹದೊಳು ಫಲಪದವಿಯ ಕರ್ಮ
ತನುಗಶವಹುದೀ ತರದೊಳದು ಗುಮ್ಮ
ವಿನಯವಿಮುಖಪರಿಹಾರಕ ಧರ್ಮ
ನಿನಗೊಲವಿಂ ಪೇಳಿದೆನಿದು ವರ್ಮ ॥೫೨॥

ರೂಪದುಪೇಕ್ಷಿಸಿ ಮನದೊಳು ಸಲುಪ
ಗೋಪಾಳಕೆಯಿಂ ನೋಡಲು ಜಗವ
ವ್ಯಾಪಕ ಶಿವನೊರ್ವನೆ ದಿಟ ಮಿಗುವ
ಸೋಪಾಯದಿ ತಿಳಿಯಲು ತಾನುಳವ ॥೫೩॥

ಶಮೆದಮೆಶಾಂತಿತಿತಿಕ್ಷೆಗಳಿಂದ
ಕ್ರಮವಿದು ನಾಂ ಚರಿಸುವ ನಲವಿಂದ
ವಿಮಳಾತ್ಮನ ಕೂಡಿಹನನುವಿಂದ
ಸಮವಿರಹಿತನಾಗಿಹುದದರಿಂದ ॥೫೪॥

ತಥತಿಥಿಸರಮಾತಾಯಸಮೇತ
ಪ್ರತಿಯಹ ಚತುರ್ವಿಂಶಕ ಸಂಗಾತ
ಸ್ಥಿತಿಯದರಿಂ ತಾನಾತ್ಮನತೀತ
ಶ್ರುತಿಸಾಕ್ಷಿಕನಾಗಿಹ ಶಿವಜಾತ ॥೫೫॥

ನರ್ತಿಸುತಿಹ ಮಣಿಮಯದೀಪಕದ
ಪುತ್ಥಳಿಯನು ಕಂಡವನೊಳು ನುಡಿದ
ಮರ್ತ್ಯನಮರ್ತ್ಯನೆನಿಸಿ ನಿಜಸುಖದ
ತಥ್ಯವೆ ತಾನಾಗಿಹನನುಭವದ ॥೫೬॥

ನೀನಭವನ ಬಿಡದಿಹ ಪರಿ ನಿನ್ನ
ತಾನಭವಂ ಬೆಂಬಿಡ ಕೇಳ್ಮುನ್ನ
ಹಾನಿ ಹೊಗದು ತನಗಖಿಲವಭಿನ್ನ
ಜ್ಞಾನದ್ವಯವಾಗಿಹುದದು ಚೆನ್ನ ॥೫೭॥

ಜಗವಿದು ಶಿವನಾಜ್ಞಾಗುಣದಿಂದ
ಬಿಗಿದನು ವಸವಾಗಿಹುದದರಿಂದ
ವಿಗೆ ಶಿವ ತನ್ನೊಳಗಿರೆ ನಲವಿಂದ
ಬೆಗಡದೆ ಜಗವರ್ಚಿಪುದದರಿಂದ ॥೫೮॥

ಕರಣೇಂದ್ರಿಯ ಪದದಿಂದುಚ್ಚಳಿಸಿ
ತರಣಿಯ ಕಿರಣಂಗಳ ಗವಸಡಿಸಿ

ಪರಿಪೂರ್ಣಕ್ರಭೆಗಾಶ್ರಯವೆನಿಸಿ
ಸ್ಥಿರವಾಗಿಹುದನುಭವಸುಖವೆನಿಸಿ ॥೯೯॥

ಸ್ತೋತಿಯೊಳನುಕಂಪದಿನವಧೂತ
ಗೀತಿಯನನುನಯದಿಂ ಕೇಳ್ದಾತ
ರೇತದೊಳವತಂಸದ ನಿರ್ಜಾತ
ಜ್ಯೋತಿಯೊಳವತಂಸದ ಗತಭೀತ ॥೧೦೦॥

ಸ್ವಾನುಭವವ್ಯಯದಿಂ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹುವಿಧವ
ನಾನಂದದಿ ಪೇಳ್ದನು ನಿಜಮತವ ॥೧೦೧॥

ಪೂರ್ಣ ಲಿಂಗಸ್ಥಲವೆಂದೇ ಹೇಳಿ ಮಂಗಳಮಯ ನಿರ್ಮಲ ಸ್ವರೂಪವಾದ ಪರಮಜ್ಞಾನದ ಮಹದರಿವಿನ ನಿಜ ನಿಃಕಲ ಲಿಂಗವು ಅಂಗವ ಚಿತ್ತು ತೋರಿದ ಈ ಚಿತ್ತೇ ನಿನ್ನಂಗ ಚಿದ್ಘನಲಿಂಗವೆ ನಿನ್ನ ಪ್ರಾಣವೆಂದು ಕಣ್ಮನ ಕರಸ್ಥಲಕ್ಕೆ ದೃಗ್ಗೋಚರ ಮಾಡಿಕೊಟ್ಟಂಥ ಗುರು ಶರಣು. ಅಂತಪ್ಪ ಗುರುಮೂರ್ತಿಗೊಂದು ವೇಳೆ ನಮಸ್ಕಾರವು.

ಮೂಲಃ— ಒಳಹೊರಗೆನ್ನದೆ ಎನ್ನೊಳು ತನ್ನಯ ಹೊಳಿವ ಜ್ಞಾನ ಜ್ಯೋತಿಯ। ಬೆಳಗೆ ತಿಳಿವಂತೆನ್ನಯ ಕಣ್ದೆರವೆಯ ಪುಟ್ಟಿಸಲಹಿದ ಗುರು ಶರಣು.

ಟೀಕು— ಒಳಹೊರಗೆನ್ನದೆ, ಅಂತರಂಗ ಬಹಿರಂಗವೆನ್ನದೆ ಅಂತರ್ಬಳಿ ಬಹಿರ್ಬಳಿಯೆನ್ನದೆ ಎನ್ನೊಳು ಶಿಷ್ಯೋತ್ತಮನಲ್ಲಿ ತನ್ನಯ ಆ ಶ್ರೀಗುರು ಮೂರ್ತಿಯು ತನ್ನ ಸಂಬಂಧವಾದ ಅಂತರಂಗದಲ್ಲಿ ಹೊಳೆವ ತುಂಬಿ ತೊಳವೆಳಗಿ ಪ್ರಥಾವಿಸುವ ಜ್ಞಾನ ಜ್ಯೋತಿಯು ಮಹಾಜ್ಞಾನ ದೀಪ್ತಿಸ್ವರೂಪವಾದ ವಸ್ತುವಿನ ಬೆಳಗ ಪ್ರಕಾಶವನು ತಿಳಿವಂತೆ ಅಂಗದಲ್ಲಿ ಇಷ್ಟಲಿಂಗವಾಗಿ ಮನದಲ್ಲಿ ಪ್ರಾಣಲಿಂಗವಾಗಿ ಅರಿವಂತೆ ಎನ್ನ ಕಣ್ದೆರೆಯ ಪುಟ್ಟಿಸಿ ಸಲಹಿದ ಎನ್ನ ಸುಜ್ಞಾನ ದೃಷ್ಟಿಯನು ಪ್ರಥಾವಿಸಿ ಕೊಟ್ಟು ಸಲಹಿದ ತನ್ನ ಪಾಮೋದಕ ಪ್ರಸಾದವನು ಕೊಟ್ಟು ರಕ್ಷಿಸಿದ ಶ್ರೀ ಗುರುವೇ ಶರಣು, ಅಂತಪ್ಪ ಐಶ್ವರ್ಯೋಪಲಕ್ಷಿತವಾದ ಆಚಾರ್ಯಂ ಗೋಸ್ಕರ ನಮಸ್ಕಾರವು.

ಮೂಲಃ— ಉರಿ ಕರ್ಪುರವ ಸೋಂಕಿದಂತೆನ್ನೊಳು ಬೆರಸಿಪ್ಪ ಮಹಾಘನವನು ತೋರಿ। ಪರಮ ಸುಖದೋರಿದ ಸಿದ್ಧ ಸೋಮೇಶ್ವರ ಕರುಣಾಮೃತ ಗುರುವೆ ಶರಣು.

ಟೀಕು— ಉರಿ ಕರ್ಪುರವ ಸೋಂಕಿದಂತೆ ಉರಿಯು ಕರ್ಪುರವು ಮೂರುಕೂಡೆ ಪ್ರಜ್ವಲಿಸಿದಲ್ಲಿ ಮರಳಿ ನೋಡಿಹೆನೆಂದೊಡೆ ಉರಿ ಇಲ್ಲ ಕರ್ಪುರವು ಇಲ್ಲವೆಂಬ ಹಾಗೆ ಬಿಜ್ಞಾಲಾಸ್ಪರೂಪವಾದ ಷಡ್ವಿಧ ಲಿಂಗವು ಸದ್ವಾಸನಾಸ್ವರೂಪವಾದ ಷಡ್ವಿಧಾಂಗವು ಕೂಡಿ ಸಮರಸವಾದಲ್ಲಿ ಮರಳಿ ನೋಡಿಹೆನೆಂದಡೆ ಅಲ್ಲಿ ಅಂಗ ಶೇಷಲಿಂಗಶೇಷವೆಂಬೆರಡು ಇಲ್ಲದೆ ಇಪ್ಪುದು. ಎನ್ನೊಳು ಜ್ಞಾನ ಕಲಾತ್ಮನಲ್ಲಿ ಬೆರಸಿರ್ಪ ಸರ್ವಾಂಗದಲ್ಲಿ ಸರ್ವಾಂಗಲಿಂಗವಾಗಿ ಕೂಡಿರ್ಪುದು. ಮಹಾ ಘನವನು ಮೋಕ್ಷಾಧಿಕ್ಯ

ವಾದ ವಸ್ತುವನು ತೋರಿ ಸಾಕ್ಷಾತ್ಕಾರವಾಗಿ ಕಾಣಿಸಿ ಪರಮ ಉತ್ಕೃಷ್ಟವಾದ ಸುಖದೊಳು ಪರಿಣಾಮದಲ್ಲಿ ಇರಿಸಿದ ಮಡಿಗಿದ ಸಿದ್ಧ ತನುವು ನಾತ್ಮನಲ್ಲಿ ಪ್ರಸಿದ್ಧವಾದ ಸೋಮೇಶ ಉಮಾ ಸಹಿತವಾದಂಥ ಕರುಣಾಮೃತ ಗುರುವೇ ದಯಕ್ಕೆ ನಿತ್ಯವಾದಂಥ ಎಲೆ ಗುರುವೇ ಕೃಪಾಸುಧಾ ಸ್ವರೂಪವಾದಿರಿ ಅರ್ಚನೆ ಶರಣು ನಿನಗೆ ನಮಸ್ಕಾರವು.

ಸೂತ್ರಃ—ಇಂತು ಗುರುಕರುಣಮುಂ ಪಡೆದ ಮಹಾಮಹಿಮನ್ನ ಸ್ಥೂಲ ತನುವಿನ ವ್ಯವಹಾರಮುಂ ಕೆಡಿಸಿ ಸದಾಚಾರ ಸಕ್ರಿಯಾ ವರ್ತನೆಗೆ ಸಾಧನವಾಗಿ ಅಂಗದ ಮೇಲೆ ಇಷ್ಟಲಿಂಗ ಸ್ವಾಯತವಾದ ಭೇದ ವೆಂತಿರ್ದುದೆಂತೆಂದೊಡೆ ಮುಂದೆ ಲಿಂಗಧಾರಣ ಸ್ಥಲವಾದುದು.

ಟೀಕುಃ—ಸೂತ್ರ ಸೂಚನ ಮುಚ್ಯತೆ ಎಂದು, ಇಂತು ಈಪ್ರಕಾರದೆಸೆಯಿಂದೆ ಗುರು ಸ್ವಯಂಜ್ಯೋತಿಸ್ವರೂಪವಾದರ್ಚನೆಯಿಂದೆ ಕರುಣಮುಂ ವೇಧಾ ಮಂತ್ರ ಕ್ರಿಯಾನುಗ್ರಹವೆಂಬ ದಯವನು ಪಡೆದ ಹಡೆದಂಥ ಮಹಿಮನು ಪೂಜ್ಯವಾದ ಮಹಾತ್ಮನು ಸ್ಥೂಲತನುವಿನ ಸ್ಥೂಲದೇಹದ ವ್ಯವಹಾರಮುಂ ಕೆಡಿಸಿ ಜಾಗ್ರಾವಸ್ಥೆ ವಿಶ್ವಜೀವನ ವ್ಯಾಪಾರವನು ಬಿಡಿಸಿ ಸದಾಚಾರ ಸದ್ಭಕ್ತರು ಮಹೇಶರುಗಳು ಅಹುದು ಅಹುದು ಎಂಬ ಹಾಗೆ ಅಚಂಸುವುದೆ ಸದಾಚಾರ ಸಕ್ರಿಯಾ ವರ್ತನೆಗೆ ಉತ್ತಮ ಕ್ರಿಯಾರೀತಿಗೆ ಸಾಧನವಾಗಿ ಉಪಕರಣ ದ್ರವ್ಯವಾಗಿ ಬೀಜವಾಗಿ ಅಂಗದ ಮೇಲೆ ಆಚಾರಂಗದಮೇಲೆ ಇಷ್ಟಲಿಂಗ ಕ್ರಿಯಾಲಿಂಗವು ಅಂತುಮಲ್ಲದೆ ಶಿವ ಶಕ್ತಿಸನ್ನರ್ಧವಾದ ಸಾಕಾರ ಬ್ರಹ್ಮವು ಸ್ವಾಯತವಾದ ಸಮ್ಯಗ್ಬಂಧವಾದ ಭೇದ ಆ ಸ್ವರೂಪವು ಎಂತಿರ್ದುದೆಂದೊಡೆ ಹೇಗಿದ್ದಿತ್ತಯ್ಯಾ ಎಂದು ಮೋಕ್ಷಸ್ವರೂಪರಾಗಿ ಒಪ್ಪಲ್ಪಟ್ಟ ಸದ್ಭಕ್ತ ಶರಣ ಜನಂಗಳು ಬೆಸಗೊಂಡು ಕೇಳಿದಲ್ಲಿ ಮುಂದೆ ತ್ರಿವಿಧ ಲಿಂಗಾನುಧ್ಯಾನವಿಗ್ರಹಾದ ಜ್ಞಾನಿಗಳು ಅನ್ಯೋಪದೇಶವಾಗಿ ನಿರೂಪಿಸುತ್ತಿಹರು. ಮುಂದೆ ಪುರಸ್ಸರದಲ್ಲಿ ಲಿಂಗಧಾರಣ ಸ್ಥಲವಾದುದು ಲಿಂಗಧಾರಣ ಸ್ಥಲವೆಂದು ಹೇಳಲಾಯಿತ್ತು.

---

(೫) ಲಿಂಗಧಾರಣಸ್ಥಲ

ಮೂಲ—ಗುರು ಪರಮಾರ್ಥವ ರೂಹಿಸಿ ಪ್ರಾಣನ। ಕರದೊಳು ಕರುಣಿಸಲಾತನು ಲಿಂಗದ। ಶರೀರವಹುದೆನಲನವಂತಂ ಶಿವಲಿಂಗವ ಧರಿಸಿಹುದು.

ಟೀಕುಃ—ಗುರು ನಿಃಕಲಘನಗುರು ಪರಮಾರ್ಥವ ಲೋಕಾರ್ಥವಿರಹಿತ ಪರಬ್ರಹ್ಮವು ಸ್ರಯೋಜನ ಸ್ವರೂಪವಾದ ಇಷ್ಟಲಿಂಗವು ಅರುಹಿಸಿ ಕುರುಹಿಟ್ಟು ಮಹಾಜ್ಞಾನ ಲಕ್ಷವಿಟ್ಟು ಪ್ರಾಣನ ಲಿಂಗವೇ ಹರಣವಾಗುಳ್ಳ ಶರಣನ ಜೀವನ ಜ್ಞಾನಕಲಾತ್ಮನ ಕರಣದೊಳು ನಾಮಧಾಗದ ಪಾಣಿತಾಣದಲ್ಲಿ. ಕರುಣಿಸಲು ವೇಧಾ ಮಂತ್ರ ಕ್ರಿಯಾನುಗ್ರಹದಿಂದೆ ಕೃಪೆ ಮಾಡಲು ಆತನು ಶರಣನ ಅಂಗವು ಲಿಂಗದ ಶರೀರವಹುದು. 'ಸರ್ವದಪ್ಯಸ್ಯ ಯದ್ದೇಹಂ ತದ್ದೇಹಂ ವಿಷದೇಹವತ್। ಲಿಂಗದಪ್ಯಸ್ಯ ಯದ್ದೇಹಂ ತದ್ದೇಹಂ ಲಿಂಗದೇಹವತ್' ಎಂದು ಸರ್ವಕಚ್ಚಿದಂಥ ದೇಹವೆಲ್ಲವು ವಿಷದೇಹವು. ಲಿಂಗ ಸೊಂಕಿದಂಥ ದೇಹವೆಲ್ಲವು ಲಿಂಗಮಯವು. ಅದು ನಿಮಿತ್ಯವಾಗಿ ನಿಃಕಲ ಲಿಂಗದ ಚಿದಂಗವಾಗುವದೆಂದು ಎನಲ್ ಹೀಗೆಂದು ಹರಗುರುವಾಕ್ಯಪ್ರಮಾಣಂಗಳಿಂದೆ ಹೇಳಲು ಅನವರತ ಅಶ್ರಾಂತವು ಶಿವಲಿಂಗವ ಧರಿಸಿಹುದು ಪರಶಿವಲಿಂಗವನು ತಳೆದುಕೊಂಬುವುದು.

ಮೂಲ—ಲಿಂಗ ಸಹಿತ ನಡೆ ಲಿಂಗ ಸಹಿತ ನುಡಿ। ಲಿಂಗ ಸಹಿತ ಸರ್ವೇಂದ್ರಿಯ ಮುಖವು। ಲಿಂಗಾಲಿಂಗಿತವಾಗಿಹ ಇಂತಹ ಲಿಂಗಾಂಗಿಯು ಸಹಜಾ॥ ಅಂಗದಿ ಪತಿಸುತ ಮಿತ್ರರುಗಳು ಶಿವ। ಲಿಂಗವ ಧರಿಸಿಹುದು ಕರಣದಿಂ ಅಂಗಸುಸಂಗತದಂತ ಗ್ರಹಣವೆಂಬ ಶ್ರುತಿಯ ಮತವು.

ಟೀಕುಃ—ಲಿಂಗ ಸಹಿತ ನಡೆ ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ನಡೆ ಗಮನವು. ಲಿಂಗ ಸಹಿತ ನುಡಿ ಅಂಗದ ಮೇಲೆ ಲಿಂಗಸಾಹಿತ್ಯವಾಗಿ ನುಡಿ ವಚಸ್ಸು. ಲಿಂಗ ಸಹಿತ ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ಸಕಲೇಂದ್ರಿಯ ಮುಖವು. ಸಮಸ್ತ ಹೃಷೀಕಂಗಳ ವಕ್ತ್ರವನು ತಟ್ಟಿ ಬರುವ ವಿಷಯ ಪದಾರ್ಥವನು ಲಿಂಗಮುಂತಾಗಿ ಅನುಭವಿಸುವದು. ಮತ್ತೇ ತನಾದರೂ ಲಿಂಗ ಸ್ಮರಣೆಯಲ್ಲಿಯೇ ನಡಿಸಬೇಕು. ಲಿಂಗ ಸ್ಮರಣೆಯಲ್ಲಿಯೇ ವಚಿಸಬೇಕು. ಲಿಂಗ ಸ್ಮರಣೆಯಲ್ಲಿಯೇ ಸಮಸ್ತ ಇಂದ್ರಿಯಂಗಳ ವಿಷಯವನು ತಟ್ಟಿ ಬರುವ ವಿಷಯಪದಾರ್ಥವನು ಲಿಂಗ ಸ್ಮರಣೆಯಲ್ಲಿಯೇ

ಅನುಭವಿಸುವುದು. ಅಂತಲ್ಲದೆ ಲಿಂಗ ಭಕ್ತರೊಡನೆ ನಡೆವುದು. ಲಿಂಗ ಭಕ್ತರೊಡನೆ ನುಡಿವುದು. ಲಿಂಗಭಕ್ತರೊಡನೆ ಸಮುಸ್ತ ಹೃಷೀಕಂಗಳ ಸೋಂಕಿ ಬರುವ ವಿಷಯಪದಾರ್ಥಂಗಳನುಭವಿಸುವರ ಕೂಡಲಿ ತಾನು ತನ್ನ ಇಂದ್ರಿಯಂಗಳ ವಕ್ತ್ರವನು ಸೋಂಕಿ ಬರುವ ವಿಷಯ ಪದಾರ್ಥವನು ಲಿಂಗ ಮುಂತಾಗಿ ಅನುಭವಿಸುವದು ಎಂಬುದೀಗ ಲಿಂಗ ಪರಶಿವಲಿಂಗವನು ಆಲಿಂಗಿತವಾಗಿಹ ಸರ್ವಾಂಗದಲ್ಲಿ ಸರ್ವಾಂಗಲಿಂಗವಾಗಿ ತರ್ಕೈಸಿಕೊಂಡಿರ್ದಂಥ ಲಿಂಗಾಂಗಿಯೇ ಸಹಜ ಶಿವಲಿಂಗಶರೀರವೆಂಬುದು ಶಿವಸಂಬಂಧಿ ಎಂಬುದು ಯಥಾರ್ಥವು. ಅಂಗದಿ ತನ್ನ ದೇಹದಲ್ಲಿ ಸತಿ ತನ್ನ ಹೆಂಡಿರು ಸುತ ತನ್ನ ಪುತ್ರರುಗಳು ಮಿತ್ರರುಗಳು ಅಣ್ಣ ತಮ್ಮಂದಿರುಗಳು ಹಿತಾಪ್ತರುಗಳು ಶಿವಲಿಂಗವ ಧರಿಸಿಹುದು. 'ದಾಸಿ ಗೋಪಾಲಭೃತ್ಯಾನಾಂ ಗೃಹಸ್ಥ ಸುತಯೋನಿತಾಂ। ಲಿಂಗ ಸ್ವಾಗೇನ ಜೇತೇಷಾಂ ಸರ್ವಚಾಂಡಾಲಮ್ಲು ಚ್ಯತೆ' ಎಂದು ಎಲ್ಲರು ಪರಶಿವಲಿಂಗವನು ತಳೆದಿಹುದು. ಅದು ಕಾರಣದಿಂ ಅದು ನಿಮಿತ್ಯದಿಂದೆ ಅಂಗ ದೇಹದಲ್ಲಿ ಸು ಲೇಸಾಗಿ ಸಂಗ ಸಂಪರ್ಕವಾದ ಇಷ್ಟ ಲಿಂಗವು ತತ್ ಆ ಇಷ್ಟಲಿಂಗದ ಚಿತ್ಕಳೆಯನೆ ಅಂತರ್ಗ್ರಹಣವೆಂಬ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಗ್ರಹಿಸಬೇಕೆಂಬ ಶ್ರುತಿ ಮತವು ಅಥರ್ವಣವೇದವಲ್ಲಿ ಹೇಳುತ್ತಿಹುದು. ಅಂತುಮಲ್ಲದೆ ಅಥರ್ವಣವೇದವಾಕ್ಯದ ಮಾರ್ಗವು.

ಮೂಲ:— ತ್ರಿಕರಣ ಶುದ್ಧತೆಯಿಂದವಧಾನದಿ। ಪ್ರಕೃತಿಯ ಪಲ್ಲಟಿಸದೆಯಾಪೇಕ್ಷೆಯ। ವಿಕಳತೆಯಿಂ ಕಾಂಚನಕೆ ಕೈಯಾನದೆ ನಿಶ್ಚಯ ದೃಢದಿಂ॥ ಅಕಳಂಕ ಚರಿತ್ರದೊಳಣುಮಾತ್ರವಿ। ರಕತಿಗೆಡದೆ ನಿಜನಿಷ್ಠೆಯ ಭಕುತಿ। ಯುಕುತಿಯುಳ್ಳಡೆ ಶಿವಲಿಂಗವ ಕರಸ್ಥಲದಲ್ಲಿಯೆ ಧರಿಸುವುದು.

ಟೀಕು:— ತ್ರಿಕರಣ ರಾಗರಹಿತವಾದ ಮಾನಸ ಅನ್ಯತರಹಿತವಾದ ವಾಚಕ ಕರ್ಮರಹಿತವಾದ ಕಾಯಕವು ಶುದ್ಧತೆಯಿಂದ ಪವಿತ್ರತೆಯಿಂದ ಅವಧಾನದಿಂ ಅರೈಕೆಯಿಂದ ಎಚ್ಚರಿಕೆಯಿಂದ ಪ್ರಕೃತಿಯ ಪಲ್ಲಟಿಸದೆ ತನ್ನ ಮೂಲಜ್ಞಾನ ಪ್ರಕೃತಿಯನು ಹೋಗಿಲಾಡಿಸಿಕೊಳ್ಳದೆ ಅಪೇಕ್ಷೆಯ ಅತಿಕಾಂಕ್ಷೆಯ ವಿಕಳತೆಯಿಂ ಕಳವಳದಿಂದೆ ವಿಕಾರದಿಂದೆ ಕಾಂಚನಕೆ ಕಾಸವೀಸಾದಿಗಳಿಗೆ ಕೈಯ್ಯಾನದೆ ತನ್ನ ಕೈ ಕೀಳಾಗಿ ಆ ದಾನಿ ಕನಕ ಕೈ ಮೇಲಾಗಿ ಕರವನು ಜಾಚದೆ ನಿಶ್ಚಯ ದೃಢದಿಂದ ಕೋಡುಗಲ್ಲ

ಒಬ್ಬರನ ಕಾಡಿಬೇಡಿಕರಕಂಜಿ ಒಡಲ ಹೊರೆಯಬೇಕೆಂಬ ನಿರ್ಧಾರದ ಬಲ್ಮೆಯಿಂದ ಅಕಳಂಕ ಕಳಂಕರಹಿತವಾದ ಚರಿತ್ರದೊಳು ನಡೆವಳಿಯಲ್ಲಿ ಚಾಂತ್ಯದಲ್ಲಿ ಅಣುಮಾತ್ರ ಲೇಸುಮಾತ್ರ ವಿರಕ್ತಿಗೆಡದೆ ತನ್ನ ಪರಮ ನಿರಾಗತಿಯನು ಹೋಗಲಾಡಿಕೊಳ್ಳದೆ ಅದಲ್ಲದೆ, 'ಜಟಾಮುಂಡ ಶಿಖಾವಾಪಿ ಪಂಚಮುದ್ರೇಷು ಭೂಷಣಂ। ಪ್ರಮಾದಾದ್ಭೃಶುನಂ ಕುರ್ಯಾತ್ ಶಿವದ್ರೋಹೀ ನ ಸಂಶಯಃ' ಎಂದು ತನ್ನ ಪರನು ವಿರಾಗತಿಯನು ಹೋಗಲಾಡಿಕೊಳ್ಳದೆ ನಿಜನಿಷ್ಠೆಯು ಆತ್ಮನಿಂಗೆಯು ತನ್ನ ನಂಬುಗೆಯ ಭಕುತಿಯ ಕಲೆಯುಳ್ಳಡೆ ಭಕ್ತಿಜ್ಞಾನಾನುಭಾವ ಉಂಟಾದರೆ ಶಿವಲಿಂಗದ ಪರಶಿವಲಿಂಗವನು ಕರಸ್ಥಲದಲ್ಲಿಯೆ ವಾಮಭಾಗದ ಪಾಣಿತಾಣದಲ್ಲಿಯೆ ಧರಿಸುವುದು ತಳೆದಿಹುದು.

ಮೂಲ— ಏನೇನುಂಟಾದಖಿಳ ಸುಖಂಗಳ। ನಾನಾ ಮುಖ ಭೋಗಾಭೋಗಂಗಳ। ತಾನೇ ಕಾಮಿಸಿ ತನಗದು ಬೇಕೆಂಬತಿಕಾಂಕ್ಷೆಯ ವಶದ॥ ಜ್ಞಾನೇಂದ್ರಿಯಂಗಳ ಮುಖವೋಗಲಿಯ್ಯದೆ। ಸ್ವಾನುಭಾವ ನಿಜಮುಳ್ಳಡೆ ಕಕ್ಷೆ। ಸ್ಥಾನದೊಳು ಧರಿಸುವುದು ನಿರಂತರ ಶಿವಲಿಂಗವನೊಲಿದು.

ಟೀಕು— ಏನೇನುಂಟಾದ ಅವುದಾವುದು ಉಳ್ಳಾದ ಅಂತುಮಲ್ಲದೆ ಗೋವೆ ತಾಗದ ಕಡಗಿಲ್ಲ, ಶರೀರ ಸೋಂಕದ ಪದಾರ್ಥವಿಲ್ಲ. ಅಖಿಳ ಸುಖಂಗಳನಖಿಳ ಸೌಖ್ಯಂಗಳನು ನಾನಾ ಮುಖ ಭೋಗಾಭೋಗಂಗಳ ಹಲವು ವಕ್ತ್ರವನು ತಟ್ಟಿ ಬರುವ ಅಲ್ಪ ಸ್ವಲ್ಪ ಸ್ಥೂಲ ಸೂಕ್ಷ್ಮ ಸಾಕಾರ ನಿರಾಕಾರ ಸಾಕಾರವನು ಹಿಡಿವಂತಹ ಪದಾರ್ಥವು ನಿರಾಕಾರವನು ಶಬ್ದ ಸ್ಪರ್ಶ ನೋಟ ಕೇಳುವು ಇವು ನಿರಾಕಾರವಾದಂತಹವು ಭೋಗಾಭೋಗಂಗಳ ಸುಖಾದಿಸುಖಂಗಳ ತಾನೆ ಆತ್ಮ ತಾನೆ ಕಾಮಿಸಿ ಇಚ್ಛೈಸಿ ತನಗೆ ಆತ್ಮನಿಗೆ ಅದು ಬೇಕೆಂಬ ಆ ಸುಖಾದಿಸುಖಂಗಳು ಭೋಗಾದಿಭೋಗಂಗಳು ಆಗದೇಕೆಂಬ ಅತಿ ಕಾಂಕ್ಷೆಯ ವಶದ ಬಹಳವಾದ ವಾಂಛೆಯ ದಿನದ ಜ್ಞಾನೇಂದ್ರಿಯಂಗಳ ಬುದ್ಧೀಂದ್ರಿಯಂಗಳ ಮುಖ ಹೋಗಲೀಯದೆ ಅವರ ವಕ್ತ್ರದತ್ತ ಚರಿಸಲೀಸದೆ ಸ್ವಾನುಭಾವ ಸ್ವಾತ್ಮ ಜ್ಞಾನದ ನಿಜವುಳ್ಳಡೆ ಸಹಜ ಉಂಟಾದರೆ ಕಕ್ಷಸ್ಥಾನದೊಳು ಬಗಲ ಸೆಜ್ಜೆಯೊಳು ಅವಧರಿಸುವುದು ಅಂಗೀಕಾರವಾಗಿ ತಳೆದು ಕೊಂಬುವುದು ನಿರಂತರ ಅಶ್ರಾಂತವು ಶಿವಲಿಂಗವನು ಪರಶಿವಲಿಂಗ

ಮೂಲ— ಉರಸೆಜ್ಜೆಯೊಳಗೆ ಲಿಂಗವ ಧರಿಸುವ ಪರಿ ಎಂತೆಂದಿನ ಲಂಗ ವಿಕಾರದ । ವಿರಹದೊಳಂಗನೆಯರ ಸಂಗವ ಮಾಡದೆ ನಿರ್ಮಲನಾಗಿ ॥ ಶರೀರವಿಡಿದು ಸೋಂಕುವ ಸೌಖ್ಯಂಗಳ । ನಿರದಾಲಿಂಗದೊಳಗೆ ಸಮವೇದಿಸಿ । ಪರಮ ಸುಖದ ಸುಗ್ಗಿಯೊಳಿರಬಲ್ಲಡೆ ತಾನದು ಸತ್ಪಥವು.

ಟೀಕು— ಉರಸೆಜ್ಜೆಯೊಳಗೆ ವೃಷ್ಣಸ್ಥಳದಲ್ಲಿ ಲಿಂಗವ ಧರಿಸುವ ಪರಶಿವಲಿಂಗವನು ತಳೆದುಕೊಂಡಿರುವ ಪರಿ ಎಂತೆಂದೆನೆ ಆ ಪ್ರಕಾರವು ಹೇಗಯ್ಯ ಎಂದರೆ ಅಂಗ ವಿಕಾರದ ಪಂಚ ಭೂತಯುಕ್ತವಾದ ದೇಹ ವೈಕರ್ಯದ ವಿರಹದೊಳು ಸೈರಿಸಲಾರದ ಸ್ಮರಸಂತಾಪದಲ್ಲಿ ಅಂಗನೆಯರ ಕಂದು ಕಲೆರೂಪುರೇಕೆ ಲಾವಣ್ಯವನುಳ್ಳ ಸ್ತ್ರೀಯರ್ಧುಗಳ ಸಂಗವ ಮಾಡದೆ ಸಂಪರ್ಕವ ಮಾಡದೆ ನಿರ್ಮಲನಾಗಿ ಸ್ವಚ್ಛನಾಗಿ ಶರೀರವಿಡಿದು ದೇಹವನು ಗ್ರಹಿಸಿ ಸೋಂಕುವ ತಟ್ಟುವ ಸೌಖ್ಯಂಗಳನು ವಿಷಯ ಪರಿಣಾಮವನು ಅರಿದು ರೂಪು ಇಷ್ಟ ಲಿಂಗಕ್ಕೆ, ರುಚಿ ಪ್ರಾಣಲಿಂಗಕ್ಕೆ, ತೃಪ್ತಿ ಭಾವಲಿಂಗಕ್ಕೆ, ಗಂಧಾದಿ ಷಡ್ವಿಧ ಪದಾರ್ಥವು ಷಡ್ವಿಧ ಲಿಂಗಕ್ಕೆಂದು ತಿಳಿದು ಲಿಂಗದೊಳಗೆ ಆ ಇಷ್ಟ ಮಹಾಲಿಂಗದಲ್ಲಿ ಷಡ್ವಿಧ ಲಿಂಗದಲ್ಲಿ ಸಮವೇಧಿಸಿ ತನುವಿನ ಹಸ್ತದಿಂದ ರೂಪು ಪದಾರ್ಥವನು. ಇಷ್ಟ ಲಿಂಗಕ್ಕೆ, ಮನೋಹಸ್ತದಿಂದ ರುಚಿ ಪದಾರ್ಥವನು ಪ್ರಾಣಲಿಂಗಕ್ಕೆ, ಅತ್ಮಹಸ್ತದಿಂದೆ ತೃಪ್ತಿ ಪದಾರ್ಥವನು ಭಾವಲಿಂಗಕ್ಕೆ, ನಮರ್ಪಿಸಿ ಪರಮ ಸುಖದ ಲಿಂಗ ಪರಿಣಾಮದ ಅಂತುಮುಲ್ಲದೆ ಪರಾಶಕ್ತಿ ಪ್ರಣಮದಲ್ಲಿ ರವಿಸುತ್ತಿರ್ದ ಮಹಾಲಿಂಗ ಪರಿಣಾಮದ ಸುಗ್ಗಿಯೊಳು ಕ್ರೋಧನ ಕಾಲದಲ್ಲಿ ಇರಬಲ್ಲಡೆ ಆ ಲಿಂಗದಲ್ಲಿ ಸಮರಸವಾಗಿ ನೆಲಸಿರಬಲ್ಲಡೆ ತಾನದು ಅದು ತಾನೆ ಸತ್ಪಥವು ಪ್ರಶಸ್ತವಾದ ಪ್ರಸಾದಿಸ್ಥಲದ ಪದ್ಧತಿಯು.

ಮೂಲಃ—ಅನೃತವನರಶಬ್ದವನು ಕುತರ್ಕವ । ಮನ ಸೂತಕ ನಿಂದೆಯ ನಿಷ್ಠುರವ । ನನು ವಿ ಥ್ಯಾದಿ ವಿಕಾರದ ಭ್ರಾಂತನು ಮದ ಮಚ್ಚರಗಳನು ॥ ಅನುಕರಿಸದೆ ಜಿಹ್ವಾಲಂಪಟತನವನು ತಲೆದೋರಲಿಕೀಯ್ಯದೆ ಲಿಂಗವ । ನನುದಿನ ಮುಖ ಸೆಜ್ಜೆಯೊಳಗೆ ಧರಿಸಿದಡದು ಸದ್ಗುರು ಮಾರ್ಗ.

ಟೀಕುಃ— ಅನೃತವನು ಶಿವನು ನಮಗೆ ಪ್ರತ್ಯಕ್ಷವಾದನು ಕೈಲಾ

ಗಳಲ್ಲಿ ಗುರು ಹಿರಿಯರುಗಳಲ್ಲಿ ಇಲ್ಲದೆ ಅಬದ್ಧನ ದೊಗುಳುವಂತಹದೇ ಅಪಶಬ್ದವನು 'ಅಷ್ಟ ಶಬ್ದೋ ಮಹಾದೇವೀ ವರ್ಜನೀಯಸ್ತು ಸಜ್ಜನೈಃ ಭವಿ ಶಬ್ದೋತ್ರ ಶಬ್ದಶ್ಚ ಹಿಂಸಾಶಬ್ದಸ್ತದಾ ಪರಂ। ಶ್ವಪಚನ್ಯತ ಶಬ್ದಾ ಚ ಕರ್ಕಶೇ ಭಾಂಡಿಕಂ ವಚಃ ಬೀಭತ್ಸಂ ಮಹಾದೇವೀ ಪ್ರಸಾದೀ ವರ್ಜಯೇದಿವಾನ್ ॥ ಎಂದು ಇಂತಹ ಅಷ್ಟ ಮಹಾಕುಶಬ್ದವನು ಕುತರ್ಕ ಕುತ್ಸಿತವಾದ ತರ್ಕವೆಂಬುದು ಅರ್ಥ. ಅಂತುಮುಲ್ಲದೆ ಏನಾರು ಒಂದು ಅಲ್ಲವಾದ ಶುಂಠ ಗ್ರಂಥವನು ಹಿಡಿದು ಅಲ್ಲಹುದೆಂದು ಹೊರಚಾಡುವ ವಾದವು ಮನ ಸೂತಕ ಮನದ ಸಂಕಲ್ಪವಿಕಲ್ಪವೆಂಬ ಹೊಲೆಯು ನಿಂದೆಯ ದೂಷಣೆಯನು ನಿಷ್ಠುರವಂ ಕರ್ಕಶ ಗುಣವನು ಅನು ಮಿಥ್ಯಾದಿ ನಿಮಿತ್ಯವಿಲ್ಲದಂತಹದು ಕಾರ್ಯಕಾರಣವಿಲ್ಲದಿದ್ದಂತಹದು ಆದೇನು ಕಾರಣವೆಂದರೆ ಹಿಂದೆ ಹೇಳಿದ ತರ್ಕವು ವಿಕಾರದ ಭ್ರಾಂತನು ವೈಕರ್ಯದ ಭ್ರಮಣೆಯನು ಮದಮತ್ಸರಂಗಳನು ಸೊಕ್ಕು ಕೇಣಸರಂಗಳನು ಅನುಕರಿಸದೆ ಅಂಗೀಕರಿಸದೆ ಜಿಹ್ವಾಲಂಪಟ ತನುವನು ಷಡುರುಚಿಗಳ ಮೇಲೆ ಎರಕವಾದ ಜಿಹ್ವೆಯ ಚಪಲತನವೆಂಬುದು ಅರ್ಥ. ಅಂತುಮುಲ್ಲದೆ ಕಿಸುಲಯ ಲಂಪಟವ ಚಪಲತನವನು ತಲೆದೋರಲಿಕೀಯದೆ ಸಿರಗಾಣಿಸಲೀಯದೆ ಲಿಂಗವಂ ಪರಶಿವ ಲಿಂಗವನು ಅನುದಿನ ಎಲ್ಲಾಗಳು ಮುಖ ಸೆಜ್ಜೆಯೊಳಗೆ ನಾಲಿಗೆ ಗರ್ದುಗೆಯಲ್ಲಿ ಧರಿಸಿದಡೆ ತಳೆದುಕೊಂಡಡೆ ಅದು ತಾನೆ ಸದ್ಗುರು ಮಾರ್ಗ ಪ್ರಶಸ್ತವಾದ ಶರಣ ಸ್ಥಲದ ಪದ್ಧತಿಯು.

ಮೂಲ — ಕರಣಾದಿ ಗುಣಗಳ ಸಂಚವಸಂ । ಹರಿಸಿ ಶಿವಜ್ಞಾನ ದೊಳಂತರ್ಮುಖ । ವೆರಡರಿಯದೆ ನವನಾಳದೊಳಗೆ ಬೀಸುವ ಪ್ರಾಣನ ಗುಣವ॥ ಪರಿಹರಿಸಿ ಮಹಾಸುವಿಚಾರದೊಳಗೆ । ಪರಿಪಕ್ವ ಸದಾ ಸನ್ನಿಹಿತ ಸುಖದೊ ಳರೆಯವಳೋಕ್ಯದೊಳಗೆ ಲಿಂಗವ ಧರಿಸಿದಡದು ಸತ್ಪಥವು.

ಟೀಕು— ಕರಣಾದಿ ದುರ್ಗುಣಂಗಳ ಮನ ಮೊದಲಾದ ಟಂಕೋಟಿ ಕರಣಂಗಳ ದುರ್ಗುಣಂಗಳನು ಸಂಚವ ಅವರ ಉಳುಮೆಯನು ಸಂಹರಿಸಿ ನಷ್ಟವ ಮಾಡಿ ಶಿವಜ್ಞಾನದೊಳು ಬ್ರಹ್ಮಜ್ಞಾನದಲ್ಲಿ ಅಂತರ್ಮುಖನೆರಡರಿಯದೆ ಅಂತರಂಗದ ಮುಖವಾವುದು ಮನಸ್ಸು ಆ ಮನಸ್ಸಿನ ಸಂಕಲ್ಪವಿಕಲ್ಪವೆಂಬುಭಯವನು ತಿಳಿಯದೆ ನವನಾಳದೊಳಗೆ ನವದ್ವಾರಂಗಳಲ್ಲಿ ಬೀಸುವ ಉಸಿರ್ತಿ ಸುಳಿದು ಸೂಸುವ ಪ್ರಾಣನ

ಗುಣವ ಹರಣನ ವಿಷಯವನು ಪರಿಹರಿಸಿ ನಿರುಹರಣವ ಮಾಡಿಸಿ ಮಹಾ ಸವಿಚಾರದೊಳಗೆ ಪೂಜ್ಯವಾದ ಲೇಸಾದ ಸೂಕ್ಷ್ಮವಾದ ನಡಾವಳಿಯ ಲ್ಲಿ ಪರಿಪಕ್ವ ಭಕ್ತಿ ಪರಿಪಕ್ವದ ನಿಷ್ಪತಿಥ(?) ಪದಪಕ್ವದ ಪದಾ ಸನ್ನಿಹಿತ ಸತ್ತು ಸ್ವರೂಪವಾದ ವಸ್ತು ಆ ವಸ್ತುವಿನಲ್ಲಿ ಕೂಡಿ ಎಂಬುದೀಗ ಸುಖದೊಳ ರಿದು ಇಷ್ಟಲಿಂಗದ ಚಿತ್ಕಲೆಯೆ ಅಂತರಂಗದಲ್ಲಿ ಪ್ರಾಣಲಿಂಗವಾಗಲು ಆ ಪ್ರಾಣಲಿಂಗದ ಸುಜ್ಞಾನಾಚರಣೆಯ ಪರಿಣಾಮವನು ತಿಳಿದು ಅವು ಳೋಕ್ಯದೊಳಗೆ ಅಂಗುಳ ಸ್ಥಾನದಲ್ಲಿ ಲಿಂಗವ ಧರಿಸಿದಡೆ ಪರಶಿವಲಿಂಗ ವನು ತಳೆದುಕೊಂಡರೆ ಅದು ಅದು ತಾನೇ ಸತ್ಪಥವು ಪ್ರಶಸ್ತವಾದ ಪ್ರಾಣ ಲಿಂಗಿ ಸ್ಥಲದ ಪದ್ಧತಿಯು.

ಮೂಲಃ— ಅವಿಚಾರತೆಯಿಂ ಲೋಕದ ಜಡವಮಾ । ನವಂಗೆರಗದಿ ಹುದುಳ್ಳಡೆ ಶಿವಲಿಂ । ಗವ ಮಸ್ತಕದಲಿ ಧರಿಸುವುದೀ ಕ್ರಮವರಿದು ಧರಿಸಿ ದವರು ॥ ಶಿವತತ್ವದ ಮೂಲಜ್ಞಾನದ ಸಂ । ಬಂಧಿಗಳೆನಿಸುವರ ನಿಜೆಮಹಿ ಮರ ಚರಣಾಕ್ಕೆ ಶರಣೆಂಬೆನು ಪದ್ಮಗುರುವೆ ಪುರದ ಮಲ್ಲಯ್ಯ.

ಟೀಕುಃ— ಅವಿಚಾರತೆಯಿಂ ವಿಚಾರ ಹೀನತ್ವದಿಂದೆ ಲೋಕದ ಜಡವಾನವರಿಗೆ ಮಾಯಾ ಉಚ್ಛಿಷ್ಟವಾದ ಜೀವರುಗಳಿಗೆ ಎರಗದಿಹು ದುಳ್ಳೊಡೆ ಎದೆ ಬಿರಿದರೂ ಶಿರವೊಡೆದರೂ ಅಜ್ಞಾನ ಜೀವರುಗಳಿಗೆ ನಮಸ್ಕರಿಸೆನೆಂಬ ದೃಢತ್ವವು ತನ್ನಲ್ಲಿ ಉಂಟಾದರೆ ಶಿವಲಿಂಗವನು ಪರ ಶಿವಲಿಂಗವನು ಮಸ್ತಕದಲ್ಲಿಯೆ ಪೌಳಿಸ್ಥಾನದಲ್ಲಿಯೇ ಧರಿಸುವುದು ತಳೆವುದು. ಈ ಕ್ರಮವರಿದು ಈ ಷಟ್‌ಸ್ಥಲದ ಪರಿವಿಡಿಯನು ತಿಳಿದು ಧರಿಸಿದವನು ಆಯಾಯ ಸ್ಥಾನದಲ್ಲಿ ಆಯಾಯ ಲಿಂಗವನು ತಳೆದು ಕೊಂಡವರು ಶಿವತತ್ವದ ಮೂಲ ಜ್ಞಾನದ ಸಂಭವ ಸಂಬಂಧಿಗಳೆನಿಸು ವರ ನಿಃಕಲ ಲಿಂಗವು ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಲೆ ಚಿತ್ತು ಚತುರ್ವಿಧವು ಗಟ್ಟಿಗೊಂಡು ಅಖಂಡಗೋಳಕಾಕಾರತೇಜೋ ಮೂರ್ತಿ ಯಪ್ಪ ಮಹಾಲಿಂಗವಾಯಿತ್ತು. ಆ ಮಹಾಲಿಂಗವೇ ಷಡ್ವಿಧಲಿಂಗವಾಗಿ ಷಟ್‌ಸ್ಥಾನದಲ್ಲಿ ಷಡ್ವಿಧಲಿಂಗವಾಗಿ ಸಂಬಂಧವ ಮಾಡಿಕೊಂಡು ಷಟ್ ಸ್ಥಲಾಚರಣೆವಿಡಿದಾಚರಿಸುವರುಗಳೆಂದು ಹೇಳಿಸುವರ ಎಂಬುದೀಗ ನಿಜ ಸಹಜವಾದ ಮಹಿಮರ ಮಹಾತ್ಮರ ಲಿಂಗ ಮಹಿಮರ ಚರಣಕ್ಕೆ ಅವರ ಪಾದಕ್ಕೆ ಶರಣೆಂಬೆನು ಅವರ ಚರಣಿಗೆ ನಮಸ್ಕಾರವೆಂಬೆನು. ಸತ್ ಪ್ರಶಸ್ತ ವಾದ ಗುರುವೇ ಆಚಾರ್ಯನೇ ಪುರದ ಮಲ್ಲಯ್ಯ ಆಚಾರಾಂಗವೆಂಬ